
ಕಮಲಾಭಿನಂದನ



ಸಂಪಾದಕರು
ರಂಗಾರೆಡ್ಡಿ ಕೋಡಿರಾಂಪುರ
ಬೆನಕನಹಳ್ಳಿ ಜಿ.ನಾಯಕ

ಕಮಲಾಭಿನಂದನ

(ಪ್ರೊ॥ ಕಮಲಾ ಹಂಪನಾ ಅವರ ಅಭಿನಂದನ ಗ್ರಂಥ)

ಪ್ರೀತಿಯಿಂದ
ಹಂಪನಾ

ಸಂಪಾದಕರು
ಬಿನಕನಹಳ್ಳಿ ಜಿ. ನಾಯಕ
ರಂಗಾರೆಡ್ಡಿ ಕೋಡಿರಾಂಪುರ

ಕಮಲಾ ಹಂಪನಾ ಅಭಿನಂದನ ಸಮಿತಿ
ಬೆಂಗಳೂರು

KAMALABHINANDANA — Felicitation Volume Presented to Prof. Kamala Hampana- Collection of Criticisms on Various Books, Edited by Benakanahalli G. Nayak and Rangareddy Kodirampura, Published by Kamala Hampana Abhinandana Samithi. Priec Rs. 125-00. Pages : 484+xvi 1985.

ಬೆಲೆ : ಒಂದುನೂರ ಇಪ್ಪತ್ತೈಯ್ದು ರೂಪಾಯಿಗಳು

ಕಲೆ : ಚಂದ್ರನಾಥ್

ಮುದ್ರಕರು
ಲೋಟಸ್ ಪ್ರಿಂಟರ್ಸ್
ರಾಜಾಜಿನಗರ, ಬೆಂಗಳೂರು – ೧೦

ಸಂಪಾದಕರ ಮಾತು

ಇಂಡಿಯಾದ ಸಾಂಸ್ಕೃತಿಕ ಬದುಕಿನಲ್ಲಿ ಹಲವಾರು ರೀತಿಯ ಬದಲಾವಣೆಗಳಾಗಿರುವುದುಂಟು. ಇಂಥ ಬದಲಾವಣೆಗಳು ಗತಿಶೀಲ ಬದುಕಿನಲ್ಲಿ ಆಗುವುದು ಸಹಜವಾದರೂ ಬದಲಾವಣೆ ಕೆಲವೊಮ್ಮೆ ಸಂಘರ್ಷದ ಹಾದಿಯನ್ನು ಕಂಡುಕೊಳ್ಳುತ್ತದೆ. ಸಂಘರ್ಷಗಳು ವೈಚಾರಿಕ ತಳಹದಿಯ ಮೇಲೂ ಅವಲಂಬನೆಗೊಂಡಿರಬಹುದು, ಇಲ್ಲವೇ ಪ್ರತಿಗಾಮಿತ್ವವನ್ನು ಕಂಡುಕೊಂಡಿರಬಹುದು. ಪ್ರಗತಿಪರವಾದ ವಿಚಾರಗಳು ಇಲ್ಲಿಯ ಸಾಂಸ್ಕೃತಿಕ ಬದುಕಿನಲ್ಲಿ ಜೀವಂತಿಕೆಯನ್ನು ಪಡೆದುಕೊಳ್ಳಲು ಆರೋಗ್ಯಕರವಾದ ವಾತಾವರಣವನ್ನು ಉಂಟುಮಾಡಲು ಪ್ರಯತ್ನಿಸುತ್ತಿರುವುದನ್ನು ಮನಗಾಣಬಹುದಾಗಿದೆ.

ಶ್ರೇಣೀಕೃತವಾಗಿ ಹರಿದು ಹಂಚಿಹೋಗಿರುವ ಇಲ್ಲಿಯ ಸಮಾಜ ಅಸಮಧಾನದ ಕೆಟ್ಟ ವಾತಾವರಣದೊಳಗೆ ಬದುಕುತ್ತಿದೆ. ಜಾತಿ, ಮತ. ಧರ್ಮ ಹೀಗೆ ಬಗೆ ಬಗೆಯಲ್ಲಿ ಅಡ್ಡಗೋಡೆಗಳನ್ನು ನಿರ್ಮಿಸಿಕೊಂಡು ಅಂತರವನ್ನು ಕಾಪಾಡಿಕೊಂಡು ಬದುಕುತ್ತಿರುವ ಜನರ ಸ್ವಭಾವ, ಸಾಂಪ್ರದಾಯಿಕ ನಡವಳಿಕೆಗೆ ತಕ್ಕಂತೆ ಇಲ್ಲಿಯ ಸಾಹಿತ್ಯ ತಾಳ ಹಾಕಿದೆ. 'ಸಾಹಿತ್ಯ ಸಮಾಜದ ಪ್ರತಿಬಿಂಬವಲ್ಲ, ಗತಿಬಿಂಬ' ಎನ್ನುವ ವಾದವಿವಾದಗಳು ಸಮಕಾಲೀನ ಸಂದರ್ಭದಲ್ಲಿ ಕಾಣಿಸಿಕೊಳ್ಳುತ್ತಿವೆ.

ಪರಂಪರಾಗತ ಮೌಲ್ಯಗಳನ್ನು ಅಪ್ಪಿಕೊಂಡು ಅವೇ ಶ್ರೇಷ್ಠವಾದವುಗಳು ಎಂದು ಭಾವಿಸುವ ಮಡಿವಂತ ಮನಸ್ಸು ಅಂಥ ಮೌಲ್ಯಗಳಿಗೆ ಮತ್ತಷ್ಟು ಪುಷ್ಠಿ ಒದಗಿಸಲು ಪುರಾಣ ಪುಣ್ಯಕಥೆಗಳನ್ನು ಹೊಸೆದವು. ಬೌದ್ಧಿಕವಾಗಿ ಮುಂದುವರಿದಿರುವ ಮನಸ್ಸು ಯಾವಾಗಲೂ ಪ್ರತ್ಯೇಕತೆಯನ್ನು ಕಾಪಾಡಿಕೊಳ್ಳಲು ಇಚ್ಚಿಸಿತೇ ವಿನಾ ಅದರಾಚೆಗೂ ನಿಂತು ವಿಚಾರ ಮಾಡುವ ಮನಸ್ಸು ಮಾಡಲಿಲ್ಲ. ಮಾನವೀಯ ಸಂಬಂಧ ಕೇವಲ ಸಜಾತಿ ಅಭಿಮಾನದ ಕಡೆಗಿರುತ್ತಿತ್ತು.

ಪುರುಷಪ್ರಧಾನ ಸಮಾಜದೊಳಗೆ ಪುರುಷರದ್ದೇ ಮೇಲುಗೈ. ಸಜಾತಿ ವ್ಯಾಮೋಹ ಇಲ್ಲಿ ಕೇವಲ ಕೆಲವೇ ವರ್ಗದವರನ್ನು ದೃಷ್ಟಿಯಲ್ಲಿಟ್ಟುಕೊಂಡು ಮೌಲ್ಯಗಳನ್ನು ಹುಟ್ಟುಹಾಕಿದರೂ ಕಾಲಕ್ರಮೇಣ ಅವು ಸಮಾಜದ ಪ್ರತಿಯೊಬ್ಬ ಪುರುಷರಿಗೂ ಅನ್ವಯಿಸಿದವು. ಹೆಣ್ಣನ್ನೂ ಪ್ರಕೃತಿಗೆ ಹೋಲಿಸಿ ಪ್ರಕೃತಿ–ಪುರುಷ ಸಂಬಂಧವನ್ನು ಕಲ್ಪಿಸಿದವು. ಆಳುವ–ಆಳಿಸಿಕೊಳ್ಳುವ ಪರಿಕಲ್ಪನೆಗೆ ಅವಕಾಶ ವಾಯಿತು. ಸ್ತ್ರೀ ಪುರುಷನ ಅಧೀನಕ್ಕೆ ಒಳಪಟ್ಟಳು. ಪ್ರಪಂಚದ ಬಹುತೇಕ ಸಮಾಜ ಹಾಗೂ ರಾಜಕೀಯ ಚಿಂತಕರು ಸ್ತ್ರೀಯನ್ನು ಒಂದು ಶಾಪವೆಂದೇ ಭಾವಿಸಿದರು. ಸಕಲ ಪಾಪಕ್ಕೆ ಸ್ತ್ರೀಯೇ ಕಾರಣ ಎಂದು ಹೇಳಿದರು. ಅವಳನ್ನು 'ಪಿಶಾಚಿ' ಎಂತಲೂ ಸಂಭೋದಿಸಿದರು. ಸ್ತ್ರೀಯನ್ನು ನಪುಂಸಕವಾಗಿ ಪರಿಗಣಿಸಿದರು. ಹೀಗಿದ್ದೂ ಈ ದೇಶದ ಪುರಾಣಕಾವ್ಯಗಳು ಸ್ತ್ರೀಯನ್ನು 'ದೇವತೆ' ಎಂದು ಕರೆದವು. 'ಆದಿಪರಾ ಶಕ್ತಿ'ಯ ರೂಪದಲ್ಲಿ ಆರಾಧಿಸಿದವು. ಭೂಮಿಯ ಜೊತೆಗೆ ಸಮೀಕರಿಸಿ ಹಾಡಿ ಹೊಗಳಿದವು. ಅದೇ ಸ್ತ್ರೀ, ಪುರುಷನೊಂದಿಗೆ ಬದುಕು ಸಾಗಿಸುವಾಗ ಧಾರ್ಮಿಕ ಚೌಕಟ್ಟಿನಲ್ಲಿ ಕೆಲ ಸೌಲಭ್ಯಗಳಿಂದ ವಂಚಿಸಲ್ಪಟ್ಟಳು. ಶೂದ್ರರ ಜೊತೆ ಸಮೀಕರಿಸಿ ಸ್ತ್ರೀಗೆ ಅವಳ ವ್ಯಕ್ತಿತ್ವದ ವಿಕಾಸಕ್ಕೆ ತಡೆಯೊಡ್ಡಿದರು. ಸ್ವಾಮಿಯ ಜೊತೆ ಸ್ವಾಮಿನಿ ಯನ್ನು ಸ್ವರ್ಗಕ್ಕೆ ಕಳುಹಿಸುವ ಅಮಾನವೀಯ ಪೈಶಾಚಕೃತ್ಯವನ್ನು ಹುಟ್ಟು ಹಾಕಿಕೊಂಡ ನಮ್ಮ ಸಮಾಜ ಸ್ತ್ರೀಗೆ ಮಹತ್ವಪೂರ್ಣವಾದ ಸ್ಥಾನವನ್ನು ಕೊಟ್ಟಿತು. ಸ್ವಾಮಿಯ ಸೇವೆಯನ್ನು ಮಾಡಿಕೊಂಡಿರುವ ಸ್ತ್ರೀ ಅವನೊಂದಿಗೆ ಇರುವುದು ಶ್ರೇಯಸ್ಕರ ಎಂದು ಭಾವಿಸಿದರು. ಧರ್ಮ ಹಾಗೂ ಧರ್ಮವನ್ನು ಎತ್ತಿ ಹಿಡಿಯುವ ಈ ದೇಶದ ಪುರಾಣಕಾವ್ಯಗಳು ಬಹುಸೊಗಸಾಗಿ ಹಾಡಿ ಹೊಗಳಿವೆ! ಕನ್ನಡದ ಅಗ್ರಕವಿ ಪಂಪನೂ ಈ ಅಮಾನವೀಯ ಪದ್ಧತಿಯನ್ನು ಪರಿಪಾಲಿಸಿದ: ಪಂಪ ವ್ಯಾಸರ ಕಥೆಯನ್ನು ಆಧರಿಸಿ ಕಾವ್ಯ ಬರೆದಿದ್ದರೂ ಮಾನವೀಯ ಗುಣಗಳಿಗಾದರೂ 'ಮಾದ್ರಿ'ಯ ಸಂದರ್ಭವನ್ನು ಬದಲಾಯಿಸಿಕೊಳ್ಳಬಹುದಿತ್ತು. ಪಾಂಡುರಾಜನ ಚಿತೆಯ ಮೇಲೆ ಬೂದಿಯಾಗುವ ಮಾದ್ರಿ ಋಷಿ–ಮುನಿಗಳ ಹೊಗಳಿಕೆಗೆ ಪಾತ್ರಳಾದಳು ಎನ್ನುತ್ತಾನೆ. 'ಮಾನವ ಕುಲಂ ತಾಂ ಒಂದೇ ವಲಂ' ಎನ್ನುವ ವಿಶ್ವಮತ ತತ್ವವನ್ನು ಸಾರಿದ ಪಂಪನಿಗೂ ಇದರಿಂದ ರಿಯಾಯಿತಿ ಸಿಗಲಿಲ್ಲ.

ನಮ್ಮ ದೇಶದ ಶಾಸನಗಳು, ಮಾಸ್ತಿಕಲ್ಲುಗಳಂತೂ ಹೆಂಗಳೆಯರ ಅಮಾನವೀಯ ಹತ್ಯೆಗಳಿಗೆ ಸಾಕ್ಷಿಯಾಗಿವೆ. 'ಲೆಂಕ' 'ಗರುಡ' ಮುಂತಾದ ಪದ್ಧತಿಗಳು ಕೈಂಕರ್ಯ ಭಾವದ ನಿಷ್ಠೆಗೆ 'ವೀರಸ್ವರ್ಗ'ದ ಪರಿಕಲ್ಪನೆಗೆ ಪೂರಕವಾದವುಗಳು. ಆಳುವ ಅರಸರಿಗೆ ವೀರಯೋಧರು 'ಲೆಂಕ'ರಾದರೆ ಅವರ ಹೆಂಡಂದಿರು ಗಂಡಂದಿರಿಗೆ 'ಲೆಂಕಿ'ಯರಾಗಿದ್ದರು. ಒಬ್ಬ ಆಳುವ ರಾಜ ಸತ್ತನೆಂದರೆ ಒಂದು ಸಮೂಹವೇ ಆತ್ಮಾಹುತಿಗೆ ತೊಡಗುತ್ತಿತ್ತು. ಬುಡಕಟ್ಟು ಜನರ ಮೂಲಭೂತ ಧೋರಣೆಗಳು ನಾಗರೀಕ ಸಮಾಜದೊಳಗೆ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಕೆಲಸ ಮಾಡುತ್ತಿತ್ತು ಎನ್ನುವ ಮಾತು ಸ್ಪಷ್ಟವಾಗುತ್ತದೆ. 'ರಜಪೂತ' ಸ್ತ್ರೀಯರ ಆತ್ಮಾಹುತಿ ಕುರಿತು ಇತಿಹಾಸ ಹಾಡಿ ಹೊಗಳಿದೆ.

ಉಂಬಳಿಗಮಾನ್ಯ ಪದ್ಧತಿ ಗುಲಾಮ ಹಾಗೂ ಭೂ ಒಡೆಯರನ್ನು ಸೃಷ್ಟಿಸಿತು. ಈ ಪದ್ಧತಿಗೆ ಅನುಸಾರವಾಗಿ ಇಲ್ಲಿಯ ಸಾಹಿತ್ಯ ನಿರ್ಮಾಣವಾಯಿತು. ೧೦ನೇ ಶತಮಾನದ ಮಾರ್ಗಸಾಹಿತ್ಯವನ್ನು ಬಿಟ್ಟರೆ, ೧೨ನೇ ಶತಮಾನದ ಸಂದರ್ಭದಲ್ಲಿ ವೃತ್ತಿಪರ ಜನ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರೆಂಬುದು ಸಾಹಿತ್ಯ ಚರಿತ್ರೆಯಿಂದ ಮನದಟ್ಟಾಗುತ್ತದೆ. ದೇವರದಾಸಿಮಯ್ಯ, ಮಾಚಯ್ಯ, ಕಕ್ಕಯ್ಯ, ಚೆನ್ನಯ್ಯ ಮುಂತಾದವರು ವೃತ್ತಿ ಸೂಚಕ ಜನರು. ಶೈವ ವೀರಶೈವವಾಯಿತು, ಒಂದು ಜನ ಸಮುದಾಯದೊಳಗಿದ್ದ ಧಾರ್ಮಿಕ ಬದುಕು ಎಲ್ಲರದ್ದೂ ಆಗಿರದೆ, ಅಲ್ಲಿ ಮತ್ತೊಂದು ಅಸಮಾಧಾನದ ವರ್ಗದ ಹುಟ್ಟಿಗೆ ಕಾರಣವಾಯಿತು. ತನಗೆ ಎಲ್ಲಿ, ಯಾವ ಸಮಾಜ ದಲ್ಲಿ ಸರಿಯಾದ ಸ್ಥಾನಮಾನಗಳು ದೊರೆಯುವುದಿಲ್ಲವೋ ಅಲ್ಲಿರಲು–ಅವರೊಂದಿಗೆ ಬದುಕಲು ಯಾರೂ ಇಷ್ಟಪಡುವುದಿಲ್ಲ. ಅಸಮಾಧಾನದ ಒಂದು ವರ್ಗ ಬಂಡೆದ್ದು ಹೊಸಧರ್ಮದ ಆವಿಷ್ಕಾರಕ್ಕೆ ನಾಂದಿಹಾಡಿತು. 'ಶೈವದ' ಹಿಂದೆ 'ವೀರ' ಸೇರಿ ಕೊಂಡಿತು, 'ವೀರಶೈವ' ಧರ್ಮವಾಯಿತು. ಇದರ ನೇತಾರ ಬಸವಣ್ಣ. ಈ ಶತಮಾನದಲ್ಲಿ ಲಿಂಗಭೇದಕ್ಕೆ ಅವಕಾಶವಿಲ್ಲ ಎಂದು ಭಾವಿಸಲಾಯಿತು. 'ಗಡ್ಡಮೀಸೆ ಬಂದರೆ ಗಂಡೆಂಬರು ಮಲೆ ಮುಡಿಬಂದರೆ ಹೆಣ್ಣೆಂಬರು ಆತ್ಮಕ್ಕೆ ಯಾವ ಲಿಂಗ' ಎಂದು ಪ್ರಶ್ನಿಸಲಾಯಿತು. 'ಸತಿಪತಿಗಳಲ್ಲೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಮುಂತಾದ ಹೊಸ ಹೊಸ ವಿಚಾರಗಳನ್ನು ಮಹದೇವಿಯಂಥವರು ವಚನ ಹಾಡಿದರು. ಶಿವನನ್ನೆ ಗಂಡನೆಂದು ನಂಬಿದವಳು. ಅನುಭವ ಮಂಟಪದ ಸಂದರ್ಭದಲ್ಲಿ ಸ್ತ್ರೀಯರದ್ದೂ ಸಮಪಾಲು ಪುರುಷನೊಟ್ಟಿಗೆ ವಿಚಾರಮಾಡುವ ಚರ್ಚಿಸುವ ಅವಕಾಶ. ಹಳೆಯ ಮೌಲ್ಯಗಳಿಗೆ ವಿರುದ್ಧವಾಗಿ ಹೊಸ ಮೌಲ್ಯಗಳ ಸ್ಥಾಪನೆ. ೧೩ನೇ ಶತಮಾನದ ಉತ್ತರಾರ್ಧದಿಂದ ಜನಪರವಾದ ಮೌಲ್ಯಗಳು ಮತ್ತೆ ಹಳೆಯ ಜಾಡನ್ನು ಹಿಡಿದವು. ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ಪರಂಪರಾಗತ ಮೌಲ್ಯಗಳು ಸ್ಥಾಪಿಸಲ್ಪಟ್ಟವು. ಮಾಸ್ತಿಯಂಥವರು 'ಮಹಾಸತಿ'ಯರನ್ನು ಕುರಿತು ಹಾಡಿಹೊಗಳಿದರು. ಸಂಪ್ರದಾಯ ಪ್ರವೃತ್ತಿ ಹಳೆಯದನ್ನು ಪ್ರಶ್ನಿಸದೇ ಒಪ್ಪಿಕೊಂಡಿತು. ಸಾಹಿತ್ಯ ಕೃತಿಗಳಲ್ಲಿ

ವೈಭವೀಕರಿಸಿದರು. ಮಡಿವಂತ ಮನಸ್ಸು ಬದಲಾವಣೆಯನ್ನು ಒಪ್ಪಿಕೊಳ್ಳಲಿಲ್ಲ. ಹೀಗಿದ್ದೂ ಮಹಿಳೆ ಹಾಗೂ ಸಾಹಿತ್ಯ ಚರ್ಚೆಗಳು ಅಷ್ಟು ಗಂಭೀರವಾಗಿ ಯಾರನ್ನೂ ಕಾಡಲಿಲ್ಲ. ಸಮಕಾಲೀನ ಸಂದರ್ಭದಲ್ಲಿ ಮಹಿಳೆಯರು ನಿರ್ಭಿಡೆಯಿಂದ ಬರವಣಿಗೆ ಕೈಗೊಂಡಿದ್ದಾರೆ. ಇತಿಹಾಸದುದ್ದಕ್ಕೂ ಶೋಷಣೆಗೆ ಒಳಗಾದ ಈ ಸಮೂಹ ತನ್ನ ಜವಾಬ್ದಾರಿಯನ್ನು ಹೊರಬೆಕಾಗಿದೆ. ಪುರುಷರ ದಬ್ಬಾಳಿಕೆ ಕುರಿತು ವಿಚಾರ ಮಾಡಬೇಕಾಗಿದೆ. ಮಹಿಳೆಯರು ತಮ್ಮ ಅಭಿವ್ಯಕ್ತಿಗೆ 'ಕಾದಂಬರಿ' ಪ್ರಕಾರವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ವಿಚಾರ, ವಿಮರ್ಶೆ, ಸಂಶೋಧನೆಯ ಕಡೆ ಅಷ್ಟಾಗಿ ಒಲವು ತೋರಿಸುತ್ತಿಲ್ಲ ಎನ್ನುವ ಮಾತೂ ಇದೆ. ಆದರೆ ಈ ಮಾತು ಎಷ್ಟರಮಟ್ಟಿಗೆ ಸಮಂಜಸ ಎಂದು ಪ್ರಶ್ನಿಸಬೆಕಾಗಿದೆ. ಈಗ್ಗೆ ಬರವಣಿಗೆಗೆ ತೊಡಗಿರುವ ಮಹಿಳೆಯರು ಈ ಮುಂದೆ ಸಾಹಿತ್ಯದ ಪ್ರತಿಯೊಂದು ಪ್ರಕಾರದಲ್ಲೂ ಕೃಷಿ ನಡೆಸಬಹುದು, ಅಂತಹ ದಿನಗಳು ದೂರವಿಲ್ಲ ಎನ್ನುವುದಕ್ಕೆ ಪ್ರೊ॥ ಕಮಲಾ ಹಂಪನಾ ಅವರು ಉದಾಹರಣೆಯಾಗಿ ನಿಲ್ಲುತ್ತಾರೆ.

ಕಮಲಾ ಹಂಪನಾ ಅವರ ಸಾಹಿತ್ಯ ಕೃಷಿಯ ಹರವು ಬಹು ವ್ಯಾಪಕವಾದುದು. ಕಥೆ, ಕವನ, ವಿಮರ್ಶೆ. ವಿಚಾರ, ಸಂಶೋಧನೆ, ಶಿಶುಸಾಹಿತ್ಯ. ಜೀವನ ಚರಿತ್ರೆ, ಗ್ರಂಥ ಸಂಪಾದನೆ—ಹೀಗೆ ಕನ್ನಡ ಸಾಹಿತ್ಯದ ಹಲವು ಕ್ಷೇತ್ರಗಳಲ್ಲಿ ಕೃಷಿ ನಡೆಸಿದ್ದಾರೆ. ಪೂರ್ವದ ಹಳಗನ್ನಡದಿಂದ ಹಿಡಿದು ಆಧುನಿಕ ಸಾಹಿತ್ಯದ ಪ್ರಕಾರದವರೆಗೆ ಗಂಭೀರ ವಾಗಿ ಅಭ್ಯಾಸ ಮಾಡಿಕೊಂಡಿರುವ ಕಮಲಾ ಹಂಪನಾ ಅವರು ಮೈಸೂರು ವಿಶ್ವ ವಿದ್ಯಾಲಯದ ಕನ್ನಡ ಬಿ. ಎ. ಆನರ್ಸ್, ಎಂ. ಎ. ಪದವೀಧರೆ. ೧೯೫೫ ರಿಂದ ಬೆಂಗಳೂರು ಹಾಗೂ ಮೈಸೂರು ಮಹಾರಾಣಿ ಕಾಲೇಜು, ವಿಜ್ಞಾನ ಕಾಲೇಜು ಇಲ್ಲಿ ಉಪನ್ಯಾಸಕಿಯಾಗಿದ್ದ ಇವರು ಈಗ ಬೆಂಗಳೂರು ಮಹಾರಾಣಿ ಕಾಲೇಜಿನಲ್ಲಿ ಕನ್ನಡ ವಿಭಾಗದ ಪ್ರೊಫೆಸರ್ ಆಗಿದ್ದಾರೆ. ವಿಚಾರ. ವಿಮರ್ಶೆ, ಸಂಶೋಧನೆ —ಈ ಮೂರೂ ಕ್ಷೇತ್ರಗಳಲ್ಲಿ ಇವರ ಕೊಡುಗೆ ಬೆಲೆಯುಳ್ಳದ್ದಾಗಿದೆ. ಇವರ ಕತೆಗಳು, ಪ್ರಬಂಧಗಳು ಇತರ ಭಾಷೆಗಳಿಗೆ (ಬಂಗಾಳಿ, ತಮಿಳು) ಅನುವಾದಗೊಂಡಿವೆ. ಸೃಜನಾತ್ಮಕ ಕೃತಿರಚನೆಯ ಜೊತೆಗೆ ಅನುವಾದಿತ ಕೃತಿಗಳನ್ನು ಹೊರತಂದಿದ್ದಾರೆ. ವಿಶ್ವಕೋಶ, ಸಾಧನೆ, ಸಾಹಿತ್ಯ ಚರಿತ್ರೆ, ಕನ್ನಡ ಭಾರತಿ – ಮುಂತಾದ ವಿವಿಧ ಪ್ರಮುಖ ಸಂಪುಟಗಳಲ್ಲಿ ವಿದ್ವತ್ಪೂರ್ಣವಾದ ಲೇಖನಗಳನ್ನು ಪ್ರಕಟಿಸಿದ್ದಾರೆ. ಆಕಾಶವಾಣಿಯಲ್ಲಿ ಕಥೆಗಳು, ನಾಟಕಗಳು, ರೂಪಕಗಳು, ಶಬ್ದ ಚಿತ್ರಗಳು, ವಿದ್ವತ್ಪೂರ್ಣ ವಿಷಯಗಳ ಮೇಲೆ ಭಾಷಣಗಳು ಪ್ರಸಾರವಾಗಿವೆ. ಇವರಿಂದ ರಚಿತವಾಗಿರುವ ಮೂವತ್ತಕ್ಕೂ ಹೆಚ್ಚಿನ ಪುಸ್ತಕಗಳು ವಿಷಯ ವೈವಿಧ್ಯತೆಯಿಂದ ಕೂಡಿದ್ದು ಸಾಹಿತ್ಯಾಸಕ್ತರ ಮನಸ್ಸನ್ನು ಆಕರ್ಷಿಸಿವೆ. ಬೊಂಬಾಯಿ. ಹೈದರಾಬಾದು, ಬೆಂಗಳೂರು, ಚಿಕ್ಕಮಗಳೂರು, ಮಂಡ್ಯ, ಧರ್ಮಸ್ಥಳ, ಶಿರಸಿ ಮೊದಲಾದ

ಕಡೆಗಳಲ್ಲಿ ಜರುಗಿರುವ ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಅಲ್ಲದೆ ಬೆಂಗಳೂರು, ಮೈಸೂರು ವಿಶ್ವವಿದ್ಯಾಲಯಗಳ ಪ್ರಚಾರೋಪನ್ಯಾಸಗಳನ್ನು ಮಾಡಿದ್ದಾರೆ. ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ವಿಚಾರ ಸಂಕಿರಣದಲ್ಲಿ ಹಲವಾರು ಸಲ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಸುಮಾರು ೨೫ ವರ್ಷಗಳಿಂದ ಕರ್ನಾಟಕ ಹಾಗೂ ಕರ್ನಾಟಕೇತರ ಪ್ರಾಂತ್ಯಗಳಲ್ಲಿ ಪ್ರವಾಸಮಾಡಿ ಹಲವಾರು ಕಡೆಗಳಲ್ಲಿ ಸಾಹಿತ್ಯಿಕ ಉಪನ್ಯಾಸಗಳನ್ನು ನೀಡಿದ್ದಾರೆ. ತಮ್ಮ ಪ್ರೌಢ ಉಪನ್ಯಾಸಗಳಿಂದ ಹಲವರ ಮನಸ್ಸನ್ನು ಗೆದ್ದಿದ್ದಾರೆ. ಇವರು ರಾಜ್ಯಸಾಹಿತ್ಯ ಅಕಾಡೆಮಿಯ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಕಾಲೇಜು ಹರಿಜನ ಗಿರಿಜನ ಅಧ್ಯಾಪಕ ಸಂಘದ ಉಪಾಧ್ಯಕ್ಷರು. ಅನೇಕ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿಯೂ ದುಡಿಯುತ್ತಿದ್ದಾರೆ.

ಆಧುನಿಕ ಸಂದರ್ಭದ ವಸ್ತುಸ್ಥಿತಿಗನುಗುಣವಾಗಿ ಸ್ಪಂದಿಸಿರುವ ಅನೇಕ ಕೃತಿಗಳನ್ನು ಹೊರತಂದಿರುವ ಕಮಲಾ ಹಂಪನಾ ಅವರು ಇಂಡಿಯಾದ ಶ್ರೇಣೀಕೃತ ಸಮಾಜದ ಕೆಳವರ್ಗದಿಂದ ಬಂದವರು. ದಲಿತವರ್ಗದಿಂದ ಬಂದ ಇವರು ಮುಖ್ಯವಾಗಿ ದಲಿತರ ಪರವಾಗಿ ವಿಚಾರ ಮಾಡುವಂಥವರು. ದಲಿತರ ಪರಂಪರಾಗತ–ರೂಢಿಗತ ಮೌಲ್ಯಗಳನ್ನು ಕುರಿತು ವೈಜ್ಞಾನಿಕವಾಗಿ ವಿಚಾರ ಮಾಡಬಲ್ಲವರು. ದಲಿತರ ನೋವು–ನಲಿವುಗಳು, ಹೆಣ್ಣಿನ ಶೋಷಿತ ಬದುಕು—ಇವುಗಳ ಸೂಕ್ಷ್ಮತೆಯನ್ನು ಬಲ್ಲವರು. ಅಂಬೇಡ್ಕರ್ ಅವರ ವಿಚಾರಧಾರೆಗೆ ಮಾರುಹೋದವರು. ಕಾಯಕದಿಂದ ಉಪನ್ಯಾಸಕರಾಗಿದ್ದರೂ ಪ್ರವೃತ್ತಿಯಲ್ಲಿ ಕನ್ನಡದ ಪ್ರಮುಖ ಬರಹಗಾರ್ತಿಯರಲ್ಲಿ ಮುಖ್ಯರಾಗಿದ್ದಾರೆ. ವೃತ್ತಿಯಿಂದಾಗಿ ಇವರ ಕೃತಿಗಳಲ್ಲಿ ಪ್ರೌಢಿಮೆ ಅಂಶ ಕಾಣಿಸುತ್ತದೆ. ಹೀಗೆ ಕನ್ನಡ ಸಾಹಿತ್ಯದ ಸಮರ್ಥ ಲೇಖಕಿಯಾಗಿ, ಜನಪ್ರಿಯ ಭಾಷಣಕಾರರಾಗಿ, ಉತ್ತಮ ಉಪನ್ಯಾಸಕರಾಗಿ ಹೆಸರಾಗಿರುವ ಕಮಲಾ ಹಂಪನಾ ಅವರಿಗೆ ದಿನಾಂಕ ೨೮-೧೦-೧೯೮೫ಕ್ಕೆ ಐವತ್ತು ವರ್ಷ ತುಂಬಿತು. ಇಂಥ ಸಂದರ್ಭದಲ್ಲಿ ಅಭಿನಂದನ ಸಮಾರಂಭವನ್ನು ಏರ್ಪಡಿಸಬೇಕೆಂದೂ ಅದರ ಭಾಗವಾಗಿ ಅಭಿನಂದನ ಗ್ರಂಥವನ್ನು ಹೊರತರಬೇಕೆಂದೂ ನಾಡಿನ ಅಭಿಮಾನಿಗಳು ಒಂದು ತೀರ್ಮಾನಕ್ಕೆ ಬಂದರು. ಇದಕ್ಕೆ ಮುನ್ನ ಬಂದಂಥ ಅಭಿನಂದನ ಗ್ರಂಥಗಳಿಗಿಂತಲೂ ನಾವು ಅರ್ಪಿಸುವ ಗ್ರಂಥ ಭಿನ್ನವಾಗಿರಬೇಕೆಂದೂ ವೈಶಿಷ್ಟ್ಯಪೂರ್ಣವಾಗಿರಬೇಕೆಂದೂ ಮಾದರಿಯಾಗಿರಬೇಕೆಂದೂ ತೀರ್ಮಾನ ಕೈಗೊಳ್ಳಲಾಯಿತು. ಇದರ ಜವಾಬ್ದಾರಿಯನ್ನು ಅಭಿನಂದನ ಸಮಿತಿ ನಮಗೆ ವಹಿಸಿತು. ಸಮಕಾಲೀನ ಸಂದರ್ಭದಲ್ಲಿ ಬರೆಯುತ್ತಿರುವ ಲೇಖಕರ ಕೃತಿಗಳನ್ನು ಆಯ್ಕೆಮಾಡಿಕೊಂಡು ಅವುಗಳನ್ನು ಯುವ ಲೇಖಕರಿಗೆ ಒಪ್ಪಿಸಿ ವಿಮರ್ಶೆ ಬರೆದುಕೊಡುವಂತೆ ಪ್ರಾರ್ಥಿಸಿಕೊಂಡೆವು. ಲೇಖಕರು ನಮ್ಮ ಕೋರಿಕೆಗೆ ಒಪ್ಪಿಗೆ ಸೂಚಿಸಿ ಸಕಾಲದಲ್ಲಿ ಲೇಖನಗಳನ್ನು ಒದಗಿಸಿ ಸಹಕರಿಸಿದ್ದಾರೆ. ಕಮಲಾ ಹಂಪನಾ ಅವರ ಅಭಿಮಾನಿಗಳಲ್ಲಿ

ಈ ಉತ್ಸುಕ ಹುಮ್ಮಸ್ಸು ಮೂಡಿದ್ದರ ಫಲವಾಗಿ, ಆ ಲೇಖನಗಳೆಲ್ಲ ಈಗ ನಿಮ್ಮ ಕೈಯಲ್ಲಿರುವ 'ಕಮಲಾಭಿನಂದನ'ದ ರೂಪದಲ್ಲಿ ಕಾಣಿಸಿಕೊಂಡಿತು ಎಂದು ಹೇಳಲು ಹರ್ಷವೆನಿಸುತ್ತದೆ.

ಈ ಅಭಿನಂದನ ಗ್ರಂಥಕ್ಕೆ ಹಲವು ರೀತಿಯ ಮಹತ್ವಗಳಿವೆ ಎಂಬುದನ್ನು ಯಾರಾದರೂ ಒಪ್ಪಿಕೊಳ್ಳಲೇಬೇಕು. ಸಮಕಾಲೀನ ಸಾಹಿತ್ಯದ ವಿವೇಚನೆ ನಿರಂತರವಾಗಿ ಆಗುತ್ತಿರಬೇಕಾದ ಕಾರ್ಯ. ಇದನ್ನು ಮನಗಂಡು ಆಯ್ಕೆಮಾಡಿದ ಐವತ್ತೊಂದು ಪುಸ್ತಕಗಳನ್ನು ಕುರಿತು ತಜ್ಞ ಲೇಖಕರಿಂದ ವಿಮರ್ಶಾತ್ಮಕ ಲೇಖನಗಳನ್ನು ಬರೆಸಿ ಪ್ರಕಟಿಸಲು ತೀರ್ಮಾನಿಸಲಾಯಿತು. ಯಾಕೆಂದರೆ ದಲಿತ, ಬಂಡಾಯ ಚಳುವಳಿಗಳು ಪ್ರಬಲವಾಗಿ ಕೇಳಿಬರುವಂಥ ಸಂದರ್ಭದಲ್ಲಿ ಸಾವಿದ್ದೇವೆ. ಈ ಸಂದರ್ಭದಲ್ಲಿ ಪ್ರಕಟವಾಗುತ್ತಿರುವ ಕೃತಿಗಳಲ್ಲೂ ತುಳಿತಕ್ಕೊಳಗಾದವರ ರೋಧನದ ಧ್ವನಿಗಳು ಆಳುವವರ ಅಟ್ಟಹಾಸ, ಆಳಿಸಿಕೊಳ್ಳುವವರ ಹೀನ ಬದುಕು ಅಭಿವ್ಯಕ್ತಗೊಂಡಿವೆ. ಹಾಗಾಗಿ ಜನಪರ ಕಾಳಜಿಗಳು ಕಾಣಿಸಿಕೊಳ್ಳುತ್ತಿವೆ. ಸೃಜನಶೀಲ ಸಾಹಿತ್ಯದಲ್ಲಿ ಜನಪರ ಕಾಳಜಿಗಳು, ದೃಷ್ಟಿಗಳು, ಧೋರಣೆಗಳು, ಆಶಯಗಳು ಪ್ರಖರವಾಗಿ ಗೋಚರವಾಗುತ್ತಿವೆ. ಸೃಜನಶೀಲ ಸಾಹಿತ್ಯದಲ್ಲಷ್ಟೇ ಇಂಥ ಕಾಳಜಿಗಳು ಕಾಣಿಸಿಕೊಂಡರೆ ಸಾಲದು, ಕೃತಿಗಳನ್ನು ಕುರಿತ ವಸ್ತುನಿಷ್ಠ ವಿಮರ್ಶೆಯಲ್ಲೂ ಕೂಡ ಜನಪರ ದೃಷ್ಟಿ, ಧೋರಣೆಗಳು ಕಾಣಿಸಿಕೊಳ್ಳಬೇಕಾದ ಸಂದರ್ಭ–ಅವಶ್ಯಕತೆ ಬಹಳಷ್ಟಿದೆ. ಇಂದಿನ ಸಂದರ್ಭದಲ್ಲಿ ಸೃಜನಶೀಲ ಕ್ರಿಯೆಯಲ್ಲಿ ತೊಡಗಿರುವವರೆಲ್ಲ ಬಹಳಷ್ಟು ಮಂದಿ ಜನಪರ ಪ್ರಜ್ಞೆಯುಳ್ಳವರೇ ಆಗಿದ್ದಾರೆ. ಈ ಸಂದರ್ಭದಲ್ಲಿನ ಕೃತಿಗಳ ವಿಮರ್ಶೆಯೂ ಸಮಕಾಲೀನ ಸಾಹಿತ್ಯದ ದೃಷ್ಟಿ ಮತ್ತು ಧೋರಣೆಗಳನ್ನು ಕುರಿತ ಮಾನದಂಡದಲ್ಲೇ ನಡೆಯಬೇಕಾಗುತ್ತದೆ. ಇಂಥ ಸದುದ್ದೇಶ ಈ ಗ್ರಂಥದ ಹಿನ್ನೆಲೆಯಾಗಿದೆ. ಆಯ್ಕೆ ಕ್ರಮದಲ್ಲೂ ಒಂದು ಸೂತ್ರವಿದೆ; ಯುವ ಲೇಖಕರ, ಹಿಂದುಳಿದ ಪಂಗಡದವರ ಕೃತಿಗಳಿಗೆ ಹೆಚ್ಚಿನ ಮಹತ್ವ ಕೊಡಲಾಗಿದೆ; ಅಲ್ಲದೆ ವಿಮರ್ಶೆಯನ್ನು ಕೂಡ ಯುವ ಬರಹಗಾರರಿಂದ ಮಾಡಿಸಲಾಗಿದೆ. ಇಲ್ಲಿಯ ವಿಮರ್ಶೆಗಳೆಲ್ಲ ವಸ್ತುನಿಷ್ಠವಾಗಿವೆ, ವಿಷಯದ ದೃಷ್ಟಿಯಿಂದಲೂ ವೈವಿಧ್ಯತೆಯನ್ನು ಗಳಿಸಿವೆ. ಜಾನಪದ, ಶಾಸ್ತ್ರ, ಕಥೆ, ಕಾವ್ಯ, ಕಾದಂಬರಿ, ಪ್ರಬಂಧ, ಸಂಪಾದನೆ–ಹೀಗೆ ಪಟ್ಟಿಮಾಡುತ್ತಾ ಹೋಗಬಹುದು.

ಲೇಖಕಿ ಕಮಲಾ ಹಂಪನಾ ಅವರಿಗೆ ಐವತ್ತುವರ್ಷ ತುಂಬಿದ ಸಂದರ್ಭದಲ್ಲಿ ಇಂಥದೊಂದು ಸಮಾರಂಭವನ್ನು ಏರ್ಪಡಿಸಿ ಇಂಥದೊಂದು ಗ್ರಂಥ ಅರ್ಪಿಸಬೇಕೆಂದು ಅಭಿನಂದನ ಸಮಿತಿ ತೀರ್ಮಾನ ಮಾಡಿದ್ದು ಕೇವಲ ಮೂರು ನಾಲ್ಕು ತಿಂಗಳ ಹಿಂದೆ ಅಷ್ಟೆ. ಇದಕ್ಕೆ ಸಂಬಂಧಿಸಿದಂತೆ ಚರ್ಚೆನಡೆಸಲು ಸಂಪಾದಕ ಸಮಿತಿ ಸಭೆ ಸೇರಿದ್ದೂ ಕೇವಲ ಮೂರು ಬಾರಿ ಮಾತ್ರ. ಕೂಡಲೆ ನಾವು ವಿಮರ್ಶಕ ಮಿತ್ರರಿಗೆ ಪ್ರಸ್ತುತ

ವಿಷಯವನ್ನು ತಿಳಿಸಿ ಪತ್ರಬರೆದೆವು. ಹದಿನೈದು ದಿನಗಳೊಳಗೆ ಅವರಿಂದ ಉತ್ತರಗಳೂ ಬಂದವು. ಅಷ್ಟೇ ರಭಸದಲ್ಲಿ ವಿಮರ್ಶೆಗಳನ್ನು ಕಳಿಸಿಕೊಡುವುದರ ಮೂಲಕ ನೆರವಾದರು. ಅವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲಬೇಕು. ಗ್ರಂಥವೂ ಕೂಡ ಅಷ್ಟೇ ಬೇಗ ಪ್ರಕಟವಾಯಿತು. ಈ ಎಲ್ಲ ರಭಸಕ್ರಿಯೆಗಳು ಅನೇಕರಿಗೆ ಆಶ್ಚರ್ಯವನ್ನುಂಟುಮಾಡಿರಲಿಕ್ಕೆ ಸಾಧ್ಯತೆ ಇದೆ. ಯಾಕೆಂದರೆ ಅಭಿನಂದನ ಸಮಾರಂಭ, ಗ್ರಂಥ ಅರ್ಪಣೆ—ಈ ವಿಷಯಗಳು ಸಣ್ಣ ಸಂಗತಿಗಳಲ್ಲ, ಅಪಾರ ಹಣ ಬೇಕಾಗುತ್ತದೆ. ಆರ್ಥಿಕ ಕೊರತೆಯಿಂದ ಕೆಲವು ಅಭಿನಂದನ ಸಮಾರಂಭಗಳು ಅರ್ಧಕ್ಕೇ ನಿಂತು ಹೋಗಿ ಲೇಖನ ಬರೆದುಕೊಟ್ಟ ಬರಹಗಾರರು ದಿನೇ ದಿನೇ 'ಸಮಾರಂಭ ಎಂದು, ಗ್ರಂಥ ಬಿಡುಗಡೆ ಯಾವಾಗ' ಎಂದು ಕೇಳುವ ಸ್ಥಿತಿಗತಿಗಳೂ ಬಂದಿರುವುದುಂಟು. ನಮ್ಮ ಸುತ್ತಮುತ್ತ ಇಂಥ ಘಟನೆಗಳು ಜರುಗುತ್ತಿರುವ ಸಂದರ್ಭದಲ್ಲಿ ಅಭಿನಂದನ ಸಮಿತಿ ನಮಗೆ ವಹಿಸಿರುವ ಕಾರ್ಯವನ್ನು ನಿಷ್ಠೆಯಿಂದ ನಿರ್ವಹಿಸಿದ್ದೇವೆ ಎಂಬುದೇ ನಮಗೆ ನೆಮ್ಮದಿಯ ವಿಷಯವಾಗಿದೆ. ಇಂಥ ಯಶಸ್ವೀ ಕಾರ್ಯಗಳನ್ನು ಸಹಿಸದ 'ಕೆಲವು ಮಂದಿ' 'ಆ ಗ್ರಂಥಕ್ಕೆ ಲೇಖನ ಕೊಡಬೇಡಿ' 'ಸಹಕರಿಸಬೇಡಿ' ಎಂದು ಅಪಪ್ರಚಾರ ಮಾಡಲು ಪ್ರಯತ್ನಿಸಿರುವುದೂ ನಮ್ಮ ಗಮನಕ್ಕೆ ಬಂದಿದೆ. ಇಂಥವರ ಬಗೆಗೆ ನಮಗೆ ಸಹಾನುಭೂತಿ ಇದೆ ಎಂದಷ್ಟೇ ಹೇಳಲು ಬಯಸುತ್ತೇವೆ.

ಬರೀ ಗ್ರಂಥಗಳನ್ನು ಅರ್ಪಿಸುವುದು, ಹೂವಿನ ಹಾರಗಳನ್ನು ಅರ್ಪಿಸಿ ಸಮಾರಂಭ ನಡೆಸುವುದು—ಇದಷ್ಟೇ ಅಭಿನಂದನ ಸಮಿತಿಯ ಕಾರ್ಯವಾಗಬಾರದೆಂದು ಭಾವಿಸಿದ ಸಮಿತಿ ಶೋಷಿತ ವರ್ಗದ ಧ್ವನಿಗಳನ್ನು ಗುರುತಿಸುವಂಥ 'ಸಮಕಾಲೀನ ಸಾಹಿತ್ಯ' ಎಂಬ ಒಂದು ದಿನದ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಬೇಕೆಂಬ ಮಹತ್ವದ ತೀರ್ಮಾನವನ್ನು ತೆಗೆದುಕೊಂಡಿತು. ಹಿಂದುಳಿದ ವರ್ಗದಿಂದ ಬಂದ ಕಮಲಾ ಹಂಪನಾ ಅವರನ್ನೇ ಸಮ್ಮೇಳನದ ಅಧ್ಯಕ್ಷರನ್ನಾಗಿಯೂ ಆಯ್ಕೆ ಮಾಡಿತು. ೧೯೮೫ ನವೆಂಬರ್ ೨೭ ರಂದು ಸಮ್ಮೇಳನ ತುಂಬ ಯಶಸ್ವಿಯಾಗಿ ಜರುಗಿತು. ಈ ಎಲ್ಲ ಮೌಲಿಕತೆಗಳಿಂದ ಕಮಲಾ ಹಂಪನಾ ಅಭಿನಂದನ ಸಮಾರಂಭಕ್ಕೆ, ಸಮಾರಂಭದ ಭಾಗವಾಗಿ ಹೊರಬಂದಿರುವ ಗ್ರಂಥಗಳಿಗೆ 'ಚಾರಿತ್ರಿಕ ಮಹತ್ವ'ವಿದೆ ಎಂದು ಭಾವಿಸಿದ್ದೇವೆ. ಈ ಅಭಿಪ್ರಾಯಗಳು ಓದುಗರಿಗೂ ಸೂಕ್ತವೆನಿಸಿದರೆ ನಮ್ಮ ಶ್ರಮ ಸಾರ್ಥಕವೆನಿಸುತ್ತದೆ.

ಇಂಥದೊಂದು ಜವಾಬ್ದಾರಿಯುತವಾದ ಕಾರ್ಯ ಯಶಸ್ವಿಯಾಗಬೇಕಾದರೆ ಅನೇಕರು ಅನೇಕ ರೀತಿಯಲ್ಲಿ ನೆರವಾಗಿದ್ದಾರೆ. ಅವರೆಲ್ಲರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಕೃತಿ ಪ್ರಕಟವಾಗುವ ಸಂದರ್ಭದಲ್ಲಿ ಹೆಚ್ಚು ಆಸಕ್ತಿಯಿಂದ ನೆರವಾದ ಗೆಳೆಯರಾದ ಶ್ರೀ ಜಿ. ಆರ್. ತಿಪ್ಪೇಸ್ವಾಮಿ ಮತ್ತು ಶ್ರೀ ಎಸ್. ವಿ. ಮನ್ವಾಚಾರ್ ಇವರುಗಳನ್ನು ವಿಶೇಷವಾಗಿ ಸ್ಮರಿಸಬೇಕಾಗುತ್ತದೆ. ಜವಾಬ್ದಾರಿ ಹೊರಿಸಿದ

ಅಭಿನಂದನ ಸಮಿತಿಗೆ, ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟ ಲೋಟಸ್ ಪ್ರಿಂಟರ್ಸ್ ಅವರಿಗೆ, ರಕ್ಷಾಪುಟ ಸಿದ್ಧಮಾಡಿಕೊಟ್ಟ ಕಲಾವಿದ ಶ್ರೀ ಚಂದ್ರನಾಥ್ ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ರಂಗಾರೆಡ್ಡಿ ಕೋಡಿರಾಂಪುರ

ಬಿನಕನಹಳ್ಳಿ ಟಿ. ನಾಯಕ

ಒಳಗಿರುವುದು

ಕಮಲಾಭಿನಂದನ

ಯಥಾಸ್ಥಿತಿಗೆ ಒತ್ತುಕೊಡುವ 'ಸಂಕ್ರಾಂತಿ'

ಡಾ. ಸಂಗನೇಶ ಸವದತ್ತಿಮಠ

ಜಾತಿ–ಮತ, ಅಸ್ಪೃಶ್ಯತೆ, ದಲಿತೋದ್ಧಾರ, ಬ್ರಾಹ್ಮಣ್ಯ, ಸಂಪ್ರದಾಯ ನಿರಾಕರಣ ಮುಂತಾದ ಸಾಮಾಜಿಕ ವಸ್ತುಗಳನ್ನಾಯ್ದುಕೊಂಡು ರಚಿತವಾದ ನಾಟಕಗಳು ಕನ್ನಡದಲ್ಲಿ ಕೈಲಾಸಂ ಅವರ 'ಟೊಳ್ಳುಗಟ್ಟಿ' (1919)ಯಿಂದ ಆರಂಭವಾಗುತ್ತವೆ. ಒಂದು ರೀತಿಯಲ್ಲಿ 'ಇಗ್ಗಪ್ಪ ಹೆಗ್ಗಡೆಯ ಪ್ರಹಸನ' ದಿಂದಲೇ ಕನ್ನಡ ನಾಟಕಗಳಲ್ಲಿ ಸಾಮಾಜಿಕ ಪ್ರಜ್ಞೆ ಮೂಡತೊಡಗಿತ್ತು. ಶ್ರೀರಂಗರ 'ಹರಿಜನ್ವಾರ', 'ಸಂಧ್ಯಾಕಾಲ', ಬೇಂದ್ರೆಯವರ 'ಉದ್ಧಾರ', ಕಾರಂತರ 'ಗರ್ಭಗುಡಿ', ಕುವೆಂಪು ಅವರ 'ಜಲಗಾರ', ಶ್ರೀನಿವಾಸರ 'ತಿರುಪಾಣಿ', ಗರುಡ ಸದಾಶಿವ ರಾಯರ 'ಉಗ್ರಕಲ್ಯಾಣ', ಎಂ. ಆರ್. ಶ್ರೀನಿವಾಸ ಮೂರ್ತಿ ಅವರ 'ಧರ್ಮದುರಂತ' ಮುಂತಾದ ಹಲವಾರು ನಾಟಕಗಳು ನವೋದಯ ಕಾಲದ ವೈಚಾರಿಕತೆ ಮತ್ತು ಸಾಮಾಜಿಕತೆಯ ಅರಿವನ್ನು ಬಿಂಬಿಸುತ್ತ ಬಂದವು. ಮಧ್ಯಮವರ್ಗದ ಆಶೋತ್ತರ ಹಾಗೂ ಆದರ್ಶವಾದಗಳನ್ನು, ಸಾಮಾಜಿಕ ಕ್ರಾಂತಿಯ ಐತಿಹಾಸಿಕ ಘಟನೆಗಳನ್ನು ಲಕ್ಷ್ಯಕ್ಕೆ ತಾರದೆ ಬಿಂಬಿಸುವ ಕಾರ್ಯವನ್ನು ಈ ನಾಟಕಗಳು ಮಾಡಿದವು.

ಕನ್ನಡದಲ್ಲಿ ನವ್ಯ ಬರವಣಿಗೆ ಕಾಲಿಟ್ಟ (1956) ನಂತರ 'ಬೌದ್ಧಿಕತೆ' ನಾಟಕಕಾರರ ಹೆಗಲೇರಿ ಕುಳಿತು ಕ್ರಾಂತಿ, ಬಂಡಾಯ. ಶೋಷಣೆಯ ವಿರುದ್ಧ ಹೋರಾಟ, ಸಮಾಜ ಪರಿವರ್ತನೆ, ಆದರ್ಶವಾದ, ರಾಜಕೀಯ ದೊಂಬರಾಟ, ಜಾತಿ ನಿರ್ಮೂಲನ, ಕಾರ್ಮಿಕ-ರೈತ-ದಲಿತರ ಜಾಗೃತಿ ಮುಂತಾದ ಅನೇಕ ಸಮಕಾಲೀನ ಸಮಸ್ಯೆಗಳನ್ನು ತೀವ್ರವಾಗಿ ಶಾಶ್ವತ ಸತ್ಯಗಳ ಸ್ತರದಲ್ಲಿ ಗ್ರಹಿಸಿ ರಂಗ ಪ್ರಾಮುಖ್ಯ ವನ್ನೂ ಗಮನದಲ್ಲಿಟ್ಟುಕೊಂಡು ಬಂದ ಉತ್ತಮ ಕನ್ನಡ ನಾಟಕಗಳು ಕೆಲವೇ ಕೆಲವು. ಅವು ರಂಗಪ್ರಯೋಗದಲ್ಲಿ ಕೂಡ ಯಶಸ್ವಿಯಾದವು. 'ಸತ್ತವರ ನೆರಳು', 'ತುಘಲಕ್', 'ಚಿಕದೇವಭೂಪ', 'ಸಂಕ್ರಾಂತಿ' ಮುಂತಾದವುಗಳು ಈ ನಿಟ್ಟಿನಲ್ಲಿ ಒಂದೊಂದು ದೃಷ್ಟಿಯಿಂದ ಪ್ರಮುಖವೆನಿಸಿದವು.

ಲಂಕೇಶರ 'ಸಂಕ್ರಾಂತಿ' ಕನ್ನಡ ನೆಲದಲ್ಲಿ ೧೨ನೆಯ ಶತಮಾನದಲ್ಲಿ ಬಸವಣ್ಣ ನಡೆಸಿದ ಸಾಮಾಜಿಕ ಕ್ರಾಂತಿಯ ಮುಖ್ಯ ಘಟನೆಯ ಫಲ–ವಿಫಲತೆಗಳನ್ನು ವರ್ತ ಮಾನದ ದೃಷ್ಟಿಯಲ್ಲಿ ವಾಸ್ತವಿಕವಾಗಿ ವಿಶ್ಲೇಷಿಸುತ್ತದೆ. ಬಸವಣ್ಣ ದಲಿತೋದ್ಧಾರದ ಹೆಸರಿನಲ್ಲಿ ಅರಿತೋ ಅರಿಯದೆಯೋ ಅವರನ್ನು ಬ್ರಾಹ್ಮಣೀಕರಣಗೊಳಿಸಲು ಯತ್ನಿಸಿ ಜಾತಿ ನಿರ್ಮೂಲನೆಯ ಒಟ್ಟು ಕ್ರಾಂತಿಯಲ್ಲಿ ವಿಫಲನಾಗಿರುವನೆಂಬ ಕಲ್ಪಿತ ಧೋರಣೆ ಯನ್ನಿಟ್ಟುಕೊಂಡು ಬ್ರಾಹ್ಮಣ ಯಾವಾಗಲು ಬ್ರಾಹ್ಮಣನಾಗಿರಲು, ಕೀಳು ಕುಲಜ ತಾನು ಕೀಳು ಕುಲಜವನಾಗಿಯೆ ಇರಲು ಇಚ್ಛಿಸುವನಲ್ಲದೆ ರಾಜಕೀಯ, ಸಾಮಾಜಿಕ ಮುಂತಾದ ಯಾವುದೇ ಬಾಹ್ಯ ಒತ್ತಡಗಳಿಗೆ ಕೂಡ ಒಳಗಾಗಲು ಅವನು ಬಯಸುವು ದಿಲ್ಲ, ಒಂದು ವೇಳೆ ಇವೆಲ್ಲ ಶಕ್ತಿಗಳನ್ನು ಎದುರುಹಾಕಿಕೊಂಡು ಕ್ರಾಂತಿಗೆ ಮುಂದೆ ಬಂದರೂ ಅಂಥವರು ವ್ಯವಸ್ಥೆಯ ಕ್ರೂರ ಶಕ್ತಿಗೆ ಬಲಿಪಶುವಾಗಿಬಿಡುತ್ತಾರೆ–ಎಂಬು ದನ್ನು 'ಸಂಕ್ರಾಂತಿ' ಚೆನ್ನಾಗಿ ಬಿಂಬಿಸುತ್ತದೆ. ಬಸವಣ್ಣನ ಧರ್ಮದ ರಕ್ತವಾಗಿದ್ದ 'ಭಕ್ತಿ'ಅವನ ಸಾಮಾಜಿಕ ಧಾರ್ಮಿಕ ಕ್ರಾಂತಿಯ ಮೂಲ ಶಕ್ತಿಯಾಗಿತ್ತು. ಆ ಶಕ್ತಿಯ ರಕ್ತವನ್ನು ಪ್ರಾಯಶಃ ಅವನ 'ಭ್ರಮೆ'ಎಂದು ನಾಸ್ತಿಕತೆಯ ವಾಸ್ತವದಲ್ಲಿ ಭಾವಿಸಿ ರಕ್ತವಿಲ್ಲದ ಎಲುವು-ತೊಗಲುಗಳ ಕ್ರಾಂತಿಯ ವೈಫಲ್ಯವನ್ನು 'ಸಂಕ್ರಾಂತಿ' ಎತ್ತಿ ತೋರುತ್ತದೆ. ಸಾಮಾಜಿಕ ಕ್ರಾಂತಿ–ತಿನಿಸು. ಕುಡಿತ, ಮೈಥುನಗಳ ಪ್ರಾಣಿಸದೃಶ ಮಾನವರಿಗೆ ಅರ್ಥವಾಗದ ವಿಷಯವೆನ್ನುವುದನ್ನು ಮತ್ತೆ ಮತ್ತೆ ಎತ್ತಿ ತೋರುವ ಪ್ರಸ್ತುತ ನಾಟಕ ಒಂದು ರೀತಿಯಲ್ಲಿ ಜಾತಿಹೀನರನ್ನು ಕಟುವಾಗಿ ವಿಡಂಬಿಸಿದೆ. ಸಾವಿರ ಬಸವಣ್ಣನವರು ಬಂದರೂ ದಲಿತರು ಬದಲಾಗುವುದಿಲ್ಲವೆಂಬುದನ್ನು ನಾಟಕ ಬಿಂಬಿಸುತ್ತದೆ. ಅವರು 'ಶರಣ' ಆದರೂ ಶೆಟ್ಟರಲ್ಲಿ ಅವರು ಮಾಡಿದ ಸಾಲ ತೀರುವುದಿಲ್ಲ. ಅವರ ಹೆಣ್ಣುಮಕ್ಕಳನ್ನು ಮದುವೆಯಾಗಲು ಉಚ್ಚಕುಲದವರು ಮುಂದಾಗುವುದಿಲ್ಲ. ಅವರ ಆಕಳನ್ನು ಹುಲಿ ತಿನ್ನುವುದನ್ನು ನಿಲ್ಲಿಸುವುದಿಲ್ಲ. ಅವರ ಜ್ವಾಳದ ಹಗೇವಿಗೆ ಹುಳ ಹತ್ತುವುದು ತಪ್ಪುವುದಿಲ್ಲ.

"ಬಸಣ್ಣ ಬರ್ಲಿ, ಕಸಣ್ಣ ಬರ್ಲಿ, ಮೂಡೋ ಹೊತ್ತು ಮೂಡೇ ಮೂಡ್ತತಿ. ರಾಗಿ ಬೀಸೋ ಕೈ ಬೀಸ್ತಾನೇ ಇರತತಿ...ನಾನು ನೀನು ಚಮಡ ಸುಲಿಯೋದು ತಪ್ಪಾಕಿಲ್ಲ" ಎಂಬ ಕೆಂಚನ ಮಾತು ಇದನ್ನು ಸ್ಪಷ್ಟವಾಗಿ ಸಾರುತ್ತದೆ.

ಕೀಳು ಕುಲದ ರುದ್ರನನ್ನು ಉಚ್ಚಕುಲದ ಬ್ರಾಹ್ಮಣ ಕನ್ಯೆ ಉಷಾ ಪ್ರೀತಿಸಿದ್ದಾಳೆ. ಅವಳಿಗೆ 'ಹೊಲೆಯರುದ್ರ' ಬೇಕೇ ಹೊರತು, 'ಶರಣರುದ್ರ' ಅಲ್ಲ. ಅರ್ಥಾತ್ ತಿನಿಸು-ಕುಡಿತ-ಮೈಥುನಗಳ, ಮಣ್ಣಿನ ಬೆವರು ವಾಸನೆಯ ಪ್ರಾಣಿರುದ್ರ ಅವಳಿಗೆ ಬೇಕು. ಸುಧಾರಿಸಿದ, ಸಂಕೋಚದ, ಭಕ್ತಿಯ ಭಾವುಕತೆಯ, ಮಡಿ ಹುಡಿಯ, ಪೂಜೆ-ಪುನಸ್ಕಾರದ, ಸಂಸ್ಕೃತ-ಮಂತ್ರ-ತಂತ್ರದ ಶರಣರುದ್ರ ಅವಳಿಗೆ ಬೇಡ. ತನ್ನ ಪ್ರಿಯಂಕರ 'ಶರಣ'ನಾಗುವುದು ಅವಳಿಗೆ ಹಿಡಿಸದು. ಅಂತೆಯೆ ಅವನಿಗೆ ಖಂಡಿತವಾಗಿ ಹೇಳುತ್ತಾಳೆ—"ಇವತ್ತಲ್ಲ ನಾಳೆ ನೀನೂ ಸಹ ನಾಮಕ್ಕೆ ಬದಲು ವಿಭೂತಿ ಹಾಕಿ ಮಂತ್ರ ಮಣ ಮಣ ಹಾಡ್ತಾ, ಓಡ್ತ ದೊಡ್ಡ ಪಂಡಿತರ ಹಾಗೆ ರೇಷ್ಮೆ ಪಂಚೆ ಹಾಕಿಕೊಂಡು ಆಸ್ಥಾನದಲ್ಲಿ ಕೂತು ಜ್ಞಾನದ ತೇಗು....ಎಲ್ಲ ಗುಡಿ, ಮನೆ. ಮಠಗಳಲ್ಲಿ ಓಡಾಡ್ತಿ...." ಆದ್ದರಿಂದ ರುದ್ರ ಕೀಳುಕುಲದಲ್ಲಿದ್ದರೇನೇ ಅವನು ಅವಳಿಗೆ ಆಪ್ಯಾಯಮಾನ. ಕೀಳು ಕುಲಜರನ್ನು ಏನು ಪ್ರಮಾಣಮಾಡಿಸಿದರೂ ಅವರು ಬದಲಾಗಲು ಸಾಧ್ಯವಿಲ್ಲ. ಅವರಿಗೆ ಬೇಕಾಗಿರುವುದು 'ಅನ್ನ'. ಅದರ ಆಶೆ ಹಚ್ಚಿ ಅವರನ್ನು ಸುಧಾರಿಸುವ ಬೂಟಾಟಿಕೆಯನ್ನು ಬಸವಣ್ಣ ನಡೆಸಿದ್ದಾನೆಂಬುದು ಅವಳ ಅನಿಸಿಕೆ. ರುದ್ರ ಅವಳ ಮೇಲೆ ಬಲಾತ್ಕಾರ ಮಾಡುವ ಕ್ಷಣದವರೆಗೂ 'ನೀನು ಹೊಲೆಯ ನಾನು ಬ್ರಾಹ್ಮಣ ಸ್ತ್ರೀ' ಎಂಬ ಪೂರ್ಣ ಪ್ರಜ್ಞೆ ಅವಳಿಗೆ ಇದ್ದೇ ಇದೆ. ಬ್ರಾಹ್ಮಣ್ಯದ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಹರಿದುಕೊಂಡು ಊರು ನೋಡುತ್ತ, ಹೊಲಗದ್ದೆ, ಕಾಡು ಅಲೆಯುತ್ತ, ಬೇಟೆಯಾಡುತ್ತ ಸ್ವಚ್ಛಂದವಾಗಿರಲು ಅವಳು ಬಯಸಿದ್ದಾಳೆ. ಕೆಂಚನಂಥ ಹುಲಿಗಳನ್ನು ತಾನು ಆಡಿಸಬಲ್ಲೆನೆಂಬುದನ್ನು ಜಾಹೀರಾಗಿಯೇ ಸಿದ್ಧಪಡಿಸುತ್ತಾಳೆ. ಅವಳು ರುದ್ರನೊಂದಿಗೆ ನಡೆಸಿದ್ದು ಪ್ರೇಮವೋ ಅಥವಾ ರುದ್ರನು ಮಾಡಿದ್ದು ಬಲಾತ್ಕಾರವೋ ಎಂದು ಬಸವಣ್ಣ–ಬಿಜ್ಜಳರು ಒರೆಗೆ ಹಚ್ಚಿ ಕೇಳಿದಾಗ, ಅವಳು ಕ್ರಾಂತಿಯ ಬೀಜದ ವಿಫಲತೆಯನ್ನೇ ಒಡೆದು ಹೇಳುತ್ತಾಳೆ. ಸ್ಪಷ್ಟವಾಗಿ ಗಂಭೀರವಾಗಿ ಅವಳು-ರುದ್ರನು ತನ್ನಮೇಲೆ ಬಲಾತ್ಕಾರ ಮಾಡಿದ್ದೇ ನಿಜ ಎಂದು ಹೇಳುತ್ತಾಳೆ.

"ನನ್ನ ಬಳಿ ಮಾತಾಡುತ್ತಿದ್ದವ ಬೇರೆ, ಆತ ಬಂದು ಮೈಮೇಲೆ ಬಿದ್ದ. ಆತ ನನಗೆ ಬೇಕಾದವನಾಗಿದ್ದ. ಆದರೆ ನಾನು ಎದ್ದು ನೋಡಿದಾಗ ಆತ ಇರಲಿಲ್ಲ. ಅಲ್ಲಿದ್ದವನು ಶರಣ ರುದ್ರ" ಇದು ಅವಳ ಸ್ಪಷ್ಟ ನುಡಿ. ರುದ್ರ ಶರಣನಾಗದೆ ಉಳಿದಿದ್ದರೆ ಅದು ಅವಳಿಗೆ ಪ್ರೇಮವಾಗಬಹುದಿತ್ತು. ರುದ್ರನು ಶರಣನಾಗುವ ಮೂಲಕ ಬ್ರಾಹ್ಮಣನಾಗಿದ್ದಾನೆ. ತಾನು ಬಯಸಿದ್ದು ಆ ಬ್ರಾಹ್ಮಣನನ್ನಲ್ಲ ಎಂಬುದು ಇಲ್ಲಿಯ ತಾತ್ಪರ್ಯ, ಈ ರೀತಿ ಉಷಾಳ ಪಾತ್ರ ಹಾಗೂ ಅದಕ್ಕೆ ಪೂರಕವಾಗಿ (ರುದ್ರನ

ಹೊರತಾಗಿ) ಎಲ್ಲ ಕೀಳು ಕುಲದ ಪಾತ್ರಗಳ ಮೂಲಕ ನಾಟಕವು ಯಥಾಸ್ಥಿತಿಯ ಪ್ರತಿಪಾದನೆಯನ್ನು ಮಾಡುತ್ತದೆ.

ಬಸವಣ್ಣ ಭಕ್ತಿಯನ್ನು ಸ್ಥಾಯಿಯಾಗಿಸಿಕೊಂಡು ಅದೇ ಸೂತ್ರದಿಂದ ಅವನು (–ಭಕ್ತಿಯೆಂಬುದು ಭಾವನಾತ್ಮಕವಾಗಿದ್ದರೂ ಅದರಿಂದ) ನೈತಿಕತೆಯನ್ನು ಹೆಚ್ಚಿಸಿ-ಆರ್ಥಿಕ–ಸಾಮಾಜಿಕ–ಧಾರ್ಮಿಕ ಸಮಾನತೆಗಳನ್ನು ತಂದು ಜಾತಿ–ವರ್ಗ ಭೇದಗಳನ್ನು ನಾಶಮಾಡಲು ಪ್ರಯತ್ನಿಸಿದ್ದು ಐತಿಹಾಸಿಕ ಸತ್ಯ. ಸಂಕ್ರಾಂತಿಯ ಒಂದು ಸನ್ನಿವೇಶದಲ್ಲಿ ಕಳಬೇಡ ಕೊಲಬೇಡ ಇತ್ಯಾದಿ ಜೀವನ ಮೌಲ್ಯಗಳು ಕೀಳು ಕುಲದ ಜನಕ್ಕೆ ಹೇಗೆ ಅರ್ಥವಾಗುವುದಿಲ್ಲ ಎಂಬುದನ್ನು ಎತ್ತಿ ತೋರಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಆ ಭಕ್ತಿಯ ರಕ್ತವನ್ನು ಅಲ್ಲಿ ಹೊರಗಿಟ್ಟಿರುವುದೇ ಆಗಿದೆ. ವ್ಯಷ್ಟಿಯ ಶುದ್ಧತೆಯಿಂದ ಸಮಷ್ಟಿಯ ಶುದ್ಧತೆ ಸಾಧ್ಯವೆಂದು ನಂಬಿದ ಬಸವಣ್ಣ ಕೆಂಚನ ಕೇರಿಗೆ ಬಿಜ್ಜಳನೊಂದಿಗೆ ಬಂದಾಗ ಅಲ್ಲಿ ಅವನಿಗೆ ನಿರಾಶೆಯಾಗುತ್ತದೆ. ಸಾಮಾಜಿಕ ಕ್ರಾಂತಿಗೆ ಧರ್ಮಕ್ಕೆ ಸಂಬಂಧಪಟ್ಟ ಭಕ್ತಿಯ ಪೊಳ್ಳು ಸೂತ್ರ ಪ್ರಯೋಜನವಿಲ್ಲವೆಂಬುದನ್ನು ಗ್ರಹಿಸಿ ಪೂರ್ಣ ವಾಸ್ತವಿಕ ಮತ್ತು ಯಥಾರ್ಥದ ನಿಟ್ಟಿನಲ್ಲಿ ನಾಟಕ ಸಾಗುತ್ತದೆ. ದಲಿತರ ನಿಜ ಜೀವನ–ಅವರ ಅಶ್ಲೀಲತೆ, ಅವರ ಹೆಂಡ, ಅವರ ಕ್ರೌರ್ಯ, ಅವರ ಅಸಹಾಯಕತೆ, ಅವರ ಕನಸು, ಅವರು ಕಚ್‌ಬುಸ್ ಕಚ್‌ಬುಸ್ ಎನ್ನುವ ಕೋಳಿ, ಕಿರುಬ, ಹಂದಿ, ಸಾರಗ, ಅವರ ಹೆಣ್ಣು, ಅವರ ಬಡತನ. ಅವರ ಬೇಟೆ, ಅವರ ಕುಣಿತ, ಜಗಳ, ಭಾಷೆ ಇತ್ಯಾದಿ ಇತ್ಯಾದಿ ಎಲ್ಲ ತುಂಬ ವಾಸ್ತವಿಕವಾಗಿ ನಾಟಕದಲ್ಲಿ ಚಿತ್ರಿತ ವಾಗಿವೆ. ದಲಿತರನ್ನು ಇಂಥ ಹೀನ ಪರಿಸ್ಥಿತಿಯಿಂದ ಮೇಲೆತ್ತಲು ಬಸವಣ್ಣ ಪ್ರಯತ್ನಿಸಿದರೂ ಪಟ್ಟಭದ್ರ ಬ್ರಾಹ್ಮಣ್ಯ ಹಾಗೂ ರಾಜಕೀಯ ಒತ್ತಡಗಳ ಪ್ರತಿ ರೋಧದಿಂದಾಗಿ ಏಳಲಾರದೆ ರುದ್ರನಂತಹ ಅರ್ಧಮರ್ಧ ಮೇಲಕ್ಕೆದ್ದವರೂ ಮತ್ತೆ ಕೆಳಕ್ಕೆಸೆಯಲ್ಪಡುತ್ತಾರೆ ; ಬಲಿಪಶುವಾಗುತ್ತಾರೆ. ಕ್ರಾಂತಿ ವಿಫಲವಾಗಿ ಸನಾತನಿಗಳ ಕೈ ಮೇಲಾಗಿ ವ್ಯವಸ್ಥೆಗೆ ಹೊಸ ಬೇರು ಮೂಡುತ್ತದೆ.

ತಲೆತಲಾಂತರದಿಂದ ಮೇಲ್ವರ್ಗದ ಎಲ್ಲ ಸೌಲಭ್ಯಗಳನ್ನು ಪಡೆಯುತ್ತ, ರಾಜ ಕೀಯ, ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳನ್ನೆಲ್ಲ ತಮ್ಮ ನೇರಕ್ಕೆ ತಿರುಗಿಸುತ್ತ ಬಂದ ಬ್ರಾಹ್ಮಣರಿಗೆ ತಮ್ಮೊಳಗಿಂದಲೇ ಸಿಡಿದೆದ್ದು ದಲಿತರ ಧ್ವನಿಯಾಗಿ ನಿಂತ ಬಸವಣ್ಣ ಅವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದಾನೆ. ಬಿಜ್ಜಳನ ಮೂಲಕ ಅವನನ್ನು ಮಟ್ಟ ಹಾಕಲು ಅವರು ಹವಣಿಸುತ್ತಿದ್ದಾರೆ. ರಾಜ್ಯದಲ್ಲಿ ಕೋಲಾಹಲವೆಂದು ಬೊಬ್ಬೆಹಾಕುತ್ತಾರೆ. ದಿನದಿನಕ್ಕೆ ಪ್ರಬಲನಾಗುತ್ತಿರುವ ಬಸವಣ್ಣನನ್ನು ಕಂಡು ಬಿಜ್ಜಳ ಒಳಗೊಳಗೇ ಕುದಿಯುತ್ತಿದ್ದಾನೆ. ಮುಳ್ಳಿನಿಂದಲೆ ಮುಳ್ಳುತೆಗೆಯಲು ಹವಣಿಸುತ್ತಿದ್ದಾನೆ. ಬ್ರಾಹ್ಮಣರು ಹಾಗೂ ಶರಣರ ಸಂಘರ್ಷದಲ್ಲಿ ಬಿಜ್ಜಳನ ತೊಳಲಾಟವನ್ನು ತುಂಬ ಚೆನ್ನಾಗಿ ನಾಟಕ ಚಿತ್ರಿಸಿದೆ. ಬ್ರಾಹ್ಮಣರು ಧರ್ಮರಕ್ಷಣೆಯ ಹೆಸರಿನಲ್ಲಿ ಸಂಪ್ರದಾಯವನ್ನು, ಪರಂಪರೆಯನ್ನು ತಮ್ಮ ಪಟ್ಟಭದ್ರ ಸ್ಥಾನವನ್ನು

ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ. ದಲಿತರ ಜಾಗೃತಿಗೆ ಕಾರಣನಾದ ಬಸವಣ್ಣನ ಮೇಲೆ ಅವರು ಸೇಡು ತೀರಿಸಿಕೊಳ್ಳಲು ಬಿಜ್ಜಳನ ಮೇಲೆ ವ್ಯವಸ್ಥಿತವಾಗಿ ಒತ್ತಡ ತರುತ್ತಾರೆ. ಸನಾತನ ಧರ್ಮರಕ್ಷಣೆ ಅರಸನ ಕರ್ತವ್ಯವೆಂದು ಪದೇ ಪದೇ ನೆನಪಿಸುತ್ತಾರೆ. ತಮ್ಮ ಬೆಂಬಲಕ್ಕೆ ಜೈನರನ್ನೂ ಕೂಡಿಸಿಕೊಂಡು ಶೂದ್ರರು ಮಾಡುವ ಕಾರ್ಯವೆಲ್ಲ ಧರ್ಮವಿರುದ್ಧವೆಂಬುದನ್ನು ರಾಜನಿಗೆ ಬಿಂಬಿಸುತ್ತಿದ್ದಾರೆ. ಆಸ್ಥಾನ ಪಂಡಿತರ ಮಗಳು ಉಷಾಳನ್ನು (ರುದ್ರ) ಶೂದ್ರನೊಬ್ಬ ಪ್ರೇಮಿಸಿದ್ದನ್ನು ಇವರು ಅತ್ಯಾಚಾರವೆಂದು ಬಣ್ಣಿಸುತ್ತಾರೆ.

ಬ್ರಾಹ್ಮಣ–ಶೂದ್ರರ ಈ ಸಂಘರ್ಷದಲ್ಲಿ ಬಿಜ್ಜಳನ ಅರಮನೆಯೆದುರು ನಿತ್ಯ 'ಹೆಣ' ಬೀಳುತ್ತವೆ. ಯಾವನು ಶೂದ್ರ, ಯಾವನು ಶರಣ ಎನ್ನುವುದನ್ನು ತಿಳಿಯುವುದೇ ಕಷ್ಟವಾಗಿ ಬಿಜ್ಜಳ ಗೊಂದಲಕ್ಕೀಡಾಗುತ್ತಾನೆ. ಒಟ್ಟಿನಲ್ಲಿ ಹೆಣ ಬೀಳುವುದು ಶೂದ್ರರು ಶರಣರಾಗುತ್ತಿರುವ ಬದಲಾವಣೆಯ ಅನಿಷ್ಟ ಫಲ ಎಂದು ಅವನು ಭಾವಿಸಿದ್ದಾನೆ. ಹೆಣ ಬೀಳದೆ ಕ್ರಾಂತಿ ಮಾಡಬೇಕೆಂದು ಬಸವಣ್ಣ ಹೊರಟರೂ ಅವನ ಕೈಮೀರಿ, ಬ್ರಾಹ್ಮಣರ ಚಾಕಚಕ್ಯತೆಯಿಂದಾಗಿ ದಲಿತರ ಆಕ್ರೋಶದಿಂದಾಗಿ, ಹೆಣ ಬೀಳುವುದು ನಿಂತಿಲ್ಲ. ಅತ್ಯಾಚಾರಕ್ಕೆ ಸಿಕ್ಕು ಉಷಾ ಹೆಣವಾಗಿದ್ದಾಳೆಂದು ಬ್ರಾಹ್ಮಣರು ಉತ್ಪ್ರೇಕ್ಷಿಸಿ ಸುಳ್ಳು ಹೇಳುತ್ತಾರೆ. 'ಹೆಣ'ದ ಸಂಕೇತವನ್ನಿಲ್ಲಿ ಚೆನ್ನಾಗಿ ಬಳಸಿಕೊಳ್ಳಲಾಗಿದೆ. "ನಿಮ್ಮ ಶರಣತ್ವದ ಫಲ ಈ ಹೆಣ... ಅವಳು ಸತ್ತಿದ್ದಾಳೋ ಬದುಕಿದ್ದಾಳೋ ಎಂಬುದಕ್ಕೆ ಮುಂಚೆ ಶವದ ಯೋಚನೆ...." ಎಂದು ಬಿಜ್ಜಳ ಹೇಳುವಲ್ಲಿ ಅರ್ಥವಂತಿಕೆ ಕಾಣುತ್ತದೆ. ತನ್ನ ರಾಜ್ಯ ಹೆಣವಾಗುತ್ತಿದೆಯೋ ಎಂಬ ಭಯ ಅವನಿಗೆ. ಸಂಪ್ರದಾಯದ ಜಡತ್ವ 'ಹೆಣ'ವಾಗುತ್ತಿದೆ ಎಂಬುದರ ಸಂಕೇತ ಶೂದ್ರರಿಗೆ. ಈ ಹೆಣಗಳಿಂದಾಗಿ ಜನ ಯೋಚಿಸತೊಡಗುತ್ತಾರೆ. ಅವರು ಜಾಗ್ರತರಾದರೆ ರಾಜ್ಯದಲ್ಲಿ, ಹಾಹಾಕಾರ, ಮುಂದೆ ತನಗೇ ಅದು ಕುತ್ತು. ಇದನ್ನು ಆಗಗೊಡಬಾರದು ಎಂದು ಬಿಜ್ಜಳನ ಹವಣಿಕೆ. ತನ್ನ ರಾಜ್ಯದಲ್ಲಿ ಗೊಂದಲಕ್ಕೆ ಕಾರಣವಾಗಿದ್ದು ಸ್ವರ್ಗ–ಧರ್ಮ–ಆಧ್ಯಾತ್ಮ–ಮಡಿ–ಹುಡಿ ಇತ್ಯಾದಿ ಗೊಡ್ಡು ಆಚಾರ ವಿಚಾರಗಳಿಂದ ಎಂದೇ ನಂಬಿ ಅವನು ಲೌಕಿಕವಾದಿಯಾಗಿದ್ದಾನೆ. ಅಂತೆಯೆ ಸಂಕ್ರಾಂತಿಗೆ ರುದ್ರನ ಬಲಿಕೊಟ್ಟು ಶೂದ್ರರಿಗೂ ಬ್ರಾಹ್ಮಣರಿಗೂ ಪಾಠಕಲಿಸಿ ಹೆಣ ಬೀಳುವುದಕ್ಕೆ ಅಂದರೆ ಕ್ರಾಂತಿಗೆ ಕೊನೆಯ ತೆರೆ ಎಳೆಯಲು ನಿರ್ಧರಿಸಿದ್ದಾನೆ. ಬ್ರಾಹ್ಮಣ ಶೂದ್ರರ ತೊಡಕಿನಲ್ಲಿ ಸಿಕ್ಕ ಬಿಜ್ಜಳ ಒಮ್ಮೊಮ್ಮೆ ಅಸಂಬದ್ಧವಾಗಿ ಅರಚುತ್ತಾನೆ. ಅದು ರಾಜನ ಅವಿವೇಕಿತನದ ಲಕ್ಷಣವೂ ಆಗಿದೆ. ರಾಜ್ಯದಲ್ಲಿ ನಡೆಯುವ ಹಿಂಸಾಕೃತ್ಯಗಳಿಗೆ ಪ್ರಧಾನಿಯಾದ ಬಸವಣ್ಣನೂ ಹೊಣೆಗಾರನೆಂಬುದನ್ನು ಬಿಜ್ಜಳನು ಭಟ್ಟನ ಮೂಲಕ ಬಿಂಬಿಸಲು ಯತ್ನಿಸುತ್ತಾನೆ. ಜನರನ್ನು ಹತೋಟಿಯಲ್ಲಿಡಲು ಅವರಲ್ಲಿ ತಪ್ಪನ್ನು ಹುಡುಕಿಕೊಂಡು ಹೋಗುವುದು, ತಪ್ಪು ಸಿಗದಿದ್ದರೂ ಶಿಕ್ಷಿಸುವುದು

ತನ್ನ ಕರ್ತವ್ಯವೆಂದು ಭಾವಿಸಿದ ಬಿಜ್ಜಳ ಧೂರ್ತನೂ ಆಗಿದ್ದಾನೆ. ಇತ್ತ ಬಸವಣ್ಣನನ್ನು ಬಿಡಲಾರದೆ ಅತ್ತ ಬ್ರಾಹ್ಮಣರನ್ನೂ ಬಿಡಲಾರದೆ ಇಬ್ಬರನ್ನೂ ತನ್ನ ಸ್ವಾರ್ಥಕ್ಕಾಗಿ ಉಳಿಸಿಕೊಳ್ಳಲು ಹೆಣಗುತ್ತಾನೆ. ಯಾಕೆಂದರೆ ಇಬ್ಬರಲ್ಲಿ ಯಾರನ್ನು ಬಿಟ್ಟರೂ ಕ್ರಾಂತಿ ನಿಶ್ಚಿತವೆಂದು ಅವನು ಭಾವಿಸಿದ್ದಾನೆ. ಬಿಜ್ಜಳನ ಈ ದ್ವಂದ್ವವನ್ನು ಲೆಕ್ಕಿಸದೆ ಬಸವಣ್ಣ ಮಾತ್ರ ಒಂದೇ ಧ್ವನಿಯಾಗಿ ದಲಿತರ ಪರವಾಗಿ ನಿಂತು ಗಟ್ಟಿಯಾಗಿ ಬಿಜ್ಜಳನನ್ನು ಎದುರಿಸುತ್ತಾನೆ. ದಲಿತರ ಗೋಳು, ಅವರ ಹಸಿವು, ಅವರ ಅಜ್ಞಾನ, ಅವರಿಗಾಗುವ ಹಿಂಸೆ ಇವು ಸಿಂಹಾಸನಾದ ಮೇಲೆ ಕುಳಿತ ಬಿಜ್ಜಳನಂಥವರಿಗೆ ಅರ್ಥವಾಗುವುದಿಲ್ಲವೆಂಬುದನ್ನು ಮನಂಬುಗುವಂತೆ ಪ್ರತಿಪಾದಿಸುತ್ತಾನೆ. ಸನಾತನ ಧರ್ಮೀಯರ ಪೊಳ್ಳುತನವನ್ನು ಮುಖಕ್ಕೆ ಹೊಡೆದಂತೆ ಬಿಜ್ಜಳನಿಗೆ ಬಿಂಬಿಸುತ್ತಾನೆ.

"....ಈ ವ್ಯವಸ್ಥೆಯನ್ನು ಕಾಪಾಡುವುದರಲ್ಲಿ ನಿಮ್ಮ ಆಸಕ್ತಿ ಇದರಲ್ಲಿ ನಿಮ್ಮ ಸುಖ ಕೂಡ ಅಡಗಿದೆಯೆಂಬುದು ನಿಮಗೆ ಗೊತ್ತು." ಎಂದು ಬಸವಣ್ಣ ಹೇಳಿ ತಲೆತಲಾಂತರದಿಂದ ಬ್ರಾಹ್ಮಣರ ತುಳಿತಕ್ಕೆ ಒಳಗಾಗಿ ಇದೀಗ ಎಚ್ಚೆತ್ತ ದಲಿತನೇ ಶರಣ ಎಂಬುದನ್ನು "....ನಿಮ್ಮ ಕಣ್ಣಿಗೆ ಎಲ್ಲೆಲ್ಲೂ ಶರಣರು ಬೀಳುತ್ತಾರೆ ಯಾಕೆಂದರೆ ಅವರು ಎಚ್ಚೆತ್ತವರು" ಎಂಬ ಮಾತಿನಿಂದ ಸ್ಪಷ್ಟಪಡಿಸುತ್ತಾನೆ. ಪ್ರಜೆ ಪ್ರಜೆ ಎಂದು ಬಡಿದು ಕೊಳ್ಳುತ್ತಿರುವ ಬಿಜ್ಜಳನಿಗೆ ಅದೇ ಅಜ್ಞ ಪ್ರಜೆಗಳಿಂದಲೇ ರಾಜನ ಪರಾಕು ಯಾಕೆ ಆಗುತ್ತದೆಂಬುದನ್ನು ಬಸವಣ್ಣ ತಾರ್ಕಿಕವಾಗಿ ಬಿಂಬಿಸುತ್ತಾನೆ. ಆದರೆ ಈ ದಲಿತರನ್ನು ಕಂಡು "....ಚಳಿಗಾಲದಲ್ಲಿ ಅಂಗೈ ಅಗಲ ಬಟ್ಟೆ ಇಲ್ಲದೆ ನಡುಗುವ ಹಸುಳೆಗಳನ್ನು ನೋಡಿ ಭಯವಾಗುತ್ತದೆ ; ತಮ್ಮ ಸನಾತನಿಗಳ ಮಂತ್ರಗಳ ಗದ್ದಲದಲ್ಲಿ ಕಿವುಡಾದ, ಹೊಟ್ಟೆಗಿಲ್ಲದ ಜನ ನೋಡಿ ನನ್ನ ದಿಗ್ಭ್ರಮೆ ಇಮ್ಮಡಿಯಾಗುತ್ತದೆ. ತಮ್ಮ ಕನಸುಗಳು ಮೈ ಪಡೆಯಬೇಕಾದದ್ದು ಅಲ್ಲಿ; ಎಲ್ಲರನ್ನೂ ಮೂಕರನ್ನಾಗಿ ಇಡುವುದರಲ್ಲಲ್ಲ..." ಎಂದು ತೀರ ಸ್ಪಷ್ಟವಾಗಿ ಹೇಳಿ ದಲಿತರ ಸೇವೆಯನ್ನು ಅರ್ಥಪೂರ್ಣವಾಗಿ ಮಾಡುವುದಕ್ಕಾಗಿ ತನ್ನ ಬಿಡುಗಡೆಯನ್ನು ಮತ್ತೆ ಮತ್ತೆ ಬಸವಣ್ಣ ಬಯಸುತ್ತಾನೆ. ದಲಿತರ ವಾಸ್ತವಿಕ ನೆಲೆಗಟ್ಟಿನ ಮೇಲೆ ನಿಂತು ಬಸವಣ್ಣನು ಮಾತಾಡಿದಾಗ ಬಿಜ್ಜಳ ಮತ್ತೆ ಗಲಿಬಿಲಿಗೊಳ್ಳುತ್ತಾನೆ. "...ನಿಮಗೆ ಬಿಡುಗಡೆ ಸುಲಭ. ಆದರೆ....ನನ್ನ ಬಿಡುಗಡೆ ಹೇಗೆ?...ವೈದಿಕರ ಜನಿವಾರ ಕಿತ್ತು ಹೊರಬಂದಿರಿ ನೀವು; ಆದರೆ ನನ್ನ ಬಂಧನ ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು. ನಾನು ಈ ವ್ಯವಸ್ಥೆಗೆ ಅಂಟಿಕೊಳ್ಳಬೇಕಾಗಿದೆ" ಎಂದು ತನ್ನ ಅನಿವಾರ್ಯ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾನೆ. ಈಗ ಬಿಜ್ಜಳ ಹಾಗೂ ಬಸವಣ್ಣ ಪರಂಪರೆ ವ್ಯವಸ್ಥೆ, ಧರ್ಮಕ್ಕೆ ಎದುರಾಗಿ ದಲಿತರ ಕಟು ವಾಸ್ತವಿಕ ಸಂಕಟ, ನೋವು ಇವುಗಳ ದ್ವಂದ್ವದ ಪ್ರತೀಕವಾಗಿ ವೈಚಾರಿಕ ನೆಲೆಯಲ್ಲಿ ಹೋರಾಡುತ್ತಾರೆ. ಬಿಜ್ಜಳನ ದೃಷ್ಟಿಯಲ್ಲಿ ಯಥಾಸ್ಥಿತಿಯೇ ವಾಸ್ತವವಾದರೆ ಬಸವಣ್ಣನ ದೃಷ್ಟಿಯಲ್ಲಿ ಕ್ರಾಂತಿಯೇ ವಾಸ್ತವವೆನಿಸುತ್ತದೆ. ಇವರಿಬ್ಬರ ಪ್ರಬುದ್ಧ ವಾಸ್ತವ ಕಲ್ಪನೆಗಳು ತರ್ಕಬದ್ಧವಾಗಿ ವಾದಿಸಲ್ಪಡುತ್ತವೆ. ಇವರ ವೈಚಾರಿಕ ಸಂಘರ್ಷ

ಕೊನೆಯನ್ನೆ ಕಾಣದೇನೋ ಎಂಬಂತೆ ತೋರಿದಾಗ ಬಸವಣ್ಣ ತಾನೇ ಬಿಡುಗಡೆ ಪಡೆದು ಹೊರಡಲುದ್ಯುಕ್ತವಾಗುತ್ತಾನೆ. ವ್ಯವಸ್ಥೆಯ ಕ್ರೂರ ಹಿಡಿತದಲ್ಲಿ ತನ್ನ ದಲಿತರ ಉದ್ಧಾರ ಸಾಧ್ಯವಿಲ್ಲವೆಂಬುದನ್ನು ಮನಗಂಡು ಸ್ವತಂತ್ರನಾಗಿ ಹೊರಬೀಳುತ್ತಾನೆ. ಬಿಜ್ಜಳನಿಗೆ ಇದೊಂದು ಆಘಾತ. ಯಾಕೆಂದರೆ ಸಾಮಾನ್ಯ ಜನ ಬಸವಣ್ಣನ ಬೆಂಬಲ ಕ್ಕಿರುವುದನ್ನು ಬಿಜ್ಜಳ ಮರೆತಿಲ್ಲ. ಬಸವಣ್ಣ ಸ್ವತಂತ್ರನಾದರೆ ಕ್ರಾಂತಿಗೆ ಕುಮ್ಮಕ್ಕು ದೊರೆಯುತ್ತದೆ. ತನ್ನ ಅಧಿಕಾರ ಕೈ ಬಿಟ್ಟು ಹೋಗಬಹುದು–ಎಂಬ ಭಯ ಅವನನ್ನು ಆವರಿಸುತ್ತದೆ. ಆದರೆ ಬಿಜ್ಜಳನನ್ನು ಲಂಕೇಶರು ಈ ಸನ್ನಿವೇಶದಲ್ಲಿ ಹೆಚ್ಚು ಗಟ್ಟಿಯಾಗಿ ನಿಲ್ಲಿಸಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಬಸವಣ್ಣನ ಕ್ರಾಂತಿಯ ಅರ್ಥ ಅವನು ನಂಬಿರುವ ದಲಿತರಿಗೆ ತಲುಪುವುದಕ್ಕೆ ಸಾಧ್ಯವಿಲ್ಲವೆಂಬ ವಿಶ್ವಾಸ ಬಿಜ್ಜಳನಿಗಿದೆ. ದಲಿತರು ಹಿಗ್ಗಿಸಿದಾಗ ಹಿಗ್ಗಿ ಮತ್ತೆ ತಮ್ಮ ಯಥಾಸ್ಥಿತಿಗೇ ಮರಳುವ ಬಲೂನಿನಂತೆ ಎಂದು ರಾಜ ಗಟ್ಟಿಯಾಗಿ ನಂಬಿದ್ದಾನೆ. ಹಾಗೆಯೆ ದಲಿತರನ್ನು ಶರಣರನ್ನಾಗಿ ಪರಿವರ್ತಿಸಿದ ಮಾತ್ರಕ್ಕೆ ಎಲ್ಲವೂ ಸರಿಯಾಗಿ ಬಿಡುತ್ತದೆಂಬುದು ಕೇವಲ ಭ್ರಮೆ ಎನ್ನುವುದನ್ನು ಬಿಜ್ಜಳ ಹೇಳುತ್ತಾನೆ

"... ಎಲ್ಲರೂ ಶರಣರಾಗಲು ಇದ್ದಕ್ಕಿದ್ದಂತೆ ಭಕ್ತರಾಗಲು ಹೇಗೆ ಸಾಧ್ಯ? ಕುಡಿಯುವ, ಕೊಂದು ತಿನ್ನುವ ಅಭ್ಯಾಸ ನಿಮ್ಮ ಮಾತುಗಳಿಂದ ತೊಳೆದು ಹೋಗುತ್ತ ದೆಂದು ನಂಬುವುದು ಹೇಗೆ ಸಾಧ್ಯ? ಬಸವಣ್ಣ, ನೀವು ಕುರಿ ಕೊಲ್ಲುವುದನ್ನು ತಪ್ಪಿಸಿದರೆ ಈ ಜನ ಮನುಷ್ಯರನ್ನು ಕೊಲ್ಲುತ್ತಾರೆ?...ಬ್ರಾಹ್ಮಣರ ಮಂತ್ರಗಳಂತೆಯೆ ಶರಣರ ವಚನಗಳು ಕೂಡ ಉತ್ತು ಬೆಳೆ ಕೊಡಲಾರವು....."

"ಹೊಲಸು ತಿಂಬುವವನೆ ಹೊಲೆಯ, ಕೊಲ್ಲುವವನೆ ಮಾದಿಗ" ಎಂದು ಬಸವಣ್ಣ ಜಾತಿಯ ಪರಿಭಾಷೆಯನ್ನು ಹೇಳಿದ್ದು ಬಿಜ್ಜಳನು ಅಲ್ಲಗಳೆಯುತ್ತಾನೆ. ಅದಕ್ಕೆ ಪ್ರಕೃತಿಯ ಸಾಕ್ಷಿಯನ್ನು ಹೇಳಿಕೊಡುತ್ತಾನೆ. ನಿಸರ್ಗದಲ್ಲಿ ಕೊಲ್ಲುವ ಕ್ರಿಯೆಯ ಉದಾಹರಣೆ ನೀಡುತ್ತ ಸಮರ್ಥಿಸುತ್ತಾನೆ. ಅದನ್ನು ಬಸವಣ್ಣ ತಾರ್ಕಿಕವಾಗಿ ಅಲ್ಲಗಳೆದು ಪ್ರಕೃತಿಗೂ ಮನುಷ್ಯನಿಗೂ ಇರುವ ಅಂತರವನ್ನು ಎತ್ತಿ ಹೇಳುತ್ತಾನೆ. ಹೀಗೆ ಪ್ರಬುದ್ಧವೂ ತಾರ್ಕಿಕವೂ ಆದ ಇವರಿಬ್ಬರ ಸಂಭಾಷಣೆ ಲಂಕೇಶರ ವೈಚಾರಿ ಕತೆಯ ಔನ್ನತ್ಯವನ್ನು ಪರಿಚಯಿಸುತ್ತವೆ. ಸಂಕ್ರಾಂತಿಯ ತಿರುಳು ಸತ್ವ ಕೂಡ ಇದೇ. ಇದರಿಂದ ಪಾತ್ರಗಳ ಔನ್ನತ್ಯವೂ ಹೆಚ್ಚಿದ್ದು ಪ್ರೇಕ್ಷಕರನ್ನು ಯೋಚಿಸಲು ಹಚ್ಚುತ್ತದೆ. ಬಿಜ್ಜಳ ಇಷ್ಟೆಲ್ಲ ಪ್ರಬುದ್ಧನಿದ್ದರೂ ಕನ್ಯೆಯರಿಗಾಗಿ ಹಂಬಲಿಸುವ ಕಾಮುಕನೂ ಹೌದು, ಅವರಿಗಾಗಿ ಹಲ್ಲು ಕಳೆದುಕೊಳ್ಳುವವನೂ ಹೌದು ಎಂಬುದನ್ನೂ ನಾವು ಮರೆಯಕೂಡದೆಂಬುದನ್ನು ಲಂಕೇಶರು ತಪ್ಪದೇ ನೆನಪಿಸುತ್ತಾರೆ.

ರುದ್ರನದು ನಿಜಕ್ಕೂ ಪ್ರೇಮವಾಗಿದ್ದರೂ ಉಷಾಳ 'ಬಲಾತ್ಕಾರ' ಎಂಬ ಹೇಳಿಕೆಯ ಆಧಾರದ ಮೇಲೆ ಬಿಜ್ಜಳ ತಾನು ಬಯಸಿದ್ದಂತೆಯೆ ರುದ್ರನಿಗೆ ಮರಣ

ದಂಡನೆಯ ಆಜ್ಞೆ ವಿಧಿಸುತ್ತಾನೆ. ಸನಾತನಿಗಳು ವಿಜಯಿಗಳಾಗುತ್ತಾರೆ. ಬ್ರಾಹ್ಮಣಳಾದ ಉಷೆಯೂ ತನ್ನ ದೇಹದ ಸವಿಯನ್ನುಂಡ ಕೀಳು ಕುಲಜ ರುದ್ರನ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆ. ಅವನ ದೇಹ ಮಾತ್ರ ಬೇಕು ಶರಣತ್ವವನ್ನು ಪಡೆದ ಮನಸ್ಸು ಬೇಡವೆಂಬ ದ್ವಂದ್ವ ದುರಂತವಾಗಿ ಮಾರ್ಪಟ್ಟಾಗ ಬಿಕ್ಕಿ ಬಿಕ್ಕಿ ಅಳುತ್ತಾಳೆ. ಹೀಗೆ ಸಂಕ್ರಾಂತಿಯ ಬಲಿಯಾಗಿ ರುದ್ರ, ಬಸವಣ್ಣನ ಕ್ರಾಂತಿಯ ವಿಫಲತೆಯ ಸಂಕೇತವಾಗುತ್ತಾನೆ. ಯಥಾಸ್ಥಿತಿಯೇ ಸತ್ಯವೆಂಬಂತೆ ಮೆರೆಯುತ್ತದೆ. ಕ್ರಾಂತಿಯ ಭಾಗಿಗಳಾದ ರುದ್ರ ಹಾಗೂ ಬಸವಣ್ಣ, ಕ್ರಾಂತಿಯ ಭೋಗಿಯಾದ ಉಷಾ ಈ ಮೂವರೂ ಸೋಲನ್ನಪ್ಪುತ್ತಾರೆ. ತೆರೆಮರೆಯ ಬ್ರಾಹ್ಮಣ್ಯ ತೆರೆಯ ಮೇಲಿನ ಪ್ರಭುತ್ವ ರುದ್ರನ ಬಲಿ ತೆಗೆದುಕೊಂಡು ಗದ್ದೆವೆಂದು ಬೀಗುತ್ತವೆ.

ನಾಟಕದಲ್ಲಿ ಬರುವ ಉಜ್ಜ, ಕೆಂಚ, ಮುಂತಾದ ಅಂತ್ಯಜರ ಪಾತ್ರಗಳು ದಲಿತರ ವಾಸ್ತವಿಕ ಜೀವನ ಚಿತ್ರಣವನ್ನು ಬಹಳ ಸ್ಪಷ್ಟವಾಗಿ ನೀಡುತ್ತವೆ. ಅವರು ಬೇಟೆಯಲ್ಲಿ, ಕುಡಿತದಲ್ಲಿ, ಹುಡಿಗೆಯರಲ್ಲಿ ಎಷ್ಟು ಖುಷಿಪಡುತ್ತಾರೆನ್ನುವುದನ್ನು ಮತ್ತೆ ಮತ್ತೆ ಬಿಂಬಿಸಲಾಗಿದೆ. ಅವರ ಭಾಷೆಯನ್ನಂತೂ ಲಂಕೇಶ ಎಷ್ಟು ಸಹಜವಾಗಿ ಸತ್ವಪೂರ್ಣವಾಗಿ ಬಳಸಿದ್ದಾರೆಂದರೆ–ಇದಕ್ಕಿಂತ ಚೆನ್ನಾಗಿ ಬಳಸಲು ಸಾಧ್ಯವೇ ಇಲ್ಲವೇನೋ ಎನಿಸುತ್ತದೆ. ಸುಸಂಸ್ಕೃತ ಪಾತ್ರಗಳು ಮಾತನಾಡುವಾಗಲೂ ಭಾಷೆಯ ಮೇಲೆ ಒಳ್ಳೆಯ ಹಿಡಿತ ಕಂಡು ಬರುತ್ತದೆ. ಇದರಿಂದಾಗಿ ಇಡೀ ನಾಟಕದ ವಾತಾವರಣ ಸಹಜವಾಗಿ ಬಿಡುತ್ತದೆ. ದಲಿತರ ಜೀವನ ಚಿತ್ರದಂತೆ ಬ್ರಾಹ್ಮಣರ ವಾಸ್ತವಿಕ ಜೀವನ ಚಿತ್ರಣ ನೀಡುವ ದೃಶ್ಯವೊಂದಿದ್ದರೆ....

ಉಜ್ಜ ತನ್ನ ಮಗ ರುದ್ರನು ಶರಣನಾದ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುವಂತೆಯೆ ಬ್ರಾಂಬರ ಹುಡಿಗಿಯನ್ನು ಪ್ರೀತಿಸಿದ್ದನ್ನು ಕಂಡೂ ಖುಷಿಪಡುತ್ತಾನೆ. ಬ್ರಾಹ್ಮಣರ ಉಷಾ ತನ್ನ ರಟ್ಟೆ ಹಿಡಿದು ಕುಣಿದೇ ಕುಣಿದಳೆಂಬುದನ್ನು ಅವನು ಉಬ್ಬುಬ್ಬಿ ಹೇಳುವನು! ರುದ್ರ ಹೇಳಿದಂತೆ ಹಟ್ಟಿಜನ ಕುಡಿಯೋದು, ತಿನ್ನೋದು, ಸುಳ್ಳು, ಹಾದರ ಇವನ್ನೆಲ್ಲ ಬಿಟ್ಟುಬಿಡಬೇಕೇನೋ ಸರಿ. ಆದರೆ ಬಿಟ್ಟು ಏನು ಮಾಡಬೇಕು? ಎಂಬುದು ಅವರಿಗೆ ದಿಗಿಲು. ತಮ್ಮ ಕೇರಿಯಲ್ಲಿ ಇಷ್ಟೆಲ್ಲ ಗೊಂದಲ ನಡೆಯುತ್ತಿದ್ದರೂ ದಲಿತರ ಒಂದಾದರೂ ಹೆಣ್ಣಿನ ಪ್ರವೇಶ ನಾಟಕದಲ್ಲಿ ಸುಳಿಯುವುದಿಲ್ಲ!

ಮೊದಮೊದಲು ನಾಯಕನಂತೆ ಕಾಣುವ ರುದ್ರನು ಸದ್ದಿಲ್ಲದೆ ವ್ಯವಸ್ಥೆಯ ತುಳಿತಕ್ಕೆ ಸಿಗುವುದರಿಂದ ಪ್ರೇಕ್ಷಕರ ಅನುಕಂಪವನ್ನು ಕೂಡ ಪಡೆಯದೆ ಹೋಗುವುದೊಂದು ಚೋದ್ಯ. ಬಸವ ಬಿಜ್ಜಳರ ದ್ವಂದ್ವ, ರುದ್ರ–ಉಷೆಯರ ಪ್ರೇಮ, ಬ್ರಾಹ್ಮಣ ಶರಣರ ಸಂಘರ್ಷ ಇವಾವವೂ ನಾಟಕದ ಕ್ಲೈಮ್ಯಾಕ್ಸ ಅನ್ನು ಅಥವಾ ಟೆನ್‌ಶನ್ ಅನ್ನು ತೀವ್ರವಾಗಿ ಮುಟ್ಟಿಸುವಲ್ಲಿ ಸಫಲವಾಗುವುದಿಲ್ಲವಾದ್ದರಿಂದ ನಾಟಕ ಒಂದೇ ಸಮಪಾತಳಿಯಲ್ಲಿ ಸಾಗುತ್ತದೆ. ಆದರೂ ಕ್ರಿಯಾತ್ಮಕತೆ, ಲವಲವಿಕೆಯ ಭಾಷಾಶೈಲಿ ಸಮಯದ ಹೊಂದಾಣಿಕೆ, ಸೂಕ್ತ ಹಾಡು ಇತ್ಯಾದಿ ಇರುವುದರಿಂದ

ರಂಗದ ಮೇಲೆ ನಾಟಕ ಯಶಸ್ವಿಯಾಗದೇ ಇರುವುದಿಲ್ಲ.. ಸಮರ್ಥ ನಿರ್ದೇಶಕರು ಸಾಕಷ್ಟು ಪರಿಣಾಮಕಾರಿಯಾಗಿ ರಂಗದ ಮೇಲೆ ಇದನ್ನು ಪ್ರದರ್ಶನಗೊಳಿಸ ಬಹುದು.

ನಾಟಕದ ಉದ್ದೇಶ–ಕ್ರಾಂತಿಯ ವೈಫಲ್ಯವನ್ನು ಪ್ರೇಕ್ಷಕರು ಮೆಲುಕು ಹಾಕು ವಂತೆ ಮಾಡುವುದರಲ್ಲಿ ಸಂದೇಹವಿಲ್ಲವಾದ್ದರಿಂದ ಅದುವೆ ಅದರ ಯಶಸ್ಸು ಕೂಡ. ನಾಟಕವನ್ನು ಓದಿದಾಗ ಅಥವಾ ನೋಡಿದಾಗ ವಿಶಿಷ್ಟ ಆನಂದ ಉಳಿಯುವುದರಿಂದ 'ಸಂಕ್ರಾಂತಿ' ಒಂದು ಉತ್ತಮ ಕಲಾಕೃತಿಯಾಗಿ ನಿಲ್ಲುತ್ತದೆ '...a large part of the pleasure which all art must provoke is pleasure at the possibility of society's mastering man's fate, ಎಂಬ ಬ್ರೆಖ್ಟನ ಮಾತನ್ನು ಇದು ನೆನೆಪಿಗೆ ತರುತ್ತದೆ. ಚಿಕ್ಕ ಚಿಕ್ಕ ನಾಟಕಗಳನ್ನು ಬರೆದು ಪ್ರಸಿದ್ಧರಾದ ಲಂಕೇಶರು 'ಬಿರುಕು' ಹಾಗೂ 'ಸಂಕ್ರಾಂತಿ' ಎರಡು ದೊಡ್ಡ ನಾಟಕಗಳನ್ನು ನೀಡಿದ್ದಾರೆ. ಇವೆಲ್ಲವುಗಳಲ್ಲೂ 'ಸಂಕ್ರಾಂತಿ'ಯೇ ಅವರ ಈವರೆಗಿನ ಅತ್ಯುತ್ತಮ ನಾಟಕವೆನ್ನ ಬಹುದು. ಯು. ಆರ್. ಅನಂತಮೂರ್ತಿ ಅವರು ಒಂದೆಡೆ ಸಂಕ್ರಾಂತಿಯ ಬಗೆಗೆ ಬರೆಯುತ್ತ–'....ಬಂಡಾಯ ಮತ್ತು ಕನ್ಸರ್ವೇಟಿಸಂಗಳ ಕ್ರಿಯೆ–ಪ್ರತಿಕ್ರಿಯೆಗಳಲ್ಲಿ ಈ ತನಕ ಬರೆಯುತ್ತಿದ್ದ ಲಂಕೇಶ ಇಲ್ಲೂ ಬಸವ ಬಿಜ್ಜಳನ ದ್ವಂದ್ವದಲ್ಲಿ ಬಿಜ್ಜಳ ಪ್ರತಿ ಪಾದಿಸುವ ಈ ಸತ್ಯವೇ ಹೀಗೆ ಎನ್ನುವ ಯಥಾಸ್ಥಿತಿವಾದವನ್ನೆ ಒಪ್ಪುತ್ತಿದ್ದಾರೋ ಎಂದು ನನಗೆ ಅನುಮಾನವಿದೆ' ಎಂದು ಅನುಮಾನಿಸಿದ್ದು ಸರಿ ಎನಿಸುತ್ತದೆ.

ವೈಚಾರಿಕ ಸಾಹಿತ್ಯಕ್ಕೆ ಕೊಡುಗೆ: 'ಬದಲಾವಣೆ'

ರಹಮತ್ ತರೀಕೆರೆ

'ಆಂತರ್ಯ' ವಿಮರ್ಶಾಸಂಕಲನದ ಮೂಲಕ. ಅದರಲ್ಲೂ 'ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕಮತ', 'ರಕ್ತಾಕ್ಷಿ ಮತ್ತು ಹ್ಯಾಮ್ಲೆಟ್' ಲೇಖನಗಳ ಮೂಲಕ ವಿಮರ್ಶಾಕ್ಷೇತ್ರದಲ್ಲಿ ಗಮನ ಸೆಳೆದ ಭಗವಾನ್ ಮತ್ತೆ ಅಂಥದೇ ಹೊಸತನಗಳಿರುವ ಲೇಖನಗಳುಳ್ಳ ಪ್ರಸ್ತುತ ಕೃತಿಯಮೂಲಕ, ಕನ್ನಡವಿಮರ್ಶೆಗೆ ಹೊಸತೊಂದು ಹರಹು–ವೈವಿಧ್ಯವನ್ನು ಒದಗಿಸಿದ್ದಾರೆ. 'ಬದಲಾವಣೆ' ಸಂಕಲನದ ಲೇಖನಗಳು ಕ್ರಾಂತಿಕಾರಕವಾಗಿವೆ ; ನಮ್ಮ ಸಾಹಿತ್ಯಕ, ಸಾಮಾಜಿಕ, ರಾಜಕೀಯ ಚಿಂತನೆಗಳಿಗೆ ಭಿನ್ನದೃಷ್ಟಿಕೋನವನ್ನೊದಗಿಸುವ ಉದ್ದೇಶದಿಂದ, ಅನ್ವರ್ಥಕವಾಗಿವೆ. ಅಡಿಟಿಪ್ಪಣಿ-ಉದ್ಧರಣೆಗಳಿಂದ ತುಂಬಿಹೋಗಿರುವ ಇಲ್ಲಿನ ಲೇಖನಗಳು ಖಚಿತಧೋರಣೆಯುಳ್ಳ ತರ್ಕಬದ್ಧ ವಿಶ್ಲೇಷಣೆಯ, ಬಲವಾದ ಓದಿನ ಹಿನ್ನೆಲೆಯುಳ್ಳ ವಿಮರ್ಶಾ ಪ್ರಜ್ಞೆಯೊಂದನ್ನು ಮೊದಲೇಟಿಗೇ ಪರಿಚಯಿಸುತ್ತವೆ. ಸಾಮಾಜಿಕ ಬದಲಾವಣೆಯ ತಹತಹ ಈ ಕೃತಿಯ ಪ್ರಮುಖ ಲಕ್ಷಣವಾಗಿರುವುದನ್ನು ನಾವು ಗಮನಿಸುತ್ತೇವೆ.

ಈ ಸಂಗ್ರಹದಲ್ಲಿ ಐದು ವಿಮರ್ಶಾ ಲೇಖನಗಳಿವೆ. ಅವುಗಳಲ್ಲಿ ಮೂರು ಕುವೆಂಪುರವರ ಗದ್ಯಬರಹಗಳಿಗೆ, ಮುಖ್ಯವಾಗಿ ಕಾದಂಬರಿಗಳಿಗೆ ಸಂಬಂಧಪಟ್ಟವು. ಒಂದು ಪು.ತಿ.ನ. ರವರ 'ವಿಕಟ ಕವಿ ವಿಜಯ' ನಾಟಕದ ವಿಮರ್ಶೆ. ಮತ್ತೊಂದು : ಕವನ ಸಂಕಲನವೊಂದಕ್ಕೆ ಬರೆದ ಮುನ್ನುಡಿ. ಗಮನಾರ್ಹವಾದ ಬರಹಗಳೆಂದರೆ ಶಂಕರಾಚಾರ್ಯರನ್ನು ಕುರಿತ ಎರಡು ಸಂಶೋಧನಾ' ಲೇಖನಗಳು. 'ತೀರ್ಥಹಳ್ಳಿ, ಡಾ॥ ಗೊರೂರು ಮತ್ತು ನಾನು' ಒಂದು ಬಗೆಯ fiction ಇದ್ದಂತಿದೆ. ಕೊನೆಯವು ಎರಡೂ ಸಂದರ್ಶನ ಲೇಖನಗಳು. ಇವು ಭಗವಾನರ ಸಾಮಾಜಿಕ, ಸಾಹಿತ್ಯಕ ನಿಲುವುಗಳನ್ನು ಸ್ಪಷ್ಟಪಡಿಸುತ್ತವೆ.

ಇನ್ನೂರು ಪುಟದ ಪುಸ್ತಕದಲ್ಲಿ ಅರ್ಧದಷ್ಟು ಕುವೆಂಪು ಸಾಹಿತ್ಯವನ್ನು ಕುರಿತಂಥ ಜಿಜ್ಞಾಸೆಯೇ ತುಂಬಿದೆ. ಮೊದಲ ಲೇಖನ ಕುವೆಂಪುರವರ ಇಡೀ ಗದ್ಯವನ್ನು ಸೃಜನ ಶೀಲ, ವೈಚಾರಿಕ, ವಿಮರ್ಶಾತ್ಮಕ-ಎಂದು ಮೂರು ವಿಭಾಗಗಳಲ್ಲಿ ಸಮಗ್ರ ವಿಶ್ಲೇಷಣೆ ಮಾಡುತ್ತದೆ. ಸೂಕ್ಷ್ಮ ಓದಿನಿಂದ ಸಾಧ್ಯವಾದ ವಿಮರ್ಶೆ ಇಲ್ಲಿಸದು. ಕುವೆಂಪು ಗದ್ಯದ ಶೈಲಿ, ಭಾಷಾಬಳಕೆ, ಅದರ ವೈವಿಧ್ಯಗಳು, ಗುಣಾವಗುಣಗಳು, ಅಲ್ಲಿ ಬರುವ ಹಾಸ್ಯ, ಹೋಲಿಕೆ, ರೂಪಕ–ಸಂಕೇತಗಳು, ಹೀಗೆ ಎಲ್ಲವನ್ನು ಪದ್ಯದಂತೆ ಪ್ರಾಯೋಗಿಕ ವಿಮರ್ಶೆಗೊಳಪಡಿಸಿ ಭಗವಾನ್ ವಿವರಿಸುತ್ತಾರೆ ; ಅಲ್ಲಿ ಬರುವ ಮಾನವೀಯ ಸಮಸ್ಯೆಗಳನ್ನು (ಸುಬ್ಬಮ್ಮನ ಕಳ್ಳಬಸುರು, ಸಣ್ಣಬೀರನಿಗೆ ಬಿದ್ದ 'ಹೊನ್ನಳ್ಳಿಹೊಡ್ತ ಇತ್ಯಾದಿ.) ತುಂಬಾ ಕಾಳಜಿಯಿಂದ ಅರ್ಥೈಸುತ್ತಾರೆ.

'ಕಾನೂರು ಹೆಗ್ಗಡಿತಿ ಮತ್ತು ಬಂಡಾಯ'ದಲ್ಲಿ, ಕಾದಂಬರಿ ಗರ್ಭೀಕರಿಸಿ ಕೊಂಡಿರುವ ಬಂಡಾಯದ ದನಿಯನ್ನು ಸೂಕ್ಷ್ಮವಾಗಿ ವಿವೇಚಿಸಲಾಗಿದೆ. ಪುರೋಹಿತ ಶಾಹಿ ಶೋಷಣೆಯ ಸಂಕೇತವಾದ ವೆಂಕಪ್ಪಯ್ಯಜೋಯಿಸರ ಪಾತ್ರದ ವಿಶ್ಲೇಷಣೆ ಗಮನಾರ್ಹವಾದುದು. ಕಾದಂಬರಿಯಲ್ಲಿ ಮೂಢನಂಬಿಕೆ ವಿರುದ್ಧದ ಬಂಡಾಯದ ನಿಲುವನ್ನು ವಿಶೇಷವಾಗಿ ವಿಮರ್ಶಿಸಿದೆ (ಇಲ್ಲಿನ ಬಹುತೇಕ ಲೇಖನಗಳಲ್ಲಿ ಭಗವಾನರ ನಿಲುವು ಕೂಡ ಇದೆ. ಇದು ಅವರ ಸಂದರ್ಶನದಲ್ಲೂ ಬಂದಿದೆ. ಪುಟ. 191).

'ಕುವೆಂಪು ಕಂಡ ದಲಿತ ಜೀವನ' – ಸಾಕಷ್ಟು ದೀರ್ಘವಾದ, ಸಮರ್ಥನಾ ಧಾಟಿಯ ಲೇಖನ. " 'ರಾಮಾಯಣ' ಮತ್ತು 'ಮಹಾಭಾರತ' ವಿಶ್ವಸಾಹಿತ್ಯದ ಮೊಟ್ಟಮೊದಲ ದಲಿತ ಮಹಾಕಾವ್ಯಗಳು" (ಪುಟ. 154) ಎಂಬ ಅಭಿಪ್ರಾಯ ವಿಶಿಷ್ಟವಾಗಿದ್ದು, ಅದನ್ನು ಲೇಖಕರು ಚೆನ್ನಾಗಿ ವಿವರಿಸುತ್ತಾರೆ. 'ಬದಲಾವಣೆ' ಪುಸ್ತಕದಲ್ಲಿ, ಈ ದೇಶದ ಸಾಮಾಜಿಕ ಸಂದರ್ಭದಲ್ಲಿ ಗಾಢವಾಗಿ ಚಿಂತಿಸಿದ, ದಲಿತ ಪರವಾದ ನಿಲುವು ಇರುವುದು ಮೇಲುನೋಟಕ್ಕೆ ತಿಳಿಯುತ್ತದೆ. ಅದು ಕೆಲವು ಕಡೆ ನೋವಾಗಿ ಕೂಡ ಬರುತ್ತದೆ :

"...ಇಂದು ದಲಿತ ಹೆಂಗಸರನ್ನು ಎತ್ತಿಕೊಂಡು ಹೋಗುವುದು, ಅತ್ಯಾಚಾರ ಮಾಡುವುದು, ಹೊಡೆಯುವುದು, ಸುಡುವುದು ಇವೇ ಮುಂತಾದವು ಅವಿಚ್ಛಿನ್ನವಾಗಿ ನಡೆಯುತ್ತಿವೆ............. ರಾಮಾಯಣ, ಮಹಾಭಾರತಗಳ ಕಾಲದಿಂದಲೂ ಭಾರತ ಬದಲಾಗಿಲ್ಲ ಎಂದು ಇದರಿಂದ ಚೆನ್ನಾಗಿ ವೇದ್ಯವಾಗುತ್ತದೆ. ಇಂಡಿಯಾ ಅಷ್ಟೇ ಅನಾಗರಿಕವಾಗಿ, ಇನ್ನೂ ಬರ್ಬರವಾಗಿ ಇಪತ್ತಿಗೂ ಉಳಿದಿದೆ.......... ಭಾರತದಂಥ ಕೊಳಕುದೇಶ ಪ್ರಪಂಚದಲ್ಲಿ ಬೇರಿಲ್ಲ" (ಪುಟ. 155).

ಈ ಲೇಖನದ ಮೊದಲಲ್ಲಿ ಬರುವ ದಲಿತರ ವ್ಯಾಖ್ಯೆ ವಿಶಿಷ್ಟವೂ ವ್ಯಾಪಕಾರ್ಥದ್ದೂ ಆಗಿದೆ (ಪುಟ 158). ಕುವೆಂಪು ದಲಿತಪರ ಅಲ್ಲ - ಎಂಬ ವಿಮರ್ಶೆಗೆ ಉತ್ತರದಂತೆ, ಕಾದಂಬರಿಯ ಒಳಹೊಕ್ಕು, ಅಲ್ಲಿನ ದಲಿತ ಜೀವನವನ್ನು ವಿಮರ್ಶಿಸಲಾಗಿದೆ. 'ಕಾನೂರು ಹೆಗ್ಗಡಿತಿ'ಯಲ್ಲಿನ ದಲಿತಪರ ಧೋರಣೆಯನ್ನು ವಿವೇಚಿಸುತ್ತಾ ವಿಮರ್ಶಕರು, ಈ ಬಗ್ಗೆ ನೇತ್ಯಾತ್ಮಕ ಧೋರಣೆಯುಳ್ಳ 'ಚೋಮನದುಡಿ', 'ದಾಟು' ಕಾದಂಬರಿಗಳನ್ನೂ ತೌಲನಿಕ ವಿಮರ್ಶೆಗೊಳ ಪಡಿಸುತ್ತಾರೆ.

ಭಗವಾನರದು ವಸ್ತುನಿಷ್ಠ ವಿಮರ್ಶೆ : ತರ್ಕಬದ್ಧ ಪ್ರತಿಪಾದನೆ. ಹೀಗಿದ್ದರೂ ಕುವೆಂಪು ಕೃತಿಗಳ ವಿಮರ್ಶೆಯ ಸಂದರ್ಭದಲ್ಲಿ ಈ ನಿಲುವು ಬಾಧೆಪಡುತ್ತದೆ. ಕುವೆಂಪು ಸಂದರ್ಭದಲ್ಲಿ ವಿಮರ್ಶಕ ಭಾವಪಕ್ಷಪಾತ ವಹಿಸುತ್ತಾನೆಂದು ಅನಿಸುತ್ತದೆ. ಅಂಥ ಕಡೆ ವಿಮರ್ಶೆ ಪ್ರಶಂಸಾತ್ಮಕವೂ ವ್ಯಕ್ತಿನಿಷ್ಠವೂ ಆಗುವುದನ್ನು ನೋಡುತ್ತೇವೆ (ಪುಟ. 10, 11, 12). ಬಹಳಷ್ಟು ವಿಷಯಗಳಲ್ಲಿ ಅವರ ಕೃತಿಗಳನ್ನು ಅದ್ವಿತೀಯ, ಏಕಮೇವ ಎಂದೂ ಅವರನ್ನು ಮೊದಲಿಗ, ಏಕೈಕ ಎಂದು ತೀರ್ಪುಕೊಡಲಾಗಿದೆ. ಕುವೆಂಪು ಬಗೆಗಿನ ಮೆಚ್ಚಿಕೆ-ಗೌರವಭಾವಗಳು ಅವರ ಕೃತಿಗಳನ್ನು ಕೆಲವುಕಡೆ ನಿಷ್ಠುರವಾಗಿ ಒರೆಹಚ್ಚಲು ಅಡ್ಡಿಯಾಗಿದೆಯೆಂದೇ ನನಗನಿಸುತ್ತದೆ. ಉದಾಹರಣೆಗೆ, ಕುವೆಂಪುರವರ ವಿಮರ್ಶೆಯ ಭಾಷೆಯ ಬಗೆಗಿನ ಅವರ ವಿಮರ್ಶೆ ಹ್ರಸ್ವವಾಗುತ್ತದೆ : ತೇಲಿಸುವಂತೆ ಕಾಣುತ್ತದೆ (ಪುಟ 11). ಒಂದು ಕಡೆ, ಕುವೆಂಪು ಭಾಷೆಯ ಸಂಸ್ಕೃತ ಭೂಯಿಷ್ಠತೆಯನ್ನು 'ಶೈಲಿಯ ವೈವಿಧ್ಯ' ಎಂದು ಶೇಕ್ಸ್‌ಪಿಯರ್‌ನನ್ನು ಹೋಲಿಸಿ ಸಮರ್ಥಿಸುತ್ತಾರೆ (ಪುಟ. 39). ಪ್ರಚ್ಛನ್ನ ವಿಚಾರವಾದಿಯಾದ ವಿಮರ್ಶಕರು, ಕುವೆಂಪುರವರ ಕಾದಂಬರಿಗಳಲ್ಲಿ ಬರುವ ಜನ್ಮಾಂತರ ಸಂಬಂಧವನ್ನು ವಿಶ್ಲೇಷಣೆಗೊಳಪಡಿಸದೆ, ಪಾಶ್ಚಾತ್ಯ ತತ್ವಜ್ಞಾನಿಗಳ ಮಾತಿನಿಂದ ಪುಷ್ಟಿಕೊಡುತ್ತಾರೆ. 'ನೆನಪಿನ ದೋಣಿಯಲ್ಲಿ' ಎಷ್ಟೋ ಚರ್ಚಾಸ್ಪದವಾದ ಅವೈಜ್ಞಾನಿಕ ಕಲ್ಪನೆಗಳು ಬರುವುದನ್ನು ಭಗವಾನ್ ಗಣಿಸಿಯೇ ಇಲ್ಲ ಎನಿಸುತ್ತದೆ.*

---

* ಈ ಸಂಬಂಧವಾಗಿ ದೇವಯ್ಯ ಹರವೆ ಅವರು ಬರೆದಿರುವ ಲೇಖನವನ್ನು ನೋಡಬಹುದು.

'ಹೊಸಕಾವ್ಯ ಮತ್ತು ಕಾವ್ಯಚಿಂತನ' ಲೇಖನವು ಎಸ್. ಜಿ. ಸಿದ್ಧರಾಮಯ್ಯ ನವರ 'ಗಾಲ್ಫ್ ಉಬ್ಬಿನ ಮೇಲೆ' – ಕವನಸಂಕಲನಕ್ಕೆ ಬರೆದ ಮುನ್ನುಡಿಯಾದರೂ ಕಾವ್ಯದ ಸ್ವರೂಪದ ಬಗ್ಗೆ ಕೆಲವು ಮಹತ್ವಪೂರ್ಣ ವಿಚಾರಗಳನ್ನು ಚರ್ಚಿಸುತ್ತದೆ. ಸಂಕಲನದ ಒಂದೆರಡು ಕವನಗಳಿಗೆ ಪ್ರಾಯೋಗಿಕ ವಿಮರ್ಶೆ ಕೂಡ ಮಾಡಲಾಗಿದೆ. ಭಗವಾನರ ವಿಮರ್ಶೆಯ ವಿಶಿಷ್ಟತೆಯೆಂದರೆ ಪ್ರಾಯೋಗಿಕ ವಿಮರ್ಶೆಯ ಬಳಕೆ. ಕುವೆಂಪು ಗದ್ಯವನ್ನು ಕೂಡ ಈ ಬಗೆಯ ವಿಮರ್ಶೆಗೊಳಪಡಿಸುವುದನ್ನು ಕಾಣು ತ್ತೇವೆ. ಪದಗಳು ಕೃತಿಯ ಸಂದರ್ಭದಲ್ಲಿ ವ್ಯಂಜಿಸುವ relevant ಅರ್ಥಗಳನ್ನು ಹೊರತೆಗೆಯುವ ಸೂಕ್ಷ್ಮಗಾರಿಕೆ ಅವರಿಗಿದೆ. ಆದರೆ ಪ್ರಾಯೋಗಿಕ ವಿಮರ್ಶೆಯ ನ್ಯೂನತೆಗಳಲ್ಲೊಂದಾದ, Over readingನಿಂದ ಪದಗಳನ್ನು ಹಿಡಿದು ಜಗ್ಗಾಡುತ್ತಾ ಒಟ್ಟು ಕವಿತೆಯನ್ನು ಮರೆಯುವ ಹೊಣೆಗೇಡಿತನವಿಲ್ಲ. ಈ ದೃಷ್ಟಿಯಿಂದ 'ಬಿರುಕು', 'ಕರಿಮೂಗ' ಕವನಗಳ ವಿಮರ್ಶೆಯನ್ನು ನೋಡಬಹುದು.

'ವಿಕಟ ಕವಿ ವಿಜಯ' ನಾಟಕವನ್ನು ವಸ್ತುನಿಷ್ಠವಾಗಿ ವಿಶ್ಲೇಷಣೆ ಮಾಡ ಲಾಗಿದೆ. ನಾಟಕದಲ್ಲಿನ ಆದರ್ಶ, ಒಳ್ಳೆಯದರ ಬಗೆಗಿನ ಪ್ರೀತಿ – ಬಂದಾಗ ಒತ್ತು ಕೊಟ್ಟು ಮೆಚ್ಚಿ ವಿವರಿಸಿರುವಂತೆಯೇ, ನಾಟಕಕಾರ ಸೋತಿರುವ, ತಪ್ಪಿರುವ ಕಡೆ ನಿರ್ದಾಕ್ಷಿಣ್ಯವಾಗಿ ವಿಮರ್ಶಿಸಲಾಗಿದೆ:

ಕವಿ ಹೇಳುವ "ದೇಶಾಭಿಮಾನರಾಹಿತ್ಯ ಈ ಜನದೊಳು ಸತ್ಯ, ಇವರಿಗೆ ಕಾರಾಗೃಹವೇ ನಿತ್ಯ" (ಪುಟ. ೨೧) ಎಂಬ ನುಡಿ ನಿಜ. ಆದರೆ ಜನಸಾಮಾನ್ಯರಲ್ಲಿ ದೇಶಾಭಿಮಾನ ಮೂಡಿಸುವಂಥ ವಾತಾವರಣವನ್ನಾಗಲೀ, ವಿದ್ಯಾಭ್ಯಾಸವನ್ನಾಗಲೀ ಮೇಲಿನ ಜನರು ಕೊಡಲಿಲ್ಲ ಎಂಬುದು ಭಾರತ ಇತಿಹಾಸವನ್ನು ಓದಿದವರಿಗೆ ಸ್ಪಷ್ಟ ವಾಗಿ ತಿಳಿಯುತ್ತದೆ. ಆದರಿಂದಾಗಿ ಸುಮಾರು ಶೇಕಡ ತೊಂಬತ್ತೈದು ಜನರು ಅಜ್ಞಾನದ ಕತ್ತಲಲ್ಲೆ ಉಳಿದು ದೇಶಪ್ರೇಮ ಎಂದರೇನೆಂದು ಗೊತ್ತಿಲ್ಲದೆ ಕೊಳೆತ ಮುಗ್ಧ ಜನರು......... ಚಾರಿತ್ರಿಕ ಅರಿವು ಕವಿಗಿರದಿದ್ದರೆ ಅವನ ಟೀಕೆ ಅರ್ಥ ಹೀನವಾಗುತ್ತದೆ. ಈ ಕವಿ ದಂತಗೋಪುರ ನಿವಾಸಿಯಾಗಿದ್ದಾನೆ" (ಪುಟ 51).

ಇದು ಭಗವಾನರ ಯೋಚನೆಯ ರೀತಿ. ಈ ದೇಶದ ಹಿಡಿಮಂದಿ ಪುರೋ ಹಿತಶಾಹಿ ಜನ, ಇಡೀ ಸಮೂಹಕ್ಕೆ ಅಕ್ಷರ ಕಲಿಸದೆ ಕತ್ತಲಲ್ಲಿಟ್ಟು, ಕೆಟ್ಟದಾಗಿ ಶೋಷಿಸಿದ ಚಾರಿತ್ರಿಕ ದುರಂತದ ಬಗ್ಗೆ ವಿಷಾದದಿಂದ ಸಾಕಷ್ಟು ಕಡೆ ಹೇಳಲಾಗಿದೆ. ಶಂಕರಾಚಾರ್ಯರಿಗೆ ಸಂಬಂಧಿಸಿದ ಲೇಖನಗಳ ಮುಖ್ಯ ವಿಚಾರವೇ ಇದು.

'ಆದಿ ಶಂಕರಾಚಾರ್ಯರ ಜನವಿರೋಧಿ ತತ್ವಜ್ಞಾನ' 'ಶಂಕರಾಚಾರ್ಯರ ಗೂಂಡಾಗಿರಿ'– ಲೇಖನಗಳು, ವೈಚಾರಿಕ ದೃಷ್ಟಿಯಿಂದ ಬಹಳ ಮೌಲಿಕವಾದ ಕೊಡುಗೆಗಳು. ಇವು ಇಡೀ ಪುಸ್ತಕದ ಮೌಲ್ಯವನ್ನೇ ಹೆಚ್ಚಿಸಿವೆ. ಹೊಚ್ಚ ಹೊಸ ತಾಗಿ ಮಾಡಿದ ಚಿಂತನೆಗಳು ಇಲ್ಲಿವೆ. ಏಕೆಂದರೆ ಶೂದ್ರರೂ ವಿಚಾರವಾದಿಯೂ ಆದ ಕುವೆಂಪು, ಸಂಸ್ಕೃತವನ್ನು ಚಾರಿತ್ರಿಕ ಸವಾಲಿನಿಂದ ಕಲಿತು, ಅದರಲ್ಲಿ ಪ್ರಭುತ್ವ

ಪಡೆದರಾದರೂ ಅವರಿಗಿದು ಗೋಚರಿಸಲಿಲ್ಲ. ಬಹುಳಾಗಿ ತಮ್ಮ ಕಾದಂಬರಿಗಳಲ್ಲಿ ಮೌಢ್ಯನಿವಾರಣೆಗಾಗಿ ಅಕ್ಷರಜ್ಞಾನದ ಮಹತ್ವವನ್ನು ಪ್ರತಿಪಾದಿಸಿದ (ಭಗವಾನರ ವಿವರಣೆ, ಪುಟ. 123-124) ಕುವೆಂಪು, ಶೂದ್ರರಿಗೆ ಜ್ಞಾನನಿರಾಕರಣೆ ಮಾಡಿದ ಶಂಕರಾಚಾರ್ಯರ- ಗೌತಮರನ್ನು ಕೊಂಡಾಡಿದ್ದಾರೆ (ನೋಡಿ : 'ಜಯಹೇ ಕರ್ನಾಟಕ ಮಾತೆ' ಕವನ).

ಧರ್ಮ-ತತ್ವಜ್ಞಾನಗಳ ಹೆಸರಿನಲ್ಲಿ ನಮ್ಮ ನಡುವೆಯೇ ಇದ್ದು ಆರಾಧಿಸಲ್ಪಡುವ ಎಷ್ಟೋ ಚಿಂತನೆಗಳಲ್ಲಿನ ಮನುಷ್ಯವಿರೋಧಿ ಧೋರಣೆಗಳು ತಟ್ಟನೆ ಕಾಣುವುದಿಲ್ಲ. ಕಂಡವರು ವಿಚಾರವಂತರಲ್ಲದಿದ್ದರೆ ಎತ್ತಿತೋರಿಸುವುದಿಲ್ಲ. ಭಗವಾನ್ ಈ ಕೆಲಸ ಮಾಡಿದ್ದಾರೆ. ಶೋಷಣೆಯನ್ನು ಧಿಕ್ಕರಿಸುವ, ಸಮಾನತೆಯನ್ನು ಪ್ರೀತಿಸುವ ಮಾನವೀಯ ಕಳಕಳಿ ಈ ಬರಹಗಳ ಹಿಂದೆ ಕ್ರಿಯಾಶೀಲವಾಗಿದೆ. 'ಶಂಕರಾಚಾರ್ಯರ ಗೂಂಡಾಗಿರಿ' ಮೊದಲ ಲೇಖನಕ್ಕೆ ಬಂದ ಪ್ರತಿಕ್ರಿಯೆಯೊಂದಕ್ಕೆ ಬರೆದ ಉತ್ತರ ವಾಗಿದ್ದರೂ ಒಂದು ಸ್ವಯಂಪೂರ್ಣ ಲೇಖನವಾಗಿ, ಈ ದೇಶದ ಧಾರ್ಮಿಕ ತೆರೆಯ ಹಿಂದಿನ ಅಮಾನುಷ ಸಂಗತಿಗಳನ್ನು ನಗ್ನಗೊಳಿಸುತ್ತದೆ. ಶಂಕರಾಚಾರ್ಯರು ಮಾನವವಿರೋಧಿ ತತ್ವಗಳನ್ನು ಸಾರಿದರೆಂದು ಬರೀ ಹೇಳಿಕೆಮಾಡದೆ, ಲೇಖಕರು, ಶಂಕರರೇ ಬರೆದ ಬ್ರಹ್ಮಸೂತ್ರದ ಭಾಷ್ಯಗಳಿಂದ ವಾಕ್ಯಗಳನ್ನು ಅನುವಾದ ಸಮೇತ ಉದ್ಧರಿಸಿ (ಪುಟ. 81-82), ತರ್ಕಬದ್ಧವಾಗಿ ಸಮರ್ಥಿಸುತ್ತಾರೆ. ಆಚಾರ್ಯರ ಇಂಥದೇ ಶೂದ್ರವಿರೋಧಿ, ಬೌದ್ಧಧರ್ಮಧ್ವಂಸಕ ಕೃತ್ಯಗಳನ್ನು ಚರಿತ್ರೆಯ ನಿದರ್ಶನ ಗಳಿಂದ ರುಜುವಾತುಪಡಿಸುತ್ತಾರೆ. ಹಿಡಿಮಂದಿ ಉಚ್ಚವರ್ಗದವರು ಈ ದೇಶದ ಕೋಟ್ಯಂತರ ಮುಗ್ಧಜನಗಳಿಗೆ ಮಾಡಿದ ಕ್ರೂರ ಅಪಮಾನದ ಬಗೆಗಿನ ಆಕ್ರೋಶ – ಸಂಕಟಗಳು ಲೇಖನಗಳ ಆವೇಶದ ಧಾಟಿಯಲ್ಲಿ ಚಿಮ್ಮಿಬರುವಂತಿವೆ :

"ಗುರುವಿಗೇ ಅದ್ವೈತ ಸಿದ್ಧಿಯಾಗಿರಲಿಲ್ಲವೆಂದು ಹಿಂದೆ ಹೇಳಿದ ಚಂಡಾಲ ಪ್ರಸಂಗ ಮತ್ತು ಬ್ರಹ್ಮಸೂತ್ರದ ಭಾಷ್ಯದ ಉದ್ಧರಣೆಯಿಂದ ಗೊತ್ತಾಗಿದೆ. ಇನ್ನು ಸ್ವಾರ್ಥ ಶಿಷ್ಯರಿಗೆ ಅದು ಹೇಗೆ ಅರ್ಥವಾಗಬೇಕು. ಆದ್ದರಿಂದ ಅವರು ಗುರುಹಾಕಿ ಕೊಟ್ಟ ದಾರಿಯಲ್ಲೇ ಚಾಚೂತಪ್ಪದೆ ನಡೆದರು. ಮೇಲೆ ಉದ್ಧರಿಸಿದ ವಿನಾಶಕಾರಿ ವಿಷಯವನ್ನು ಅಕ್ಷರಶಃ ಪಾಲಿಸಿದರು ; ಜಾತಿಯ ವಿಷವನ್ನು ಹೆಚ್ಚಿಸಿದರು. ಸಮಾಜ, ಜಾತಿಯ ಹೆಸರಿನಲ್ಲಿ ಇನ್ನೂ ಚೂರುಚೂರಾಗಿ ಒಡೆದುಹೋಯಿತು.... ಜಾತಿಯ ಕುಟ್ಟೆಹುಳು ದೇಶದ ಸತ್ವವನ್ನು ತಿಂದು ಬಿಟ್ಟಿತು........ ದೇಶಪ್ರೇಮ ಎಂದರೆ ಭೂಪಟವನ್ನು ಪ್ರೀತಿಸುವುದಲ್ಲ ; ಜನಕೋಟಿಯನ್ನು ಪ್ರೀತಿಸುವುದು. ಅವರ ಸ್ಥಿತಿ ಗತಿಗಳನ್ನು ಉತ್ತಮಪಡಿಸಲು ಹೋರಾಡುವುದು ; ಅವರಿಗೆ ವಿದ್ಯಾಬುದ್ಧಿಯನ್ನು ಕೊಟ್ಟು ಮನುಷ್ಯರಾಗಲು ಪರಿಸರವನ್ನು ರೂಪಿಸುವುದು. ಇದನ್ನು ಮಾಡದವನು ದೇಶಭಕ್ತನಲ್ಲ ; ಆಚಾರ್ಯನಲ್ಲ" (ಪುಟ 85).

'ತೀರ್ಥಹಳ್ಳಿ, ಡಾ॥ ಗೊರೂರು ಮತ್ತು ನಾನು' ಒಂದು ಬಗೆಯ ಸಣ್ಣಕತೆಯಂತಿರುವ ಪ್ರವಾಸಾನುಭವದ ಲೇಖನ. ಭಗವಾನರ ಸೃಜನಶೀಲತೆಯ ಇಣುಕು ನೋಟ ಇಲ್ಲಿನ ಶೈಲಿಯಲ್ಲಿ ಕಾಣಬಹುದು. ಬೇರೆ ಲೇಖನಗಳ ಅಡಿಟಿಪ್ಪಣಿಗಳಂತೆ, ಇಲ್ಲಿಸವು ಲೇಖಕರ ವೈಯಕ್ತಿಕ ಕೊಡು–ಕೊಳುವಿಕೆಯ ವ್ಯವಹಾರದ ವಿಷಯದವಾದ್ದರಿಂದಲೋ ಏನೋ ಅಂಥ ಪ್ರಾಮುಖ್ಯವನ್ನು ಪಡೆಯುವುದಿಲ್ಲ. ಕೃತಿಗಳಲ್ಲಿ ದೊಡ್ಡವರಾಗಿ ಕಾಣುವ ಸಾಹಿತಿಗಳು, ಕೆಲವೊಮ್ಮೆ ಮಾತುಕತೆಗಳಲ್ಲಿ ಹೇಗೆ ಸಣ್ಣತನಗಳನ್ನೂ ಪ್ರದರ್ಶಿಸಬಲ್ಲರು ಎಂಬುದನ್ನು ಬಹಳ ನವಿರಾಗಿ ಲೇಖನ ವಿಡಂಬಿಸುತ್ತದೆ. ಇದಕ್ಕೆ ಮತ್ತೇನು ಹೆಚ್ಚಿನ ಉದ್ದೇಶವಿದ್ದಂತೆ ತೋರದು.

ಅನುಬಂಧದಲ್ಲಿ ಭಗವಾನರ ಸಂದರ್ಶನವೊಂದಿದೆ. ಅಲ್ಲಿ ಅವರು ವಿಮರ್ಶೆಯ ಉದ್ದೇಶ ಸತ್ಯಾನ್ವೇಷಣೆಯೆಂದೂ ತೌಲನಿಕ ಕ್ರಮದಿಂದ ಮಾತ್ರ ವಸ್ತುನಿಷ್ಠತೆಯನ್ನು ತೋರಿಸಬಹುದೆಂದೂ ಅದೇ ನಿಜವಾದ ವೈಜ್ಞಾನಿಕ ವಿಮರ್ಶೆ ಎಂದೂ ಹೇಳುತ್ತಾರೆ. ಇದರ ನಿಜವನ್ನು ಅವರ ಲೇಖನಗಳಲ್ಲಿ ನೋಡುತ್ತೇವೆ. ಒಂದು ವಿಚಾರವನ್ನು ಸ್ಪಷ್ಟಪಡಿಸುವಾಗ ಭಗವಾನ್ ಬೇರೆ ಬೇರೆ ಸಂವಾದಿ ನಿದರ್ಶನಗಳನ್ನು ತಂದು ವಿಮರ್ಶೆಯನ್ನು ವ್ಯಾಪಕಗೊಳಿಸುತ್ತಾರೆ. ಕುವೆಂಪು ಭಾಷೆಯ ಬಗೆಗಿನ ವಿವೇಚನೆಯಲ್ಲಿ ಮಿರ್ಜಿ ಅಣ್ಣಾರಾಯ, ಕೆ. ವಿ. ಅಯ್ಯರ್, ಶೇಕ್ಸ್‌ಪಿಯರ್ ಮುಂತಾದವರ ಹೋಲಿಕೆ ಬರುತ್ತದೆ (ಪುಟ. 7). ಹೂವಯ್ಯನ ಪಾತ್ರದ ಜನಪರ ಧೋರಣೆಯ ವಿಶ್ಲೇಷಣೆಯಲ್ಲಿ 'ದಾಟು' 'ಭಾರತೀಪುರ' ಕಾದಂಬರಿಗಳನ್ನು ಗಮನಿಸಲಾಗುತ್ತದೆ. ಸುಬ್ಬಮ್ಮನ ಜಾರುವಿಕೆಯ ಚಿತ್ರಣ ಮಾಡುವಾಗ, ಕುವೆಂಪು ತೋರಿದ ನಿರ್ಲಿಪ್ತತೆಯ ಸಂದರ್ಭದಲ್ಲಿ ಲಂಕೇಶ, ಅನಂತಮೂರ್ತಿಯವರ ತುಲನೆ ಬರುತ್ತದೆ (ಪುಟ. 24). ಕುವೆಂಪು ಕಾದಂಬರಿಗಳ ದಲಿತ ಪಾತ್ರಗಳ ವಿಶ್ಲೇಷಣೆಯಲ್ಲಿ ಕಾರಂತ ಹಾಗೂ ಭೈರಪ್ಪನವರ ಪಾತ್ರಗಳನ್ನು ಜತೆಗಿಡಲಾಗುತ್ತದೆ (ಪುಟ. 170, 171). ಹೀಗೆ, ಇಡೀ ವಿಮರ್ಶೆ ತೌಲನಿಕ ಕ್ರಮದಿಂದ ಬೆಳೆಯುತ್ತದೆ. ಕನ್ನಡದಲ್ಲಿ ಈ ಬಗೆಯ ವಿಮರ್ಶೆಗೆ ಭಗವಾನರದು ವಿಶಿಷ್ಟ ಸ್ಥಾನ !

ಬಹಳಷ್ಟು ಕಡೆ ತೌಲನಿಕಕ್ರಮದಿಂದ ವಿಮರ್ಶೆಗೆ ಒಂದು ಹೊಸತನ ಬಂದಿದೆ. ಹೇಳುವ ವಿಚಾರಕ್ಕೆ ಪುಷ್ಟಿಸಿಕ್ಕಿದೆ. ಉದಾಹರಣೆಗೆ–ಮಾವೋ ಮತ್ತು ಕುವೆಂಪುರವರನ್ನು (ಪುಟ 3) ; ಪುತಿನ ಹಾಗೂ ವಿಲ್‌ಡ್ಯೂರಾಂಟರನ್ನು (ಪುಟ (50) ಹೋಲಿಸುವಾಗ, ಆದರೆ ಕೆಲವು ಸಲ ಇದರಿಂದ ವಿಮರ್ಶೆಗೆ ಬಾಧೆಯಾಗಿದೆ ಎನಿಸುತ್ತದೆ. ಅಡಿ ಟಿಪ್ಪಣಿಗಳು, ಹೋಲಿಕೆಗಳು, ಉದ್ಧರಣೆಗಳು, ಹೊರಗಿನ ವಿವರಣೆಗಳು, ಸದ್ಯದ ವಿಮರ್ಶೆಯ ಸಾತತ್ಯಕ್ಕೆ ಅಡ್ಡವಾಗಿ ವಿಮರ್ಶೆ ಭಾರವಾಗುತ್ತದೆ ; ಗೌಣವಾಗುತ್ತದೆ (ಕಾಳಿದಾಸನ ಉಂಗುರ ಪ್ರಸಂಗ, ಪುಟ. 132 ಹಾಗೂ 134). ಅಡಿಟಿಪ್ಪಣಿಗಳು ವಿಷಯ ಪ್ರತಿಪಾದನೆಯ ಸಂದರ್ಭದಲ್ಲಿ ಖಚಿತತೆ ಹಾಗೂ ರುಜುವಾತಿನ ಪ್ರಮಾಣಗಳೇ ಆದರೂ ಎಷ್ಟೋ ಸಲ ಅನವಶ್ಯ ಎನಿಸುವಂಥವೂ

ಕಾಣಬರುತ್ತವೆ. ಆದರಲ್ಲೂ ಭಾರತೀಯ ಕಾವ್ಯಮೀಮಾಂಸೆಯ ಎಷ್ಟೋ ಪ್ರಾಥಮಿಕ ಸಂಗತಿಗಳ ಉದ್ಧರಣೆಗಳು ಹೆಚ್ಚಾಯಿತೆಂದೇ ಅನಿಸುತ್ತದೆ.

ಅನುಬಂಧದ ತಮ್ಮ ಸಂದರ್ಶನದಲ್ಲಿ ಭಗವಾನ್ ಸದ್ಯದ ಸಾಮಾಜಿಕ ರಾಜಕೀಯ ಸ್ಥಿತಿಗತಿಗಳ ಬಗ್ಗೆ, ಬಂಡಾಯ ಸಾಹಿತ್ಯ, ನವ್ಯಸಾಹಿತ್ಯಗಳ ಬಗ್ಗೆ ತಮ್ಮದೇ ಆದ ವೈಚಾರಿಕ–ಬದ್ಧ ನಿಲುವಿನ ಉತ್ತರ ಕೊಟ್ಟಿದ್ದಾರೆ. ನವ್ಯ ಸಾಹಿತ್ಯದ ಬಗೆಗಿನ ಅವರ ವ್ಯಾಖ್ಯಾನ ತುಂಬಾ ನಿಷ್ಠುರವಾಗಿದೆ.

"ನವ್ಯರು ಚಹಾಬಟ್ಟಲಿನಲ್ಲಿ ಚಂಡಮಾರುತ ಎಬ್ಬಿಸಿದರು. ನವ್ಯರಿಂದ ಸಾಹಿತ್ಯ ಉನ್ನತವಾಗಿಲ್ಲ. ನವ್ಯ ಚಳವಳಿ ಆಧುನಿಕ ಕನ್ನಡ ಸಾಹಿತ್ಯದ ಅವನತಿಯ ಕಾಲ. ನವ್ಯರು ಅನುಭವನಿಷ್ಠವಾಗಿ ಸಾಹಿತ್ಯ ರಚಿಸುತ್ತೇವೆಂದು ಹೇಳಿಕೊಂಡರು. ಆದರೆ ಅವರ ಅನುಭವ ಬಹಳ ಸೀಮಿತವಾದುದು. ಕಾಮದ ಅನುಭವವೇ ಅವರಲ್ಲಿ ಯಥೇಚ್ಛವಾಗಿದೆ. ಅವರು ಅಂಡಿನಲ್ಲೇ ಬ್ರಹ್ಮಾಂಡವನ್ನು ಕಂಡವರು. ಅವರಲ್ಲಿ ವೈವಿಧ್ಯವಿಲ್ಲ. ಅವರ ಜೀವನಾನುಭವವೇ ತೀರಾ ಸಂಕುಚಿತವಾದುದು. ಅನುಭವ ಅನುಭವ ಎಂದು ಗದ್ದಲ ಎಬ್ಬಿಸಿದ ಅವರ ಕೃತಿಗಳಲ್ಲಿ ಶಿವಶರಣರು ಮುಟ್ಟಿದ ಅನುಭವದ ಎತ್ತರವಾಗಲಿ, 'ಕಾನೂರು ಹೆಗ್ಗಡಿತಿ'ಯ ನಾಯಕ ಹೂವಯ್ಯನ ಅನುಭವದ ಎತ್ತರವಾಗಲೀ ಇದೆಯೇ?......ಯಾವ ಅರ್ಥದಲ್ಲಿ ಅವರು ನವ್ಯರೋ ತಿಳಿಯದು" (ಪುಟ. 190).

ತನ್ನ ಮಿತಿಗಳಿಂದಲೇ ನವ್ಯ ಚಳುವಳಿ ಅಡಗಿ ಹೋದುದು ನಿಜವಾದರೂ, ಕಾವ್ಯದ ಅಭಿವ್ಯಕ್ತಿ ವಿಷಯದಲ್ಲಿ ಅದು ನೀಡಿದ ಕೆಲವಾದರೂ ಕೊಡುಗೆಗಳನ್ನು ಅಲಕ್ಷಿಸುವಂತಿಲ್ಲ. ಆದರೆ ಭಗವಾನರು ಈ ಬಗ್ಗೆ ಆಗ್ರಹಪೂರ್ವಕವಾಗಿ ನುಡಿದಿದ್ದಾರೆ. ಇತರೆ ಲೇಖನಗಳಲ್ಲೂ ನವ್ಯದ ಬಗ್ಗೆ ಇಂಥದೇ ವಿವರಣೆಗಳು ಬಂದಿವೆ (ಪುಟ. 24, 127).

'ಅಸ್ಪೃಶ್ಯತೆ–ಸಮಾನತೆ' ಪತ್ರಿಕೆಯೊಂದರ ಪ್ರಶ್ನೆಗಳಿಗೆ ನೀಡಿದ ಉತ್ತರ ಲೇಖನ. ಇಲ್ಲಿ ಇವರ ಸಾಮಾಜಿಕ ಚಿಂತನೆ ಪರಿಚಿತವಾಗುತ್ತದೆ. ಮೀಸಲಾತಿ, ಜಾತಿ ಅಸ್ಪೃಶ್ಯತೆ, ಗೋಮಾಂಸ, ಹಿಂದೂಧರ್ಮ ಮುಂತಾದ ಸಮಕಾಲೀನ ವಿಷಯಗಳ ಬಗ್ಗೆ ಭಗವಾನರ ನಿಲುವುಗಳಿವೆ. ಭಗವಾನರ ಯಾವುದೇ ಲೇಖನದಲ್ಲೂ ನಾವು ಗುರುತಿಸಬಹುದಾದ ಅಂಶವೆಂದರೆ, ಅತ್ಯಂತ ವಾಸ್ತವನೆಲೆಗಟ್ಟಿನಲ್ಲಿ ಚಿಂತಿಸುವ ಸಮಕಾಲೀನ ಪ್ರಜ್ಞೆ. ಇದು ಸಾಹಿತ್ಯಕವಾಗಿಯೂ ಸಾಮಾಜಿಕ–ರಾಜಕೀಯವಾಗಿಯೂ ! ಸಾಹಿತ್ಯದ ಮಾನದಂಡಗಳನ್ನು ಹಿಡಿದು ಜೋತಾಡುತ್ತಿರುವ, ಬರೀ ಕಲಾಮೌಲ್ಯವಿರುವುದೆಲ್ಲ ಶ್ರೇಷ್ಠವೆನ್ನುತ್ತಾ ಸಮಕಾಲೀನ ಸಾಮಾಜಿಕ ತುರ್ತುಗಳಿಗೆ ಸ್ಪಂದಿಸದ ಹಲವಾರು ವಿಮರ್ಶಕರು ನಮ್ಮ ಸುತ್ತ ಬರೆಯುತ್ತಿರುವ ಸದ್ಯದ ಸಂದರ್ಭದಲ್ಲಿ, ಇವೆರಡನ್ನೂ ಸಮ್ಮೇಳವಿಸಿರುವ ಭಗವಾನ್ ಮುಖ್ಯರಾಗುತ್ತಾರೆ. ಚಾರಿತ್ರಿಕ ಅನಿವಾರ್ಯತೆಯನ್ನು ಕಂಡುಕೊಳ್ಳದ, ಸಾಮಾಜಿಕ ಪ್ರಸ್ತುತತೆ ಪಡೆಯದ ವಿಮರ್ಶೆ,

ಪಾರ್ಶ್ವಿಕವಾದುದು ; ಹೊಣೆಗೇಡಿಯಾದುದು. ಭಗವಾನರ ವಿಮರ್ಶೆಯಲ್ಲಿ ಬದುಕನ್ನು ಪ್ರೀತಿಸುವ, ಶೋಷಣಾರಹಿತ, ಅಸಮಾನತಾರಹಿತ ಸಮಾಜವನ್ನು ಹಂಬಲಿಸುವ ಗುಣವನ್ನು ಕಾಣುತ್ತೇವೆ. ಇದನ್ನು ಹೇಳದ, ಎಲ್ಲ ಕೃತಿ–ತತ್ವಗಳ ಬಗ್ಗೆ ಅವರು ಕಿಡಿಕಾರುತ್ತಾರೆ. ನಮ್ಮ ಸಾಮಾಜಿಕ ಸ್ಥಿತಿಗಳ ಗಾಢ ಪರಿಚಯವುಳ್ಳ ವೈಚಾರಿಕ–ಮಾನವತಾವಾದಿ ಮನಸ್ಸು ಇಲ್ಲಿ ತುಡಿಯುತ್ತದೆ. ಭಗವಾನರ ಆಲೋಚನಾಕ್ರಮ ಇಂಥದ್ದು :

"ಬಡತನ, ಅಸಮಾನತೆ ಮುಂತಾದ ಮಹಾದೋಷಗಳು ಸಮಾಜದಲ್ಲಿ ತಾಂಡವ ನೃತ್ಯ ಮಾಡುತ್ತಿದ್ದರೂ ವಿನೋಬಾಭಾವೆ ಗೋಹತ್ಯೆ ಬಗ್ಗೆ ತಲೆಕೆಡಿಸಿಕೊಂಡಿದ್ದಾರೆ. ಗೋವುಗಳನ್ನು ಸಾಕುವ ಜನರಿಗೆ ಅವುಗಳ ಬೆಲೆ ಚೆನ್ನಾಗಿ ಗೊತ್ತು. ಉಳುಮೆ ಮಾಡದ, ಗಬ್ಬವಾಗದ, ಹಾಲುಕೊಡದ, ಹೆಚ್ಚು ಸಗಣಿ ಹಾಕದ, ಎತ್ತು ಹಸುಗಳನ್ನು ರೈತರು ಭಾವನಾತ್ಮಕವಾಗಿ ಇಟ್ಟುಕೊಳ್ಳುವುದಿಲ್ಲ...ಅವರು ಯಾವ ದನಕರುಗಳನ್ನು ಇಟ್ಟುಕೊಳ್ಳಬೇಕು, ಯಾವುದನ್ನು ಮಾರಾಟ ಮಾಡಬೇಕು ಎಂದು ಆರ್ಥಿಕವಾಗಿ ತಿಳಿದುಕೊಂಡಿರುತ್ತಾರೆ..... ಆದ್ದರಿಂದ ವಿನೋಬಾಜಿ ಇಂಥ ಅನಾರ್ಥಿಕ ವಿಷಯಗಳ ಬಗ್ಗೆ ಯೋಚಿಸುವುದನ್ನು ಬಿಟ್ಟುಬಿಡಬೇಕು : ಗೋಹತ್ಯೆ ನಿಷೇಧವಾಗದಿದ್ದರೆ ಆಮರಣಾಂತ ಉಪವಾಸ ಮಾಡುತ್ತೇನೆಂಬ ಗೊಡ್ಡು ಬೆದರಿಕೆ ಹಾಕುವುದನ್ನು ನಿಲ್ಲಿಸಬೇಕು. ಅವರಿಗೆ ನಿಜವಾಗಿಯೂ ಮಾನವೀಯತೆ ಏನಾದರೂ ಇದ್ದರೆ ಹರಿಜನರನ್ನು ಹೊಡೆಯುವುದನ್ನು, ಬಡಿಯುವುದನ್ನು, ಸುಡುವುದನ್ನು ತಡೆಗಟ್ಟಬೇಕೆಂದು ಆಮರಣಾಂತ ಉಪವಾಸ ಮಾಡಲಿ" (ಪುಟ. 103,104).

ವಿಶ್ಲೇಷಣೆಯೊಂದಕ್ಕೆ ತಗುಲಿಕೊಂಡಂತೆ ಬರುವ ಕೆಲವು ಪರಿಕಲ್ಪನೆ, ವಿಚಾರಗಳು, ಬಂದಾಗ ಪ್ರಸ್ತುತ ವಿಮರ್ಶೆಯಿಂದ ದೂರಸರಿದು, ಅವನ್ನು ವಿವರಿಸುವಂಥ ರೀತಿ ಬಹಳಷ್ಟುಕಡೆ ಇದೆ. ಉದಾ : ಆಡುನುಡಿಯ ಬಳಕೆಯ ವಿಚಾರವಾಗಿ (ಪುಟ 5,6.), ಕಾವ್ಯದಲ್ಲಿ ಸ್ಥಳೀಯತೆ ಬಗ್ಗೆ (ಪು. 72), ಛಂದಸ್ಸಿನ ಬಗ್ಗೆ (ಪು. 66) ಇತ್ಯಾದಿ. ಸಂದರ್ಭಗಳನ್ನು ಬಳಸಿಕೊಂಡು ಅಲ್ಲಲ್ಲಿ ತಮ್ಮ ಸ್ವಂತ ಧೋರಣೆಗಳನ್ನು ಸ್ಪಷ್ಟಪಡಿಸುವ ರೀತಿಕೂಡ ಕಂಡುಬರುತ್ತದೆ. ಇಲ್ಲೆಲ್ಲ ಭಗವಾನ್ Statement ಮಾಡುತ್ತಾರೆ. ಅದರಲ್ಲೂ ಶ್ರೇಷ್ಠಸಾಹಿತ್ಯದ ಸ್ವರೂಪ ಇವರಿಗೆ ಬಹಳವಾಗಿ ಕಾಡಿದೆ ಯೆನಿಸುತ್ತದೆ.

"ಶ್ರೇಷ್ಠತಮ ಕಾವ್ಯ, ಭಾವಚಿಂತನೆಯ ಸ್ಪಷ್ಟಾಸ್ಪಷ್ಟತೆಗಳ ಮಧುರ ಮಿಲನದ ತೂಗುಯ್ಯಾಲೆಯ ಐಂದ್ರಜಾಲಿಕ ಸೃಷ್ಟಿ" (ಪುಟ. 62), "ಶ್ರೇಷ್ಠಸಾಹಿತ್ಯ ಸ್ಥಳೀಯತೆಯ ಮೂಲಕ ಸಾರ್ವತ್ರಿಕತೆಯನ್ನು ಅಭಿವ್ಯಕ್ತಿಸುತ್ತದೆ" (ಪುಟ. 72), "ಪಾಪ ನಿರ್ಮೂಲನವೇ ಶ್ರೇಷ್ಠ ಸಾಹಿತ್ಯದ ಪರಮಗುರಿ" (ಪುಟ. 119) ಇದೇ ರೀತಿ 'ಚಿರ ಸಾಹಿತ್ಯ', 'ಶಾಶ್ವತ ಸಾಹಿತ್ಯ'ಗಳ ಬಗ್ಗೆಯೂ ಭಗವಾನ್ ಹೇಳುತ್ತಾರೆ. ಈ ಬಗೆಯ ಮಾತುಗಳಿಗೆ ಅಲ್ಲೇ ವಿವರಗಳ ಹಿನ್ನೆಲೆಯಿರುತ್ತದೆ ; ಸಂದರ್ಭವಶದಲ್ಲಿ ಇವು

ಪ್ರಸ್ತುತ ಎನಿಸುತ್ತವೆ. ಆದರೂ ಈ ಬಗೆಯ ಸೂತ್ರೀಕರಣ, ಇವರ ವಿಪುಲತೆ, ವಿಮರ್ಶೆಯನ್ನು ಬೋಧಕವಾಗಿಸುತ್ತದೆ (ಇವರ ಸಾಮಾಜಿಕ ಕಳಕಳಿಯ ತೀವ್ರತೆ ಕೂಡ ಬರಹವನ್ನು ಸಾಕಷ್ಟು ಬೋಧನಾತ್ಮಕವಾಗಿ ಮಾಡಿದೆ). "ಕುವೆಂಪು ಅವರ ಓದಿನ ಹರಹು, ಓದಿದ್ದನ್ನು ತನ್ನದ್ದನ್ನಾಗಿ ಮಾಡಿಕೊಳ್ಳುವ ಪಚನಶಕ್ತಿ, ರಸಸ್ಯಂದಿಯಾಗಿ ವರ್ಣಿಸುವ ಹಿರಿಮೆ ಅನುಕರಣೀಯವಾಗಿದೆ. ಸಾಹಿತಿ ಹುಲ್ಲುಮೇದು ಹಾಲು ಕೊಡುವ ಹಸುವಿನಂತಾಗಬೇಕು" (ಪುಟ. 129). –ಹೀಗೆ ಸಾಹಿತ್ಯದ ಮೂಲಭೂತ ತತ್ವಗಳ ವಿವೇಚನೆ ಇಲ್ಲಿ ವ್ಯಾಪಕವಾಗಿ ಬರುತ್ತದೆ.

ಭಗವಾನರ ವಿಮರ್ಶೆಯಲ್ಲಿ ಒಂದು ಬಗೆಯ ನಿರ್ಧಾರಕ ಧ್ವನಿಯಿದೆ. ಇದು ತೀರ್ಪು–ಎಂಬ ಧೋರಣೆಯಿದೆ. ಭಾಷೆಯ ಮೊನಚು, ಹೇಳುವಲ್ಲಿನ ನೈಷ್ಠುರ್ಯ ಖಚಿತತೆಯ ಲಕ್ಷಣಗಳಾದರೂ ಸಾಧಾರವಾಗಿ ತನಗನಿಸಿದ ಅಭಿಪ್ರಾಯವನ್ನು ಮುಂದಿಡುವ ವಿಮರ್ಶೆಯ ಸೌಜನ್ಯವನ್ನು, ನಿರ್ಧಾರಕ ವಿಮರ್ಶೆ ಕೆಲವೊಮ್ಮೆ ಮೀರಬಹುದು. ಅನುಮಾನರಹಿತವಾಗಿ ಎಲ್ಲವನ್ನೂ ತೀರ್ಮಾನಕ್ಕೊಳಪಡಿಸುವುದು ಅಷ್ಟು ಅಪೇಕ್ಷಿತವಾದುದಲ್ಲ. ಮತ್ತೆ ಕೆಲವು ಕಡೆ ತಮ್ಮ ವಿಮರ್ಶೆ ಹಾಗೂ ಧೋರಣೆಗಳ ಬಗ್ಗೆ ಆತ್ಮಪ್ರಶಂಸೆಯೂ ಗೋಚರವಾಗಿದೆ (ಪುಟ. 119ರ ಟಿಪ್ಪಣಿ).

ಇಲ್ಲಿನ ವಿಮರ್ಶೆಯು ಮೊದಲ ಬಾರಿಗೆ, ಆಧುನಿಕ ಸಾಹಿತ್ಯ ಕೃತಿಗಳ ಚರ್ಚೆಯಲ್ಲಿ ಇಷ್ಟೊಂದು ವಿಪುಲವಾಗಿ ಭಾರತೀಯ ಕಾವ್ಯಮೀಮಾಂಸೆಯ ಪರಿಭಾಷೆಗಳನ್ನು ವಿಮರ್ಶೆಗೆಂದು ಬಳಸಿಕೊಂಡಿದೆಯೆನಿಸುತ್ತದೆ. ಕುವೆಂಪು ಅವರ ಎಷ್ಟೋ ಪದಪುಂಜಗಳನ್ನೂ ವಿಮರ್ಶೆಯಲ್ಲಿ ಬಳಸಲಾಗಿದೆ ('ಒದಗೆ' ಪುಟ. 66). ಕುವೆಂಪುರವರಿಂದ ಗಾಢವಾಗಿ ಪ್ರಭಾವಿತರಾಗಿರುವ ವಿಮರ್ಶಕ, ಅವರದೇ ಕೃತಿಗಳ ವಿಮರ್ಶೆಯ ಸಂದರ್ಭದಲ್ಲಿ ಬಳಸುವ ಭಾವನಪ್ರಧಾನವಾದ ಭಾಷೆಯನ್ನು ಗಮನಿಸಬೇಕು. ಆಗ ಭಗವಾನರ ಭಾಷೆ ವರ್ಣನಾತ್ಮಕವಾಗುತ್ತದೆ ; ಪದ್ಯಗಂಧಿಯಾಗುತ್ತದೆ. ಕುವೆಂಪುರವರ ಗದ್ಯದ ಶೈಲಿಯನ್ನು ವರ್ಣಿಸುವಾಗ–

"...ಅವರ ಶೈಲಿ ತಿಕ್ಕಿ ತೀಡಿದಂತೆ ಭಾಸವಾಗುವುದಿಲ್ಲ. ಅದು ಸಹಜ ಸ್ಫೂರ್ತಿಯ ಪ್ರತಿಭಾಶೈಲಿ. ಅದು ಭಾವಾಲೋಚನೆಯಿಂದ ಹದಗೊಂಡ ಅಭಿಜಾತಗದ್ಯ.... ಅದರ ನಡಗೆಯಲ್ಲಿ ಕುಂಟುಕುಣಿತವಿಲ್ಲ. ಅಡೆತಡೆಯಿಲ್ಲ, ಅನೇಕ ವೇಳೆ ಅದು ಮಳೆಗಾಲದ ಪ್ರವಾಹದಂತೆ ಮುನ್ನುಗ್ಗುತ್ತದೆ, ಜಲಪಾತದಂತೆ ಧುಮುಕುತ್ತದೆ........ ಕುವೆಂಪು ಗದ್ಯ ಎಂದೂ ನಿರಾಭರಣ ಸುಂದರಿಯಲ್ಲ ; ಅದು ಪ್ರತಿಮೆ ರೂಪಕಗಳಿಂದ ಸಾಲಂಕೃತವಾದ ಗೃಹಿಣಿ." (ಪುಟ. 4).

ಭಗವಾನರ ವಿಮರ್ಶೆಯ ಭಾಷೆ ಸೃಜನಶೀಲವಾದುದು. ಎಂತಲೇ ಇಲ್ಲಿನ ಲೇಖನಗಳು–ವಿಮರ್ಶೆಗಳು ಸೊಗಸಾಗಿ ಓದಿಸಿಕೊಳ್ಳುತ್ತವೆ ; ಎಲ್ಲೂ ನೀರಸತೆಯೆನಿಸುವುದಿಲ್ಲ. ತನ್ನ ಶಾಸ್ತ್ರೀಯ ಪರಿಭಾಷೆಗಳಲ್ಲಿ ವ್ಯವಹರಿಸಬೇಕಾದ ವಿಮರ್ಶೆ, ಇಲ್ಲಿ ರಾಗಭಾವ ಸಂಪನ್ನವಾಗುತ್ತದೆ. ಕುವೆಂಪು ಬರೆಹಗಳು ಇವರ ಭಾಷೆಯ

ಮೇಲೆ ಅಚ್ಚೊತ್ತುವ ಪ್ರಭಾವ ಹಾಕಿದೆ. ಭಾಷೆಯ ಬಗೆಗಿನ ಸೃಜನಶೀಲ ಪ್ರಜ್ಞಾ ಪೂರ್ವಕತೆ ಒಬ್ಬ ವಿಮರ್ಶಕನಿಗೆ ಲೋಲುಪತೆಯಾಗಿಬಿಡುವ ಸಂಭವವಿದೆ. ಆಗ ವಿಚಾರಗಳು ತಮ್ಮ ನಿಖರತೆಯಲ್ಲಿ ಪ್ರಕಟವಾಗುವುದಿಲ್ಲ. "ವಿಮರ್ಶೆಯಲ್ಲಿ ಕೂಡ ಅವರು ಸೃಜನಶೀಲ ಸಾಹಿತಿಯಾಗಿಬಿಡುವುದರಿಂದ ಅವರ ವಿಮರ್ಶೆ ಆಕರ್ಷಣೀಯಂ ವಾಗಿಬಿಡುತ್ತದೆ" (ಪುಟ. 11) ಎಂದು ಕುವೆಂಪು ಬಗ್ಗೆ ಹೇಳಿರುವುದಕ್ಕೆ, ಭಗವಾನ್ ತಾವೇ ಸ್ವತಃ ಕೆಲವು ಕಡೆ ನಿದರ್ಶನವಾಗುತ್ತಾರೆ.

'ಬದಲಾವಣೆ'ಯನ್ನು ಓದಿದಾಗ ಇಲ್ಲಿನ ವಿಮರ್ಶೆ ಪಾಶ್ಚಾತ್ಯ ವಿಮರ್ಶಾ ತತ್ವಗಳಿಂದ ಪರಿಪುಷ್ಟಗೊಂಡಿರುವಂತೆಯೇ, ಭಾರತೀಯ ಕಾವ್ಯ ಮೀಮಾಂಸೆ ಯಿಂದಲೂ ರೂಪುಗೊಂಡಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. ಎರಡೂ ಕಡೆಯ ಸಿದ್ಧಾಂತ–ತತ್ವಗಳು ಸೇರಿದ ಒಂದು ವಿಶಿಷ್ಟ ಸಮ್ಮಿಲನ ಇಲ್ಲಿನ ವಿಶ್ಲೇಷಣೆಗಳಲ್ಲಿದೆ. ನಮ್ಮ ನೆಲದ ಕೃತಿಗಳನ್ನು, ವಿಮರ್ಶಿಸುವ ಎಲ್ಲ ಸಂದರ್ಭಗಳಲ್ಲೂ ಪಾಶ್ಚಾತ್ಯರನ್ನೇ ಉದ್ಧರಿಸುವ ನಮ್ಮ ಕೆಲವು ವಿಮರ್ಶೆಗಳ ಅತಿರೇಕಕ್ಕೆ ಭಗವಾನ್ ಅಪವಾದವಾಗು ತ್ತಾರೆ. ಮಾನವಶಾಸ್ತ್ರ, ಇತಿಹಾಸ, ತತ್ವಶಾಸ್ತ್ರ ಮುಂತಾದ ಜ್ಞಾನಶಾಖೆಗಳಿಂದ, ಬಲಗೊಂಡ ವಿಮರ್ಶೆ ಇಲ್ಲಿನದು. ಚಾರಿತ್ರಿಕ ಪ್ರಜ್ಞೆಯುಳ್ಳ. ಈ ದೇಶದ ಸಾಮಾ ಜಿಕ ಸಂಬಂಧಗಳ ಸೂಕ್ಷ್ಮತೆ ಸಂಕೀರ್ಣತೆಗಳನ್ನು ಮನನ ಮಾಡಿಕೊಂಡ ಮಾನವೀಯ ಕಳಕಳಿ ಇಲ್ಲಿ ಎದ್ದು ತೋರುತ್ತದೆ. ಭಗವಾನ್ ಬಹಳ ವಿಶಿಷ್ಟವಾಗಿ, ಸ್ವಂತವಾಗಿ, ಆಲೋಚಿಸುತ್ತಾರೆ ; ವಿಭಿನ್ನವಾಗಿ ಅರ್ಥೈಸುತ್ತಾರೆ :

"ಗುಪ್ತರ ಯುಗವನ್ನು ಸುವರ್ಣಯುಗವೆಂದು ಇತಿಹಾಸಕಾರರು ಹೆಮ್ಮೆಯಿಂದ ಹೊಗಳಿದ್ದಾರೆ. ಆದರೆ ಸುಮಾರು ಒಂದೂವರೆ ಸಾವಿರ ವರ್ಷಗಳ ಹಿಂದೆ ಜನ ಸಾಮಾನ್ಯರ ಬದುಕು ಹೇಗಿದ್ದಿರಬಹುದು ? ಇಪ್ಪತ್ತನೆಯ ಶತಮಾನದಲ್ಲಿ ಕ್ರಾಂತಿ ಕಾರಕ ಮಾನವೀಯ ತತ್ವಗಳು ಪ್ರಪಂಚದ ಎಲ್ಲಾ ಕಡೆಗಳಿಂದಲೂ ಆಧುನಿಕ ವಿದ್ಯಾಭ್ಯಾಸದ ಮೂಲಕ ಭಾರತಕ್ಕೆ ಆಮದಾಗಿವೆ. ಕಾನೂನುಬದ್ಧ ಮೀಸಲಾತಿ ಗಳನ್ನೂ ರಕ್ಷಣೆಯನ್ನೂ ಅಸ್ಪೃಶ್ಯರಿಗೆ ನೀಡಲಾಗಿದೆ. ಇಂತಹ ಕಾಲದಲ್ಲಿಯೇ ದಲಿತರನ್ನು ಸೌದೆಪುಳ್ಳೆಗಿಂತ ಕೀಳಾಗಿ ಕಡಿದು ಸುಡಲಾಗುತ್ತಿದೆ. ಅಂಥದ್ದರಲ್ಲಿ ಸಾರ್ವಭೌಮರ ಕಾಲದಲ್ಲಿ ದೀನ ದಲಿತರನ್ನು ಹೇಗೆ ನಡೆಸಿಕೊಂಡಿರಬೇಕೆಂದು ಊಹಿಸಿ ದರೆ ನಡುಕವಾಗುತ್ತದೆ. ರಾಜಾಸ್ಥಾನದಲ್ಲಿದ್ದ ಹಿಡಿಮಂದಿ ವಿದ್ವಾಂಸರಿಗೆ ಎಲ್ಲಾ ಸೌಕರ್ಯ ಸವಲತ್ತುಗಳನ್ನು ಒದಗಿಸಿದ್ದರಿಂದ ಅವರು ಸುಖವಾಗಿ ಸಾಹಿತ್ಯ ಕಲಾ ಸೇವೆಗಳನ್ನು ಮಾಡಿದರು. ಅಷ್ಟರಿಂದಲೇ ಅದನ್ನು ಸುವರ್ಣಯುಗವೆಂದು ಕರೆಯು ವುದು ಅವಾಸ್ತವವಾಗುತ್ತದೆ, ಅಚಾರಿತ್ರಿಕವಾಗುತ್ತದೆ" (ಪುಟ. 103).

ತಮ್ಮ ವಿಮರ್ಶೆಯ ಎಲ್ಲ ಸಂದರ್ಭಗಳಲ್ಲೂ ಭಗವಾನ್ ಮಾನವೀಯ ಮೌಲ್ಯ ಗಳ ನಿರಸಿಷ್ಠೆಯ ಪ್ರತಿಪಾದಕರಾಗುತ್ತಾರೆ. ಇದು ಅವರ ಹೆಚ್ಚುಗಾರಿಕೆ. ಅತ್ಯಂತ ವೈಜ್ಞಾನಿಕವಾಗಿ, ವೈಚಾರಿಕವಾಗಿ ಚಿಂತನೆ ಮಾಡುವ ರೀತಿ, ಸತ್ಯವನ್ನು ಕಟುವಾಗಿ

ಹೇಳುವ ನೈಪುಣ್ಯವನ್ನು ಅವರ ಅಸ್ಖಲಿತವಾದ ಖಚಿತ ವಿವರಣೆಗಳಲ್ಲಿ ಗಮನಿಸಬಹುದು. ದಲಿತಪರವಾದ ಹಾಗೂ ಎಲ್ಲ ಬಗೆಯ ಶೋಷಣೆಗಳ ವಿರುದ್ಧವಾದ ಮನಸ್ಸು, ಸಮಾನತೆಯುಳ್ಳ ಬದುಕನ್ನು ಪ್ರೀತಿಸುವ ಗುಣ, ಅವರ ಧೋರಣೆಯೆಂದು ಅವರ ಲೇಖನಗಳೇ ಪ್ರಕಟಮಾಡುತ್ತವೆ. 'ಬದಲಾವಣೆ' ಕನ್ನಡ ವೈಚಾರಿಕ ಸಾಹಿತ್ಯಕ್ಕೆ ಒಂದು ಅಮೂಲ್ಯ ಕೊಡುಗೆ ; ಕನ್ನಡಕ್ಕೆ ಭಗವಾನ್ ಒಬ್ಬ ಅಪರೂಪದ ಚಿಂತಕ–ವಿಮರ್ಶಕ.

ಬೆಳಕಿನೆಡೆಗೆ ಒಯ್ಯುವ ಸಂಕಲನ
'ಕಾವ್ಯ ಬಂತು ಬೀದಿಗೆ'

ಧರಣೇಂದ್ರ ಕುರಕುರಿ

ಸಾಹಿತ್ಯ ಸಮಾಜದ ಕನ್ನಡಿಯಷ್ಟೇ ಅಲ್ಲ; ವಿಮರ್ಶೆ ಕೂಡ ಎಂಬ ಮಾತು ಬಹಳ ಹಳೆಯದು. ಆದರೂ ಈಗ ಈ ವಾಕ್ಯವನ್ನು ಉದ್ಧರಿಸುವ ಉದ್ದೇಶ. ಪ್ರಸ್ತುತ ಕಾವ್ಯದ ಬಗ್ಗೆ ಹೇಳ ಹೊರಟಾಗ, ಒಂದು ಕಾವ್ಯ-ಪಂಥ ಗಟ್ಟಿಗೊಳ್ಳಲು ತಡಕಾಡುತ್ತಿರುವಾಗ ಈ ಮಾತು ನೆನಪಿಗೆ ಬರುತ್ತದೆ. ಕಾವ್ಯ ಸಮಾಜದ ಜೊತೆಗೆ ಸಮಾಂತರವಾಗಿ ಹೋಗದೇ ಸುಖ-ದುಃಖ, ನೋವು ನಲಿವುಗಳನ್ನೊಳಗೊಂಡ ಬದುಕಿನೊಡನೆ ಹೊಸೆದುಕೊಂಡು ಹೋಗಬೇಕಾಗುತ್ತದೆ. ಅಂದರೆ ಮಾತ್ರ ಅದು ಜೀವಂತ ಕಾವ್ಯವಾಗಿ ನಿಲ್ಲುತ್ತದೆ, ಇಲ್ಲವಾದಲ್ಲಿ ಸೋತು ಸತ್ತ ಕಾವ್ಯವೆನ್ನಿಸಿಕೊಳ್ಳುತ್ತದೆ. ಏಕೆಂದರೆ ಸಾಮಾಜಿಕ ವ್ಯವಸ್ಥೆ ಸ್ಥಗಿತಗೊಂಡಾಗ, ಕೊಳೆತು, ಹುಳು ಬಿದ್ದು ನಾರುತ್ತಿರುವಾಗ ಎಲ್ಲ ಕಡೆಯಿಂದಲೂ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಈ ಪ್ರತಿಕ್ರಿಯೆ ಪ್ರತಿಭಟನೆಯ ರೂಪದಲ್ಲೂ ವ್ಯಕ್ತವಾಗುತ್ತದೆ. ಪ್ರತಿಭಟನೆ ಸಂಘಟನಾತ್ಮಕವಾಗಿ ಬಂದಾಗ ಅದು ಆಂದೋಲನವಾಗುತ್ತದೆ. ಈ ಆಂದೋಲನಕ್ಕೆ ಪೂರಕವಾಗಿ ಕಾವ್ಯ ತನ್ನ ಕೊರಳನ್ನು ಕೊಡಬೇಕಾದುದು ಅನಿವಾರ್ಯ.

ಆಂದೋಲನಕ್ಕೆ ತನ್ನದೇ ಆದ ಪರಂಪರೆ ಅಥವಾ ಚಾರಿತ್ರಿಕ ಹಿನ್ನೆಲೆ ಇದೆ. ಅದನ್ನು ನಾವು ಬಸವಣ್ಣನವರಿಂದಲೂ ಕಾಣುತ್ತೇವೆ. ಎಷ್ಟೋ ದಿನಗಳಿಂದ ದಬ್ಬಾಳಿಕೆಗೊಳಗಾದ ಜನ ತಮ್ಮ ಅಸ್ತಿತ್ವಕ್ಕಾಗಿ ಹೋರಾಟ ನಡೆಸುವುದೂ ಹಾಗೂ ಶೋಷಣಾ-ವಿಮೋಚನೆಗೆ ಸಂಘಟಿತರಾಗುವುದೂ ಅವಶ್ಯವಾದದ್ದು. ಇಂಥ ಪರಿಸರದ ಪ್ರಜೆಯಾಗಿ ಬದುಕುತ್ತಿರುವ ಕವಿ ಸಾಮಾಜಿಕ ಕಾಳಜಿಗಳೊಂದಿಗೆ ತತ್ಕಾಲೀನ ಆಂದೋಲನಕ್ಕೆ ಕಾವ್ಯದ ಮೂಲಕ ಚಾಲನೆ ಕೊಡುವುದಕ್ಕೆ ಜವಾಬ್ದಾರ ನಾಗುತ್ತಾನೆ.

ಈ ಎಲ್ಲ ಮಾತುಗಳನ್ನು ಹೇಳಿದ ಕಾರಣವೆಂದರೆ ಇತ್ತೀಚಿನ ಕಾವ್ಯ ತುಳಿಯಲ್ಪಟ್ಟವರಿಗಾಗಿ, ಕೆಳಸ್ತರ ಬದುಕಿನ ಬವಣೆಗಾಗಿ ಶ್ರಮಜೀವಿಗಳ ಚಿಂತನೆಯಾಗಿ ಸೃಷ್ಟಿಯಾಗುತ್ತಿದೆ. ಬದುಕು ಮತ್ತು ಬರಹಗಳ ಹುರಿಗಳು ಒಂದಕ್ಕೊಂದು ಹೊಸೆದುಕೊಂಡು ಜನ-ಪರ ನಿಲುವಿಗೆ ಜನ್ಮ ಕೊಡುತ್ತಿವೆ. ನವ್ಯೋತ್ತರ-ಕಾವ್ಯದಲ್ಲಿ ಖಾಸಗಿ ಕಾಳಜಿಗಳ ಸ್ಥಾನದಲ್ಲಿ ಸಾಮಾಜಿಕ ಕಾಳಜಿಗಳು ಮೊಳಕೆಯೊಡೆದದ್ದು ಗಮನಾರ್ಹ. ಅಂತಲೇ ಕಾವ್ಯಕ್ಕೆ ಒಂದು ಆಯಾಮ ಬಂದದ್ದು ಸ್ಪಷ್ಟವಿದೆ. ಸಮಾಜದ ಇಡೀ ವ್ಯವಸ್ಥೆಯೇ ಹದಗೆಟ್ಟು, ಬದುಕು ಬೆಂಕಿಯಾಗಿರುವಾಗ ತಾನು ಅಂತರ್ಮುಖಿಯಾಗುವುದು ಸಾಮಾಜಿಕ ಅಪರಾಧ ಎಂದು ಕವಿ ಎಚ್ಚತ್ತಿದ್ದಾನೆ: ಕಿಡಿಗಳನ್ನು ಕಾರುತ್ತಿದ್ದಾನೆ.

ಬಂಡಾಯ ಕಾವ್ಯದ ನಿಟ್ಟಿನಲ್ಲಿ ನೋಡುವಾಗ ಕಾವ್ಯ ಬೀದಿಗೆ ಬರಬೇಕು ಎಂಬ ಆಶಯವನ್ನು, ಜನ-ಪರ ನಿಲುವನ್ನು ಪ್ರತಿಪಾದಿಸುವ ಕವನ-ಸಂಕಲನಗಳಲ್ಲಿ ರಮಜಾನ ದರ್ಗಾ ಅವರ **'ಕಾವ್ಯ ಬಂತು ಬೀದಿಗೆ'** ಸಂಕಲನವೂ ಪ್ರಮುಖ ವಾದವುಗಳಲ್ಲೊಂದು. ನಿವೇದನೆಯಲ್ಲಿ ದರ್ಗಾ ಹೇಳುತ್ತಾರೆ. "ಬರವಣಿಗೆ ನನ್ನ ಉದ್ಯೋಗವಲ್ಲ, ಉದ್ಯೋಗವೇನೆಂಬುದನ್ನು ತಿಳಿಸುವಂತಹದು..............ನನ್ನ ಆತ್ಮಕ್ಕೆ ಹತ್ತಿದ ಬೆಂಕಿಯನ್ನು ನಿಮ್ಮೆಲ್ಲರ ಆತ್ಮಗಳಿಗೆ ಹಚ್ಚುವುದಕ್ಕಾಗಿ ಬರೆಯುತ್ತಿದ್ದೇನೆ.......ಏಕೆಂದರೆ ಭವಿಷ್ಯದ ವಾರಸುದಾರರು ನನ್ನ ಕಾವ್ಯಕ್ಕೆ ಸ್ಫೂರ್ತಿಯನ್ನಿತ್ತಿದ್ದಾರೆ". ಹೀಗೆ ದರ್ಗಾ ಅವರು ಒಬ್ಬ ಮಾರ್ಕ್ಸವಾದಿಯಾಗಿ, ಮಾನವೀಯ ಮೌಲ್ಯಗಳ ಪ್ರತಿನಿಧಿಯಾಗಿ ಬೀದಿಗಿಳಿಯುತ್ತಾರೆ. ಇವರ ಕಾವ್ಯ ಹುಟ್ಟುವುದು ರಂಗು-ರಂಗಿನ ಬದುಕಿನಲ್ಲಲ್ಲ; ಬೀದಿಯಲ್ಲಿ ಬೆವರು ಹರಿಸುತ್ತ ಬೇಯುತ್ತಿರುವ ಜನರ ನೋವಿನಲ್ಲಿ.

'ಬೀದಿಗೆ ಬಂತು ಕಾವ್ಯ' ಸಂಕಲನದ ಪ್ರಥಮ ಕವಿತೆ 'ಪ್ರಣಾಳಿಕೆ'ಯಲ್ಲಿ ಪ್ರಸ್ತುತ ವ್ಯವಸ್ಥೆಯ ಪರಿಸ್ಥಿತಿಯನ್ನು ಪರಿಚಯಿಸುವುದರ ಜೊತೆಗೆ ಪರ್ಯಾಯ ವನ್ನೂ ಕವಿ ಸೂಚಿಸುತ್ತಾರೆ.

ನಾವು ದುಡಿಯುಂವ ಜನ
ನಮ್ಮ ಅಧಿಕಾರ ಬಂದಾಗ:

ಪೋಲೀಸರನ್ನು, ನ್ಯಾಯಾಧೀಶರನ್ನು
ಮನುಷ್ಯರನ್ನಾಗಿ ಮಾಡುತ್ತೇವೆ.

ಎಂದು ಹೇಳುತ್ತ ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಬದಲಿಸುವ ಬಯಕೆಯನ್ನು ವ್ಯಕ್ತಗೊಳಿಸುತ್ತಾರೆ. ಕ್ರಾಂತಿಯ ಸಂಕೇತಗಳಲ್ಲಿಯೂ ಶಾಂತಿಯ ನೆಲೆಗಾಗಿ ಕವಿ ಸನ್ನದ್ಧನಾಗುತ್ತಾನೆ. ಉದಾಹರಣೆಗಾಗಿ–

ಬಂದೂಕಿನ ಬಾಯಿಯಲ್ಲಿ
ಗುಬ್ಬಿ ಗೂಡು ಕಟ್ಟುತ್ತದೆ.
'ಕೆಂಪುದೀಪ'ದ ಕೆಳಗೆ
ಉದ್ಯಾನಗಳೇಳುತ್ತವೆ. (ಪ್ರಣಾಳಿಕೆ)

ಸಮಷ್ಟಿ ಮನೋಭಾವದಲ್ಲಿ ನೋಡುವುದಾದರೆ 'ಪ್ರಣಾಳಿಕೆ' ಜನ-ಪರ ನಿಲುವಿನ ಸಾರ್ಥಕ ಕವಿತೆಗಳಲ್ಲೊಂದು.

ಇಲ್ಲಿ ಕವಿ ತನ್ನ ಸುತ್ತು ಮುತ್ತಲಿನ ಜಿಡ್ಡುಗಟ್ಟಿದ ಸಮಾಜಕ್ಕಷ್ಟೇ ಸ್ಪಂದಿಸದೇ ಜಾಗತಿಕ ಸಮಸ್ತ ತುಳಿಯಲ್ಪಟ್ಟ ಮಂದಿಯ ದನಿಯಾಗಿ ನಿಲ್ಲುವುದು ಮಹತ್ತರವೆನಿಸುತ್ತದೆ. 'ಪ್ಯಾಲೆಸ್ತಾನ ಅಪಹರಿಸಲ್ಪಟ್ಟಿದೆ' ಕವನದಲ್ಲಿ ಅಮೆರಿಕನ್ನ ಸಾಮ್ರಾಜ್ಯ ಶಾಹಿಯು ಪ್ಯಾಲೆಸ್ತಾನ್ ದೇಶವನ್ನು ನುಂಗಿ ನೀರು ಕುಡಿದ ಜ್ವಲಂತ ಸಮಸ್ಯೆಗಳ ಸುಳಿಯಲ್ಲಿ ನಿಂತು ಪ್ಯಾಲೆಸ್ತಾನಿನ ಅಸ್ತಿತ್ವಕ್ಕಾಗಿ ಅಮೆರಿಕೆಗೆ ಎಚ್ಚರಿಕೆ ಕೊಡುತ್ತಾರೆ.

ಹೇಳಿ
ಜ್ಯೂಗಳೊಡೆಯರೇ ಹೇಳಿ!
ಎಲ್ಲಿ ಮಾಯವಾಯಿತದು?
ನಿಮ್ಮ ಚಿಕ್ಕ ಚುಕ್ಕೆಗಳೂ ಕಾಣುತ್ತಿರುವಾಗ
ಆ ತುಕಡಿ ಎಲ್ಲಿ?
ಹೇಳಿ! ಹೇಳಿ!
ಹೇಳದಿದ್ದರೆ ಇಡೀ ಪೃಥ್ವಿಗೆ
ಪ್ಯಾಲೆಸ್ತಾನ್ ಎಂದು ಕರೆಯುವೆ!

ಎನ್ನುವಲ್ಲಿ ಕವಿ ವಿಶ್ವಮಾನವ–ಮೌಲ್ಯಗಳನ್ನೂ ಪ್ರತಿಪಾದಿಸುತ್ತಾರೆ.

ಅಂದು :
ಭಲ್ಲೆ ಬರ್ಚಿಗಳಿಂದ
ಕೊಲ್ಲುತ್ತಿದ್ದ ಅವರು
ಇಂದು :
ಬರಿ ಅಣುವಿನಿಂದ
ಅಸು ನೀಗಿಸುತ್ತಾರೆ.

'ಯುದ್ಧ ಬೀರುಗಳು' ಪದ್ಯದ ಈ ಸಾಲುಗಳು ಶತ ಶತಮಾನಗಳಿಂದಲೂ ಬೆಳೆಯುತ್ತಲೇ ಇರುವ ಯುದ್ಧ, ಕೊಲೆ, ಸುಲಿಗೆಗಳನ್ನು ಪ್ರತಿಬಿಂಬಿಸುತ್ತವೆ. ಅಲ್ಲದೇ ಅತಿ ಸಣ್ಣ ಪ್ರಮಾಣದ ಬಂಡವಾಳ ಶಾಹಿಗಳೂ ಇಡೀ ಜನರ ದುಡಿಮೆಯ ಆದಾಯದಲ್ಲಿ ಖುಷಿ ಪಡುವ ಕುತನೀ ಅರಿಬೆಯ ಸಂಸ್ಕೃತಿಯ ವಿಕೃತ ಚಿತ್ರಣವನ್ನೂ ಈ ಕವಿತೆ ಮೂಡಿಸುತ್ತದೆ.

ಕವಿಯ ಅಸಹಾಯಕತೆಯನ್ನು ಸೂಚಿಸುವ ಕವನ **'ಅಳಲು'** ಇಲ್ಲಿ ವಿಕೃತ ಸನ್ನಿವೇಶಗಳಿದ್ದರೂ ಬೇಜವಾಬ್ದಾರಿತನದ ಕವಲುಗಳ ಪರಿಚಯವಿದೆ.

ಗಂಡ :
ಯುದ್ಧಕ್ಕೆ ಹೋದವ
ಮರಳಿ ಬರಲಿಲ್ಲ

ಎಂದು ಹೇಳುತ್ತ

ಮಗಳು :
ಉಳ್ಳಾಗಡ್ಡಿ ಓಣಿಯಲ್ಲಿ
ಪರಿ ಬಿಚ್ಚುತ್ತಾಳೆ

ಎನ್ನುವುದು ಮನಸ್ಸಿನ ಒತ್ತಡಗಳನ್ನು ತೀವ್ರಗೊಳಿಸುತ್ತದೋ ಎನಿಸುತ್ತದೆ. ಒಂದು ನಿರಂತರ ಹೋರಾಟ ಅಥವಾ ಯುದ್ಧದ ಪ್ರಸಂಗಗಳಲ್ಲಿ ಬೇಜವಾಬ್ದಾರಿಯಾಗಿಯೋ ಅಥವಾ ವ್ಯವಸ್ಥೆಯ ಒತ್ತಡಕ್ಕೋ ಮಗಳು ತನ್ನಷ್ಟಕ್ಕೆ ತಾನೇ ಶೋಷಿಸಿಕೊಳ್ಳುವುದು ಈ ಅಂಗವಿಕಲ ಸಮಾಜದ ಒಂದು ದುರಂತ.

ಅಲ್ಲಲ್ಲಿ,
ಜನಜಂಗುಳಿಯಲ್ಲಿ,
....
....
ಕಪ್ಪು ಬುರ್ಖಾಗಳು–ಪ್ರತಿಭಟನೆಯಿಲ್ಲ.
ಕೆಂಪು ಬುರ್ಖಾಗಳು–ಕ್ರಾಂತಿಯಿಲ್ಲ.
ಹಸರು ಬುರ್ಖಾಗಳು ದಾರಿ ಸುಗಮವಿಲ್ಲ.
ಹೀಗೇ ಹೀಗೇ ಸಾಗುತ್ತಲೇ ಇವೆ
ಬೇಸರವಿಲ್ಲದೆ–ಬೇಸರ ತೋರಿಸದೆ
ನೋವಿನಲ್ಲೂ ನಗುತ್ತ–ಅದಕ್ಕೇ ಹೊಂದಿಕೊಳ್ಳುತ್ತ.

'ಬುರ್ಖಾಗಳು' ಕವನದ ಈ ಎಲ್ಲ ಸಾಲುಗಳು ಸಿಡಿದ ಕಿಡಿಗಳು ಎನಿಸದೇ ಇರಲಾರವು. ಯಾಕೆಂದರೆ ಸ್ವತಃ ಅಲ್ಪ-ಸಂಖ್ಯಾತರಾದ ದರ್ಗಾ ತನ್ನ ವರ್ಗ ಇಡೀ ಸಮಾಜದಿಂದ ಪ್ರತ್ಯೇಕವಾಗಿರುವ ಕಪ್ಪು ಛಾಯೆಯನ್ನು, ಅವಮಾನಿತತೆಯನ್ನು ಅಭಿವ್ಯಕ್ತಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮುಸ್ಲಿಮ ಮಹಿಳೆಯರು ಶೋಷಣೆಗೊಳ

ಪಟ್ಟದ್ದನ್ನು ಅಲ್ಲಿಯ ಬುರ್ಖಾಗಳ ಸಂಕೇತದ ಮುಖಾಂತರ ಹೇಳಿದ್ದು ಗಮನಾರ್ಹ. ತನ್ನ ವರ್ಗದ, ಜನಾಂಗದ ಸಂಕಟಗಳನ್ನು, ಮೌಢ್ಯವನ್ನು ಸಮೀಪದಿಂದ ಕಂಡುಂಡ ದರ್ಗಾ ಅವರ ಭಾವನೆಗಳ ಕಸುವು ಸ್ವಾಭಾವಿಕವಾದದ್ದು.

ಗಂಭೀರ ಚಿಂತನೆಯು ಕವಿ ಆಡು-ಮಾತಿನ ಧಾಟಿಯಲ್ಲಿ ವಿಡಂಬಿಸುತ್ತ, ಜನ ವಿರೋಧಿ ನಿಲುವುಗಳನ್ನು ಗೇಲಿ ಮಾಡುತ್ತ, ತನ್ನ ಮತ್ತೊಂದು ಮುಖವನ್ನು ತೋರಿಸುವ ಕವಿತೆ **'ಮೇಡಂ ನೀವೇ ಹೇಳಿ'** ಇಲ್ಲಿ ಕವಿ ಪ್ರಶ್ನೆಗಳ ಸುರಿಮಳೆಯಲ್ಲಿ ಕುಬ್ಜ ವ್ಯವಸ್ಥೆಯ ಕನಸಿನ ಲೋಕಕ್ಕೆ ಲಗ್ಗೆ ಇಡುತ್ತ ತಮ್ಮನ್ನು ತಾವೇ ವಿಮರ್ಶಿಸಿ ಕೊಳ್ಳುವ ಸಾಧ್ಯತೆಗಳಿವೆ.

ಹಲೋ ಮೇಡಂ ಚೆನ್ನಾಗಿದ್ದೀರಾ ?
ನಿಮ್ಮ ನಾಯಿ ಬ್ರೆಡ್ಡು ತಿನ್ನುತ್ತದೆಯೆ ?

....

ಹೀಗೇ ವಿಚಾರಿಸುತ್ತಲೇ

ಛೆ !
ಹಾಗೇನೂ ತಪ್ಪು ತಿಳಿಯಬೇಡಿ
ಇದು ಪ್ರಶ್ನೆಗಳ ಸುರಿಮಳೆ ಅಲ್ಲ
'ಶುದ್ಧ ಕವನ'
ಯಾವ ರಾಜಕೀಯಕ್ಕೂ ಸಂಬಂಧಿಸಿದುದಲ್ಲ

ಎಂದು ಮಾತಿನ ಮಳೆಗರೆಯುತ್ತಲೇ ಶ್ರಮಿಕ ವರ್ಗಗಳ ಪರಿಚಯ ಮಾಡುತ್ತ ರಾಜಕೀಯ-ಪ್ರಜ್ಞೆ, ವರ್ಗ-ಪ್ರಜ್ಞೆಗಳ ಮಗ್ಗಲುಗಳನ್ನು ಜಾಗರೂಕವಾಗಿಯೇ ತೆರೆಯುತ್ತಾರೆ. ಕವನದ ಕೊನೆಗೆ ತಮ್ಮ ಅಸಹಾಯಕತೆಯನ್ನೂ ಒಪ್ಪಿಕೊಳುತ್ತಾರೆ.

ಈ ಸಂಕಲಸದಲ್ಲಿ ಒಟ್ಟು 31 ಕವಿತೆಗಳಿವೆ. ಇಡೀ ಸಂಕಲನದಲ್ಲಿ ಸಾಮ್ರಾಜ್ಯ ಶಾಹಿಯ ವಿರುದ್ಧ ಸಿಡಿದೇಳುವ ಧೋರಣೆಯ ಧ್ವನಿ ಸ್ಪಷ್ಟವಾಗಿದೆ. ಕಾವ್ಯ ಹಾಡುಗಬ್ಬವಾಗಬೇಕೆಂಬುದು ಇಂದಿನ ಬಂಡಾಯ ಕವಿಗಳ ಒಂದು ನಿಲುವಾಗಿದ್ದರೂ ಈ ಸಂಕಲನದ ಯಾವ ಕವಿತೆಯೂ ಹಾಡುಗಬ್ಬವಲ್ಲ. ಆದರೂ ಈ ಕವಿತೆಗಳು ನೇರವಾಗಿ ಜನರ ಮನಸ್ಸನ್ನು ತಟ್ಟುತ್ತವೆ. ಅದಕ್ಕೆ ಕಾರಣ ಸರಳವಾದ ಶೈಲಿ ಮತ್ತು ಭಾಷೆ. ಬಂಡಾಯ ಸಾಹಿತ್ಯ ಸಂಘಟನೆಯ ಹುಮ್ಮಸ್ಸಿನಲ್ಲಿ ಯಾರು ಬೇಕಾದರೂ ಕಾವ್ಯ ರಚನೆ ಮಾಡಬಹುದು ಎಂಬ ಭಾವನೆ ಬಂದು ಕಾವ್ಯ ತನ್ನ ಕಲಾತ್ಮಕತೆಯನ್ನು ಕಳೆದುಕೊಂಡು ಘೋಷಣೆಯಾದದ್ದೇ ಹೆಚ್ಚು. ಆದರೆ ರಮಜಾನ ದರ್ಗಾ ಅವರು ಘೋಷಣೆಯನ್ನೇ ಕಾವ್ಯವಾಗಿಸುವುದರಿಂದ ಎಂಥವರನ್ನೂ ತಮ್ಮ ಪ್ರಭಾವದ ಕೊಕ್ಕೆಯಲ್ಲಿ ಸಿಕ್ಕಿಸಿಕೊಳ್ಳುತ್ತಾರೆ.

ಇನ್ನೊಂದು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ–ಪ್ರಥಮ ಕವಿತೆ **'ಪ್ರಣಾಳಿಕೆ'ಯಲ್ಲಿ ಭೂಗೋಳದ ತುಂಬೆಲ್ಲ ಶಾಂತಿಯ ಬೀಜ ಬಿತ್ತುತ್ತೇನೆ.**

ಎಂದು ಮಾನವೀಯ ಮೌಲ್ಯಗಳನ್ನು ಸ್ಥಾಪಿಸುವ ಆದರ್ಶವಾದಕ್ಕೆ ತೆಕ್ಕೆ ಹಾಯುವ ಕವಿ ಅದು ದಕ್ಕದೇ ಬರ ಬರುತ್ತ ತನ್ನ ದನಿಗೆ ಕ್ಯಾನ್ಸರ ಆಗಿ ಕೊನೆಗೆ 'ಮೇಡಂ ನೀವೇ ಹೇಳಿ ?' ಕವನದಲ್ಲಿ ವಾಸ್ತವಿಕ ಭೂಮಿಯ ಮೇಲೆ ಕಾಲಿಡುತ್ತಾನೆ; ಗೊಂದಲ ಕ್ಕೊಳಗಾಗುತ್ತಾನೆ.

ಅಂತೆಯೆ
ಆ ದಿನಗಳು 'ಶುದ್ಧ ಕವನ'ದ ಸುಗ್ಗಿಯ ದಿನಗಳು
ಹಾಗಾದರೆ ನೀವೇ ಹೇಳಿ ಮೇಡಂ
ನಾನೇನು ಮಾಡಲಿ ?

ಎಂಬ ಸಾಲುಗಳು ಮೇಲಿನ ಮಾತಿಗೆ ಸಾಕ್ಷಿ.

ಈ ಸಂಕಲನದಲ್ಲಿ ಉಲ್ಲೇಖಿಸಬಹುದಾದ ಇವರ ಕವನಗಳೆಂದರೆ ಯುವಗೀತ, ನನಗೆ ಗಾಂಧಿಯಾಗುವ ಇಚ್ಛೆ, ಏ ದೆಹಲಿ, ವಿಪ್ಲವಿ, ಸಾವೇ. ಮತ್ತು ನನ್ನ...... ಮುಂತಾದವುಗಳು 'ಬದುಕು ಬೆಂಕಿಯಾಗಿರಬಹುದು ಕಾವ್ಯ ಬೆಳಕಾಗಬೇಕಾಗುತ್ತದೆ' ಎಂಬ ಹಾ. ಮಾ. ನಾಯಕರ ಮಾತನ್ನು ನೆನಪಿನಲ್ಲಿಟ್ಟುಕೊಂಡು ದರ್ಗಾ ಅವರು ತಮ್ಮ ಆತ್ಮಕ್ಕೆ ಹತ್ತಿರುವ ಬೆಂಕಿಯನ್ನು ಬೆಳಕಿನೆಡೆಗೆ ಒಯ್ಯುವ ಕಾವ್ಯವನ್ನಾಗಿಸುವ ರೆಂದು ನಿರೀಕ್ಷಿಸಬಹುದು.

ಸಮೃದ್ಧ ಜೀವಂತಿಕೆಯ ಬರವಣಿಗೆ : 'ಅಮೃತ ಮತ್ತು ಗರುಡ'

ಮಹೇಂದ್ರ

ವ್ಯಕ್ತಿ ಸತ್ತ್ವಕ್ಕೆ ಒತ್ತುಕೊಟ್ಟು ಬರೆದಿರುವ ಮೊದಲ ಹಂತದ ಕೆಲವು ಕಂತಿನ ಬಿಡಿಭಾಗಗಳು ಡಾ॥ ಡಿ. ಆರ್. ನಾಗರಾಜ್‌ರ 'ಅಮೃತ ಮತ್ತು ಗರುಡ'ವೆಂಬ ವಿಮರ್ಶಾ ಲೇಖನಗಳ ಸಂಕಲನ. ಡಿ.ಆರ್.ಎನ್. ಬಹಳ ಸೀರಿಯಸ್ಸಾಗಿ ಬರೆಯುತ್ತಾ ಹೋಗಿದ್ದಾರೇಂತ ಅನ್ನಿಸಿದರೂ ಹುಡುಗಾಟ, ಪುಡುಕಾಟಗಳ ಮೈತ್ರಿಕೂಟವೂ ಇಲ್ಲಿ ಜಾಗ ಗಿಟ್ಟಿಸಿಕೊಂಡಿದೆ. ಜಿ ಎಚ್. ನಾಯಕ್, ಪಿ. ಲಂಕೇಶ್, ಯು. ಆರ್. ಅನಂತಮೂರ್ತಿ, ಗಿರಡ್ಡಿ ಗೋವಿಂದರಾಜ, (ಕೊಂಚವಾಗಿ) ನರಹಳ್ಳಿ ಬಾಲಸುಬ್ರಹ್ಮಣ್ಯರ ವಿಮರ್ಶೆಗಳನ್ನು ಪರಿಶೀಲಿಸಿದ್ದರೆ ನಮಗೆ 'ಅಮೃತ ಮತ್ತು ಗರುಡ' ಹೆಚ್ಚು ಹೆಚ್ಚು ಸನಿಹವಾಗುತ್ತದೆ. ಇಲ್ಲದಿದ್ದರೆ ಇಲ್ಲ. ಆಗ ಇಲ್ಲಿನ ಒಟ್ಟು ಕೃತಿಯಸಮುಚ್ಚಯಕ್ಕೆ ಹೇಳಬಹುದಾದ ಒಂದು ಮಾತು: ಸಮೃದ್ಧ ಜೀವಂತಿಕೆಯ ಯವ್ವನದ ಬರವಣಿಗೆ (ಅಪರೂಪದ ಕೊಡುಗೆ ಕೂಡ)ಯನ್ನು ಇಲ್ಲಿ ನಾವು ಬರಮಾಡಿಕೊಳ್ಳುವುದೇ ಆಗಿದೆ.

ಕುವೆಂಪು, ಕಾರಂತ, ಮಾಸ್ತಿ ಇತ್ಯಾದಿ ಎಂದು ಆರಂಭ ಮಾಡುವಾಗಲೇ ವಿಮರ್ಶೆಗೆ ಕಾವು ಬರುತ್ತದೆ.

ಅವರು ಚಿಲ್ಲರೆ ಲೇಖಕರಲ್ಲ. ವಿಶ್ವವಿದ್ಯಾಲಯಗಳ ಡಾಕ್ಟರೇಟ್ ಪಡೆದವರು, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳ ಗೌರವ ಪಡೆದವರು, ಮಾಸ್ತಿಯನ್ನು ಬಿಟ್ಟರೆ ಉಳಿದವರು ಪದ್ಮಭೂಷಣಕ್ಕೆ ಅರ್ಹರಾದವರು. ಮೂರು ಜನವೂ ಜ್ಞಾನ ಪೀಠ ಪ್ರಶಸ್ತಿ ಪಡೆದವರು. ಇಂಗ್ಲಿಷ್ ಮತ್ತು ಭಾರತೀಯ ಭಾಷೆಗಳ ಸಂಪರ್ಕಕ್ಕೆ ಇವರ ಕೆಲವು ಕೃತಿಗಳು ಅನುವಾದವೂ ಆಗಿವೆ. ಸಾರ್ವಜನಿಕರಲ್ಲಿ ಪ್ರೀತಿ, ವಿಶ್ವಾಸ ವನ್ನು ಸಂಪಾದಿಸಿರುವುದಕ್ಕೆ ಇವರಿಗೆ ಅರ್ಪಿಸಲಾಗಿರುವ ಅನೇಗಾತ್ರದ ಸಂಭಾವನಾ ಗ್ರಂಥಗಳೂ ಸಾಕ್ಷಿ ಹೇಳುತ್ತವೆ. ಇಂಥವರ ಬಗ್ಗೆ ಡಿ.ಆರ್.ಎನ್. ದೃಷ್ಟಿ ಏನೇನು ನೋಡೋಣ.

ಕುವೆಂಪು ಕೃತಿಗಳಲ್ಲಿ ವರ್ಣ–ವರ್ಗ ಸಂಘರ್ಷವನ್ನು ಲೇಖಕರು ಕುವೆಂಪು ಬಗೆಗೆ ಭಜನೆ ಮಾಡದೆ ಹೊಸ ವಿಚಾರಗಳನ್ನು ನಮ್ಮ ಮುಂದೆ ಮಂಡಿಸುತ್ತಾರೆ. ಬಹುಶಃ ನನ್ನ ಮಿತ ತಿಳಿವಳಿಕೆ ಇರಬಹುದು. ಕುವೆಂಪು ಕೃತಿಗಳನ್ನು ಸಾಹಿತ್ಯೇತರ ಕಾರಣಗಳಿಂದ ವಿಮರ್ಶಿಸುವ ಕಲೆಗಾರಿಕೆ ನಮ್ಮಲ್ಲಿ ಬೆರಳೆಣಿಕೆ. ಅದರಲ್ಲಿ ಈ ಲೇಖನವೂ ಒಂದು. ಭಾರತದ ಭೌಗೋಳಿಕ ವ್ಯಾಪ್ತಿಯ ಸ್ಥಿತಿ, ಕುವೆಂಪು ಬದುಕಿಗೆ ಅಂಟಿದ್ದ ರಾಷ್ಟ್ರೀಯ ಆಂದೋಲನದ ಲಹರಿಗಳು, ಬ್ರಾಹ್ಮಣಶಾಹಿ ಸ್ಥಿತಿಗಳು, ಬ್ರಾಹ್ಮಣೇತರ ಜಾತಿಗಳ ಚಳುವಳಿ, ವರ್ಣವ್ಯವಸ್ಥೆಯಲ್ಲಿನ ದ್ವಂದ್ವ ಅತಿರೇಕದ ಅಪಾಯಗಳ ಮಿಲನದಲ್ಲಿ ಕುವೆಂಪು ಒದ್ದಾಡುವ ರೀತಿ, ರಷ್ಯಾದ ಸಮಾಜವಾದಿತ್ವಕ್ಕೆ ಕೆ.ವಿ. ಪುಟ್ಟಪ್ಪನವರ ಒಲವು ಇತ್ಯಾದಿಯನ್ನು ಜವಾಬ್ದಾರಿಯಿಂದ ಡಿ.ಆರ್.ಎನ್. ಉಡಾಫೆಗೆ ಸಿಕ್ಕದೆ ಹೇಳಿದ್ದಾರೆ. ಆದರೆ ಕುವೆಂಪುರವರ ಎಲ್ಲ ಕೃತಿಗಳ ಅಂತರ್ಯವನ್ನು ಈ ಲೇಖನ ಸ್ಪರ್ಶಿಸುವುದಿಲ್ಲ. ಅದರ ಗುರಿಯೂ ಇದಕ್ಕಿಲ್ಲ. ಒಪ್ಪಬಹುದು. ಇನ್ನೊಂದು ಅಂಶ ಎದ್ದು ಕಾಣುತ್ತದೆ (ಅದು ಕೊರತೆ ಕೂಡ). ಕುವೆಂಪು ಬದುಕು–ಬರಹದ ಸೋಲಿಲ್ಲದ ಗೆಲುವಿನ ಹಿನ್ನೆಲೆಯ ವರ್ತುಲ ಪ್ರಕೃತಿಯೂ ಕಾರಣ. ವರ್ಣ-ವರ್ಗದ ಭಿನ್ನತೆ ಒಡೆದು ಕಾಣುವುದು ಮತ್ತು ನಮ್ಮನ್ನು ಹಿಂಸಿಸುವುದು ಸಿದ್ಧಾಂತ ಗಳ, ಓಲೆಗರಿಗಳ, ಅಪಾರ ಓದಿನ ಜ್ಞಾನದಲ್ಲಿ ಅಲ್ಲ. ಅದು ನೆಲದಲ್ಲಿ, ಮಳೆಯಲ್ಲಿ, ಹಗಲಿನಲ್ಲಿ, ಸುಡುವ ಬಿಸಿಲಿನಲ್ಲಿ ಕೂಡ (ಇದೂ ಸಾಹಿತ್ಯೇತರ ಕಾರಣವಾಗುವ ಸಾಧ್ಯತೆ ಇದೆ).

ಶಿವರಾಮ ಕಾರಂತರ ಬಗ್ಗೆ ವಿಮರ್ಶಿಸಿರುವ ಲೇಖನ ಹಳ್ಳ–ದಿಣ್ಣೆಗಳಿಂದ ಸುತ್ತುವರಿದಿದೆ. ಕಾದಂಬರಿ ಪ್ರಪಂಚದಲ್ಲಿ ಅವರಿಗಿರುವ ಮುಖ್ಯಸ್ಥಾನ, ಅವರು ಎಲ್ಲರಿಗಿಂತ ಹೇಗೆ ಭಿನ್ನ, ಮುಂದಿನ ಅವರ ಸೃಜನಕ್ರಿಯೆ ಇಳಿಜಾರಾದದ್ದರ ಬಗ್ಗೆ ಲೇಖಕರು ಜಾಣ್ಮೆಯಿಂದ ವಿವರಿಸಿ, ಇಂಡಿಯಾದ ಸ್ವರೂಪ ಚಿತ್ರಣದ ಅಂಚನ್ನು ನೇಯ್ದಿದ್ದಾರೆ. ಇಲ್ಲಿನ ಮಹಾ ಗೈರುಹಾಜರಿ ಎಂದರೆ (ವಿಮರ್ಶಕರದು) ಒಬ್ಬ ಓದುಗ ಸಂಪೂರ್ಣ ಸೆರೆಹಿಡಿಯಲಾಗದಷ್ಟರ ಎತ್ತರಕ್ಕೆ ಕಾರಂತರು ದಾಟಿರುವ ಸ್ಥಿತಿ ಯನ್ನು ವಿಸ್ಮಯದಿಂದ ಕಾಣದಿರುವುದೇ ಆಗಿದೆ.

ಮಾಸ್ತಿಯವರ ತಾತ್ವಿಕ ನಿಲುವುಗಳು ಡಿ.ಆರ್.ಎನ್.ರವರ ಪ್ರತಿಭಾ ವಿಮರ್ಶೆಗೆ ಉತ್ತಮ ಉದಾಹರಣೆಯಾಗುವ ನಾಣ್ಯವೆನ್ನಬಹುದು–ಮಾಸ್ತಿ ಸೃಷ್ಟಿಸಿದ ಸಾಹಿತ್ಯ ವಿಪುಲತೆಗೆ ಸಮರ್ಪಕ ತಳಹದಿಯನ್ನು ಈ ಲೇಖನ ತೆರೆದು ತೋರಿಸುತ್ತದೆ. ಕಥೆಗಳನ್ನು ಎಳೆದು ನೋಡಬೇಕಾದ ಸೂಕ್ಷ್ಮ ಮಿದುಳಿನ ಕಾರ್ಯವನ್ನು ಚತುರತೆಯಿಂದ ವೃದ್ಧಿಗೊಳಿಸಿಕೊಳ್ಳಲು ಈ ವಿಮರ್ಶೆ ಕರೆ ನೀಡುತ್ತದೆ. ವಿಮರ್ಶಕನಿಗೆ ಅತ್ಯಗತ್ಯವಾದ ಅಧಿಕಾರವನ್ನೂ ಕೆಳಗಿನ ಮಾತುಗಳಿಂದ ನಾವು ಪಡೆದುಕೊಳ್ಳಬಹುದಾಗಿದೆ: ತಾತ್ವಿಕತೆ (ಮಾಸ್ತಿಯವರ) ಎಂಥದ್ದು ಎಂಬುದು. ಇದಕ್ಕೆ ನನಗೆ ಸಿಕ್ಕ ಉತ್ತರ ಒಬ್ಬ ಸಂಪ್ರದಾಯವಾದಿಯದು ಎಂದು (ಪು. 78), ವಿಜ್ಞಾನ ಮತ್ತು ಧರ್ಮ, ಪರಂಪರೆ ಮತ್ತು ಆಧುನಿಕತೆ– ಈ ಶಕ್ತಿಗಳ ನಡುವೆ ಅಂಥ ದ್ವೈತ್ಯ ಘರ್ಷಣೆಯೇನೂ ನಡೆಯಲಿಲ್ಲ.......... ಅನಿವಾರ್ಯವಾಗಿ ಘರ್ಷಿಸಲೇಬೇಕಿದ್ದ ವೈರುದ್ಧ್ಯಗಳು ಘಟ್ಟಿಸದೆ ಹಾಗೇ ಜಾರಿಕೊಂಡ "ಸಂಘರ್ಷ ಹೀನ ಸಂಸ್ಕೃತಿಯ" ಸೃಷ್ಟಿ ಮಾಸ್ತಿಯವರ ಕಥನ ಸಾಹಿತ್ಯ (ಪು. 76).

'ಆಧುನಿಕ ಕನ್ನಡ ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ'ದಲ್ಲಿ ಡಿ.ಆರ್.ಎನ್. ಹೊಸದನ್ನು ಹೇಳಿದ್ದಾರೆ ಎಂದು ಕುತೂಹಲ ತಾಳಿದರೆ ಅದು ಟುಸ್ಸೆಂದು ಬಿಡುತ್ತದೆ. ನವೋದಯ, ಪ್ರಗತಿಶೀಲತೆ, ನವ್ಯ ಹೀಗೆ ವಿಭಜಿಸಿಕೊಂಡು ತಮ್ಮ ದೃಷ್ಟಿಯನ್ನು ಹರಿಯ ಬಿಡುತ್ತಾರೆ. ಮಾಸ್ತಿಯವರ ಕತೆ, ಕುವೆಂಪು, ಪು.ತಿ.ನ.ರ ಕವನಗಳ ತಿರುಳನ್ನು ಕೊಟ್ಟು, ಅದರ ಬೆನ್ನೆಲುಬಿನ ಟೊಳ್ಳನ್ನು ವಿಮರ್ಶೆಯ ಸುತ್ತಿಗೆಯಲ್ಲಿ ಟಣ್ ಟಣ್ ಶಬ್ದದಿಂದ ತೋರಿಸಿದ್ದಾರೆ. ಆದರೆ 'ಚೋಮನದುಡಿ' ಬಗ್ಗೆ ವಿಮರ್ಶೆ ಸ್ವಲ್ಪ ಅಸ್ವಸ್ಥವಾಗುತ್ತದೆ. ಚೋಮನ ದುರಂತಕ್ಕೆ ಕಾರಣ ಆತ ಬದುಕುವ ವ್ಯವಸ್ಥೆಯ ರಚನೆಯಲ್ಲಿಯೇ ಇದೆ ಎಂಬ ಅರಿವು. ಈ ಕೃತಿಯಲ್ಲೆಲ್ಲೂ ವ್ಯಕ್ತವಾಗುವುದಿಲ್ಲ (ಪು. 40-41) ಅನ್ನುವರು. ಸ್ವಲ್ಪ ಒಂದು ಪ್ಯಾರಾ ಹಿಂದೆ ಅ. ಮತ್ತು ಆ.ದಲ್ಲಿ ಚೋಮ ಕುಡುಕ. ಅವನ ಮಕ್ಕಳು, ಒಡೆಯ–ಇದರ ಬಗ್ಗೆ ಹೇಳುತ್ತಾರೆ. ಹಾಗಾದರೆ ರೋಮ್ಯಾಂಟಿಕ್ ಆಗಿ ಎಲ್ಲಿ ಕೃತಿ ರಚಿತವಾಗಿದೆ? ಚೋಮನ ದುರಂತಕ್ಕೆ ಕಾರಣವನ್ನೂ ಕೊಟ್ಟು, ಅರಿವೂ ಕಾದಂಬರಿಯಲ್ಲಿಲ್ಲವೆಂದರೆ ವಿರೋಧ–ಆಭಾಸ ಅಲ್ಲವೆ? ಆದರೆ ಕೊನೆ ಕೊನೆಯ ಮಾತುಗಳು ಎಲ್ಲರಿಗೂ ಬೇಕಾಗುತ್ತೆ. ಡಿ.ಆರ್.ಎನ್.ಗೆ ವಿಪರೀತ ಜಬಾಬ್ದಾರಿಯ (ಬರಹದಲ್ಲಿ) ಒತ್ತಡ ಇದೆ ಅಂತ ಹೇಳಲು ಪುರಾವೆ : ಒಂದು ಜನಾಂಗದ ಅತ್ಯುತ್ತಮ ಲೇಖಕರಾದ ಕುವೆಂಪು, ಬೇಂದ್ರೆ, ತೇಜಸ್ವಿ, ಲಂಕೇಶ, ದೇವನೂರು ಮುಂತಾದವರಿಗೂ ಅಕ್ಷರಸ್ಥರಿಗೂ ಸಂವಾದ ಇಲ್ಲದೇ ಇರುವುದು ಒಂದು ಕರಾಳ ಸಾಂಸ್ಕೃತಿಕ ವೈಷಮ್ಯ (ಪು. 48).

ಜಾನಪದ ರಂಗ ಪರಂಪರೆ ಮತ್ತು ಬಯಲಾಟ ಅಲ್ಲದೆ ಜಾನಪದವನ್ನು ಕುರಿತು ಬರೆದಿರುವುವು ನನಗೆ ಹಿಡಿಸುವುದು ಬಹಳ ಕಷ್ಟವಾಗುತ್ತದೆ. ಆ ಕ್ಷೇತ್ರದ ಒಲವುಗಳಲ್ಲಿ ಶ್ರಮ ನನ್ನದು ಸೊನ್ನೆ. ಕನ್ನಡ ಜಾನಪದಕ್ಕೂ ವಿದೇಶೀ ಕನ್ನಡಕ

ಹಾಕಿಕೊಂಡು ನೋಡುವುದರ ಔಚಿತ್ಯ ಪ್ರಶ್ನೆಗಿಂತಲೂ ಆಶ್ಚರ್ಯಕ್ಕೆ ಆಸ್ಪದ ಕೊಡಬಹುದೇನೊ ?

ನಾಟಕಗಳನ್ನು ಕುರಿತ ಮೂರು ವಿಮರ್ಶೆಗಳು ಡಿ.ಆರ್.ಎನ್.ರವರು ಕನ್ನಡ ನಾಟಕ ವಿಮರ್ಶೆಗೆ ಕೊಟ್ಟಿರುವ ಹಸುರುಪಟ್ಟಿ, ಅಂದರೆ ಸಾವಿಲ್ಲದ್ದು, ಹೊಸದು. ಒಬ್ಬನೇ ಮನುಷ್ಯ ನಾಟಕವನ್ನು ಏಕಾಂತದಲ್ಲಿ ಓದುವುದು ಮತ್ತು ಸಾವಿರ ಜನಗಳಲ್ಲಿ ಕೂತು (ಒಬ್ಬನಾಗಿ) ಪ್ರೇಕ್ಷಕನಾಗಿ ನೋಡುವುದು ಎಷ್ಟು ರೋಮಾಂಚಕಾರಿ ಎಂಬುದನ್ನು ಈ ಲೇಖನಗಳು ಚೂಪಾಗಿ ತೋರಿಸಿಕೊಡುತ್ತವೆ. ವಿಮರ್ಶಕ ಇಲ್ಲಿ ಮೂರು ಮುಖ್ಯ ಆಧಾರಗಳನ್ನು ಶಿಸ್ತಾಗಿ ಇಟ್ಟುಕೊಳ್ಳುತ್ತಾನೆ (ತನ್ನ ಪೂರ್ವ ಅಧ್ಯಯನ, (ಕೃತಿ) ನಾಟಕ ಮತ್ತು ನಾಟಕ ಪ್ರದರ್ಶನಗೊಳ್ಳುವಿಕೆ) ಅದಕ್ಕೇ ಯಾವುದೇ ಬಗೆಯ ಡಿಸ್ಕೌಂಟ್ ಕೊಡದೆ ಪ್ರಸನ್ನ, ಬಿ. ವಿ. ವೈಕುಂಠರಾಜು, ಬಾದಲ್‌ಸರ್ಕಾರರ ದೌರ್ಬಲ್ಯ ಸಿದ್ಧಿಗಳ ಬಗೆಗೆ ಪಾರದರ್ಶಕತ್ವ ಇಲ್ಲಿ ನಮಗೆಲ್ಲ ಸಿಕ್ಕುತ್ತದೆ. ನಾಟಕದ ಪೂರ್ಣ ಅರ್ಥಗಳು ಕೃತಿಯ ಶಿಲ್ಪದಲ್ಲಿ ಸಡಿಲಗೊಳ್ಳುವುದು ಮತ್ತು ಪ್ರಯೋಗದಲ್ಲಿ ವೈಭವೀಕರಣಗೊಂಡಂತೆ ಅನ್ನಿಸುವ ಸ್ಥಿತಿಗಳನ್ನು ಸ್ಥಳಾಂತರಗೊಳಿಸಿದರೂ ವಿಮರ್ಶಕ ಅವಕ್ಕೆ ಬೆಸುಗೆ ಹಾಕಿರುವುದು ಭೇಷ್ ಅನ್ನುವುದಕ್ಕಿಂತ ಅಪೂರ್ವವಾದದ್ದು ಎಂದರೆ ಸರಿಯಾದೀತು.

ಕವಿಗೆ ಗಮಕಿ. ಗಾಯಕ (ಗಾಯಕಿ), ವಾದಿ ವಾಗ್ಮಿ ಆಕ್ರಮಣ ಮಾಡುವುದು, ಕವಿ ಮನೋಧರ್ಮವನ್ನು ನಿರಾಕರಿಸಿ, ತಾನೇ ನಾಯಕನಾಗಿ ಮೆರೆಯುತ್ತಿರುವ ಪ್ರಸಂಗಗಳ ಉದಾಹರಣೆಗಳನ್ನು ಪ್ರಸಾರ ಮಾಧ್ಯಮಗಳ ವಲಯಗಳಲ್ಲಿ ಹೇರಳವಾಗಿ ಆರಿಸಿ ಕೊಡುವುದು ಕಷ್ಟದಾಯಕವಲ್ಲ. ಆದರೆ ಕವಿಯ ಕಾವ್ಯಲೋಕವನ್ನು ಅದರ ಒಳ ಜೀವಸತ್ತ್ವಗಳನ್ನು, ಪ್ರಜ್ಞೆ ಸಹಿತವಾಗಿ ಎಳೆದು ತೋರಿಸಿ, ಚೈತನ್ಯ ನಾವಿನ್ಯತೆಯನ್ನು ಬೆಳೆಸುವ ತಾಕತ್ತು ಎಲ್ಲರಿಗೂ ದಕ್ಕುವುದಿಲ್ಲ. ಉರಿಯುವ ದೀಪವನ್ನು ಕೊಟ್ಟರೆ ಕೈಸುಟ್ಟುಕೊಳ್ಳುವ ಜನವೇ ಹೆಚ್ಚು. ಅಪವಾದವಾಗಿ ಕವಿ ಜಿ.ಎಸ್.ಎಸ್. ಮತ್ತು ವಿಮರ್ಶಕ ಡಿ.ಆರ್.ಎನ್. ನಿಲ್ಲಬಲ್ಲವರಾಗಿದ್ದಾರೆ. ಕವಿ ಶಿವರುದ್ರಪ್ಪನವರು ಕಾವ್ಯದ ಮೂರು ಹಂತಗಳಲ್ಲಿ ಹೊರಳಿರುವ ಮತ್ತು ಬೆಳೆದಿರುವ ಅಲ್ಲದೆ ಉಳಿದಿರುವ ವಿಸ್ಮಯಲಾಸ್ಯತೆಯನ್ನು ಡಿ.ಆರ್.ಎನ್. ಸರಳರೇಖೆಗಳಲ್ಲಿ ತೋರಿಸುತ್ತಾರೆ. ಆವೇಶಕ್ಕೆ ವಶವಾಗದೆ, ಕಾವ್ಯದ ಭೌಗೋಳಿಕ ಸ್ತರದಲ್ಲೇ ಮೂರ್ಛಿತನಾಗದೆ ವಿಮರ್ಶಕ ಕವಿಯ ಸೃಷ್ಟಿಕಾರ್ಯದ ಕಾವ್ಯದ ಭೂಮಿಯಲ್ಲಿ ಸುತ್ತಾಡುವುದು ಶ್ರಮಕ್ಕೆ ಸೇರಿದ ವಿಷಯ. ಕೀರ್ತಿ, ಹಣ, ಪ್ರತಿಷ್ಠೆಗಳು ಮಾಯವಾಗುವ ವಿಷಯ. ಹಾಗೆ ಸುತ್ತಾಡುವಾಗ ಅಲ್ಲೂ ಕಪಟ, ಬಾವಲಿಯಂತೆ ಸೇರಿಕೊಳ್ಳದ ಸ್ಥಿತಿ ಗಟ್ಟಿಗತನಕ್ಕೆ ಸೇರುವಂಥದ್ದು. ಕವಿ ಶಿವರುದ್ರಪ್ಪನವರ ಬಗೆಗೆ: ಜಿ.ಎಸ್.ಎಸ್. ಐವತ್ತೈದರ ಹೊತ್ತಿಗೆ ಬಂದ ಈ ಕೃತಿಯಲ್ಲೂ ದೇವರ, ಧರ್ಮದ ಸುಳಿವಿಲ್ಲ. ಆಧುನಿಕ ಯುಗದಲ್ಲಿ ಅಂತರ್ಮುಖಿಯಾದವನಿಗೆ ಈ ರೀತಿಯ ನಂಬಿಕೆ ಸಾಧ್ಯವೂ ಇಲ್ಲ. ಏಕೆಂದರೆ

.... ನಮ್ಮ ಅಂತರ್ಮುಖೀ ಬೆಂಕಿಯಲ್ಲಿ ದೇವರುಗಳು ಉರಿದು ಬೂದಿಯಾಗಿದ್ದಾರೆ. ಈ ಕವಿಯ ಮುಂದಿನ ದಾರಿಯ ಬಗ್ಗೆ ಕುತೂಹಲ ಹುಟ್ಟುವುದು ಇದೇ ಕಾರಣಕ್ಕಾಗಿ (ಪು. 118).

ಈಚಿನ ಕನ್ನಡ ಕಾವ್ಯ ಉದ್ದವಾದದ್ದು ಒಂದೇಸಲ ಓದಿದ್ದಕ್ಕೋ ಏನೋ ನನಗೆ ಇಲ್ಲಿ ಏಕತಾನತೆ ಇದೆಯೋ ಎಂಬ ಅನುಮಾನ ಕಾಡಿದೆ. ಎಲ್ಲ ಕವನ ಸಂಗ್ರಹಗಳ ಬಗ್ಗೆ ಸ್ವಲ್ಪ ಕೊರತೆ ತೋರಿಸಿ, ಸ್ವಲ್ಪ ಶ್ರೇಷ್ಠತೆಯ ಅಂಕಗಳನ್ನು ಕೊಟ್ಟು ಕೈಬಿಟ್ಟ ಹಾಗೆ ಕಂಡಿದೆ. ನೀರನ್ನು ವಿವಿಧ ಪಾತ್ರೆಗಳಿಗೆ ಹಾಕಿದರೆ ಅದಕ್ಕೆ ತಕ್ಕ ಆಕಾರ ನೀರಿಗೂ ಬರುವ ಹಾಗೆ, ಕೆಲವು ಸೀಮಿತ ಸೂತ್ರಗಳ ಅಳತೆಗೆ ಕವನ ಸಂಗ್ರಹಗಳನ್ನು ಅಳವಡಿಸಲು ಯತ್ನಿಸಿದ್ದಾರೆಯೆ–ಎಂಬ ಆರೋಪ ಮಾಡಲು ಸಾಕಷ್ಟು ಸಂದರ್ಭಗಳು ಇಲ್ಲಿ ಎದ್ದು ಕುಣಿಯುತ್ತವೆ. ಆದರೆ ಅಡಿಗ, ಕಂಬಾರ, ವೆಂಕಟೇಶ ಮೂರ್ತಿ, ರಾಮಾನುಜನ್, ಸಿದ್ಧಲಿಂಗಯ್ಯ, ಕಮಲಾ ಹೆಮ್ಮಿಗೆಯವರ ಬಗ್ಗೆ ಹೊಸ ದೃಷ್ಟಿ ಬೆಳೆಯಬೇಕಾದರೆ ಈ ವಿಮರ್ಶೆಯನ್ನು ಓದಿದಾಗ ಮಾತ್ರ ಸಾಧ್ಯ. ಪುಸ್ತಕದ ಹೊದಿಕೆಯ ಹೆಸರಿಗೆ ಸಾರ್ಥಕತೆ ತರಲು ಮತ್ತು ಕಾವ್ಯ ಶಿಕ್ಷಣ ಪಡೆಯಲು ಕೆಳಗಿನ ಮಾತುಗಳು ಬೇಕು : ಕಾವ್ಯ ಬರೀ ಲೋಲುಪತೆ ಅಲ್ಲ. ವರ್ತಮಾನದಲ್ಲಿಲ್ಲದ ಆದರೆ ಭವಿಷ್ಯದ ಗರ್ಭದಲ್ಲಿರುವ ಸಮಾಜದ ಅಮೃತಕ್ಕೆ ಹಾರುವ ಗರುಡ ಅದು. ಆದರೆ, ಗುರುಡನಿಗೆ ಕಾಲಕೆಳಗೆ ಹರಿವ ಹಾವಿನ ಕಡೆಗೂ ಗಮನವಿರಬೇಕು. ಅಂದರೆ ಸಾಮಾಜಿಕ ವೈರುಧ್ಯಗಳಿಗೂ ತೀವ್ರವಾಗಿ ಪ್ರತಿಸ್ಪಂದಿಸಬೇಕು. ಈ ಸಮಾಜದ ಧಣಿಗೆ ಹುಚ್ಚು ಮಂಕಿದೆ ಎಂಬುದನ್ನು ಮರೆಯಬಾರದು. ಆಗ ಮಾತ್ರ ಕಾವ್ಯವೆಂಬ ಗರುಡ ಜನತೆಯಲ್ಲಿ ಛಲ ಹುಟ್ಟಿಸಬಲ್ಲದು. ಮಿಂಚಿನ ಹೊಳೆ ತುಳುಕಾಡಿಸಬಲ್ಲುದು (ಪು. 125).

ಕಾವ್ಯ, ನಾಟಕ, ವಿಮರ್ಶೆ–ಬಗ್ಗೆ ಜೀವಂತ ಕ್ರಿಯಾಶೀಲತೆಯಿಂದ ಭಾಗ ವಹಿಸುವವರಿಗೆ ಹಿತವಾದ ನೋವಿನಲ್ಲಿ ಬೇಯುವ ಹಾಗೆ 'ಅಮೃತ ಮತ್ತು ಗರುಡ' ಹುಟ್ಟಿದೆ. ಕಂಬಾರರ ಮಾತು ಕೂಡ ಇದಕ್ಕೆ ಪುಷ್ಟಿಕೊಡುತ್ತದೆ (ವಿಮರ್ಶೆಯ ಬಗ್ಗೆ ಕಾಳಜಿಯುಳ್ಳವರೆಲ್ಲ, ಒಂದು ಕೃತಿಯ ಬೆಲೆಗಟ್ಟುವಾಗ ಈ ಬಗ್ಗೆ ಡಾ॥ ನಾಗರಾಜ್ ಏನು ಹೇಳಿದ್ದಾರೆಂದು ಗಮನಿಸಿಯೇ ಮುಂದುವರಿಯಬೇಕಾಗುತ್ತದೆ–[ಮುಕ್ತಾಯದ ಹೊದಿಕೆ]).

ಈ ಕೃತಿ ಅಮೃತ ಶಿಲಾಪ್ರತಿಮೆಯಾಗಿ ರೂಪುಗೊಳ್ಳುವ ಹಂತದಲ್ಲಿ ಸ್ವಲ್ಪ ಎಡವುತ್ತದೆ. ಏಕೆಂದರೆ ವಿಮರ್ಶಕ ಸಮೃದ್ಧವಾದ ಅಚ್ಚುಕಟ್ಟುತನದ ಶಿಸ್ತನ್ನು ತೋರಿದರೂ ತಾನು ಆರಿಸಿಕೊಂಡ ವಿಷಯದಲ್ಲಿ ಸಮಗ್ರ ದೃಷ್ಟಿಕೋನವನ್ನು ತಾಳುವುದಿಲ್ಲ. ಈ ಮಾತಿಗೆ ಆಧಾರವೇನಯ್ಯ ಅಂತ ನನ್ನ ಕೇಳಿದರೆ ಜಿ. ಎಸ್. ಎಸ್. ಕಾವ್ಯ ತಗೊಳ್ಳಿ, ಈಚಿನ ಕನ್ನಡ ಕಾವ್ಯ ತಗೊಳ್ಳಿ, ಕಾರಂತ, ಮಾಸ್ತಿ, ಕುವೆಂಪು ಕುರಿತು ಬರೆದಿರೋದನ್ನ ತಗೊಳ್ಳಿ–ಇಲ್ಲೆಲ್ಲಾ ಲೇಖಕರು ತಮಗಿಷ್ಟವಾದದನ್ನು

ಮಾತ್ರ ಆರಿಸಿಕೊಂಡು ಏನು ಹೇಳಬೇಕೊ ಅದನ್ನ ಹೇಳಿ ಸುಮ್ಮನಾಗುತ್ತಾರೆ. ಅವರು ಹೇಳುವುದಕ್ಕೆ ಸಹಕಾರಿಯಾಗಿ ಅಥವ ಬೇರೆಯಾಗಿ ಸಾಹಿತ್ಯ ಅಥವ ಕಾವ್ಯ ವಿಪರೀತವಾಗಿ (ಇವರು ಗಮನಿಸದೆ ಇದ್ದದ್ದು) ಲೇಖನದಿಂದ ಹೊರಗೆ ಚೆಲ್ಲಿ ಬಿಟ್ಟಿರುತ್ತದೆ.

ಮೊಟ್ಟ ಮೊದಲಬಾರಿಗೆ ಅಲ್ಲದಿದ್ದರೂ ಬಹಳ ಪರಿಣಾಮಕಾರಿಯಾಗಿ ಕನ್ನಡ ಸಾಹಿತ್ಯದ ಸೃಜನಾತ್ಮಕತೆಗೆ ಪಾಶ್ಚಾತ್ಯ ಸಾಹಿತ್ಯದ ಚಿಂತನಗಳ ಸೂಕ್ಷ್ಮತೆಗಳನ್ನು, ಪ್ರಭಾವಳಿಯಾಗಿ ಲೇಖಕರು ನಿರ್ವಹಿಸುತ್ತಾರಾದರೂ ಅದೂ ಕೂಡ ಒಪ್ಪೋದು ತೊಡಕಾಗುತ್ತದೆ. ಕಲೋನಿಯಲ್, ರಿವೈವಲಿಸ್ಟ್, ದಾಸ್ತೊವಸ್ಕಿ, ಬೊಹೀಮಿಯನ್, ಪ್ರಾಸ್ಪರೋ–ಅಂತ ಲೇಖನದ ಮಧ್ಯ ತುರುಕಿದರೆ ಅದರ ದಾಹ ಪರಿಹಾರಕ್ಕೆ ಕೊನೆಯಲ್ಲಿ ಟಿಪ್ಪಣಿಯೊ, ಅರ್ಥಕೋಶವೊ, ಗ್ರಂಥಋಣವೊ ಬೇಡವೆ ?

ಪ್ರತಿಯೊಬ್ಬ ಮನುಷ್ಯನೂ ತನಗೆ ಬೇಕಾದ ಬೇರೆಯವರಲ್ಲಿ ಜಾಸ್ತಿಯಾಗಿ ಪ್ರೀತಿ ಮತ್ತು ಕೋಪವನ್ನು ಉಳಿಸಿಕೊಂಡಿರುತ್ತಾನೆ. ಅದಕ್ಕಾಗಿ ಡಿ. ಆರ್. ಎನ್. ಅವರ ಮುಂದಿನ ಪ್ರಕಟವಾಗುವ ಕೃತಿಗಳ ಬಗ್ಗೆ ನಾನಂತೂ ಆಶಾವಾದಿ

ಮಕ್ಕಳ ಸಾಹಿತ್ಯ ಕೃತಿ : 'ನಂದಿಕೋಲು'

ವಜ್ರಕುಮಾರ ಕಿವಡೆ

ಮಕ್ಕಳ ಸಾಹಿತ್ಯ ಅಂದರೆ ಕೇವಲ ಮಕ್ಕಳಿಗಾಗಿ ಅಲ್ಲದೆ, ಅದೂ ಹಿರಿಯರನ್ನು ಕೂಡಾ ಮಕ್ಕಳಿಗಾಗಿ ಒಂದು ಬಗೆಯ ಪಾಠ ಕೊಡುವ ಸಾಹಿತ್ಯ ಆಗಿರಬೇಕು. ಆದರೆ ಇವತ್ತು ಬಹುಶಃ ಮಕ್ಕಳ ಮನೋಧರ್ಮವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಬರೆಯುವ ಸಾಹಿತಿಗಳನ್ನು ಮಕ್ಕಳ ಸಾಹಿತಿಗಳೆಂದು ಕರೆಯಲಾಗುತ್ತಿದೆ. 5 ವರ್ಷದಿಂದ 14 ವರ್ಷ ಒಳಗಿನ ಮಕ್ಕಳ ಮಾನಸಿಕ ಏರಿಳಿತಗಳನ್ನು ಮನೋ ವೈಜ್ಞಾನಿಕವಾಗಿ ತೀರ ಹತ್ತಿರದಿಂದ ಅಧ್ಯಯನ ಮಾಡಿ ಆಯಾ ಚಿಟ್ಟಿನಲ್ಲಿ ಬರೆಯುವ ಮಕ್ಕಳ ಸಾಹಿತ್ಯ ನಮಗೆ ಬೇಕಾಗಿದೆ. ಇಂದು ಅಂತಹ ಮಕ್ಕಳ ಮನೋಧರ್ಮ ಅರಿತಿರುವ ಸಾಹಿತ್ಯ ನಮಗೆ ಬಹುಶಃ ಲಭ್ಯವಾಗುವುದಿಲ್ಲ. ಮಕ್ಕಳ ಸಾಹಿತ್ಯ ಯಾವುದು ? ಮಕ್ಕಳಿಂದ ರಚಿಸಲ್ಪಟ್ಟದ್ದೊ ಅಥವಾ ದೊಡ್ಡವರು ಮಕ್ಕಳಿಗಾಗಿ ಬರೆದ ಸಾಹಿತ್ಯವೋ ? ಇಂತಹ ದ್ವಂದ್ವ ಕೂಡಾ ಹಲವಾರು ಜನ ವಿಚಾರ ಮಂಥನಕ್ಕೆ ಹಚ್ಚಿದ್ದಾರೆಂದರೆ ಆಶ್ಚರ್ಯವಾಗದೆ ಮತ್ತೇನು. ಈ ತರಹದ ಹಿಡಿತಕ್ಕೆ ಒಳಗಾಗಿರುವ ಕವಿ ಎ.ಕೆ. ರಾಮೇಶ್ವರ. ರಾಮೇಶ್ವರ ಅವರು ಮೂಲತಃ ಮಕ್ಕಳ ಕವಿಯಾಗಿಯೇ ಸಾಹಿತ್ಯ ಕೃಷಿ ಪ್ರಾರಂಭಿಸಿರುವುದೊಂದು ವಿಶೇಷ. ಅವರ

ಹೆಚ್ಚಿನ ಕೃತಿಗಳು ಮಕ್ಕಳ ಸಾಹಿತ್ಯ ಕೃತಿಗಳೇ. ಅವುಗಳಲ್ಲಿ ಎ.ಕೆ. ರಾಮೇಶ್ವರ ಅವರು ರಾಷ್ಟ್ರದ ಮಹಾಪುರುಷರ ಬಗ್ಗೆ ಬರೆಯುವಾಗ ಬರೀ ಗಾಂಧಿ–ನೆಹರೂ ಅವರ ಸುತ್ತ ಸುತ್ತುತ್ತಾರೆ. ಈ ಇಬ್ಬರು ಮಹನೀಯರಿಗಿಂತ ದಿಟ್ಟವಾಗಿ ರಾಷ್ಟ್ರ ಸೇವೆ ಗೈದ ಸುಭಾಷ್ ಚಂದ್ರಬೋಸ್, ಲೋಹಿಯಾ, ಜೆಪಿ, ಪಟೇಲ, ಕಾಶ್ಮೀರದ ಹುಲಿ ಶೇಖ, ಗಡಿನಾಡ ಗಾಂಧಿ ಖಾನ ಅಬ್ದುಲ್‌ಗಫೂರ ಖಾನ ಆಗಲಿ, ವಿಜ್ಞಾನ ಕ್ಷೇತ್ರದಲ್ಲಿ, ಕಲಾ ಕ್ಷೇತ್ರದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿದ ಹಿರಿಯರಾಗಲಿ ನೆನಪಿಗೆ ಬರದೆ ಮಕ್ಕಳನ್ನು ಅವರಿಂದ ದೂರ ಇಡುವ ಪ್ರಯತ್ನ ಕಾಣುತ್ತೇವೆ.

ಎ.ಕೆ. ರಾಮೇಶ್ವರ ಅವರ ಒಟ್ಟಾರೆ ಕಾವ್ಯ ಧೋರಣೆಯನ್ನು ಅವಲೋಕಿಸಿದಾಗ ಈ ಕವಿ ತೀರ ಹತ್ತಿರದಿಂದ 'ಕಲೆಗಾಗಿ ಕಲೆ' ಸಿದ್ಧಾಂತಕ್ಕೆ ಅಂಟಿಕೊಂಡಂತೆ ಸ್ಪಷ್ಟ ವಾಗುತ್ತದೆ. ಕವಿಯ ದಿನ ನಿತ್ಯದ ಕಾರ್ಯ ಚಟುವಟಿಕೆಗಳು ಆತನ ಕಾವ್ಯದ ಮೇಲೆ ಮಹತ್ವದ ಪರಿಣಾಮ ಬೀರುತ್ತದೆ ಅನ್ನೋದಕ್ಕೆ ರಾಮೇಶ್ವರ ಒಳ್ಳೆ ಉದಾಹರಣೆಯ ಕವಿ. ಅವರ ಕಾವ್ಯ ಕೂಡಾ ಅವರ ಕಾರ್ಯ ಚಟುವಟಿಕೆಗಳ ಪ್ರತಿಬಿಂಬದಂತಿದೆ. ಅವರ ಧೋರಣೆ ಮತ್ತು ಉದ್ದೇಶ ಕೂಡಾ ಕೇವಲ ಕವಿತೆ ಬರೆಯುವುದೇ ಆಗಿದ್ದರೆ ಬೇರೆಯಾಗುತ್ತಿತ್ತು. ಕಾವ್ಯದ ಜತೆಜತೆಗೆ ಅವರು ಮಕ್ಕಳ ಸಂಘಟನೆ ಬಗ್ಗೆ, ಮಕ್ಕಳ ಭವಿಷತ್ತಿನ ಬಗ್ಗೆ ನಿಖರವಾದ ಕಾರ್ಯಕ್ರಮಗಳನ್ನು ಇಂದು ಜನರ ಮುಂದೆ ಇಟ್ಟಿದ್ದಾರೆ. ಈಗಾಗಲೇ ಎರಡು ಮಕ್ಕಳ ಸಾಹಿತ್ಯ ಸಮ್ಮೇಳನಗಳನ್ನು ಅದ್ಧೂರಿ ಯಾಗಿ ನಡೆಸಿ ಕೆಲವು ಮಕ್ಕಳಾದರೂ ಸ್ಪಷ್ಟವಾಗಿ ಸಾಂಸ್ಕೃತಿಕ, ಸಾಹಿತ್ಯಿಕ ರಂಗದಲ್ಲಿ ಮೇಲೇಳಲು ಸಹಕಾರಿಯಾಗಿವೆ–ಅನ್ನಿಸುತ್ತದೆ. ಅಲ್ಲಿ ಕೆಲವು ಶ್ರೀಮಂತ ಮಕ್ಕಳನ್ನೇ ಎತ್ತಿ ಕಟ್ಟಿದರು, ಅವರನ್ನೇ ಆರಿಸಿದರು ಅನ್ನೋ ದಟ್ಟವಾದ ಆಪಾದನೆ ಇದ್ದರೂ (ಆ ವಿಷಯ ಬೇರೆ) ಅದನ್ನು ಬಹುಶಃ ಮೂರನೇ ಸಮ್ಮೇಳನದಲ್ಲಿ ಸುಧಾರಿಸಬಹುದು. ಅದಕ್ಕೆ ಎ. ಕೆ. ರಾಮೇಶ್ವರ ಅವರು ಪ್ರಯತ್ನಿಸಬಹುದು.

ಮಕ್ಕಳ ಬಗ್ಗೆ ಬರೆಯುವ ಕವಿ ರಾಮೇಶ್ವರ ಅವರ ಬಹುಮಾನಿತ ಕೃತಿ 'ನಂದಿ ಕೋಲು' ಮಕ್ಕಳ ಸಾಹಿತ್ಯ ಕೃತಿ. ಈ ಬಗ್ಗೆ ಅವರ ವಿಷಯ ಆಯ್ಕೆ ಬಹು ಪಾಲು ಪದ್ಯಗಳಿಗೆ ಅನ್ವಯಿಸುತ್ತದೆ. ಅದರ ಜತೆಗೆ ಅವರು ಮಕ್ಕಳ ಬೌದ್ಧಿಕ ಮಟ್ಟಕ್ಕಿಂತ ಮೇಲೆ ಹಾರುವ ವಿಚಾರಗಳನ್ನು ಕೂಡಾ ತಮ್ಮ ಕವಿತೆಗಳಲ್ಲಿ ವ್ಯಕ್ತ ಪಡಿಸುವುದರಿಂದ 'ನಂದಿ ಕೋಲು' ಪೂರ್ಣ ಮಕ್ಕಳ ಸಾಹಿತ್ಯ ಕೃತಿ ಅನಿಸುವುದಿಲ್ಲ. ಕೆಲವು ಕವಿತೆಗಳಲ್ಲಿ ಚಿಕ್ಕ ಮಕ್ಕಳಿಂದ ದೂರವಾದ ವಿಚಾರಧಾರೆಯನ್ನು ಮಕ್ಕಳ ಮೇಲೆ ಹೇರುವ ಪ್ರಯತ್ನ ಕಾಣುತ್ತೇವೆ. ಅಲ್ಲಿ 'ನಂದಿ ಕೋಲು' ಸಂಪೂರ್ಣ ಮಕ್ಕಳಿಗೆ ಸಂಬಂಧಿಸಿದ ಕೃತಿಯೇ ಅನ್ನೋದಕ್ಕೆ ತೊಂದರೆಯಾಗುತ್ತದೆ.

ಮಕ್ಕಳ ಸಾಹಿತಿಗಳಾದವರು ಅರಿತಿರಬೇಕಾದದ್ದು ಮಕ್ಕಳ ಭಾವನೆಯನ್ನು ಭಾಷೆಯಿಂದ ಹಿಡಿದಿಡಲು ಸಾಧ್ಯವಿಲ್ಲ, ಮಕ್ಕಳ ಭಾವನೆಯನ್ನು ಚಿತ್ರ ; ಬಣ್ಣಗಳಿಂದ

ಹಿಡಿದಿಡಲು ಸಾಧ್ಯ. ಅದಕ್ಕಾಗಿ ಮಕ್ಕಳ ಪುಸ್ತಕದ ಮುದ್ರಣವು ಅಷ್ಟೆ ಮುಖ್ಯ. 'ನಂದಿಕೋಲು' ಸಂಗ್ರಹದ ಹೆಚ್ಚಿನ ಕವನಗಳಿಗೆ ಒಂದೇ ಚಿತ್ರ ಕೊಡಲಾಗಿದೆ. ಆದರೆ ಒಂದು ಕವನದ ಸಾರಾಂಶ ಮಕ್ಕಳಿಗೆ ಅರ್ಥ ಆಗಬೇಕಾದರೆ ಮಕ್ಕಳ ಮನಸ್ಸನ್ನು ನಾಲ್ಕೈದು ಬಣ್ಣ; ಚಿತ್ರಗಳಿಂದ ಹಿಡಿದಿಡಬೇಕಾಗುತ್ತದೆ. ಹೆಚ್ಚು ಚಿತ್ರಗಳನ್ನು ಹಾಕಿದರೆ ಪುಸ್ತಕ ಬೆಲೆ ಇನ್ನೂ ಹೆಚ್ಚಾಗಬಹುದು. ಇದಕ್ಕೆ ಬಹುಶಃ ಸರ್ಕಾರದ ಧೋರಣೆಯೆ ಕಾರಣ. ಸಾಹಿತ್ಯ ಕೃಷಿ ಮಾಡುವವರಿಗೆ ಸರಳ ಸುಲಭ ಬೆಲೆಯಲ್ಲಿ ಕಾಗದ ಮುದ್ರಣ ಆಗುವಂತೆ ನೋಡಿಕೊಳ್ಳಬೇಕಾಗಿರುವುದು ತೀರ ಅವಶ್ಯಕ. ಬೇರೆ ರಾಷ್ಟ್ರಗಳಲ್ಲಿ ಈ ಬಗ್ಗೆಯ ಪ್ರಯತ್ನ ಸಂಪೂರ್ಣ ಯಶಸ್ವಿಯಾಗಿರುವುದನ್ನು ನಾವು ಕಾಣುತ್ತೇವೆ.

'ನಂದಿ ಕೋಲು' ಸಂಗ್ರಹದಲ್ಲಿ ಒಳ್ಳೆಯ ಅಂಶಗಳನ್ನು ನಾವು ಕಾಣಬಹುದು. 'ತಾಯಿ' ಕವಿತೆಯಲ್ಲಿ 'ತನ್ನ ಕಂದನನ್ನು ನೋಡಿ ಎಲ್ಲ ಮರೆವಳು' ಅನ್ನೋ ಸಾಲು ತಾಯಿಯಾದವಳು ತನ್ನ ಸಂಸಾರ ಸುಖದಲ್ಲಿ ಮಗುವಿನಿಂದ ಪಡೆಯುವ ಆನಂದದ ಬಗ್ಗೆ ಕವಿ ಹೇಳುತ್ತಾನೆ. 'ಗಪ್‌ಚಿಪ್'ನ 'ಕೋಗಿಲೆಯ ಮರಿಯಂತೆ ಹಾಡು ನೀ ಕಂದ' ಅಳುವ ಕಂದನನ್ನು ಕವಿಗೆ ಹೋಲಿಸಿ ಅಳುವ ಧ್ವನಿಯನ್ನು ಕೋಗಿಲೆಯ ಧ್ವನಿಯಾಗಲೆಂದು ಬಯಸುವ ತಾಯಿಯ ಬಗ್ಗೆ ಕವಿ ಬರೆಯುತ್ತಾನೆ. 'ಮಗು ಮಾತು ಕಲಿಯಿತು'. 'ತಿರುಕ', 'ಮೋಟಾರು', 'ಒತ್ತುವಗಾಡಿ' ಮುಂತಾದ ಕವಿತೆಗಳಲ್ಲಿ ಮಗುವಿನ ಬಾಲ್ಯದ ಸವಿನೆನಪುಗಳು ಮಕ್ಕಳ ಮನೋಭಾವದ ತುಂಟತನದ, ದುಃಖಿತರನ್ನು ಕಂಡು ಕನಿಕರ ಪಡುವ, ಹೂವು ನೋಡಿ, ಹಕ್ಕಿ ಧ್ವನಿ ಕೇಳಿ, ಮಕ್ಕಳೊಡನೆ, ಹಿರಿಯರೊಡನೆ ಸ್ಪಂಧಿಸಿ ಪಡೆಯುವ ಜ್ಞಾನ ಅಪಾರ. ಆದರೆ ಇಲ್ಲಿಯೇ ಚಿಕ್ಕ ಮಗು "ಸಹನೆಯ ತಾಯಿಯನ್ನು ದೇವರೆಂದಿತು" ಅನ್ನೋ ಮಾತುಗಳು ಬರುವುದರಿಂದ ಮಗುವಿಗೆ ಆ ವಿಚಾರ ಬರಲು ಸಾಧ್ಯವೇ ಅನ್ನೋ ಸಂಶಯದ ಜತೆಗೆ ಕವಿ ಮುಗ್ಧ ಮಗುವಿನ ಮನಸ್ಸನ್ನು ಕಾಣದ ವಿಚಾರದತ್ತ ಒಯ್ಯುವ ಪ್ರಯತ್ನ ಮಾಡುತ್ತಿದ್ದಾನೆ ಅನಿಸುತ್ತದೆ. ಅದಕ್ಕೆ ವ್ಯತಿರಿಕ್ತ ಅನ್ನುವಂತೆ 'ವಿಮಾನ' ಕವಿತೆ ವಿಜ್ಞಾನ ಬೆಳವಣಿಗೆಯಿಂದ ಮನುಷ್ಯ ಸಾಧಿಸುತ್ತಿರುವ. ಸಾಧಿಸಿರುವ ಬಗ್ಗೆ ಮಗುವಿನ ಚಿಂತನೆಯ ದಿಕ್ಕು ಬದಲಾಯಿಸುವ ಪ್ರಯತ್ನ, ಇಲ್ಲಿಯು ಕೂಡಾ ಮಗುವಿನ ಬೌದ್ಧಿಕ ಮಟ್ಟಕ್ಕಿಂತ ಮೇಲೆ ಹಾರುವ ವಿಚಾರಧಾರೆ ಕಿರಿ ಕಿರಿ ಉಂಟು ಮಾಡುತ್ತದೆ. 'ಗಪ್‌ಚಿಪ್' ಪದ್ಯದಲ್ಲಿ ಬರುವ "ಹಟಮಾರಿ ಹುಡುಗರನ್ನು ಬೆಕ್ಕು ಒಯ್ಯುವುದು" ಅನ್ನೋ ಸಾಲುಗಳು ಮಕ್ಕಳನ್ನು ಮೂಢ ನಂಬಿಕೆಗೆ ತಳ್ಳುವ ಮತ್ತು ದೆವ್ವ ಬರುತ್ತದೆ, ಬವ್ವಾ ಬರುತ್ತದೆ ಅಂತ ಮಕ್ಕಳನ್ನು ಗಪ್‌ಚಿಪ್ ಮಾಡಲು ಹೆದರಿಸುವ ನೆಪದಲ್ಲಿ ನಮ್ಮ ಗೊಡ್ಡು ಸಂಪ್ರದಾಯದ ಗುಲಾಮರಾಗುವಂತೆ ಮಕ್ಕಳನ್ನು ಪ್ರೋತ್ಸಾಹಿಸುವ ತಂತ್ರ ಕವಿಯ ಮನಸ್ಸಿನಿಂದ ಬೇಕಂತಲೇ ಬಂದಿದೆಯೋ ಅನ್ನೋ ಸಂಶಯ ಬರುತ್ತದೆ. ಇದೇ ಪದ್ಯದ ಮುಂದಿನ ಸಾಲು ನೋಡಿ "ದಟ್ಟಡಿಯ ಸೀನಿಟ್ಟು ಬಾ ನನ್ನ ಕಂದ" ಇಲ್ಲಿ ಮಗು ಕೆಟ್ಟ ಸಂಪ್ರದಾಯ, ಗೊಡ್ಡು ವಿಚಾರ ತಲೆಯಲ್ಲಿ ಸೇರಿಸಿಕೊಂಡು ದಟ್ಟಡಿಯನ್ನಿಡಲು

ಸಾಧ್ಯವೇ ಅನ್ನೋಪರ ಬಗ್ಗೆ ಚಿಂತಿಸಬೇಕಾಗುತ್ತದೆ. ಪಾಪಗೆ ಸಿಂಗಾರ ಕವಿತೆ ಸಿಂಗಾರದ ಬಗ್ಗೆ ಹೇಳುತ್ತ ಸಾಗುವಾಗ ಕವಿ ಕೇವಲ ಪ್ರಾಸ ಸೇರಿಸಲು ಹೋಗಿ ಅಭ್ಯಾಸ ಕ್ರಿಯೆಯನ್ನು ನಮ್ಮೆದಿರು ತಂದು ನಿಲ್ಲಿಸುತ್ತಾನೆ. ಸಿಂಗಾರ ಆಗ್ತಾ–ಆಗ್ತಾನೆ ಒಮ್ಮೆಲೆ ಪ್ರಾಸಕ್ಕಾಗಿ "ನನ್ನ ತಮ್ಮ ಜನಿಸಿ ಬಂದು......."ಅನ್ನೋ ಸಾಲುಗಳಲ್ಲಿ ಒಂದೇ ಪುಟದಲ್ಲಿ ಕವಿತೆ ಮುಗಿಸಲು ಪ್ರಯತ್ನ ಮಾಡಿದಂತೆ ಮತ್ತು 'ಪಾಪಗೆ ಸಿಂಗಾರ' ಕವಿತೆ–ನೀತಿ ಸೇರಿಸಲೇ ಬೇಕು. ಅನ್ನೋಪರ ಅಡಿ ಸಿಕ್ಕು ಸೊರಗುತ್ತದೆ. ಎಲ್ಲ ಕವಿತೆಗಳಲ್ಲಿ ನೀತಿ ಒತ್ತಾಯ ಪೂರ್ವಕ ಸೇರಿಸುವ ಕೊರತೆ ಕಾಣುತ್ತೇವೆ. ನೀತಿ ಬೇಕು. ಆದರೆ ಅದು ಜಂಬದ ಬಗ್ಗೆ ಹೇಳುವಾಗ ಬಣ್ಣದ ತಗಡಿನ ತುತ್ತೂರಿ ಕವಿತೆಯ ಕವಿ ಹೇಳಿದಂತೆ, ಹೇಳಿದರೆ ಮಾನ್ಯ ಆಗಬಹುದು.

ಈ ಕವಿತಾ ಸಂಗ್ರಹದಲ್ಲಿಯೇ 'ಸರಪಂತಿ', 'ಹೊಸ ಹಾಡು ಹಾಡೋಣ', 'ನನ್ನ ತಂದೆ' ಮುಂತಾದ ಕವಿತೆಗಳು ಹೊಸ ಅನುಭವ ನೀಡುತ್ತವೆ. 'ಸರಪಂತಿ' 'ಹೊಸ ಹಾಡು ಹಾಡೋಣ' ಈ ಕವಿತೆಗಳು ಭಾವೈಕ್ಯ ಮತ್ತು ಹೊಸ ನಾಡಿನ ಕಲ್ಪನೆ ನೀಡಿದರೆ 'ನನ್ನ ತಂದೆ' ಈ ಕವಿತೆಯಲ್ಲಿ ಮಗು ಸಾಮಾನ್ಯವಾಗಿ ಎಲ್ಲರೂ ತಿಳಿದ ಹಾಗೆ ಬರೀ ತಾಯಿಯನ್ನು ನೆನೆಯುವುದಿಲ್ಲ, ತಂದೆಯು ಕೂಡಾ ಮಗುವಿಗೆ ಅಷ್ಟೇ ಮುಖ್ಯ ಅನ್ನೋ ಮಾತುಗಳನ್ನು ಮಗುವಿನ ಬಾಯಿಯಿಂದ ಹೇಳಿಸಿದ ಕವಿ ತಂದೆಗೂ ಸಂಸಾರದ ಬಾಳ ರಥದಲ್ಲಿ ಪ್ರಮುಖ ಸ್ಥಾನ ಕಲ್ಪಿಸುತ್ತಾನೆ.

ಮಕ್ಕಳ ದಿನನಿತ್ಯದ ಒಡನಾಡಿಗಳಾದ ತಾಯಿ. ಒತ್ತುವ ಗಾಡಿ, ಗುಲಾಬಿ ಹೂ, ಗಿಳಿ ಮುಂತಾದವುಗಳನ್ನು ಬಿಟ್ಟು ವರ್ಷಕ್ಕೊಮ್ಮೆ ಬರುವ 'ನಂದಿ ಕೋಲು' ಕೃತಿಯ ಶಿರೋನಾಮವಾದದ್ದು ಎಷ್ಟರಮಟ್ಟಿಗೆ ಸಮಂಜಸ. ಇಲ್ಲಿ ಈ ಹೆಸರು ಕವಿ ಧಾರ್ಮಿಕತೆಗೆ, ಸಂಪ್ರದಾಯಕ್ಕೆ ಜೋತು ಬಿದ್ದುದರಿಂದ ಬಂದಿದೇ ಹೊರತು 'ನಂದಿ ಕೋಲು' ಸಂಪೂರ್ಣವಾಗಿ ಸಂಕಲನವನ್ನು ಯಾವ ರೀತಿಯಿಂದಲೂ ಪ್ರತಿನಿಧಿ ಸುವುದಿಲ್ಲ. ಮಕ್ಕಳನ್ನು ಅನೇಕ ವಿಚಾರದತ್ತ ಒಯ್ದು ಕೊನೆಗೆ ಮತ್ತೆ ನಂದಿಕೋಲು (ಸಂಪ್ರದಾಯ) ಹೊರೆಸುವ ಪ್ರಯತ್ನ ಕವಿ ಮಾಡುತ್ತಾನೆ. ಈ ಕವಿತಾ ಸಂಗ್ರಹ ದಲ್ಲಿ 'ಬಾ ಬಾ ಗಿಳಿಯೆ ಬಣ್ಣದ ಗಿಳಿಯೆ, ಕಾಗೆ ಒಂದು ಹಾರಿ ಬಂದು, ಅಜ್ಜನ ಕೋಲು', 'ಬಣ್ಣದ ತಗಡಿನ ತುತ್ತೂರಿ', 'ನಾಗರಹಾವೆ ಹಾವಳು ಹೂವೆ', 'ನಾಯಿ ಮರಿ ನಾಯಿ ಮರಿ ತಿಂಡಿ ಬೇಕೇ' ಈ ರೀತಿಯ ಕಥನ ಕವನಗಳು ಸಿಗುವುದಿಲ್ಲ. ಕಥನ ಕವನಗಳು ಮಕ್ಕಳ ನೆನಪಿನಲ್ಲಿ ಸದಾ ಉಳಿಯುವಂಥಹವು. ಏಕೆಂದರೆ ಇವತ್ತಿಗೂ ನಾವು ಆ ಪದ್ಯಗಳನ್ನು ಅರ್ಥಕ್ಕಿಂತ ಜಾಸ್ತಿ ಬಾಯಿ ಪಾಠ ಒಪ್ಪಿಸಬಹುದು. 'ಶಾಲೆಗೆ ಹೋಗುವೆ'. 'ನಂದಿಕೋಲು', 'ನನ್ನ ತಂದೆ' ಮುಂತಾದ ಕವಿತೆಗಳು ಷಟ್ಪದಿಯ ಒಳ್ಳೆ ಉದಾಹರಣೆ. ಜಲ, ಶರಪಟ್ಪದಿಯ ಸಾಲುಗಳನ್ನು ಈ ಕವಿತೆಗಳಲ್ಲಿ ನಾವು ಕಾಣುತ್ತೇವೆ.

ಇಂದಿನ ಕನ್ನಡ ಮಕ್ಕಳ ಸಾಹಿತ್ಯ ಕಾಗೆ–ಗೂಬೆಗಳ ಕತೆಗಳನ್ನ ಹೇಳುತ್ತದೆ. ಅನ್ನೋದಕ್ಕೆ ಎರಡು ಮಾತಿಲ್ಲ. ಏಕೆಂದರೆ ಮಗುವಿಗೆ ಸಂಪೂರ್ಣ ವೈಚಾರಿಕ ವಿಚಾರದ ಹೆಜ್ಜೆಯನ್ನು ಇಡಲು ಕಲಿಸುವ ಮಕ್ಕಳ ಸಾಹಿತ್ಯ ನಮಗೆ ಅವಶ್ಯಕವಾಗಿದೆ. ಬೇರೆ ಭಾಷೆಗಳ ಮಕ್ಕಳ ಸಾಹಿತ್ಯದ ಬೆಳವಣಿಗೆ ನೋಡಿದಾಗ ಕನ್ನಡದಲ್ಲಿ ಮಕ್ಕಳ ಸಾಹಿತ್ಯದ ಬೆಳವಣಿಗೆ ಏಕೆ ಕುಂಟಿತ ಆಗುತ್ತಿದೆ ಅನ್ನೋದನ್ನು ತಿಳಿಯಬೇಕಾಗುತ್ತದೆ. ಈ ಹಿಂದೆ ಕನ್ನಡದ ಅತಿರಥ ಮಹಾರಥರೆನಿಸಿಕೊಂಡ ಕವಿಗಳು (ಕುವೆಂಪು, ಬೇಂದ್ರೆ, ಮುಂತಾದ ವರು) ಮಕ್ಕಳ ಬಗ್ಗೆ ಕವಿತೆ, ನಾಟಕ ಮುಂತಾದ ವಿವಿಧ ಪ್ರಕಾರಗಳಲ್ಲಿ ಬರೆದು ಒಮ್ಮೆಲೆ ನಿಲ್ಲಿಸಿ ಬಿಟ್ಟರು. ಪ್ರಮುಖ ಕವಿಗಳು, ಸಾಹಿತಿಗಳು ಮಕ್ಕಳ ಬಗ್ಗೆ ಚಿಂತನೆ ಬಿಟ್ಟಾಗ ಸಹಜವಾಗಿಯೆ ಓದುಗರು ಮಕ್ಕಳ ಸಾಹಿತ್ಯದ ಬಗ್ಗೆ ಗಂಭೀರ ವಾಗಲಿಲ್ಲ ಅನಿಸುತ್ತದೆ. ಅದರ ಜತೆಗೆ ಈವರೆಗೆ ಬಂದ ಮಕ್ಕಳ ಸಾಹಿತ್ಯದ ಬಗ್ಗೆ ಸೂಕ್ತ ಬದಲಾವಣೆ ತೋರಿಸುವ ಕಟು ಟೀಕೆ–ವಿಮರ್ಶೆ ಮಾಡದೆ ಇರುವುದು ಕೂಡಾ ಒಳ್ಳೆ ಮಕ್ಕಳ ಸಾಹಿತ್ಯ ಒಳ್ಳೆಯದಿರಲು ಕಾರಣವಾಗಿರಬಹುದು. ಮಕ್ಕಳಲ್ಲಿ ಚಿಕ್ಕಂದಿ ನಿಂದಲೇ ಜಾತಿ,ದೇವರು, ಮಾಟ ಮಂತ್ರ ಮುಂತಾದ ಸಮಾಜ ವಿರೋಧಿ ಜನ ವಿರೋಧಿ ನಿಲುವಿನ ವಿಚಾರಗಳನ್ನು ತುರುಕುವ ಸಾಹಿತ್ಯ ಬರದೇ ಸಂಪೂರ್ಣ ವೈಜ್ಞಾನಿಕ ಮತ್ತು ವೈಜ್ಞಾನಿಕ ಸಮಾಜವಾದದ ತಳಹದಿಗೆ ಸಹಕಾರಿಯಾಗುವಂಥ ಮಕ್ಕಳ ಸಾಹಿತ್ಯ ನಿರ್ಮಾಣವಾದರೆ ಬಹುಶಃ ಅಂಥ ಮಕ್ಕಳ ಸಾಹಿತ್ಯಕ್ಕೂ ಬೆಲೆ ಬಂದೀತು.

ಚಾರಿತ್ರಿಕ ಮಹತ್ವದ ಕೃತಿ : 'ಇಂಗ್ಲಿಷ್ ಕನ್ನಡ ವೈದ್ಯಪದಕೋಶ'

ಡಾ|| ಸಿ. ಆರ್. ಚಂದ್ರಶೇಖರ್

"ವೈದ್ಯ ವಿಜ್ಞಾನಕ್ಕೂ ಕನ್ನಡ ಭಾಷೆಗೂ ಆಕಾಶ ಭೂಮಿಗೆ ಇರುವಷ್ಟು ಅಂತರವಿದೆ. ವೈದ್ಯವಿಜ್ಞಾನದ ಆಳ, ವಿಸ್ತಾರ, ಕ್ಲಿಷ್ಟ ತಾಂತ್ರಿಕ ವಿಷಯಗಳು ಕನ್ನಡಕ್ಕೆ ನಿಲುಕುವುದಿಲ್ಲ. ವೈದ್ಯಕೀಯ ವಿಚಾರಗಳನ್ನು ಕನ್ನಡದಲ್ಲಿ ಹೇಳುವುದು ಅಸಾಧ್ಯ. ಕನ್ನಡ ಭಾಷೆಗೆ ವೈದ್ಯಕೀಯ ಕ್ಷೇತ್ರದ ಆಸೆ ವ್ಯಾಮೋಹ ಬೇಡ. ಇದು ಹೆಳವನೊಬ್ಬ ಹಿಮಾಲಯ ಪರ್ವತವನ್ನು ಹತ್ತುವ ಕನಸು ಕಂಡಂತೆ" ಎಂದು ವೈದ್ಯಕೀಯ ವೃತ್ತಿಯಲ್ಲಿದ್ದವರೂ ಇತರರೂ ನಂಬಿದ್ದ ಕಾಲದಲ್ಲಿ ಡಾ|| ಡಿ. ಎಸ್. ಶಿವಪ್ಪನವರು ವೈದ್ಯ ವಿಷಯಗಳ ಬಗ್ಗೆ ತಿಳಿಗನ್ನಡದಲ್ಲಿ ಬರೆಯಲಾರಂಭಿಸಿದರು. ಯಾವುದೇ ರೋಗಿ ಚಿಕಿತ್ಸೆಗಾಗಿ ತಮ್ಮ ಬಳಿಗೆ ಬಂದಾಗ ಹೆಚ್ಚಿನ ವೈದ್ಯರು ಖಾಯಿಲೆಯನ್ನು, ಚಿಕಿತ್ಸಾ ವಿಧಾನಗಳ ಅರ್ಥವನ್ನು ದೊಡ್ಡ ರಹಸ್ಯವಾಗಿ ಇಡುತ್ತಾರೆ. 'ಖಾಯಿಲೆ ವಿಚಾರವನ್ನು ನನಗೆ ಬಿಡು. ಅದು ಏಕೆ ಹೇಗೆ ಬಂದಿತು. ಅದು ಶರೀರದಲ್ಲಿ ಎಲ್ಲಿ ಎಷ್ಟು ಬದಲಾವಣೆ ತಂದಿದೆ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ. ನಾನು ಹೇಳಿದಂತೆ ಔಷಧ ತಿನ್ನು. ಖಾಯಿಲೆ ವಾಸಿಯಾಗುತ್ತದೆ' ಎಂದು

ಹೇಳುತ್ತಾರೆ. ರೋಗಿ ಅಥವಾ ಮನೆಯವರು 'ಡಾಕ್ಟರೆ ಖಾಯಿಲೆ ಏನು ಹೇಳಿ' ಎಂದು ಕೇಳಿದರೆ, ವಿವರವನ್ನು ಕೊಡದೆ ತೇಲಿಸಿ ಉತ್ತರ ಕೊಡುತ್ತಾರೆ. ಹೀಗಾಗಿ ಹೆಚ್ಚಿನಪಾಲಿನ ರೋಗಿಗಳಿಗೆ ಖಾಯಿಲೆ ಅರ್ಥವಾಗದ ವಸ್ತುವಾಗುತ್ತದೆ; ವೈದ್ಯ ಜಾದೂಗಾರನಾಗುತ್ತಾನೆ; ವೈದ್ಯಕೀಯ ವಿಷಯಗಳು ಜಾದೂಲೋಕದ ವಿಸ್ಮಯಗಳಾಗಿ ಉಳಿಯುತ್ತವೆ. ತಮ್ಮ 'ವಿಶೇಷ ಭ್ರಮಾತ್ಮಕ ಸ್ಥಾನ'ವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಹಾಗೂ ತಮ್ಮ ಕಾರ್ಯವಿಧಾನ ಮತ್ತು ದಕ್ಷತೆ ಒಂದು ರಹಸ್ಯಾತ್ಮಕ ಸಾಮರ್ಥ್ಯ ಎಂಬ ಹೆಗ್ಗಳಿಕೆಗಾಗಿ ವೈದ್ಯರು ವೈದ್ಯ ವಿಜ್ಞಾನವನ್ನು ಜನರ ಆಡು ಭಾಷೆಯಲ್ಲಿ ತರುವುದನ್ನು ನೇರವಾಗಿ ಅಥವಾ ಪರೋಕ್ಷವಾಗಿ ಇಚ್ಛಿಸುವುದಿಲ್ಲ. ಆದರೆ ಈ ರೀತಿ ಮಾಡುವುದರಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು. ಜನ ಖಾಯಿಲೆಗಳ ಬಗ್ಗೆ ತಿಳಿದುಕೊಳ್ಳುವುದರಿಂದ, ಅವರು ಚಿಕಿತ್ಸೆಯಲ್ಲಿ ಸಕ್ರಿಯವಾಗಿ ಭಾಗವಹಿಸಲು ಸಾಧ್ಯವಾಗುತ್ತದೆ. ಅಲ್ಲದೆ ಅವರ ಅನಗತ್ಯ ಹಾಗೂ ಅವಾಸ್ತವಿಕ ಭಯ, ಆತಂಕಗಳ ನಿವಾರಣೆಯಾಗಿ, ಖಾಯಿಲೆಯಿಂದ ಬೇಗ ಚೇತರಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ವಿಚಾರವನ್ನು ಅನೇಕ ಪ್ರಜ್ಞಾವಂತ ಮತ್ತು ಸಾಮಾಜಿಕ ಕಳಕಳಿ ಇರುವ ವೈದ್ಯರು ಒಪ್ಪುತ್ತಾರೆ. ಅಂತಹವರಲ್ಲಿ ಅನೇಕರು ಜನರಿಗೆ ಆರೋಗ್ಯ ಶಿಕ್ಷಣವನ್ನು ನೀಡಲು ಮುಂದೆ ಬಂದಿದ್ದಾರೆ. ಆರೋಗ್ಯ ಶಿಕ್ಷಣದ ಮಹತ್ವವನ್ನು ಅರ್ಥಮಾಡಿಕೊಂಡಿರುವ ವಿವಿಧ ಸಂಪರ್ಕ ಮಾಧ್ಯಮಗಳು ಉದಾಹರಣೆಗೆ ದಿನಪತ್ರಿಕೆಗಳು, ನಿಯತಕಾಲಿಕೆಗಳು, ರೇಡಿಯೋ ಮತ್ತು ದೂರದರ್ಶನಗಳು ವೈದ್ಯವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಜನಗಳಿಗೆ ತಲುಪಿಸಲು ನೆರವಾಗುತ್ತಿವೆ. ಹೀಗಾಗಿ ಅನೇಕ ವೈದ್ಯರು, ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಇತರರು ಹಾಗೂ ಆಸಕ್ತ ವ್ಯಕ್ತಿಗಳು ವೈದ್ಯಕೀಯ ಲೇಖನಗಳನ್ನು ಕನ್ನಡದಲ್ಲಿ ಬರೆಯುತ್ತಿದ್ದಾರೆ. ಉಪನ್ಯಾಸಗಳನ್ನು, ಚರ್ಚಾಕೂಟಗಳನ್ನು ನಡೆಸುತ್ತಿದ್ದಾರೆ ಮತ್ತೆ ಕೆಲವರು ಇನ್ನೂ ಮುಂದುವರೆದು ಕೈಹೊತ್ತಿಗೆ ಮತ್ತು ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಹೀಗೆ ಅನೇಕ ವಿಚಾರಗಳನ್ನು ಹೊಸ ಸಂಶೋಧನೆಗಳ ವಿವರಗಳನ್ನು ಕನ್ನಡಕ್ಕೆ ತರುವಾಗ ಅನೇಕ ತಾಂತ್ರಿಕ ಪದಗಳನ್ನು ಉಪಯೋಗಿಸಬೇಕಾಗುತ್ತದೆ. ಕೆಲವರು ತಾಂತ್ರಿಕ ಪದಗಳನ್ನು ಭಾಷಾಂತರಿಸದೆ, ಮೂಲದಲ್ಲಿರುವ ಹಾಗೇ ಉಪಯೋಗಿಸುತ್ತಾರೆ. ಅವರ ಪ್ರಕಾರ ಈ ತಾಂತ್ರಿಕ ಪದಗಳು ಇಂಗ್ಲಿಷ್ ಭಾಷೆಗೂ ಸೇರಿದುವಲ್ಲ. ಗ್ರೀಕ್, ಲ್ಯಾಟಿನ್, ಫ್ರೆಂಚ್ ಹೀಗೆ ಹಲವು ಮೂಲದಿಂದ ಬಂದವು. ಅವು ನಮ್ಮಲ್ಲೂ ಹಾಗೇ ಮೂಲರೂಪದಲ್ಲಿ ಮುಂದುವರೆದರೆ ತಪ್ಪೇನು? ಆದರೆ ಕೆಲವರಿಗೆ ಇದು ಇಷ್ಟವಿಲ್ಲ. ಕೆಲವು ಈ ಮೂಲಪದಗಳು ನಮ್ಮ ಭಾಷೆಗೆ ಒಗ್ಗುವುದಿಲ್ಲ. ಉಚ್ಚಾರಣೆ ಕಠಿಣ. ನಮ್ಮ ವಾಕ್ಯಗಳಲ್ಲಿ ಇವನ್ನು ಪೋಣಿಸಿದಾಗ ಹೊಂದಿಕೊಳ್ಳುವುದಿಲ್ಲ. ಮೊಸರನ್ನದಲ್ಲಿ ಕಲ್ಲು ಸಿಕ್ಕಹಾಗೆ ಎನ್ನುತ್ತಾರೆ. ಅಂತೆಯೇ

ಕೆಲವರು ಈ ಪದಗಳನ್ನು ಕನ್ನಡೀಕರಿಸಲು ಅಥವಾ ಕನ್ನಡದ ಸಮಾನಾರ್ಥ ಪದಗಳನ್ನು ಬಳಸಲು ಯತ್ನಿಸುತ್ತಾರೆ. ಕಾಲ ಕಳೆದಂತೆ ಒಂದು ಮೂಲಪದಕ್ಕೆ ಹಲವು ಕನ್ನಡ ಪದಗಳನ್ನು ಬಳಸಲು ಯತ್ನಿಸುತ್ತಾರೆ. ಕಾಲ ಕಳೆದಂತೆ ಒಂದು ಮೂಲಪದಕ್ಕೆ ಹಲವು ಕನ್ನಡ ಪದಗಳ ಬಳಕೆಯಾಗಿ, ಓದುಗರಿಗೆ ಸಾಕಷ್ಟುಗೊಂದಲವನ್ನುಂಟು ಮಾಡುತ್ತವೆ. ಕೆಲವೊಮ್ಮೆ ಒಬ್ಬ ಲೇಖಕನೇ ಹಲವು ಸಂದರ್ಭಗಳಲ್ಲಿ ಒಂದು ಪದಕ್ಕೆ ಹಲವು ಕನ್ನಡ ಪದಗಳನ್ನು ಬಳಸಿದ್ದುಂಟು. ಉದಾ : ಹಾರ್ಮೋನ್ ಪದಕ್ಕೆ ಚೋದನಿ, ಚೋದನಿಕ, ಪ್ರಚೋದಕ. ನಿರ್ನಾಳ ಗ್ರಂಥರಸ, ರಸಪೂತ, ರಸವಾಹಕ ಇತ್ಯಾದಿ. ಒಂದೆಡೆಯಲ್ಲಿ ವೈದ್ಯಕೀಯ ಪದಗಳಿಗೆ ಕನ್ನಡ ಸಮಾನ ಪದಗಳು ಬೇಕೆಂದಾಗ ತಾಳೆ ನೋಡಲು ಸೌಲಭ್ಯದ ಪರಿಸ್ಥಿತಿ ಉಂಟಾಯಿತು. ಯಾರಾದರೂ ವೈದ್ಯರೊಬ್ಬರ ಬಳಿ ಬಂದು, 'ಸ್ವಾಮಿ, ನೀವು ಈ ವೈದ್ಯವಿಚಾರದ ಬಗ್ಗೆ ಕನ್ನಡದಲ್ಲಿ ಒಂದು ಉಪನ್ಯಾಸ ಕೊಡಬೇಕಲ್ಲ' ಎಂದು ಕೇಳಿದಾಗ, ವೈದ್ಯರು ಉಪನ್ಯಾಸದ ಸಿದ್ಧತೆಗೆ ಕುಳಿತು, ತಾಂತ್ರಿಕ ಪದಗಳಿಗೆ ಸೂಕ್ತ ಕನ್ನಡ ಪದಗಳು ನೆನೆಪಿಗೆ ಬರದೆ ಅಥವಾ ತಿಳಿಯದೆ ಒದ್ದಾಡುತ್ತಾರೆ. ಮನಸ್ಸಿನಲ್ಲಿ 'ಅಯ್ಯೋ, ಯಾರಾದರೂ ಒಂದು ನಿಘಂಟು ಬರೆಯಬಾರದೇ, ಒಂದೆಡೆ ವೈದ್ಯಕೀಯ ಪಾರಿಭಾಷಿಕ ಪದಗಳಿಗೆ, ಕನ್ನಡ ಪದಗಳನ್ನು ಕೊಟ್ಟು ಉಪಕಾರ ಮಾಡಬಾರದೇ, ಎಂದು ಹಲುಬುತ್ತಾರೆ. ಈ ಮಹತ್ತರವಾದ ಮತ್ತು ತೀರಾ ಅವಶ್ಯಕವಾದ ಈ ಬೇಡಿಕೆಯನ್ನು ಪೂರೈಸಿ, ವೈದ್ಯರ ಕನ್ನಡ ಭಾಷಾ ಪ್ರಿಯರ ಮತ್ತು ಓದುಗರೆಲ್ಲರ ಅಭಿಮಾನಕ್ಕೆ ಒಳಗಾದವರು ಡಾ॥ ಡಿ. ಎಸ್. ಶಿವಪ್ಪನವರು. ಯಾವುದೇ ಭಾರತೀಯ ಭಾಷೆಯಲ್ಲಿ ಇಲ್ಲದ ಈ ಸೌಲಭ್ಯವನ್ನು ಕನ್ನಡದಲ್ಲಿ ದೊರಕಿಸಿಕೊಟ್ಟ ಕೀರ್ತಿ ಅವರಿಗೆ ಸಲ್ಲುತ್ತದೆ.

ಡಾ॥ ಡಿ. ಎಸ್. ಶಿವಪ್ಪನವರು ವೈದ್ಯಕೀಯ ಕಾಲೇಜಿನಲ್ಲಿ ನನಗೆ ಗುರುಗಳಾಗಿದ್ದವರು. ಔಷಧ ಶಾಸ್ತ್ರವನ್ನು ಕಲಿಸುವುದರ ಜೊತೆಜೊತೆಗೆ, ವೈದ್ಯ ವಿಷಯಗಳನ್ನು ಕನ್ನಡದಲ್ಲಿ ಬರೆಯಲು ಪ್ರೇರಣೆ ಪ್ರೋತ್ಸಾಹಗಳನ್ನಿತ್ತವರು. ನಾನು ವೈದ್ಯಕೀಯದ ಮೂರನೇ ವರ್ಷದಲ್ಲಿ ಕಲಿಯುತ್ತಿದ್ದಂತೆ ಸ್ತನಗಳ ಕ್ಯಾನ್ಸರ್ ಬಗ್ಗೆ ಒಂದು ಲೇಖನ ಬರೆದಾಗ, ಅದನ್ನು ಓದಿ ತಿದ್ದಿ ಪತ್ರಿಕೆಗೆ ಕಳುಹಿಸು ಎಂದು ಉತ್ತೇಜಿಸಿದರು. ಆ ಲೇಖನ 'ಪ್ರಜಾಮತ' ವಾರಪತ್ರಿಕೆಯಲ್ಲಿ ಪ್ರಕಟವಾದಾಗ, ನನ್ನಂತೆ ಅವರೂ ಸಂತೋಷಪಟ್ಟರು. ಅವರು ಒಮ್ಮೆ ನಮ್ಮೊಂದಿಗೆ ಮಾತನಾಡುತ್ತಾ, ವ್ಯುತ್ಪತ್ತಿ ಶಾಸ್ತ್ರ ಎಷ್ಟು ಕುತೂಹಲದಾಯಕ. ಒಂದೊಂದು ವೈದ್ಯ ಪದದ ವ್ಯುತ್ಪತ್ತಿಯನ್ನು ಕೆದಕಿ ನೋಡಿದಾಗ, ಎಂತೆಂಥ ರೋಚಕ ವಿವರಣೆ, ಕಥೆಗಳು ಅದರ ಮೂಲದಲ್ಲಿರುತ್ತಿದ್ದುವು ಎಂಬುದನ್ನು ನಮಗೆ ವಿವರಿಸಿದ್ದರು. ವೈದ್ಯಕೀಯ ಪದಗಳಿಗೆ ಕನ್ನಡ ಪದಗಳನ್ನು ಹುಡುಕುವಾಗ ಹೇಗೆ ತಾವು ಹಲವು ಆಧಾರ ಗ್ರಂಥಗಳನ್ನು ತಾಳೆ ನೋಡಿದ್ದು, ಎಷ್ಟು ಜನರನ್ನು ಅದರ ಬಗ್ಗೆ ವಿಚಾರಿಸಿದ್ದು ಎಂಬುದನ್ನು ವಿವರಿಸಿದಾಗ ಅವರ ಅಗಾಧ ತಾಳ್ಮೆ, ಶ್ರಮ, ಕೆದಕಿ ನೋಡಿ ತಿಳಿಯುವ ಬುದ್ಧಿಯನ್ನು ಕಂಡು

ಅವರ ಬಗ್ಗೆ ನಮ್ಮ ಗೌರವ ಇಮ್ಮಡಿಸಿತ್ತು. ಅವರ ಈ ಅಸದೃಶ ಶ್ರಮ ಮತ್ತು ತಿಳುವಳಿಕೆಯ ಫಲವಾಗಿ ಈ ವೈದ್ಯಕೀಯ ಪದಕೋಶ ನಮ್ಮದಾಗಿದೆ. ಈ ಪದ ಕೋಶದ ಪ್ರಯೋಜನವನ್ನು ದಿನನಿತ್ಯ ಪಡೆಯುತ್ತಿರುವ ಸಹಸ್ರಾರು ಜನರಲ್ಲಿ ನಾನೂ ಒಬ್ಬ.

೧೯೭೩ರಲ್ಲಿ ಪ್ರಕಟವಾದ ಈ ಪದಕೋಶದಲ್ಲಿ ಸುಮಾರು ೪೦ ೦೦೦ ಪದಗಳಿವೆ ಎಂದು ಹೇಳಲಾಗಿದೆ. ಇವು 514 ಪುಟಗಳಲ್ಲಿ ಅಚ್ಚುಕಟ್ಟಾಗಿ ಅಡಕವಾಗಿವೆ. ತಮ್ಮ ಅರಿಕೆಯಲ್ಲಿ ಡಾ. ಶಿವಪ್ಪನವರು ತಮ್ಮ ಈ ಕೃತಿಯ ಬಗ್ಗೆ ಹೇಳುತ್ತಾ 'ಇದು ನಿಘಂಟಲ್ಲ. ಕೇವಲ ಸಮಪದಗಳನ್ನು ಕೊಡುವ ಪದಕೋಶ ಎಂದಿದ್ದಾರೆ. ಆದ್ದ ರಿಂದ. ಇಂಗ್ಲಿಷ್ ಭಾಷೆಯಿಂದ ವಿಷಯವನ್ನು ಕನ್ನಡಕ್ಕೆ ತರುವ ಲೇಖಕರಿಗೆ, ಉಪನ್ಯಾಸಕಾರರಿಗೆ ಈ ಪುಸ್ತಕ ಉಪಯೋಗಿದೆಯೇ ಹೊರತು, ಜನಸಾಮಾನ್ಯರಿಗೆ ಅಷ್ಟೊಂದು ಪ್ರಯೋಜನಕಾರಿ ಅಲ್ಲ. ಇನ್ನೊಂದು ಮುಖ್ಯ ಉದ್ದೇಶ 'ವೈದ್ಯ ಶಾಸ್ತ್ರ ಕಲಿತವರಿಗೆ ಈ ಪದಕೋಶದಿಂದ ತಾಂತ್ರಿಕ ಪದಗಳ ಅರ್ಥ ಇನಿತಾದರೂ ಹೊಳೆಯಲೆಂಬುದು ನನ್ನ ಆಶಯ. ಪದದ ಅರ್ಥ ಹೊಳೆದರೆ ಇಂಗ್ಲಿಷ್‌ನಲ್ಲಿರುವ ತಾಂತ್ರಿಕ ಪದಗಳನ್ನು ಇನ್ನೂ ಚೆನ್ನಾಗಿ ಬಳಸಬಹುದು' ಎಂದು ಅವರೇ ಹೇಳಿದ್ದಾರೆ. ಈ ಎರಡು ಪ್ರಮುಖ ಉದ್ದೇಶಗಳು ಎಷ್ಟರಮಟ್ಟಿಗೆ ಈಡೇರಿದೆ ನೋಡೋಣ.

ಯಾವುದೇ ಮೂಲ ತಾಂತ್ರಿಕ ಪದಕ್ಕೆ ಕನ್ನಡ ಪದವನ್ನು ಕೊಡುವಾಗ ಡಾ॥ ಶಿವಪ್ಪನವರು ತೋರಿಸಿರುವ ಕನ್ನಡ ಭಾಷಾ ಪ್ರೇಮ ಅಸದೃಶವಾದುದು (ಇದಕ್ಕಾಗಿ ಅವರನ್ನು ಟೀಕಿಸುವವರೂ ಉಂಟು). ಅದರಲ್ಲೂ ಅವರು ಆಡುಭಾಷಾ ಪದಗಳನ್ನು ಇಷ್ಟಪಡುವುದು ಉಲ್ಲೇಖನೀಯ. ಅವರು Anaemia ಗೆ ರಕ್ತ ಕೊರೆ ಎಂದಾಗ, Anastomoseಗೆ ಅಡ್ಡಗೂಡಿಸು ಎಂದು ಬರೆದಾಗ. Allergyಗೆ ಒಗ್ಗದಿರು ವಿಕೆ ಎಂದು ಹೇಳಿದಾಗ ಖುಷಿಯಾಗುತ್ತದೆ. ಅತ್ಯಂತ ಸರಳವೆನಿಸುವ ಪದಗಳಲ್ಲಿ ಸೂಕ್ತ ವಾಗಿ ಬಳಸುವ ಅವರ ಚಾತುರ್ಯಕ್ಕೆ ಭಲೆ ಎನ್ನಬೇಕಾಗುತ್ತದೆ. Anaesthesia ಪದಕ್ಕೆ ಪ್ರಜ್ಞೆ ತಪ್ಪಿಸುವುದು ; ಆ ಶಾಸ್ತ್ರಕ್ಕೆ ಪ್ರಜ್ಞೆ ತಪ್ಪಿಸುವ ಶಾಸ್ತ್ರ (!) ಎನ್ನ ಬೇಕೇ ಎಂಬ ಸಂಕಟವನ್ನು ಡಾ॥ ಶಿವಪ್ಪನವರು ಅರಿವಳಿಕೆ ಶಾಸ್ತ್ರ ಎಂದು ಹೇಳಿ ತಪ್ಪಿಸಿ ದ್ದಾರೆ. Plastic Surgery ಗೆ ಏನೆಂದು ಕನ್ನಡದಲ್ಲಿ ಬರೆಯುವುದು ಎಂದು ತಿಣುಕುತ್ತಿದ್ದವರಿಗೆ ಸುರೂಪಿಕ ಶಸ್ತ್ರವೈದ್ಯಶಾಸ್ತ್ರ ಎಂದು ಹೇಳಿ ಪರಿಹಾರ ಸೂಚಿಸಿ ದ್ದಾರೆ.

ಆದರೆ ಕೆಲವು ಪದಗಳ ಬಳಕೆಯಲ್ಲಿ ಅವರು ಅನಗತ್ಯ ಛಲುಮೆ ತೋರಿಸುತ್ತಾರೆ ಎನಿಸದಿರದು. ಉದಾಹರಣೆಗೆ Cardia ಗೆ ಗುಂಡಿಗೆ ಎನ್ನುವ ಪದ ಬಳಸುತ್ತಾರೆ. ಅದಕ್ಕಿಂತ ಹೆಚ್ಚು ಬಳಕೆಯಲ್ಲಿರುವ 'ಹೃದಯ' ಪದವನ್ನು ದೂರವಿಡುತ್ತಾರೆ. Cardiologyಗೆ ಗುಂಡಿಗೆ ಶಾಸ್ತ್ರ ಎಂದಾಗ Cardiogram ಗೆ ಗುಂಡಿಗೆ ಚಿತ್ರಕ

ಎಂದಾಗ ಒಂದು ಬಗೆಯ ಇರಿಸು ಮುರಿಸಾಗುತ್ತದೆ. ಅದರ ಬದಲು ಹೃದಯ ಶಾಸ್ತ್ರ, ಹೃದಯ ಚಿತ್ರಕ ಎನ್ನುವುದು ಕಿವಿಗೆ ಹೆಚ್ಚು ಹಿತವೆನಿಸುತ್ತದೆ.

ಡಾ|| ಶಿವಪ್ಪನವರು ಕೊಡುವ ಕೆಲವು ಪದಗಳು ಪೂರ್ಣಾರ್ಥವನ್ನು ಅಥವಾ ಪದ ಸೃಷ್ಟಿಯಾದ ರೀತಿಯನ್ನು ನಮಗೆ ಸ್ಫುಟವಾಗಿ ತಿಳಿಸಿಕೊಡುತ್ತವೆ. ಉದಾ : Thyroid ಗೆ 'ಗುರಾಣಿಕ' ಎನ್ನುತ್ತಾರೆ. ಥೈರಾಯ್ಡ್ ಗ್ರಂಥಿ ಶ್ವಾಸನಾಳವನ್ನು ಗುರಾಣಿಯಂತೆ ರಕ್ಷಿಸುತ್ತದೆ ಎಂಬ ನಂಬಿಕೆಯಿಂದ ಅದಕ್ಕೆ ಆ ಹೆಸರು ಬಂದಿದ್ದು ಕನ್ನಡದ ಈ ಪದದಿಂದ ಸುಲಭವಾಗಿ ತಿಳಿಯುತ್ತದೆ. Endocrine glands ಗೆ ಈ ಮೊದಲು ನಿರ್ನಾಳ ಗ್ರಂಥಿಗಳು ಎನ್ನುತ್ತಿದ್ದರು. ಅದಕ್ಕೆ ಬದಲು ಒಳಸುರಿಕ ಗ್ರಂಥಿ ಎಂದು ಮೂಲಪದಕ್ಕೆ ಸರಿಯಾದ ಪದವನ್ನು ಕೊಟ್ಟಿದ್ದಾರೆ.

ಮನೋವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ಪದಗಳಿಗೆ, ಕನ್ನಡ ಸಮಾನ ಪದಗಳನ್ನು ಕೊಡುವಲ್ಲಿ ಮಾತ್ರ ಡಾ|| ಶಿವಪ್ಪನವರು ನಮ್ಮನ್ನು ನಿರಾಶೆಗೊಳಿಸುತ್ತಾರೆ. ೧೯೭೭ರ ನಂತರ ನಾನು ಮನೋವೈದ್ಯಕೀಯದಲ್ಲಿ ಪದವಿಯೋತ್ತರ ತರಪೇತಿ ಪಡೆಯ ಲಾರಂಭಿಸಿದೆ. ಮನೋರೋಗಗಳ ಬಗ್ಗೆ ಕನ್ನಡದಲ್ಲಿ ಬರೆಯಲು ಹೊರಟಾಗ, ವೈದ್ಯಕೀಯ ಪದಕೋಶ ನನಗೆ ನೆರವು ನೀಡುವುದರಲ್ಲಿ ಸೋತಿತು. ಉದಾಹರಣೆಗೆ ಈ ಪುಸ್ತಕದಲ್ಲಿ Hallucination ಗೂ ಭ್ರಾಂತಿ Delusion ಗೂ ಭ್ರಾಂತಿ ಎಂದು ಕೊಡಲಾಗಿದೆ. Hallucination ಎಂದರೆ ಪರಿಸರದಲ್ಲಿ ಯಾವ ವಸ್ತು ಪ್ರಚೋದನೆ ಇಲ್ಲದಿದ್ದರೂ ಪಂಚೇಂದ್ರಿಯಕ್ಕೆ ಸಂವೇದನೆ ಆಗುತ್ತದೆ. ಅಂದರೆ ಶೂನ್ಯದಲ್ಲಿ ಧ್ವನಿ ಕೇಳಿಸುವುದು, ದೃಶ್ಯ ಕಾಣಿಸುವುದು, ಸುತ್ತಮುತ್ತ ವಾಸನೆ ಸೂಸುವ ವಸ್ತು ವಿಲ್ಲದಿದ್ದರೂ ವಾಸನೆಯ ಅನುಭವ ಆಗುವುದು ಆಗಬಹುದು. ಈ ವಿಶಿಷ್ಟ ಅನುಭವಕ್ಕೆ ಕನ್ನಡದಲ್ಲಿ ಏನು ಹೇಳಬೇಕು. ಕಡೆಗೆ ಯೋಚಿಸಿ, ಚಿತ್ತಭ್ರಮೆ ಎಂಬ ಪದವನ್ನು ಬಳಕೆಗೆ ತರಬೇಕಾಯಿತು. ಇನ್ನು Delusion ಅಂದರೆ ಬದಲಿಸಲಾಗದ, ಬೇರೆಯವರು ಒಪ್ಪದ, ಅವಾಸ್ತವಿಕ ಗಾಢ ನಂಬಿಕೆ. ಉದಾಹರಣೆಗೆ ರೋಗಿ ವಿನಾ ಕಾರಣ ತನ್ನನ್ನು ಯಾರೋ ಹಿಂಬಾಲಿಸುತ್ತಾರೆ, ತನ್ನನ್ನು ಕೊಂದು ಬಿಡುತ್ತಾರೆ ಎಂದು ತಪ್ಪಾಗಿ ನಂಬಿ ತನ್ನ ರಕ್ಷಣೆಗೆ ಕ್ರಮ ಕೈಗೊಳ್ಳುವುದು. ಈ ರೋಗ ಲಕ್ಷಣಕ್ಕೆ ಕನ್ನಡದಲ್ಲಿ ಏನು ಹೇಳುವುದೆಂದು ನನಗೆ ಈಗಲೂ ತಿಳಿಯದು. ಇದಕ್ಕೆ ತಪ್ಪುನಂಬಿಕೆ ಎಂದಾಗ ಅದು Delusion ಪದಕ್ಕೆ ಸಮನಲ್ಲ ಎಂದು ಪರಿತಪಿಸುತ್ತೇನೆ. ಮಾನಸಿಕ ಖಾಯಿಲೆಗಳನ್ನು ಸ್ಥೂಲವಾಗಿ Psychosis ಮತ್ತು Neurosis ಎಂದು ವಿಂಗಡಿಸುತ್ತೇವೆ. Psychosis ತೀವ್ರವಾದ ಖಾಯಿಲೆ ರೋಗಿ ಭ್ರಮಾಧೀನವಾಗಿ, ವಾಸ್ತವಿಕತೆಯಿಂದ ದೂರನಾಗಿ, ವಿಚಿತ್ರವಾಗಿ ಆಡುತ್ತಾ ತನ್ನ ಬೇಕು ಬೇಡಗಳನ್ನು ನಿರ್ಲಕ್ಷಿಸುತ್ತಾನೆ. ಜನ ಅವನಿಗೆ ಹುಚ್ಚು ಹಿಡದಿದೆ ಎನ್ನುತ್ತಾರೆ. ಇದಕ್ಕೆ ಕನ್ನಡ ದಲ್ಲಿ ಏನನ್ನಬೇಕು ? ಮತಿಭ್ರಮಣೆ/ಬುದ್ಧಿಭ್ರಮಣೆ/ಮನವಿಕಲತೆ/ಚಿತ್ತವೈಕಲ್ಯ/ ಮನೋರೋಗ ? Neurosis ನಲ್ಲಿ ವ್ಯಕ್ತಿ ಯಾವುದೇ ಒಂದು ಸಮಸ್ಯೆಗೆ ಅತಿಯಾದ

ಭಾವನಾತ್ಮಕ ಪ್ರತಿಕ್ರಿಯೆ ತೋರಿಸುತ್ತಾನೆ. ಉದಾ : ಆತಂಕ, ಖಿನ್ನತೆ, ಉನ್ಮಾದ, ಭಯ ಇತ್ಯಾದಿ. ಇದಕ್ಕೆ ಏನನ್ನೋಣ ಮನಚಂಚಲತೆ, ಮನೋದೌರ್ಬಲ್ಯ, ನರ ದೌರ್ಬಲ್ಯ, ಮನೋಬೇನೆ ? ಪದಕೋಶದಲ್ಲಿ Fear ಅಂದರೂ ಭಯ, Phobia ಎಂದರೂ ಭಯ. ಆದರೆ Phobia ಅಂದರೆ ಅನಗತ್ಯ. ತರ್ಕಶೂನ್ಯವಾದ ಅತಿಭಯ. Mania ಅಂದರೆ ಹುಚ್ಚೇಗು. ಗೀಳು, ಕೆರಳು ಎಂದು ಕೊಡಲಾಗಿದೆ. ಆದರೆ, ಯಾವ ರೋಗ ಸ್ಥಿತಿಯಲ್ಲಿ ವ್ಯಕ್ತಿ ವಿನಾಕಾರಣ ಅತಿಖುಷಿ, ಅನಗತ್ಯ ಮತ್ತು ಅತಿ ಚಟುವಟಿಕೆ ಮತ್ತು ತನ್ನ ಶಕ್ತಿ ಸಾಮರ್ಥ್ಯದ ಬಗ್ಗೆ ವಿಪರೀತ ಬೊಗಳೆ ಬಿಡುತ್ತಾನೋ ಆ ಖಾಯಿಲೆಗೆ ಮೇನಿಯಾ ಎಂದು ಕರೆಯಲಾಗುತ್ತದೆ. ಇದಕ್ಕೆ ಸಮಾನ ಪದ ನನಗೆ ಗೊತ್ತಿಲ್ಲ. ಮೇನಿಯಾ ಎಂದೇ ಕನ್ನಡದಲ್ಲಿ ಬರೆಯುತ್ತಿದ್ದೇನೆ. Obsessive Compulsive Neuosis ಗೆ ಕನ್ನಡದಲ್ಲಿ ಪದಕೋಶದ ಪ್ರಕಾರ ಗೀಳುಪೀಡೆ ಮತ್ತು ಬಲವಂತದ ಮನೋಬೇನೆಯಾಗುತ್ತದೆ. ಇದು ಸಮಂಜಸವೆ ? Psychotrerafist ಅಂದರೆ ಮಾತನಾಡಿ, ಸಲಹೆ, ಸಮಾಧಾನವನ್ನಿತ್ತು ತನ್ಮೂಲಕ ನ್ಯೂರೋಸಿಸ್ ಬೇನೆಯನ್ನು ಕಡಿಮೆಮಾಡುವ ಚಿಕಿತ್ಸಕ. ಆದರೆ ಪದಕೋಶದಲ್ಲಿ 'ಮನೋರೋಗ ಚಿಕಿತ್ಸಕ' ಎಂದಷ್ಟೇ ಹೇಳಿರುವುದು ಅಸಮರ್ಪಕ ಎನಿಸುತ್ತದೆ. Orientation ಎಂದರೆ ವ್ಯಕ್ತಿ ಕಾಲ, ಸ್ಥಳ ಮತ್ತು ಜನರನ್ನು ಗುರುತಿಸುವ ಸಾಮರ್ಥ್ಯ. ಕನ್ನಡದಲ್ಲಿ ಸಮಾನ ಪದ ಏನು ? Psychoanalysis ಗೆ ಮನಬಿಡಿ ಪರೀಕ್ಷೆ ಪದಕ್ಕಿಂತ ಮನೋ ವಿಶ್ಲೇಷಣೆ ಪದಹೆಚ್ಚು ಸಮಂಜಸ. ಹೀಗೆ ಈ ವಿಭಾಗದಲ್ಲಿ ಪದ ಕೋಶದ ಕೊರತೆ ಎದ್ದು ಕಾಣುತ್ತದೆ.

ಹೀಗೆ ಕೆಲವಾರು ಕೊರತೆಗಳಿದ್ದರೂ ಪುಸ್ತಕದ ಉಪಯುಕ್ತತೆಗೆ ಮುಕ್ಕಿಲ್ಲ. ಪುಸ್ತಕದ ಈ ಕೊರತೆಗಳನ್ನು ಡಾ॥ ಶಿವಪ್ಪನವರೂ ಬಲ್ಲರು. ಅಂತೆಯೇ ತಮ್ಮ ಅರಿಕೆಯಲ್ಲಿ "ಈ ಪದಕೋಶ ಒಂದು ಸಣ್ಣ ಪ್ರಯೋಗ ಮಾತ್ರ...ಇಲ್ಲಿ ಕೊಟ್ಟಿರುವ ಪದಗಳೇ ಕೊನೆಯ ಮಾತಲ್ಲ...ತಿಳಿದವರು ಇದರಲ್ಲಿರುವ ಪದಗಳ ತಿದ್ದುಪಡಿಗಳನ್ನು ತಪ್ಪುಗಳನ್ನು ಸೂಚಿಸಲು ಕೋರುವೆನು" ಎಂದು ಹೇಳಿ ತಮ್ಮ ದೊಡ್ಡತನವನ್ನು ಮೆರೆದಿದ್ದಾರೆ.

ಕೊನೆಯದಾಗಿ, ತಾಂತ್ರಿಕ ಪದಗಳನ್ನು ಮೂಲರೂಪದಲ್ಲಿಯೇ ಉಳಿಸಿಕೊಳ್ಳ ಬೇಕೇ ? ಅಥವಾ ಕನ್ನಡದಲ್ಲಿ ಅವಕ್ಕೆ ಸಮನಾದ ಪದಗಳನ್ನು ಕಟ್ಟಬೇಕೆ ಎಂಬುದರ ಬಗ್ಗೆ ಜಿಜ್ಞಾಸೆ ಇದೆ. ಕ್ಯಾನ್ಸರ್ ಅನ್ನುವ ಪದ ಜನಬಳಕೆಯಲ್ಲಿರುವಾಗ ಅದಕ್ಕೆ ಕನ್ನಡ ಪದಬೇಕೆ ? ಹಾಗೆಯೇ ಅಲರ್ಜಿ, ಇಂಜೆಕ್ಷನ್, ವಾರ್ಡ್, ಎಕ್ಸರೇ, ಆಪರೇಶನ್ ಇತ್ಯಾದಿ ಇಂಗ್ಲಿಷ್ ಪದಗಳನ್ನು (ಅವಕ್ಕೆ ಸಮನಾದ ಕನ್ನಡ ಪದ ಗಳಿದ್ದರೂ), ಜನ ದಿನನಿತ್ಯ ಬಳಸುತ್ತಿದ್ದಾರೆ. Thyroid ಪದವೂ ಜನರಿಗೆ ಹೊಸತು ಗುರಾಣಿಕ ಪದವೂ ಹೊಸತೇ. ಆದ್ದರಿಂದ ಥೈರಾಯ್ಡ್ ಗ್ರಂಥಿ ಎಂದೇ ಬರೆದರೆ

ಆಗದೇ ಎಂದು ಕೆಲವರು ವಾದಿಸುತ್ತಾರೆ. ಏನೇ ಇರಲಿ, ಇಲ್ಲಿ ಈ ಜಿಜ್ಞಾಸೆ ಅಪ್ರಕೃತ ಎಂದು ನನ್ನ ಭಾವನೆ.

ವೈದ್ಯಕೀಯ ಪದಕೋಶವನ್ನು ಕೊಟ್ಟಂತಹ ಡಾ॥ ಡಿ. ಎಸ್. ಶಿವಪ್ಪನವರಿಗೆ ಕನ್ನಡ ಜನ ಕೃತಜ್ಞರಾಗಿರಬೇಕು. ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವ ನಾವು ಅವರಿಗೆ ಋಣಿಗಳಾಗಿದ್ದೇವೆ. ಅವರಿಂದ ಇನ್ನೂ ಹೆಚ್ಚಿನ ಉತ್ತಮ ಕೃತಿಗಳು ಬರಲಿ ಎಂದು ಮನಃಪೂರ್ವಕವಾಗಿ ಹಾರೈಸುತ್ತೇನೆ.

ಕನ್ನಡ ಸಾಹಿತ್ಯ ಲೋಕದ ತವನಿಧಿ 'ಮಹಾಪುರಾಣ'

ಪೆ. ನಾಗರಾಜಯ್ಯ

'ಮಹಾಪುರಾಣ'ವು ಸಂಸ್ಕೃತ ಸಾಹಿತ್ಯದಲ್ಲಿ ಒಂದು ಮೇರು ಕೃತಿ. ಇದು ಈ ಉತ್ತಮೋತ್ತಮ ಸ್ಥಾನವನ್ನು ಪಡೆದಿರುವುದಾದರೂ ಸಾಹಿತ್ಯ ಚರಿತ್ರಕಾರರಲ್ಲಿ ಇದಕ್ಕೆ ಸಲ್ಲಬೇಕಾದ ಮಾನ್ಯತೆ ಸಿಕ್ಕಿಲ್ಲ ಎಂದರೆ ತಪ್ಪಾಗದು ; ಕಾರಣ ಇದು ಒಂದು ಧಾರ್ಮಿಕ ಕೃತಿ ಎಂಬುದಾಗಿರಬಹುದೆ ? 'ಇದರಲ್ಲಿ ಮಹಾಕಾವ್ಯದ ಲಕ್ಷಣಗಳೆಲ್ಲವೂ ತುಂಬಿ ತುಳುಕುತ್ತಿವೆ. ಕವಿತಾಚಾತುರ್ಯ, ಅರ್ಥಗಾಂಭೀರ್ಯ, ಪದಲಾಲಿತ್ಯ, ರಸಾಲಂ ತಾರ ಸೌಷ್ಠವ ಮೊದಲಾದ ಕಾವ್ಯಗುಣಗಳಿಂದ ಜೈನ ಪುರಾಣ ಗ್ರಂಥಗಳಲ್ಲಿ ಇದು ಅದ್ವಿತೀಯವಾದುದು. ನೀತಿ ಬೋಧೆ, ವೈರಾಗ್ಯ, ತತ್ವವಿಚಾರ, ಸಂಸಾರ ಸ್ವರೂಪ ಮೊದಲಾದ ವಿಷಯಗಳು ಬಹಳ ಚೆನ್ನಾಗಿ ನಿರೂಪಿಸಲ್ಪಟ್ಟಿವೆ.'

"ಜೈನ ಪುರಾಣಗಳಲ್ಲೆಲ್ಲ 'ಮಹಾಪುರಾಣ'ವು ದೊಡ್ಡದಾದ ಗ್ರಂಥವಾಗಿಯೂ ಜೈನರಿಗೆ ಬಹಳ ಆದರಣೀಯವಾಗಿಯೂ ಇರುತ್ತದೆ. ಇದು ಕಾವ್ಯಕ್ಕೆ ಕಾವ್ಯ, ಪುರಾಣಕ್ಕೆ ಪುರಾಣ. ಇದರ ಉದ್ದಕ್ಕೂ ಧರ್ಮಪ್ರಧಾನವಾಗಿದ್ದು, ಕಾವ್ಯ ಆನುಷಂಗಿಕವಾಗಿ ಬರುತ್ತದೆಯಾದರೂ ಅಲ್ಲಲ್ಲಿ ಕಾವ್ಯ ಪ್ರಮುಖವಾಗಿ ಧರ್ಮ ಗೌಣವಾದ ರಸಾರ್ದ್ರ ಭಾಗಗಳೂ ಇವೆ. ಒಂದರ್ಥದಲ್ಲಿ

ಮಹಾಭಾರತಕ್ಕೆ ಹೊಯ್‌ಕಯ್ ಆಗಿ ಹತ್ತಿರ ಬರುವ ಕೃತಿ ಈ 'ಮಹಾಪುರಾಣ'. ಈ ಗ್ರಂಥವನ್ನು ಕುರಿತು ಒಬ್ಬ ಕವಿಯು 'ಯದಿ ಸಕಲ ಕವೀಂದ್ರ ಪ್ರೋಕ್ತ ಸೂಕ್ತ ಪ್ರಚಾರ ಶ್ರವಣ ಸರಸಚೇತಾಸ್ತತ್ವ ಮೇವಂ ಸಖೇಸ್ಯಾಃ । ಕವಿವರ ಜಿನಸೇನಾಚಾರ್ಯ ವಕ್ತ್ರಾರವಿಂದ ಪ್ರಣಿಗದಿತ ಪುರಾಣಾಕರ್ಣನಾಭ್ಯರ್ಣ ಕರ್ಣಃ'– 'ಎಲೈ ಮಿತ್ರನೆ, ನೀನು ಎಲ್ಲಾ ಕವಿ ಶ್ರೇಷ್ಠರು ಹೇಳಿದ ಸುವಚನಗಳನ್ನೂ ಕೇಳಿ ಸರಸ ಹೃದಯ ವುಳ್ಳವನಾಗಬೇಕಾದರೆ ಕವಿಶ್ರೇಷ್ಠರಾದ ಜಿನಸೇನಾಚಾರ್ಯರ ಮುಖಕಮಲದಿಂದ ಹೇಳಲ್ಪಟ್ಟ ಪುರಾಣವನ್ನು ಕೇಳು' ಎಂದು ಹೊಗಳಿರುತ್ತಾನೆ.

"ಇಪ್ಪತ್ತನಾಲ್ಕುಮಂದಿ ತೀರ್ಥಂಕರರೂ ಹನ್ನೆರಡು ಮಂದಿ ಚಕ್ರವರ್ತಿಗಳೂ ಒಂಭತ್ತು ಮಂದಿ ಬಲಭದ್ರರೂ ಒಂಭತ್ತು ಮಂದಿ ನಾರಾಯಣರೂ ಒಂಭತ್ತು ಮಂದಿ ಪ್ರತಿನಾರಾಯಣರೂ ಸೇರಿ ಅರವತ್ತಮೂರು ಮಂದಿ ಪ್ರಸಿದ್ಧ ಪುರುಷರ (ತ್ರಿಷಷ್ಟಿ ಶಲಾಕಾ ಪುರುಷರ) ಚರಿತ್ರೆಯನ್ನು ಪ್ರತಿಪಾದಿಸುವುದರಿಂದ ಈ ಗ್ರಂಥಕ್ಕೆ 'ಮಹಾ ಪುರಾಣ'ವೆಂದು ಹೆಸರು ಬಂದಿರುವುದು". 'ಈ ಮಹಾ ಪುರಾಣವನ್ನು ಋಷಿಗಳು ಹೇಳಿರುವುದರಿಂದ ಇದು ಪ್ರಮಾಣವಾಗಿಯೂ ಸತ್ಯವಾಗಿಯೂ ಇದೆ. ಆದುದರಿಂದ ಆತ್ಮ ಕಲ್ಯಾಣವನ್ನು ಇಚ್ಛಿಸುವವರು ಇದನ್ನು ನಂಬಬೇಕು', ಇದರಲ್ಲಿ ಪೂರ್ವಪುರಾಣವೆಂದೂ ಉತ್ತರ ಪುರಾಣವೆಂದೂ ಎರಡು ಭಾಗಗಳಿರುತ್ತವೆ. ಪೂರ್ವ ಪುರಾಣದಲ್ಲಿ ಶ್ರೀ ವೃಷಭಸ್ವಾಮಿಯೆಂಬ ಪ್ರಥಮ ತೀರ್ಥಂಕರರ ಮತ್ತು ಭರತನೆಂಬ ಪ್ರಥಮ ಚಕ್ರವರ್ತಿಯ ಚರಿತ್ರೆಗಳು ಬಹಳ ವಿಸ್ತಾರವಾಗಿ ವರ್ಣಿಸ ಲ್ಪಟ್ಟಿವೆ. ಮಿಕ್ಕ ಅರವತ್ತೊಂದು ಮಂದಿ ಮಹಾಪುರುಷರ ಚರಿತ್ರೆಗಳು ಉತ್ತರ ಪುರಾಣದಲ್ಲಿ ವರ್ಣಿಸಲ್ಪಟ್ಟಿವೆ. ಈ ಎರಡು ಪುರಾಣಗಳಲ್ಲಿಯೂ ಇನ್ನೂ ಅನೇಕ ಮಂದಿಯ ಚರಿತ್ರೆಗಳು ವರ್ಣಿಸಲ್ಪಟಿದ್ದರೂ ಅವರೆಲ್ಲ ಶಲಾಕಾಪುರುಷರ ಗಣನೆ ಯಲ್ಲಿಲ್ಲ. ಪೂರ್ವ ಪುರಾಣದಲ್ಲಿ ಹನ್ನೆರಡು ಸಾವಿರ ಶ್ಲೋಕಗಳೂ ಉತ್ತರ ಪುರಾಣದಲ್ಲಿ ಎಂಟುಸಾವಿರ ಶ್ಲೋಕಗಳೂ ಇರುತ್ತವೆ.

ಈ ಮಹಾಪುರಾಣದ ಕರ್ತೃ ಭಗವಜ್ಜಿನ ಸೇನಾಚಾರ್ಯರು ಮತ್ತು ಗುಣ ಭದ್ರಾಚಾರ್ಯರು. ಪೂರ್ವ ಪುರಾಣದಲ್ಲಿ ನಲವತ್ತೆರಡು ಪರ್ವ (ಹತ್ತು ಸಾವಿರದ ಮೂರು ನೂರ ಎಂಭತ್ತು ಶ್ಲೋಕ)ಗಳನ್ನು ಭಗವತ್ ಜಿನಸೇನರು ರಚಿಸಿ, ಅಷ್ಟರಲ್ಲಿ ಅವರ ಅವಸಾನ ಕಾಲವು ಪ್ರಾಪ್ತವಾಗಲಾಗಿ, ಅವರ ಶಿಷ್ಯ ಗುಣಭದ್ರಾ ಚಾರ್ಯರು ಉಳಿದ ಭಾಗವನ್ನು ಐದು ಪರ್ವ (ಒಂದು ಸಾವಿರದ ಆರುನೂರ ಇಪ್ಪತ್ತು ಶ್ಲೋಕ) ಗಳಲ್ಲಿ ಪೂರೈಸಿ, ಉತ್ತರ ಪುರಾಣವನ್ನು ಪೂರ್ಣವಾಗಿ ಎಪ್ಪ ತ್ತೇಳು ಪರ್ವ (ಎಂಟು ಸಾವಿರ ಶ್ಲೋಕ)ಗಳಲ್ಲಿ ರಚಿಸಿದರು. ಜಿನಸೇನರ ಕಾಲ ಕ್ರಿ.ಶ. ಸು. ೭೫೩–೮೫೮ ಎಂದು ಹೇಳಬಹುದಾಗಿದೆ. ಉತ್ತರ ಪುರಾಣವು ಕ್ರಿ.ಶ. ೮೯೮ರಲ್ಲಿ ರಚಿತವಾದುದು. ಗುರು ಶಿಷ್ಯರ ಕವಿತೆಗಳಲ್ಲಿ ಗುರುವಿನದು 'ಕಳಿತ

ಹಣ್ಣಿನಂತೆಯೂ ದ್ರಾಕ್ಷಾಪಾಕದಂತೆಯೂ' ಶಿಷ್ಯರದು 'ದೋರೆ ಹಣ್ಣಿನಂತೆಯೂ ನಾಳಿಕೇಳ ಪಾಕದಂತೆಯೂ' ಇರುವುದೆಂದು ಹೇಳಬಹುದು.

ಮಹಾಪುರಾಣವನ್ನು ಜಿನಸೇನರೇ ಸಂಪೂರ್ಣವಾಗಿ ರಚಿಸಲು ಉದ್ದೇಶಿಸಿದ್ದರೆಂಬುದು ಅವರ 'ಪುರಾಣಂ ಸಂಗ್ರಹಿಷ್ಯಾಮಿ ತ್ರಿಷಷ್ಟಿ ಪುರುಷಾಶ್ರಿತಂ' (೧-೧೯) ಎಂಬ ಮಾತಿನಿಂದ ವ್ಯಕ್ತವಾಗುತ್ತದೆ. 'ಜೈನರಲ್ಲಿ ಮೊತ್ತ ಮೊದಲು ಪುರಾಣವನ್ನು ರಚಿಸಿದವರು ಜಿನಸೇನಾಚಾರ್ಯರು' ಎಂಬ ಮಾತನ್ನು ದೊರಕಿರುವ ಕೃತಿ ದೃಷ್ಟಿಯಿಂದ ಹೇಳಬಹುದಾದರೂ, 'ಸ ಪೂಜ್ಯಃ ಕವಿಭಿರ್ಲೋಕೇ ಕವೀನಾಂ ಪರಮೇಶ್ವರಃ । ವಾಗರ್ಥ ಸಂಗ್ರಹಂ ಕೃತ್ಸ್ನಂ ಪುರಾಣಂ ಯಃ ಸಮಗ್ರಹೀತ್' (೧-೬೦)–'ಯಾರು ಶಬ್ದಾರ್ಥ ಸಂಗ್ರಹವುಳ್ಳ ಚತುರ್ವಿಂಶತಿ ಪುರಾಣವನ್ನು ಸಂಕ್ಷೇಪವಾಗಿ ರಚಿಸಿದರೋ ಅಂತಹ ಕವಿ ಪರಮೇಷ್ಠಿಗಳು ಲೋಕದಲ್ಲಿ ಕವಿಗಳಿಂದ ಪೂಜಿಸಲ್ಪಡುವುದಕ್ಕೆ ಯೋಗ್ಯರು' ಎಂದು ಹೇಳಿರುವುದರಿಂದ ಇದು ಇವರಿಗೆ ಆಕರ ಗ್ರಂಥವಾಗಿದೆ ಎಂದು ಹೇಳಬಹುದಾಗಿದೆ. 'ಇದು ಅಲ್ಲದೆ ಕೂಚಿ ಭಟ್ಟಾರಕ ಮೊದಲಾದವರು ಆ ದಿಕ್ಕಿನಲ್ಲಿ ಪ್ರಯತ್ನ ಶೀಲರಾಗಿದ್ದರೆಂದು ತಿಳಿಯ'ಬಹುದಾಗಿದೆ. ಇವನ್ನೂ ಈ ಗುರು ಶಿಷ್ಯರು ನೋಡಿರಬಹುದು.

ಇಂತಹ ಮೇರು ಕೃತಿಯನ್ನು ಕನ್ನಡಕ್ಕೆ ಮೊದಲು ಕೊಟ್ಟವರೆಂದರೆ ಶ್ರವಣಬೆಳಗೊಳದಲ್ಲಿ, ಗೋಮಟೇಶ್ವರನನ್ನು ಸ್ಥಾಪಿಸಿದ ಚಾಮುಂಡರಾಯರೇ. ಅವರು 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' ಎಂಬ ಹೆಸರಿನಿಂದ ಕನ್ನಡ ಗದ್ಯರೂಪದಲ್ಲಿ ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ರಚಿಸಿದರು. ಆದರೆ, ಇವರಿಗೆ ಆಕರ ಜಿನಸೇನ–ಗುಣಭದ್ರರ ಕೃತಿಯೊಂದೇ ಎಂದು ಹೇಳಲು ಬರುವುದಿಲ್ಲ. ಬೇರೊಂದು ಆಕರವೂ ಇದ್ದಿರಬಹುದೆಂಬುದಕ್ಕೆ ಇವರ ಶಾಂತಿತೀರ್ಥಂಕರರ ಪುರಾಣವೇ ಒಂದು ಉದಾಹರಣೆ. ಆದುದರಿಂದ ಜಿನಸೇನ ಗುಣಭದ್ರರ 'ಮಹಾ ಪುರಾಣ'ವನ್ನು ಕನ್ನಡಕ್ಕೆ ಮೊಟ್ಟ ಮೊದಲು ಕೊಟ್ಟವರೆಂದರೆ ಶ್ರೀ ಎತರ್ಾರ ಶಾಂತಿರಾಜ ಶಾಸ್ತ್ರಿಗಳವರೇ. ಈ ಕಾರಣದಿಂದ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಶ್ರೀ ಶಾಸ್ತ್ರಿಗಳದು ಒಂದು ಮರೆಯಲಾಗದ ಹೆಸರು. ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲೂಕಿನ ಹಳ್ಳಿ ಎತರ್ಾರು ಇವರ ಜನ್ಮಸ್ಥಳ. ಇವರ ವಿದ್ಯಾಭ್ಯಾಸ ಶ್ರವಣಬೆಳಗೊಳ, ಮೈಸೂರುಗಳಲ್ಲಿ ನಡೆದು, ಗ್ವಾಲಿಯರ್‌ನ ಮೊರೇನಾ, ಕಲ್ಕತ್ತಗಳಲ್ಲಿ ಮುಂದುವರಿದು ಪೂರ್ಣಗೊಂಡು ನ್ಯಾಯತೀರ್ಥ ಪ್ರಶಸ್ತಿಯನ್ನು ಪಡೆದರು. ಇವರಿಗೆ ಕನ್ನಡ, ತುಳು ಭಾಷೆಗಳ ಜೊತೆಗೆ, ಸಂಸ್ಕೃತ, ಪ್ರಾಕೃತ, ಹಿಂದಿ ಭಾಷೆಗಳಲ್ಲೂ ಉತ್ತಮ ಪಾಂಡಿತ್ಯವಿದ್ದಿತು. ಇವರು ಮೂವತ್ತಮೂರಕ್ಕೂ ಹೆಚ್ಚು ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇವುಗಳಲ್ಲಿ 'ನೇಮಿಜಿನೇಶ ಸಂಗತಿ', 'ನಾಗಕುಮಾರ ಚರಿತಂ', 'ಶತಕತ್ರಯ' ಮುಂತಾದ ಕನ್ನಡ ಸಾಹಿತ್ಯ ಗ್ರಂಥಗಳಿರುವುದು ತುಂಬ ಗಮನಾರ್ಹ. ಇವರು 'ವಿಶ್ವಬಂಧು', 'ವಿವೇಕಾಭ್ಯುದಯ' ಪತ್ರಿಕೆಗಳನ್ನು ಪ್ರಾರಂಭಿಸಿ, ಅವುಗಳ

ಸಂಪಾದಕರಾಗಿಯೂ ಹಲವು ಕಾಲ ಸೇವೆಸಲ್ಲಿಸಿದ್ದಾರೆ. ಈ ಪತ್ರಿಕೆಗಳ ಹೆಸರಿನಿಂದಲೇ ಶ್ರೀ ಶಾಸ್ತ್ರಿಗಳ 'ಮಾನಸಿಕ ಔದಾರ್ಯ, ಮುಕ್ತ ವಿಶಾಲ ಸ್ವಭಾವ'ಗಳನ್ನು ಕಾಣಬಹುದಾಗಿದೆ. ಇವರು ತಮ್ಮ ಬದುಕಿನ ಬಹುಕಾಲವನ್ನು ಮೈಸೂರಿನಲ್ಲಿ ಕಳೆದರು. ಇಲ್ಲಿನ ಪ್ರಾಚ್ಯ ಸಂಶೋಧನಾಲಯಗಳಲ್ಲಿ ಸಂಶೋಧಕರಾಗಿ ಕೂಡ ಸೇವೆ ಸಲ್ಲಿಸಿ. ಸಂಸ್ಕೃತದಲ್ಲಿ 'ತತ್ತ್ವಾರ್ಥ ಸೂತ್ರ', ಕನ್ನಡದಲ್ಲಿ 'ತತ್ತ್ವರತ್ನ ಪ್ರದೀಪಿಕೆ' ಮುಂತಾದ ಕೃತಿಗಳನ್ನು ಸಂಪಾದಿಸಿದ್ದಾರೆ. ಅವರ ಅಪಾರ 'ವಿದ್ವತ್ತಿನ ಕೀರ್ತಿ ಅರಮನೆ ಗುರುಮನೆಗಳಿಗೆ ಗಂಧಗಾಳಿಯಾಗಿ ತುಂಬಿತ್ತು'. ಗುರು ಮನೆಗಳಿಂದ ಸಂದ ಗೌರವ ಸಾಕಾಷ್ಟಿತ್ತು, ಅರಮನೆಯಿಂದಲೂ ಮೊದಲು 'ಆಸ್ಥಾನ ವಿದ್ವಾನ'ರೆಂದೂ ಅನಂತರ 'ಆಸ್ಥಾನ ಮಹಾವಿದ್ವಾನ'ರೆಂದೂ ಗೌರವಿಸಲ್ಪಟ್ಟು ಕಡೆಗೆ 'ಪಂಡಿತ ರತ್ನಂ' ಎಂಬ ಪ್ರಶಸ್ತಿಯನ್ನು ಪಡೆದರು. ಶ್ರೀಯುತರನ್ನು ಕನ್ನಡ ಸಾಹಿತ್ಯ ಪರಿಷತ್ತು ಸನ್ಮಾನ ಪತ್ರವನ್ನಿತ್ತು ಗೌರವಿಸಿದುದು ಒಂದು ವಿಶೇಷ ಸಂಗತಿ.

ಶ್ರೀ ಶಾಂತಿರಾಜ ಶಾಸ್ತ್ರಿಗಳು ಬದುಕಿ ಬಾಳಿದ ಕಾಲ ಈ ಶತಮಾನದ ಪೂರ್ವಾರ್ಧ. ಅದು ದೇಶದ ಸ್ವಾತಂತ್ರ್ಯ ಹೋರಾಟದ, ಕರ್ನಾಟಕ ಏಕೀಕರಣದ ಚಳುವಳಿಗಳ ಕಾಲ. ಕನ್ನಡ ನಾಡು ನುಡಿಗಳ ಬಗ್ಗೆ ಜನ ಜಾಗೃತಿ ಮೂಡುತ್ತಿದ್ದ ಕಾಲ, ನಾಡಜನರಲ್ಲಿ ಕನ್ನಡತನವನ್ನು ಎಚ್ಚರಿಸುತ್ತಿದ್ದ ಕಾಲ. ವಿದ್ವಾಂಸರಾದವರು ತಮ್ಮ ವಿದ್ವತ್ತಿನ ಫಲವನ್ನೂ ನಾಡಜನರಿಗೆ–ಜನಸಾಮಾನ್ಯರಿಗೆ ಜನ ಭಾಷೆಯಲ್ಲಿ ನೀಡಬೇಕೆಂದು ಭಾವಿಸುತ್ತಿದ್ದ ಕಾಲ. ಆಚಾರ್ಯ ಶ್ರೀ ಮೊದಲಾದವರು ಕರ್ನಾಟಕವನ್ನೆಲ್ಲ ಸಂಚರಿಸಿ 'ಕನ್ನಡ ನುಡಿ ತಲೆಯೆತ್ತುವ ಬಗೆ'ಯನ್ನು ತಿಳಿಸುತ್ತಾ 'ಕನ್ನಡಿಗರಿಗೆ ಒಳ್ಳೆ ಸಾಹಿತ್ಯ'ವನ್ನು ಕೊಡುತ್ತಿದ್ದ ಕಾಲ ; 'ಕನ್ನಡವನ್ನುದ್ಧರಿಸಿದ ಮಹಾಪುರುಷ'ರ ಕಾಲ. ಅರಮನೆಯ ಸರಸ್ವತೀ ಭಂಡಾರದಿಂದ ಅಷ್ಟಾದಶ ಪುರಾಣಗಳೇ ಮೊದಲಾದುವು ಹೊಸಗನ್ನಡ ಗದ್ಯಾನುವಾದದೊಂದಿಗೆ ಪ್ರಕಟಣೆಗೆ ಸಿದ್ಧವಾಗುತ್ತಿದ್ದ ಕಾಲ. ಈ ಹೊತ್ತಿಗಾಗಲೇ ಮುಮ್ಮಡಿ ಕೃಷ್ಣರಾಜರ 'ವಾಣೀವಿಲಾಸ ಭಾರತ', ದೇವಶಿಖಾಮಣಿ ಅಳಸಿಂಗಾಚಾರ್ಯರ 'ರಾಮಾಯಣ, ಭಾರತ, ಭಾಗವತ'ಗಳು ಮುಳಿಯ ತಿಮ್ಮಪ್ಪಯ್ಯನವರ 'ಆದಿ ಪುರಾಣದ ಕಥೆ', ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ಪಂಪ ಭಾರತದ ಕಥೆ' 'ಪಂಪ ರಾಮಾಯಣದ ಕಥೆ' ಮುಂತಾಗಿ ಹಲವು ಕೃತಿಗಳು ಸಂಸ್ಕೃತ ಹಳಗನ್ನಡಗಳು ಬಾರದ ಜನರಿಗಾಗಿ ಹೊಸಗನ್ನಡ ಗದ್ಯದಲ್ಲಿ ಪ್ರಕಟವಾಗಿದ್ದುವು. ಇಂತಹ ಕಾಲದಲ್ಲಿದ್ದ ಶ್ರೀ ಶಾಸ್ತ್ರಿಗಳವರು ರೂಢಿಯಾಗಿದ್ದ ಸಂಸ್ಕೃತ ವಿದ್ವಾಂಸರ ಮಡಿವಂತಿಕೆಯನ್ನು ಮರೆತು ಕನ್ನಡ ನುಡಿಯತ್ತ ತಿರುಗಿದುದು ಒಂದು ಅಪೂರ್ವ ಘಟನೆ. ಅವರ ಕಾಲ ಧರ್ಮ ಪ್ರಜ್ಞೆಗೆ ಇದೊಂದು ಶ್ರೇಷ್ಠ ನಿದರ್ಶನ. ಶಾಸ್ತ್ರಿಗಳ ಕೃತಿಗಳಲ್ಲಿ ಹೆಚ್ಚಿನವು ಹೊಸಗನ್ನಡ ಗದ್ಯಾನುವಾದಗಳೊಂದಿಗೆ ಪ್ರಕಟವಾಗಿರುವುವು. ಉದಾ ; ಅನ್ಯಯೋಗ ವ್ಯವಚ್ಛೇದಿಕಾ, ದಶಲಕ್ಷಣ ಧರ್ಮ, ದಶಭಕ್ತಿ, ದ್ರವ್ಯಸಂಗ್ರಹ, ಪೂಜಾಸಾರಸಮುಚ್ಚಯ, ರತ್ನಕರಂಡಕ ಶ್ರಾವಕಾಚಾರ.

ಶತಕತ್ರಯ ಮುಂತಾದುವು. ಇವುಗಳಲ್ಲಿ 'ಪೂಜಾಸಾರ ಸಮುಚ್ಚಯ'ವು ಪೂಜೆ, ಹೋಮ, ಸ್ತೋತ್ರಾದಿಗಳನ್ನೊಳಗೊಂಡ ಕೃತಿ. ಇಂತಹವುಗಳನ್ನು ಗದ್ಯಾನುವಾದ ದೊಂದಿಗೆ ಕೊಟ್ಟಿದ್ದು ಶ್ರೀ ಶಾಸ್ತ್ರಿಗಳ ಜನಹಿತ ದೃಷ್ಟಿಗೆ ಒಂದು ಶ್ರೇಷ್ಠ ನಿದರ್ಶನ. ಅರ್ಚಕರು, ಪುರೋಹಿತರು ತಮ್ಮ ತಮ್ಮ ಕಾರ್ಯಗಳನ್ನು ಅರ್ಥವರಿತು ಮಾಡ ಬೇಕೆಂದು ಅವರು ಆಶಿಸಿದುದನ್ನೂ ಎಷ್ಟು ಮೆಚ್ಚಿದರೂ ಅದು ಅತ್ಯಲ್ಪವೇ ಸರಿ. ಈ ಎಲ್ಲ ಕೃತಿಗಳಿಗೆ ಕಿರೀಟಪ್ರಾಯವಾಗಿ ಪ್ರಕಟವಾದುದು ಅವರ 'ಮಹಾಪುರಾಣ'.

ಇಪ್ಪತ್ತು ಸಾವಿರ ಶ್ಲೋಕಗಳುಳ್ಳ ಈ ಮೇರು ಕೃತಿಯನ್ನು 'ಕರ್ನಾಟಕ ಭಾವ ದೀಪಿಕಾ' ಎಂಬ ಹೆಸರಿನಿಂದ ಹೊಸಗನ್ನಡದಲ್ಲಿ 'ಭಾವಾರ್ಥ'ವನ್ನು ಬರೆದು ಕನ್ನಡ ಜನತೆಗೆ ಮಹೋಪಕಾರವನ್ನು ಮಾಡಿರುತ್ತಾರೆ. 'ಜೈನರ ಪುರಾಣಗಳಲ್ಲೆಲ್ಲ 'ಮಹಾಪುರಣ'ವು ದೊಡ್ಡದಾದ ಗ್ರಂಥವಾಗಿಯೂ ಜೈನರಿಗೆ ಬಹಳ ಆದರಣೀಯ ವಾಗಿಯೂ ಇರುತ್ತದೆ. ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿರುವುದರಿಂದ ಸಂಸ್ಕೃತ ಪರಿಜ್ಞಾನವಿಲ್ಲದವರು ಈ ಗ್ರಂಥದ ಅತುಲ ಫಲವನ್ನು ಸ್ವಯಂ ಪಠಿಸಿ ಹೊಂದ ಲಾರದ' ಜನರನ್ನು ಕಂಡು ಕನಿಕರಿಸಿ, ಇಂತಹ ಮಹೋಪಕಾರವನ್ನು ಮಾಡಿರುತ್ತಾರೆ. ಸರಳ ಹೊಸಗನ್ನಡದಲ್ಲಿ ಇದು ಬಂದುದರಿಂದ ಓದಬಲ್ಲ ಪ್ರತಿಯೊಬ್ಬರೂ ಓದಿ ಕೃತಾರ್ಥರಾಗಬಹುದಾಗಿದೆ. ಶ್ರೀ ಶಾಸ್ತ್ರಿಗಳ ಉದಾತ್ತ ಭಾವನೆಯ ಈ ಉಪಕಾರ ವನ್ನು ಕನ್ನಡತನದ ಯಾವ ಮಾನದಂಡದಿಂದ ತಾನೇ ಅಳೆದು ಬೆಲೆಕಟ್ಟಲಾದೀತು ! ಇಂತಹ ಧರ್ಮಗ್ರಂಥಗಳ ರಕ್ಷಣೆಯ ಬಗೆಗೂ ಶ್ರೀ ಶಾಸ್ತ್ರಿಗಳಿಗಿದ್ದ ಕಳಕಳಿ ಇದು– 'ಆವುದೊಂದು ಸಮಾಜದ ಅಸ್ತಿತ್ವವು ಜಗತ್ತಿನಲ್ಲಿ ಚಿರಕಾಲವಿರಬೇಕಾದರೆ, ಅದರ ಅಖಂಡವಾದ ಸಾಹಿತ್ಯವು ಅವಿಚ್ಛಿನ್ನವಾಗಿರಬೇಕು. ಧರ್ಮಾವಲಂಬಿಗಳು ನಾಶ ವಾದರೂ ಧರ್ಮಬೋಧಕವಾದ ಸಾಹಿತ್ಯವು ನಿರಪಾಯವಾಗಿದ್ದರೆ, ಅದರ ಮಹಿಮೆ ಯಿಂದ ಮುಂದೆ ಮುಂದೆ ಹೊಸ ಹೊಸದಾಗಿ ಧರ್ಮಾವಲಂಬಿಗಳುಂಟಾಗಬಹುದು. ......ತನ್ನ ಧರ್ಮವು ಭೂಮಂಡಲದಲ್ಲಿ, ಅಜರಾಮರವಾಗಿರಬೇಕೆಂದು ಬಯಸುವ ಪ್ರತಿಯೋರ್ವ ಧರ್ಮಾಭಿಮಾನಿಯೂ ತನ್ನ ಧರ್ಮದ ಸ್ಥಿರತೆಗೆ ಮೂಲ ಕಾರಣವಾದ ಸಾಹಿತ್ಯವು ಗ್ರಂಥರಾಶಿಯು ಲೋಪವಾಗದಂತೆ ನೋಡಿಕೊಳ್ಳುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಬೇಕು'. ಈ ಭಾವನೆಯನ್ನು ಪರಿಭಾವಿಸಿದಷ್ಟೂ ಅವರ ಬಗೆಗೆ ಎಂತಹ ಗೌರವ ಮೂಡುತ್ತದೆ !!

ಕೃತಿಯ ಪ್ರಾರಂಭದಲ್ಲಿ 'ಶ್ರೀ ವೃಷಭಜಿನನಂಘ್ರಿಯ ! ಭಾವಿಸಿ ನಮಿಸೀಗ ಮುದದೆ ಪೊಸಗನ್ನಡದೊಳ್ । ಪಾವನ ಪೂರ್ವ ಪುರಾಣದ । ಭಾವಮನರಿಪುವೆನು ವಿಪುಲ ಭಕ್ತಿಯ ಭರದಿಂ' ಎಂದು ವಿನೀತರಾಗಿ, ವಿನಮ್ರರಾಗಿ ಪ್ರತಿಜ್ಞೆ ಮಾಡಿರು ತ್ತಾರೆ. ಇಲ್ಲಿ 'ಪೂರ್ವ ಪುರಾಣದ' ಎಂಬ ಮಾತಿದ್ದರೂ ಉತ್ತರ ಪುರಾಣದ ಪ್ರಾರಂಭದಲ್ಲಿ ಬೇರೆ ಪ್ರತಿಜ್ಞಾ ವಚನವಿಲ್ಲದುದರಿಂದ ಇದೇ ಇಡೀ ಕೃತಿಗೆ ಅನ್ವಯಿ ಸುವುದೆಂದು ಭಾವಿಸಬಹುದಾಗಿದೆ. ಜಿನಸೇನರ ಪ್ರಾರ್ಥನಾ ಪದ್ಯ 'ಶ್ರೀಮತೇ

ಸಕಲಜ್ಞಾನ ಸಾಮ್ರಾಜ್ಯ ಪದಮೀಯುಷೇ। ಧರ್ಮಚಕ್ರಭೃತೇ ಭರ್ತ್ರೇ ನಮಃ ಸಂಸಾರ ಭೀಮುಷೇ' ಎಂಬುದಕ್ಕೆ 'ಇಷ್ಟದೇವತೆಯ ವಿಶಿಷ್ಟನಾಮ ನಿರ್ದೇಶವನ್ನು... ಮಾಡದೆ ಅನೇಕಾರ್ಥ ದ್ಯೋತಕಗಳಾದ ಪದಗಳನ್ನು ಸಂಯೋಜಿಸಿ ಮಂಗಲವನ್ನು ಮಾಡಿರುವುದರಿಂದ ಈ ಪದಗಳಿಂದ ಸೂಚಿತರಾಗುವ ಎಲ್ಲಾ ಇಷ್ಟ ದೇವತೆಗಳಿಗೆ ನಮಸ್ಕಾರವನ್ನು ಮಾಡುವುದು ಗ್ರಂಥಕರ್ತರ ಉದ್ದೇಶವಾಗಿರುವುದೆಂದು' ಭಾವಿಸಿ ವೃಷಭಸ್ವಾಮಿಗೆ, ತೀರ್ಥಂಕರ ಕೇವಲಿಗಳಿಗೆ, ಪಂಚಪರಮೇಷ್ಠಿಗಳಿಗೆ, ಭರತೇಶ್ವರನಿಗೆ, ಬಾಹುಬಲಿಸ್ವಾಮಿಗೆ, ವೃಷಭಸೇನ ಗಣಧರನಿಗೆ ಎಂದು ಆರು ಬಗೆಯಾಗಿ ಅರ್ಥೈಸಿರುವುದನ್ನು ಕಂಡಾಗ ಶ್ರೀ ಶಾಸ್ತ್ರಿಗಳ ಪಾಂಡಿತ್ಯಕ್ಕೆ ಬೆರಗಾಗುತ್ತೇವೆ! 'ಧರ್ಮಚಕ್ರಭೃತೇ' ಎಂಬ ಪದದಿಂದ ಚಕ್ರವರ್ತಿಗಳಿಗೂ 'ಸಂಸಾರಭೀಮುಷೇ' ಎಂಬ ಪದದಿಂದ ಸಮಸ್ತ ಬಲ ದೇವರುಗಳಿಗೂ ನಮಸ್ಕಾರ ಸಲ್ಲುತ್ತಿದೆಯಂತೆ!! 'ಈ ಪದ್ಯದಿಂದ ತ್ರಿಷಷ್ಠಿ ಶಲಾಕಾ ಪುರುಷರ ಕಥಾ ಸೂಚನೆಯೂ' ಆಗುತ್ತದೆಯಂತೆ!!.

ಸಂಸ್ಕೃತವನ್ನು ಕಲಿತವರು ಕನ್ನಡದಲ್ಲಿ ಬರೆಯುವುದೆಂದರೆ ಅದು ಕನ್ನಡ ಭಾಷಾ ಶೈಲಿಯ ಕೊಲೆ. ಆದರೆ, ಶಾಸ್ತ್ರಿಗಳ ಕನ್ನಡ ಶೈಲಿ ಹಾಗಿರದೆ, ಸಂಸ್ಕೃತವನ್ನು ಆಧಾರವಾಗಿಟ್ಟುಕೊಂಡು ಬರೆಯುತ್ತಿರುವರೆಂದೂ ಅನ್ನಿಸದೆ, ಸರಾಗವಾಗಿ ಓದಿಸಿಕೊಂಡು ಹೋಗುವ ಸರಳ, ಶುದ್ಧ ಶೈಲಿ, ಭಾವಾರ್ಥವೆಂದಾಗ ಮೂಲದ ಅರ್ಥವಾಗದ ಶಬ್ದಗಳನ್ನು ಕೈಬಿಟ್ಟು ಬರೆಯುವವರಿಗೆ ಒಂದು ಸುಲಭದ ದಾರಿ. ಶಾಸ್ತ್ರಿಗಳ ವಿದ್ವತ್ತು ಹಾಗೆ ವಿದ್ವತ್ಪ್ರಪಂಚಕ್ಕೆ ಮೋಸ ಮಾಡುವಂತಹುದಲ್ಲ. ಹೀಗಾಗಿ ಮಹಾಪುರಾಣದ ಯಾವುದೊಂದು ಶಬ್ದಾರ್ಥವನ್ನೂ ಬಿಡದೆ ಸುಂದರವಾಗಿ ಭಾವಾರ್ಥವನ್ನು ಬರೆದಿರುತ್ತಾರೆ. ಉದಾ :

೧ : ಕವಿ ಪ್ರಮಾದಜಾನ್ ದೋಷಾನಪಾಸ್ಯಾಸ್ಮಾತ್ಕಥಾಮೃತಾತ್ । ಸಂತೋ ಗುಣಾನ್ ಜಿಘೃಕ್ಷಂತು ಗುಣಾಗೃಹ್ಯಾ ಹಿ ಸಜ್ಜನಾಃ ॥ ಸತ್ಪುರುಷರು ಕವಿಯ ಪ್ರಮೋದದಿಂದುಂಟಾದ ದೋಷಗಳನ್ನೂ ಬಿಟ್ಟು ಈ ಕಥೆಯೆಂಬ ಅಮೃತದಿಂದ ಗುಣಗಳನ್ನು ಗ್ರಹಣ ಮಾಡಲಿಚ್ಛಿಸಲಿ. ಸಜ್ಜನರು ಗುಣಗ್ರಾಹಿಗಳಲ್ಲವೆ ? (೧–೩೭).

೨ : ಸುಭಾಷಿತ ಮಹಾರತ್ನ ಸಂಭೃತೇಽಸ್ಮಿನ್ಕಥಾಂಬುಧೌ । ದೋಷಗ್ರಹಾನ ನಾದೃತ್ಯ ಯತಧ್ವಂ ಸಾರಸಂಗ್ರಹೇ ॥ ಸುಭಾಷಿತಗಳೆಂಬ ಮಹಾರತ್ನಗಳಿಂದ ತುಂಬಿದ ಈ ಕಥೆಯೆಂಬ ಸಮುದ್ರದಲ್ಲಿ ದೋಷಗಳೆಂಬ ಕ್ರೂರ ಜಲಜಂತುಗಳನ್ನು ದೂರಮಾಡಿ ಸಾರವನ್ನು ಸಂಗ್ರಹ ಮಾಡುವುದರಲ್ಲಿ ಯತ್ನಿಸಿರಿ (೧–೩೮).

೩ : ಕಿಂಚಿದ್ಧಿತಂ ಪ್ರಿಯಂ ಚೋಕ್ತಂ ಕಿಂಚಿಚ್ಚಹಿತಮಪ್ರಿಯಂ। ಕಿಂಚಿತ್ಪ್ರಿಯಂ ಸದಹಿತಂ ಪರಂ ಚಾಹಿತಮಪ್ರಿಯಂ ॥ ಕೆಲವು ಮಾತು ಹಿತವೂ ಪ್ರಿಯವೂ ಆಗಿರುವುದು; ಕೆಲವು ಮಾತು ಹಿತವೂ ಅಪ್ರಿಯವೂ ಆಗಿರುವುದು; ಇನ್ನು ಕೆಲವು ಮಾತು

ಪ್ರಿಯವಾಗಿದ್ದು ಅಹಿತವಾಗಿರುವುದು ; ಮತ್ತೆ ಕೆಲವು ಮಾತು ಅಹಿತವೂ ಅಪ್ರಿಯವೂ ಆಗಿರುವುದು (೪೮–೧೧೦).

ಮೂಲದೊಂದಿಗೆ ಭಾವಾರ್ಥವನ್ನು ನೋಡಿದ್ದಾಗಿದೆ. ಈಗ ಕೆಲವು ಭಾವಾರ್ಥಗಳಷ್ಟನ್ನೇ ನೋಡೋಣ

೧. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಮಿತ್ರನಂತೆ ಹಿತವನ್ನು ಮಾಡುವ ಬಂಧುವು ಬೇರೆ ಯಾರೂ ಇಲ್ಲ. ಗುರುವಿಗೂ ಹೇಳತಕ್ಕುದಲ್ಲದ ಗುಟ್ಟಿಗಿಂತಲೂ ಹೆಚ್ಚು ಗುಟ್ಟಾದ ವಿಷಯವು ಮಿತ್ರನಿಗೆ ಹೇಳಲ್ಪಡುವುದು. ಪ್ರಾಣಗಳನ್ನೂ ಪರಿಗಣಿಸದೆ ಕಷ್ಟ ಸಾಧ್ಯವಾದ ಕಾರ್ಯಗಳನ್ನು ಮಿತ್ರರು ಸಾಧಿಸುತ್ತಾರೆ. ಆ ವಿಷಯದಲ್ಲಿ ಮಣಿಕೇತು ದೇವನೇ ಸ್ಫುಟವಾದ ದೃಷ್ಟಾಂತ. ಆದುದರಿಂದ ಇಂತಹ ಮಿತ್ರನನ್ನು ದೊರಕಿಸಬೇಕು (೪೮–೧೪೨).

೨. ಮತ್ತೊಂದು ಕಾಲದಲ್ಲಿ ಇದೇ ನಗರದಲ್ಲಿ ಮಹಾವೀರ ಸ್ವಾಮಿಯು ಆಹಾರದ ನಿಮಿತ್ತದಿಂದ ಪ್ರವೇಶಿಸಿದನು. ಅವನನ್ನು ಈ ಚಂದನೆಯು ಭಕ್ತಿಯಿಂದ ನೋಡಿ ಸರಪಣಿಯ ಬಂಧ ಮುಕ್ತಳಾಗಿಯೂ ಸರ್ವಾಭರಣಗಳಿಂದ ನೋಡಲ್ಪಡತಕ್ಕುದಾದ ದೇಹವುಳ್ಳವಳಾಗಿಯೂ ಅವುಗಳ ಭಾರದಿಂದಲೋ ಎನ್ನುವಂತೆ ಮಸ್ತಕದಿಂದ ಭೂತಲವನ್ನು ಸ್ಪರ್ಶಿಸಿ ಚೆನ್ನಾಗಿ ನಮಸ್ಕರಿಸಿ, ಇದಿರ್ಗೊಂಡು ವಿಧಿ ಪ್ರಕಾರವಾಗಿ ಭೋಜನ ಮಾಡಿಸಿ [ದಳು] (೭೫–೬೮).

೩. ಶ್ರೇಣಿಕರಾಜನೆ, ಕೇಳು. ಜಂಬೂ ವೃಕ್ಷದಿಂದ ವಿಭೂಷಿತವಾದ ಭೂತಲದಲ್ಲಿ ಇಲ್ಲಿ ಭರತ ಕ್ಷೇತ್ರದಲ್ಲಿ ಹೇಮಾಂಗದ ದೇಶದಲ್ಲಿ ರಾಜಪುರದ ದೊರೆಯೂ ಚಂದ್ರನಂತೆ ಎಲ್ಲರನ್ನೂ ಸಂತೋಷ ಪಡಿಸಿದವನೂ ಆದ ಸತ್ಯಂಧರ ಭೂಪಾಲನಿದ್ದನು. ಇವನಿಗೆ ಮತ್ತೊಬ್ಬಳು ವಿಜಯಲಕ್ಷ್ಮಿಯೋ ಎಂಬಂತೆ ವಿಜಯೆಯು ಮಹಾದೇವಿಯಾಗಿದ್ದಳು. ಸಮಸ್ತ ಕಾರ್ಯ ನಿಪುಣನಾದ ಕಾಷ್ಠಾಂಗಾರನೆಂಬವನು ಮಂತ್ರಿಯಾಗಿದ್ದನು. ದೈವ ಬಾಧೆಗಳನ್ನು ನಾಶಮಾಡುವವನಾದ ರುದ್ರದತ್ತನೆಂಬ ಪುರೋಹಿತನಿದ್ದನು (೭೫ : ೭೩೭–೭೪೫).

೪. ರಾಜನೆ, ಕೇಳು. ಅತಿಥಿಯೂ ಗುಣಿಯೂ ಆದ ನಾನು ಭೋಜನಕ್ಕೋಸ್ಕರ ನಿನ್ನನ್ನು ಬೇಡುತ್ತೇನೆ. ನನ್ನನ್ನು ಭೋಜನ ಮಾಡಿಸು.

೫. ಆತ್ಮ ಪ್ರಶಂಸೆಯೂ ಪರನಿಂದೆಯೂ ಮರಣಕ್ಕಿಂತ ವಿಶೇಷವಾಗಿರುವುದಿಲ್ಲ. ಮೃತ್ಯುವಿಗೆ ಸಮಾನಗಳೆಂದು ಭಾವವು.

೬. ಪುಣ್ಯಗಳನ್ನು ಗಳಿಸದಿರುವವನು ರತ್ನಾಕರ(ಸಮುದ್ರ)ದಲ್ಲಿಯೂ ಉತ್ತಮ ರತ್ನವನ್ನು ಪಡೆಯುವುದಿಲ್ಲ.

೭. ಈ ಮಹಾಪುರಾಣವೇ ಭಕ್ತಿಯುಳ್ಳ ಭವ್ಯರಿಂದ ವ್ಯಾಖ್ಯಾನ ಮಾಡತಕ್ಕುದೂ ಯಾವಾಗಲೂ ಕೇಳುವುದಕ್ಕೆ ಯೋಗ್ಯವೂ ಚಿಂತಿಸುವುದಕ್ಕೆ ಯೋಗ್ಯವೂ ಬರೆಸುವುದಕ್ಕೆ ಯೋಗ್ಯವೂ ಆಗಿರುತ್ತದೆ.

ಈ ಉದಾಹರಣೆಗಳನ್ನು ನೋಡುವಾಗ ಎಷ್ಟು ಸುಂದರ ಶೈಲಿ ಎಂಬುದು ಯಾರಿಗೂ ಮನವರಿಕೆಯಾಗದಿರದು. ಮೂಲಕ್ಕೆ ಅದಷ್ಟು ಮಟ್ಟಿಗೆ ಹತ್ತಿರ ವಾಗಿದ್ದಾರೆ. ಹಾಗಿದ್ದೂ ಕನ್ನಡ ಎಷ್ಟು ಸುಲಲಿತವಾಗಿದೆ. ಸರಳವಾಗಿದೆ ಎಂಬುದನ್ನು ಭಾವಿಸಿದಷ್ಟು ಶಾಸ್ತ್ರಿಗಳ ಬಗೆಗೆ ಹೆಚ್ಚು ಹೆಚ್ಚು ಗೌರವ ಮೂಡುತ್ತದೆ. ಇದು ಐವತ್ತು ವರ್ಷಗಳಷ್ಟು ಹಿಂದಿನ ಶೈಲಿ ಎಂದಾಗ ಇನ್ನೂ ಅಚ್ಚರಿ ಮೂಡುತ್ತದೆ. ಶ್ರೀ ಶಾಸ್ತ್ರಿಗಳು ತಮ್ಮ ಕಾಲದ ಇಂಗ್ಲಿಷ್ ಅಭ್ಯಾಸದ ಹಿನ್ನೆಲೆಯಲ್ಲಿ ಬರೆಯುತ್ತಿದ್ದವರ ಶೈಲಿಗೆ ಮಾರು ಹೋಗದ ಪರಂಪರೆಯಾಗಿ ಬಂದಿದ್ದ, ಅಂದಿಗೆ ಶ್ರೇಷ್ಠವೆನಿಸಿದ್ದ ಶೈಲಿ ಯನ್ನು ಮೈಗೂಡಿಸಿಕೊಂಡ ಧೀಮಂತ ವ್ಯಕ್ತಿ.

ಇಂದು ಒಂದು ಶಾಸ್ತ್ರವೇ ಆಗಿ ಬೆಳೆದಿರುವ 'ಗ್ರಂಥ ಸಂಪಾದನೆ' ಆಗಿನ್ನೂ ಹೊಸದು. ಆ ಕಾಲಕ್ಕಾಗಲೇ ಶಾಸ್ತ್ರಿಗಳು 'ಹಳೆಯ ಕಾವ್ಯಗಳನ್ನು ಬೇರೆ ಬೇರೆ ಓಲೆಗರಿ ಗ್ರಂಥಗಳಿಂದ ಸಿದ್ಧಪಡಿಸಿ, ಅದಕ್ಕೆ ವಿಸ್ತಾರವಾದ ಪೀಠಿಕೆ, ಕಥಾಸಾರ. ಕವಿ ಕಾವ್ಯ ವಿಮರ್ಶೆಗಳನ್ನು ಕೊಡುತ್ತಿದ್ದರು. ಮಂಗರಸ ಕವಿ ವಿರಚಿತ 'ನೇಮಿಜಿನೇಶ ಸಂಗತಿ' (ಹರಿವಂಶ ಪುರಾಣ), ಬಾಹುಬಲಿ ಕವಿ ವಿರಚಿತ 'ನಾಗಕುಮಾರ ಚರಿತಂ' ರತ್ನಾಕರನ 'ಶತಕತ್ರಯ' ಇವು ಇದಕ್ಕೆ ಒಳ್ಳೆಯ ಉದಾಹರಣೆಗಳು. ಹೀಗೆಯೇ. 'ಮಹಾಪುರಾಣ'ವನ್ನು ಬೇರೆ ಬೇರೆ ಪ್ರತಿಗಳಿಂದ ಸಿದ್ಧಪಡಿಸಿ ಗ್ರಂಥಕರ್ತೃ ಪರಿಚಯ, ಗ್ರಂಥ ಕರ್ತರ ಕಾಲ, ಕೃತಿಗಳು, ಮಹಾಪುರಾಣದ ಮಹತ್ವ ಮುಂತಾಗಿ ಹಲವು ವಿಷಯಗಳನ್ನು ತಮ್ಮ ಮುನ್ನುಡಿಯಲ್ಲಿ ಕೊಟ್ಟಿರುತ್ತಾರೆ. ಹೀಗೆ 'ಗ್ರಂಥ ಸಂಪಾದನಾ ಶಾಸ್ತ್ರದ ಆದ್ಯರಲ್ಲಿ ಶಾಂತಿರಾಜ ಶಾಸ್ತ್ರಿಗಳು ಗಣ್ಯರು'. ಆ ಆದ್ಯ ಗ್ರಂಥಗಳಲ್ಲಿ 'ಮಹಾಪುರಾಣ'ವು ಗಣ್ಯವಾದುದು.

ಮೂಲದಲ್ಲಿ ನಾಮಮಾತ್ರವಾಗಿರುವ ಕನಕಾವಲೀ ತಪಸ್ಸು. ಆಚಾಮ್ಲವರ್ಧನ ತಪಸ್ಸು ಪರೀಷಹ ಮುಂತಾದ ಪಾರಿಭಾಷಿಕ ಶಬ್ದಗಳನ್ನೂ ವಿವರಿಸಿರುತ್ತಾರೆ. ವ್ಯಾಕರಣ, ಛಂದಸ್ಸು, ಅಲಂಕಾರಗಳನ್ನು ಅಲ್ಲಲ್ಲಿ ಗುರುತಿಸಿರುತ್ತಾರೆ. ಇದು ಅವರ ತತ್ತ್ವಶಾಸ್ತ್ರ ಸಾಹಿತ್ಯ ಶಾಸ್ತ್ರಗಳ ಪಾಂಡಿತ್ಯಕ್ಕೆ ನಿದರ್ಶನ.

ತೀರ್ಥಂಕರ ಪುರಾಣಗಳನ್ನು ಬರೆದ ಪಂಪಾದಿಗಳಿಗೂ, ಚರಿತೆಗಳನ್ನೂ ಬರೆದ ಭಾಸ್ಕರ ಮುಂತಾದವರಿಗೂ ಈ 'ಮಹಾಪುರಾಣ'ವು ಆಕರ ಗ್ರಂಥವಾಗಿದೆ. ಅಂತೆಯೇ ಈಚೆಗೆ ತೀರ್ಥಂಕರ ಪುರಾಣಗಳನ್ನೂ ಚರಿತೆಗಳನ್ನು ಮೂಲದೊಡನೆ ಹೋಲಿಸಿ ಬೆಲೆ ಕಟ್ಟುವ ಸಂಪಾದಕರಿಗೆ, ವಿಮರ್ಶಕರಿಗೆ, ಸಾಹಿತ್ಯ ಚರಿತ್ರಕಾರರಿಗೆ ಶ್ರೀ ಶಾಸ್ತ್ರಿಗಳ ಅನುವಾದವೇ ಆಕರವಾಗಿದೆ. ಈ ಅನುವಾದ ಬಾರದಿದ್ದರೆ ಇಂತಹ ಕೆಲಸ ಬಹುಪಾಲು ನಡೆಯುತ್ತಿದ್ದಿರಲಿಲ್ಲವೆಂದೇ ಹೇಳಬೇಕು. ಈ ಕಾರಣದಿಂದಲೂ ಕನ್ನಡ ಸಾಹಿತ್ಯ ಲೋಕಕ್ಕೆ ಶ್ರೀ ಶಾಸ್ತ್ರಿಗಳ ಅನುವಾದ 'ಮಹಾಪುರಾಣ' ಮಹೋಪಕಾರವಾಗಿದೆ.

'ಮನುಷ್ಯ ಜಾತಿ ತಾನೊಂದೆ ವಲಂ' (೧೫–೧೪) ಎಂಬುದು ಪಂಪನ ಮಾತು. ಅಲ್ಪದಲ್ಲಿ ಕಲ್ಪರಸ್ನು ಸೃಷ್ಟಿಸಿರುವ ಈ ಮಾತು ಪಂಪನದೇ ಎನ್ನುವ ಭ್ರಾಂತಿ ಕೆಲವರಿಗೆ. ಶ್ರೀ ಶಾಸ್ತ್ರಿಗಳ ಅನುವಾದವನ್ನೂ ಗಮನಿಸಿದ್ದಲ್ಲಿ ಇಂತಹ ಭ್ರಾಂತಿಗೆ ಅವಕಾಶವಿರುತ್ತಿರಲಿಲ್ಲ. ಇದರ ಮೂಲದ ಮಹಾವಾಕ್ಯ ಹೀಗಿದೆ – 'ಮನುಷ್ಯ ಜಾತಿರೇಕೈವ ಜಾತಿನಾಮೋದಯೋದ್ಭವಾ' (೩೮–೪೫) 'ಜಾತಿಯೆಂಬ ನಾಮಕರ್ಮದ ಉದಯದಿಂದುಂಟಾದ ಮನುಷ್ಯ ಜಾತಿಯು ಒಂದೇ ಆಗಿರುತ್ತದೆ'.

ಸ್ವಾಧ್ಯಾಯ ಪ್ರೇಮಿಗಳಾದ ಜೈನ ಬಾಂಧವರಿಗೂ ಸಾಹಿತ್ಯ ಪ್ರೇಮಿಗಳಾದ ಜೈನೇತರ ಬಾಂಧವರಿಗೂ ಸುಲಭಲಭ್ಯವಾಗುವಂತೆ ಜೈನ ಸಾಹಿತ್ಯ ಗ್ರಂಥ ರಾಶಿಯಲ್ಲಿ ಕಿರೀಟ ಮಣಿಯಾಗಿರುವ ಈ 'ಮಹಾಪುರಾಣ'ವನ್ನು ವೈನಾಡಿನ ಜೈನ ಮನೆತನಗಳಲ್ಲಿ ರತ್ನ ಪ್ರಾಯರಾಗಿದ್ದ ಧರ್ಮಾತ್ಮ ಮಣಿಯಂಗೂಡು ಶ್ರೀಮಾನ್ ಕೃಷ್ಣಯ್ಯಗೌಡರು ಪ್ರಕಟಿಸುವ ಸಂಕಲ್ಪ ಮಾಡಿದರು. ಪೂರ್ವಪುರಾಣವು ಪ್ರಕಟವಾದುದನ್ನು ಕಂಡು ಸಂತೋಷಪಟ್ಟರು. ಉತ್ತರಪುರಾಣವು ಮುದ್ರಣಕ್ಕೆ ಸಿದ್ಧಗೊಳ್ಳುವಷ್ಟರಲ್ಲಿ ಆ ಪುಣ್ಯಾತ್ಮರು ಕೀರ್ತಿಶೇಷರಾದುದರಿಂದ ಅವರ ಸುಪುತ್ರರು ಇದನ್ನು ಪ್ರಕಟಿಸಿ ತಮ್ಮ ತಂದೆಯವರ ಸಂಕಲ್ಪವನ್ನು ಪೂರ್ತಿ ಮಾಡಿದರು. ಗುಣಭದ್ರಾಚಾರ್ಯರು ಜಿನಸೇನಾ ಚಾರ್ಯರ ಸಂಕಲ್ಪವನ್ನು ಪೂರ್ತಿಮಾಡಿದಂತೆ.

ಈ ಮುದ್ರಣದ ಪ್ರತಿಗಳು ಮುಗಿದಿದ್ದು, ಅದರ ಅಗತ್ಯವನ್ನು ಕಂಡುಕೊಂಡ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಹಂಪ. ನಾಗರಾಜಯ್ಯನವರು ಕರ್ನಾಟಕ ಸರ್ಕಾರದ ಉದಾರ ಸಹಾಯದಿಂದ ಮರುಮುದ್ರಣ ಮಾಡಿಸಿ ಓದುಗರ ಕೈಗಿತ್ತು ಉಪಕರಿಸಿರುತ್ತಾರೆ.

ಶ್ರೀ ಶಾಸ್ತ್ರಿಗಳಿಗೆ ಗೊಮ್ಮಟಸಾರ, ತತ್ತ್ವಶಾಸ್ತ್ರ, ಆಚಾರ ಶಾಸ್ತ್ರಗಳಲ್ಲಿದ್ದ ಪ್ರಕಾಂಡ ಪಾಂಡಿತ್ಯ ಈ ಅಗಾಧವಾದ ಸಾಹಿತ್ಯ ಸೇವೆಗೆ. ಇವೆಲ್ಲಕ್ಕೆ ಕಿರೀಟ ಪ್ರಾಯ ವಾದ 'ಮಹಾಪುರಾಣ'ದ ಅನುವಾದ ಕಾರ್ಯಕ್ಕೆ ಪ್ರೇರಕ, ಪೋಷಕ. ಈ ಅಗಾಧ ಸಾಹಿತ್ಯ ಸೇವೆಯ ಕೆಟ್ಟಫಲವನ್ನು, ಕಹಿ ಅನುಭವವನ್ನು ಶ್ರೀ ಶಾಸ್ತ್ರಿಗಳು ತಮ್ಮ ಜೀವನದ ಕಡೆ ದಿನಗಳಲ್ಲಿ ಅನುಭವಿಸಿದರೆಂಬುದು ವಿಷಾದದ ಸಂಗತಿ. ಕೈಕಾಲುಗಳೆಲ್ಲ ಗಡಗಡ ನಡುಗುತ್ತ, ಮಾತನಾಡಲೂ ತೊದಲುತ್ತಾ ಹಾಸಿಗೆಯ ಮೇಲಿದ್ದ ಅವರ ಸ್ಥಿತಿಯನ್ನು ಕಂಡು ಕನಿಕರಿಸಿದವರಲ್ಲಿ ಈ ಲೇಖಕನೂ ಒಬ್ಬ. ಸಮಾಜಕ್ಕಾಗಿ ತನ್ನನ್ನು ಅರ್ಪಿಸಿಕೊಂಡ, ಜೀವತೇದ ವಿದ್ವಾಂಸನಿಗೆ ಸಮಾಜ ಮಾಡಿದ್ದೇನು.

ಶ್ರೀ ಶಾಂತಿರಾಜ ಶಾಸ್ತ್ರಿಗಳು ಅನ್ವರ್ಥನಾಮರು. ಅವರು 'ಅಭಿನವ ಜಿನ ಸೇನಗುಣಭದ್ರರು', 'ಪರಮ ಭಾಗವತರು', ಮಹಾಪುರಾಣದ ಮಹೌನ್ನತ್ಯಕ್ಕೆ ಸಮಾನವಾದ, ಸುಯೋಗ್ಯವಾದ ಅವರ ಶೈಲಿ 'ಸಮುದ್ರ ಸಮ ಗಾಂಭೀರ್ಯ !! ಕನ್ನಡ ಸಾಹಿತ್ಯ ಲೋಕ ಮರೆಯಲಾರದ ಮಹಾನಿಧಿ, ತವನಿಧಿ, ಅವರ 'ಮಹಾ ಪುರಾಣ' !!

ವ್ಯವಸ್ಥೆಯ ವ್ಯತಿರಿಕ್ತತೆಯ ಅಭಿವ್ಯಕ್ತಿ : 'ಲಿಂಗನಕುಡಿ'

ಜಿ. ಆರ್. ತಿಪ್ಪೇಸ್ವಾಮಿ

ಕೇವಲ ಸ್ವಂತಿಕೆಯ ವಿಷಯಗಳಿಗಿಂತ ಭಿನ್ನವಾದ ಸಾಮಾಜಿಕ ಕಳಕಳಿಯ ಕೃತಿಗಳು ಕನ್ನಡದಲ್ಲಿ ಇತ್ತೀಚೆಗೆ ಕಾಣಿಸಿಕೊಳ್ಳುತ್ತಿವೆ. ಕಲೆ, ಸಂಸ್ಕೃತಿ ಇವುಗಳ ಬಗೆಗೂ ಹೊಸ ಹೊಸ ದೃಷ್ಟಿ ಧೋರಣೆಗಳು ಕಂಡುಬರುತ್ತಿವೆ. ವೈಯುಕ್ತಿಕ ನೆಲೆಯಿಂದ ಸಮಷ್ಟಿಯ ನೆಲೆಯ ಕಡೆಗೆ ಸಾಗಿದ ಸಂದರ್ಭ ಇದು. ಇಂಥ ವಿಶಿಷ್ಟ ಸಂದರ್ಭದಲ್ಲಿ ಬರುವ ಸಾಹಿತಿಗಳು ಜನರ ಬದುಕನ್ನು ಸಮಸ್ಯೆಗಳನ್ನು ಚಿಂತಿಸುವ ಪ್ರಯತ್ನದಲ್ಲಿ ತೊಡಗುತ್ತಾರೆ. ಚಿತ್ರನಟ, ರಂಗನಟ, ಅಧ್ಯಾಪಕ ಮಾನು ಸಹ ಈ ಮಾತಿಗೆ ಹೊರತಾದವರೇನೂ ಅಲ್ಲ. ಮಲೆನಾಡಿನ ಪರಿಸರದಿಂದ ಬಂದ ಲೇಖಕರು ತನ್ನ ಪರಿಸರದ ಭೌಗೋಳಿಕ–ಸಾಂಸ್ಕೃತಿಕ ಆವರಣವನ್ನು ಪರಿಚಯಿಸುವುದರ ಮೂಲಕ 'ಲಿಂಗನಕುಡಿ' ಕಾದಂಬರಿಯನ್ನು ಪ್ರಾರಂಭಿಸುತ್ತಾರೆ. ಇಂಥ ಆವರಣದಲ್ಲಿ ಕಾಣಿಸಿಕೊಳ್ಳುವ ಪಾತ್ರಗಳ ಮುಂದೆ ನಿಲ್ಲುವ ಮೊದಲ ವಿಷಯವೆಂದರೆ ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದ್ದು : ಶ್ರೀಮಂತ ವರ್ಗ ಪಡೆಯುವ ಸವಲತ್ತುಗಳನ್ನು ಶ್ರಮಜೀವಿ ವರ್ಗವೂ ಪಡೆಯಬೇಕು ಎಂಬ ಧೋರಣೆ. ಎಲ್ಲರೂ ವಿದ್ಯೆ ಕಲಿಯಬೇಕು ಎಂಬ ಸರ್ಕಾರದ ಆಜ್ಞೆಯಂತೆ ಶ್ರಮಜೀವಿವರ್ಗದ ಲಿಂಗ, ದುಡಿಸಿಕೊಳ್ಳುವ ವರ್ಗದ

ಸುಶೀಲ ಶಾಲೆಗೆ ಹೋಗುತ್ತಾರೆ. ಕೆಲದಿನಗಳಲ್ಲಿ ಲಿಂಗ ಶಿಕ್ಷಣದಿಂದ ದೂರ ಸರಿಯುತ್ತಾನೆ. ದುಡಿಮೆಯೆ ನಮ್ಮ ಕರ್ತವ್ಯವೆಂದು ಆತನ ಮನೆಯವರು ಭಾವಿಸುತ್ತಾರೆ. ಸುಶೀಲ ಮಾತ್ರ ಮುಂದಿನ ವ್ಯಾಸಂಗಕ್ಕೆ ಶಿವಮೊಗ್ಗಕ್ಕೆ ಹೋಗುತ್ತಾಳೆ. ಅಲ್ಲಿಯ ಕಾಲೇಜಿನ ಆವರಣದಲ್ಲಿ ನಡೆಯುವ ಹಾಗೂ ನಂತರದ ಬದುಕಿನಲ್ಲಿ ನಡೆಯುವ ವಿದ್ಯಮಾನಗಳೇ ಕಾದಂಬರಿಯ ಅಂತಸತ್ವ. ಆ ಮೂಲಕ ಮಲೆನಾಡಿನ ಕೆಲವು 'ಸೃಷ್ಟಿಸೆಲೆ'ಗಳನ್ನೂ ನೀಡುತ್ತದೆ. ಮಲೆನಾಡಿನ ಒಂದು ಹಳ್ಳಿ, ಒಂದು ನಗರ ಇಲ್ಲಿಯ ಚಟುವಟಿಕೆಗಳ ಕೇಂದ್ರವಾಗಿದೆ. ಜನ್ಮಸ್ಥಳದ ಪರಿಸರದಲ್ಲಿ ಮುಗ್ಧವಾಗಿದ್ದ ಪಾತ್ರಗಳು, ನಾಗರಿಕ ಪರಿಸರದಲ್ಲಿ ವ್ಯಕ್ತಿ, ಸಮಾಜ, ಆದರ್ಶಗಳ ಬಗೆಗೆ ಮಾತನಾಡುವ ಪ್ರಬುದ್ಧರಾಗಿ ಕಾಣುತ್ತಾರೆ.

ಸುಶೀಲ ಬಾಂದಮನೆ ಶಾಮೇಗೌಡರ ಮಗಳು, ಚಂದ್ರು ಹುಲಿಮಕ್ಕಿ ಈರೇಗೌಡರ ಮಗ. ಇವರಿಬ್ಬರೂ ಶಿವಮೊಗ್ಗದ ಕಾಲೇಜಿನಲ್ಲಿ ವಿದ್ಯಾರ್ಥಿಗಳು. ಸುಶೀಲ ಸಂಪೂರ್ಣವಾಗಿ ವಿದ್ಯೆಯ ಕಡೆಗೆ ಗಮನವಿತ್ತರೆ, ಚಂದ್ರು ಕ್ರಮೇಣ ವಿದ್ಯಾಭ್ಯಾಸದೊಂದಿಗೆ ಸಮಾಜವಾದದ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಾನೆ. ಸಮಾಜವಾದಿ ಪಕ್ಷದ ನಾಯಕರಿಂದ. ಗೆಳೆಯರಿಂದ, ಬೆಲೆ ಏರಿಕೆ, ಜಾತಿವಿನಾಶ ಸಮ್ಮೇಳನ, ಕವಿ ಸಮ್ಮೇಳನ, ಮೂಢನಂಬಿಕೆಗಳು. ಅಂತರ್ಜಾತಿ ವಿವಾಹ, ಚುನಾವಣಾ ವಿಚಾರ ಸಂಕಿರಣ – ಇತ್ಯಾದಿ ವಿಚಾರ ಸಂಕಿರಣಗಳನ್ನು ಆತ ಏರ್ಪಡಿಸುತ್ತಾನೆ. ನಂತರ ಬದುಕಿನ ಆದರ್ಶಗಳು ಆತನನ್ನು ಕಾಡುತ್ತವೆ. ಸುಶೀಲಳನ್ನು ಪ್ರೇಮಿಸುತ್ತಿದ್ದೇನೆಂಬ ಭಾವನೆ ಚಂದ್ರುನಲ್ಲಿ ಬಂದರೂ ಈ ಬಗ್ಗೆ ಮಾತನಾಡಲು ಪ್ರಯತ್ನಿಸಿದಾಗ ಆಕೆ ಅದೆಲ್ಲದಕ್ಕೂ ಕೊಡುತ್ತಿದ್ದ ಉತ್ತರವೆಂದರೆ ಮೌನ. ಸಮಾಜವಾದದ ಕನಸಿನಲ್ಲಿ ಆತನ ಅಧ್ಯಯನ ಮಾಯವಾಗುತ್ತದೆ. ಆಕೆ ಶಿಕ್ಷಣ ಮುಗಿಸಿಕೊಂಡು ಪ್ರಗತಿಪರ ವ್ಯಕ್ತಿಯಾಗುತ್ತಾಳೆ. ಕಾಲೇಜಿನಲ್ಲಿ ಕೇಳಿದ 'ಅಂತರ್ಜಾತೀಯ ವಿವಾಹ' ಭಾಷಣ ಈಕೆಯ ತಲೆಯಲ್ಲಿ ವಿಶೇಷವಾಗಿ ಕೆಲಸ ಮಾಡುತ್ತದೆ, ಭವಿಷ್ಯದಲ್ಲಿ ಕ್ರಾಂತಿ. ತನಗೆ ಸರಿ ಕಂಡಂತೆ ಬದುಕಿ ತೋರಿಸುವೆನೆಂದು ಕನಸು ಕಂಡ ಸುಶೀಲ ತಾನು ಕೇಳಿದ ಕ್ರಾಂತಿ ಭಾಷಣಗಳನ್ನು ಮೆಲುಕು ಹಾಕುತ್ತ "ನನ್ನ ಗಂಡನಾಗುವವನಿಗೆ ನನ್ನ ಮನೆಯವರು ಒಪ್ಪಬಹುದಾದ ಯಾವ ಅಂತಸ್ತೂ ಇರಬಾರದು, ನಮ್ಮ ಜಾತಿಯವನೂ ಆಗಬಾರದು" ಎಂದು ಯೋಚಿಸುತ್ತಾಳೆ. ಅಲ್ಲದೆ "ಜಮೀನ್ದಾರರ ಮಗಳಾಗಿ, ಜಮೀನ್ದಾರ ಗಂಡನೊಬ್ಬನ ಹೆಂಡತಿಯಾಗಿ, ಜಮೀನ್ದಾರ ಮಕ್ಕಳ ತಾಯಾಗಿ ಮಾತ್ರ ಸಾಯಬೇಕೆ" ಎಂದು ಪ್ರಶ್ನಿಸಿಕೊಳ್ಳುತ್ತ ತನ್ನ ಮನೆಯ ಆಳು ಹೊಲೆಯರ ಲಿಂಗನನ್ನು ಬಯಸುತ್ತಾಳೆ. ಲಿಂಗನೂ ಒಬ್ಬ ಮನುಷ್ಯ, ಜಾತಿ ಎಂಬುದು ಸುಳ್ಳು ಎಂದು ಭಾವಿಸಿ ರಹಸ್ಯವಾಗಿ ಆತನೊಂದಿಗೇ ಬೆರೆತು ಲಿಂಗನಿಂದ ಗರ್ಭ ಧರಿಸುತ್ತಾಳೆ. ಇದು ಎರಡು ಕುಟುಂಬಗಳ ಪ್ರಶ್ನೆಯಾಗುತ್ತದೆ. ಇದರ ಪರಿಣಾಮ ಅಪಾಯಕಾರಿಯಾಗುತ್ತದೆ. ಸುಶೀಲ ಮನೆಯವರಿಂದ, ತನ್ನ ಜಾತಿಯವರಿಂದ ದೂರ ಸರಿದದ್ದು, ಉನ್ನತ

ಜಾತಿಯ ಹುಡುಗಿಯನ್ನು ಕೆಡಿಸಿದನೆಂದು ಲಿಂಗನನ್ನು ಕೊಲೆ ಮಾಡಿ ಅವನ ಕುಟುಂಬ ದವರನ್ನು ಬೆದರಿಸಿದ್ದು – ಇವೆಲ್ಲ ಮಾಮೂಲಿನ ಕ್ರಿಯೆಗಳಾಗಿವೆ. ಗರ್ಭನಾಶಕ್ಕೆ ಒಪ್ಪದ ಸುಶೀಲ ಲಿಂಗನನ್ನು ಉಳಿಸಿಕೊಳ್ಳಲಾರದ ತಪ್ಪಿಗಾಗಿ ಪ್ರಾಯಶ್ಚಿತ್ತ ಪಡು ತ್ತಾಳೆ. ಸಿದ್ಧಾರ್ಥನನ್ನು ಹಡೆದು ಅವಿವಾಹಿತೆಯಾಗಿಯೇ ಜೀವನ ನಡೆಸಲು ಪ್ರಯತ್ನಿಸಿ ಉದಾತ್ತತೆಯನ್ನು ವ್ಯಕ್ತಪಡಿಸುತ್ತಾಳೆ.

ಸಮಾಜವಾದಿ ಉಪನ್ಯಾಸಕರ ಮಾರ್ಗದರ್ಶನದಲ್ಲಿ ಬೆಳೆಯುವ ವಿದ್ಯಾರ್ಥಿ ಬಳಗ, ಅವರ ಆಸಕ್ತಿಗಳು, ಆದರ್ಶಗಳು, ಚಟುವಟಿಕೆಗಳು ಇವೆಲ್ಲವನ್ನು ಮಾಸು ಇಲ್ಲಿ ವಿವರಿಸಿದ್ದಾರೆ. ಸಮಾಜವಾದದ ಮುಖವಾಡ ಧರಿಸಿ ಜಾತಿ ರಾಜಕೀಯ ನಡೆಸುವ ಕೆಲ ಉಪನ್ಯಾಸಕರ ವಿಚಿತ್ರ ವ್ಯಕ್ತಿತ್ವಗಳನ್ನು, ಅವುಗಳನ್ನು ಕುರಿತು ತಮ್ಮೊಳಗೇ ವಿಮರ್ಶಿಸಿಕೊಳ್ಳುತ್ತ ತಾವೇ ಒಂದು ಸ್ವಚ್ಛಂದವಾದ ಆದರ್ಶ ಪರಿಸರ ವನ್ನು ನಿರ್ಮಾಣ ಮಾಡಿಕೊಳ್ಳಬೇಕೆಂದು ಹೊರಟು ತಮ್ಮ ಹಲವಾರು ದೌರ್ಬಲ್ಯ ಗಳಿಂದ ಮತ್ತೆ ಅವುಗಳಿಂದ ದೂರ ಸರಿದು ಮಾಮೂಲೀ ವ್ಯವಸ್ಥೆಗೆ ಬೆನ್ನುಕೊಡುವ ವಿಚಿತ್ರ ವಿದ್ಯಾರ್ಥಿಗಳ ವ್ಯಕ್ತಿತ್ವಗಳನ್ನು ಹೇಳುವ ಮುಖೇನ ವ್ಯವಸ್ಥೆಯ ವ್ಯತಿರಿಕ್ತತೆ ಯನ್ನು ಮಾಸು ವಿವರಿಸಲು ಪ್ರಯತ್ನಿಸಿದ್ದಾರೆ. ಇಷ್ಟೆಲ್ಲಾ ಇದ್ದರೂ ಅಭಿವ್ಯಕ್ತಿಯಲ್ಲಿ ಮೇಲಿಂದ ಮೇಲೆ ಅವರು ಹೆಣೆಯುವ ಸಮಾಜವಾದದ ಭಾಷಣಗಳು ಕಾದಂಬರಿಯ ವಸ್ತುವಿಗೆ ತೀರಾ ಭಾರವೆನಿಸಿಬಿಡುತ್ತವೆ. ಕಥೆಯೂ ಮನಸ್ಸಿಗೆ ನಾಟುವುದಿಲ್ಲ. ಕಾದಂಬರಿಯ ಸೋಲಿಗೆ ಸಮಾಜವಾದದ ಅತಿ ಒಂದಾದರೆ ಎಳಸು ಶೈಲಿ ಇನ್ನೊಂದು ಕಾರಣವಾಗುತ್ತದೆ. ಇಲ್ಲಿಯ ಬಹುತೇಕ ಪಾತ್ರಗಳು ಕೂಡ ಸಮಾಜವಾದದ ನೆರಳಿ ನಲ್ಲೇ ಬೆಳೆದು ಅದರ ರಾಯಭಾರಿಗಳಂತೆ ವರ್ತಿಸುತ್ತಾರೆ. ಈ ಧೋರಣೆಯನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಳ್ಳುವಲ್ಲಿ ಹೆಣಗಾಡುತ್ತವೆ. ತನ್ನ ಮಾರ್ಗವನ್ನು ಸಮರ್ಥಿಸಿಕೊಂಡು ಹೋಗುವ ಸುಶೀಲ ಮಾತ್ರ "ಅಸಮಾನ್ಯ ನೈತಿಕ ಧೈರ್ಯ ಪ್ರದರ್ಶಿಸುತ್ತಾಳೆ". ಸಲಿಲವಾದ ನಿರೂಪಣೆಯನ್ನ ನಾಟಕೀಯತೆಯನ್ನ ಇದು ಒಳಗೊಂಡಿದ್ದರೆ ಒಂದು ಉತ್ತಮ ಕಾದಂಬರಿಯಾಗುತ್ತಿತ್ತು.

ಅಸ್ತಿತ್ವವಾದದ ಕಾವ್ಯಾತ್ಮಕ ದಾಖಲೆ : 'ಆಮೆ'

ಬೈರಮಂಗಲ ರಾಮೇಗೌಡ

ನವ್ಯಕಾವ್ಯ ಕೊನೆಯುಸಿರೆಳೆಯುತ್ತಿರುವ ಈ ಸಂದರ್ಭದಲ್ಲಿ, ಅದು ಉತ್ಕರ್ಷ ಸ್ಥಿತಿಯನ್ನು ತಲುಪಿದ್ದ ಕಾಲದಲ್ಲಿ ಪ್ರಕಟವಾದ ಕೃತಿಯೊಂದನ್ನು ಪರಿಶೀಲಿಸಹೊರಡುವುದು ವಿಚಿತ್ರವಾಗಿ ಕಾಣಬಹುದಾದರೂ ಅನುಚಿತವೇನೂ ಅಲ್ಲ. ಯಾಕೆಂದರೆ ಹತ್ತು–ಹನ್ನೆರಡನೇ ಶತಮಾನದ ಕೃತಿಗಳನ್ನು ಈಗಲೂ ಚರ್ಚೆಗೊಳಪಡಿಸುವ, ಆ ಮೂಲಕ ಅವುಗಳ ಬಗೆಗೆ ಹೊಸದಾದ ಮತ್ತು ಮೌಲಿಕವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸಂದರ್ಭಗಳನ್ನು ನಾವು ಕಾಣುತ್ತಲೇ ಇದ್ದೇವೆ. ಇದು ಒಟ್ಟಾರೆ ಸಾಹಿತ್ಯ ಕೃತಿಯೊಂದರ ಅಂತರಂಗವನ್ನು ವಿವಿಧ ಕಾಲಮಾನಗಳಲ್ಲಿ ಆಮೂಲಾಗ್ರವಾಗಿ ಬಗೆದು ನೋಡುತ್ತ, ಹೊಸಹೊಸ ಅರ್ಥಗಳನ್ನು ಕಂಡುಕೊಳ್ಳುತ್ತ ಕವಿಶ್ರಮಕ್ಕೆ ನ್ಯಾಯ ದೊರಕಿಸಿಕೊಡುವ ಪ್ರಯತ್ನವಾಗುತ್ತದೆ. ಆದ್ದರಿಂದಲೇ ನವ್ಯಕಾವ್ಯ ಸಂದರ್ಭದ ಉತ್ತಮ ಕೃತಿಗಳಲ್ಲೊಂದಾದ ಚನ್ನಯ್ಯನವರ 'ಆಮೆ'ಯನ್ನು ವಿಮರ್ಶಿಸುವುದು ಈಗಲೂ ಅರ್ಥಪೂರ್ಣವೆಂದೇ ಭಾವಿಸಿ ನಾನು ಈ ಕಾರ್ಯಭಾರವನ್ನು ಒಪ್ಪಿಕೊಂಡಿದೇನೆ.

ನವ್ಯಕಾವ್ಯ ಮಾಡಿದ ಒಳ್ಳೆಯ ಕೆಲಸಗಳಲ್ಲಿ ಕವಿಯೊಬ್ಬ ತನ್ನ ಅನುಭವದ ಎಳೆಗಳನ್ನು ತನ್ನ ರಚನೆಯಲ್ಲಿ

ನಿರ್ಭಿಡೆಯಿಂದ, ನಿರ್ಲಿಪ್ತತೆಯಿಂದ ಬಿಚ್ಚತೊಡಗಿದ್ದು ಬಹು ಮುಖ್ಯವಾದದ್ದು. ಈ ದಿಟ್ಟತನದಿಂದಾಗಿಯೇ ಶತಮಾನ ಶತಮಾನಗಳಿಂದ ಮರ್ಯಾದೆ ಸಭ್ಯತೆ ಸಂಕೋಚ ಗಳ ಸೋಗಿನಲ್ಲಿ ಯಾವೆಲ್ಲ ಭಾವನೆಗಳು ಹತ್ತಿಕ್ಕಲ್ಪಟ್ಟಿದ್ದವೋ ಅಂತರಂಗದ ಕದವನ್ನು ಬಹು ತೀವ್ರವಾಗಿಯೇ ತಟ್ಟುತ್ತಿದ್ದ ಎಷ್ಟೆಲ್ಲ ವಿಚಾರಗಳು ಮಡಿವಂತಿಕೆಯ ಹೆಸರಿನಲ್ಲಿ ಅದುಮಿಡಲ್ಪಟ್ಟಿದ್ದವೋ ಅವೆಲ್ಲ ಒಮ್ಮೆಲೇ ರಹದಾರಿ ಪಡೆದುಕೊಂಡಂತೆ ನವ್ಯಕಾವ್ಯ ದಲ್ಲಿ ಓತಪ್ರೋತವಾಗಿ ಧುಮ್ಮಿಕ್ಕತೊಡಗಿದವು. ಸಾಮಾಜಿಕ ವ್ಯವಸ್ಥೆ ತನ್ನ ಹಿತ ರಕ್ಷಣೆಗೋಸ್ಕರ, ಈ ವ್ಯವಸ್ಥೆಯ ಹರಿಕಾರರು ತಮ್ಮ ಸ್ವಾರ್ಥಕ್ಕೋಸ್ಕರ ಮುಚ್ಚಿಡಬಯಸುವ ಆತ್ಮನಿಷ್ಠ ಸತ್ಯಗಳನ್ನು ಬಿಚ್ಚುಮನಸ್ಸಿನಿಂದ ನೋಡುವುದು ಆ ಮೂಲಕ ಸತ್ಯಶೋಧನೆ ಮಾಡುವುದು ಸಾಹಿತಿಗೆ ಸಾಧ್ಯವಾಗತೊಡಗಿತು. ಈ ಸಂದರ್ಭಕ್ಕಾಗಿಯೇ ಕಾಯುತ್ತಿತ್ತೋ ಎನ್ನುವಂತೆ ಮಾನವನ ಮೂಲ ಪ್ರವೃತ್ತಿಗಳಲ್ಲಿ ಒಂದಾದ ಹಾಗೂ ಜೀವಿತದುದ್ದಕ್ಕೂ ವ್ಯಕ್ತಿಯನ್ನು ತನ್ನ ಆಕ್ಟೋಪಸ್ ಹಿಡಿತಗಳಲ್ಲಿ ಬಂಧಿಸಿ ಒಂದಲ್ಲ ಒಂದು ವಿಧದಲ್ಲಿ ಕಾಡುತ್ತಲೇ ಇರುವ ಕಾಮದ ಬಗೆಗಿನ ಅನಿಸಿಕೆಗಳು ಅವರೆಗಿನ ತಮ್ಮ ಸಂಕೋಚದ ತೆರೆಯನ್ನು ಹರಿದುಕೊಂಡು ನಿಷ್ಠುರವಾಗಿ ಪ್ರಕಟ ವಾಗತೊಡಗಿದವು. ಸಾಹಿತ್ಯದಲ್ಲಿ ಈ ನಿಷ್ಠುರ ಕಾಮ ಪ್ರವಾಹ ಹರಿಯತೊಡಗಿದ್ದು ಸರಿಯೋ ತಪ್ಪೋ ಎನ್ನುವ ವಿಚಾರ ನೈತಿಕತೆಗೆ ಸಂಬಂಧಿಸಿದ್ದು. ಈ ನೈತಿಕತೆ ಯಾದರೋ ಸಾಮಾಜಿಕ ವ್ಯವಸ್ಥೆಯ ಬಗೆಗೆ ನಾವು ಎಷ್ಟು ಮರ್ಯಾದೆ ಸಭ್ಯತೆ ದಾಕ್ಷಿಣ್ಯ ಸಂಕೋಚ ಇತ್ಯಾದಿಗಳನ್ನು ಹೊಂದಿದ್ದೇವೆಂಬುದನ್ನು ಆಧರಿಸಿರುವಂಥದ್ದು. ಆದ್ದರಿಂದ ಈ ನಿರ್ಧಾರ ಎಲ್ಲರ ಅಭಿಪ್ರಾಯದಲ್ಲೂ ಒಂದೇ ಆಗಿರಲು ಸಾಧ್ಯವಿಲ್ಲವಾಗಿ ನಾನು ಈ ವಿಚಾರವನ್ನು ಹೆಚ್ಚು ಕೆದಕಲು ಹೋಗುವುದಿಲ್ಲ. ಆದರೆ ಇಷ್ಟು ಮಾತ್ರ ನಿಜ : ಕಾಮಪ್ರವೃತ್ತಿ ಎಲ್ಲ ವರ್ಗದ, ಎಲ್ಲ ಜಾತಿಯ ಜನಗಳಲ್ಲೂ ಇದ್ದೇ ಇದೆ. ಸಂಸಾರಿ ಸನ್ಯಾಸಿ ಬ್ರಹ್ಮಚಾರಿ ಯಾರೂ ಈ ಪ್ರವೃತ್ತಿಯಿಂದ ಹೊರತಲ್ಲ. ಬ್ರಹ್ಮಚಾರಿ ಸಂಸಾರಿಯ ಅನುಭವಗಳಿಗಾಗಿ ತುಡಿಯುವುದು. ಸಂಸಾರಿ ಮದುವೆಯ ಚೌಕಟ್ಟಿನಲ್ಲಿ ತನ್ನ ಕಾಮಲಾಲಸೆಯನ್ನು ನಿಯಮಿತವಾಗಿ ಪೂರೈಸಿಕೊಳ್ಳುವುದು, ಸಂನ್ಯಾಸಿ ತನ್ನ ಕಾಮಪ್ರವೃತ್ತಿಯನ್ನು ಹತ್ತಿಕ್ಕಿಕೊಳ್ಳಲು ಹಲವು ಮಾರ್ಗೋಪಾಯಗಳನ್ನು ಅವಲಂಬಿಸುವುದು–ಇವೆಲ್ಲ ಕಾಮ ಯಾರನ್ನೂ ಬಿಟ್ಟದ್ದಲ್ಲ ಎನ್ನುವುದನ್ನು ಬಹು ಸ್ಪಷ್ಟವಾಗಿಯೇ ತೋರ್ಪಡಿಸುತ್ತವೆ. ಹೀಗೆ ಜೀವನಾನುಭವದ ಒಂದು ಭಾಗವೇ ಆಗಿರುವ ಕಾಮವನ್ನು ಅದರ ಪರಿಣಾಮವನ್ನು ಅದರ ಬಗೆಗಿನ ಅನಿಸಿಕೆಗಳನ್ನು ಸಾಹಿತ್ಯದಲ್ಲಿ ಹೇಳಿದರೆ ತಪ್ಪೇನು ? ಪ್ರತಿಷ್ಠಿತರು ತಮ್ಮ ಅನುಕೂಲಕ್ಕೋಸ್ಕರ ಮರ್ಯಾದೆ ಸಭ್ಯತೆ ಸಂಕೋಚಗಳ ಗಡಿಗಳನ್ನು ನಿರ್ಮಾಣ ಮಾಡಿಕೊಂಡಿದ್ದಾರೆಂದು ಖಚಿತವಾದ ಮೇಲೂ ಅವರ ಸಾಮಾಜಿಕ ಧೋರಣೆಗಳನ್ನು ಪ್ರಶ್ನಾತೀತವೆಂದು ಒಪ್ಪಿಕೊಳ್ಳುವುದು ವಿಚಾರವಂತ ಮನಸ್ಸಿಗೆ ಹೇಗೆ ಸಾಧ್ಯ ? ಹೀಗೆ ಪ್ರತಿಷ್ಠಿತರ ಲಕ್ಷಣಗಳ ವಿರುದ್ಧ, ಆ ಮೂಲಕ ಸಮಾಜದ ಧೋರಣೆಗಳ ವಿರುದ್ಧ ಬಂಡೆದ್ದ ನವ್ಯ

ಸಾಹಿತ್ಯ ಕಾಮದ ಬಗೆಗಿನ ಮಡಿ ಭಾವನೆಯ ವಿರುದ್ಧವೂ ಕತ್ತಿಬೀಸುವುದು ಅನಿವಾರ್ಯ ವಾಯಿತು. ಹೀಗೆ ಕಾಮದ ಬಗೆಗಿನ ತನ್ನ ಅನುಭವಗಳನ್ನು ದಾಖಲುಗೊಳಿಸುತ್ತ, ತನ್ನ ಅಂತರಂಗವನ್ನು ಬಿಚ್ಚಿಕೊಳ್ಳುತ್ತ ಹೊರಟ ನವ್ಯಕವಿ ಕೆಲವು ಕಡೆ ಆತ್ಮ ಶೋಧಕನೂ ನಿರ್ಲಿಪ್ತನೂ ಪರಕೀಯನೂ ಆದಂತೆ ಮತ್ತೆ ಕೆಲವು ಕಡೆ ಕಾಮುಕನೂ ಆಗಬೇಕಾಯಿತು. ಕಾಮಪ್ರೇಮಗಳ ವಿಚಾರದಲ್ಲಿ ಅತ್ಯಂತ ವೈಯಕ್ತಿಕವಾಗಿ ಅವುಗಳ ಬಗೆಗಿನ ಸಾಂಪ್ರದಾಯಿಕ ಕಲ್ಪನೆ ಮತ್ತು ಧೋರಣೆಗಳನ್ನು ಧಿಕ್ಕರಿಸಿ ಜೀವನಾನುಭವವನ್ನು ತನಗೆ ಸರಿಕಂಡ ರೀತಿಯಲ್ಲಿ ಅಭಿವ್ಯಕ್ತಿಸಬೇಕಾಯಿತು. ಕಾಮ ವನ್ನು ಒಂದು ಮೌಲ್ಯ ಎಂದು ಪರಿಗಣಿಸಿ ಆತ್ಮನಿಷ್ಠ ಸತ್ಯಗಳನ್ನು ಬಿಚ್ಚುಮನಸ್ಸಿನಿಂದ ಪ್ರಕಟಿಸುವ ಧೈರ್ಯವನ್ನು ಸಾಹಿತಿ ತೋರಬೇಕಾಯಿತು.

ಚನ್ನಯ್ಯನವರು ಒಬ್ಬ ನವ್ಯಕವಿಯಾದ್ದರಿಂದ ಮತ್ತು 'ಆಮೆ' ಸಂಕಲನದ ಬಹುಪಾಲು ಕವಿತೆಗಳಲ್ಲಿ ಜೀವನಾನುಭವದ ಒಂದು ಅಂಗವಾಗಿ ಕಾಮ ಕಾಣಿಸಿಕೊಂಡಿರು ವುದರಿಂದ ಅದಕ್ಕೆ ಹಿನ್ನೆಲೆಯಾಗಿ ಇಷ್ಟೆಲ್ಲ ವಿಚಾರಗಳನ್ನು ಬರೆಯಬೇಕಾಯಿತು. ಜೀವನಾನುಭವದ ಉಳಿದ ಸಂಗತಿಗಳೊಟ್ಟಿಗೆ ಸಂಕೀರ್ಣವಾಗಿ ಹೊಸೆದುಕೊಂಡು ನೀತಿ ಅನೀತಿಗಳ ಕಲ್ಪನೆಯನ್ನು ಬದಿಗೊತ್ತಿ ಬೆಕ್ಕಿನಂತೆ ಕದ್ದು ಬರುವ ಕಾಮದ ಸ್ವರೂಪವನ್ನು ಚನ್ನಯ್ಯನವರು ತಮ್ಮ ಮೊದಲನೆಯ ಕವನ ಸಂಕಲನವಾದ 'ಕಾಮಿ' ಯಲ್ಲಿ ಚಿತ್ರಿಸಿದ್ದರು. 'ಆಮೆ' ಸಂಕಲನದ ಕವಿತೆಗಳಲ್ಲಿ ಇದೇ ಭಾವದ ಮುಂದು ವರಿಕೆಯಿದ್ದರೂ ಅನುಭವಗಳನ್ನು ರೇಖಿಸುವ ರೀತಿಯಲ್ಲಿ ಮತ್ತು ಹೊರಗಿನ ಅನುಭವಗಳನ್ನು ತನ್ನದಾಗಿಸಿಕೊಂಡು ತಿಳುವಳಿಕೆಯನ್ನು ವಿಸ್ತರಿಸಿಕೊಂಡಿರುವುದನ್ನು ನಿರೂಪಿಸುವ ರೀತಿಯಲ್ಲಿ ಸಂಕೀರ್ಣತೆಯೂ ನಿರ್ಲಿಪ್ತತೆಯೂ ಕಂಡುಬರುತ್ತದೆ.

'ಆಮೆ'ಸಂಕಲನದಲ್ಲಿ ಹದಿನೆಂಟು ಕವನಗಳಿದ್ದು ಈ ಎಲ್ಲ ಕವನಗಳಲ್ಲಿ ಮನುಷ್ಯ ಸ್ವಭಾವದ ಗೊತ್ತುಗುರಿಗಳನ್ನು ನಿರ್ಲಿಪ್ತವಾಗಿ ಅರಿಯುವ ಪ್ರಾಮಾಣಿಕ ಪ್ರಯತ್ನ ನಡೆದಿರುವುದು ಕಂಡುಬರುತ್ತದೆ. ಕೆಲವೊಮ್ಮೆ ಬರೆಯುವಾತನೇ ಅಥವಾ ಅನುಭವ ಗಳನ್ನು ಅಭಿವ್ಯಕ್ತಿಸುವಾತನೇ ನಾಯಕನೂ ಆಗಿಬಿಟ್ಟು ಆಗಿನ ನಿರೂಪಣೆಯಲ್ಲಿ ಕಂಡುಬರುವ ಅಸಾಧಾರಣ ನಿರ್ಭಾವುಕತನ ಗಮನಾರ್ಹವಾದುದಾಗಿದೆ. ಕವನ ಸಂಕಲನದ ಮೊದಲ ನಾಲ್ಕು ಪದ್ಯಗಳಾದ ಆಮೆ. ಏಡಿ. ಹುಂಜ ಮತ್ತು ಕಾಗೆಗಳಲ್ಲಿ ಪ್ರಾಣಿರೂಪಕಗಳನ್ನು ಅತ್ಯಂತ ಸಮರ್ಥವಾಗಿ. ಸಶಕ್ತವಾಗಿ ಬಳಸಿಕೊಳ್ಳಲಾಗಿದೆ. 12ನೇ ಶತಮಾನದ ವಚನಕಾರರಲ್ಲಿ ಅಗ್ರಮಾನ್ಯರಾದ ಬಸವಣ್ಣನವರ ವಚನಗಳಲ್ಲಿ ಪ್ರಾಣಿರೂಪಕಗಳ ಬಳಕೆ ಯಥೇಚ್ಛವಾಗಿರುವುದನ್ನು ಕಾಣುತ್ತೇವೆ. ಒಂದೇ ಪ್ರಾಣಿಯ ಚಿತ್ರ ಹಲವೊಮ್ಮೆ ಹಲವು ಭಾವಗಳ ಪ್ರತೀಕವಾಗಿ ಕಾಣಿಸಿಕೊಳ್ಳುತ್ತದೆ. ಒಮ್ಮೊಮ್ಮೆ ಸಾಧಾರಣ ಸಾದೃಶ್ಯವಾಗಿಯೂ ಮತ್ತೊಮ್ಮೆ ಯಾವುದೋ ಭಾವಸಂಕೇತವಾಗಿಯೋ ಪ್ರಾಣಿರೂಪಕ ಕಾಣಿಸಿಕೊಳ್ಳುತ್ತದೆ. ಬದುಕಿನ ಹಲವು ಸಂದರ್ಭಗಳಲ್ಲಿ ಅಂತರಂಗ ದಲ್ಲೇರ್ಪಡುವ ತುಮುಲದಲ್ಲಿ ಮಾನವಸತ್ವ ಮತ್ತು ಕ್ಷುದ್ರಜಂತು ಸ್ವಭಾವಗಳ

ಸಂಘರ್ಷಣೆಯೇ ಪ್ರಧಾನವಾಗುವುದರಿಂದ ಆಗಿನ ಚಿತ್ತಸ್ಥಿತಿಯನ್ನು ಪ್ರಾಣಿರೂಪಕಗಳಲ್ಲಿ ಶಕ್ತಿಯುತವಾಗಿ ಹಿಡಿದಿರಿಸುವುದು ಸಾಧ್ಯವಾಗುತ್ತದೆ. ಬಸವಣ್ಣನವರಿಗೆ ಈ ರಹಸ್ಯ ಚೆನ್ನಾಗಿ ಗೊತ್ತಿದ್ದುದರಿಂದ, ಅದಕ್ಕೂ ಮಿಗಿಲಾಗಿ ಮಾನವ ಸ್ವಭಾವಗಳ ಗಾಢ ಪರಿಚಯ ಅವರಿಗಿದ್ದುದರಿಂದ ಅವರ ವಚನಗಳಲ್ಲಿ ಪ್ರಾಣಿರೂಪಕಗಳನ್ನು ಸಮರ್ಥವಾಗಿ ತರುವುದು ಸಾಧ್ಯವಾಯಿತು. ಇದೇ ರೀತಿ ಪ್ರಾಣಿರೂಪಕಗಳನ್ನು ತನ್ನ ಕಾವ್ಯದಲ್ಲಿ ಉಚಿತ ರೀತಿಯಲ್ಲಿ ಬಳಸಿಕೊಂಡು ಯಶಸ್ವಿಯಾದ ಮತ್ತೊಬ್ಬ ಮಹಾಕವಿ ಕುಮಾರವ್ಯಾಸ. ಇದೇ ಮೇಲ್ಪಂಕ್ತಿಯನ್ನನುಸರಿಸಿ ಚನ್ನಯ್ಯನವರು ಸಮಕಾಲೀನ ಬದುಕಿನ ಅಸಹಾಯಕತೆ, ಅಸ್ವಸ್ಥತೆ, ದಾರುಣತೆ, ನೀರಸತೆ, ಬಯಸಿದ್ದನ್ನು ಪಡೆಯಲಾಗದ–ಪಡೆದದ್ದನ್ನು ದಕ್ಕಿಸಿಕೊಳ್ಳಲಾಗದ ತೊಳಲಾಟ ಇತ್ಯಾದಿಗಳನ್ನು ಚಿತ್ರಿಸಲು ಕೆಲವು ಉಪಯುಕ್ತ ಪ್ರಾಣಿರೂಪಕಗಳನ್ನು ಬಳಸಿದ್ದಾರೆ. ಭಯ, ಸಂಕೋಚ, ಮುಜುಗರ ಈ ಎಲ್ಲ ಸ್ವಭಾವಗಳ ಸಂಕೇತವೋ ಎಂಬಂತೆ ತನ್ನ ಚಿಪ್ಪಿನೊಳಗೆ ತಾನು ಅವಿತುಕೊಂಡು ತೀರಾ ಅಗತ್ಯಬಿದ್ದಾಗ ಮಾತ್ರ ಕತ್ತು ಹೊರಚಾಚಿ ಈಜುವ ಅಥವಾ ತೆವಳುವ ಆಮೆಯನ್ನು ಇಲ್ಲಿ ಮನಸ್ಸಿನ ಒಂದು ಅವಸ್ಥೆಯನ್ನು ರೂಪಿಸುವ ಪ್ರತೀಕವಾಗಿ ಬಳಸಿಕೊಳ್ಳಲಾಗಿದೆ. ಇಲ್ಲಿ ಬರುವ ವಾಸ್ತವ ಚಿತ್ರ ಮೃಗಾಲಯದಲ್ಲಿ ತನ್ನ ಇಷ್ಟಕ್ಕೆ ವಿರುದ್ಧವಾಗಿ ಬಂಧಿಯಾಗಿದ್ದು, ಮಾನಸಿಕ ಅಸ್ವಸ್ಥತೆಗೆ ಗುರಿಯಾಗಿ, ಚಡಪಡಿಕೆ ಶುರುವಾಗಿ, ಉಸಿರು ಕಟ್ಟಿಸುವ ಆ ಸ್ಥಿತಿಯಿಂದ ಬಿಡುಗಡೆ ಪಡೆಯಬಯಸಿ ಅದು ಸಾಧ್ಯವಾಗದ ದಾರುಣಾವಸ್ಥೆಯಲ್ಲಿ ನರಳುವ ಸ್ಥಿತಿ ಆಮೆಯದಾಗಿದೆ. ಇದು ಆಮೆಯ ಸ್ವಗತಗೀತೆಯಾಗಿದ್ದು ಅದು ತನ್ನ ನೋವನ್ನು ತಾನೇ ತೋಡಿಕೊಳ್ಳುವ ಧಾಟಿಯಲ್ಲಿದೆ. ಈ ಯಂತ್ರನಾಗರೀಕತೆಯ ಕಪಿಮುಷ್ಟಿಯಲ್ಲಿ, ಸಾಂಪ್ರದಾಯಿಕ ವಿಚಾರಗಳ ಹಿಡಿತದಲ್ಲಿ, ಮುಂದುವರಿದ ರಾಷ್ಟ್ರಗಳ ಪ್ರತಿಷ್ಠೆಯಲ್ಲಿ, ಮೂರನೇ ಮಹಾಯುದ್ಧದ ಭೀತಿಯಲ್ಲಿ ಕಂಗಾಲಾಗಿರುವ, ಅನಿಸಿದ್ದನ್ನು ಹೇಳಲಾಗದೆ ಹೇಳಿದ್ದನ್ನು ಅರಗಿಸಿಕೊಳ್ಳಲಾಗದೆ ಆಡಲಾಗದೆ ಅನುಭವಿಸಲಾಗದೆ ನರಳುವ ನಾವೆಲ್ಲ ಒಂದು ರೀತಿಯಲ್ಲಿ ಆಮೆಗಳೇ ಅಲ್ಲವೇ! ವ್ಯಕ್ತಿಗತ ಸಂಕೋಚದ ಪರಿಧಿಗಳನ್ನು ಮೀರಲಾಗದೆ ಇರುವ ಸ್ಥಿತಿಯಲ್ಲಿ ನಾವು ಕಾಣುವ ಕನಸಾದರೂ ಎಂಥದ್ದು? ಬೆಚ್ಚಿ ಬೀಳಿಸುವಂಥ, ಇನ್ನೊಮ್ಮೆ ಕಾಣುವುದೇ ಬೇಡ ಎನಿಸುವಂಥ ದುಃಸ್ವಪ್ನ. ಹೊರಲಾರದ ಹೊರೆಯಾಗಿರುವ ಬದುಕಿನಲ್ಲಿ ಒಂದಷ್ಟು ಸುಖ ಶಾಂತಿ ನೆಮ್ಮದಿಗಳನ್ನು ಅರಸುವ ಪ್ರಯತ್ನ ಮಾಡುತ್ತಿದ್ದಂತೆಯೇ "ಅಳೆಯಲಾರದಾಳದಿಂದ ಹೆಸರರಿಯದುದು ಬಂದು ನಾಲ್ಕೂ ಬದಿಯಿಂದ ತನ್ನ ನಳಿಗೆಗಳ ನಿಧಾನ ತೂರಿ, ಆಲಂಗಿಸಿ ಹಿಡಿತ ಬಿಗಿಮಾಡಿ ಬಂಧಿಸುತ್ತದೆ" ಈ ಬಂಧನದಿಂದ ಬಿಡುಗಡೆಯೇ ಇಲ್ಲ. ಉಸಿರುಕಟ್ಟಿಸುವ ದಾರುಣ ಸ್ಥಿತಿಯೇ ಇಲ್ಲಿ ನಿತ್ಯ ನಿರಂತರ. ಇನ್ನೊಬ್ಬರ ಸುಖಕ್ಕಾಗಿ ಆಮೆಗೆ ಬಂಧನ. ಆ ಬಂಧನವಲ್ಲಾದರೂ ಒಂದಿಷ್ಟು ಉಲ್ಲಾಸವಿದೆಯೇ? ಸುತ್ತ ಮುಳ್ಳುತಂತಿಯ ಬೇಲಿ. ನಾಲ್ಕು ಹೆಜ್ಜೆ ದೂರದಲ್ಲಿ ಕೃತಕ ಕೊಳದ ನೀರು.

ಮೇಲಿನಿಂದ ಸುಡು ಸೂರ್ಯನ ಭರ್ಜಿ ತಿವಿತ. ನೋಡಬಂದವರು ತಮ್ಮ ಖುಷಿಗಾಗಿ ಅದರತ್ತ ಕಲ್ಲೆಸೆದಾಗ ಸಾವು-ಬದುಕಿನ ನಡುವೆ ಅದರ ಉಯ್ಯಾಲೆ ಜೀಕಾಟ. ಹೀಗೆ ಇಲ್ಲಿ ಕಾಣಿಸಿಕೊಳ್ಳುವ ಆಮೆಯ ಚಿತ್ರ ಮಾನವ ಮನಸ್ಸಿನ ಒಂದು ಅವಸ್ಥೆಯನ್ನು ಪ್ರತಿಬಿಂಬಿಸುವುದರ ಜೊತೆಗೆ ಅವನ ಬದುಕಿನ ನೋವಿನ ಎಳೆಗಳನ್ನು, ಸರ್ವತಂತ್ರ ಸ್ವತಂತ್ರ ನಾಡಿನಲ್ಲಿದ್ದೂ ಬದುಕಿನ ಹೊರೆ ಹೊತ್ತು ಬಂದಿಯಾಗಿ ನರಳುತ್ತಿರುವ ಅವಸ್ಥೆಯನ್ನು ಅತ್ಯಂತ ಸಹಜವಾಗಿ, ಎಲ್ಲೂ ಈ ನರಳುವಿಕೆ ವಿಲಾಪ ಎನಿಸುವಷ್ಟು ಅತಿಯಾಗದಂತೆ ಎಚ್ಚರಿಕೆಯಿಂದ ಚಿತ್ರಿಸಿರುವುದೇ ಈ ಪದ್ಯದ ಯಶಸ್ಸಿಗೆ ಕಾರಣವಾಗಿದೆ. 'ಏಡಿ' ಕೂಡ ಇದೇ ಧಾಟಿಯಲ್ಲಿ ಹರಿದಿದ್ದರೂ ಇದರಲ್ಲಿ ಪ್ರಮುಖವಾಗಿ ಕಂಡುಬರುವುದು ಹಿಂಸೆಯ ವರ್ಣನೆ. ಹಿಂಸೆ, ಕ್ರೌರ್ಯಗಳು ಮನುಷ್ಯ ಸ್ವಭಾವದ ಆಳದಲ್ಲೆಲ್ಲೋ ಸುಪ್ತವಾಗಿ ಹುದುಗಿದ್ದು, ಹೊರಬರುವ ಸುಮುಹೂರ್ತಕ್ಕಾಗಿಯೇ ಕಳ್ಳರಂತೆ ಕಾದುಕೊಂಡಿರುತ್ತವೆ. ಸಾಧುವಿನಂಥ ವ್ಯಕ್ತಿಯೊಬ್ಬನನ್ನು ಕೆರಳಿಸಲು ಹಿಂಸೆಗೆ ಪ್ರಚೋದಿಸಲು ಒಂದು ಸಣ್ಣ ನೆಪವಷ್ಟೇ ಸಾಕು. ಕೆಲವೊಮ್ಮೆ ಅದು ಹೊರಬರಬೇಕೆನ್ನುವ ತವಕಕ್ಕೆ ಯಾವ ಕಾರಣ ಕೂಡ ಬೇಕಾಗಿಲ್ಲವೆನಿಸುತ್ತದೆ. ಈ ಹಿಂಸೆಯ ಒತ್ತಡ 'ಏಡಿ'ಯಲ್ಲಿ ಆಸೆಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ತಿನ್ನುವವರು ಅಥವಾ ರುಚಿ ಕಂಡವರು ಹೇಳುತ್ತಾರೆ ಬೇಯಿಸಿದ ಏಡಿಯ ಮಾಂಸ ಬಲು ರುಚಿ ಎಂದು. ಅದು ನೆನಪಿಗೆ ಬಂದೊಡನೆ ಅವರಿಗೆ ಬಾಯಲ್ಲಿ ನೀರೂರುತ್ತದೆ. ಎಷ್ಟು ಬೇಗ ಅದ ಹಿಡಿದು ಹೊಟ್ಟೆಗೊಂದು ದಬ್ಬಳ ಚುಚ್ಚಿ ಜೀವಂತ ಜ್ವಾಲೆಯಲ್ಲಿ ಬೇಯಿಸಿ-ತಿಂದೇವೋ ಎನಿಸುತ್ತದೆ. ಇದು ಆಸೆ ನಿಜ. ಆದರೆ ಇದನ್ನು ಪೂರೈಸಿಕೊಳ್ಳುವ ಹವಣಿಕೆಯಲ್ಲಿರುವ ಕ್ರೌರ್ಯದ ಸ್ವರೂಪ ಮಾತ್ರ ಮೈ ಜುಂ ಎನಿಸುವಷ್ಟು ಭೀಕರವಾಗಿದೆ. ಇದು ಮಾನವನ ಸುಪ್ತ ಚೇತನದ ಒಂದು ಭಾಗ. ಕೆಲವೊಮ್ಮೆ ಹಿಂಸೆಯಲ್ಲೂ ಅವನಿಗೆ ಆನಂದ ದೊರಕುತ್ತದೆ. ಆದರೆ ಈ ಹಿಂಸಾನಂದವೂ ಅವನಿಗೆ ದೊರೆತೀತು ಎಂಬುದಕ್ಕೆ ಯಾವ ಖಾತರಿಯೂ ಇಲ್ಲ. ಹಲವಾರು ಏಡಿಗಳನ್ನು ಮುರುಟಿಗೊಳಿಸಿ ಕುಕ್ಕಿತಿಂದು ತೇಗಿದ್ದ ಬಕವನ್ನು ಕೊನೆಗೂ ಒಂದು ಜಾಣ ಏಡಿ ತನ್ನ ಕೊಂಡಿಗಳಿಂದ ಹಿಸುಕಿ ಕೊಲ್ಲಲಿಲ್ಲವೇ ? ಇದು ಆಸೆಗಳಿಗೆ ಕನಸುಗಳಿಗೆ ಅಂತ್ಯ ಬರುವ ರೀತಿ. ನಮ್ಮ ಆಸೆ ಕನಸು ಆಲೋಚನೆಗಳನ್ನು ವಿಫಲತೆಯ ಭಾವ ಹೇಗೆ ತಟ್ಟುತ್ತದೆನ್ನುವ ಸೂಕ್ಷ್ಮ ವರ್ಣನೆಯೊಂದಿಗೆ ವಿಷಾದದ ಮುಸುಕು ಕವಿದು 'ಏಡಿ' ಕವನ ಅಂತ್ಯವಾಗುತ್ತದೆ.

'ಹುಂಜ' ಕವಿತೆ ಹುಂಜದ ಸಾಕ್ಷಾತ್ ವರ್ಣನೆಯನ್ನು ಅಚ್ಚುಕಟ್ಟಾಗಿ ಮಾಡಿ ಮುಗಿಸುವಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಇದೊಂದು ವರ್ಣನಾತ್ಮಕ ಪದ್ಯ. ಹುಂಜವನ್ನು ನೋಡಿದ್ದವರಿಗೆ ಥಟ್ಟನೆ ನೆನಪಿಗೆ ಬರುವುದು ಅದರ ನಡಿಗೆಯ ಗತ್ತು ಮತ್ತು ಆಕಾಶಕ್ಕೆ ತಲೆಯೆತ್ತಿ ಕೂಗುವ ರೀತಿ. ಇವೆರಡನ್ನೂ ದೃಷ್ಟಿಯಲ್ಲಿರಿಸಿಕೊಂಡೇ ಇಡೀ ಕವಿತೆಯನ್ನು ಕಲಾತ್ಮಕವಾಗಿ ನೇಯಲಾಗಿದೆ. ಒಂದು ಜಪಾನೀ ಕವಿತೆಯಿಂದ ಪ್ರೇರಿತವಾಗಿ ಬರೆಯಲ್ಪಟ್ಟಿರುವ 'ಕಾಗೆ' ಕೂಡ ಸೀಮಿತ ಉದ್ದೇಶಕ್ಕೆ ಬದ್ಧವಾದದ್ದು. ಕಾಗೆಯ

ಬಗೆಗಿನ ವಿನಾಕಾರಣ ಅಸಹ್ಯಭಾವ ಕಣ್ಮುಚ್ಚಿ ಕುಳಿತಾಗಲೂ ಕಾಡುತ್ತದೆ. ಅದರ ಕೂಗು ಪ್ರೇತ ಧ್ವನಿಯಂತೆ ಪ್ರತಿಧ್ವನಿಸುತ್ತದೆ. ಅದರ ಕೊಕ್ಕು ನೇಗಿಲಿನ ಮೊನೆಯಂತೆ ಕುಕ್ಕುತ್ತದೆ. ಅಂಥ ವಿಕಾರ ರೂಪಿನ ಪಕ್ಷಿಯನ್ನು ಹಿಡಿದು ತಿನ್ನುವ ಅಥವಾ ಅದನ್ನು ಕರಕಾಗುವಂತೆ ಸೀದು ಸುಡುವ ಆಸೆ ಪ್ರಬಲಿಸುತ್ತದೆ. ಇಲ್ಲಿ ಮತ್ತೆ ಹಿಂಸೆಯ ಭಾವ ಥಟ್ಟನೆ ಮೂರ್ತಿ ಚಾಚುವುದು ಕಂಡುಬರುತ್ತದೆ. ಹಿಂಸೆಯ ಸೆಳೆತಕ್ಕೆ ಸಿಲುಕಿಕೊಂಡ ಮನಸ್ಸು ಸ್ಪಷ್ಟ ಕಾರ್ಯಾಚರಣೆಗಿಳಿಯದೆ ಅಸಹಾಯಕವಾಗಿ ಒದ್ದಾಡುತ್ತದೆ.

'ಪರಕೀಯ' ಕವಿತೆಯಲ್ಲಿ ವ್ಯಕ್ತವಾಗುವ ವಿಚಾರಗಳು ಈ ಸಂಕಲನದ ಕವಿತೆಗಳ ಬೆನ್ನುಡಿಯಂತ ಭಾಸವಾಗುತ್ತದೆ. ಉತ್ಕಟ ಜೀವಿತಾಕಾಂಕ್ಷೆಯನ್ನು ಹೊಂದಿದ ವ್ಯಕ್ತಿಯೊಬ್ಬನ ಸಿಭರ್ಾವುಕ ಸ್ವಗತವೂ ಆಗಿರುವಂತೆ ಈ ಕವಿತೆ ಕಂಡುಬರುತ್ತದೆ. ಒಂದೊಂದು ಕ್ಷಣವೂ ಸಾರ್ಥಕವಾಗುವಂತೆ ಉತ್ಕಟವಾಗಿ ತೀವ್ರವಾಗಿ ಬದುಕಬೇಕೆಂಬ ಆಸೆ ಹೊತ್ತವನು ಒಬ್ಬ. ಅವನಿಗೆ ಈ ದೇಶದ ಬಹುಪಾಲು ಜನರಿಗಿರುವಂತೆ ಪುನರ್ಜನ್ಮದಲ್ಲಿ ನಂಬಿಕೆಯಿಲ್ಲ. ಅದರ ಬಗೆಗೆ ತಿಳಿಯಬೇಕೆಂಬ ಆಸಕ್ತಿಯೂ ಇಲ್ಲ. ಧರ್ಮ, ಜಾತಿ, ಸಂಪ್ರದಾಯ ಲಾಂಛನಗಳ ಸಂಕೋಲೆಗಳಿಂದ ಬಂಧಿತನಾದವನಲ್ಲ. ಆದರೂ ಈ ಹುಚ್ಚರ ಸಂತೆಯಲ್ಲಿ ಮತಿಭ್ರಾಂತರ ಸಾಮ್ರಾಜ್ಯದಲ್ಲಿ ಇವನ ಮುಖವಾಡರಹಿತ ವ್ಯಕ್ತಿತ್ವವಾಗಲೀ, ಅಂತರಂಗ-ಬಹಿರಂಗಗಳ ಸತ್ಯದರ್ಶನವಾಗಲೀ ಮಹತ್ವ ಪಡೆದುಕೊಳ್ಳುವುದಿರಲಿ ಲೆಕ್ಕಕ್ಕೂ ಬರುವುದಿಲ್ಲ. ಹುಚ್ಚರ ನಡುವೆ ಹುಚ್ಚನೂ, ಸುಳ್ಳರ ನಡುವೆ ಸುಳ್ಳನೂ ಮೋಸಗಾರರ ನಡುವೆ ಮೋಸಗಾರನೂ ಆಗಿದ್ದರೆ ಮಾತ್ರ ಇಲ್ಲಿ ಬದುಕು ಸುಗಮವಾಗಿ ಚಲಿಸೀತು. ನಿಜದ ನೇರಕೆ ನಡೆವವರ ಈ ಲೋಕ ಪರಿಗಣಿಸುವುದೂ ಇಲ್ಲ ಪುರಸ್ಕರಿಸುವುದೂ ಇಲ್ಲ. ಎಲ್ಲರಂತೆ ನಾನೂ ಆಗಿ ಬದುಕೋಣ ಎಂದರೆ ಆತ್ಮಸಾಕ್ಷಿ ಒಪ್ಪುವುದಿಲ್ಲ. ಹೀಗೆ ಅಂತರಂಗ ಬಹಿರಂಗಗಳ ತಾಕಲಾಟ ಕೊನೆಗೂ ಅವನನ್ನು ಒಂಟಿಯಾಗಿಸಿ ಜನಜಾತ್ರೆ ಗದ್ದಲದ ನಡುವೆಯೂ ಅವನನ್ನು ಪರಕೀಯನನ್ನಾಗಿಸಿ ಬಿಡುತ್ತದೆ. ಒಂಟಿಯಾಗಿರುವ ಕ್ಷಣಗಳಿಂದ ಬಿಡಿಸಿಕೊಂಡರೂ ಅವನಿಗೆ ಪರಕೀಯತೆಯಿಂದ ಮುಕ್ತಿ ದೊರೆಯದ ವ್ಯವಸ್ಥೆಯ ದುರವಸ್ಥೆ ಇಲ್ಲಿ ಅತ್ಯಂತ ಸಹಜವಾಗಿ ಅಭಿವ್ಯಕ್ತಿಸಲ್ಪಟ್ಟಿದೆ.

'ಬೆಳಗು' ಕವಿತೆ ತನಗನಿಸಿದಂತೆ ಬದುಕಲಾಗದಲ್ಲ ಎಂದು ಪರಿತಪಿಸುವ ವ್ಯಕ್ತಿಯೊಬ್ಬನ ಹೃದಯದ ತಳಮಳವನ್ನು, ಬೇಗುದಿಯನ್ನು, ಅಸಹಾಯಕತೆಯನ್ನು ಸಮರ್ಥ ಶಬ್ದಾವಳಿಗಳಲ್ಲಿ ಬಿಚ್ಚುತ್ತಾ ಹೋಗುತ್ತದೆ. ಈ ಅಸಹಾಯಕತೆ ಮತ್ತು ಒದ್ದಾಟಕ್ಕೆ ಕಾಮ–ಹಿಂಸೆಗಳ ಸೆಳೆತವೇ ಮುಖ್ಯ ಕಾರಣ. ತನ್ನ ನಿಜಸ್ವರೂಪವನ್ನು ಸ್ಪಷ್ಟಪಡಿಸಿಕೊಳ್ಳಲು ಹಾತೊರೆಯುವ ಮನಸ್ಸು ಕೊನೆಗೆ ತನಗಾವ ನಿಶ್ಚಿತ ಸ್ವರೂಪವೂ ಇಲ್ಲವೆನ್ನುವ ಕಟುವಾಸ್ತವವನ್ನು ಅರಿಯಬೇಕಾಗುತ್ತದೆ. ಕಾಮ ಮತ್ತು ಹಿಂಸೆಗಳ ಸೆಳೆತದಲ್ಲಿ ತನ್ನ ವ್ಯಕ್ತಿತ್ವ ಪ್ರಕಟಣೆಗಾಗಿ ಕತ್ತಲಿನಲ್ಲಿ ವಿಲಿವಿಲಿ ಒದ್ದಾಡುವ ಮನಸ್ಸಿನ

ವಿವಿಧ ಅವಸ್ಥೆಗಳ ಚಿತ್ರಣವಂತೂ ಈ ಕವಿತೆಯಲ್ಲಿ ಅದ್ಭುತವೆನ್ನಿಸುವಂತೆ ಬಂದಿದೆ. ಜನ ಎದ್ದು ಓಡಾಡತೊಡಗಿದ ಮೇಲೆ ಉಂಟಾದ ಗದ್ದಲವೇ ಇನ್ನೂ ಸವಿನಿದ್ದೆಯಲ್ಲಿ ಮೈಮರೆತಿದ್ದ ನಾಯಕನನ್ನು ಎಚ್ಚರಿಸುತ್ತದೆ. ಅದು ಅವನಿಗೆ ಸಾವಿನಿಂದ ಎಚ್ಚೆತ್ತ ಅನುಭವವಾಗುತ್ತದೆ. ಎದ್ದು ಪದ್ಮಾಸನ ಹಾಕಿ, ಮೂಗಿನ ಒಂದು ಹೊಳ್ಳೆ ಮುಚ್ಚಿ ಹುಬ್ಬಿನ ನಡುವೆ ದೃಷ್ಟಿ ನಿಲ್ಲಿಸಿದಾಗ ಅವನಿಗೆ ಕಾಣುವುದೇನು? "ಎಲ್ಲೊ ಕಂಡ ಮುದ್ದು ಮುಖ ತೋರ ತಿಕ......ಬೆಳೆದೆದ್ದು ನಿಂತ ಶಿಶ್ನ ಕಾನನದ ತುದಿಗೆ ಕುಕ್ಕುವ ರಣಹದ್ದು ನೂರಾರು" ಕಾಮ ಮತ್ತು ಹಿಂಸೆ ಇಲ್ಲಿ ಒಟ್ಟೊಟ್ಟಿಗೇ ತಳುಕು ಹಾಕಿ ಕೊಂಡು ಚಲಿಸುತ್ತವೆ. ಈ ಎರಡೂ ಅನುಭವ ದ್ರವ್ಯಗಳು ಅವನ ಮನಸ್ಸನ್ನು ಕಾಡುತ್ತವೆ. ಮರೆಯಬೇಕೆಂದಷ್ಟೂ ದೂರ ಸರಿಸಬೇಕೆಂದಷ್ಟೂ ತೀವ್ರವಾಗಿ ವೇಗ ವಾಗಿ ಅವು ಒತ್ತಿಕೊಂಡು ಬರುತ್ತವೆ. ಬೇಡವೆಂದರೂ ಅನಿವಾರ್ಯವಾಗಿ ಈ ವಿರುದ್ಧ ಭಾವಗಳ ಸೆಳೆತಕ್ಕೆ ಸಿಲುಕಿದ ಇವನಿಗೆ ನಿಶ್ಚಿತವಾದ ವ್ಯಕ್ತಿತ್ವವೇ ಇಲ್ಲ. ಯಾಕೆಂದರೆ "ಹಗಲಿಗೆ ಮತ್ತೆ ತೊಡಬೇಕು ಹಗಲುವೇಷ : ಅಂಗಿ ಶರಾಯಿ ; ಇಲ್ಲ ಕೋಟು ಪ್ಯಾಂಟು ; ಇಲ ಜುಬ್ಬ ಕಚ್ಚೆ ; ಅಕೇಶನ್ನಿಗನುಗುಣವಾಗಿ" ಕೊನೆಗೆ ಅವನಿಗೆ ಜ್ಞಾನೋದಯವಾಗುತ್ತದೆ : ತನ್ನ ನಿಜವಾದ ಸ್ವರೂಪವೆಂದರೆ ಯಾವ ನಿಶ್ಚಿತ ಸ್ವರೂಪವೂ ಇಲ್ಲದಿರುವುದೇ ಎಂದು.

ಬಸವಣ್ಣ ಅಕ್ಕಮಹಾದೇವಿಯರ ಅನುಭಾವದ ದರ್ಶನಕ್ಕೂ ಕವಿಯ ಸ್ವಂತ ಅಸ್ತಿತ್ವದ ಸ್ಥಿತಿಗೂ ಇರುವ ಬೇಧವನ್ನು ಗುರುತಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ 'ಅಣ್ಣ' ಕವಿತೆಯಲ್ಲಿ ಕಂಡಬರುತ್ತದೆ. 12ನೇ ಶತಮಾನದಲ್ಲಿ ಬದುಕಿದ್ದ ಅವರನ್ನು 20ನೇ ಶತಮಾನದ ವಿಚಾರ ಧಾರೆಗಳ ಮೂಲಕ ಅರ್ಥೈಸಿಕೊಳ್ಳುವ ವಿಧಾನ ಒಂದು ವಿಧದಲ್ಲಿ ನಮಗೆ ನಾವೇ ಬಗೆದುಕೊಳ್ಳುವ ದ್ರೋಹ. ಬಸವಣ್ಣ ಇವತ್ತು ಕೆಲವರಿಗೆ ಪೂಜನೀಯನಾಗಿರುವುದೂ ಮತ್ತೆ ಕೆಲವರಿಗೆ ಸ್ವಾರ್ಥಿಯೂ ಲೋಲುಪನೂ ಆದ ರಾಜಕಾರಣಿಯಾಗಿರುವುದೂ ಅವರವರು ಹೊಂದಿರುವ ಮತಶ್ರದ್ಧೆ ಮತ್ತು ಧಾರ್ಮಿಕ ನಂಬಿಕೆಗಳ ಕಾರಣದಿಂದಲೇ. ಆದ್ದರಿಂದ ಬಸವಣ್ಣ ಅಕ್ಕಮಹಾದೇವಿಯರು ಇವತ್ತು ಗುರುತಿಸಲ್ಪಡುವಷ್ಟು ಜಿತೇಂದ್ರಿಯರೂ ಸಂಯಮಿಗಳೂ ಆದರ್ಶ ಮಾನಸರೂ ದೈವ ಭೀರುಗಳೂ ಅಂದು ಆಗಿದ್ದರೋ ಇಲ್ಲವೋ ಗೊತ್ತಿಲ್ಲ. ಒಮ್ಮೆ ಆಗಿದ್ದರೂ ಅದಕ್ಕೆ ಕಾರಣ ನಾವೀಗ ಕಂಡುಕೊಳ್ಳುತ್ತಿರುವುದಕ್ಕಿಂತ ಭಿನ್ನವಾದುದೂ ಆಗಿರಬಹುದು. ಒಬ್ಬರಿಗೆ ಪೂಜ್ಯ ವ್ಯಕ್ತಿ ಎನ್ನುವ ಕಾರಣಕ್ಕೆ ಬಸವಣ್ಣ ಸಾರ್ವತ್ರಿಕ ಪೂಜ್ಯತೆ ಪಡೆದುಕೊಳ್ಳಬೇಕಿಲ್ಲ. ಅವನ ಪೂಜ್ಯತೆಗೆ ಕಾರಣವಾದ ಅಂಶಗಳೇನು ಎಂದು ಹುಡುಕ ಹೊರಡುತ್ತದೆ ಅಸ್ತಿತ್ವವಾದದಿಂದ ಪ್ರಭಾವಿತವಾದ ಮನಸ್ಸು. ಕಾಮವನ್ನು ಗೆಲ್ಲುವಲ್ಲಿ ಬಸವಣ್ಣ ಅಕ್ಕಮಹಾದೇವಿ ನಡೆಸಿದ ಹೋರಾಟದ ಸ್ವರೂಪವನ್ನು ವಿಚಾರ ವಂತ ಮನಸ್ಸು ಒರೆಗೆ ಹಚ್ಚಿ ನೋಡುವ ಪ್ರಯತ್ನ ಮಾಡುತ್ತದೆ. ಅಂಥದೇ ಹೋರಾಟದಿಂದ ತಾನೂ ಕಾಮವನ್ನು ಗೆಲ್ಲಲು ಪ್ರಯತ್ನಿಸಿ ಅದು ಮತ್ತೆ ಮತ್ತೆ

ವಿಫಲವಾದಾಗ ಅವರ ಹೋರಾಟದ ವಿಚಾರದಲ್ಲಿ ಅನುಮಾನದ ಟಿಸಿಲೊಡೆಯುತ್ತದೆ. ಅಕ್ಕ ಬಸವಣ್ಣನ ಆದರ್ಶವನ್ನನುಸರಿಸಿಯೂ ಸಂಯಮದ ಸಾಧನೆ ಆಗದೇ ಹೋದಾಗ ಮನಸ್ಸು ಅಸ್ವಸ್ಥತೆಗೆ ಪಕ್ಕಾಗಿ ಅಸಹಾಯಕತೆಯಿಂದ ಹಳಹಳಿಸುತ್ತದೆ. ಯಾವ ಆದರ್ಶಗಳೂ ನಮ್ಮ ಬದುಕನ್ನು ನೇರ್ಪಡಿಸಲಾರವು, ಯಾವ ಮಹಾವ್ಯಕ್ತಿಯನ್ನು ನೆನೆದುಕೊಳ್ಳುವುದರಿಂದಲೂ ನಮ್ಮ ಗೋಳು ಕೊನೆಗೊಳ್ಳಲಾರದು. ಇಲ್ಲಿ ನಮ್ಮ ನಮ್ಮ ಪ್ರಾರಬ್ಧವನ್ನು ನಾವೇ ಅನುಭವಿಸಬೇಕು. ನಮ್ಮ ಹೆಣಗಳನ್ನು ನಾವೇ ಹೊತ್ತು ಸಾಗಿಸಬೇಕು ಎನ್ನುವ ತಿಳುವಳಿಕೆ ಕೊನೆಗೆ ಮೂಡುತ್ತದೆ : "ಈಗ, ಇಲ್ಲಿಯ ತನಕ ಇದನ್ನ ನನ್ನ ತೊಡೆಮಡಕ್ಕೆ ಪಳಗಿಸಿಕೊಳ್ಳಬೇಕೆಂದು ಯತ್ನಿಸಿ ಆಗದೆ, ಅಯ್ಯೋ ಅದು ಬೆಳೆದು ನನ್ನನ್ನಾಕ್ರಮಿಸಿ ನಿಷ್ಕ್ರಿಯನನ್ನಾಗಿಸುವುದಕ್ಕಿಂತ ಮೊದಲೆ ಸಾಗಿಸಿ ಹುಗಿದು ಬಿಡಬೇಕೆಂದು ಹೊತ್ತು ಹೊರಟ ನನ್ನನ್ನೇ ಬಲೂನಾಗಿ ಸುತ್ತಿ ಎಳೆದೊಯ್ಯುತ್ತಿದೆ ಇದಕ್ಕೆ ಸೂಜಿಮೊನೆ ನೀನಲ್ಲ, ಎನ್ನಿಸುತ್ತಿದೆ" ಎನ್ನುವಲ್ಲಿ ಆದರ್ಶಗಳು ಭಗ್ನವಾಗುವ ಸ್ಥಿತಿಯನ್ನು ನಿರುದ್ವಿಗ್ನವಾಗಿ ಮಂಡಿಸಲಾಗಿದೆ.

ಕಾಮ ಮತ್ತು ಹಿಂಸೆಗಳಿಂದ ಆವೃತವಾಗಿರುವ ಜಗತ್ತನ್ನು ಸಮಾಜ ಜೀವಿಯೊಬ್ಬ ಕಣ್ತೆರೆದು ನೋಡಲು ಹೆದರುವ ಸ್ಥಿತಿಯನ್ನು 'ನಾನು' ಪದ್ಯ ವರ್ಣಿಸುತ್ತದೆ. ಅಪ್ರಚೋದಿತವಾಗಿ ಉಸಿರಾಡುತ್ತಿರುವ ವ್ಯಕ್ತಿಯಲ್ಲಿ 'ನಾನು' ಎನ್ನಿಸುವಂಥದ್ದು ಪ್ರಶ್ನೆ ಮತ್ತು ಒಡಲು. ಇವೆರಡರಿಂದಾಗಿಯೇ ಹಲವರ ನಡುವೆ ಪ್ರತ್ಯೇಕತೆಯನ್ನು ಗುರುತಿಸಿಕೊಂಡು ಬದುಕಬೇಕಾದ ಕರುಣಾಜನಕ ಸ್ಥಿತಿ ಪ್ರಾಪ್ತವಾಗಿದೆ. ಈ 'ನಾನು' ಎನ್ನುವ ಅನಿಸಿಕೆಗೆ ಸಾಮಾಜಿಕ ಬಂಧನಗಳಿಂದ ಮುಕ್ತಿ ಇಲ್ಲ. ಹಿಂಸೆ–ಕಾಮಗಳ ಕಬಂಧ ಬಾಹುಗಳ ಹಿಡಿತದಿಂದ ಬಿಡುಗಡೆ ಇಲ್ಲ. ಕಾಮದ ಆನಂದವೂ ಹಿಂಸೆಯಾಗಿ ಪರಿವರ್ತಿತವಾಗಿಬಿಡುವ, ಹಿಂಸೆಯ ನೋವೂ ಕಾಮದ ಖುಷಿಯಾಗಿ ಕಚಗುಳಿಯಿಡುವ ವಿಪರ್ಯಾಸ, ಅಪಾಯ ಎಲ್ಲವೂ ಇದೆ. ಈ ಅನುಭವ "ಹಾರೈಸಿದ್ದ ಅವನ ಬಲಿಷ್ಠ ಚಂಚು ಪಕ್ಷಗಳ ಮೃತ್ಯುಬಂಧನಕ್ಕೆ : ಪಂಜರದ ಪ್ರಣಯ ಕೇಳಿಯ ಬಲಾತ್ಕಾರಕ್ಕೆ ಕನಸಲ್ಲೆಲ್ಲ ಆಕಳಿಸಿದೀ ಹುಣ್ಣೆನೊಳಕ್ಕೆ ಹೊಕ್ಕು ಕಡೆದಂತೆ ಮಂದರ ಬಯಸಿ ಬಾಯ್ಬಿಟ್ಟೆ" ಎನ್ನುವಲ್ಲಿ ಅತ್ಯಂತ ಸಮರ್ಥ ರೀತಿಯಲ್ಲಿ ಅಭಿವ್ಯಕ್ತಿಸಲ್ಪಟ್ಟಿದೆ.

ಮನುಷ್ಯ ಸ್ವಭಾವಗಳನ್ನು ನಿರ್ಲಿಪ್ತವಾಗಿ ಅರಿಯುವ ಚೆನ್ನಯ್ಯನವರ ಪ್ರಯತ್ನ ಹೆಚ್ಚು ಯಶಸ್ವಿಯಾಗಿರುವುದು 'ಬೂರ್ಶ್ವಾ' ಮತ್ತು 'ದುಃಸ್ವಪ್ನ' ಕವಿತೆಗಳಲ್ಲಿ. ಬೇರೆಯವರಲ್ಲೇ ತಪ್ಪು ಹುಡುಕುತ್ತ ಕಡ್ಡಿಯನ್ನೇ ಗುಡ್ಡ ಮಾಡುವ ಮನೋಭಾವದವರಿಗೆ ತಮ್ಮ ಹುಳುಕುಗಳತ್ತ ದೃಷ್ಟಿ ಹೊರಳುವುದು ಕಡಿಮೆ. ತಮ್ಮಲ್ಲೂ ದೋಷ ದೌರ್ಬಲ್ಯಗಳಿಲ್ಲವೆ ಎಂಬ ಅನುಮಾನ ಕೂಡ ಕಾಡುವುದಿಲ್ಲ. ಈ ಕವಿತೆಗಳ ನಾಯಕ ಕೂಡ ಇಂಥ ಸ್ವಭಾವದವನೇ ಆದರೂ ಕೊನೆಗೊಮ್ಮೆ ಆತ್ಮಶೋಧನೆಯ ಪ್ರಯತ್ನ ಅವನಲ್ಲೂ ಜಾಗೃತವಾಗಿ ವಾಸ್ತವ ಸ್ಥಿತಿಯನ್ನರಿಯುವುದು ಸಾಧ್ಯವಾಗುತ್ತದೆ. 'ಬೂರ್ಶ್ವಾ' ಕವನದಲ್ಲಿ ತಾನುದ್ವೇಷಿಸುವ 'ಬೂರ್ಶ್ವಾ' ತಾನೇ ಆಗಿದ್ದೇನೆಂಬ ಸತ್ಯವನ್ನು

ಅರ್ಥಮಾಡಿಕೊಂಡು ಬೆಚ್ಚಿಬೀಳುತ್ತಾನೆ. ಎಲ್ಲರನ್ನೂ ಹಲವು ಬಗೆಗಳಲ್ಲಿ ಕಾಡುವ ಕಾಮದ ಕೋಲಾಹಲಕ್ಕೆ ತಾನೂ ಸಿಲುಕಿಕೊಂಡಿದ್ದೇನೆ, ಎಲ್ಲ ಬಗೆಯ ಕಾಮದಾಟಗಳನ್ನೂ ತೃಪ್ತಿಯಿಂದ ಆಡಿ ನಲಿದಿದ್ದೇನೆ, ಹೊರಜಗತ್ತಿನೆದುರು ಕಾಮ ಎಂದರೇನೆಂದೇ ಗೊತ್ತಿಲ್ಲದವನಂತೆ. ಸಾಚಾ ವ್ಯಕ್ತಿಯಂತೆ ಕಾಣಿಸಿಕೊಂಡರೂ ನನ್ನ ಏಕಾಂತದ ಆಲೋಚನೆಗಳಲ್ಲಿ ಕ್ರಿಯೆಗಳಲ್ಲಿ ಕಾಮುಕನೇ ಆಗಿದ್ದೇನೆ. "ಇದು ಕನ್ನಡಿಯಲ್ಲಿ ನನ್ನ ನಾ ಕಂಡುಕೊಂಡಿದ್ದು" ಎನ್ನುತ್ತಾನೆ. ಈ ಎರಡೂ ಕವನಗಳ ನಾಯಕ ತನ್ನ ಹುಳುಕುಗಳನ್ನೇ ಎತ್ತಿ ಹೊರಗೆ ಒಗೆಯುತ್ತಿದ್ದಾಗಲೂ ಪೋಜು ಕೊಟ್ಟುಕೊಳ್ಳದ ನಿರ್ಲಿಪ್ತ ನಿರೂಪಣೆಯ ಧಾಟಿ ಶ್ಲಾಘ್ಯವಾದದ್ದು.

ಸರ್ಪ ಸಂಕೇತದ ಹಿನ್ನೆಲೆಯಲ್ಲಿ ಕಾಮದ ಕಾಡುವಿಕೆಯ ಮತ್ತೊಂದು ನೋಟ 'ಇದು' ಕವಿತೆಯಲ್ಲಿ ಕಾಣಿಸಿಕೊಳ್ಳುತ್ತದೆ. ಪುರಾಣ ವೇದಗಳ ಕಾಲದಿಂದಲೂ ಕಾಮ ಕುತೂಹಲವಾಗಿ ಕೌತುಕವಾಗಿ ದೇವಾನುದೇವತೆಗಳನ್ನೂ ಋಷಿಮುನಿಗಳನ್ನೂ ತನ್ನ ತೆಕ್ಕೆಯೊಳಗೆ ಗುಬ್ಬಚ್ಚಿಗಳಂತೆ ಆಡಿಸುತ್ತ ಬಂದಿರುವ ಪರಿಯನ್ನು ಈ ಪದ್ಯದಲ್ಲಿ ಕೆಲವು ಉದಾಹರಣೆಗಳೊಂದಿಗೆ ಸ್ಪಷ್ಟಪಡಿಸುತ್ತ ಒಂದು ಚೌಕಟ್ಟಿನೊಳಗೆ ಬಂಧಿಯಾಗ ಬಯಸದ ಕಾಮ ವಿಕೃತವೂ ಆಗಿಬಿಡುವ ಬಗೆಯನ್ನು ಹೇಳಲಾಗಿದೆ. "ಅದೆ ಮೊನ್ನೆ ನಡೆದ ಮದುವೆಯಲ್ಲಿ ಹೆಣ್ಣನ್ನೆ ಕಂಡು ಇಲಿಯ ನುಂಗಲು ಹೆಡೆಯೆತ್ತಿ ಕಾಡಿಸಿತು. ಹದ್ದು ಹೊಡೆದೊಯ್ದ ಇಲಿಯ ಮಾಂಸಕ್ಕೆ ಬಾಯ್ನೀರ ಸುರಿಸಿ ಮೆತ್ತಗೆ ಕದ್ದು ಹೆಡೆ ಮುಚ್ಚಿಕೊಂಡಿತು." ಎನ್ನುವಲ್ಲಿ ಹದ್ದಿಗೆ ಬದ್ಧವಾಗಲಿಚ್ಛಿಸದ ಕಾಮ ಸಭ್ಯತೆ ಸಂಕೋಚಗಳ ಎಲ್ಲೆ ಮೀರಿ ಎಲ್ಲಿ ಹೇಗೆ ಬೇಕಾದರೂ ಮೂತಿ ಚಾಚೀತು ಎನ್ನುವ ಅಂಶವನ್ನು ಸ್ಪಷ್ಟಪಡಿಸುತ್ತದೆ.

ಹಳ್ಳಿಯ ಬರಡು ಬದುಕಿನಲ್ಲಿ ವರ್ಣರಂಜಿತ ಕಾಮನಬಿಲ್ಲು ಮೂಡಿಸಿದ ಹಣ್ಣಿನ ರಂಗು ರಂಗಾದ ವರ್ಣನೆ 'ಜೀವನ' ಪದ್ಯದಲ್ಲಿ ಬರುತ್ತದೆ. "ನಮ್ಮ ಬೀದಿಗೆ ಬಣ್ಣ ಬಂತು ಜೀವ ಬಂತು ಜೀವನೋತ್ಸಾಹ ಬಂತು ಜರೆ ಬಂದವರಿಗೂ ಹರೆಯದ ತೊರೆ ಉಕ್ಕಿಬಂತು ನಮ್ಮ ಬೀದಿಯ ಮದುವೆ ಆಗದ ಹುಡುಗಿಯರ ಸಪ್ಪೆ ಮುಖಕ್ಕೂ ರಂಗು ಬಂತು"ಎನ್ನುವಲ್ಲಿ ಪ್ರಕೃತಿಯ ಮಹಾನ್ ಶಕ್ತಿಯ, ಅಗಾಧ ಚೈತನ್ಯಶೀಲತೆಯ, ಉತ್ಸಾಹ ಶೀಲತೆಯ ಪರಿಚಯ ಮಾಡಿಕೊಡುವ ಪ್ರಯತ್ನವಿದೆ. ಹಲವು ಹಳವಂಡಗಳ ನಡುವೆ ಅಪ್ಪಟ ದೇಶಭಕ್ತನೊಬ್ಬ "ನನಗಾಗಿ ಒಮ್ಮೆಯೂ ಬದುಕಲಿಲ್ಲ" ಎಂದು ಕೊರಗುವ ಚಿತ್ರ 'ದೇಶಭಕ್ತ' ಕವಿತೆಯಲ್ಲಿದ್ದರೆ, ನೆಹರೂ ಆದರ್ಶರಾಜ್ಯ ಸುಂದರ ಕನಸುಗಳ ಕಣ್ಣುಮುಚ್ಚಾಲೆಯಾಟಗಳನ್ನು ನವಿರಾಗಿ ಚುಚ್ಚುತ್ತಲೇ ರಾಮ ಮನೋಹರ ಲೋಹಿಯಾರ ಧೀಮಂತ ವ್ಯಕ್ತಿತ್ವವನ್ನು ಎಲ್ಲ ಆಡಂಬರಗಳನ್ನು ಬದಿಗೊತ್ತಿ "ಈ ನೆಲದ ರಸಹೀನ ಬಂಜೆತನಕ್ಕೆ ಮದ್ದಾಗುವ ನೇಗಿಲಾಗುವ, ಚಹರೆಯಿಲ್ಲದೀ ಜನಕ್ಕೆ ರೂಹು ಕೊಡುವ ಸುತ್ತಿಗೆಯಾಗುವ ಕುಡುಗೋಲಾಗುವ" ಉಜ್ವಲ ವ್ಯಕ್ತಿತ್ವವನ್ನು ಉತ್ಪ್ರೇಕ್ಷೆಗೆಡೆಗೊಡದಂತೆ ಸಹಜ ಸುಂದರವಾಗಿ ಚಿತ್ರಿಸಲಾಗಿದೆ. ಧರ್ಮೋದ್ಧಾರಕರೆಂದು ಹೇಳಿಕೊಂಡು ಅತ್ತಕಡೆ ದೇವರನ್ನೂ ಇತ್ತಕಡೆ ಭಕ್ತರನ್ನೂ

ಶ್ರೀಮಂತರಾದ ಸ್ವಾರ್ಥಿಗಳಿಂದ ಭ್ರಷ್ಟರಿಂದ ಪಾರಾಗಬೇಕೆನ್ನುವ ತಪತಪ 'ಪರು ಪಾಯ ಕಪಿಲೆಯಲ್ಲಿದ್ದರೆ 'ಕ್ಷೇತ್ರ' ಕವಿತೆ ಪುಣ್ಯಕ್ಷೇತ್ರಗಳ ವಿಶ್ವರೂಪದರ್ಶನ ಮಾಡಿಸುತ್ತದೆ. "ಹೊಳೆ ಪಾಪ ಲಕ್ಷ್ಮೀ ಪ್ರಕ್ಷಾಳನ. ಪರದೇಶಿ ಹೆಣದ ದಹನ; ಬಟ್ಟೆ ಸೆಳೆಯುವ ಪಕ್ಕಿ ಕಚ್ಚೆ ಕಟ್ಟಿದ ಹೆಣ್ಣು ತುಂಬುತೊಡೆ ಕಂಡ ದುಳುಗೆದ್ದ ಗಂಡಿನ ಗುಟುರು" ಎನ್ನುವಲ್ಲಿ ಪುಣ್ಯಕ್ಷೇತ್ರಗಳ ಇಂದಿನ ಸ್ವರೂಪ, ಅಲ್ಲಿಗೆ ಯಾತ್ರಾರ್ಥಿಗಳಾಗಿ ಹೋಗುವವರ ಮನೋಭಾವ ಇತ್ಯಾದಿಗಳನ್ನು ಸೂಕ್ಷ್ಮ ವ್ಯಂಗ್ಯ ಚಿತ್ರ ಶೈಲಿಯಲ್ಲಿ ಹಿಡಿದಿರಿಸುವ ಯಶಸ್ವೀ ಪ್ರಯತ್ನ ಮಾಡಲಾಗಿದೆ. 'ಮುಂಡಗಳು' ಪದ್ಯದಲ್ಲಿ ಚನ್ನಯ್ಯನವರು ಒಳಸೆರುವ ಗದ್ಯದ ಲಯ ಕುತೂಹಲಕಾರಿಯಾಗಿದ್ದರೆ 'ಒಂದು ಪದ್ಯ' ನಾಗರಿಕನ ಮೋಜಿನ ಸಂಜೆಯೊಂದರ ಅನುಭವವನ್ನು ಮೋಹಕವಾಗಿ ಬಿಚ್ಚುವ ಯತ್ನ ಮಾಡುತ್ತದೆ "ಈರುಳ್ಳಿ ಸಿಪ್ಪೆ ಸುಲಿದಂತೆ ಕಳಚಿಬಿದ್ದ ಗೌನು. ಸ್ಕರ್ಟ್, ಬ್ಲೌಸು, ಕಾಚ, ಒಂದು ಎರಡು ಮೂರು .. ಬ್ರಾ ಬಿಚ್ಚಿ ಮೊಲೆ. ಅರ್ಧ ಕಾಚದ ಕುಂಡೆ ಹೊಕ್ಕಳು, ಬೊಜ್ಜು ಹೊಟ್ಟೆ. ಕುಣಿದವು ಮತ್ತು ಸಂಗೀತಕ್ಕೆ ಬಿಚ್ಚಬಹುದೇ ಅವಳು ಆತ್ಮ (ಯಾ ಅದು ಅಕ್ಷಯವೆ ?)" ಎನ್ನುವಲ್ಲಿ ನರ್ತಕಿ ಪೂರ್ಣ ಬತ್ತಲಾಗುವ ಮುಹೂರ್ತಕ್ಕಾಗಿ ಕಾತರದಿಂದ ಕಾಯುವ ತೀವ್ರತೆಯ ಕ್ಷಣಗಳನ್ನು ಅನುಭವಿಸುವುದು, ಬೆಳಕು ಬಂದಾಗ ಎಲ್ಲ ನೈಚ್ಯತೆಗಳ ನೀಗಿಕೊಂಡು ಮತ್ತೊಂದು ಷೋಗಾಗಿ ಸಂತನ ಸೋಗಿನಲ್ಲಿ ಕಾಯುವುದು. ಈ ತೀವ್ರತೆಗಳ ಹಿಂದೆ ಕ್ರಿಯಾಶಾಲಿಯಾಗಿರುವ ಅದಮ್ಯ ಕಾಮದ ಒತ್ತಡ—ಈ ಎಲ್ಲ ಅನುಭವಗಳ ಮರ್ಮಸ್ಪರ್ಶಿಯಾದ ನಿರೂಪಣೆ 'ಒಂದು ಪದ್ಯ'ದಲ್ಲಿ ಅರ್ಥಪೂರ್ಣವಾಗಿ ಮೂಡಿಬಂದಿದೆ.

ಇಷ್ಟೆಲ್ಲ ದೀರ್ಘ ಚರ್ಚೆಯ ನಂತರ 'ಅಮೆ' ನವ್ಯಕಾವ್ಯ ಸಂದರ್ಭದ ಶ್ರೇಷ್ಠ ಕವನ ಸಂಕಲನಗಳಲ್ಲಿ ಒಂದೆಂಬುದನ್ನು ಸಂತೋಷದಿಂದಲೇ ಒಪ್ಪಿಕೊಳ್ಳಬೇಕಾಗುತ್ತದೆ. ಚನ್ನಯ್ಯನವರ ಕವಿತೆಗಳಲ್ಲಿ ಸಹೃದಯರ, ಕಾವ್ಯಾಸಕ್ತರ ಮನಸ್ಸನ್ನು ಅರಳಿಸುವ ಕೆಣಕುವ ಖುಷಿಕೊಡುವ ಕಚಗುಳಿಯಿಡುವ ತಟ್ಟುವ ಮುಟ್ಟುವ ಎಲ್ಲ ಗುಣಗಳೂ ಇವೆ. ನವ್ಯ ಕವಿಗಳಾಗಿ ಸಂಕೇತ ಪ್ರತಿಮೆ ರೂಪಕಗಳನ್ನು ಚನ್ನಯ್ಯನವರು ಯಥೇಚ್ಛವಾಗಿ ಬಳಸಿಕೊಂಡಿದ್ದರೂ ಅವೆಲ್ಲೂ ತಲೆಗಿಂತ ತುರುಬೇ ಭಾರ ಎನ್ನುವಂತಾಗಿಲ್ಲ ; ಅರ್ಥಸಂವಹನಕ್ಕೆ ಅವುಗಳಿಂದ ಎಲ್ಲೂ ಅಡ್ಡಿಯುಂಟಾಗಿಲ್ಲ. ಕಾಮ ಪ್ರವೃತ್ತಿಯ ಪ್ರಸ್ತಾಪ ಹಲವೆಡೆ ಬಂದಿದ್ದಾಗ್ಯೂ ಅದೆಲ್ಲೂ ಔಚಿತ್ಯದ ಎಲ್ಲೆಯನ್ನು ಮೀರಿ ಹೋಗಿಲ್ಲ, ಅಸಭ್ಯ-ಅಶ್ಲೀಲ ಎಂದು ಮೂಗು ಮುರಿಯುವಂತಾಗಿಲ್ಲ. ತಮ್ಮದೇ ಆದ ಧಾಟಿ, ಲಯ, ವಿಚಾರ, ಭಾಷೆಗಳ ಮೂಲಕ ಜೀವನಾನುಭವವನ್ನು ವೈಶಿಷ್ಟ್ಯಪೂರ್ಣವಾಗಿ ಎರಕ ಹೊಯ್ದಿರುವ ಚನ್ನಯ್ಯನವರು ನವ್ಯಕವಿಗಳಲ್ಲಿ ಪ್ರತ್ಯೇಕತೆಯನ್ನು ಗುರುತಿಸಿಕೊಂಡವರಾಗಿದ್ದಾರೆ, ನವ್ಯ ಕಾವ್ಯದಲ್ಲಿ ಸ್ವಂತಿಕೆಯ ಛಾಪನ್ನು ಮೂಡಿಸಿದವರಾಗಿದ್ದಾರೆ, ಶ್ರೇಷ್ಠ ಕವಿ ಎನ್ನುವ ಮಾನ್ಯತೆಗೆ ನಿಸ್ಸಂದೇಹವಾಗಿಯೂ ಪಾತ್ರರಾಗಿದ್ದಾರೆ. ಇಂಥ ಶಕ್ತ ಕವಿಯಿಂದ ಕಾಲೋಚಿತವಾದ ಬದಲಾವಣೆ, ವೈಶಿಷ್ಟ್ಯಗಳಿಂದ ಕೂಡಿದ ಮತ್ತಷ್ಟು ಕವನ ಸಂಕಲನಗಳು ಹೊರಬರಲೆಂದು ಹಾರೈಸುತ್ತೇನೆ.

ಗಟ್ಟಿಹೆಜ್ಜೆಯ ಗುರುತುಗಳು : 'ಮೌನಸ್ಪಂದನ'

'ಕಾವ್ಯಜೀವಿ' (ಡಾ|| ಎಸ್. ಪಿ. ಪದ್ಮಪ್ರಸಾದ್)

ದೊಡ್ಡರಂಗೇಗೌಡರು ನಮ್ಮ ಯುವ ಪೀಳಿಗೆಯ ಜನಪ್ರಿಯ ಕವಿಗಳಲ್ಲೊಬ್ಬರು. ಈ ಜನಪ್ರಿಯತೆಗೆ ಅವರು ಸಿನಿಮಾಗಳಿಗೆ ಹಾಡುಗಳನ್ನು ಬರೆಯುವುದು ಎಷ್ಟರ ಮಟ್ಟಿಗೆ ಕಾರಣವೋ ಅಷ್ಟೇ ತೂಕದ ಇನ್ನೊಂದು ಕಾರಣ ಇವರು ಮೊದಲಿಂದಲೂ ಕವಿತೆಯನ್ನೇ ತಮ್ಮ ಮಾಧ್ಯಮ ಎಂದು ಗಂಭೀರವಾಗಿ ಪರಿಗಣಿಸಿಕೊಂಡು ಬರೆಯುತ್ತಾ ಬಂದಿದ್ದಾರೆ ಎಂಬುದು. ಇಂತಹ ಪರಿಗಣನೆ ಇಟ್ಟುಕೊಂಡ ಲೇಖಕ ಇಂದಲ್ಲ ನಾಳೆ ಅತ್ಯುತ್ತಮವಾದುದನ್ನು ಕೊಡಲು ಶಕ್ತನಾಗುತ್ತಾನೆ. ಇದಿಷ್ಟು ಪೀಠಿಕೆಯ ಮಾತುಗಳನ್ನಾಡಿ ಶ್ರೀಯುತರ 'ಮೌನಸ್ಪಂದನ' ಕವಿತಾ ಸಂಕಲನವನ್ನು ಪರಿಶೀಲನೆಗೆ ತೆಗೆದುಕೊಳ್ಳಬಹುದು.

೧

'ಮೌನಸ್ಪಂದನ' ದೊಡ್ಡರಂಗೇಗೌಡರ ನಾಲ್ಕನೆಯ ಕವನ ಸಂಕಲನ. ಇದರ ಹಿಂದಿನ ಸಂಕಲನ 'ನಾಡಾಡಿ' ಪ್ರಕಟಗೊಂಡ ಎಂಟು ವರ್ಷಗಳ ಬಳಿಕ, ೧೯೮೧ರಲ್ಲಿ ಈ ಕೃತಿ ಹೊರಬಂದಿತು. ಇದರ ನಂತರ ಈ ನಾಲ್ಕು ವರ್ಷಗಳಲ್ಲಿ ಶ್ರೀಯುತರ ಎರಡು ಸಂಕಲನಗಳು ಹೊರಬಂದಿರುವಂತೆ ಕಾಣುತ್ತದೆ. 'ಮೌನಸ್ಪಂದನದಲ್ಲಿ'

೬೨ ಪದ್ಯಗಳಿವೆ. ಇವಲ್ಲದೆ ಅನೇಕ ಚುಟುಕಗಳು, ಭಾವಗೀತೆಯ ತುಣುಕುಗಳೂ ಇಲ್ಲಿ ಪದ್ಯದ ಕೆಳಗಿನ ಖಾಲಿ ಜಾಗದಲ್ಲಿ ಪ್ರಕಟವಾಗಿವೆ.

೨

ಬದುಕಿಗೆ ಸಂಪೂರ್ಣವಾಗಿ ತೆರೆದುಕೊಂಡು ಯಾವ ಪೂರ್ವಾಗ್ರಹಗಳೂ ಇಲ್ಲದೆ ಸ್ಪಂದಿಸುತ್ತಾ ಹೊರಟ ಒಂದು ಮನಸ್ಸು, ತನ್ನ ಅನಿಸಿಕೆಗಳನ್ನು, ಅನುಭವಗಳನ್ನು, ಪ್ರತಿಕ್ರಿಯೆಗಳನ್ನು ಅರ್ಥಗರ್ಭಿತವಾಗಿ ಹಾಗೂ ಕಲಾಪೂರ್ಣವಾಗಿ ಹಿಡಿದಿಡಬೇಕೆಂಬ ಹೆಣಗಾಟದಲ್ಲಿರುವುದು 'ಮೌನಸ್ಪಂದನ'ದ ಉದ್ದಕ್ಕೂ ಕಂಡುಬರುತ್ತದೆ. ಅಂದರೆ–ಒಂದು ಕವಿ ಜೀವ ಸಾರ್ಥಕ ಕಾವ್ಯದ ಸೃಷ್ಟಿಗಾಗಿ ಚಡಪಡಿಸುವ, ಹಾಗಾಗದೆ ಹೋದಾಗ ಅದಕ್ಕಾಗಿ ವಿಷಾದಿಸುವ ಕ್ರಿಯೆ ಈ ಸಂಕಲನದಲ್ಲಿ ಹಲವೆಡೆಗಳಲ್ಲಿ ಕಂಡು ಬರುತ್ತದೆ.

'ದುಗುಡ ಹಾಡಾಗಿ ಕವಿ ಹೃದಯದೊಳಗೆ
ಬೆಂಕಿ ಭುಗಿಲಾಗಿ ಹರಿಯುತ್ತದೆ' ! (ಮೂಡೀತೆ, ಅಗ್ನಿ–ದಿವ್ಯ)
'ನನ್ನ ಸುತ್ತ ತಳೆಕು ಹಾಕಿಕೊಂಡ
ಕತ್ತಲ ಕತ್ತು ಹಿಚುಕಿ
ನನ್ನ ನುಡಿ ದೀಪ ನೆಡುವಾಸೆ'
(ಕೋರಿಕೆ)

'ಇಲ್ಲಿ ಕೂಗಲಾರೆ,
ಇಲ್ಲಿ ಹಾಡಲಾರೆ' (ಓಡಲೇ ಇಲ್ಲಿಂದ)

ಈಗ ಮೂವತ್ತರ ಮಜಲು ನನಗೆ–ನನ್ನ ನಾಡಿಗೆ
ನನ್ನೀ ಕೊರಳು ಸಮರ್ಥ ಬಲಿಯಬೇಕಿತ್ತು ಈ ಹೊತ್ತಿಗೆ ;
(ಮೂವತ್ತರ ಮಜಲು)

ಎದುರು ಎದುರೇ ನನ್ನ ಹೃದಯ ಹಡೆದ
ಹೇರಳ ರಾಶಿ ಅಣಕವಾಡಿತು ;
(ಪಶ್ಚಾತ್ತಾಪ)

ಹೀಗೆ, ಆರೋಗ್ಯಕರ ದೃಷ್ಟಿಯಿಂದ ಬದುಕನ್ನು ಮತ್ತು ತನ್ನನ್ನು ನೋಡಿಕೊಳ್ಳುವ, ಉತ್ತಮವಾದುದರ ಸೃಷ್ಟಿಗೆ ಹಂಬಲಿಸುವ ಕವಿ ಆ ಕಾರ್ಯಕ್ಕೆ ಬೇಕಾದ ಉತ್ತಮ ಅಡಿಪಾಯವನ್ನು ಹಾಕಿಕೊಂಡಿದ್ದಾರೆ ಎಂಬುದು ಈ ಸಂಕಲನದಲ್ಲಿ ಸಾಬೀತಾಗುತ್ತದೆ. ಈ ಅಡಿಪಾಯದ ಮೇಲೆ ಕಟ್ಟಿದ ಕಾವ್ಯಸೌಧ ಮಾತ್ರ ಎಲ್ಲ ಕಡೆ ಯಶಸ್ವಿಯಾಗಿಲ್ಲ ಎಂಬುದೂ ಈ ಸಂಕಲನದಲ್ಲಿಯೇ ಕಂಡು ಬರುತ್ತದೆ.

೩

ಪ್ರಜ್ಞಾಪೂರ್ವಕವಾಗಿ, ಸಾವಧಾನವಾಗಿ ಮುಂದುವರೆಯುವುದು ಈ ಕವಿಯ ಪ್ರವೃತ್ತಿ–

'ಅಜ್ಜನೆಟ್ಟಾಲಕ್ಕೆ ಸಾವಿರದೊಲುಮೆ ಬೀಳಲು ಇರುವುದು ಗೊತ್ತು
ಹೆಜ್ಜೆ ಇಟ್ಟೆಲ್ಲ ಕಡೆ ಆಪತ್ತು ಕತ್ತು ಬಳಸುವುದೂ ಗೊತ್ತು !

(ಸಾವಿರದ ಕಂದರ)

ಈ ಸಾವಧಾನತೆಯಿಂದಾಗಿ ಕವಿಗೆ ಪ್ರಾಮಾಣಿಕ ಆತ್ಮ ವಿಮರ್ಶೆ, ತಾನು ತಪ್ಪಿದ್ದೆಲ್ಲಿ ಎಂದು ಕಂಡುಕೊಳ್ಳುವಲ್ಲಿ, ಅದನ್ನು ನಿರೂಪಿಸುವಲ್ಲಿ ತೋರುವ ಖಚಿತ ವಾದ ಆತ್ಮ ಸಂಯಮ–ಇವು ಸಾಧ್ಯವಾಗಿವೆ. ತನ್ನ ಕಂತೆ ಕಂತೆ ಬರಹ ಉಪಯೋಗ ವಿಲ್ಲದ್ದು ಎಂದು ಅನಿಸಿದಾಗ ಕವಿಯು–

'ಕಣ್ಣಾಲಿಗಳಲ್ಲಿ ಅಳು ತುಳುಕತು.'

(ಪಶ್ಚಾತ್ತಾಪ)

ಹೃದಯ ಮಂಡಲದಲ್ಲಿ ಕರಗದೆ ಉಳಿದ ಸಮೃದ್ಧ ತಕರಾರುಗಳ ನಡುವೆಯೂ 'ವಾಸ್ತವದ ಮೀಟಿ ಭ್ರುಮೆಗಳನೆಲ್ಲ ದಾಟಿ' ಸೀಟಿಯೂದುವ ಪ್ರಜ್ಞೆಯ ಈ ಕವಿ 'ತಾಳ್ಮೆ ತೆಂಗಿನ ತವರ'ನ್ನು ಹುಡುಕಬಯಸುತ್ತಾನೆ ಎನ್ನುವುದೇ ಒಂದು ಸಂತೋಷದ ವಿಷಯವಾಗಿದೆ.

ದೊಡ್ಡರಂಗೇಗೌಡರ ಅನೇಕ ಜನಪ್ರಿಯ ಗೀತೆಗಳಲ್ಲಿ (ಉದಾ : ಇದೇ ಸಂಗ್ರಹದಲ್ಲಿ 'ತೇರ ಏರಿ ಅಂಬರದಾಗೆ....' ಹಾಗೂ 'ಗೀತಗಾರುಡಿ' ಸಂಗ್ರಹದ 'ಅಸೀಮ ರೂಪಿ ಅಂಬರದಲ್ಲಿ...') ಉತ್ಸಾಹಭಾವ ಓತಪ್ರೋತವಾಗಿ ಕಾಣುತ್ತದೆ. ಆದರೆ ಅವರ ಒಟ್ಟು ರಚನೆಗಳನ್ನು ಪರಿಶೀಲಿಸಿದಾಗ ಉತ್ಸಾಹಕ್ಕಿಂತ ಸಾವಧಾನತೆಯೇ ಅವರ ಬರಹದ 'ಸ್ಥಾಯಿ' ಎನಿಸುತ್ತದೆ. ಹೇಳಬೇಕೆಂದಿರುವ ಅಂಶ, ಹೇಳಬೇಕಾದ ರೀತಿ–ಎಲ್ಲ ಖಚಿತವಾಗಿದ್ದು, ಅದನ್ನು ನಿಧಾನವಾಗಿ ಹೇಳುತ್ತಾ ಹೋಗುವ ಸಂಯಮದ ಕ್ರಿಯೆ ಇವರ ಅನೇಕ ರಚನೆಗಳಲ್ಲಿ ಕಾಣುತ್ತದೆ. ಉದಾಹರಣೆಗೆ: ಇದೇ ಸಂಗ್ರಹದ 'ಮೂಡೀತೆ ಅಗ್ನಿ-ದಿವ್ಯ' ಕವಿತೆಯನ್ನು ನೋಡಬಹುದು. ಈ ಸಂಗ್ರಹದ ಅಚ್ಚುಕಟ್ಟಾದ ಕವಿತೆಗಳಲ್ಲೊಂದಾದದ್ದು ಈ ಪದ್ಯ. ಜನತೆಯ ಎದೆಯಲ್ಲಿ ಮಡುಗಟ್ಟಿದ ಕೋಪತಾಪಗಳೆಲ್ಲ ಒಮ್ಮೆ ಸಿಡಿದು, ಶತಶತಮಾನಗಳ ದುಗುಡ ದುಮ್ಮಾನ ಹೊರಬಂದು ತಣ್ಣಗಾಗುವುದೆಂಬುದನ್ನು, ಅಲ್ಲಿತನಕ ಈ ದುಗುಡ ಕವಿ ಹೃದಯದೊಳಗೆ ಹಾಡಾಗಿ ಉರಿಯುತ್ತದೆ ಎಂಬುದನ್ನು–ಚಿತ್ರಿಸುತ್ತದೆ. ಅಸಹನೆ ಸ್ಫೋಟಗೊಳ್ಳುವ ಈ ಕ್ರಿಯೆಯನ್ನು ಕವಿ ಹಂತ ಹಂತವಾಗಿ ಚಿತ್ರಿಸುತ್ತಾರೆ.

ಒಂದು ಇನ್ನೊಂದಕ್ಕೆ ಅಂಟುವುದೇ ತಡ
ಬೆಂಕಿ ವೇಗೋತ್ಕರ್ಷ ಪಡೆದೂ
ಮನ ಮನವೂ ತುಡಿದೂ,
ಮನೆ ಮನೆಯೂ ಅನ್ಯಾಯದ ವಿರುದ್ಧ ಸಿಡಿದು
ಧಗ ಧಗ ಉರಿದೂ ನಿಗಿನಿಗಿ ಬಿರಿದೂ

ಅಗ್ನಿ ಹೊಲಬಾಗಿ ಕೆಂಡ ಜಲವಾಗಿ ಹರಿದು
ತಾಯಿ ಭಾರತಿಯು ಮೈಯೊಳಗೆ ಸ್ಫೋಟವಾಗುವುದು.

ಆದರೆ ಅಲ್ಲಿಯವರೆಗೆ ?–

ಅಲ್ಲಿಯ ತನಕ ನಾಡ ನಾಡಿಯೊಳಗೆ ಅಗ್ನಿಕುಂಡ
ಕೊತಕೊತನೆ ಕುದಿಯುತ್ತದೆ
ದುಗುಡ ಹಾಡಾಗಿ ಕವಿ ಹೃದಯದೊಳಗೆ
ಬೆಂಕಿ ಭುಗಿಲಾಗಿ ಹರಿಯುತ್ತದೆ.

ಇಲ್ಲಿ ಹೀಗೆ ಹಂತ ಹಂತದ ಸಾವಧಾನ ನಿರೂಪಣೆ ಇದ್ದರೂ ಈ ಶಬ್ದಗಳ ಆಚೆಗೂ ಧ್ವನಿಸುವಂಥಾದ್ದು ಏನೂ ಇರದೆ ಕವಿತೆಯ ಯಶಸ್ಸು ಸೀಮಿತಗೊಂಡಿದೆ. ಇದನ್ನು ಮೀರಿ ಕವಿತೆ ಧ್ವನಿಪೂರ್ಣವಾಗುವುದನ್ನು ಇಲ್ಲಿನ ಇತರ ಕೆಲವು ಕವಿತೆಗಳಲ್ಲಿ ಗುರುತಿಸಬಹುದು. ಈ ಸಂಕಲನದ ಅತ್ಯಂತ ಯಶಸ್ವಿ ಪದ್ಯವೆಂದು ನಾನು ಗಣಿಸುವ 'ಉಲ್ಲೇಖ' ಪದ್ಯ ಇದಕ್ಕೆ ಉತ್ತಮ ಉದಾಹರಣೆಯಾಗುತ್ತದೆ. ಆಪತ್ಸ್ಥಿತಿಯು ಘೋಷಣೆಯಾದಾಗಿನ ಪರಿಸ್ಥಿತಿಯನ್ನು ಚಿತ್ರಿಸುವ ಈ ಇಡೀ ಪದ್ಯ ಸಾಂಕೇತಿಕ ಭಾಷೆಯಲ್ಲಿದೆ. ತಪ್ಪಿತಸ್ಥನೆಂದು ಪಂಚರು ತೀರ್ಮಾನಿಸಿದ ಒಬ್ಬ ವ್ಯಕ್ತಿ ಬಾಯಿಬಿಟ್ಟು ಹರಿತವಾಗಿ ಮಾತನಾಡಲಾರಂಭಿಸಿದಾಗ ಸುತ್ತವಿದ್ದವರೆಲ್ಲ ಮೂಕರಾಗುವುದನ್ನು, ಜನ ಅವನು ಹೇಳಿದಂತೆ ಕೇಳುತ್ತಾ ದುಡಿಯುತ್ತಾ ಜಜ್ಜಿ ಹೋಗುವುದನ್ನು, ಟೆಲಿಪ್ರಿಂಟರ್ ಸ್ತಬ್ಧವಾಗುವುದನ್ನು, ಪರಿಸರ ವಿಷಪರ್ಣಲವಾಗುವುದನ್ನು, ಈ ಕವಿತೆ ನಿರೂಪಿಸುತ್ತದೆ. ಇಡೀ ಕವಿತೆ ಪತ್ರಕರ್ತನೊಬ್ಬ ಕಂಡ ಕನಸು ಎಂಬ ವೇಷಧರಿಸಿದೆ. ಆಕಸ್ಮಿಕವಾಗಿ ಆ ಸುದ್ದಿ ಬಂದದ್ದನ್ನು, ಆ ಆಘಾತವನ್ನು, ಕವಿ ಹೀಗೆ ನಿರೂಪಿಸುತ್ತಾರೆ-

ಸದ್ದಿರದೆ ಬಂತು ಸುದ್ದಿ ಮೌನವಾಗಿ,
ಕೋಟಿ ಕೋಟಿ ಜನರ ಗುದ್ದಿ ಬಿದ್ದುಬಿದ್ದು ನಗುವ ಹಾಗೆ.
ನಿಂತು ನೋಡಿತು ವ್ಯಂಗ್ಯವಾಗಿ–
ತಲೆ ಇದ್ದವರಿಗೆಲ್ಲ ಆ ಅದೃಶ್ಯದ ಹೊಡೆತ ಅರ್ಥವಾಗಿತ್ತು !

ಮುಂದೆ–'ವರದಿ ಛಾಪಿಸುವ ಮೊದಲೇ ಕನಸಾಯಿತು' ಎನ್ನುವಲ್ಲಿಯೂ ಆ ದಿನ ಜಾರಿಗೆ ಬಂದ ಸೆನ್ಸಾರ್‌ಶಿಪ್‌ನ ಸೂಚನೆ ಇದೆ. ಅದೇ ರೀತಿ ಈ ಪದ್ಯದುದ್ದಕ್ಕೂ ಅಂದಿನ ಪರಿಸ್ಥಿತಿ ಸಂಕೇತಗಳ ರೂಪದಲ್ಲಿ ಹರಡಿಕೊಂಡಿದೆ. ಇಂದಿರಾಗಾಂಧಿ ವಿರುದ್ಧ ಹೋಗಿದ್ದುದು 'ಉಸುಕು' ಎಂದು. ಕೋರ್ಟು ಹಾಗೂ ನ್ಯಾಯಾಧೀಶರು 'ಎತ್ತರದ ದಿನ್ನೆ ಸುತ್ತ ಹಾಚಿದ' ಎಂದು. ಕಾನೂನು 'ಕೋರೈಸುವ ಬೆಳಕು' ಎಂದು ತೀರ್ಪಿನ ನಂತರ ಕುಸಿದ ನೈತಿಕ ಸ್ಥೈರ್ಯವನ್ನು 'ಬೆಳಕಿನ ಕುಸಿತ' ಎಂದು,– ಹೀಗೆ ಈ ಚಿತ್ರಣ ಮುಂದುವರೆಯುತ್ತದೆ. ತುರ್ತುಪರಿಸ್ಥಿತಿ ಘೋಷಿಸಿದ ನಂತರ ನಾಗರಿಕರ ಸ್ಥಿತಿ ಹೇಗಿತ್ತು ಎಂದರೆ-

ತಲೆತಗ್ಗಿಸಿದ ಬೆನ್ನು ಬಗ್ಗಿಸಿದ
ಅತ್ತ ಇತ್ತ ಕತ್ತು ಹೊರಳಿಸದೆ ಯಂತ್ರದಂತೆ ದುಡಿದ
ದುಡಿಯುತ್ತಾ ಕೋಟಿ ಸದ್ದಿನ ನಡುವೆ ಜಜ್ಜಿಹೋದ

ಇದಕ್ಕಿಂತ ಉತ್ತಮವಾಗಿ ಈ ಚಿತ್ರಣ ಸಾಧ್ಯವಿಲ್ಲವೇನೋ ಎನಿಸುತ್ತದೆ. ಮುಂದೆ ಸುದ್ದಿಗೂ ಗುದ್ದು ಬಿದ್ದು. ಶೂನ್ಯವಾತಾವರಣ ಸೃಷ್ಟಿಯಾದದ್ದನ್ನು ಚಿತ್ರಿಸುವ ಕೊನೇ ಸಾಲುಗಳು-

'ಕಣ್ಣು ಬಿಟ್ಟಾಗ ಅದೇ ಟೆಲಿಪ್ರಿಂಟರಿನ ಕಟಕಟಸದ್ದು
ಸದ್ದಿನ ಮೇಲೆ ಸದ್ದು
ಕ್ರಮ ಕ್ರಮೇಣ ಅದೂ ಸದ್ದು ಮಾಡದೆ ಮೂಕವಾಯ್ತು,
ಅಸಹ್ಯ ಮೌನ ಆವರಿಸಿ ವಾಕರಿಕೆ ಬಂದ ಪರಿಸರ. ವಿಷವರ್ತುಲ.

ಹೀಗೆ ಸಾವಧಾನವಾಗಿ, ಹೊರಗೆ ನಿಂತು ತನ್ನ ಅನುಭವಗಳನ್ನು ತೂಗಿನೋಡುತ್ತಾ ಎಚ್ಚರಿಕೆಯಿಂದ ಚಿತ್ರಿಸುವ ಪರಿಪಾಠ ಗೌಡರ ಕವನಗಳಲ್ಲಿ ಪದೇ ಪದೇ ಕಂಡು ಬರುತ್ತದೆ. ಆದರೆ 'ಉಲ್ಲೇಖ'ದಲ್ಲಿಯಂತೆ ಅದು ಸಂಕೇತಾತ್ಮಕವಾಗಿ ಧ್ವನಿ ಪೂರ್ಣವಾಗುವುದು ಅಲ್ಲಲ್ಲಿ ಮಾತ್ರ.

೪

ಬದುಕಿನ ವಿರೋಧಾಭಾಸಗಳನ್ನು ಈ ಕವಿ ಬಹುಬೇಗನೇ ಗುರುತಿಸುತ್ತಾರೆ. ಅವನ್ನು ಅರ್ಥಪೂರ್ಣ ಸಾಲುಗಳಲ್ಲಿ ಧ್ವನಿಸುತ್ತಾರೆ.

'ಬಣ್ಣ ಲೇಪಿತ ತುಟಿಗಳ ಬೋಳು ಮಾತುಗಳ ಕೇಳಿ'
'ಮಠಾಧಿಪತಿ ಮಿಂಡನಾದದ್ದು'
'ಭಾರತೀಯನಾದದ್ದರಿಂದ ಸೊಗಸಾಗಿ ನಿದ್ದೆ ಹೊಡೆದೆ'
(ವಿರೋಧಾಭಾಸ)

ನನ್ನ ಅಕ್ಕಪಕ್ಕದವರ ಬಣ್ಣ ಕಂಡಾಗೆಲ್ಲ
ನಗುಬರುತ್ತೆ ನನಗೆ,
ಹೆಜ್ಜೆ ಹೆಜ್ಜೆಗೆ ಈ ಜನ ಯಾಕೆ ನಾಟಕವಾಡುತ್ತಾರೆ ?
ಸಾಚಾ ಸಾಧ್ಯವೇ ಇಲ್ಲವೆ ?
ಸುಳ್ಳಿನ ರಂಗು ಶಾಶ್ವತವೆ ?
(ಬಣ್ಣದ ಲೋಕದೊಳಗೆ)

ನಗುವಿಗೆ ಅಳುವಿನ ಹೃದಯದ ಮಿಡಿತ
ಅಳುವಿಗೆ ನಗುವಿನ ನಾಡಿಯ ಬಡಿತ.
(ಸರಿ-ಬೆಸ)

'ಎಷ್ಟೆಲ್ಲಾ ಜೇಡ ಜಾಲ, ವಿಜ್ಞಾನ ಹೊರ-ಹೊರಗೆ'
(ಇದು ಶಹರ)

ಹೀಗೆ, ಬಿಗುವನ್ನು. ಧ್ವನಿಯನ್ನು, ಸಾಧಿಸಲು ಹೆಣಗುತ್ತಾ ವಿರೋಧಾಭಾಸಗಳನ್ನು ಗುರುತಿಸುತ್ತಾ ಸಾಗುವ ಗೌಡರು ನಡೆಸುವ ಇನ್ನೊಂದು ಶ್ಲಾಘನೀಯ ಪ್ರಯತ್ನವೆಂದರೆ 'ನಿರೂಪಣೆಯಲ್ಲಿ ಹೊಸತನವನ್ನು ಸಾಧಿಸಲು ಪ್ರಯತ್ನಿಸುವುದು. ಈ ಹೊಸತನ ಮುಖ್ಯವಾಗಿ ಹೊಸ ಸಂಕೇತಗಳನ್ನು ಉಪಮೆಗಳನ್ನು ಸೃಷ್ಟಿಸುವಲ್ಲಿ ಕಂಡುಬರುತ್ತದೆ. ಹಿಂದೆ ನೀಡಿರುವ ಎಷ್ಟೋ ಉಲ್ಲೇಖಗಳು ಈ ಮಾತಿಗೂ ಸಾಕ್ಷಿಯಾಗುತ್ತವೆ. ಜೊತೆಯಲ್ಲೇ ಕೆಲ ಹೊಸ ಉದಾಹರಣೆಗಳನ್ನೂ ನೋಡಬಹುದು. ಈ ಸಂದರ್ಭದಲ್ಲಿ ಅನಾಯಾಸವಾಗಿ ಎಂಬಂತೆ ಅರಳುವ ಪ್ರಾಸ ಅನುಪ್ರಾಸಗಳು ಕೂಡ ಕವಿಯ ಪ್ರತಿಭೆಗೆ ಕನ್ನಡಿ ಹಿಡಿಯುತ್ತವೆ. ಉದಾಹರಣೆಗೆ :'ಕಣಿವೆ'ಯ ಮುಬ್ಬು ಕವಿದ ವಾತಾವರಣವನ್ನು ಹೇಳುವಾಗ–

'ಹಗಲು ಕನಸು ಕಣುತ್ತಾ ಸೂರ್ಯ ಬೆಚ್ಚಗೆ ದುಪಟಿ ಹೊದ್ದು'
(ಕಣಿವೆ)

ಎನ್ನುವಲ್ಲಿನ ರೂಪಕ ಹೊಸತೆನ್ನಿಸುವುದಷ್ಟೇ ಅಲ್ಲ. 'ಹಗಲು ಕನಸು' ಎನ್ನುವ ಶಬ್ದದ ದ್ವಂದ್ವಾರ್ಥವನ್ನೂ ಗಮನಿಸಬೇಕು. ಸೂರ್ಯ ಹಗಲಿನ ಕನಸು ಕಾಣುತ್ತಿದ್ದನಷ್ಟೇ ಅಲ್ಲ, ಆತ ಇನ್ನಾವುದರದ್ದೋ 'ಹಗಲುಗನಸ'ನ್ನೂ ಕಾಣುತ್ತಿದ್ದ! ಅದೇ ರೀತಿ ಉಪಮೆಗಳ ಹೊಸತನಕ್ಕೆ ಇನ್ನೂ ಕೆಲವು ಉದಾಹರಣೆಗಳನ್ನು ಕೊಡಬಹುದು.

'ಎಳೆಮಗು ನಗು ಹೊತ್ತ ಮಲ್ಲಿಗೆ–'
'ಗಿಡದ ಮೈತುಂಬ ಗುಂಡು ಸೂಜಿ ಕೂದಲು'
'ಸೂರ್ಯ ಬೆಳಕ ಆಕಳಿಸಿದ'
'ಬಿಳಲ ಬಾಲ ಮೊಟಕು' (ಕಣಿವೆ)
'ಶ್ರದ್ಧೆ ಸಂಯಮ ಬಿತ್ತಿ ಹೊಸಬೆಳೆಯ ತೆನೆಯುವಾಸೆ, (ಅರಿವು)
'ಕನಸಿನ ಕಡಲುಕ್ಕಿದೆ ! (ರೂಪಾಂತರ)
'ಸಿಡಿಮದ್ದಿಗೆ ಮುತ್ತ ನಿತ್ತು' (ಭಾರತೀಯ ತರುಣರು)

'ಕವಿ ಹೊಸತೇನನ್ನೂ ಹೇಳುವುದಿಲ್ಲ, ಹೊಸದಾಗಿ ಹೇಳುತ್ತಾನೆ ಅಷ್ಟೆ' ಎಂಬೊಂದು ಮಾತಿದೆ. ಒಂದು ವಿಷಯವನ್ನು ಹೇಳುವಲ್ಲಿ ಕವಿಯು ಹೊಸತನಕ್ಕಾಗಿ ಎಷ್ಟು ಪ್ರಯತ್ನಿಸುತ್ತಾನೆ ಹಾಗೂ ಎಷ್ಟು ಯಶಸ್ವಿಯಾಗುತ್ತಾನೆ ಎಂಬುದು ಆತನ ಸೃಜನಶೀಲತೆಯ ಪ್ರಾಮುಖ್ಯವನ್ನಳೆಯುವಲ್ಲಿ ಒಂದು ಮುಖ್ಯ ಅಳತೆಗೋಲಾಗುತ್ತದೆ. ಈ ದೃಷ್ಟಿಯಿಂದಲೂ ದೊಡ್ಡರಂಗೇಗೌಡರು ಯುವಪೀಳಿಗೆಯ ಒಬ್ಬ ಮುಖ್ಯ ಕವಿಯಾಗುತ್ತಾರೆ. ಈ ಸಂಕಲನದಲ್ಲಿ ಅದಕ್ಕೆ ಸಾಕಷ್ಟು ಉದಾಹರಣೆಗಳೂ ಸಿಗುತ್ತವೆ. ಹಿಮಾಲಯದ ತಪ್ಪಲಿನ ಝರಿಗಳು–'ಚಿಕ್ಕ ಮಕ್ಕಳ ಹಾಗೆ ಜಿಗಿಯುತ್ತವೆ'. ಮರಗಳು ಪೆರೇಡಿಗೆ ನಿಂತಿರುವಂತೆ ಕಾಣುತ್ತವೆ (ಕಟ್ಮಂಡುವಿನ ಹಾದಿಯಲ್ಲಿ-) ನಾಯಿಯೊಂದು ಮೇಲೆಗರಿ ಬಂದಾಗ ಇವರು ಓಡುವುದು 'ಕೋಡಿಬಿದ್ದ ಕೆರೆ ನೀರಿನ ಹಾಗೆ' (ಬೆಸಹೊತ್ತಿನಲ್ಲಿ) ಪ್ರೇಯಸಿಯ.

ಬೆಳೆದಾಗ ಕಾಣುವುದು 'ಅಂಗುಲಂಗುದಲ್ಲಿ ಶೃಂಗಾರ ಕೆದರಿ'ದಂತೆ ! (ರೂಪಾಂತರ) ಸಂಭೋಗದಲ್ಲಿ ರಮಿಸಿದಾಗ-'ಕತ್ತಲಲ್ಲೂ ಪ್ರೀತಿ ಬೆಳ್ದಿಂಗಳು ರೂಮಿನ ಗೋಡೆ ಕಿಟಕಿ ಬಾಗಿಲುಗಳಲ್ಲಿ ತುಂಬಿ ತುಳುಕುತ್ತೆ' (ದಾಖಲೆ) ಇತ್ಯಾದಿ, ಇತ್ಯಾದಿ.

೫

ಇಲ್ಲಿನ ಕವಿತೆಗಳು ಎಲ್ಲ ಕಡೆಯೂ ಮೌನಸ್ಪಂದನವಾಗಿರದೆ ಕೆಲವು ಕಡೆ ಬಾಯಿಬಡುಕತನ, ಜಾಹೀರಾತುತನ, ಶುಷ್ಕ ಹೇಳಿಕೆಗಳನ್ನೂ ಒಳಗೊಂಡಿವೆ. ಇಂಥ ಸಂದರ್ಭಗಳ ಸಂಖ್ಯೆ ಕಡಿಮೆಯೂ ಇಲ್ಲ. ಜೊತೆಗೇ ಹಿಂದಿನ ಮುಂದಿನ ಸಾಲುಗಳ ಓಟದ ಜೊತೆಗೆ ಹೊಂದಿಕೊಳ್ಳದಂಥ ಭಾಷಾಪ್ರಯೋಗಗಳೂ ಹಲವಾರು ಕಡೆ ಕಂಡುಬರುತ್ತವೆ. ಕೆಲವು ಉದಾಹರಣೆಗಳನ್ನು ನೋಡೋಣ.

'ನಿಮಿಷ ನಿಮಿಷವೂ ಬೇಸರದಗ್ನಿಕುಂಡ
'ಯಾವುದರಲ್ಲೂ ಆಸೆ ಇಲ್ಲವಾಗಿದೆ !
'ಯಾವುದನ್ನೂ ಯಾರನ್ನೂ ಎದುರಿಸುವ ಧೈರ್ಯವಿಲ್ಲ
ಉತ್ಸಾಹ ಕುಗ್ಗಿದೆ ; ನಡಿಗೆ ತೊದಲುತ್ತಿದೆ
ಮೌನದುಡಿಮೆಯೂ ಹಿಂಸೆಯಾಗಿದೆ
ಚುಚ್ಚುವ ವಾಸ್ತವ ಎದುರು ಎದುರೇ ನಿಂತಿದೆ'. (ತನಿಖೆ)

ಇದು ಕೇವಲ ಒಣನಿರೂಪಣೆಯಾದರೆ. ಶಬ್ದದ ಸರಿಯಲ್ಲದ ರೂಪವನ್ನು ಬಳಸಿರುವುದನ್ನು ನೋಡಿ-

'ಒಳಗೆ ನಿಧಿ ದಕ್ಕೀತೆಂಬ ಗ್ಯಾರಂಟಿ ಏನಿಹುದು ?'
(ಇನ್ನೂ ಬಾಗಿಲು ತೆರೆದಿಲ್ಲ)

ಇಲ್ಲಿ 'ಏನಿಹುದು' ಶಬ್ದ-ದಕ್ಕು, ಗ್ಯಾರಂಟಿ-ಗಳೊಡನೆ ಹೊಂದುವುದಿಲ್ಲ. ಬದಲಾಗಿ 'ಏನು ?' ಎಂದಿಟ್ಟಿದ್ದರೆ ಹೊಂದುತ್ತಿತ್ತು.

ಜಾಹೀರಾತು ಮಾದರಿಯ ಪದ್ಯಕ್ಕೆ ಉದಾಹರಣೆ-

'ತುತ್ತಿಗಾಗಿ ಯಾರದೋ ಬಳಿ ಬೇಡುವುದು ಮೂರ್ಖತನ
ಸ್ವಾವಲಂಬನೆ ಜೀವನ ಯೋಜನೆಗೆ ಸರಿಯಾದ ಇಂಧನ :
ನಮ್ಮ ಬದುಕಿಗೆ ನಾವೇ ರೂವಾರಿಗಳು-ಕಾಯಕವೇ ಚೇತನ,
ಹೊಣೆಗಾರಿಕೆಯೇ-ನೆಮ್ಮದಿ... ಸುಖ... ಶಾಂತಿ... ಸಾಧನೆಗೆ ಸಂಜೀವನ !
(ಪುಟ. ೫೪)

'ಸಾವಿರದ ಕಂದರ' ಪದ್ಯದ ಈ ಸಾಲು-'ಇಲ್ಲ ... ಸಿಗಲಿಲ್ಲ... ಇಲ್ಲ... ಸುಳಿವು ಸಿಗಲಿಲ್ಲ"-ಅಲ್ಲಿ ಬರೆಯಲು ಬೇರೇನೂ ತೋಚದಿದ್ದಾಗ ಮಾತ್ರ ಮೂಡುವಂಥದು.

ಕಾವ್ಯಸ್ಪರ್ಶವೇ ಇಲ್ಲದೆ ಕೇವಲ ಹೇಳಿಕೆ, ಘೋಷಣೆಗಳ ಮಟ್ಟದಲ್ಲೇ ನಿಲ್ಲುವ ಈ ಸಾಲುಗಳನ್ನು ನೋಡಿ-

ಶಿಕ್ಷಣದ ಹೆಸರಲ್ಲಿ ವ್ಯಾಪಾರ ಮಾಡುವ
ಕಲೆಯುರಂಗದಲ್ಲಿ ವಿಷ ಬಲೆ ಹೆಣೆಯುವ
ಧರ್ಮದಾ ಬಿಡಿನಲ್ಲಿ ಚರ್ಮವನ್ನೇ ಸುಲಿಯುವ
ವಿಪರ್ಯಾಸದಿಂದ ತಪ್ಪನಾದೆ.

(ವಿರೋಧಾಭಾಸ)

ಅನಗತ್ಯ ಹಾಗೂ ಹೊಂದಿಕೊಳ್ಳದ ಶಬ್ದಗಳಿಗೊಂದೆರಡು ಉದಾಹರಣೆಗಳು-

ಬಿರಿಯುತ್ತಿವೆ ಕರಿ ಪ್ರಶ್ನೆಗಳು
ಕರೆಯುತ್ತಿವೆ ಹಿರಿ ಸಮಸ್ಯೆಗಳು
ಕನಲುತ್ತಿವೆ ನಿರುತ್ತರದ ನಿತ್ಯನಿತ್ಯ ನಗ್ನನೆಲೆಗಳು

(ಮೂಡೀತೆ ಅಗ್ನಿ-ದಿವ್ಯ)

ಇಲ್ಲಿ ಎರಡನೆಯ ಸಾಲಿನ 'ಸಮಸ್ಯೆ' ಶಬ್ದ, ಮೊದಲ ಸಾಲಿನ 'ಪ್ರಶ್ನೆ'ಗಿಂತ ಒಂದು ಮಾತ್ರೆ ಹೆಚ್ಚಾಗುವುದರಿಂದ ಓಟಕ್ಕೆ ತಡೆಯೊಡ್ಡುತ್ತದೆ. ಮೂರನೇ ಸಾಲಿನಲ್ಲಂತೂ 'ನಿತ್ಯ' ಎರಡು ಬಾರಿ ಬರುವ ಅಗತ್ಯವೇ ಇರಲಿಲ್ಲ. ಅದೇ ರೀತಿ 'ಸಾವಿರದ ಕಂದರ' ಪದ್ಯದಲ್ಲಿ-'ಸಿಗಲೇ ಇಲ್ಲ ಸರಿಯಾದ ದಾರಿ!' ಎನ್ನುವಲ್ಲಿ 'ಸರಿಯಾದ' ಶಬ್ದದ ಅಗತ್ಯ ಇರಲಿಲ್ಲ. ಯಾಕೆಂದರೆ ಇದರ ಹಿಂದಿನ ಸಾಲುಗಳಲ್ಲಿ ಕವಿ ಸರಿಯಾದ ದಾರಿ ಹುಡುಕುತ್ತಿದ್ದಾನೆನ್ನುವುದು ಧ್ವನಿತವಾಗುತ್ತದೆ. ಇಲ್ಲಿ ಈ ಶಬ್ದವನ್ನಿಟ್ಟು ಆ 'ಧ್ವನಿ'ಯನ್ನು ಕವಿ ವಾಚ್ಯವಾಗಿಸಿಬಿಟ್ಟಿದ್ದಾರೆ.

ಇದೇ ರೀತಿ 'ಇಲ್ಲದವರ ಪಾಡು' ಪದ್ಯದಲ್ಲಿ ಕೆಲವು ಒಳ್ಳೆ ಸಾಲುಗಳಿದ್ದರೂ ಒಟ್ಟಿನಲ್ಲಿ ಪದ್ಯ ಹೇಳಿಕೆಯ ಮಟ್ಟದಲ್ಲೇ ನಿಲ್ಲುತ್ತದೆ.

ಒಂದು ಶಬ್ದವೂ ಅನಗತ್ಯವೆನ್ನಿಸದ ಹಾಗೆ, ಎಲ್ಲೂ ಕೃತಕವೆನ್ನಿಸದ ಹಾಗೆ, ಬದುಕಿನ ಶೂನ್ಯ ಕ್ಷಣಗಳನ್ನು ಚಿತ್ರಿಸುವ 'ಕೆಟ್ಟ ಘಳಿಗೆಗಳು' ಪದ್ಯ ಈ ಸಂಕಲನದ ಇನ್ನೊಂದು ಯಶಸ್ವೀ ಪದ್ಯ. ಅದೇ ರೀತಿ ಮನ್ನೊಂದು ಯಶಸ್ವೀ ಪದ್ಯವೆಂದರೆ ಕವಿ ತನ್ನ ತಂದೆಯ ವ್ಯಕ್ತಿ ಚಿತ್ರವನ್ನು ಕೊಡುವ 'ಅಪರಾಜಿ', ಈ ಎರಡೂ ಕವಿತೆಗಳೂ ಸರಳವಾಗಿ ಸ್ಪಷ್ಟವಾಗಿ ಕಾವ್ಯತ್ವವನ್ನು ಎಲ್ಲೂ ಕಳಕೊಳ್ಳದೆ ಉಳಿದಿರುವುದು ಇಲ್ಲಿನ ಭಾವದ ಆರ್ದ್ರತೆಯಿಂದಾಗಿಯೇ ಎನಿಸುತ್ತದೆ.

ವಾಚ್ಯವಾದ ಚಿತ್ರವೊಂದನ್ನೇ ಕೊಡುವುದರಲ್ಲಿ ತೃಪ್ತಿ ಹೊಂದುವ ಕವಿತೆಗಳೂ ಕೆಲವಿವೆ. ಉದಾ:'ಸರ್ವಾಂತರ್ಯಾಮಿ,' ಇದು ಒಬ್ಬ ಪೂಜಾರಿಯ ಚಿತ್ರ. ಇದರಲ್ಲಿ ಧ್ವನಿಯಾಗಲೀ, ನಿರೂಪಣೆಯಲ್ಲಿ ಹೊಸತನವಾಗಲೀ ಏನಿಲ್ಲ. ಆದರೆ ಕವನದ ಬಂಧ ಬಿಗಿಯಾಗಿದೆ. ಹೀಗಾಗಿ ಒಮ್ಮೆ ಓದಿ ಆನಂದಿಸಿ ಮರೆಯಬಹುದಾದ ಪದ್ಯವಾಗಿದೆ.

೬

ಒಟ್ಟಿನಲ್ಲಿ ಪುಟಗಳ ಮಿತಿಗೊಳಪಟ್ಟು ಲೇಖನವನ್ನು ಮುಗಿಸಬೇಕಾಗಿರುವ ಸಂದರ್ಭದಲ್ಲಿ 'ಮೌನಸ್ಪಂದನ'ದ ಬಗ್ಗೆ ಕ್ರೋಢೀಕರಿಸಿ ಹೇಳಬಹುದಾದದ್ದು ಇಷ್ಟು–.

ಕವಿಯಾಗಿ, ಗೌಡರ ಸಾಧನೆ, ಸೋಲುಗಳೆರಡೂ 'ಮೌನಸ್ಪಂದನದಲ್ಲಿ' ದಾಖಲಾಗಿವೆ. 'ಯಾವುದೇ ಕವಿಯ ಯಾವುದೇ ಸಂಕಲನದ ಬಗೆಗೂ ಈ ಮಾತು ಹೇಳಬಹುದೆಂದು ಜಾರಿಸಿ ಮಾತನಾಡಬಹುದಾದರೂ ಅಷ್ಟೊಂದು ಸರಳವಾಗಿ ನಾನಿಲ್ಲಿ ಹೇಳುತ್ತಿಲ್ಲವೆಂದು ಸ್ಪಷ್ಟಪಡಿಸಬಯಸುತ್ತೇನೆ. ಯಾಕೆಂದರೆ ಗೌಡರ ಸಾಧನೆಗಳು ಇಲ್ಲಿ ಮೆಚ್ಚತಕ್ಕಂಥವಾಗಿವೆ. ಆದರೆ ಸೋಲುಗಳು ಈಗಾಗಲೇ ನಾನು ತೋರಿಸಿರುವಂತೆ, ಬಾಲಿಶವಾದ ರೀತಿಯಲ್ಲಿವೆ. ಮಹತ್ವದ ಸೋಲುಗಳಾದರೆ ಅವಕ್ಕೆ ಬೆಲೆಯಿರುತ್ತಿತ್ತು. ಅಂಥಾ ಮಹತ್ವದ ಸೋಲುಗಳು ಎಲ್ಲಿ ಇರುತ್ತವೆಯೋ ಅಲ್ಲಿ ಸಾಮಾನ್ಯ ದೋಷಗಳು ಇರುವುದಿಲ್ಲ. ಆದರೆ, ಇಲ್ಲಿ ನಿವಾರಿಸಿಕೊಳ್ಳಬಹುದಾಗಿದ್ದಂಥ ದೋಷಗಳೇ ಹೆಚ್ಚು ಕಣ್ಣಿಗೆ ಬೀಳುತ್ತವೆ (ಹಿಂದೆ ಹೇಳಿದ ಉದಾಹರಣೆಗಳಲ್ಲದೆ 'ನೆನಪಿನ ಗಾಳಿ ಬೀಸಿದ ಹಾಗೆ' ಪದ್ಯದ ಆರಂಭದ ನಾಲ್ಕು ಸಾಲುಗಳನ್ನು ನೋಡಿ). ಇಂಥ ದೋಷಗಳನ್ನು ನಿವಾರಿಸಿಕೊಂಡಿದ್ದರೆ, ವಾಚ್ಯವಾಗೇ ಉಳಿಯುವ ಕೆಲಪದ್ಯಗಳನ್ನು ಕೈಬಿಟ್ಟಿದ್ದರೆ. ಗೌಡರ 'ಮೌನಸ್ಪಂದನ'ದ ಆಶಯ ನಿಜಕ್ಕೂ ಅರ್ಥಪೂರ್ಣವಾಗುತ್ತಿತ್ತು. ಬಹುಮಟ್ಟಿಗೆ ಯಶಸ್ವಿಯೂ ಆಗುತ್ತಿತ್ತು. 'ಆಷಾಢ' 'ಸೃಜನೆ'ಯಂಥ ಕೆಲವೇ ಕಿರುಗವಿತೆಗಳನ್ನು ಬಿಟ್ಟರೆ, ಉಳಿದ ಕಿರುಗವಿತೆಗಳೂ ಇದೇ ರೀತಿಯಲ್ಲಿವೆ.

ಇದು ಈ ಕವಿಯ ನಾಲ್ಕನೆಯ ಕವನ ಸಂಕಲನ ಎಂಬ ದೃಷ್ಟಿಯಿಂದ ಕೂಡ ಈ ದೋಷಗಳು ದೊಡ್ಡವೇ ಆಗಿ ಉಳಿಯುತ್ತವೆ. ಮೊದಲ ಅಥವಾ ಎರಡನೆಯ ಸಂಕಲನವಾದರೆ ಕವಿಗೆ ಸ್ವಲ್ಪ ರಿಯಾಯಿತಿ ಇರುತ್ತದೆ. ನಾಲ್ಕನೆಯ ಸಂಕಲನ ಪ್ರಕಟಿಸುವ ಕವಿ ಅಂಥ ರಿಯಾಯಿತಿಯನ್ನು ನಿರೀಕ್ಷಿಸುವುದು ಸಾಧ್ಯವಿಲ್ಲ.

ಕವಿತೆಯ ಗುಣಾತ್ಮಕ ಅಂಶಗಳ ಬಗ್ಗೆ ಸಾಕಷ್ಟು ವಿವರವಾಗಿ ಹೇಳಲಾಗಿದೆ. ಕೆಲವು ಕಡೆಯಂತೂ ಮುತ್ತಿನಂಥ ಮಾತುಗಳಿವೆ.

'ಆತ್ಮ ವಿಮರ್ಶೆ ನಿಜಕ್ಕೂ ಇಷ್ಟು ನಿದ್ದೆ ಕೆಡಿಸುತ್ತೆ ಅಂದುಕೊಂಡಿರಲಿಲ್ಲ'
'ಯಾಕಿಷ್ಟು ಸಂಕೀರ್ಣ ನಮ್ಮ ಸ್ವರೂಪ ?' (ಇಣುಕು ನೋಟ)
'ಕೆಟ್ಟ ಘಳಿಗೆಗಳು ಕಾಡುವಾಗ/ಕೊಟ್ಟ ಮಾತು ನಡೆಯುವುದಿಲ್ಲ'
(ಕೆಟ್ಟ ಘಳಿಗೆಗಳು)

ಪ್ರೀತಿಯಿಂದ ಭಾವನಾತ್ಮಕ ವಿಷಯದ ಬಗ್ಗೆ ಮಾತನಾಡುವಾಗ ಕೂಡ ಚಿಂತನಪರವಾಗಿ ಹಾಗೂ ಮೃದುವಾಗಿ ಈ ಕವಿ ಬರೆಯುವುದನ್ನು, ಅಲ್ಲೂ ಹಿಡಿತ ಇಟ್ಟುಕೊಳ್ಳುವುದನ್ನು ಕಂಡಾಗ (ಉದಾ: ಐಕ್ಯವಾಗುವ ಹೊತ್ತಿಗೆ) ಖುಷಿಯಾಗುತ್ತದೆ.

ಆರೋಗ್ಯಕರ ನಿಲುವೊಂದನ್ನಿಟ್ಟುಕೊಂಡು ಬರೆಯುತ್ತಿರುವ ಕವಿಯೊಬ್ಬನ ಗಟ್ಟಿ ಹೆಜ್ಜೆಯ ಗುರುತುಗಳು 'ಮೌನಸ್ಪಂದನ'ದಲ್ಲಿ ಸ್ಪಷ್ಟವಾಗಿವೆ.

ಅಂತಃಕರುಣೆ ಮೂಡಿಸುವ ಕೃತಿ ;
'ಜೀಕೆ ಮಾಸ್ತರರ ಪ್ರಣಯ ಪ್ರಸಂಗ'

ಜಿ. ಗೀತಾ ನಾಗಭೂಷಣ

ಡಾ. ಚಂದ್ರಶೇಖರ ಕಂಬಾರರ 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ಕಾದಂಬರಿಯ ಜೀಕೆ ಮಾಸ್ತರರು ಜೂನಿಯರ್ ಕಾಲೇಜಿನ, ಕಟ್ಟು ನಿಟ್ಟಾದ, ದಕ್ಷ ಪ್ರಿನ್ಸಿಪಾಲರು, ಶಿಸ್ತು ಸಂಯಮಗಳಿಗೆ ಹೆಸರಾದ ವ್ಯಕ್ತಿ. ಕೆಲಸ ಕೀರ್ತಿಗನುಗುಣವಾಗಿ ಅವರ ವ್ಯಕ್ತಿತ್ವ. ಎತ್ತರವಾದ ಗಂಭೀರಾಕೃತಿ, ತೇಜಸ್ಸಿನಿಂದ ತುಂಬಿದ ಮುಖ, ಸಣ್ಣ ಕಣ್ಣುಗಳು, ದೊಡ್ಡ ಮೂಗು ಒತ್ತಿಕೊಂಡ ತುಟಿಗಳು, ಗೌರವ ಹುಟ್ಟಿಸುವಂತಹ ವ್ಯಕ್ತಿತ್ವ. ಅದಕ್ಕೆ ಸಮ ಒಪ್ಪುವ ಉಡುಪು. ಗರಿಗರಿಯಾದ ಅಚ್ಚ ಬಿಳುಪಿನ ಧೋತ್ರ, ಬಿಳಿ ಶರ್ಟು, ಮ್ಯಾಲೊಂದು ಕೋಟು ಹಾಕಿಕೊಂಡು ಬಕ್ಕ ತಲೆ ಹಾಗೆಯೇ ಬಿಡುತ್ತಿದ್ದರು. ಹೈಸ್ಕೂಲು ಹೆಡ್ಮಾಸ್ಟರ್ ಆಗಿದ್ದಾಗಿನಿಂದ ಬಂದಿದ್ದ ಇದೇ ವೇಷ ಪ್ರಿನ್ಸಿಪಾಲರಾದರೂ ಬದಲಾಗಿರಲಿಲ್ಲ. ಸೂಟು ಧರಿಸುವುದಂತೂ ದೂರ, ಕೈಯಿಂದ ಮುಟ್ಟಿಯೂ ಇರಲಾರರು.

ಜೀಕೆ. ಮಾಸ್ತರರ ಮಾತು ತೀರ ಕಮ್ಮಿ. ಆಡಿದರೆ ಯಾವ ಭಿಡೆ, ವಿನಾಯತಿ, ಮುಲಾಜುಗಳ ಹಂಗಿಲ್ಲದೆ ಸ್ಪಷ್ಟವಾಗಿ ಸಂದೇಹಕ್ಕೆ ಎಡೆ ಇಲ್ಲದಂತಹ ಮಾತುಗಳು,

ಅವರದ್ದು ನಗಾರಿ ಧ್ವನಿ. ಜಗತ್ತು ಭ್ರಷ್ಟವಾಗುತ್ತಿದೆಯೆಂಬ ನಂಬಿಕೆ ಅವರಲ್ಲಿ ಗಟ್ಟಿಯಾಗಿ ಬೇರೂರಿ ನಿಂತಿತ್ತು. ಜಗತ್ತು ಇನ್ನಷ್ಟು ಭ್ರಷ್ಟವಾಗದಂತೆ ತಡೆಯು ವುದೇ ಅಧ್ಯಾಪಕರಾದ ತಮ್ಮ ಕರ್ತವ್ಯವೆಂದು ನಂಬಿದವರು.

ಜೀಕೆ ತರಗತಿಗಳಲ್ಲಿ ಪಾಠ ಮಾಡುವ ಕ್ರಮವೂ ಅವರದ್ದೇ. ಅವರ ಸಹಜ ನಗಾರಿ ದನಿಯಲ್ಲಿ ಕಾಳಿದಾಸನ ಮೇಘದೂತ ಹೇಳತೊಡಗಿದರೆ ವಿದ್ಯಾರ್ಥಿಗಳು ಅದನ್ನು ಕಣ್ಮುಂದೆಯೇ ಕಾಣುತ್ತಿದ್ದರು. ಆದರೆ ಶೃಂಗಾರ, ವಿರಹ, ಕರುಣೆ ಮೊದಲಾದ ಮೃದುಭಾವನೆಗಳಿಗೆ ಅವರ ನಗಾರಿದನಿ ಒಪ್ಪುತ್ತಿರಲಿಲ್ಲ. ಆಗೆಲ್ಲ ಹುಡುಗರಿಗೆ ಕಸವಿಸಿ. ಇಷ್ಟಾದರೂ ಜೀಕೆ ಹುಡುಗರಿಗೆಲ್ಲ ಪ್ರಿಯರು.

ಜೀಕೆ ಮಾಸ್ತರರ ಖಾಸಗೀ ಬದುಕೂ ಅಷ್ಟೇ. ಅವರ ಹೆಂಡತಿ ಗಿರಿಜಮ್ಮನ ವಯಸ್ಸು ಸುಮಾರು ಐವತ್ತು. ದಂಪತಿಗಳಿಬ್ಬರೂ ಶಿವಭಕ್ತರು. ವ್ರತ, ಆಚರಣೆ, ಮಠ, ಪೂಜೆಗಳಲ್ಲಿ ಸಮಾನ ಭಕ್ತಿ,ಜೀಕೆಯವರ ವ್ರತಾಚರಣೆಯೂ ಬಹಳ ಕಟ್ಟುನಿಟ್ಟು. ಒಮ್ಮೆ ವ್ರತವೊಂದರ ಆಚರಣೆಯಲ್ಲಿದ್ದಾಗ, ಗಂಡ ಹೆಂಡತಿ ಯಾರನ್ನೂ ಮುಟ್ಟಿಸಿ ಕೊಳ್ಳಲಾರದ ಮಡಿಯಲ್ಲಿದ್ದಾಗ ಇದ್ದೊಬ್ಬ ಮಗ ವೀರಭದ್ರ ಹೊಟ್ಟೆನೋವಿದ್ದು ಹೊರಳಾಡತೊಡಗಿದ್ದ. ಅದನ್ನು ತಿಳಿದ ತಂದೆ ವಿಚಲಿತರಾಗಲಿಲ್ಲ. ತಾಯಿ ಗಂಡನ ಗಂಟು ಮುಖಕ್ಕೆ ಹೆದರಿ ಕುಳಿತವಳು ಮೇಲೇಳಲಿಲ್ಲ. ಮಗನ ಹೊಟ್ಟೆನೋವು ವಿಪರೀತವಾಯಿತು. ಆಸುಪಾಸಿನಲ್ಲಿ ಬೇರೆ ಮನೆಗಳಿರಲಿಲ್ಲ. ಮಗನ ಸಂಕಟದ ಅಳುದನಿ ಕೇಳಿಸಿದರೂ ಆ ದಂಪತಿಗಳು ಪೂಜೆಬಿಟ್ಟು ಬರಲಿಲ್ಲ. ಯಾರೋ ಅಕಸ್ಮಾತ್ತಾಗಿ ಅವರ ಮನೆಗೆ ಬಂದಿದ್ದ ಮಾಸ್ತರರೊಬ್ಬರು ಮಗುವನ್ನು ಆಸ್ಪತ್ರೆಗೆ ಕರೆದೊಯ್ದರು. ಆದರೆ ವಾಪಸ್ ಬಂದದ್ದು ಮಾತ್ರ ಮಗ ವೀರಭದ್ರನಲ್ಲ–ಅವನ ಹೆಣ.

ಅಂದಿನಿಂದ ಗಿರಿಜಮ್ಮ ಹಾಸಿಗೆಯನ್ನು ಗಟ್ಟಿಯಾಗಿ ಹಿಡಿದುಬಿಟ್ಟಳು. ಮಾನಸಿಕ ಸ್ವಾಸ್ಥ್ಯವಿಲ್ಲದವಳು ನಿರಂತರ ರೋಗಿಯಾದಳು. ಜೀಕೆ ಮಾಸ್ತರರದು ಗಟ್ಟಿ ಜೀವ. ಮಗನ ಸಾವು ಸಾವಿನ ಕಾವು ತೀವ್ರವಾಗಿ ಅವರನ್ನು ತಟ್ಟಲಿಲ್ಲ. ಕಾಲೇಜಿನ ಜವಾಬ್ದಾರಿಯ ಜೊತೆಗೆ ಮನೆಯಲ್ಲಿ ಹೆಂಡತಿಯ ಆರೈಕೆಯೂ ಅವರ ಪಾಲಿಗೆ ಬಂದಿತು.

ಇಂಥದ್ದೇ ದಿನಗಳಲ್ಲಿ ತಮ್ಮ ಕಾಲೇಜಿನ ಚೆಲುವಿನ ವಿದ್ಯಾರ್ಥಿನಿಯಾದ ರೋಜಾಳ ಪ್ರೇಮ ಪಾಶದಲ್ಲಿ ಸಿಕ್ಕು ಪರಿತಪಿಸುತ್ತಾರೆ ಜೀಕೆ. ಅವರೆದೆಯಲ್ಲಿಯ ಸುಪ್ತ ಕಾಮನೆಯನ್ನೆಬ್ಬಿಸಿದ ಆ ನವತರುಣಿಯ ಚೆಲುವು ಅವರು ತಮ್ಮನ್ನೇ ತಾವು ಮರೆಯುವಂತೆ ಮಾಡುತ್ತದೆ. ಅವರ ಗಂಭೀರ ವ್ಯಕ್ತಿತ್ವ ಹಾಸ್ಯಾಸ್ಪದವಾಗಿ, ಒಮ್ಮೊಮ್ಮೆ ಓದುಗರ ಸಹಾನುಭೂತಿಗೆ ತುತ್ತಾಗುತ್ತ ನಡೆದು ಕೊನೆಗೆ ಈ ಮುದುಕನಿಗೇನು ಹುಚ್ಚೇ ಎನ್ನುವಂತಾಗುತ್ತದೆ.

ಇವರ ಪ್ರೇಮ ಪ್ರಣಯ ರಹಸ್ಯ ತಿಳಿದ ಗಿರಿಜಮ್ಮ ಸದ್ದಿಲ್ಲದೆ ಸಾಯುತ್ತಾಳೆ. ಜೀಕೆ ರೋಜಾಳನ್ನು ಮದುವೆಯಾಗಲು ನಿರ್ಧರಿಸಿ ಹುಬ್ಬಳ್ಳಿಗೆ ಬರುತ್ತಾರೆ. ರೋಜಾ

ಗಿರೆಪ್ಪರ ಆಟವೆಲ್ಲ ಬಯಲಿಗೆ ಬಂದು ತಾವು ಮೂರ್ಖರಾದದ್ದು ತಿಳಿದು ಸಿಟ್ಟು, ಸಂತಾಪ, ಸಂಕಟಗಳಿಂದ ಕುಸಿದು ಬೀಳುತ್ತಾರೆ.

ಅವಳಿಗಾಗಿ ಅವರ ಎಲ್ಲ ಕಟ್ಟು ಕಟ್ಟಳೆಗಳು ಮುರಿದು ಬೀಳುತ್ತವೆ. ಮಂಗ ಸಾಯುವಾಗಿನ ಮೊದಲಿನ ಮಡಿವಂತಿಕೆಗೆ ಈಗ ಅರ್ಥ ಉಳಿಯುವುದಿಲ್ಲ. ಅವಳಿಗಾಗಿ ಭ್ರಷ್ಟಾಚಾರ ಎಸಗುತ್ತಾರೆ. ಏನೆಲ್ಲ ಮಾಡುತ್ತಾರೆ ಪಾಪ.

ಕೊನೆಗೂ ಪಾಶ್ಚಾತ್ತಾಪದಿಂದ ಜೀಕೆ ಪರಿಶುದ್ಧರಾಗುತ್ತಾರೆ. ಕೊನೆಗೆ ಅವರೆದೆಯಲ್ಲಿ ಉಳಿದದ್ದು ಬರೀ ಪರಿಶುದ್ಧವಾದ ಪವಿತ್ರ ಪ್ರೇಮ—ಮಮತೆ-ವಾತ್ಸಲ್ಯ. ರೋಜಾ ಗಿರೆಪ್ಪನವರಿಗೆ ಆಶೀರ್ವದಿಸಿ ಹೊರಟು ಹೋಗುತ್ತಾರೆ.

ಇದಿಷ್ಟು 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ'ದ ಕಥಾ ಸಾರಾಂಶ.

ಸುಮಾರು ಅರವತ್ತರ ಹೊಸ್ತಿಲಲ್ಲಿ ನಿಂತ ಜಿ.ಕೆ. ಮಾಸ್ತರರ ಬತ್ತಿದ ಎದೆಯಲ್ಲಿ ರೋಜಾಳಿಂದ ಪ್ರಣಯದ ಸೆಲೆಯೊಡೆಯುತ್ತದೆ.

ಗಿರೆಪ್ಪ ಅದೇ ಕಾಲೇಜಿನ ಕೊನೆಯ ವರ್ಷದ ವಿದ್ಯಾರ್ಥಿ ಸ್ಟೂಡೆಂಟ್ಸ್ ಯೂನಿಯನ್ ಪ್ರೆಸಿಡೆಂಟ್. ಆ ವರ್ಷದ ಯೂನಿಯನ್ ಉದ್ಘಾಟನೆಯ ಸಮಯದಲ್ಲಿ ಗಿರೆಪ್ಪನಿಗೂ ಜೀಕೆಗೂ ಸ್ವಲ್ಪ ವಿರಸ ಉಂಟಾಗಿರುತ್ತದೆ. ಪ್ರಿನ್ಸಿಪಾಲರ ಮಾತಿಗೆ ಮಣಿಯದ ಗಿರೆಪ್ಪ ಅವರೆದೆಯಲ್ಲಿಯ ಸಿಟ್ಟಿಗ ಕಾರಣನಾಗುತ್ತಾನೆ.

ಎಸ್. ಟಿ. ಅದೇ ಕಾಲೇಜಿನ ಜ್ಞಾನಿ ಅಧ್ಯಾಪಕ. ಜೀಕೆ ಅವರ ಚಮಚಾ. ಅವರಿಗ ಬೇಕಾದ, ಕಾಲೇಜಿನ ಎಲ್ಲ ವರದಿಗಾರ. ಮುಂದೆ ತಾನೇ ಪ್ರಿನ್ಸಿಪಾಲನಾಗುವ ಕನಸು ಹೊತ್ತು ನಿಂತ ಮೂರ್ಖ ಅಧ್ಯಾಪಕ. ಅಧ್ಯಾಪಕರ ಬಗ್ಗೆ, ವಿದ್ಯಾರ್ಥಿಗಳ ಬಗ್ಗೆ ಪ್ರಿನ್ಸಿಪಾಲರಿಗೆ ಚಾಡಿ ಹೇಳುವುದು ಅವನ ದಿನನಿತ್ಯದ ಕೆಲಸ.

ಈಗ ಎಸ್. ಟಿ. ಗಿರೆಪ್ಪನ ಪೂರ್ವಾಪರ ಬಿಚ್ಚಿದ. "ಸರ್, ಅವ ಭಾಳ ಹಲಕಟ್ ಅದಾನ್ರಿ, ಆ ಕ್ರಿಶ್ಚಿನ್ ಹುಡುಗಿ ರೋಜಾ ಇದ್ದಾಳಲ್ಲರಿ, ಆಕಿನ್ನ ಇಟ್ಟು ಕೊಂಡಾನವ."

ಜೀಕೆ ಹುಬ್ಬೇರಿಸಿದರು.

ಆ ದಿನ ಜಿ.ಕೆ. ಕಳಕಳಿಯಿಂದಲೇ ಕ್ಲಾಸಿಗೆ ಹೋದರು. ತರಗತಿಯ ತುಂಬ ಕಣ್ಣಾಡಿಸಿ ಹಾಜರಿ ಪುಸ್ತಕ ತೆರೆದರು. ವಿದ್ಯಾರ್ಥಿಗಳ ಹೆಸರು ಕೂಗುತ್ತ 'ರೋಜಾ' ಎಂದರು. 'ಎಸ್ಸರ್' ಎಂದೊಂದು ಹೆಣ್ಣಿನ ಧನಿ ಇಂಪಾಗಿ ಅವರ ಕಿವಿತಾಕಿದಾಗ ತಟ್ಟನೆ ತಲೆಯೆತ್ತಿದರು. ಇಬ್ಬರ ಕಣ್ಣು ಕೂಡಿದುವು. ಸಾವರಿಸಿಕೊಂಡು ಮುಂದಿನ ಹೆಸರಿಗೆ ಹೋದರು.

ಕಾಳಿದಾಸನ ವಿಕ್ರಮೋರ್ವಶಿಯನ್ನು ಕೈಗೆತ್ತಿಕೊಂಡು ತಮ್ಮ ಎಂದಿನ ನಗಾರಿ ದನಿಯಲ್ಲಿ ವಿವರಿಸುತ್ತ ಕದ್ದು ಕದ್ದು ರೋಜಾಳನ್ನು ನೋಡತೊಡಗಿದಾಗ ಅವಳು ಭಯದಿಂದ ನಡುಗಿದಳು. ಹುಡುಗರಲ್ಲಿ ಗುಸು ಗುಸು ಪ್ರಾರಂಭವಾಯಿತು.

ಊರ್ವಶಿಯ ರೂಪ ಲಾವಣ್ಯ ವರ್ಣಿಸುವಾಗ ಅವರ ದನಿ ತಾರಕಕ್ಕೇರಿತು. ಜೀಕೆಯವರ ಮುಖದಲ್ಲಿ ಬೆವರಿನ ಹನಿಗಳ ಸಮೂಹ, ರೋಜಾ ಎಚ್ಚರತಪ್ಪಿ ಪಕ್ಕದ ವಿದ್ಯಾರ್ಥಿನಿಯ ಮೇಲೆ ಬಿದ್ದಳು. ಗದ್ದಲವೆದ್ದಿತು. ಜೀಕೆ ಪಾಠ ನಿಲ್ಲಿಸಿದರು. ಹೊರಗಿನಿಂದ ಜನ ನುಗ್ಗಿದರು. ಯಾರೋ ನೀರು ತಂದು ಅವಳ ಮುಖಕ್ಕೆ ಹನಿಸಿದರು. ಅವಳು ಕಣ್ಣು ತೆರೆದಳು. ಜೀಕೆ ಯಾರ ಕಡೆಗೂ ನೋಡದೆ ತಮ್ಮ ಚೇಂಬರ್‌ಗೆ ಹೋದರು.

ಜೀಕೆಗೆ ಚಿಂತೆ. ತಮ್ಮ ಕ್ಲಾಸಿನಲ್ಲಿ ಆ ರೋಜಾ ಯಾಕೆ ಎಚ್ಚರತಪ್ಪಿ ಬಿದ್ದಳು ? ಎಂದೂ ಹೀಗಾಗಿರಲಿಲ್ಲ. ಕೂತಲ್ಲಿ ಕೂತಿರಲಾರದೆ ಎದ್ದು ಹೊರಬಂದರು. ಹುಡುಗರನ್ನು ಕ್ಲಾಸಿಗೆ ಕಳಿಸಿದರು. ಹುಡುಗರಲ್ಲಿ ಗಿರೆಪ್ಪ ನಿಂತಿದ್ದ. ಅವನನ್ನು ಕಂಡು ಅವರ ತಲೆಯಲ್ಲಿ ಎನ್. ಟಿ. ಯ ಮಾತುಗಳು ಸುಳಿದುವು. ಮೂರ್ಛೆ ಬಿದ್ದ ಎಳೆಹರೆಯದ ಹುಡುಗಿಯ ರೂಪ ಕಣ್ಮುಂದೆ ಹಾದು ಬಂದಿತು. ಬಿಳಿ ಬಣ್ಣದ, ತುಂಬಿದ ಮೈಯದಟ್ಟ ಕೂದಲಿನ ಶಿಶುಮುಖದ ಸುಂದರಿ ಆ ಒರಟು ಗಿರೆಪ್ಪನನ್ನು ಖಂಡಿತ ಮೆಚ್ಚಲಾರಳು. ಸೊಕ್ಕಿದ ಕೋಣದಂತಿದ್ದ ಗಿರೆಪ್ಪನಿಗೂ ಕುಸುಮ ಕೋಮಲೆಯಾದ ರೋಜಾಳಿಗೂ ಎಲ್ಲಿಯ ಸಂಬಂಧ ? ಅವರ ಮುದಿ ಮೆದುಳು ತರ್ಕ ಹೂಡಿತು.

ಮೂರು ದಿನಗಳ ನಂತರ ಜೀಕೆ ಮಾಸ್ತರರು ರೋಜಾಳನ್ನು ತಮ್ಮ ಚೇಂಬರಿಗೆ ಕರೆಸಿದರು. ಜೀನ್ಸ್ ಪ್ಯಾಂಟು. ಟೀ ಷರ್ಟು ಧರಿಸಿ ಒಳಬಂದ ರೋಜಾ ವಿನಯ ತೋರಿದಳು. ಅವಳ ಉಡುಪಿಗೆ ಅವರು ಒಳಗೊಳಗೆಯೇ ಸಿಡಿಮಿಡಿಗೊಂಡರು. ಕುಳ್ಳಿರುತುಕೊಳ್ಳಲು ತಿಳಿಸಿದರು. ಕ್ಷೇಮ ವಿಚಾರಿಸಿದರು ಕೊನೆಗೆ.

"ಆಯಿತು. ಇನ್ನಮ್ಯಾಲ ಹಂಗೆಲ್ಲ ಕ್ಲಾಸಿನ್ಯಾಗ ಮೂರ್ಛೆ ಗೀರ್ಛೆ ಬೀಳ ಬ್ಯಾಡ" ಎಂದರು.

ರೋಜಾ ಪಕ್ಕನೆ ನಕ್ಕು ಜೀಕೆ ಮಾಸ್ತರರತ್ತ ಬಟ್ಟಲುಗಣ್ಣರಳಿಸಿ ನೋಡಿ ಹೊರಟು ಹೋದಳು. ಅವಳ ಹಲ್ಲು ಫಳ್ಳನೆ ಫ್ಲಾಷ್ ಲೈಟಿನಂತೆ ಹೊಳೆದು ಜೀಕೆ ಮಾಸ್ತರರ ಕಣ್ಣಲ್ಲಿ ಅವಳ ಭಂಗಿಯನ್ನು ಕ್ಷಣದಲ್ಲಿ, ಹೃದಯ ಕ್ಯಾಮರಾದಲ್ಲಿ ಸೆರೆ ಹಿಡಿಯಿತು. ಜೀಕೆ ಪ್ರಪ್ರಥಮ ಬಾರಿಗೆ ಪ್ರಣಯದ ಶಾಕ್ ತಟ್ಟಿದವರಂತೆ ಕುಳಿತಲ್ಲಿಯೇ ಕುಸಿದರು.

ಅರವತ್ತರ ಅಂಚಿನಲ್ಲಿರುವ ಕಟ್ಟು ನಿಟ್ಟಿನ ಆಸಾಮಿ ಜೀಕೆ. ಹದಿಹರೆಯದ ಹೆಣ್ಣಿಗೆ ಮೋಹಗೊಂಡದ್ದು ಆಶ್ಚರ್ಯವೇ ಆದರೂ ಸತ್ಯ.

ಕ್ಲಾಸ್‌ರೂಮಿನಲ್ಲಿ ಗದ್ದಲ ಹೆಚ್ಚಿತು. ಜೀಕೆ ಕ್ಲಾಸಿಗೆ ಬಂದರೆ ಹುಡುಗರೆಲ್ಲ ಗಪ್‌ಚಿಪ್, ಬಾಗಿಲ ಬಳಿಯ ಪುಟ್ಟ ಡಬ್ಬಿಯ ಕಡೆ ಕೈ ತೋರಿ ಪ್ರಾಧ್ಯಾಪಕ ಎಂ.ಟಿ. ತೊದಲಿದ.

'ಅವರೊಳಗೆ ಹಾವದರಿ ಸರ್' ಜೀಕೆ ಆ ಡಬ್ಬಿ ತೆರೆದರು. ಅದರೊಳಗಿದ್ದ ರಬ್ಬರ್ ಹಾವು ಪುಟಿಯಿತು. ಹುಡುಗಿಯರು ಹೆದರಿ ಚೀರಿದರೆ ಹುಡುಗರು ಹೋ ಎಂದು ಅಬ್ಬರಿಸಿದರು. ತಕ್ಷಣ ಜೀಕೆಯವರನ್ನು ನೋಡಿ ತುಟಿಬಿಗಿದರು. ಜೀಕೆ ಆ ಡಬ್ಬಿಯೊಂದಿಗೆ : ಮುಖ ಉಬ್ಬಿಸಿಕೊಂಡು ಹೊರಟು ಹೋದರು.

ಕಾಮದ ಸಂಕೇತವಾಗಿ ನಿಂತ ಹಾವು ರಬ್ಬರ ಹಾವು ಎಂದು ಚಿತ್ರಿಸಿರುವುದು ಅರ್ಥಗರ್ಭಿತ. ಜೀಕೆಯೊಂದಿಗಿನ ರೋಜಾಳ ಪ್ರಣಯ ಅಸಲಿಯದ್ದಾಗಿರದೆ ನಕಲಿ ರಬ್ಬರ್ ಹಾವಾಗಿತ್ತು ಎಂದು ಪರೋಕ್ಷವಾಗಿ ಹೇಳುವಲ್ಲಿ ಯಶಸ್ವಿಯಾಗಿದೆ.

ಮನೆಗೆ ಬಂದು ಆ ಹಾವನ್ನು ಹೆಂಡತಿಗೆ ತೋರಿಸಿ ನಗುವಾಗ ಅವರ ಕಣ್ಣು ಮುಂದೆ ಮತ್ತೆ ರೋಜಾಳ, ಹಾವು ಕಂಡು ಹೆದರಿದ, ಹಾವಭಾವಗಳು ಸ್ಪಷ್ಟವಾಗಿ ಹಾದು ಬಂದುವು. ಅವಳ ಹರೆಯದ ಗುಟ್ಟಿನ ಉಬ್ಬುತಗ್ಗುಗಳು ಸ್ಪಷ್ಟವಾದುವು.

ಮಾರನೆಯ ದಿನ ಜೀಕೆ ನಾರ್ಮಲ್ ಆಗೇ ಇದ್ದವರು, ರೋಜಾ ಚೇಂಬರ್‌ನಲ್ಲಿ ಬಂದು ತನ್ನ ಪಾಠವೊಂದರ ವಿವರಣೆ ಕೇಳಿದಾಗ ಹಾರಿಬಿದ್ದರು. ಅವಳನ್ನು ಮುಂದೆ ಕುಳ್ಳಿರಿಸಿಕೊಂಡು ಇಡೀ ಸಂಸ್ಕೃತ ಸಾಹಿತ್ಯದ ತಮ್ಮ ಪಾಂಡಿತ್ಯವೆಲ್ಲ ಜಾಲಾಡಿದರು. ಮುದುಕ ಭಾರಿ ಕೆಟ್ಟ ನಟ. ಕೈಬಾಯಿ ತಿರುಗಿಸುತ್ತ, ಆವೇಶದಿಂದ ಪಾಠ ಹೇಳುತ್ತಿದ್ದರೆ ಹೊರಗಿನವರಿಗೆ ಅವನು ಯಾರಿಗೊ ಬೈಯ್ಯುತ್ತಿರುವ ಅನಿಸಿಕೆ.

ಕಾಲೇಜಿನ ದಶಮಾನೋತ್ಸವದ ಹಿಂದಿನ ದಿನ ಹಬ್ಬದ ವಾತಾವರಣ. ಕಾಲೇಜಿನ ಬಯಲು ಪೆಂಡಾಲ್ ಹೊತ್ತು ನಿಂತಿತ್ತು. ಎನ್. ಟಿ. ಏದುತ್ತ ಓಡಿ ಬಂದವನೇ "ಸರ್...ಗಿರೆಪ್ಪ ರೋಜಾನ ಅಟ್ಟಿಸಿಕೊಂಡು ಬಂದು ಆಕಿನ್ನ ಎತ್ತಿ ಒಗೆದನ್ರಿ...."ಎಂದ. ಜೀಕೆ ಓಡಿಬಂದರು. ರೋಜಾ ಮನೆಗೆ ಹೋಗಿದ್ದಳು. ಗಿರೆಪ್ಪನ ಮೇಲೆ ಕಿಡಿಕಾರಿದರು. "ನಿನಗೂ ರೋಜಾಗೂ ಏನು ಸಂಬಂಧ ?" ಕೇಳಿಯೆ ಬಿಟ್ಟರು. ಗಿರೆಪ್ಪ ಸೆಟೆದು ನಿಂತು ತಲೆಕೊಡವಿದ.

"ಸರ್, ನೀವು ನನ್ನ ಖಾಸಗಿ ವಿಷಯಕ್ಕೆ ಕೈ ಹಾಕಬಾರದು" ಎಂದು ತಣ್ಣಗೆ ಹೇಳಿ, ಕತ್ತಿನ ಕಾಲರ್ ಝಾಡಿಸಿ ತೀಡಿಕೊಳ್ಳುತ್ತ ಹೋಗಿಬಿಟ್ಟ. ಜೀಕೆಯವರ ಮುಖಕ್ಕೆ ರಿಪ್ಪನೆ ಬಾರಿಸಿದಂತಾಯಿತು. ಗಿರೆಪ್ಪನನ್ನು ಕಾಲೇಜಿನಿಂದ ಹೊರಹಾಕಿದರು.

ರೋಜಾಬಂದು ಗಿರೆಪ್ಪನನ್ನು ವಾಪಸ್ ಕಾಲೇಜಿಗೆ ತೆಗೆದುಕೊಳ್ಳಬೇಕೆಂದು ಶಿಫಾರಸ್ ಮಾಡಿದಳು.

"ಯಾಕ ತಗೋಬೇಕು ?" ಜೀಕೆ ಕೇಳುತ್ತಾರೆ.

"ಯಾಕಂದ್ರ ನಾ ಬ್ಯಾರೆದವರನ್ನ ಪ್ರೀತಿ ಮಾಡೋದು ಅವಂಗೆ ಗೊತ್ತಾಗೇತ್ರಿ..." ಅವಳ ದನಿ.

"ಅಂದ್ರೆ ?" ಜೀಕೆಯವರ ಆಸಕ್ತಿ ಏರಿತು.

"ಅಂವ ನನ್ನ ಪ್ರೀತಿ ಮಾಡ್ತೇನಂತ ಐದಾರು ಕಾಗದ ಬರದದ್ದನ್ರಿ....ನಾ ಯಾರಿಗೋ ಒಂದು ಪ್ರೇಮ ಪತ್ರ ಬರೆದು ನೋಟ್‌ಬುಕ್‌ನ್ಯಾಗ ಇಟಗೊಂಡಿದ್ದೆ...

ಅಂವ ಹ್ಯಾಗೋ ಅದು ನೋಡಿದ. ನನಗೆ ಕರೆದು 'ಇದು ಖರೇ ಏನು' ಅಂದ. ನಾ 'ಹೌದು' ಅಂದೆ. ಅಂವಾ ನನ್ನ ಹಿಡಕೊಂಡು ಅವಮಾನ ಮಾಡಾಕ ಬಂದ. ನಾ ಓಡಿದೆ, ಇಷ್ಟು ನಡದದ್ದು."

"ಅಂದ್ರ, ಅವ ನಿನಗ ಕಿಸ್ ಮಾಡ್ಲಿಲ್ಲ...." ಎಂದರು.

"ಇಲ್ಲರಿ".

ಜೀಕೆಗೆ ನೆಮ್ಮದಿ ಆಯಿತು. ತಗ್ಗಿದ ದನಿಯಲ್ಲಿ ಅವಳ ಪ್ರಿಯಕರನು ಯಾರೆಂದು ಕೇಳಿದರು. ಆಕಿ ತಲೆ ತಗ್ಗಿಸಿದಳು. ನಾಚಿದಳು. ಪುಸ್ತಕದಿಂದ ಪ್ರೇಮ ಪತ್ರ ತೆಗೆದುಕೊಟ್ಟಳು. 'ಪ್ರಿಯ ಜೀಕೆ'ಎಂದು ಪ್ರಾರಂಭವಾದ ಪತ್ರ 'ನಿಮ್ಮೊಲವಿನ, ರೋಜಾ' ಎಂದು ಕೊನೆಗೊಂಡಿತು. ಮುದುಕ. ಪಾಪ ಕಣ್ಣು. ಕಿವಿಗಳನ್ನು ನಂಬದಾದ. ಮೈ ಕಾವೇರಿ ನಾಳಗಳ ನೆತ್ತರು ವಿರುದ್ಧ ದಿಕ್ಕಿನಲ್ಲಿ ಹರಿದಂತಾಯಿತು. ಅಷ್ಟರಲ್ಲಿ ಕರೆಂಟು ಹೋಯಿತು. ರೋಜಾಳ ಕೈ ಜೀಕೆ ಕೈಯಲ್ಲಿ ಸೇರಿತು. ಅವರ ಕೈ ಅವಳ ತೋಳಗುಂಟ ಹರಿದು ಇಳಿಜಾರಿಗಿಳಿಯಿತು. ಜೀಕೆ ರೋಜಾಳನ್ನು ತಬ್ಬಿ ಮುತ್ತಿಟ್ಟರು. ಅವಳು ಅವರ ಕತ್ತು ಬಳಸಿ ಅವರ ಸುಡುವ ಹಣೆಗೆ ತಣ್ಣನೆಯ ತುಟಿಯೊತ್ತಿ "ಸರ್ ಆಯ್ ಲವ್ ಯೂ" ಎಂದು ಪಿಸುಗುಟ್ಟಿದಳು. ಲೈಟ್ ಬಂದಿತು. ಅವಳು ಸರ್ರನೆ ಹೊರಗೋಡಿದಳು. ಜೀಕೆ ನೆಲಕ್ಕಿಳಿದರು. ಮೈ ಕಾವೇರಿತು. ಥರ ಥರ ನಡುಗಿದರು. ಅವಳ ಪತ್ರ ಜೇಬಿಗಿಳಿಸಿ ಹೊರಬಂದಾಗ ದೂರದಲ್ಲಿ ಗಿರೆಪ್ಪ ನಿಂತಿದ್ದು ಕಂಡು "ಗೆದ್ದವನು ನೀನಲ್ಲೋ ಮಗನ ನಾನು..." ಎಂದು ಬೀಗಿದರು.

ಜೀಕೆ ತಮ್ಮನ್ನೇ ತಾವು ಗಿರೆಪ್ಪನ ಪ್ರತಿಸ್ಪರ್ಧಿ ಎಂದು ತಿಳಿದುಕೊಂಡು ಅವನೊಂದಿಗೆ ಸೆಣಸಿ ಗೆಲ್ಲುವ ಹುಮ್ಮಸ್ಸು ತೋರುತ್ತಾರೆ. ಇಲ್ಲಿಂದಲೇ ನೇರವಾಗಿ ಜೀಕೆ ರೋಜಾಳ ಪ್ರೇಮಗಡಲಿನಲ್ಲಿ ತೀವ್ರಗತಿಯಲ್ಲಿ ಮುಳುಗಲು ಪ್ರಾರಂಭಿಸುತ್ತಾರೆ. ಒಬ್ಬ ಮುದುಕ ಒಂದು ಎಳೆಪ್ರಾಯದ ಹೆಣ್ಣಿನ ಮೋಹದಲ್ಲಿ ಸಿಲುಕಿದಾಗ ತೋರುವ ಎಲ್ಲ ಅಶಕ್ತತೆಗಳೊಂದಿಗೆ ಹೇಗೆ ಹಸ್ಯಾಸ್ಪದ ವ್ಯಕ್ತಿಯಾಗಿ ನಿಲ್ಲುತ್ತಾರೆ ಎಂಬುದನ್ನು ಲೇಖಕರು ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

ಮುದುಕನ ಪ್ರೇಮದ ಹಲವಾರು ಮುಖಗಳನ್ನು ಈ ಕಿರುಕಾದಂಬರಿಯಲ್ಲಿ ಕಾಣಬಹುದು. ನಿದರ್ಶನಾರ್ಥವಾಗಿ ಒಂದನ್ನು ತೆಗೆದುಕೊಳ್ಳುವ. ಕೂಡಲ ಸಂಗಮಕ್ಕೆ ವಿದ್ಯಾರ್ಥಿಗಳೊಂದಿಗೆ ಜೀಕೆಯೂ ಹೋಗುತ್ತಾರೆ. ಅಲ್ಲಿ ಗಿರೆಪ್ಪ ನೀರಿನಲ್ಲಿ ಈಜುತ್ತ ಜಲಕ್ರಿಡೆಯಾಡುತ್ತಿದ್ದುದ್ದೂ ಅದನ್ನು ಕಣ್ಣರಳಿಸಿ ರೋಜಾ ನೋಡುತ್ತಿದ್ದುದ್ದನ್ನೂ ಗಮನಿಸಿದವರೇ ತಟ್ಟನೆ ತಮ್ಮ ಬಟ್ಟೆ ಕಳಚಿ ನೀರಿಗೆ ಹಾರುತ್ತಾರೆ. ಇಲ್ಲಿಯೂ ಗಿರೆಪ್ಪನನ್ನು ಸೋಲಿಸುವ ಅವರ ಒಳಮನಸ್ಸಿನ ಬಯಕೆ ಎದ್ದು ಕಾಣುತ್ತದೆ. ಹುಚ್ಚು ಯೌವನದ ಬಿಗಿ ಮೈಯ ಗಿರೆಪ್ಪನಲ್ಲಿ ? ಕಸು ಕಳೆದುಕೊಂಡ ಮೈಯ ಮುದುಕ ಜೀಕೆ ಎಲ್ಲಿ ? ಕೊನೆಗೆ ಜೀಕೆ ನೀರಲ್ಲಿ ಮುಳುಗಿ ಸಾಯುತ್ತಿರುವಾಗ ಗಿರಪ್ಪನೇ

ಅವರ ಜುಟ್ಟು ಹಿಡಿದು ಎಳೆದು ಹೊರತಂದು ಬದುಕಿಸುತ್ತಾನೆ. ಸೆಣಸಿದಲ್ಲೆಲ್ಲ ಸೋಲು ಕಂಡರೂ ಜೀಕೆಯ ಹುಮ್ಮಸ್ಸು ತಗ್ಗುವುದಿಲ್ಲ.

ತರುಣಿಯರನ್ನು ಪ್ರೇಮಿಸಿದ ಮುದುಕ ಜೀಕೆ ಕ್ರಮೇಣ ಪ್ರಪಾತದತ್ತ ಜಾರ ತೊಡಗುತ್ತಾರೆ. ಅವರಲ್ಲಿಯ ಶಿಸ್ತು, ಸಂಯಮ, ಕಟ್ಟುನಿಟ್ಟಿನ ನಡತೆ ಘನತೆ ಗಾಂಭೀರ್ಯಗಳೆಲ್ಲ ಕುಸಿಯುತ್ತವೆ. ಎಂದೂ ಧೋತಿ ಷರ್ಟು ಬಿಟ್ಟು ಬೇರೆ ಉಡುಪು ತೊಡದ ಮುದುಕ ಪ್ಯಾಂಟು ಬುಷರ್ಟು ತೊಟ್ಟು ಬಂದಾಗ ಕಾಲೇಜಿನ ಎಲ್ಲರಿಗೂ ಹಾಸ್ಯಾಸ್ಪದ ವ್ಯಕ್ತಿಯಾಗುತ್ತಾರೆ. ಕೊನೆಗೆ ತಮಗೆ ವಾಲ್ಯುಯೇಶನ್‌ಗಾಗಿ ಬಂದಿದ್ದ ರೋಜಾಳ ತರಗತಿಯ ಸಂಸ್ಕೃತ ಉತ್ತರ ಪತ್ರಿಕೆಗಳಲ್ಲಿಯೂ ಅವರು ಭ್ರಷ್ಟಾಚಾರ ಎಸಗುತ್ತಾರೆ.

ಖಾಲಿ ಪತ್ರಿಕೆಗಳ ಬಂಡಲ್ ಅವಳ ಮುಂದಿಟ್ಟು ಜೀಕೆ 'ನಿನಗೆ ಬೇಕಾದಷ್ಟು ನಂಬರ ನೀನೇ ಹಾಕಿಕೊ' ಎಂದು ಹೇಳುವಾಗ ಅವರ ಬಗ್ಗೆ ಹೇಸಿಕೆಮಿಶ್ರಿತ ಅಚ್ಚರಿಯುಂಟಾಗುತ್ತದೆ.

ರೋಜಾಳ ಒತ್ತಾಯದಿಂದ, ಗಿರೆಪ್ಪನನ್ನು ಡಿಸ್‌ಮಿಸ್ ಮಾಡಿದ ಆರ್ಡರ್ ವಾಪಸ್ ತೆಗೆದುಕೊಳ್ಳುತ್ತಾರೆ.

ಜ್ವರದಿಂದ ನರಳುತ್ತಿದ್ದ ಹೆಂಡತಿಯನ್ನು ಲೆಕ್ಕಿಸದೆ ಪಕ್ಕದ ಕೋಣೆಯಲ್ಲಿ ರೋಜಾಳೊಂದಿಗೆ ಪ್ರಣಯ ಚೇಷ್ಟೆಗೆ ತೊಡಗಿ ಎಲ್ಲ ಮರೆಯುತ್ತಾರೆ.

ಈ ತನಕ ಯಾವ ವ್ಯವಸ್ಥೆಯ ಭಾಗವಾಗಿದ್ದರೋ ಆ ವ್ಯವಸ್ಥೆಗೆ ತಾವು ಹಾಸ್ಯಾಸ್ಪದವಾಗಿ ನಿಂತುಬಿಡುತ್ತಾರೆ.

ಎಂ.ಟಿ.ಯ ಕೈವಾಡವೂ ಇದಕ್ಕೆ ಸಾಕಷ್ಟು ಸಹಕಾರಿಯಾಗಿತ್ತು ಎಂಬುದು ಮರೆಯಲಾಗದ ಅಂಶ. ರೋಜಾಳ ಎಲ್ಲ ವ್ಯವಹಾರಗಳ ವರದಿ ಒಪ್ಪಿಸುವ ಎಂ.ಟಿ. ಜೀಕೆ ಮಾಸ್ತರರಿಗೆ ವೀರ್ಯವೃದ್ಧಿಯಾಗುವ ಆಯುರ್ವೇದಿಯ ಟಾನಿಕ್‌ಗಳನ್ನು ತಂದು ಕೊಡುತ್ತಿದ್ದ. ಅಚ್ಚರಿಯೆಂದರೆ ಅವನು ಇದೆಲ್ಲ ಬೇರೆ ಯಾರ ಬಳಿಯೂ ಬಾಯಿ ಬಿಟ್ಟಿರಲಿಲ್ಲ.

ಅಂದು ರಾತ್ರಿ ತನ್ನ ಪೇಪರ ನೋಡಲು ಅವರ ಮನೆಗೆ ಬಂದಿದ್ದ ರೋಜಾ, ಹೋಗುವಾಗ ರಿಜಲ್ಟ ದಿನ ಹುಬ್ಬಳ್ಳಿಯ ಅಶೋಕಾ ಹೊಟೆಲ್‌ಗೆ ಬರಲು ಹೇಳಿದಳು. ತನ್ನನ್ನು ತಬ್ಬಿಕೊಳ್ಳಲು ಬಂದ ಅವರ ಮೇಲೆ ಡಬ್ಬಿಯಲ್ಲಿಯ ರಬ್ಬರ್ ಹಾವನ್ನು ಎಸೆದು ಓಡಿಹೋದಳು. ಹಾವು ಅವರ ಮೈಯಲ್ಲಿ ವಾಸನೆಯ ತೀವ್ರ ವಿಷ ಪ್ರಸರಿಸಿತು. ಅದರೊಂದಿಗೆ ಆಟವಾಡುತ್ತ, ರೋಜಾಳ ಮೇಲೆ ಅದನ್ನೆಸೆದು ಅವಳ ಸಹಸ್ರ ಭಂಗಿಗಳನ್ನು ಕಲ್ಪನೆಯ ಕಣ್ಣಲ್ಲಿ ನೋಡುತ್ತ ಜೀಕೆ ಮಾಸ್ತರರು ಇಡೀ ರಾತ್ರಿಯೆಲ್ಲ ಎಚ್ಚರವಾಗೇ ಕುಳಿತರು.

ಬೆಳಗ್ಗೆ ಹೆಂಡತಿಯ ಬಳಿ ಹೋದಾಗ ಅವಳು ಶಿವನ ಪಾದ ಸೇರಿದ್ದಳು. ಅವಳ ಕೈಯಲ್ಲಿ ರೋಜಾ ಜೀಕೆಯವರಿಗೆ ಬರೆದ ಪ್ರೇಮಪತ್ರವಿತ್ತು. ಗಿರಿಜಮ್ಮ ಅವರ

ಹೆಂಡತಿಯಾಗಿ ಕರ್ತವ್ಯದ ಒಂದು ಭಾಗ ಮಾತ್ರವಾಗಿದ್ದಳೇ ಹೊರತು ರೋಜಾ ಳಂತೆ ಅವರೆಡೆಗೆ ಪ್ರಣಯದ ಬೆಂಕಿ ಹೊತ್ತಿಸಿರಲಿಲ್ಲ. ಅವಳ ಸನಿಹದಲ್ಲಿ ಸಿಕ್ಕ ತೀವ್ರ ಪ್ರೇಮದ ಅಥವಾ ಕಾಮದ ಅನುಭವ ಜೀಕೆಗೆ ಯಾವ ಹೆಣ್ಣಿನಿಂದಲೂ ಸಿಕ್ಕಿರಲಿಲ್ಲ.

ಜೀಕೆ ಹುಬ್ಬಳ್ಳಿಗೆ ಬಂದು ರೂಮು ಹಿಡಿದರು. ಬೀಗ ಕೌಂಟರ್‌ನಲ್ಲಿಟ್ಟು ತನ್ನನ್ನು ಕೇಳಿಕೊಂಡು ರೋಜಾ ಬಂದರೆ ಕೊಡುವಂತೆ ತಿಳಿಸಿ ಯೂನಿವರ್ಸಿಟಿ ಕ್ಯಾಂಪಸಿಗೆ ಹೋದರು. ರಿಜಲ್ಟ್ ನೋಡಿದರು. ಈ ಸಲ ತಮ್ಮ ಕ್ಲಾಸಿಗೆ ಆರು ಫಸ್ಟ್‌ಕ್ಲಾಸ್ ಸಿಕ್ಕಿತ್ತು. ಸಮಾಧಾನವಾಯ್ತು. ಎಲ್ಲಿಯೂ ರೋಜಾ ಕಾಣಿಸಲಿಲ್ಲ. ಆಫೀಸಿನಲ್ಲಿ ಹೋಗಿ ಫಲಿತಾಂಶ ಪತ್ರಿಕೆ ನೋಡಿದರೆ ರೋಜಾ ಮತ್ತು ಗಿರೆಪ್ಪ ಇಬ್ಬರೂ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದರು ! ರೋಜಾಳೇನೋ ಸಂಸ್ಕೃತ ಪತ್ರಿಕೆಯ ಗದ್ದಲದಿಂದ ಪ್ರಥಮಶ್ರೇಣಿ ಗಿಟ್ಟಿಸಿದ್ದಳು. ಆದರೆ ಗಿರೆಪ್ಪ ? ಅಂದು ರೋಜಾ ತನ್ನ ಗೆಳತಿಯೊಬ್ಬಳ ಪತ್ರಿಕೆಗೂ ನಂಬರ್ ಹಾಕುವುದಾಗಿ ಕೇಳಿ, ಹಾಕಿ ಸಹಿ ಮಾಡಿಸಿ ಕೊಂಡಿದ್ದು ಗಿರೆಪ್ಪನ ಪತ್ರಿಕೆಯಾಗಿದ್ದಿರಬಹುದೆ ಎಂಬ ಸಂಶಯ ಅವರ ಮಿದುಳು ಕೊರೆಯಿತು. ಪಾಸ್‌ಕ್ಲಾಸಿಗೂ ಲಾಯಕ್ಕಿಲ್ಲದ ಗಿರೆಪ್ಪ ಫಸ್ಟ್‌ಕ್ಲಾಸ್ ಬರುವು ದೆಂದರೇನು......

ಎಲ್ಲೋ ತಮಗೆ ಮೋಸವಾಗಿದೆ ಎಂದುಕೊಳ್ಳುತ್ತಲೇ ಹೋಟೆಲ್‌ಗೆ ಬಂದರೆ ತಮ್ಮ ರೂಮಿನಲ್ಲಿ ರೋಜಾ ಇದ್ದಾಳೆಂದು ತಿಳಿದು ಹುಮ್ಮಸ್ಸಿನಿಂದ ಬಾಗಿಲು ತಟ್ಟಿ ದರು. ಬಾಗಿಲು ತೆರೆದು ನಿಂತ ಗಿರೆಪ್ಪ ಕೈಯಲ್ಲಿಯ ಸಿಗರೇಟೆಸೆದು 'ಬರ್ರೀ ಸರ್' ಎಂದಾಗ ಒಳಗಿನಿಂದ 'ಯಾರೋ ಗಿರಿ' ಎನ್ನುವ ರೋಜಾಳ ದನಿ ತೂರಿಕೊಂಡು ಬಂದಾಗ ಜೀಕೆಯ ನೆತ್ತರು ನೆತ್ತಿಗಡರಿ ಬೀಳುವುದರಲ್ಲಿದ್ದರು. ಗಿರೆಪ್ಪ ಅವರನ್ನು ಹಿಡಿದ. ಅವರು ಮೂರ್ಛೆ ಹೋದರು.

ಅವರಿಗೆಚ್ಚರ ಬಂದಾಗ ರೋಜಾ ಅವರ ಕಾಲು ತಿಕ್ಕುತ್ತ ತಾನೂ ಮತ್ತು ಗಿರೆಪ್ಪ ಕೂಡಿ ಅವರೊಂದಿಗೆ ಆ ಪ್ರಣಯದ ಆಟವಾಡಿದ್ದನ್ನು ತಿಳಿಸಿ ಕ್ಷಮೆ ಕೋರಿ ದಳು. ಜೊತೆಗೆ ಗಿರೆಪ್ಪನೂ ಸಹ.

ಪಾಪ, ಮುದುಕ ಜೀಕೆ ಮೋಸಹೋಗಿದ್ದರು. ಹಾಸ್ಯಾಸ್ಪದವಾಗಿದ್ದರು. ಉತ್ತರ ಪತ್ರಿಕೆಯಲ್ಲಿ ಸಾಚಾ ಪ್ರೇಮ ಎಂದುಕೊಂಡಿದ್ದ ರೋಜಾಳ ಕೈಯಿಂದ ಮಾರ್ಕ್ಸ್ ಹಾಕಿಸಿ ಭ್ರಷ್ಟಾಚಾರ ಮಾಡಿದ್ದರು. ಇವಳಿಗಾಗಿ ಹೆಂಡತಿಯನ್ನು ಕಳೆದು ಕೊಂಡಿದ್ದರು. ತಮ್ಮ ಜೀವವೂ ತೆರುವವರಿದ್ದರು. ಇದೆಲ್ಲ ನೆನಪಾಗಿ ಜೀಕೇ ನಾಚಿಕೆಯಿಂದ ಕುಗ್ಗಿದರು. ಅವರ ಕಣ್ಣುಗಳಿಂದ ಕಂಬನಿ ಸದ್ದಿಲ್ಲದೆ ಜಾರತೊಡಗಿತು. ಶಾಪ ಹಾಕುವವರಂತೆ ಅವರಿಬ್ಬರನ್ನೂ ನೋಡಿದರು. ನಿಧಾನವಾಗಿ ಎದ್ದು ಕೆಳಗಿಳಿದು ಹೋದರು.

ಅವರು ಹೊದೆಸಿದ ; ತಮ್ಮ ಕೋಟು ತೊಟ್ಟ ಅನಾಥ ವ್ಯಕ್ತಿ ಸತ್ತಾಗ ಜೀಕೆ ಮಾಸ್ತರರು ಸತ್ತರೆಂಬ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. ಕಾಲೇಜಿನಲ್ಲಿ ಅವರ

ಆತ್ಮಕ್ಕೆ....ಶಾಂತಿ ಕೋರಿದರು. ಎಂ.ಟಿ ಪ್ರಿನ್ಸಿಪಾಲನಾದ.

ಒಂದು ದಿನ ಇದ್ದಕ್ಕಿದ್ದಂತೆ ದಾರಿಯಲ್ಲಿ ಪ್ರತ್ಯಕ್ಷರಾದ ಜೀಕೆ ರೋಜಾ ಗಿರೆಪ್ಪ ನನ್ನು ಕರೆದುಕೊಂಡು ದೂರದ ಮೈದಾನದಲ್ಲಿ ಕುಳಿತು ಎಲ್ಲ ವಿವರಿಸಿ : ಸತ್ತದ್ದು ತಾವಲ್ಲ ಎಂದರು. ಗಿರೆಪ್ಪನಿಗೆ ಕೆಲಸಕ್ಕಾಗಿ ಹಿಂದಿನ ದಿನಾಂಕದ ಪತ್ರವೊಂದನ್ನು ತಮ್ಮ ಸ್ನೇಹಿತನಿಗೆ ಬರೆದುಕೊಟ್ಟರು. ತಮ್ಮ ಮನೆಯನ್ನು ರೋಜಾಳಿಗೆ ಬರೆದು ವಿಲ್‌ಮಾಡಿ, ತಮ್ಮಲ್ಲಿದ್ದ ಹಣ ಅವರಿಗೆ ಕೊಟ್ಟು ತಾವು ಕತ್ತಲೆಯಲ್ಲಿ ಮರೆಯಾದರು.

ಕಂಬಾರರ ಎಲ್ಲ ಕಾದಂಬರಿಗಳಲ್ಲಿಯಂತೆ ಇಲ್ಲಿಯೂ ಕಾಮವೇ ಪ್ರಧಾನ ಪಾತ್ರ ವಹಿಸಿ ಕತೆಯ ಉದ್ದಗಲಕ್ಕೂ ತಾನೇ ತಾನಾಗಿ ನಿಂತು ಸನ್ನಿವೇಶಕ್ಕನುಗುಣವಾಗಿ ಪಾತ್ರಗಳನ್ನು ನಡೆಸುತ್ತದೆ. ಲೇಖಕರ ಮಾಂತ್ರಿಕ ಭಾಷೆಯ ಮೋಡಿ ಕತೆಯ ಚೆಲುವಿಗೆ ಮೆರಗು ಕೊಡುತ್ತ ಓದುಗರ ಕುತೂಹಲವನ್ನು ಕೆರಳಿಸುವಲ್ಲಿ ಸಫಲವಾಗಿದೆ. ಉತ್ತರ ಕರ್ನಾಟಕದ ಕನ್ನಡ ಭಾಷೆಯ ಸೊಗಸು ಕಾದಂಬರಿಯ ಮತ್ತೊಂದು ಆಕರ್ಷಣೆ. ಅಲ್ಲಲ್ಲಿ ಕೆಲವು ಘಟನೆಗಳು ತೀರ ಹಾಸ್ಯಾಸ್ಪದ ಎನಿಸಿ ಸಹಜತೆಯಿಂದ ದೂರ ಸರಿಯುತ್ತವೆ. ನಿದರ್ಶನಾರ್ಥವಾಗಿ ಕೆಳಗಿನ ಸನ್ನಿವೇಶಗಳನ್ನು ಗಮನಿಸ ಬಹುದು.

ಅಂಥ ಕಟ್ಟುನಿಟ್ಟಿನ, ಶಿಸ್ತಿನ ವ್ಯಕ್ತಿಯಾದ ಜೀಕೆ ತಮ್ಮ ಕಾಲೇಜಿನ ಚೇಂಬರ್‌ನಲ್ಲಿಯೇ ರೋಜಾಳನ್ನು ಅಪ್ಪಿ ಮುದ್ದಿಸುವುದು.

ಇನ್ನೊಂದು, ಅಷ್ಟೆಲ್ಲ ಕರ್ತವ್ಯ ಪ್ರಜ್ಞೆ ಇರುವ ವಯಸ್ಸಾದ ಜೀಕೆ ತಮ್ಮಲ್ಲಿಗೆ ವ್ಯಾಲ್ಯುಯೇಶನ್‌ಗಾಗಿ ಬಂದಿದ್ದ ಉತ್ತರ ಪತ್ರಿಕೆಗಳನ್ನು ಖಾಲಿಯಾಗಿಯೇ ರೋಜಾಳ ಮುಂದಿಟ್ಟು 'ನಿನಗೆ ಬೇಕಾದಷ್ಟು ನಂಬರ್‌ಗಳನ್ನು ನೀನೇ ಹಾಕಿಕೊ' ಎನ್ನುವುದು. ರೋಜಾಳ ಪತ್ರಿಕೆಗೆ ತಾವೇ ಜಾಸ್ತಿ ಮಾರ್ಕ್ಸ್ ಹಾಕಬಹುದಿತ್ತು. ಅದೂ ಅಲ್ಲದೆ ಅವಳು ನಂಬರ್ ಹಾಕಿದಾಗಲೂ ಅದನ್ನು ನೋಡದೆ ಅವಳನ್ನೇ ನೋಡುತ್ತ ಸಹಿ ಮಾಡುವುದು ತೀರ ಅಸಹಜ. ಗಿರೆಪ್ಪನ ಪೇಪರನ್ನೂ ಅವರು ನೋಡುವುದಿಲ್ಲ ವಂತೆ !

ಡಾ॥ ಚಂದ್ರಶೇಖರ ಕಂಬಾರರರದು ನುರಿತ ಲೆಕ್ಕಣಿಕೆ, ಸಾಣೆ ಹಿಡಿದಿಟ್ಟ ಭಾಷೆ. ಗಟ್ಟಿಯಾದ ಅನುಭವದ ಹಿನ್ನಲೆಯಲ್ಲಿಯ ಬರಹ ಓದುಗರ ಮನಸ್ಸಿನಲ್ಲಿ ಗಟ್ಟಿಯಾಗಿ ನಿಲ್ಲುತ್ತದೆ. ಕೊನೆಗೆ ಜೀಕೆಯವರಲ್ಲಿ ಉಳಿಯುವುದು ಕಾಮವಲ್ಲ. ಬರೀ ಪವಿತ್ರ ಪ್ರೇಮ. ಮೊಸರು ಕಡೆದಾಗ ಮೇಲೆ ತೇಲುವ ಬೆಣ್ಣೆಯಂತೆ ಜೀಕೆಯವರ ಹೃದಯದಲ್ಲಿ ತೇಲಿ ನಿಂತದ್ದು ಮಮತೆ, ವಾತ್ಸಲ್ಯ. ಅಂತೆಯೇ ಅವರ ಕಣ್ಣಿಗೆ ರೋಜಾ ಗಿರೆಪ್ಪ ಇಬ್ಬರೂ ಮಕ್ಕಳಂತೆಯೇ ಕಾಣುತ್ತಾರೆ. ಅವರಲ್ಲಿ ಹಿಂದೊಮ್ಮೆ ಮತ್ಸರದ ಭಾವನೆಯನ್ನು ಎಚ್ಚರಗೊಳಿಸಿದ್ದ ಗಿರೆಪ್ಪನೂ ಅವರಿಗೆ ತಾವು ಆರಾಧಿಸು ತ್ತಿರುವ ದೇವರೇ ಬಾಲರೂಪ ಹೊತ್ತಂತೆ ಕನಸು ಕಾಣುತ್ತಾರೆ. ಕಾದಂಬರಿಯ

ಕಸುವು ಅಡಗಿರುವುದು ಇಲ್ಲಿಯೇ. 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ಅರ್ಥ ಪೂರ್ಣವಾಗುವುದು ಸಹ ಇದೇ ಕೊನೆಯಲ್ಲಿ. ಇಂಥ ಮುಕ್ತಾಯವನ್ನು ಕಾದಂಬರಿ ಸಾಧಿಸದಿರುತ್ತಿದ್ದರೆ ಅದು ಬರೀ ಹಾಸ್ಯ ಕೃತಿಯಾಗಿರುತ್ತಿತ್ತೇ ವಿನಃ ಕಂಬಾರರ ಕಾದಂಬರಿಯಾಗುತ್ತಿರಲಿಲ್ಲ.

ಜೀಕೆ ಮಾಸ್ತರರ ಬಗ್ಗೆ ಕೊನೆಗುಳಿಯುವುದು 'ಪಾಪ, ಮುದುಕಗ ಹಿಂಗಾಗ್ಬಾರ್‍ದಿತ್ತು.....' ಎನ್ನುವ ಅಗಾಧ ಕರುಣೆ. ರೋಜಾ ಜೀಕೆಯಲ್ಲಿ ಹುದುಗಿದ್ದ ಸುಪ್ತ ಕಾಮವನ್ನು ಬಡಿದೆಬ್ಬಿಸಿದಂತೆ, ಗಿರೆಪ್ಪ ಅವರಲ್ಲಿಯ ಮತ್ಸರವನ್ನು ತಟ್ಟಿ ಎಚ್ಚರಿಸಿದಂತೆ, ಕಾದಂಬರಿಕಾರರು ಓದುಗರಲ್ಲಿಯ ಅಂತಃಕರುಣೆಯನ್ನು, ಸಹಾನು ಭೂತಿಯನ್ನು ಬಗೆದು ಹೊರಗೆಳೆಯುವುದರಲ್ಲಿ ಸಫಲರಾಗಿದ್ದಾರೆ.

ಈ ಕಾದಂಬರಿಯಲ್ಲಿ ಯಾವ ಪಾತ್ರಕ್ಕೂ ಲೇಖಕರು ಅನ್ಯಾಯವೆಸಗಿಲ್ಲ. ಎಲ್ಲ ಪೋಷಕ ಪಾತ್ರಗಳಿಗೂ ಸರಿಸಮಾನವಾದ ಅವಕಾಶ ಸಿಕ್ಕು ಅವೂ ಬೆಳೆದು ನಿಂತಿವೆ.

ಗ್ರಾಮೀಣ ಬದುಕಿನ ಸಮರ್ಥ ಚಿತ್ರಣ: 'ವೈಶಾಖ'

ಡಾ॥ ಶಾಂತಿನಾಥ ದಿಬ್ಬದ

ತಮ್ಮಲ್ಲಿ ಹುದುಗಿದ ನೇರ ಅಭಿವ್ಯಕ್ತಿ ಶಕ್ತಿ, ಜೀವನ ಸಂಪರ್ಕ, ಚಿಕಿತ್ಸಕ ಪ್ರಜ್ಞೆಗಳಿಂದಾಗಿ ಕನ್ನಡ ಕಾದಂಬರಿಗಳು ಇತ್ತೀಚೆಗೆ ಸಾಹಿತ್ಯ ಪ್ರಪಂಚದಲ್ಲಿ ವಿಶಿಷ್ಟಸ್ಥಾನ ಪಡೆಯುತ್ತಿವೆ. ಸಾಮಾಜಿಕ ಕಾದಂಬರಿಗಳಿಗಂತೂ ಈ ಮಾತು ಪ್ರತಿಶತ ಅನ್ವಯವಾಗುತ್ತದೆ. ಸಮಾಜ ಜೀವನವನ್ನು ಆಯಾ ಸಂದರ್ಭದ ಜೀವಂತಿಕೆಯೊಂದಿಗೆ ಚಿತ್ರಿಸುವಲ್ಲಿ ಕಾದಂಬರಿಕಾರ ಕವಿಗಿಂತ ಹೆಚ್ಚು ಮುಕ್ತನಾಗಿ ಕಾರ್ಯ ನಿರ್ವಹಿಸುತ್ತಾನೆ. ಕಾದಂಬರಿಗಳಲ್ಲಿ ಶಿಷ್ಟ ಸಮಾಜವನ್ನು ಕುರಿತ ಕೃತಿಗಳು ಹಾಗೂ ಜನಪದ ಸಮಾಜವನ್ನು ಕುರಿತ ಕೃತಿಗಳು ಎಂದು ಮತ್ತೆ ವಿಭಜಿಸಿ ನೋಡಬಹುದು. ವಿಶೇಷವಾಗಿ ಜನಪದ ಸಮಾಜ ಹಾಗೂ ಸಾಮಾಜಿಕ ಪರಿಸರವನ್ನು ಕುರಿತು ರಚಿಸಲಾದ 'ಗ್ರಾಮಾಯಣ', 'ಕಾನೂನು ಹೆಗ್ಗಡತಿ'. 'ಮಲೆಗಳಲ್ಲಿ ಮದುಮಗಳು' 'ನಿಸರ್ಗ' ಮುಂತಾದ ಕೃತಿಗಳು ಎರಡನೆಯ ಭಾಗದಲ್ಲಿ ಪ್ರಸಿದ್ಧಿ ಪಡೆದವು. ಈ ಮಾಲಿಕೆಯಲ್ಲಿ ಧೈರ್ಯದಿಂದ ಸೇರಿಸಬಹುದಾದ ಇತ್ತೀಚಿನ ಇನ್ನೊಂದು ಕೃತಿ 'ವೈಶಾಖ'.

ಪ್ರದೇಶವೊಂದರ, ಲೋಕಜೀವನಕ್ಕೆ ಚದುರಂಗರು ಒಡ್ಡಿದ ವಿಚಾರ ವಿಮರ್ಶಾ ದರ್ಪಣವೇ 'ವೈಶಾಖ'

ಕಾದಂಬರಿಯ ಹಮ್ಮು-ಹರಪುಗಳನ್ನು ನೋಡಿದಾಗ ಇದು ಸುಮಾರು ವರ್ಷಗಳಿಂದ ಲೇಖಕರ ಮನದಲ್ಲಿ ಸುತ್ತಿ ಸುಳಿಯುತ್ತಿದ್ದ ಸಂಕೀರ್ಣವಿಚಾರಗಳ ಮೊತ್ತವೆಂಬುದು ಓದುಗರಿಗೆ ಭಾಸವಾಗದಿರದು. ಕಾದಂಬರಿಯ ವಿಷಯ ವಿಸ್ತಾರವೇ ಲೇಖಕರ ಜೀವನಾನುಭವ ವಿಸ್ತಾರವೂ ಆಗಿದೆಯೆಂಬ ಮಾತನ್ನು ಈ ಸಂದರ್ಭದಲ್ಲಿ ಒತ್ತಿ ಹೇಳಬಹುದು.

ವಿಮರ್ಶಕರಿಂದ 'ಗ್ರಾಮಭಾರತ'ವೆಂದು ಕರೆಯಿಸಿಕೊಂಡಿರುವ 'ವೈಶಾಖ'ದಲ್ಲಿ ಗ್ರಾಮೀಣ ಬದುಕಿನ ವಾಸ್ತವಚಿತ್ರಣ ಹಾಗೂ ವಿಶ್ಲೇಷಣೆಗಳು ನಾವು ಗಮನಿಸ ಬೇಕಾದ ಎರಡು ಮಹತ್ವದ ಅಂಶಗಳು. ಇಲ್ಲಿ ಚಿತ್ರಿತವಾದ ಸಮಾಜ ಕೇವಲ ಪ್ರಾತಿ ನಿಧಿಕ. ಆದರ ಹಿಂದೆ ಇಡೀ ಭಾರತದ ಗ್ರಾಮಸಮಾಜವೇ ವ್ಯಾಪಿಸಿನಿಂತಿದೆ. ಧರ್ಮ ಹಾಗೂ ದ್ರವ್ಯಗಳ ವಿಷಯದಲ್ಲಿ ತಲೆದೋರಿದ ಅಸಮಾನತೆಗಳು ಭಾರತಕ್ಕೆ ಬಡಿದುಕೊಂಡ ಪೀಡೆಗಳು. ಇದರಿಂದಾಗಿ ಮೇಲು-ಕೀಳೆಂಬ ವರ್ಗಗಳು, ಶೋಷ ಕರು–ಶೋಷಿತರು ಎಂಬ ಸ್ತರಗಳು ಹುಟ್ಟಿಕೊಂಡಿವೆ. ಇದೆಲ್ಲ ಹೀಗೇಕೆ ಎಂಬ ಪ್ರಶ್ನಾರ್ಥಕಮತಿ, ಇದು ಹೀಗಿರಬಾರದು ಎಂಬ ವಿವೇಕದ ನಿರ್ಧಾರ, ಬಿದ್ದವರನ್ನು ಎಬ್ಬಿಸಬೇಕು ಎಂಬ ಮಾನವೀಯ ಭಾವ ಇವು ಕಾದಂಬರಿಯ ಒಳತುಡಿತಗಳು. ಕಾದಂಬರಿಯ ಪ್ರಮುಖಪಾತ್ರ ಹರಿಜನನ ಲಕ್ಕ. ಆತ ಭಾರತದ ಶೋಷಿತ ಕೋಟಿಯ ಪ್ರತಿನಿಧಿ. ಲಕ್ಕನ ಬದುಕಿನ ಏಳುಬೀಳುಗಳನ್ನು ಚಿತ್ರಿಸುವುದರೊಂದಿಗೆ ಲೇಖಕರು ಅದನ್ನು ಯಶಸ್ವಿಯಾಗಿ ಸಾಮಾನ್ಯೀಕರಣಗೊಳಿಸಿದ್ದಾರೆ. ಈ ವ್ಯಾಪಕ ದೃಷ್ಟಿಕೋನವೇ ಕಾದಂಬರಿಯ ಪರಿಣಾಮ–ಘನತೆಗಳನ್ನು ಇಮ್ಮಡಿಗೊಳಿಸಿದೆ.

ಲಕ್ಕ, ಬ್ರಾಹ್ಮಣ ಕೇರಿಯಲ್ಲಿ ದುಡಿಯುವಾತ. ಕೃಷ್ಣಶಾಸ್ತ್ರಿಗಳು ವ್ಯಾಪಾರಿಗಳು. ಅದರ ಮಗ ವಿಶ್ವ ರುಕ್ಮಿಣಿಯ ಪತಿ. ಲಗ್ನವಾದ ಕ್ಷಿಪ್ರದಲ್ಲಿ ತೀರಿಹೋದ. ವಿಧವೆ ರುಕ್ಮಿಣಿಗೆ ಕೇಶಮುಂಡನಾದಿ ಸಂಸ್ಕಾರ ಮಾಡಿಸಲು ಬ್ರಾಹ್ಮಣ ಸಮಾಜ ಹವಣಿಸಿದಾಗ ಕೃಷ್ಣಶಾಸ್ತ್ರಿಗಳು ಅದನ್ನು ಪ್ರತಿಭಟಿಸುತ್ತಾರೆ. ರುಕ್ಮಿಣಿ ಹೇಗೋ ಬದುಕುತ್ತಾಳೆ. ಹೀಗಿದ್ದಾಗ ಒಂದು ದಿನ ಮಾವ ಕೃಷ್ಣಶಾಸ್ತ್ರಿಗಳು ಸೊಸೆ ರುಕ್ಮಿಣಿಯನ್ನು ಭೋಗಿಸಿಬಿಡುತ್ತಾರೆ. ಪ್ರತಿಭಟಿಸುವ ಪರಿಸ್ಥಿತಿಯಾಗಲಿ, ಧೈರ್ಯ ವಾಗಲಿ ರುಕ್ಮಿಣಿಯಲ್ಲಿ ಉಳಿದಿರಲಿಲ್ಲ. ತಮ್ಮ ತಪ್ಪಿನ ಅರಿವಾದ ತಕ್ಷಣ ಕೃಷ್ಣ ಶಾಸ್ತ್ರಿಗಳ ಬದುಕು ವಿರಕ್ತಿಯ ಮಾರ್ಗ ಹಿಡಿಯುತ್ತದೆ. ದೇಹದ ರುಚಿಯುಂಡ ರುಕ್ಮಿಣಿ ಒಮ್ಮೆ ಲಕ್ಕನನ್ನು ಒತ್ತಾಯಪೂರ್ವಕವಾಗಿ ತನ್ನ ದೇಹಸುಖಕ್ಕಾಗಿ ಬಳಸಿ ಕೊಳ್ಳುತ್ತಾಳೆ. ಆಕಾಶ ನೋಡಲು ನೂಕುನುಗ್ಗಲು ಯಾಕೆ ? ಎಂಬಂತೆ ಹಾದರದ ಸುದ್ದಿ ಹಬ್ಬಿಸಲು ಶ್ರಮಿಸಬೇಕೆ ? ಸುದ್ದಿಯ ವಿಷಗಾಳಿ ಊರ ತುಂಬ ಬೀಸಿತು. ಲಕ್ಕ–ರುಕ್ಮಿಣಿಯರನ್ನು ಊರ ಜನ ಧಿಕ್ಕರಿಸಿದರು. ಕೃಷ್ಣಶಾಸ್ತ್ರಿಗಳಿಗೂ ಒಳಗೊಳಗೆ ಹರಳು ಕಡಿದ ಅನುಭವ. ಊರ ಜನ, ವಿಶೇಷವಾಗಿ ಬ್ರಾಹ್ಮಣರು ಈ ದೋಷವ

ಬಗ್ಗೆ ಪಂಚಾಯಿತಿ ಸೇರಿಸಿದರು. ಲಕ್ಕನನ್ನು ಊರು ಬಿಡಿಸಿದರು. ಮತ್ತೆ ರುಕ್ಮಿಣಿಯನ್ನು ಬ್ರಾಹ್ಮಣಸಂಸ್ಕಾರಗಳಿಗೆ ಗುರಿಮಾಡಬೇಕೆಂದು ಯೋಚಿಸಿದರು. ನಡೆಯಬಹುದಾದ ದುರಂತಕ್ಕೆ ಹೆದರಿ ರುಕ್ಮಿಣಿ ತಾನಾಗಿಯೇ ಊರು ಬಿಟ್ಟು ಹೋದಳು. ಊರಪಕ್ಕದ ಚಿತ್ರಮೂಲನ ಕೋಟೆಯಲ್ಲಿ ಅವಳ ಪ್ರೇತ ಕೂಗುತ್ತದೆಯೆಂಬ ಸುದ್ದಿ ಆಮೇಲೆ ಹಬ್ಬಿತು. ಇತ್ತ ಊರು ಬಿಟ್ಟ ಲಕ್ಕ ಗೋಸು ಸಾಬಿಯ ಸಹೃದಯತೆಯಿಂದ ಪಕ್ಕದ ಹಳ್ಳಿ ಶಕುನಕೊಪ್ಪದಲ್ಲಿ ವಾಸಿಸಿದ. ಲಕ್ಕನ ತಾಯಿ ತೀರಿದಳು. ತಂಗಿ ಶಿವುನಿಯ ನೆನಪಾಗಿ ಲಕ್ಕ ಊರಿಗೆ ಬಂದ. ಅವಳನ್ನು ಕೇಶವಯ್ಯನ ತೋಳತೆಕ್ಕೆಯಲ್ಲಿ ಕಂಡು ನಿರಾಶನಾದ. ನೊಂದು ಕಾಡಿನಲ್ಲಿ ನಡೆದ. ಬದುಕಿನಲ್ಲಿ ಹತಾಶರಾದ ಕೃಷ್ಣಶಾಸ್ತ್ರಿಗಳು ಕಾಶಿಗೆ ಹೋಗಬಯಸಿದರಾದರೂ ತಂಗಿಯ ಮಗಳು ಪುಟ್ಟಸರಸಿಯ ಬಗ್ಗ ಯೋಚಿಸಿ ಮನ ಬದಲಾಯಿಸಿದರು. ಹೀಗೆ ಈ ಕಥೆಯು ತ್ರಿಕೋನದ ಮೂರು ಭುಜಗಳಂತಿರುವ ಲಕ್ಕ, ರುಕ್ಮಿಣಿ, ಕೃಷ್ಣಶಾಸ್ತ್ರಿಗಳು ಮೂರುಕಡೆ ಅಗಲುವುದರೊಂದಿಗೆ ಕಥೆ ಪರ್ಯವಸಾನಗೊಳ್ಳುತ್ತದೆ. ಹೀಗೆ ಹಳ್ಳಿಯೊಂದರ ದುರಂತ ಕಥೆ 'ವೈಶಾಖ'ದ್ದು.

ಮಹಾಭಾರತದ ಕುರುಕ್ಷೇತ್ರದಂತೆ 'ವೈಶಾಖ'ದ ಕರ್ಮಕ್ಷೇತ್ರ ದರುಮನಹಳ್ಳಿ. ವನವಾಸದ ಕಾಲಕ್ಕೆ ಪಾಂಡವರು ಇಲ್ಲಿ ತಂಗಿದ್ದರೆಂಬ ಮಾತು ಕೃತಿಯಲ್ಲಿ ಬರುತ್ತದೆ. ಊರ ಪಕ್ಕದ ಚಿತ್ರಮೂಲನ ಕೋಟೆ ದ್ರೋಣನಿಂದ ರಚಿತವಾದ ಚಕ್ರವ್ಯೂಹವನ್ನು ನೆನಪಿಸುವಂಥದು. ಅಭೇದ್ಯವಾದ ಆ ಹಳೆಯ ಕೋಟೆ ಊರಿನ ಜಿಡ್ಡುಗಟ್ಟಿದ ಸಂಪ್ರದಾಯ ಹಾಗೂ ಸಾಂಸ್ಕೃತಿಕ ಸ್ಥಗಿತತೆ ಮತ್ತು ಸಂಕೋಲೆಯ ಸಂಕೇತ.

ವೈಶಾಖ ಶೋಷಣೆಯನ್ನು ಕುರಿತಾದ ಕೃತಿ. ಇಲ್ಲಿ ನಾವು ಎದುರಿಸುವುದು ಮೇಲುಕೀಳೆಂಬ ಎರಡು ವರ್ಗಗಳನ್ನು; ಬ್ರಾಹ್ಮಣ–ಹರಿಜನ–ಶಿವಾಚಾರದವರೆಂಬ ಮೂರು ಜಾತಿಗಳನ್ನು: ಧಾರ್ಮಿಕ. ಆರ್ಥಿಕ ಹಾಗೂ ಲೈಂಗಿಕ ಎಂಬ ಮೂರು ಬಗೆಯ ಶೋಷಣೆಗಳನ್ನು ಈ ವಿಷಯಗಳಿಗೆ ಹೊಂದಿಕೊಂಡಂತೆ ಇನ್ನೂ ಅನೇಕ ಪ್ರಸಂಗಗಳನ್ನು ನಾವು ಕಾಣುತ್ತೇವೆಯಾದರೂ ಅವೆಲ್ಲ ಮೂಲದ ಉದ್ದೇಶಕ್ಕೆ ಪೂರಕಗಳಾಗಿವೆ.

ಬ್ರಾಹ್ಮಣರು (ಉತ್ತಮರು), ವೀರಶೈವರು (ಶಿವಾಚಾರದವರು) ಇವರಿಬ್ಬರೂ ಸಮಾಜದಲ್ಲಿ ಪ್ರತಿಷ್ಠಿತರು–ಮೇಲಿನವರು. ಹರಿಜನರು ಅಲ್ಲಿ ಗೌಣ-ಕೆಳಗಿನವರು. 'ಮೇಲಿನ ಜಾತಿಯ ಯಜಮಾನರು' ಕೆಳಗಿನವರನ್ನು ಮನಬಂದಂತೆ ಶೋಷಿಸುತ್ತಿದ್ದುದಕ್ಕೆ ಕಾದಂಬರಿ ಅನೇಕ ನಿದರ್ಶನಗಳನ್ನೊದಗಿಸುತ್ತದೆ. ಮೇಲೆ ತಿಳಿಸಲಾದ ಮೂರು ಬಗೆಯ ಶೋಷಣೆಗಳು ತುಂಬ ಮಹತ್ವದವು: ಬ್ರಾಹ್ಮಣರ ಅತಿಯಾದ ಶಾಸ್ತ್ರಬದ್ಧ ಬದುಕು. ಮಡಿವಂತಿಕೆ ಹಾಗೂ ಇತರರನ್ನು ಕನಿಷ್ಠರಂತೆ ಕಾಣುವುದು ಇವು ಬಹಿರಂಗ ಧಾರ್ಮಿಕ ಶೋಷಣೆಯಾದರೆ, ತಪ್ಪು ಆಚರಣೆಗಳಿಂದಾಗಿ ಸ್ವಧರ್ಮಬಾಂಧವರನ್ನೇ ಮಾನಸಿಕವಾಗಿ ಪೀಡಿಸುವುದು ಆಂತರಿಕ ಧಾರ್ಮಿಕ

ಶೋಷಣೆ. ದೀನದಲಿತರನ್ನು ಬ್ರಾಹ್ಮಣರು–ಶಿವಾಚಾರದವರು ಜೀತ ಇರಿಸಿಕೊಳ್ಳುವುದು. ಸಾಲ ಕೊಟ್ಟು ಆಸ್ತಿ ಪಡೆಯುವುದು, ಬಡ್ಡಿಯಲ್ಲಿ ದುಡಿಸಿಕೊಳ್ಳುವುದು, ಹೆಂಗಸರನ್ನು ಜೀತಕ್ಕೆ ಇರಿಸಿಕೊಳ್ಳುವುದು ಇತ್ಯಾದಿ ಅಮಾನುಷ ಕೃತಿಗಳು ಆರ್ಥಿಕ ಶೋಷಣೆಯ ಪರಿಗಳು. ಇನ್ನು ಲೈಂಗಿಕ ಶೋಷಣೆಯಂತೂ ವಿಪರೀತ. ಆಯ ತಪ್ಪಿದ ಅನೈತಿಕ ಲೈಂಗಿಕ ಘಟನೆಗಳ ಸರಣಿಯೇ ಕಾದಂಬರಿಯನ್ನು ವ್ಯಾಪಿಸಿದೆ. ಆದರೂ ಅವೆಲ್ಲ ಹಳ್ಳಿಯ ಬದುಕಿನ ವಾಸ್ತವಿಕತೆಗಳಾಗಿ ಬಂದಿವೆಯೆಂಬುದನ್ನು ಮರೆಯುವಂತಿಲ್ಲ. ಗಂಗವ್ವನನ್ನು ನಂಜೇಗೌಡ, ಚಂದ್ರಿಯನ್ನು ಶಿವಪಾದಪ್ಪ, ಚಲುವಿಯನ್ನು ಉದ್ಧೂರಯ್ಯ, ಶಿವುನಿಯನ್ನು ಕೇಶವಯ್ಯ, ಕೂಲಿ ಹೆಂಗಸರನ್ನು ಕೆಂಗಣ್ಣಪ್ಪ ಗಂಗಿ ಮತ್ತು ರುಕ್ಮಿಣಿಯರು ಲಕ್ಕನನ್ನು, ಇದಿಷ್ಟೇ ಸಾಲದೆಂಬಂತೆ ಕೃಷ್ಣ ಶಾಸ್ತ್ರಿಗಳು ರುಕ್ಮಿಣಿಯನ್ನು ಲೈಂಗಿಕವಾಗಿ ಶೋಷಿಸುವುದು ಇವೆಲ್ಲ ಮೇಲಿನ ಮಾತಿಗೆ ಸಾಕ್ಷಿಗಳು.

ದರುಮನಹಳ್ಳಿಯ ವಿವಿಧ ಜಾತಿ, ವೃತ್ತಿ ಹಾಗೂ ಪ್ರಸಂಗಗಳನ್ನು ಕಾದಂಬರಿಯಲ್ಲಿ ಕಾಣುತ್ತೇವೆ. ಈ ಅರ್ಥದಲ್ಲಿ 'ವೈಶಾಖ' ನಿಜವಾಗಿಯೂ 'ಗ್ರಾಮಭಾರತ'. ಒಕ್ಕಲಗೇರಿ, ಕುಂಬಾರಗೇರಿ, ಪರಿವಾರಗೇರಿ, ಕುರುಬಗೇರಿ. ಹೊಲಗೇರಿಗಳು ಊರಲ್ಲಿವೆ. ಬ್ರಾಹ್ಮಣ ಪರಿಸರ ಹಾಗೂ ಸಂಪ್ರದಾಯಗಳ ಖಚಿತ ವಿವರಗಳಿವೆ (ಪು.–೯, ೫೫, ೬೨. ೩೭೪). ಒಟ್ಟಿನಲ್ಲಿ 'ಎದ್ದರೆ ಶಾಸ್ತ್ರ, ಮುಗಿದರೆ ಮಂತ್ರ, ಗರುಡ ಹಾರಿದರೆ, ಹಾವು ಎದುರಾದರೆ ಶಾಸ್ತ್ರ' ಇದು ಅವರ ಬದುಕಿನ ಪರಿ. ಇನ್ನೊಂದೆಡೆ ಚಾಪೆ ಹೆಣೆಯುವುದು, ಹೊಲದಲ್ಲಿ ದುಡಿಯುವುದು, ದನ ಕಾಯುವುದು ಇವೆಲ್ಲ ಹರಿಜನರ ದುಡಿಮೆಗಳು. ಕೃತಿಯಲ್ಲಿ ಶಿವಾಚಾರದವರ ಬಗ್ಗೆ ಹೆಚ್ಚಿನ ಅಂಶಗಳಿಲ್ಲ. ಇದ್ದ ಒಬ್ಬಿಬ್ಬರು ಮಠದ ಗುರುಗಳ ನೆರಳಿನಲ್ಲಿ ಸ್ವಾರ್ಥಸಾಧನೆ ಮಾಡುತ್ತಿರುವುದರ ಚಿತ್ರಣವಿದೆ. ನಂಜೇಗೌಡ ಈ ಧೂರ್ತತನದ ಪ್ರತೀಕ.

ಸಾಂಸ್ಕೃತಿಕ ವಿಪರ್ಯಾಸ : ಹಳ್ಳಿಯ ವಿಷಮ ಪರಿಸರ ಹಳೆಯ ಜನರಿಗೆ ಸೇರುತ್ತಿರಲಿಲ್ಲ. "ದರುಮ ದರುಮನಹಳ್ಳಿಯಲ್ಲಿ ಮಂಗಮಾಯ", "ತೆಗೆ ತೆಗಿ ಇದ್ಯಾವ ಸೀಮೆ, ನ್ಯಾಯವ ? ಇವರಿಗೊಂದು ನ್ಯಾಯ ನಮಗೊಂದು ನ್ಯಾಯವ ?" (೩೬೦) ಎಂಬಲ್ಲಿ ಈ ಸೂಚನೆಯಿದೆ. ಮೇಲ್ವರ್ಗದವರೆಂದು ಬೀಗಿಕೊಳ್ಳುತ್ತಿದ್ದ ಬ್ರಾಹ್ಮಣರಲ್ಲಿ ಮಾನವೀಯತೆಯ ಲವಲೇಶವೂ ಇಲ್ಲವೆಂಬುದನ್ನೂ ಅಜ್ಞರೂ, ಬಡವರೂ ಆದ ಕೆಳವರ್ಗದ ಜನರಲ್ಲಿ ಸಂಸ್ಕೃತಿಯ ಸಾರಪ್ಯವಿರುವುದನ್ನು ಕಾದಂಬರಿ ಬಹು ವ್ಯಂಗ್ಯವಾಗಿ ಪ್ರತಿಪಾದಿಸುತ್ತದೆ. ಶ್ರೀಮಂತಿಕೆ–ಧರ್ಮ ಹಾಗೂ ಸಂಸ್ಕೃತಿಗಳಿಗೆ ಯಾವುದೇ ಸಂಬಂಧವಿಲ್ಲವೆಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದರೆ. ಬಹುಶಃ ಇದೂ ಕಾದಂಬರಿಯ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿರಲು ಸಾಕು. ಕಾದಂಬರಿ ಮಹತ್ತಿಗೇರುವುದೂ ಇಲ್ಲಿಯೇ. ಎಲ್ಲ ವಿಷಯಗಳಲ್ಲಿ ಹೆಚ್ಚು ಪ್ರಮಾದಗಳಾಗಿರುವುದು ಶಿಷ್ಟಪ್ರಜ್ಞೆಯ ಬ್ರಾಹ್ಮಣರಿಂದಲೇ! ಹರಿಜನರನ್ನು ಕೀಳಾಗಿ, ಅಷ್ಟೇ ಏಕೆ ಗುಲಾಮರಂತೆ

ಕಾಣುವುದು ಬ್ರಾಹ್ಮಣರ ಜನ್ಮಸಿದ್ಧ ಹಕ್ಕು ಎಂಬಂತಿದೆ ಅವರ ವರ್ತನೆ. ಹರಿಜನರ ಲಕ್ಕ ಮಳೆಯಲ್ಲಿ ನಿಂಗಿಯೊಂದಿಗೆ ಒಂದೇ ಗೊರಗಿನಲ್ಲಿ ಬಂದದ್ದು (ಬಾಲ್ಯದಲ್ಲಿ) ಮಹಾಪ್ರಮಾದ. ಅಂತೆಯೇ 'ಮೇಲುಜಾತಿಯ ಯಜಮಾನ್ರಿಗೆ ಈ ಇಸ್ಯ ಗ್ವತ್ತಾದ್ರೆ ಈ ಉಪಗ್ಗ ಚಮಡ ಸುಲಿದು ಬುಡ್ತಾರೆ' (೨೬೩) ಎಂಬ ಭಯ. ಓದಬೇಕೆಂಬ ಲಕ್ಕನ ಮಹತ್ವಾಕಾಂಕ್ಷೆಯನ್ನು ಉಪಾಧ್ಯಾಯ ವೆಂಕಟೇಶಯ್ಯ ಮುರಿದು ಮಣ್ಣುಪಾಲು ಮಾಡುತ್ತಾನೆ. "ಮುಂದಕೋದಿ ಅವನ್ಯಾವ ದಿವಾನಗಿರಿ ಮಾಡ ಬೇಕಾಗಿದೀತೋ ಸಿಂಗ?....ಸುಮ್ನೆ ಇವ ಯಾರ ಅಟ್ಟೀಲಾರು ಜೀತಕ್ಕಿರಿಸು' (೧೬೩) ಎಂದ ವೆಂಕಟೇಶಯ್ಯ ಲಕ್ಕನನ್ನು ಶಾಲೆಯಿಂದ ಹೊರಹಾಕುತ್ತಾನೆ. ವಿಧವೆ ಯಾದದಕ್ಕೆ ರುಕ್ಮಿಣಿಗೆ ಜನರಿಂದ ದೊರೆಯಬೇಕಾದುದು ಸಹಾನುಭೂತಿ ಹಾಗೂ ಮಾನವೀಯ ಅನುಕಂಪಗಳು. ಆದರೆ ಶಾಸ್ತ್ರಪ್ರಿಯರಾದ ಬ್ರಾಹ್ಮಣರಿಂದ ಅವಳು ಅನುಭವಿಸಿದ್ದೇನು? 'ಅವಳ ತಲೆ ಬೋಳಿಸಿ ವಿರೂಪಗೊಳಿಸಿದ್ದರೆ ನಮ್ಮ ಬ್ರಾಹ್ಮಣ ಸಮಾಜ ಈಗ ಇಂಥ ವಿಕೃತ ಪರಿಸ್ಥಿತಿಯನ್ನು ಎದುರಿಸಬೇಕಾಗಿತ್ತೆ? (೨೮೩). 'ರುಕ್ಮಿಣಿಗೆ ಘಟಸ್ಫೋಟ ಮಾಡಿ ಮಂಡೆ ಬೋಳಿಸಿ ಕತ್ತೆಯ ಮೇಲೆ ಕೂರಿಸಿ, ಊರು ಬಿಟ್ಟು ಓಡಿಸಬೇಕು........ ಆ ಪಾಪಿಗೆ ಇದೊಂದೆ ತಕ್ಕ ಪ್ರಾಯಶ್ಚಿತ್ತ (೩೭೪), 'ಇಂತ ಪಾಪಿಗೆ ನೀರಿರೋ ಜಾಗದಲ್ಲಿ ಕರ್ಮ ಆಚರಿಸಬಾರದು ಅವಳ ಮನೆ ಮುಂದೇನೆ ನಡೆಸಬೇಕು' (೩೧೧). ಇತ್ಯಾದಿ ಮಾತುಗಳೆಲ್ಲ ರುಕ್ಮಿಣಿಗೆ 'ಸ್ವಜನ ಬಾಂಧವ' ರಿಂದ ದೊರೆತ ಸಹಾನುಭೂತಿ. ಇದು ಅವರಲ್ಲಿ ಶಾಸ್ತ್ರಮಾನ್ಯವಾದ ಶಿಷ್ಟ ಆಚರಣೆ ಬೇರೆ! ಹೊರನೋಟಕ್ಕೆ ಧಾರ್ಮಿಕತೆಯನ್ನು ಮೆರೆಯುವ ಬ್ರಾಹ್ಮಣ್ಯದ ಪಾಲಕರಲ್ಲಿ ಸಾತ್ವಿಕತೆ ಉಳಿದಿಲ್ಲವೆಂಬ ಕಟುಸತ್ಯವನ್ನು ಲೇಖಕರು ಹೊರಹಾಕಿದ್ದಾರೆ (೩೮೨). ಇನ್ನೊಂದೆಡೆ, ತಿರಸ್ಕೃತರಾಗಿದ್ದರೂ 'ಉತ್ತಮಿಕೆಯ ಪ್ರತೀಕ'ಗಳಾಗಿದ್ದಾರೆ ಕೆಳವರ್ಗದ ಜನ. ತನ್ನ ಎಮ್ಮೆಗಳನ್ನು ಕಳೆದ ಲಕ್ಕನನ್ನು ಬುಂಡಮ್ಮ ಕ್ಷಮಿಸುವು ದಲ್ಲದೆ ಲಕ್ಕನ ಊಟೋಪಚಾರಗಳ ಬಗ್ಗೆ ಕಾಳಜಿ ವಹಿಸುತ್ತಾಳೆ (೫೮). ಪಂಚಾಯಿತಿ ಯಲ್ಲಿ ನಿಂತ ಲಕ್ಕನ ಬಗ್ಗೆ ಬುಂಡಮ್ಮ-ದ್ಯಾವಾಜಮ್ಮ ಮರಮರ ಮರುಗುತ್ತಾರೆ. ಮುಸಲ್ಮಾನರ ಗೋಸುಸಾಬಿ ಲಕ್ಕನ ಪಾಲಿನ ದೇವರಾಗುತ್ತಾನೆ (೩೩೮). ಲಕ್ಕ ಶಕುನಿಕೊಪ್ಪದಲ್ಲಿದ್ದಾಗ ಅವನ ತಾಯಿ ಕಲ್ಯಾಣಿ ಊರ ಜನರ ಕಣ್ಣುತಪ್ಪಿಸಿ ಒಳ ಹೊಟ್ಟೆಯಲ್ಲಿ ಬಿಸಿಯ ರೊಟ್ಟಿಯನ್ನು ತಂದು ತಿನ್ನಿಸುವ ದೃಶ್ಯ ತಾಯಿ ಮಕ್ಕಳ ಕರುಳಿನ ತುಡಿತವನ್ನು ಮೀರಿದ ವಿಶ್ವಮಾನವೀಯ ದೃಶ್ಯವಾಗಿದೆ (೪೯೫). ಕರುಣೆ ಇಲ್ಲಿ ಓದುಗ-ಲಕ್ಕ ಹಾಗೂ ಕಾದಂಬರಿಕಾರರನ್ನು ಒಂದೇ ಎಳೆಯಲ್ಲಿ ಬಂಧಿಸಿ ಬಿಡುತ್ತದೆ. ಹೀಗೆ ಒಂದು ಹಳ್ಳಿಯ ಸಾಂಸ್ಕೃತಿಕ ಪರಿಸರದ ವೈಪರೀತ್ಯವನ್ನು ತೋರಿಸುವ ಮೂಲಕ ಲೇಖಕರು ಸುಧಾರಣೆಯ ಸಂದೇಶವನ್ನು ಸಾರಿದಂತಿದೆ.

ಲಕ್ಕ : ಹರಿಜನರ ನಿಂಗಯ್ಯನ ಮಗ ಲಕ್ಕ ಕೆಳವರ್ಗದವನಾಗಿ ಕೀಳು ಮಟ್ಟದ ಬದುಕನ್ನು ಅನುಭವಿಸಿ ಇದು ಹೀಗೇಕೆ ಎಂದು ಯೋಚಿಸುತ್ತಾನೆ

(ಪ್ರಶ್ನಿಸುವ ಧೈರ್ಯ ತೋರಿಲ್ಲ!). ಬ್ರಾಹ್ಮಣರಲ್ಲಿ ಈತ ದುಡಿಯುತ್ತಿದ್ದ ಕಾರಣ, ಎರಡೂ ಸ್ತರಗಳ ಬದುಕಿನೊಂದಿಗೆಯೂ ಸ್ಪಂದಿಸಬಲ್ಲ. ಕೃಷ್ಣಶಾಸ್ತ್ರಿಗಳ ಸೊಸೆ ರುಕ್ಮಿಣಿಯೊಂದಿಗೆ ಲಕ್ಕನದು ಹೆಚ್ಚಿನ ಸಲಿಗೆ. ಪತಿ ಸತ್ತ ಬೇಸರದಲ್ಲಿ ಬಾವಿಗೆ ಬೀಳಲು ಹೋದ ರುಕ್ಮಿಣಿಯನ್ನು ಲಕ್ಕ ಬದುಕಿಸುತ್ತಾನೆ. ದುಡಿಯಲು ಹೋದ ಬಡಪಾಯಿ ಲಕ್ಕ ಒಮ್ಮೆ ರುಕ್ಮಿಣಿಯ ಭೋಗಕ್ಕಾಗಿ ಬಳಸಿಕೊಳ್ಳಲ್ಪಟ್ಟ. ನಿರಪರಾಧಿಯಾದರೂ ಊರ ಜನರ ಮುಂದೆ ಪಂಚಾಯಿತಿಯಲ್ಲಿ ನಿಲ್ಲಬೇಕಾಗಿ ಬಂತು. ರುಕ್ಮಿಣಿಯನ್ನು ತಾನೇ ಒತ್ತಾಯ ಪೂರ್ವಕವಾಗಿ ಬಳಸಿಕೊಂಡುದಾಗಿ ತಿಳಿಸಿ ತನ್ನ ತಪ್ಪನ್ನು ತಾನೇ ಹೊರಲು ಸಿದ್ಧನಾಗುತ್ತಾನೆ. ಮೊದಲಿನಿಂದಲೂ "ತನ್ನ ಗಾಂಭೀರ್ಯ ಮಾತಿನ ತೂಕ, ವಿನಯ ಮುಂತಾದ ಗುಣಗಳಿಂದ ಊರ ಜನರ ಪ್ರೀತಿಗೆ ಪಾತ್ರನಾದ ಲಕ್ಕ ಈ ಘಟನೆಯ ಮೂಲಕ ಬ್ರಾಹ್ಮಣ ಕುಲಕ್ಕೇ ಅಪಮಾನ ಮಾಡಿದ (೨೮೦) ಎಂಬ ಕಟುವಿಮರ್ಶೆಗೆ ಗುರಿಯಾದ. ಲಕ್ಕ ಇಡೀ ಊರಿನ ಆಕರ್ಷಣೆ. ಅಂತೆಯೇ ಕಾದಂಬರಿಯ ಕೇಂದ್ರಬಿಂದು. ಲಕ್ಕ ಪಂಚಾಯಿತಿಯ ಮುಂದೆ ನಿಂತ ದಿನ ಇಡೀ ಊರಿಗೆ ಊರೇ ತೆರೆದ ಕಣ್ಣು ಕಿವಿಗಳಿಂದ ಅತ್ತ ಲಕ್ಷ್ಯಕೊಟ್ಟಿತ್ತು (೨೯೩) ಕೊನೆಗೂ ಲಕ್ಕ ಶಿಕ್ಷೆಗೆ ಗುರಿಯಾದ, ಹೊಡೆತ ತಿಂದ. ಊರು ಬಿಟ್ಟ. ತಾಯಿಯನ್ನು ಕಳೆದುಕೊಂಡ. ತಂಗಿಯ ದುರ್ದೆಸೆ ಕಂಡ. ಊರಿನ ಎಲ್ಲ ಬಗೆಯ ಶೋಷಣೆಗಳನ್ನು ಅನುಭವಿಸಿದ ಲಕ್ಕ ಕೊನೆಯ ಹಂತದಲ್ಲಿ ಮಾನಸಿಕ ಸ್ಥಿರತೆಯನ್ನು ಪಡೆದು ಹೊಸದೊಂದು ಮುಕ್ತಬದುಕಿನ ಕ್ಷಿತಿಜ. ಪ್ರವೇಶಿಸಿದ ಎಂಬ ಸೂಚನೆಯೊಂದಿಗೆ ಲಕ್ಕನ ಪಾತ್ರ ತನ್ನ ಗುರಿ ತಲುಪುತ್ತದೆ.

ರುಕ್ಮಿಣಿ : ಕೃಷ್ಣಶಾಸ್ತ್ರಿಗಳ ಸೊಸೆ. ವಿಧವೆಯಾದವಳು. ಬ್ರಾಹ್ಮಣ ಸಂಸ್ಕಾರಗಳಿಂದ ತಪ್ಪಿಸಿಕೊಂಡ ಕಾರಣ ಅವಳ ಸ್ಥಾನ ಇನ್ನೂ ಗೌಣ. ಆತ್ಮಹತ್ಯೆಗೆ ಪ್ರಯತ್ನಿಸಿ ವಿಫಲಳಾಗುತ್ತಾಳೆ. ಸತ್ತು ಸಾಯುವ ಘೋರ ದುರಂತಕ್ಕಿಂತ ಇದ್ದು ಸಾಯುವ ಇನ್ನೂ ಘೋರ ದುರಂತದ ಆವಶ್ಯಕ ಪಾತ್ರವಾಗಿ ಉಳಿಯುತ್ತಾಳೆ. ಅವಳ ಪಾಲಿಗೆ ದರುಮನಹಳ್ಳಿ 'ಕತ್ತಲೆಯ ಕಾಡು' ಕೇಶವಯ್ಯ, ಲಕ್ಷ್ಮಮ್ಮ, ವೆಂಕಟೇಶ ಜೋಯಿಸರು, ನಂಜೇಗೌಡ ಇವರೆಲ್ಲ ಒಂದಿಲ್ಲ ಒಂದು ರೀತಿ ಅವಳನ್ನು ಹರಿದು ತಿನ್ನಲು ಹವಣಿಸುವ ಹದ್ದುಗಳೇ. ಧಾರ್ಮಿಕ ಸಂಕೋಲೆಯಲ್ಲಿ ಬಂಧಿತಳಾದ ಇವಳು ಅಸಹಾಯಕತೆಯ ಸಂಕೇತ. "ಯಾರ ಸಂಗಡ ಹೇಳಿಕೊಳ್ಳಲಿ?...ಈ ಸಂದಿಗ್ಧದಿಂದ ನನ್ನನ್ನು ಯಾರು ಪಾರು ಮಾಡಬಲ್ಲರು?' (೨೭೭) ಎಂಬುದು ಅವಳ ಕೊರಗು. ದೈಹಿಕ, ಮಾನಸಿಕ ಎರಡೂ ಬಗೆಯ ನೋವುಗಳನ್ನವಳು ಅನುಭವಿಸುತ್ತಾಳೆ. 'ಇದರಿಂದ ತಪ್ಪಿಸಿಕೊಳ್ಳಲು ರುಕ್ಮಿಣಿಗೆ ಯಾವ ದಾರಿಯೂ ಕಾಣದು, (೨೭೭) 'ಈಗ ಅವಳು ಬಂಧಿ: ಚಿತ್ರಮೂಲಲನ ಕೋಟೆಯೊಳಗೆ ತಾನು ಸಿಕ್ಕಿಕೊಂಡಂತಾಗಿದೆ. ಇದರಿಂದ ಪಾರಾಗುವ ಮಾರ್ಗವೆ ಈಗ ಅವಳಿಗೆ ಗೋಚರಿಸುತ್ತಿಲ್ಲ, (೩೫೨) ಹೀಗೆ ಬದುಕಿನ ದ್ವಂದ್ವದಿಂದ ಪಾರಾಗಲು ಅವಳಿಗುಳಿದ ದಾರಿ ಒಂದೇ - ಸಾವು, ಕೊನೆಗೆ ಚಿತ್ರಮೂಲನ

ಕೋಟೆಯಲ್ಲಿ ಪ್ರೇತವಾಗುತ್ತಾಳೆ. ಈ ಪಾತ್ರದ ವಿನಾಶದೊಂದಿಗೆ ಲೇಖಕರು ಊರಿನ ಸಂಸ್ಕೃತಿಯ ಪತನವನ್ನು ಸೂಚಿಸಿದಂತಿದೆ.

ಕೃಷ್ಣಶಾಸ್ತ್ರಿ : ಕಾದಂಬರಿಯಲ್ಲಿ ಪ್ರಮುಖ ಪಂಗಡವಾಗಿ ಮೆರೆದದ್ದು ಬ್ರಾಹ್ಮಣ ಸಮಾಜ. ಆ ಸಮಾಜದ ವಿಭಿನ್ನ ಸ್ವಭಾವದ ಏಕೈಕ ವ್ಯಕ್ತಿ ಕೃಷ್ಣ ಶಾಸ್ತ್ರಿ. ಅಪೇಕ್ಷಿತ ಸಂಸ್ಕೃತಿಯ ಪ್ರತಿನಿಧಿಯಂತೆ ಮೂಡಿದ ಈತ ಕೆಲವು ಸಾಂಪ್ರದಾಯಿಕ ಆಚರಣೆಗಳನ್ನು ವಿಮರ್ಶಿಸಿ ಸುಧಾರಣೆಗಾಗಿ ತವಕಿಸುತ್ತಾನೆ, ಸಮಾಜವನ್ನು ಎದುರು ಹಾಕಿಕೊಳ್ಳುತ್ತಾನೆ. ಸತಿಯನ್ನು ಕಳೆದುಕೊಂಡು ದೈಹಿಕ ಸಂಯಮದ ಪರೀಕ್ಷೆಗೆ ಗುರಿಯಾಗಿ ಮಧ್ಯದಲ್ಲಿ ಸೋಲುತ್ತಾನೆ. ಸೊಸೆ ರುಕ್ಮಿಣಿಯ ಬದುಕನ್ನು ದುರಂತಗೊಳಿಸುತ್ತಾನೆ. ಅರ್ಥಹೀನ ಸಂಪ್ರದಾಯಗಳು ಕಾಲಕಾಲಕ್ಕೆ ಬದಲಾಗ ಬೇಕೆಂಬುದು ಲೋಕಜೀವನ ಹಾಗೂ ಧಾರ್ಮಿಕ ಜೀವನಕ್ಕೆ ಸಂಬಂಧಿಸಿದ ಇವನ ಹೊಸ ದೃಷ್ಟಿಕೋನ. ಆದರೆ ವೈಯುಕ್ತಿಕವಾದ ಕ್ಷುದ್ರ ಆವೇಷಕ್ಕಾಗಿ ಕಡಿದು ಬೀಳುತ್ತದೆ ಇವನ ಘನ ವ್ಯಕ್ತಿತ್ವ.

ನಂಜೇಗೌಡ : ಕಾದಂಬರಿಯಲ್ಲಿ ಒಡೆದು ಕಾಣುವ ಪಾತ್ರ. ಹೆಸರಿಗೆ ತಕ್ಕಂತೆ ಧೂರ್ತ, ಕಾಮುಕ. ಸಮಯಸಾಧಕ. ಸಮಾಜಘಾತಕ. ಮಠದ ಸ್ವಾಮಿಗಳ ಪರಮಭಕ್ತ. ಊರ ಒಡೆಯ ! 'ಈತ ಮಹಾಕಿತಾಪತಿ ಮನುಷ್ಯ. ತನಗೆ ವಿರೋಧವಾದರೆ ಊರಿಗೆ ಊರನ್ನೇ ಹೊತ್ತಿಸಿ ಬೇಯಿಸುವಂಥವನು. ಊರಿನಲ್ಲಿ ಯಾರೂ ಸುಖವಾಗಿರಬಾರದು. ತನ್ನನ್ನು ಮೀರಿ ಯಾರೂ ಬೆಳೆಯಬಾರದು' (೯) ಇದು ನಂಜೇಗೌಡನ ಸ್ತುತಿ. ಗುಡ್ಡದ ಕಟ್ಟಿಗೆ ಕದಿಯುವುದು ಅವನ ನಿತ್ಯದ ಕಾಯಕ (೧೫೫).

ಇವರಲ್ಲದೆ ಕೇಶವಯ್ಯ, ಶಿವಪದಪ್ಪ, ಕಲ್ಯಾಣಿ, ಶಿವುನಿ ವೆಂಕಟೇಶಯ್ಯ, ಬುಂಡಮ್ಮ, ದ್ಯಾವಾಜಮ್ಮ, ಗೋಸುಸಾಬಿ ಇವರು ಇತರ ಪಾತ್ರಗಳು.

ಸ್ವಪ್ನ ಹಾಗೂ ಸಂಕೇತಗಳು : ಕಥೆಯನ್ನು ಸಾಗಿಸಿಕೊಂಡು ಹೋಗಲು ಲೇಖಕರು ಬಳಸಿದ ತಂತ್ರಗಳು ಗಮನಾರ್ಹವಾಗಿವೆ. 'ಲಕ್ಕನ ನೆನಪಿನ ಸುರುಳಿ ಬಿಚ್ಚಿತು' ಎನ್ನುವ ಮೂಲಕ ಊರಿನ ನೂರಾರು ಘಟನಾವಳಿಗಳನ್ನು ನಮ್ಮ ಗಮನಕ್ಕೆ ತರಲಾಗುತ್ತದೆ. ಇದರೊಂದಿಗೆ ಅರ್ಥಪೂರ್ಣವಾದ ಸ್ವಪ್ನ ಹಾಗೂ ಸಂಕೇತಗಳನ್ನು ಸಮಯೋಚಿತವಾಗಿ ಬಳಸಿಕೊಂಡಿರುವುದು ಲೇಖಕರ ತಾಂತ್ರಿಕ ಪ್ರೌಢಿಮೆಯ ಸಾಕ್ಷಿ. ರುಕ್ಮಿಣಿ ಕಾಣುವ ದುಸ್ವಪ್ನ (೨೩೫)ದಲ್ಲಿ ಹಳ್ಳಿಯ ದುರ್ಗಮ ವಾತಾವರಣವನ್ನು ಸೂಚಿಸಲಾಗಿದೆ. ಲಕ್ಕ ಕಾಣುವ ಸ್ವಪ್ನ (೨೫೦)ದಲ್ಲಿ ಅವನ ಭವಿಷ್ಯದ ಕಂಟಕವನ್ನು ತಿಳಿಸಲಾಗಿದೆ.

ಕಾದಂಬರಿಯ ಚಿತ್ರಮೂಲದ ಕೋಟೆ ಸಂಸ್ಕೃತಿಯ ಬಂಧನದ ಸಂಕೇತ. 'ಮೋಸ ಮಾಡದಿದ್ರೆ ಈ ಜೀವನದಲ್ಲಿ ಗೆಲ್ಲಲಿಕ್ಕೆ ಆಗತ್ಯೆ ? ಇಡೀ ಮಹಾಭಾರತದ ಕಥೆಯಲ್ಲಿ ನಾವು ಕಾಣುವುದೇನು ? ಉದ್ದಕ್ಕೂ ಮೋಸ. ಅದೂ ಶ್ರೀಕೃಷ್ಣ

ಪರಮಾತ್ಮನಿಂದಲೇ ಅದೆಲ್ಲ ನಡೆಯಿತು ಆಪ ಮೇಲೆ (೨೦೧), ಎಂಬ ಮಾತಿನ ಕ್ರಿಯಾ ರೂಪದ ಸಾಕ್ಷಾತ್ಕಾರವಾಗಿದೆ. ಪ್ರಸ್ತುತ ಕಾದಂಬರಿಯಲ್ಲಿ ಇಡೀ ಕಾದಂಬರಿಯ ಪ್ರಮುಖ ಸಂಕೇತ ಹೀಗಿದೆ : 'ಒಂದು ರಣಹದ್ದು ಎಗರಿ ಬಿದ್ದು ಅವಳ ಎದೆ ಗುಂಡಿಗ್ಗೆ ಕುಕ್ಕಿ ವೋಟು ಮಾಂಪುಸವ ಆ ಗುಂಡಗ್ಯಿಂದ ಕಿತ್ತ ಕ್ಸಣಕೆ ಅವಳ ಸುತ್ತಾಲು ಕುಂತಿದ್ದ ಎಲ್ಲಾ ರಣಹದ್ದುಗಳು ನಾ ಮುಂದು ತಾ ಮುಂದು ಅನ್ನೋವಂಗೆ ಗರಿ ಕೆದರಿ ಆ ಹೆಂಗಸಿನ ಹೆಣದ ಮ್ಯಾಲೆ ಬಿದ್ದೊ. ಸಿಕ್ಕ ಸಿಕ್ಕದೊಂಟು ಮಾಂಸವನ್ನು ಕಿತ್ತೊ. ಜಾಗ ಸಿಕ್ಕದೆ ಹೋದಾಗ ಕೀ ಕೀ ಕೀ ಅಂತ ತೀರ ಕೀರ್ಲಾಗಿ ಕಿರುಚ್ತ ಒಂದಕೊಂದ ಕಡಿದಾಡಿ ಮಡಿದು ಬೀಳ್ತಾ ಇದ್ದೊ' (೨೫೦) ಗರ್ಭಿಣಿಯೊಬ್ಬಳ ಹೆಣವನ್ನು ಹದ್ದುಗಳು ಕುಕ್ಕಿ ತಿನ್ನುವ ಭೀಕರ ದೃಶ್ಯವೇ ಅದು. ಬಹುಶಃ ಇದೇ ಭೀಭತ್ಸ ಸಂಕೇತವೇ ಕಾದಂಬರಿಯ ಮುಖಪುಟದ ಮೇಲೆ ಮೂಡಿದೆ. ವಿವರಣೆಯಲ್ಲಿ ಕೇವಲ ನಾಲ್ಕಾರು ಸಾಲುಗಳಲ್ಲಿರುವ ಈ ಸಂಕೇತ ಇಡೀ ಸಾಮಾಜಿಕ ವ್ಯವಸ್ಥೆಯ ಅಥವಾ ಶೋಷಣೆಯ ಸಮಗ್ರ ವಿವರಣೆ ನೀಡುವಷ್ಟು ಶಕ್ತವಾಗಿದೆ. ಪ್ರಬಲರು ದುರ್ಬಲ ರನ್ನು ಹಿಂಡುವುದು, ಗಂಡು ಹೆಣ್ಣನ್ನು ದುರುಪಯೋಗ ಪಡಿಸಿಕೊಳ್ಳುವುದು, ಕೊನೆಗೆ ಶೋಷಕರೆನ್ನಿಸಿಕೊಂಡವರು ತಮ್ಮ ತಮ್ಮಲ್ಲೇ ಬಡಿದಾಡಿ ಸಾಯುವುದು ಇತ್ಯಾದಿ ಅನೇಕ ಅರ್ಥದ ಸುರುಳಿ ಬಿಚ್ಚುತ್ತಾ ಸಾಗುತ್ತದೆ ಇಲ್ಲಿ ?

ಕಾದಂಬರಿಯ ಕೊನೆಯಂತೂ ಸಾರ್ಥಕ ಸಂಕೇತಗಳ ಸಂಗಮವೇ ಆಗಿದೆ. ಸಾವಿರಾರು ಗೊದ್ದಗಳು ಒಂದು ಘಟಸರ್ಪವನ್ನು ಕೊಲ್ಲುವದು ಒಂದು. ದೊಡ್ಡ ಆನೆಗಳು ಸೇರಿ ಮರಿ ಆನೆಯೊಂದನ್ನು ರಕ್ಷಿಸಿ ಸಹಕರಿಸುತ್ತಿರುವುದು ಇನ್ನೊಂದು. ಈ ಎರಡೂ ಉದ್ದೇಶಿತ ಸಂಕೇತಗಳೇ ಆಗಿದ್ದು, ಇವುಗಳ ಹಿಂದೆ ಪ್ರಬಲ ಅರ್ಥವಿರಲೇ ಬೇಕು. ನೊಂದವರೆಲ್ಲ ಸೇರಿ ಸಂಘಟಿತರಾದರೆ ಸಮಾಜದ ದುಷ್ಟ ಶಕ್ತಿಗಳನ್ನು ದಮನಮಾಡಬಲ್ಲವು ಎಂಬುದು ಮೊದಲ ಸಂಕೇತದ ಅರ್ಥ. ದೊಡ್ಡವರು ಸಣ್ಣ ವರನ್ನು ರಕ್ಷಿಸಬೇಕೆಂಬ ಸಂಸ್ಕೃತಿಯ ಪಾರಮ್ಯವನ್ನು ಸೂಚಿಸುವುದು ಇನ್ನೊಂದು ಸಂಕೇತದ ಅರ್ಥ.

ಕಾದಂಬರಿಯ ಕೊನೆಗೆ ಕಾಡಿನಲ್ಲಿ ಹೊರಟ ಲಕ್ಕ ಅಲ್ಲಿಯ ವಿಚಿತ್ರ ದೃಶ್ಯಗಳನ್ನು ನೋಡುತ್ತ ಸಾಗಿದ್ದ. ಅವೆಲ್ಲ ಅವನ ಹೃದಯದ ಮೇಲೆ ಮೂಡಿಸುತ್ತಿದ್ದ ಅರ್ಥ ಅವನಿಗೇ ವೇದ್ಯ. ಧೂಪದ ಮರದ ಮೇಲೆ ಕುಳಿತ ಬೂದು ಬಣ್ಣದ ಸೋರೆಕಟ್ಟೆ ಹಕ್ಕಿ 'ಪುರ್ರಂತ' ಹಾರಿತು. ಲಕ್ಕನ ದೃಷ್ಟಿ ಅದನ್ನೇ ಹಿಂಬಾಲಿಸಿತು. ಹಕ್ಕಿ ಅಲ್ಲಿ ಇಲ್ಲಿ ಹಾರಿ ಎಲ್ಲಿಗೋ ಹೋಯಿತು. 'ಲಕ್ಕ ಅಂಗೇ ಇನ್ನು ಮ್ಯಾಕೆ ಕತ್ತೆತ್ತಿದ. ಆಕಾಶ ತೊಳುದಂಗಿತ್ತು. ಅಲ್ಲೊಂದು ಗರುಡಾಳ ಪಕ್ಷಿ ತೇಲ್ತಾ ವಾಲ್ತಾ ಹಾರಾಡ್ತಿತ್ತು. ಲಕ್ಕನ ಮನಸ್ಸೂವೆ ಅದರ ವಂದಗುಟ್ಟಗೆಯ ತೇಲ್ತಾ ವಾಲ್ತಾ ಹಾರಾಡಕ್ಕೆ ಮುಟ್ಟಿ ಗಂತು. ಅವರಾಗೆ ದುೃಸ್ಟಿ ನೆಟ್ಟು ಲಕ್ಕ ತಳತಳಾರ್ವಾಗಿ ಎಜ್ಜೆಯ ಮುಂದ

ಮುಂದ್ಕಿಟ್ಟ (೪೦೫). ಮುಂದೆ ಲಕ್ಕನೂ ನಿರ್ಭೀತನಾಗಿ ಮುಕ್ತ ಪಕ್ಷಿಯಂತೆ ಬದುಕು ಸಾಗಿಸಬಹುದು ಎಂಬುದು ಕಾದಂಬರಿಯ ಆಂತರ್ಯ.

ಭಾಷೆ : ಜನಭಾಷೆಯು ಅತ್ಯಂತ ಯಶಸ್ವೀ ಬಳಕೆ ಈ ಕಾದಂಬರಿಯಲ್ಲಿದೆ. ಭಾಷೆ ಕೆಲವೊಮ್ಮೆ ತೀರ ಪ್ರಾದೇಶಿಕವೆನ್ನಿಸಿದರೂ ಅದು ಕಾದಂಬರಿಯ ಕೊರತೆಯಲ್ಲ, ವೈಶಿಷ್ಟ್ಯ. ಓದುಗ ಈ ಪ್ರಾದೇಶಿಕತೆಯ ಕೋಟೆಯನ್ನು ಭೇದಿಸಿಕೊಂಡು ಒಳಹೊಕ್ಕರೆ ಮಾತ್ರ ಅಲ್ಲಿ ಹುದುಗಿದ ನಿಜವಾದ ಆನಂದಾನುಭವವನ್ನು ಪಡೆಯುತ್ತಾನೆ. ಅಪೂರ್ವ, ಇಸ್ಯ, ಇದ್ಯ, ಕಟ್ಟೆ, ಜಪಾತಿ, ನಂಜಕ್ಕೆ ನೆಪ್ಪು ಇತ್ಯಾದಿ ಗ್ರಾಮ್ಯಶಬ್ದಗಳೊಂದಿಗೆ ಗ್ರಾಮೀಣ ಸಂಸ್ಕಾರ ಪಡೆದ ನಿವೊನಿ, ಮಳೀಗು, ಲಿಪೇರಿ, ಪಳಾಸ್ಟರು, ಟವಲ್, ಸಪೋಲ್ಟು ಮುಂತಾದ ಇಂಗ್ಲಿಷ್ ಶಬ್ದಗಳು ಸುಂದರವಾಗಿ ಬೆರೆತುಕೊಂಡಿವೆ. ಇಲ್ಲಿಯು ಭಾಷೆ ಎರಡು ಪ್ರಮುಖ ಪ್ರವಾಹಗಳಾಗಿ ಹರಿದಿದೆ. ಒಂದು ಬ್ರಾಹ್ಮಣರದು ಶಿಷ್ಟ, ಇನ್ನೊಂದು ಹರಿಜನರದು ಗ್ರಾಮ್ಯ. ಅವರವರು ಬಳಸಿದ ಭಾಷೆಯ ಮೇಲಿಂದಲೆ, ಅವರ ಜಾತಿಗಳನ್ನು ಗುರುತಿಸಬಹುದು.

ಗ್ರಾಮ ಜೀವನದ ಗಾಢಸಂಪರ್ಕ ಕಾದಂಬರಿಯ ಭಾಷೆಗಿರುವುದಕ್ಕೆ ಅನೇಕ ಗಾದೆ, ಒಡಪು ಹಾಗೂ ಹಚ್ಚಹಸಿಯ ದೇಸೀಯ ಮಾತುಗಳು ಸಾಕ್ಷಿಯಾಗಿವೆ. ಈ ಎಲ್ಲವುಗಳ ಸಮಯೋಚಿತ ಬಳಕೆಯಲ್ಲಿ ಲೇಖಕರ ಭಾಷಾಪ್ರೌಢಿಮೆ ವ್ಯಕ್ತವಾಗಿದೆ. 'ಹೆಣ್ಣು ಎಂದರೆ ಹಬಗಸೂ ನಕ್ಕ' 'ಅನ್ನ ಅದೇಂತ ತಿಂದೋನು ಕೆಟ್ಟ, ಹೆಣ್ಣು ಅವಳೇಂತ ಹೋದೋನು ಕೆಟ್ಟ' (೩೨೧). 'ಯಾರ್ದೋ ಹೆಸರು ಯಾರೋ ಬೊಸರು' (೨೦), 'ಪಗಡಿ ಆಡಿ ಪಾಂಡವರು ಕೆಟ್ರು ಇಸ್ಪೀಟಾಡಿ ಇದ್ದಬಿದ್ದವರೆಲ್ಲ ಕೆಟ್ರು' (೧೭೭). 'ಈ ಗಳಿಗೆಗೆ ಮೋಡ ಇನ್ನೊಂದು ಗಳಿಗೆಗೆ ಬಿಸಿಲು' (೫೩). 'ಇಲ್ಲದೇ ಇಲ್ಲದ್ಕೆ ಅಲ್ಲು ಬೀರನೇ ಗಂಡ ಅಂತ' (೨), 'ಕಳ್ಳನ ಹೆಂಡತಿ ಎಂದಿದ್ದರೂ ಮುಂಡೇಯೆ' (೩೦), 'ದನ ತಿನ್ನೋನಿಗೆ ಗೊಬ್ಬರದ ಆಣೆ' (೭೫). 'ಊರು ಸೂರೆ ಹೋದ ಬಳಿಕ ಕೋಟೆ ಬಾಗಿಲು ಹಾಕುವ ಯತ್ನ ಮಾಡಿದಂತೆ' (೯೦), 'ಮಂತ್ರಿಸಿದರೆ ಮಾವಿನಕಾಯಿ ಉದುರುತ್ತೆ' (೯೬), 'ಒಂದು ತುರುಬಿಗೆ ಒಂದೇ ಊವು' (೧೩೬), 'ಮನುಸನಿಗೆ ಬರದೆ ಮರಕ್ಕೆ ಬಂದಾತ' (೯೪) 'ರಾವಳಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೇಂತ' ಈ ಮುಂತಾದ ಗಾದೆಗಳಲ್ಲಿ ಅಪಾರವಾದ ಅರ್ಥ ಹಾಗೂ ಜೀವನಾನುಭವದ ಮುದ್ರೆಯಿದೆ.

'ಪಂಚಮೊಕದ ಕುದುರೆ ಪಾರ ತಿರಗ್ತದೆ' (೧೩) 'ಕತ್ತಲೆ ಮನೇಲಿ ಕರಿಯಪ್ಪ ಗುಟುರಾಕ್ತಾನೆ', 'ಇಟ್ಟು ಆಯಿತ್ಲೆ ಜುಟ್ಟು ಕುಣಿಸ್ತು' (೧೪) 'ಏಳದೇ ಇದ್ದೋರ ಮುಕಳಿಗೆ ಚೂರಿ' ಈ ಮುಂತಾದ ಒಡಪುಗಳೂ ಅಲ್ಲಿವೆ.

ಮಕ್ಕಳಾಟ, ಹೊಲದಲ್ಲಿ ದುಡಿಯುವುದು, ಚಾಪೆ ಹೆಣೆಯುವುದು, ಹರಟೆ ಹೊಡೆಯುವುದು, ಒಡಪು ಹೇಳುವುದು, ಧರ್ಮೋಪದೇಶ, ಪಂಚಾಯಿತಿ, ಹಬ್ಬ ಹುಂದಿನ, ಇಸ್ಪೀಟಾಟ, ಹೆಣ್ಣು ಮಕ್ಕಳು ಬಹಿರ್ದೆಸೆಗೆ ಹೋದಾಗ ಹರಟುವುದು-ಹೀಗೆ

ಎಲ್ಲ ಸಣ್ಣ ದೊಡ್ಡ ಗ್ರಾಮೀಣ ಘಟನಾವಳಿಗಳಿಗೂ ಇಲ್ಲಿ ಎಡೆಯಿದೆ. 'ಹಡಿಸಿಕಂಡ ಮ್ಯಾಲೆ ಯೋಳಿಕೋಬ್ಯಾಡದು', 'ಗುಟುಕಿದ್ರೆ ಮಿಟುಕು, ಮಿಟಕಿದ್ರೆ ಮಿಂಡಾಟ', 'ನೆರೆಮನೆ ಹೆಂಗಸಿಗೆ ಮುತ್ತು ಕೊಡುವ ಜಾತಿ' ಮುಂತಾದ ಅಪ್ಪಟ ಜನಪದ ಮಾತುಗಳು ಕಾದಂಬರಿಯ ಮೆರುಗನ್ನು ಹೆಚ್ಚಿಸಿವೆ (ಅಶ್ಲೀಲತೆಯ ಭಾವನೆ ಮೂಡುವುದಿಲ್ಲ). ಹಗಲು ಹಾದರಗಿತ್ತಿ, ಮುಂಡೆ, ಆರಾಮಿರಂಡೆ, ಲೌಡಿ, ಹೆತ್ತ ತಾಯಿ ಲಾಡಿ ಬಿಚ್ಚೊ ಲೌಡಿ ಮಕ್ಕಳು, ಹಾರುವ ಹಕ್ಕಿಗೆ ಹಾದರ ಕಟ್ಟುವ ಜಾತಿ, ನೆಕ್ಕುವ ನಾಯಿಗೆ ಲಿಂಗವೇನು, ಪಾಣೆಯು ಬಟ್ಟಲೇನು ? ಇವೆಲ್ಲ ಬೈಗುಳಗಳು. 'ನೀರಿಗೆ ಬೆಟ್ಟು ಚೀಪಿದಂಗೆ'. 'ಶಿಕ ಬುಟ್ಟು ಸ್ಯಾಲೆ ಸುತ್ತಿಗಂಡಂಗೆ' ಎಂಬವು. ಸನ್ನಿವೇಶದ ಅರ್ಥವನ್ನು ಸ್ಫುಟಗೊಳಿಸಬಲ್ಲ ಉತ್ಕೃಷ್ಟ ಉಪಮೆಗಳು. ಹೀಗೆ ಭಾಷೆಯ ಎಲ್ಲ ಪರಿಕರಗಳ ಸರ್ವಾಂಗ ಸುಂದರ ಬಳಕೆ ಈ ಕಾದಂಬರಿಯಲ್ಲಿದೆಯೆನ್ನಬಹುದು.

ದರುಮನಹಳ್ಳಿಯ ಹೆಸರು, ಅದಕ್ಕೆ ಲೇಖಕರು ಕೊಟ್ಟಿರುವ ದಂತಕಥೆ, ಚಿತ್ರಮೂಲನ ಕೋಟೆ. ಪು ೧೧–೧೨ರಲ್ಲಿ ಬರುವ ಕೌರವ ಪಾಂಡವರ ಉಲ್ಲೇಖ, ೨೦೧ರಲ್ಲಿ ಬರುವ ಮಹಾಭಾರತದ ನೀತಿಯ ವಿಮರ್ಶೆ, ೩೩೩ರಲ್ಲಿ ಬರುವ, ಮುಟ್ಟಾಗಿರುವ ಹೆಂಗಸು ಗಂಗವ್ವನನ್ನು ಊರ ಪಂಚಾಯಿತಿಯ ಮುಂದೆ ತಂದು ನಿಲ್ಲಿಸುವ ದೃಶ್ಯ, ೩೦೭ರಲ್ಲಿ ಲಕ್ಕನ ಬಾಲ್ಯವನ್ನು ಕೃಷ್ಣನಿಗೆ ಹೋಲಿಸಿರುವ ಮಾತು ಈ ಮುಂತಾದ ಹಲವಾರು ಪ್ರಸಂಗಗಳಲ್ಲಿ 'ವೈಶಾಖ' ಮಹಾಭಾರತದ ಹಿನ್ನೆಲೆಯನ್ನಿರಿಸಿಕೊಂಡಂತೆ ಕಾಣುವುದು ಸಹಜ. 'ವೈಶಾಖ' ತನ್ನಲ್ಲಿ ಹುದುಗಿರುವ ಗ್ರಾಮೀಣ ಕತೆ ಹಾಗೂ ಪರಿಸರಗಳಿಂದಾಗಿ 'ಗ್ರಾಮಭಾರತ'ವೆನ್ನಿಸಿಕೊಳ್ಳುವುದು ನಿಸ್ಸಂಶಯ. ಆದರೆ ಮೇಲಿನ ಇವಿಷ್ಟೇ ಆಧಾರಗಳ ಮೂಲಕ 'ಮಹಾಭಾರತ' ವೆನ್ನಿಸಿಕೊಳ್ಳುವುದು ದೂರಾನ್ವಯದ ಮಾತಾದೀತು !

ಶ್ರೇಷ್ಠ ಕವಿ ಮತ್ತು ಗಾಯಕನ ಸುಂದರ ಚಿತ್ರ : 'ಘನಾನಂದ'

ಎಚ್. ಬಿ. ಜ್ವಾಲನಯ್ಯ

ಡಾ. ವಸಂತ ಕವಲಿ ಅವರ 'ಘನಾನಂದ' ಕನ್ನಡದಲ್ಲಿ ಒಂದು ಹೊಸ ವಸ್ತು, ಶೈಲಿ ಮತ್ತು ರಂಗ ತಂತ್ರಗಳನ್ನು ಅಳವಡಿಸಿಕೊಂಡಿರುವ ನಾಟಕ.

ಈ ನಾಟಕದ ಕಥಾವಸ್ತು ಮೊಗಲರ ಕಡೆದಿನಗಳಲ್ಲಿ ಶೌರ್ಯ ಕಳೆದುಕೊಂಡು, ಅದನ್ನು ಮರೆಯಲೆಂದೇ ಶೃಂಗಾರ ವಿಲಾಸಿ ಸಂಭ್ರಮಗಳಲ್ಲಿ ಮುಳುಗಿದ್ದ ವಾತಾವರಣ – ಇದೆಲ್ಲದರ ಸಂಕೇತ ಮೊಗಲರ ಕೊನೆಯ ಬಾದಶಾಹ – ಮುಹಮ್ಮದ್‌ಶಾಹ ಈತನಿಗೆ ರಂಗೀಲಾ ಶಾಹ ಎಂಬ ಹೆಸರೂ ಇದೆ. ಹೆಸರೇ ಸೂಚಿಸುವಂತೆ, ಸಂಗೀತನೃತ್ಯ ಇವುಗಳ ನೆಲೆಯಲ್ಲಿ ಅವನು ಬೆಳೆದು ಬಂದುದು.

ಇಂತಹ ಸಂಧಿಕಾಲ, ಅನೇಕ ಸಂತ ಶೃಂಗಾರ ಕವಿಗಳನ್ನು ಸೃಷ್ಟಿಸಿತು. ಇಂತಹ ಅಪೂರ್ವ ಸೃಷ್ಟಿಯಲ್ಲಿ ಘನಾನಂದನೂ ಒಬ್ಬ. ವ್ರಜಭಾಷೆಯ ಶೃಂಗಾರಿಕ ಕವಿಗಳಲ್ಲೊಂದು ಉನ್ನತವಾದ ಸ್ಥಾನವನ್ನು ಪಡೆದವನು.

ವ್ರಜಭಾಷೆ ಹಿಂದಿಯ ಒಂದು ಸುಂದರ ಉಪಭಾಷೆ. ಕಾವ್ಯಕ್ಕೇ ಹೇಳಿ ಮಾಡಿಸಿದಂತಹ ಮೋಹಕ ಭಾಷೆ. ಈ ಭಾಷೆಯನ್ನು ಆಡುವ ಎಲ್ಲ ಜನರೂ

ಕವಿಗಳೂ ಎಂಬ ಭ್ರಮೆಯುಂಟಾಗುತ್ತದೆ. ಅಷ್ಟು ಸುಕುಮಾರ, ಸುಲಲಿತ, ಸಂಗೀತಕ್ಕೆಂದೇ ಉದ್ಭವಿಸಿತೊ, ಎನ್ನುವಷ್ಟರ ಮಟ್ಟಿಗೆ ಇದೊಂದು ಗೀತಭಾಷೆ.

ಕವಲಿಯವರು ಈ 'ಘನಾನಂದ' ನಾಟಕದ ಮೂಲಕ ವ್ರಜಭಾಷೆಯ ಸೊಬಗು, ಈ ಸೊಬಗಿನ ಸೊಗಡಿನಲ್ಲೇ ಸೃಷ್ಟಿಯಾದ ಒಬ್ಬ ಶ್ರೇಷ್ಠ ಕವಿ ಮತ್ತು ಗಾಯಕನ ಒಂದು ಸುಂದರ ಚಿತ್ರವನ್ನು ಕೊಡಲು ಯತ್ನಿಸಿದ್ದಾರೆ.

ನಾಟಕದ ವಸ್ತು : ಘನಾನಂದ ಮಹಮ್ಮದ್‌ಶಾಹನ ರಂಗೀಲಾನ ದರಬಾರಿನಲ್ಲಿ ಮೀರ್ ಮುಂಶಿಯಾಗಿ ನೌಕರಿಯಲ್ಲಿದ್ದ, ಹಾಗೂ ಪ್ರಸಿದ್ಧ ಧ್ರುಪದ ಗಾಯಕನಾಗಿದ್ದ. ಧ್ರುಪದ್ ರಾಗ ಉತ್ತರಾದಿ ಸಂಗೀತದಲ್ಲಿ ಒಂದು ಅಪೂರ್ವ ರಾಗ ಸಾಧನೆ. ಈ ರಾಗದ ಸಿದ್ಧಿಗಾಗಿ ಸಾಧಿಸಿದ ಗಾಯಕರು ಅನೇಕರು. ಆದರೆ ಅದರಲ್ಲಿ ಅಪೂರ್ವ ಸಿದ್ಧಿ ಪಡೆದವರು ಕೆಲವರು ಮಾತ್ರ. ಘನಾನಂದ ಇಂತಹವರಲ್ಲಿ ಶ್ರೇಷ್ಠ, ಈ ಶೃಂಗಾರ ಕವಿಯು ಗೃಹಸ್ಥನಾಗಿದ್ದರೂ ಕಲೆಯ ಸೆಳವಿಗೆ ಸಿಕ್ಕಿ 'ಸುಜಾನ್' ಎಂಬ ನರ್ತಕಿಯ ಮೋಹಪಾಶದಲ್ಲಿ ಸಿಕ್ಕಿಕೊಂಡು ಅವಳನ್ನೆ ತನ್ನ ಪ್ರೇರಕ ಶಕ್ತಿಯೆಂದು ಭಾವಿಸಿದ್ದ. ಅದೊಂದು ದುರ್ದಿನ. ಚಕ್ರವರ್ತಿ ಇವನ ಗಾನಸುಧೆ ಸವಿಯಲು ಆಶಿಸಿದಾಗ ಚಕ್ರವರ್ತಿಯ ಕಡೆ ಬೆನ್ನು ಹಾಕಿ, ಸುಜಾನಳ ಕಡೆ ಮುಖ ಮಾಡಿ ಹಾಡಿದ್ದನ್ನು ಕಂಡು ಚಕ್ರವರ್ತಿ ಕುಪಿತನಾಗಿ ದಿಲ್ಲಿಯಿಂದಲೇ ಓಡಿಸಿದ. ಸುಜಾನಳನ್ನೂ ತನ್ನ ಜೊತೆ ಬರಲು ಒತ್ತಾಯಿಸಿದಾಗ ಆಕೆ ಬರಲು ಒಪ್ಪಲಿಲ್ಲ. ಘನಾನಂದನ ಮನಸ್ಸಿಗೆ ಇದರಿಂದ ತುಂಬಾ ಆಘಾತವಾಗಿ ದುಃಖದಿಂದ ಬೃಂದಾವನಕ್ಕೆ ಹೊರಟು ಹೋದ. ಕೊನೆಯಲ್ಲಿ ನಂಬಿದ ಪತ್ನಿಯೂ ಇಲ್ಲ. ಪ್ರೀತಿಸಿದ ಪ್ರೇಯಸಿಯಿಂದಲೂ ವಂಚಿತನಾಗಿ ಸಾಂಸಾರಿಕ ವ್ಯಾಮೋಹ ವಿಮುಖನಾಗಿ ಭಗವಂತನಿಗೆ ಶರಣಾದರೂ ಅವನಲ್ಲೇ ತನ್ನ ಪ್ರೇಯಸಿಯನ್ನು ಗುರ್ತಿಸಿಕೊಂಡು ಕನಸುಗಾರ ಸಂತ ಕವಿಯಾದ. ಇವನ ಅಂತ್ಯವೂ ನಾದಿರ್‌ಶಾಹನ ವಿಜಯೋನ್ಮತ್ತ ಸೈನಿಕನೊಬ್ಬನ ಕತ್ತಿಯಿಂದ ಮುಕ್ತಾಯವಾಯಿತು.

ಕವಲಿಯವರು ಈ ವಸ್ತುವನ್ನು 13 ದೃಶ್ಯಗಳ ರಂಗ ನಾಟಕದಲ್ಲಿ ವೃದ್ಧಿ ಪಡಿಸಿದ್ದಾರೆ. ಈ ನಾಟಕದಲ್ಲಿ ಗಾಯನ, (ನೃತ್ಯ) ನರ್ತನ ಮತ್ತು ಅಭಿನಯ ಈ ಮೂರು ಉತ್ತಮ ನಾಟಕಕ್ಕೆ ಇರಬೇಕಾದ ಅರ್ಹತೆಗಳಾಗಿವೆ.

ನಾಟಕದ ಆರಂಭ ಆಕರ್ಷಣೀಯವಾಗಿ ಪ್ರಥಮ ಹಂತದಲ್ಲೇ ಪ್ರೇಕ್ಷಕರನ್ನು ಸೆಳೆದುಕೊಳ್ಳುತ್ತದೆ.

ಕನ್ನಡದ ವೃತ್ತಿರಂಗಭೂಮಿ–ಮರಾಠಿಯ ವೃತ್ತಿರಂಗಭೂಮಿಗಳಲ್ಲಿ ಹಿಂದಿನಿಂದಲೂ ಈ ಮೇಲ್ಕಂಡ ಮೂರು ನಾಟಕ ರಂಗಗಳಿಗೆ ಪ್ರಾಮುಖ್ಯತೆಯಿಂದಲೇ ತಾಸುಗಟ್ಟಲೆ ನಾಟಕಗಳಾದರೂ ಪ್ರೇಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾಗುತ್ತಿದ್ದುವು.

ಈ ಹಳೆಯ ತಂತ್ರವನ್ನೇ ಕವಲಿಯವರು ಹೊಸ ತಂತ್ರವನ್ನಾಗಿ ಬಳಸಿಕೊಂಡು ಈ ನಾಟಕವನ್ನು ರಚಿಸಿದ್ದಾರೆ. ಉತ್ತರ ಭಾರತೀಯ ಕವಿ-ಗಾಯಕನೊಬ್ಬನ

ಪರಿಚಯ ಮಾಡಿಸಿ ಕೊಡುವ ಸಾಹಸ ಮಾಡಿದ್ದಾರೆ.

ಅವರೇ ತಿಳಿಸಿರುವಂತೆ ಘನ ಆನಂದನ ಬಾಳಿನ ಕರುಣಕತೆಯ ಬಗೆಗೆ ಆಸಕ್ತಿ ಹುಟ್ಟಿ ಅವನ ಕವಿತೆ, ದೋಹಾಗಳ ಬಗೆಗೆ ಕುತೂಹಲ ಕೆರಳಿ, ಅದರ ಸೊಬಗಿಗೆ ಮಾರುಹೋಗಿ, ಹಾಡಿದ್ದು ನಂತರ ಇದೇ ವಸ್ತುವನ್ನು ರೇಡಿಯೊ ನಾಟಕವಾಗಿ ಪರಿವರ್ತಿಸಿದ್ದು, ಕೊನೆಯಲ್ಲಿ ರಂಗ ನಾಟಕವನ್ನಾಗಿ ಮಾರ್ಪಡಿಸಿದ್ದು ಒಂದು ವಿಶಿಷ್ಟ ಘಟನೆಯೇ ಸರಿ.

ಶ್ರೀ ಕವಲಿಯವರು – ವೃತ್ತಿಯಲ್ಲಿ ಆಕಾಶವಾಣಿ ನಾಟಕ ವಿಭಾಗದ ನಿರ್ದೇಶಕರಾಗಿದ್ದರೂ ಪ್ರವೃತ್ತಿಯಲ್ಲಿ ಸಂಗೀತಗಾರರು. ಜೊತೆಗೆ ಸಂಸ್ಕೃತ ಹಿಂದಿ ಇಂಗ್ಲಿಷ್ ಇವುಗಳ ಭಾಷಾ ಪಂಡಿತರು. ಚೆನ್ನಾಗಿ ಓದಿಕೊಂಡವರು. ಇವರಿಗೆ ಡಾಕ್ಟರೇಟ್ ಬಂದುದೇ ಷೇಕ್ಸ್‌ಪಿಯರ್‌ನ ನಾಟಕಗಳ ಮೇಲೆ ನಡೆಸಿದ ಆಳವಾದ ಅಧ್ಯಯನದಿಂದ.

ಈ ದೃಷ್ಟಿಯಿಂದ ಘನಾನಂದ ನಾಟಕವು ಒಂದು ಸಫಲ ಸಾಹಿತ್ಯ ಸಂಗೀತ ನೃತ್ಯ ನಾಟಕವಾಗಿ ಸೃಷ್ಟಿಯಾಗಿದ್ದರೂ ಇದರಲ್ಲಿ ಕೆಲವು ಕೊರತೆಗಳನ್ನು ಕಾಣಬಹುದು.

1 ಈ ನಾಟಕದಲ್ಲಿ ವ್ರಜಭಾಷೆಯ ಗೀತೆಗಳನ್ನು ಹಾಡುವುದು ಎಲ್ಲ ನಟರಿಗೂ ಸುಲಭ ಸಾಧ್ಯವಲ್ಲ. ಇಂತಹ ಶ್ರೇಷ್ಠ ನಟರನ್ನು ತಯಾರಿಸುವುದು ಬಹುಕಷ್ಟ. ಕವಲಿಯವರೇ ಹೇಳುವಂತೆ ಈ ಪಾತ್ರಗಳನ್ನು ವಹಿಸುವವರು ದ್ರುಪದ್, ಖಯಾಲ್ ಹಾಗೂ ಕುಮರೀ ಗಾಯನದಲ್ಲಿ ನಿಷ್ಣಾತರಾಗಿರುವುದವಶ್ಯಕ. ಹೀಗಿರುವಾಗ ಈ ನಾಟಕವನ್ನು ರಂಗದ ಮೇಲೆ ತರಲು ಎಷ್ಟು ಮಂದಿಗೆ ಸಾಧ್ಯ ?

2 ಘನಾನಂದನ ಸಮರ್ಥ ಗೀತೆಗಳನ್ನು ವ್ರಜಭಾಷೆಯಲ್ಲೇ ತಂದಿದ್ದಾರೆ. ವಿದ್ವಾಂಸರೂ ಸ್ವತಃ ಕವಿ ಗಾಯಕರೂ ಆದ ಕವಲಿಯವರು–ಈ ಗೀತೆಗಳ ಕನ್ನಡಾನುವಾದ ಮಾಡಿ ಹಾಡಿಸಿದ್ದಿದ್ದರೆ–ಕನ್ನಡ ಪ್ರೇಕ್ಷಕನಿಗೆ ಮಹಾಕವಿಯ ಕವಿತೆಗಳ, ದೋಹಾಗಳ ಪರಿಚಯವಾಗುತ್ತಿತ್ತು.

3 ನಾಟಕದ ವಸ್ತುವನ್ನು ನಾಟಕೀಕರಣಕ್ಕೆ ಪರಿವರ್ತಿಸುವಾಗ ಕವಲಿಯವರು ಆತುರಕ್ಕೆ ಸಿಕ್ಕಿದವರಂತೆ ಕಾಣುತ್ತಾರೆ. ಧ್ವನಿಪ್ರಧಾನವಾದ ರೇಡಿಯೋ ನಾಟಕಗಳಿಗಿಂತ ದೃಶ್ಯಪ್ರಧಾನವಾದ ರಂಗ ನಾಟಕಗಳಲ್ಲಿ ಸಂಘಟಿತ, ಸುವ್ಯವಸ್ಥಿತ, ಸರಳ ನಾಟಕದ ವಸ್ತುವಿನ ಪ್ರವಾಹವೂ ಅತಿ ಆವಶ್ಯಕ. ಈ ನಾಟಕದಲ್ಲಿ ಕೆಲವು ಅನಾವಶ್ಯಕ ಪಾತ್ರಗಳು ಬಂದು ಮೂಲ ವಾಹಿನಿಗೆ ಅಡೆ–ತಡೆಯಾದಂತೆ ಕಾಣುತ್ತಿದೆ. ಹದಿಮೂರು ದೃಶ್ಯಗಳ ನಾಟಕದಲ್ಲಿ ಹೆಚ್ಚು ದೃಶ್ಯಗಳಲ್ಲಿ ಘನಾನಂದನಿಗಿಂತ ಅನ್ಯ ಸಾಮಾನ್ಯ ಪಾತ್ರಗಳೇ ಬರುತ್ತವೆ. ಪಾತ್ರಗಳ ಮಾತುಗಳೂ ಅರ್ಧ ಮುಕ್ಕಾಲು ಪುಟ ತುಂಬಿ ಹೋಗಿವೆ. ಪ್ರೇಕ್ಷಕರ ಮನದಲ್ಲಿ ಘನಾನಂದನ ವ್ಯಕ್ತಿತ್ವ ಘನೀಭೂತವಾಗಿ ತುಂಬಿಕೊಳ್ಳುವಷ್ಟರಲ್ಲೇ ಶಿಥಿಲವಾದಂತೆ ಕಾಣುತ್ತದೆ. ಸಂಭಾಷಣೆ ಚಿಕ್ಕದಾಗಿದ್ದು ಶಕ್ತಿಶಾಲಿಯಾಗಿದ್ದರೆ ನಾಟಕದ ಸೊಗಸು ಇಮ್ಮಡಿಯಾಗುತ್ತದೆ.

ಇಷ್ಟಾದರೂ ಘನಾನಂದ ನಾಟಕದಲ್ಲಿ ಉತ್ತಮ ಅಂಶಗಳಿಗೇನೂ ಕೊರತೆಯಿಲ್ಲ. ಕವಲಿಯವರಂತೆ ಉದ್ದಾಮ ಗಾಯನ ಕಲೆಯಲ್ಲಿ ಪರಿಣತರ ಕೈಗೆ ಈ ನಾಟಕ ಸಿಕ್ಕಿದರೆ, ಅಂತಹವರು ಮಾತ್ರ ಇದನ್ನು ತುಂಬಾ ಯಶಸ್ವಿಯಾಗಿ ಪ್ರದರ್ಶಿಸ ಬಹುದು.

ರಾಷ್ಟ್ರೀಯ ಭಾವೈಕ್ಯವನ್ನು ಸಾಧಿಸಿರುವ ಇವರ ಅದ್ವಿತೀಯ ಸಾಹಸವನ್ನು ಯಾರಾದರೂ ಮೆಚ್ಚ ತಕ್ಕಂತಹದೇ ಸರಿ. ಸೃಜನಶೀಲ ನಿಷ್ಠಾವಂತ ನಾಟಕಕಾರರು ಇವರು. ಸದಾ ಪ್ರಯೋಗಶೀಲ ಚಿಂತನ ಇವರದು. ಈ ಚಿಂತನ ಮಂಥನಗಳ 'ಘನಾನಂದ'ದಂತಹ ಹೊಸ ವಸ್ತು ನಿರೂಪಣೆ, ನಾಟಕದ ತಂತ್ರಗಳನ್ನು ಒಳಗೊಂಡ ಹೊಸ ಹೊಸ ನಾಟಕಗಳು ಇವರ ಲೇಖನಿಯಿಂದ ಹರಿದು ಬಂದು ಕನ್ನಡ ನಾಟಕ ಭಂಡಾರ ತುಂಬಲಿ. ಕನ್ನಡದಲ್ಲಿ ನಾಟಕದ ಅಭಾವವಿದೆ ಎಂಬ ಕೊರತೆಯನ್ನು ನಾಟಕಕಾರ ಕವಲಿಯವರು ನಿವಾರಿಸಲಿ. ಇದು ನಮ್ಮೆಲ್ಲರ ಆಶಯ.

ಲಾಲಿತ್ಯಪೂರ್ಣವಾದ ಬರಹ : 'ಭಗ್ನ ಹೃದಯ'

ಕಾ. ತ. ಚಿಕ್ಕಣ್ಣ

ಪ್ರೇಮದ ವಸ್ತು ಕುರಿತ ಕಾದಂಬರಿಗಳು, ಕಥೆಗಳು, ಕವನಗಳು ಬಹುಸಂಖ್ಯೆಯಲ್ಲಿ ಹೊರಬಂದಿವೆ. ವಿವಿಧ ಬಗೆಯಲ್ಲಿ ವಿವಿಧ ಆಶಯಗಳನ್ನಿರಿಸಿಕೊಂಡು ಸುಖಾಂತವಾಗುವ ದುಃಖಾಂತವಾಗುವ ಕಾದಂಬರಿಗಳು ಕಡಿಮೆಯೇನಿಲ್ಲ. ಕಾಶಿವಿಶ್ವನಾಥ ಶೆಟ್ಟರ 'ಭಗ್ನ ಹೃದಯ' ಕೂಡ ಶೀರ್ಷಿಕೆಯೇ ಹೇಳುವಂತೆ, ದುರಂತ ಪ್ರಣಯಿಗಳ ಜೀವನ ನಿರೂಪಿಸುವ ಕಾದಂಬರಿ.

ಒಟ್ಟು ಕಥೆ ಹೀಗಿದೆ : ಶಾರದೆ ಎಂಬುವಳು ಮುತ್ತಪ್ಪನವರ ಮುದ್ದುಮಗಳು. ಚಿಕ್ಕಂದಿನಲ್ಲೇ ತನ್ನ ತಾಯಿಯನ್ನು ಕಳೆದುಕೊಂಡವಳು. ತಂದೆಯ ಅಕ್ಕರೆಯ ಆರೈಕೆಯಲ್ಲಿ ಬೆಳೆದಳು. ತಂದೆಗೆ ಸುತ್ತಮುತ್ತಲಿನ ಸಂಬಂಧಿಕರ ಒತ್ತಾಯದಿಂದ ಎರಡನೆಯ ಮದುವೆ ಆಗುತ್ತದೆ. ಅನಂತರ ತಂದೆಯ ಪ್ರೀತಿ ಮಗಳ ಮೇಲೆ ಇತ್ತಾದರೂ ಅದರಲ್ಲಿ ತೀವ್ರತೆ ಕಡಿಮೆಯಾಗುತ್ತದೆ. ಎದುರು ಮನೆಯ ಕೃಷ್ಣಯ್ಯನೊಡನೆ ಶಾರದೆಯ ಸಲುಗೆ ಬೆಳೆದು ಅದು ಮುಗ್ಧ ಪ್ರೇಮಕ್ಕೆ ತಿರುಗುತ್ತದೆ. ಮಲತಾಯಿಯ ಕಾಟ ಬೇರೆ. ಗುಪ್ತವಾಗಿ ನಡೆಯುತ್ತಿದ್ದ ಈ ವ್ಯವಹಾರ ಬಯಲಾದ ಮೇಲೆ ಶಾರದೆಗೆ ಚಿಕ್ಕಮ್ಮನ ಕಿರುಕುಳ ಅತಿಯಾಗುತ್ತದೆ. ಕೊನೆಗೆ ಶಾರದೆ ಮುತ್ತಪ್ಪನ

ಮಾತಿನಂತೆ ಚಿಕ್ಕಪ್ಪ–ವೀರಪ್ಪನ ಮನೆಗೆ ಬರುತ್ತಾಳೆ. ವೀರಪ್ಪ ಮುತ್ತಪ್ಪನ ತಮ್ಮ. ವೀರಪ್ಪನ ಹೆಂಡತಿ ರಾಜಮ್ಮ–ಶಾರದೆ ಅನ್ಯೋನ್ಯವಾಗಿರುತ್ತಾರೆ. ಆದ್ದರಿಂದ ಶಾರದೆ ಅಲ್ಲೇ ಉಳಿಯುತ್ತಾಳೆ. ಅಲ್ಲಿ ಚಿಕ್ಕಮ್ಮನ ಮಕ್ಕಳೊಡನೆ ಬೆರೆಯುತ್ತಾಳೆ. ಪಕ್ಕದ ಮನೆ ಮಾಣಿಕ್ಯಳ ಸ್ನೇಹವೂ ದೊರಕುತ್ತದೆ. ಇಬ್ಬರೂ ಆತ್ಮೀಯರಾಗುತ್ತಾರೆ.

ಈ ಮಧ್ಯೆ ಮಾಣಿಕ್ಯಳ ಮನೆಯಲ್ಲಿ ರೂಮು ಮಾಡಿಕೊಂಡು ಓದುತ್ತಿದ್ದ ಸ್ವಾಮಿ ಮಾಣಿಕ್ಯಳನ್ನು ಪ್ರೀತಿಸುತ್ತಿದ್ದ. ಅವಳೂ ಬಹುವಾಗಿ ಅವನನ್ನು ಪ್ರೇಮಿಸುತ್ತಿದ್ದಳು. ಇಬ್ಬರ ಆಂತರಿಕ ಸಂಬಂಧ ಚೆನ್ನಾಗಿ ಬೆಳೆಯುತ್ತದೆ. ಇತ್ತ, ಹಳ್ಳಿಯಲ್ಲಿ ಸ್ವಾಮಿ ತನ್ನ ಮಾವನ ಮಗಳು ಶಾಂತಳನ್ನು ಪ್ರೀತಿಸಿ, ಅದು ಮದುವೆಯಾಗುವ ಹಂತಕ್ಕೆ ಬಂದಿತ್ತು. ಆದರೆ ಸ್ವಾಮಿ ಇಲ್ಲಿ ಮಾಣಿಕ್ಯಳನ್ನೂ ಪ್ರೀತಿಸುತ್ತಾನೆ. ಇತ್ತ ಮಾಣಿಕ್ಯ ; ಅತ್ತ ಶಾಂತ. ಈ ಸುಮಾರಿನಲ್ಲಿ ಮಾಣಿಕ್ಯಳ ಮೂಲಕ ಶಾರದೆಯ ಪರಿಚಯ ಸ್ವಾಮಿಗಾಗುತ್ತದೆ. ಸ್ವಾಮಿಗೆ ಮಾಣಿಕ್ಯಳಿಗಿಂತ ಶಾರದೆಯೇ ಇಷ್ಟವಾಗುತ್ತಾಳೆ. ಇವಳನ್ನು ಮದುವೆಯಾಗಬೇಕೆಂಬ ಆಸೆ ಇರಿಸಿಕೊಳ್ಳುತ್ತಾನೆ. ತನ್ನ ರೂಮಿನಲ್ಲಿಯೇ ಓದಲು ಇರಿಸಿಕೊಂಡಿದ್ದ ತನ್ನ ಸಂಬಂಧಿ ಸರ್ವೇಶ್ವರನ ಉಡಾಳತನ ಬೇರೆ. ಈ ಮಧ್ಯೆ ಖಳನಾಯಕನಂತೆ ರಾಜಮ್ಮನ ಸಂಬಂಧಿ ರಾಜಣ್ಣನ ಆಗಮನ. ರಾಜಣ್ಣನಿಗೆ ಶಾರದಯನ್ನು ಮದುವೆಯಾಗಬೇಕೆಂಬ ಹಂಬಲ. ಆದರೆ ಶಾರದೆಗೆ ಇಷ್ಟವಿಲ್ಲ. ರಾಜಮ್ಮನಿಗೂ ಈ ಮದುವೆ ಆಗಬೇಕೆಂಬ ಅಭಿಪ್ರಾಯ. ಮಾಣಿಕ್ಯ–ಶಾರದೆಯರ ಆತ್ಮೀಯತೆ. ಮಾಣಿಕ್ಯಳ ಜೊತೆ ಸ್ವಾಮಿ ಶಾರದೆಯ ಕೈಹಿಡಿಯುತ್ತೇನೆಂದು ತನ್ನ ಹಂಬಲ ತಿಳಿಸುತ್ತಾನೆ. ಮಾಣಿಕ್ಯಳ ತ್ಯಾಗ. ತಮ್ಮ ವೈವಾಹಿಕ ಬದುಕನ್ನು ಇಲ್ಲಿದ್ದು ಎದುರಿಸಲಾಗುವುದಿಲ್ಲವೆಂದುಕೊಂಡ ಸ್ವಾಮಿ–ಶಾರದೆ, ಇಬ್ಬರೂ ಅಲ್ಲಿಂದ ತಪ್ಪಿಸಿಕೊಳ್ಳಲು ರೈಲು ಹತ್ತುತ್ತಾರೆ. ದಾರಿ ಮಧ್ಯೆ ತಮ್ಮ ಮಾವನ ಕೈಗೆ ಸಿಕ್ಕಿಕೊಂಡ ಸ್ವಾಮಿ ಅವನಿಂದ ತಪ್ಪಿಸಿಕೊಳ್ಳಲು ಯತ್ನಿಸಿ ಆಕಸ್ಮಿಕವಾಗಿ ರೈಲಿಗೆ ಸಿಕ್ಕಿ ಸಾಯುತ್ತಾನೆ. ಶಾರದೆ ಇದನ್ನೆಲ್ಲ ಮೂಕವಾಗಿ ನೋಡಿ ಓಡುತ್ತಿರುವ ರೈಲಿನಿಂದ ತಾನೂ ಬಿದ್ದು ಸಾಯುತ್ತಾಳೆ. ಕಾದಂಬರಿ ಇಲ್ಲಿಗೆ ಕೊನೆಗೊಳ್ಳುತ್ತದೆ. ಇದಿಷ್ಟು ಸೂಕ್ಷ್ಮವಾಗಿ ಇಲ್ಲಿನ ಕಥಾ ಹಂದರ.

ಲೇಖಕರು ಮಧ್ಯೆ ಮಧ್ಯೆ ಆಯಾಯ ಪಾತ್ರಗಳನ್ನು ಕುರಿತೋ ಪ್ರಸಂಗಗಳನ್ನು ಕುರಿತೋ ತಮ್ಮ ಅಭಿಪ್ರಾಯ ನೀಡುತ್ತಾರೆ. ಈ ಬಗೆಯ ಅಭಿಪ್ರಾಯಗಳು ಇಡೀ ಕಾದಂಬರಿಯನ್ನು ಸೃಷ್ಟಿಸಿರುವ ಪರಿಕ್ರಮಕ್ಕೂ ಅನ್ವಯವಾಗುತ್ತದೆ. ಉದಾ: ಜಾತಿ ಸಮಸ್ಯೆ ಕುರಿತ ಪಾರಂಪರಿಕ ದೃಷ್ಟಿಕೋನವನ್ನು ನಾವಿಲ್ಲಿ ಕಾಣಬಹುದು. ಜಾತಿಯ ಬಗ್ಗೆಯಾಗಲಿ, ಪ್ರೇಮದ ಬಗ್ಗೆಯಾಗಲಿ ಆದರ್ಶದ ಪ್ರಕ್ರಿಯೆ ಉದ್ದಕ್ಕೂ ಹರಿದಿದೆ. ಕಾದಂಬರಿಯ ಆರಂಭದ ಹಂತದಲ್ಲಿಯೇ ತನ್ನ ಮಗಳು ಬೇರೆಯವನನ್ನು ಪ್ರೇಮಿಸಿದ ಸುದ್ದಿ ತಿಳಿದ ಶಾರದೆಯ ತಂದೆ ಮುತ್ತಪ್ಪ ಹೇಳುವ "ಜಾತಿ ಕುಲ ಎಲ್ಲ

ಹಾಳಾಗಿ ಹೋಯಿತು. ಈಗ ಇರೋದು ಹೆಣ್ಣೊಂದು ಜಾತಿ, ಗಂಡೊಂದು ಜಾತಿ. ಹಜಾಮನಾಗಲಿ, ಹಾರುವನಾಗಲಿ ಬಣ್ಣಕ್ಕೆ ಬಲಿ, ಬೆಂಕಿಗೆ ಬೀಳುವ ಪತಂಗದ ಹಾಗೆ" (ಪು. ೪)– ಈ ಮಾತುಗಳ ಮುಖ್ಯ ಸಂಗತಿಯಾಗಬಹುದಾಗಿದ್ದ ಜಾತಿ ಸಮಸ್ಯೆ ಈ ಕಾದಂಬರಿಯಲ್ಲಿ ತೀವ್ರವಾಗಿ ಕಾಡುವುದೇ ಇಲ್ಲ. ಇದು ಕಾದಂಬರಿಕಾರರಿಗೆ ಇಷ್ಟವೂ ಇದ್ದಂತಿಲ್ಲ. ಆದರೆ ಪ್ರೀತಿಯ ಉಳಿದ ವಿವಿಧ ಬಗೆಗಳನ್ನು ಬಣ್ಣಿಸಿರುವ ಸೂಕ್ಷ್ಮ ರೀತಿಯಂತೂ ಮೆಚ್ಚುವಂತಿದೆ. ಮುತ್ತಪ್ಪ–ಶಾರದೆ, ಶಾರದೆ–ಮಾಣಿಕ್ಯ, ರಾಜಮ್ಮ–ಶಾರದೆ. ಸ್ವಾಮಿ–ಮಾಣಿಕ್ಯ, ಶಾರದೆ-ಸ್ವಾಮಿ, ಕೃಷ್ಣಯ್ಯ–ಶಾರದೆ, ಮಾಣಿಕ್ಯ-ಶಾಂತ, ಶಾಂತ–ಶಾರದೆ-ಇವರುಗಳ ವರ್ತುಲದಲ್ಲಿ ಪ್ರೀತಿಯ ವಿವಿಧ ದೃಷ್ಟಿಗಳು ಬಹಳ ಚೆಲುವಾಗಿ ಮೈಗೂಡಿವೆ. ಕಾದಂಬರಿ ನಮ್ಮನ್ನು ಹಿಡಿದು ಓದಿಸುವುದು ಇದೊಂದು ಗುಣಧರ್ಮದ ವಿಶೇಷದಿಂದಾಗಿಯೇ.

ಇಡಿಯಾಗಿ ಕಾದಂಬರಿಯನ್ನು ಓದಿ ಇಟ್ಟನಂತರ, ಸಾಮಾಜಿಕ ಸಂಬಂಧ ಹಾಗೂ ವೈರುದ್ಧ್ಯದ ಬಗೆಗೆ ಲೇಖಕರಿಗಿರುವ ನಂಬಿಕೆಗಳು ಸಂಪ್ರದಾಯವಾದಿ ಗುಣದ್ದು ಎಂಬುದು ಥಟ್ಟನೆ ಅರಿವಿಗೆ ಬರುತ್ತದೆ. ಇದಕ್ಕೆ ನಿದರ್ಶನವಾಗಿ ಒಂದು ಪ್ರಕರಣ ಉಲ್ಲೇಖಿಸಬಹುದು : ಕೃಷ್ಣಯ್ಯ–ಶಾರದೆ ಪರಸ್ಪರ ಪ್ರೀತಿಸಿದವರು. ಸನ್ನಿವೇಶದ ಇಕ್ಕಟ್ಟಿಗೆ ಸಿಕ್ಕಿದಾಗ, ಬದುಕಿಗೆ ಆಸರೆಯಾಗು, ಬಂದು ಬಿಡುತ್ತೇನೆಂದು ಶಾರದೆ ಕೇಳು ತ್ತಾಳೆ. ಕೃಷ್ಣಯ್ಯ ಅಸಹಾಯಕನಾಗಿ, ನಿರುತ್ತರಿಯಾಗುತ್ತಾನೆ. ಇದರಿಂದಾಗಿ ಕೃಷ್ಣಯ್ಯನಿಂದ ಶಾರದೆ ದೂರವಾಗಬೇಕಾಗುತ್ತದೆ. ಸ್ವಲ್ಪ ದಿನವಾದ ಬಳಿಕ ಮತ್ತೆ ತಾವಿಬ್ಬರೂ ಒಂದಾಗುವಂತೆ ಕೇಳಿಕೊಳ್ಳಲು ಕೃಷ್ಣಯ್ಯ ಬರುತ್ತಾನೆಂದು ತಿಳಿದ ಶಾರದೆ ಯೋಚಿಸುತ್ತಾಳೆ. ಆ ಒಂದು ಸನ್ನಿವೇಶದಲ್ಲಿ : "ಗಂಡನಾದವನು ಕುಡುಕ ನಾಗಲಿ, ಕೃಪಣನಾಗಲಿ, ಬಡವನಾಗಲಿ, ಬಲ್ಲಿದನಾಗಲಿ, ಹೆಂಡತಿಗೆ ಮೋಸ ಮಾಡಲಿ, ಸುಖವಾಗಿಡಲಿ ಅವಳ ಕರ್ತವ್ಯವಲ್ಲವೆ ಅವನನ್ನೇ ಶರಣೆಂದು ಕಾಲು ಹಿಡಿಯುವುದು ? ಸ್ತ್ರೀ ಧರ್ಮದ ತತ್ತ್ವವಾದರೂ ಏನು ?" (ಪು. ೫೪). ಕೃಷ್ಣಯ್ಯನ ಬಗೆಗಿದ್ದ ಮಮತೆಯ ಒಂದು ಮುಖವನ್ನು ಶಾರದೆ ಈ ರೀತಿ ಪ್ರಕಟಿಸುತ್ತಾಳೆ: 'ಪ್ರೀತಿ'ಯ ಸುತ್ತಲೇ ಸುತ್ತುವ ಈ ಕಾದಂಬರಿಯಲ್ಲಿ ಪ್ರೀತಿಯಿಂದ ಎಲ್ಲರಿಗೂ ಹಾನಿ ; ಅದು ಅರ್ಥವಿಲ್ಲದ್ದು–ಎಂಬುದನ್ನು ಮೇಲೆ ತಿಳಿಸಿದ ಪಾತ್ರಗಳ ಮೂಲಕವೂ ಒಂದಿಲ್ಲೊಂದು ರೀತಿಯಲ್ಲಿ ಲೇಖಕರು ವ್ಯಂಜಿಸುತ್ತಾರೆ. ಅವರವರ ಜಾತಿಯಲ್ಲೇ ಧರ್ಮದಲ್ಲೇ ಆಚಾರದಲ್ಲೇ ಬದುಕಬೆಕೆಂಬ ತತ್ತ್ವ ಇಲ್ಲಿ ಧ್ವನಿತವಾಗುತ್ತದೆ. ಇದಕ್ಕೆ ಅಪರೂಪವಾದ ಅಪವಾದವೆಂಬಂತೆ ಶಾರದೆ ಮಾಣಿಕ್ಯಳಿಗೆ ಕಾಫಿ ಕುಡಿಸುವ ಸನ್ನಿವೇಶ ಮಾತ್ರ ಭಿನ್ನವಾಗಿದೆ.

ಕಾದಂಬರಿಯ ವಸ್ತು ನಾನು ಮೊದಲೇ ಹೇಳಿದಂತೆ. ಸ್ವಾಮಿ, ಕೃಷ್ಣಯ್ಯನಂಥ ಆದರ್ಶವಾದಿಗಳು–ಪ್ರೇಮಿಸಬೇಕೆಂಬುವರು–ದುರಂತಕ್ಕೊಳಗಾಗುವುದು ; ಶಾರದೆ–ಮಾಣಿಕ್ಯ–ಶಾಂತ ಅಂಥವರ ಬಾಳೂ ದುರಂತವಾಗುತ್ತದೆ. ಲೇಖಕರು ಆದರ್ಶ

ಮಯ ಬದುಕಿನ ಬಗೆಗೆ ಪ್ರೇರಿತರಾಗಿರುವುದರಿಂದ, ಅದಕ್ಕೆ ತಕ್ಕಂತೆ ಕಾದಂಬರಿಯ ರಚನೆ ರೂಪುಗೊಂಡಂತೆ ತೋರುತ್ತದೆ. ಈ ರಚನೆಯೂ ಕೂಡ ಉದ್ದೇಶಪೂರ್ವಕವಾಗಿಯೇ ಇರಬಹುದು. ಇದೇ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳಬೇಕಾದದ್ದು ಅ.ನ.ಕೃ., ಕೃಷ್ಣಮೂರ್ತಿ ಪುರಾಣಿಕರಂಥವರ ಕಾದಂಬರಿಗಳಲ್ಲಿ ಈ ವಸ್ತುವೇ ವಿವಿಧ ಮಗ್ಗುಲುಗಳ ರಸಸನ್ನಿವೇಶಗಳಾಗಿಯೋ ಉತ್ತುಂಗ ಆದರ್ಶವಾದಿಯಾಗಿಯೋ ಬೆಳೆದಿರುತ್ತವೆ ಎಂಬುದನ್ನು. ಕಾಶಿವಿಶ್ವನಾಥ ಶೆಟ್ಟರಿಗೆ ಹಳೆ ಪೀಳಿಗೆಯ ರಸನಿಷ್ಠ ಸಂಪ್ರದಾಯವೇ ಬೇಕೆಂಬುದನ್ನು ಕಾದಂಬರಿ ತನ್ನ ಮೇಲ್ಪದರದಲ್ಲೇ ತೋರಿಸುತ್ತದೆ. ನನ್ನ ಈ ಮಾತಿನ ಅರ್ಥವಾದರೂ ಇಷ್ಟೆ: ಒಂದು ವರ್ಗದವರ ಬದುಕನ್ನು ಇಲ್ಲಿ (ಇದು ಮಧ್ಯಮ ವರ್ಗದವರ ಕುರಿತದ್ದು) ಚಿತ್ರಿಸುವಾಗ ಸಮಸ್ಯೆಯ ಮೂಲಭೂತ ಸಾಮಾಜಿಕ ಆಳಕ್ಕೆ ಇಳಿಯದೆ ಹೊರ ನೋಟದಲ್ಲೇ ತಿರುಗುವ ಕ್ರಮ ದಾರಿ ತಪ್ಪಿಸುತ್ತದೆ. ಅ–ಆ ಅಥವಾ ಕ–ಕಾ ಅಂದುಬಿಟ್ಟರೆ ಅದು ಕಲಾಕೃತಿಯಾಗಿ ರೂಪುಗೊಳ್ಳುವುದಿಲ್ಲ. ಕಲಾಕೃತಿ ರೂಪುಗೊಳ್ಳುತ್ತಾ ನಾವಿನ್ಯಗೊಳ್ಳುವುದು ವಸ್ತುವಿನ ಸೂಕ್ಷ್ಮಗಳನ್ನು ಕೆದಕುತ್ತಾ ಅದರ ಆಳಕ್ಕೆ ಇಳಿದು ಧ್ವನಿ ತರಂಗವನ್ನು ಎಬ್ಬಿಸಿದಾಗ ಮತ್ತು ಅದು ಓದುಗನ ಸಹಜ ಸಹವಾಸದಲ್ಲಿ ಬೆರೆತುಕೊಂಡಾಗ ಎಂಬುದು ನನ್ನ ನಂಬಿಕೆ. ಈ ಬಗೆಯ 'ವಿನ್ಯಾಸ' ಆ ವಸ್ತುವಿನ ಆತ್ಮವಾಗಬೇಕಾಗುತ್ತದೆ. ಆದರೆ ಈ ಕಾದಂಬರಿಯಲ್ಲಿ ಈ 'ವಿನ್ಯಾಸ' ಬಹು ತೆಳ್ಳಗಾಗಿದೆ.

'ಭಗ್ನ ಹೃದಯ' ಹೆಸರು ಚೆನ್ನಾಗಿದೆ. ಅ.ನ.ಕೃ.ರಂಥ ತಲೆಮಾರಿನ ಜನಪ್ರಿಯ ಕಾದಂಬರಿಕಾರರೂ ಇಂಥ ಬಗೆಯಲ್ಲೇ ಶೀರ್ಷಿಕೆ ಕೊಡುತ್ತಿದ್ದರು. ಆದರೆ ಭಗ್ನ ಹೃದಯದ ಪಾತ್ರಗಳು ಸಮಸ್ಯೆಯ ಕ್ರೌರ್ಯದ ಆಳಕ್ಕೆ ನಮ್ಮನ್ನು ಕರೆದೊಯ್ಯುವುದಿಲ್ಲ : ಮೇಲ್ಪದರದಲ್ಲೇ ನಿಂತುಬಿಡುತ್ತವೆ—ಎಂದು ಮತ್ತೆ ಹೇಳಬೇಕಾಗುತ್ತದೆ. ಇದಕ್ಕೆ ಕಾರಣ ಸಾಮಾಜಿಕ ಪರ್ತುಲಕ್ಕೆ ಕಾರಣವಾಗಿರುವ ವೈಚಾರಿಕ ನೋಟದ ಅಭಾವವೇ ಅನಿಸುತ್ತದೆ. ಶಾರದೆ ಅಥವಾ ಸ್ವಾಮಿಯರನ್ನು ದುರಂತಕ್ಕೆ ತಳ್ಳುವುದರ ಮೂಲಕ ಸಮಸ್ಯೆಯನ್ನು ತುಂಬ ಸರಳೀಕರಿಸಿ ಬಿಟ್ಟಂತಾಗುತ್ತದೆ. ಪ್ರೇಮದ ವಸ್ತು ಇರಿಸಿಕೊಂಡು ಅನೇಕ ಕಾದಂಬರಿಗಳು ಬಂದರೂ ಆ ಒಂದೊಂದು ಕಾದಂಬರಿಯಲ್ಲೂ ಪ್ರೇಮದ ತಾತ್ವಿಕ ತಳಹದಿ; ನೋಡುವ ನೋಟ ಬೇರೆಯೇ ಆಗಿರಲು ಸಾಧ್ಯವಿದೆ. ಪ್ರೇಮವೆಂದ ಕೂಡಲೆ ಭಾವನೆಗಳನ್ನು ಕೆರಳಿಸಿ, ಹೆಂಗರುಳನ್ನು ಮರುಗಿಸುವುದು ಎಂದಲ್ಲ. ಪ್ರತಿಯೊಂದಕ್ಕೂ ಅದರ ಗಟ್ಟಿತನವಿದ್ದೇ ಇರುತ್ತದೆ. ಆದರೆ ಸಿನಿಮೀಯ ರೀತಿಯಲ್ಲಿ ದುರಂತಗೊಳಿಸುವುದು ಕಾದಂಬರಿಯನ್ನು ಪ್ರತಿಗಾಮಿಯಾಗಿಸಿಬಿಡುತ್ತದೆ. ಇಲ್ಲಿನ ಪಾತ್ರ ರಚನೆ, ಸನ್ನಿವೇಶ ನಿರ್ಮಾಣ, ಸಂಗತಿಗಳ ಆಯ್ಕೆ, ಘಟನೆಗಳ ತದತ್ ಸಂಬಂಧ–ಇವುಗಳನ್ನೆಲ್ಲ ನೋಡಿಕೊಂಡು ಬಂದರೆ ಭಗ್ನ ಹೃದಯ'ದಲ್ಲಿ ಪ್ರತಿಗಾಮಿ ನಿಲುವು ಇರುವುದನ್ನು ಕಾಣಬಹುದೆಂದು ನಾನು ಭಾವಿಸಿದ್ದೇನೆ.

'ಭಗ್ನಹೃದಯ' ಜನಪ್ರಿಯ ಕಾದಂಬರಿಗಳ ಜಾಡು ಹಿಡಿದು ಬಂದಿರುವಂಥದ್ದು. ಅಂದ ಮಾತ್ರಕ್ಕೆ ಜನಪ್ರಿಯತೆ ಸಮಸ್ಯೆಯ ಆಳದ ವಿವಿಧ ಮುಖಗಳನ್ನು ಇದ್ದದ್ದಕ್ಕಿದ್ದಂತೆ ಅನಾವರಣ ಮಾಡುವುದಿಲ್ಲ: ವಸ್ತುವಿನ ನೈಜಭಾವವನ್ನು ಪ್ರಕಟಿಸುವುದಿಲ್ಲ. ಮೇಲಿನ ಪ್ಯಾರಾದಲ್ಲಿ ನಾನು ಅಭಿಪ್ರಾಯಿಸಿದಂತೆ, ಗಟ್ಟಿಯಾದ ತಾತ್ವಿಕ ತಳಹದಿ ಇದ್ದು, ಎಲ್ಲ ದುಗುಡಗಳನ್ನೂ ಮರೆತು ಮುಂದುವರಿದರೆ ಮಾತ್ರ ಹೆಚ್ಚು ಹರಿತವಾದ, ಸೂಕ್ಷ್ಮವಾದ ಕಾದಂಬರಿಯೊಂದು ಮೈದಾಳಲು ಸಾಧ್ಯ. ಕುಶಲ ಬರವಣಿಗೆ ಇದ್ದರೂ ಭಾಷೆ ಯಾಂತ್ರಿಕಗೊಂಡು ಜೊತೆಗೆ ಕಾದಂಬರಿಯ ಒಟ್ಟು ಬಂಧ, ಶಿಲ್ಪ ಏಳು–ಬೀಳನ್ನು ಅನುಭವಿಸುತ್ತ ಹೋಗುತ್ತದೆ. ಈ ಸಮಸ್ಯೆ ಜನಪ್ರಿಯತೆಯ ಗುಂಗು ಹತ್ತಿಕೊಂಡ ಎಲ್ಲ ಕಾದಂಬರಿಗಳಿಗೂ ಸಾಮಾನ್ಯವಾಗಿ ಅನ್ವಯಿಸುತ್ತದೆ (ಪತ್ರಿಕೆಗಳಿಗೆ ಧಾರವಾಹಿಗಾಗಿ ಬೆಳೆಗಾಗುವಷ್ಟರಲ್ಲಿ ಹುಟ್ಟಿಕೊಳ್ಳುತ್ತಿರುವ ಕಾದಂಬರಿಗಳನ್ನೂ ನಾವಿಲ್ಲಿ ನೆನಪಿಸಿಕೊಳ್ಳಬಹುದು). 'ಭಗ್ನಹೃದಯ' ಕಾದಂಬರಿಯನ್ನು ಓದುತ್ತ ಹೋದಂತೆ ಈ ವಿಚಾರಕ್ಕೆ ನಾವು ಬಂದುಬಿಡುತ್ತೇವೆ.

ಮುನ್ನುಡಿಯಲ್ಲಿ ಎಂ. ಜೆ. ಕೋದಂಡರಾಮಶೆಟ್ಟರು ಹೇಳಿರುವ ಈ ಮಾತು ಕಾದಂಬರಿಯ ರಚನೆಯಲ್ಲಿ ಮೈದಾಳಿರುವ ಕಾದಂಬರಿಕಾರರ ನಿಲುವನ್ನು ಎತ್ತಿ ತೋರಿಸುತ್ತದೆ:

"ಅಸಾಧು ವಾಕ್ಯ, ಅಶ್ಲೀಲ ಚಿತ್ರಣ, ಅನಪೇಕ್ಷಿತ ಪಾತ್ರಸೃಷ್ಟಿ ಮತ್ತು ಸನ್ನಿವೇಶಗಳು ಇವರ ಕಾದಂಬರಿಗಳಲ್ಲಿ ಇಲ್ಲವೆನ್ನಬಹುದು. ಅದರಲ್ಲಿಯೂ ಸ್ತ್ರೀ ಪಾತ್ರಗಳು ಇವರ ಕಾದಂಬರಿಗಳಲ್ಲಿ ತಮ್ಮ ನೈಜತೆಯನ್ನು ಕಾಪಾಡಿಕೊಂಡು ಓದುಗರ ಮುಂದೆ ಸಜೀವವಾಗಿ ಬಂದು ನಿಲ್ಲುತ್ತವೆ. ಘಟನೆಗಳು, ಭಾಷಣಗಳು, ಕುತೂಹಲವನ್ನು ಕೆರಳಿಸುತ್ತ ಮುಂದೆ ಮುಂದೆ ಆತುರವಾಗಿ ಓದುವಂತೆ ಮಾಡುತ್ತವೆ. ಈ ಮಾತುಗಳ ಮೊದಲ ವಾಕ್ಯಗಳು ಮಾತ್ರ ಕಾದಂಬರಿಯಲ್ಲಿ ಸಾರ್ಥಕತೆ ಪಡೆದಿವೆ. ಶಾರದೆ–ಮಾಣಿಕ್ಯರು ಆದರ್ಶ ಪ್ರತಿಮೆಗಳಾಗಿ ನಿಲ್ಲಬೇಕೆಂಬ ತಹ ತಹ ಕಾದಂಬರಿಕಾರರಿಗೆ ಇರುವಂತೆ ತೋರುತ್ತದೆ. ಈ ಬಗೆಯ ಆದರ್ಶ ಕಾದಂಬರಿಯಲ್ಲಿ ಚಿತ್ರಿತವಾಗುವುದು ತಪ್ಪೆಂದು ಅಲ್ಲ. ಆದರೆ, ಅದು ಕಾದಂಬರಿಯ ಶಿಲ್ಪಕ್ಕೆ ವಿನ್ಯಾಸಕ್ಕೆ ಒಂದಾಗಿ ಬಂದು ಸೇರುವಂತಾಗಬೇಕು. ಹೀಗಲ್ಲದೆ ಹೋದರೆ ಅದು ಕೃತಕ ಅನಿಸಿಬಿಡುತ್ತದೆ.

ಕಾದಂಬರಿಯಲ್ಲಿ ಇಡಿಯಾಗಿ ಕಾಣುವ ಈ ಕೊರತೆಗಳನ್ನು ಬಿಟ್ಟರೆ ತುಂಬ ಗಮನಾರ್ಹವಾಗಿ ಕಾಣಿಸುವಂಥದ್ದು: ಪಾತ್ರಗಳನ್ನು ಕುಶಲವಾಗಿ ಅರಳಿಸುವ ಕ್ರಮ, ಕಥನವನ್ನು ರುಚಿಯಾಗಿ ತಿಳಿಸುವ ರೀತಿ ಕಾದಂಬರಿಯ ಪ್ರಾರಂಭವೇ ಕುತೂಹಲದ ಗ್ರಾಸಕ್ಕೆ ಪಕ್ಕಾಗುತ್ತದೆ. ನಮ್ಮನ್ನು ತಡೆ ಹಿಡಿಯುತ್ತದೆ. ಇಂಥ ಕುಶಲ ಸಂಭಾಷಣೆ ಹಾಗೂ ಲಾಲಿತ್ಯಪೂರ್ಣವಾದ ಬರವಣಿಗೆ ಕಾದಂಬರಿಯನ್ನು ಓದಲು ಪ್ರೇರೇಪಿಸುತ್ತದೆ. ಆದರೆ ಇವು ಕಾದಂಬರಿಯ ಹೊರ ಮೈ ಅಷ್ಟೆ. ಕಾದಂಬರಿಗೆ

ಆತ್ಮವೂ ಇದೆಯಲ್ಲ, ಅದು ಕಾದಂಬರಿಯ ಬಂಧ, ಶಿಲ್ಪ ಮತ್ತು ಧ್ವನಿ ವಿನ್ಯಾಸಗಳೂ ಓದುಗನಿಗೆ ಮುಟ್ಟಬೇಕು. ಕಾದಂಬರಿಯ ಯಶಸ್ಸು ಪಾತ್ರ-ಕಥನ ಕಲೆಗಳ ಸಾಧನೆಯಲ್ಲಿ ಅಷ್ಟೇ ಅಲ್ಲ ಎಂಬುದನ್ನು ನಾವು ಗಮನಿಸಬೇಕು. ಒಂದು ಹಂತದಲ್ಲಿ ಪಾತ್ರಗಳ ಬಂಧ ಹಾಗೂ ವಿನ್ಯಾಸಕ್ಕೆ ಪೂರಕವಾಗಬೇಕಾಗುತ್ತದೆ. ಅದು ಇಲ್ಲದೆ ಹೋದರೆ ಬರಿ ಶಾಬ್ದಿಕ ಕ್ರಿಯೆಗಳಾಗಿ ಉಳಿದುಬಿಡುತ್ತವೆಯೆ ಹೊರತು ಅರ್ಥದ ಅನನ್ಯತೆಯನ್ನು ಪಡೆಯದೆ ಹೋಗುತ್ತದೆ. ಕಾಶಿವಿಶ್ವನಾಥ ಶೆಟ್ಟರ 'ಭಗ್ನ ಹೃದಯ' ಕಾದಂಬರಿಯ ಇತಿ-ಮಿತಿಗಳು ಸಹ ಈ ನೆಲೆಗಟ್ಟಿನಲ್ಲಿ ಇವೆಯೆಂದು ನನ್ನ ಭಾವನೆ.

ವರ್ಣರಂಜಿತ ಬದುಕಿನ ಅಭಿವ್ಯಕ್ತಿ : 'ಮಸ್ತಾನಿ'

ಸಿ. ನಾಗರಾಜು

ಎಂ. ವಿ. ಶ್ರೀನಿವಾಸ್ ಅವರು ಆಧುನಿಕ ಕನ್ನಡ ಬರಹಗಾರರಲ್ಲೊಬ್ಬರು. ಮೂಲತಃ ಸಂಶೋಧಕರು. ಇತಿಹಾಸದ ಅಧ್ಯಾಪಕರಾಗಿ ಚರಿತ್ರೆಯ ಅಧ್ಯಯನದಲ್ಲೇ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡು ಸಾಹಿತ್ಯ ರಚನೆ ಮಾಡಿರುವರಲ್ಲದೆ .ತಮ್ಮ ಪ್ರತಿಭೆಯ ಎರಡು ಮುಖಗಳಾದ ಇತಿಹಾಸ, ಸಂಶೋಧನೆ ಮತ್ತು ಸಾಹಿತ್ಯ ರಚನೆಯನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಶ್ರೀನಿವಾಸ್ ಅವರ ಬರಹದ ಬಹುಪಾಲು ಇತಿಹಾಸದ ಸಂಶೋಧನೆಯ ಫಲ. ಚರಿತ್ರೆಯ ಅಧ್ಯಾಪಕರಾಗಿದ್ದರೂ ಅವರ ಸಾಹಿತ್ಯಾಸಕ್ತಿ ಪ್ರಬಲವಾದುದು. ಈವರೆಗೆ ಅವರು ಹದಿನೈದಕ್ಕಿಂತ ಹೆಚ್ಚು ಕೃತಿಗಳನ್ನು ಬೆಳಕಿಗೆ ತಂದಿದ್ದಾರೆ. ಅವುಗಳಲ್ಲಿ ಕಾದಂಬರಿ, ವಿಮರ್ಶೆ, ಐತಿಹಾಸಿಕ ಸಂಶೋಧನಾ ಪ್ರಬಂಧಗಳು, ಸಂಪಾದಿತ ಕೃತಿಗಳು ಸೇರಿವೆ. ಶ್ರೀನಿವಾಸ್ ಅವರ ಐತಿಹಾಸಿಕ ಕಾದಂಬರಿಗಳು ಎರಡು. ಒಂದು 'ರತ್ನಾಕರ' ಮತ್ತೊಂದು 'ಮಸ್ತಾನಿ'. 'ರತ್ನಾಕರ' ಶ್ರೀನಿವಾಸ್ ಅವರ ಮೊದಲನೆಯ ಕಾದಂಬರಿಯಾಗಿದ್ದು ಅದನ್ನು ಅವರು ಜಿ. ಬ್ರಹ್ಮಪ್ಪ ಅವರೊಂದಿಗೆ ರಚಿಸಿದ್ದರೆ. 'ಮಸ್ತಾನಿ' ಕಾದಂಬರಿಯನ್ನು ಸ್ವತಂತ್ರವಾಗಿ ರಚಿಸಿದ್ದಾರೆ.

ಶ್ರೀನಿವಾಸ್ ಅವರ ಏಳುವರ್ಷಗಳ ಸಂಶೋಧನೆಯ ಫಲವಾಗಿ ರೂಪುಗೊಂಡಿರುವ 'ಮಸ್ತಾನಿ' ಕಾದಂಬರಿಯ ಒಂದು ವಿಶ್ಲೇಷಣೆ ಪ್ರಸ್ತುತ ಲೇಖನದ ಉದ್ದೇಶವಾಗಿದೆ. ವಿಮರ್ಶೆಯ ಅನುಕೂಲದ ದೃಷ್ಟಿಯಿಂದ ಕಾದಂಬರಿಯ ಕಥಾವಸ್ತುವನ್ನು ಸಂಕ್ಷಿಪ್ತಗೊಳಿಸಿ ಕೊಟ್ಟು ಅನಂತರ ಕಾದಂಬರಿಯನ್ನು ಕುರಿತಾದ ವಿಮರ್ಶೆಯನ್ನು ಕೊಟ್ಟಿದ್ದೇನೆ. ಈ ಕ್ರಮದಿಂದ ಓದುಗರಿಗೆ ಅನುಕೂಲವಾಗುತ್ತದೆ ಎಂದು ನನ್ನ ಭಾವನೆ.

'ಮಸ್ತಾನಿ' ಒಂದು ಐತಿಹಾಸಿಕ ಕಾದಂಬರಿ. ಪೇಷ್ವೆಗಳ ಇತಿಹಾಸದಲ್ಲಿ ಬರುವ ಎರಡನೆಯ ಪೇಷ್ವೆ ಬಾಜೀರಾಯ ಮತ್ತು ಮಸ್ತಾನಿಯರ ಪ್ರಣಯ ಜೀವನವನ್ನೇ ವಸ್ತುವಾಗಿಟ್ಟುಕೊಂಡು ರಚಿತವಾಗಿದೆ. ಭಾರತದ 'ಸಲೋಮೆ'ಎಂದು ಇತಿಹಾಸಕಾರರಿಂದ ಪ್ರಶಂಸಿಸಲ್ಪಟ್ಟಿರುವ ಮಸ್ತಾನಿ ಹಿಂದೂ ತಂದೆ, ಮಹಮದೀಯ ತಾಯಿಯ ಮಗಳಾಗಿ ಹುಟ್ಟಿ ಬುಂದೇಲ ಖಂಡದ ದೊರೆ ಛತ್ರಸಾಲನ ಅಂತಃಪುರದಲ್ಲಿ ಬೆಳೆಯುತ್ತಾಳೆ. ಅವಳು ರೂಪವತಿಯಷ್ಟೇ ಅಲ್ಲ ವೀರನಾರಿ. ವೀರನಾರಿಯಾಗಿದ್ದರೂ ಅತಿ ಮೃದು ಸ್ವಭಾವದವಳು. ಸುಗುಣೆ, ಸಹೃದಯೆ.

ರಾಜಾ ಛತ್ರಸಾಲ ತನ್ನ ಆಪತ್ಕಾಲದಲ್ಲಿ ತನ್ನನ್ನು ಪ್ರಾಣಾಪಾಯದಿಂದ ರಕ್ಷಿಸಿದುದಕ್ಕಾಗಿ ಮರಾಠ ಪೇಷ್ವೆ ಬಾಜೀರಾಯನನ್ನು ಕೃತಜ್ಞತೆಯ ಸೂಚಕವಾಗಿ ಗೌರವಿಸುತ್ತಾನೆ. ಈ ಸಂದರ್ಭದಲ್ಲಿ ಛತ್ರಸಾಲ ಬಾಜೀರಾಯನಿಗೆ ಉಡುಗೊರೆಯಾಗಿ ಕೊಟ್ಟ ಅನರ್ಘ್ಯ ರತ್ನಗಳಲ್ಲಿ, ಜೀವಂತ ರತ್ನವಾಗಿ ಮಸ್ತಾನಿ ಬಾಜೀರಾಯನ ಕೈ ಸೇರುತ್ತಾಳೆ. ಪರಾಕ್ರಮಿಯಾದ ಬಾಜೀರಾಯನನ್ನು ಮಸ್ತಾನಿ ಕೇವಲ ತನ್ನ ರೂಪ, ಲಾವಣ್ಯಗಳಿಂದ ಆಕರ್ಷಿಸುವುದಿಲ್ಲ; ಅವಳ ಸದ್ಗುಣಗಳೇ ಅವಳನ್ನು ಮರಾಠ ಪ್ರಧಾನಿಯ ಹೃದಯೇಶ್ವರಿಯನ್ನಾಗಿ, ಬಾಜೀರಾಯನ ಪ್ರೇಮ ಮಹಿಷಿಯನ್ನಾಗಿ ರೂಪಿಸುತ್ತವೆ. ತನ್ನ ಸಂಗೀತ, ನರ್ತನಗಳಿಂದ ಆತನ ಅಂತಃಪುರವನ್ನು ಅಲಂಕರಿಸಿದಂತೆ ಯುದ್ಧ ಭೂಮಿಯಲ್ಲೂ ಮಸ್ತಾನಿ ಸಹಧರ್ಮಿಣಿಯಾಗುತ್ತಾಳೆ. ಸಮರಾಂಗಣದಲ್ಲಿ ಗಾಯಗೊಂಡ ಸೈನಿಕರಿಗೆ ಔಷಧೋಪಚಾರವನ್ನು ಮಾಡಿದ ಸಹೃದಯಿಯೂ ಆಗುತ್ತಾಳೆ. ಎಲ್ಲವನ್ನೂ ಬಲ್ಲ ಅವಳಲ್ಲಿ ಅಹಂಕಾರವಿಲ್ಲ ; ಅತ್ಯಾಸೆಯಿಲ್ಲ. ಅವಳ ಬದುಕು ತನ್ನ ಹೃದಯೇಶ್ವರನಿಗಾಗಿ, ಆತನ ಅಭ್ಯುದಯಕ್ಕಾಗಿ. ಒಮ್ಮೆ ಜಾತ್ಯಂಧರಾದ ತನ್ನ ಪತಿಯ ಬಂಧುಗಳ ಆದೇಶದಂತೆ ಬಾಜೀರಾಯನ ಮಹಲಿನಿಂದ ದೂರವಾಗುತ್ತಾಳೆ. ಆದರೆ ತನ್ನ ಅಂತಃಕರಣದಿಂದ ಎಂದೂ ದೂರವಾಗುವುದಿಲ್ಲ. ಅವಳ ಅಗಲಿಕೆಯ ದುಃಖದಿಂದ ಬಾಜೀರಾಯ ಯುದ್ಧವಿಮುಖನಾಗಿರುವನೆಂಬ ಸುದ್ದಿಯನ್ನು ಕೇಳಿ ಮಸ್ತಾನಿ ಅವಾಕ್ಕಾಗುತ್ತಾಳೆ. ಮಾರುವೇಷದಿಂದ ಬಾಜೀರಾಯನಿದ್ದಲ್ಲಿಗೆ ಬಂದು ರಾಷ್ಟ್ರದ ಕ್ಷೇಮಕ್ಕಾಗಿ ಅವನನ್ನು ಯುದ್ಧೋನ್ಮುಖನಾಗುವಂತೆ ಮಾಡುತ್ತಾಳೆ. ಮಸ್ತಾನಿ ಮ್ಲೇಚ್ಛರವಳು ಎಂಬ ಮತೀಯ ಅಭಿಮಾನದಿಂದ ಮಹಾರಾಷ್ಟ್ರದ ರಾಜಕೀಯದ ರಹಸ್ಯಗಳನ್ನು ಭೇದಿಸುವ ಭಟ್ಟಂಗಿಯನ್ನಾಗಿ ಮಸ್ತಾನಿಯನ್ನು ಉಪಯೋಗಿಸಿಕೊಳ್ಳುವ ಉದ್ದೇಶದಿಂದ ಮಸ್ತಾನಿಯ ಬಾಲ್ಯದ

ಗೆಳತಿಯಾಗಿದ್ದ ಮೆಹರುನ್ನೀಸ ಮಸ್ತಾನಿಯ ಬಳಿಗೆ ಬರುತ್ತಾಳೆ. ಜಾತ್ಯಭಿಮಾನದ ಉಪದೇಶಮಾಡುತ್ತಾಳೆ. ಪ್ರಲೋಭನ ತೋರುತ್ತಾಳೆ. ಆದರೆ ಮೆಹರುನ್ನೀಸ ಬಯಸಿದಂತೆ ಮಸ್ತಾನಿ ದ್ರೋಹಿಯಾಗುವುದಿಲ್ಲ. ಪ್ರಧಾನಿಯ ವಿಶ್ವಾಸಕ್ಕೆ ಅರ್ಹಳಾದ ಪ್ರೇಯಸಿಗೆ ಅನುಗುಣವಾಗಿ ವರ್ತಿಸಿ ಮೆಹರುನ್ನೀಸಳಿಗೆ ಮುಖಭಂಗವನ್ನುಂಟು ಮಾಡಿ ತೊಲಗಿಸುತ್ತಾಳೆ. ಬಾಜೀರಾಯನ ಸಾಹಸಮಯವಾದ ಜೀವನದಲ್ಲಿ ಮಸ್ತಾನಿ ಚೈತನ್ಯದಾಯಿನಿಯಾಗಿ ಪ್ರವೇಶಿಸುತ್ತಾಳೆ. ಅವನು ಮನಸಾ ಮಸ್ತಾನಿಯನ್ನು ಪ್ರೀತಿಸಿದರೂ ತಾನು ಕೈಹಿಡಿದಾಕೆಯನ್ನು, ತನ್ನ ಹಿತೈಷಿಗಳನ್ನು ಉಪೇಕ್ಷಿಸುವುದಿಲ್ಲ. ಆದರೆ ಸಮಾಜ ಮಾತ್ರ ಬಾಜೀರಾಯ ಮಸ್ತಾನಿಯರ ಪ್ರೇಮದ ಬಗ್ಗೆ ತೀವ್ರವಾದ ಆಕ್ಷೇಪಣೆಯನ್ನೆತ್ತುತ್ತದೆ. ಪ್ರೀತಿಗೆ ಮಾನ್ಯತೆಯಿಲ್ಲ; ಜಾತಿಯ ಮನ್ನಣೆ ಅವರ ದೃಷ್ಟಿಯಲ್ಲಿ ದೊಡ್ಡದು. ಆದರಿಂದಾಗಿ ಸಮಾಜದಲ್ಲಿ ಅವರಿಬ್ಬರ ಬಗ್ಗೆ ಅಸಮಾಧಾನ, ಅಸಹಕಾರಗಳ ದುಳ್ಳುರಿ ಏಳುತ್ತದೆ. ಬಾಜೀರಾಯನ ಪರಿವಾರದಲ್ಲಿ ಈ ಒಂದು ಕಾರಣಕ್ಕಾಗಿ ಆಗಬೇಕಾಗಿದ್ದ ಮದುವೆ ಕಾರ್ಯಗಳಿಗೂ ಅಡ್ಡಿಯುಂಟಾಗುತ್ತದೆ. ಮಸ್ತಾನಿಯ ಬಗ್ಗೆ ಬಾಜೀರಾಯನ ನಿಶ್ಚಲ ಪ್ರೇಮವನ್ನು ಅರಿತ ಅವನ ಬಂಧುಗಳು, ಅವನ ಹಿರಿಯ ಮಗ ಬಾಲಾಜಿ ಎಲ್ಲಾ ಸೇರಿ ಬಾಜೀರಾಯನಿಲ್ಲದಿದ್ದ ವೇಳೆಯಲ್ಲಿ ಮಸ್ತಾನಿಯನ್ನು ದೂರ ಸಾಗಿಸುತ್ತಾರೆ. ಅವಳ ವಿಯೋಗದಿಂದ ದುಃಖತಪ್ತನಾಗಿ ಹಾಸಿಗೆ ಹಿಡಿದ ಬಾಜೀರಾಯನನ್ನು ಉಳಿಸಬೇಕಾದರೆ ಅದು ಮಸ್ತಾನಿಯಿಂದ ಮಾತ್ರ ಸಾಧ್ಯ ಎಂಬುದು ಬಾಜೀರಾಯನ ಕೊನೆಗಾಲದಲ್ಲಿ ಅವನ ಅಪ್ತೇಷ್ಟರಿಗೆ ಅರಿವಾಗಿ, ಮಸ್ತಾನಿಯನ್ನು ಕರೆತರಲು ಮುಂದಾಗುತ್ತಾರೆ. ಕಾಲ ಮಿಂಚಿರುತ್ತದೆ. ಕಾತುರದಿಂದ ತನ್ನ ಪತಿಯೆಡೆಗೆ ಧಾವಿಸುತ್ತಿದ್ದ ಮಸ್ತಾನಿಗೆ ದಾರಿಯ ಮಧ್ಯದಲ್ಲೇ ಆತನ ಮೃತ್ಯುವಾರ್ತೆ ತಲುಪುತ್ತದೆ. ಸಿಡಿಲಿನಂತೆರಗಿದ ತನ್ನ ಹೃದಯೇಶ್ವರನ ಮೃತ್ಯುವಾರ್ತೆಯಿಂದ ತತ್ತರಿಸಿದ ಆ ಸಾಧ್ವಿ ಅಲ್ಲೇ ಕುಸಿದು ಬಿದ್ದು ಸಾವನ್ನಪ್ಪುತ್ತಾಳೆ. ಅವಳು ಬದುಕಿದ್ದಾಗ ಬಾಜೀರಾಯನ ಸತಿ ಎಂದು ಒಪ್ಪಿಕೊಳ್ಳದ ಸಮಾಜ ಆಕೆ ಸತ್ತಮೇಲೆ ತನ್ನ ತಪ್ಪನ್ನು ತಿಳಿಸುಕೊಳ್ಳುತ್ತದೆ. ಮಸ್ತಾನಿ ಮಹಾಸತಿ ಎಂದು ಆಕೆಯ ಸಮಾಧಿಗೆ ಪೂಜಾದಿ ಗೌರವಗಳನ್ನು ಸಲ್ಲಿಸಿ ಆಕೆಯ ಹೆಸರಿನಲ್ಲಿ ದಾನ ಧರ್ಮಾದಿಗಳನ್ನು ಏರ್ಪಡಿಸುತ್ತದೆ. ಇದು ಕಾದಂಬರಿಯ ಕಥಾವಸ್ತು.

ಸುಮಾರು ಮುನ್ನೂರು ಪುಟಗಳಷ್ಟು ದೀರ್ಘವಾಗಿ ಬಾಜೀರಾಯ ಮತ್ತು ಮಸ್ತಾನಿಯರ ದುರಂತ ಪ್ರೇಮದ ಕಥೆ ಹಬ್ಬಿದೆ. ಕಾದಂಬರಿಯ ಆರಂಭದಲ್ಲಿ ಬರುವ ರಾಜಾ ಛತ್ರಸಾಲ ಪೇಷ್ವೆ ಬಾಜೀರಾಯನಿಗೆ ತನ್ನ ಕೃತಜ್ಞತೆಯನ್ನು ಸಲ್ಲಿಸಲು ಏರ್ಪಡಿಸಿದ ಸಮಾರಂಭದ ವೈಭವದ ವಾತಾವರಣದೊಂದಿಗೆ ಕಾದಂಬರಿಯ ಕಥಾವಸ್ತು ಆರಂಭವಾಗುತ್ತದೆ. ಈ ಸಮಾರಂಭದಲ್ಲಿ ಮಸ್ತಾನಿಯನ್ನು ಬಾಜೀರಾಯನಿಗೆ ವಿಶೇಷವಾಗಿ ಪರಿಚಯಿಸುವುದರ ಮೂಲಕ ಓದುಗರ ಕುತೂಹಲವನ್ನು ಕಾದಂಬರಿಯ

ಆರಂಭದಲ್ಲಿ ಸೆಳೆಯುವ ಕಾದಂಬರಿಕಾರರು ಅಂತ್ಯದವರೆಗೂ ಈ ಕುತೂಹಲವನ್ನು ಒಂದೇ ಮಟ್ಟದಲ್ಲಿ ಕಾಯ್ದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇಲ್ಲಿಂದ ಮುಂದೆ ಕಾದಂಬರಿಯ ಅರ್ಧದವರೆಗೆ ಬರುವ ಮಸ್ತಾನಿಯ ಯುದ್ಧವಿದ್ಯೆಯ ಪರೀಕ್ಷೆ, ಬಾಜೀರಾಯ ಮತ್ತು ಶಾಹುವಿನ ಭೇಟಿ, ನಾಯಿ ಮತ್ತು ಮೊಲದ ಪ್ರಸಂಗ, ಶನಿವಾರದ ಅರಮನೆಯ ನಿರ್ಮಾಣ, ಬಾಲಾಜಿಯ ಮದುವೆ, ಗಣಪತಿ ಉತ್ಸವಗಳು ಮೊದಲಾದ ವರ್ಣನೆಗಳು ಕಥಾವಸ್ತುವಿನ ಬೆಳವಣಿಗೆಯನ್ನು ಕುಂಟಿತಗೊಳಿಸಿದರೂ ಓದುಗರಿಗೆ ಅಷ್ಟೇನೂ ಬೇಸರವನ್ನುಂಟು ಮಾಡುವುದಿಲ್ಲ. ಈ ಘಟ್ಟದಲ್ಲಿ ವರ್ಣಿತವಾಗಿರುವ ಪೇಷ್ವೆ ಬಾಜೀರಾಯನ ಯುದ್ಧ ಪರಂಪರೆಗಳು ಬಾಜೀರಾಯನ ಶೌರ್ಯ ಸಾಹಸಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿ ಇಷ್ಟೆಲ್ಲಾ ಯುದ್ಧಗಳಲ್ಲಿ ಗೆದ್ದ ಸಾಹಸಿಯೂ ಒಂದು ಹೆಣ್ಣಿಗೆ ಸೋತ ಎನ್ನುವ ವ್ಯಂಗ್ಯಕ್ಕೆ ಜೀವಂತ ಸಾಕ್ಷಿಯಾಗುತ್ತವೆ. ಬಾಜೀರಾಯನ ವರ್ಣಮಯ ಬದುಕಿನಲ್ಲಿ ಬರುವ ಈ ಯುದ್ಧಗಳು ಮೇಲುನೋಟಕ್ಕೆ ವ್ಯಕ್ತಿಯೊಬ್ಬನ ಶೂರತನವನ್ನು ಪ್ರಕಟಪಡಿಸುವಂತೆ ಕಂಡರೂ ಶೂರನಲ್ಲೂ ಕೆಲವು ದೌರ್ಬಲ್ಯಗಳಿರುತ್ತವೆ. ಈ ದೌರ್ಭಲ್ಯಗಳೂ ಶೂರನ ಮೇಲೆ ಆಕ್ರಮಿಸಿ ಒಮ್ಮೆ ವಿಜಯವನ್ನು ಸಾಧಿಸುತ್ತವೆ ಎಂಬುದನ್ನು ಅತ್ಯಂತ ಸಮರ್ಥವಾಗಿ ಧ್ವನಿಸುತ್ತದೆ. ಈ ಹಿನ್ನೆಲೆಯಲ್ಲಿ ಐತಿಹಾಸಿಕ ಕಾದಂಬರಿಗಳ ಪ್ರಸ್ತುತತೆಯನ್ನು ಗುರುತಿಸಬಹುದು. ಕಾದಂಬರಿಯಲ್ಲಿ ಸದಾಶಿವನ ಮದುವೆ ಪ್ರಸ್ತಾಪ ಬಂದಾಗ ಕಥೆಯ ಓಟ ಚುರುಕಾಗುತ್ತದೆ. ಸದಾಶಿವನ ಮದುವೆ ಮತ್ತು ರಘುವಿನ ಉಪನಯನ, ಮಸ್ತಾನಿ ಬಗೆಗಿನ ತಾರಾಬಾಯಿಯ ಮತ್ತು ಕೆಲವು ಸಂಪ್ರದಾಯ ಶರಣರ ವಿರೋಧ, ಬಾಲಾಜಿಯಿಂದ ಮಸ್ತಾನಿಯ ಸೆರೆವಾಸ, ಪ್ರೇಯಸಿಯ ಅಗಲಿಕೆಯಿಂದುಂಟಾದ ಬಾಜೀರಾಯನ ಅಸ್ವಸ್ಥತೆ, ಬಾಜೀರಾಯನ ಸಾವು, ಮಸ್ತಾನಿಯ ಸಾವು — ಈ ಎಲ್ಲ ದೃಶ್ಯಗಳು ಚಲನಚಿತ್ರದ ದೃಶ್ಯಗಳಂತೆ ಒಂದರ ಹಿಂದೊಂದು ಸಾಗಿ ಓದುಗನ ಕುತೂಹಲವನ್ನು ಇಮ್ಮಡಿಗೊಳಿಸಿ ಕಥಾವಸ್ತುವನ್ನು ಸಂಕೀರ್ಣಗೊಳಿಸುತ್ತವೆ. ನಿರೂಪಣೆಯ ಸೊಗಸನ್ನು ಹೆಚ್ಚಿಸುತ್ತವೆ. ಕಾದಂಬರಿಯಲ್ಲಿ ಬರುವ ಬಾಜೀರಾಯ ಮತ್ತು ಮಸ್ತಾನಿ ಪಾತ್ರಗಳು ಪ್ರಮುಖ ಪಾತ್ರಗಳು. ಈ ಎರಡು ಪಾತ್ರಗಳ ಸುತ್ತ ಉಳಿದೆಲ್ಲ ಪಾತ್ರಗಳು ಸುತ್ತುತ್ತವೆ. ಬಾಜೀರಾಯ ಮತ್ತು ಮಸ್ತಾನಿ ಪಾತ್ರಗಳು ನೇರವಾಗಿ ಕಥೆಗೆ ಸಂಬಂಧಿಸಿದವುಗಳಾಗಿದ್ದು ಮಸ್ತಾನಿಯ ಪಾತ್ರ ಕಥೆಯೊಂದಿಗೆ ಅವ್ಯಾಹತವಾಗಿ ಬೆಳವಣಿಗೆಯಾಗಿ ಕಥೆಯ ಗಟ್ಟಿ ಕಥನಕ್ಕೆ ಪೂರಕವಾಗಿವೆ. ಆದರೆ ಮಸ್ತಾನಿ ಪಾತ್ರದಷ್ಟೇ ಮುಖ್ಯವಾಗಿರುವ ಪೇಷ್ವೆ ಬಾಜೀರಾಯನ ಪಾತ್ರ ಕೆಲವೊಮ್ಮೆ ಕ್ರಮವಾಗಿ ಬೆಳವಣಿಗೆಯಾಗದೆ ಪಾತ್ರದ ಸಮಗ್ರತೆಗೆ ಕೊರತೆಯುಂಟುಮಾಡುತ್ತದೆ. ಇಲ್ಲಿ ಲೇಖಕರು ಪೇಷ್ವೆ ಬಾಜೀರಾಯನ ಯುದ್ಧ ಕೌಶಲ, ರಾಜ ತಾಂತ್ರಿಕತೆ, ಸಮಯ ಪ್ರಜ್ಞೆ, ಇವುಗಳನ್ನು ವಿಶದವಾಗಿ ಚಿತ್ರಿಸಿ ಬಾಜೀರಾಯನ ಪಾತ್ರದ ಉನ್ನತಿಯನ್ನು ಪ್ರಕಟಿಸಿ ಯುದ್ಧದ ವರ್ಣನೆಗಳು ಕಥೆಯೊಂದಿಗಿನ ತಮ್ಮ ಸಾವಯವ ಸಂಬಂಧವನ್ನು

ಭದ್ರವಾಗಿ ಸ್ಥಾಪಿಸಿಕೊಳ್ಳುವಂತೆ ಕಥೆಯನ್ನು ಕಲಾತ್ಮಕವಾಗಿ ನಿರೂಪಿಸಿದ್ದಾರೆ. ಕಥೆಯ ಮುಖ್ಯ ಪಾತ್ರವಾದ ಮಸ್ತಾನಿಯ ಪಾತ್ರ ಒಂದು ಅಪೂರ್ವವಾದ ಸೃಷ್ಟಿ. ಕೃತಿಕಾರರು ತಮ್ಮೆಲ್ಲ ಪ್ರತಿಭೆಯನ್ನು ಮಸ್ತಾನಿ ಪಾತ್ರದ ಚಿತ್ರಣಕ್ಕೆ ಪೂರ್ಣವಾಗಿ ವಿನಿಯೋಗಿಸಿದ್ದಾರೆ. ಮಸ್ತಾನಿಯನ್ನು ಓದುಗರಿಗೆ ಪರಿಚಯಿಸುವಲ್ಲಿಯೂ ಲೇಖಕರು ಜಾಣ್ಮೆಯನ್ನು ತೋರಿದ್ದಾರೆ. ತನ್ನೆಲ್ಲಾ ಹಿತಾಸಕ್ತಿಗಳನ್ನು ಕಡೆಗಣಿಸಿ ತನ್ನ ಕೈಹಿಡಿದ ಬಾಜೀರಾಯನ ಉಸಿರೇ ತನ್ನ ಉಸಿರು. ಅವನ ಸಂತೋಷವೇ ತನ್ನ ಸಂತೋಷ ಎನ್ನುವ ಏಕೈಕ ಉದ್ದೇಶ ಹೊಂದಿ ಆ ಹಾದಿಯಲ್ಲಿ ನಡೆದು ತನ್ನ ತ್ಯಾಗ ಮನೋಭಾವದಿಂದ ಉನ್ನತ ಮಟ್ಟಕ್ಕೇರಿದ ಮಸ್ತಾನಿಯ ಪಾತ್ರವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಮೆಹರುನ್ನೀಸಾಳ ಪ್ರಲೋಭನೆಯ ಪ್ರಸಂಗ ಮಸ್ತಾನಿಯ ಮನದಲ್ಲಿ ಪೇಷ್ವೆ ಬಾಜೀರಾಯನ ಮೂರ್ತಿಯಿಲ್ಲದೆ ಬೇರಾವ ಕೀರ್ತಿಯೂ ಇಲ್ಲ ಎಂಬುದಕ್ಕೆ ಜ್ವಲಂತ ಸಾಕ್ಷಿಯಾಗಿರುವುದಲ್ಲದೆ, ಮಸ್ತಾನಿ–ಬಾಜೀರಾಯರ ನಿರ್ಮಲ ಪ್ರೇಮಕ್ಕೆ ಹಿಡಿದ ಕನ್ನಡಿಯಾಗುತ್ತದೆ. ಮಸ್ತಾನಿಯ ಪಾತ್ರ ಓದುಗರ ಮನದಲ್ಲಿ ದೀರ್ಘಕಾಲ ಉಳಿಯುತ್ತದೆ. ಈ ಪಾತ್ರದ ಮೂಲಕ ಕಾದಂಬರಿಯೂ ಓದುಗರ ಮನಸ್ಸಿನಲ್ಲಿ ಶಾಶ್ವತವಾಗಿ ನಿಲ್ಲುತ್ತದೆ. ಇನ್ನುಳಿದ ಪಾತ್ರಗಳು ಸಹ ಸನ್ನಿವೇಶಕ್ಕೆ ತಕ್ಕಂತೆ ಬಂದಿವೆ. ಪಾತ್ರಗಳನ್ನು ಕಥೆಗೆ ಪೂರಕವಾಗಿ ಬಳಸಿಕೊಂಡಿದ್ದಾರೆ. ಚಿಮ್ಮಾಜಿಯ ಪಾತ್ರ ಹಾಗೂ ಬಾಲಾಜಿಯ ಪಾತ್ರ ಸೃಷ್ಟಿಯಲ್ಲಿ ಇಬ್ಬಗೆಯ ಧೋರಣೆಯನ್ನನುಸರಿಸಿ ಸುಸಂಬದ್ಧತೆಯ ಕೊರತೆಯನ್ನು ತೋರಿದ್ದಾರೆ. ಇಲ್ಲಿನ ಕೆಲವು ಪಾತ್ರಗಳು ಸಮಕಾಲೀನ ಸಮಾಜದ ಜೀವಂತಿಕೆಯನ್ನು ಪ್ರತಿನಿಧಿಸಿ ಲೇಖಕರ ಸಾಮಾಜಿಕ ಪ್ರಜ್ಞೆಯನ್ನು ಕೃತಿಯಲ್ಲಿ ದಾಖಲಾಗಿಸುತ್ತವೆ. ಕಾದಂಬರಿಯ ಭಾಷಾ ಶೈಲಿ ಸರಳವಾದ ಮಾತುಗಳಿಂದ, ನುಡಿಗಟ್ಟುಗಳು ಮತ್ತು ಗಾದೆಮಾತುಗಳ ಬಳಕೆಯಿಂದ ಸುಂದರವಾಗಿದೆ. ಪಾತ್ರೋಚಿತವಾದ ಸಂಭಾಷಣೆಯಿದ್ದು ನಾಟಕೀಯ ಗುಣವನ್ನು ಹೊಂದಿದೆ.

ಕೃತಿಕಾರರು ಈ ಕೃತಿಯ ರಚನೆಗೆ ಏಳು ವರುಷಗಳಷ್ಟು ದೀರ್ಘಕಾಲದ ಸಂಶೋಧನೆ ನಡೆಸಿದ್ದಾರೆ. ಸಾಧಾರಣವಾಗಿ ಐತಿಹಾಸಿಕ ಕಾದಂಬರಿಗಳಲ್ಲಿ ಬೇಸರ ತರುವಂತಹ ನೀರಸ ಸನ್ನಿವೇಶಗಳನ್ನೇ ನಿರೀಕ್ಷಿಸಬಹುದು. ಆದರೆ ಈ ಕೃತಿ ಆ ಮಾತಿಗೆ ಅಪವಾದವಾಗಿದೆ. ಈ ಕೃತಿಯಲ್ಲಿ ರಾಜಕೀಯ ಸನ್ನಿವೇಶಗಳಿವೆ, ಯುದ್ಧ ಪ್ರಸಂಗಗಳಿವೆ, ಕೌಟುಂಬಿಕ ವಿರಸಗಳಿವೆ. ಇವೆಲ್ಲ ಹದವರಿತು ಹಿತಮಿತವಾಗಿ ಬಂದಿವೆ. ಚಾರಿತ್ರಿಕ ಅಂಶಗಳಿಂದ ಪೋಷಕವಾಗಿದ್ದರೂ ನಿಷ್ಕಳಂಕ ಪ್ರಣಯದಿಂದ ಪೂರಕವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ಇಲ್ಲಿ ಬರುವ ಯಾವ ಅಂಶವೂ ಅಪ್ರಕೃತವಾಗದೇ ಕೃತಕವಾಗದೇ ಬಂದಿರುವುದು ಕೃತಿಯ ವೈಶಿಷ್ಟ್ಯ. ಒಂದು ಸಣ್ಣಪಾತ್ರವನ್ನೂ ಕಾದಂಬರಿಯಲ್ಲಿ ಅದಕ್ಕಿರುವ ಸ್ಥಾನದ ದೃಷ್ಟಿಯಿಂದ

ಉಪೇಕ್ಷಿಸುವಂತಿಲ್ಲ. ಪಾತ್ರಗಳಿಗೆ ಉಚಿತವಾದ ಸಂಭಾಷಣೆ ಸುಂದರವಾಗಿರುವಷ್ಟೇ ಗಂಭೀರವಾಗಿಯೂ ಇದೆ. ಇತಿಹಾಸದಲ್ಲಿ ಆಗಿ ಹೋಗಿರುವ ಅಸಮಾನ್ಯ ಪುರುಷರ ಬಲ, ದುರ್ಬಲಗಳ ವರ್ಣರಂಜಿತ ಬದುಕಿನ ಜೊತೆಗೆ ಪ್ರೇಮದ ದುರಂತವನ್ನು ರಸಮಯವಾಗಿ ಚಿತ್ರಿಸುವ ಆಶಯವನ್ನು ಹೊಂದಿರುವ ಈ ಕೃತಿ ಕನ್ನಡದ ಕೆಲವೇ ಉತ್ತಮ ಐತಿಹಾಸಿಕ ಕಾದಂಬರಿಗಳ ಸಾಲಿನಲ್ಲಿ ನಿಲ್ಲುತ್ತದೆ.

ಗದ್ಯ ಕಾವ್ಯವಾಗಿ ಪರಿಣಮಿಸಿದ ಕೃತಿ : 'ಭರತೇಶನ ದಿನಚರಿ'

ವಂದಾ ಶ್ರೀನಿವಾಸ

೧

ರಾಗರಸಿಕನೂ ವೀತರಾಗರಸಿಕನೂ ಆದ ರತ್ನಾಕರ ತನ್ನ 'ಭರತೇಶ ವೈಭವ'ದಲ್ಲಿ ಆಗಮ–ಅಧ್ಯಾತ್ಮ ಅಳವಟ್ಟ ಶೃಂಗಾರ ಹಾಗೂ ತ್ಯಾಗಭೋಗದ ಮೋಡಿ ಮೆರೆಯುವಂತೆ, ಯೋಗಿ ಭೋಗಿಗಳೆದೆ ಜುಮ್ಮುಜುಮ್ಮೆನ್ನುವಂತೆ ಸಮನ್ವಯ ಸೂತ್ರವನ್ನು ಕಾವ್ಯದುದ್ದಕ್ಕೂ ಬಿಡದೇ ಶೃಂಗಾರಕ್ಕೂ ಅಧ್ಯಾತ್ಮಕ್ಕೂ ಏಕಸ್ಥಾನ ಕಲ್ಪಿಸಿದ್ದಾನೆ. ಅದೊಂದು ರಸಲೋಕ. ಭಯಾನಕ ಭೀಭತ್ಸರಸಗಳನ್ನು ಬಿಟ್ಟು ಉಳಿದೆಲ್ಲ ರಸಗಳು 'ರಸ'ವಾಗಿ ಪರಿಣಮಿಸಿ ಸಹೃದಯರನ್ನು ರಸಲೋಕ ಯಾತ್ರಿಕರನ್ನಾಗಿ ಮಾಡುತ್ತದೆ. ಭುವನಮೋಹನವಾದ ಪಾವನಶೃಂಗಾರ, ನರುಗಂಪಿನ ನವಿರುಹಾಸ್ಯ-ರಸಗಳು ಭೋಗವಿಜಯದಲ್ಲಿ, ಶೃಂಗಾರ, ಅದ್ಭುತ, ಕರುಣ, ವೀರರಸಗಳು ದಿಗ್ವಿಜಯದಲ್ಲಿ, ಕರುಣ, ಶಾಂತಿ ಮತ್ತು ರತ್ನಾಕರನ ವಿಶೇಷವಾದ 'ತತ್ತ್ವರಸ'ಗಳು ಯೋಗವಿಜಯ, ಮೋಕ್ಷವಿಜಯ, ಅರ್ಕಕೀರ್ತಿ ವಿಜಯಗಳಲ್ಲಿ ಏಕತಾನವಾಗಿ ಪ್ರವಹಿಸಿ ವಿಜೃಂಭಿಸಿದೆ.

'ಭರತೇಶ ವೈಭವ'ವನ್ನು ಅಭ್ಯಾಸ ಮಾಡಿದಾಗ ರತ್ನಾಕರ ಒಬ್ಬ ಸಾಮಾನ್ಯ ಕವಿಯಲ್ಲ, ಧರ್ಮಾಂಧನಾಗದೇ

ತತ್ವದರ್ಶನವನ್ನು ರಸಿಕತೆಯೊಡನೆ ಮೇಳವಿಸಿ ಯೋಗ–ಭೋಗ ಸಮನ್ವಯ ಮಾಡಿದ ಮಹಾಕವಿ, ಶೃಂಗಾರಕವಿ, ತತ್ವಜ್ಞಾನಿ ಕವಿ ಎಂಬುದು ಮನದಟ್ಟಾಗುತ್ತದೆ.

"ಭರತೇಶ ವೈಭವದಲ್ಲಿ ತ್ಯಾಗ–ಭೋಗಗಳ ಸಮನ್ವಯದ ಯೋಗದರ್ಶನವನ್ನು ಕವಿ ಸುಂದರವಾಗಿ ಪ್ರತಿಮಿಸಿದ್ದಾನೆ. ಅಷ್ಟೇ ಅಲ್ಲ, ಆ ದರ್ಶನವನ್ನು ಭರತನ ಜೀವನದಲ್ಲಿ ಮಾತ್ರವೇ ಅಲ್ಲದೇ ಇಡೀ ಕಾವ್ಯದ ವಿವರ ವಿವರಗಳಲೆಲ್ಲ ಬುದ್ಧಿ ಪೂರ್ವಕವಾಗಿ ಪ್ರತಿಮಿಸಿರುವುದನ್ನು ನೋಡಿದರಂತೂ ಇಂಥ ಕಾವ್ಯ ಸೃಷ್ಟಿ ಜಗತ್ತಿನ ಮತ್ತಾವ ಸಾಹಿತ್ಯದಲ್ಲೂ ಆಗಿರುವಂತೆ ಕಾಣುವುದಿಲ್ಲ. ಆ ದೃಷ್ಟಿಯಿಂದ ಇದು ಜಗತ್ ಕೃತಿ........"[1]

ಇಂಥ ಒಂದು ಮಹತ್ತಾದ, ಬೃಹತ್ತಾದ ಜಗತ್ ಕೃತಿಯ ಅನುವಾದ ಪಿ. ಕೆ. ನಾರಾಯಣ ಅವರ 'ಭರತೇಶನ ದಿನಚರಿ'.

–೨–

ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯೊಡನೆ ಮಾಡುವ ಸಂಪರ್ಕ ಸಾಧನ ಭಾಷೆ; ಆಲೋಚನೆಗಳನ್ನು ಇತರರಿಗೆ ತಿಳಿಸುವ ಮಾಧ್ಯಮ. ಅದು ಕಾಲ–ಪರಿಸರಕ್ಕನುಸಾರವಾಗಿ ಭಿನ್ನವಾಗುತ್ತದೆ. ಆ ಭಿನ್ನತೆಯನ್ನು ಪರಿಹರಿಸುವ ಏಕೈಕ ವಿಧಾನ ಅನುವಾದ.[2]

ಓದುಗರನ್ನವಲಂಬಿಸಿ, ಅನುವಾದದ ಉದ್ದೇಶ – ಭಿನ್ನತೆಗನುಸಾರವಾಗಿ ಅನುವಾದದಲ್ಲಿ ಎರಡು ಪ್ರಕಾರಗಳು — ೧. ರೂಪಾಂತರ, (Adaptation) ೨. ಭಾವಾನುವಾದ (Paraphrasing).

ಹೆಸರೇ ಸೂಚಿಸುವಂತೆ ರೂಪಾಂತರ ಕ್ರಿಯೆ ಅನುವಾದ ಕ್ರಿಯೆಗಿಂತ ಭಿನ್ನವಾದುದು. ಮೂಲಕೃತಿಯನ್ನು ತನಗೆ ಬೇಕಾದಂತೆ ಬೇಕಾದ ರೂಪದಲ್ಲಿ ಅವಶ್ಯಕ ಮಾರ್ಪಾಡುಗಳೊಡನೆ ಉದ್ದಿಷ್ಟ ಭಾಷೆಯಲ್ಲಿ ರಚಿಸುವುದು ರೂಪಾಂತರ. ಉದಾ: ಆದಿಕವಿ ಪಂಪನ 'ವಿಕ್ರಮಾರ್ಜುನ ವಿಜಯ' ವ್ಯಾಸಮಹಾಭಾರತದ ರೂಪಾಂತರ. ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ' ವಾಲ್ಮೀಕಿ ರಾಮಾಯಣದ ರೂಪಾಂತರ. ರೂಪಾಂತರದಲ್ಲಿ ಮಾರ್ಪಾಡು, ವ್ಯತ್ಯಾಸಗಳಾಗಬಹುದು. ಆದರೆ ಭಾವಾನುವಾದದಲ್ಲಿ ಆ ರೀತಿಯ ಹೆಚ್ಚು–ಕಡಿಮೆ ಆಗಬಾರದು. ಮೂಲಕೃತಿಯ ಭಾವದ ಅನುವಾದ ಇಲ್ಲಿ ಮುಖ್ಯ. ಸಾಮಾನ್ಯರಿಗೂ ಅರ್ಥವಾಗುವ ಉದ್ದೇಶವಾದರೆ ಅದು ಸರಳ ಅನುವಾದವಾಗುತ್ತದೆ. ಉದಾ : ಎ.ಆರ್. ಕೃಷ್ಣಶಾಸ್ತ್ರಿಗಳ 'ಮಹಾಭಾರತ', ದೇ. ಜ. ಗೌ. ಅವರ 'ವಚನ ಚಂದ್ರಿಕೆ', 'ರಾಮಾಯಣ ದರ್ಶನಂ' ಕಾವ್ಯದ ಭಾವಾನುವಾದ, ಪಿ. ಕೆ. ನಾರಾಯಣ ಅವರ 'ಭರತೇಶನ ದಿನಚರಿ' ರತ್ನಾಕರವರ್ಣಿಯ 'ಭರತೇಶ ವೈಭವ'ದ ಭಾವಾನುವಾದ.

ಭಾವಾನುವಾದ ಒಂದು ಭಾಷೆಯಿಂದ ಇನ್ನೊಂದು ಭಾಷೆಯಲ್ಲಿಯೇ ನಡೆಯಬೇಕೆಂದಿಲ್ಲ. ಒಂದೇ ಭಾಷೆಯಲ್ಲೂ ಇಂಥ ಕಾರ್ಯ ನಡೆಯಬಹುದು. ಒಂದೇ

ಭಾಷೆಯ ಅನುವಾದ ಕಾರ್ಯಕ್ಕಿಂತ ಅನ್ಯಭಾಷೆಯಿಂದ ಮಾಡತಕ್ಕ ಅನುವಾದ ಕಷ್ಟಕರ. ಹಾಗೆಂದಮಾತ್ರಕ್ಕೆ ಮೊದಲಿನ ಕಾರ್ಯ ಸುಲಭವೇನಲ್ಲ. ಅನುವಾದಕ ಮೂಲಪದ ಅರ್ಥವ್ಯಾಪ್ತಿ, ಅರ್ಥಛಾಯ ಸಂದರ್ಭ, ಕವಿಯ ಆಶಯ, ಮೂಲ ಪದದ ಸ್ವಂತಿಕೆ ಇತ್ಯಾದಿಗಳನ್ನು ಗಮನಿಸಬೇಕು. ಅಷ್ಟೇ ಅಲ್ಲ ಪ್ರತಿಭೆ, ಪಾಂಡಿತ್ಯ, ತಾಳ್ಮೆಯ ಜತೆಯಲ್ಲಿ ಆಯಾ ಭಾಷೆಯ ದೇಸೀ, ಸೊಬಗು, ಸೊಗಡು, ಮಾತಿನ ಭಿನ್ನ ರೂಢಿಗಳು ಇತ್ಯಾದಿಗಳ ಬಗ್ಗೆ ಲಕ್ಷ್ಯವಿಡಬೇಕು.

ಸ್ವಾಭಾವಿಕತೆ ಅನುವಾದದ ಉತ್ತಮ ಲಕ್ಷಣ. ಅದಕ್ಕಾಗಿ ಅನುವಾದಕ ಉಚಿತ ಪದಪ್ರಯೋಗ, ಸರಳತೆ, ಸ್ಪಷ್ಟತೆ, ಸರಸತೆ, ವ್ಯಂಗ್ಯ, ಧ್ವನಿ– ಮೊದಲಾದ ಭಾಷಾ ಲಕ್ಷಣಗಳನ್ನು ಬಲ್ಲವನಾಗಿದ್ದು ಭಾಷೆಯಲ್ಲಿ ಪ್ರಭುತ್ವ ಹಿಡಿತ ಉಳ್ಳವನಾಗಿರಬೇಕು. ಓದಿ ಅರ್ಥಮಾಡುವ ಸಹೃದಯನಿಗಿಂತಲೂ ಅನುವಾದಿಸುವ ಅನುವಾದಕನಿಗೆ ಅದರ ಎರಡರಷ್ಟು ಶ್ರಮ. ಉತ್ತಮ ಕವಿ ಉತ್ತಮ ವಿಮರ್ಶಕನೂ ಆಗಬಲ್ಲ; ಭಾಷಾಂತರ ಕಾರನೂ ಆಗಬಲ್ಲ. ಅನುವಾದಕನು ಕವಿಯಾಗಿದ್ದಲ್ಲಿ ಸಾಹಿತಿಯಾಗಿದ್ದಲ್ಲಿ, ಸಂವೇದನ ಶೀಲನಾಗಿ ಅನುವಾದಿಸುವಲ್ಲಿ ಸಾರ್ಥಕತೆ ಪಡೆಯುವುದರಲ್ಲಿ ಸಂಶಯವಿಲ್ಲ. ಅನುವಾದಿಸಲು ಬೇಕಾಗುವ ಈ ಅರ್ಹತೆ 'ಪ್ರತಿಭೆ'ಯಂತೆ ಜನ್ಮತಃ ಬರಬೇಕು. ಪ್ರಯತ್ನದಿಂದಲೂ ಸಾಧ್ಯ.

"ಅನುವಾದ ಒಂದು ಕಲೆ. ಮಾಥ್ಯೂ ಅರ್ನಾಲ್ಡ್‌ರ ಪ್ರಕಾರ — Translation ought to 'such' that the reader should, if possible forget that it is a translation, at all and be lulled into the illusion that he is reading original work" (Mathew Aornold can translating Homer).

ಈ ಕಲೆ ಎಲ್ಲರಿಗೂ ಸಿದ್ಧಿಸುವಂತಹುದಲ್ಲ. ಅದಕ್ಕೆ ಸಾಧನೆ ಬೇಕು, ಪ್ರತಿಭೆ ಬೇಕು. ಭಾಷಾಜ್ಞಾನ, ಪಾಂಡಿತ್ಯಬೇಕು.

೩

ವಿಮರ್ಶೆ ಎಂದರೆ ಸಾಧಾರಣವಾಗಿ ಎಲ್ಲರಿಗೂ ತಿಳಿದಿರುವಂತೆ ಕವಿಕೃತಿ ಯೊಂದನ್ನು ಸಮರ್ಥನಾದ ಓದುಗ ತನಗಾಗಿ ಅರ್ಥಮಾಡಿಕೊಳ್ಳುವ ಮತ್ತು ತನ್ನ ಸುತ್ತಣದವರಿಗೆ ಅರ್ಥ ಮಾಡಿಕೊಡುವ ಒಂದು ಪ್ರಾಮಾಣಿಕ ಪ್ರಯತ್ನ. ಬೃಹತ್ತಾದ ಕೃತಿಯೊಂದನ್ನು ಅರ್ಥೈಸಲು ಅವಧಿ ಮತ್ತು ಅವಕಾಶ ಸೀಮಿತವಾಗಿರುವುದರಿಂದ ಇದು ಒಂದು ಪರಿಪೂರ್ಣವಾದ ಹಾಗೂ ಸಮಗ್ರವಾದ ವಿಮರ್ಶೆಯಾಗಲು ಸಾಧ್ಯ ವಿಲ್ಲ ಎಂಬುದು ಗಮನಿಸಬೇಕಾದ ಅಂಶ. ಆದರೂ 'ಭರತೇಶ ವೈಭವ' ಹಾಗೂ 'ಭರತೇಶನ ದಿನಚರಿ'ಯನ್ನು ಓದಿ ನಾನು ಅರ್ಥಮಾಡಿಕೊಂಡುದನ್ನು ಇಲ್ಲಿ ಪ್ರಾಮಾ ಣಿಕವಾಗಿ ಹೇಳಲು ಪ್ರಯತ್ನಿಸಿದ್ದೇನೆ.

'ಭರತೇಶ ವೈಭವ'ದ ಸಮಗ್ರ ಅನುವಾದವನ್ನು ಪಿ.ಕೆ. ನಾರಾಯಣ ಅವರಲ್ಲದೇ ಇನ್ನಾರೂ ಮಾಡಿಲ್ಲ. ಆದರೆ 'ಭೋಗವಿಜಯ'ದಲ್ಲಿ ಬರುವ ಭರತೇಶ ಹಾಗೂ ಅವನ ರಾಣಿಯರ ಸಲ್ಲಾಪ, ಸಂಗೀತ ನಾಟ್ಯವೇ ಮೊದಲಾದ ಲಲಿತಕಲಾಗೋಷ್ಠಿಗಳಲ್ಲಿ, ಸಕಲಕಲಾಕೋವಿದನಾದ ಭರತೇಶನ ವ್ಯಕ್ತಿತ್ವ ಹಾಗೂ ಅವನ ರಾಣಿಯರ ಪಾತ್ರಗಳು ಹೊಸಗನ್ನಡದಲ್ಲಿ – ಆದಷ್ಟು ಕವಿಯ ಮಾತುಗಳಲ್ಲಿ 'ಶೃಂಗಾರವಲ್ಲರಿ' ಎಂಬ ಹೆಸರಿನಲ್ಲಿ ದಿ| ಜಿ.ಪಿ. ರಾಜರತ್ನಂ ಅವರು ತಂದಿದ್ದಾರೆ. ಹೆಸರೇ ಹೇಳುವಂತೆ ಅದು 'ಶೃಂಗಾರವಲ್ಲರಿ'ಯೇ ಆಗಿದೆ. ರಮ್ಯ–ಮಧುರ, ಸರಸ–ಸುಂದರವಾಗಿದೆ.

ಹದಿನೈದನೇ ಶತಮಾನದ ನಡುಗನ್ನಡ ಭಾಷೆಯಲ್ಲಿ ಸಾಂಗತ್ಯದ ಲಲಿತ ಸುಂದರ ನಡೆಯಲ್ಲಿ ಸಿದ್ಧನೂ ಸ್ಥಿತಪ್ರಜ್ಞನೂ ಪ್ರತಿಭಾ ಸಂಪನ್ನನೂ ಆದ ರತ್ನಾಕರ ವರ್ಣಿಯು ರಚಿಸಿದ 'ಭರತೇಶ ವೈಭವ'ದ ಹೊಸಗನ್ನಡದ ಸರಳ ಗದ್ಯಾನುವಾದ 'ಭರತೇಶನ ದಿನಚರಿ'. ಅನುವಾದಕ್ಕೆ ಆ ಹೆಸರಿಡಲು ಕಾರಣವನ್ನು ಅನುವಾದಕರು 'ಒಂದು ಮಾತು'ನಲ್ಲಿ ಹೀಗೆ ಹೇಳಿದ್ದಾರೆ : "ಭರತೇಶ ವೈಭವ'ವು ಪುರುದೇವ ಕುಮಾರ ಭರತಚಕ್ರಿಯ ದಿನಚರಿಯಂತಿದೆ. ಅಷ್ಟು ವಿವರವಾಗಿ ಚಕ್ರವರ್ತಿಯ ದಿನ ದಿನದ ಆಗುಹೋಗುಗಳನ್ನು ಬಿತ್ತರಿಸಿದ್ದಾನೆ ಮಹಾಕವಿ. ಆ ಕವಿಯ ಶೈಲಿಯೇ ಗದ್ಯದಲ್ಲಿಳಿದು ಬರುವಂತೆ ಪ್ರಯತ್ನಿಸಿದ್ದೇನೆ".

ಅನುವಾದಕರು ಈ ಬೃಹತ್ ಕಾವ್ಯದ ಅನುವಾದದನ್ನು ಮೂರುಭಾಗಗಳಲ್ಲಿ ಸಹೃದಯ ಓದುಗನಿಗೆ ನೀಡಿದ್ದಾರೆ. 'ಭರತೇಶ ವೈಭವ'ದ ಮೊದಲ ಭಾಗವಾದ ಭೋಗವಿಜಯದ ಭಾಗ 'ಸರಸದ ದಿನಗಳು', ದಿಗ್ವಿಜಯವೇ 'ವಿಜಯದ ದಿನಗಳು', ಯೋಗವಿಜಯ, ಮೋಕ್ಷವಿಜಯ, ಅರ್ಕಕೀರ್ತಿ ವಿಜಯಗಳೇ ಮೂರನೇ ಭಾಗವಾದ 'ತಪಸ್ಸಿನ ದಿನಗಳು'. ಎಂಭತ್ತು ಸಂಧಿಗಳ ಮಹಾಕಾವ್ಯವನ್ನು ಮೂರು ಭಾಗಗಳಲ್ಲಿ ಗದ್ಯಾನುವಾದ ಮಾಡುವಲ್ಲಿ ಆ ಎಂಭತ್ನಾರು ಸಂಧಿಗಳ ಹೆಸರುಗಳನ್ನು ಆಯಾ ಭಾಗಗಳ ಅಧ್ಯಾಯಗಳಾಗಿ ಅದೇ ಹೆಸರುಗಳನ್ನು ಉಳಿಸಿಕೊಂಡಿದ್ದಾರೆ.

ಆತ್ಮಕಲೆಯೂ ಸೇರಿದಂತೆ ಸಕಲಕಲಾಕೋವಿದನಾದ ಭರತೇಶನ ಆಸ್ಥಾನ ಮುನಿಗಳಿಗೆ ಆತ ನೀಡುವ ನಿತ್ಯದಾನ, ಆರೋಗಣೆ, ರಾಣಿಯರೊಡನೆ ಅವನ ಸರಸ ಸಲ್ಲಾಪ, ಅವನ ಪ್ರೇಮದ ರಾಣಿ ಕುಸುಮಾಜಿ ಯಾರಿಗೂ ತಿಳಿಯದಂತೆ ತನ್ನ ಸಾಕು ಗಿಳಿಯೊಡನೆ ತನ್ನ ನಲ್ಲನ ಗುಣ ಸೌಂದರ್ಯವರ್ಣನೆ ಮಾಡಿದಾಗ ಮತ್ತಿಬ್ಬರು ರಾಣಿಯರು ಅದನ್ನು ಕಾವ್ಯವನ್ನಾಗಿ ಮಾಡಿ ಭರತೇಶನ ಎದುರು ಪ್ರಕಟಿಸಿದ ಸನ್ನಿವೇಶ, ಕಾವ್ಯವಾಚನ ಮಾಡಿದವರಿಗೆ ರಾಜಸ ಸನ್ಮಾನ, ಕುಸುಮಾಜಿಗೆ ಮನೆಯಲ್ಲಿ ಮನ್ನಣೆ, ನಾದಿನಿ ಮಕರಂದಾಜಿಯೊಡನೆ ಭರತೇಶನ ಸರಸ, ಪೂರ್ವನಾಟಕ ಉತ್ತರನಾಟಕ, ತಾಂಡವ ವಿನಯಗಳೆಂಬ ಅಧ್ಯಾಯಗಳಲ್ಲಿ ಬರುವ ನೃತ್ಯವರ್ಣನೆ, ಶಯ್ಯಾಗೃಹವೆಂಬ ಅಧ್ಯಾಯದಲ್ಲಿ ಬರುವ ಭರತೇಶ–ಪದ್ಮಿಣಿಯರ ಸರಸ ಶೃಂಗಾರ– ಎಲ್ಲವನ್ನೂ ಓದುತ್ತಿದ್ದಂತೆ, ಹದಿಹರೆಯದವರು ಹಗಲು ಕನಸು ಕಾಣುವಂತೆ,

ನಡುಹರೆಯದವರು ಮನದಲ್ಲಿ ಅನುಭವಿಸುವಂತೆ, ಮುದಿಹರೆಯದವರು ಮೆಲುಕಾಡು ವಂತೆ ರಮ್ಯಮಧುರವಾದ ಸರಸ ಸುಂದರವಾದ ಮನೋಲ್ಲಾಸಕಾರಿಯಾದ ಶೃಂಗಾರ ರಸಭಾವಗಳನ್ನು ಅಶ್ಲೀಲವೆನ್ನದೆ ಹಿತವಾಗಿ ಮಿತವಾಗಿ ರತ್ನಾಕರ ವರ್ಣಿಸಿರುವುದನ್ನು ಅನುವಾದಕರೂ ಅದೇ ಶೈಲಿ, ಅದೇ ಮಾಧುರ್ಯ, ಸೌಂದರ್ಯ, ಉಲ್ಲಾಸಗಳು ಗದ್ಯದಲ್ಲೂ ಬರುವಂತೆ ಅನುವಾದಿಸಿದ್ದಾರೆ.

ರತ್ನಾಕರ ತನ್ನ ಕಥಾನಾಯಕನ ವರ್ಣನೆಯನ್ನು ಆಸ್ಥಾನ ಕವಿಯ ಮೂಲಕ ಮಾಡಿದರೂ ಆತನೊಡನೆ ದಿನರಾತ್ರಿ ಜತೆಗಿರುವ ಆತನ ವಿಶೇಷ ಪ್ರೇಮಕ್ಕೆ ಪಾತ್ರ ಳಾದ ರಾಣಿಯ ಮೂಲಕ ಆತನನ್ನು ವರ್ಣಿಸುವ ನೂತನ ತಂತ್ರ ನಿಜವಾಗಿಯೂ ಸುಂದರ. ಸಾಂಗತ್ಯದಲ್ಲಿ ಆ ವರ್ಣನೆ ಹೀಗಿದೆ–

> "ನಗೆಯ ಚೆಲ್ವಿಕೆಯ ಮೋಹನಕಾಂತಿರಸವನು। ಮೊಗವೆತ್ತಲಲಿದುದತ್ತತ್ತ
> ಮೊಗೆಮೊಗೆದು ಚೆಲ್ವಂತೆ ರಾಘವನ ಮುದ್ದು। ಮೊಗವೊಪ್ಪುತಿಹುದರ
> ಗಿಳಿಯೆ ।
> ಕಬ್ಬುವಿಲ್ಲಗೆ ಕಣೆದೊಟ್ಟು ಹೆಂಗಳನೆಸು। ವುಬ್ಬಸವೇಕೆಂದು ಕರೆದು
> ಕಬ್ಬುವಿಲ್ಲಗೆ ಹೇಳು ಭರತರಾಜನ ನಿಡು। ಹುಬ್ಬನೋಲೈಸೆಂದು ಗಿಳಿಯೆ ।
> ಕಂಪಿಮಾಸುರಿಗೆ ಕವಿವ ತುಂಬಿಗಳ ಸುಖ। ದಿಂಪಾದ ನೃಪನನಾಚಿಕಕೆ
> ಕಂಪಿಗೆ ಸೋತೆರಗಿದ ಭೃಂಗಗಳ ಕೊಲ್ವ । ಸಂಪಗೆಗೆ ಪಾಟಿಯೆ ಕೀರಾ,
>
> ....
> ...."

ಅನುವಾದ ಹೀಗೆ ಬಂದಿದೆ: "ನಗೆಯಿಂದಲೂ ಚೆಲುವಿಕೆಯಿಂದಲೂ ಕೂಡಿದ ಮೋಹನವಾದ ರಸವನ್ನು ಮೊಗೆಮೊಗೆದು ಚೆಲ್ಲುವಂತೆ ಭರತೇಶನ ಮುದ್ದುಮೊಗ ವೊಪ್ಪುತ್ತಿದೆ. ಪರೆನೊಸಲಲ್ಲಿ ಕಸ್ತೂರಿತಿಲಕ ಕಂಗೊಳಿಸುತ್ತಿದೆ. ಕಬ್ಬುವಿಲ್ಲನು ನಮ್ಮರಸನ ನಿಡುಹುಬ್ಬಿಗಾಗಿ ಓಲೈಸುವಷ್ಟು ಸೊಗಸಾಗಿ ಬಾಗಿದೆ ಅವನ ಹುಬ್ಬು. ಕಂಪಿಗೆ ಸೋತು ಎರಗಿದ ಭಂಗಗಳನ್ನು ಕೊಲ್ಲುವ ಸಂಪಗೆಗೆ ನಮ್ಮರಸನ ನಾಸಿಕ ಸಾಟಿಯಲ್ಲ. ಚೆಲುವಿನಲ್ಲಿ ಅದಕ್ಕೂ ಮಿಗಿಲು. ಚಿತ್ತದ ಇಚ್ಛೆಯನ್ನು ಕಿವಿಗೆ ಒರೆಯು ಯುವಾಗ ಅಲ್ಲಿಯೇ ಹತ್ತಿಕೊಂಡ ಬೆಳುನಗೆಯಂತೆ ಅರಸನ ಕಿವಿಗಳಲ್ಲಿ ಮುತ್ತಿನ ಚೌಕುಳಿಗಳು ಮಿರುಗುತ್ತಿವೆ. ಜವ್ವನದ ಸೊಂಕಿನ ಮದ ಉಬ್ಬಿ ಒಸರಿ ಹರಿಯು ವಂತೆ ಚೆಲುವಾದ ಮೀಸೆಗಳು ಒಪ್ಪುತ್ತಿವೆ. ಮಕರಂದ ತುಂಬಿದ ತಾವರೆಯಂತೆ ನಮ್ಮರಸನ ಕೆಂಬಾಯ ತುಟಿಗಳು. ಅದರ ಬೆಡಗನ್ನೆಂತು ವರ್ಣಿಸಲಿ ?"

ಕುಸುಮಾಜಿಯು ಕಾವ್ಯ ಪ್ರಕಟಿಸಿದ ಅಮರಾಜಿ ಸುಮನಾಜಿಯರಿಗೆ ಬಹುಮಾನ ಕೊಡಬೇಕೆಂದು ಭರತ ಯೋಚಿಸುತ್ತಾನೆ. ಅಮರೆಯನ್ನು ಸುಮನೆಯನ್ನು ತನ್ನೊತ್ತಿಗೆ ಕರೆದಾಗ ಬಳಿಬಂದ ಅವರನ್ನು ಅಪ್ಪಿಕೊಂಡು 'ಮೆಚ್ಚಿದೆ' ಎಂದು ನುಡಿಯು ತ್ತಾನೆ. ಆಗ ಸತಿಯರೆಲ್ಲ ಘೊಳ್ಳನೆ ನಕ್ಕರು. ಭೂವಲ್ಲಭನೂ ನಕ್ಕನು.

"ಒಳ್ಳೆಯದಾಯಿತು. ಹಾಗೇ ಆಗಬೇಕು ಎಂದು ಕುಸುಮಾಜಿಯೂ ನಕ್ಕಳು. ಕೋಣೆಯಲ್ಲಿ ನಾನೊಂದು ಮಾತನಾಡುತ್ತ ಇದ್ದರೆ ಅದನ್ನು ತಂದು ಅರಸನಿಗೆ ಹೇಳಿದಿರಿ. ದೈವ ಅದನ್ನು ಕಾಣದೆ ? ನಿಮಗೆ ತಕ್ಕ ಫಲವನ್ನು ತೋರಿಸಿತು. ಒಬ್ಬರ ಗೂಢ ಚರಿತ್ರವನ್ನು ಬಾಹ್ಯಕ್ಕೆ ಹಬ್ಬಿಸಿ ನಗುವವರನ್ನು ದೈವವೇ ತಬ್ಬಿ ನಗಿಸುವುದೆಂಬ ನುಡಿಗೆ ನೀವಿಬ್ಬರೂ ಗುರಿಯಾದಿರಿ. ಇಷ್ಟು ನುಡಿದರೂ ಕುಸುಮಾಜಿಯ ಒಳಗಿನ ನಗು ಮತ್ತೆ ಮತ್ತೆ ಉಕ್ಕಿ ಬರುತಿತ್ತು. ಸೆರಗನ್ನು ಮೋರೆಗೆ ಮುಚ್ಚಿ ನಕ್ಕಳು. ಕಂಬದ ಮರೆಗೆ ಹೋದಳು. ಒಡನೆ ನಾಚಿಕೆಯಿಂದ ಅರಸನಿದಿರಲ್ಲಿ ಬಂದು ನಿಂತಳು." ಸರಳ ಅನುವಾದಕ್ಕೆ ಈ ಭಾಗ ಉದಾಹರಣೆ.

ಕುಸುಮಾಜಿಯ ಮನೆಗೆ ಬಂದ ಭರತೇಶ "ಕುಸುಮೆ, ಕುಸುಮಿ, ಕುಸುಮು, ಕುಸುಮಾಜಿ, ಕುಸುಮಾಂಗಿ, ಕುಸುಮ ಕೋಮಲೆ" ಎನ್ನುತ್ತ ಆಕೆಯ ಹಾಡಿನ ಸವಿಯನ್ನನುಭವಿಸುತ್ತ "ಹಾಡಿ ದಣಿದ ಕೊರಳಿದು, ಮೇಲೆ ಎಡೆಯಾಡಿ ದಣಿದ ಬೆರಳಿದು, ಮಿಡುಕಿ ಬಳಲಿದ ಚೆಂದುಟಿಯಿದು ಎಂದು ಅರಸನು ಆಕೆಯನ್ನು ಬರಸೆಳೆದು ಭಾವವರಿದು ಉಪಚರಿಸಿದನು. ಭರತೇಶನ ಉಪಚಾರ ಸರಸದತ್ತ ತಿರುಗಿತು. ಅದು ಚೆಲ್ಲಾಟವಾಯಿತು. ಕುಸುಮಾಜಿ ಅರಳಿದ ಕುಸುಮವೆ ಆದಳು. ಆಕೆ ರತಿಯಾದಳು ; ಅವನು ಮನ್ಮಥನಾದ."

ಪ್ರಣಯಲೋಕದ ಸರಸ ಭವ್ಯ ಶೃಂಗಾರದಲ್ಲಿ ಎಲ್ಲೂ ಅಶ್ಲೀಲವಿಲ್ಲ. ಹದವರಿತ ಮಿತವಾದ ವರ್ಣನೆ. ಮೂಲದಲ್ಲಿ ಹೇಗೋ ಅನುವಾದದಲ್ಲೂ ಹಾಗೆಯೇ.

ಸಂಗೀತಗೋಷ್ಠಿ, ಕವಿಗೋಷ್ಠಿಗಳ ತರುವಾಯ ನಾಟ್ಯನೋಡುವ ಭರತೇಶ ಸಕಲ ಕಲಾವಿದರಿಗೂ ಉಡುಗೊರೆಯಿತ್ತು ಕಳುಹುವನು. ಪೂರ್ವನಾಟಕ–ಉತ್ತರ ನಾಟಕಗಳೆಂಬ ಎರಡು ಸಂಧಿಗಳಲ್ಲಿ ಬರುವ ನಾಟ್ಯದ ವರ್ಣನೆ ರತ್ನಾಕರನ ನೃತ್ಯಪ್ರಜ್ಞೆಗೆ ಸಾಕ್ಷಿ. ಅನುವಾದ ಓದುತ್ತಿದ್ದರೆ ದಿಕ್ಕನ್ನಿಕಾ ನಾಟ್ಯ. ಜಲಕನ್ನಿಕಾ ನಾಟ್ಯ. ಹಂಸಮಂಡಳಿ ನೃತ್ಯಗಳೇ ಮೊದಲಾದ ಹಲವಾರು ವಿಧದ ನಾಟ್ಯಪ್ರದರ್ಶನ ನಮ್ಮ ಕಣ್ಣೆದುರಿಗೇ ನಡೆಯುತ್ತಿವೆಯೇನೋ ಎಂಬಂಥ ಸೊಗಸಾದ ವರ್ಣನೆ ಕಣ್ಣಿಗೆ ಕಟ್ಟುವಂತಿದೆ.

ನಾಟಕಶಾಲೆಯಲ್ಲಿ ಕಾಮೋನ್ಮಾದದಿಂದ ಮೈತುಂಬಿದ ಬೆಲೆವೆಣ್ಣುಗಳಿಗೆ ಅಂಗಜಾಗಮ ಸಿದ್ಧನಾದ ಭರತೇಶ ಬಹುಮಾನ ನೀಡಿ ಅವರ ಉನ್ಮಾದವಿಳಿಸುತ್ತಾನೆ. ರಾಣಿಯರೂ ನರ್ತನಗೈದಾಗ ರೂಪಾಣಿ–ಪದ್ಮಿನಿಯರೆಂಬ ರಾಣಿಯರು ರಾಜನಲ್ಲಿ ಮುನಿಸುಗೊಳ್ಳುತ್ತಾರೆ. ಅವರನ್ನು ಅರಸ ಸಮಾಧಾನಪಡಿಸುತ್ತಾನೆ. ಬಾಲೆಯಲ್ಲದ, ವಿದಗ್ಧೆಯಲ್ಲದ, ಮುಗ್ಧೆಯಲ್ಲದ ಆ ಪದ್ಮಿನಿಯ ಆತುರ–ಕಾತರವನ್ನು ಅರಿತ ಅರಸ ಅವಳನ್ನೇ ಕಾಲಿಗೆರಗುವಂತೆ ಮಾಡುವನು.

ಪ್ರಣಯಕಾತರೆ ಪದ್ಮಿನಿಯ ಹುಸಿಮುನಿಸು – ತಳಮಳ – ಕಳವಳ – ಛಲ – ಅರಸನ ವಿನೋದ – ರಾಣಿಯರ ಸಂಧಾನ – ಅಂತ್ಯದಲ್ಲಿ "ಎಲ್ಲೆಲ್ಲೂ ಮುದ್ದು

ಮೋಹನ ರೂಪದ ಭರತೇಶನೆ". ಭರತೇಶನಿಲ್ಲದೆ ಏಕಾಕಿಯಾಗಿರುವ ಸತಿಯರೇ ಅಲ್ಲಿರಲಿಲ್ಲ. ಭರತೇಶನ ಮೂಲದೇಹ ಗದ್ದುಗೆಯಲ್ಲಿತ್ತು. ಆ ವಿಕ್ರಿಯಾಂಗನು ಮೂಲವನ್ನು ಮುಟ್ಟಿ ಶಾಖೆಗಳನ್ನು ಮುಟ್ಟಿ ಸ್ಪರ್ಶಶೀಲವರಿದ ವೃಕ್ಷದಂತೆ ಮೂಲ ದೇಹದಲ್ಲೂ ಶಾಖಾದೇಹದಲ್ಲೂ ಸುಖಗೊಳ್ಳುತ್ತಿದ್ದನು.

ಶೃಂಗಾರರಸದ ಪರಾಕಾಷ್ಠೆ! ಆದರೂ ಇಲ್ಲಿ ಉನ್ಮಾದವಿಲ್ಲ ಮುದವಿದೆ. ಆವೇಶವಿಲ್ಲ. ಸರಸವಿದೆ. ಅಶ್ಲೀಲವಿಲ್ಲ. ಸೌಶೀಲ್ಯವಿದೆ.

ಶೃಂಗಾರಸ ರತ್ನಾಕರನು ಹಾಸ್ಯರಸರತ್ನಾಕರನೂ ಹೌದು! ಕುಸುಮಾಜಿಯ ತಂಗಿ ಮಕರಂದಾಜಿಯೊಡನೆ ಭರತೇಶನ ಸರಸ "ನಾದಿನಿ–ಭಾವಂದಿರ ಸರಸ"ದಲ್ಲಿ ನಾದಿನಿಯ ಮುನಿಸು, ಮರುಕ. ಲಲ್ಲೆ, ಗಂಭೀರ. ಜಾಣ್ನುಡಿ. ಕರೆಮರೆ, ಭಯಭಕ್ತಿ, ಗರ್ವ, ಛಲ, ದೊಡ್ಡಸ್ತಿಕೆಗಳೆಲ್ಲ ಇದ್ದು ಇಂಥ ಒಂದು ವಿನೋದ ಸಲ್ಲಾಪ ಬಹುಶಃ ಇನ್ನಾವ ಸಾಹಿತ್ಯದಲ್ಲೂ ದೊರೆಯಲಾರದು. ಅನುವಾದವೂ ಅದೇ ಶೈಲಿಯಲ್ಲಿ ಗದ್ಯದಲ್ಲಿ ಹರಿದಿರುವುದು ಅನುವಾದದ ಉತ್ತಮಾಂಶ. ಉದಾಹರಿಸಲು ಸ್ಥಳಾವಕಾಶದ ಅಭಾವ. ಅದನ್ನು ಓದಿಯೇ ಸವಿಯಬೇಕು, ಅನುಭವಿಸಬೇಕು, ಮೆಲುಕಾಡಬೇಕು. ಆ 'ಜೊಂಪು' ಓದುಗರನ್ನು ಅದರಲ್ಲೇ ನಿಮಗ್ನರನ್ನಾಗಿಸುತ್ತದೆ.

ಭರತೇಶನ ಧ್ಯಾನ ಒಂದೊಂದು ದಿನಕ್ಕೆ ಒಂದೊಂದು ಥರ. "ರಾಜನು ಆಗಾಗ್ಗೆ ಆನಂದವೆಂಬ ಸಾಗರವನ್ನೇ ಒಂದು ಕುಡ್ತೆಯಾಗಿ ಮಾಡಿ ಸೇವಿಸುತ್ತಿದ್ದನು. ಅವನು ಕುಡಿದಂತೆ ಆ ಕಡಲು ಹೆಚ್ಚಿ ಹೆಚ್ಚಿ ಬಲ್ಗಡಲಾಗುತಿತ್ತು. ಆನಂದ ಸಾಗರವು ತೆರೆಗಳಿಲ್ಲದ ಕಡಲು. ನೊರೆ ನೀರಿಲ್ಲದ ಕಡಲು. ಅದು ಧರೆಯ ಸಮುದ್ರದಂತಲ್ಲ. ಶುದ್ಧಾತ್ಮನಲ್ಲಿ ಎರವಿಲ್ಲದೆ ಇರುವುದು. ಆ ಆನಂದ ವಾರಿಧಿಯು ಧ್ಯಾನಿಗಲ್ಲದೆ ಮತ್ತಾರಿಗೂ ತೋರದು. ಅವನು ತನ್ನಲ್ಲಿ, ತನ್ನನ್ನೇ, ತನಗಾಗಿ ನಿಲ್ಲಿಸಿ, ತಾನೇ ತನ್ನನ್ನು ನೋಡುತ್ತಿದ್ದನು. ಆಗ ತನ್ನಲ್ಲಿಯೇ ಹುಟ್ಟಿದ ಸುಖವನ್ನು ಅನುಭವಿಸುತ್ತಿದ್ದ ವೈಭವದಲ್ಲಿದ್ದನು! ಅವನು ಕುದುರೆಯಿಲ್ಲದೆ ವಿಹಾರ ಮಾಡುವನು! ಹಗ್ಗವಿಲ್ಲದೆ ಉಯ್ಯಾಲೆಯಲ್ಲಾಡುವನು. ಸಲ್ಲೆಯಿಲ್ಲದೆ ರತಿಸುಖವನು ಸುಖಿಸುವನು. ಬಾಯಿಯ ಹಂಗಿಲ್ಲದೆ ಚಿದ್ಗುಣಾನ್ನವನ್ನು ಉಣ್ಣುವನು. ಕಾಯವಿಲ್ಲದೆ ರೂಪು ತೋರುವನು."

ಭೋಗಿ ಭರತೇಶ ಹಾಗಿದ್ದರೆ, ಯೋಗಿ ಭರತೇಶ ಹೀಗೆ :

'ಭೋಗವಿಜಯ'ದಲ್ಲಿ ಮಹಾಕವಿ ರತ್ನಾಕರ ಪುರುದೇವಕುಮಾರ ಭರತೇಶನನ್ನು ಸಕಲಕಲಾಕೋವಿದನಾಗಿ, ಕವಿಕುಲಕೋಟಿಗೆ, ಸಂಗೀತ, ನೃತ್ಯ, ಲಲಿತಕಲಾ – ಕಲಾವಿದರಿಗೆ ಪ್ರೋತ್ಸಾಹಕನಾಗಿ, ಮೃದುಮಧುರ ಭಾವಗಳ ಮಹಾಪೂರನಾಗಿ. ಸಕಲದಲ್ಲೂ ಸತ್ತನ್ನು ಕಾಣುವ ಕ್ರತುಪುರುಷನನ್ನಾಗಿ ಚಿತ್ರಿಸಿ ಅವನ ನಿತ್ಯಜೀವನದ ಆಗು ಹೋಗುಗಳಲ್ಲಿ ಭೋಗ–ಯೋಗಗಳ ಸಮನ್ವಯವನ್ನು ಸಾರ್ಥಕವಾಗಿ ಲೋಕದ ಮುಂದಿಟ್ಟಿದ್ದಾನೆ.

ಈ 'ಸರಸದ ದಿನಗಳು' ಭಾಗದಲ್ಲೂ ಭರತಚಕ್ರಿಯ ಮೂಲಪಾತ್ರಕ್ಕೆ ಯಾವುದೇ ಅಂಶವು ಕಡಿಮೆಯಾಗದಂತೆ ಬಂದಿರುವುದು, ಅನುವಾದವೆಂದು ಅನ್ನಿಸದೇ ಓದಿಸಿಕೊಂಡು ಹೋಗುವುದು, ಸಾಂಗತ್ಯದ ಲಾಲಿತ್ಯ ಅನುವಾದದಲ್ಲೂ ಪಡಿಮೂಡಿರುವುದು ಗಮನಿಸಬಹುದಾದ ಅಂಶಗಳು. ಈ ಭಾಗವು ವಾಸ್ತವಿಕತೆಯ ಜತೆ ಅತಿಶಯತೆಯೂ ಸೇರಿದಂತೆ. ರೋಚಕತೆ ರಂಜನೆಗಳಿಂದ ಒಂದು ಸರಸ ಸುಂದರ ಸಾಮಾಜಿಕ ಕಾದಂಬರಿಯಂತಿದೆ.

–೪–

ನವರಾತ್ರಿಯಲ್ಲಿ ಆಯುಧ ಪೂಜೆಯ ನಂತರ ಶಸ್ತ್ರಾಲಯದಲ್ಲಿ ಚಕ್ರರತ್ನೋದಯ, ಭರತೇಶನು ಷಟ್ಖಂಡಭೂಮಂಡಲ ಜಯಿಸಲು ದಿಗ್ವಿಜಯಕ್ಕೆ ಹೊರಡುವಿಕೆ, ಮಾಗಧ, ವರತನು. ಪ್ರಭಾಸ ಮೊದಲಾದ ಅರಸರಿಂದ ಕಪ್ಪಕಾಣಿಕೆ–ಸ್ತ್ರೀರತ್ನ ಸ್ವೀಕಾರ, ವಿವಾಹ, ಪುತ್ರೋತ್ಸವ, ಸೋದರಮಾವನ ಮಗಳಾದ ಸುಭದ್ರಾದೇವಿಯೊಡನೆ ವೈಭವದ ವಿವಾಹ, ಪಟ್ಟದರಸಿ ಸುಭದ್ರಾದೇವಿಯೊಡನೆ ಷಟ್ಖಂಡ ಮಂಡಲ ಸಾಧಿಸಿ ಪುರಕ್ಕೆ ಹಿಂದಿರುಗುವಿಕೆ, ಮಧ್ಯೆ ಪೌದನಪುರದಲ್ಲಿ ಬಾಹುಬಲಿಯ ಧೂರ್ತತನ, ಯಾವ ಯುದ್ಧವನ್ನೂ ಮಾಡದೇ ವಾತ್ಸಲ್ಯಮಯಿ ಸಹೋದರನಾಗಿ ಗೆಲವು, ಬಾಹುಬಲಿಯ ನಿರ್ವೇಗದೀಕ್ಷೆ. ಮಹಾಸಂಭ್ರಮದೊಡನೆ ತನ್ನ ನಗರ ಪ್ರವೇಶ ಮಾಡುವ ಭರತೇಶನ ಶೌರ್ಯ–ಸಾಹಸ ಸರಸ–ಶೃಂಗಾರವನ್ನೊಳಗೊಂಡ ಭಾಗವೇ 'ವಿಜಯದ ದಿನಗಳು'.

ದಿಗ್ವಿಜಯಕ್ಕೆ ಹೊರಟ ಭರತೇಶನ ಹೆಸರು ಕೇಳಿಯೇ ರಾಜ ಮಹಾರಾಜರು ಕಪ್ಪಕಾಣಿಕೆ ಒಪ್ಪಿಸುವುದು, ಅದಕ್ಕೆ ಪ್ರತಿಯಾಗಿ ಭರತೇಶನ ಉಡುಗೊರೆ–ಮೆಚ್ಚುಗೆ–ಪ್ರೀತಿ ವಿಶ್ವಾಸದ ನುಡಿ ನೋಟಗಳು, ಹೆಂಗಸರು ಅವನಿಗೆ ಮರಾರುಹೋಗುವಂತೆ ಅವನ ರೂಪಗಾಂಭೀರ್ಯ – ಕಪ್ಪ ಒಪ್ಪಿಸುವ ರಾಜರೊಡನೆ ಅವನ ಉದಾತ್ತ ನಡೆವಳಿಕೆ ಒಮ್ಮೆ ಅವನನ್ನು ಕಂಡವರು ಅವನ ದಾಸನಾದರೆ ಸಾಕೆಂದು ಭಾವಿಸುವ ರೀತಿ–ಸುತರೊಡನೆ ವಾತ್ಸಲ್ಯದ ಮಹಾಪೂರ ಹರಿಸುವ ತಂದೆಯಾಗಿ ಅವನ ಮಾತುಕತೆ – ಅನುವಾದದಲ್ಲಿ ನಿರರ್ಗಳವಾಗಿ ಲಲಿತವಾಗಿ ಎಲ್ಲಿಯೂ ತಡೆಯಿಲ್ಲದೇ ಹರಿದು ಬಂದಿರುವುದು ಗಮನಾರ್ಹವಾದ ಹಾಗೂ ಮೆಚ್ಚತಕ್ಕ ಅಂಶ. ಅದಕ್ಕೆ ಉದಾಹರಣೆ–

"ಭರತೇಶ ತೊಡೆಯ ಮೇಲಿರುವ ಮಗನನ್ನು ನೋಡಿ ತಲೆಯನ್ನು ನೇವರಿಸುತ್ತ ಎತ್ತಿಕೊಂಡು ಎದೆತುಂಬಿ ತಬ್ಬುವನು. ತೆಕ್ಕಿಸಿಕೊಂಡು ತೂಗಾಡುವನು. 'ಚೆಲುವಯ್ಯ, ಚೆನ್ನಾನೆ, ಅಣ್ಣ ಬಂದನೆ ? ಭರತನ ಅಪ್ಪಾಜಿ ಬಂದನೆ ?' ಮೈಯೆಲ್ಲ ಗುಡುಗುಟ್ಟುವಂತೆ ತಕ್ಕಿಸಿಕೊಳ್ಳುವನು. ಮಗ ತಂದೆಯ ಕೊರಳನ್ನು ಅಪ್ಪುವನು. ಕಿರುಬೆರಳುಮಣಿಗಳನ್ನು ಎಣಿಸುವನು. ಒಂದೆಂಟು ಹತ್ತೆರಡೆಂದು ಮಗ ಎಣಿಸುವುದನ್ನು ನೋಡಿ ಸುಖಿಸುವನು. 'ಆದಿ ತೀರ್ಥಂಕರ' ಎಂದರೆ ಆ ಬಾಲನದನ್ನು 'ಆದಿಂಕರ' ಎನ್ನುವನು. ಅದನ್ನು ಕೇಳಿ ಎಲ್ಲರೂ ವಿನೋದಗೊಳ್ಳುವರು"

ತಂದೆ ಮಕ್ಕಳ ವಾತ್ಸಲ್ಯಪೂರ್ಣ ಸಲ್ಲಾಪ ದಿಗ್ವಿಜಯದುದ್ದಕ್ಕೂ ಮನಸೆಳೆಯುತ್ತದೆ. ಇಲ್ಲಿ ಭರತೇಶ ಹಂಸಕಲಾಪರಿಣತನಲ್ಲ. ಸಾವಿರಾರು ರಾಣಿಯರ ವಲ್ಲಭನಲ್ಲ. ಚಕ್ರಿಯಲ್ಲ ಮುದ್ದುಮಗುವನ್ನು ಲಾಲಿಸುವ ವಾತ್ಸಲ್ಯಮಯಿಯಾದ ಒಬ್ಬ ತಂದೆ.

ಸಾಹಸಿ, ಪರಾಕ್ರಮಿ ಭರತೇಶ ಕಳಧೌತಗಿರಿಯ ಕವಾಟವನ್ನು ವಜ್ರಾಯುಧದಿಂದ ಹೊಡೆದ ರಭಸಕ್ಕೆ "ಸಿಡಿಲು ಸಿಡಿಲನ್ನು ತಾಗಿದಂತಾಯಿತು. ಮಹಾ ಅರ್ಭಟೆ ಮಸಗಿತು. ಚಕ್ರಿಯು ಒಡಿದು ಹೊಡೆದ ಭರಕ್ಕೆ ಕದವು ಒಡೆದ ರಭಸಕ್ಕೆ ವಿಜಯಾರ್ಧವೇ ನಡುಗಿತು, ನೆಲ ಅದುರಿತು, ಕಡಲುಗಳು ಉಕ್ಕಿ ತುಳುಕಿದುವು. ತಳಿಗೆಯನ್ನು ಕೋಲ ತುದಿಯಿಂದ ಕುಟ್ಟುವಂತೆ ವಜ್ರಕವಾಟವನ್ನು ಭರತೇಶನು ನಿಮಿಷದಲ್ಲಿ ಹೋಳುಗುಟ್ಟಿದನು. ಪಡೆ ನಡೆಯುಲು ಅಡ್ಡವಾಗಿದ್ದ ವಜ್ರದ ಪಡಿಯನ್ನು ಚಕ್ರಿಯು ಈ ರೀತಿಯಲ್ಲಿ ಒಡೆದುಬಿಟ್ಟನು. ಬೆಟ್ಟವನ್ನೇ ಮುಚ್ಚಿಕೊಂಡಿರುವ ಕವಾಟಬಂಧವು ಒಂದೇ ಪೆಟ್ಟಿನಲ್ಲಿ ಇಬ್ಭಾಗವಾಯಿತು. ಬರಸಿಡಿಲು ಎರಗಿದರೆ ಹಾಸುಗಲ್ಲು ಬಿರಿಯುವಂತೆ ಸೀಳಾಯಿತು. ಮೊರೆಯಿಡುವಂತೆ ಘಿರ್ರೆಂದು ಘೀಳಿಡುತ್ತ ಆ ಕವಾಟವು ತೆರೆಯಿತು.......ತೂಬನ್ನು ತೆರೆದರೆ ನೀರು ನೆಗೆಯುವಂತೆ ಗುಹೆಯಲ್ಲಿ ತುಂಬಿದ್ದ ಬೇಕಿ ಭೂಪತಿಯ ಬಳಿಗೆ ನಾಲಗೆ ನೀಡಿತು. ಪ್ರಳಯಕಾಲದ ಅಗ್ನಿಯಂತೆ ಗುಹಾಗ್ನಿಯು ಉರಿಯತೊಡಗಿತು........"

ಅನುವಾದ ಸರಳವಾದರೂ ಭರತೇಶನ ಸಾಹಸದ ಜತೆಯಲ್ಲಿ ಅದ್ಭುತರಸ ವೃತ್ತವಾಗಿದೆ.

ವಿಜಯಾರ್ಧದೇವ ಶರಣಾಗತನಾಗಿ ಕಾಣಿಕೆಕೊಟ್ಟು ಅಡ್ಡಬೀಳುವನು ಭರತೇಶನಿಗೆ. ತರುವಾಯ ಚಕ್ರಿಯು ಖೇಚರಿ-ಭೂಚರಿಯರೊಡನೆ ವಿವಾಹ ಮುಗಿಸಿ ಮುಂದುವರಿಯುವಾಗ ಮೈದುನ ವಿನಮಿಯು ಭರತೇಶನನ್ನು ಕಾಣಲು ಬರುವನು. ನಮಿಯ ಪ್ರತಿಷ್ಠೆಯ ಬಗ್ಗೆ ಭರತೇಶ ಕಠಿಣವಾಗಿ ವ್ಯಂಗ್ಯವಾಗಿ ಮಾತನಾಡುವನು. ಇನ್ನೊಂದೆಡೆ ಅರಸನೊಬ್ಬ ಕಪ್ಪಕಾಣಿಕೆ ನೀಡಲು ಒಪ್ಪದೇ ಅಪಾರ ಸೇನೆಗೆ ದೈವಗಳ ಮೂಲಕ ನೋವುಂಟು ಮಾಡಿದಾಗ ಭರತೇಶ ಅವನ ಮೇಲೆ ಕೋಪಗೊಳ್ಳುತ್ತಾನೆ. ಸಮಗ್ರ ಬೃಹತ್ ಕಾವ್ಯದಲ್ಲಿ ಈ ಎರಡು ಸನ್ನಿವೇಶಗಳನ್ನು ಬಿಟ್ಟರೆ ಭರತೇಶ ಎಂದೂ ಯಾರ ಮೇಲೂ ಕೋಪಗೊಂಡಿಲ್ಲ. ಅಂಥ ಉದಾರ ಉದಾತ್ತ ಪಾತ್ರ ಭರತೇಶನದು. ಅನುವಾದದಲ್ಲೂ ಭರತೇಶನ ಈ ಗುಣಗಳು ಹಾಗೆಯೇ ಪಡಿ ಮೂಡಿವೆ. ಎಲ್ಲೂ ಅಪಚಾರವಾಗಿಲ್ಲ.

ಸಿಂಧೂದೇವಿ-ಗಂಗಾದೇವಿಯರು ದಿಗ್ವಿಜಯ ಕಾಲದಲ್ಲಿ ಭರತೇಶನಿಗೆ ದೊರೆತ ಅಪೂರ್ವ ಸೋದರಿಯರು. ಸಂದರ್ಭೋಚಿತವಾಗಿ ಭರತೇಶನ ಸಂಸಾರದಲ್ಲಿ ತಮ್ಮ ಪಾತ್ರವನ್ನು ಮೆರೆದವರು. ಸುಭದ್ರಾದೇವಿಯರೊಡನೆ ಸಿಂಧೂದೇವಿ-ಗಂಗಾದೇವಿಯರ ಸಂಭಾಷಣೆ ಓದಿಯೇ ಸವಿಯಬೇಕು.

ಹೆಣ್ಣನ್ನು ಕೊಂಡು ಹೋಗಿ ಮದುವೆ ಮಾಡಿಸುವ ಸಂಪ್ರದಾಯ ರಾಜರದಲ್ಲ ಎಂದು ನಮಿಯು ಬಾಂಧವರಿಗೆ ಹೇಳುವ ರೀತಿ ಹೇಗೆ :

ಕೊಡಬಾರದೆಂದೆನೆ ನಾನಾತನೆನ್ನೂರ್ಗೆ। ನಡೆದು ಬಂದರೆ ಕೊಡಬಹುದು
ಕುಡಿಯರಂದದಿ ಹೆಣ್ಣ ಕೊಂಡೊಯ್ದು ಕೊಡುವುದು। ನಡೆಯೆ
ರಾಜರಿಗೆಂದನವನು

ಅನುವಾದ ಹೀಗಿದೆ : "ಕೊಡಬಾರದೆಂದು ನಾನು ಹೇಳಿದೆನೆ? ನನ್ನ ಊರಿಗೆ ಅವನು ನಡೆದುಕೊಂಡು ಬಂದರೆ ಕೊಡಬಹುದು. ಕುಡಿಯರ ಹಾಗೆ ಹೆಣ್ಣನ್ನು ಕೊಂಡು ಹೋಗಿ ಕೊಡುವುದು ರಾಜರಿಗೆ ನಡತೆಯೇ? ಅವನಿಗೆ ಸಿರಿ ಹೆಚ್ಚಿದೆ; ಅದು ನಿಜ. ಆದರೆ ರಾಜವಂಶದಲ್ಲಿ ನಾನು ಅವನಿಗೆ ಸರಿಯಲ್ಲವೇ? ನೀವೇ ಹೇಳಿರಿ. ಅವನೇ ಇಲ್ಲಿಗೆ ಬರಲಿ. ನೀವೆಲ್ಲ ಮೆಚ್ಚುವಂತೆ ತಂಗಿಯನ್ನು ಧಾರೆಯೆರೆದು ಕೊಡುವೆನು".

ರೂಢಿಯಲ್ಲಿದ್ದ ಗಾದೆಯ ಮಾತುಗಳನ್ನು, ದಕ್ಷಿಣ ಕನ್ನಡ ಜಿಲ್ಲೆಯ ಬಳಕೆಯ ನುಡಿಗಳನ್ನು ರತ್ನಾಕರ ತನ್ನ ಕಾವ್ಯದಲ್ಲಿ ಬಳಸಿದ್ದಾನೆ. ಅನುವಾದದಲ್ಲೂ ಅವು ಬಂದಿವೆ.

ಸಿಂಧೂದೇವಿಯ ಆಶೀರ್ವಾದ ಪಡೆದು ಗಂಗಾಕೂಟಕ್ಕೆ ಬಂದು ತನ್ನ ಅಂಕ ಮಾಲೆ ಬರೆಸಲು ಭರತೇಶ ವೃಷಭಾದ್ರಿಗೆ ಬರುತ್ತಾನೆ.

ಕಾಲಕಾಲದೊಳಾದ ಚಕ್ರವರ್ತಿಗಳಂಕ। ಮಾಲೆಯ ಬರೆಸುವರಲ್ಲಿ
ಶೈಲವೆಲ್ಲವು ಲಿಪಿ ತುಂಬಿರೆ ನೋಡಿ ನೃ। ಪಾಲನ ಗರ್ವ ಸೋರಿದುದು
ಎನಿಬರಾಳಿದರೊ ಯಿಾ ಗಿರಿಯಲ್ಲಿ ಬೆರಳಿಡು। ವನಿತಿಲ್ಲ ಬರೆಯುದ ತಾಣಾ
ಜಿನಜಿನ ಭೂತುಳೆ ನನ್ನದೆಂದುಬ್ಬುವ। ಮನುಜನೆ ಮರುಳೆಂದು ನೆನದಾ
ಹಲಬರು ವಿಟರೊಡನಾಡಿ ಮತ್ತವರುಗು। ರ್ಗಲೆದಂತಹತಿಗಳೆ ತಾಳ್ದ
ಬೆಲೆವೆಣ್ಣಿನಂಗವಂತೆಸೆವುದೀ ಗಿರಿಯೆಂದು। ಸತಿ ವಿದೂಷಕ ನಗಿಸಿದನು.

"ಕಾಲಕಾಲದಲ್ಲಾಳಿದ ಚಕ್ರವರ್ತಿಗಳು ಅಲ್ಲಿ ತಮ್ಮ ಅಂಕಮಾಲೆಯನ್ನು ಬರೆಸು ವರು. ಆ ಶೈಲವೆಲ್ಲವು ಇಂಥ ಲಿಪಿಗಳಿಂದ ತುಂಬಿರುವುದನ್ನು ನೋಡಿ ಆ ಭರತರಾಜೇಂದ್ರನ ಗರ್ವವೆಲ್ಲ ಸೋರಿಹೋಯಿತು. ಎಷ್ಟು ಮಂದಿ ಆಳಿದರೋ ? ಈ ಗಿರಿಯಲ್ಲಿ ಬರೆಯುವ ಸ್ಥಳ ಬೆರಳಿಡುವಷ್ಟೂ ಇಲ್ಲ. ಜಿನ! ಜಿನ! ಭೂಮಿ ಯೆಲ್ಲ ತನ್ನದು ಎಂದು ಉಬ್ಬುವ ಮನುಷ್ಯನು ಮರುಳನೇ ಸರಿ! ಎಂದು ಭರತೇಶ ತನ್ನೊಳಗೆ ಯೋಚನಾಪರನಾದನು. ಆಗ ವಿದೂಷಕನು ತನ್ನ ತಿಳಿವಿನ ಹೋಲಿಕೆ ಗಳನ್ನಿತ್ತು ಆ ಗಿರಿಯೆಂದರೆ ಹಲವರೊಂದಿಗೆ ಬಾಳಿದ ಗಣಿಕೆಯೆಂದು ತಿಳಿಸಿ ರಾಜೇಂದ್ರ ನನ್ನು ನಗಿಸಲು ಯತ್ನಿಸಿದನು."

ಸಾಂಗತ್ಯದ ಸರಳತೆ ಲಾಲಿತ್ಯ ಅನುವಾದದಲ್ಲೂ ಕಾಣಬಹುದು.

ತರುವಾಯ ಭರತೇಶ ತೀರ್ಥೇಶನನ್ನು ಕಂಡು ಆನಂದಿಸಿ ಮಾತೆಯ ಆಶೀರ್ವಾದ ಪಡೆದು ದಿಗ್ವಿಜಯಕ್ಕೆ ಮಂಗಲ ಹಾಡಬೇಕೆನ್ನುವಾಗ ಬಾಹುಬಲಿಯ ಧೂರ್ತತೆಯನ್ನು ಎದುರಿಸುವ ಪ್ರಸಂಗ ಕೂಡಿ ಬಂತು.

ಅದೇ ಯೋಚನೆಯಲ್ಲಿ ಭರತೇಶನಿದ್ದಾಗ ಭಾವಮೈದುನರಾದ ಖೇಚರರಿಬ್ಬರು ಭರತೇಶನ ಸಹಜ ಶಕ್ತಿಯ ಬಗ್ಗೆ ಕೊಂಕು ಮಾತನಾಡಿದುದು ಅವನ ಕಿವಿಗೆ ಕೇಳಿಸಿತು. ತನ್ನ ಶಕ್ತಿಯ ಪ್ರದರ್ಶನ ಮಾಡಬೇಕೆಂದು ಮನದಲ್ಲೇ ಭಾವಿಸುವನು ಭರತೇಶ. ಕಥಾಪ್ರಸಂಗ ಅನುವಾದದಲ್ಲಿ ಹೀಗಿದೆ– "ಎಂದಿನಂತೆ ಭರತೇಶ ಓಲಗಗೊಟ್ಟಾಗ ಮುಖ ಕಿರಿದಾಗಿತ್ತು. ಮಂತ್ರಿ ವಿಚಾರಿಸಿದಾಗ 'ಕಿರುಬೆರಳ ನರ ಬಿಗಿದಿದೆ' ಎಂದು ಹೇಳಿದನು. ಕುಮಾರರೆಲ್ಲರು ಬಂದು ತಂದೆಯನ್ನು ನೋಡಿದರು. ಬೆರಳನ್ನು ಮುಟ್ಟಿದರು. 'ಗುರು ಹಂಸನಾಥ' ಎಂದು ಭರತೇಶ ನೋವಿನಿಂದ ಮುಲುಗುತ್ತಿದ್ದ. ರಾಜವೈದ್ಯರು ಬಂದರು. ಮಂತ್ರವಾದಿಗಳು, ಯಂತ್ರಸಿದ್ಧರು, ಜಟ್ಟಿಗಳು, ಬ್ರಾಹ್ಮಣರು ಎಲ್ಲರೂ ಬಂದರು. ಪ್ರಯೋಜನವಾಗಲಿಲ್ಲ. ಸಕಲ ಸೇನೆಯೂ ಬಂದಿತು. ಬೆರಳ ನೆಟಿಗೆ ತೆಗೆಯಿರೆಂದು ಜಟ್ಟಿಗಳಿಗೆ ಭರತೇಶ ಕೈ ನೀಡುವನು. ಅವರು ಬೆರಳೆಳೆದಾಗ ಬೆರಳು ನೆಟ್ಟಗಾಗಲಿಲ್ಲ. ಭರತೇಶ ಕೈಯೆತ್ತಿದಾಗ ಅವರು ಬಾವಲಿಯಂತೆ ತೂಗಿದರು. ಆಗ ಭರತೇಶನೇ ಒಂದು ತಂತ್ರ ಸೂಚಿಸಿದನು. ಬಂಗಾರದ ಸರಪಣಿ ಬೆರಳಿಗೆ ಬಿಗಿದು ಎಳೆಯಿರಿ – ಎಂದನು. ಅದರಿಂದಲೂ ನೆಟ್ಟಗಾಗಲಿಲ್ಲ ಬೆರಳು. ಚಿನ್ನದ ಸರಪಣಿಯನ್ನು ಕಟಕದವರೆಲ್ಲರೂ ಹಿಡಿಯುವಂತೆ ಮಾಡಲು ವಿಶ್ವಕರ್ಮನಿಗೆ ಹೇಳಿದನು. ಕಟಕದವರೆಲ್ಲರೂ ಸೇರಿ ಎಳೆಯುವಷ್ಟು ಉದ್ದದ ಸರಪಣಿಯನ್ನು ಜೋಡಿಸಿದರು. ಕುವರರು, ದೊರೆಗಳು, ಸಖರು ಎಲ್ಲರೂ ಸೇರಿ ಎಳೆದರು. ಅನಂತರ ಕಾಲುದಳವೂ ಸೇರಿಕೊಂಡಿತು. ಬಳಿಕ ಆನೆಕುದುರೆಗಳ ದಳವನ್ನೂ ಜೋಡಿಸಿದರು. ಯಾರು ಎಳೆದರು ಚಕ್ರಿಯು ಸಿಂಹಾಸನದ ಮೇಲೆ ಕುಳಿತಂತೇ ಇದ್ದನು. ಕಿರುಬೆರಳು ನೆಟ್ಟಗಾಗದೇ ಹಾಗೇ ಇತ್ತು. ರಾಜಕಟಕವು ಹೊನ್ನ ಸರಪಣಿ ಹಿಡಿದೆಳೆಯುತ್ತಿರುವಾಗ ಚಕ್ರಿಯೊಮ್ಮೆ ಬೆರಳನ್ನು ಸಡಿಲು ಬಿಟ್ಟನು. ಎಲ್ಲರೂ ಅವನಿಗೆ ಎರಗುವಂತೆ ಧರೆಗೆ ಬಿದ್ದರು. ಸಣ್ಣ ಬೆರಳ ಶಕ್ತಿ ಇಷ್ಟಾದರೆ ಹೆಬ್ಬೆಟ್ಟಿನ ಶಕ್ತಿ ಎಷ್ಟೆಂದು ಅವರು ಅಚ್ಚರಿಗೊಂಡರು. ಭರತೇಶನು ನಸು ನಗುತ್ತ ತನ್ನ ಬೆರಳನ್ನು ತಾನೇ ನೆಟ್ಟಗೆ ಮಾಡಿಕೊಂಡನು."

ಭರತೇಶನ ಶಕ್ತಿ ಎಷ್ಟೆಂಬುದನ್ನು ಸರಳ ಸುಂದರವಾಗಿ ಸಹಜವಾಗಿ ವರ್ಣಿಸಿದ್ದಾನೆ. ಅನುವಾದವೂ ಅಷ್ಟೇ ಸರಳ, ಸುಂದರವಾಗಿ ಬಂದಿರುವುದು, ಅನುವಾದವಲ್ಲ ಮೂಲತಃ ಕೃತಿಯೊಂದನ್ನು ಓದುತ್ತಿದ್ದೇವೆ ಎಂದು ಅನ್ನಿಸುವಷ್ಟು ಸಲೀಸಾಗಿ ಓದಿಸಿಕೊಂಡು ಹೋಗುವುದು ಇಲ್ಲಿ ಮುಖ್ಯವಾಗಿ ಮೆಚ್ಚತಕ್ಕ ಅಂಶ.

ಕಚ್ಛನೃಪಾಲನ ಕುವರಿ ಸುಭದ್ರೆಯ ಸಖಿ ಮಧುವಾಣಿ ಮದುವೆ ನಂಟಿನ ಮಾತನ್ನು ಭರತೇಶನೊಡನೆ ಆಡುತ್ತ ತನ್ನ ಆಪ್ತ ಒಡತಿ ಸಖಿಯನ್ನು ಹೀಗೆ

ವರ್ಣಿಸುವಳು–

ಒಂದು ರತ್ನವನೆರಳ್ಮಾಡಿ ಸ್ತ್ರೀಪುರುಷರೂ। ಪೆಂದು ನಿರ್ಮಿಸಲವಕಾತ್ಮ
ಬಂದಂತೆ ನಿಮ್ಮಿಬ್ಬರಂದವೊಪ್ಪಿರಲಪ । ರಿಂದ ಮೆಚ್ಚಾಯ್ತೆಂದಳೆನಗೆ.

....

ಕೆಂಬಲ್ಲು ಚೆಂದುಟಿ ನಗೆಮೊಗ ನಿಡುಗಣ್ಣ। ಳಿಂಬ ನಿಬ್ಬರೊಳು ನೋಡಿದೆನು
ಅಂಬುಜಕಂಬುಜ ಬೆರೆಸೆ ಮತ್ತೊಂದರ। ಹಂಬಲಿಹುದೇ ನಿಮಗಿನ್ನು
ಅಡಿಮುಡ ತೊಡೆ ಕಟಿ ನಡು ಬಸುರೆದೆ ತೋಳು । ಮುಡಿ ಮೊಗ ಕೊರಳೆ ನೋಳ್ಪಾಗ
ಕಡೆದು ಸೇರಿ ನಿಮ್ಮಿಬ್ಬರಿರವಿದೆ । ಪೊಡವಿಗಚ್ಚರಿಯೆಂದಳವಳು–

"ಒಂದು ರತ್ನವನ್ನು ಎರಡು ಮಾಡಿ ಸ್ತ್ರೀಪುರುಷ ರೂಪ ಎಂದು ನಿರ್ಮಿಸಲು ಅವಕ್ಕೆ ಆತ್ಮ ಬಂದಂತೆ. ನಿಮ್ಮಿಬ್ಬರ ಅಂದ ಒಪ್ಪಿರುವುದರಿಂದ ನನಗೆ ಮೆಚ್ಚಾಯಿತು. ಮತ್ತಾರೂ ಇಲ್ಲದೇ ಏಕಾಂತದಲ್ಲಿರುವ ನನ್ನ ಸಖಿಯ ಹೃದಯ ತಮಗೆ ಮಾರು ಹೋಗಿದೆ. ಆಕೆಯ ಅಂಗಗಳು ಪುಣ್ಯ ನಿರ್ಮಿತವಲ್ಲವೇ ? ಅದೂ ಒಂದು ಸೌಭಾಗ್ಯವೇ ? ......ರತ್ನದ ಬೊಂಬೆಯಂತಿರುವ ಈ ಮೈಯ್ಯನ್ನು ಹೊನ್ನ ಬಳ್ಳಿಯಂತಿರುವ ತೋಳುಗಳು ಸುತ್ತಿಕೊಂಡರೆ ಎಷ್ಟು ಸೊಗಸು ! ಕೆಂಪು ಹಲ್ಲು, ಕೆಂಪು ತುಟಿ, ನಗೆಮೊಗ, ಉದ್ದವಾದ ಕಣ್ಣುಗಳು–ಇವುಗಳ ಹೊಂದಿಕೆಯನ್ನು ನಿಮ್ಮಿಬ್ಬರಲ್ಲೂ ಕಂಡೆನು. ತಾವರೆಗೆ ತಾವರೆಯನ್ನು ಬೆರೆಸಬೇಕಲ್ಲದೆ ಬೇರೊಂದರ ಹಂಬಲವೇ ? ನಿಮ್ಮಿಬ್ಬರನ್ನು ನೋಡಿದರೆ ಅಡಿಯಾಗಲೀ ಮುಡಿಯಾಗಲೀ ಮೊಗವಾಗಲಿ ಕೊರಳಾಗಲಿ ಕಡೆದು ಸೇರಿಸಿದಂತೆ ! ಇದು ಆಶ್ಚರ್ಯವಲ್ಲವೇ ? ನೀನಾದರೆ ಹಲವರು ಪೂಜಿಸುತ್ತಿರುವ ದೇಹಾರದಂತಿರುವೆ. ಅವಳಾದರೋ ಯಾರ ಪೂಜೆಗೂ ದೊರೆಯದ ದೇವತೆಯಂತಿರುವಳು......"

ರತ್ನಾಕರ ಅಶ್ಲೀಲವೆನ್ನಿಸದ ರೀತಿಯಲ್ಲಿ ಹೆಣ್ಣಿನ ವರ್ಣನೆ ಮಾಡಿದ್ದಾನೆ. ಇಂಥ ವರ್ಣನೆ ಮನಸ್ಸಿಗೆ ಆಹ್ಲಾದ ಆನಂದ. ಅನುವಾದವೂ ಅಷ್ಟೆ.

ರತ್ನಾಕರನ ಈ ಕಾವ್ಯದಲ್ಲಿ ಅಣ್ಣ-ತಮ್ಮಂದಿರ ನಡುವೆ ಧರ್ಮಯುದ್ಧವಾಗಲೀ ಮಹಾತ್ವಕಾಂಕ್ಷೆಯ ಪ್ರತಿಷ್ಠೆಯ ಚಕ್ರಪ್ರಯೋಗವಾಗಲೀ ಈ ದಿಗ್ವಿಜಯದಲ್ಲಿ ಕಾಣಬರುವುದಿಲ್ಲ. ಬಾಹುಬಲಿಯ ಅವಿನಯ, ಧೂರ್ತತೆ. ಅಧಿಕ ಪ್ರಸಂಗಗಳು ಭರತೇಶನನ್ನು ಕೆರಳಿಸುವುದಿಲ್ಲ, ನರಳುವಂತೆ ಮಾಡುತ್ತದೆ. 'ಯಾಕಾದರೂ ಈ ಚಕ್ರರತ್ನ ಶಸ್ತ್ರಾಲಯದಲ್ಲಿ ಉದಯಿಸಿತೊ ? ಸುಡುಸುಡು ಈ ರಾಜ್ಯವ !' ಎಂದು ನಿಟ್ಟುಸಿರು ಬಿಡುತ್ತಾನೆ.

ಬಾಹುಬಲಿಯು ಒಡವೆ ಭೂಷಣಗಳನ್ನು ತೆಗೆದಿರಿಸಿ ಧರ್ಮಯುದ್ಧಕ್ಕೆ ಸಿದ್ಧನಾದಾಗ ಅವನಂಗದ ಚೆಲುವನ್ನು ಕಂಡು ಪಡೆಯು ನೋಡಿ, ನೋಡಿ ಮೆಚ್ಚಿ ಬೆರಗಾಯಿತು. ಭರತೇಶನೂ ಸರಳವಾಗಿಯೇ ತಮ್ಮನ ಬಳಿಗೆ ಬರುತ್ತಾನೆ. ಬುದ್ಧಿ

ಮಾತು ಹೇಳುತ್ತಾನೆ. ವಾತ್ಸಲ್ಯ ರಸದ ಕೋಡಿ ಹರಿದಿದೆ ಇಲ್ಲಿ ಅನುವಾದವನ್ನು ನೋಡಿ—

"ಪರನೊಬ್ಬನು ನನಗೆ ಇದಿರಾಗುತ್ತಿದ್ದರೆ ಆಗಲೇ ಮೇಲೆ ಬಿದ್ದು ಮೆಟ್ಟಿ ಅಟ್ಟುತ್ತಿದ್ದೆನು. ಸೋದರರ ಕಾಳಗಕ್ಕೆ ಧರೆ ಮೆಚ್ಚದಣ್ಣ. ಯುದ್ಧಕ್ಕೆ ಮೊದಲು ಯುದ್ಧ ನೀತಿಯನ್ನು ಹೇಳಬೇಕು. ನಾನು ನಿನ್ನಿಂತ ಹಿರಿಯನಾದುದರಿಂದ ಪಾಳೆಯಕ್ಕೆ ಬರಲು ಹೇಳಿದೆ. ನೀನೇ ನನಗೆ ಅಗ್ರಜನಾಗುತ್ತಿದ್ದರೆ ನೀನಿರುವಲ್ಲಿಗೆ ನಾನೇ ಬರುತ್ತಿದ್ದೆ. ತಡೆದಿರುತ್ತಿದ್ದಿಲ್ಲ. ಹಿರಿಯನಲ್ಲಿಗೆ ಕಿರಿಯನು ಬಂದು ಕಾಣುವುದು ಧರಣಿಯಲ್ಲಿರುವುದಲ್ಲವೆ? ಇದರಲ್ಲಿ ಪರಿಭವ ಏನುಂಟು ತಮ್ಮ? ಯೋಚಿಸಿ ನೋಡಣ್ಣ. ನನ್ನನ್ನು ಗೆದ್ದರೆ ನಿನಗೆ ಕೀರ್ತಿಯೇ ಹೇಳು. ನಿನ್ನನ್ನು ನಾನು ಗೆದ್ದರೆ ನನಗೆ ಯಶಸ್ಸೇ? ಇದನ್ನು ನೋಡಿದ ಮೂರು ಲೋಕದಲ್ಲಿನ ಉತ್ತಮರು ಛೀ! ಎನ್ನಲಾರರೆ? ಯೋಚಿಸಿ ನೋಡು........ಗೆಲುವು ಎಂಬುದು ಏನೂ ಉಪಚಾರವಲ್ಲವಣ್ಣ. ದೃಷ್ಟಿವಿಜಯ ಹೇಗಾದೀತು? ಹೇಳು ನೀನು ನನಗಿಂತಲೂ ಇಪ್ಪತ್ತೈದು ಬಿಲ್ಲುಗಳಷ್ಟು ಹೆಚ್ಚು ಎತ್ತರವಿರುವೆ. ನೀನು ನನ್ನನ್ನು ದೃಷ್ಟಿಸಬಹುದು. ನಾನು ನಿನ್ನನ್ನು ನೋಡುವಾಗ ಊರ್ಧ್ವ ದೃಷ್ಟಿಯಿಂದಾಗಿ ನೋವಿನಿಂದ ಎದೆ ಮುಚ್ಚಿ ಹೋದೀತು. ಜಲಯುದ್ಧದಲ್ಲಿ ನಾನು ನೀರನ್ನು ಚೆಲ್ಲಿದರೆ ನಿನ್ನೆದೆ ಮುಟ್ಟಿ ಕೆಳಗಿಳಿಯುವುದು, ನೀನಾದರೆ ನನ್ನನ್ನು ಮುಳುಗಿಸಿಬಿಡಬಹುದು. ಅದರಿಂದ ನನಗಾಗ ಚಳಿಯಾಗಿ ಅಡ್ಡಮೊಗವಾಗಬಹುದು. ಮಲ್ಲಯುದ್ಧವಾದರೂ ಹೇಗಾದೀತು? ಅಂದು ಅಯ್ಯನು ಭುಜಬಲಿಯೆಂದು ನಿನಗಲ್ಲವೇ ಹೆಸರಿಟ್ಟುದು? ಅಯ್ಯನ ವಾಕ್ಯ ಸುಳ್ಳಾಗದೆಂದು ಬಲ್ಲೆನು, ಭುಜಬಲದಲ್ಲಿ ನೀನೇ ನನ್ನನ್ನೆತ್ತುವೆ. ತಮ್ಮ ಕೇಳು, ತಪ್ಪು ನನ್ನದು. ತೇಜ ನಿನಗೆ ಎಂದ ಮೇಲೂ ಕೋಪವೇಕೆ?

ತಮ್ಮನಿಗೆ ಅಣ್ಣನು ಸೋತೆನೆಂದು ಹೇಳುವಾಗ ದಶದಿಕ್ಕುಗಳು ಕುಂದಿ ಹೋದವು. ಗಾಳಿಯಿಲ್ಲದೆ ಹೊಗೆ ತುಂಬಿತು. ಅದನ್ನು ನೋಡಿದ ಸೇನೆ ಹೆದರಿತು. ಬಾಹುಬಲಿ ಮನದಲ್ಲೇ ನೊಂದುಕೊಂಡನು. ಭರತ ತನ್ನ ಮಾತನ್ನು ಮುಂದುವರಿಸಿದನು."

ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ। ಸ್ತ್ರಾಲಯದೊಳು ತಾನೆ ಹುಟ್ಟಿ।
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ । ಆಲಿಗೆ ನೋವಾಗುವಂತೆ.
ನಿನಗೆ ನಾನಣ್ಣನೆಂಬಕ್ಕರವಿಲ್ಲ ನೀ । ನನುಜನೆಂಬಕ್ಕರುಂಟಪ್ಪಾ
ನನೆವಿಲ್ಲ ನಿನ್ನ ಭಾಗ್ಯವ ಕಣ್ಣು ತುಂಬ ನೊ । ಳ್ಪನು ರಾಜಪದವಿಗಿಂತೊಪ್ಪು
ಕೌಶಲಿಯೊಳು ನೀನು ಸುಖಬಾಳು ನನಗೊಂದು । ದೇಶವ ಕೊಟ್ಟು ಬೇರಿರಿಸು
ಕ್ಲೇಶದ ಮಾತಲ್ಲ ಸಂತೋಷ ಪುರು ಪರ । ಮೇಶನ ಕೆಂಬಜ್ಜೆಯಾಣೆ.

"ಕೇಳಣ್ಣ, ನಾನೇನೂ ಈ ಚಕ್ರವನ್ನು ಬಯಸಲಿಲ್ಲ. ಶಸ್ತ್ರಾಲಯದಲ್ಲಿ ತಾನೇ ಹುಟ್ಟಿ ನನ್ನನ್ನೇಳಿಸಿ ನಾಡೆಲ್ಲ ಸುತ್ತಿಸಿತು. ನಿಮ್ಮ ಕಣ್ಣಿಗೆ ನೋವಾಗುವಂತೆ

ಮಾಡಿತು. ನನಗಿದರ ಮೇಲೆ ಆಸೆಯಿಲ್ಲ. ನೀನೇ ಒಪ್ಪಿಕೊ. ನಿನಗೆ ನಾನು ಅಣ್ಣನೆಂಬ ಪ್ರೀತಿಯಿಲ್ಲ. ನೀನು ತಮ್ಮ ಎಂಬ ಅಕ್ಕರೆ ನನಗೆ ಉಂಟಪ್ಪ! ಪುಷ್ಪ ಬಾಣ. ಕೋಸಲದಲ್ಲಿ ನೀನು ಸುಖವಾಗಿ ಬಾಳು. ನನಗೊಂದು ದೇಶವನ್ನು ಕೊಟ್ಟು ಬೇರೆಡೆಯಲ್ಲಿ ಇರಿಸು. ಇದು ಕ್ಲೇಶದ ಮಾತಲ್ಲ. ಪುರುದೇವರ ಅಡಿದಾವರೆಯಾಣೆ ಯಾಗಿ ಸಂತೋಷದಿಂದಲೇ ಹೇಳುವ ಮಾತು. ರಂಜನೆಗೆ ಹೇಳಿದ ಮಾತಲ್ಲ, ಇದನ್ನು ನಂಬು. ಇದಕ್ಕೆ ವಿರಂಜನ ಸಿದ್ಧನೆ ಸಾಕ್ಷಿ ವಿರಸವನ್ನು ಬಿಡು ಬಿಡು."

ಬಾಹುಬಲಿಯ ಗರ್ವ ಜಾರಿ, ಮನಸ್ಸು ಮೃದುವಾಯಿತು. ನಾಚಿಕೆಯಿಂದ ತಲೆತಗ್ಗಿಸಿ. ದೀಕ್ಷೆಗೆ ಹೋಗುವೆನೆಂದು ಭರತೇಶನೊಡನೆ ಹೇಳಿದಾಗ ಭರತೇಶ ನೊಂದು ಕೊಳ್ಳುವನು. ಬಾಹುಬಲಿಯು ದೀಕ್ಷೆಗೊಂಡು ಹೋದುದನ್ನು ಕೇಳಿದ ಅವನ ಪತ್ನಿ ಯರೂ ಅವನನ್ನು ಅನುಸರಿಸುವರು. ಭರತೇಶ ಪುರ ಪ್ರವೇಶ ಮಾಡುವಲ್ಲಿ 'ವಿಜಯದ ದಿನಗಳು' ಭಾಗ ಮುಗಿಯುತ್ತದೆ.

ಈ ಭಾಗದಲ್ಲಿ ಭರತೇಶನ ಸಾಹಸ-ಶೌರ್ಯ. ಶಕ್ತಿ ಪ್ರದರ್ಶನ, ಚಕ್ರೇಶ್ವರಿಯಾಗ ಲಿರುವ ಸುಭದ್ರೆಯೊಡನೆ ವಿವಾಹದ ಸಂಭ್ರಮ-ವೈಭವದ ವಿವಾಹ-ಪುತ್ರ ವಿವಾಹ, ಬಾಹುಬಲಿಯ ಅವಿನಯ, ಅವನ ಮನಃಕಷಾಯದ ಮುಸುಕಿನ ಅನಾವರಣ-ಬಾಹುಬಲಿಯ ನಿರ್ವೇಗ ಸಾಂಗತ್ಯದಲ್ಲಿ ಸುಲಲಿತವಾಗಿ, ಸುಭಗ ಮನೋಜ್ಞವಾಗಿ, ಸುಸಂಗತವಾಗಿ ಹರಿದು ಬಂದರೆ ಅನುವಾದದಲ್ಲೂ ಅದೇ ಲಾಲಿತ್ಯ, ಅದೇ ಸುಭಗ ಮನೋಜ್ಞತೆ, ಸುಸಂಗತತೆಯನ್ನು ನಾವು ಕಾಣುತ್ತೇವೆ.

ಜ

ಬಾಹುಬಲಿಯು ಘೋರ ತಪಸ್ಸನ್ನು ಗೈಯುತ್ತಿದ್ದರೂ ಆತ್ಮ ಸಿದ್ಧಿಯಾಗದೇ ಇರುವುದನ್ನು ಮನಗಂಡ ಭರತೇಶ ರಜತಾದ್ರಿಗೆ ಹೋಗಿ ತನ್ನ ಅಪ್ಪಾಜಿಯಿಂದ ಅದರ ಕಾರಣ ತಿಳಿದು, ಬಾಹುಬಲಿಯ ಮನಃಕಷಾಯ ಕಳೆದು ಆತನಿಗೆ ಆತ್ಮಸಿದ್ಧಿಯು ಲಭಿಸುವಂತೆ ಮಾಡುವನು. ಭರತೇಶನ ಮಾತೆ ಯಶಸ್ವತಿದೇವಿಯೂ ಅನಂತವೀರ್ಯ ಸ್ವಾಮಿಯಿಂದ ದೀಕ್ಷೆ ಪಡೆಯುವಳು. ಧರ್ಮಪ್ರಭಾವನೆಗಾಗಿ ರಜತಾದ್ರಿಯಲ್ಲಿ ನಿರ್ಮಿಸಿದ ಜಿನ ನಿವಾಸದ ಮುಖ್ಯವಸ್ತ್ರವನ್ನು ತೆಗೆಯಲು ಭರತೇಶ ತನ್ನ ಸಕಲ ಪರಿವಾರದೊಡನೆ ಸಂಭ್ರಮ-ವಿಜೃಂಭಣೆಗಳಿಂದ ಬಂದು ಮುಖವಸ್ತ್ರ ತೆಗೆದು ಮಹೋತ್ಸವ ಉಂಟುಮಾಡುವನು. ಭರತೇಶನ ನೂರು ಮಂದಿ ಪುತ್ರರು ವಿದ್ಯಾ ಗೋಷ್ಠಿಯಲ್ಲಿರುವಾಗ ಚಕ್ರಿಯ ಬಲಗೈಯಾಗಿದ್ದ ವೃಷಭೇಶನು ದೀಕ್ಷೆಪಡೆದು ದಿಗಂಬರನಾದ ವರ್ತಮಾನ ಕೇಳಿದ ನೂರು ಮಂದಿ ಪುತ್ರರೂ ಕೌಮಾರ್ಯದಲ್ಲೇ ವೈರಾಗ್ಯ ಹೊಂದಿ ಸಮವಸರಣಕ್ಕೆ ತೆರಳಿ ಆದಿ ಜಿನೇಶನಿಂದ ತತ್ತ್ವೋಪದೇಶ ಪಡೆದು ಮೋಕ್ಷಗಾಮಿಗಳಾಗಿ ದೀಕ್ಷೆ ಹೊಂದುವರು. ಇದನ್ನು ತಿಳಿದ ಭರತೇಶ ಚಿಂತೆಗೊಳ ಗಾಗುವನು. ಸಮವಸರಣಕ್ಕೆ ತೆರಳಿ ಅವರನ್ನು ಕಂಡು ಜಿನಪೂಜೆ ಮಾಡುವನು. ಮರುದಿನವೇ ಆದಿ ತೀರ್ಥಂಕರನು ಮುಕ್ತಿ ಹೊಂದುವನು. ಈ ಸಂಕಟವನ್ನು

ಮನಸದಲ್ಲಿ ಹೊತ್ತುಕೊಂಡು ಭರತೇಶ ರಾಜ್ಯ ಪರಿಪಾಲನೆ ಮಾಡುತ್ತಿರುವಾಗ ಕನ್ನಡಿಯಲ್ಲಿ ನರೆಗೂದಲನ್ನು ಕಂಡು ವೈರಾಗ್ಯ ಹೊಂದಿ ಅರ್ಕಕೀರ್ತಿಗೆ ಪಟ್ಟಗಟ್ಟಿ ತನಗೆ ತಾನೇ ಗುರುವಾಗಿ ದಿಗಂಬರನಾಗಿ, ಜಿನನಾಗಿ ಮುಕ್ತಿ ಪಡೆಯುವನು. ಅದನ್ನು ಕೇಳಿ ಅವನ ಮಕ್ಕಳು ಗೋಳಾಡುವರು. ಭರತೇಶನಿಲ್ಲದ ಲೋಕ ಲೋಕವೇ ? ಅರ್ಕಕೀರ್ತಿಯೂ ತಮ್ಮ ಆದಿರಾಜನೊಡನೆ ದೀಕ್ಷೆ ಪಡೆದು ಮೋಕ್ಷ ಹೊಂದುವನು. ಇದು 'ತಪಸ್ಸಿನ ದಿನಗಳು' ಭಾಗದಲ್ಲಿ ಬರುವ ಕಥೆ.

ಶೃಂಗಾರ ರಸವನ್ನು ಸುರಮ್ಯವಾಗಿ, ಸುಮಧುರವಾಗಿ ವರ್ಣಿಸುವ ರತ್ನಾಕರ ತತ್ವವನ್ನು ಆತ್ಮಕಲೆಯನ್ನು ಅಷ್ಟೇ ರಮ್ಯವಾಗಿ, ಮಧುರವಾಗಿ ವರ್ಣಿಸುತ್ತಾನೆ. ಸ್ವತಃ ತಾತ್ವಿಕನಾಗದೇ ಜ್ಞಾನಿಯಾಗದೇ ಸಿದ್ಧನಾಗದೇ ಆ ರೀತಿ ವರ್ಣಿಸಲು ಸಾಧ್ಯವಿಲ್ಲ. ಅನುಭಾವಿ ರತ್ನಾಕರನ ಮೂಲ ಕಾವ್ಯದ ತತ್ತ್ವಜ್ಞಾನಕ್ಕೆ, ಹಂಸಕಲೆಗೆ ಅಪಚಾರವಾಗದಂತೆ ಸಮ್ಯಕ್ ತತ್ತ್ವ ಅನುವಾದದಲ್ಲಿ ಯಥಾವತ್ತಾಗಿ ಬಂದಿದೆ.

ಬಾಹುಬಲಿ ಘೋರ ತಪಸ್ಸನ್ನು ಮಾಡಿದರೂ ಸಿದ್ಧಿ ದೊರೆಯದಿರುವ ಬಗ್ಗೆ ಭರತೇಶ ಆದಿ ಜಿನೇಶನನ್ನು ಪ್ರಶ್ನಿಸಿದಾಗ, ಆತನ ಉತ್ತರ ಹೀಗಿದೆ. "ಎಲೆ ಭವ್ಯಾ, ತಪಸ್ಸು ಘೋರವಾದರೆ ಸಾಲದು. ಒಳಗಿನ ಕಷಾಯಗಳು ಉಪಶಮನವಾಗಬೇಕು. ಚಪಲವಾದ ಚಿತ್ತವನ್ನು ಆತ್ಮಕಲೆಯಲ್ಲಿ ಕೂಡಿಸಬೇಕು. ಕ್ರೋಧ, ಮಾನ, ಮಾಯೆ ಮತ್ತು ಲೋಭಗಳ ಬೋಧದಿಂದ ಒಳಗೊಳಗೆ ನೊಂದುಕೊಳ್ಳುವರಿಗೆ ಮಹಾಬೋಧೆಯು ಹೇಗಾದೀತು ? ಸುಚಿತ್ತದಲ್ಲಿ ಆತ್ಮ ಸಮಾಧಿಯಲ್ಲಿ ನಿಲ್ಲಬೇಕು. ಹೊರಗಿನ ಸರ್ವವನ್ನೂ ಬಿಡಬಹುದು. ಆದರೆ ಚಿತ್ತದಲ್ಲಿದ್ದ ಕಷ್ಟನ್ನು ಮಾತ್ರ ಬಿಡುವುದು ಕಷ್ಟ. ವಸ್ತ್ರವನ್ನು ಬಿಟ್ಟ ಮಾತ್ರಕ್ಕೆ ತಪಸ್ವಿಯಾಗುವನೇ ? ಸರ್ಪವು ಪರೆ ಕಳಚಿದ ಮಾತ್ರಕ್ಕೆ ವಿಷ ಹೋಗುವುದೇ ? ಮನವನ್ನು ನಿರ್ಮಲ ಮಾಡಿದವನೇ ಸುಖಿಯು. ಉಮಿಯನ್ನು ತಳೆದಿರುವ ಅಕ್ಕಿಯನ್ನು ಥಳಿಸುವಂತೆ ಎಲ್ಲರೂ ವಿಷಯಗಳನ್ನು ಕಳೆದುಕೊಂಡು ಆತ್ಮನನ್ನು ನೋಡುವರು........

ಆ ಭುಜಬಲಿಯು ನಿನ್ನನ್ನು ಬೀಳ್ಕೊಂಡು ಬರುವಾಗ ಕ್ಷೋಭೆಯುಳ್ಳದ ಮಾತನ್ನು ಕೇಳಿದನು. ಭಿನ್ನ ಮಾನಸನಾದನು. ಪರ್ವತದ ಹಾಗೆ ನಿಂತರೇನು, ಒಳಗಿನ ಗರ್ವ ಹೋಗದವನು ? ಆ ಮುನಿಗೀಗ ನಿನ್ನ ಭೂಮಿಯನ್ನು ಮೆಟ್ಟಿರುವೆ ಎಂಬ ನೋವಿನಿಂದಾಗಿ 'ಹಂಸ' ತೋರುವುದಿಲ್ಲ. ಬದಲಿಗೆ ವ್ಯವಹಾರ ಧರ್ಮವೇ ತೋರುವುದು, ನಿಶ್ಚಯವಾದ ಧರ್ಮದ ಅವಲಂಬವು ಆತನಿಗೆ ತೋರದು. ಲವ ಮಾತ್ರವಾದರೂ ಕಷ್ಟ ಕಷಾಯವಿರುವವನಿಗೆ ಅದು ತೋರದಿರುವುದು ಸಹಜವಾಗಿದೆ......"

"ಚಿತ್ತವೆಂಬುದು ಗಾಳಿಯಂತೆ ಚಂಚಲವಾಗಿದೆ. ಅದು ಕಂಡ ಕಂಡ ಕಡೆಗೆ ಚಲಿಸುತ್ತಿರುವುದು. ಅದನ್ನು ತಂದು, ತತ್ತ್ವಗಳಲ್ಲಿ ಒತ್ತಿ ತಿರುಗಿಸಿ ಮತ್ತೆ ತನ್ನೊಳಗೆ ಸ್ಥಿರವಾಗಿ ಇಟ್ಟುಕೊಳ್ಳಬೇಕು. ಅದನ್ನು ಹರಿಯಲು ಬಿಟ್ಟರೆ ಅದು ಹೋಗುವುದು.

ಬೇಡವೆಂದರೆ ಹರಿದು ಹೋಗುವುದಿಲ್ಲ. ಅದು ಮನಸ್ಸಿಗೆ ಸಹಜವಾಗಿದೆ. ಹೀಗೆ ಹರಿಯುತ್ತಿರುವ ಚಿತ್ತವನ್ನು ತತ್ತ್ವಗಳಲ್ಲಿ ತಿರುಗಾಡಿಸಿ ಆಮೇಲೆ ಅದನ್ನು ಸ್ಥಿರವಾಗಿಡ ಬೇಕು. ಚಪಲವಾಗಿದ್ದ ಚಿತ್ತವನ್ನು ಕಟ್ಟುವವರೆಗೆ ತಪಸ್ಸು ಮಾಡಿದರೂ ಶಾಸ್ತ್ರ ಗಳನ್ನು ಓದಿದರೂ ಪ್ರಯೋಜನವಿಲ್ಲ. ಆದ್ದರಿಂದ ಯಾರು ಚಪಲವಾದ ಮನಸ್ಸನ್ನು ಕಟ್ಟಿ ತನ್ನೊಳಗಿಟ್ಟುಕೊಳ್ಳುತ್ತಾನೋ ಅವನೇ ತಪಸಿ; ಶಾಸ್ತ್ರಜ್ಞ......ಬಂಧಾಸ್ರವ ವುಂಟಾದಾಗ ದೇಹವು ಅಲುಗುವುದು. ಆದ್ದರಿಂದ ಕರ್ಮಗಳಿಗೆ ಮನಸ್ಸೇ ಮನೆ ಯಾಗಿದೆ."

ತತ್ತ್ವ ವಿಚಾರ ಅರ್ಥವಾಗುವ ಶೈಲಿಯಲ್ಲಿರುವುದರಿಂದ ಓದಿನ ಓಟಕ್ಕೆ ತಡೆಯಾಗುವುದಿಲ್ಲ.

ಭರತೇಶನ ಪರಿಪಾಲನೆಯಲ್ಲಿ ಸಕಲರೂ ಸುಖಿಗಳು. "ಕೊಲ್ಲಾಟ ಎಂಬುದು ಪಗಡೆಯಲ್ಲಿತ್ತಲ್ಲದೆ ಭರತೇಶನ ರಾಜ್ಯದಲ್ಲಿರಲಿಲ್ಲ. ನುಡಿ ತಪ್ಪು-ನಡೆ ತಪ್ಪು ವಿರಹಿ ಗಳಲ್ಲಿ ಮಾತ್ರ ಇತ್ತು. ದಂಡ ಹಿಡಿಯುವುದು ಮುದುಕರು ಮಾತ್ರವಾಗಿತ್ತು. ಮತ್ತಾವ ರೀತಿಯ ದಂಡವಿರಲಿಲ್ಲ. ಜಡತೆಯೆಂಬುದು ಸುರತಾಂತ್ಯದ ನಿದ್ದೆಯಲ್ಲಲ್ಲದೆ ಮಿಕ್ಕವರಲ್ಲಿರಲಿಲ್ಲ."

ಕೇವಲ ತತ್ತ್ವ ವಿಚಾರ 'ತಪಸ್ಸಿನ ದಿನಗಳು' ಭಾಗದಲ್ಲಿ ಬರುವುದಿಲ್ಲ. ತನ್ನ ಸಮನ್ವಯ ಸೂತ್ರವನ್ನು ರತ್ನಾಕರ ಮರೆತಿಲ್ಲ. ಯೋಗ-ಭೋಗ ಸಮನ್ವಯ ಈ ಭಾಗದಲ್ಲೂ ಇದೆ. ಅನುವಾದ ಹೀಗಿದೆ–

"ಭರತೇಶನು ಹೊತ್ತು ಹೊಲಬುಗಳನ್ನು ತಿಳಿದು ತೊಂಭತ್ತಾರು ಸಾವಿರ ಹೆಣ್ಣುಗಳೊಂದಿಗೆ ರತಿಕೇಳಿಯಲ್ಲಿದ್ದು ಅವರನ್ನು ತಣಿಸಿ, ತಾನೂ ತಣಿಯುತ್ತ ಸುಚಿತ್ತನಾಗಿದ್ದನು. ಖೇಚರ ಸತಿಯರು, ಮ್ಲೇಚ್ಛಸತಿಯರು, ಆರ್ಯಾಭೂಮಿಯ ಸತಿಯರೆಂದು ಮೂರು ರೀತಿಯವರು ಮೂವತ್ತೆರಡು ಸಾವಿರವಾದರೂ ರಾಣೀ ವಾಸದಲ್ಲಿ ಅವರೆಲ್ಲರೂ ಒಂದಾಗಿದ್ದರು....ಎಲ್ಲ ಅರಸಿಯರಲ್ಲೂ ಕೂಡಿದ ಅವನಿಗೆ ಮತ್ತೆ ಸುಭದ್ರಾದೇವಿಯೊಡನೆ ನೆರೆಯದಿದ್ದರೆ ತೃಪ್ತಿಯಿಲ್ಲ. ಎಲ್ಲ ರಾಣಿಯರಿಗೂ ಒಂದೊಂದು ಮಗುವಿದ್ದರೆ ಸುಭದ್ರಾದೇವಿಗೆ ಶಿಶುವಿಲ್ಲ. ಆದ್ದರಿಂದ ಆಕೆಯ ದೇಹವು ಕುಂದಿರಲಿಲ್ಲ. ಆಕೆಯಲ್ಲಿ ಅವನಿಗೆ ಮಹಾಸುಖವಾಗುತ್ತಿತ್ತು."

ಚಕ್ರೇಶ ಕೈವಲ್ಯ ಪಡೆದು ಮುಕ್ತಿ ಕಾಂತೆಯೊಡನೆ ರಮಿಸುವಾಗ ಶೃಂಗಾರ ಸಿದ್ಧನಾಗುವನು. ಶೃಂಗಾರ ರಸ ರತ್ನಾಕರ ತನ್ನ ಕಥಾನಾಯಕ ಮುಕ್ತಿಕಾಂತೆಯೊಡನೆ ಕೂಡುವುದನ್ನು ಸ್ವಲ್ಪ ಅತಿಯಾಯಿತೆನ್ನುವಂತೆ ವರ್ಣಿಸಿದ್ದಾನೆ :

ನಿರ್ವಾಣ ರತಿಯೊಳರ್ತಿಸಿದರು ಮನದಳ । ಲಾರ್ವನ್ನ ದಿವ್ಯ ಭೋಗಿಗಳು
ಪರಮ ಸಮ್ಯಕ್ತ್ವದ ಸಜ್ಜೆವನೆಯೊಳು ನಿ। ರ್ಗುರು ಲಘು ಗುಣದ ಮೇಲ್ಕಟ್ಟಿ
ಪರಿವೃತನಾಗಿ ನಿರ್ಬಾಧಿತ ಗುಣವೆಂಬ। ತೆರೆಯಿರ್ದುದೊಳ ಹೊಕ್ಕರವರು
ದರುಶನವೆಂಬ ದೀವಿಗೆ ಶಕ್ತಿ ಮಂಚಭಾ। ಸುರಸೂಕ್ಷ್ಮಗುಣ ತಲೆಗಿಂಬು
ಭರಿತಾವದಹನದ ತಾಸು ಸುಜ್ಞಾನ ಸೌಂ। ದರರೊಡಗೂಡಿದರಲ್ಲಿ

ಮೈ ಮೈಯೊಳಡಗುವಂದದೊಳಪ್ಪಿ ಸಕ್ಕರೆ। ಸಿಹಿ ಮಿಕ್ಕ ತುಟಿಯ ಚುಂಬಿತರು
ಕೈ ಮೈಯ ಕಳೆ ಚಳ ಚಳಚಳನಾಡೆ ರಮಿಸಿದ।ರೈ ಮರುಘು ಚಾಟುಮೋಹಿಗಳು.

ಅನುವಾದ ಹೀಗಿದೆ “ಆ ದಿವ್ಯ ಭೋಗಿಗಳು ತಮ್ಮ ಮನಸ್ಸಿನ ಆಲು ಆರುವವರೆಗೂ ನಿರ್ವಾಣ ರತಿಯಲ್ಲಿ ಸುಖಿಸಿದರು. ಪರಮ ಸಮ್ಯಕ್ತ್ವದ ಸಜ್ಜೆ ಮನೆಯಲ್ಲಿ ನಿರ್ಗುರು ಲಘುಗುಣದ ಮೇಲ್ಕಿಟ್ಟು ಆವರಿಸಿಕೊಂಡಿತ್ತು. ನಿರ್ಬಾಧಿತ ಗುಣವೆಂಬ ತೆರೆಯಿತ್ತು. ಅವರು ಅದರೊಳಗೆ ಹೋದರು. ಅಲ್ಲಿ ದರ್ಶನವೆಂಬ ದೀವಟಿಗೆ ಉರಿಯುತ್ತಿತ್ತು. ಶಕ್ತಿ ಮಂಚದಲ್ಲಿ ಹೊಳೆಯುತ್ತಿರುವ ಸೂಕ್ಷ್ಮಗುಣದ ತಲೆಗಿಂಬು ಇತ್ತು.......ಅಲ್ಲಿ ಸುಜ್ಞಾನ ಸೌಂದರರು ಒಡಗೂಡಿದರು. ಮೈಯಲ್ಲಿ ಮೈ ಅಡಗುವಂತೆ ಅಪ್ಪಿಕೊಂಡರು. ಸಕ್ಕರೆಯ ಸವಿಯನ್ನು ಮೀರಿಸುವ ತುಟಿಗಳ ಸವಿಯನ್ನು ಸವಿದರು......ತನು ಸೋಂಕಿದಾಗ ಮೂರು ಲೋಕವನ್ನು ತುಂಬಿ ತುಳುಕುವ ಮೋಹನ ರಸ ಹರಿಯಿತು. ಮನಸ್ಸಿನ ಭಾವವನ್ನು ಅರಿಯುವಾಗ ಅವಳ ಕೈವಲ್ಯ ದೃಗ್ಬೋಧವೇ ಬೇಕಲ್ಲದೇ ಉಳಿದ ಇಂದ್ರಿಯಗಳ ಸಮೂಹವು ಸಾಕಾಗುವು ದಿಲ್ಲ. ಸರಸ, ಸಲ್ಲಾಪ, ಚುಂಬನ, ತೆಕ್ಕೆ, ನಗೆನೋಟ, ತವಕ, ಮುದ್ದಾಟ, ಬೆರಗು, ಬಿನ್ನಾಣ, ಲಲ್ಲೆ–ಇವೆಲ್ಲವುಗಳಲ್ಲೂ ಮುಕ್ತಿಕಾಂತೆಯು ಶೃಂಗಾರ ಸಿದ್ಧನೊಡನೆ ಬೆರೆತು ಹೋಗಿದ್ದಳು.”

೬

ರತ್ನಾಕರನ ಕಾವ್ಯದಲ್ಲಿ ಬರುವ ಹಲವಾರು ದೃಶ್ಯಗಳಲ್ಲಿ ಸಂದರ್ಭೋಚಿತವಾಗಿ ಬರುವ ಸಂಭಾಷಣಾ ಶೈಲಿ ಶ್ರವ್ಯಕಾವ್ಯವನ್ನು ದೃಶ್ಯಕಾವ್ಯವಾಗಿ ಪರಿಣಮಿಸುವಂತೆ ಮಾಡಿದೆ. ಕುಸುಮಾಜಿ–ಭರತೇಶ, ಭರತೇಶ–ಮಕರಂದಾಜಿಯರ ಸಲ್ಲಾಪ, ಪದ್ಮಿನಿಯ ಕೋಪ, ಸುಭದ್ರಾ ವಿವಾಹ, ಬಾಹುಬಲಿಯ ಸಮರ ಸಿದ್ಧತೆ–ನಿರ್ವೇಗ, ಮೊದಲಾದ ಪ್ರಸಂಗಗಳು ಇವಕ್ಕೆ ಉದಾಹರಣೆ, ಅನುವಾದದ ಅಷ್ಟಷ್ಟೇ ಭಾಗವನ್ನು ತೆಗೆದುಕೊಂಡರೂ ರೂಪಕದಂತೆ ರಂಗದ ಮೇಲೆ ಅಭಿನಯಿಸುವಂತೆ ಮೂಲದ ಸಂಭಾಷಣೆಯ ಸೊಗಸು, ನಾಟಕೀಯಂತೆ ಪ್ರತಿಮಿಸಿರುವುದು ಮೆಚ್ಚತಕ್ಕ ಅಂಶ.

೭

‘ಭರತೇಶನ ದಿನಚರಿ’ ಮುನ್ನುಡಿಯಲ್ಲಿ ದಿ। ಮಿರ್ಜಿ ಅಣ್ಣಾರಾಯರು ಅನುವಾದದ ಬಗ್ಗೆ ಉತ್ತಮ ಅಭಿಪ್ರಾಯ ನೀಡಿದ್ದಾರೆ. ಇದೇ ಪುಸ್ತಕ ವಿಮರ್ಶೆ ಮಾಡುತ್ತ ‘ಉದಯವಾಣಿ’ಯಲ್ಲಿ ಶ್ರೀ ರಾಮಾನುಜರು (ಬನ್ನಂಜೆ ಗೋವಿಂದ ಚಾರ್ಯ) ಹೀಗೆ ಬರೆದಿದ್ದಾರೆ—“ರತ್ನಾಕರ ವರ್ಣಿಯ ‘ಭರತೇಶ ವೈಭವ’ ಕನ್ನಡದ ಮಹತ್ವದ ಕೃತಿಗಳಲ್ಲೊಂದು. ಸಾಂಗತ್ಯದ ಸೊಬಗನ್ನು ಸೂರೆಗೊಂಡ ಈ ಕವಿಯ ಮಹಾಕಾವ್ಯದ ಸೊಬಗನ್ನು ಸಾಮಾನ್ಯ ಜನಕ್ಕೂ ತಿಳಿಯುವಂತೆ ತಿಳಿಗನ್ನಡದಲ್ಲಿ ನೀಡಿದ ಪಿ. ಕೆ. ನಾರಾಯಣರ ಪ್ರಯತ್ನ ಶ್ಲಾಘ್ಯ. ಅನುವಾದ ಲಲಿತವಾಗಿ ಬಂದಿದೆ.

ಮೂಲಕೃತಿಯ ಸೊಬಗನ್ನು ಉಳಿಸುವಲ್ಲಿ ಸಾಕಷ್ಟು ಸಫಲವಾಗಿದೆ." ಈ ಕೃತಿಯ ಬಗ್ಗೆ 'ಕರ್ಮವೀರ'ದಲ್ಲಿ ವಿಮರ್ಶೆ ಮಾಡುತ್ತ ಸೇವ ನಮಿರಾಜಮಲ್ಲರು ಹೀಗೆ ಬರೆಯುತ್ತಾರೆ: "ಲೇಖಕ ಪಿ. ಕೆ. ನಾರಾಯಣ ಅವರು ಸಾಹಿತ್ಯವನ್ನು ಅದರಲ್ಲೂ ಜೈನ ಸಾಹಿತ್ಯವನ್ನು ವಿಸ್ತಾರವಾಗಿ ಅಭ್ಯಸಿಸಿದವರು. ಜೈನವಾಙ್ಮಯದ ಬಗ್ಗೆ ಅಭ್ಯಾಸ ಪೂರ್ಣವಾದ ಲೇಖನಗಳನ್ನು ಬರೆದವರು. ರತ್ನಾಕರ ವರ್ಣಿಯ 'ಭರತೇಶ ವೈಭವ'ಅವರಿಗೆ ಕರತಲಾಮಲಕವಾಗಿದೆ ಎನ್ನುವುದು ಇದನ್ನೋದುವಾಗ ತಿಳಿಯುತ್ತದೆ. ಮೂಲಕೃತಿಗೆ ಅಪಚಾರವನ್ನು ಮಾಡಿಲ್ಲ, ಒಣ ಪಾಂಡಿತ್ಯವನ್ನು ಪ್ರದರ್ಶಿಸಿಲ್ಲ. ಬದಲಾಗಿ ಅಭಿಮಾನಪೂರ್ವಕವಾಗಿ ಮೂಲಕೃತಿಗೆ ಒಂದು ಹೊಸ ತೊಡಿಗೆ ತೊಡಿಸಿದ್ದಾರೆನ್ನಬಹುದು. ಅದೂ ಭೂಷಣಪ್ರಾಯವೆಂದು ತಲೆದೂಗಬಹುದಾದ ತೊಡಿಗೆ."

ಕನ್ನಡದ ಕವಿಗಳೂ ಪಂಡಿತರೂ ಆದ ಸೇಡಿಯಾಪು ಕೃಷ್ಣ ಭಟ್ಟರು ಈ ಕೃತಿಯ ಕುರಿತು ಈ ರೀತಿ ಲೇಖಕರಿಗೆ ಪತ್ರ ಬರೆದಿದ್ದಾರೆ: "ನಿಮ್ಮ ಆ ಪುಸ್ತಕಗಳನ್ನು ಓದಿದ್ದರ ಮೇಲಿಂದ ಹೇಳುವುದಾದರೆ ನೀವೊಂದು ಒಳ್ಳೆಯ ಕೆಲಸವನ್ನೇ ಮಾಡಿದ್ದೀರಿ, ನಿಮ್ಮ ಬರವಣಿಗೆ ಆಡಂಬರವಿಲ್ಲದೆ ಸಹಜ ಸುಂದರವಾಗಿದೆ. ನಿಮ್ಮ ಸ್ವಭಾವದ ಸರಳತೆ ಸ್ವಚ್ಛತೆಗಳು ಬರವಣಿಗೆಯಲ್ಲೂ ಬಂದಿವೆ. ನಿಮಗೆ ನನ್ನ ಧನ್ಯವಾದಗಳು." ಅಭಿನವ ಕಾಳಿದಾಸರೆಂದು ಖ್ಯಾತಿ ಪಡೆದ ಎಸ್. ವಿ. ಪರಮೇಶ್ವರ ಭಟ್ಟರು ಈ ಕೃತಿಯ ಬಗ್ಗೆ ಹೀಗೆ ಹೇಳಿದ್ದಾರೆ: "ಶ್ರೀಯುತರು ಕನ್ನಡದ ಮಹಾಕವಿಗಳಲ್ಲಿ ಒಬ್ಬನಾದ ರತ್ನಾಕರ ವರ್ಣಿಯ 'ಭರತೇಶ ವೈಭವ'ವನ್ನು, ಆ ಸಾಂಗತ್ಯದ ಪದ್ಯಕಾವ್ಯವನ್ನು ಸೊಗಸಾಗಿ, ಸ್ವಾರಸ್ಯ ಕೆಡದ ಹಾಗೆ ಸುಂದರವಾದ ವಚನರೂಪದಲ್ಲಿ ಸಂಗ್ರಹವಾಗಿ ಅಳವಡಿಸಿ ಕೊಟ್ಟಿದ್ದಾರೆ. ತಮ್ಮ ಬಹುದಿನಗಳ ವಾಙ್ಮಯ ತಪಸ್ಸಿನ ಬಹುಭಾಗವನ್ನು ವ್ಯಯಿಸಿ ಈ ಸುಂದರವಾದ ಕೃತಿಯನ್ನು ಕನ್ನಡ ನುಡಿಯ ಬೊಕ್ಕಸಕ್ಕೆ ತಮ್ಮದೊಂದು ಕಾಣಿಕೆಯಾಗಿ ಅರ್ಪಿಸಿ ನಮ್ಮ ಸಾಹಿತ್ಯದ ಸಿರಿ ಸಂಪತ್ತನ್ನು ಹೆಚ್ಚಿಸಿದ್ದಾರೆ. ಇದಕ್ಕಾಗಿ ಕನ್ನಡಿಗರೆಲ್ಲ ನಾರಾಯಣ ಅವರಿಗೆ ಋಣಿಗಳಾಗಿರಬೇಕು."

೮

ಒಟ್ಟಿನಲ್ಲಿ ಮೂಲ ಕಾವ್ಯದ ಕಾವ್ಯಧರ್ಮ–ವರ್ಣನೆ–ಪಾತ್ರಗಳು, ಔಚಿತ್ಯ, ತತ್ತ್ವಾರ್ಥ ಎಲ್ಲವೂ ಮಾತ್ರವಲ್ಲ ಸಾಹಿತ್ಯದ ಮೂಲ ತತ್ತ್ವವಾದ ರಸಧ್ವನಿ, ಪಾತ್ರ ರಚನೆ, ಕಥನ ಕ್ರಿಯೆಗಳಿಗೆ ಪ್ರತಿಬಂಧಕವಾಗದಂತೆ, ವರ್ಣನೆಗಳು ಔಚಿತ್ಯ ಮೀರದಂತೆ ಅನುವಾದದಲ್ಲಿ ಬಂದಿದ್ದು ಓದುಗರ ಗಮನ ಸೆಳೆಯುವಲ್ಲಿ ಪರಿಣಾಮಕಾರಿಯಾಗಿದೆ. ಮೂಲದಲ್ಲಿರುವ ಮಧುರವಾದ ಪದರಚನೆ, ಲಲಿತ ಪ್ರಸನ್ನ ಶೈಲಿ ಅನುವಾದದ ಆರಂಭದಿಂದ ಕೊನೆಯವರೆಗೂ ಏಕತಾನವಾಗಿ, ಮೇಲೆ ಹೇಳಿದ ಅಂಶಗಳು ಅಂತರವಾಗಿದೇ, ಅದೇ ಮಧುರವಾದ ಪದರಚನೆಯಿಂದ, ಅದೇ ಲಲಿತ ಪ್ರಸನ್ನ ಶೈಲಿಯಿಂದ ಅನುವಾದ ಒಂದು ಗದ್ಯಕಾವ್ಯವಾಗಿ ಪರಿಣಮಿಸಿದೆ.

ಗ್ರಂಥಋಣಿ

1. ಭರತೇಶ ವೈಭವ ಸಂಗ್ರಹ, ಕುವೆಂಪು ಅವರ ಮುನ್ನುಡಿ.
2. ಅನುವಾದ–ಭಾಷಾಂತರ – ವರದಾ ಶ್ರೀನಿವಾಸ.
(ಲೇಖನ)
(ಮಂಜೂಷ-ಧರ್ಮಸ್ಥಳದಲ್ಲಿ ನಡೆದ ಸಮ್ಮೇಳನದ ಸಮ್ಮೇಳನ ಸಂಚಿಕೆ)
3. ಭರತೇಶ ವೈಭವ ಭಾಗ I, II, III ಸಂ. ಉಗ್ರಾಣ ಮಂಗೇಶರಾಯರು.
4. ಭರತೇಶ ದಿನಚರಿ ಭಾಗ I, II, III ಓ. ಕೆ. ನಾರಾಯಣ ವಿದ್ವಾನ್.

ವಾಚನೀಯ ಕೃತಿ : 'ಈಡೊಂದು ಹುಲಿಯೆರಡು'

ಎಮ್. ರಾಮಚಂದ್ರ

'ಮೃಗಯಾ' ಎಂಬುದು ಪ್ರಾಚೀನವಾದ ಸಪ್ತವ್ಯಸನಗಳಲ್ಲಿ ಒಂದು. ಬೇಟೆ ಎಂಬುದು ನಮ್ಮ ಬಳಕೆಯ ಮಾತು. ರಾಜ ಮಹಾರಾಜರಿಗೂ ಶ್ರೀಮಂತ ಘನವಾಸರಿಗೂ ಅದು ಮುಖ್ಯವಾಗಿ ಮನೋರಂಜನೆಯಾದರೆ ಜನ ಸಾಮಾನ್ಯರಿಗೆ ಅದರಿಂದ ಆಹಾರ ಸಂಪಾದನೆ. ನಾಡಿಗೆ ನುಗ್ಗಿ ಬೆಳೆಯನ್ನು ಹಾಳು ಮಾಡುವ ವನ್ಯಮೃಗಗಳನ್ನು ಆಗಾಗ ಬೇಟೆಯಾಡುವುದುಂಟು. ಭಾರತವು ಪರಾಧೀನ ವಾಗಿದ್ದ ಕಾಲದಲ್ಲಿ ಆಂಗ್ಲ ಪ್ರಭುಗಳು ಮಾಡುತ್ತಿದ್ದ ಬೇಟೆಗಳು ಸಾರ್ವಜನಿಕ ವಿನೋದವೆಂದೆನಿಸಿದ್ದುವು. ಮೈಸೂರು ಮಹಾರಾಜರು ಬಂಡಿಪುರದಲ್ಲಿ ನಡೆಸುತ್ತಿದ್ದ 'ಖೆಡ್ಡಾ' ಜಗತ್‌ಪ್ರಸಿದ್ಧ ಗಜವೇಂಟೆಯೆನಿಸಿತ್ತು. ನಾನಾ ಜಂತುಗಳನ್ನು ಬೇಟೆಯಾಡಿ ಕೊಲ್ಲುವುದು ಇಲ್ಲವೆ ಹಿಡಿದು ಪಳಗಿಸುವುದು ; ಕೊಂದ ಮೃಗಗಳ ಚರ್ಮ, ಉಗುರು, ಕೊಂಬು, ಹಲ್ಲು ಮುಂತಾದುವುಗಳನ್ನು ಸಂಗ್ರಹಿಸು ವುದು ಗೃಹಾಲಂಕರಣಕ್ಕೆ ಬಳಸುವುದು ಅಥವಾ ಮಾರು ವುದು ಇವೆಲ್ಲ ಒಂದು ಕಾಲದಲ್ಲಿ ನಿರಾತಂಕವಾಗಿ ಬಹಿರಂಗ ವಾಗಿ ನಡೆಯುತ್ತಿದ್ದುವು. ಹಬ್ಬದ ದಿನಗಳಲ್ಲಿ ಹಳ್ಳಿ ಗರೆಲ್ಲ ಸೇರಿ ಮಾಡುತ್ತಿದ್ದ ಕೂಡು ಬೇಟೆಗಳು ಅವರಿಗೆ ವಿಹಾರ ಆಹಾರ ಎರಡನ್ನು ಒದಗಿಸುತ್ತಿದ್ದುವು. ದಕ್ಷಿಣ

ಕನ್ನಡದಲ್ಲಿ 'ಖೆಡ್ಡ ಸ'ವೆಂಬ ವಿಶಿಷ್ಟ ಸಂದರ್ಭಗಳಲ್ಲಿ ಮಾಂಸಾಹಾರಿ ಜನರು ಸಾಮೂಹಿಕವಾಗಿ, ಒಂದು ಗ್ರಾಮೀಣ ಕ್ರಿಯೆಯೆಂಬಂತೆ ಹಗಲು ಬೇಟೆಯಾಡುತ್ತಿದ್ದುದನ್ನು ಇತ್ತೀಚೆಯವರೆಗೂ ಕಾಣಬಹುದಿತ್ತು. ಪ್ರಾಕೃತಿಕ ಸಮತೋಲನವನ್ನು ಉಳಿಸುವುದಕ್ಕೂ ವನ್ಯ ಸಂಪತ್ತನ್ನು ಬೆಳೆಸುವುದಕ್ಕೂ ಸರಕಾರವು ಈಗ ಪ್ರಾಧಾನ್ಯವನ್ನು ನೀಡಿ ಮೃಗವಧೆಯನ್ನು ನಿಷೇಧಿಸಿರುವುದರಿಂದ, ಬೇಟೆಯ ಚಪಲವುಳ್ಳವರು ಹಳೆಯ ನೆನಪುಗಳನ್ನಷ್ಟೇ ಮೆಲುಕಾಡುವುದರಲ್ಲಿ ತೃಪ್ತಿ ಹೊಂದಬೇಕಾಗಿದೆ.

ಬೇಟೆಯ ಉದ್ದೇಶ ಪ್ರಯೋಜನಗಳೇನೇ ಇರಲಿ ಅದನ್ನು ವಾಙ್ಮಯ ಕ್ಷೇತ್ರಕ್ಕೂ ತಂದು ಒಂದು ರೋಚಕ ಸಾಹಿತ್ಯ ಪ್ರಕಾರವಾಗಿ ಬೆಳೆಸಿದ ಹಿರಿಮೆ ಆಂಗ್ಲರದು. ಪ್ರಾಚೀನ ಭಾರತೀಯ ಕಾವ್ಯಗಳಲ್ಲೂ ಸಾಂದರ್ಭಿಕವಾಗಿ ಕ್ವಚಿತ್ತಾಗಿ ಮೃಗಯಾ ವರ್ಣನೆ ಬಂದದ್ದಿದೆ. ಕಾಳಿದಾಸನ 'ಶಾಕುಂತಲ'ದ ಆರಂಭವೇ ಬೇಟೆಯಿಂದ. ಅದೇ ನಾಟಕದಲ್ಲಿ ಬೇಟೆಯ ಪ್ರಯೋಜನವನ್ನು ವರ್ಣಿಸುವ ಪದ್ಯವೊಂದಿದೆ. (ಅಂಕ. ೨, ಪದ್ಯ: ೩೯, ೪೦) ಭಾರವಿಯ ಕಿರಾತಾರ್ಜುನೀಯದಲ್ಲಿ ಕನ್ನಡದ ಪಂಪ, ರಾಘವಾಂಕ, ನಾರಾಣಪ್ಪ, ಷಡಕ್ಷರೀಯ ಕಾವ್ಯಗಳಲ್ಲಿ ಅಲ್ಲಲ್ಲಿ ಬೇಟೆಯ ಚಿತ್ರಣಗಳಿವೆ. ಆದರೆ ಅವೆಲ್ಲ ಅಧಿಕೃತ ವಸ್ತುವಿಗೆ ಹೊಂದಿಕೊಂಡ ಪ್ರಾಸಂಗಿಕ ಆಖ್ಯಾನಗಳು. ಬೇಟೆಯನ್ನೇ ಮುಖ್ಯ ವಸ್ತುವಾಗಿ ಆರಿಸಿಕೊಂಡು, ಕಥೆಯಾಗಿ ಅರಳಿಸಿದವರು ನಮ್ಮಲ್ಲಿ ಕಡಿಮೆ. ಅದಕ್ಕೆ ಮುಖ್ಯ ಕಾರಣ ಕಾವ್ಯಕರ್ತೃಗಳು ಸ್ವತಃ ಬೇಟೆಗಾರರಲ್ಲ ; ಬೇಟೆಯನ್ನು ಕಣ್ಣಾರೆ ಕಂಡವರೂ ಕಮ್ಮಿಯೇ. ಕೋವಿ ಹಿಡಿಯುವವರಲ್ಲಿ ಹೆಚ್ಚಿನವರು ಮದ್ದು ಗುಂಡುಗಳನ್ನು ಬಳಸುವವರೇ ವಿನಾ ಲೆಕ್ಕಣಿಕೆ ಮಸಿಕುಡಿಕೆಗಳನ್ನಲ್ಲ. ಆದರೆ ಜಿಮ್ ಕಾರ್ಬೆಟ್, ಕೆನ್ನೆತ್ ಆಂಡರ್‌ಸನ್ ಮುಂತಾದವರು ಹೇಗೆ ಬೇಟೆಗಾರರೋ ಹಾಗೆಯೇ ಬರಹಗಾರರೂ ಆಗಿದ್ದುದರಿಂದ ಬೇಟೆಯ ತಮ್ಮ ಅನುಭವಗಳನ್ನು ರೋಮಾಂಚನಕಾರಿಯಾಗಿ ನಿರೂಪಿಸಿದ್ದಾರೆ. ಅವರ ಅನುಭವ ಕಥನಗಳಲ್ಲಿ ವಾಚಕರು ಹೆಚ್ಚಿನ ಆತ್ಮೀಯತೆ, ಸಹಜತೆಗಳನ್ನು ಕಾಣುತ್ತಾರೆ. ಜಿಮ್ ಕಾರ್ಬೆಟ್ಟನ The Men eaters of Kumoan. (ಕುಮಾವೂ ನರಭಕ್ಷಕ) ಉತ್ತರ ಭಾರತದ ಗುಡ್ಡಗಾಡುಗಳಲ್ಲಿ ಅವನು ಆಡಿದ ಹುಲಿಬೇಟೆಯ ಸಾಹಸ ಪ್ರಸಂಗಗಳು ಕಣ್ಣಿಗೆ ಕಟ್ಟಿಸಿ, ಮೈನವಿರೇಳಿಸುತ್ತವೆ.

ಹೊಸಗನ್ನಡದಲ್ಲಿ ಬೇಟೆಗೆ ಮಿಗಿಲಾದ ಎಡೆಯನ್ನು ನೀಡಿದವರು ಕುವೆಂಪು. ಅವರ 'ಕಾನೂರು ಹೆಗ್ಗಡಿತಿ', 'ಮಲೆಗಳಲ್ಲಿ ಮದು ಮಗಳು' ಎಂಬ ಬೃಹತ್ಕಾದಂಬರಿಗಳಲ್ಲೂ 'ಮಲೆನಾಡಿನ ಚಿತ್ರ'ಗಳೆಂಬ ಪ್ರಬಂಧ ಸಂಚಯದಲ್ಲೂ ನಾನಾ ವಿಧದ ಬೇಟೆಯ ಕುತೂಹಲಕಾರೀ ಚಿತ್ರಣಗಳಿವೆ. ಜಿ. ವೆಂಕಟಯ್ಯನವರ 'ಬನದ ಸೆರಗು' ಮೊದಲಾದ ಪುಸ್ತಕಗಳಲ್ಲೂ ಕಾಕೆಮಾನಿಯವರ ಅನೇಕ ಲೇಖನಗಳಲ್ಲೂ ಬೇಟೆಯ ಬಗೆಬಗೆಯ ಬಣ್ಣನೆಗಳನ್ನು ಓದಿ ಸವಿಯಬಹುದು. ಆದರೆ ಇಂಗ್ಲಿಷಿನಲ್ಲಿರುವಂತೆ ಕನ್ನಡದಲ್ಲೂ ಬೇಟೆಯೊಂದನ್ನೇ ಪ್ರಧಾನ ವಿಷಯವಾಗಿ ಇರಿಸಿಕೊಂಡು.

ಬಿಡಿಬರೆಹಗಳನ್ನಲ್ಲ, ಇಡಿಯ ಪುಸ್ತಕಗಳನ್ನೇ ಬರೆದು ಒಂದು ದಾಖಲೆಯನ್ನೇ ನಿರ್ಮಿಸಿದವರು ಕೆದಂಬಾಡಿ ಜತಪ್ಪ ರೈಯವರು.

ಕೃಷಿಕರ್ಮನಿರತರಾಗಿರುವ ರೈಯವರು ಬಿಸಿ ನೆತ್ತರಿನ ಎಳೆ ಹರೆಯದಲ್ಲಿ ತಾವು ಆಡಿದ ಹಲವಾರು ಬೇಟೆಗಳ ವಿವಿಧ ಅನುಭವಗಳನ್ನು ಮೂರು ಪುಸ್ತಕಗಳ ಹಂದರದಲ್ಲಿ ಹರಡಿದ್ದಾರೆ. 'ಬೇಟೆಯ ನೆನಪುಗಳು', 'ಈಡೊಂದು ಹುಲಿಯೆರಡು' ಮತ್ತು 'ಬೇಟೆಯ ಉರುಳು'. ಈ ಮೂರರಲ್ಲಿ ಮೊದಲ ಪುಸ್ತಕವಂತೆ ಮಿಕ್ಕ ಎರಡೂ ರೈಯವರ ನೆನಪಿನ ತತ್ತಿಗಳನ್ನು ಒಡೆದು ಬಂದವುಗಳೇ ಆಗಿವೆ. ಆದರೆ ಈ ಪುಸ್ತಕ ತ್ರಯದಲ್ಲಿ ಮೊದಲಿನದರ ಸತ್ವ ಎರಡನೆಯದರಲ್ಲಿಲ್ಲ; ಮೂರನೆಯದಂತೂ ಅಲ್ಲಿ ಇಲ್ಲಿ ಬೇಟೆಯ ಪ್ರಸ್ತಾಪವಿದ್ದರೂ ಬರೆಯಲೇಬೇಕೆಂಬ ಒತ್ತಂಬಕ್ಕಾಗಿ ಬರೆದ ಹಾಗೆ ಕಾಣುತ್ತದೆ. ಬಾಳೆಗೊನೆಯಲ್ಲಿರುವ ಕಾಯಿಗಳು ಚೆನ್ನಾಗಿ ಬಲಿತು, ಮರದಲ್ಲೇ ಒಂದೆರಡಕ್ಕೆ ಹಳದಿಬಣ್ಣವೇರಿದಾಗ ಗೊನೆ ಕಡಿದಿಟ್ಟರೆ ಹಣ್ಣುಗಳಿಗೆ ಯಾವ ರುಚಿ ಇರುತ್ತದೋ ಅದೇ ರುಚಿ ಇನ್ನೂ ಪಕ್ವವಾಗದ ಗೊನೆಯನ್ನು ಕಡಿದು 'ಉಬ್ಬೆಗೆ' ಹಾಕಿ 'ಹಣ್ಣುಮಾಡಿ'ದಾಗ ಇರುವುದಿಲ್ಲ. ಸಾಹಿತ್ಯದಲ್ಲೂ ಹೀಗೆಯೇ. 'ಇಚ್ಛೆಗದೆಯೊಪ್ಪಿ ಬಗೆ ಬಿಚ್ಚಿ'ದಾಗ ಬರೆಯಬೇಕು. ಅದು ಸಹಜವೂ ಸಜೀವವೂ ಆಗುತ್ತದೆ; ಸಾರ್ಥಕವೂ ಶಾಶ್ವತವೂ ಎಂದೆನಿಸುತ್ತದೆ.

'ಈಡೊಂದು ಹುಲಿಯೆರಡು' ಹದಿಮೂರು ಅಧ್ಯಾಯಗಳ ಸಂಕಲನ. ಇದರಲ್ಲಿ ಹುಲಿ–ಕರಡಿ–ಆನೆ ಬೇಟೆಗಳ ವರ್ಣನೆಗಳಿವೆ; ಮೀನಿಗಾಗಿ ನೀರಿಗೆ ತೋಟೆ ಹಾಕುವ, ಹಂದಿಗಾಗಿ ಕಾಡನ್ನು ಸೋಹುವ ವಿವರಗಳೂ ಇವೆ. ಬೇಟೆಗೆ ನೇರವಾಗಿ ಸಂಬಂಧಿಸದ 'ಜಾದುಗಾರನೊಂದಿಗೆ' ಸೆಣಸುವ ಪ್ರಕರಣವೂ ಪುಸ್ತಕದಲ್ಲಿದೆ. ಬೇಟೆಯೆಂಬುದು ಒಂದು ವಿನೋದ, ಅತಿಯಾದರೆ ವ್ಯಸನ. ಅದೊಂದು ಸಾಹಸವೂ ಹೌದು. ಸಾಹಸವೆಂದಾಗ ಅದರಲ್ಲಿ ಅಪಾಯದ ಅಂಶವೂ ಇದ್ದೇ ಇರುತ್ತದೆ. ಮುಖ್ಯವಾಗಿ ಕ್ರೂರ ಮೃಗಗಳನ್ನು ಬೇಟೆಯಾಡುವಾಗ ಅಪಾಯಕ್ಕೆ ಎದೆಯೊಡ್ಡಿಯೇ ಹೆಜ್ಜೆಯಿರಿಸಬೇಕಾಗುತ್ತದೆ. ಕೆದಂಬಾಡಿಯವರ ಈ ಮೃಗಯಾ ಕಥನದಲ್ಲಿ ಅಂತಹ ಸಾಹಸ ಪ್ರೀತಿಯನ್ನು ಉದ್ದಕ್ಕೂ ಕಾಣುತ್ತೇವೆ. ರತಿನಿರತವಾದ ವ್ಯಾಘ್ರ ದಂಪತಿಗಳನ್ನು ಒಂದೇ ಈಡಿಗೆ ಹೊಡೆದು ಉರುಳಿಸುವಲ್ಲಿ (ಪುಸ್ತಕ ಶೀರ್ಷಿಕವು ಆ ಸನ್ನಿವೇಶದಿಂದಲೇ ಪ್ರೇರಿತವಾದದ್ದು) ಒಂದರ ಹಿಂದೆ ಇನ್ನೊಂದರಂತೆ ಕರಡಿಗಳೊಂದಿಗೆ ಹೋರುವಲ್ಲಿ, ಕಲ್ಲಾನೆಯಂತಿದ್ದ ಕಾಡುಹಂದಿಯನ್ನು ಗುಂಡಿಕ್ಕಿ ಸಾಯಿಸುವಲ್ಲಿ ರೈಯವರ ಈಡುಗಾರಿಕೆ-ಎದೆಗಾರಿಕೆಗಳೆರಡೂ ಪ್ರಕಟವಾಗುತ್ತವೆ. ನೆರಿಯದ ಕಾಡಿನಲ್ಲಿ ಒಂಟಿಸಲಗನೊಂದಿಗೆ ಸರಸವಾಡಿ. ಕುವಲಯಾಪೀಡದಂತಿದ್ದ ಅದನ್ನೂ ರೈಯವರು ಹೇಗೆ ಮರ್ದಿಸಿದರು ಎಂಬುದನ್ನು ಓದುವಾಗ ಮೈ ಜುಮ್ಮೆನ್ನುತ್ತದೆ.

ಮೃಗಯಾ ವಿನೋದದ ಈ ಕಥನದಲ್ಲಿ ವೀರರಸಕ್ಕೆ ಪ್ರಾಧಾನ್ಯವಾದರೂ ಇತರ ರಸಗಳೂ ಅಲ್ಲಲ್ಲಿ ಜಿನುಗುವುದನ್ನು ಕಾಣುತ್ತೇವೆ. ವಿೂನು ಬೇಟೆಗೆ ಹೋಗಿ, ಕೊಳೆತು ನಾರುವ ಹೆಣವನ್ನು ಕಾಣುವಲ್ಲಿ ಭೀಭತ್ಸ. ಕಾಡುಕೋಣವೆಂದು ಭ್ರಮಿಸಿ ಐತಪ್ಪಶೆಟ್ಟರು ಎರಡು ಊರೆಮ್ಮೆಗಳಿಗೆ ಗುಂಡು ಹೊಡೆದು ಕೊಲ್ಲುವಲ್ಲಿ ಕರುಣ, ಹುಲಿ ಹೊಡೆಯುತ್ತೇನೆಂದು ಬಡಿವಾರ ಮಾಡಿದವರು ಹುಲಿ ಎದುರಾದಾಗ ಹೆದರಿ ಮುದುರಿ ಕೊಳ್ಳುವಲ್ಲಿ ಹಾಸ್ಯಾರಸ ಬಿಂದುಗಳನ್ನು ಚಪ್ಪರಿಸಬಹುದು. ವ್ಯಾಘ್ರ ದಂಪತಿಗಳ ಪ್ರಣಯ ಲೀಲೆಯಲ್ಲಿ 'ಶೃಂಗಾರ'ವೂ (ಈ ವಿಸ್ತಾರ ಅನವಶ್ಯಕವಾದದ್ದು. ಇದು ಪ್ರಾಚೀನ ಕಾವ್ಯಶಾಸ್ತ್ರಕ್ಕೆ ಸಮ್ಮತವೂ ಅಲ್ಲ) ಸಾಕಷ್ಟು ಸಾಂದ್ರವಾಗಿಯೇ ಹರಿದಿದೆ.

ಬೇಟೆಯೆಂಬುದು ಒಂದು ಸಾರ್ವಕಾಲಿಕ, ಸಾರ್ವದೇಶಿಕ ಕ್ರೀಡೆಯಾದರೂ ದಕ್ಷಿಣ ಕನ್ನಡದಲ್ಲಿ ಅದಕ್ಕೊಂದು ವಿಶಿಷ್ಟ ಸಂಪ್ರದಾಯವಿದೆ. ನಾಲ್ಕೈದು ಮಂದಿಯ ಗುಂಪು ಅಥವಾ ಸಾಮೂಹಿಕವಾದ ಬೇಟೆ, ಬೇಟೆಯಲ್ಲಿ ಅನುಸರಿಸುವ ಕ್ರಮ, ಬೇಟೆ ಯಾಡಿ ಕೊಂದಂತಹ (ಭೋಜ್ಯ) ಮೃಗ ಮಾಂಸವನ್ನು ಹಸವಿಗೆ ಮಾಡುವ ರೀತಿ, ಇವೇ ಮುಂತಾದ ವಿವರಗಳನ್ನು ಈ ಕೃತಿಯಲ್ಲಿ ಕಾಣಬಹುದು. ಹಾಗೆಯೇ ಇಲ್ಲಿನ ಕಥನಕ್ಕೆ ಉಚಿತವಾದ, ಕರೆನಾಡಿನ ತುಳುಗನ್ನಡಕ್ಕೆ ಸಹಜವಾದ ಭಾಷಾ ಶೈಲಿಯನ್ನು ರೈಯವರು ಪ್ರಯೋಗಿಸಿರುವುದು ಪುಸ್ತಕಕ್ಕೆ ಹೆಚ್ಚಿನ ಹೊಗರನ್ನೂ ಪೊಗರನ್ನೂ ನೀಡುತ್ತದೆ. ಸೊಗಸಾದ ನುಡಿಗಟ್ಟುಗಳು, ಗಾದೆ ಮಾತಿನಂತಹ ವಾಖ್ಯ ರಚನೆಗಳು ಅಲ್ಲಲ್ಲಿ ಎದುರಾಗುತ್ತವೆ. "ಪೂಂಜರ ಬೇಟೆಯು ನಿಯಮಕ್ಕೆ ಮಣ್ಣುಕ್ಕಿತು! ಹೋದ ಬೋದು-ಕಲ್ಲು ಹಟ್ಟಿಯಲ್ಲಿ ಹುಟ್ಟಿದ್ದಲ್ಲ : ಕ್ರಯಕ್ಕೆ ಕೊಂಡದ್ದಲ್ಲ.. ..." (ಪು. ೫೬). "......ಇದು ಮದ್ದಿಗಾಗುವುದೂ ಅಲ್ಲ, ಶುದ್ಧಕ್ಕೂ ಬೇಡ. ಕರುವಿನ ಸೆಗಣಿ" (ಪು. ೯೭). "........ಹಾರುವ ಎರಳೆ. ಓಡುವ ಜಿಂಕೆ, ನಾಗಾಲೋಟದ ಕಡವೆ, ಗೇಣುದ್ದ ಕೋರೆಯ ಹಂದಿ. ಕೊಬ್ಬಿದ ಕಾಡುಕೋಣ. ಚುರುಕು ಚಿರತೆ....(ಪು.೧೧೪) ಇಂತಹ ವಾಕ್ಯಗಳ ಒನಪನ್ನೂ ಬಿಗುಪನ್ನೂ ಆಯಾ ಸಂದರ್ಭಗಳನ್ನೂ ಓದಿಯೇ ಮನಗಾಣಬೇಕು. ದೊಂಡೆ. ಸೆಲ್ಯಾನತ್ತು, ಬಿರ್ಸ, ಬಿರ್ಸಾದಿಗೆ, ಅಗೆಲು, ಸುಂಡಿಗೆ. ಅಜಕಳ ಮುಂತಾದ ಪದ ಪ್ರಯೋಗಗಳಲ್ಲಿ ಕರೆನಾಡಿನ 'ಮಣ್ಣಿನ ವಾಸನೆ' ಮೂಗಿನಲ್ಲಿ ತಟ್ಟುತ್ತದೆ. (ಇಂತಹ ವಿಶಿಷ್ಟ ಪದಗಳಿಗೆ ಟಿಪ್ಪಣಿಯನ್ನು ಕೊಡುತ್ತಿದ್ದರೆ ಅನ್ಯ ಪ್ರದೇಶದ ವಾಚಕರಿಗೆ ಅರ್ಥಗ್ರಹಣ ಸುಲಭವಾಗುತ್ತಿತ್ತು. ಈ ಕೊರತೆಯನ್ನು ಲೇಖಕರು ಮುಂದಿನ ಕೃತಿ-'ಬೇಟೆಯ ಉರುಳು'ಯಲ್ಲಿ ತುಂಬಿಕೊಟ್ಟಿದ್ದಾರೆ).

'ಈಡೊಂದು ಹುಲಿಯೆರಡು' ಮೊದಲು ಮುದ್ರಣವಾದದ್ದು ೧೯೬೯ರಲ್ಲಿ. ಕನ್ನಡದಲ್ಲಿ ಇದೊಂದು ವಿಶಿಷ್ಟ ಸಾಹಿತ್ಯ, ವಿರಳ ಪ್ರಯತ್ನ ಎಂಬುದರಿಂದ ವಾಚಕ ವರ್ಗ ರೈಯವರ 'ಬೇಟೆಯ ನೆನಪು'ಗಳಂತೆ ಇದನ್ನೂ ಉತ್ಸಾಹ-ಉದಾರತೆಗಳಿಂದ ಕೊಂಡು ಕೊನೆದದ್ದು ಆ ಕಾಲಕ್ಕೆ ಅಸಹಜವೇನಲ್ಲ. ಅಂದರ ಆರು ವರ್ಷಗಳ ಅನಂತರ

ಆದೇ ಪರಿಸ್ಥಿತಿ–ಮನಸ್ಥಿತಿ ಇರಲಾರದು. ಕೃತಿಯನ್ನು ಮತ್ತೆ ಮತ್ತೆ ಎಚ್ಚರದಿಂದ, ಹೆಚ್ಚು ಹೆಚ್ಚು ವಸ್ತುನಿಷ್ಠವಾಗಿ, ಪೂರ್ವಾಗ್ರಹ ದೂರವಾಗಿ, ನಿರ್ಮಮಭಾವದಿಂದ ಓದುವಾಗ ಅಲ್ಲಿ–ಇಲ್ಲಿ ಹಲಕೆಲವು ನ್ಯೂನತಾತಿರೇಖಗಳು ಒಂದೊಂದಾಗಿ ಕಣ್ಣನ್ನು ಚುಚ್ಚುತ್ತವೆ ; ತುತ್ತಿನ ಎಡೆಯಲ್ಲಿ ಸೇರಿಕೊಂಡು ಜಗಿಯುವಾಗ ಹಲ್ಲಿಗೆ ಸಿಕ್ಕಿ 'ಚುಳುಕ್' ಎನ್ನಿಸುವ ಹರಳುಗಳಂತೆ ರಸಭಂಗಕ್ಕೆ ಕಾರಣವಾಗುತ್ತವೆ. ಗುಣಪಕ್ಷ ಪಾತಿಯಾದ ಪಾಠಕನನ್ನು ಆಗಾಗ ಕಾಡುವ ಬಹುಮುಖ್ಯ ಸಂದೇಹವೆಂದರೆ ಈ ಕಥನವು ನೈಜ (fact) ವೇ, ಕಾಲ್ಪನಿಕ (fiction) ವೇ ಅಥವಾ ಎರಡರ ಸಮ ಪಾಕವೇ ಎಂಬುದು. ಪುಸ್ತಕದಲ್ಲಿ ನಿರ್ದೇಶಿತವಾದ ಕಾಲವು ತೀರ ಇತ್ತೀಚಿನವೇ ನಲ್ಲ. ಆಂತರಿಕ ಪ್ರಮಾಣದಿಂದ ಊಹಿಸಬಹುದಾದರೆ ನಲ್ವತ್ತು – ಐವತ್ತರ ದಶಕದ ಕಥನ ಇದಾಗಿದೆ. ಎಂದರೆ ಸುಮಾರು ಮೂರು ದಶಕಗಳ ಹಿಂದಿನ ನೆನಪುಗಳು ಕೊಂಚವೂ ಮಸುಕಾದದ್ದೇ ಇಲ್ಲವೇ ? ಅಥವಾ ಅವರು ಬೇಟೆಯ ದಿನಚರಿಯನ್ನೇ ನಾದರೂ ಬರೆದಿಟ್ಟುಕೊಂಡಿದ್ದರೇ ? ಈ ಪ್ರಶ್ನೆಯನ್ನು ಎತ್ತುವುದಕ್ಕೆ ಕಾರಣ : ಇದು. ರೈಯವರು ಎಷ್ಟೋ ಪ್ರಸಂಗಗಳಲ್ಲಿ ಕಾಲವನ್ನು ಅತಿ ಖಚಿತವಾಗಿ ನಿರ್ದೇಶಿಸಿ ಬಿಡು ತ್ತಾರೆ. ಉದಾ : "…….ಕೋವಿಯನ್ನು ಹೆಗಲಿಗೇರಿಸಿ……ಮುರವನ್ನು ತಲಪಿದಾಗ ಬೈಸಾರಿ ಘಂಟೆ ಐದೂವರೆ" (ಪುಟ. ೨). "ಮನೆಗೆ ಬರುವಾಗ ಗಂಟೆ ಏಳೂವರೆ" (ಪು. ೧೯). "……. ಈ ಮನುಷ್ಯ ಮಾಂಸದ ಆಸೆಗಾಗಿಯೇ……ಎಂದು ನಿರ್ಧಾರಕ್ಕೆ ಬಂದಾಗ ಗಂಟೆ ಐದೂವರೆ" (ಪು. ೭೪). "… …. ಗೆದ್ದ ಸಂಭ್ರಮದಲ್ಲಿ ಸುಖಕರ ಕನಸಿನಿಂದ ಎಚ್ಚರಗೊಳ್ಳುವಾಗ ಮರುದಿನ ಗಂಟೆ ಎರಡು" (ಪು : ೧೩೬). ರೈಯವರ ಸ್ಮರಣ ಶಕ್ತಿಯನ್ನು ನಾನು ಪ್ರಶ್ನಿಸುವುದಿಲ್ಲ. ಆದರೆ ಸುಮಾರು ನಾಲ್ಕು ದಶಕಗಳ ಹಿಂದಿನ ಕಥಾನಕದಲ್ಲಿ ಇಷ್ಟೊಂದು ಖಚಿತತೆ ಸಾಧ್ಯವೇ ಎಂಬುದೊಂದೇ ಸಂದೇಹ.

ರೈಯವರು ಮಾಡುವ ಸಂದರ್ಭ ವರ್ಣನೆಗಳ ವಿವರ ದೃಷ್ಟಿಯಲ್ಲಿ ಆಶ್ಚರ್ಯ ಕರವಾಗಿರುವಂತೆಯೇ ಒಮ್ಮೊಮ್ಮೆ ಸಂದೇಹಾಸ್ಪದವೂ ಆಗುತ್ತದೆ. 'ಹಂದಿಯುಲ್ಲ-ಕಲ್ಲಾನೆ' ಎಂಬ ಪ್ರಕರಣದಲ್ಲಿ ಒಂಟಿ ಹಂದಿಯನ್ನು ಬೇಟೆಮಾಡುವ ಒಂದು ಸನ್ನಿ ವೇಶವಿದೆ. ರೈಯವರು ಮಿತ್ರರೊಂದಿಗೆ ಗುಡ್ಡದ ಹೊಡೆಯ ತಗ್ಗಿನಲ್ಲಿ ನಿಂತಿದ್ದಾರೆ. ಗುಂಡೇಟು ತಿಂದ ಹಂದಿ ಅದನ್ನು ಸಡ್ಡೆ ಮಾಡದೆ ಗುಡ್ಡದ ನೆತ್ತಿಯನ್ನು ಏರುತ್ತದೆ ; ತುತ್ತತುದಿಯಲ್ಲಿ ನಿಂತು ಗಡಗಡ ನಡುಗುವುದು ರೈಯವರಿಗೆ ಕಾಣುತ್ತದೆ. ರೈ ಯವರಿಗೂ ಹಂದಿಗೂ ಇರುವ ಅಂತರವನ್ನು ಗಣಿಸಿದರೆ ಅಷ್ಟು ದೂರಕ್ಕೆ ಈ ನೋಟ ಸಾಧ್ಯವೇ ಎಂಬ ಶಂಕೆ ಅನಿವಾರ್ಯವಾಗುತ್ತದೆ.

ಪುಸ್ತಕದ ಸತ್ವ–ಸೌಂದರ್ಯಕ್ಕೆ ಅಷ್ಟೇನೂ ಪೂರಕವಲ್ಲದ ಪ್ರಸಂಗ ಪ್ರಕರಣಗಳೂ ಕೆಲವಿವೆ. 'ಜಾದುಗಾರನೊಂದಿಗೆ' ಎಂಬ ಪ್ರಕರಣವು ರೈಯವರ ಎದೆಗಾರಿಕೆಯನ್ನು ಎತ್ತಿ ಹೇಳುವುದೇ ವಿನಾ ಇನ್ನಾವ ವಿಧದಲ್ಲೂ ಮುಖ್ಯ ಕಥಾನಕಕ್ಕೆ

ಆವಶ್ಯಕವೆನ್ನಿಸುವಂತಿಲ್ಲ. ಜಾದುಗಾರನ ಸವಾಲಿಗೆ ಎದೆಯೊಡ್ಡಿದ ಕೆಚ್ಚಿಗಾಗಿ ರೈಯುವರನ್ನು ಅಪರ ಹಿರಿಯರೂ ಸರಕಾರೀ ಅಧಿಕಾರಿಗಳೂ ಮೆಚ್ಚುವುದಿಲ್ಲ, ಬದಲು ಚುಚ್ಚಿ ನುಡಿಯುತ್ತಾರೆ! ಜಾದುಗಾರನ ಮೋಸಗಾರಿಕೆಯನ್ನು ಬಯಲು ಮಾಡಿದ್ದು ರೈಯುವರ ಅಪರಾಧವೇ? – ಆ ಪ್ರಕರಣದಲ್ಲಿ ಈ ಪ್ರಶ್ನೆಗೆ ಸೂಕ್ತ ವಿವರಣೆಯಿಲ್ಲ. 'ಬೇಟೆಯ ಜೀವನಕ್ಕೆ ಇತಿ ಶ್ರೀ' ಎಂಬ ಅಂತಿಮ ಅಧ್ಯಾಯವು ತನ್ನಿಂದ ತಾನೇ ಮಾರ್ಮಿಕವಾಗಿದ್ದರೂ ರೈಯುವರು ತಾವು ಹಿಡಿದಿದ್ದ ಜಿಂಕೆ ಮರಿಯನ್ನು ಧರ್ಮಸ್ಥಳ ಬೀಡಿಗೆ ಒಪ್ಪಿಸಿದ ಮೇಲಿನ ಆರೆಂಟು ಪುಟಗಳ ನಿರೂಪಣೆಯನ್ನು ಚುಟುಕಿನಲ್ಲಿ ಮುಗಿಸಬಹುದಿತ್ತು.

ಪುಸ್ತಕದ ಭಾಷಾ ಶೈಲಿ ಸತ್ವಪೂರ್ಣವಾಗಿದ್ದರೂ ಕೆಲವೊಂದು ವಾಕ್ಯರಚನೆ, ಶಬ್ದ ಪ್ರಯೋಗಗಳ ಮೇಲೆ ರೈಯುವರು ಮತ್ತೊಮ್ಮೆ ಕೈಯಾಡಿಸುತ್ತಿದ್ದರೆ ಇನ್ನಷ್ಟು ಸೊಗಸುತ್ತಿತ್ತು. "ಇದೇನು ಕೊರಗರ ಕೊಟ್ಯವು ಕೆಟ್ಟು ಹೋಯಿತೆ?" (ಪು. ೯೬–'ಕೊಟ್ಯ' ಕನ್ನಡವಲ್ಲ, ತುಳು ಮಾತ್ರವಲ್ಲ. ಈ ವಾಕ್ಯದ ರೀತಿ ದಕ್ಷಿಣ ಕನ್ನಡಕ್ಕೆ ಸಹಜವೂ ಅಲ್ಲ). 'ಹುಲಿದೂಡಿದ ರಭಸಕ್ಕೆ ನೀವೂ ಬಿದ್ದು ಮೂರ್ಛೆ ಹೋಗಿ ನಮ್ಮನ್ನೂ ಗೋಳಾಡಿಸಿದಿರಿ ಎಂದಾಗ ಕಾಡಿಗೆ ಹೋದವರು ಹುಲಿಗಳ ಹೆಣವನ್ನು ಹೊತ್ತು ತಂದು ಅಂಗಳದಲ್ಲಿರಿಸಿದರು. (ಪು. ೧೦೩. ಇಲ್ಲಿಯ ಕ್ರಿಯೆಗಳಿಗೆ ಪರಸ್ಪರ ಸಂಬಂಧವಿಲ್ಲ. ಇಂತಹ ಪ್ರಯೋಗಗಳು ಇನ್ನೂ ಇವೆ). "...ಎಂದು ನನಗೆ ಆಜ್ಞಾಪಿಸುವ ಧಾಟಿಯಲ್ಲಿಂದು ಕಾರು ಭಾರಿಯತ್ತ ನೋಡಿ ಲೈಟೊಂದನ್ನು ಊಟ ಮುಗಿಸಿ ಹೋಗುವಾಗ ಕೊಡುವಂತೆ ಆಜ್ಞಾಪಿಸುವಾಗ ದೇಗುಲದ ಗಂಟೆಯು ಪೂಜೆಯ ಸಮಯವಾಯಿತು ಎಂದು ಸಾರಿದುದನ್ನು ಕೇಳಿ ಲಗುಬಗೆಯಿಂದ ಎದ್ದು ಕೈದೀವಿಗೆ ಸಮೇತ ದಾರಿ ಬಿಡಿಸುವವರೊಂದಿಗೆ ದೇವಸ್ಥಾನದತ್ತ ಗಂಭೀರ ಹೆಜ್ಜೆಯಿಕ್ಕುತ್ತಾ ಮುನ್ನಡೆದು ದೇವಸ್ಥಾನ ಪ್ರವೇಶಿಸಿದರು." (ಪು. ೧೩೪). ಸಂಭಾಷಣೆಗಳನ್ನು ಪಾತ್ರೋಚಿತವಾಗಿರುವಂತೆ ಸಂಯೋಜಿಸುವುದು ಕಥನಕಲೆಯಲ್ಲಿ ಮುಖ್ಯವಾದ ಒಂದು ಅಂಶ. 'ಈಡೊಂದು ಹುಲಿಯೆರಡು'ರಲ್ಲಿ ಎಲ್ಲ ವ್ಯಕ್ತಿಗಳೂ ಒಂದೇ ರೀತಿಯಲ್ಲಿ, ಮಟ್ಟದಲ್ಲಿ ಮಾತಾಡುತ್ತವೆ. ಮಲೆಕುಡಿಯ ಅಮ್ಮು ಎಂಬವನ ಈ ಮಾತುಗಳನ್ನು ಕೇಳಿ: "...ಏನೋ ಅವಾಂತರದಲ್ಲಿ ಹತ್ತಿಪ್ಪತ್ತು ವರುಷಗಳ ಹಿಂದೆ ಒಂದು ದಂತ ಅರ್ಧ ಮುರಿದು ಈಗ ಒಂದೂವರೆ ದಂತದ ದಂತಿಯಾಗಿದ್ದಾನೆ...." ಕುಮಾರವ್ಯಾಸನ 'ಪದವಿಟ್ಟಳುಪದೊಂದಗ್ಗಳಿಕೆ'ಯ ಬಗ್ಗೆ ಹಿರಿಯ ವಿದ್ವಾಂಸ ಸೇಡಿಯಾಪು ಒಮ್ಮೆ ಹೀಗೆ ಹೇಳಿದ್ದರು: 'ಪದವಿಟ್ಟು ಅಳಿಪುತ್ತಿದ್ದರೆ ಕುಮಾರ ವ್ಯಾಸನ ಕಾವ್ಯ ಇನ್ನೂ ಸುಂದರವಾಗುತ್ತಿತ್ತು!' ಮದುಮಗಳ ಸಿಂಗಾರದಂತೆಯೇ ಸಾಹಿತ್ಯ ಶಾರದೆಯ ಅಲಂಕರಣ. ತಿದ್ದಿ ತೀಡಿದಷ್ಟು ಶೋಭೆ ಅತಿಶಯವಾಗುತ್ತದೆ. ಸೌಂದರ್ಯವು ಸಹಜವಾಗಿರಬೇಕು ನಿಜ; ಅದು ನಿರ್ದುಷ್ಟವೂ ಆಗಿರಬೇಕು.

ಮುಖ್ಯ ಕಥನಕ್ಕೆ ಅಷ್ಟೇನೂ ಹೊಂದಿಕೊಳ್ಳದ, ರಸೇತರವಾದ ಹಾಸ್ಯ ಪ್ರಸಂಗಗಳನ್ನೂ ಉಪಕಥೆಗಳನ್ನು ಬಿಟ್ಟುಬಿಡಬಹುದಿತ್ತು. ಮನೆ ಹೆಂಗಸರು ಹುಲ್ಲಿನ ಬಣಬೆಯಲ್ಲಿ ಅಡಗಿಸಿ ಇರಿಸಿದ್ದ (?) ಚಿಮಿಣಿ ಎಣ್ಣೆಯನ್ನು ಮನೆಯಜಮಾನ ಸರಾಯಿ ಎಂದು ಭ್ರಮಿಸಿ ಕುಡಿಯುವುದು, 'ಹುಲಿಯಂತಹ ಹೆಣ್ಣು, ಹೊಸ ಜಾಲೆ ಚಾಪೆ' ಎಂಬ ಹಳ್ಳಿಗಾದೆಯನ್ನು ವಿಸ್ತರಿಸಿರುವುದು, ಹುಲಿ ಬೇಟೆಯಾಡಲು ಹೊರಟ ಹೊಂತಕಾರಿ ಯುವಕನೊಬ್ಬ ಹುಲಿಯ ಮಂಡೆಯನ್ನು ಕಂಡೇ ಬೆದರಿ ಬೆವತುಬಿಡುವ ಕಥೆ, ಟಿಪ್ಪುಸುಲ್ತಾನನ್ನು ಕಾಣಲೆಂದು ಗಡಾಯಿಕಲ್ಲಿ (ಜಮಾಲಾಬಾದು)ಗೆ ಹೋದ ಗುಂತ್ತಿನವರ ಗತಿ–ಇವೆಲ್ಲ ಅಪ್ರಕೃತವೆನಿಸುತ್ತವೆ.

ಪುಸ್ತಕದ ಆರಂಭದಲ್ಲಿ ಒಂದು ಜಾತ್ರೆಯ ಪ್ರಸ್ತಾಪವಿದೆ. ರೈಯವರು ಅದನ್ನು 'ದೀಪೋತ್ಸವ' ಎನ್ನುತ್ತಾರೆ. ದೀಪೋತ್ಸವಗಳು ನಡೆಯುವುದು ಸಾಮಾನ್ಯ ವಾಗಿ ಕಾರ್ತೀಕ ಮಾಸದಲ್ಲಿ. ಕಾಲಾವಧಿ ಉತ್ಸವಗಳು ಮಾತ್ರ ವಿಶಿಷ್ಟ ದಿನಗಳಲ್ಲಿ ಹೆಚ್ಚಾಗಿ ಬೇಸಗೆಯಲ್ಲಿ–ಜರಗುತ್ತವೆ. ರೈಯವರು 'ದೀಪೋತ್ಸವ'ದ ಕಾಲವನ್ನು ವರ್ಣಿಸಿರುವ ರೀತಿಯಿಂದ ಅದು ಪಗ್ಗು–ಬೇಶ (ಮೇಷ–ವೃಷಭ) ತಿಂಗಳು ಎಂದು ಊಹಿಸಿಕೊಳ್ಳಬಹುದು. ಪ್ರಾಯಃ 'ಜಾತ್ರೆ'ಯನ್ನೇ ಅವರು 'ದೀಪೋತ್ಸವ' ಎಂದು ಕರೆದಿರಲೂ ಸಾಕು. ಅದೇ ಸಂದರ್ಭದಲ್ಲಿ, 'ಹಳ್ಳಿಜನರಿಗೆ ಕೊಳ್ಳಿದೀಪ' ಎಂಬ ಒಂದು ನಾಣ್ಣುಡಿಯನ್ನು ರೈಯವರು ಉಲ್ಲೇಖಿಸಿದ್ದಾರೆ. 'ಹಳ್ಳಿ ದೇವರಿಗೆ ಕೊಳ್ಳಿ ದೀಪ' ಎಂಬ ಗಾದೆಯನ್ನು ನಾನು ಕೇಳಿದ್ದೇನೆ. ಹಳ್ಳಿಗಳ ಬಡದೇವರಿಗೆ ತಕ್ಕಂತೆ 'ಕೊಳ್ಳಿ' (ಉರಿಯುವ ಕಟ್ಟಿಗೆ) ಗಳದೇ ದೀಪಾಲಂಕಾರ ಎಂಬ ಮಾತು ಅರ್ಥವತ್ತಾಗಿದೆ. 'ಹಳ್ಳಿ ಜನರಿಗೆ ಕೊಳ್ಳಿ ದೀಪ' ಎಂಬ ಗಾದೆಯಾಗಲೀ ಕೊನೆಯ ದೀಪೋತ್ಸವ ಎಂಬ ಅರ್ಥವಾಗಲೀ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ.

ಪುಸ್ತಕದಲ್ಲಿರುವ ವರ್ಣನ ವಿವರಗಳಿಗೆ ಇನ್ನಷ್ಟು ಅಧಿಕೃತತೆಯನ್ನು ನೀಡುವ ದೃಷ್ಟಿಯಿಂದ ರೈಯವರ ಬೇಟೆಯ ಕಳದ ಒಂದು ಸ್ಥೂಲ ರೇಖಾಚಿತ್ರವನ್ನೂ ಅವರು ಬೇಟೆಯಾಡಿ ಕೊಂದ ಹುಲಿಗಳ ಜತೆಯಲ್ಲಿ ಬಂದೂಕು ಹಿಡಿದ ಒಂದೆರಡಾದರೂ ಫೋಟೋಗಳನ್ನು (ಲಭ್ಯವಿದ್ದಲ್ಲಿ) ಅಳವಡಿಸಿಕೊಂಡಿದ್ದರೆ ಉಚಿತವಾಗುತ್ತಿತ್ತು. ಪುನರ್ಮುದ್ರಣ ಕಾಲದಲ್ಲಾದರೂ ಹಾಗೆ ಮಾಡಬಹುದು.

ಪುಸ್ತಕದ ಕೆಲವು ದೋಷಭಾಗಗಳನ್ನೂ ಊನಕಾಂತಿಯ ಸಂದರ್ಭಗಳನ್ನೂ ನಾನು ಉಲ್ಲೇಖಿಸಿದ್ದೇನೆ. ನನ್ನದು ದೋಷೈಕದೃಷ್ಟಿಯಲ್ಲ. ಪುಸ್ತಕದಲ್ಲಿ ಶ್ಲಾಘ್ಯವಾದ ಭಾಗಗಳನ್ನು ಮೊದಲಲ್ಲೇ ಎತ್ತಿ ಹೇಳಿದ್ದೇನೆ. ರೈಯವರು ಸೃಷ್ಟಿಸಿದ ಮೃಗಯಾ ಸಾಹಿತ್ಯವನ್ನು ಕುವೆಂಪು ಅಂತಹ ವಿದಗ್ಧರೂ ಹಾ.ಮಾ. ನಾಯಕರಂತಹ ವಿಮರ್ಶಕರೂ ತೆರೆಗೈಯಿಂದ ಸ್ವಾಗತಿಸಿ, ಕೊಂಡಾಟದ ಮನ್ನಣೆಯನ್ನು ನೀಡಿದ್ದಾರೆ ಎಂದ ಮೇಲೆ ಹೆಚ್ಚು ಶಿಫಾರಸ್ಸುಗಳು ಬೇಕಿಲ್ಲ. 'ಬೇಟೆಯ ನೆನಪುಗಳ'ನ್ನು ಹಿಡಿದು

ಕಟ್ಟಿದ ಕೈಯೇ 'ಈಡೊಂದು ಹುಲಿಯೆರಡ'ನ್ನೂ ಕಡೆದು ನಿಲ್ಲಿಸಿದೆ ಎಂಬುದನ್ನು ಪರಿಭಾವಿಸಿದಾಗ ಈ ಕೃತಿಯಲ್ಲೂ ವಾಚಕರಿಗೆ ಆಸಕ್ತಿ ಬಲಿಯುತ್ತದೆ. ತಾರತಮ್ಯದಿಂದ ಚೊಚ್ಚಲ ಕೃತಿಯ ಅಚ್ಚ ಹೊಸತನವನ್ನು ಇದರಲ್ಲಿ ಕಾಣಲಾರೆವು. ಆದರೆ ತನ್ನಿಂದ ತಾನೇ ಇದು ವಾಚನೀಯವೂ ಮನೋರಂಜಕವೂ ಆಗಿದೆ.

ಮಹತ್ವಾಕಾಂಕ್ಷೆಯ ಕಾವ್ಯ : ‘ಭಾರತ ಸಿಂಧುರಶ್ಮಿ’

ಪ್ರೊ॥ ಹಂಪ. ನಾಗರಾಜಯ್ಯ

‘ಭಾರತ ಸಿಂಧುರಶ್ಮಿ’ ಡಾ॥ ವಿ. ಕೃ. ಗೋಕಾಕರ, ಇತ್ತೀಚೆಗೆ ಪ್ರಕಟವಾದ, ಹಿರಿಯ ಕೃತಿ. ಇದರಲ್ಲಿ ಎರಡು ಸಂಪುಟಗಳಿವೆ. ಒಂದನೆಯದರಲ್ಲಿ ಪೂರ್ವಾಪರ, ಉತ್ ಸರ್ಪಣ, ಮನುಕುಲಹಂಸ, ಸಪ್ತಸಿಂಧು, ಕಾನ್ಯಕುಬ್ಜ ನೃಪರಾಜ್ಞಿ ಎಂಬ ಐಯ್ದು ಕಾಂಡಗಳಿವೆ ; ಎರಡನೆಯದರಲ್ಲಿ ಋಷ್ಯಾಶ್ರಮ. ದಾಶರಾಜ್ಞ. ಅಶ್ವಮೇಧ, ಭಾರತ ವಿಸ್ತರಣ, ತ್ರಿಶಂಕುಪ್ರಜ್ಞಾ, ಕ್ರಾಂತದರ್ಶನ, ಶರದಃ ಶತಮ್—ಎಂಬ ಏಳು ಕಾಂಡಗಳಿವೆ. ಅಂದರೆ ಎರಡು ಸಂಪುಟಗಳಿಂದ ಒಟ್ಟು ಹನ್ನೆರಡು ಕಾಂಡಗಳಿವೆ. ಡೆಮ್ಮಿ ೧/೮ ಆಕಾರದಲ್ಲಿರುವ ಈ ಕಾವ್ಯದಲ್ಲಿ ಒಟ್ಟು (೫೭೩ + ೭೬೨) ೧೩೩೫ ಪುಟಗಳಿವೆ. ಒಂದೊಂದು ಕಾಂಡದ ಪುಟ ಪ್ರಮಾಣ ಅದರಲ್ಲಿ ನಿರೂಪಿತವಾಗಿರುವ ವಸ್ತುವಿನ ವ್ಯಾಪ್ತಿಯನ್ನು ಅವಲಂಬಿಸಿದ್ದು ಹೆಚ್ಚು ಕಡಮೆಯಾಗುವುದಾದರೂ ಸರಾಸರಿ ಒಂದು ಕಾಂಡ ನೂರು ಪುಟಗಳಲ್ಲಿ ಅಳವಟ್ಟಿರುತ್ತದೆನ್ನಬಹುದು. ಇಷ್ಟು ದೊಡ್ಡ ಗಾತ್ರದ ಕಾವ್ಯ ಕನ್ನಡದಲ್ಲೇ ಅಲ್ಲದೆ ಉಳಿದ ಯಾವುದೇ ಭಾರತೀಯ ಭಾಷೆಗಳಲ್ಲೂ ಅಪರೂಪ. ಎಂಟು ವರ್ಷಗಳ ಪರಿಶ್ರಮದ ಫಲವಾಗಿ ಇದರ ಬರವಣಿಗೆ ಸಿದ್ಧವಾಗಿದ್ದರೂ ಅದಕ್ಕೂ ಹಿಂದಿನಿಂದ ಇದರ ಪರಿಭಾವನೆ ನಡೆದಿತ್ತೆಂದು ಲೇಖಕರು

ಸೂಚಿಸಿದ್ದಾರೆ. 'ಭಾರತ ಸಿಂಧುರಶ್ಮಿ' ಕಾವ್ಯದ ವಸ್ತು, ಸಾಮಾನ್ಯವಾಗಿ ಭಾರತೀಯ ಕವಿಗಳು ಆರಿಸಿಕೊಳ್ಳುವಂತೆ, ರಾಮಾಯಣ ಮಹಾಭಾರತದಿಂದ ಬಂದಿಲ್ಲ. ಇದರ ವಸ್ತುವನ್ನು ಋಗ್ವೇದದಿಂದ ತೆಗೆದುಕೊಳ್ಳಲಾಗಿದೆಯೆಂಬುದು ಈ ಕಾವ್ಯದ ವಿಶೇಷಣೆಗಳಲ್ಲೊಂದು.

"ಆದರೆ ಇದೊಂದು ಪ್ರಾಚೀನ ಸಂಸ್ಕೃತಿಗೆ ಮೀಸಲಾದ ಕೃತಿಯಲ್ಲ. ವೈದಿಕ ಯುಗದ ಪುನರುಜ್ಜೀವನ ಕಾಲವನ್ನು ಚಿತ್ರಿಸುವಾಗ ಸಮಕಾಲೀನ ಯುಗದ ನಾಡಿಯ ಮೇಲೂ ಈ ಕೃತಿಯು ಬೆರಳಿಟ್ಟಿದೆ. ಇದನ್ನು ಕಾವ್ಯದ ತುಂಬ ಕಂಡುಕೊಳ್ಳಬಹುದು.

"ವಿಶ್ವವಿಶಾಲವಾದ ವರ್ಣನೆ, ಪರಿಸರದೊಡನೆ ಭೀಕರವಾದ ಹೋರಾಟ, ಹೃದಯವನ್ನೇ ಶುದ್ಧಗೊಳಿಸುವ ಪ್ರೇಮ. ವ್ಯಕ್ತಿತ್ವಕ್ಕೆ ಕಸವಿಡುವ ಅನುಭಾವದ ವಿವಿಧ ಪ್ರಕಾರಗಳು : ಇವೆಲ್ಲ ಇಲ್ಲಿಯ ಕಥಾವಸ್ತುವಾಗಿವೆ. ಎರಡು ನೂರರ ಮೇಲೆ ಪಾತ್ರಗಳಿದ್ದ ಈ ಕಾವ್ಯದಲ್ಲಿ ಸುಮಾರು ಇಪ್ಪತ್ತೈದು ವ್ಯಕ್ತಿಗಳು ಅಚ್ಚಳಿಯದೆ ಚಿದ್ರಂಗದ ಮೇಲೆ ಅಲೆದಾಡುತ್ತಾರೆ. ಅಷ್ಟಾದಶವರ್ಣನೆಯೆಂಬ ಪ್ರಾಚೀನ ಪರಂಪರೆ ಬರಿ ಒಂದು ಕವಿಸಮಯವಲ್ಲ. ಸಮಗ್ರ ಸೃಷ್ಟಿಯ ರೌದ್ರ–ಅದ್ಭುತವೆಲ್ಲ ಕಾವ್ಯದಲ್ಲಿ ಬರಬೇಕೆಂಬ ಆಕಾಂಕ್ಷೆ ಅದು. ನವರಸಗಳು (ಕವಿಯ ಅಭಿಪ್ರಾಯದಲ್ಲಿ ಹನ್ನೆರಡು) ಬರಿ ಒಂದು ಕೃತ್ರಿಮ ಸಂಖ್ಯಾ ಮಾಲೆಯಲ್ಲ. ಮಾನವನಿಗೆ ಸಾಧ್ಯವಿದ್ದ ಎಲ್ಲ ಜೀವನ ದೃಷ್ಟಿಗಳ ರಸಾರ್ದ್ರ ಅಭಿವ್ಯಕ್ತಿ ಅವು. ಅವೆಲ್ಲ ಇಲ್ಲ ಇಂದಿನ ಕಾಲದ ಹೊಚ್ಚಗನ್ನಡದಲ್ಲಿ ಅಭಿವ್ಯಕ್ತವಾಗಿವೆ.

"ಸರ್ವಕಾಲೀನ ಜೀವನದ ಚಿತ್ರಣ ಹಾಗು ಮೌಲ್ಯೀಕರಣ ಇಲ್ಲಿ ಹೀಗೆ ವೈದಿಕ ವೇಷ, ಸಮಕಾಲೀನ ಭೂಷಣಗಳ ವ್ಯಂಗೀಕರಣ ಹಾಗು ಒಂದು ಸಮಗ್ರ ಆವರಣ-ರೂಪಣದ ಕಾಂತಿಯನ್ನು ತಳೆದು ತಲೆಯೆತ್ತಿವೆ. ಒಂದು ಹೊಸ ತತ್ವ ಹಾಗು ದರ್ಶನಗಳು ಒಳಿತು–ಕೆಡಕುಗಳ ಚಿರಂತನ ಸಂಗ್ರಾಮವನ್ನು ಇಲ್ಲಿ ನವೀನವನ್ನಾಗಿಸಿವೆ. ಮಹಾಕಾವ್ಯದ ಮೈಕಟ್ಟಿನಲ್ಲಿ ಮೂಡಣ–ಪಡುವಣಗಳು ಸುಂದರವಾಗಿ ಬೆರೆತಿವೆ".

ಇವರ ಆಳವೂ ವಿಸ್ತಾರವೂ ಆದ ವಿಪುಲಾಧ್ಯಯನದ ಬಗೆಗೆ ವಿಮರ್ಶನ ಪ್ರಜ್ಞೆಯ ವಿಚಾರದಲ್ಲಿ ಯಾವ ಅನುಮಾನಗಳೂ ಇಲ್ಲ. ಗೋಕಾಕರ ಇತರ ಕೃತಿಗಳನ್ನು ಅಧ್ಯಯನ ಮಾಡಿರುವ ನನಗೆ ಇವರ ಸೃಜನಶೀಲ ಸಾಮರ್ಥ್ಯದಲ್ಲಿ ಆದರವಿದೆ. ಇಷ್ಟು ಬೃಹತ್ ಪ್ರಮಾಣದ ಕೃತಿ ರಚನೆಗೆ ಇವರು ವಿನಿಯೋಗಿಸಿದ ತಾಳ್ಮೆ, ಎಚ್ಚರ ವಿವೇಕ ಶ್ರದ್ಧೆ ಕುರಿತು ಅಪಾರ ಗೌರವವಿದೆ. ಈ ಸೃಜನ ಕಾರ್ಯದ ಹಿಂದೆ ಪ್ರವರ್ತವಾಗಿರುವ ಲೇಖಕರ ಪ್ರಾಮಾಣಿಕ ಕಳಕಳಿ ಸೌಮನಸ್ಯ ಪ್ರಶಂಸನೀಯವಾದುದು. ಆದಿಮ ಮತ್ತು ಮಧ್ಯಯುಗೀನ ಸಂಸ್ಕೃತಿಯಲ್ಲಿ ಧರ್ಮಜೀವನವನ್ನು ರೂಪಿಸುವಲ್ಲಿ, ಸಾಮಾಜಿಕ ಸ್ಥಿತಿಗಳನ್ನು ನಿರೂಪಿಸುವಲ್ಲಿ ಹಾಗೂ ವಿವಿಧ ಹಂತಗಳ ಜೀವನ ವಿಕಾಸ ಪಾತಳಿಗಳನ್ನು ಅರ್ಥೈಸುವಲ್ಲಿ ಲೇಖಕರ ವಿವೇಚನೆ ಮತ್ತು ಗ್ರಹಿಕೆ

ಮಹತ್ವದ್ದಾಗಿ ಕಾಣುತ್ತದೆ. ಭಾರತೀಯ ಸಂಸ್ಕೃತಿಯ ಸಮಗ್ರ ಅನುಭವದಲ್ಲಿ ಚಲಿಸುವ ಶಕ್ತಿಯ ಮೊತ್ತ ಹಾಗೂ ಈ ಕವಿಯ ಭಾಷೆಯಲ್ಲಿ ಸ್ಫೋಟಿಸಿರುವ ರೀತಿ ಮೌಲಿಕವೆನಿಸುತ್ತದೆ.

"ನನ್ನ ಕಾವ್ಯ ಇಂಥದೊಂದು ಕೃತಿಯ ಮಟ್ಟಕ್ಕೆ ಮೆಲ್ಲನೆ ಸಾಗಿತ್ತೆಂಬುದನ್ನು ಈ ಮೊದಲೇ ಇನ್ನೊಂದು ಸಂದರ್ಭದಲ್ಲಿ ಹೇಳಿದಂತೆ, ನನ್ನ 'ತ್ರಿವಿಕ್ರಮರ ಆಕಾಶ ಗಂಗೆ', 'ಬಾಳ ದೇಗುಲದಲ್ಲಿ', 'ಇಂದಿಲ್ಲ ನಾಳೆ', 'ಕಲ್ಯಾಣದಲ್ಲಿ ಬಸವಣ್ಣನವರ ಕೊನೆಯ ದಿನ', 'ಸಮರಸವೇ ಜೀವನ' (ಫೀಲ್ಡಿಂಗ್ ಹೇಳುವಂತೆ ಕಾದಂಬರಿಯು ಒಂದು ಗದ್ಯ ಮಹಾಕಾವ್ಯ) ಎಂಬ ಕೃತಿಗಳಲ್ಲಿ ಗುರುತಿಸಬಹುದು" — ಎಂದು ಲೇಖಕ ಗೋಕಾಕರು ಅರಿಕೆ ಮಾಡಿಕೊಂಡಿದ್ದಾರೆ. ಇದರ ಜತೆಗೆ ಅವರ 'ದ್ಯಾವಾ ಪೃಥಿವಿ', 'ಊರ್ಣನಾಭಾವಸಾರ' ಮುಂತಾದುವನ್ನೂ ಸೇರಿಸಬಹುದು. ಈ ಎಲ್ಲ ಹಿಂದಿನ ಕೃತಿಗಳಲ್ಲಿ ಭಾರತೀಯ ಪುರಾಣೇತಿಹಾಸಗಳನ್ನು ಕಾವ್ಯಕ್ಕೆ ಅಳವಡಿಸಿಕೊಳ್ಳುವ ಪ್ರಯತ್ನ, ಪ್ರಯೋಗ ಹಾಗೂ ಹವಣಿಕೆ ಇರುವುದನ್ನು ಗಮನಿಸಬಹುದು. ಇವು ಗಳನ್ನು ಪೂರ್ವಸಿದ್ಧತೆಯ ಕಾವ್ಯಗಳನ್ನಾಗಿ ಪರಿಗಣಿಸಿದರೆ ತಪ್ಪಾಗದು. ಗೋಕಾಕರು 'ಭಾರತ ಸಿಂಧುರಶ್ಮಿ'ಯ ಕಡೆಯಲ್ಲಿ ಕೊಟ್ಟಿರುವ ಟಿಪ್ಪಣಿ ಮತ್ತು ಪುಸ್ತಕಗಳ ಸಹಾಯ ಸೂಚಿಯನ್ನು ನೋಡಿದಾಗ ಬೆರಗು ಮೂಡುತ್ತದೆ.

'ಭಾರತ ಸಿಂಧುರಶ್ಮಿ' ಮಹತ್ವಾಕಾಂಕ್ಷೆಯ ಕಾವ್ಯ. ಇದನ್ನು ವಿವರವಾಗಿ ವಿಮರ್ಶಾತ್ಮಕವಾಗಿ ಸಮಗ್ರವಾಗಿ ಓದಿದ ಮೇಲೆ ಮೂಡಿದ ಅನ್ನಿಸಿಕೆಗಳನ್ನು ಇಲ್ಲಿ ದಾಖಲಿಸುತ್ತಿದ್ದೇನೆ. ತಮ್ಮ ವಿಸ್ತಾರವಾದ ಓದಿನಿಂದ ಹದಗೊಂಡ ಬ್ರಹ್ಮಾಂಡ ಸಾಮಗ್ರಿಯನ್ನು ಓದುಗರ ಮುಂದೆ ಹರಡಲಾಗಿದೆ. ಮನುಷ್ಯ, ಕಾಲ, ನಾಗರಿಕತೆ ಬದಲಾಗುತ್ತಾ ಬಂದುದನ್ನು ಪ್ರಭಾವಶಾಲಿಯಾಗಿ ಘಟನೆ ಸಂಕೇತಗಳ ಮೂಲಕ ಪರಿಣಾಮಕಾರಿಯಾಗಿ ತೋರಿಸಿದ್ದಾರೆ. ಮನುಷ್ಯನ ಸ್ವಭಾವ, ರಾಗದ್ವೇಷ, ಕನಸು, ಹಂಬಲ, ಇನ್ನೊಬ್ಬರ ಮೇಲೆ ಅಧಿಕಾರ ಹೇರಿ ಸವಾರಿ ಮಾಡುವ ಸುಖಲಾಲಸೆ, ಸಾಮ್ರಾಜ್ಯ ವಿಸ್ತರಣಾಕಾಂಕ್ಷೆ ಮೊದಲಾದುವು ಯಶಸ್ವಿಯಾಗಿ ಪ್ರತಿಪಾದಿತವಾಗಿವೆ.

ಇಷ್ಟಾಗಿಯೂ ಈ ಕಾವ್ಯ ನಮ್ಮ ವಿಶಿಷ್ಟ ಅನುಭವ ಪ್ರಕ್ರಿಯೆಗೆ ದೂರವಾಗಿಯೇ ಉಳಿಯುತ್ತದೆ. ಇಲ್ಲಿನ ಬಹುಭಾಗ ಗರ್ಭೀಕರಿಸಿಕೊಂಡಿರುವ ವೈಚಾರಿಕ ವೈಭವ ಯಾವ ಸವಾಲುಗಳನ್ನೂ ನೀಡದೆ, ನಮ್ಮ ಅನುಭವ ಕ್ಷಿತಿಜದ ಆಯಾಮವನ್ನು ಮತ್ತು ತಿಳಿವಳಿಕೆಯ ಗಡಿಗಳನ್ನು ಅಂತಿಮವಾಗಿ ವಿಸ್ತರಿಸದೆ ಶಕ್ತಿಹ್ರಾಸಗೊಳ್ಳುತ್ತದೆ. ವೈಚಾರಿಕ ಹಂತದಲ್ಲೇ ನಿರೂಪಣೆ ಹೆಚ್ಚಾಗಿ ಸಾಗುತ್ತದೆ. ಬೌದ್ಧಿಕತೆ ಬೇಡವೆಂದಲ್ಲ. ಅದು ಪ್ರಜ್ಞಾ ಪಾತಳಿಯನ್ನು ದಾಟಿ, ಸ್ಫೋಟಿಸಿ ಕಲಾತ್ಮಕವಾಗಿ ಬರಬೇಕು, ಕಾವ್ಯಾಂಶ ದಲ್ಲಿ ಕರಗಿ ಬರಬೇಕು. 'ಭಾರತ ಸಿಂಧುರಶ್ಮಿ'ಯನ್ನು ಓದುತ್ತಾ ಓದುತ್ತಾ ಹಲವು ಸಲ ಚಕಿತಗೊಳ್ಳುತ್ತೇವೆಂಬುದು ನಿಜ. ಆದರೆ ಒಂದು ಶ್ರೇಷ್ಠ ಕಾವ್ಯದಿಂದ ದಕ್ಕುವ

ಅಪರೂಪ ಮತ್ತು ಅನನ್ಯವೆನಿಸುವ ಅನುಭವ ಇಲ್ಲಿ ನಮ್ಮನ್ನು ಆವರಿಸಿಕೊಳ್ಳು ವುದಿಲ್ಲ. ಬಹುಕಾಲ ನಮ್ಮನ್ನು ಗಾಢವಾಗಿ ಕಾಡುವಲ್ಲಿ, ಕನಸು ಮನಸುಗಳನ್ನು ಆವರಿಸಿಕೊಂಡು ಕಲಕುವುದರಲ್ಲಿ ಈ ಕಾವ್ಯ ವಿಫಲವಾದಂತೆ ತೋರುತ್ತದೆ.

ಪ್ರಾಚೀನ–ಆರ್ಷೇಯ ಪ್ರತೀಕಗಳನ್ನು ಸೃಜನಶೀಲವಾಗಿ ಬಳಸಿಕೊಂಡಿಲ್ಲ. ಎಲ್ಲ ಹಸಿಹಸಿಯಾಗಿ ರಾಶಿಯಾಗಿ ವರದಿಯಾಗಿದೆ, ಸಮನ್ವಯಗೊಂಡಿಲ್ಲ. ಕಾವ್ಯ ಸಿದ್ಧಿ ಪರಿಮಿತವಾಗಲಿರುವ ಕೊರತೆಗಳನ್ನು ಗುರುತಿಸಬಹುದು. ಪ್ರತಿಮೆಗಳನ್ನು ಬುದ್ಧಿ ಪೂರ್ವಕವಾಗಿ ಪೋಣಿಸುತ್ತಾರೆ. ಅವು ಕಾವ್ಯಬಂಧದಲ್ಲಿ ಹೊಂದಿಕೊಳ್ಳದೆ, ಬೆಸೆಯದೆ ಬಿರುಕು ತೋರಿ ಹೊರಗೇ ಉಳಿದುಬಿಡುತ್ತವೆ. ಪ್ರಾಸಪ್ರಿಯತೆ, ಶಾಬ್ದಿಕ ಬಡಬಡಿಕೆ ಭಾವ ಪ್ರಚೋದಕವಾಗದೆ, ಯಾವ ಔಚಿತ್ಯದ ಅರ್ಥನಿಯೋಗವನ್ನೂ ನಿರ್ವಹಿಸದೆ ಸೋಲುತ್ತದೆ. ಕಾವ್ಯಕ್ಕೆ ಬೇಕಾದ ಎಲ್ಲ ಲಕ್ಷಣಗಳೂ ಬಂಧವೂ ಅಚ್ಚುಕಟ್ಟೂ ಸಾವಯವತೆ ಇಲ್ಲಿದೆ. ಆದರೆ ಕಾವ್ಯ ಎಲ್ಲಿದೆ ಎಂದು ಹುಡುಕವಂತಾಗಿದೆ. ನಾವು ಕಾವ್ಯ ಓದುತ್ತಿದ್ದೇವೆಯೊ ಅಥವಾ ಪುರಾಣನಾಮ ಚೂಡಾಮಣಿ ವಾಚನ ಮಾಡುತ್ತಿ ದ್ದೇವೆಯೊ ಎಂಬ ಭ್ರಮೆ ಆವರಿಸುತ್ತದೆ.

ಈ ಕಾವ್ಯ ತಾನು ಮಾಡಬೇಕಾದ ಪ್ರಭಾವವನ್ನು ಮಾಡದಿರುವುದಕ್ಕೆ ಓದುಗನ ಅಸಿದ್ಧತೆಯೇನಾದರೂ ಕಾರಣವೆ ಎಂಬ ಪ್ರಶ್ನೆಯೂ ಏಳಬಹುದು. ಏಕೆಂದರೆ ಈ ಕಾವ್ಯದ ವಸ್ತು ನಮಗೆ ಅಪರಿಚಿತವಾದದ್ದು, ಹೆಸರುಗಳೂ ಬಳಕೆಯ ಮುಖಗಳದಲ್ಲ. ರಾಮಾಯಣ, ಮಹಾಭಾರತ, ಭಾಗವತಾದಿಗಳಲ್ಲಿ ಬೇರೂರಿದ ನಮ್ಮ ಬುದ್ಧಿ ಭಾವ ಗಳನ್ನು ಅಲ್ಲಿಂದ ಬಿಡಿಸಿ ಇಲ್ಲಿಗೆ ತೊಡಗಿಸಿಕೊಳ್ಳುವಲ್ಲಿ ತೊಡಕು ತೊಡರು ಇರಬಹುದೆ ಎಂಬ ಪ್ರಶ್ನೆಗೂ ಉತ್ತರ ಕೊಡಬೇಕಾಗುತ್ತದೆ. ಪ್ರಾರಂಭದ ನೂರಿನ್ನೂರು ಪುಟ ಗಳು ನಮ್ಮ ಸಹನೆಯನ್ನು ಪರೀಕ್ಷಿಸುತ್ತವೆ. ಪಟ್ಟು ಹಿಡಿದು ಕೂತರೆ, ಕಾವ್ಯಕ್ಕೆ ತೊಡಗಿಸಿಕೊಂಡರೆ ಆಮೇಲೆ ಇಡೀ ಕಾವ್ಯ ನಮ್ಮನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆ. ಅಲ್ಲದೆ ಒಡ್ಸೆ, ಇಲಿಯಡ್, ಪ್ಯಾರಡೈಸ್ ಲಾಸ್ಟ್ ಮುಂತಾದ ನಮಗೆ ಅಪರಿಚಯದ ವಸ್ತುವಿರುವ ಮಹಾಕಾವ್ಯಗಳನ್ನೆ ಓದಿ ಮೆಚ್ಚುವುದು ಭಾರತೀಯರಿಗೆ ಸಾಧ್ಯವಿರು ವಾಗ 'ಭಾರತ ಸಿಂಧುರಶ್ಮಿ'ಯನ್ನು ಆಸ್ವಾದಿಸಲು ವಸ್ತು ಅಡ್ಡಿಯಾಗಲಾರದು.

ಸಮಗ್ರ ಭಾರತದ ಪ್ರಾಚೀನ ಯುಗದ ಸಾಂಸ್ಕೃತಿಕತೆ ಭೌಗೋಳಿಕತೆಯನ್ನು ತಬ್ಬಿಕೊಂಡಿರುವಷ್ಟೇ ಬಿಗಿಯಾಗಿ ಕಾವ್ಯವನ್ನೂ ಅಪ್ಪಿಕೊಂಡಿದ್ದರೆ 'ಭಾರತ ಸಿಂಧು ರಶ್ಮಿ' ಕಾವ್ಯವಾಗಿ ಈಗ ಪಡೆದಿರುವುದಕ್ಕಿಂತ ಹೆಚ್ಚಿನ ಯಶಸ್ಸು ಪಡೆಯುವುದು ಸಾಧ್ಯವಿತ್ತು.

ಭಿನ್ನಶೈಲಿಯ ವಿಶಿಷ್ಟ ಕಾದಂಬರಿ : 'ಮಾನವ'

ಅನಸೂಯ ರಾಮರೆಡ್ಡಿ

ನಾ. ಡಿಸೋಜರ 'ಮಾನವ' ಕನ್ನಡದ ಇತರ ಯಾವುದೇ ಕಾದಂಬರಿಗಿಂತ ತೀರಾ ಭಿನ್ನ ಶೈಲಿಯ ಒಂದು ವಿಶಿಷ್ಟ ಕಾದಂಬರಿ. ಸಂಪಿಗೆಹಳ್ಳಿ ಎಂಬ ಗ್ರಾಮದ ಕಥೆಯನ್ನು ಪೌರಾಣಿಕ, ಐತಿಹಾಸಿಕ ಹಾಗೂ ಸಮಕಾಲೀನ ನೆಲೆಗಳಲ್ಲಿ ನಿರೂಪಿಸುವುದು ಈ ಕಾದಂಬರಿಯ ವಸ್ತು. 'ಕಾಲ ಬದಲಾಗಿದೆ, ಜನಜೀವನ ಬದಲಾಗಿದೆ, ಸಂಸ್ಕೃತಿ ಸಂಪ್ರದಾಯಗಳು ಬದಲಾಗಿವೆ. ಆದರೆ ಮನುಷ್ಯ ಮಾತ್ರ ಹಾಗೇ ಇದ್ದಾನೆ' ಎಂಬುದನ್ನು ಈ ಮೂರೂ ನೆಲೆಗಳ ಚಿತ್ರಣದ ಮೂಲಕ ಕಾದಂಬರಿಕಾರರು ಪ್ರತಿಪಾದಿಸಿದ್ದಾರೆ. ಸಮಕಾಲೀನ ನೆಲೆಯಿಂದ ಆರಂಭವಾಗುವ ಈ ಕಾದಂಬರಿಯಲ್ಲಿ ಸಂಪಿಗೆಹಳ್ಳಿಯವರು ಅಭಿನಯಿಸಿದ ಯಕ್ಷಗಾನ ಹಾಗೂ 'ವಿಜಯನಗರದ ಸಾಮಂತ ದೊರೆಗಳು' ಎಂಬ ವಿಷಯದ ಬಗ್ಗೆ ಡಾಕ್ಟರೇಟ್‌ಗಾಗಿ ಪ್ರಬಂಧ ಸಿದ್ಧಪಡಿಸುತ್ತಿದ್ದ ರಾವ್‌ಜೀ ಅವರ ಅಧ್ಯಯನದ ಮೂಲಕ ಸಂಪಿಗೆಹಳ್ಳಿಯ ಪೌರಾಣಿಕ ಹಾಗೂ ಐತಿಹಾಸಿಕ ಕಥೆಗಳು ಬಿಚ್ಚಿಕೊಳ್ಳುತ್ತವೆ. ಈ ಮೂರೂ ನೆಲೆಗಳಲ್ಲಿ ದುಷ್ಟ ಹಾಗೂ ಶಿಷ್ಟ ಶಕ್ತಿಯ ನಡುವೆ ನೇರವಾದ ಹೋರಾಟ ನಡೆಯುತ್ತದೆ. ಪೌರಾಣಿಕ ಕಥೆಯ ರುದ್ರಬಾಹು, ಐತಿಹಾಸಿಕ ಕಥೆಯ

ಭೈರನಾಯಕ, ಸಮಕಾಲೀನ ಕಥೆಯ ಚಂದ್ರಪ್ಪಗೌಡ ದುಷ್ಟಶಕ್ತಿಯ ಪ್ರತೀಕವಾಗಿದ್ದಾರೆ. ಕ್ರಮವಾಗಿ ವಜ್ರಸೇನ, ಶ್ರೀಮಠದ ಸ್ವಾಮಿಗಳು ಹಾಗೂ ರಾಜಣ್ಣ ಸಾತ್ವಿಕ ಶಕ್ತಿಯ ಪ್ರತೀಕವಾಗಿದ್ದಾರೆ.

ಪುರಾಣ ಕಥೆಯ ಪ್ರಕಾರ ಸಂಪಿಗೆಹಳ್ಳಿಯ ಪೌರಾಣಿಕ ಹೆಸರು ಚಂಪಕಾವತಿ. ಇದರ ದೊರೆ ವಜ್ರಸೇನ. ಇವನಿಗೆ ಅನುರೂಪಳಾದ ಮಡದಿ ಚಂದ್ರಿಕಾ. ಚಂಪಕಾವತಿ ಶಾಂತಿ ಸುಭಿಕ್ಷಗಳಿಂದ ಇದ್ದಾಗ ರುದ್ರಬಾಹು ಎಂಬ ರಾಕ್ಷಸನ ರೂಪದಲ್ಲಿ ಆ ನಗರಕ್ಕೆ ಆಪತ್ತು ಬಂದೊದಗುತ್ತದೆ. ತನಗೆ ಯೋನಿಜರಿಂದ ಸಾವು ಬರಬಾರದು ಎಂದು ಶಿವನಿಂದ ವರಪಡೆದ ರುದ್ರಬಾಹು ಲೋಕಕಂಟಕನೂ ಪ್ರಜಾಪೀಡಿತನೂ ಆಗುತ್ತಾನೆ. ವಜ್ರಸೇನನು ಅವನಿಂದ ಆಗಲಿರುವ ಲೋಕಕಂಟಕವನ್ನು ತಪ್ಪಿಸುವ ಸಲುವಾಗಿ ದೀರ್ಘ ತಪಸ್ಸು ಕೈಗೊಳ್ಳಲು ಕಾಡಿಗೆ ತೆರಳುತ್ತಾನೆ. ಇವನು ತನ್ನನ್ನು ಸೋಲಿಸಲಿಕ್ಕಾಗಿಯೇ ತಪಸ್ಸು ಮಾಡುತ್ತಿದ್ದಾನೆ ಎಂಬುದನ್ನು ನಾರದನಿಂದ ತಿಳಿದ ರುದ್ರಬಾಹು ಅವನನ್ನು ಕೊಲ್ಲುವುದಕ್ಕಾಗಿ ಹೋಗುತ್ತಾನೆ. ಅಷ್ಟರಲ್ಲಿ ವಜ್ರಸೇನನ ಹೆಂಡತಿ ಚಂದ್ರಿಕೆ ಕಣ್ಣಿಗೆ ಬಿದ್ದಾಗ ಅವಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ವಜ್ರಸೇನನು ತಪಸ್ಸು ಮಾಡುತ್ತಿಲ್ಲ, ಇತರ ರಾಜರೊಂದಿಗೆ ಕೂಡಿಕೊಂಡು ನಿನ್ನ ಮೇಲೆ ಯುದ್ಧಕ್ಕೆ ಹೊರಟಿದ್ದಾನೆ ಎಂದು ಅವಳು ಸುಳ್ಳು ನುಡಿದಾಗ ರುದ್ರಬಾಹು ನಂಬುತ್ತಾನೆ. ತನ್ನ ವಿರುದ್ಧ ಸಂಚು ಹೂಡಿದ ಅಮಾತ್ಯರುಗಳನ್ನು ರುದ್ರಬಾಹು ಮದಗಜಗಳಿಂದ ತುಳಸಿ ಕೊಲ್ಲಿಸುತ್ತಾನೆ. ಪ್ರಜೆಗಳ ನಿರಂತರ ಶೋಷಣೆ ಆರಂಭವಾಗುತ್ತದೆ. ಲೋಕ ಚಕ್ರಾಧಿಪತಿಯಾಗಬೇಕು, ತ್ರಿಲೋಕಗಳಿಗೂ ಒಡೆಯನಾಗಬೇಕು, ತ್ರಿಮೂರ್ತಿಗಳನ್ನು ಗೆಲ್ಲಬೇಕು ಎಂಬ ಛಲ ಅವನಲ್ಲಿ ಮೂಡುತ್ತದೆ. ವಿಷ್ಣು, ವಜ್ರಸೇನನ ಮಾನಸರೂಪತಾಳಿ ಬಂದು ರುದ್ರಬಾಹುವನ್ನು ಸಂಹರಿಸುತ್ತಾನೆ. ದುಷ್ಟಶಕ್ತಿ ಹಾಗೂ ಶಿಷ್ಟಶಕ್ತಿಗಳ ನಡುವಿನ ಘರ್ಷಣೆ, ಪ್ರಜೆಗಳ ಸಂಕಷ್ಟ ಹಾಗೂ ಅಂತಿಮವಾಗಿ ಶಿಷ್ಟಶಕ್ತಿಗಳಿಗೇ ಜಯವಾಗುತ್ತದೆ ಎಂಬ ಆಶಾವಾದ ಈ ಕಥೆಯಲ್ಲಿ ಮೂಡಿದೆ.

ಇತಿಹಾಸದ ಕಥೆಯ ಪ್ರಕಾರ ಸಂಪಿಗೆಹಳ್ಳಿ ಚಂಪಕಾಪುರವಾಗಿದ್ದು ಕದಂಬರ ಆಡಳಿತಕ್ಕೆ ಒಳಪಟ್ಟಿತ್ತು. ಕ್ರಮೇಣ ಹೊಯ್ಸಳರ ಅಧೀನಕ್ಕೆ ಬಂದ ಈ ನಾಡು ಹೊಯ್ಸಳರ ಓರ್ವ ರಾಜಪ್ರತಿನಿಧಿಯ ಆಳ್ವಿಕೆಯಲ್ಲಿದ್ದು, ಹೊಯ್ಸಳರ ಪ್ರಾಬಲ್ಯ ಕಡಿಮೆಯಾದಂತೆ ತಾನೂ ಸ್ವತಂತ್ರವೆಂದು ಸಾರಿತು. ಚಂಪಕಾಪುರದ ರಾಜಪ್ರತಿನಿಧಿ ವೆಂಗಡದೇವ ತಾನೇ ದೊರೆ ಎಂದು ಸ್ವಯಂಘೋಷಣೆ ಮಾಡಿಕೊಂಡ. ಅವನ ಸೈನ್ಯದಲ್ಲಿಯೇ ಇದ್ದ ಹಿರಿಯ ದಳವಾಯಿ ಭೈರನಾಯಕ ಹಾಗೂ ಕಿರಿಯ ದಳವಾಯಿ ಶಿವಲಿಂಗಯ್ಯ ವೆಂಗಡದೇವನ ವಿರುದ್ಧ ಸಂಚುಹೂಡಿದರು. ಮೋಸದಿಂದ ಅವನನ್ನು ಕೊಂದು, ಬೇಡರಪಡೆ ಧಾಳಿ ನಡೆಸಿದಾಗ ವೆಂಗಡದೇವ ಮೃತನಾದ ಎಂಬ ಸುದ್ದಿಯನ್ನು ಪ್ರಜೆಗಳಲ್ಲಿ ಹಬ್ಬಿಸಿದರು. ಅವರ ಸಂರಕ್ಷಣೆಗಾಗಿಯೇ ತಾನು ರಾಜಪ್ರತಿನಿಧಿಯಾಗಿರುವುದಾಗಿ ತಿಳಿಸಿದ ಭೈರನಾಯಕ ತನ್ನ ಸಿಂಹಾಸನಾರೋಹಣ

ಸಂದರ್ಭದಲ್ಲಿ ಬಂದು ಗೌರವ ಸ್ವೀಕರಿಸಿ ಹರಸಬೇಕೆಂದು ಶ್ರೀಮಠದ ಸ್ವಾಮಿಗಳಿಗೆ 'ಓಲೆ ಕಳಿಸಿದಾಗ "ದುರುದ್ದೇಶದಿಂದ, ವಂಚನೆ ಕಪಟತನಗಳಿಂದ ಸ್ವಯಂಕಲ್ಪಿತವಾದ ಯಾವ ರಾಜ್ಯವನ್ನೂ ಯಾವ ನಾಯಕನನ್ನೂ ಶ್ರೀಮಠ ಒಪ್ಪುವುದಿಲ್ಲ. ಯಃಕಶ್ಚಿತ ನಾಯಕರ ಬಿರುದಾವಳಿಗಳಿಗಾಗಿ ಶ್ರೀಮಠ ಹಿಂದೂ ಕೈಚಾಚಿರಲಿಲ್ಲ, ಮುಂದೆಯೂ ಚಾಚುವುದಿಲ್ಲ" ಎಂಬ ಉತ್ತರವನ್ನು ಅಲ್ಲಿನ ಸ್ವಾಮಿಗಳು ಕೊಡುತ್ತಾರೆ. ಶ್ರೀಮಠಕ್ಕೆ ರಾಜ್ಯದ ಬೊಕ್ಕಸದಿಂದ ಹಣ ಬರುವುದು ನಿಂತುಹೋಗುತ್ತದೆ. ಶ್ರೀಮಠಕ್ಕೆ ಹಿಂದಿನ ರಾಜರುಗಳು ದತ್ತಿಬಿಟ್ಟಿದ್ದ ಜಮೀನನ್ನು ನಾಯಕ ಅರಮನೆಗೇ ಸೇರಿಸಿಕೊಳ್ಳುತ್ತಾನೆ. ಭಕ್ತಾದಿಗಳ ನೆರವಿನಿಂದಲೇ ಮಠ ನಡೆಯತೊಡಗಿದಾಗ ಅದನ್ನೂ ನಾಯಕ ಸಹಿಸದೆ ಮಠಕ್ಕೆ ಸಹಾಯ ಮಾಡಿದ ಪ್ರಜೆಗಳನ್ನು ಉಗ್ರವಾಗಿ ಶಿಕ್ಷಿಸಲಾಗುವುದು ಎಂದು ಪ್ರಕಟಿಸುತ್ತಾನೆ. ಬೊಕ್ಕಸವನ್ನು ತುಂಬುವುದಕ್ಕಾಗಿ ನಾಯಕನು ಅಕ್ಕಪಕ್ಕದ ರಾಜ್ಯಗಳನ್ನು ಸೂರೆ ಮಾಡುತ್ತಾನೆ. ಸುಂದರಿಯರನ್ನು ಅಪಹರಿಸಿ ತಂದು ಅಂತಃಪುರಕ್ಕೆ ಸೇರಿಸಿಕೊಳ್ಳುತ್ತಾನೆ. ಶ್ರೀಮಠದ ಸ್ವಾಮಿಗಳಿಂದ ಇಲ್ಲಿ ನಡೆಯುತ್ತಿರುವ ಹಾವಳಿಯನ್ನು ತಿಳಿದ ವಿಜಯನಗರದ ಅರಸರು ಅವರ ಸಾಮಂತರಾದ ಕೆಳದಿಯ ನಾಯಕರನ್ನು ಭೈರನಾಯಕರೊಂದಿಗೆ ಯುದ್ಧಕ್ಕೆ ಕಳುಹಿಸುತ್ತಾರೆ. ಯುದ್ಧದಲ್ಲಿ ಭೈರನಾಯಕ ಮಡಿದಾಗ ನಾಯಕನ ಪಟ್ಟಮಹಿಷಿ ಮನೋರಮೆ ಅಗ್ನಿಪ್ರವೇಶ ಮಾಡಿದರೆ ಅವನ ಉಪಪತ್ನಿಯರಾದ ಮದನಿಕೆ, ತೇಜಸ್ವಿನಿ ಮುಂತಾದವರು ಸಿಕ್ಕ ಸಂಪತ್ತನ್ನು ದೋಚಿಕೊಂಡು ತಮ್ಮ ಊರಿಗೆ ಹೋಗುತ್ತಾರೆ. ಪ್ರಧಾನ ದಂಡನಾಯಕ ಶಿವಲಿಂಗಯ್ಯ ಕ್ಷಮಾಯಾಚನೆ ಮಾಡಿ ಬದುಕಿಕೊಳ್ಳುತ್ತಾನೆ. ವಿಜಯನಗರದ ಅರಸರು ಶ್ರೀಮಠಕ್ಕೆ ಹಿಂದಿನ ಮಾನ, ಗೌರವಗಳನ್ನು ನೀಡಿ ಪ್ರಜೆಗಳ ಕ್ಷೇಮಾಭಿವೃದ್ಧಿಗೆ ಬೇಕಾದ ಹಲವು ಕಾರ್ಯಗಳನ್ನು ಕೈಗೊಳ್ಳುತ್ತಾರೆ. ಭೈರಾಪುರದ ಹೆಬ್ಬಾಗಿಲಲ್ಲಿ ಮನೋರಮೆಯ ಹೆಸರಿನಲ್ಲಿ ಮಹಾಸತಿ ಕಲ್ಲನ್ನು ನಿಲ್ಲಿಸಲಾಗುತ್ತದೆ. ಹೀಗೆ ವಿಜಯನಗರದ ಅರಸರ ಉದಾತ್ತ ಹೃದಯದ ನೆರಳಲ್ಲಿ ಶ್ರೀಮಠ ತಲೆಎತ್ತಿ ನಿಲ್ಲುತ್ತದೆ, ದುಷ್ಟರ ಶಿಕ್ಷೆಯಾಗುತ್ತದೆ.

ಮರಸುಳಿ ಡ್ಯಾಮ್ ಸೈಟಿಂದ ಸಂಪಿಗೆಹಳ್ಳಿ ರಾಣಿ ಹೊಂಡಕ್ಕೆ ಛಾನೆಲ್ ಸರ್ವೆ ಮಾಡುವ ಕೆಲಸಕ್ಕಾಗಿ ಶಿವಮೊಗ್ಗೆಗೆ ರಾಜಣ್ಣ ಬರುವುದರೊಂದಿಗೆ ಸಂಪಿಗೆಹಳ್ಳಿಯ ಸಮಕಾಲೀನ ಚಿತ್ರ ಬಿಚ್ಚಿಕೊಳ್ಳುತ್ತದೆ.

ಚಂದ್ರಪ್ಪಗೌಡ ಈ ಹಳ್ಳಿಯ ಮುಖಂಡ, ಅವರ ಪತ್ನಿ ಮಹಾದೇವಿ, ಉಪಪತ್ನಿ ಪದ್ಮಾವತಿ ಹಾಗೂ ನೆಚ್ಚಿನ ಬಂಟ ಮೂಳೆ ಮಾಯಣ್ಣ. ಚಂದ್ರಪ್ಪಗೌಡರು ದಳವಾಯಿ ಶಿವಲಿಂಗೇಗೌಡನ ಪೀಳಿಗೆಯವರು. ಚಂದ್ರಪ್ಪಗೌಡರ ತಂದೆ ಶ್ರೀಮಠದ ಜಮೀನಿನ ಗೇಣಿ ಮಾಡಿ ಬದುಕುತ್ತಿದ್ದ. ಆದರೆ ಸ್ಥಿತಿ ಸುಧಾರಿಸುತ್ತಾ ಬಂದಂತೆ, ತಂದೆಯ ನಿಧನಾನಂತರ ಮಠಕ್ಕೆ ದೇಣಿ ಒಪ್ಪಿಸುವುದನ್ನು ನಿಲ್ಲಿಸಿದ್ದಷ್ಟೆ ಅಲ್ಲ, ಆ ಜಮೀನೆಲ್ಲವು ತಮಗೇ ಸೇರಿದ್ದು, ಆ ಜಮೀನು ತಮಗೆ ಬಳುವಳಿಯಾಗಿ ಬಂದುದಕ್ಕೆ

ಒಂದು ತಾಮ್ರ ಶಾಸನವಿದೆ ಎಂದು ಗೌಡರು ಕೋರ್ಟಿನಲ್ಲಿ ದಾವೆ ಹಾಕುತ್ತಾರೆ. ಒಂದು ಸುಳ್ಳು ತಾಮ್ರ ಶಾಸನ ಸೃಷ್ಟಿಸುತ್ತಾರೆ. ಮಠಕ್ಕೆ ಬೆಂಕಿ ಹಚ್ಚಿಸಿ ಮಠದ ಅಮೂಲ್ಯ ದಾಖಲೆಗಳನ್ನೆಲ್ಲಾ ನಾಶಪಡಿಸುತ್ತಾರೆ. ತಮ್ಮ ಉಪಪತ್ನಿಗಾಗಿ ಊರ ವರಿಗೆಲ್ಲ ಸೇರಿದ್ದ ಸೊಪ್ಪಿನ ಬೆಟ್ಟದಲ್ಲಿ ಮನೆಕಟ್ಟಿಸಿದಾಗ ಅದನ್ನು ವಿರೋಧಿಸಿದ ಸೀತಾರಾಮಯ್ಯ ಜಿಲ್ಲಾಧಿಕಾರಿಗಳವರೆಗೂ ದೂರೊಯ್ದು ಮನೆಯನ್ನು ಅಕ್ರಮ ಎಂದು ಸಾಬೀತುಪಡಿಸಿದ್ದಕ್ಕಾಗಿ ಅವನನ್ನು ಹೊಡೆಸಿ, ಕಾಲುಗಳನ್ನು ಮುರಿಸುತ್ತಾರೆ. ಮೈಲಣ್ಣನ ಸುಂದರಿಯಾದ ಪತ್ನಿಯನ್ನು ತಮ್ಮ ಶ್ರೀಮಂತಿಕೆಯ ಪ್ರಭಾವದಿಂದ ವಶ ಪಡಿಸಿಕೊಂಡುದೇ ಅಲ್ಲದೆ ಮೈಲಣ್ಣನಿಗೆ ಕಣ್ಣು ಕುರುಡಾಗುವಂತಹ ಔಷಧವನ್ನೂ ಕೊಡಿಸುತ್ತಾರೆ. ನಾಲೆಯನ್ನು ಅರಮನೆಯ ಹೊಂಡಕ್ಕೆ ಜೋಡಿಸುವಾಗ ತಮ್ಮ ಕೆಲವು ಹೊಲಗಳು ಮುಳುಗಿಹೋಗುತ್ತವೆ ಎಂದು ತಿಳಿದಾಗ ಅಸಿಸ್ಟೆಂಟ್ ಇಂಜಿನಿಯರ್ ಹ್ಯಾರಿಗೆ ಸತ್ಕಾರ ಮಾಡಿ, ಲಂಚಕೊಟ್ಟು ಆ ಯೋಜನೆಯೇ ಮುಂದು ವರೆಯದಂತೆ ನೋಡಿಕೊಳ್ಳುತ್ತಾನೆ. ಹೀಗೆ ತಮ್ಮ ಆಸ್ತಿಯನ್ನು ಬೆಳೆಸಿಕೊಳ್ಳುತ್ತ ರಾಜಕೀಯವಾಗಿ ಪ್ರಬಲರಾಗುತ್ತಾರೆ. ಒಟ್ಟಿನಲ್ಲಿ ಚಂದ್ರಪ್ಪಗೌಡರು ಪುರಾಣ ಕಥೆಯ ರುದ್ರಬಾಹುವಿನ ಹಾಗೂ ಇತಿಹಾಸ ಕಥೆಯ ಭೈರಾನಾಯಕನ ಅಸುರೀ ಗುಣಗಳ ಆಧುನಿಕ ರೂಪ. ಸಂಪಿಗೆಹಳ್ಳಿಯ ಕಥೆಯ ಸೂತ್ರಧಾರಿ ಇವರೇ. ಪುರಾಣ ಮತ್ತು ಇತಿಹಾಸದ ಕಥೆಗಳಲ್ಲಿ ಅಸುರೀ ಶಕ್ತಿಯ ದಮನವಾಗುತ್ತವೆ. ಶಿಷ್ಟ ಶಕ್ತಿಗಳು ಉದ್ಧಾರವಾಗುತ್ತವೆ. ಆದರೆ ಸಮಕಾಲೀನ ಕಥೆಯಲ್ಲಿ ಶಿಷ್ಟ ಶಕ್ತಿಗಳೆಲ್ಲ ಕುಸಿಯುತ್ತವೆ. ಗೌಡರಂತಹ ಅಸುರೀ ಶಕ್ತಿಗಳಿಗೇ ವಿಜಯವಾಗುತ್ತದೆ. ಕಾದಂಬರಿಯ ಅಂತ್ಯದ ಘಟನೆಗಳೆಲ್ಲ ಇದನ್ನೇ ಸೂಚಿಸುತ್ತವೆ. ಛಾನೆಲ್ ಸರ್ವೆ ಕೆಲಸದ ಸೂಪರ್ ವೈಸರ್ ಆಗಿ ಬಂದ ವೈಗಳ್ಳ ಹಾಲಪ್ಪ. ಕುರಿಕೋಳಿಗಳನ್ನು ತಿಂದು ಕುಡಿದು ಮಜಾ ಮಾಡಿ ತೇಗಿದ ಅಸಿಸ್ಟೆಂಟ್ ಇಂಜಿನಿಯರ್ ಹ್ಯಾರಿ ಯಾವ ಕೆಲಸವನ್ನೂ ಮಾಡದಿರು ವುದಷ್ಟೆ ಅಲ್ಲ, ರಾಜಣ್ಣ ಕಷ್ಟಪಟ್ಟು ಪ್ರಾಮಾಣಿಕವಾಗಿ ಮಾಡಿದ ಸರ್ವೆ ವರದಿಯನ್ನು ಉಪಯೋಗವಿಲ್ಲದ್ದು ಎನಿಸುತ್ತಾರೆ. ಇಡೀ ಯೋಜನೆಯೇ ಸ್ಥಗಿತಗೊಳ್ಳುವಂತೆ ಮಾಡುತ್ತಾರೆ. ಗೌಡರ ತಲೆಯಲ್ಲಿ ಬಂದ ದುರಾಲೋಚನೆಗಳನ್ನೆಲ್ಲ ಕೃತಿಗಿಳಿಸುವ ಮೂಳೆ ಮಾಯಣ್ಣನಿಗೆ ಸಮಾಜದಲ್ಲಿ ಉತ್ತಮ ಸ್ಥಾನವೇ ದೊರೆಯುತ್ತದೆ. ಆದರೆ ಎಲ್ಲ ದಾಖಲೆಗಳಿದ್ದೂ ದುಷ್ಟಶಕ್ತಿಗಳ ವಿರುದ್ಧ ಸೋಲನುಭವಿಸಿದ ಶ್ರೀಮಠದ ಸ್ವಾಮಿಗಳು ದೇಶಾಂತರ ಹೋಗುತ್ತಾರೆ. ಅನೇಕ ರಾಜರುಗಳ ಆಶ್ರಯದಲ್ಲಿ ಹಲವು ಗೌರವ ಬಿರುದುಗಳನ್ನು ಪಡೆದು ರಾಜಮರ್ಯಾದೆಗಳಿಂದ ಮೆರೆಯುತ್ತಿದ್ದ ಶ್ರೀಮಠ ಒಂದು ಸಾಮಾನ್ಯ ಗುಡಿಯ ರೂಪಕ್ಕೆ ಬಂದಿಳಿಯುತ್ತದೆ. ಗೌಡರ ಧರ್ಮ ಪತ್ನಿ ಮಹಾದೇವಿ ಕಾಲು ಮುರಿದುಕೊಂಡು ಹಾಸಿಗೆ ಹಿಡಿದರೆ ಕೈ ಹಿಡಿದ ಗಂಡನಿಗೆ ಕೈಕೊಟ್ಟು ಗೌಡರಿಗೆ ಉಪಪತ್ನಿಯಾದ ಪದ್ಮಾವತಿ ಸಮಾಜದ ಗಣ್ಯ ವ್ಯಕ್ತಿಯಾಗಿ ಮೆರೆಯುತ್ತಾಳೆ. ಊರವರ ಹಿತಕ್ಕಾಗಿ ಗೌಡರ ವಿರುದ್ಧ ಹೋರಾಡಿ ಕಾಲು ಕಳೆದು

ಕೋಡ ಸೀತಾರಾಮಯ್ಯನವರು ಅನಾರೋಗ್ಯಪೀಡಿತರಾಗುತ್ತಾರೆ. ಬೈರಾಪುರದ ಮೈಲಣ್ಣ ಅರೆತಲೆ ನೋವು ತಡೆಯಲಾರದೆ ಕೆರೆಗೆ ಹಾರಿ ಪ್ರಾಣ ಕಳೆದುಕೊಳ್ಳುತ್ತಾನೆ. ಸಂಪಿಗೆಹಳ್ಳಿ, ಮಂತ್ರಿಗಳಾಗಿ ಬರಲಿರುವ ಚಂದ್ರಪ್ಪಗೌಡರ ಸ್ವಾಗತಕ್ಕೆ ಅಣಿಯಾಗುತ್ತದೆ.

ಹೀಗೆ ಚಂದ್ರಪ್ಪಗೌಡರಂತಹ ಕುಟಿಲ ವ್ಯಕ್ತಿಯ ಕುತಂತ್ರಗಳಿಗೆ ಸಂಪಿಗೆಹಳ್ಳಿಯ ಬದುಕೇ ಬಲಿಯಾಗುತ್ತದೆ.

ನಾ. ಡಿಸೋಜರವರು ಈ ಕಾದಂಬರಿಯ ನಿರೂಪಣೆಗೆ ಒಂದು ನವೀನ ತಂತ್ರ ಅಳವಡಿಸಿಕೊಂಡು ಯಶಸ್ವಿಯಾಗಿದ್ದಾರೆ. ಇದು ಸಂಪಿಗೆಹಳ್ಳಿಯ ಕಥೆಯನ್ನು ಪೌರಾಣಿಕ, ಐತಿಹಾಸಿಕ ಹಾಗೂ ಸಮಕಾಲೀನ ನೆಲೆಗಳಲ್ಲಿ ಪ್ರತ್ಯೇಕವಾಗಿ ನಿರೂಪಿಸುತ್ತದೆ. ಎಂದಷ್ಟೆ ಮೊದಲ ನೋಟಕ್ಕೆ ಅನಿಸಿದರೂ ಅಷ್ಟಕ್ಕೇ ಇದು ಸೀಮಿತವಾಗಿಲ್ಲ ಎಂಬುದು ಗಮನಾರ್ಹ. ಈ ಮೂರರಲ್ಲಿ ಪ್ರತಿಯೊಂದು ನೆಲೆಯ ಕಥೆಯೂ ಪ್ರತ್ಯೇಕ ವಿಶ್ಲೇಷಣೆಗೆ ಅರ್ಹವಾಗುವಷ್ಟು ಸ್ವಯಂಪೂರ್ಣವಾಗಿದೆ. ಆದರೆ ಈ ಮೂರರ ನಡುವೆ ಒಂದು ಅವಿನಾಸಂಬಂಧವೂ ಇದೆ. ಇವುಗಳನ್ನು ಪರಸ್ಪರ ತುಲನೆ ಮಾಡಿದಾಗ ನಮಗೆ ಸಿಗುವ ಚಿತ್ರವೇ ವಿಶಿಷ್ಟ. ಕಾಲ ಬದಲಾದರೂ ಸಂಸ್ಕೃತಿಯ ವಿವರಗಳು ಬದಲಾದರೂ ಮಾನವನ ಮೂಲ ಸ್ವಭಾವ ಒಂದೇ ರೀತಿಯಾಗಿರುತ್ತದೆ ಎಂಬುದನ್ನು ನಿರೂಪಿಸಿದ್ದರೂ ಸಮಕಾಲೀನ ಜೀವನದಲ್ಲಿ ಅಸುರೀ ಶಕ್ತಿಗೇ ಜಯವಾಗಿದೆ ಎಂಬ ಧ್ವನಿಯೂ ಹೊಮ್ಮಿದೆ. ಉಳಿದೆರಡು ನೆಲೆಗಳಲ್ಲಿ ದುಷ್ಟಶಕ್ತಿಗಳಿಗೆ ಶಿಕ್ಷೆ ಆಗಿಯೇ ಆಗುತ್ತದೆ. ಕಥೆಯ ಅಂತ್ಯದಲ್ಲಿ ನೆಮ್ಮದಿ ಮೂಡುತ್ತದೆ. ಆದರೆ ಪ್ರಸ್ತುತ ನೆಲೆಯಲ್ಲಿ ಈ ಆಶಾವಾದಕ್ಕೆಡೆಯಿಲ್ಲ. ಮಾನವ ಅಧೋಗತಿಯತ್ತ ಸಾಗುತ್ತಿದ್ದಾನೆ ಎಂಬ ನಿರಾಶೆ ಇಲ್ಲಿ ಸೂಚಿತವಾಗಿದೆ.

ಆಯಾ ನೆಲೆಯ ನಿರೂಪಣೆಗೆ ತಕ್ಕ ಶೈಲಿಯನ್ನು ಬಳಸುವಲ್ಲಿಯೂ ಡಿಸೋಜಾರು ಯಶಸ್ವಿಯಾಗಿದ್ದಾರೆ. ಪಾತ್ರ ಚಿತ್ರಣದಲ್ಲಿಯೂ ಡಿಸೋಜಾ ಅವರ ಕೌಶಲ ವ್ಯಕ್ತವಾಗುತ್ತದೆ. ಆಯಾ ನೆಲೆಯ ಕಥೆಯ ಹರಹು ಬಹಳ ಕಡಿಮೆಯಿದ್ದರೂ ಆ ಮಿತಿಯಲ್ಲಿಯೇ ಪಾತ್ರಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿವೆ. ಪೌರಾಣಿಕ ಕಥೆಯ ರುದ್ರಬಾಹು, ವಜ್ರಸೇನ, ಐತಿಹಾಸಿಕ ಕಥೆಯ ಭೈರಾನಾಯಕ, ಶಿವಲಿಂಗಯ್ಯ, ಶ್ರೀಮಠದ ಸ್ವಾಮಿಗಳು, ಸಮಕಾಲೀನ ಕಥೆಯ ರಾಜಣ್ಣ. ಕೃಷ್ಣಯ್ಯ, ಕೃಷ್ಣಾಚಾರ, ಮಳಿ ಮಾಯಣ್ಣ, ಹಾಲಪ್ಪ, ಹ್ಯಾರಿ, ಚಂದ್ರಪ್ಪಗೌಡ, ರಾವ್‌ಜಿ– ಹೀಗೆ ಈ ಚಿಕ್ಕ ಕಾದಂಬರಿಯಲ್ಲಿ ಇಷ್ಟೊಂದು ಪಾತ್ರಗಳಿದ್ದರೂ ಕಾದಂಬರಿಕಾರರು ಕೊಡುವ ಕೆಲವೇ ವಿವರಗಳು ಅವುಗಳನ್ನು ಜೀವಂತವಾಗಿಸುತ್ತವೆ. ಸರ್ಕಾರೀ ನೌಕರರ ಮೈಗಳ್ಳತನ, ಅಧಿಕಾರಿಗಳ ಸ್ವಾರ್ಥ ನಮ್ಮ ಜನರಿಗೆ ಐತಿಹಾಸಿಕ ಸ್ಮಾರಕಗಳ ಬಗೆಗಿರುವ ಅವಜ್ಞೆ - ಇವುಗಳನ್ನು ವ್ಯಂಗ್ಯವಾಗಿ ಹೇಳಿರುವ ರೀತಿ ಪರಿಣಾಮಕಾರಿಯಾಗಿದೆ. ಸರ್ಕಾರೀ ಕೆಲಸಗಳ ನಿಧಾನ ಪ್ರವೃತ್ತಿಯನ್ನೂ ಚೆನ್ನಾಗಿ ವಿಡಂಬಿಸಿದ್ದಾರೆ.

ಡಿಸೋಜರವರ 'ಮಾನವ' ನವೀನ ತಂತ್ರ, ಮನಮುಟ್ಟುವ ಶೈಲಿ, ವೈಚಾರಿಕತೆ, ವಿಡಂಬನೆ, ಪಾತ್ರಚಿತ್ರಣ ಮುಂತಾದ ಎಲ್ಲ ದೃಷ್ಟಿಗಳಿಂದಲೂ ಒಂದು ಉತ್ತಮ ಕಾದಂಬರಿ. ಮಾನವನ ಮನಸ್ಸು ಎಲ್ಲ ಕಾಲಕ್ಕೂ ಹಾಗೇ ಇರುತ್ತದೆ ಎಂಬ ಸತ್ಯವನ್ನೇ ಆಧರಿಸಿದ ಈ ಕಾದಂಬರಿ ಬಹಳ ಕಾಲದವರೆಗೂ ಸಮಕಾಲೀನವಾಗಿರುವುದರಲ್ಲಿ ಸಂದೇಹವಿಲ್ಲ.

ಭುಜೇಂದ್ರ ಮಹೀಶವಾಡಿ : 'ಹಂಸಮಿಥುನ'

ಎಂ.ಎ. ಜಯಚಂದ್ರ

ಸಮಕಾಲೀನ ಕವಿಗಳಲ್ಲಿ ಬಿ. ಬಿ. ಮಹೀಶವಾಡಿ ಅವರಿಗೆ ಉತ್ತಮ ಸ್ಥಾನವಿದೆ. ಇವರ 'ಮಾಯಾಮಂದಿರ', 'ಹಾಲು-ಹಣ್ಣು', 'ಕಟ್ಟುವ ಕೈ' ಬಂದನಂತರ ಪ್ರಕಟಗೊಂಡ ನಾಲ್ಕನೇ ಕಾವ್ಯ 'ಹಂಸಮಿಥುನ'. ಇದು ಕಥನ ಕಾವ್ಯ. ವಸ್ತು ಪ್ರಣಯವಾದರೂ ಸಮಕಾಲೀನ ಪ್ರಜ್ಞೆಯ ಸಾಂಕೇತಿಕ ತಿರುವುಳ್ಳ, ತಿರುಳುಳ್ಳ ಕಾವ್ಯ.

ಈ ಕಾವ್ಯದಲ್ಲಿ ಎಂಟು ಭಾಗಗಳಿವೆ. ಒಂದೊಂದು ಭಾಗವನ್ನು 'ಹೆಜ್ಜೆ' ಎಂದು ಕರೆದಿದ್ದಾರೆ. ಎಂಟು ಹೆಜ್ಜೆಗಳಲ್ಲಿ ನಾಲ್ಕು ಸಾಲಿನ 333 ಪದ್ಯಗಳು ಅಡಕವಾಗಿವೆ. ಪ್ರತಿ ಪದ್ಯದ ಒಂದು ಮತ್ತು ಮೂರನೇ ಸಾಲಿನಲ್ಲಿ ಐದು ಮಾತ್ರೆಯ ಎರಡು ಗಣವಿದ್ದರೆ, ಎರಡು ಮತ್ತು ನಾಲ್ಕನೆಯ ಸಾಲಿನಲ್ಲಿ ಐದು ಮಾತ್ರೆಯ ಎರಡು ಗಣ ಮತ್ತು ಒಂದು ಲಘುವಿದೆ. ಅಲ್ಲದೆ ಈ ಎರಡು ಸಾಲುಗಳಲ್ಲಿ ಅಂತ್ಯಪ್ರಾಸವಿದೆ. ಈ ಚತುಷ್ಪಾದದ ಪದ್ಯವನ್ನು ದ್ವಿಪಾದದಲ್ಲಿ ಬರೆದರೆ, ಒಂದೊಂದು ಪಾದದಲ್ಲಿ ಐದು ಮಾತ್ರೆಯ ನಾಲ್ಕು ಗಣವೂ ಒಂದು ಲಘುವೂ ಅಂತ್ಯಪ್ರಾಸವೂ ಗೋಚರಿಸುತ್ತದೆ. ಇಲ್ಲಿ ಉದಾಹರಿಸುವಾಗ ಪದ್ಯಗಳನ್ನು ದ್ವಿಪಾದದಲ್ಲೆ ನೀಡಲಾಗಿದೆ.

ಈ ಕಥನ ಕಾವ್ಯದ ಕತೆಯನ್ನು ಕವಿ ಸಂಗ್ರಹವಾಗಿ 'ಅರಿಕೆ'ಯಲ್ಲಿ ಹೀಗೆ ಹೇಳಿದ್ದಾರೆ– "ಹಂಸಮಿಥುನ. ಕಲ್ಪಿತ ಪ್ರಣಯದ ವಾಸ್ತವ ಕಥೆ. ಶಾಂತಿನಾಥ–ಎಂಜಲೀನಾ ಇದರ ಕಥಾ ನಾಯಕ–ನಾಯಕಿಯರು. ಅವರ ಪ್ರಣಯ ಜೀವನದ ಆಧುನಿಕ ಚಿತ್ರಣ ಇಲ್ಲಿದೆ. ಅವರು ಅಂತರ್ಜಾತಿಯ ವಿವಾಹಕ್ಕೆ ಆಸ್ಪದ ಸಿಕ್ಕದೆ ನರಳುವ ಜೀವಿಗಳು : ತಮ್ಮ ತಾಯಿತಂದೆಗಳ ಮನಸ್ಸು ನೋಯಿಸಿದ ನೊಂದ ಜೀವಿಗಳು. ಪರಿಹಾರ ಕಾಣದೆ ಕೊನೆಗೆ ಕಣ್ಣುತಪ್ಪಿಸಿ ಓಡಿಹೋದರು. ಎಲ್ಲೋ ಗುಪ್ತ ಜೀವನ ಸಾಗಿಸಿದರು. ಕೆಲವು ದಿನಗಳ ಮೇಲೆ ಎಂಜಲಿನಾ ಹೆಣ್ಣು ಹೆತ್ತು ಹೆರಿಗೆ ನೋವಿನಿಂದ ಸತ್ತು ಹೋದಳು. ಕಾಣದ ಕ್ರೂರ ಕೈಯೊಂದರಿಂದ ಶಾಂತಿನಾಥ ಗುಂಡಿಗಾಹುತಿಯಾದ. ಹುಟ್ಟಿದ ಕೂಸು ಮಾತ್ರ ಪರದೇಶಿಯಾಯ್ತು."

ಇದು ಕಥೆಯ ಹಂದರ. ಇದನ್ನು ಕೆಲವು ಭಾವನೆಗಳಿಗೆ ಸಂಕೇತಿಸಿರುವುದಾಗಿ ಕವಿ ಹೀಗೆ ಸೂಚಿಸಿದ್ದಾರೆ – "ಪೂರ್ವ–ಪಶ್ಚಿಮ ಸಂಸ್ಕೃತಿಗಳ ಸಂಗಮ ಈ ಪ್ರಣಯ ಸಂಕೇತ. ತಾಯಿ ತಂದೆಗಳನ್ನು ಕಳೆದುಕೊಂಡ ಪರದೇಶಿ ಕೂಸು ಭಾರತ ದೇಶದ ಸ್ವಾತಂತ್ರ್ಯದ ಪ್ರತೀಕ. ಶಕುಂತಲೆಯನ್ನು ಸಂರಕ್ಷಿಸಲು ಕಣ್ವರು ಬಂದಂತೆ, ಈ ಕೂಸನ್ನು ರಕ್ಷಿಸಲು ಅದಾವ ಕಣ್ಣುಳ್ಳ ಕಣ್ವನು ಬರುವನೊ ? ಅವನ ಆಕ್ಕರೆಯಲ್ಲಿ ಬೆಳೆದು ನಿಂತ ಕನ್ಯೆ ಆದಾವ ದುಷ್ಯಂತನನ್ನು ವರಿಸಲಿರುವಳೊ ? ಆ ದಂಪತಿಗಳ ಹೊಟ್ಟೆಯಿಂದ ಹುಟ್ಟಿಬರುವ ಭರತನಾದರೂ ಭಾರತವನ್ನು ಉದ್ಧರಿಸದಿರುವನೆ ? ಕಾಯ್ದು ನೋಡಬೇಕು."

ಇಂದು ಭಾರತದಲ್ಲಿ ಪೂರ್ವ-ಪಶ್ಚಿಮಗಳ ಸಮ್ಮಿಶ್ರ ಸಂಸ್ಕೃತಿ ಮೂಡಿಬರುತ್ತಿದೆ. ಅದು ಸಿಹಿಯಿರಲಿ ಕಹಿಯಿರಲಿ ಅದನ್ನು ಅನುಭವಿಸಿಯೇ ತೀರಬೇಕು. ಎರಡು ಸಂಸ್ಕೃತಿಗಳ ಉತ್ತಮಾಂಶಗಳು ಹದವಾಗಿ ಬೆರತು ನವ ಸಂಸ್ಕೃತಿಯೊಂದು ಉದಯಿಸಿ ನವಭಾರತವನ್ನು ಪ್ರಗತಿ ಪಥದಲ್ಲಿ ಮುನ್ನಡೆಸಬೇಕಾಗಿದೆ. ಈ ಆಶಯವನ್ನು ಪ್ರಣಯದ ಮಾಧ್ಯಮದಲ್ಲಿ ಹೇಳ ಹೊರಟಿರುವ ಕಾವ್ಯ– 'ಹಂಸಮಿಥುನ'

> ಹದಿನಾರು ವರುಷದಾ ನವತರುಣಿ ಎಂಜಲೀನು
> ಓದು ನಿಲ್ಲಿಸಿ ಹೊರಗೆ ನೋಡುತಿರೆ ಉದಯಭಾನು !

ಕಾವ್ಯದ ಮೊದಲನೇ ಪದ್ಯವಿದು. ನಾಯಕಿ ಎಂಜಲೀನಾ, ಷೋಡಶಿ, ಪ್ರಾಯಕ್ಕೆ ತಕ್ಕ ಸುಂದರ ಸ್ವಪ್ನಗಳು ಆವಳಲ್ಲಿ ಮೂಡುತ್ತಿವೆ. ಮೂಡಣದಲ್ಲಿ ರವಿ ಮೂಡಿದಾಗ ಭುವಿಯಲ್ಲಿ ಉಂಟಾಗುವ ಚಲುವಿನಂತೆ ಆ ಕನಸುಗಳಿವೆ. ಆಗ ಅವಳು,

> ಕಲ್ಪಲತೆಯಂತಿಹಳು ಆಸನದ ಹಾಸಿನಲ್ಲಿ
> ಮಿಂಚಾಲನೆಸೆದಂತೆ ಸೃಷ್ಟಿಯಲಿ ದೃಷ್ಟಿಚಲ್ಲಿ !
> ಧ್ಯಾನಿಸುವಳೇನನ್ನೋ ಚಿಂತಿಸುವಳೇತಕೇನೊ
> ಕಾಣುವುದೆ ಬೇರೊಂದು. ಕೇಳುವುದು ಅವುದನ್ನೊ ?

ಇವಳ ಹರೆಯದ ಕನಸು ನಿತ್ಯದ ಮನೆಯ ಶಿಷ್ಟಾಚರದಲ್ಲು ತಪ್ಪಿ ನಡೆಯು ವಂತೆ ಮಾಡಿದೆ. ಇದರಿಂದ ತಂದೆಯಿಂದ ಟೀಕೆಯೂ ಬರುವುದು. ಆತ ವೈದ್ಯ, ಶ್ರೀಮಂತ, ಬುದ್ಧಿವಂತ. ಸೊಗಸಾದ ತೋಟದಲ್ಲಿ ಅರಮನೆಯಂತಹ ಮನೆ ಕಟ್ಟಿ ಸಿದ್ದಾನೆ. ಬಲು ರಸಿಕ, ಆದರೆ ಧನ ಪಿಶಾಚಿಗೆ ದಾಸ. ಆದ್ದರಿಂದಲೇ

ಹಣಬರುವ ಕಡೆಗವನು ಕೈಯೊಡ್ಡಿ ನಿಲುವುದುಂಟು !
ಹಣವಿರದ ರೋಗಿಯನು ಕಡೆಗಣಿಸುತಿರುವುದುಂಟು !
'ಕೊಡಲಾರನವ ಬಡವ ಪುಣ್ಯವನು ಕಟ್ಟಿಕೊಳ್ಳಿ
'ಏನಾರೆ ಮಾಡಿವನ ಗುಣಪಡಿಸಿ ಮನೆಗೆ ತಳ್ಳಿ'
ಎಂದವನ ಕೇಳುವನು 'ಪುಣ್ಯವನು ಕೊಂಡುಕೊಳ್ಳಿ'
ನಿಮ್ಮ ಬಳಿ ಹಣವು ಇರೆ ಅದನೆಮಗೆ ನೀಡಿ ತಳ್ಳಿ

ಇಂಥ ತಂದೆಗೆ ಐವರು ಮಕ್ಕಳು, ಮೂರು ಹೆಣ್ಣು, ಎರಡು ಗಂಡು. ಮೊದಲಿಬ್ಬರು ಪುತ್ರಿಯರು ಹರೆಯದಲ್ಲಿ ಮನೆಬಿಟ್ಟು ಓಡಿಹೋಗಿದ್ದಾರೆ. ಇರುವವರಲ್ಲಿ ಎಂಜಲೀನೇ ಹಿರಿಯಳು. ಅವಳ ಅಕ್ಕಂದಿರ ರೀತಿಗಾಗಿ ಅವಳ ತಂದೆಯ ಮನ ನೊಂದಿತ್ತು. ಬೇರೆ ದಾರಿ ಇಲ್ಲದಿದ್ದುದರಿಂದ ಮೆತ್ತಗಾಗಿ ಕುಳಿತಿದ್ದ. ಆದರೆ ಎಂಜಲೀನಳ ಬಗ್ಗೆ ಎಚ್ಚರ ವಹಿಸಿದ್ದ. ಅವಳ ಅಕ್ಕಂದಿರ ಹಾಗೆ ಅವಳ ವಿದ್ಯಾಭ್ಯಾಸವು ಸೊಗಸಾಗಿ ಸಾಗಿತ್ತು. ಆದರೆ,

ಹಗಲಿರುಳು ಓದುವಳು ಆದರಾವುದೋ 'ಬ್ರೇಕ್ಕು' !
ಅತೃಪ್ತ ಬಯಕೆ ಬಳಿ ಸುಳಿಸುಳಿದು ತಪ್ಪೆ ದಿಕ್ಕು !
ನನಗೇನು ಬೇಕದನೆ ನಾ ತಿಳಿಯೆ ಮಾಡಲೇನು ?
ಮೂಕ ವೇದನೆಯನ್ನೆ ಮೌನದಲಿ ಹಾಡಲೇನು ?

ಎನಿಸುತ್ತಿದೆ. ಪುಸ್ತಕದ ವಿಷಯಗಳ ಓದಿಗೆಂದು ಅವಳನ್ನು ಕರೆಯುತ್ತಿದ್ದರೆ, ಪುಸ್ತಕದ ಗೊಂದಲವು ಅವಳನ್ನು ಬೇರೊಂದು ಹಾದಿಗೆ ನೂಕುತ್ತಿದೆ. ಈ ವಾಸನೆ ತಂದೆಯ ಮೂಗಿಗೆ ಬಡಿದಾಗ, ಮಗಳ ಭವಿಷ್ಯ ಹಾಳಾಗದಿರಲೆಂದು ಮುಂಜಾಗರೂಕತೆ ವಹಿಸುತ್ತಾನೆ. ಆದರೂ

ವೈದ್ಯರಾದರು ಮಗಳ ಬೇನೆಯನೆ ತಿಳಿಯಲಿಲ್ಲ !
ಮನದ ಶಾಂತಿಗೆ ಮಾರ್ಗ ಹೊರಗೆಲ್ಲು ಹೊಳೆಯಲಿಲ್ಲ !

ಅವರ ಮನೆ ಮಲೆನಾಡ ನಿಸರ್ಗದಿಂದ ಆವೃತವಾಗಿದೆ. ಸುತ್ತಮುತ್ತಲ ಹೊಲ ತೋಟ ಕಣ್ಣಿಗೆ ರಮ್ಯ.

ನೈಸರ್ಗನಾರಿ ಎದೆ ಮಲೆಯ ತುದಿ ನಿಮಿರಿದಂತೆ
ಹಿನ್ನೆಲೆಯ ದಿನ್ನೆ ನೆಲ ಮುಗಿಲೆದೆಯ ಕೆಣಕುವಂತೆ
ನಿಂತಿಹುದು ಈ ಮನೆಯು ಕಾಮನೆಯ ಕಳಸದಂತೆ !
ಕಂಡವರ ಕಣ್ಮೀನು ಹರಿದಾಡಿ ಈಸುವಂತೆ !

ಆ ಮನೆಯುವರು ಶ್ರೀಮಂತರು. ಎಷ್ಟರ ಮಟ್ಟಿಗೆ ?

ಈ ಮನೆಯು ಕಾಮನೆಯು ಕಣ್ನೋಟ ಬಾಣಗಳಿಗೆ
ಬಲಿಯಾದ ವಸ್ತುಗಳು ಬೀಳುವವು ಬಂದು ಬಳಿಗೆ

ಯಾರೆಂದರವರಿಲ್ಲ ಬರುವರಿದೊ ತಂತಿಯಟ್ಟೆ ?
'ಏನೆಂದರದನೆ ತಾ ತರಿಸಲಿದೆ ಅಂಚೆಕಟ್ಟೆ !

ಮುನ್ನೀರಿನಾಚೆಗೂ ಮರುನುಡಿಯ ಕಳಿಸುತಿಹರು !
ಮನೆ ಹೊಸ್ತಿಲೀಚೆಗೂ ಕಿವುಡುನುಡಿ ಬಳಸುತಿಹರು !

ಇಂಥ ಶ್ರೀಮಂತ ಮನೆಯ ಎಂಜಲೀನು ತನ್ನ ಮನೆಯ ಸುತ್ತಲಿದ್ದ ಹೂ ತೋಟ ಅವಳನ್ನು ಕೈ ಬೀಸಿ ಕರೆಯಿತು. ಕೊಳದ ಅರಸಂಚೆಯಂತೆ ತೇಲುತ್ತ ಅತ್ತ ನಡೆದಳು. ಅಲ್ಲೊಬ್ಬ ನವತರುಣ ಬಾವಿಯಲ್ಲಿ ಬೊಗಸೆಯಿಂದ ನೀರು ಕುಡಿಯುತ್ತಿದ್ದ. ಆತನ ಕಣ್ಣ ನೋಟ ಇವಳನ್ನೇ ಕುಡಿಯುತ್ತಿರುವಂತೆ ಇತ್ತು. ಕಣ್ಣು ಕತ್ತಲಿಸಿ ಬೀಳುತ್ತಿದ್ದವಳನ್ನು ಆತ ಹಿಡಿದುಕೊಂಡ. ಆಗ 'ನನ್ನ ಮೈಗವನ ಕೈ ತಾಗಿರಲು ಹೇಳಲೇನು ! ವ್ಯಥೆ ಎನಲೊ ಸವಿಸುಖದ ಕಥೆ ಎನಲೊ ಅರಿಯೆ ನಾನು' ಎನಿಸಿತು ಅವಳಿಗೆ. 'ಅನುಭವದ ಅಭಿವ್ಯಕ್ತಿ ನಾಲಗೆಗೆ ನಿಲಕ'ದಾಯಿತು.

ತಾನು 'ಅರಿವಳಿದು ಬಿದ್ದನಂತರ ನಡೆದ ಘಟನೆಯೇನೆಂದು, ತನ್ನ ಮೆಚ್ಚಿನ ಮನೆಯಾಳು ಗೌರಮ್ಮನನ್ನು ಕೇಳಿದಳು. ಆಕೆ, ಆ ನವತರುಣ ಎಂಜಲೀನಳನ್ನು ಎತ್ತಿಕೊಂಡು ಕರೆತಂದುದು, ವಾಯು ವಿಹಾರಕ್ಕೆ ಹೋಗಿದ್ದ ಮನೆಯವರೆಲ್ಲ ಬಂದ ಮೇಲೆ ಈಕೆಯ ವಿಷಯ ತಿಳಿದುದು, ಈಕೆಯ ತಂದೆ ಸೂಜಿಮದ್ದು ನೀಡಿದನಂತರ ಉಸ್ಸೆಂದು ಕಣ್ಣು ತೆರೆದುದು ಮುಂತಾದ ವಿಷಯಗಳನ್ನೆಲ್ಲ ಹೇಳಿದಳು. ಆಗ,

ಆ ತರುಣನಾರವ್ವ ? ಅವನೆನ್ನ ತಂದವೇಳೆ
ಮನೆಮಂದಿ ನೋಡಿದರೊ 'ಏನಾಯ್ತು, ಹೇಳು ಹೇಳೆ !

ನನ್ನ ಗತಿ ಇಂತಾದ ಕತೆ ತಂದೆ ತಿಳಿದರೇನು ?
ಯಾಕಾರೆ ಹೀಗಾಯ್ತೊ ? ಕೇಳಿದರೆ ಹೇಳಲೇನು ?

ಎಂದು ಕೇಳಿದಾಗ, ಆ ವೃದ್ಧೆ ಏನೇನೊ ಸುಳ್ಳು ಪೊಳ್ಳು ಹೇಳಿದ್ದೇನೆ, ನೀನೇನು ಹೆದರಬೇಡ, ಕೇಳಿದರೆ,

ಓದೋದಿ ಬೇಸತ್ತು ಹೊರಗಡೆಗೆ ನಿಂತು ನಾನು
ಗೋರಿಯೆಡೆ, ನೋಡುತ್ತಿರೆ, ಕರಿದೇನೋ ಬಂತು ಎನ್ನು

ಮೈಮೇಲೆ ಬಂದೊಡನೆ, ಚಿಟ್ಟೆಂದು ಚೀರಿಕೊಂಡೆ !
ನಡುನಡುಗಿ ಭಯಗೊಂಡು ಕೆಳಗುರುಳಿ ಬಿದ್ದುಕೊಂಡೆ !

ಎಂದಿಷ್ಟು ಹೇಳುವಂತೆ ತಾಕೀತು ಮಾಡಿದಳು. ತಂದೆ ಕೇಳಿದಾಗ ಮಗಳು ಇದೇ ರೀತಿ ಹೇಳಿದಳು. ಆಗ 'ಎಲ್ಲರಿಗೂ ದಿಗಿಲಾಯ್ತು'. ಹೀಗೆ ಕೆಲ ದಿವಸ ಕಳೆದುಹೋಯ್ತು.

ಎಂದಿನಂತೆ ನಗೆನಲಿವು ಆ ಮನೆಯಲ್ಲಿ ತುಂಬಿ ತುಳುಕಿರುವಾಗ, ಟೆನಿಸ್ಸು ಆಟ ಮಂಗಳದಲ್ಲಿ ಎಂಜಲೀನ ಹೂವಿನಂತೆ ಕುಣಿಯುತ್ತಿರುವಾಗ, ಆಕೆಯ ಮನದ ಗತಿ ಬೇರೆಡೆಗೆ ಹರಿದಿತ್ತು. ಅವಳ ಕಣ್ಣು ಕ್ಯಾಮರಾ ಹಿಡಿದ ಆ ತರುಣನ ಚಿತ್ರ, ಅವಳ ಹೃದಯ ಭಿತ್ತಿಯಲ್ಲಿ ಅಲಂಕರಿಸಿತ್ತು. ಅದು ಅವಳನ್ನು ಕೆಣಕುತ್ತಿತ್ತು, ಕರೆಯು ತ್ತಿತ್ತು. ಆಗವಳಿಗೆ.

ಚಿತ್ರಕಾರತಿಯಲ್ಲ ತೆಗೆಬಲ್ಲೆನವನ ಚಿತ್ರ !
ಕವಿಯತ್ರಿ ನಾನಲ್ಲ ವಿರಚಿಸುವೆ ಅವನ ಪಾತ್ರ !
ಶಿಲ್ಪಕಾರತಿಯಲ್ಲ ಕೊರೆಯುವೆನು ಅವನ ಮೂರ್ತಿ !
ನಟಿಯಂತು ನಾನಲ್ಲ ನಟಿಸುವೆನು ಅವನ ಪೂರ್ತಿ !

ಎಂದೆನಿಸುತ್ತಿತ್ತು. ಆಗ ಗೌರಮ್ಮನನ್ನು ಕರೆದು, ಗತಿ ನೀನೆ ಮತಿ ನೀನೆ, ಅವನನ್ನು ಕರೆತಂದು ತೋರು ಎಂದು ಬೇಡಿದಳು.

ಆ ಮುದುಕಿ ಹೂ ಮಾರುವ ವೇಷದಲ್ಲಿ ಊರೆಲ್ಲ ಹುಡುಕಿದಳು. ಆದರೆ ಆತ ಮನೆ ಪತ್ತಿರವೇ ಇರುವ ಯುವಕ. ಅವನನ್ನು ಕಣ್ತುಂಬ ನೋಡಿದಾಗ ಆ ಮುದುಕಿಯ ಮೈ ಬೆಚ್ಚಗಾಯ್ತು. ಇನ್ನು ಆ ನವ ತರುಣಿ ಹೌಹಾರಿ ಹುಚ್ಚಾದುದ ರಲ್ಲಿ ಅಚ್ಚರಿಯೇನು ಎನಿಸಿತು. ಎಂಜಲೀನ ಅಪ್ಸರೆಯನ್ನು ನಾಚಿಸುವ ಸುಂದರಿ. ಅಂಥವಳನ್ನು ಸೋಲಿಸಿದ ಪುರುಷಪುಂಗ ಇವನು.

ಹುಡುಗಿ ಹುಡುಕಿಯಹಳು ಸೈ, ಸರಿಯಾದ ಚೊಕ್ಕ ಚಿನ್ನ !
ತಳಿನು ಮೈ ತುಂಬಿಕೊಳೆ ಮುಖಕಾಂತಿ ನಗೆಯು ಜೊನ್ನ

ಎಂದು ಯೋಚಿಸಿ, ಅವನನ್ನು ಸಮಿಪಿಸಿ. ಗುಲಾಬಿ ಗುಚ್ಛವನ್ನು ಅವನ ಕೈಯಲ್ಲಿರಿ ಸಿದಳು. ಅವನು ಅಜ್ಜಿಯನ್ನು ಕೇಳಿದ–

ಇದರ ಜೊತೆ ಮಧುರ ನುಡಿ ಮುತ್ತುಗಳ ತಂದೆಯೇನು ?
ಸುಧೆಯ ಸೇಚನೆಯಿಂದ ಚೇತರಿಸ ಬಂದೆಯೇನು ?

ಆಗ ಅಜ್ಜಮ್ಮ ಇವಳ ಕತೆಯೆಲ್ಲ ಒರೆದಾಗ ಆ ತರುಣ ತಳಮಳಿಸಿದ. ನಿಟ್ಟುಸಿರು ಬಿಟ್ಟ. ಸಲ್ಲೆಸಹಿನ ಉಂಗುರವ ಕಳುಹಿಸಿಕೊಟ್ಟ. ಅನಂತರ ಹೂವಿನಲ್ಲಿ ಪುದುಗಿಸಿದ್ದ ಪತ್ರ ಹೀಗಿತ್ತು-

'ಪ್ರಾಣೇಶ, ಬಾಯಿಂದು ಮನೆಯ ಬಳಿ ಇರುಳಿನಲ್ಲಿ !
ಬಾಳೆ ತೋಟದ ಒಳಗೆ ಪ್ರಥಮ ಮಧುಮಿಲನವಿಲ್ಲಿ !

ಪ್ರೇಮಸಂದೇಶ ಆ ತರುಣನಲ್ಲಿ ಪುಳಕ ತಂದಿತು. ಅಂದಿನ ಅನುಭವ ಓಡಿಬಂದು ಮುತ್ತಿತು. ಉಣಲಿಲ್ಲ ತಿನಲಿಲ್ಲ ಇರುಳಿಗಾಗಿ ಕಾದ.

ಆ ದಿವಸ ಹುಣ್ಣಿಮೆಯು ಕಣ್ಣಿಮೆಯ ತೆರೆಯ ಬಂತು
ಪ್ರಣಯಿಗಳ ಹೃತ್ಪ್ರಣತಿ ಹೊತ್ತಿಸಲು ಹರುಷವಾಂತು !

ಅಂದು ಬಾಳೆ ತೋಟದಲ್ಲಿ ಆ ಪ್ರಣಯಿಗಳು ಒಂದಾದರು. ಹೇಗೆ ?

'ಈ ನೆಲವು ಆ ಮುಗಿಲು ಒದುಕಿರುವವರೆಗೆ ನಾವು
ಇದೊ ಇಂತೆ ತಳ್ಳೈಸಿ ಕೊಂಡಿರಲು ಎಲ್ಲಿ ಸಾವು ?'
ಎಂದೆನುತ ಬತ್ತಲೆಯ ಗಿಡಜೋಡಿ ತುಯ್ಯುತಿರಲು
ಮಂದಗಾಳಿಗೆ ಮಣಿದು ಮೈಗೆ ಮೈ ತೆಯ್ಯುತಿರಲು,
ನೇಸಲು ಬೆಳಕಿನ ತಳಕು ನಲ್ ಬಟ್ಟೆ ನೆಯ್ಯುತಿರಲು
ತಲ್ಲೀನ ಮೌನ ಮೈ ಶಾಂತ ಸುಧೆ ತೊಯ್ಯುತಿರಲು
ಬಾನ್‌ನಲ್ಲಿ ಗೇಲಿಯುಲಿ ನಾಚ್ಚಿದಳೊ ಏನೊ ಎಂದು
ಮೋಡ ಮರೆಮಾಡುತಿರೆ ತಿರ ಸೆರಗು ಹೊತ್ತಳಂದು !

ಆತ ಕೃಷ್ಣಾ ನದಿಯ ತಡಿಯ ಹಳ್ಳಿಯ ಹೈದನಾದ ಶಾಂತಿನಾಥ. ನಗರದಲ್ಲಿ ಓದಿ ಪದವೀಧರನಾದವನು. ನೌಕರಿಯ ಬೆಂಬತ್ತಿ ಊರೂರು ಸುತ್ತಗೊಡದೆ ಅವನ ತಾಯ್ತಂದೆ ಹಳ್ಳಿಯಲ್ಲೇ ತಡೆದು ನಿಲ್ಲಿಸಿಕೊಂಡಿದ್ದಾರೆ. ಆತ ಹತ್ತಿರದ ಪೇಟೆಯಲ್ಲಿ ಜವಳಿ ಅಂಗಡಿ ಇಟ್ಟಿದ್ದಾನೆ. ನಿತ್ಯ ಸೈಕಲ್ಲಿನಲ್ಲಿ ಹೋಗಿಬರುತ್ತಾನೆ. ಅವನ ಮಲ್ಲಿಗೆಯ ಮುಗುಳು ನಗೆಗೆ ಮುಕುರುವವರು ಮಂದಿ. ಆತನ ಗೆಳೆಯರ ಬಳಗ ದೊಡ್ಡದು. ಅವನ ಮಿತ್ರನ ತಂದೆ ರೋಗದಲ್ಲಿ ನರಳುತ್ತಿರುವಾಗ, ಆಸ್ಪತ್ರೆಗೆ ಸೇರಿಸಿ ನೋಡಿಕೊಳ್ಳುತ್ತಿದ್ದ. ಆಗ ಬಾವಿಯ ಬಳಿ ನೀರಿಗಾಗಿ ಬಂದಾಗ ಎಂಜಲೀನಳ ಸೀರೆಯನ್ನು ಕಂಡ. ಅನಂತರ ಬಾಳೆತೋಟದಲ್ಲಿ 'ತನ್ನ ಮೈಗವಳ ಮೈ ಮೆತ್ತಿಸಿದ. ಕನಸೇನೊ ನನಸೇನೊ ಎನಿಸುತ್ತಿದೆ. ವಿರಹಾಗ್ನಿ ದಹಿಸುತ್ತಿದೆ. ಅವನ ತಾಯ್ತಂದೆ ಉಪಚರಿಸುತ್ತಿದ್ದಾರೆ. ಅವನಿಗಾಗಿ ಕನ್ಯೆಯನ್ನು ಗೊತ್ತು ಮಾಡುತ್ತಿದ್ದಾರೆ. ಆದರೆ ಅವನಿಗೆ,

'ಹೇಳೀನೆ ಆಗದದು, ಹೇಳದಿರೆ ತಡೆಯಲಾರೆ
ಮನೆಯವರ ಮಾತೊಂದು ಮೀರೇನ ಮೀರಲಾರೆ
ಇತ್ತ ಹುಲಿ ಅತ್ತ ದರಿ, ಅರಿದರಿದು ಸರಿವೆನೆತ್ತ ?
ಅತ್ತೊಮ್ಮೆ ಇತ್ತೊಮ್ಮೆ ಏರಿಳಿಯುತಿಹುದು ಚಿತ್ತ,

ನಿತ್ಯ ಬೆಳುದಿಂಗಳಲ್ಲಿ ತೆನೆ ಜೋಡಿ ಕೂಡುವಂತೆ, ಒಂದು ದಿನ ಹಳ್ಳದ ಮಳಲ ರಾಶಿಯಲ್ಲಿ, ಮತ್ತೊಂದು ದಿನ ಮಾಮರದ ಅಡಿಯಲ್ಲಿ, ಮಗದೊಂದು ದಿನ ಕೈದೋಟದ ಹೂ ಹಾಸಿನಲ್ಲಿ, 'ಆ ನೀರ ನೀರೆಯರು ಆಡುವರು ಕದ್ದು ಕೂಡಿ'. ಹಲವು ದಿನ ಹೀಗೆ ಕಳೆದಿರಲು ಒಂದು ದಿನ ಇವರನ್ನು ಬ್ಯಾಟ್ರಿ ಲೈಟೊಂದು ಕಂಡಿತು. ಅಂದಿನಿಂದ ಅವಳಿಗೆ ಮನೆ ಸೆರೆಮನೆ ಆಯಿತು. ಬಂಧನದಲ್ಲೂ ನೆನಪಿನ ಚಂದನ ಕಂಪು ಬೀರಿತು-

ಕೆನ್ನೆ-ಕಾಗದ ಮೇಲೆ, ನಲ್ಲ-ನುಡಿ ಓದಿಕೊಂಡು
ಕೈ ಬೆರಳ ಉಂಗುರವ ಮುತ್ತಿಟ್ಟು ಪುಳಕಗೊಂಡು
ಮೊದಲ ದಿನ ಮಧುಮಿಲನ ಅಚ್ಚು ಒತ್ತಿರುವ ವಸ್ತ್ರ

ತೆಗೆತರಿಸಿ ಕಣ್ಣೊತ್ತಿ ನೆನೆವಳಾ ದಂತಶಸ್ತ್ರ
ಹಳ್ಳದಾಚೆಯ ಮರೆಗೆ ತನ್ನನೆದೆಗೊತ್ತಿ ಒಯ್ದು !
ಕೋಣೆ ಕದ ತೆರೆದು ಒಳ ಬಂದು ಮುತ್ತಿಟ್ಟು ಸೆಳೆದ !

ಇಂಥ ನೂರಾರು ಚಿತ್ರಗಳು ಅವಳ ಬಳಿಸುಳಿದು ಸವಿಯುಣಿಸುತ್ತಿವೆ. ಆದರೆ ಶಾಂತಿನಾಥ ಅವಳ ತಂದೆ ವೈದ್ಯ–ಭೂತನ ಕೈಗೆ ಸಿಗದಂತೆ ಓಡಿ ಹೋಗಿದ್ದವನು ಅಲ್ಲಿ ಇಲ್ಲಿ ಹಲವು ದಿನ ಸುತ್ತಾಡಿ ಹಳ್ಳಿಗೆ ಆಗಮಿಸಿದ. ಆದರೆ ನಾಚಿಕೆಯಿಂದ ಅಂಗಡಿಯ ಕಡೆಗೊಮ್ಮೆ ತಪ್ಪಿಯೂ ಸುಳಿಯದಾದ. ಹಿಂದಿನ ಘಟನೆಯಿಂದ ಪ್ರಣಯಿಗಳ ಭೇಟಿಗೆ ತಡೆವುಂಟಾದರೂ ಮನೆಯಾಳು ಗೌರಮ್ಮನ ಕೃಪೆಯಿಂದ ಓಲೆಗಳ ಮಾಲೆ ಆರಂಭವಾಯಿತು:

'ನೀ ತಾಳಿ ನಾ ತಾಳಿ, ಕಳೆಯೋಣ ಕಾಳ ರಾತ್ರಿ !
ಸೆರೆ ಹರಿದು ಬಂದಾಗ ಬೆರೆಯೋಣ ಹಗಲು ರಾತ್ರಿ !'

ಎಂದು ಎಂಜಲೀನು ಒಂದು ಪತ್ರದಲ್ಲಿ ಬರೆದರೆ. ಆದಕ್ಕುತ್ತರವಾಗಿ ಶಾಂತಿನಾಥ, 'ಮನೆಯವರು ಮದುವೆಯ ಹೊಂಚು ಹಾಕಿದ್ದಾರೆ. ನಾ ಮೆಚ್ಚದ ಹೆಣ್ಣನ್ನು ಮದುವೆಯಾಗಲು ನಾ ಹುಂಬನಲ್ಲ, ನನ್ನ ನಿನ್ನ 'ಮಧುಮಿಲನದಾ ದಿನವೆ ಆಯ್ತೆಮಗೆ ಮದುವೆ' ಈ ಮಾತು ಸಟೆಯಲ್ಲ' ಎಂದು ತಿಳಿಸುತ್ತಾನೆ.

ಮನೆಯಂಗಳದಲ್ಲಿ ಕೋಳಿ ಹುಂಜಗಳ ಪ್ರಣಯದಾಟ ಕಂಡು, ಮರದಡಿಯಲ್ಲಿ ಗಂಡ ಹೆಂಡಿರ ಜೋಡಿ ಬುತ್ತಿಯುಣ್ಣುವುದನ್ನು ಕಂಡು ತನಗುಂಟಾದ ವಿರಹವನ್ನು : ಬೆಕ್ಕಿನ ಬಾಯಿಗೆ ಸಿಕ್ಕಿದ ಇಲಿಯನ್ನು ಕಂಡು ಹೆದರಿಕೊಂಡುದನ್ನು ಒಂದು ಪತ್ರದಲ್ಲಿ ಆಕೆ ತಿಳಿಸಿದರೆ ಆತ, 'ಅಂಜಿಕೆಯ ಕನಸುಗಳ ಮರೆತುಬಿಡು ಗಟ್ಟಿಯಾಗು' ಎಂದು ಅಭಯದ ಸಂದೇಶ ಕಳಿಸುತ್ತಾನೆ.

ಆತನ ಪತ್ರ ಎಂಜಲೀನಳ ತಂದೆಯ ಕೈಗೆ ಸಿಕ್ಕಿ ರಾದ್ಧಾಂತವಾದುದನ್ನು, 'ಪ್ರಿತಿ ಇರೆ ಕರೆಸವನ, ನೋಡುವೆವು ನಾವು ಇಂದು !' ಎಂದು ಆಕೆಯ ತಂದೆ ತಿಳಿಸುತ್ತಾ 'ಒಂದೆ ಇದ್ದರೆ ಒಳಿತು ನಿನ್ನ ಮತ್ತವನ ಧರ್ಮ' ಎಂದು ಸೂಚಿಸಿದುದನ್ನು ಅದಕ್ಕೆ ಆಕೆಕೊಟ್ಟ ಉತ್ತರವನ್ನು ಮತ್ತೊಂದು ಓಲೆಯಲ್ಲಿ ಎಂಜಲೀನು ಬರೆದಾಗ, ಆತ,

ಹೃದಯ ಹೃದಯಗಳು ತಾನೊಂದಾಗಿ ಇರುವವಲ್ಲೆ ?
ಪ್ರೀತಿಗೀ ಜಾತಿಗಳ ಬೇಲಿ ಏಕಾಯ್ತು ಎಲ್ಲೆ ?
ಒಬ್ಬರಾದರು ನಾವು ಜಾತಿ ಬದಲಿಸಲು ಬೇಕೆ ?
ಇದ್ದಂತೆ ಇದ್ದು ಬಿಡೆ ತೇಲದೇನಮ್ಮ ನೌಕೆ ?
ಮನೆಯವರಿಗೇನಂತೆ ಕುಲದ ಸುಳಿಗೆಳೆವರಮ್ಮ !
ಕುಲದ ಆಚೆಯ ಕುಲವ ನಿರ್ಮಿಸಲು ಬಿಡರು ನಮ್ಮ !
ಮನುಜ ಕುಲ ನಮ್ಮ ಕುಲ. ಬೇಡೆಮಗೆ ಬೇರೆ ಕುಲವು
ಧರ್ಮ ದೇವರ ಗೊಡವೆ ಬಿಟ್ಟವರ ಹೊರದೆ ನೆಲವು ?'

ಎಂದು ತನ್ನ ಅಭಿಪ್ರಾಯ ತಿಳಿಸುತ್ತಾ, 'ನಿಮ್ಮ ತಂದೆ ಕೇಳಿದರೆ ನಮಗೆ ಯಾವ ಮತವೂ ಬೇಡ' ಎಂದು ಹೇಳುವುದಾಗಿ ತನ್ನ ಪತ್ರದಲ್ಲಿ ತಿಳಿಸುತ್ತಾನೆ.

ಆಕೆಯ ತಂದೆಯ ಇಚ್ಛೆಯಂತೆ ಅವರ ಮನೆಗೆ ಶಾಂತಿನಾಥ ಹೋಗುತ್ತಾನೆ. ಮತಾಂತರದ ಪ್ರಶ್ನೆ ಮುಂದೆ ಬಂದು ಮಾತುಕತೆ ಮುರಿದು ಬೀಳುತ್ತದೆ. ಇದರಿಂದ ಎಂಜಲೀನಳಿಗೆ ವ್ಯಥೆ ಆಯ್ತು.

ಇನ್ನೇನು ಬದುಕುವೆನು. ಮನೆಯಾಯ್ತು ನರಕಲೋಕ !
ಇಲ್ಲೆನಗೆ ಇಲ್ಲಿರವು ನಿನ್ನೆದೆಯೆ ಎನಗೆ ಬದುಕ !
ಎನ್ನೆದೆಯ ತಳಮಳವ ತಣಿಸುವೆಯ ಶಾಂತಿನಾಥ ?
ನಿನ್ನೆಡೆಯೊಳೆನಗಿಸಿತು ಮುಕ್ತಿ ಕೊಡು ಪ್ರಾಣನಾಥ !

ಎಂದು ಪ್ರಾರ್ಥಿಸಿ ಪತ್ರ ಬರೆಯುತ್ತಾಳೆ. ಅಲ್ಲದೆ ಮತ್ತೊಂದು ಓಲೆಯಲ್ಲಿ,

ತಾಯ್ತಂದೆಗಳ ಮನವ ನೋಯಿಸಲು ಬಂದೆವೇನೋ ?
ಅವರ ಮೋರೆಗೆ ನಾವು ಕಪ್ಪು ಕಲೆ ತಂದೆವೇನೊ ?
ಹಳೆಯ ಹಾದಿಯ ತುಳಿಯಲೆಮಗಾಗಲಿಲ್ಲವೇನೊ ?
ಹೊಸ ಹಾದಿ ಬಿದ್ದಿಲ್ಲ, ತುಳಿಯೆ ತಾ ಬೀಳದೇನೊ ?
ಪ್ರೀತಿ ಇದೆ ರೀತಿ ಇದೆ ತಿಳಿವಳಿಕೆ ತುಂಬ ಉಂಟು !
ನಮ್ಮ ಪಾಲಿಗೆ ನಮ್ಮ ಬಿಡೆ ಕಳೆವುದಾರ ಗಂಟು ?
ಹೇಳಿ ಕೇಳಿದೊ ಆಯ್ತು, ಇನ್ನೇಕೆ ಮನೆಯ ತಂಟೆ ?
ಎಲ್ಲಿಗೆಂದರೆ ಅಲ್ಲಿ ಕರೆಯೊ ನಾ ಬರಲು ಹೊರಟೆ !

ಎಂದು ತಿಳಿಸುತ್ತಾಳೆ. ಸೊಗದ ಹಗಲಿನೆಡೆಗೆ ಇಬ್ಬರೂ ಒಂದು ಇರುಳಿನಲ್ಲಿ ಊರು ಬಿಟ್ಟು ಓಡಿ ಹೋಗುತ್ತಾರೆ.

ರವಿ ಮೂಡುವನಿತರಲೆ ಸುತ್ತೆಲ್ಲ ಸುದ್ದಿ ಹಬ್ಬೆ
ಡಂಗುರವ ಹೊಯ್ಯಿತದೊ ಹಗಲ ಬಾಯ್ ಬಿರಿಯ ಬೊಬ್ಬೆ !
ಗೊತ್ತುಂಟೆ ನೆಲ ಮುಗಿಲೆ ಹಾರಿತದೊ ಹಂಸಮಿಥುನ
ಕತ್ತರಿಸಿ ಕುಲಬೇಡಿ ಕಳೆದು ಹೋದುವೈ ರತುನ !

ಇಲ್ಲಿಗೆ ಪ್ರಣಯದ ಕಥೆ ಮುಗಿಯಿತು. ಕಥನ ಕಾವ್ಯವೂ ಇಲ್ಲಿಗೆ ನಿಂತಿದ್ದರೆ ಇದೊಂದು ಸಾಮಾನ್ಯ ಕಾವ್ಯವಾಗುತ್ತಿತ್ತು. ಸಪ್ಪೆಯಾಗುತ್ತಿತ್ತು. ಇದಕ್ಕೆ ಚಿಂತನದ ರುಚಿ ಬರಿಸಲು ಕವಿ ಕೆಳಗಿನ ಮೂರು ಉಪ್ಪಿನ ಹರಳನ್ನು ಸೇರಿಸಿದ್ದಾರೆ.

ಪಶ್ಚಿಮದ ಸಂಸ್ಕೃತಿಯು ಪೂರ್ವದೊಡವೆರೆದುದಿಂದು !
'ಲೀನ'ವಾದಳು ಪೂರ್ಣ ಶಾಂತನೊಡವೆರೆದಳಿಂದು !
ಮಗುವೊಂದು ಹುಟ್ಟಿರಲು ಹೆತ್ತವಳು ಸತ್ತಳಯ್ಯೊ !
ಎದೆಯಲ್ಲಿ ಗುಂಡಿಕ್ಕಿ ಹಡೆದವನ ಕೊಂದರಯ್ಯೊ !

ಸ್ವಾತಂತ್ರ್ಯ ಕುಂತಲೆಯು ಕಾಯು ಬರುವನೆ ಕಣ್ವ ?
ದುಷ್ಯಂತ ಬರಲಿಹನೆ ? ಭರತ ಸುತ ಹುಟ್ಟಲಿರುವ ?

ಕಾವ್ಯ ಇಲ್ಲಿಗೆ ಮುಗಿದರೂ ಕಾವ್ಯದ 'ಧ್ವನಿ' ಅನುರಣಗೊಳ್ಳುವುದು ಮಾತ್ರ ನಿಲ್ಲುವುದಿಲ್ಲ. ಎಂಜಲೀನಳ ತಂದೆ ಶ್ರೀಮಂತ ಹಾಗೂ ಧನಾಕಾಂಕ್ಷಿ ಎಂದು ಚಿತ್ರಿಸಿರುವುದು, ಬ್ರಿಟಿಷರ ವೈಭವ ಹಾಗೂ ವ್ಯಾಪಾರಿ ಮನೋಧರ್ಮಕ್ಕೆ; ಶಾಂತಿನಾಥನನ್ನು ಬಡವನನ್ನಾಗಿಯೂ ಇತ್ತೀಚೆಗೆ ಪಟ್ಟಣಕ್ಕೆ ಹೋಗಿ ಪದವೀಧರನಾಗಿ ಬಂದವನೆಂದು ಚಿತ್ರಿಸಿರುವುದು ಭಾರತದ ಬಡತನಕ್ಕೂ ಹಾಗೂ ಅದು ಸ್ವಾತಂತ್ರ್ಯಕ್ಕಾಗಿ ಎಚ್ಚರಗೊಳ್ಳುತ್ತಿರುವುದಕ್ಕೂ ಪ್ರತೀಕವಾಗಿದೆ. ಎಂಜಲೀನು ಆಂಗ್ಲರ ಆಕರ್ಷಕ ಸಂಸ್ಕೃತಿಗೆ ಪ್ರತೀಕವಾದರೆ, ಶಾಂತಿನಾಥ ಭಾರತೀಯರ ಭವ್ಯ ಸಂಸ್ಕೃತಿಯ ಪ್ರತೀಕವಾಗಿದ್ದಾನೆ. ಎಂಜಲೀನು ಮಗುವನ್ನು ಹೆತ್ತು ಇಹಲೋಕ ತ್ಯಜಿಸುವುದು ಆಂಗ್ಲರು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು, ಭಾರತವನ್ನು ತ್ಯಜಿಸಿಹೋಗುವುದನ್ನು ಸೂಚಿಸಿದರೆ; ಶಾಂತಿನಾಥ ಗುಂಡಿಗೆ ಬಲಿಯಾಗುವುದು, ಭಾರತಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯ ಕಗ್ಗೊಲೆಯನ್ನು ನೆನಪಿಸುವಂತಿದೆ. ಅಪ್ಸರೆ ಹಾಗೂ ಋಷಿಯ ಸಂಗದಿಂದ ಜನ್ಮ ತಾಳಿದ ಶಕುಂತಲೆ, ಮಾತಾಪಿತರಿಂದ ಪರಿತ್ಯಕ್ತಳಾದಂತೆ, ತಬ್ಬಲಿಯಾದಂತೆ, ಕವಿಗೆ ಭಾರತದ ಸ್ವಾತಂತ್ರ್ಯ ಕಂಡಿದೆ. ಶಕುಂತಲೆಯ ಬಾಳಿನಂತೆ ಸ್ವತಂತ್ರ ಭಾರತದ ಬಾಳು ಆಗುವುದೇನೋ ಎನಿಸಿದೆ ಕವಿಗೆ. ಹೀಗೆ ಈ ಪ್ರಣಯ ಕಾವ್ಯ ಅನೇಕ ಸಂಕೇತಗಳನ್ನು ಗರ್ಭೀಕರಿಸಿಕೊಂಡಿದೆ.

ಆಧುನಿಕ ಭಾರತದಲ್ಲಿ ಅಂತರ್ಜಾತೀಯ ವಿವಾಹ ಹೆಚ್ಚುತ್ತಿದೆ. ಇದರಿಂದ ಪ್ರೇಮಿಗಳಿಗೆ ಆಗುತ್ತಿರುವ ನೋವು ನಲಿವನ್ನು ಅದು ಅನಿವಾರ್ಯವಾಗಿ ತನ್ನದೇ ಆದ ಹಾದಿಯೊಂದನ್ನು ಹೊಸದಾಗಿ ಕಂಡುಕೊಳ್ಳುತ್ತದೆ ಎಂಬುದನ್ನು ಕವಿ ಚೆನ್ನಾಗಿ ಚಿತ್ರಿಸಿದ್ದಾರೆ.

ನಾಯಕ-ನಾಯಕಿಯರ ಮಧುರಮಿಲನದ ಚಿತ್ರಣ ತುಂಬ ಧ್ವನಿಪೂರ್ಣವಾಗಿ ಬಂದಿದೆ. ನಲೆ ನಲ್ಲೆಯರ ಓಲೆ ಮರು ಓಲೆಗಳ ಭಾಗ ಅಲ್ಲಲ್ಲಿ ವೈಚಾರಿಕ ಅಂಶಗಳನ್ನು ಅಡಗಿಸಿಕೊಂಡು ಆಕರ್ಷಕವಾಗಿ ಮಾನವೀಯವಾಗಿ ಮೂಡಿಬಂದಿದೆ. ಕೊನೆಯ ಮೂರು ಪದ್ಯಗಳಂತು 'ಹಂಸಮಿಥುನ' ಕಾವ್ಯದೇಗುಲದ ಕಳಸಗಳಂತೆ ರಾರಾಜಿಸುತ್ತಿವೆ.

ಸಾವಿರಾರು ನದಿಗಳು : ದಶಾಂಶದಿಂದ ಶತಾಂಶ ಸಿದ್ಧಿಯತ್ತ

ದೊಡ್ಡಹುಲ್ಲೂರು ರುಕ್ಕೋಜಿ

ಬಹುಶಃ ಬರುವ ದಿನಗಳಲ್ಲಿ ಶಾಂತಿ ಪಾರ್ಶೈಕೆಯ ಸಾಹಿತ್ಯ ಸಾರ ವಿಶ್ವಸಾಹಿತ್ಯದ ಪ್ರಮುಖ ಆಶಯವಾಗಬಹುದಾದ ಸ್ಥಿತಿ ಇಂದು ಹೊಸಲು ದಾಟಿದೆ. ಹಸಿವು, ಅಸಮಾನತೆಯ ದೀನದನಿ 'ರಮ್ಯ' ಮಂಡಲವನ್ನು ದಾಟಿ ತೃತೀಯ ಜಗತ್ತಿನಲ್ಲಿ ಕಾಣಬೇಕಿದ್ದ ಸಾಫಲ್ಯ ಇಥಿಯೋಪಿಯಾದ ಬಿರುಕಿನಲ್ಲಿ ಮತ್ತೆ ಮತ್ತೆ ಇಂಗುತ್ತಿದೆ. ವರ್ತಮಾನದ ಸುಳಿಗಳಲ್ಲಿ ಕವಿಸಾಮರ್ಥ್ಯ ಎಷ್ಟೆಂದು ಈಜೀತು ! ಎಷ್ಟನ್ನು ಜಯಿಸೀತು ?

ಹೇಳಿದೆ. ತನ್ನ ಮರಣೋತ್ತರ ಭವಿಷ್ಯದ ಆತಂಕವನ್ನೆಲ್ಲಾ ಸಾರಿದೆ. ಆದರೇನು ? ಶಿಖರಶಕ್ತಿಗಳ ಛಲ, ಪಣ, ಪ್ರತಿಷ್ಠೆ ಇಂದು ವಿಶ್ವಜನರ ಜೀವದುಸಿರನ್ನು ಕದನ ಭೂಮಿಯಲ್ಲಿ ಮೈಲಿಮೈಲಿಗಳ ವಿಸ್ತಾರಕ್ಕೆ, ವಿಷಾದ ವ್ಯಾಕುಲತೆಗೆ ದಣಿಸಿ ಪ್ರೇತಕಳೆಗೆ ಒಡ್ಡಿಬಿಟ್ಟಿದೆ. ಒಂದು ಬಗೆಯ ಸಾಮೂಹಿಕ ಹತಾಶೆ, ಅನುಭವಿಸದ್ದೇನೋ ಹಾಗೇ ಇದೆಯೆಂಬ ಅತೃಪ್ತಿ ಜಗತ್ತಿನ ಕೂಳು ಕೋವಿದರನ್ನು ಈಡಾಡಿ ಕಾಡುತ್ತಿದೆ. ಸಮಾನತೆ ಸಾಮರಸ್ಯಗಳಿಗಾಗಿ ಹಂಬಲಿಸುವ ಕಾವ್ಯಗುಡಾರಗಳು ವಿಜ್ಞಾನ ಸೃಷ್ಟಿಸುತ್ತಿರುವ ಬಗೆಬಗೆಯ ಯಾಂತ್ರಿಕ ಆವಿಷ್ಕಾರಗಳಿಂದಾಗಿ ಬಿರುಕು ಬಿಡುತ್ತಿವೆ. ಕವಿಪ್ರತಿಭೆ

'ಗುಡಾರಕ್ಕಾದರು ಉಸಿರಿರಲಿ' ಎಂಬ ಕ್ಷೀಣ ಧ್ವನಿ ಹೊರಡಿಸುತ್ತಿದೆ—ಇದರ ನಡುವೆಯೆ ಇಂಡಿಯಾದಂತ ಸಂಪದ್ಭರಿತ ಬಡರಾಷ್ಟ್ರದಲ್ಲಿ ಅಕ್ಷರ ಕ್ರಾಂತಿಯ ಅಧೋಗತಿ ; ದುರುಪಯೋಗಕ್ಕೊಳಗಾಗುತ್ತಿರುವ ಸಮೂಹ ಮಾಧ್ಯಮಗಳ ಮೇಲುಗೈ. ಇನ್ನು ಅರೆಬರೆ ಶಿಕ್ಷಣದ ಬಹುಸಂಖ್ಯಾತರಂತೂ ಕಾವ್ಯಕ್ಕೆ ಪಿಳಿಪಿಳಿ ನೋಟದ ಅಭ್ಯಾಗತರು.'ಕವಿ' ಎಂದರೆ 'ಹುಚ್ಚ' ಎನ್ನುವವರು.

ಆಂಧ್ರದ ಶ್ರೀ ಶ್ರೀ, ಚೆರಬಂಡರಾಜು ಆಗಲಿ, ದಲಿತ ಪ್ಯಾಂಥರ್ ಕೂಗುಗಳಾಗಲಿ ದಕ್ಷಿಣ ಭಾರತದ ಪ್ರಭುತ್ವ ಹಾಗು ದಣಿದ ಮನಸ್ಸುಗಳಿಗೆ ಆಕ್ಯುಪಂಕ್ಚರ್ ಚಿಕಿತ್ಸೆ ಕೊಟ್ಟಿದ್ದು ಈಚಿನ ದಶಕಗಳಲ್ಲಿಯೆ. ಒಡಲುರಿಯ ತಾಪ ತಾಳದೆ ಒಣನೆಲದ ಬಿರುಕುಗಳಿಂದ ಹೊರಟ ಈ ಹೊಸ ದನಿಗಳು ಹಳೆಯ ಕಾವ್ಯದ ಮೂಲ ರೂಪಕ್ಕೆ ಕೊಡಲಿ ಹಾಕಿದ್ದಲ್ಲದೆ, ಕಾವ್ಯದ ಘನತೆಯನ್ನೂ ಎತ್ತರಿಸಿ ಸಾಮಾನ್ಯರ ಹೊಸ್ತಿಲವರೆಗೂ ವಿಸ್ತರಿಸಿದವು.

ಪರಿಣಾಮ, ಇವತ್ತು ಕೆ. ಜಿ. ಎಫ್.ನ ಸೋಡಾ ತಯಾರಿಸುವ ಒಂದು ಸಣ್ಣ ಫ್ಯಾಕ್ಟರಿಯಿಂದ ಆರಂಭವಾಗಿ ಬೀದರ್‌ನ ಅಕ್ಕಿಗಿರಣಿಯ ಬಡ ಕೂಲಿ ಕಾರ್ಮಿಕರ ಒಣಬಾಯಿಯವರೆಗೂ ಕಾವ್ಯ ಹರಿದ ತನ್ನ ಸಾಮರ್ಥ್ಯದಿಂದ ಹಿಂದಿನ ಮಿತಿಗಳನ್ನು ದಾಟಿ ನಿಂತಿದೆ. ಸುಮಾರು ೮೦೦ ವರ್ಷಗಳಿಗೂ ಹಿಂದೆ ಜನಸಾಮಾನ್ಯರಿಗೆ ಪ್ರಾಪ್ತವಾಗಿದ್ದ ಈ ಕಾವ್ಯ ಕೋಲಾಹಲದ ಉನ್ಮಾದ, ಆಕರ್ಷಣೆ ಇಷ್ಟೊಂದು ದೀರ್ಘಾವಧಿಯ ಬಳಿಕ ದಣಿದ ಮಂದಿ ಮಂದಿ ಮನಸ್ಸುಗಳೊಂದಿಗೆ ತಾದಾತ್ಮ್ಯ ಸಾಧಿಸಿ ಕಾವ್ಯ ಲೋಕದ ಪ್ರಥಮ ಅಧ್ಯಾಯವಾಗಿರುವುದು ಈಗ ನಮ್ಮ ಮುಂದಿರುವ ನೋಟ. ಕನ್ನಡ ಸಾಹಿತ್ಯಾಂಗಣದಲ್ಲಿ ಇಂತದೊಂದು ಪರಿವರ್ತನೆಯ ಮಿಂಚು ೧೯೭೫ ರಲ್ಲಿ 'ಹೊಲೆ ಮಾದಿಗರ ಹಾಡು' ವಿನ ಪ್ರಕಟಣೆಯೊಂದಿಗೆ ಕಾಣಿಸಿಕೊಂಡಿತು. ಸಿಟ್ಟಿನ ಎಲೆ ತೊಟ್ಟ ಈ ಬಳ್ಳಿ ಚಿಗುರುತ್ತಾ ಭದ್ರವಾಗಿ ಕಾಲೂರಿದ್ದು ೧೯೭೯ರಲ್ಲಿ ಹೊರ ಬಂದ 'ಸಾವಿರಾರು ನದಿಗಳು' ಸಂಗಮದ ಮೂಲಕ. ಈ ವೇಳೆಗಾಗಲೆ ಹೊಲೆ ಮಾದಿಗರ ಹಾಡುಗಳ ಸಂಮೋಹನಕ್ಕೆ ಒಳಗಾದ ಎಳೆಕವಿಗಳ ದಂಡುದಂಡೇ ಕರ್ನಾಟಕದಾದ್ಯಂತ ಘೋಷಣೆಗಳನ್ನು ಕೂಗತೊಡಗಿತ್ತು. ಇದೇ ಹೊತ್ತಿಗೆ ಸಾಮಾಜಿಕ ರಾಜಕೀಯ ವೈಪರೀತ್ಯಗಳು ಕೂಡ ಇವರನ್ನು ಇನ್ನಷ್ಟು ಹತಾಶೆ, ಅಸಹನೆಯತ್ತ ದೂಡಿದ್ದವು.

ಜಡ ಮೌಲ್ಯಗಳ ಪಾತ್ರದಲ್ಲಿ ಕಲಮಲವೆಬ್ಬಿಸಿದ ಹೊಸ ಸಂವೇದನೆಯ ಈ ಹುಟ್ಟನ್ನು ಹಾಗು ಇದಕ್ಕೆ ಕಾರಣರಾದವರನ್ನು ನಮ್ಮ ನಡುವಿನ ಅತಿಮುಖ್ಯ ವಿಮರ್ಶಕರಾದ ಟಿ. ಪಿ. ಅಶೋಕ ಅವರು 'ಪರಂಪರೆಯೊಂದರ ಪ್ರವರ್ತಕರು' ಎಂದು ವಿಶೇಷವಾಗಿ ಗುರುತಿಸಿದರು. ಯಾವುದೇ ಪಾಶ್ಚಿಮಾತ್ಯ ಪ್ರಭಾವಗಳ ಸೋಂಕಿಲ್ಲದೆ, ಸಿದ್ಧರೂಪಗಳ ಸ್ಫೂರ್ತಿ, ಚೌರ್ಯವಿಲ್ಲದೆ ಮೊಟ್ಟ ಮೊದಲ ಬಾರಿಗೆ

ಸಿದ್ಧಲಿಂಗಯ್ಯ ಕನ್ನಡ ಕಾವ್ಯದಲ್ಲಿ ಕಾಣಿಸಿಕೊಂಡರು. ಬಹು ಸಂಖ್ಯೆಯಲ್ಲಿದ್ದರೂ ಧಾರ್ಮಿಕ ದಬ್ಬಾಳಿಕೆಯಿಂದಾಗಿ ಶತಶತಮಾನಗಳಿಂದ ನೆಲಕಚ್ಚಿ ಕುಂತಿದ್ದ, ಹೀನಾಯ ವಾಗಿ ದಿನ ಸವೆಸುತ್ತಾ ಬಚ್ಚಲು ತೊಳೆಯುತ್ತಿದ್ದ ಜನರ ಸಿಡಿಲ ದನಿಯಾಗಿ ಅವರೆಗಿನ ಸಾಂಸ್ಥಿಕ ಶಕ್ತಿಗಳನ್ನು, ಆಸ್ಥಾನಿ ಗಿಳಿಗಳನ್ನು ನಡುಗಿಸಿ ದಂಗುಬಡಿಸಿಬಿಟ್ಟರು. ಹೀಗೆ ಹೊಸ ರಕ್ತವನ್ನು ಧರಿಸಿಕೊಂಡ ಹೊಸಕಾವ್ಯದ ಹುಟ್ಟು ನಮ್ಮ ನಡುವೆ ಹೆಡೆಯೊಡೆಯಲು ಎಂಟು ಶತಮಾನಗಳು ಸಂದಿವೆ. ವಿಕ್ಷಿಪ್ತತೆ ಅವಮಾನ ಅವಹೇಳನವನ್ನು ಹೀಗೇಕೆ ಅದೂ ಇಷ್ಟೊಂದು ದಿನ ಸಹಿಸಬೇಕಾಗಿತ್ತು ?

ಯಾವ ಮಾಯದ ನಿದ್ದೆ ಕವಿದಿತ್ತು ಇವರನ್ನು
ಯಾವ ಉಕ್ಕಿನ ಸರಳು ಬಿಗಿದಿತ್ತು ಇವರ
ಯಾವ ಬಣ್ಣದ ಬೀಗ ಮುಚ್ಚಿತ್ತು ಬಾಯನ್ನು
ಯಾವ ಮೋಡದ ಹಿಂಡು ತಡೆದಿತ್ತು ಬೆಳಕ

ತಾಸಿರುವ ಸ್ಥಿತಿಗೆ ಸ್ವತಃ ಕವಿಗೇ ದಿಗ್ಭ್ರಮೆ ಹುಟ್ಟಿ ತಾಳ್ಮೆಗೆಟ್ಟ ಆ ಕ್ಷಣಕ್ಕೆ ತಡೆಯಲಾಗದ ಸಿಟ್ಟು :

ಇಕ್ರಲಾ ವದೀರ್ಲಾ
ಈ ನನ್ ಮಕ್ಕಳ ಚರ್ಮ ಎಬ್ರಲಾ
ಹೋಟ್ಲು, ಬಾವಿ, ಮನೆ ಯಾವುದ್ಕೂ ಸೇರ್ಸಲ್ವಲ್ರೊ
ನಾವ್ ಬೆಳೆದಿದ್ ತಿಂತಾರೆ ನಾವ್ ಮಾತ್ರ ಬ್ಯಾಡಾ
ಅದಕ್ಕೇನೆ ಇಕ್ರಲಾ ವದೀರ್ಲಾ ಈ ಸೂಳೆ ಮಕ್ಳ ಮೂಳೇ ಮುರೀರ್ಲಾ

ಎಂದು ಕರೆಕೊಟ್ಟು ಬಿಟ್ಟರು. ವಿಶ್ವದ ಕಡುಹಸಿರಿನ ಲಾನ್‌ಗಳಲ್ಲಿ ಎಂದೆಂದಿಗೂ ಹುಟ್ಟು ಪಡೆಯಲು ಸಾಧ್ಯವಾಗದ ಪ್ರತಿಭಟನೆಯು ಈ ಪರಿ ಸಿದ್ಧಲಿಂಗಯ್ಯನವರನ್ನೂ ಒಳಗೊಂಡು ಕೆಲವರ ಮೂಲಕ ಒಂದು ವ್ಯಾಪಕ ಸಾಹಿತ್ಯ ಚಳುವಳಿಗೆ ಪ್ರೇರಣೆ ಯೊದಗಿಸಿತು. ಆ ನಂತರ ಕರ್ನಾಟಕದಲ್ಲಾದ ಎರಡು ಪ್ರಮುಖ ಹೋರಾಟಗಳ ಹಿನ್ನೆಲೆಗೆ ಈ ಕಾವ್ಯ ಪಡೆದುಕೊಂಡ ಯಶಸ್ಸನ್ನು ಗಮನಿಸಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ. ಚಂದ್ರಶೇಖರ ಪಾಟೀಲ, ಚೆನ್ನಣ್ಣ ವಾಲೀಕಾರ, ಬರಗೂರು ರಾಮಚಂದ್ರಪ್ಪ, ಗೋವಿಂದಯ್ಯ, ಇಂದೂಧರ ಹೊನ್ನಾಪುರ, ದರ್ಗಾ ಮುಂತಾದವರು ಗೇಯತೆಗೆ ಒತ್ತುಕೊಟ್ಟು ಜನರನ್ನು ತಲುಪಲು ಹೆಣಗತೊಡಗಿದ್ದು ಜನರಿಂದ ಅದಕ್ಕೆ ದೊರೆತ ಹೃದಯಪೂರ್ವಕವಾದ ಮನ್ನಣೆಯಿಂದಾಗೆಯೆ.

ವಚನ ಚಳುವಳಿಯ ನಂತರ ತನ್ನ ನಿರುಪಾಯ ಸ್ಥಿತಿಯಲ್ಲಿ ಒಂದು ವರ್ಗದ ಜನ, ಕಾರ್ಮಿಕರನ್ನೂ ಒಳಗೊಂಡು ಸಿದ್ಧಲಿಂಗಯ್ಯನವರ ರಚನೆಗಳನ್ನು ತಮ್ಮ

ಹೋರಾಟಕ್ಕೆ ಸ್ಫೂರ್ತಿ ಮಂತ್ರವಾಗಿ ಸ್ವೀಕರಿಸಿದರು. ಮೊದಲಿನ ಸಂಕಲನ ಸಹಜವಾಗಿ ಪಡೆದುಕೊಂಡಿರದ ಪಕ್ವತೆ ಪರಿಪೂರ್ಣತೆ 'ಸಾವಿರಾರು ನದಿಗಳ' ಪ್ರವಾಹದಲ್ಲಿ ದಶಾಂಶದಿಂದ ಶತಾಂಶ ಸಾಧ್ಯತೆಗಳ ಶೋಧಕ್ಕೆ ತೊಡಗಿದ್ದು ದುಡಿಯುವ ವರ್ಗದವರಲ್ಲುಂಟಾದ ಜಾಗೃತಿಯಿಂದ ಸ್ಪಷ್ಟವಾಯ್ತು. ಈಗ ಈ ಪ್ರವಾಹ ನೊಂದವರಿಗೆ ಆತ್ಮವಿಶ್ವಾಸ ಹುಟ್ಟಿಸುತ್ತಿದೆ. ಮರೆತದ್ದನ್ನು ನೆನಪಿಸುತ್ತಿದೆ. ಶತಶತಮಾನಗಳುದ್ದಕ್ಕೂ ಕಳೆದುಕೊಂಡ ಪಾಲು ಕೇಳುತ್ತಿದೆ. ನೊಂದವರಿಗೆ ಆಶಾಕಿರಣವಾಗಿ ಕಂಡ ಈ ದಿವ್ಯಧ್ವನಿ ಕ್ರಿಯಾಶೀಲನೆ ಯುವಜನರಲ್ಲಿ ಬಿಂಬಕ್ಕೆ ತಂತಾನೆ ಮುಖಾಮುಖಿಯಾದದ್ದು ಅತ್ಯಂತ ಸಹಜವೇ ಆಗಿದೆ. ಇದು ಇಷ್ಟಕ್ಕೇ ನಿಂತಿದ್ದರೆ ಇಲ್ಲಿನ ಚರ್ಚೆಯ ದಿಕ್ಕೇ ಬೇರೆಯಾಗಬೇಕಿತ್ತು. ಆದರೆ ಹೊಸತೊಂದರ ಇಂಥಾ ಪರಮಾಕರ್ಷಣೆ ಹೊತ್ತ ಧ್ವನಿಯ ಪ್ರತಿಧ್ವನಿಗಳು ಅತ್ಯಂತ ದುರ್ಬಲವಾಗಿ, ಎಳೆಯರಲ್ಲಿ ಅನುರಣಿಸಿದ ರೀತಿಯಂತೂ ಅಸಂಖ್ಯೆ ಪಡಿಯಚ್ಚುಗಳಲ್ಲಿ ಏಕತಾನತೆಯ ಜೋಮು ಹಿಡಿಸಿಬಿಟ್ಟವು. ತಮ್ಮದು ಹೊಸದನಿ, ಹೊಸ ಜಗತ್ತು ಎಂದುಕೊಳ್ಳುವ ಎಲ್ಲರ ಅಕ್ಷಾಂಶ ರೇಖಾಂಶಗಳೂ ಒಂದೇ ರೂಪದವಾಗಿದ್ದವು. ಇತಿಹಾಸದಲ್ಲಿ ಇದೆಲ್ಲಾ ಯಾವನೆ ಒಬ್ಬ ಶಕ್ತಕವಿಯ ಜನನದಿಂದುಂಟಾಗುವ ಅನಪೇಕ್ಷಿತ ಬೆಳವಣಿಗೆಗಳು.

ರಾಜಕೀಯ ಆರ್ಥಿಕ ಸಾಮಾಜಿಕ ಪರಿಸ್ಥಿತಿಗಳು ಬೂಜುಗಟ್ಟಿದ ಹಿನ್ನೆಲೆಯಲ್ಲಿ ಸಿದ್ಧಲಿಂಗಯ್ಯನವರ ಕಾವ್ಯವನ್ನು ಗುರುತಿಸಬೇಕಾಗಿದೆ. ಕೆಲವು ವೈಫಲ್ಯಗಳಿಂದಾಚೆಗೂ ಅವರ ಕಾವ್ಯ ಸಾಧಿಸಿಬಿಟ್ಟ ವಿಶಿಷ್ಟ ಯಶಸ್ಸುಗಳನ್ನು ಗುಣಿಸಿಕೊಳ್ಳಬೇಕಾಗಿದೆ. ಆದ್ದರಿಂದ ತನ್ನ, ತನ್ನವರ ಸ್ಥಿತಿಯನ್ನು ತಣ್ಣಗೆ ಹೇಳಿಕೊಳ್ಳುವ ಮಹಾದೇವರ ವಾಸ್ತವವಾದಿ ಬರವಣಿಗೆಗೂ ಶೋಷಿತ ನೆಲೆಯಿಂದ ಪ್ರತಿಭಟಿಸಿ ಬರೆಯುವ ಸಿದ್ಧಲಿಂಗಯ್ಯನವರ ಕಾವ್ಯ ತನ್ನ ರೇಖೆಗಳನ್ನು ಹಿಗ್ಗಲಿಸಿ ಎತ್ತರಿಸಿದ ಸ್ಥಿತಿಗೂ ಇರುವ ಮುಖ್ಯ ವ್ಯತ್ಯಾಸವನ್ನು ಈ ಬರಹದಲ್ಲಿ ಗುರುತಿಸಲು ಪ್ರಯತ್ನಿಸುತ್ತೇನೆ.

ಮುಖ್ಯವಾಗಿ ಭಾಷಾಶಾಸ್ತ್ರಜ್ಞರಾದ ಪ್ರೊ॥ ಹಂಪ. ನಾಗರಾಜಯ್ಯ ಅವರು ತಮ್ಮ 'ದಲಿತ ಸಾಹಿತ್ಯ' ಎಂಬ ಪ್ರಬಂಧದಲ್ಲಿ ಪ್ರಸ್ತುತ ಕಾವ್ಯದ ತುರ್ತುಗಳನ್ನು ಚರ್ಚಿಸುತ್ತಾ 'ನವ್ಯರಂತೂ ಜನಪರವಾದ ನಿಲುವಿಗೆ ಮಡಿವಂತಿಕೆ ತೋರಿಸಿದರು' ಎಂದು ಹೇಳಿದ್ದಾರಲ್ಲದೆ ಇಡಿಯಾಗಿ ಆಂತರಿಕ ಅವಶ್ಯಕತೆಯೊಂದರ ಪ್ರಚೋದನೆಯೇ ಇಂಥಾ ಕಾವ್ಯ ಪರಂಪರೆಗೆ ಪ್ರೇರಣೆ ಎಂಬುದಾಗಿಯೂ ಅಭಿಪ್ರಾಯಪಟ್ಟಿದ್ದಾರೆ. ಹಂಪನಾ ಅವರು ಗುರುತಿಸುವ ಕಾವ್ಯದ ಸದ್ಯದ ಸ್ಥಿತಿ–'ಜನಸಮ್ಮುಖ ದೃಷ್ಟಿಯನ್ನು ಮಾನ್ಯಮಾಡುವ ಪಂಥದವರು ಪಲಾಯನವಾದಿಗಳಲ್ಲ, ನಿಷ್ಠುರ ವಾಸ್ತವ ಬದುಕಿನ ನಿಜದನಿಗಳನ್ನು ಯಥಾವತ್ತಾಗಿ ದಾಖಲಿಸುವವರು, ಜನಋಣವನ್ನು ಒಪ್ಪಿಕೊಂಡವರು. ಇವರದು ಕೇವಲ ಆಹ್ಲಾದ ಇಲ್ಲವೆ ಆತ್ಮತೃಪ್ತಿಗಾಗಿ ಬರೆದ ಬರವಣಿಗೆಯಲ್ಲ. ಏಕೆಂದರೆ ಇದು

ನವ್ಯತೆಯಂತೆ ಹೊರಗಿನಿಂದ ಆಮದಾಗಿ ಬಂದ ಎರವಲು ಸರಕಲ್ಲ'. ನವ್ಯೋತ್ತರ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಹಂಪನಾ ಸಿದ್ಧಲಿಂಗಯ್ಯನವರನ್ನು "ಕನ್ನಡ ಕಾವ್ಯಕ್ಕೆ ಹೊಸ ತಿರುವು ಕೊಟ್ಟವರು, ದಲಿತ ಸಾಹಿತ್ಯಕ್ಕೆ ರಕ್ತದಾನ ಮಾಡಿದವರು ಸಿದ್ಧಲಿಂಗಯ್ಯ (ಹೊಲೆಮಾದಿಗರ ಹಾಡು, ಸಾವಿರಾರು ನದಿಗಳು, ಕಪ್ಪುಕಾಡಿನ ಹಾಡು). ಈ ಕವಿ ಬರೆಯುವ ರೀತಿಯಲ್ಲಿ ಭಿನ್ನತೆ ಒಡೆದು ಕಾಣುತ್ತದೆ. ಕವಿತೆ ಸಾಭಿನಯದಿಂದ ಪರಿಣಾಮಕಾರಿಯಾಗುವ ಭಾಗಗಳಲ್ಲಿ ಭಾಷೆಯ ಮೇಲೆ ಕವಿಗಿರುವ ಹಿಡಿತವನ್ನು ಗುರುತಿಸಬಹುದಾಗಿದೆ. ಅವರ ಕೆಲವು ಕವಿತೆಗಳನ್ನು ಹಾಡಿದಾಗ ಅದರ ಝಳ ತಾಕುತ್ತದೆ, ಮೂಕ ವೇದನೆಗಳ ಮುಲುಕಾಟ ಕೇಳುತ್ತದೆ. ಮೊದಲಿನ ಬರವಣಿಗೆಯಲ್ಲಿದ್ದ ಅಬ್ಬರ ಆವೇಶ ರೊಚ್ಚು ಶೋಧನಗೊಳ್ಳುತ್ತಿದೆ. ಈಗಿನ ಅಭಿವ್ಯಕ್ತಿ ಮತ್ತಷ್ಟು ಸೂಕ್ಷ್ಮಜ್ಞತೆ ಬೆಳೆದು ಅರ್ಥಪೂರ್ಣ ಧ್ವನಿಶಕ್ತಿಯನ್ನು ಪಡೆದುಕೊಳ್ಳುತ್ತಿದೆ. ತಮ್ಮ ಜನ್ಮಜಾತವಾದ ಪ್ರತಿಭೆ ಸಂವೇದನೆಗಳನ್ನು ಅವರು ನಿರ್ದಿಷ್ಟ ಕಾವ್ಯ ಪ್ರಯೋಜನಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆಂಬುದು ಮುಖ್ಯವೆನಿಸುತ್ತದೆ. ಮನಸ್ಸು ಕಲಕುತ್ತಾ ಹೋದ ಅನುಭವಗಳಿಗೆ ಬೆಳಕು ಹಾಯಿಸುವ ಇವರ ಕಾವ್ಯದ ಭಾಷೆ ಅನಲಂಕೃತವಾದ ಆಡುಮಾತಿನ ಲಯದಲ್ಲಿದೆ ಎಂಬುದು ಒಟ್ಟಾರೆ ಗಮನಿಸಬೇಕಾದ ಸಂಗತಿ" ಎಂದು ಗುರುತಿಸಿದ್ದಾರೆ.

ತಂತ್ರಪ್ರಾಧಾನ್ಯತೆಯಿಂದ ಸೊರಗಿದ ನವ್ಯಕಾವ್ಯದ ಅವನತಿಯ ಆರಂಭದಲ್ಲೆ ದಟ್ಟವಾದ ಸಾಮಾಜಿಕ-ರಾಜಕೀಯ ಪ್ರಜ್ಞೆಯನ್ನೊಳಗೊಂಡ ಬರವಣಿಗೆಯ ಮೊಳಕೆಗಳು ಉದಯಿಸಿದ್ದವು. ಹಂಪನಾ ಪ್ರಮುಖವಾಗಿ ಗುರುತಿಸಿರುವುದು ಈ ಬೆಳವಣಿಗೆಯನ್ನೆ. ಆದರೆ 'ದಲಿತ ಸಾಹಿತ್ಯ' ಎಂಬುದಾಗಿಯೇ ಒಂದು ಪ್ರತ್ಯೇಕ ಭಾವಾರೋಪಣೆ ಗೊಂದಲಗಳಿಗೆ ಕಾರಣವಾಗುವುದರಿಂದ ಹಂಪನಾ ಹಾಗೆ ಸಿದ್ಧಲಿಂಗಯ್ಯನವರನ್ನು ಗುರುತಿಸುವುದು ನನಗೆ ಸಮ್ಮತವಿಲ್ಲ. ದಲಿತರು ಬರೆದದ್ದೆಲ್ಲಾ ದಲಿತ ಸಾಹಿತ್ಯವಾಗುವುದಾದರೆ ಅದಕ್ಕೆ ಬಂಡಾಯ ಅಥವಾ ಪ್ರಗತಿಪರತೆಯ ಸ್ವರೂಪ ಪ್ರಾಪ್ತವಾಗುವುದಿಲ್ಲ. ಏಕೆಂದರೆ 'ದಲಿತ ಸಾಹಿತ್ಯ'ವೇ ಅಂತ ಒಂದು 'ರೀತಿ' ಹುಟ್ಟಿಕೊಂಡರೆ ಮತ್ತೊಮ್ಮೆ ಅದು 'ಅಸ್ಪೃಶ್ಯ'ವಾಗುವ ವಿಧಾನವಲ್ಲದೆ ಬೇರೇನೂ ಅಲ್ಲ. ಇದು ದೇವನೂರು ಮುಂತಾದವರ ಬರಹಗಳಿಂದ ಸಾಕ್ಷಿಕಗೊಳಿಸಿಕೊಳ್ಳಬಹುದಾದ ಸಂಗತಿ. ಇನ್ನು ದಲಿತರ ಕುರಿತಾಗಲಿ, ದಲಿತರ ಪರವಾಗಿರುವುದಾಗಲಿ ದಲಿತ ಸಾಹಿತ್ಯವಾಗಲು ಸಾಧ್ಯವಿಲ್ಲ. ಈ ಗೊಂದಲವನ್ನು ಶಿವರಾಮ ಕಾರಂತರ 'ಚೋಮ' ಚದುರಂಗರ 'ವೈಶಾಖ' ಮುಂತಾದ ಉದಾಹರಣೆಗಳ ಮೂಲಕ ಸುಲಭವಾಗಿ ನಿವಾರಿಸಿಕೊಳ್ಳಬಹುದಾದ ಗೊಂದಲ. ಆದ್ದರಿಂದಲೇ ಜಾತಿ ಪಂಗಡಗಳನ್ನು ಮೀರಿ ಪ್ರಗತಿಪರ ಆಶಯ, ಪ್ರತಿಭಟನೆಯ ಧೋರಣೆಗಳನ್ನು ಒಳಗೊಂಡು ಸಾಹಿತ್ಯಿಕ ಲಕ್ಷಣಗಳನ್ನು ಹೊಂದಿರುವುದೇ ನಿಜವಾದ ಜನಪರ ಬಂಡಾಯಸಾಹಿತ್ಯ ಅಥವಾ

ಕಾವ್ಯ. ಎಲ್ಲಾ ಜಾತಿಮತಗಳ ಶೋಷಿತರಲ್ಲೂ ಬಡಪರನ್ನು ಬಡತನವನ್ನು ಗುರುತಿಸಿರುವ ಸಿದ್ಧಲಿಂಗಯ್ಯ ವಿಶಾಲಾರ್ಥದಲ್ಲಿ ಜನಪರ ಬಂಡಾಯ ಕವಿ !

ಸಾಹುಕಾರರ ಬಲೆಗೆ ಪಾರಿವಾಳಗಳಂತೆ
ಸಿಕ್ಕಿ ಸುಸ್ತಾದಂತ ನನ್ನ ಜನರು
ಎಲ್ಲಾರು ತಲೆಯೆತ್ತಿ ಬಲೆಯೊಡನೆ ಹಾರಿದರು
ಎದುರಾದ ಮೋಡಗಳ ಸೀಳಿಕೊಂಡು

ಯಾರು ಬಂದರೂ ಯಾರು ಹೋದರೂ
ಕತ್ತಲಳಿಯಲಿಲ್ಲ
ಅಸ್ಥಿಪಂಜರದ ಜೋಪಡಿಯೊಳಗೆ
ದೀಪ ಹಚ್ಚಲಿಲ್ಲ

'ಮಹಾಕವಿಗಳ ಪ್ರಯೋಗದಿಂದಲೇ ನಾವು ಕಾವ್ಯಗಳ ಸ್ವರೂಪವನ್ನು ತಿಳಿಯಬೇಕು' ಎಂದು ಮೊಟ್ಟಮೊದಲ ಅಲಂಕಾರಿಕನಾದ ಭಾಮಹ ಹೇಳಿದ್ದಾನೆ. ಇದಕ್ಕೆ ಪೂರಕವಾಗಿಯೇ ಬರುವ ಇನ್ನೊಂದು ಮಹತ್ವದ ಮಾತು 'ಔಚಿತ್ಯವೇ ಕಾವ್ಯದ ಜೀವಿತ' ಎಂಬ ಕ್ಷೇಮೇಂದ್ರನದ್ದು. ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಸಿದ್ಧಲಿಂಗಯ್ಯನವರ ರಚನೆಗಳು ಮೇಲಿನ ಎರಡೂ ಅಭಿಪ್ರಾಯಗಳನ್ನು ಅರಗಿಸಿಕೊಂಡೇ ನಿರ್ಮಾಣವಾಗಿರುವುದು ಕಂಡುಬರುತ್ತದೆ. ತಮ್ಮ ಸಿಟ್ಟಿಗೆ ಘೋಷಣೆಗಳಿಂದಾಚೆಗೂ ಪುನರ್‌ಶಕ್ತಿ ಪುನರ್‌ವೇಗ ಕೊಡುತ್ತಾ ಸಿದ್ಧಲಿಂಗಯ್ಯನವರಿಗೆ ಪ್ರಥಮ ಪ್ರಯೋಗದ ದಾಷ್ಟ್ಯ ಸಾಧ್ಯವಾಗಿದ್ದು ಅವರಿಗಿರುವ ತೀವ್ರ ಸಾಮಾಜಿಕ ಕಾಳಜಿಯ ಅನಿಯಂತ್ರಿತ ಒತ್ತಡದಿಂದಾಗಿ. ಹಾಗೆ ಔಚಿತ್ಯಪ್ರಜ್ಞೆಕೂಡ ಈ ಕವಿಗೆ ಎಷ್ಟರ ಮಟ್ಟಿಗೆ ಜಾಗೃತಾವಸ್ಥೆಯಲ್ಲಿತ್ತೆಂದರೆ ಜನರ ಆಡುಭಾಷೆ, ಸರಳ ಉಪಮಾಲಂಕಾರ ಕಾವ್ಯ ಕಟ್ಟುವ ಕ್ರಮದಲ್ಲಿ ಸಾಮಾನ್ಯರೊಂದಿಗಿನ ಬಾಂಧವ್ಯದ ಸಾದೃಶ್ಯವಾಗಿ ರೂಪತಾಳಿದ್ದಲ್ಲದೆ ಅಸಾಧಾರಣ ಶಕ್ತಿ, ಕಲಾತ್ಮಕತೆಗಳನ್ನು ಸಂಚಯಿಸಿದವು.

ಈ ಅಂಶಗಳೇ ಕವಿಯನ್ನು ಅಕ್ಕಿಗಿರಣಿ, ಸೋಡಾ ಫ್ಯಾಕ್ಟರಿಯ ನೊಂದ ಮನಸ್ಸುಗಳ ಹತ್ತಿರ ದೂಡಿದ್ದು. ಕೇವಲ ಅಕೆಡೆಮಿಕ್ ಮೆಟ್ಟಿಲುಗಳ ಚುಯಿಂಗಮ್ ಆಗಿದ್ದ ಕಾವ್ಯದ ಅಮಲು ತನಗಾದ ಅನ್ಯಾಯಗಳನ್ನು ಪ್ರತಿಭಟಿಸುವ, ನೊಂದವರ ಆಯುಧವಾದದ್ದು. ಇಲ್ಲೇ ವಸ್ತುಗಳಿಗಾಗಿ ಪುರಾಣಗಳ ಹಳೆ ಗವಿಸೇರುವ ಶಿವಪ್ರಕಾಶರಿಗೂ ಸಮಕಾಲೀನರ ಕತ್ತಲ ಸ್ಥಿತಿಗೆ ಮಿಡಿಯುವ ಸಿದ್ಧಲಿಂಗಯ್ಯನವರಿಗೂ ಸ್ಪಷ್ಟ ವ್ಯತ್ಯಾಸವಿರುವುದು. ಬಾಳೆಗಿಡ, ಗೂಬೆ, ಮೊಲೆ ಹಾಲುಗಳ ಕುರಿತು ಬರೆಯುತ್ತಾ ಶಿವಪ್ರಕಾಶ್ ನವ್ಯದ 'ಬಂದೋಡಿ' ಆವರ್ತದಲ್ಲೇ ಆರನಿಜ ಅರೆಸುಳ್ಳಿನ 'ಐತಿಹ್ಯ'ಗಳ ಸೇತುವೆ ಹುಡುಕುತ್ತಿದ್ದರೆ ಬೆಂದಮನೆಯಲ್ಲಿ ಹುಟ್ಟಿದ ನೊಂದಮನಸ್ಸಿನ ಕವಿ ಮನಸ್ಸು–

ಯಾವ ಪಾಪವ ಮಾಡಲಿಲ್ಲ
ಯಾರ ತಲೆಯನು ಹೊಡೆಯಲಿಲ್ಲ
ಕರಗಿ ನಮ್ಮಯ ಬಾಳ ಕತ್ತಲು
ಕಾಣಲಾರೆವೆ ಹಗಲನು

ಎಂದು ಹಂಬಲಿಸುತ್ತದೆ. ಸಿದ್ಧಲಿಂಗಯ್ಯನವರ ಕಾವ್ಯದ ಯಾವ ತುಣುಕಾದರೂ ಒಂದು ಜೀವಕಣವಾಗಿ ಹಾಗೆ ಇಡೀ ಪದ್ಯದಿಂದ ಅದನ್ನು ಬೇರ್ಪಡಿಸಿ ಓದಿದಾಗಲೂ ಸ್ವಂತಿಕೆಯಿಂದ ಮಿನುಗುತ್ತದೆ. ಬಂಡಾಯಕಾವ್ಯ ತನ್ನ 'ಬಂಧ', 'ರೂಪ'ಕ್ಕಾಗಿ ಹಂಬಲಿಸುತ್ತಲೇ ಸಾಧಿಸಿದ ಅನನ್ಯ ಯಶಸ್ಸು ಇದು. ಇಲ್ಲಿ ಸರ್ವೋತ್ತರ ಸಾಹಿತ್ಯಕ್ಕೆಂದು ಹುಟ್ಟಿಕೊಳ್ಳದ ಸದ್ಯದ ವಿಮರ್ಶಾ ಮಾನದಂಡಗಳನ್ನೆ ಅವಲಂಬಿಸಿದರೂ ಸೂಚ್ಯತೆ, ಸಂವಹನ ಶಕ್ತಿ, ಸರಳತೆ, ಕಲಾತ್ಮಕತೆ ಎಲ್ಲೂ ಮುಕ್ಕಾಗುವುದಿಲ್ಲ. ಅಕೆಡೆಮಿಕ್ ಮುತ್ಸದ್ದಿತನವನ್ನು disturb ಮಾಡುತ್ತಲೆ ಸಿದ್ಧಲಿಂಗಯ್ಯ ಜನರ ಬಳಿ ಓಡೋಡಿ ತಲುಪಿದ ಬಗೆಯಿದು.

ನಾಲ್ಕು ಪರ್ಸೆಂಟ್ ಬುದ್ಧಿಜೀವಿಕರಿಗಾಗಿ ನವ್ಯದ ಮಾನದಂಡಗಳಿಂದಲೇ ವಿಮರ್ಶಿಸಲ್ಪಡುತ್ತಿರುವ ಶಿವಪ್ರಕಾಶರ ಕಾವ್ಯ ಇದೀಗ ಹೆಜ್ಜೆ ಊರುತ್ತಿರುವ ವಿಮರ್ಶೆಯ ತಾಕೀತುಗಳಿಗೆ ಎಷ್ಟೊಂದು ಪರಕೀಯವಾಗಿ ನಿಲ್ಲಬಹುದೆಂಬುದನ್ನು ಅವರ ಕಾವ್ಯದ ಯಾವುದೇ ಒಂದೆರಡು ತುಣುಕುಗಳ ಮೂಲಕ ಅರ್ಥೈಸಿಕೊಳ್ಳ ಬಹುದು.

ಬೀಜ ಗರ್ಭಿಣಿ ಹೆರುವ ಕಾಮಲತೆಯುರು ನೆರೆದ
ಮೃತ್ತಿಕೆಯ ಮಹಮನೆಯ ಹೊಸ್ತಿಲಿಗೆ
ಕರೆಯದೆ ಬಂದವರ,
ಮಿಂದುಣದೆ, ಹೇಳದೇ ಹೋದವರ

('ಮರುಳ ಶಂಕರ ದೇವ'-ಮಳೆಬಿದ್ದ ನೆಲದಲ್ಲಿ)

ಏನಾಯ್ತು ನಿಟಿಲ ಭ್ರೂಮಧ್ಯದ ಸ್ಪಟಿಕವರ್ಣದ ದೀಪ್ತಿ
ಮೇರು ದಂಡದಿ ಹರಿವ ತಿಳಿಬೆಳಕಿನ ಹಾದಿ
ದಾಟಿ ಕದಳಿ ಶಿಖರ ಮೀರಿ ಹಾರಿ
ಅಂಬರದಲ್ಲಿ ತೇಲಾಡಿ ನನ್ನ ಆತ್ಮದ ಪಕ್ಷಿ

('ಸಮಗಾರ ಭೀಮವ್ವ'–ಮಳೆಬಿದ್ದ ನೆಲದಲ್ಲಿ)

ತಣ್ಣಗೆ ಹೇಳುವ, ಭಾಷೆಯನ್ನು ಸಂಕಟಕ್ಕೊಡ್ಡಿ ರಸತೆಗೆಯಲು ಹವಣಿಸುವ ದೇವನೂರರ ವಾಸ್ತವವಾದಿ ಬರಹಗಳು ಜನರ ನಡುವೆ ತಡವರಿಸುವ ಸ್ಥಿತಿ ಹಾಗು ಪುರಾಣ ಇತಿಹಾಸದ ಸಿದ್ಧವಸ್ತುಗಳಿಗೆ ನವ್ಯಬಂಧದಲ್ಲಿ ಲಯಕ್ಕೆ ಒತ್ತುಕೊಟ್ಟು

ವಿಷಾದದ ಶಕುನ ಪಠಿಸುವ ಶಿವಪ್ರಕಾಶರ ಸ್ಥಿತಿ ಕೆಲವರಲ್ಲಿ ಮಾತ್ರ ಉಂಟು ಮಾಡುವ ಸುಕುಮಾರ ಕಲರವದ ಮಿತಿಗಳನ್ನು ಸಿದ್ಧಲಿಂಗಯ್ಯನವರ ಪದ್ಯಗಳು ಸಸಾರವಾಗಿ ಹರಿದು ನಿಲ್ಲುತ್ತವೆ. ಪರಪ್ರೀತಿ ತುಂಬಿಕೊಂಡ ಒಂದು ರೀತಿಯ ಅನಿರ್ಬಂಧ ಸೆಳೆತ ಸಿದ್ಧಲಿಂಗಯ್ಯನವರಿಗೆ ಕರಗತವಾಗಿರುವ dynamic ಕಲೆಗಾರಿಕೆ.

ನನ್ನ ಸೀರೆಯ ಸೆರಗು ಮರೆಮಾಡಿಕೊಂಡಿರುವ
ಜೋಪಡಿಯ ಲೋಕವನು ತೋರಲೇನು
ಹೊಟ್ಟೆಯೊಳಗಿನ ಬೆಂಕಿಯುಂಡೆಯೆಲ್ಲವನೆತ್ತಿ
ಮೆರೆವ ಜನಗಳ ಮೇಲೆ ಚೆಲ್ಲಲೇನು

('ಬೆಂಗಳೂರಿನ ಹಾಡು'–ಕಪ್ಪು ಕಾಡಿನ ಹಾಡು)

ಬಿ. ಆರ್. ಲಕ್ಷ್ಮಣರಾವ್ ಅವರ ಮದನಾಪರಾವತಾರಿ ಪದ್ಯಗಳ ಪ್ರೇಮ ಸುಪುಷ್ಟಿ, ಎಚ್. ಎಸ್. ವೆಂಕಟೇಶಮೂರ್ತಿಯವರ ಭಾಷೆಯಲ್ಲಿ ಬಿಚ್ಚಿಕೊಡುವ ಸಂಗೀತ, ಶಿವಪ್ರಕಾಶ ಅಂಥವರ ಪೌರಾಣಿಕ ಪಳೆಯುಳಿಕೆಗಳ ಆಭಾಸವನ್ನು ಮೀರಿ ಸಾರ್ಥಕ ಗೊಂಡಿದೆ. ಆದರೆ ವಸ್ತುವಿನ ಆಯ್ಕೆಯಲ್ಲಿ ಈ ಇಬ್ಬರು ಕವಿಗಳು ತಮ್ಮ ಮಿತಿಗಳಿಂದಾಚೆಗೆ ಹೊಸಗಾಳಿ ಹೊಸರಕ್ತಕ್ಕೆ ಪ್ರಜ್ಞಾಪೂರ್ವಕವಾಗಿಯೇ ಹಿಮ್ಮುಖ ರಾಗಿರುವುದು ಬಗೆಬಗೆಯಲ್ಲಿ ಬಗೆಯುತ್ತಾ ಕುಪ್ಪಳಿಸಿ ಕೆನೆದೋಡುವ ಕಾವ್ಯದಂತಾ ಚಿರಂತನ ಜೀವನದಿಗೆ ಹನಿ ನಿರಾಕರಿಸುವ ಪ್ರತಿಕ್ರಿಯೆಯಾಗಿದೆ. ಹಾಗೆ ಇದು ಕವಿಯೊಬ್ಬ ಜನಸಮೂಹದ ಆಶೋತ್ತರಗಳ ನಾಡಿಬಡಿತವನ್ನು ಉದಾಸೀನ ಹಗೆಯಲ್ಲಿ ತಿರಸ್ಕರಿಸಿದ ರೀತಿ ಕೂಡ.

'ಸಾವಿರಾರು ನದಿಗಳು' ಸಿದ್ಧಲಿಂಗಯ್ಯನವರ ಎರಡನೇ ಕವನ ಸಂಕಲನ. ಇದರಲ್ಲಿ ಅಪರೂಪದ ಪ್ರಯೋಗವಾದ 'ಅಲ್ಲೆ ಕುಂತವರೆ' ಖಂಡಕಾವ್ಯ ಹಾಗೂ ಇತರ ೧೫ ಪದ್ಯಗಳಿವೆ. ನವ್ಯೋತ್ತರ ಕಾವ್ಯಸಂದರ್ಭದಲ್ಲಿ ಹೇಗೊ ಹಾಗೆ ಸಿದ್ಧಲಿಂಗಯ್ಯನವರ ಈವರೆಗೆ ಪ್ರಕಟವಾಗಿರುವ ಮೂರು ಸಂಕಲನಗಳಲ್ಲಿ ಈ ಸಂಕಲನ ವಿಶೇಷವಾಗಿ ಗುರುತಿಸಲ್ಪಟ್ಟದೆ. ಶ್ರೇಷ್ಠ ಕಾವ್ಯಕ್ಕಿರಬೇಕಾದ ಎಲ್ಲ ಲಕ್ಷಣಗಳನ್ನೂ ಒಳಗೊಂಡು ಈ ಸಂಕಲನದ ಪದ್ಯಗಳು ವ್ಯಾಪಕ ಚರ್ಚೆ ಹಾಗೂ ಸ್ವಾಗತಕ್ಕೊಳಗಾಗಿವೆ. ಸಿದ್ಧ ಲಿಂಗಯ್ಯನವರು ಈ ಸಂಕಲನದ ಪದ್ಯಗಳಲ್ಲಿರುವ ವೈಯಕ್ತಿಕ ಆಕ್ರೋಶಕ್ಕೆ ಕೂಡ ಸಾಂಸ್ಕೃತಿಕ ಹಿನ್ನೆಲೆ ಹಾಗೂ ಸಾಮಾಜಿಕ ವಿವರಗಳ ಪರಿಪೂರ್ಣತೆ ತಂದುಕೊಟ್ಟಿದ್ದಾರೆ.

'ಜೋರಾಗಿ ಓದಿಕೊಂಡಾಗ ಅಥವಾ ಹಾಡಿದಾಗ ನನ್ನ ರಚನೆಯ ಉದ್ದೇಶ ಸ್ಪಷ್ಟವಾಗುತ್ತದೆ' ಎಂದು ಹೇಳಿಕೊಳ್ಳುವ ಕವಿ ತಾನು ಬಳಸುವ ಭಾಷೆಗೆ ಅನುಭವಿ ಸಿದ ನೋವಿನ ಪೊರೆಗಟ್ಟಿಸುವುದರಿಂದ 'ಶಬ್ದಾರ್ಥ ಸಹಿತಂ ಕಾವ್ಯಂ' ಎಂಬ ಭಾಮಹನ ಅಭಿಪ್ರಾಯಕ್ಕೆ ಹತ್ತಿರವಾಗುತ್ತಾರೆ. ಇವತ್ತಿಗೂ ಬಹುಪಾಲು ಹಳ್ಳಿಹಜಾರಗಳ

ಸಂಜೆಗುಂಪುಗಳಲ್ಲಿ ಅನುರಣಿಸುವ ಲಕ್ಷ್ಮೀಶನ ಜೈಮಿನಿಭಾರತವಾಗಲೀ ಕುಮಾರವ್ಯಾಸನ ಭಾರತವಾಗಲೀ ಶ್ರೇಷ್ಠ ಕಾವ್ಯದ ಸಾರ್ಥಕತೆಯೊಂದಿಗ ಜನರ ಚಿತ್ತ ಭಿತ್ತಿಯಲ್ಲಿ ಅವರ ಮರಣಕಾಲವೂ ಜಾಗೃತಾವಸ್ಥೆಯಲ್ಲಿರುವುದನ್ನು ನಾವೆಲ್ಲಾ ನೋಡುತ್ತಿದ್ದೇವೆ. ಯಾವುದೇ ಕಾವ್ಯಕ್ಕಿರಬೆ ಕಾದ ಈ ಸುಲಭಗ್ರಾಹ್ಯ ತೋಂಡಿತನ ಹಾಗೂ ಭಾಷಾ ಆಕರ್ಷಣೆ ಸಿದ್ಧಲಿಂಗಯ್ಯನವರ ಲೇಖನಿ ರೂಢಿಸಿ ಕೊಂಡಿದೆ. ಹಾಗೆ ಅನಕ್ಷರಸ್ಥರ ನಡುವೆ ತೋಂಡಿ ಸಂಪ್ರದಾಯದಲ್ಲಿ ಮೊದಲೇಟಿಗೆ ಆಕರ್ಷಿಸುವ, ಸುಲಭ ನೆನಪಿಗೆ ಕಾರಣವಾಗುವ ಅವರ ವಾಕ್ಯಗಳಲ್ಲಿನ 'ಶಬ್ದ' ಹಾಗೂ ಇದರೊಳಗಿನ 'ಸಂಗೀತ'–'ಅರ್ಥ'ದೊಂದಿಗೆ ಕೇಳುಗರನ್ನು ಹಿಡಿದುಬಿಡುತ್ತದೆ.

ಕೋಟಿಕೋಟಿ ಕನಸುಗಳೊಂದಿಗೆ
ಹತ್ತಿ ಉರಿಯುವ ಮನಸುಗಳೊಂದಿಗೆ
ಗುಡುಗು ಮಿಂಚಿನ ಘೋಷಣೆಯಲ್ಲಿ
ಭೂಕಂಪನಗಳ ಭಾಷೆಗಳಲ್ಲಿ

(ದಲಿತರು ಬರುವರು)

ಭಾಷಣಗಳ ಬಡಿಸಿದಿರಿ ಘೋಷಣೆಗಳ ಕುಡಿಸಿದಿರಿ
ಸಂಕಟಗಳ ಕಂಪನಕ್ಕೆ ಕೊನೆಯಿಲ್ಲವೇ ಹೇಳಿರಿ
ನಿಮ್ಮ ಬೇಟೆಯುತ್ಸವದಲಿ ಕುರಿಗಳಾಗಿ ಸತ್ತಜನರು
ಬಂದಿರುವರು ಹುಲಿಗಳಾಗಿ ಗರ್ಜನೆಯನು ಕೇಳಿರಿ

(ಬಂದಿರುವರು ಹುಲಿಗಳಾಗಿ)

ಗ್ರಾಮಾಳೆ ಹಿಂಡುತಾರೆ
ತಲೆಬುಲ್ಡೆ ಜಜ್ಜುತಾರೆ
ಮಾತಿಲ್ಲದ ಗಂಟಲಿಗೆ
ವಲೆದುಕೊಂಡ ತುಟಿಗಳಿಗೆ
ಅದುಮಿ ಅಮುಮಿ ತುರುಕುತಾರೆ
ಅನ್ನದ ಮಿದಿಕೆ

(ಅಲ್ಲೆ ಕುಂತವರೆ)

ತಟ್ಟನೆ ತಟ್ಟುವಂಥ ತಿಳಿಯಾದ ಭಾಷೆಯಲ್ಲಿ ಕವಿ ತನ್ನ ಉದ್ದೇಶಿತ ಗುರಿಯನ್ನು ಸೂಕ್ಷ್ಮವಾಗಿ ತಲುಪುತ್ತಾ ಸಮಸ್ತ ಜನರೊಂದಿಗೆ ಕಲೆತು ಮಾತನಾಡಿಸುವ ಆತ್ಮೀಯತೆಯನ್ನು, ಅಂತರಂಗದ ಭಾವನೆಗಳನ್ನು ಪ್ರಚೋದಿಸುವ ವಿಶಿಷ್ಟ ದನಿಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿಕೊಡುತ್ತಾರೆ. ಎಷ್ಟೋಂದು ಸಮರ್ಪಕವಾಗಿ ಎಂದರೆ :

ಅರಸು ರಾಕ್ಷಸ ಮಂತ್ರಿಯೆಂಬುವ
ಮೊರೆವ ಹುಲಿ ಪರಿವಾರ ಹದ್ದಿನ
ನೆರವಿ ಬಡವನ ಬಿನ್ನಪವನಿನ್ನಾರು ಕೇಳುವರು
(ಸಭಾಪರ್ವ)

ಎಂದ ಕುಮಾರವ್ಯಾಸನ ಕಾವ್ಯಶಕ್ತಿಯು 'ಶಬ್ದ' ವೈಖರಿ 'ಅರ್ಥ ಸ್ಫುರಣ' ವ್ಯಾಪ್ತಿ ಸಿದ್ಧಲಿಂಗಯ್ಯನವರಲ್ಲೂ :

ಐದು ವರ್ಷದ ಹಿಂದೆ ಓಟಿಗೆ ಬಂದೋರು
ನೋಟನ್ನು ಕೊಟ್ಟೋರು ಅಲ್ಲವೇನೋ
ಕೊಟ್ಟ ಸಾಲವ ಜನರು ಯಿಂದಕ್ಕೆ ಕೊಡದಿರಲು
ಕೈಕಾಲು ಮುರಿಯೋರು ಅಲ್ಲವೇನೋ
(ಅಲ್ಲೆ ಕುಂತವರೆ)

ಪರಿಭ್ರಮಿಸುತ್ತದೆ. ತಡೆಯೆನ್ನಿಸುವುದು ಓದುತ್ತಿದ್ದಂತೆ ಪಾರದರ್ಶಕವಾಗುತ್ತ ವ್ಯವಸ್ಥೆಯ ಏಖಮುಖ ಕ್ರೌರ್ಯವನ್ನು ಚಿತ್ರಿಸುತ್ತದೆ. ಕವಿಯ ಈ ಸಾಮಾಜಿಕ ವಿವೇಕ ಮ್ಯಾಕ್ಸ್ ಅಡರೆತ್ ಹೇಳುವಂತೆ 'ಲೇಖಕನ ಸೃಷ್ಟಿ ಸ್ವಾತಂತ್ರ್ಯ ಸಾಮಾಜಿಕ ಜವಾಬ್ದಾರಿಯ ವಿವೇಕದಿಂದ ಹೊರತಾದದ್ದಲ್ಲ'ವಾದ್ದರಿಂದ ಸಮಾಜವನ್ನು ಕುರಿತಾದ ಸಿದ್ಧಲಿಂಗಯ್ಯನವರ ತಾತ್ವಿಕ ನೆಲೆಗಳು ಸಾಮಾಜಿಕ ಬದಲಾವಣೆಯನ್ನು ಬಯಸುವ ತೀವ್ರವಾದ ತುಡಿತದೊಂದಿಗೆ ಸಮಸ್ಯೆಗಳಿಗೆ ಎದುರು ವಾದಿಸುತ್ತವೆ. ಒಂದು ರೀತಿ ಯಿಂದ ಈ ಕವಿ ತಮ್ಮ ತಾತ್ವಿಕ ನಿಲುವುಗಳನ್ನು ಪ್ರಜ್ಞಾಪೂರ್ವಕವಾಗಿಯೇ ಹೇರುವ ರೀತಿಯೂ ಇದಾಗಿದೆಯೆನ್ನಬಹುದು. ಇಷ್ಟಾಗಿ ಪದ್ಯಗಳ ಘನತೆ ಎಲ್ಲೂ (ಅಪವಾದ ಗಳೂ ಇವೆ) ಮುಕ್ಕಾಗಿದ್ದು ನಿಮಗೆ ಕಾಣುವುದಿಲ್ಲ.

ಡಾ. ಜಿ. ಎಸ್. ಶಿವರುದ್ರಪ್ಪ ಅವರು ಹೇಳುವ "ಕಾವ್ಯದ ಭಾಷೆಯಲ್ಲಿ ಶಬ್ದ ಗಳಿವೆ ; ಶಬ್ದ ಮೂಲತಃ ಕಿವಿಗೆ ಬೀಳತಕ್ಕದ್ದು ಅಥವಾ ಶ್ರವ್ಯ. ಈ ಶಬ್ದಗಳ ಜೋಡಣೆಯಿಂದ ಕಾವ್ಯದೊಳಗಿನ ಶಬ್ದ, ಅದರ ನಾದ ಲಯ ಇತ್ಯಾದಿಗಳಿಂದ ಒಂದು ಬಗೆಯ ರಮ್ಯತೆಯನ್ನುಂಟು ಮಾಡುತ್ತದೆ. 'ಅರ್ಥ' ಈ ಶಬ್ದ. ವಿನ್ಯಾಸಗಳ ಮೂಲಕ ಮನಸ್ಸಿಗೆ ಮುಟ್ಟುವ ಅರ್ಥ. ಕಾವ್ಯದೊಳಗಿನ ಈ ಶಬ್ದಾರ್ಥಗಳ ಸಹಿತತ್ವದಿಂದಲೇ ಈ ಉಕ್ತಿಗೆ ಕಾವ್ಯತ್ವ ಪ್ರಾಪ್ತವಾಗುವುದು" ('ಕಾವ್ಯ ಸ್ವರೂಪ'–ಕಾವ್ಯಾರ್ಥ ಚಿಂತನ) ಎಂಬ ಕಾವ್ಯ ಸ್ವರೂಪವನ್ನು ಕುರಿತಾದ ಈ ಮೂಲಭೂತವಾದ ಲಕ್ಷಣಕ್ಕೆ ಸಿದ್ಧ ಲಿಂಗಯ್ಯನವರು ಹೇಳುವ 'ಹಾಡುವ' ಅಥವಾ 'ಗಟ್ಟಿಯಾಗಿ ಓದಿಕೊಳ್ಳುವ' ರೀತಿ ಸಮಾನಾಂತರವಾಗಿ ಒಪ್ಪುತ್ತದೆ. ಸಹಜವಾಗಿಯೇ ಕಾವ್ಯತ್ವಕ್ಕೂ ಒಳಗಾಗುತ್ತದೆ. ಶಬ್ದಗಳ ಜೋಡಣೆಯಿಂದ ಉಂಟಾಗುವ ಜಿ. ಎಸ್. ಎಸ್. ಹೇಳುವ ರಮ್ಯತೆ ಯೆಂಬುದು ಓದುಗ/ಕೇಳುಗನನ್ನು ಆಕರ್ಷಿಸುವ ಪ್ರಾಥಮಿಕ ವಿಧಾನವಾಗಿದೆ.

ಇಷ್ಟಾಗಿ, ಕಾವ್ಯ ತಾಳೆಗರಿಗಳಲ್ಲಿ ಮಾತ್ರ ಉಳಿದುಕೊಂಡಿದ್ದಾಗಲೂ ದರ್ಬಾರಿ ಜನರಿದುರಿಗೆ, ಸಾಮಾನ್ಯರ ಪಟ್ಟಿಯ ಈಜಿ ಚಾಪೆಯ ಮೇಲೆ ವಾಚನದ ಮೂಲಕವೇ ಪರಿಪೂರ್ಣತೆ ಸಾಧಿಸಿಕೊಳ್ಳುತ್ತಿದ್ದದ್ದು ಬಹಿರಂಗ ವಿಚಾರವಲ್ಲವೆ ?! ಈ ಹಿನ್ನೆಲೆಯನ್ನು ಪರಿಭಾವಿಸಿದರೂ ಸಾಕು, ನವ್ಯರು ಕಾವ್ಯವನ್ನು 'ಹಾಡಿಕೊಂಡರೆ ಹಾಳಾಗುತ್ತೆ' ಎಂದು ಶಪಥ ಮಾಡಿ ಎಷ್ಟೊಂದು ದಡ್ಡತನ ತೋರಿದ್ದರಲ್ಲ ಎಂದು ಈಗಲೂ ನಗು ತಡೆಯಲಾಗುವುದಿಲ್ಲ. ದಿನ ಕಳೆಯುತ್ತಿದ್ದಂತೆ ಅವಿಗರಾದಿಯಾಗಿ ಬುದ್ಧಿವಂತರಾಗ ತೊಡಗಿದ ಅವರು (ಬದಲಾದ ಸಾಹಿತ್ಯ ಪ್ರಭಾವದಿಂದ ?) ಹಾಡಾಗಲಿ ಎಂದು ಗಾಯಕರ ಕೈಕಾಲು ಕಟ್ಟಲು ಓಡಾಡತೊಡಗಿದ್ದೂ ಈಗ ಬಹಿರಂಗ ಸಂಗತಿ ! ವೈವಿಧ್ಯ ಕ್ಕೋಸ್ಕರವೇ 'ಕಲ್ಕಿ' ಬರೆದ ಕುವೆಂಪು ಅವರಾಗಲೀ 'ಕುರುಡು ಕಾಂಚಾಣ'ದ ಬೇಂದ್ರೆಯವರಾಗಲೀ ಸಿದ್ಧಲಿಂಗಯ್ಯನವರಿಗೆ ನೆರೆಯುವರಾಗುವುದು ಇಲ್ಲಿಯೇ

ಸೂಕ್ಷ್ಮವಾಗಿ ಗಮನಿಸಿದರೆ ಸಂಕಲನದ ಒಂದೆರಡು ಪದ್ಯಗಳು ವೈಚಾರಿಕ ಅಸ್ಪಷ್ಟತೆಯಿಂದ ಸೊರಗಿರುವುದು ಕಂಡುಬರುತ್ತದೆ (ಕಂಡೆ ನನ್ನವಳ ಒಂದು ದಿವಸ) ಇದಕ್ಕೆ ಭಾಷಾ ಸಂದಿಗ್ಧತೆಯೇನೂ ಕಾರಣವಲ್ಲ. ಅತ್ಯಂತ ಪರಿಣಾಮಕಾರಿ ಸಾಲುಗಳಿರುವ ಈ ಪದ್ಯ ಕವಿಯ ಸ್ವಭಾವವನ್ನನುಸರಿಸಿ ತನ್ನ ತಾತ್ವಿಕ ಕಸುವನ್ನು ಕಡೆಯ ಸಾಲುಗಳಲ್ಲಿ ಹೇರುತ್ತವೆ. ಇದರಿಂದ ಸಿದ್ಧಲಿಂಗಯ್ಯನವರ ರೀತಿಯೇ ಇದು ಎಂಬ ತೀರ್ಮಾನಕ್ಕೇನೂ ಬರಬೇಕಾಗಿಲ್ಲ. ಈಚಿನ ದಿನಗಳಲ್ಲಿ ಅವರು ಆಳವಾದ ಚಿಂತನೆ, ಸಿದ್ಧತೆಗಳ ಮೂಲಕ ಹೊಸ ಸಾಧ್ಯತೆಗಳ ಅನ್ವೇಷಣೆ ಮಾಡುತ್ತಿದ್ದಾರೆ. ಇದಕ್ಕೆ ಅವರ 'ಪುರುಷಾರ್ಥ', 'ಬೆಂಗಳೂರಿನ ಹಾಡು', 'ನನ್ನ ಕವನ', 'ಸುಟ್ಟಾವು ಬೆಳ್ಳಿಕಿರಣ', 'ನಲವತ್ತೇಳರ ಸ್ವಾತಂತ್ರ್ಯ' ಕವನಗಳೇ ಸಾಕ್ಷಿ.

ಒಂದು ಜನಾಂಗದ ಪ್ರಜ್ಞೆ ಜಾಗತಿಕ ಪ್ರಜ್ಞೆಯಾಗಿ ಕೂಡ ಸಾರ್ಥಕವಾಗಬೇಕಾದರೆ ಆ ಜನರ ನಡೆ ನುಡಿ, ನಂಬಿಕೆಗಳು, ಆಚಾರ, ಕಲೆ, ರಾಜಕೀಯ ಸ್ಥಿತ್ಯಂತರಗಳು ಆ ಕಾಲದ ಮಹತ್ವದ ಕಲೆಗಳಲ್ಲಿರಬೇಕು. ಒಂದು ಸಮಾಜದ ಇಲ್ಲವೆ ಸಮುದಾಯದ ಮುಲುಗುಟ್ಟಿದ ಸಣ್ಣ ಸದ್ದನ್ನು ಕೂಡ ಸಂಗ್ರಹಿಸುವ ಹೃದಯ ಶ್ರೀಮಂತಿಕೆ ಒಬ್ಬ ಗಂಭೀರ ಸಮಾಜ ವೀಕ್ಷಕನಿಗಿರಬೇಕಾದ ಅತ್ಯಗತ್ಯ ಅಂಶಗಳಲ್ಲೊಂದು. ಸಿದ್ಧಲಿಂಗಯ್ಯ ಮಕ್ಕಳ ಗೋಲಿಯಾಟದ ಪ್ರತಿಮೆಗಳಿಂದ ಹಿಡಿದು ಜನಪದರ ಗಂಭೀರ ನಿಟ್ಟುಸಿರಿನ ಮಟ್ಟುಗಳವರೆಗೆ ಸಮಾಜದ ಸದ್ದುಗಳನ್ನೆ ತಮ್ಮ ಪ್ರಕಾರಕ್ಕೆ ಸೂಕ್ಷ್ಮವಾಗಿ ಮಿಡಿಸಿಕೊಂಡಿದ್ದಾರೆ. ಇದರೊಂದಿಗೆ ಮಾರ್ಕ್ಸ್‌ವಾದಿ ಜೀವನ ದರ್ಶನ ಕೂಡ ಸಿದ್ಧಲಿಂಗಯ್ಯನವರ ಆಸಕ್ತಿಗಳನ್ನು ಸಾಂದ್ರಗೊಳಿಸಲು ಸಹಕಾರಿಯಾಗಿದೆ.

ಈ ಸಂಗ್ರಹವನ್ನು ಅವಲೋಕಿಸುವಲ್ಲಿ ಕೆಲವು ಮುಖ್ಯವಾದ ಪದ್ಯಗಳ ಆಯ್ದ ವಾಕ್ಯಗಳನ್ನು ಪ್ರಸ್ತಾಪ ಮಾಡಿದ್ದೇನೆ. 'ಅಲ್ಲೆ ಕುಂತವರೆ', 'ಸಾವಿರಾರು ನದಿಗಳು', 'ದಲಿತರು ಬರುವರು', 'ಬೆಲ್ಚಿಯ ಹಾಡು', 'ಕೆಂಪುಸೂರ್ಯ' ಈ ಸಂಕಲನದ

ಅತ್ಯುತ್ತಮ ಪದ್ಯಗಳು. 'ಈ ದೇಶದ ಸೆರೆಮನೆ' ಇರಾನಿನ ಕವಿ ಸುಲ್ತಾನ್ ಪರ್ ಅವರ ಕವನದ ಅನುವಾದ. ಬರ್ಟೋಲ್ ಬ್ರೆಕ್ಟನ 'ತಾಯಿ' ನಾಟಕಕ್ಕೆ ಬರೆದ 'ನಿನ್ನ ಮಗನ ಕೊಂದರು' ಕೂಡ ಒಂದು ಉತ್ತಮ ಕವನವಾಗಿ ಗಮನ ಸೆಳೆಯುತ್ತದೆ.

ಸಿದ್ಧಲಿಂಗಯ್ಯನವರಿಗೆ ಬರೆಯುವ ಸಾಮರ್ಥ್ಯವಿದೆ. ಸದ್ಯಕ್ಕೆ ಈ ನೆಲದಲ್ಲಿ ವಸ್ತುವಿಗೂ ಎಂದೂ ಬರ ಉಂಟಾಗುವಂತಿಲ್ಲ. ಒಂದು ವರ್ಷದ ಹಿಂದಷ್ಟೇ ಜಾತಿಯ ಕಾರಣಕ್ಕೆ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ತಾವಿದ್ದ ಬಾಡಿಗೆ ಮನೆಯನ್ನು ಖಾಲಿ ಮಾಡಬೇಕಾಗಿ ಬಂದ ಸ್ಥಿತಿ ಈ ಕವಿಯನ್ನು ಹೋರಾಟದ ದಾರಿಯಲ್ಲಿ ಮುನ್ನಡೆಸಬಲ್ಲದು. ಇಷ್ಟೇ: ತಿಂಗಳ ಬೆಳೆ(ಸಂಬಳ)ಯ ತೃಪ್ತಿ ಅವರನ್ನು ಕ್ರಮೇಣ ಕೊಲ್ಲುವ ಆಯುಧವಾಗಬಾರದು. ಈ ಶತಮಾನದ ಮಹಾ 'ಮಸ್ಕಿರಿ' ಯಾವುದೆಂದರೆ ಸೃಜನಶೀಲ ಶಕ್ತಿಯನ್ನು ಗುಮಾಸ್ತಗಿರಿಗಳು ಅಲ್ಪ ತೃಪ್ತಿಗಳ ಪಠಾರದೊಳಗೆ ಬಿಗಿದುಕಟ್ಟಿದ್ದು. ಸಿದ್ಧಲಿಂಗಯ್ಯನವರ ಕುರಿತು ಹೀಗೆ ಆತಂಕ ಪಡುವ ಸಂದರ್ಭ ಬರದಿರಲೆಂದು ಆಶಿಸೋಣ.

ಇದನ್ನು ಮೀರಿ ಈಗಾಗಲೇ ಗುಡಿಸಲು ನಾಶ, ಗೋಲಿಬಾರ್‌ನಂಥ ಅಮಾನವೀಯ ದುರವಸ್ಥೆಗಳಿಗೆ ದೇವನೂರ ಬರವಣಿಗೆ 'ಎಂದೋ ಒಂದು ದಿನ' ವಾಸ್ತವವಾದಿ ಗದ್ಯರೂಪ ಕೊಡುವುದು–ಸಿದ್ಧಲಿಂಗಯ್ಯನವರ ಕಾವ್ಯ ತತ್‌ಕ್ಷಣ ಇನ್ನಷ್ಟು ಸೋದರರ ಮಾನಪ್ರಾಣ, ಗುಡಿಸಲುಗಳ ಹರಣಕ್ಕೆ ತಡೆತಂದು, ಆಪತ್ಕಾಲೀನ ಧೈರ್ಯ ತುಂಬುವ ಎಚ್ಚರದ ಗಂಟೆಯಾಗುವುದು, ನಾವು ಸಾಹಿತ್ಯ ಹಾಗೂ ಸಾಹಿತ್ಯೇತರ ಮಾನದಂಡಗಳ ಹಿನ್ನೆಲೆಯಲ್ಲಿ ಗುರುತಿಸಬೇಕಾದ ಸತ್ವವಾಗಿದೆ.

‘ವಂಶ ವೃಕ್ಷ’ : ಒಂದು ಅಧ್ಯಯನ

ಬರಗೂರು ರಾಮಚಂದ್ರಪ್ಪ

ಸಾಹಿತ್ಯದ ಬೇರೆ ಪ್ರಕಾರಗಳಿಗಿಂತ ಕಾದಂಬರಿಯು ಒಡಲು ವೈಚಾರಿಕತೆಗೆ ಒಳ್ಳೆಯ ಸ್ಥಾನವಾಗಿದೆ. ಕಲಾತ್ಮಕತೆ ಮತ್ತು ಬೌದ್ಧಿಕತೆಗಳ ಸುಮಧುರ ಸಮ್ಮಿಲನವಾಗದಿದ್ದರೆ ಒಂದು ಕೃತಿ ತನ್ನ ಆಶಯ ಮತ್ತು ಅಭಿವ್ಯಕ್ತಿ ಸ್ವರೂಪಗಳಲ್ಲಿ ಅಂತರವನ್ನು ಪಡೆಯುತ್ತದೆ. ಹೀಗಾಗಿ ವೈಚಾರಿಕತೆಯನ್ನು ಸಾಹಿತ್ಯದಲ್ಲಿ ಸಮ್ಮೇಳಗೊಳಿಸುವ ಸಾಹಿತಿ ಕೆಲವು ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಪ್ರಸಿದ್ಧ ಕಾದಂಬರಿಕಾರರಾದ ಡಾ॥ ಎಸ್. ಎಲ್. ಭೈರಪ್ಪನವರ ಜನಪ್ರಿಯ ಕಾದಂಬರಿ ‘ವಂಶವೃಕ್ಷ’ದ ಅಧ್ಯಯನ ಉಪಯುಕ್ತವಾದುದು.

“ಜೀವನದ ಮೌಲ್ಯಗಳನ್ನು ಅರಿಯುವುದು ಮಾತ್ರವಲ್ಲದೆ ಸುಮೌಲ್ಯಗಳ ಬಗೆಗೆ ನಮ್ಮ ಅಂತಃಕರಣದ ಆಕರ್ಷಣೆಯನ್ನು ಪರೋಕ್ಷವಾಗಿ ಹೆಚ್ಚಿಸುವ ಕೆಲಸವನ್ನು ಸಾಹಿತ್ಯವು ಮಾಡುತ್ತದೆ” ಎಂದು ನಂಬುವ ಭೈರಪ್ಪನವರು “ನೀತಿ ಅನೀತಿಗಳನ್ನು ಮೀರಿದ ಜೀವನದ ಮೂಲಭೂತ ಮೌಲ್ಯಗಳನ್ನು ಅವುಗಳ ಶುದ್ಧ ಅವ್ಯಕ್ತ ಭಾವದಲ್ಲಿ ನಮ್ಮ ಸಂವೇದನೆಗೆ ತಂದುಕೊಡುವುದು ಸಾಹಿತ್ಯದ ಗುರಿಯಾಗಬೇಕು ಎಂದು ಸೂಚಿಸಿದ್ದಾರೆ (ಈ ಹೇಳಿಕೆಗಳು ಅವರ ‘ಸಾಹಿತ್ಯ ಮತ್ತು ಮೌಲ್ಯ

ಸಂವೇದನೆ' ಎಂಬ ಲೇಖನದಲ್ಲಿವೆ). ಈ ಮಾತುಗಳ ಹಿನ್ನೆಲೆಯಲ್ಲಿ 'ವಂಶವೃಕ್ಷ'ವನ್ನು ನೋಡಿದಾಗ ಕಾದಂಬರಿಕಾರರ ಉದ್ದೇಶ ಸ್ಪಷ್ಟವಾಗುತ್ತದೆ.

ಉದ್ದೇಶ ಸ್ಪಷ್ಟವಾಯಿತು. ಇದಕ್ಕೆ ಬಳಸಿಕೊಂಡ ವಸ್ತುವನ್ನು ನೋಡೋಣ. ವಂಶಶ್ರದ್ಧೆಯುಳ್ಳ ಧಾರ್ಮಿಕ ಮೌಲ್ಯಗಳ ಪ್ರತಿನಿಧಿ ಶ್ರೋತ್ರಿಯರು, ಆಧುನಿಕ ಸಾಮಾಜಿಕ ಮೌಲ್ಯಗಳ ಪ್ರತಿನಿಧಿಗಳಾಗಿ ಬಂದಿರುವ ರಾಜಾರಾವ್ ಮತ್ತು ಕಾತ್ಯಾಯಿನಿ, ದ್ವಿಪತ್ನಿತ್ವದ ಅಂಗವಾಗಿ ಇರುವ ಸದಾಶಿವರಾವ್ ಮತ್ತು ರತ್ನ ಇವರ ಬದುಕಿನ ಅನುಭವದ ಒರೆಗಲ್ಲಿನಿಂದ ಹೊರಬೀಳುವ ಮೌಲ್ಯಗಳ ಸ್ಥಾನಮಾನ ವಿವೇಚನೆ–ಕಾದಂಬರಿಯ ವಸ್ತುವಿನಲ್ಲಿ ಅಡಕವಾಗಿದೆ.

ಕಾದಂಬರಿಯಲ್ಲಿ ಪ್ರಮುಖವಾಗಿ ಪ್ರಸ್ತಾಪಿತವಾಗಿರುವ ಸಮಸ್ಯೆಗಳು ಎರಡು : ವಿಧವಾ ವಿವಾಹ ಮತ್ತು ದ್ವಿಪತ್ನಿತ್ವ. ಇವುಗಳ ಮತಿಯಿಂದ ಹಳೆಯ ಮತ್ತು ಹೊಸ ಮೌಲ್ಯಗಳ ಸಂಘರ್ಷವನ್ನು ಚಿತ್ರಿಸಲಾಗಿದೆ. ಈ ಸಂಘರ್ಷವನ್ನು ಅರ್ಥ ಮಾಡಿಕೊಳ್ಳಲು ಕಾದಂಬರಿಯ ಪ್ರಮುಖ ಪಾತ್ರಗಳ ಬೆಳವಣಿಗೆಯ ಸ್ವರೂಪವನ್ನು ತಿಳಿಯುವುದು ಸಹಾಯಕ.

ಶ್ರೀನಿವಾಸಶ್ರೋತ್ರಿ

ಕಾದಂಬರಿಯ ಮೂಲ ಉದ್ದೇಶವನ್ನು ಸ್ಪಷ್ಟಪಡಿಸಿಕೊಂಡು ಶ್ರೋತ್ರಿಯರ ಪಾತ್ರದ ರೂಪರೇಷೆಗಳ ವಿವೇಚನೆಗೆ ತೊಡಗಿದಾಗ ಇಡೀ ಕಾದಂಬರಿಯಲ್ಲಿ ಒಂದಲ್ಲ ಒಂದು ಕಾರಣದಿಂದ ಸರ್ವವ್ಯಾಪಿಯಾಗಿ ಈ ಪಾತ್ರ ತನ್ನ 'ಪಾತ್ರನಿರ್ಮಾಣ'ವನ್ನು ಮಾಡಿಕೊಂಡು ಹೋಗುವುದಷ್ಟೇ ಅಲ್ಲ, ಗಾತ್ರದ ಪಾತ್ರವೂ ಆಗುವ ಅನುಭವ ನಮಗಾಗುತ್ತದೆ. ಅಂದರೆ 'ವಂಶವೃಕ್ಷ'ದ ಉದ್ದೇಶಕ್ಕೆ ಬದ್ಧವಾಗಿ ಬದುಕಿನ ಎಲ್ಲ ಸಮಸ್ಯೆ ಸವಾಲುಗಳಿಗೆ ಸಿದ್ಧವಾಗಿ ತನ್ನದೇ ಆದ ರೀತಿಯಲ್ಲಿ ವರ್ತಿಸುವುದರ ಮೂಲಕ ಶ್ರೀನಿವಾಸ ಶ್ರೋತ್ರಿಯ ಪಾತ್ರದ ಬೆಳವಣಿಗೆಯನ್ನು ಅವಲೋಕಿಸುವುದರಿಂದ ಕಾದಂಬರಿಯ, ಕಾದಂಬರಿಕಾರರ ಉದ್ದೇಶಗಳ ಮೇಲೂ ಬೆಳಕು ಬೀಳುತ್ತದೆ.

ಶ್ರೀನಿವಾಸ ಶ್ರೋತ್ರಿಯವರು ವಂಶಪ್ರಜ್ಞೆಯನ್ನು ಪ್ರತಿನಿಧಿಸುವ ಪಾತ್ರವಾಗಿಯೇ ಉದ್ದಕ್ಕೂ ಬೆಳೆದು ಬರಲು ಕಾದಂಬರಿಕಾರರು ನಿಷ್ಠರಾಗಿ ದುಡಿದಿದ್ದಾರೆ. ಶ್ರೋತ್ರಿಯರು ಪಕ್ಕಾ ವಂಶನಿಷ್ಠರು. 'ಅಗೆಯುತ್ತಾ ಹೋದರೆ ಕೊನೆಯೇ ಇಲ್ಲದ ಆಳದಲ್ಲಿ ಹುದುಗಿರುವ ಜೀವಂತ ಪವಿತ್ರ ಬೇರು ಅದೆಂದು ನಂಬಿದ್ದರು' (ಪುಟ ೨೩೩). ಇವರ ವಂಶನಿಷ್ಠೆಯ ಸೂಚನೆ ಕಾದಂಬರಿಯ ಮೊದಲ ಪುಟದಲ್ಲೇ ಸಿಗುತ್ತದೆ. ಕಪಿಲೆಯ ಪ್ರವಾಹ ಬಂದು ಊರ ಜನರೆಲ್ಲ ಹೊರಾಶ್ರಯಕ್ಕೆ ತೆರಳಿದರೂ ಮನೆಯಲ್ಲಿ ಮೊಳಕಾಲುದ್ದ ನೀರು ನಿಂತಿದ್ದರೂ ಶ್ರೋತ್ರಿಯರಿಗೆ ತಮ್ಮ ವಂಶದತ್ತವಾದ ಮನೆಯಿಂದ ಸ್ವಲ್ಪ ಕಾಲವಾದರೂ ದೂರ ಹೋಗುವ ಮನಸ್ಸು ಬರುವುದಿಲ್ಲ ಅಥವಾ ತಾವು ನಂಬಿದ ಮೌಲ್ಯಗಳ ಪಾಶ ಬಿಡುವುದಿಲ್ಲ, ಗಂಗೇಚ ಯಮುನೇ ಚೈವ ಹೇಳಿಕೊಂಡು ಮನೆಯ ಹೊಸಲಿನ ಹತ್ತಿರವೇ ಮುಳುಗು ಹಾಕಿದ್ದರು, (ಪುಟ ೨).

ಹೀಗೆ, ಅಪಾಯ ಹೊಸ್ತಿಲ ಒಳ ಹೊಕ್ಕಾಗಲೂ ಇವರು ವರ್ತಿಸುವ ಪರಿಯಿಂದ ಶ್ರೋತ್ರಿಯರು ವಾಸ್ತವ ಸ್ಥಿತಿಯನ್ನು ನೆಲದ ಮೇಲೆ ನಿಂತು ಅರ್ಥೈಸಿಕೊಂಡು ಯೋಚಿಸುವ ಬದಲು ರೂಢ ನಂಬಿಕೆಗೆ ಜೋತುಬೀಳುತ್ತಾರೆ ಎನ್ನಿಸುತ್ತದೆ. ಮುಂದೆ ಶ್ರೋತ್ರಿಯವರ ಪಾತ್ರ ಹೇಗೆ ಬೆಳೆಯುತ್ತದೆ ಎಂಬುದಕ್ಕೆ ಇದು ದಿಕ್ಸೂಚಿಯಾಗಿ ಪರಿಣಮಿಸುತ್ತದೆ.

ಶ್ರೋತ್ರಿಯವರ ಪಾತ್ರ ಕೇವಲ ವಂಶಪ್ರಜ್ಞೆಯ ಪ್ರತಿನಿಧಿಯಾಗಿ ಬರದೆ, ಸನಾತನ ಧಾರ್ಮಿಕ ಮೌಲ್ಯಗಳ ಪ್ರತೀಕವಾಗಿಯೂ ಬಂದಿದೆ ಎಂಬುದಕ್ಕೆ ಕಾದಂಬರಿಯಲ್ಲೇ ಪುರಾವೆ ಸಿಗುತ್ತದೆ. 'ಶ್ರೋತ್ರಿಯ ವಂಶವೆಂಬುದು ಶ್ರೋತ್ರಗಳಷ್ಟೇ ಪುರಾತನ (ಪುಟ ೫೫) ಎಂಬ ಗಾಢ ನಂಬಿಕೆಯನ್ನಿಟ್ಟುಕೊಂಡಿದ್ದ ಶ್ರೋತ್ರಿಯರು 'ಸನಾತನ ಧರ್ಮವನ್ನು ಜೀವಿಸುತ್ತಿದ್ದರು' (ಪುಟ ೫೫). 'ಸಾತ್ವಿಕ ಸ್ವಭಾವ, ವೇದ ಶಾಸ್ತ್ರಗಳಲ್ಲಿ ಅವರಿಗಿದ್ದ ಆಳವಾದ ಪಾಂಡಿತ್ಯಗಳು ಅವರ ಸಂಸಾರಕ್ಕೆ ಜನಗಳಿಂದ ವಿಶೇಷವಾದ ಗೌರವವನ್ನು ತಂದುಕೊಟ್ಟಿದ್ದವು' (ಪುಟ ೪). ಅವರ ಗ್ರಂಥಾಲಯ ಅಥವಾ ಕೋಣೆಯ ವಿವರಗಳೇ ಅವರ ವ್ಯಕ್ತಿತ್ವಕ್ಕೆ ಕನ್ನಡಿಯಾಗಿ ಬಿಡುತ್ತವೆ. 'ಅವರ ತುಂಬ ಓಲೆಗರಿಗಳು, ಅಚ್ಚಾದ ಗ್ರಂಥಗಳು ಮತ್ತು ಅವರೇ ಸ್ವತಃ ಕೈಬರಹದ ಪ್ರತಿ ಮಾಡಿದ ಕೆಲವು ಪುಸ್ತಕಗಳು ಇವೆ...ರಾಗಿಯನ್ನು ಸುಟ್ಟು ಮನೆಯಲ್ಲೇ ತಯಾರಿಸಿದ ಬರೆಯುವ ಮಸಿ, ಲೇಖನಿಗಳಿವೆ...ಒಂದು ಹುಲಿಯ ಚರ್ಮ ಮಡಿಸಲು ಬರುವಂತೆ ವ್ಯಾಸಪೀಠ (ಇವೆ). ಸುಮಾರು ಮೂವತ್ತು ವರ್ಷಗಳಿಗೆ ಮಿಕ್ಕಿ ಅವರು ಆ ಕೋಣೆಯಲ್ಲೇ ಕುಳಿತು ವೇದಶಾಸ್ತ್ರ ಪುರಾಣ ಧರ್ಮಶಾಸ್ತ್ರ ಆಯುರ್ವೇದಗಳ ಅಧ್ಯಯನ ಮಾಡುತ್ತಿದ್ದಾರೆ (ಪುಟ ೪+೫)'.

ಈ ವಿವರಣೆಯಿಂದ ನಮಗೆ ಶ್ರೋತ್ರಿಯರ ಪಾತ್ರ ಸೌಧದ ಅಡಿಪಾಯದ ಅರಿವಾಗುತ್ತದೆ. ಸನಾತನ ಧಾರ್ಮಿಕ ಗ್ರಂಥಗಳನ್ನು ಜೀರ್ಣಿಸಿಕೊಂಡು, ತಮ್ಮ ಕೋಣೆಯ ಅಚ್ಚುಕಟ್ಟಿನಲ್ಲೂ ಪುರಾತನತೆಯನ್ನು ಪ್ರತಿಷ್ಠಾಪಿಸಿಕೊಂಡು ಬಂದಿರುವ ಶ್ರೋತ್ರಿಯರ ಸಂಪ್ರದಾಯ ನಿಷ್ಠ ಜೀವನಕ್ಕೆ ಸಂಕೇತವಾಗುತ್ತದೆ. ಅವರ ಕೋಣೆ ಸಂದರ್ಭದಲ್ಲಿ ಆ ಕೋಣೆಯೇ ಅವರು ಎಂದು ಹೇಳಬಹುದು. ಹೀಗೆ ಹೆಜ್ಜೆ ಹೆಜ್ಜೆಗೆ ಧಾರ್ಮಿಕ ವಿಧಿಯ ವೇದಿಕೆಯ ಮೇಲೆ ನಿಂತು ಈ ವ್ಯಕ್ತಿತ್ವದ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಂತೆ ಕಾಣುವ ಇವರು ಬದುಕಿನ ಸಮಸ್ಯೆಗಳನ್ನು ಎದುರಿಸುವಾಗ ವರ್ತಿಸುವ ರೀತಿಯನ್ನು ಅವಲೋಕಿಸಬೇಕಾಗುತ್ತದೆ.

ಅಧ್ಯಾತ್ಮಿಕತೆಯ ಆಗಸದಲ್ಲಿ ಹಾರಾಡದ ಈ ಸಮಾಜ ಜೀವಿಯೊಬ್ಬನ ನಂಬಿಕೆ ಮತ್ತು ಮೌಲ್ಯ ನಿಷ್ಠತೆಗೂ ಶ್ರೋತ್ರಿಯರ ಆದೇ ಅಂಶಗಳಿಗೂ ವ್ಯತ್ಯಾಸ ಕಾಣುತ್ತದೆ. 'ಅವರ ಪರಿಪೂರ್ಣ ವಿಶ್ವಾಸದ ಪ್ರಕಾರ ಮನುಷ್ಯನ ಮದುವೆಯಾಗುವುದು ಗೃಹಸ್ಥ ಧರ್ಮಕ್ಕಾಗಿ. ಗೃಹಸ್ಥನಾಗುವುದು ಈ ಲೋಕದಲ್ಲಿರುವ ತನ್ನ ಕರ್ತವ್ಯಗಳನ್ನು

ಪೂರೈಸುವುದಕ್ಕಾಗಿ, ನಂತರ ಮಕ್ಕಳಾಗುವುದು ವಂಶವೃಕ್ಷದ ಕೊನೆ ಮುಂದುವರಿಯುವುದಕ್ಕಾಗಿ....ಪಿತೃಗಳಿಂದ ಪಡೆದ ಈ ಜೀವವು ಪಿತೃ ಋಣ ತೀರಿಸುವುದು ತನ್ನ ಸಂತಾನದ ಮೂಲಕವೇ...ವ್ಯಕ್ತಿಯ ಗೌರವ ಅಭಿಮಾನಗಳು ತನ್ನ ವಂಶದಿಂದಲೇ ಬಂದುದು ಎನ್ನುವುದು ಅವರ ವಿಶ್ವಾಸ (ಪುಟ ೫೫). ಹೀಗೆ ಶ್ರೋತ್ರಿಯರು ಕಾದಂಬರಿಯ ಪ್ರಥಮ ಪುಟಗಳಲ್ಲಿಯೇ ತತ್ವಗಳ ತಳಹದಿಯ ಮೇಲೆ ಬದುಕು ತಳ್ಳುವ ವ್ಯಕ್ತಿಯಾಗಿ ಕಂಡುಬರುತ್ತಾರೆ.

ಇಂಥ ವಿಶಿಷ್ಟ ರೀತಿಯ ವ್ಯಕ್ತಿತ್ವವನ್ನುಳ್ಳ ಇವರಿಗೆ ಮನುಷ್ಯ ಮಾತ್ರದವರಂತೆ ಯಾವುದೇ ಕ್ರಿಯೆ ಪ್ರತಿಕ್ರಿಯೆಗಳಿರಲಿಲ್ಲವೇ–ಎಂದು ನೋಡಿದಾಗ ಅದಕ್ಕೂ ಕಾದಂಬರಿಯಲ್ಲೇ ಉತ್ತರ ಸಿಗುತ್ತದೆ. ಇವರು 'ನಂಬಿದ್ದ ಜೀವನಾದರ್ಶಗಳಿಗೂ ಅದಮ್ಯ ಶಕ್ತಿಯ ಪ್ರಕೃತಿಗುಣಗಳಿಗೂ ಹೋರಾಟ ನಡದೇ ಇತ್ತು' (ಪುಟ ೨೦೧). 'ಪ್ರಕೃತಿಯ ಹಿಡಿತದಿಂದ ಮುಕ್ತಿ ಹೊಂದದೆ ಮನುಷ್ಯನಿಗೆ ಬಿಡುಗಡೆ ಇಲ್ಲ' (ಪುಟ ೨೦೧) ಎಂಬ 'ಅವರ ತಿಳಿವಳಿಕೆಯು ಈಗಿನ ವಾಸ್ತವ ಜೀವನದ ಅನುಷ್ಠಾನದಲ್ಲಿ ಬಂದು ಪ್ರಕೃತಿಯ ಪ್ರಭಾವವನ್ನು ಗೆಲ್ಲಬೇಕಾಗಿತ್ತು, ಅದಕ್ಕಾಗಿ ತಮ್ಮ ಶಕ್ತಿಮೀರಿ ಹೆಣಗುತ್ತಿದ್ದರು' (ಪುಟ ೨೦೧).

ಅಂದಮೇಲೆ ಶ್ರೋತ್ರಿಯರು ಬದುಕಿನ ಅನುಭವದಿಂದ ಪಾಠ ಕಲಿಯುವ ಬದಲು ಅಧ್ಯಯನದಿಂದ ಗಳಿಸಿದ ಅರಿವಿನ ಬಲದಿಂದ ಸಹಜ ಶಕ್ತಿಗಳನ್ನು ಮೆಟ್ಟಲು ಹೆಣಗುವುದು ಸ್ಪಷ್ಟವಾಗುತ್ತದೆ. ಅಂದರೆ ಇಲ್ಲಿ ಮುಖ್ಯವಾಗಿ ಶ್ರೋತ್ರಿಯವರ ಪಾತ್ರ ಕಾದಂಬರಿಕಾರರ ಉದ್ದೇಶ ಸಾಧನೆಗಾಗಿ ಹೆಣಗುತ್ತಿದೆಯೆಂಬ ಗುಮಾನಿ ಬರುತ್ತದೆ. ಕಾದಂಬರಿಯ ಬೆಳವಣಿಗೆಯೇ ಇದಕ್ಕೆ ಪುರಾವೆ ಒದಗಿಸುತ್ತದೆ. ಎದುರುನಿಂತು ಕೆಣಕುವ ಸವಾಲುಗಳು ಒಬ್ಬನ ವ್ಯಕ್ತಿತ್ವದ ಒರೆಗಲ್ಲು ಎನ್ನಬಹುದು. ಶ್ರೋತ್ರಿಯರ ಬದುಕಿನಲ್ಲಿ ತಮ್ಮ ಮನೆ ಮಗಳಂತೆ ಇದ್ದ ಕಾತ್ಯಾಯನಿಯೇ ನೇರ ಸವಾಲಾಗಿ ಪರಿಣಮಿಸುತ್ತಾಳೆ. ಅಂದರೆ ಶ್ರೋತ್ರಿಯವರು ಪ್ರಕೃತಿಯನ್ನು ಮೆಟ್ಟಿ ತಮ್ಮ ಧಾರ್ಮಿಕ ಮೌಲ್ಯಗಳ ಮನೆಯಲ್ಲಿ ಬೆಚ್ಚಗಿರುವ ಪ್ರಯತ್ನ ಮಾಡುವಾಗ, ಅದೇ ಪ್ರಕೃತಿಯ ಸೆಳೆತಕ್ಕೆ ಸಿಕ್ಕಿದ ಕಾತ್ಯಾಯನಿ ಅತ್ತಲೇ ಸಾಗಿ ಶ್ರೋತ್ರಿಯವರು ಪ್ರತಿನಿಧಿಸುವ ಮೌಲ್ಯಗಳ ಪ್ರತಿಕ್ರಿಯಾ ರೂಪಿಯಾಗಿ ನಿಂತಾಗ, ಶ್ರೋತ್ರಿಯವರು ಕಲ್ಲು ಬಂಡೆಯ ಸಂಯಮ ತೋರುತ್ತಾರೆ. ಆದರೆ ಇಂಥ ತೀವ್ರ ಪ್ರತಿಕ್ರಿಯೆಯ ಮುಂದೆ ಹೀಗೆ ವರ್ತಿಸಿದ ಶ್ರೋತ್ರಿಯರಿಗೆ ಮಗು ಚೀನಿ ಖಾಯಿಲೆ ಬಿದ್ದಾಗ ಮಾತ್ರ ತಕ್ಷಣ ಚಿತ್ತಸ್ವಾಸ್ಥ್ಯ ಕಳೆದು ಹೋಗುತ್ತದೆ. ಕಾತ್ಯಾಯನಿಯ ಎದುರು ಶ್ರೋತ್ರಿಯವರು ಅದ್ಭುತ ಸಂಯಮಿಗಳಾಗಿ ತೋರಲು 'ಮತ್ತೊಬ್ಬರ ಪಾಪ ಪುಣ್ಯ ಗಳನ್ನು ನಿರ್ಣಯಿಸೋಕೆ ನಮಗೆ ಅಧಿಕಾರವಿಲ್ಲ, ನಮ್ಮ ಕರ್ಮಗಳನ್ನು ಮಾಡೋದೆ ಮಾತ್ರ ನಮ್ಮ ಕರ್ತವ್ಯ' (ಪುಟ ೪೮೮) ಎಂದು ನಂಬಿದ್ದೇ ಕಾರಣವಿರಬೇಕು. 'ಹೊರಜಗತ್ತು ಬಲವಂತದಿಂದ ವ್ಯಕ್ತಿಯ ಮೇಲೆ ಹೇರುವ ಕಟ್ಟಳೆಗಳು ಧರ್ಮದ

ಪೂರ್ಣರೂಪವಲ್ಲ, (ಪುಟ ೧೪೯) ಎಂಬ ವಿಶ್ವಾಸವಿಟ್ಟುಕೊಂಡಿದ್ದೂ ಅವರ ಸಂಯಮಕ್ಕೆ ಕಾರಣವಿರಬಹುದು. ಆದರೆ ಚೀನಿ ಖಾಯಿಲೆ ಬಿದ್ದಕೂಡಲೆ ಎಂದೂ ಆಗದಷ್ಟು ಮಾನಸಿಕ ಅಸ್ವಸ್ಥತೆಗೆ ಈಡಾಗುವಂತೆ ಚಿತ್ರಿಸಿರುವುದು ಅವರ ವಂಶಬದ್ಧ ವ್ಯಕ್ತಿತ್ವದ ಮೇಲೆ ಒತ್ತು ಕೊಡಬಹುದಾದರೂ ಲಘು ಪ್ರಸಂಗ ಎನ್ನಿಸುತ್ತದೆ. ವಂಶ ಬೆಳೆಯುವುದಷ್ಟೇ ಬದುಕಿನ ಮೋಕ್ಷಧರ್ಮ ಮಾರ್ಗವೆಂಬ ನಂಬಿಕೆಯಂತೂ ತೀವ್ರ ಪ್ರತಿಕ್ರಿಯೆಗೆ ಅರ್ಹವಾಗಿದೆ. ಅಂತೂ ಶ್ರೋತ್ರಿಯವರ ಪಾತ್ರ ಹೀಗೆ ಮುಂದುವರಿಯುತ್ತದೆ.

ಅವರ ವ್ಯಕ್ತಿತ್ವಕ್ಕೆ ಒರೆಗಲ್ಲಾಗಿ ಬರುವ ಮತ್ತೊಂದು ಪ್ರಸಂಗ ಅವರ ಮತ್ತು ಲಕ್ಷ್ಮಿಯ ಸಮಾಗಮನ ಸಿದ್ಧತೆಯ ಘಟ್ಟ. ಆ ಸಂದರ್ಭ ನಿಜಕ್ಕೂ ಧರ್ಮ ಮತ್ತು ಪ್ರಕೃತಿಗಳ ಸಂಘರ್ಷವೇ ಆಗಿ ಪರಿಣಮಿಸುತ್ತದೆ. ಲಕ್ಷ್ಮಿ ಪ್ರಕೃತಿಯ ಸೆಳವಿನ ಸಂಕೇತವಾದರೆ ಶ್ರೋತ್ರಿ ಆಗಲೇ ಗೊತ್ತಿರುವಂತೆ ಧರ್ಮದ ಪ್ರತಿನಿಧಿಯಾಗಿರುತ್ತಾರೆ. ಧಾರ್ಮಿಕ ಪರಂಪರೆಯ ಪ್ರಬುದ್ಧ ಪಾತಳಿಯಲ್ಲೂ ಸೆಳೆತದ ಸುಳಿಯೊಂದು ಸೃಷ್ಟಿಯಾಗುತ್ತದೆ. ಆತ್ಮ ಸೆಣಸುತ್ತದೆ. ಬೇಡಬೇಡವೆಂದರೂ ತನ್ನತ್ತಲೇ ಸೆಳೆಯುವ ಪ್ರಕೃತಿಯ ಕಡೆಗೆ ಕಾಲಿಟ್ಟು, ಕಡೆಗೆ ಹಿಂದಿಟ್ಟು 'ಸಾಂಖ್ಯಕಾರಿಕ' ಗ್ರಂಥದಲ್ಲಿ ಮನ ಸಿಟ್ಟು, ಪ್ರಕ್ಷುಬ್ಧತೆಯ ಶಮನ ಪ್ರಯತ್ನ ನಡೆಯುತ್ತದೆ ಶ್ರೋತ್ರಿಯರಿಂದ. ತಾವು ನಂಬಿದ ತತ್ವವನ್ನು ಉಳಿಸಿಕೊಂಡ ಕಾರಣಕ್ಕಾಗಿ ಶ್ರೋತ್ರಿಯವರು ಧರ್ಮ ವೇದಿಕೆಯಲ್ಲಿ ಎದ್ದು ಕಾಣುತ್ತಾರೆ. ನಿಜ. ಆದರೆ ಇವರ ಪಾತ್ರದ ಬೆಳವಣಿಗೆ ಏಕತಾನ ದಿಂದಲೇ ಕೂಡಿ ಧರ್ಮಕ್ಕಾಗಿ ದುಡಿಯುತ್ತಾ ಸಾಗುತ್ತಾ ಕಡೆಯ ಘಟ್ಟಕ್ಕೆ ಬಂದು ನಿಂತಾಗ, ಅಂದರೆ ಅಕಸ್ಮಾತ್ತಾಗಿ ಸಿಗುವ ಒಂದು ಪತ್ರದಿಂದ ತಮ್ಮ ಜನ್ಮಸತ್ಯ ಹೊರಬಿದ್ದಾಗ ಅದನ್ನು ಶ್ರೋತ್ರಿಯವರು ಎದುರಿಸುವ ರೀತಿ, ಅವರು ಈ ಸಮಾಜದ ನಮ್ಮ ನಿಮ್ಮಂಥವರಲ್ಲ ಎಂಬ ತೀರ್ಮಾನಕ್ಕೆ ಕೊಂಡೊಯ್ಯುತ್ತದೆ.

ಹಿಂದಿನ ಎಲ್ಲ ವಿವೇಚನೆಯಿಂದ ಶ್ರೋತ್ರಿಯವರ ಅಪಾರವಾದ, ಅಗಾಧವಾದ, ಮೇರುಸದೃಶ ವಂಶನಿಷ್ಠೆಯ ಅರಿವಾಗಿದೆ. ಅವರ ಚಿತ್ರಣವೂ ಆ ದೃಷ್ಟಿಯಿಂದ ಚೆನ್ನಾಗಿದೆ. ಇಂಥ ಒಬ್ಬ ವ್ಯಕ್ತಿ - ಅವನು ಎಂಥ ಶ್ರೇಷ್ಠನೇ ಇರಲಿ ತಾನು ನಂಬಿದ ವಂಶ ಯಾವುದೋ ಅದು ತನ್ನದಲ್ಲ ಎಂಬ ಅರಿವಿಗೆ ಒಳಗಾದಾಗ, ತೋರುವ ಪ್ರತಿಕ್ರಿಯೆ ಎಂಥದಾಗಿರಬಹುದು, ಅವನಿಗೆ ಅದೆಷ್ಟು ಆಘಾತವಾಗಿರಬೇಕು : ಅಷ್ಟೂ ವರ್ಷಗಳ ತನ್ನ ಭದ್ರ ಬುನಾದಿಯ ಭವ್ಯ ಸೌಧ ಕೇವಲ ಭ್ರಮೆ ಎಂದು ಗೊತ್ತಾದಾಗ ಅವನ ಸ್ಥಿತಿ ಏನಾಗಿರಬೇಕು – ಮುಂತಾದ ಪ್ರಶ್ನೆಗಳ ಮನಸ್ಸನಿಂದ ಆ ಸಂದರ್ಭದ ಶ್ರೋತ್ರಿಯರನ್ನು ಅಳೆಯಬೇಕಾಗುತ್ತದೆ. ಹಾಗೆ ನೋಡಿದಾಗ ಶ್ರೋತ್ರಿಯರು ಇಲ್ಲಿ ಪುರಾಣ ಪ್ರಸಿದ್ಧರ ಸಾಲಿನಲ್ಲಿ ಸೇರಿಹೋಗುತ್ತಾರೆ. 'ಏಕಂದರೆ ಅವರ ಜೀವನದ ಆಳವಾದ ವಿಶ್ವಾಸದ ಬುಡವನ್ನೇ ಕೊಡಲಿಯಿಂದ ಕೊಚ್ಚಿ ಹಾಕಿದಂತೆ' (ಪುಟ ೪೩೩) ಆದಾಗಲೂ ಅವರು ಎಲ್ಲ ತಳಮಳವನ್ನು ಹತ್ತಿಕ್ಕುತ್ತ ಶ್ರೋತ್ರಿಯ ವಂಶದ

ವ್ಯಕ್ತಿಯ ಅನ್ವೇಷಣೆಗೆ ಹೊರಟುಬಿಡುತ್ತಾರೆ. ಧರ್ಮಸೂತ್ರಗಳ ಜಾಡು ಹಿಡಿದು ಮತ್ತೆ ಮತ್ತೆ ತಿರುಗಿದಲ್ಲೇ ತಿರುಗುತ್ತಾರೆ ಎನ್ನಿಸುತ್ತದೆ. ಹೀಗೆ ಹುಡುಕ ಹೋದುದು ಅವರ ನ್ಯಾಯನಿಷ್ಠತೆಯ ನಿದರ್ಶನವೆಂದು ಹೇಳಲು ಸಾಧ್ಯವಿರಬಹುದು. ಆದರೆ ಅವರು ಕಾದಂಬರಿಕಾರರು ಪ್ರತಿಪಾದಿಸಹೊರಟ ಮೌಲ್ಯದ ಪ್ರತಿನಿಧಿಯಾಗಿ ಪ್ರತಿ ಸಂದರ್ಭದಲ್ಲೂ ಕಾಣಿಸಿಕೊಳ್ಳುವುದರಿಂದ, ಪಾತ್ರ ಪೋಷಣೆಯ ಹಾದಿಯನ್ನು ಸಲೀಸಾಗಿ ಗುರುತಿಸಬಹುದು.

ಶ್ರೋತ್ರಿಯವರನ್ನು ಜ್ಞಾಪಿಸಿಕೊಂಡಾಗಲೇ ಕೆಲವು ಕಾರಣಗಳಿಗಾಗಿ 'ಸಂಸ್ಕಾರ'ದ ಪ್ರಾಣೇಶಾಚಾರ್ಯರು ಮತ್ತು 'ಗ್ರಾಮಾಯಣ'ದ ಬಾಳಾಚಾರ್ಯರು ನೆನಪಿಗೆ ಬರುತ್ತಾರೆ. ಅವರ ವಿವೇಚನೆಯೂ ಅಗತ್ಯ ಎನ್ನಿಸುತ್ತದೆ.

ಪ್ರಾಣೇಶಾಚಾರ್ಯರು ಶ್ರೋತ್ರಿಯವರಂತೆಯೇ ಜ್ಞಾನಿಗಳು, ಪ್ರಭುದ್ಧರು, ಸನಾತನ ಧರ್ಮದ ನೆಲಗಟ್ಟನ್ನು ನಂಬಿ ಬದುಕುತ್ತಿದ್ದವರು. ಇವರಿಗೆ ಧಿಡೀರನೆ ಆಗುವ ಚಂದ್ರಿಯ ಸಮಾಗಮನದ ಮೂಲಕ ಬದುಕಿನ ಬೇರೊಂದು ಮುಖ್ಯ ಶಾಕ್ ತಗುಲಿದಾಗ, ಗೊಂದಲಕ್ಕೆ ಬಿದ್ದು ಹಳೆಯ ಮೌಲ್ಯಗಳನ್ನು ಮೂಲೆಗೊತ್ತಿ, ಬದುಕಿನ ಪ್ರಾಮಾಣಿಕತೆಯ ಅರಿವು ಪಡೆಯುತ್ತಾರೆ. ಶ್ರೋತ್ರಿಯವರು ಬೇರೊಂದು ಕೋಣೆಯಲ್ಲಿ ಲಕ್ಷ್ಮಿ ತಮಗಾಗಿ ಕಾಯುತ್ತಿದ್ದಾಗ, ಪ್ರಕೃತಿ ಶಕ್ತಿ ಜಾಗೃತವಾಗಿ ತವಕದ ತವರು ಮನೆಯಾಗಿದ್ದಾಗ ಅದನ್ನು ಮೆಟ್ಟಲು ಹೆಣಗುತ್ತಾ 'ಸಾಂಖ್ಯಕಾರಿಕ'ದ ಮೊರೆ ಹೋಗುತ್ತಾರೆ. ಅದೇ ಕಾತ್ಯಾಯನಿ ರಾಜಾರಾಯನನ್ನು ಮದುವೆಯಾಗುವ ನಿರ್ಧಾರವನ್ನು ಹೊರಗೆಡಹಿದಾಗ ಅದ್ಭುತ ಸಂಯಮಿಗಳಾಗಿ ಅವಳ ದಾರಿಗೆ ಅವಳನ್ನು ಬಿಡುತ್ತಾರೆ. ಆದರೆ ಚೀನಿಯನ್ನು ಕೇಳಲು ಕಾತ್ಯಾಯನಿ ಬಂದಾಗ ಇವರ ವಂಶ ಪ್ರಜ್ಞೆ ಜಾಗೃತವಾಗುತ್ತದೆ. ಹೀಗೆ ಇವರ ದಿಕ್ಕೂ ಮತ್ತು ಪ್ರಾಣೇಶಾಚಾರ್ಯರ ದಿಕ್ಕುಗಳು ಪರಸ್ಪರ ವಿರುದ್ಧವಾಗುತ್ತವೆ.

'ಗ್ರಾಮಾಯಣದ' ಬಾಳಾಚಾರ್ಯರು ಶ್ರೋತ್ರಿಯವರ ಹಾಗೆ ಧರ್ಮಸೂಕ್ಷ್ಮವನ್ನು ಅರಿತವರು, ಸಂಪ್ರದಾಯ ನಿಷ್ಠರು. ಆದರೆ ಒಳಿತಿಗಾಗಿ ದಾದಾನಂಥವನನ್ನು ತಮ್ಮ ಪವಿತ್ರ ದೇವರ ಕೋಣೆಯಲ್ಲಿ ಬಚ್ಚಿಡುವುದಕ್ಕೆ ಹೇಸುವ ಕರ್ಮಠರಲ್ಲ. ಪರಿಸರದಲ್ಲಿ ಪ್ರವೇಶ ಮಾಡಿ ಶಾಂತಿ ವ್ಯವಸ್ಥೆಗಳನ್ನು ಕದಡುವ ಪ್ರವೃತ್ತಿಗಳ ವಿರುದ್ಧ ಸಾಧ್ಯವಾದಷ್ಟೂ ಸೆಣಸುತ್ತಾರೆ. ಹೋಳಿಯ ಪ್ರತೀಕದೊಂದಿಗೆ ಬಾಳಾಚಾರ್ಯರ ಸೆಣಸನ್ನು ಚಿತ್ರಿಸಲಾಗಿದೆ. ಪ್ರವಾಹದ ಸೆಳವಿನ ವಿರುದ್ಧ ಸೆಣಸುತ್ತ ಸೆಳವಿನ ಸಾಮರ್ಥ್ಯವೇ ಸತ್ವಪೂರ್ಣ ಸವಾಲಾದಾಗ ಅದಕ್ಕೆ ಹೊಂದಿಕೊಂಡು ಹೋಗುವುದು ಸರಿಯೆಂದು ಭಾವಿಸುತ್ತಾರೆ; ಬಾಳಾಚಾರ್ಯರು. ಆದರೆ ಶ್ರೋತ್ರಿಯರು ಧರ್ಮ ಗ್ರಂಥಗಳ ತಾತ್ವಿಕತೆಗೆ ತಂಪು ತಾಣವಾಗುತ್ತಾರೆ. ಆದ್ದರಿಂದಲೇ ಚೀನಿಯು ತಮ್ಮ ವಂಶದವನೆಂಬ ಕಾರಣಕ್ಕಾಗಿ ಅವನನ್ನು ಕಾತ್ಯಾಯನಿಯೊಂದಿಗೆ ಕಳಿಸಲು ನಿರಾಕರಿಸಿದ ಅವರಿಗೆ, ತಾವೇ ಶ್ರೋತ್ರಿಯ ವಂಶದವರಲ್ಲವೆಂಬ ಸತ್ಯ ತಿಳಿದಾಗ ಆ ವಂಶದ

ಹೊಲವನ್ನು, ಬಹುಕಾಲದಿಂದ ತಮ್ಮದೆಂದೆ ಪೋಷಿಸಿಕೊಂಡು ಬಂದಿದ್ದರೂ ಅನುಭೋಗಿಸಿದ್ದರೂ ಚೀನಿಗೆ ಕೊಡಲು ಮನಸ್ಸು ನಿರಾಕರಿಸುತ್ತದೆ. ಕಡೆಯಲ್ಲಿ ವರ್ಣಾಶ್ರಮ ಧರ್ಮದಂತೆ ಶ್ರೋತ್ರಿಯರು ಸನ್ಯಾಸಾಶ್ರಮ ಸ್ವೀಕಾರಕ್ಕೂ ಸಿದ್ಧರಾಗಿ ಬಿಡುತ್ತಾರೆ. ಬಾಳಾಚಾರ್ಯರಾದರೆ ತಮ್ಮ ಮೂಲ ಸತ್ವವನ್ನು ಕೆಣಕಲು ಬಂದ ಸವಾಲುಗಳೊಂದಿಗೆ ಸೆಣಸುತ್ತ, ನಮ್ಮ ಸಮಾಜದಲ್ಲೇ ಬದುಕುವ, ಅದರ ಅರ್ಥ ಪೂರ್ಣತೆಯನ್ನು ಹುಡುಕುವ ವ್ಯಕ್ತಿಯಾಗುತ್ತಾರೆ. ಶ್ರೋತ್ರಿಯರಿಗೆ ಸಾಮಾಜಿಕ ಅರಿವಿಗಿಂತ ಅಧ್ಯಯನದ ಅರಿವೇ ಅನುಸರಣೀಯವಾದದ್ದು. ವಂಶಪ್ರಜ್ಞೆಯ ಪಟ್ಟು ಹಾಕುವುದರಲ್ಲೇ ಕಾಲಕಳೆಯುವ ಇವರು ಸದಾಶಿವರಾಯರ ದ್ವಿಪತ್ನಿತ್ವ ಮುಂತಾದ ಇತರೆ ಸಾಮಾಜಿಕ ಮೌಲ್ಯಗಳಿಗೆ ತೀವ್ರ ಪ್ರತಿಕ್ರಿಯೆ ತೋರಿಸದೆ ತಮ್ಮಷ್ಟಕ್ಕೆ ತಾವು ತೆಪ್ಪಗಿರುತ್ತಾರೆ. ಸಮಯಕ್ಕೆ ಸರಿಹೊಂದುವಂತೆ ಒಂದೆರಡು ಮಾತಾಡುತ್ತಾರೆ ಅಷ್ಟೆ. ಹೀಗಾಗಿ ಬಾಳ ಹೊಳೆಯಲ್ಲಿ ಈಜುತ್ತಾ ಹೋದಂತೆಲ್ಲ ಬಾಳಾಚಾರ್ಯರು ಬೆಳೆಯುತ್ತಿದ್ದಾರೆ ಎನ್ನಿಸಿದರೆ, ಶ್ರೋತ್ರಿಯರು ಧರ್ಮಗ್ರಂಥಗಳಲ್ಲಿ ಉಕ್ತವಾದ ವಂಶ ಶ್ರದ್ಧೆಯ ಸೂತ್ರಗಳಿಂದ ತಮ್ಮನ್ನು ತಾವು ಕಟ್ಟಿಕೊಳ್ಳುತ್ತಾರೆಂಬ ಭಾವನೆ ಬರುತ್ತದೆ. ಇಷ್ಟೇ ಅಲ್ಲದೆ ಇವರ ಪ್ರಭಾವ ಕಾದಂಬರಿಯಲ್ಲಿ ಕಾತ್ಯಾಯನಿ, ರಾಜಾರಾವ್, ಸದಾಶಿವರಾವ್– ಇವರ ಮೇಲೆಲ್ಲಾ ಬೀಳುವುದಲ್ಲದೆ ಕಾತ್ಯಾಯನಿಯ ಕಿವಿಯಲ್ಲಂತೂ ಇವರ ವಂಶದ ಘನತೆಯ ನುಡಿಗಳೇ ಕಿರುಗುಟ್ಟಿ ದ್ವಂದ್ವದ ದಾಂಧಲೆಯಲ್ಲಿ ಪಾತ್ರ ವಹಿಸುತ್ತವೆಯೆಂದ ಮೇಲೆ ಈ ಪಾತ್ರದ ವ್ಯಾಪ್ತಿಯನ್ನು ಅರಿಯಬಹುದು. ಹೀಗೆ ಈ ಪಾತ್ರ, ಧಾರ್ಮಿಕ ಮೌಲ್ಯಗಳಿಗೆ ಉನ್ನತ ವೇದಿಕೆ ನಿರ್ಮಿಸುವ ಕೆಲಸವನ್ನು ಗೆರೆ ಹಾಕಿಕೊಂಡು ಅಚ್ಚುಕಟ್ಟಾಗಿ ನಿರ್ವಹಿಸುತ್ತದೆ.

ಕಾತ್ಯಾಯನಿ

ಯಾವುದಾದರೂ ಒಂದು ಮೌಲ್ಯಕ್ಕೆ ಒತ್ತುಕೊಡುವ ಕೆಲಸಕ್ಕೆ ಕಟ್ಟುಬೀಳುವ ಕಾದಂಬರಿಯಲ್ಲಿ ಅಂತಹ ಮೌಲ್ಯದ ಪ್ರತಿಸ್ಪರ್ಧಿಯೊಬ್ಬರ ಅಗತ್ಯ ಉಂಟಾಗುತ್ತದೆ. ಏಕೆಂದರೆ ಕಾಲ ಉರುಳಿದಂತೆ, ಸಾಮಾಜಿಕ ಸ್ಥಿತಿ ಬದಲಾದಂತೆ ವ್ಯಕ್ತಿವ್ಯಕ್ತಿಗಳ ಸಂಬಂಧ, ವ್ಯಕ್ತಿ ಮತ್ತು ಸಮಾಜದ ಸಂಬಂಧ ವ್ಯತ್ಯಸ್ತವಾಗುತ್ತದೆ. ಅಂತೆಯೇ ಹಳೆಯದು ಪೂರ್ಣ ನಾಶವಾಗುವುದಕ್ಕೆ ಮುನ್ನವೇ ಹೊಸದರ ಪ್ರವೇಶವಾಗುವುದ ರಿಂದ ಸಂಘರ್ಷ ಅನಿವಾರ್ಯ.

'ವಂಶವೃಕ್ಷ' ದಲ್ಲಿ ಕಾತ್ಯಾಯನಿಯ ಪಾತ್ರ ಶ್ರೋತ್ರಿಯರಿಗೆ ಪ್ರತಿಸ್ಪರ್ಧಿಯಾಗಿ ಪರಿಣಮಿಸುತ್ತದೆ. ಆದ್ದರಿಂದ ಶ್ರೋತ್ರಿಯವರ ಪಾತ್ರವನ್ನು ಹಾಗೆ ಬೆಳೆಸಿದ ಕೃತಿಕಾರರು ಕಾತ್ಯಾಯನಿಯ ಪಾತ್ರದ ನಿರೂಪಣೆಯನ್ನು ಹೇಗೆ ನಿರ್ವಹಿಸುತ್ತಾ ರೆಂಬುದನ್ನು ವಿವೇಚಿಸುವುದು ಲಾಭಪ್ರದವಾದುದು.

ಕಾದಂಬರಿಯಲ್ಲಿ ಗೋಳಿನ ಗಂಟನ್ನು ಹೊತ್ತೇ ಪ್ರವೇಶಿಸುವ ಕಾತ್ಯಾಯನಿ ವಿಧವಾ ವಿವಾಹಕ್ಕೆ ಒಪ್ಪಿದ ಹೆಣ್ಣಾಗಿ ಆಧುನಿಕ ಅರಿವನ್ನು ಪ್ರತಿನಿಧಿಸುತ್ತಾಳೆ.

ಶ್ರೋತ್ರಿಯರ ಮನೆಮಗಳಾಗಿಯೇ ಬಂದಿದ್ದ (ಪುಟ ೪೭) ಕಾತ್ಯಾಯನಿ. ಆ ವಾತಾವರಣದಿಂದ ಜಿಗಿದು ಮತ್ತೊಂದು ಪರಿಸರದ ಪ್ರವೇಶ ಮಾಡುವುದು ಗಮನಾರ್ಹ ವಾಗಿದೆ. ಸನಾತನ ಧರ್ಮವೇ ಉಸಿರಾಗಿದ್ದ, ಸಂಪ್ರದಾಯನಿಷ್ಠರಾಗಿದ್ದ ಶ್ರೋತ್ರಿ ಯವರ ಮನೆಯಲ್ಲೇ ಅವರ ಪ್ರತಿಸ್ಪರ್ಧಿ ಇದ್ದು, ಎದ್ದು, ತನ್ನ ದಾರಿಗೆ ಧುಮುಕು ವುದು ಅರ್ಥಪೂರ್ಣವಾಗಿದೆ. ಆದರೆ ಈಕೆಯನ್ನು ಶ್ರೋತ್ರಿಯವರಷ್ಟೇ ಆತ್ಮಶಕ್ತಿ ಯುಳ್ಳ ಪಾತ್ರವನ್ನಾಗಿ ಮಾಡದೆ, ದ್ವಂದ್ವದ ದಳ್ಳುರಿಯಲ್ಲಿ ಹಾಕಿ ದುರ್ಬಲಗೊಳಿ ಸುತ್ತಾ ಹೋಗುವುದನ್ನು ಅರಿತಾಗ, ಕೃತಿಕಾರರು ಶ್ರೋತ್ರಿಯರಿಗೆ ಪಾಮೀಲಾಗಿ ದ್ದಾರೆ ಎನ್ನಿಸುತ್ತದೆ. ಆದ್ದರಿಂದ ಕಾತ್ಯಾಯನಿ ಶ್ರೋತ್ರಿಯವರ ಎದುರು ಪ್ರಬಲ ಪ್ರತಿಸ್ಪರ್ಧಿಯಾಗದೇ ಹೋಗುತ್ತಾಳೆ.

ಶ್ರೋತ್ರಿಯರು ಶಾಂತಿ ಬೇಕೆಂದಾಗ ಭಗವದ್ಗೀತೆಯ ಮದ್ದು ತೆಗೆದುಕೊಳ್ಳ ಬಲ್ಲರು; ಪ್ರಕೃತಿ ಶಕ್ತಿಯನ್ನು ಮೆಟ್ಟಬೇಕೆಂದಾಗ 'ಸಾಂಖ್ಯಕಾರಿಕೆ'ದ ಸಾಲುಗಳ ಸಬಲತೆಯ ಸಹಕಾರ ಪಡೆಯಬಲ್ಲರು. ಆದರೆ ಕಾತ್ಯಾಯನಿ ಹಾಗಲ್ಲ ಎಂಬುದು ಕಾದಂಬರಿಯ ಮೊದಲಲ್ಲೇ ವ್ಯಕ್ತವಾಗುತ್ತದೆ. ವಿಧವೆಯಾದ ಅವಳು ಮನಶ್ಶಾಂತಿ ಯಿಲ್ಲದೆ ತಳಮಳಿಸುತ್ತ, ಶ್ರೋತ್ರಿಯವರ ಸೂಚನೆಯಂತೆ ಭಗವದ್ಗೀತೆ ಹಿಡಿದು, ಅದರ ಮೂಲಕ ಶಾಂತಿಗಳಿಸಲು ಹೆಣಗಿ ಸೋಲುತ್ತಾಳೆ. ಅವಳಿಗೆ ಭಗವದ್ಗೀತೆಗಿಂತ ತನ್ನ ಪತಿಯ ಕಾಲೇಜು ಪುಸ್ತಕಗಳ ಓದೇ ಅಚ್ಚುಮೆಚ್ಚು; ಅಂತೂ ಕಾಲೇಜಿಗೆ ಸೇರಿದ್ದಾದ ಮೇಲೆ ಅವಳ ಬಾಳಿಗೊಂದು ಹೊಸ ತಿರುವು ಲಭ್ಯವಾಗುತ್ತದೆ.

ವಿಧವೆಯಾದ ತಾನು ರಾಜಾರಾಯರನ್ನು ವರಿಸಬೇಕಾಗಿ ಬಂದಾಗ ಅವಳು ತುಂಬಾ ಯೋಚಿಸುತ್ತಾಳೆಂಬುದನ್ನು ನೋಡಬೇಕು. ಅವಳಲ್ಲಿ ನಿರ್ಧಾರದ ರೂಪ ವೊಂದು ಮೂಡುವುದಕ್ಕೆ ಮುಂಚೆ ಮನಸ್ಸಿನಲ್ಲಿ ಅಲೆಗಳ ಆರ್ಭಟ ನಡೆಯುತ್ತದೆ, ಅನಂತರವೇ ಅವಳಲ್ಲಿ ನಿರ್ಧಾರದ ನೆಲೆಯೂರಿತೆಂಬುದಕ್ಕೆ ಕಾದಂಬರಿಯೇ ವಿವರ ಗಳನ್ನು ಒದಗಿಸುತ್ತದೆ. ಒಂದು ಸಂದರ್ಭವನ್ನು ನೋಡಬಹುದು : "ಮೌನವಾಗಿ ಕುಳಿತಿದ್ದ ಅವಳ ತಲೆಯಲ್ಲಿ ಪ್ರಚಂಡವಾದ ವಿಚಾರದ ಸುಳಿಯು ಸುತ್ತುತ್ತಿತ್ತು. ಸ್ವಲ್ಪ ಹೊತ್ತಿಗೆ ಅದು ಶಾಂತವಾಯಿತು. ಅಷ್ಟರಲ್ಲಿ ಅವನು (ರಾಜಾರಾವ್) 'ನನ್ನ ಮಾತಿಗೆ ಉತ್ತರ ಕೊಡು' ಎಂದು ಕೈಹಿಸುಕಿ ಕೇಳಿದ. 'ನಿಮ್ಮನ್ನು ಬಿಟ್ಟು ನಾನು ಬದುಕಲಾರೆ' ಎಂದು ಅವಳು ಹೇಳಿದಳು. ಇಬ್ಬರ ಮನಸ್ಸಿನಲ್ಲೂ ಒಂದು ಬಗೆಯ ಶಾಂತಿ ನೆಲಸಿತು. ಝಂಝಾವಾತದ ಸುಳಿಗಳು ಒಂದರಲ್ಲಿ ಇನ್ನೊಂದು ಬೆರೆತುಹೋದಂತೆ ಇಬ್ಬರೂ ಸಮಾಧಾನ ಹೊಂದಿದರು' (ಪುಟ ೧೫೨).

ಇಷ್ಟೆಲ್ಲ ನಿರ್ಧಾರ ಮಾಡಿದ ಕಾತ್ಯಾಯನಿಯನ್ನು ಮತ್ತೆ ತುಮುಲದ ತಾಣಕ್ಕೆ ತಂದು ನಿಲ್ಲಿಸುತ್ತಾರೆ, ಲೇಖಕರು. ಹಿಂದೊಮ್ಮೆ ಭಗವದ್ಗೀತೆ ಉಪನಿಷತ್ತುಗಳಿಂದ ಶಾಂತಿ ಪಡೆಯಲಾಗದೇ ಹೋದ ಅವಳು ಮತ್ತೆ ಅವುಗಳನ್ನು ಅಧ್ಯಯನ ಮಾಡ ಬೇಕೆಂದು ಬಯಸುತ್ತಾಳೆ. 'ನಿಶ್ಚೇತನ ಸ್ವರೂಪದ ಪ್ರಕೃತಿಯು ಚೇತನ ರೂಪವಾಗಿ

ಈಗ ಅವಳೇ ಪ್ರಚಂಡ ತುಮುಲದ ರಂಗವಾಗಿದ್ದಳು. ಧರ್ಮ ಸಮಾಜ ನೀತಿ, ಮುಂತಾದ ಕಟ್ಟುಪಾಡುಗಳೂ ಅವಳಲ್ಲಿ ಅಷ್ಟೇ ಪ್ರಚಂಡ ಶಕ್ತಿಯಿಂದ ಬೇರು ಬಿಟ್ಟಿದ್ದವು. ಎರಡೂ ಶಕ್ತಿಗಳ ರಣಾಂಗಣವಾಗಿದ್ದ ಮನಸ್ಸಿನಿಂದ, ಜಿಜ್ಞಾಸೆಗೆ ಬೇಕಾದ ಶಾಂತಿ ತಾಳ್ಮೆಗಳು ಮಾಯವಾಗಿದ್ದವು' (ಪುಟ ೧೫೪).

ಇಂಥ ಒಂದು ರಣಾಂಗಣವಲ್ಲಿ ಎರಡು ಶಕ್ತಿಗಳ ನಡುವೆ ನಡೆದ ಸೆಣಸಿನ ನಂತರವೇ ಕಾತ್ಯಾಯನಿ ಒಂದೂ ದೃಢ ನಿರ್ಧಾರಕ್ಕೆ ಬರುತ್ತಾಳೆ ಎಂಬುದನ್ನು ಗಮನಿಸ ಬೇಕಾಗುತ್ತದೆ.

'ಮಲ್ಲಿಗೆಯೂ ಮರದ ಸಂಗಡ ಸುರುಟಿ ಹೋಗುವುದೆಂದೂ ಅಕಾರಣವಾಗಿ ಯೋಚಿಸಿದ್ದ (ಪುಟ ೧೧೮) ' ಕಾತ್ಯಾಯನಿಗೆ 'ಹಳೆಯ ಮರ ಸತ್ತಮೇಲೂ ಹೊಸ ಮರಕ್ಕೆ ಹಬ್ಬಿಕೊಂಡು ಮಲ್ಲಿಗೆಯೂ ಮೊದಲಿನಂತೆಯೇ ಒಂದು ರಾಶಿ ಹೂಬಿಡುವು ದನ್ನು ಕಂಡು' (ಪುಟ ೧೧೮) ಆಶ್ಚರ್ಯವಾಗಿತ್ತು, ಹಿಂದೆ ತನ್ನ ನಿರ್ಧಾರದ ನಂತರವೂ ತುಮುಲಕ್ಕೆ ತುತ್ತಾಗಿ ತಳಮಳಿಸಿದ್ದ ಕಾತ್ಯಾಯನಿ 'ಈ ಸಂದರ್ಭದಲ್ಲಿ' ನಿಜವಾದ ನಿಶ್ಚಲತೆಯನ್ನು ಪಡೆದು, ಮತ್ತೆ ದ್ವಂದ್ವಕ್ಕೆ ಸಿಕ್ಕಿ, ಕಡೆಗೊಮ್ಮೆ ಅಂತಿಮ ನಿರ್ಧಾರ ಮಾಡಿ, ವಿಧವಾ ವಿವಾಹಕ್ಕೆ ಬದ್ಧಳಾಗುತ್ತಾಳೆ, ಹೊಸ ಸಾಮಾಜಿಕ ಮೌಲ್ಯವನ್ನು ಸ್ವೀಕರಿಸುತ್ತಾಳೆ; ಇಷ್ಟೆಲ್ಲ ತುಮುಲದ ನಂತರ ತಳವೂರಿದ ಕಾಲ ಧರ್ಮಕ್ಕನುಗುಣವಾದ ಸಾಮಾಜಿಕ ಪ್ರಜ್ಞೆ ಮತ್ತೆ ಚೀನಿಯ ನೆನಪಿನಿಂದ ಸಡಿಲ ವಾಗುವುದು ಉದ್ದೇಶಪೂರಿತ ಸನ್ನಿವೇಶವಾಗಿಬಿಡುತ್ತದೆ. ಕಾತ್ಯಾಯನಿ ಪಾತ್ರದ ಸ್ವಭಾವವೇ ದುರ್ಬಲವಾಗುತ್ತದೆ. ಇದರಿಂದ ಶ್ರೋತ್ರಿಯವರ ಮೌಲ್ಯ ಶ್ರೇಷ್ಠತೆಯ ಪ್ರತಿಷ್ಠಾಪನೆಗೆ ದಾರಿ ಸುಲಭವಾಗುತ್ತದೆ.

ಕಾತ್ಯಾಯನಿಯ ಪಾತ್ರದಲ್ಲಿಯೂ ಕಾದಂಬರಿಕಾರರು ಶ್ರೋತ್ರಿಯರನ್ನು ಪ್ರವೇಶಗೊಳಿಸಿ ಅವಳ ನಂಬಿಕೆಯ ನೆಲಗಟ್ಟನ್ನು ಅಳ್ಳಾಡಿಸುತ್ತಾರೆ. ವಿದ್ಯಾವಂತೆ ಯಾದ, ಅಲ್ಲದೆ ಅಗಾಧ ದ್ವಂದ್ವದ ಬಳಿಕವೇ ನಿಶ್ಚಲತೆಯನ್ನು ತಾಳಿ ರಾಜಾರಾಯ ನನ್ನು ಮದುವೆಯಾದ ಅವಳು, ತನಗೆ ಮಕ್ಕಳಾಗದ್ದಕ್ಕೆ ವೈಜ್ಞಾನಿಕ ಕಾರಣವನ್ನು ಹುಡುಕಿಕೊಳ್ಳುವ ಬದಲು, ವಂಶ, ಸಂತಾನಗಳ ಬಗ್ಗೆ ಶ್ರೋತ್ರಿಯರು ಹೇಳಿದ ಮಾತುಗಳನ್ನು ಮನದಲ್ಲಿ ನುಗ್ಗಲು ಬಿಟ್ಟು ಜರ್ಝರಿತಳಾಗುತ್ತಾಳೆ. 'ಒಂದು ವಂಶಾಭಿವೃದ್ಧಿಗಾಗಿ ಮತ್ತೊಂದು ವಂಶದ ಕ್ಷೇತ್ರವನ್ನು ದಾನಮಾಡಿ, ಆ ವಂಶದ ಬೀಜವನ್ನು ತನ್ನಲ್ಲಿ ಧರಿಸಿ ವೃಕ್ಷವನ್ನಾಗಿ ಮಾಡಿದ ಮೇಲೆ ಆ ಕ್ಷೇತ್ರವು ತನ್ನ ಸಾರ್ಥಕ್ಯವನ್ನು ಪಡೆದು ಆಯಿತು' ಎಂಬ ಶ್ರೋತ್ರಿಯರ ಮಾತು ನೆನಪಿಗೆ ಬರುತ್ತಿತ್ತು. 'ಹೊಸ ವಂಶಕ್ಕೆ ಸೇರಿದ ತಾನು ಶ್ರೋತ್ರಿಯರ ಸಂಸಾರಕ್ಕೆ ತನ್ನಿಂದ ಸಲ್ಲಬೇಕಾದ ಕರ್ತವ್ಯಗಳನ್ನು ಮಾಡಲಿಲ್ಲವೆಂಬ ಭಾವನೆ ತಪ್ಪಿತಸ್ಥಳನ್ನಾಗಿ ಮಾಡುತ್ತಿತ್ತು' (ಪುಟ ೩೭೬).

ಈ ವಿವರಣೆಗಳಿಂದ ಕಾತ್ಯಾಯನಿಯ ಪಾತ್ರ ಎತ್ತ ಸಾಗುತ್ತಿದೆಯೆಂಬ ಅರಿವಾಗುತ್ತದೆ. 'ವಂಶಕ್ಕಾಗಿ ವ್ಯಕ್ತಿ ಅಂತ ನೀವು (ಶ್ರೋತ್ರಿಯವರು) ಭಾವಿಸಿದರೆ ವ್ಯಕ್ತಿಯ ಜೀವನಕ್ಕೆ ನಾನು ಮಹತ್ವ ಕೊಡ್ತೀನಿ' (ಪುಟ ೨೫೪) ಎಂದು ಚೀನಿಯನ್ನು ಕೇಳಲು ಬಂದ ಸಂದರ್ಭದಲ್ಲಿ ಸಾರಿದ ಕಾತ್ಯಾಯನಿ ಅನಂತರ ವ್ಯಕ್ತಿಗಿಂತ ವಂಶಕ್ಕೆ ಮಹತ್ವ ಕೊಡುವಷ್ಟು ವ್ಯತ್ಯಸ್ತಳಾಗುತ್ತಾಳೆ. ಪ್ರಕೃತಿ ಚಿರನೂತನಳು, ಚಿರಚೇತನಳು ಎಂಬುದನ್ನು ಒಪ್ಪಿದ ಇವಳು ಕಡೆಗೆ ಪ್ರಕೃತಿ 'ಚಿರನೂತನಳೂ ಅಲ್ಲ ಚಿರಚೇತನಳೂ ಅಲ್ಲ. ಧರ್ಮಪಥವನ್ನು ಧಿಕ್ಕರಿಸಿದರೆ ಅವಳಿಗೆ ಜೀವನವೇ ಇಲ್ಲ' (ಪುಟ ೪೦೨) ಎಂದು ಹೇಳಿಬಿಡುತ್ತಾಳೆ, ಹಾಗೆ ನಂಬುತ್ತಾಳೆ. ಈ ಮಾತುಗಳು ಅವಳ ಸೋಲನ್ನು ಅಂದರೆ ಅವಳು ಸ್ಥಾಪಿಸ ಹೊರಟ ಮೌಲ್ಯಗಳ ಸೋಲನ್ನು ಸೂಚಿಸುತ್ತವೆ. ಕಾಲೇಜಿನಲ್ಲಿ ಚೀನಿಯನ್ನು ಕಂಡಾಗಿನಿಂದ ಕಾತ್ಯಾಯನಿಯ ಪಾತ್ರ ಓದುಗರ ಅನುಕಂಪವನ್ನು ಗಳಿಸುತ್ತ ಸೋಲಿನತ್ತ ಸಾಗುತ್ತದೆ. ಕಡೆಯಲ್ಲಿ 'ಅವಳು ಸತ್ತಾಗ ಶಾಂತವಾಯಿತು ಅವಳ ಉಸಿರು. ಅವಳ ಜೀವನದಲ್ಲಿ ಎದ್ದು ಅವಳನ್ನು ನೋವಿನ ಸುಳಿಯಲ್ಲಿ ಸಿಕ್ಕಿಸಿ ನರಳಿದ ದ್ವಂದ್ವವೂ ಈಗ ಮೃತ್ಯುವಿನಲ್ಲಿ ಮುಕ್ತಾಯವಾಯಿತು' (ಪುಟ ೪೮೫) ಎಂದು ಬರೆದು ಅವಳ ಬದುಕಿಗೆ ಅವಳ ನಂಬಿಕೆ ನಿಷ್ಠೆಗಳಿಗೆ ಮುಕ್ತಾಯ ಹಾಡಲಾಗಿದೆ.

ಕಾತ್ಯಾಯನಿಯ ಪಾತ್ರದ ಬೆಳವಣಿಗೆ ಮನಸೆಳೆಯುವಂತೆ ಸಾಗುತ್ತದೆ. ಆದರೆ ಅವಳ ಪಾತ್ರವನ್ನು ವಿಧವಾ ವಿವಾಹದಂತಹ ಆಧುನಿಕ ಮೌಲ್ಯಗಳ ಪ್ರತೀಕವಾಗಿ ಬಳಸುತ್ತಾರೆಂಬುದನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಕಾತ್ಯಾಯನಿ ಶ್ರೋತ್ರಿಯರ ಮುಂದೆ ಏನೂ ಅಲ್ಲವೆಂಬಂತೆ ತೋರಿಸುವ, ಅವಳು ತುಳಿದ ಹೊಸ ದಾರಿ ಭ್ರಮೆಯ ಬಂಡಲೆಂದು ಬಯಲು ಮಾಡುವ ಪ್ರಯತ್ನ ನಡೆದಿರುವುದು ಕಾಣುತ್ತದೆ. ಆದ್ದರಿಂದ ಕಾತ್ಯಾಯನಿ ದುರ್ಬಲ ವ್ಯಕ್ತಿಯಾಗಿ, ಕಾದಂಬರಿಯ ದುರಂತ ಪಾತ್ರವಾಗಿ ಪರಿಣಮಿಸುತ್ತಾಳೆ.

ರಾಜಾರಾವ್

ವಿಧವಾ ವಿವಾಹದ ಅಂಗವಾಗಿ ಬರುವ ಮತ್ತೊಂದು ಪಾತ್ರ ರಾಜಾರಾವ್. ರಾಜಾರಾವ್ ಕಾದಂಬರಿಯನ್ನು ಘಾರಿನ್ನಿನಿಂದಲೇ ಪ್ರವೇಶಿಸುತ್ತಾನೆ. ಇಂಗ್ಲಿಷ್ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡು ಮತ್ತು ಓದಿಕೊಳ್ಳುವ ವಿದ್ಯಾರ್ಥಿಗಳಿಗೆ ಚೆನ್ನಾಗಿ ಓದಿಸುವ ಕಾಲೇಜು ಅಧ್ಯಾಪಕ. ಹೊರದೇಶದಲ್ಲಿ ವಿದ್ಯೆಯ ಉನ್ನತ ಸ್ಥಾನ ಪಡೆದು ತಾಯ್ನಾಡಿಗೆ ಹಿಂದಿರುಗಿದವನು. ಅಂದಮೇಲೆ ಈ ಕಾದಂಬರಿಯ ರಾಜಾರಾವ್ ಪ್ರಜ್ಞಾವಂತ ಎಂಬುದು ಸಾಬೀತಾಯಿತು. ಬರೀ ಪ್ರಜ್ಞಾವಂತ ಮಾತ್ರವಲ್ಲ, ಸಾಹಿತಿಯೂ ಹೌದು. ನಾಟಕವನ್ನು ಬರೆಯುವುದರಲ್ಲಿ ಬರೆದುದನ್ನು ಆಡಿಸುವುದರಲ್ಲಿ ಗಟ್ಟಿಗ. ಒಬ್ಬ ವಿಮರ್ಶಕರು (ಬನ್ನಂಜೆ ಗೋವಿಂದಾಚಾರ್ಯ) ಇವನ ಬಗ್ಗೆ 'ಕಾಲೇಜಿನ ನಾಟಕ ರಂಗಗಳಲ್ಲಿ ಮಾತ್ರವಲ್ಲ ಜೀವನರಂಗದಲ್ಲಿ ಕೂಡ

ನಾಟಕವನ್ನೇ ಆಡುತ್ತಿರುತ್ತಾನೆ' ಎಂದು ಹೇಳುವುದು ಕೇವಲ ಚಮತ್ಕಾರದ ಮಾತಾಗು ತ್ತದೆ ; ಅಷ್ಟೆ. ಕಾದಂಬರಿಯಲ್ಲಿ ನಡೆಯುವ ಮೂಲ ಸಂಘರ್ಷದಲ್ಲಿ ರಾಜಾರಾಯ ಒಂದು ಕಡೆ ಪ್ರಮುಖನಾಗಿರುತ್ತಾನೆಂಬ ಮಾತನ್ನು ಮರೆಯಲಾಗುವುದಿಲ್ಲ. ಅದನ್ನು ಕಾದಂಬರಿಕಾರರಂತೂ ಮರೆತಿಲ್ಲ. ಏಕೆಂದರೆ ಇವನ ಪಾತ್ರವನ್ನು ಹೇಗೆ ಬೆಳಸ ಬೇಕೆಂಬುದನ್ನು ಅವರು ಅಚ್ಚುಕಟ್ಟಾಗಿ ಆಲೋಚಿಸಿದ್ದಾರೆ. ಇದರ ಫಲವಾಗಿ ರಾಜಾರಾವ್ ಹೇಗೆ ಕಾಣಿಸಿಕೊಂಡು, ಹೇಗೆ ಕುದುರಿಕೊಂಡು, ಹೇಗೆ ಕಮರಿಕೊಂಡು ಹೋಗುತ್ತಾನೆ ಎಂಬುದನ್ನು ನೋಡಬಹುದು.

ರಾಜಾರಾವ್ ಹಳೆಯದರ ಬಗ್ಗೆ ಒಲವಿಲ್ಲದೆ, ಹೊಸತರ ಹಳಿಯ ಮೇಲೆ ಬದುಕಿನ ಬಂಡಿ ಬಿಡುವ, ಉತ್ಕಟೇಚ್ಛೆಯುಳ್ಳ ವ್ಯಕ್ತಿ. ಸಾಂಪ್ರದಾಯಿಕ ಕಟ್ಟು ಪಾಡುಗಳು ಜೀವನದ ಹಾಡನ್ನೂ ಹಾಳುಮಾಡುವ ಪಾಡುಗಳೆಂದೇ ಅವನ ನಂಬಿಕೆ. ಕಾತ್ಯಾಯನಿಯಾದರೋ ದ್ವಂದ್ವದ ದತ್ತು ತೆಗೆದುಕೊಂಡವಳಂತೆ ಕಾಣುತ್ತಾಳೆ; ಆದರೆ ರಾಜಾರಾಯನ ನಂಬಿಕೆ ನಿಷ್ಠೆಗಳು ಕಾದಂಬರಿಯಲ್ಲಿ ಎಲ್ಲೂ ದ್ವಂದ್ವಕ್ಕೆ ಎಡೆ ಮಾಡಿಕೊಡುವುದಿಲ್ಲ.

ಮಾನವ ಕಲ್ಪಿತವಾದ ಸಮಾಜಶಾಸ್ತ್ರಗಳು, ಕಟ್ಟುಕಟ್ಟಳೆ ನೀತಿನಿಯಮಗಳೆಲ್ಲವೂ ಜೀವನದ ಮೂಲಭೂತ ಶಕ್ತಿಯನ್ನು ಸುರುಟಿಸುವ ಕೋಟಲೆಗಳು. 'ಈ ಕೋಟಲೆ ಗಳನ್ನು ಕತ್ತರಿಸಿ ಹಾಕಿ ಜೀವನದ ಮೂಲ ಚೇತನದ ಅನುಭವ ಮಾಡಿಸುವುದೇ ನಿಜವಾದ ತಿಳಿವು' (ಪುಟ ೧೨೦) ಎಂದು ರಾಜಾರಾವ್ ನಂಬಿದ್ದ. ಅಂದಾಗ ರಾಜಾ ರಾಯನ ದೃಷ್ಟಿಯಲ್ಲಿ ಧಾರ್ಮಿಕ ವಿಧಿಗಳು ಸಹ ಮಾನವ ಕಲ್ಪಿತವಾದ ಅರ್ಥಹೀನ ಕಟ್ಟುಪಾಡುಗಳಾಗುತ್ತವೆ. ಇಂಥ ಸವಕಲು ನಾಣ್ಯಗಳ ಚಲಾವಣೆ ಅಸಾಧ್ಯವೆಂದೂ ಅವನ ದೃಢ ನಿಶ್ಚಯ. ಅರ್ಥ ಕಳೆದುಕೊಂಡ ಬಂಧನಗಳನ್ನು ಭೇದಿಸಿದಾಗಲೇ ಬದುಕಿನ ಮೂಲ ಚೈತನ್ಯದ ಸಾಕ್ಷಾತ್ಕಾರ ಸಾಧ್ಯವೆಂದು ಭಾವಿಸಿದ ಅವನು 'ನಾಗರೀಕತೆ ಎನ್ನುವುದೇ....ಕಟ್ಟುಪಾಡುಗಳ ಕಗ್ಗಂಟು....ಇದರಿಂದ ಬಿಡುಗಡೆ ಹೊಂದದೆ ಜೀವನದ ಚೇತನವನ್ನನುಭವಿಸುವುದು ಸಾಧ್ಯವಿಲ್ಲ' (ಪುಟ ೧೨೧) ಎಂಬ ನಿಶ್ಚಲತೆಯನ್ನು 'ಪ್ರಕೃತಿಯ ಸೊಬಗನ್ನು ಕಡಿದು ಮನುಷ್ಯನು ತನ್ನ ದಾರಿಯನ್ನು ಹದಗೊಳಿಸುವು ದನ್ನೂ ವ್ಯಕ್ತಿಯ ಸ್ವಚ್ಛಂದ ಆನಂದವನ್ನು ತುಳಿದು ನಾಗರೀಕತೆಯ ಬೇರುಬಿಡುವು ದನ್ನೂ ಹೋಲಿಸಿ ಅವನ ಮನಸ್ಸು ಒಂದು ನಾಟಕವನ್ನು ರಚಿಸುತ್ತಿತ್ತು' (ಪುಟ ೧೨೧) ಇದರ ಫಲವೇ ಅವನ (ಮೂಲತತ್ವ), ನಾಟಕ.

ರಾಜಾರಾವ್ ರಚಿಸಿದ ಈ ನಾಟಕದಲ್ಲಿ ಆತನ ನಂಬಿಕೆ ನಿಷ್ಠೆಗಳು ಮತ್ತೆ ಸ್ಥಿರೀ ಕರಣಗೊಳ್ಳುವುದನ್ನು ಕಾಣುತ್ತೇವೆ. 'ನನ್ನ ಮೂಲಗುಣವನ್ನು ಕೃತಕವಾಗಿ ತಡೆ ಹಿಡಿಯುವ ಧರ್ಮ, ನೀತಿ, ರಾಜಶಾಸನ, ಸಮಾಜ ನಿಯಮ, ಜನತೆಯ ಆರೋಪ ಇವೆಲ್ಲವೂ ಅಸತ್ಯದ ಮುಖಗಳು. ಪ್ರಕೃತಿ ಚಿರಯೌವ್ವನೆ, ಅವಳ ಸುಂದರ

ಸ್ವರೂಪವನ್ನು ತಿಳಿಯಲೆತ್ನಿಸುವ ಧರ್ಮವು ತನಗೆತಾನೇ ನಾಶವಾಗುತ್ತದೆ' (ಪುಟ ೧೨೭) ಎಂಬುದಾಗಿ ಹೇಳುವ ಪ್ರಕೃತಿಯ ಮುಂದೆ ದೇವರಾಜ. ದೇವಗುರು ಹೆಳವ ರಾಗುತ್ತಾರೆ. ಇವರಿಗೆ ಕೈಕಾಲು ಬರುವುದೇ ಪ್ರಕೃತಿಯ ಕೃಪೆಯಿಂದ. ಇಂಥ ನಾಟಕದ ಕರ್ತೃವಾದ ರಾಜಾರಾವ್ ಯಾವ ಜೀವನ ಮೌಲ್ಯಗಳನ್ನು ನಂಬಿದ್ದ ಎಂಬುದೂ ಸ್ಪಷ್ಟವಾಗುತ್ತದೆ. ಆದೇ ಶ್ರೋತ್ರಿಯರು 'ಪ್ರಕೃತಿಯ ಹಿಡಿತದಿಂದ ಮುಕ್ತಿ ಹೊಂದದೆ ಮನುಷ್ಯನಿಗೆ ಬಿಡುಗಡೆ ಇಲ್ಲ' (ಪುಟ ೨೦೧) ಎಂದು ಬಲವಾಗಿ ನಂಬಿದ್ದಷ್ಟೇ ಅಲ್ಲ, ಪ್ರಕೃತಿಯನ್ನು ಗೆಲ್ಲಲು ಸತತವಾಗಿ ಹೆಣಗುತ್ತಿದ್ದರೆಂಬುದು ಸಂವೇದ್ಯ ಸಂಗತಿ. ಅಂದಮೇಲೆ ಶ್ರೋತ್ರಿಯರು ಮತ್ತು ರಾಜಾರಾವ್ ಮೌಲ್ಯ ನಿಷ್ಠೆಯ ದೃಷ್ಟಿಯಿಂದ ಪರಸ್ಪರ ವಿರುದ್ಧ ಮನೋಧರ್ಮದವರಾಗುತ್ತಾರೆ. ಶ್ರೋತ್ರಿಯವರು ಅವರ ಹಾದಿಯಲ್ಲಿ ಎಷ್ಟು ಶಕ್ತಿಶಾಲಿಯೋ, ರಾಜಾರಾವ್ ತನ್ನ ಹಾದಿಯಲ್ಲಿ ಅಷ್ಟೇ ಗಟ್ಟಿಗನೆಂಬುದಕ್ಕೆ ಕಾದಂಬರಿಯಲ್ಲಿ ಬರುವ ಮೇಲ್ಕಂಡ ವಿವರ ಗಳೇ ಸಾಕ್ಷಿ ಒದಗಿಸುತ್ತವೆ. ಶ್ರೋತ್ರಿಯರಿಗೆ ಪ್ರತಿಸ್ಪರ್ಧಿಯಾದ ಪಾತ್ರ ನಿರ್ಮಾಣ ಮಾಡುವಾಗ ಕಾತ್ಯಾಯನಿಯನ್ನು ದುರ್ಬಲಗೊಳಿಸಿದಷ್ಟು ಕಠಿಣತೆ–ಕಾದಂಬರಿ ಕಾರರಿಗೆ–ರಾಜಾರಾಯನ ಪಾತ್ರವಿಷಯದಲ್ಲಿ ತಲೆ ಹಾಕಿಲ್ಲ. ಪಾತ್ರ ಪೋಷಣೆಯ ದೃಷ್ಟಿಯಿಂದ, ಮೌಲ್ಯ ನಿಷ್ಠತೆಯ ಮಾನದಂಡದ ಬಲದಿಂದ ಹೇಳುವುದಾದರೆ ಶ್ರೋತ್ರಿಯವರಿಗೆ ಎದುರಾಗುವಷ್ಟು ಬಲ ರಾಜಾರಾಯನಿಗೆ ಇದೆ. ಶ್ರೋತ್ರಿಯರು ಹಳೆಯ ಹಾಸುಗಲ್ಲಿನ ಮೇಲೆ ಎಷ್ಟು ತೃಪ್ತರಾಗಬಲ್ಲರೋ ಅಷ್ಟೇ ತೃಪ್ತಿ ಇವನಿಗೆ ಹೊಸ ಹಸಿರಿನಲ್ಲಿ ಸಿಗಬಲ್ಲದು. ಅವರು ಸಾಂಪ್ರದಾಯಿಕ ವಾತಾವರಣದ ಹೂರಣ ವನ್ನು ಸವೆದು ಶಕ್ತವಾದರೆ, ಇವನು ಸಮುದ್ರದಾಚೆಯ ಸವಿಯನ್ನೂ ಉಂಡು ಬೆಳೆದು ನಿಂತವನು. 'ಮೂಲತತ್ವ' ನಾಟಕದ ಮುಖ್ಯ ಮಾತುಗಳನ್ನು ಕಾತ್ಯಾ ಯನಿಯ ಜತೆ ಮತ್ತೆ ಆಡುತ್ತ ತನ್ನ ನಂಬಿಕೆಯ ನೆಲೆಯನ್ನು ತೋರಿದವನು.

ಇಷ್ಟೆಲ್ಲ ಬಲವುಳ್ಳ, ನಿಶ್ಚಲತೆಯುಳ್ಳ, ರಾಜಾರಾವ್ ಕಾತ್ಯಾಯನಿಯನ್ನು ಪ್ರೇಮಿಸುವ ಕಾಲೇಜು ಅಧ್ಯಾಪಕನಾಗಿ, ಮುಂದೆ ಏಕಮನಸ್ಸಿನಿಂದ ಮದುವೆಯಾಗು ವುದರ ಮೂಲಕ ಹಳೆಯದ್ದನ್ನು ಹಳಸಿದನ್ನುವಂತೆ ನೋಡುವ ನವ ಸಮಾಜದ ಪ್ರತೀಕವಾಗಿ ಮುಂದುವರೆಯುತ್ತಾನೆ. ಕಾತ್ಯಾಯನಿಗೆ ಮಕ್ಕಳಾಗದಿದ್ದಾಗ ಅವಳ ನೋವನ್ನು ಹಂಚಿಕೊಳ್ಳುತ್ತಾನೆ. ಇದು ಸಹಜ ದಂಪತಿಗಳ ಸ್ವಾಭಾವಿಕ ಕ್ರಿಯೆ. ಆದರೆ ಕಾತ್ಯಾಯನಿಯ ಕಿವಿಯಲ್ಲಿ ಕೊರೆದಂತೆ, ತಲೆಯಲ್ಲಿ ತುರಿದಂತೆ, ಇವನಿಗೆ ಶ್ರೋತ್ರಿಯವರ ವಿಚಾರದೋಲಗದ ಆರ್ಭಟ ಆಗುವುದಿಲ್ಲ. ಇಷ್ಟಕ್ಕೂ ಶ್ರೋತ್ರಿ ಯವರ ನೇರ ಪರಿಚಯವೂ ಇರುವುದಿಲ್ಲ.

ಹೀಗೆ ಹೆಳವ ಧಾರ್ಮಿಕತೆಗೆ ಪ್ರಕೃತಿ ಚೈತನ್ಯ ತುಂಬುವುದನ್ನು ಪ್ರತಿಪಾದಿಸಿದ. ನೆಣವುಳ್ಳ ನಂಬಿಕೆಯ ನೆಲಗಟ್ಟಿನ ಮೇಲೆ ನಿಂತಿದ್ದ ರಾಜಾರಾವ್, ಕಡೆಯಲ್ಲಿ ತನ್ನ ನಂಬಿಕೆಯ ಅಸ್ತಿತ್ವವನ್ನು ಅಲ್ಲಾಡಿಸುವ ಪ್ರಬಲ ಅಲೆಗಳ ಹೊಡೆತಕ್ಕೆ ಸಿಕ್ಕದಿದ್ದರೂ

ಶ್ರೋತ್ರಿಯವರನ್ನು ಕಂಡಾಗ 'ನಿಮ್ಮ ಪರಿಚಯವಿದ್ದು ನಿಮ್ಮ ವ್ಯಕ್ತಿತ್ವ ತಿಳಿದಿದ್ದರೆ ನಾನು ಇವಳನ್ನು ಮದುವೆಯಾಗ್ತಿರಲಿಲ್ಲ, ನೀವು ನನ್ನನ್ನು ಕ್ಷಮಿಸಬೇಕು' (ಪುಟ ೪೮೩). ಎಂದು ಹೇಳುವಷ್ಟರ ಮಟ್ಟಿಗೆ ಪರಿವರ್ತನೆಗೊಳ್ಳುವುದು ತುಂಬ ಆಶ್ಚರ್ಯಕರವಾಗಿದೆ. ಕಾದಂಬರಿಕಾರರ 'ಕೈ' ಇಲ್ಲಿ ಕಾಣಿಸಿಕೊಳ್ಳುತ್ತದೆ. ಹೇಗೆಂದರೆ ಒಬ್ಬ ವ್ಯಕ್ತಿ ತಾನು ಬಲವಾಗಿ ನಿಷ್ಠೆಯನ್ನಿಟ್ಟುಕೊಂಡಿದ್ದ ವಿಷಯವೊಂದನ್ನು ಅಥವಾ ತತ್ತ್ವ ಮೌಲ್ಯಗಳನ್ನು ಸಾರಾಸಗಟು ಬಿಟ್ಟು, ಶರಣಾಗತ ಸ್ಥಿತಿಯಲ್ಲಿ ನಿಲ್ಲಬೇಕಾದರೆ, ಇಂಥ ಪರಿವರ್ತನೆಗೆ ಅಗತ್ಯವಾದ ಒತ್ತಡಗಳು ಕಾದಂಬರಿಯ ಒಡಲಲ್ಲಿರಬೇಕು. ಅಂಥ ವ್ಯಕ್ತಿಯ ನಂಬಿಕೆಯ ಬೇರು ಕ್ರಮೇಣ ಹೇಗೆ ಸಡಿಲವಾಯಿತೆಂಬುದಕ್ಕೆ ಅಥವಾ ಒಂದೇ ಸಾರಿ ಹೇಗೆ ಕಿತ್ತುಬಿತ್ತು ಎಂಬುದಕ್ಕೆ ಪ್ರಬಲ ಪ್ರತಿಪಾದನೆ ಅಗತ್ಯ. ಆದರೆ ಇಲ್ಲಿ. ಎಲ್ಲ ಮನುಷ್ಯರಂತೆ ಮಕ್ಕಳ ಬಗ್ಗೆ ಆತ ಚಿಂತಾಚಿತ್ತನಾಗಿ ತಳಮಳಿಸುವುದನ್ನು ಬಿಟ್ಟರೆ ಬೇರಾವ ಪುರಾವೆಯು ಸಿಕ್ಕುವುದಿಲ್ಲ. ಅಂದ ಮೇಲೆ ಶ್ರೋತ್ರಿಯರ ವ್ಯಕ್ತಿತ್ವವನ್ನು ದೊಡ್ಡದಾಗಿಸುವ ಪ್ರಯತ್ನದಲ್ಲಿ, ರಾಜಾರಾವ್ ಪರಿವರ್ತನೆಯ ಯಜ್ಞ ಪಶುವಾಗಬೇಕಾಗುತ್ತದೆ.

ಲಕ್ಷ್ಮಿ

ಲಕ್ಷ್ಮಿ ಕಾದಂಬರಿಯ ಪುಟ್ಟ ಪಾತ್ರವಾದರೂ ಸ್ವಲ್ಪ ಯೋಚಿಸುವಂತೆ ಮಾಡುತ್ತಾಳೆ. ಇವಳು 'ನೀಲಗಿರಿ ಸೀಮೆಯ ತಾಯಿಯ ಹೊಟ್ಟೆಯಲ್ಲಿ ಕಟ್ಟುಮಸ್ತಾದ ಆಳು ಮಾಚನಿಗೆ ಹುಟ್ಟಿದ ಮಗಳು' (ಪುಟ ೨೦೫) ಆದರೂ ಶ್ರೋತ್ರಿಯಂತಹ ಸಂಪ್ರದಾಯ ಶರಣರ ಮನೆಯಲ್ಲಿ ಇವಳಿಗೆ ಸಿಕ್ಕಿರುವ ಸ್ವಾತಂತ್ರ್ಯ ಆಶ್ಚರ್ಯಕರವಾಗಿ ಕಾಣುತ್ತದೆಯಷ್ಟೇ ಅಲ್ಲ, ಶ್ರೋತ್ರಿಯರ ಉದಾರ, ವಿಶಾಲವಾದ ವ್ಯಕ್ತಿತ್ವದ ನಿದರ್ಶನವೆಂದು ಹೇಳಬಹುದು ; ನಿಜ. ಆದರೆ ಮಾಚನ ಮಗಳ ಬಗ್ಗೆ ತೋರುವ ವಂಶದವಿಶಾಲತೆ, ವಿಚಾರ ಬಂದಾಗ ಕಂಡುಬರದಿರುವುದಕ್ಕೆ ಕಾದಂಬರಿಯ ದಿಕ್ಕು ಕಾರಣವೆಂದು ಕಾಣುತ್ತೆ.

ಶ್ರೋತ್ರಿಯರ ಮನೆಯಲ್ಲೇ ನೆಲೆಯೂರಿದ್ದ ಲಕ್ಷ್ಮಿ ಸಾಧ್ಯವಾದಷ್ಟು ನೇರವಾಗಿ ಯೋಚಿಸುತ್ತಾಳೆಂಬುದು ಗಮನಾರ್ಹ. ಏಕೆಂದರೆ ಅವಳಿಗೆ ಧರ್ಮ, ನಿಯಮ ಇತ್ಯಾದಿ ಕಟ್ಟುಪಾಡುಗಳ ಪ್ರಜ್ಞೆಯಿಲ್ಲ. ಅಂದರೆ ಅವಳು ಯಾವ ತತ್ತ್ವದಿಂದಲೂ ಬಿಗಿಯಲ್ಪಟ್ಟಿಲ್ಲ. ಆದುದರಿಂದಲೇ ಶ್ರೋತ್ರಿ ಮತ್ತು ತನ್ನ 'ನಡುವಿನ ಸಂಬಂಧದಲ್ಲಿ ಲಕ್ಷ್ಮಿಗೆ ಅನೀತಿಯ ಪ್ರಶ್ನೆಯೇ ಕಾಣಲಿಲ್ಲ, ತಾವಿಬ್ಬರೂ ಒಪ್ಪಿ ಸೀನಪ್ಪನ ಹೆಂಡತಿ ಒಪ್ಪಿ, ಡಾಕ್ಟರೇ ಅವರನ್ನು ದೂರವಿರಬೇಕೆಂದು ಹೇಳಿರುವಾಗ ಇದು ಲೋಕಾರೂಢಿ' (ಪುಟ ೨೧೧) ಎನ್ನಿಸಿ ಸೀನಪ್ಪನ ಚರ್ಯೆ ವಿಚಿತ್ರವಾಗಿ ಕಾಣುತ್ತಿತ್ತು. ಅಲ್ಲದೆ ಕಾತ್ಯಾಯನಿ ಕಾಲೇಜಿಗೆ ಹೋಗಬೇಕೆಂದು ಹಂಬಲಿಸಿದಾಗ ಅವಳ ಪತಿ ಅರ್ಧಕ್ಕೆ ಬಿಟ್ಟ ಓದನ್ನು ಮುಂದುವರಿಸುವುದರಲ್ಲಿ ಅರ್ಥವಿದೆಯೆಂಬ ಲಕ್ಷ್ಮಿಯ ಮುಗ್ಧ ನೇರ ನಂಬಿಕೆಯೇ ಭಾಗೀರಥಿಯನ್ನು ಒಪ್ಪಿಸುವುದನ್ನು ಗಮನಿಸಬೇಕು. ಲಕ್ಷ್ಮಿ ಬಂದ ಸಮಸ್ಯೆಯನ್ನು ತನ್ನ ಸ್ಥಾನದಿಂದ ನಿರ್ಲಿಪ್ತಳಾಗಿ, ನೇರವಾಗಿ

ನೋಡುತ್ತಾಳೆ. ಕಾದಂಬರಿಯಲ್ಲೇ ಬರುವಂತೆ 'ಇದ್ದುದರಲ್ಲಿ ಅನಾಸಕ್ತ ಭಾವದಿಂದ ಇದ್ದವಳೆಂದರೆ ಅವಳೊಬ್ಬಳೇ' (ಪುಟ ೫೮).

ಈ ಪ್ರಮುಖ ಪಾತ್ರಗಳ ವಿಶ್ಲೇಷಣೆಯು ಕಾದಂಬರಿಯ ವಿಭಿನ್ನ ಸಮಸ್ಯೆ ಮತ್ತು ಶಕ್ತಿ ಕೇಂದ್ರಗಳನ್ನು ಸಾಧಾರಣವಾಗಿ ಗುರುತಿಸಿದೆಯೆಂದು ನಂಬಿದ್ದೇನೆ, ಮುಂದೆ ಇತರೆ ಮುಖ್ಯ ಸಂಗತಿಗಳನ್ನು ಚರ್ಚಿಸೋಣ.

ದ್ವಿಪತ್ನಿತ್ವ : ಸದಾಶಿವರಾವ್ ಮತ್ತು ಕರುಣಾರತ್ನೆ

ಕಾದಂಬರಿಯಲ್ಲಿ ಬರುವ ಮತ್ತೊಂದು ಸಮಸ್ಯೆ ದ್ವಿಪತ್ನಿತ್ವ. ಕಾದಂಬರಿಯ ಪ್ರಮುಖ ಪ್ರಜ್ಞೆಯಾಗಿ ಕಾಣಿಸಿಕೊಂಡಿರುವ ಶ್ರೋತ್ರಿಯವರ ಜೀವನದಲ್ಲೇ ಒಮ್ಮೆ ದ್ವಿಪತ್ನಿತ್ವದ ವಿಷಯ ಪ್ರಸ್ತಾಪಿತವಾಗುತ್ತದೆ. ಆದರೆ ಶ್ರೋತ್ರಿಯವರು ಆ ಸಲಹೆಯನ್ನು ತೀವ್ರವಾಗಿ ತಿರಸ್ಕರಿಸುತ್ತಾರೆ. ಅದೇ ಶ್ರೋತ್ರಿಯರು ಸದಾಶಿವರಾಯರ ದ್ವಿಪತ್ನಿತ್ವದ ವಿಷಯ ಕೇಳಿದಾಗ ಅಷ್ಟೇ ತೀವ್ರ ಪ್ರತಿಕ್ರಿಯೆಯನ್ನು ತೋರಿಸುವುದರಲ್ಲಿ ವಿಫಲರಾಗುತ್ತಾರೆ. ತೇಲು ಮಾತುಗಳ ತೆಪ್ಪವನ್ನು ಹತ್ತುತ್ತಾರೆ. ಕಾದಂಬರಿಯಲ್ಲಿ ಪ್ರಮುಖವಾಗಿ ದ್ವಿಪತ್ನಿತ್ವದ ಸಮಸ್ಯೆ ಕಾಣಿಸಿಕೊಂಡಿರುವುದು ಸದಾಶಿವರಾವ್ ಮತ್ತು ಕರುಣಾರತ್ನೆಯರಿಂದ.

ಸದಾಶಿವರಾಯರ ವ್ಯಕ್ತಿತ್ವದ ಪರಿಚಯ ಅವರ ಮತ್ತು ಶ್ರೋತ್ರಿಯರ ಪ್ರಥಮ ದರ್ಶನದಲ್ಲಿಯೇ ಆಗುತ್ತದೆ. ಸಂಸ್ಕೃತಿಯ ಬಗ್ಗೆ, ಇತಿಹಾಸದ ಬಗ್ಗೆ ಅಪಾರವಾದ ಜ್ಞಾನವನ್ನು ಗಳಿಸಿಕೊಂಡು ಸಂಶೋಧನೆಯ ಪಥದಲ್ಲಿ ಸಾಗಿದವರು. ಅವರು 'ಮೃಚ್ಛಕಟಿಕ' ನಾಟಕವನ್ನು ನೋಡುವಾಗ ಅವರು ತೋರಿಸುವ ಪ್ರತಿಕ್ರಿಯೆಯೇ ಅವರನ್ನು ಪರಿಚಯಿಸುತ್ತದೆ. ಸುಟ್ಟ ಇಟ್ಟಿಗೆಗಳ ಬಗ್ಗೆ ಶರ್ವಿಲಕನು ಹೇಳುವಾಗ ಆ ವರ್ಣನೆಗಳು ರಾಯರಿಗೆ ಕುತೂಹಲಕಾರಿಯಾಗಿ ಕಂಡವು. 'ಆಗಿನ ಕಾಲದ ಶಿಲ್ಪದಲ್ಲಿ ಈ ಎಲ್ಲ ವಿಧವಾದ ಇಟ್ಟಿಗೆಗಳನ್ನು ಉಪಯೋಗಿಸುವುದರಿಂದ ಕಟ್ಟಡಕ್ಕೆ ಆಗುವ ವಿಶೇಷ ಲಾಭವೇನು ? ಈ ವರ್ಣನೆಗಳು ಶಿಲ್ಪಶಾಸ್ತ್ರದಲ್ಲಿ ಬಂದಿವೆಯೆ ? ಹಾಗಿದ್ದರೆ ಶಿಲ್ಪಶಾಸ್ತ್ರ ಬರೆದ ಕಾಲವಾವುದು ? ಇದನ್ನು ವಿಶೇಷ ದೃಷ್ಟಿಯಿಂದ ವ್ಯಾಸಂಗ ಮಾಡಬೇಕು ಎಂದು ಅವರು ಮನಸ್ಸಿನಲ್ಲೇ ಟಿಪ್ಪಣಿ ಹಾಕಿಕೊಂಡರು' (ಪುಟ ೨೯).

ನಾಟಕವನ್ನು ನಿಜವಾದ ಪ್ರೇಕ್ಷಕನಾಗಿ ನೋಡಿ ಅನುಭವಿಸಬೇಕಾದವರು ಹೀಗೆಲ್ಲ ಯೋಚಿಸುವುದನ್ನು ಕಂಡಾಗ ಇವರ ಮನೋಧರ್ಮದ ಪರಿಚಯವಾಗುತ್ತದೆ. ಈ ಪ್ರಸಂಗ ಕೇವಲ ನಾಟಕಕ್ಕೆ ಸೀಮಿತವಾಗದೆ ಸದಾಶಿವರಾಯರ ಜೀವನ ನಾಟಕಕ್ಕೂ ಹಬ್ಬಿರುವುದನ್ನು ನೋಡಬಹುದು. ಮನೆಯಲ್ಲಿ ಸಾಂಸಾರಿಕ ಸುಖಕ್ಕೆ ಸ್ವಲ್ಪವಾದರೂ ಸ್ಥಾನ ಕೊಡದೆ ಎದ್ದರೆ ಬಿದ್ದರೆ ಗ್ರಂಥ, ಅಧ್ಯಯನ ಮುಂತಾದ ಗೀಳಿನಲ್ಲೇ ಗಾಳಹಾಕಿ ಹೊಸ ಹೊಸ ವಿಷಯ ಮತ್ಸ್ಯಗಳ ಅನ್ವೇಷಣೆಗೆ ತೊಡಗುವ ಪ್ರವೃತ್ತಿ ಅವರದು. ಅವರು ಬರೆಯಲು ಹೊರಟ ಐದು ಸಂಪುಟಗಳ ಗ್ರಂಥವೇ ತಮ್ಮ 'ಶಿಶುವಿಗಾಗಿ

ಇಚ್ಛಾಶಕ್ತಿ, ಬುದ್ಧಿಶಕ್ತಿ ಮತ್ತು ಇಡೀ ಜೀವನದ ರಕ್ತಮಾಂಸಗಳನ್ನು ಹೊತ್ತು ಚಿರಂಜೀವಿಯಾಗಿ ನಿಲ್ಲಲಿ ಎಂಬ ಅದಮ್ಯ ಬಯಕೆ' (ಪುಟ ೧೦೭) ಹೊತ್ತು ಅದನ್ನೇ ಜೀವನದ ಪರಮ ಧ್ಯೇಯವಾಗಿಟ್ಟುಕೊಂಡು ಅದನ್ನೇ ಉಸಿರಾಡುತ್ತಿದ್ದರು ಎನ್ನುವ ಅನುಭವ ಉಂಟಾಗುತ್ತದೆ. ಈ ಕಾರಣಕ್ಕಾಗಿಯೇ ಅವರು ಕರುಣಾರತ್ನೆಯನ್ನು ಮದುವೆಯಾಗಲು ಇಚ್ಛಿಸುತ್ತಾರೆ; ಆಗುತ್ತಾರೆ. ತಮ್ಮ ಅಧ್ಯಯನಕ್ಕೆ ಯಾವ ರೀತಿಯ ಸಹಾಯವನ್ನೂ ಮಾಡಲಾರದ ಸ್ಥಿತಿಯಲ್ಲಿದ್ದ ನಾಗಲಕ್ಷ್ಮಿ ಶಾಸ್ತ್ರೋಕ್ತ ಪತ್ನಿಯಾಗಿ ಅಳಲಿನ ಆಗರವಾಗಿ ಇರುತ್ತಾಳೆ.

ಕರುಣಾರತ್ನೆಯ ಪಾತ್ರ ನಮ್ಮ ಮನಸ್ಸನ್ನು ಗೆಲ್ಲುತ್ತದೆ. ಒಂದೇ ಮನೋಧರ್ಮವುಳ್ಳ ಇಬ್ಬರು ಹೆಚ್ಚು ಕಾಲ ಅಗಲಿ ಇರುವುದು ಅಸಾಧ್ಯವಾಗುತ್ತದೆ ಎಂಬ ಸತ್ಯ ಇಲ್ಲಿ ಗೋಚರಿಸುತ್ತದೆ. ಸಿಲೋನಿನಲ್ಲಿ ಹುಟ್ಟಿದರೂ ಆಕೆ ಅಲ್ಲಿಂದ ಬಂದು, ಅದೂ ತನ್ನ ತಾಯಿತಂದೆ ಬಂಧುಬಳಗವನ್ನೆಲ್ಲ ಬಿಟ್ಟು ಬಂದು, ಸದಾಶಿವರಾಯರ ಊರೆಗೋಲಾಗಿ ನಿಂತು ತನ್ನ ಶಕ್ತಿ ಚೈತನ್ಯದ ಧಾರೆಯೆರೆದು ಕೊಡುವುದನ್ನು ಕಂಡಾಗ ಆಕೆಯ ಬಗ್ಗೆ ಗೌರವ ಭಾವ ಮೂಡುತ್ತದೆ. ಯೌವನದ ಸಹಜ ಶಕ್ತಿಗಳ ಸೆಳೆತವನ್ನೂ ಕಡೆಗಣಿಸಿ, ದೈಹಿಕ ಸುಖವನ್ನು ಪಡೆಯದೆ ಸದಾಶಿವರಾಯರ ವ್ಯಕ್ತಿತ್ವ ವಿಕಾಸಗೊಳ್ಳುವುದೇ ಪರಮ ಧ್ಯೇಯವನ್ನಾಗಿಟ್ಟುಕೊಂಡ ಅವಳು ರಾಯರಿಗಿಂತ ಒಂದು ತೂಕ ಹೆಚ್ಚಾಗುತ್ತಾಳೆ. ರಾಯರು ತಮ್ಮ ಬದುಕಿನಲ್ಲೇ ಯಾವ ಸವಾಲುಗಳೊಂದಿಗೂ ಸೆಣಸದೆ ಅಧ್ಯಯನದ ಅಟ್ಟಣೆಯ ಮೇಲೆ ಕುಳಿತ ವ್ಯಕ್ತಿ, ಇದಕ್ಕಾಗಿ ಹೆಂಡತಿ ಮಕ್ಕಳನ್ನು ಉಪೇಕ್ಷಿಸುವುದು ಅವರಿಗೆ ಕಷ್ಟವಾಗಿ ಕಾಣುವುದಿಲ್ಲ. ಆದರೆ ಹೆಣ್ಣಾದ ರತ್ನೆ ತನ್ನ ದೇಶವನ್ನೇ ಬಿಟ್ಟು ಬಂದು ಬದುಕನ್ನು ಪರಾರ್ಥಕ್ಕಾಗಿಯೇ ಪಣವಾಗಿಟ್ಟಾಗ, ಅವಳು ಅಚ್ಚ ಭಾರತೀಯ ಸ್ತ್ರೀಯೇ ಆಗಿ ಬೆರೆತುಹೋದಾಗ, ಶ್ರೋತ್ರಿಯವರ ಧರ್ಮಗಣಿತದ ಆದರ್ಶಕ್ಕಿಂತ ರತ್ನೆಯ ಆದರ್ಶ ಬೆಳ್ಳಿ ಬೆಳದಿಂಗಳು ಚೆಲ್ಲುವ ಆಗಸದಂತೆ ಆಪ್ಯಾಯಮಾನವಾಗಿ ಕಾಣುತ್ತದೆ. ಅಷ್ಟೇ ಅಲ್ಲ ಅದರಲ್ಲಿ ಅರ್ಥವೂ ಕಾಣುತ್ತದೆ. ಅದೇ ನಾಗಲಕ್ಷ್ಮಿ ಸ್ವಂತಕ್ಕಾಗಿ ಚಿಂತಿಸುವುದರಿಂದ ಅವಳಲ್ಲಿ ಅಳಲಿನ ಬಿಳಲುಗಳು ಜಾಸ್ತಿಯಾಗುತ್ತವೆ. ಕಾತ್ಯಾಯನಿ ನಮ್ಮ ಅನುಕಂಪಕ್ಕೆ ಪಾತ್ರಳಾಗುತ್ತಾಳೆ. ಕರುಣಾರತ್ನೆಯ ಪಾತ್ರ ಪ್ರಭಾವ ಬೀರುತ್ತದೆ.

ಸದಾಶಿವರಾವ್ ಮತ್ತು ಕರುಣಾರತ್ನೆಯ ವಿವಾಹವೇ ಕಾದಂಬರಿಯಲ್ಲಿ ದ್ವಿಪತ್ನಿತ್ವದ ಅಂಗವೆಂದು ಮೊದಲೇ ಹೇಳಲಾಗಿದೆ. ಆದರೆ ದ್ವಿಪತ್ನಿತ್ವದ ಪರಿಣಾಮದ ಚಿತ್ರಣ ಕಾದಂಬರಿಯಲ್ಲಿ ಕೂಲಂಕಷವಾಗಿ ನಡೆದು ಒಂದು ಸಮಸ್ಯೆಯ ಮಟ್ಟದ ಸ್ಥಾನ ಸಿಕ್ಕಿದೆಯೇ ಎಂಬುದು ಪ್ರಶ್ನೆ. ಇಲ್ಲಿ ಇವರಿಬ್ಬರಿಗೂ ಮದುವೆಯ ಅಗತ್ಯ ಕಾಣುವುದು ಅಧ್ಯಯನದ ಸಲುವಾಗಿ, ಅದರ ಫಲವಾಗಿಯೇ ರಾಯರು ಗ್ರಂಥ ರಚನೆಗೆ ಜೀವವನ್ನು ತೇಯುತ್ತಿದ್ದರೆ ರಾಯರ ಈ ಕಾರ್ಯಕ್ಕಾಗಿ ರತ್ನೆ ಜೀವನವನ್ನು ಮೀಸಲಿಡುತ್ತಾಳೆ. ನಾಗಲಕ್ಷ್ಮಿ ಬದುಕಿದ್ದಾಗಲೂ ರಾಯರು ಎರಡನೇ

ಮದುವೆಯಾದಾಗ, ನಾಗಲಕ್ಷ್ಮಿಯು ಮಾಮೂಲು ಆಳು, ಗೋಳುಗಳನ್ನು ಬಿಟ್ಟರೆ ಪ್ರಬಲ ಪ್ರತಿಕ್ರಿಯೆ ಬರದೆ ಮೌಲ್ಯ ಸಂಘರ್ಷಕ್ಕೆ ಅವಕಾಶವಿಲ್ಲವಾಗಿದೆ. ಧರ್ಮದ ಪ್ರತಿನಿಧಿಯಾದ ಶ್ರೋತ್ರಿಯುವರು ಹೀಗೆ ಹೇಳುತ್ತಾರೆ; 'ಬುದ್ಧಿ ತತ್ವವೂ ಪ್ರಕೃತಿಯ ತತ್ವವೂ ಪ್ರಕೃತಿಯ ಒಂದು ಅವಸ್ಥೆ. ಬುದ್ಧಿಯ ಸಾಧನೆಗೆ ಸಿಲುಕಿ, ಆ ಸಾಧನೆ ಗಾಗಿಯೇ ಮಾಡಿಕೊಂಡ ಬೇರೊಂದು ಮದುವೆಯೂ ಪ್ರಕೃತಿಯ ಒಂದು ಆಕರ್ಷಣೆಯೇ. ಕೇವಲ ಶಾರೀರಿಕ ಆಕರ್ಷಣೆಯಿಂದ ಕೆಲವರು ಬೇರೆ ಮದುವೆ ಮಾಡಿಕೊಳ್ಳುತ್ತಾರೆ. ಅದಕ್ಕಿಂತ ಇದು ಉತ್ತಮವಾದ ಆಕರ್ಷಣೆಯಾದರೂ ಮೂಲತಃ ಭಿನ್ನವಾದುದಲ್ಲ' (ಪುಟ ೩೫೩) ಮುಂದುವರಿದು 'ಇದೂ ಆಧುನಿಕತೆಯ ಒಂದು ಮುಖ. ಅದು ಪೂರ್ತಿ ತಪ್ಪಲ್ಲ' (ಪುಟ ೩೪೩) ಎಂದು ಹೇಳುವುದರಿಂದ ಅವರು ಈ ಪದ್ಧತಿಗೆ ನೇರವಾದ ವಿರೋಧಿಯೂ ಆಗುವುದಿಲ್ಲ ಅಲ್ಲದೆ, ದ್ವಿಪತ್ನಿತ್ವದ ಅಂಗವಾದ ಸದಾಶಿವರಾಯರು ಅದಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಅಧ್ಯಯನದ ವಸ್ತು ನಿಷ್ಠ ವಿದ್ಯಾರ್ಥಿಯಾಗಿ ಕಾಣಿಸಿಕೊಳ್ಳುತ್ತಾರೆ. ಆದ್ದರಿಂದ ಇಲ್ಲಿ ದ್ವಿಪತ್ನಿತ್ವವು ಸಾಮಾಜಿಕ ಸಂದರ್ಭದಲ್ಲಿ ಒಂದು ತೀವ್ರ ಸಮಸ್ಯೆಯ ಸ್ವರೂಪವನ್ನು ತಳೆಯುವುದಿಲ್ಲ. ಶ್ರೋತ್ರಿಯುವರು ಹೇಗೆ ಕೇವಲ ವಂಶಪ್ರಜ್ಞೆಯುಳ್ಳವರಾಗಿ ಇತರೆ ಸಾಮಾಜಿಕ ಮೌಲ್ಯಗಳಿಗೆ ತೀವ್ರ ಪ್ರತಿಕ್ರಿಯೆ ತೋರದವರಾಗುತ್ತಾರೋ ಹಾಗೆ ಸದಾಶಿವರಾಯರು ಅಧ್ಯಯನ ನಿಷ್ಠರಾಗಿ, ಅದಕ್ಕಾಗಿಯೇ ರತ್ನೆಯ ಕೈ ಹಿಡಿದವರಾಗಿ, ಸಾಮಾಜಿಕ ಪರಿಸರದಲ್ಲಿ ಯಾವ ಪ್ರತಿಕ್ರಿಯೆಯನ್ನೂ ತೋರಿಸದೆ ತಮ್ಮ ಪಾಡಿಗೆ ತಾವು ಉಳಿಯುತ್ತಾರೆ.

ವಂಶವೃಕ್ಷ ಮತ್ತು ವಂಶಪ್ರಜ್ಞೆ

'ವಂಶವೃಕ್ಷ' ಹೆಸರಿನ ಬಗ್ಗೆ ಹೆಚ್ಚು ಚರ್ಚೆಗೆ ಅವಕಾಶವಿಲ್ಲವೆನ್ನಿಸುತ್ತೆ. ಇಲ್ಲಿಯ ವರೆಗೆ ನಡೆದ ಪಾತ್ರ ವಿವೇಚನೆಯಲ್ಲಿ ಹೇಗೆ ಆ ಪಾತ್ರಗಳು ವಂಶಪ್ರಜ್ಞೆಯ ವೃತ್ತದಲ್ಲಿ ಬರುತ್ತವೆಯೆಂಬ ಅರಿವು ಆಗಿದೆ. ಅಲ್ಲಿನ ವಿಷಯವನ್ನೇ ಉಪಯೋಗಿಸಿಕೊಂಡು 'ವಂಶವೃಕ್ಷ' ಹೆಸರನ್ನು ಸಮರ್ಥಿಸಿಕೊಳ್ಳಬಹುದಾಗಿದೆ.

ನಮ್ಮ ಧರ್ಮ ವಂಶೋದ್ಧಾರದ ಬಗ್ಗೆ ತುಂಬ ತುರ್ತುಬುದ್ಧಿಯನ್ನು ಬೆಳೆಸಿ ಕೊಂಡಿತ್ತೆಂಬುದಕ್ಕೆ ಆಧಾರಗಳಿವೆ. ವಂಶೋದ್ಧಾರದ ಸಲುವಾಗಿ ಪರಪುರುಷನ ಸಂಪರ್ಕವೂ ನಿಷಿದ್ಧವಾಗಿರಲಿಲ್ಲವೆಂಬುದನ್ನು ಮಹಾಭಾರತದ ಒಂದು ಪ್ರಸಂಗದಿಂದಲೇ ಅರಿಯಬಹುದಾಗಿದೆ. ಚಿತ್ರವೀರ್ಯ ವಿಚಿತ್ರವೀರ್ಯರ ಮರಣಾನಂತರ, ಅವರ ತಾಯಿ ತನ್ನ ಸೊಸೆಯರಿಗೆ ಮಕ್ಕಳಿಲ್ಲವಲ್ಲ, ವಂಶೋದ್ಧಾರ ಸಾಧ್ಯವಿಲ್ಲವಲ್ಲ ಎಂದು ವ್ಯಸನಕ್ಕೀಡಾಗಿ ಭೀಷ್ಮನ ಮೊರೆ ಹೋಗುತ್ತಾಳೆ. ಆದರೆ ಪ್ರತಿಜ್ಞಾಬದ್ಧನಾದ ಭೀಷ್ಮ ಅಂಬೆ ಅಂಬಾಲಿಕೆಯರ ಸಂಪರ್ಕಕ್ಕೆ ಆ ವೇಳೆಗೆ ಅಲ್ಲಿಗೆ ಬಂದ ವ್ಯಾಸ ಮುನಿ ಗಳನ್ನು ಪ್ರಾರ್ಥಿಸಿಕೊಂಡಾಗ, ಅವರು ಒಪ್ಪಿಕೊಳ್ಳುತ್ತಾರೆ. ತತ್ಫಲವಾಗಿಯೇ,

ಪಾಂಡು, ಧೃತರಾಷ್ಟ್ರ, ವಿಧುರರ ಜನ್ಮವಾಗುತ್ತದೆ. ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಅನೈತಿಕ ಸಂಬಂಧವೆಂದು ಕರೆಯಿಸಿಕೊಳ್ಳುವ ಪ್ರಸಂಗ, ಅಂದು ವಂಶೋದ್ಧಾರದ ಸಲುವಾದ 'ಆಪದ್ಧರ್ಮ'ವೆಂದು ಪ್ರಸಿದ್ಧವಾಗಿತ್ತು. ಅಂದಾಗ ವಂಶವೃಕ್ಷ ಬಂಜೆಯಾಗದಿರುವುದಕ್ಕಾಗಿ, 'ನಮ್ಮ ಧರ್ಮ' ಎಂತಹ ವಿಧಿಗಳ ವೇದಿಕೆಯನ್ನು ನಿರ್ಮಾಣ ಮಾಡಿಕೊಂಡಿತ್ತೆಂಬುದನ್ನು ಗಮನಿಸಬಹುದು. ಹಿಂದಿನಿಂದ ಅನೂಚಾನವಾಗಿ ಬೆಳೆದುಬಂದ ಈ ವಂಶಪ್ರಜ್ಞೆಯ ಪ್ರತೀಕವೇ ಶ್ರೀನಿವಾಸ ಶ್ರೋತ್ರಿಗಳೆಂಬ ವಿಷಯವನ್ನು ಹಿಂದೆಯೇ ಸ್ಪಷ್ಟಪಡಿಸಲಾಗಿದೆ. 'ಶ್ರೋತ್ರಿಯ ವಂಶವೆಂಬುದು ಶ್ರೋತ್ರಗಳಷ್ಟೇ ಪುರಾತನವೆನ್ನುವುದು ಅವರ ನಂಬಿಕೆ'(ಪುಟ ೫೫), 'ಕಾಶ್ಯಪಾವತ್ಸಾರನೈಧ್ರುವ ಪುವರತ್ರಯಾನ್ವಿತ ಅಶ್ವಲಾಯನ ಸಮನ್ವಿತಃ ಋಕ್ ಶಾಖಾಧ್ಯಾಯೀ ಶ್ರೀನಿವಾಸ ಶ್ರೋತ್ರಿಯೋ ಹಂಭೋ ಈಶ್ವರ ತ್ವಾಮಭಿವಾದಯಾಮಿ–ಎಂದು ತಮ್ಮ ಪ್ರವರವನ್ನು ದಿನವೂ ಸಂಧ್ಯಾವಂದನೆಯ ಕಾಲದಲ್ಲಿ ಪಠಿಸುವಾಗ ಅವರಿಗೆ ಒಂದು ವಿಧವಾದ ಉನ್ನತ ಮಟ್ಟದ ಅನುಭವವಾಗುತ್ತಿತ್ತು. ಆ ಮಟ್ಟದ ಜೀವನ ಮಾಡದಿದ್ದರೆ ತಾನು ವಂಶಕ್ಕೇ ಕಲಂಕ ತಂದಂತೆ ಎಂಬ ಜೀವಂತ ಪ್ರಜ್ಞೆಯಿಂದ ಅವರು ತಮ್ಮ ಅನುದಿನದ ಕಾರ್ಯ ಕಲಾಪಗಳನ್ನು ನಡೆಸುತ್ತಿದ್ದರು' (ಪುಟ ೫೫). ಇಂಥ ಶ್ರೋತ್ರಿಯರು ಜೀವನದುದ್ದಕ್ಕೂ ಈ ವಂಶಪ್ರಜ್ಞೆಯ ವೃತ್ತದ ಸುತ್ತ ಗಸ್ತು ಹೊಡೆಯುವುದನ್ನು ಕಾಣುತ್ತೇವೆ. ಕಾತ್ಯಾಯನಿ ಸವಾಲಾದಾಗ ಸಂಯಮ ಸಾಹಸಿಯಾಗುವ ಅವರು, ಚೀನಿ ಖಾಯಿಲೆ ಬಿದ್ದಕೂಡಲೇ ತಳಮಳದ ತಾಣವಾಗುವುದನ್ನು ಗಮನಿಸಿದ್ದೇವೆ. ಮದುವೆಯಾಗುವುದೇ ವಂಶೋದ್ಧಾರಕ್ಕೆ ಎಂದು ನಂಬಿರುವುದನ್ನು ಅವರ ಬಾಯಿಯಿಂದಲೇ ಕೇಳಿದ್ದೇವೆ. ಇವರ ಮಾತುಗಳು ಕಾತ್ಯಾಯನಿಯ ಕಿವಿಯಲ್ಲಿ ಪ್ರತಿಧ್ವನಿಸಿ, ಮನಸ್ಸನ್ನೂ ಕೊರೆದು ಪಾಪಪ್ರಜ್ಞೆಯ ಹುತ್ತದಲ್ಲಿ ಅವಳನ್ನು ಹಾಕಿ ಹೇಗೆ ಅವಳು ದುರಂತಕ್ಕೀಡಾಗುತ್ತಾಳೆಂಬುದನ್ನು ಅನುಕಂಪದಿಂದ ಅನುಭವಿಸಿದ್ದೇವೆ. ಹೀಗೆ ಕಾದಂಬರಿಯಲ್ಲಿ ಶ್ರೋತ್ರಿಯವರು ಕಪಿಲೆಯ ಪ್ರವಾಹ ನುಗ್ಗಿದರೂ ತಮ್ಮ ವಂಶಸ್ಥರ ಮನೆಬಿಟ್ಟು ಹೊರಹೋಗಲಿಚ್ಛಿಸದ ನಿಷ್ಠೆಯಿಂದ ಹಿಡಿದು, ತಮ್ಮ ಲೀಗಲ್ ತಂದೆ ಶಾಮದಾಸರೆಂಬ ಸತ್ಯ ತಿಳಿದ ಪ್ರಸಂಗವನ್ನು ಹಾದು, ಕಾತ್ಯಾಯನಿಯು ಕೊನೆಯುಸಿರಿನವರೆಗೂ–ರತ್ನೆ ತನಗೊಂದು ಮಗು ಬೇಕೆಂಬ ಆಸೆ ಹೊತ್ತಿರುವುದನ್ನೂ ಒಳಗೊಂಡು ವಂಶವೃಕ್ಷದ ಬೇರು, ಬಿಳಲು, ಫಲಗಳ ಪ್ರಾಮುಖ್ಯತೆಯ ವಿಷಯ ಪ್ರಮುಖವಾಗಿ ಪಸರಿಸಿದೆ. ವಂಶನಿಷ್ಠೆಯನ್ನು ವಸ್ತುವನ್ನಾಗಿ ಪಡೆಯದಿದ್ದರೂ ಸಹ ಅದರ ಬಗ್ಗೆ ಹಿಂದಿನಿಂದ ನಡೆದುಬಂದ ನಂಬಿಕೆಯ ಅಂಶಗಳನ್ನು ಕೆಲವು ಹಳೆಯ ಕಾವ್ಯ, ನಾಟಕಗಳಲ್ಲೂ ಕಾಣಬಹುದು. ಭಾಸಕವಿಯ ಪ್ರತಿಮಾ ನಾಟಕವನ್ನೇ ಉದಾಹರಿಸಬಹುದು. ಪ್ರತಿಮಾ ನಾಟಕದಲ್ಲಿ ಬರುವ ವಂಶನಿಷ್ಠೆ 'ವಂಶವೃಕ್ಷ'ದ ವಂಶನಿಷ್ಠೆಯಂತೆ ಎದ್ದು ಕಾಣದಿರುವುದಕ್ಕೆ ಉದ್ದೇಶ ಭಿನ್ನತೆಯೇ ಕಾರಣವಿರಬಹುದು. ಪ್ರತಿಮಾ ನಾಟಕದಲ್ಲಿ ಬರುವ ವಂಶಪ್ರಜ್ಞೆಯ ಬಗ್ಗೆ ಪ್ರೊ॥ ಕೀರ್ತಿನಾಥ

ಕುರ್ತಕೋಟಿಯವರು 'ನಾಟಕ ಮತ್ತು ವಂಶಪ್ರಜ್ಞೆ' ಎಂಬ ಪ್ರಬಂಧದಲ್ಲಿ ಹೇಳಿರುವ ಮಾತುಗಳನ್ನು ಪ್ರಾಸಂಗಿಕವಾಗಿ ನೆನಸಬಹುದೆಂದು ಕಾಣುತ್ತೆ :

"ವಂಶಪ್ರಜ್ಞೆ 'ಪ್ರತಿಮಾ' ನಾಟಕದ ರಸಭಾವಗಳಷ್ಟನ್ನೇ ಅಲ್ಲದೆ ನೀತಿ ಧರ್ಮಗಳನ್ನು ಕೂಡ ರೂಪಿಸುತ್ತದೆ. ವ್ಯಕ್ತಿಗಳ ನೀತಿ ಮತ್ತು ಧರ್ಮಗಳು ವಿಶಾಲವಾದ ಪ್ರಜ್ಞೆಯಿಂದ ರೂಪಿತವಾಗಿವೆ. ವ್ಯಕ್ತಿಧರ್ಮಕ್ಕೆ ವಂಶಧರ್ಮ ಹರವಾದ ಪರಿಪ್ರೇಕ್ಷ್ಯವನ್ನು ಕಲ್ಪಿಸಿಕೊಡುತ್ತದೆ. ರಾಮ ಭರತರ ನಡವಳಿಕೆಯಲ್ಲಿಯ ನೀತಿಯನ್ನು ಅಳೆಯಬೇಕಾದರೆ, ಬೆಲೆಗಟ್ಟಬೇಕಾದರ ಈ ಪ್ರಜ್ಞೆ ಮಾನದಂಡವಾಗುತ್ತದೆ".

ಅಂತೆಯೇ ಈ ಕಾದಂಬರಿಯಲ್ಲಿ ಹರಡಿಕೊಂಡಿರುವ ವಂಶಪ್ರಜ್ಞೆ ಪಾತ್ರಗಳನ್ನು ನಿರ್ದೇಶಿಸುವ ಮಾನದಂಡವಾಗುತ್ತದೆ, 'ಪ್ರತಿಮಾ' ನಾಟಕದಲ್ಲಿ 'ವ್ಯಕ್ತಿ ಧರ್ಮಕ್ಕೆ ವಂಶಧರ್ಮ ಹರವಾದ ಪರಿಪ್ರೇಕ್ಷ್ಯವನ್ನು' ಕಲ್ಪಿಸಿಕೊಟ್ಟರೆ, ಈ ಕಾದಂಬರಿಯಲ್ಲಿ ವಂಶಧರ್ಮ ವ್ಯಕ್ತಿಧರ್ಮವನ್ನು ಪರಿಪೋಷಿಸುವುದನ್ನು ಕಾಣುತ್ತೇವೆ. ವಂಶಪ್ರಜ್ಞೆಯ ಪರಿಸರದಿಂದ ದೂರ ಸರಿಯುವವರನ್ನೂ ಮತ್ತೆ ಸೆರೆಹಿಡಿಯುವ ಪರಿಯನ್ನೂ ನೋಡುತ್ತೇವೆ.

ವಂಶಪ್ರಜ್ಞೆಯು ಆಳವಟ್ಟಿದ್ದರೂ ನಾಟಕದ ಪ್ರತಿಮಾ ಸಂವಿಧಾನದ ದೃಷ್ಟಿಯಿಂದ, ಭಾಸನ ನಾಟಕಕ್ಕೆ 'ಪ್ರತಿಮಾ' ಎಂಬ ಹೆಸರು ಅರ್ಥಪೂರ್ಣವಾಗುತ್ತದೆ. ವಂಶಪ್ರಜ್ಞೆಯನ್ನೇ ತಳಹದಿಯಾಗಿಟ್ಟುಕೊಂಡು ಸಾಗುವ ಈ ಕಾದಂಬರಿಗೆ 'ವಂಶವೃಕ್ಷ'ವೆಂಬ ಹೆಸರು ಹೆಚ್ಚು ಅರ್ಥಪೂರ್ಣವಾಗಿದೆಯೆಂದು ಒತ್ತಿಹೇಳಬೇಕಾಗಿಲ್ಲ.

'ವಂಶವೃಕ್ಷ' ಪ್ರತಿಪಾದಿಸಿದ ಮೌಲ್ಯ

"ಜೀವನದ ವಿಮೌಲ್ಯಗಳನ್ನು ಅರಿಯುವುದು ಮಾತ್ರವಲ್ಲದೆ ಸುಮೌಲ್ಯಗಳ ಬಗೆಗೆ ನಮ್ಮ ಅಂತಃಕರಣದ ಆಕರ್ಷಣೆಯನ್ನು ಪರೋಕ್ಷವಾಗಿ ಹೆಚ್ಚಿಸುವ ಕೆಲಸವನ್ನು ಮಾಡುತ್ತದೆ" ಎಂದು ಡಾ॥ ಭೈರಪ್ಪನವರು ನಂಬುತ್ತಾರೆಂಬುದನ್ನು ಹಿಂದೆಯೇ ಹೇಳಲಾಗಿದೆ. ಕಾದಂಬರಿಯಲ್ಲಿ ಇವರು ಒಂದು ಮೌಲ್ಯದ ಬಗೆಗೆ ಸಹೃದಯರ ಅಂತಃಕರಣದ ಆಕರ್ಷಣೆಯನ್ನು ಪರೋಕ್ಷವಾಗಿ ಹೆಚ್ಚಿಸುವ ಕೆಲಸವನ್ನು ಮಾಡುತ್ತಾರೆಂದು ಹೇಳಬಹುದಾಗಿದೆ. ಅಂಥ ಮೌಲ್ಯ ಯಾವುದೆಂದು ನೋಡಿದ ಕೂಡಲೇ ಶ್ರೋತ್ರಿಯರು ನಮ್ಮ ಕಣ್ಮುಂದೆ ನಿಲ್ಲುತ್ತಾರೆ. ಶ್ರೋತ್ರಿಯರು ಪ್ರತಿನಿಧಿಸುವ ಹಳೆಯ ಧಾರ್ಮಿಕ ಮೌಲ್ಯಗಳೇ ಇಂಥ ಮೌಲ್ಯಗಳೆಂದು ಗೊತ್ತಾದಾಗ, ಇಂದಿನ ಸಾಮಾಜಿಕ ಸಂದರ್ಭದಲ್ಲಿ ಇವುಗಳ ಸ್ಥಾನದ ಬಗ್ಗೆ ಯೋಚಿಸಬೇಕಾಗುತ್ತದೆ.

ಇಂದು ಧರ್ಮದ ಸ್ವರೂಪ ಬದಲಾಗಿದೆ. ಧಾರ್ಮಿಕ ಸಂಸ್ಥೆಗಳು ವಿಶಾಲ ಧರ್ಮದ ಉಪದೇಶವನ್ನು ಚಾಚುತಪ್ಪದೆ ಕರಾರುವಾಕ್ಕಾಗಿ ನೆರವೇರಿಸುತ್ತ ಇದ್ದರೂ ಧರ್ಮವೆಂಬುದು 'ಮತಧರ್ಮ'ದ ಸ್ವರೂಪಕ್ಕೆ ಇಳಿದಿದೆಯೆಂಬುದು ಸೂರ್ಯಸ್ಪಷ್ಟ. ತಂತಮ್ಮ ಮತದ ಒಬ್ಬೊಬ್ಬ 'ಮಹಾತ್ಮ'ನ ಮೆರವಣಿಗೆಯಲ್ಲಿ ಮಗ್ನರಾಗಿ ತಾವೇ

ಮರೆಯುವ ಮನುಷ್ಯರು ಹೆಚ್ಚುತ್ತಿದ್ದಾರೆ. ಧರ್ಮ ತನ್ನ ಅರ್ಥವನ್ನು ಕಳೆದು ಕೊಳ್ಳುತ್ತಿದೆ. ಹೀಗಾಗಿ ಧರ್ಮವಿರುದ್ಧವೆನ್ನಿಸಿಕೊಳ್ಳುವ ಹೊಸಮೌಲ್ಯಗಳು ಸಮಾಜದಲ್ಲಿ ತಲೆ ಎತ್ತಿವೆ. ಎಲ್ಲಾ ಹೊಸಮೌಲ್ಯಗಳೂ ಸಂಜೀವಿನಿ ಸಾದೃಶ್ಯ ಗಳೆಂದು ಹೇಳಲಾಗದು, ನಿಜ. ಆದರೆ ಬದುಕನ್ನು ಬದಲಾಯಿಸುತ್ತ ಹೊಸ ಹೊಸ ಅನುಭವಗಳ ಅರ್ಥಪೂರ್ಣತೆಯನ್ನು ತಂದುಕೊಡುವ ಕೆಲವಾದರೂ ಮೌಲ್ಯಗಳು ಇವೆ ಎಂಬುದನ್ನು ಜ್ಞಾಪಿಸಿಕೊಂಡಾಗ, ಕಾದಂಬರಿಕಾರರು 'ವಂಶವೃಕ್ಷ'ದಲ್ಲಿ ಹೊಸ ಮೌಲ್ಯಸಾಧನೆಗೆ ತೊಡಗಿದ ರಾಜಾರಾವ್ ಮತ್ತು ಕಾತ್ಯಾಯನಿಯರನ್ನು ಉದ್ದೇಶ ಪೂರ್ವಕವಾಗಿ ಸೋಲಿನತ್ತ ಕೊಂಡೊಯ್ಯುತ್ತಿದ್ದಾರೆಂಬ ಗುಮಾನಿ ಎಲ್ಲ ವಿವೇಚನೆ ಯಿಂದ ಬಂದಿರುವಾಗ ಕಾದಂಬರಿ ಎತ್ತಿ ಹಿಡಿಯುವ ಮೌಲ್ಯ ಚಲನಶೀಲ ಸಾಮಾಜಿಕ ಸಂದರ್ಭದಲ್ಲಿ ಪ್ರತಿಗಾಮಿ ಧೋರಣೆಯದೆಂದು ಹೇಳಬೇಕಾಗುತ್ತದೆ.

ಬದುಕಿನ ಒಂದೊಂದು ಪ್ರಸಂಗಕ್ಕೂ ಅನುಭವದ ಆವರಣದಲ್ಲಿ ದಾರಿ ಹುಡುಕಿ ಕೊಳ್ಳುವ ಸ್ವಾಭಾವಿಕ, ಸಾಮಾನ್ಯ ಸಮರ್ಥ ರೀತಿಯನ್ನು ಅನುಸರಿಸುವ ಬದಲು ಶ್ರೋತ್ರಿಯುವರಂತೆ ಎಲ್ಲದಕ್ಕೂ ಧರ್ಮಗ್ರಂಥಗಳ ಹಳಿಯ ಮೇಲೆ ಬದುಕಿನ ಬಂಡಿ ಬಿಡುವ ಬಯಕೆ ಅರ್ಥಹೀನ ಎನ್ನಿಸುತ್ತದೆ. ಧರ್ಮಗ್ರಂಥೋಕ್ತ ಮಾರ್ಗಾನು ಸರಣೆಗೆ ಬದ್ಧರಾಗಿ ಶ್ರೋತ್ರಿಯರು ಸನ್ಯಾಸಾಶ್ರಮ ಸ್ವೀಕಾರಕ್ಕೆ ಹೋಗುವುದು ಕೃತಿಕಾರರಿಗೆ ಮಾತ್ರ ಅನಿವಾರ್ಯವಾಗಿ ತೋರಲು ಸಾಧ್ಯವಾಗುತ್ತದೆ. ಪರಂಪರೆಯ ಮೌಲ್ಯಗಳನ್ನೆಲ್ಲ ಸಾರಾಸಗಟು ಹರಾಜು ಹಾಕಬೇಕೆಂದು ಹೇಳುವುದು ಹೇಗೆ ಕೇವಲ ಹಾರಾಟವಾಗುತ್ತದೆಯೋ ಹಾಗೆಯೇ ಅಂಧಶ್ರದ್ಧೆಯ ಅಡಿಗಲ್ಲ ಮೇಲೆ ನಿಂತು, ಬದುಕಿನ ಅರ್ಥಪೂರ್ಣ ಅನುಭವದಿಂದ ಬೆಳೆಯದೆ ಹೋಗುವ, ಅದಕ್ಕಾಗಿಯೇ ಮನಸ್ಸನ್ನು ಹದಮಾಡಿಕೊಳ್ಳುವ, ಮೆದುಳನ್ನು ಹುರಿಗೊಳಿಸಿಕೊಳ್ಳುವ ರೀತಿ ಅರ್ಥ ಹೀನ ಹೋರಾಟವಾಗುತ್ತದೆ.

ಒಟ್ಟಾರೆ ಗಂಭೀರ ಆಲೋಚನೆಗೆ ಒಳಗಾದ, ತೀವ್ರ ಪ್ರತಿಕ್ರಿಯೆ ಗಳಿಸಿದ 'ವಂಶವೃಕ್ಷ' ಜನಪ್ರಿಯ ಕೃತಿಯೂ ಆಗಿದೆಯೆಂಬುದು ಮರೆಯುವ ವಿಷಯವಲ್ಲ. ಕೆಲವು ಕಡೆ ಅಷ್ಟೇನೂ ಅನಿವಾರ್ಯವಲ್ಲದ ಧಾರ್ಮಿಕ ಸಾಂಸ್ಕೃತಿಕ ವಿಷಯಗಳ ಸಂವಾದ ವಿದ್ದರೂ ಒಟ್ಟಾರೆ ಓದಿಸಿಕೊಂಡು ಹೋಗುವ ಶಕ್ತಿಯನ್ನು ಹೊಂದಿದೆ. ಸನ್ನಿವೇಶ ಗಳನ್ನು ಮನಮುಟ್ಟಿಸುವ ಕಲೆ ಕಾದಂಬರಿಕಾರರಿಗೆ ಸಿದ್ಧಿಸಿದೆ. ಬದುಕಿನ ಸವಾಲು ಗಳಿಗೆ ಸನಾತನ ಧರ್ಮವೇ ಸಂಜೀವಿನಿಯೆಂಬ ಭ್ರಮೆಯಿಟ್ಟುಕೊಂಡು, ಶ್ರೋತ್ರಿಯುವ ರಂತೆ ಯೋಚಿಸುವವರಿಗೆ ಮತ್ತು ನಾಗಲಕ್ಷ್ಮಿಯಂತೆ ರಾಮಾಯಣದ ಬರವಣಿಗೆಯ ಮೂಲಕ ತನ್ಮಯತೆ ಪಡೆಯುವ ನಂಬಿಕೆಯುಳ್ಳವರಿಗೆ ಕಾದಂಬರಿ ಬೇಗ ಆತ್ಮತೃಪ್ತ ಎನ್ನಿಸಬಹುದು. ಇದಕ್ಕೆ ವಿರುದ್ಧ ನೆಲೆಯವರಿಗೆ ಪ್ರಗತಿಪರವಲ್ಲದ ಕೃತಿಯೆನ್ನಿಸು ತ್ತದೆ. ಒಟ್ಟಿನಲ್ಲಿ ಗಂಭೀರ ಚರ್ಚೆಗೆ ಪ್ರೇರಣೆಯಾಗುವ ಸಂಗತಿಗಳು ಈ ಕೃತಿ ಯಲ್ಲಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಡಾ|| ಪ್ರಭುಶಂಕರರ 'ಜನಮನ'

ಪುಂಡಲೀಕ ಶೇಟ್

ಅಂಗುಲಿ ಮಾಲ, ಆಮ್ರಪಾಲಿಯಂತಹ ಕೃತಿಗಳನ್ನು ರಚಿಸಿದ ಡಾ. ಪ್ರಭುಶಂಕರ ಅವರ 'ಜನಮನ' ಪುಸ್ತಕ ವ್ಯಕ್ತಿ ಚಿತ್ರಣದ ಒಂದು ವಿಶಿಷ್ಟ ಕೃತಿ ಎನ್ನಬೇಕು. ಇಲ್ಲಿ ನಿರೂಪಿತವಾಗಿರುವ ಹದಿನೇಳು ಚಿತ್ರಣಗಳಲ್ಲಿ ಸಾಮಾನ್ಯ ವ್ಯಕ್ತಿಗಳಾಗಿ ಬದುಕಿದ, ಪ್ರಚಾರದ ರಭಸಕ್ಕೆ ಸಿಕ್ಕು ಸಿಕ್ಕಾಪಟ್ಟೆ ಪರಿಚಿತವಾಗಿರದ ಸರಳ ವ್ಯಕ್ತಿಗಳ ಉದಾತ್ತ ಜೀವನದ ಪಾರದರ್ಶಕತೆಯನ್ನು ನಾವು ಕಾಣ ಬಹುದು.

ಒಬ್ಬ ವ್ಯಕ್ತಿಯ ಬದುಕಿನ ದಾರಿಯನ್ನು ನಾಡಿಯನ್ನು ಹತ್ತಿರದಿಂದ ನೋಡಿದಾಗ, ಅವರ ವ್ಯಕ್ತಿತ್ವವನ್ನು ಅಳೆಯಲು ಸಾಧ್ಯ. ಹಾಗೆಯೇ ಪ್ರಭುಶಂಕರರು ಚಿತ್ರಿಸಿರುವ ಇಲ್ಲಿಯ ಚಿತ್ರಣಗಳಲ್ಲಿ ಎಲ್ಲಿಯೂ ಕಾಲ್ಪನಿಕತೆಯಾಗಲಿ, ಉಪಮೇಯಂಗಳ ವರ್ಣನೆಯಾಗಲಿ ಬರುವುದಿಲ್ಲ. ಎಲ್ಲವೂ ನಡೆಯುವ ಅಪರೂಪದ ಜೀವನ ದರ್ಶನವಾದರೂ, ಅದರ ನಿರೂಪಣೆಯಲ್ಲಿ ಲೇಖಕನ ಹೊಸ ಜೀವ, ಹೊಸ ಸೃಷ್ಟಿ, ಲವಲವಿಕೆ ಎದ್ದು ತೋರುತ್ತದೆ. ಇಡೀ ಪುಸ್ತಕದಲ್ಲಿ ನನ್ನ ಮನಸ್ಸಿಗೆ ತಾಕಿದ ವ್ಯಕ್ತಿ ಅಂಬಳೆ ವೆಂಕಟರಾಂ. ಇಂತಹ ವ್ಯಕ್ತಿಗಳೂ ನಮ್ಮ ಕಣ್ಣಿಗೆ ಕಿವಿಗೆ ಬೀಳದೆ ಹೋಗಿದ್ದಾರೆಯೋ ಎನಿಸುತ್ತದೆ.

ಡಾ॥ ಎ. ಎನ್. ಮೂರ್ತಿರಾಯರು ತಮ್ಮ ಮುನ್ನುಡಿಯಲ್ಲಿ ಪ್ರಸ್ತಾಪಿಸಿದಂತೆ ಜನರ ಮನದಲ್ಲಿ ಮರೆಯಾಗದೇ ಮರೆಸಲಾಗದೇ ಇರುವ ವ್ಯಕ್ತಿ ಅತಿ ಮುಖ್ಯವಾಗಿ ಅಂಬಳೆ ವೆಂಕಟರಾಂ. ಅವರ ವ್ಯಕ್ತಿತ್ವವನ್ನು ನೋಡಿದಾಗ ಇಂತಹ ಪರೋಪಕಾರಿ ವ್ಯಕ್ತಿಯೊಬ್ಬ ಈ ಕಾಲದಲ್ಲಿದ್ದುದ್ದು ನಿಜವೇ ಎಂಬ ಸಂಶಯ ಒಮ್ಮೊಮ್ಮೆ ಹೆಪ್ಪುಗಟ್ಟುತ್ತದೆ. ವೆಂಕಟರಾಂ ಅಥವಾ ಭಟ್ಟನ ಬಾಯಿ ಚಪಲದ ವರ್ಣನೆ ಹಾಸ್ಯಪೂರ್ಣವಾಗಿದ್ದರೂ ಅದು ನಾಲಿಗೆ ಕೆಟ್ಟವನಿಗೆ ನೀರು ತರಿಸುವಷ್ಟು ವರ್ಣಮಯವಾಗಿದೆ. ಭಟ್ಟರ ಸಾವಿನ ಸಂಗತಿ ಡಾ. ಪ್ರಭುಶಂಕರ ತಿಳಿಸುವ ರೀತಿ ತುಂಬ ಭಯಾನಕವಾದದ್ದು. ಓದುತ್ತಿದ್ದಂತೆ ವೆಂಕಟರಾಂ ನಮಗೆ ತುಂಬ ಹತ್ತಿರದ ಪ್ರಿಯವಾದ ಭಟ್ಟನಾಗಿ ಬಿಟ್ಟಿರುತ್ತಾನೆ. ಆತನ ಸಾವು ಹಾಗೂ ಅದರ ಹಿನ್ನೆಲೆ ಕ್ಷಣಕಾಲ ಎಂಥವರನ್ನೂ ಭಾವಪರವಶರನ್ನಾಗಿಸಿ ಬಿಡುತ್ತದೆ. ಅಮೆರಿಕೆಯಲ್ಲಿ ಬೇರೆಯವರ ಪ್ರಾಣ ಉಳಿಸಲು ಹೋಗಿ ಭಟ್ಟ ತಾನೇ ದುರ್ಮರಣಕ್ಕೀಡಾಗುತ್ತಾನೆ. ಇಲ್ಲಿ ಪ್ರಭುಶಂಕರ ಜೀವನ ಚಿತ್ರಣ ಬರೆಯುತ್ತಿದ್ದಾರೋ ಅಥವಾ ವೆಂಕಟರಾಂ ಎಂಬ ಕಾಲ್ಪನಿಕ ನಾಯಕನ ಕಥೆ ಹೆಣೆಯುತ್ತಿದ್ದಾರೋ ಎನಿಸುತ್ತದೆ. ಕಥೆಯಿಲ್ಲದ ಕಥೆಯನ್ನು ಹೇಳುವ ಇಲ್ಲಿನ ರೀತಿ ಭಾಷೆ ಹಾಗೂ ಘಟನೆಗಳ ವಿವರಣೆಯು ಸರಳತೆ ಮೆಚ್ಚತಕ್ಕದ್ದು.

ವೆಂಕಟರಾಂ ಚಿತ್ರಣ ಹೀಗೆ ಪುಸ್ತಕದ ಮೊದಲ ಆಯ್ಕೆಯಾದರೆ, ತಮಿಳರಾಗಿಯೂ ಕನ್ನಡಾಭಿಮಾನ ತುಂಬಿಸಿಕೊಂಡ ಶ್ರೀದಾಸರ ಚಿತ್ರಣ ವಿಭಿನ್ನ ಜೀವನ ದೃಷ್ಟಿಕೋನದಿಂದ ಓದುಗರನ್ನು ಸೆಳೆಯುತ್ತದೆ. ದಾಸರ ಸ್ವಾಭಿಮಾನ, ಜೋತಿಷ್ಯಶಾಸ್ತ್ರದ ಅನುಭವ ಇತ್ಯಾದಿ ಗುಣಗಳ ಬಗ್ಗೆ ಲೇಖಕರು ಹೇಳುತ್ತ ಸಾಗುವುದರ ಮೂಲಕ ಹಲವು ಜೀವನ ಮೌಲ್ಯಗಳನ್ನು ವಿವರಿಸಲು ಪ್ರಯತ್ನಪಟ್ಟಿರುವುದು ಇಲ್ಲಿ ಎದ್ದು ಕಾಣುತ್ತದೆ. ದಾಸರು ಪುಕ್ಕಟೆ ಊಟವನ್ನು ಮಾಡುತ್ತಿದ್ದರೂ ತಮ್ಮ ಆತ್ಮಗೌರವಕ್ಕೆ ಧಕ್ಕೆ ಬರದಂತೆ ನೋಡಿಕೊಳ್ಳುತ್ತಿದ್ದರು. ಜನಿವಾರ ಶಿವದಾರಗಳ ಬಗ್ಗೆ ಲೇಖಕರ ನಿಲುವು ದಾಸರೊಂದಿಗಿನ ಒಂದು ಪ್ರಕರಣದಲ್ಲಿ ತುಂಬ ಸ್ವಾರಸ್ಯಕರವಾಗಿ ಪ್ರಕಟವಾಗಿದೆ. ದಾಸರು ಜನಿವಾರ ಕೊಡಲು ಬಂದಾಗ ಪ್ರಭುಶಂಕರ ಹೇಳುತ್ತಾರೆ : 'ದಾಸರೆ ನನಗೆ ಬರೀ ಹಗ್ಗ ಸಾಲದು, ಅದರ ತುದಿಗೆ ಕಾಶೀ ವಿಶ್ವೇಶ್ವರ ಇರಬೇಕು'.

ಬ್ರಾಹ್ಮಣರೊಂದಿಗೇ ಹೆಚ್ಚು ಸಂಪರ್ಕ ಬಂದಿರುವ ಲೇಖಕರ ಇನ್ನೊಬ್ಬ ವ್ಯಕ್ತಿ ವೆಂಕಟಸುಬ್ಬಯ್ಯ. ಉತ್ಕೃಷ್ಟ ಸಾಹಿತ್ಯ ರಚನೆಯ ಈ ಸುಬ್ಬಯ್ಯನವರಿಗೆ ಯಾವ ಸತ್ಕಾರವಾಗಲಿ, ಬಹುಮಾನವಾಗಲಿ ದೊರೆಯಲಿಲ್ಲ ಎಂಬ ಲೇಖಕರ ಕೊರಗು ಸತ್ಯವಾದದ್ದು. 'ಅವರು ಸತ್ತಮೇಲೂ ಯಾವುದೇ ಸಂತಾಪ ಸೂಚಕ ಸಭೆಗಳು ನಡೆದದ್ದು ನನ್ನ ತಿಳುವಳಿಕೆಗೆ ಬಂದಿಲ್ಲ' ಎಂದು ಹೇಳುವಲ್ಲಿ, ಇಂತಹ ಅನೇಕ ಲೇಖಕರು ಹೇಗೆ ಬೆಳಕಿಗೆ ಬಾರದೆ ಹೋಗಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

'ಜನಮನ'ದಲ್ಲಿ ಚಿತ್ರಿತವಾಗಿರುವ ವ್ಯಕ್ತಿಗಳ ಜೀವನದಲ್ಲಿ ವೈವಿಧ್ಯತೆಯಿದೆ. ಇದು ಈ ಪುಸ್ತಕದ ಮೌಲ್ಯವನ್ನು ಕೂಡ ಹೆಚ್ಚಿಸುತ್ತದೆ. ಪವಾಡ, ಅತೀಂದ್ರಿಯ ಶಕ್ತಿಗಳಲ್ಲಿ ನಂಬಿಕೆಯಿಲ್ಲದ ಲೇಖಕರನ್ನೂ ಮೆಚ್ಚಿಸಿದ ಆರ್. ಜೆ. ಗಲಗಲಿಯವರೊಂದಿಗಿನ ಅನುಭವಗಳು ನಮ್ಮ ಕುತೂಹಲ ಕೆರಳಿಸುತ್ತವೆ. ನಮ್ಮ ಬುದ್ಧಿಗೆ ನಿಲುಕದ ಅನೇಕ ಆಶ್ಚರ್ಯಗಳನ್ನು ಕೇಳಿದಾಗ, ಗಲಗಲಿ ಹಾಗೂ ದೇಸಾನಿಯಂತಹ ವ್ಯಕ್ತಿಗಳ ಬಗ್ಗೆ ಕುತೂಹಲ ಮೂಡುತ್ತದೆ. ಇಲ್ಲಿಯ ಹಲವಾರು ವ್ಯಕ್ತಿ ಚಿತ್ರಗಳು ಹಲವು ವಿಷಯಗಳ ಮೇಲಿನ ಪ್ರಬುದ್ಧ ಪ್ರಬಂಧಗಳಂತೆ ತೋರಿದರೆ ಆಶ್ಚರ್ಯವಿಲ್ಲ. ಈ ಶ್ರೇಯಸ್ಸು ಪ್ರಭುಶಂಕರರಿಗೆ ಸಲ್ಲುತ್ತದೆ.

ಗೋಣಗಾಡಿದ ಜಟಕಾದವನಿಗೆ ದುಡ್ಡು ತೋರಿಸಿ ಬಾವಿಗೆಸೆದ ಹಾಗೂ ಗಾಡಿಗೆ ಬಾಡಿಗೆ ಕೊಟ್ಟು ಹಿಂದೆ ಹಿಂದೆ ನಡೆದುಕೊಂಡು ಹೋದ ಸಂಜೀವರಾಯರ ಬದುಕು ಹಾಗೂ ಹನ್ನೆರಡು ಜನ ಮುದುಕಿಯರನ್ನು ತೀರ್ಥಯಾತ್ರೆಗೆ ಹೊರಟು, ದಾರಿಯಲ್ಲಿ ಹಣ ಕಳೆದುಕೊಂಡ ರಾಯರ ಮೋಜಿನ ಸಂಗತಿಗಳು ಅರಕೆರೆ ಸಂಜೀವರಾಯರು ಹಾಗೂ ಹರಿಹರದ ಗುಂಡೂರಾಯರಲ್ಲಿ ಕಾಣಸುತ್ತವೆ. ಹಣಕ್ಕೆ ಕೊರತೆಯಿದ್ದರೂ ಅಭಿಮಾನಕ್ಕೆ ಕೊರತೆಯಿಲ್ಲದ ಸೀತಾರಾಮ ಅಯ್ಯಂಗಾರರ ವಕೀಲ ವೃತ್ತಿ ಅಪರೂಪದ್ದು. ಹಣಕ್ಕೆ ಅಂಟಿಕೊಳ್ಳದೆ, ಕೇವಲ ಪ್ರಾಮಾಣಿಕತೆಯನ್ನು ಬೆನ್ನಟ್ಟಿದ ವಕೀಲರ ಬದುಕು ಇಲ್ಲಿ ನಿರೂಪಿಸಲಾಗಿದೆ.

ಸಹೃದಯ ವ್ಯಕ್ತಿಗಳ ಆಯ್ಕೆಯನ್ನು ಲೇಖಕರು ಹೇಗೆ ಮಾಡಿದ್ದಾರೆ ಎಂಬುದಕ್ಕೆ ಮೈಲಾರಿಯರ ಪಾಠದ ವೈಖರಿ, ಅಟೆಂಡೆನ್ಸ್ ಪುಟ್ಟಯ್ಯನವರ ಸರಳ ಜೀವನ, ಅಬ್ದುಲ್ ಸತ್ತಾರರ ಭಕ್ತಿ ಇತ್ಯಾದಿಗಳೇ ಉತ್ತಮ ಉದಾಹರಣೆಗಳು.

ಹರಿಕಥೆಯಲ್ಲಿ ಆಸಕ್ತಿಯುಳ್ಳ ಅಬ್ದುಲ್ ಬೆಳಗಿನ ಮೂರು ಗಂಟೆಯ ಸಮಯಕ್ಕೆ ಹೂವಿನ ಹಾರ ತರುವ ಶ್ರದ್ಧೆ, ನಿರಾಡಂಬರ ವ್ಯಕ್ತಿತ್ವದ ಮೈಲಾರಿಯವರ ಕ್ಲಾಸ್‌ರೂಮು, ಜೀವನ ಮಾರ್ಗದರ್ಶನಗಳೇ ಆಗಿವೆ.

'ಜಗತ್ತು ನಮಗೆ ಬೇಕಾದಷ್ಟು ಕೊಟ್ಟಿದೆ. ಇಷ್ಟಕ್ಕೂ ನಾವು ಜಗತ್ತಿಗೆ ಹಿಂತಿರುಗಿಸುವುದಾದರೂ ಎಷ್ಟು ? ತೀರ ಕಡಿಮೆ' ಎನ್ನುವ ಅಂಥ ಮಹಿಳೆ ಹಾರಿಯೆಟ್‌ಳ ಜೀವನ ದರ್ಶನ ಜನಮನದ ಮತ್ತೊಂದು ಬಹು ಮುಖ್ಯವಾದ ಅಂಗ. ಪ್ರಭುಶಂಕರ ಹೇಳುವ ಒಂದೇ ಮಾತು ಇಲ್ಲಿ ಸಾಕೆನ್ನುತ್ತದೆ—ಬದುಕಿದ್ದರೆ ಅಲ್ಲಿ ಇಲ್ಲಿ ಕಣ್ಣು ಮನಸ್ಸು ತೆರೆದುಕೊಂಡು ಓಡಾಡುತ್ತಿದ್ದರೆ ಮಾನವತೆಗೆ ಭೂಷಣಪ್ರಾಯವಾಗಿರುವ ಹಾರಿಯೆಟ್‌ರಂಥವರನ್ನು ನೋಡುತ್ತಿರಬಹುದು. ಈ ಒಳಗಣ್ಣು ಎಷ್ಟು ಜನರಿಗಿದೆ ಎಂಬುದೇ ನಮ್ಮ ಎದುರಿಗಿನ ಪ್ರಶ್ನೆ ಅಲ್ಲವೇ ?

'ಜನಮನ'ದ ಕೊನೆಯ ಭಾಗದಲ್ಲಿ ಬರುವ ವೈದ್ಯರು ಹಾಗೂ ಅವರ ಸೇವಾ ಮನೋಭಾವ ನಮ್ಮಲ್ಲಿಯ ಎಷ್ಟು ಜನ ವೈದ್ಯರಿಗಿದೆ ?

ಎ. ಕೆ. ಗೋಪಾಲರಾಜನ್ ಅವರು ರೋಗಿಗಳನ್ನು ಕಾಣುತ್ತಿದ್ದ ಪರಿ, ರೋಗಿ ಹಣ ಕೊಡಲು ಹೋದಾಗ 'ಹಣ ನನ್ನ ಹತ್ತಿರ ಬೇಕಾದಷ್ಟಿದೆ' ಎನ್ನುವ ಗೋಪಾಲ ರಾಜನ್‌ರ ಉದಾರ ಮನೋಭಾವ ಅನುಕರಣೀಯವಾದದ್ದು. ಇಂತಹ ವ್ಯಕ್ತಿಗಳ ಚಿತ್ರಣವನ್ನು ಪ್ರಭುಶಂಕರ ಬಹಳ ನಾಜೂಕಾಗಿ, ಮನತಟ್ಟುವಂತೆ ಇಲ್ಲಿ ನಿರೂಪಿಸಿದ್ದಾರೆ. ಅದರಂತೆಯೇ ಕಲಕತ್ತೆಯ ಪ್ರಸಿದ್ಧ ಆಸ್ಪತ್ರೆ ಶಿಸುಮಂಗಲ ಪ್ರತಿಷ್ಠಾನ ದಲ್ಲಿ ಉಚಿತವಾಗಿ ಸೇವೆ ಸಲ್ಲಿಸುತ್ತಿರುವ ಡಾ. ಬಿ. ಕೆ. ಮಿಶ್ರ ಮುಂತಾದವರ ಸೇವೆ ಯನ್ನು ಇಲ್ಲಿ ಗುರುತಿಸಿದ್ದಾರೆ. ಹುಬ್ಬಳ್ಳಿಯ ಡಾ. ಕೌಲಗುಡ್ಡ ಅವರು ರೋಗಿ ಗಳಿಗೆ ಔಷಧಿಯ ಜೊತೆಗೆ, ಅವರಿಗೆ ಬೇಕಾದ ತಿಂಡಿ ತಿನಿಸುಗಳನ್ನು ನೀಡುವುದು, ರೋಗಿಗೆ ಬೇಕಾದ ರಕ್ತವನ್ನು ಒಮ್ಮೊಮ್ಮೆ ತಾವೇ ಕೊಡುವುದು, ವೈದ್ಯರಲ್ಲಿ ಇಂಥ ವರೂ ಇದ್ದಾರೆಯೇ ಎನಿಸುವಂತಹ ವಿಚಾರಕ್ಕೆ ತಳ್ಳುತ್ತದೆ.

ಅನೇಕ ವೃತ್ತಿಗಳಲ್ಲಿಯ, ವಿವಿಧ ವ್ಯಕ್ತಿಗಳ ಅಪರೂಪದ ಚಿತ್ರಣದ 'ಜನಮನ' ದಂತಹ ಪುಸ್ತಕಗಳು ಇನ್ನೂ ಹೆಚ್ಚು ಬರಬೇಕು. ವೆಂಕಟರಾಂ, ದಾಸರು, ಮೈಲಾರಿ ತರಪದ ಅನೇಕ ಅಪೂರ್ವ ಜೀವಿಗಳು ನಮ್ಮೊಂದಿಗೆ ಅನೇಕರಿದ್ದಾರೆ. ಅವರ ಬದುಕಿಗೆ ಕನ್ನಡಿ ಹಿಡಿಯಬಲ್ಲ ಲೇಖಕರು ಹೆಚ್ಚು ಬೇಕು. ಇವರ ಜೀವನ ಚಿತ್ರಣ ಕೇವಲ ಅವರ Life Story ಆಗಿರದೆ ಜೀವನದ ಶ್ರೇಷ್ಠ ಮೌಲ್ಯಗಳ ಪವಿತ್ರ ಗ್ರಂಥವಾಗ ಬಲ್ಲವು. ಈ ದಿಕ್ಕಿನಲ್ಲಿ ನಮ್ಮ ಅನೇಕ ಲೇಖಕರು ಪ್ರಯತ್ನಿಸಬೇಕಾಗಿದೆ.

ಸುಜನಾ ಅವರ 'ಒಂದೆ ಸೂರಡಿಯಲ್ಲಿ'

ಟಿ. ಎಸ್. ನಾಗರಾಜಶೆಟ್ಟಿ

'ಒಂದೆ ಸೂರಡಿಯಲ್ಲಿ' ಸುಜನಾರ ಮೂರನೆಯ ಕವನ ಸಂಕಲನ (ಇದಕ್ಕೆ ಮುನ್ನ ಅವರು 'ಮಂಗಳಾರತಿ' ಹಾಗೂ 'ನಾಣ್ಯಯಾತ್ರೆ' ಸಂಕಲನಗಳನ್ನು ಪ್ರಕಟಿಸಿದ್ದಾರೆ). ೧೮೦ ಕವನಗಳ ಪ್ರಕೃತ ಸಂಕಲನ ಸಾಕಷ್ಟು ತೋರದಾಗಿದೆ. ಮೊದಲಿಗೆ ಈ ಕೃತಿಯನ್ನು ಹಾಗೂ ಇದರ ಧೋರಣೆಗಳನ್ನು ಪರಿಚಯಿಸಿ ನಂತರ ಕವಿಯ ಸೋಲು ಗೆಲುವುಗಳನ್ನು ಕುರಿತು ನಾಲ್ಕು ಮಾತು ಹೇಳುವ ಪ್ರಯತ್ನ ಈ ಲೇಖನ.

ಅನುಭವ ಕಾವ್ಯವಾಗುವ ಪ್ರಕ್ರಿಯೆ ಮತ್ತು ಅದರ ಸಾಧ್ಯತೆಗಳು ಜಗತ್ತಿಗೇ ಬೆರಗು ಕವಿಸಿವೆ. ಕಾವ್ಯ ಕ್ರಿಯೆ ಒಂದು ಇಂದ್ರಜಾಲ ; ಆದರೆ ಕೇವಲ ಚಮತ್ಕಾರವಲ್ಲ. ಆಸ್ವಾದನೀಯ ; ಆದರೆ ಅಷ್ಟೇ ಅದರ ಗುರಿಯಲ್ಲ. ದರ್ಶನೀಯ ; ಆದರೆ ಪೂರ ದಕ್ಕುವುದಿಲ್ಲ. ಅಪೂರ್ವ ಸೃಷ್ಟಿ ; ಸೃಷ್ಟಿಗಿಂತ ಕಡಮೆಯದೇನೂ ಅಲ್ಲ. ಅದರ ಸ್ವರೂಪ, ಅಂತರಂಗ, ವ್ಯಾಪ್ತಿ ಹೀಗೇ ಎಂದು ನಿರ್ಣಯ ಕೊಡಲಾಗದು. ಅಂಥ ಕಾವ್ಯ ಸೃಷ್ಟಿ ಕುರಿತು ಚಿಂತನೆ ನಡೆಸಿರುವ ಕವನಗಳು ಕೆಲವು ಈ ಸಂಕಲನದಲ್ಲಿವೆ.

"ತಳಮಳದ ಕಡಲು ತಳಮಳೆದ ಒಡಲು
ತಳಮೇಲುಗೊಳಗೆ ಗೆಳೆಯ ?" ('ಕವಿ')

ಅಂತರಂಗದ ತಳಮಳದಿಂದ ಕಾವ್ಯ ಚಿಮ್ಮುತ್ತದೆ. 'ಚಿತ್ರಸಾಗರದ ಉತ್ತಮಾಂಗನಾದ' ಕವಿ ಉನ್ಮತ್ತನಾಗದೆ, ಚಿನ್ಮತ್ತನಾಗದೆ, ಹೃನ್ಮಧುವನ್ನು ಕಡೆದು ನೀಡಬೇಕೆನ್ನುತ್ತಾರೆ ಇಲ್ಲಿನ ಕವಿ. ಕವನ 'ಅಲೆವ ಮನದ ಯಾನ'ವಾಗಿದ್ದರೂ ಅದು ಮೈಗೂಡಿಕೊಳ್ಳುವ ರೀತಿಯನ್ನು ನೋಡಿ:

"ಗೊಬ್ಬರದ ಗಬ್ಬುಗಿಡಮರದ ತೆಳುನಾಳಗಳ ಹಾಯ್ದು ಸೋಸಿ
ಮಳೆಗಾಳಿ ಬಿಸಿಲುಗಳಲ್ಲಿ ಮೈದೊಳೆದು ಮಾಗಿ
ರುಚಿಕಂಪನೂರಿ ಹಡೆಯುವ ಪಾರಿಣಾಮಿಕ ಸೌಖ್ಯ" ('ಉಕ್ತಿಸುಖ')

ಹೀಗೆ ರೂಪುಗೊಳ್ಳುವುದು ಕಾವ್ಯದ ಸಾಫಲ್ಯವೂ ಹೌದು, ಅದರ ರಚನೆ ಕವಿಗೆ ಸುಖದಾಯಕವೂ ಹೌದು. ತಮ್ಮ ಕವನವನ್ನು ಹಳ್ಳಿ ಜಾತ್ರೆಯ ಜವನ, ಕಾಶಿ ಮಸಣದ ಪವನ, ಕುರುಡ ಕುಂಟರು ಕಂಡ ಭುವನ, ಮೋಟುಕೈಯುವನ ದೀರ್ಘದಂಡ ನಮನ ಎಂದೆಲ್ಲ ನಿರ್ದೇಶಿಸುತ್ತಿರುವುದನ್ನು ಕಂಡಾಗ, ಕವಿಗೆ ಕಾವ್ಯದ ಎಲ್ಲ ಆಯಾಮ ಗಳ ಕಡೆ ಗಮನವಿದೆ ಎಂದು ಮನವರಿಕೆಯಾಗುತ್ತದೆ. ಆದರೆ ಅವನ್ನೆಲ್ಲ ಅವರು ದುಡಿಸಿಕೊಂಡಿಲ್ಲ ಎಂದೇ ಹೇಳಬೇಕು. ಅಂತೆಯೇ ಹಲವು ಕೊರಗು ತೋರಿರಬೇಕು !

"ನನ್ನ ನುಡಿ ನಿಮಗೆಲ್ಲ ವೇದ್ಯವಾಗದೇಕೆ ?
ನಿಮ್ಮೊಲವು ನನಗೆ ಸಾಧ್ಯವಾಗದದೇಕೆ ?
ನಿಮ್ಮ ಕೊಂಬೆಗಳ ಉಡ ಕಚ್ಚಿರುವ ಚಿತ್ರಮಯ ಬಂದಳಿಕೆಗಳ
ಹಿಡಿದಲುಗಿಸುವ ಕಿತ್ತಾಚೆಗೊಗೆವ
ಜಂಝಾವಾತ ಮಾತ ನಾನೆಂದು ನುಡಿವೆ ? ('ನನ್ನ ನುಡಿ')

ಈ ತವಕ ಕವಿಗಿರಬೇಕಾದದ್ದೆ, 'ನನ್ನ ನಾಭೀಮೂಲದಿಂದೆದ್ದ ನುಡಿ ಕೂಡ ನಿಮ್ಮ ತಟ್ಟವೇಕೆ ?' ಎಂದವರು ಕೇಳುತ್ತಾರೆ. 'ಹಾಸು ಅಣಿಯೇಳದೆಯೆ ನಾನು ಲಾಳಿ ಬೀಸಿರುವೆನೇನು ?' ಎನ್ನುವಲ್ಲಿ ಓದುಗರೇ ಸಿದ್ಧವಿಲ್ಲವೇ ಎಂದು ಸಂದೇಹಿಸು ತ್ತಾರೆ, ಆದರೆ ಹಾಸು ಅಣಿಯಾಗಿದೆ, ಲಾಳಿಯೇ ಇನ್ನೂ ಸಿದ್ಧವಾಗಿಲ್ಲವೇನೊ ಎಂದು ನನಗೆ ಅನುಮಾನ ! ಇದೇ ಪದ್ಯದಲ್ಲಿ ಮುಂದೆ ಒಂದು ಸೊಗಸಾದ ಮಾತಿದೆ. 'ಮಣ್ಣೊಳಾತ್ಮಾಹುತಿಸದೆಯೆ ಬೀಜ ಮರವ ಹಡೆಯಬಹುದೆ ?' ಈ ಬಗ್ಗೆ ಅವರಿಗೆ ನಿಜಕ್ಕೂ ಎಚ್ಚರವಿದೆ. ಆದರೆ ಆ 'ಆತ್ಮಾಹುತಿ' (ಅವರ ಕಾವ್ಯದ ಮಟ್ಟಿಗೆ) ಸಂಪೂರ್ಣವಾಗಿ ಸಂದಿಲ್ಲವೆಂದೇ ಹೇಳಬೇಕು ! ಅದು ಸಂದಾಗ ಮಾತ್ರ 'ಹಾಡುತ್ತ ತಳಮನದ ಒಳಜಲದ ಜನಪ ಆಧಿಮನದ ತಿಳಿಸರಸಿಯಲಿ ಕೂಡಿಕೊಳುವ ಮತ್ತು ಶಿವಜಟೆಯ ಕ್ಷೀರ ಸಾಗರದಲ್ಲಿ ಮೂಡಿಕೊಳುವ' ಅವರ ಬಯಕೆ ಕೈಗೂಡೀತು !

ಎಷ್ಟೋ ಅವತಾರಗಳು ಬಂದು ಹೋದದ್ದಾಯ್ತು. ದೇವಮಾನವರು ತಳೆದ ಜೀವಕ್ಕೆ ಮುಕ್ತಾಯ ಹಾಡಿಯೂ ಆಯಿತು.

'ಆದರೇನಾಯ್ತು ಹೋಯ್ತು ?
ಗಂಗೆಯು ಮುನೆಯುರ ಸಿಂಧು ಬ್ರಹ್ಮೆಯರ ನಟ್ಟನಡುವಿದ್ದು
ಕುಡಿವುದಕೆ ಹೊಂಡದುಸುಬಿನ ತೀರ್ಥ !
ಸುರಭಿ ಹಟ್ಟಿಯೊಳಿದ್ದು ಹಾಲ ಬರ, ಸುರೆಯೆ ಪರಮಾರ್ಥ'

('ಮತ್ತೆ ಬರನೇನು ?)

ಇಲ್ಲಿನ ಸ್ಥಿತಿ ಅವನತಿಯತ್ತ ನಡೆದಿದೆಯೇ ಹೊರತು ಸುಧಾರಿಸಿಲ್ಲ ಎನ್ನುವ ನೋವು ಈ ಸಾಲುಗಳಲ್ಲಿದೆ. ಈ 'ವ್ಯರ್ಥಪೂರಗಳನ್ನೆಲ್ಲ ಸಾರ್ಥಗೊಳಿಸಲು' ಶ್ರೀರಾಮಕೃಷ್ಣ ಗುರುದೇವ ಮತ್ತೆ ಬರನೇನು ? ಎನ್ನುವಲ್ಲಿ ಬರಲಿ ಎನ್ನುವುದು ಕಲಿಯ ಅಪೇಕ್ಷೆ.

'ಪರಮಹಂಸ ವೇದದ ಮಾತ್ರ ಸಂಮ್ಮಿತ' ಎನ್ನುವ ಪದ್ಯವಂತೂ ಸೊಗಸಾದ ಹಾಡು. ಗಾಯನಕ್ಕೆ ಅನುಕೂಲವಾಗಿದ್ದು ಪ್ರಾಸ ಲಯಗಳಲ್ಲಿ ಪರಮಹಂಸರ ಚಿತ್ರವನ್ನು ಸಮರ್ಥವಾಗಿ ಕೊಟ್ಟಿದೆ.

ಲಾಭಲೋಭಗಳ ಜನರ ಉದ್ಧಾರಕ್ಕೆ 'ಶ್ರೀ ಸೀತಾರಾಮ' ಕವನದಲ್ಲಿ ರಾಮ ಮತ್ತೆ ಅವತರಿಸಲೆಂದು ಬಯಸುತ್ತಾರೆ.

'ವ್ಯಸ್ತ ಪೌಲ್ಯದ ಜಗಕೆ
ದಿವ್ಯ ಮಾನವ ನೆಲೆಯನಿತ್ತೆ ದೇವಪುರುಷ.
ವಿಸ್ತರಿಸಿ ಮನುಜ ಮಿತಿಗಳನಲ್ಲೆ
ದೇವ ನಿರ್ಮಿತಿಯ ನೀ ನೆಲೆಗೊಳಿಸಿದೆ' ಎಂದು ಮುಂದುವರಿದು,
'ಬಾನತ್ತ ಬೆಳೆದ ನೆಲ ತನ್ನೊಡನೆ ಸುತ್ತ
ನೆಲವನ್ನೆಲ್ಲ ಮೇಲೆತ್ತಿತು'

ಎಂದು ಅವತಾರ ಪುರುಷನನ್ನು, ಅವನ ಉದ್ಧಾರ ಕಾರ್ಯವನ್ನು ಸ್ಮರಿಸಿ ಕೊಂಡಿದ್ದಾರೆ. ಮಾನವನಾಗಿ ದೈವತ್ವಕ್ಕೇರಿದ ಮರ್ಯಾದ ಪುರು ಷೋತ್ತಮರಾಮ ನನ್ನು ಕುರಿತ ಈ ವಿವರಣೆ ಸಮಂಜಸವಾಗಿಯೇ ಇದೆ.

'ದಿವಂಗತ ತಂಗಿ' ಎನ್ನುವ ಪದ್ಯದಲ್ಲಿ ಅವಿಸ್ಮರಣೀಯವಾದ ಆದರೆ ಇನ್ನಿಲ್ಲ ವಾಗಿರುವ ತಂಗಿಯ ಚಿತ್ರವನ್ನು ಬಹಳ ಆಕರ್ಷಕವಾಗಿ ಕೊಟ್ಟಿದ್ದಾರೆ.

'ತಂದೆ ತಾಯಂದಿರಿಗಿರದ ನಿರ್ಮೋಹ ವಾತ್ಸಲ್ಯ
ಒಡಹುಟ್ಟಿದವರಿಗಿರದನಸೂಯ ಸ್ನೇಹ

ಸತಿಯರಿಗಿರದ ಕಾಮ ಪ್ರೇಮ
....
ನಿನ್ನೊಳಗೆ ಯಾವ ಹದಮುದದಿಂದ ದೀಪ್ತವಾಗಿತ್ತು ?'

ಮುಂದೆ ಕಾಣಸುವ 'ಸತ್ತಳೆಂದೆಂತು ತಿಳಿಯಲಿ ನಿನ್ನ । ನಿಚ್ಚ ನೆನಪಿನ ಅಚ್ಚರಿಸಿ ?' ಸಾಲುಗಳನ್ನೋದಿದಾಗ ರನ್ನನ 'ಗದಾಯುದ್ಧ'ದ 'ನಯನದೊಳ ಮೆರ್ದೆಯೊಳಂ ನಿನ್ನಯ ರೂಪಿರ್ದಪುದು......ವಿಯೋಗಮೆಂತಾದುದೈ ಎನಗಂ ನಿನಗಂ' ಪದ್ಯದ ನೆನಪಾಗುತ್ತದೆ.

ಇಂಥ ವ್ಯಕ್ತಿಚಿತ್ರಗಳನ್ನು ಕೊಡುವಾಗ ಕೆಲವು ರೇಖೆಗಳಲ್ಲೇ, ವರ್ಣಮಯ ಸ್ಪರ್ಶದಲ್ಲೇ ಸಮಗ್ರತೆ ಸೂಚಿಸುವ ಬಣ್ಣಗಾರನ ಕುಂಚ ಪ್ರತಿಭೆ ಅಗತ್ಯವಾಗುತ್ತದೆ. ಉದಾಹರಣೆಗೆ ಗಂಗಾಧರ ಚಿತ್ತಾಲರ 'ಸುಧೀರ', 'ಅಣ್ಣ', 'ತಾಯಿ' ಕವನಗಳನ್ನು ನೋಡಬಹುದು. ಈ ದೃಷ್ಟಿಯಿಂದ ಇಲ್ಲಿನ 'ಗಾಂಧೀಜಿಯ ಕೊಂದ ದಿನ' ಕವನದ ಕೆಲವು ಸಾಲು ಮೆಲುಕು ಹಾಕುವಂತಿವೆ:

'ಎಡದ ಕೈಯೊಳಗೆ ಹಾಲಿನ ಬಟ್ಟಲು
ಬಲದ ಕೈಯೊಳಗೋಜುಗಟ್ಟಿಗೆಯು
ಹಿಡಿದು ಬರುವ ಗುರುವೆ, ಬಡಿದು
ಹಾಲ ಕುಡಿಸುವಂಥ ಲೋಕ ಗುರುವೆ
ಇನ್ನೆಂದಿಗೆ ಬರುವೆ ? ನೀ ಇನ್ನೆಂದಿಗೆ ಬರುವೆ ?'

ಇಲ್ಲಿ ಗಾಂಧೀಜಿಯ ಚಿತ್ರ ಮೂರ್ತಿಮತ್ತಾಗುವುದರ ಜೊತೆಗೆ ಅವರ ವ್ಯಕ್ತಿತ್ವದ ಪರಿ ಹಾಗೂ ಹಿರಿಮೆಗಳೂ ಪ್ರತೀಕವಾಗುತ್ತವೆ.

ಹುಟ್ಟಿನಿಂದಲೂ ನಮ್ಮೊಳಗೇ ಇದ್ದು ಋಣ ತೀರಿದಾಗ ಬಲಿಗೊಳ್ಳುವ 'ಯಮ'ನ ಚಿತ್ರ ಸರಳ ಶಬ್ದಗಳಲ್ಲಿದ್ದರೂ ಗಂಭೀರ ನಿರೂಪಣೆ:

'ಹೂವು ಮಿಡಿಯೊಳಗಿದ್ದವನು
ಕಾಯಿ ಹಣ್ಣೊಡನೆ ಬೆಳೆವವನು
ರಸಫಲದ ಒಳಬೀಜವಿವನು :
ತಿರುಳು ತೀರಲಿ, ಕಳಿಯಲಿ
ಸಹಜರೂಪದಿ ಹೊಳೆವನು'

ಶೋಷಿತರು, ದಲಿತರನ್ನು ಕುರಿತು ಕವಿಗೆ ಸಾನುಕ್ರೋಶವಿದೆ:

'ನಮ್ಮದೆಂಬೊ ಭಣತವಿಲ್ಲ
ಮಣಿತವಷ್ಟೆ ನಮ್ಮದು

ತಾಳಶ್ರುತಿ ನಿಮ್ಮದು
ಕಂಪಿತವೆಲ್ಲ ನಮ್ಮದು;
....
ಕೊರಳಿದ್ದರು ಧ್ವನಿಯಿಲ್ಲದ ಬೆರಳಿದ್ದರು ಕರವಿಲ್ಲದ
ಹೆಬ್ಬೆರಳಿನ ದಣಿಗಳು, ಹೆಬ್ಬೆಟ್ಟಿನ ದನಿಗಳು !
('ಹೆಬ್ಬೆಟ್ಟಿನ ದನಿಗಳು')

ಇಲ್ಲಿ ದೀನರ ದುಸ್ಥಿತಿಯ ವಾಸ್ತವ ಚಿತ್ರವಿದೆ. 'ವ್ರಾತ್ಯರು ನಾವು' ಎನ್ನುವ ಕವನದಲ್ಲಂತೂ ಆ ಸ್ಥಿತಿಯ ದಾರುಣತೆಯನ್ನು ಮತ್ತದರ ಸಾತತ್ಯವನ್ನು ಪರಿಣಾಮ ಕಾರಿಯಾಗಿ ಹೇಳಿದ್ದಾರೆ.

'ಸತ್ತು ನಾವೇ ನಮ್ಮ ಚರ್ಮ ಸುಲಿಸಿಕೊಂಡು
ಮತ್ತೆ ಚಮ್ಮಟಿಗೆ ಬಾರುಕೋಲಾಗಿ
ನಮ್ಮ ಒಡಹುಟ್ಟಿಗರ ಮೈ ಬಾಸುಂಡೆಯಾಗಿ
ಮೈ ತೊಗಲ ಸುಲಿಯಬೇಕು'

ಇಂಥ ದಾರುಣ ಸ್ಥಿತಿಯನ್ನು ವಿರೋಧಿಸುವ ಕೂಗು ಸುಜನಾರ ಕಾವ್ಯದಲ್ಲಿ ಎಲ್ಲೂ ಕೇಳಿಸುವುದಿಲ್ಲ. ಬದಲಿಗೆ ಅದನ್ನು ತೋಡಿಕೊಳ್ಳುವ ಯಾತನೆಯ, ಯಾಚನೆಯ ಬಿಂಬವೇ ಹೆಚ್ಚು ಕಾಣಿಸುತ್ತದೆ :

'ನಿಮ್ಮ ದಲಿತೋದ್ಧರಣ ಯೋಜನೆಗಳಿರಲೆಂದೆ ನಾವು
ದಲಿತರಾಗುಳಿದಿರುವೆವು,
ನಿಮ್ಮ ಪಾದಸ್ಪರ್ಶ ಮಹಿಮೆ ಬೆಳಗಿರಲೆಂದೆ
ನಾವಹಲ್ಯೆಯರಾಗುಳಿದು ಪುಲಕಗೊಂಡಿರುವೆವು' ('ನಿಮಗಾಗೆ ನಾವು')

ಇಲ್ಲಿನ ಅಹಲ್ಯೆಯ ಹೋಲಿಕೆ ಅವರ ಶಾಪಸ್ಥಿತಿಗೆ ದ್ಯೋತಕವಾದರೂ ಶೋಷಕರನ್ನು ರಾಮನನ್ನಾಗಿಸಿಬಿಟ್ಟಿರುವುದು ಒಂದು ವಿಪರ್ಯಾಸ (ಹೋಮರನೂ ತೂಕಡಿಸುತ್ತಾನೆ!). ಇದನ್ನು ವಿಡಂಬನೆಯೆಂದು ಭಾವಿಸೋಣವೆಂದರೆ ಕವನದಲ್ಲಿ ಎಲ್ಲೂ ದುಸ್ಥಿತಿಯ ವಿರೋಧದ ಧ್ವನಿಯೇ ಕಾಣದು. 'ಬೀದಿಗರ ಹಾಡು' ಎನ್ನುವ ಕವನದಲ್ಲಂತೂ ಅಂಥ ದೀನ ಸ್ಥಿತಿಯವರನ್ನು 'ನಂದನವು ಕೂಡ ಕಾಡು, ಸುಡುಗಾಡು ನಮ್ಮ ನಾಡು !' ಎಂದು ವೈಭವೀಕರಿಸಿಬಿಟ್ಟಿದ್ದಾರೆ ! ಈ ಮನೋಭಾವ ಅಷ್ಟು ಸಮಂಜಸವಾಗಲಾರದು.

ಹಾಗೆ ನೋಡಿದರೆ, 'ಜಿಂಕೆಯಾಗಿಲ್ಲ ಹುಟ್ಟಿದಮೇಲೆ' ಒಂದು ಶಕ್ತಿಪೂರ್ಣ ಹಾಗೂ ಆರೋಗ್ಯಕರವಾದ ಧೋರಣೆಯ ಕವನ. ಇದು ಮಾನವ ತನ್ನ ಎಲ್ಲ ಮಿತಿಯಲ್ಲೂ (ಹಿಂಸ್ರಪ್ರಾಣಿಗಳ ಜೊತೆಗೆ ಮಾನವನಿಗೂ ಆಪ್ಯಾಯಮಾನ ಆಹಾರವಾದ

ಜಿಂಕೆಗೆ ಹೋಲಿಸಿರುವುದಂತೂ ಔಚಿತ್ಯಪೂರ್ಣವಾಗಿದೆ) ತೋರಬಹುದಾದ, ತೋರಬೇಕಾದ ದಿಟ್ಟತನದ ಗಟ್ಟಿ ಚಿತ್ರ. 'ಓಡಬಾರದ ಹರಿಣ ಸೊಣಗಂಗು ಹರಣ ತೆತ್ತೀತು' ಎಂದು ವಚನವೊಂದರ ಸಾಲನ್ನು ಉದ್ಧರಿಸಿ, ಕವಿ ಮುಂದುವರಿಸುತ್ತಾರೆ :

'ಮರಣ ಭಯದಲ್ಲಿ ನಾವು ಓಡುತ್ತ ಹರಣ ಸಾಗಿಸಬೇಕು
ನೆರಳಿಗಂಜುತ್ತ ನೆರಳಾಗಿ ಹೊರಳಬೇಕು
ಅಂಜಿಕೆಯುಟ್ಟು ಅಂಜಿಕೆಯುಟ್ಟು ಬಾಳಬೇಕು;
ಇಲ್ಲ, ಅಂಜಿಕೆಯ ಸುಟ್ಟು ನಂಜಿದ್ದು ಕೆರಳಬೇಕು'

(ಅಪರೂಪಕ್ಕೆ ಇಂಥ ಕಡೆಗಳಲ್ಲಿ ಪ್ರಾಸಾನುಪ್ರಾಸಗಳು ಅರ್ಥಾನುಸಾರಿಯಾಗಿ ಬಳಕೆಯಾಗಿ ಅರ್ಥಕ್ಕೆ ರೆಕ್ಕೆ ಮೂಡಿಸುವುದುಂಟು.) ಹೀಗೆ ಕೆರಳಬೇಕಾದ ಚಿತ್ರವನ್ನು ಮೂಡಿಸಿರುವ ರೀತಿ ಕುತೂಹಲಕಾರಿಯಾಗಿದೆ; ಅಷ್ಟೇ ಸಮರ್ಥವಾಗಿದೆ :

'ಕಾಲುಗೊರಸುಗಳ ಬಾಚಿ ಉಗುರಾಗಿ ಚಾಚಿ
ಗರುಕೆ ಹಲ್ಲುಗಳ ಮೊನಚು ಈಚಾಗಿ ಮಸೆದು
ನಮ್ಮ ಮಿದು ಮಾಂಸ ಖಂಡಗಳ
ವಿಷಖಂಡವಾಗಿನ್ನು ಹೊಸೆದು,
ಮಿರುಗು ತೊಗಲನ್ನೆಲ್ಲ ಅನಾಕರ್ಷಕ ಕವಚವೆನಿಸಿ
ನಮ್ಮಲಂಕಾರ ಶೃಂಗಗಳ ಮಸೆದೀಟಿಯೆನಿಸಿ.......'

ಮುಂತಾದ ವಿವರಗಳಲ್ಲಿ ಇರುವ ಮಿತಿಗಳಲ್ಲೇ ಅತಿಶಯತೆ ಸಾಧಿಸಬಹುದಾದ, ಮಿದುವಾದ ಅಂಗಾಂಗಗಳನ್ನೆ ಮಾರಕಾಂಗಗಳನ್ನಾಗಿಸಿಕೊಂಡು ಬದುಕಬೇಕಾದ ರೀತಿಯ ಸೂಚನೆಯಿದೆ.

'ಅಂಜದಂಜಿಸದೆ ನಮ್ಮ ಭಂಜಕರ
ನಂಜಿಗಾಹುತಿಯಾಗದುಳಿಯಬೇಕು'

ಎಂದು ತಾರಕ ಮಂತ್ರವನ್ನುಪದೇಶಿಸಿದ್ದಾರೆ, ಕವಿ (ಇಲ್ಲಿ ಅಂಜಬಾರದೆನ್ನುವುದರ ಜೊತೆಗೆ ಅಂಜಿಸಲೂಬಾರದೆನ್ನುವ ಸೂಚನೆಯನ್ನೂ ಗಮನಿಸಬೇಕು). ಇಲ್ಲವಾದಲ್ಲಿ :

'ಮೇಲೆರಗಿ ಬಿದ್ದವರಿಗೆಲ್ಲ ಸವಿಯುಣಿಸಾಗಿ
ಬೇಟೆಗಾರರ ಗುಂಡಿಗಂಡಿತ್ತು
ಅಮ್ಮಣ್ಣಿಯರ ಕೈಮಿರುಗು ಚೀಲವಾಗಿ.......
ಸಾಧು ಸಂತರ ಮತ್ತೆ ಕೃಷಿಪಂತ ಶ್ರೀಮಂತರ
ಪುಣ್ಯ ಕೃಷ್ಣಾಜಿನದ ಹಾಸಾಗಿ ಪೃಷ್ಠ ಚುಂಬನ ಸುಖಕೆ
ಈ ಜನ್ಮ ಸಾರ್ಥಕ್ಯ ಪಡೆಯಬೇಕು'

ಎಂದು ವ್ಯಂಗ್ಯವಾಗಿ ಎಚ್ಚರಿಕೆ ನೀಡಿರುವುದರಲ್ಲಿ ಅಚ್ಚುಕಟ್ಟಾದ ದಿಟ್ಟತನದ ಪ್ರತಿಪಾದನೆಯಿದೆ. ಸಾತ್ವಿಕತೆಯನ್ನೆ ದೌರ್ಬಲ್ಯವೆಂದು ಭಾವಿಸುವ ಈ ಕಾಲದಲ್ಲಿ ಈ ಬಗೆಯ 'ಕಿವಿಮಾತು' ಅಪೇಕ್ಷಣೀಯವಾದುದೇ ಸರಿ.

ಪುಟ್ಟ ಕವಿತೆಗಳು ಕೆಲವು ಚಿತ್ತಾಕರ್ಷಕವಾಗಿವೆ. ಅವುಗಳಲ್ಲಿ ಅಲ್ಲಲ್ಲಿ ಕಾವ್ಯ ವಾಗಿದ ತಾಣಗಳನ್ನು ಗುರುತಿಸಬಹುದು. 'ಸತೀ' ಎನ್ನುವ ಕವಿತೆ ತುಂಬ ಚೆನ್ನಾಗಿದೆ

ನಿರ್ಬೀಜ ದ್ರಾಕ್ಷಿ ಗೊಂಚಲ ನೋಟ,
ಕಾದು ಕೆನೆಗೊಂಡ ನಾಡಹಸುಹಾಲ ಸವಿಯ
ಬನಿ ಮಾತು,
ಕಾದು ಆರಿದ ಹಾಲ ಪೆಪ್ಪಟ್ಟ ಮೌನ,
ಮಂತಿಡದ ಘಟ್ಟಿ ಕೆನೆ ಮೊಸರ ನಗೆ,
ಕಡೆತಕ್ಕೆ ತೇಲಿ ಬರುವಂಥ ತುಂತುರು
ಬೆಣ್ಣೆ ಬಗೆ !
ಕಮ್ಮನೆ ಹದಕಾಸಿದಪ್ಪಟ
ತುಪ್ಪದ ಸ್ನೇಹ,
ನಾರಾಯಣನ ದೇಗುಲದ
ತುಪ್ಪದಾರತಿಯ ಶಾಂತ ಕಾಂತಿ !

ಇದೇ ಬಗೆಯ 'ಶಿವ ಕಾಣದ ಚಿತ್ರ', 'ಕಣೆಹಂದಿ' (ಸುದ್ದಿಯನ್ನು ಕಣೆಹಂದಿಗೆ ಹೋಲಿಸಿರುವುದು ಚೆನ್ನಾಗಿದೆ), 'ಬಿಡಿಕಡ್ಡಿಗಳು', 'ಅನಂಗ ಆಸೆ'– ಕಿರುಗವನಗಳು ಕೂಡ ಓದಬೇಕಾದುವು.

'ಕವಿಗಳಿಗೆ ವನಿತೆಯರ ಎಚ್ಚರಿಕೆ'ಕವನದ ಈ ಸಾಲುಗಳನ್ನು ನೋಡಿ :
'ನಮ್ಮ ವೃತ್ತಸ್ತನದ ಬರುಕಲಶಗಳ
ಪೂಜಿಸದ ರಾಜಿಸದ ನಿಮ್ಮ ಘನ ಕಾವ್ಯವಿಲ್ಲ ;...
ಮುಂಗುರುಳ ಕೊಂಡಿಯುಂಗುರದೊಳಗೆ ಸಿಲುಕಿರದ ಕವಿಮೀನರಿಲ್ಲ:....
ದಂತ ಮಾಣಿಕ್ಯಗಳ ಮಂದದ್ಯುತಿಗೆ ಅಂಧಗೊಂಡಿರದ,
ಹಣತೆ ಕಣ್ಣುಗಳಲ್ಲಿ ರೆಕ್ಕೆಮೈ ಸುಟ್ಟಿರದ ಕವಿಪತಂಗವಿಲ್ಲ'

ಇಂಥ ಶೃಂಗಾರ, ಪ್ರಣಯ, ಸೌಂದರ್ಯಗಳ ಪ್ರಸ್ತಾಪ ಬಂದಾಗಲೆಲ್ಲ ಇವರ ಕಾವ್ಯಕ್ಕೆ ಪೂರ ಬರುತ್ತದೆ; ಕವಿಯ ನಾಲಗೆ ಹಲವಾಗುತ್ತವೆ, ಅನೇಕ ಸುಂದರ ಪ್ರತಿಮೆಗಳನ್ನು ಕಡೆದು ನಿಲ್ಲಿಸುತ್ತಾರೆ. ಗಮನಿಸಿ :

'ಈಟಿ ಮೊನೆ ಶಿರಸ್ತ್ರಾಣದೆದೆ ಬೆಡಗಿನವಳೆ....
ಉಬ್ಬು ಹಿಮ್ಮಡಿ ಮೆಟ್ಟನುಬ್ಬರದಲೆಯು
ತೂಗು ಪಲ್ಲಕ್ಕಿಯಾನದವಳೆ.
ಗುಡಿಯು ಜೋಡಿನಗಾರಿ ಹೊತ್ತಕೋಲೆ
ಬಸವನ ಗತಿಯವಳೆ' ('ನಿನ್ನ ಸ್ವಂತದ್ದೆಷ್ಟು ?')

'ಮೌನದಲೆ ಮದನಮಂಸ್ತ್ರಿಕೆ ಹೂವ
ಸೌಸವಿಸುವವಳು' ('ಏಕಿವಳ ಸೃಷ್ಟಿಸಿತು ಪ್ರಕೃತಿ')

ಮೊದಲೆ ಮಳೆ ಬಿದ್ದ ಮರುಹಗಲ ಮಲ್ಲಿಗೆಯು ತೋಟ
ನಿನ್ನೊಲಿದ ಸರುಗಂಪು ನೋಟ' ('ನಕ್ಕಾಗ ನೀನು')

ಇಂಥ ಚಿತ್ರಗಳ ಸರಮಾಲೆ ಮೂಡಿ ಪರಿಮಳ ಸೂಸುತ್ತದೆ; ಪದಪುಂಜಗಳು ಕಳೆಗೊಂಡು ಹೊಳೆಯುತ್ತವೆ, ಜುಮ್ಮುದಟ್ಟಿಸುತ್ತವೆ. 'ಕರೆಕನ್ಯೆ'ಪದ್ಯ ಈ ದೃಷ್ಟಿಯಿಂದ ಗಮನೀಯವಾದುದು :

'ಹಗಲು ಸೋಫಾ ಇರುಳು ಬೆಡ್ಡಾದ ಚದುರೆ
ನೀನಾರ ಮಧುರೆಯಾರ ಕುದುರೆ ?
ಯಾರ ಬೆಣ್ಣೆ ಬ್ರೆಡ್ಡಾದೆ ಯಾರ ಪೂರಕ್ಕೆ ಒಡ್ಡಾದೆ ನೀನು ?....
ಗುಂಡಿಯೊತ್ತಿದರೆ ಸುರುಳಿ ಒಳೆಯೆಲ್ಲ ಕೆಂಗನೆಕಾವ
ವಿದ್ಯುದ್ ಹೀಟರನುರಾಗದವಳೆ'

ಇತ್ಯಾದಿ ಹೊಸ ಹೋಲಿಕೆಗಳು ಖುಷಿಕೊಡುತ್ತವೆ. ಈ ಸಂತಸದ ಚೆಲುವು ಕೆಲವೊಮ್ಮೆ 'ಕೆಂಜಗವಿಡಿದ ಕಿತ್ತಲೆಯುಗಿಡದ ಮೈ ಚೆಲುವು' ಎನ್ನುವ ಎಚ್ಚರಿಕೆಯೂ ಇದೆ! ಮತ್ತೊಂದು ವೈಶಿಷ್ಟ್ಯವೆಂದರೆ ಕಾಮವನ್ನೂ ಕೃತಕೃತೆಯ ಭಾವವನ್ನಾಗಿ ಪರಿಗಣಿಸುವ ಗುಣ; ಪಾವಿತ್ರ್ಯತೆಯ ಬೇಲಿಯೊಳಗೇ ಅದನ್ನು ಸೃಷ್ಟಿಸುವ ಗಾಂಭೀರ್ಯ ಈ ಭಾವವನ್ನು 'ಪೂರ್ಣಾಹುತಿ' ಹಾಗೂ 'ನಿನ್ನ ದೇಗುಲದಲ್ಲಿ' ಕವನಗಳಲ್ಲಿ ಗಮನಿಸಬಹುದು. ಹೀಗೆ ಕಾಮಪ್ರೇಮಗಳ ಸಂಬಂಧದ ಹಲವು ಸುಳಿಗಳು, ಸುಳಿವುಗಳನ್ನು ಕವಿ ನೀಡಿದ್ದಾರೆ. ('ತಾರೆ', 'ಕಾಂತೆಯರ ಕಾಂತಕ್ಷೇತ್ರದಲ್ಲಿ', 'ಕಾಂತವಲಯದ ಆಚೆಗೆ', 'ನಿತ್ಯಕನ್ಯೆ', ಮುಂತಾದ ಕವಿತೆಗಳನ್ನು ನೋಡಬಹುದು).

ಮಾನವೀಯತೆಯ ಪತನ

ಈಚಿನ ದಿನಗಳಲ್ಲಿನ ಮೌಲ್ಯಗಳ ಪತನಕ್ಕೆ ಮಾನವೀಯತೆಯ ಅವನತಿಗೆ ಕವಿ ಪ್ರತಿಕ್ರಿಯಿಸಿದ್ದಾರೆ. 'ಅಪಮಾನಗೊಂಡ ಉಪಮಾನ'ಶೀರ್ಷಿಕೆಯ ಪದ್ಯದಲ್ಲಿ 'ಸಾಧುಗಳ ಮನದಂತೆ ನಿರ್ಮಲ ವಿಪುಲಾಂಬು ತಮಸೆ', 'ನೀಲಗಗನಾಭ', 'ನಿರ್ಲಿಪ್ತ ಪವಮಾನ' ಎಂದು ಈಗ ಉಪಮಿಸಲು ಸಾಧ್ಯವಾಗದೆಂದು ಕವಿ ಮಿಡುಕಿದ್ದಾರೆ. ಏಕೆಂದರೆ ಈಗ ನೀರಿಗೆ ಆಮ್ಲರುಚಿ, ಧೂಮರುಚಿ, ರಕ್ತರುಚಿ ಬಂದಿದೆ; ಸಿಂಧು ಗಂಗೆಯರೂ ಅಸ್ಥಿಪಂಜರೆಯರು, ಅಸ್ಥಿಗರ್ಭೆಯರು, ಶವ ಸಂವಹನ ಲೋಲೆಯರು

ಆಗಿದ್ದಾರೆ! ಆಕಾಶದಲ್ಲಿ ಹೊಗೆದುಂಬಿ ನೀಲಿ ಬಣ್ಣವೇ ಕಾಣದು; ಗಾಳಿಯಲ್ಲೂ ವಿಷ ಸೇರಿದೆ! ನಾಗರಿಕತೆ ಬಂದಿದೆ ಎಂದು ಹೆಮ್ಮೆ ಪಡುತ್ತೇವೆ. ಆದರೆ ಅದು ತಂದ ಭಾಗ್ಯವೇನು? 'ನಾಗರಿಕ ಚೆಲುವು', 'ಊರು ನಗರವಾದಂತೆಲ್ಲ' ಕವನಗಳಲ್ಲಿ ಅದರ ವಿಡಂಬನೆಯಿದೆ.

'ನೀನೇನ ಊಹಿಸಿರುವೆ?' ಕವಿತೆಯಲ್ಲಿ ಅಣ್ವಸ್ತ್ರಗಳ ತಯಾರಿಕೆಯ ಅಪಾಯವನ್ನು ಕುರಿತು ಎಚ್ಚರಿಸಿದ್ದಾರೆ. 'ವಸ್ತ್ರಾಪಹರಣ' ಹಾಡುಹಗಲಲ್ಲೆ ವಸ್ತ್ರಾಪಹರಣವಾಗುತ್ತಿದ್ದರೂ ಆಗಿನಂತೆ ಈಗ ಭೀಮ ಮತ್ತು ಗೋಪಶ್ಯಾಮರಿಲ್ಲ. 'ಉಚಿತ ಪ್ರೇಕ್ಷಣೆಯೆ ಈಗ ಸಾರ್ವಭೌಮ' ಎನ್ನುವ ದಾರುಣ ಸ್ಥಿತಿಯ ವಿವರಣೆ 'ಸಾಕುಬಿಡಂಪೊಡವಿನಾಶನ ಲೀಲೆ', 'ಕ್ಷಮೆಗೆ ನಮ್ಮ ಕೊಡುಗೆ', 'ಮತ್ತೆ ಹೊಲಸೇಕೆ ತೂರಬೇಕು' ಇವೆಲ್ಲ ಇದೇ ರೀತಿಯ ವಸ್ತುವಿನ ರಚನೆಗಳು.

ವ್ಯಕ್ತಿತ್ವದ ಅವನತಿಯನ್ನು ವಿಡಂಬಿಸುವ ಪದ್ಯಗಳೂ ಇವೆ. ಅಗತ್ಯವಾದಾಗ ಕತ್ತೆಯ ಕಾಲು ಕಟ್ಟುವ, ಕಾರ್ಯಾನಂತರ ಅದರ ಕೈಕಾಲು ಕಟ್ಟಿ ಆಚೆಗಟ್ಟುವ ದ್ವಂದ್ವ ನೀತಿಯ, ಸಮಯಸಾಧಕರ ಚಿತ್ರ 'ಕಾರ್ಯವಾಸಿ'ಯಲ್ಲಿದೆ. 'ಬುದ್ಧಿವಂತ ಬುದ್ಧಿಜೀವಿಗಳ'ನ್ನು ರಾಷ್ಟ್ರೀಯ ಪರವಾನಗಿಯ ಸಾರಿಗೆಯ–ಭೋಗಾರಾಮ ವಾಹನಗಳು, ಪ್ರೀತಿಗಳ ನಾಟಕದರ ಮನೆಯ ಕಟ್ಟಿ ಸಂಸಾರ ಹೂಡುವತಿರತರು ಇತ್ಯಾದಿ ಹೊಸ ವಿಶೇಷಣಗಳಿಂದ ಕರೆದಿರುವುದು ನವೀನವಾಗಿದೆ. ವೈಜ್ಞಾನಿಕ ದೃಷ್ಟಿಯ ವರ್ತಕರು ('ಉಗ್ರವೈಚಾರಿಕರು') ಎನ್ನುವ ಪದಪುಂಜ ವೈಚಾರಿಕತೆಯನ್ನೂ ವ್ಯಾಪಾರಕ್ಕಿಟ್ಟ ವಿಪರ್ಯಾಸದ ಸ್ಥಿತಿಯ ದ್ಯೋತಕ. ಈ ನಿಟ್ಟಿನಲ್ಲಿ 'ಯೋಜನೆಯ ರಾಜಕಾರಣಿಗಳು' ಗಮನಾರ್ಹ;

'ಚಂದ್ರನ ಲಾಂದ್ರವ ಮನೆಮನೆಗೂ ಬಿಗಿಸುವರು,
ಇಂದ್ರನ ಸಿಂಹಾಸನವನು ರಾಷ್ಟ್ರೀಕರಿಸುವರು'

ಇತ್ಯಾದಿ ಅವರ ಕಾಮರೂಪಗಳನ್ನು ಹೇಳುತ್ತ, ಕೊನೆಯಲ್ಲಿ.

ಗೊಮ್ಮಟನಿಗೆ ಮಸ್ತಕ ಧಾರೆಯ ಸುರಿಸುವರು
ಚಂದನ ಪೂಜೆಯ ನೆರೆಸುವರು
ಜನರಿಗು ಸಮಪೂಜೆಯ ಕೊಡಿಸುವರು
ಸಮಧಾರೆಯ ಬಿಡಿಸುವರು

ಎಂದು ವ್ಯಂಗ್ಯವಾಗಿ ಟೀಕಿಸಿದ್ದಾರೆ, ಅನರ್ಥಕಾರಿ ನಾಯಕರನ್ನು 'ಮನೆ ಕೆಲಸದಾಕೆ, ಕವಿತೆಯಲ್ಲಿ ಕೆಲಸದವಳ ಕಣ್ಣಿನ ಮೂಲಕ ಮಾಲೀಕರ ಬಣ್ಣ ಬಯಲು ಮಾಡಿರುವ ತಂತ್ರ, ರೀತಿ ಆಕರ್ಷಕವಾಗಿದೆ.

ಇಷ್ಟೆಲ್ಲ ನೋಡಿದಾಗ ಸುಜನಾರ ಕಾವ್ಯದ ವಸ್ತು ವೈವಿಧ್ಯತೆಯ ಪರಿಚಯ ವಾದಂತಾಯಿತು. ಎಲ್ಲವನ್ನೂ ಪದ್ಯವಾಗಿಸುವ ಚಪಲ ಅವರಲ್ಲಿದೆ. ಹೀಗೆ ಕೈ ಹಾಕಿದ ವಸ್ತುವನ್ನೆಲ್ಲ ಮೈದುಂಬಿಸಿ ಎದುರಿಗೆ ಧುತ್ತನೆ ನಿಲ್ಲಿಸಲು ಬೇಂದ್ರೆಯವರಂಥ ಪ್ರತಿಭಾನ್ವಿತ ಕವಿಗಳಿಗೆ ಮಾತ್ರ ಸಾಧ್ಯವೇನೊ ? ನೂರಎಂಬತ್ತು ಪದ್ಯಗಳ ಈ ಸಂಕಲನ ದಲ್ಲಿ ಉತ್ತಮ ಗುಣಮಟ್ಟದ ರಚನೆಗಳಿಗಾಗಿ ತಡಕಿದಾಗ ಬೆರಳೆಣಿಕೆಗೂ ದೊರೆಯುವು ದಿಲ್ಲ. ಹಲವು ಪದ್ಯಗಳಲ್ಲಿ ಉತ್ತಮ ಮಟ್ಟದ ಕಾವ್ಯಪ್ರಜ್ಞೆ ಅಲ್ಲಲ್ಲಿ ಕೆಲವು ಸಾಲುಗಳಲ್ಲಿ ನಕ್ಷತ್ರದಂತೆ ಮಿಣುಕಿ ಕಣ್ಣು ಹೊಡೆಯುತ್ತದೆ (ಉದ್ಧರಿಸಬಹುದಾದ ಸಾಲುಗಳಂತೂ ವಿಪುಲವಾಗಿ ಸಿಗುತ್ತವೆ ; ಅಂಥಕಡೆ ಪ್ರತಿಭೆ ಮಿಂಚಿ ಮತ್ತೆ ಮಾಯವಾಗಿಬಿಡುತ್ತದೆ!). ಆದರೆ ಆ ಪ್ರಜ್ಞೆ ಇಡಿಯಾಗಿ–ಒಂದು ಕವನದಲ್ಲಿ–ತೊಡಗಿಕೊಂಡ ಉದಾಹರಣೆಗಳು ಬಹಳ ಕಡಮೆ. ಈ ಕವಿಯ ಬಹುಮುಖ್ಯವಾದ ಕೊರತೆಗಳಲ್ಲಿ ಇದೂ ಒಂದಾಗಿದೆ.

ಪ್ರಾಸ, ಲಯಗಳು ಅರ್ಥಾನುಸಾರಿಯಾಗಿ ಬಳಕೆಯಾಗಿರುವುದು ಅಪರೂಪ ತಮ್ಮಮಟ್ಟಿಗೆ ತಾವೇ ವಿಜೃಂಭಿಸುವುದೇ ಹೆಚ್ಚು. ಅಲ್ಲೆಲ್ಲಾ ಥಾಲುತನ ಹೊಳೆಯು ತ್ತದೆಯೇ ಹೊರತು ವಸ್ತುವಿಗೆ ಹೊಸ ಆಯಾಮಗಳು ಮೂಡುವುದಿಲ್ಲ. ಕಾವ್ಯ ಜೀವಾಳ ಸಪ್ಪೆಯಾಗಿಬಿಡುತ್ತದೆ ; ಕೆಲವೊಮ್ಮೆ ತತ್ತರಿಸುವುದೂ ಉಂಟು ! ಕವಿಯ ಶಬ್ದ ಪರಿಚಯ ಮಾತ್ರ ವಿಸ್ಮಯ ಹುಟ್ಟಿಸುತ್ತದೆ, ಅವರ ಆಳವಾದ ಅಧ್ಯಯನವನ್ನು ಸೂಚಿಸುತ್ತದೆ. ಕವಿಗೆ ಅಗತ್ಯವಾದ ಪರಿಕರಗಳು ಹಲವಿದ್ದರೂ ಕೆಲವು ದೌರ್ಬಲ್ಯ ಗಳ ಕಾರಣ ಕವಿ ಸೋಲುತ್ತಾರೆ. ಕೆಲವು ಕಡೆಗಳಲ್ಲಿ ತತ್ವ, ವೇದಾಂತದ ಭಾರವೇ ಹೆಚ್ಚಾಗಿ ಕಾವ್ಯ ಪೂರ್ಣ ಬೆಳೆಯಂದೆ ಕುಂಠಿತವಾಗಿರುವುದುಂಟು.

ಪುಟ್ಟಕವಿತೆಗಳಲ್ಲಿ ಕೆಲವನ್ನೋದಿದಾಗ ಕೆಲವೇ ಮಾತುಗಳಲ್ಲಿ ಅಚ್ಚುಕಟ್ಟಾಗಿ ಭಾವ ಕಟ್ಟುವ ಕ್ರಿಯೆ ಅವರಿಗೆ ಸಿದ್ಧಿಸಿಲ್ಲವೆಂದು ಹೇಳಲಾಗದು ಅನ್ನಿಸುತ್ತದೆ. ಆದರೆ ಆ ಕ್ರಿಯೆ ಹೆಚ್ಚು ಹೊರೆ ಹೊತ್ತಾಗ ತಡವರಿಸಿಕೊಳ್ಳಲಾಗದೆ ಹೋಗುತ್ತದೆ ; ಭಾವ ವನ್ನು ನಿಭಾಯಿಸಿ ನಿಲ್ಲುವ ಸಾಮರ್ಥ್ಯದ ಕೊರತೆಗೆ ತುತ್ತಾಗುತ್ತದೆ. ಅರ್ಥ ಭರಿಸುವ ಪ್ರತಿಮೆಗಳ ನಿರ್ಮಾಣದತ್ತ ಸುಜನಾರು ಗಮನ ಹರಿಸುವ ಆಗತ್ಯವಿದೆ.

ವರ್ಣನೆಗೇ ಹೆಚ್ಚು ಪ್ರಾಶಸ್ತ್ಯ ದೊರೆತು ಚಿತ್ರಕಶಕ್ತಿ ಉಕ್ಕಿಹರಿಯುತ್ತದೆ, (ನಿಜಕ್ಕೂ ಸುಜನಾರ ಚಿತ್ರಕಶಕ್ತಿಗೆ ಶಹಭಾಸ್‌ಗಿರಿ ಸಲ್ಲಲೇಬೇಕು) ಒಂದೇ ವಿಷಯಕ್ಕೆ ಹಲವು ಅನ್ನಿಸಿಕೆಗಳು, ಹೋಲಿಕೆಗಳು ಪೇರಿಸಲ್ಪಟ್ಟು ಏಕತಾನತೆಯ ಅನುಭವವಾಗು ತ್ತದೆ. ಅರ್ಥದಲ್ಲಿ ಬೆಳೆಯದ ಚಿತ್ರಪಟ್ಟಿಕೆಗಳ ಹೆಚ್ಚಳ, ಒಂದೇ ವಸ್ತುವನ್ನು ಮತ್ತೆ ಮತ್ತೆ ಮುಟ್ಟಿ ನೋಡಿ ಆನಂದಿಸುವ ಆತ್ಮರತಿಯ ಭಾವವಾಗಿಬಿಡುತ್ತದೆ. ಈ ಕಾರಣ ದಿಂದಾಗಿ ಬೇರೆಬೇರೆ ಪದ್ಯಗಳನ್ನೋದುತ್ತಿದ್ದರೂ ಒಂದನ್ನೇ ಮತ್ತೆ ಮತ್ತೆ ಓದುತ್ತಿರು ವಂತೆ ಭಾಸವಾಗಿ ನಮ್ಮನ್ನು ನಾವೇ ಅನುಮಾನಿಸಿಕೊಳ್ಳುವ 'ಗುಮಾನಿ' ತಲೆದೋರು ತ್ತದೆ ! ಸಂಕಲನದ ೧೮೦ ಕವಿತೆಗಳನ್ನೂ ಗಮನಿಸಿದರೂ ಇವಿಷ್ಟೇ ಕೊನೆಯ ಮಾತು

ಗಳಾಗುವುದು ಕವಿಯ ಬೆಳವಣಿಗೆಯ ನಿಲುಗಡೆಯ ಸೂಚಕ ಅನ್ನಿಸುತ್ತದೆ. ಬೆಳೆಯುವ ಕವಿಯಲ್ಲಿ ಈ 'ಸ್ಥಗಿತತೆ' ಅಷ್ಟು ಅಪೇಕ್ಷಣೀಯವಾದುದಲ್ಲ.

ಸಾಂಕೇತಿಕ ಪ್ರಯತ್ನಗಳು ಕೂಡ ಈ ದೌರ್ಬಲ್ಯಗಳ ಕಾರಣ ಮಣ್ಣು ಮುಕ್ಕುತ್ತವೆ. ಚಿತ್ರಗಳನ್ನು ಕಟ್ಟುವುದರಲ್ಲೇ ಸಂತೃಪ್ತರಾಗುವ ಕವಿ ಬಿಡಿಭಾಗಗಳ ಕುಸುರಿ ಕೆಲಸದಲ್ಲಿ, ಅಲಂಕರಣದಲ್ಲಿ ಇಡಿಯ ಶಿಲ್ಪದ ಭಾವವನ್ನೇ ಮರೆತುಬಿಡುವ ಅಪಾಯಕ್ಕೆ ಪಕ್ಕಾಗುವುದು ವಿಷಾದಕರ. ಇದು ಕಾವ್ಯ ರಚನೆಯ ಮಾರ್ಗದಲ್ಲಿ ದಾರಿತಪ್ಪುವ ಮನೋಧರ್ಮ ಎನ್ನದೆ ವಿಧಿಯಿಲ್ಲ.

ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ, 'ಬಾಲ್ಯದ ಪ್ರೇಯಸಿಯನ್ನು ನಡುಹರಯದಲ್ಲಿ ಕಂಡಾಗ' ಕವನ ಇಲ್ಲಿ ಚಿಕ್ಕಂದಿನ ನಲ್ಲೆಯನ್ನು ಮಧ್ಯವಯಸ್ಸಿನಲ್ಲಿ ಕವಿ ಕಂಡಾಗ ಮೂಡಿದ ಭಾವನೆಗಳ ಚಿತ್ರಗಳು ತುಂಬ ಚೆನ್ನಾಗಿವೆ. ಸರಮಾಲೆಯಂತೆ ಅವು ಪೋಣಿಸಲ್ಪಟ್ಟಿದ್ದರೂ ನಿಜವಾದ ಅಂತರಂಗದ ತುಮುಲದ ಸ್ಥಿತಿಗತಿಗಳ ಪ್ರಸ್ತಾಪವೇ ಗೈರುಹಾಜರು ! 'ನಿನ್ನ ಸಂಕೀರ್ಣಕ್ಕೆ ನಮನ' ಮುಂತಾದ ಹಲವಾರು ಪದ್ಯಗಳಲ್ಲಿ ಉದಾಹರಣೆಗಳ ಬಾಹುಳ್ಯವಿದ್ದರೂ ಒಂದೇ ಭಾವ ಹರಿಯುತ್ತಿರುವಂತೆ ಭಾಸವಾಗುತ್ತದೆ. ಹೀಗೆ ಅನೇಕ ಕವನಗಳ ಸ್ವರೂಪ ಒಂದೇ ಬಗೆಯದಾಗಿದೆ ! 'ಕೃಷ್ಣ ನಿನ್ನ ಕಂಡರೆ ನನಗೇಕೊ' ಹಾಗೂ 'ಅನಿಮಿತ್ತ, ಬಂಧುಗಳೇ' ಕವಿತೆಗಳಲ್ಲಿ ಅಡಿಗರ ದಟ್ಟವಾದ ಪ್ರಭಾವ ಇಣುಕುತ್ತದೆ.

ಕವಿಯ ಮಹತ್ವಾಕಾಂಕ್ಷೆಯ ಕವನಗಳಾದ 'ಒಂದೆ ಸೂರಡಿಯಲ್ಲಿ','ಉಡಿದಾರು', 'ಸೊನ್ನೆಯೆರಡರ ನಡುವೆ', 'ಕರೆಕನ್ಯೆ', 'ಮನೆಕೆಲಸದಾಕೆ' 'ಜಿಂಕೆಯಾಗಿಲ್ಲಿ ಹುಟ್ಟಿದ ಮೇಲೆ' –ಕವನಗಳಲ್ಲಿ ಕೂಡ ಈ ಎಲ್ಲ ಗುಣಾವಗುಣಗಳು ಕಾಣಸಿಗುತ್ತವೆ. ಮೊದಲ ಮೂರನ್ನು ಪರಿಶೀಲಿಸಬಹುದು.

ಸಂಕಲನದ ಮೊದಲ ಕವನವಾದ 'ಸೊನ್ನೆಯೆರಡರ ನಡುವೆ' ಹುಟ್ಟಿನ ಹಿಂದಿನ ಹಾಗೂ ಸಾವಿನ ಮುಂದಿನ ಶೂನ್ಯತೆಯ ಕಡೆ ನಮ್ಮ ಗಮನ ಸೆಳೆಯುವುದರಲ್ಲಿ ಗೆಲ್ಲುತ್ತದೆ. ಯೌವನದಿಂದ ಬಾಲ್ಯಕ್ಕೆ, ಹಿಂದು ಹಿಂದುಕ್ಕೆ ನೆನಪಿನ ಸುರುಳಿ ಬಿಚ್ಚಿಕೊಳುವಾಗಿನ ನಿರೂಪಣೆ ಹೀಗಿದೆ :

'ನೆಲವ ನಾಲಿಗೆಯಿಂದ ನುಡಿಸಿದ್ದ ರುಚಿರದಿನದ
ಮೈಯೆಲ್ಲ ನೆಲದಪ್ಪುಗೆಗೆ ಉರಗವಾಗಿ
ಚಾಚಿದ್ದ ಈಜಿದ್ದ ಮುದ್ದು ದಿನದ,
ತಾಯೆದೆಯ ಮೇಲುಗಡೆ ನಿದ್ದೆ ಹೋಗಿದ್ದ
ಕ್ಷೀರಾಬ್ಧಿಶಯನ ದಿನದ–'

ಹೀಗೆಯೇ ಜೀವ ಸವೆದು ಕಾಲಕಳೆದು ನಾವು 'ಮೈಗರೆದ'ನಂತರ ಏನಾಗತ್ತೇವೊ ತಿಳಿಯದು.

'ನಾನಿನ್ನು ಬರಿ ಶೂನ್ಯವೇ ನಾಚಿಗೆ ?
ಸೊನ್ನೆಯೆರಡರ ನಡುವೆ ಎಷ್ಟೆಲ್ಲಬನ್ನ ?
ಏಕೆಲ್ಲ ಇಷ್ಟುಗುನ್ನ ? ಏನೆಲ್ಲ ಸುಣ್ಣ ಬಣ್ಣ'

ಇತ್ಯಾದಿ ಪ್ರಶ್ನಾರ್ಥಕ ವಿಸ್ಮಯದಲ್ಲಿ ನಿಲ್ಲಿಸಿರುವುದು ವೈರಾಗ್ಯ ಪರವಾಗಿದೆ. ಇಲ್ಲಿ ಸಲ್ಲುವ, ಬದುಕ ಗೆಲ್ಲುವ ಸೂಚನೆಯೇ ಇಲ್ಲದೆ ಮತ್ತು ಪ್ರತಿಪಾದಿತವಾಗಿರುವ ತತ್ವದ್ದೇ ಮೇಲುಗೈಯಾಗಿ ತೀವ್ರ ಕೊರತೆಯೊಂದರ ಅನುಭವವಾಗಿಬಿಡುತ್ತದೆ. ಇಲ್ಲಿ ಒಂದು ಮಾತನ್ನು ಹೇಳಬಹುದು. ಯಾವುದೇ ಪದ್ಯ ಓದಿ ಮುಗಿಸಿದ ಮೇಲೂ ಮೆಲುಕು ಹಾಕುವಂತಿರಬೇಕು ; ಹಲವು ಕಾಲ ಅದು ನಮ್ಮ ಮನಸ್ಸನ್ನು ಕಾಡಬೇಕು (ಹಾಂಟ್ ಮಾಡಬೇಕು) ಕೊನೆಯ ಪಕ್ಷ ಓದಿದ ದಿನವಾದರೂ ಮನದಲ್ಲಿ ಗುಂಯ್ ಗುಡಬೇಕು. ಹಾಗಾಗಲು ಅರ್ಥಪರಂಪರೆ ಹೊರಡಬೇಕು.

'ಉಡಿದಾರ' ಸೊಗಸಾದ ಸಾಂಕೇತಿಕ ಪ್ರಯತ್ನ. ಅಪ್ಪಕೊಟ್ಟ ಉಡಿದಾರ ಇಲ್ಲಿ ಹಿಂದಿನಿಂದ ನಡೆದು ಬಂದ ಸಂಸ್ಕೃತಿ, ಪರಂಪರೆ, ತಾಳಿಗಳ ಸಂಕೇತವಾಗುತ್ತದೆ. ಅದೀಗ ಬಿಗಿಯಾದರೂ ಸೊಂಟಕ್ಕೆ ಸಾಲದೆ ಹೋಗಿದ್ದರೂ ನಮ್ಮದಲ್ಲದ ವಿದೇಶಿ ಸಂಸ್ಕೃತಿಯ ಪೋಟಿ ಬಿಗಿದು ಅದನ್ನು ಕಟ್ಟಿಕೊಳ್ಳಲಾರೆ ಎನ್ನುವಾಗ ಭಾರತೀಯತೆಯ ಒಲವು ಸ್ಪಷ್ಟ (ಸತ್ತ ಯಾವುದೊ ಅಬ್ಬೆಪಾರಿಯ ತೊಗಲ ಸುತ್ತಿಕೊಂಡಂಥ ಗುಟ್ಟು ಗಳ ನಾಕಟ್ಟಡಲಿ ? ಎಂಥ ಸುಖಪಡಲಿ ?) ಮೂರೆಳೆಯ ಅಂದಿನ ಉಡಿದಾರ ಕ್ರಮೇಣ ಒಂದೆಳೆಗೆ ಬಂದು ಮುಂದೆ ಅದೂ ಸಾಲದಾಗುತ್ತಿರುವ ಸೂಚನೆಯಂತೂ ತೆಳ್ಳಗಾಗುತ್ತಿರುವ, ಲಘುವಾಗುತ್ತಿರುವ ನಮ್ಮ ಸಂಸ್ಕೃತಿಯನ್ನು ಸಮರ್ಥವಾಗಿ ಬಿಂಬಿಸುತ್ತದೆ. ನಾನು ಉದ್ದಾಮನಲ್ಲ ದಾಮೋದರ ಎನ್ನುವಾಗ ಇಲ್ಲಿನ ಸುಖ, ಸಾಧ್ಯತೆಗಳನ್ನು ಸೂರೆಗೊಳ್ಳಬೇಕೆನ್ನುವ ಆರೋಗ್ಯಕರ ದೃಷ್ಟಿಯೂ ಇಲ್ಲದಿಲ್ಲ. ಸಾಲದಾಗುವ ದಾರಕ್ಕೆ ಮನೆಯಲ್ಲೆ ಹೊಸೆದ ರೇಸಿಮೆಯ ದಾರವನ್ನಷ್ಟೆ ತುದಿ ಕೊಂಡಿಗೆ ಬಿಗಿದು ಸೊಂಟಕ್ಕೆ ಹದವಾಗಿ ಸುತ್ತಿಕೊಳ್ಳುವುದಾಗಿ ಹೇಳುತ್ತಾರೆ. ಒಂದು ದೃಷ್ಟಿಯಿಂದ 'ಬೆತ್ತಲಾಗುವತನಕ ನಾ ಉದ್ದಾಮನಾಗಿರಲಾರೆ ; ಆತನಕ ಹೇಗೋ ಅಪ್ಪ ಕೊಟ್ಟಿದ್ದನ್ನೆ ಒಪ್ಪವಾಗಿಟ್ಟುಕೊಳುವೆ' ಎನ್ನುವ ಕೊನೆಯ ನಿರ್ಣಯ ಕೂಡ ಮಿತವೂ ಸಂಕುಚಿತವೂ ಆಗಿಬಿಡುತ್ತದೇನೊ ? (ಒಳ್ಳೆಯ ದಾರ–ಬೇರೆ ಕಡೆಯದೇ ಆಗಲಿ, ಸಿಕ್ಕಲ್ಲಿ, ಕಟ್ಟಿಕೊಂಡರೆ ತಪ್ಪೇನು ? ಎಂದು ನನ್ನ ಅಭಿಪ್ರಾಯ) ಈ ಬಗೆಯ ಕೆಲವು ಪದ್ಯಗಳಲ್ಲಿ ಸಂಕೇತಗಳನ್ನು ಬಳಸಿದ್ದರೂ ಗದ್ಯದಲ್ಲಿ ಬಳಸಿದಂತೆ ತೋರು ತ್ತದೆಯೇ ಹೊರತು ಕಾವ್ಯ ಶರೀರ ಪಡೆದುಕೊಳ್ಳುವುದೇ ಇಲ್ಲ.

'ಒಂದೆ ಸೂರಡಿಯಲ್ಲಿ' ಕವಿಯ ಮನೋಧರ್ಮ, ಮಿತಿಗಳೆರಡರ ದ್ಯೋತಕ.

ಹಲವು ಕೇಂದ್ರಕ್ಕೆ ಶ್ರುತಿಗೊಳಿಸಿಟ್ಟ ನೂರು ರೇಡಿಯೊ
ಒಂದೆ ಸೂರಡಿಯಲ್ಲಿ ಒಂದೆ ಅಂಗಳದಲ್ಲಿ
ಒಂದೆ ಗೋಲದ ಬಾನಿನಲ್ಲಿ
ಹಲವು ಸಂಧ್ಯೆಯ ಯೋಗ !'

ಎನ್ನುವ ಕವನದ ಮುಕ್ತಾಯದ ಸಾಲುಗಳನ್ನು ಮೂರು ಪುಟಗಳ ಕವನ ಅಚ್ಚುಕಟ್ಟಾಗಿ ನಿರೂಪಿಸಿ ಮೌನವಾಗಿ ಬಿಡುತ್ತದೆ; ಹೆಚ್ಚಿನದೇನನ್ನೂ ಹೇಳುವುದಿಲ್ಲ. ರುಚಿಯಾದ ಅಡುಗೆಯನ್ನು ತಯಾರಿಸಿ, ಸವಿಯಾದ ತುತ್ತನ್ನು ತುಟಿವರೆಗೆ ತಂದು ಥಟ್ಟನೆ ಹಿಂತೆಗೆದುಕೊಂಡಂತಾಗುತ್ತದೆ; ಇಂಥ ಕಡೆ ಧ್ವನಿ ಬಳಕೆಯಾದಲ್ಲಿ ಕವನ ಆಸಾವದ್ಯವಾಗುತ್ತದೆ, ಇಲ್ಲವೇ ಸಪ್ಪೆಯಾಗಿಯೇ ಉಳಿಯುತ್ತದೆ.

ಈ ಕವನದ ಆಲೋಚನೆ ಕವಿಯಲ್ಲಿನ ಸ್ಥಾಯೀಭಾವವಾಗಿದೆ. 'ಅರಿಕೆ'ಯಲ್ಲಿ ಇದನ್ನವರು ಸ್ಪಷ್ಟಪಡಿಸಿದ್ದಾರೆ :

"(ಈ ಕವನಗಳಲ್ಲಿ) ಶ್ರುತಿಯೆ ಇಲ್ಲವೆನಿಸಿದರೂ ಅನ್ನಿಸಬಹುದು. ಆ ಬಗ್ಗೆ ನನಗೆ ನಿರಾಶೆಯೇನೂ ಇಲ್ಲ....ಬದುಕು ತುಂಬ ಸಂಕೀರ್ಣವಾದುದು, ಒಂದು ಸರಳ ರೇಖೆಯಲ್ಲಿ ಬಿಚ್ಚಿಡಬರದು". ಈ ಮಾತುಗಳು ನಿಜವಾದರೂ ಅವುಗಳ ನಿರೂಪಣೆ ಯಲ್ಲಿ ವೈವಿಧ್ಯತೆ ಸಾಧಿಸಬೇಕೆನ್ನುವುದನ್ನು ಕವಿ ಮರೆತಂತೆ ತೋರುತ್ತದೆ. ಬದುಕಿನ ಸಂಕೀರ್ಣತೆಯನ್ನು ನಿರೂಪಿಸುವುದರಲ್ಲೇ ಅರ್ಥಪೂರ್ಣತೆಯಿದೆ ಏನೆಂದರೂ ಅನುಭವ, ಅನ್ನಿಸಿಕೆಗಳು 'ಕಾವ್ಯ'ವಾಗಿ ಪರಿವರ್ತಿತವಾಗಬೇಕಾದ್ದು ಮುಖ್ಯ, ಪ್ರಾಥಮಿಕ.

ಸುಜನಾರು ಕಾವ್ಯವನ್ನು ಅರಕ್ಕೇರಿಸದಿದ್ದರೂ ಮೂರಕ್ಕೆ ಇಳಿಸಿಲ್ಲ ಎನ್ನುವುದನ್ನು ಒಪ್ಪಬೇಕು. ಅವರ ಕಾವ್ಯದಲ್ಲಿ ಉತ್ಸಾಹದ ಭರತವಿದೆ, ಭಾಷೆಯಲ್ಲಿ ಲವಲವಿಕೆಯಿದೆ. ವ್ಯಕ್ತಿತ್ವ ಪಕ್ವವಾಗಿರುವಂತೆ, ಪ್ರತಿಭೆಯೂ ಮಾಗಿದಲ್ಲಿ, ಕಾವ್ಯತ್ವ ಸಿದ್ಧಿಸಿದಲ್ಲಿ ಅವರಿಂದ ಉತ್ತಮ ಕಾವ್ಯ ಹೊರಬರುವುದರಲ್ಲಿ ಸಂದೇಹವಿಲ್ಲ. ಆ ಸಾಮರ್ಥ್ಯದ ಅನೇಕ ಸೂಚನೆಗಳು ಈ ಸಂಕಲನದಲ್ಲಿವೆ. ವಸ್ತುವನ್ನು ಎಲ್ಲ ಆಯಾಮಗಳಲ್ಲೂ ಸಮಗ್ರವಾಗಿ ಬೆಳೆಸುತ್ತ, ನಿರೂಪಿಸುವ ಪ್ರತಿಮಾತ್ಮಕ ನಿರ್ಮಾಣ ದತ್ತ ಈ ಕವಿ ಗಮನ ಹರಿಸಲಿ, ಶ್ರೇಷ್ಠ ಕಾವ್ಯ ರಚಿಸಲಿ ಎಂದು ಹಾರೈಸುತ್ತೇನೆ.

ಬೆಸಗರಹಳ್ಳಿ ರಾಮಣ್ಣ ಅವರ 'ಒಂದು ಹುಡುಗನಿಗೆ ಬಿದ್ದ ಕನಸು'

ಬಿನಕನಹಳ್ಳಿ ಜಿ. ನಾಯಕ

"ಕನ್ನಡದಲ್ಲಿ ಕಾದಂಬರಿಯ ತರುವಾಯ ಸಣ್ಣಕತೆಯೇ ಅತ್ಯಂತ ಲೋಕ ಪ್ರಿಯವಾದ ರೂಪವಾಗಿದೆ. ಈ ಮಾತು ಭಾರತದ ಉಳಿದೆಲ್ಲ ಪ್ರಾಂತಗಳ ಸಾಹಿತ್ಯಗಳಿಗೂ ಅನ್ವಯಿಸುತ್ತದೆ[1]".

ಕುರ್ತಕೋಟಿಯವರ ಈ ಮೇಲಿನ ಮಾತು ಎಷ್ಟು ಅರ್ಥಪೂರ್ಣ. ದಿನ–ದಿನಕ್ಕೂ ಹೆಚ್ಚಿಕೊಳ್ಳು ತ್ತಿರುವ ನಿಯತಕಾಲಿಕಗಳ ಸಂದರ್ಭವಲ್ಲಿ ಕಾವ್ಯ ಪ್ರಕಾರ ಕ್ಕಿಂತಲೂ ಕಾದಂಬರಿ ಹಾಗೂ ಸಣ್ಣಕಥೆಗಳ ಪಾತ್ರ ಅನಿವಾರ್ಯವಾಗಿಬಿಟ್ಟದೆ. ಈ ಅನಿವಾರ್ಯ ಕಾರಣವೆ ರಕ್ತಬೀಜಾಸ್ವರನಹರಿಗೆ ಎಲ್ಲೆಲ್ಲಿಯೂ ಸಣ್ಣಕಥೆಗಳು, ಕಾದಂಬರಿಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಧಾರವಾಹಿ ಕಾದಂಬರಿಗಳ ಮಹಪೂರ ಒಂದು ಕಡೆಯಾದರೆ ಸಣ್ಣಕಥೆಗಳ ಹಾವಳಿ ಇನ್ನೊಂದು ಕಡೆ. ಹನಿಕಥೆ, ಮಿನಿ ಕಥೆಗಳು ಪ್ರಕಟವಾಗುತ್ತಿವೆ. ಹೀಗೆ ಹೊಸೆಯಲ್ಪಡುವ, ಹೊಸೆಯುವತನಕ್ಕೆ ಒಗ್ಗಿಸಿಕೊಳ್ಳುವ ಕಥೆಗಳು ಕಾಲ ಯಾಪನೆಗೆ ಸಾಧನವಾಗಬಹುದೇನೋ. ಜನಪ್ರಿಯ

1. ಯುಗಧರ್ಮ ಹಾಗೂ ಸಾಹಿತ್ಯ ; ಕೀರ್ತಿನಾಥ ಕುರ್ತಕೋಟಿ

ಸಿನಿಮಾಗಳು ಕೆಲಕಾಲ ನೆನಪಿನೊಳಗೆ ಉಳಿಯುವಂತೆ ಎಂದರೂ ಸರಿ.

'ಬರಹಗಾರನಿಗೆ ವಸ್ತುಗಳು ಕಾಡುವುದಿಲ್ಲ. ಬರಹಗಾರರೇಕೆ ಅವುಗಳ ಕುರಿತು ಕಾಡುತ್ತಾರೆ'–ಎನ್ನುವ ನಗೆ ಮಾತೊಂದಿದೆ. ಈ ಮಾತು ಹಾರಿಕೆಯ ಮಾತಾದರೂ ಇತ್ತೀಚಿನ ದಿನಗಳಲ್ಲಿ ಗಂಭೀರವಾಗಿ ವಿಚಾರ ಮಾಡುವ ಹಾಗಾಗಿದೆ. ಅತ್ಯಂತ ಪ್ರಿಯವಾದ ಈ ಪ್ರಕಾರ, ಸ್ವರೂಪ ಕುರಿತು ಅಷ್ಟಾಗಿ ಯಾರೂ ತಲೆಕೆಡಿಸಿಕೊಂಡಂತಿಲ್ಲ. ಈ ಮಧ್ಯೆಯೂ ಒಳ್ಳೆಯ ಕಥೆಗಾರರಿದ್ದಾರೆ ಎಂಬುದು ಹೆಮ್ಮೆಯ ಸಂಗತಿ. ಮಾಸ್ತಿಯವರಿಂದ ಹಿಡಿದು ದೇವನೂರರ ತನಕ ನಡೆದು ಬಂದ ಈ ಪ್ರಕಾರ ಬರಹಗಾರರಲ್ಲಿ ; ಅಥವ ಇವರ ನಡುವೆಯೂ ನಮ್ಮ ಸಂಪಾದಕರಿಗೆ ಕಾಣದಾದ ಕಥೆಗಾರರಿದ್ದಾರೆ. ಹೀಗೆ ಕಾಣದಾಗಲು ಸಮಕಾಲೀನ ಸಂದರ್ಭದಲ್ಲಿ ವಿಮರ್ಶೆಯ ಮಾನದಂಡ ಬದಲಾಗುತ್ತ ಹೋಗುತ್ತಿರುವುದು. ೧೯೨೦ ಹಾಗೂ ೧೯೩೦ರ ಅವಧಿಯಲ್ಲಿ ಬಂದ ಸಣ್ಣಕತೆಗಳೆಲ್ಲ ಎಲ್ಲವೂ ಉತ್ತಮ ತರಗತಿಯವಾಗಿರದಿದ್ದರೂ ಅವೆಲ್ಲ ಕತೆಗಳ ಹಿಂದೆ ಲೇಖಕರ ಪರಿಶ್ರಮವನ್ನು ಕಾಣಬಹುದಾಗಿದೆ. ವಿಷಯದ ಆಯ್ಕೆಯಿಂದ ಮೊದಲುಗೊಂಡು ಸಂಭಾಷಣೆಯ ರಚನೆಯವರೆಗೆ ಅವರು ಸತತವಾಗಿ ಚಿಂತಿಸಬೇಕಾಗುತ್ತಿತ್ತು. ಸಣ್ಣಕತೆಯ ರಚನೆಯಶಾಸ್ತ್ರ ಅವಗತವಾಗುತ್ತ ಬಂದಿತ್ತು, ಈಗ ಕತೆಗಳಲ್ಲಿ ಆ ಪರಿಶ್ರಮ ಕಡಿಮೆಯಾಗುತ್ತ ಬಂದಿದೆ"[2]. ಈ ಮಾತುಗಳು ಕೇವಲ ಒಂದು ಪ್ರಕಾರಕ್ಕೆ ಸೀಮಿತವಲ್ಲ ಎನಿಸುತ್ತದೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕಾಣಬಹುದಾಗಿದೆ. ಸಂಪಾದನೆ ಹಾಗೂ ವಿಮರ್ಶೆಯ ಸಂದರ್ಭದಲ್ಲೂ ಇಂಥ ಧೋರಣೆಯನ್ನು ಕಾಣುವುದಾದರೆ ಮತ್ತೆ ಮತ್ತೆ ತಲೆಮಾರಿನಿಂದ ಬಂದಂಥ ಲೇಖಕರ ಕೃತಿಗಳ ಕುರಿತೇ ಮಾತಾಡುತ್ತಿರಬೇಕಾಗುತ್ತದೆ.

ಮಾಸ್ತಿಯವರಂತೆ ಸಣ್ಣಕತೆಯನ್ನೇ ತಮ್ಮ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡ ಕತೆಗಾರರು ಇಲ್ಲವೆಂದು ಹೇಳಿ ಬಿಡಬಹುದು. ಆದರೆ ಕೆಲವೇ ಕಥೆಗಳನ್ನು ಬರೆದ ದೇವನೂರರನ್ನು ಕಡೆಗಾಣಿಸುವಂತಿಲ್ಲ. ದೇವನೂರರು ಕಿರು ಸಂಸ್ಕೃತಿಯ ಭಾವನೆಗಳನ್ನು ವಾಸ್ತವದ ಜೊತೆಗೆ ಹಂಚಿಕೊಂಡವರು.

"ಜಾತಿ ಮತ್ತು ವರ್ಗ ಈ ಎರಡೂ ಹಂತಗಳಲ್ಲಿ ಶ್ರೇಣೀಕೃತವಾಗಿಯೇ ಬದುಕುತ್ತಿರುವ ನಮ್ಮ ಜನ ಸಮುದಾಯದಲ್ಲಿ ಮೊದಲಿನಿಂದಲೂ ಓದು ಬರಹವುಳ್ಳ ಚಿಕ್ಕ ಜನಸಮುದಾಯ ಒಂದಾದರೆ ; ನಿರಕ್ಷರ ಕುಕ್ಷಿಗಳ ಸಮುದಾಯ ಇನ್ನೊಂದು. ಆ ಇನ್ನೊಂದರ ಅನುಭವವನ್ನು, ನೋವು ನಲಿವುಗಳನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವಾಗ ಭಾವನಾತ್ಮಕ ಸಂಬಂಧದಿಂದ ಅಥವಾ ಸಂಕೇತ ಮೊದಲಾದ ತಂತ್ರ ವಿಧಾನಗಳಿಂದ ಹೇಳುವ ಅನಿವಾರ್ಯತೆಯಿದೆ. ಇಂಥ ವಿಶಿಷ್ಟ ಸಾಮಾಜದೊಳಗೇ ರೂಪ ತಳೆಯುತ್ತಿರುವ ಲೇಖಕರ ಅನುಭವಗಳ ಶ್ರೇಷ್ಠತಮ ಅಭಿವ್ಯಕ್ತಿಯ ಹುಡುಕಾಟವೇ

---

2. ಯುಗಧರ್ಮ ಹಾಗೂ ಸಾಹಿತ್ಯ

ಈ ಶತಮಾನದ ಕನ್ನಡ ಸಾಹಿತ್ಯ"*. ಒಂದು ಸ್ತರದ ಅನುಭವಗಳನ್ನು ಮೂರ್ತ ರೂಪುಗೊಳಿಸುವಲ್ಲಿ ದೇವನೂರ ಅವರು ಪ್ರಮುಖರು. ಹಾಗೆಯೇ ಇವರೊಟ್ಟಿಗೆ ಬರವಣಿಗೆಗೆ ತೊಡಗಿಸುವ ಬಂಡಾಯದ ಮುಂಚೂಣಿಯಲ್ಲಿರುವ ಬರಗೂರರು. ದಲಿತಕವಿ ಸಿದ್ಧಲಿಂಗಯ್ಯ ಕಾವ್ಯ ಪ್ರಕಾರವನ್ನು ಕಂಡುಕೊಂಡಿದ್ದರೆ ಉಳಿದವರು ಕಥೆ, ಕಾದಂಬರಿಯನ್ನು ಆಯ್ದುಕೊಂಡಿದ್ದಾರೆ.

ಕನ್ನಡಸಾಹಿತ್ಯ, ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಹೀಗೆ ಸ್ಥಿತ್ಯಂತರಗೊಳ್ಳುತ್ತಾ ಬಂದಿದೆ. ದಲಿತ ಬಂಡಾಯ ಕನ್ನಡ ಸಾಹಿತ್ಯದ ಹೊಸ ದನಿಗಳು. "ಬಂಡಾಯ ಸಾಹಿತ್ಯ ಚರಿತ್ರೆಯ ಅನಿವಾರ್ಯತೆಯಿಂದ ಹುಟ್ಟಿದ ಸೃಜನಶೀಲಕ್ರಿಯೆ"–ಎಂದು ಬರಗೂರರು ಹೇಳಿದ್ದಾರೆ. ಈ ಮನೋಧರ್ಮದ ಹಿನ್ನೆಲೆಯಲ್ಲಿ ಬರೆಯುತ್ತಿರುವ ಲೇಖಕರಲ್ಲಿ ರಾಮಣ್ಣ ಅವರು ಪ್ರಮುಖರೆನಿಸಿಸುತ್ತಾರೆ. ವೃತ್ತಿಯಿಂದ ವೈದ್ಯರಾದರೂ ಪ್ರವೃತ್ತಿಯಿಂದ ಸೃಜನಶೀಲ ಬರಹಗಾರ. ಗ್ರಾಮೀಣ ಸಂಸ್ಕೃತಿಯ ಹಿನ್ನೆಲೆಯಲ್ಲಿ ಸಾಗುವ ಇವರ ಬರಹಕ್ಕೆ ಕೃತಕತೆಯ ಛಾಯೆಯಾಗಲೀ ವಿಮರ್ಶಕರ ಸಮಯಸನ್ನಿಯಾಗಲಿ ಕಾಡಿಲ್ಲ.

ರಾಮಣ್ಣ ಅವರನ್ನು 'ಸಿರಿಯಸ್' ಬರಹಗಾರ ಅಲ್ಲ ಎಂತ ಭಾವಿಸಿರಬಹುದು ಅಥವಾ ಕಥೆಯನ್ನೇ ಅಭಿವ್ಯಕ್ತಿಯ ಪ್ರಮುಖ ಮಾಧ್ಯಮವನ್ನಾಗಿ ಮಾಡಿಕೊಂಡಿಲ್ಲ ಎಂತಲೂ ಇರಬಹುದೋ...

ರಾಮಣ್ಣ ಅವರನ್ನು ಈ ಲೇಖನದುದ್ದಕ್ಕೂ ವೈಭವೀಕರಿಸುವುದು ಅಥವಾ ಬೇರೆ ರೀತಿಯಿಂದ ಅರ್ಥೈಸುವುದು ಎಂದಲ್ಲ. ಇಂಡಿಯಾದಂಥ ಈ ದೇಶದೊಳಗೆ ಶ್ರೇಣೀಕೃತ ಸಮಾಜದಲ್ಲಿ ಮತ್ತೆ ಮತ್ತೆ ಕೃತಿಗಿಂತ ಕೃತಿಕಾರನ ಬಗ್ಗೆ ತಲೆಕೆಡಿಸಿಕೊಳ್ಳುವ ಪ್ರವೃತ್ತಿಯಿದೆಯಲ್ಲ ಅದಕ್ಕೆ ಕೆಲವೊಮ್ಮೆ ಹೀಗೆ ಮಾತಾಡಬೇಕಾಗುತ್ತದೆ. ಇದು ಅನಿವಾರ್ಯವಾಗಿಬಿಟ್ಟಿದೆ.

ಅದೇನೆಯಿರಲಿ ಪ್ರಸ್ತುತ ಸಂದರ್ಭದಲ್ಲಿ ರಾಮಣ್ಣ ಅವರ 'ಒಂದು ಹುಡುಗನಿಗೆ ಬಿದ್ದ ಕನಸು' ಸಂಕಲದ ಕಥೆಗಳನ್ನು ಪರಿಚಯಿಸಿ ಕೊಡುವುದು, ಈ ಲೇಖನದ ಉದ್ದೇಶ.

ಸಂಕಲನದ 'ಶೂಲ' ಕಥೆ, ಅಷ್ಟು ಪರಿಣಾಮಕಾರಿಯಾದ ಕಥೆಯಲ್ಲವಾದರೂ ಕಥೆಯ ಒಟ್ಟಾರೆ ಆಶಯ ಒಂದು ವರ್ಗದ ವಯೋಧರ್ಮಕ್ಕೆ ಸಂಬಂಧ ಪಡುವುದರಿಂದ ಅಂಥ ವಯೋಧರ್ಮವೇ ಬದುಕಿನ ಮಧ್ಯಂತರ, ಅಥವಾ ಆಯ್ಕೆಯ ಪ್ರಶ್ನೆಯಾಗಿರುವುದರಿಂದ ಗಮನಿಸಬಹುದಾದ ಕಥೆಯಾಗಿದೆ.

ಕಥೆಯ ಶೀರ್ಷಿಕೆ, ಇಡೀ ಕಥೆಯ ಘಟನೆ. ಪರಿಣಾಮವನ್ನು ಧ್ವನಿಯಂತವಾಗಿ ಪರಿಚಯಿಸಿಕೊಡುತ್ತದೆ. 'ಶೂಲ' ಈ ಎರಡು ಪದ ಹಾಗೂ ಅದರ ಆಂತರಿಕ

---

* ತುಷಾರ ಸಂಚಿಕೆ

ಸ್ವಭಾವ ಮತ್ತು ಅದರ ಬಾಹ್ಯಿಕ ಕ್ರೌರ್ಯವನ್ನು ಸರಳವಾಗಿ ಅರ್ಥೈಯಿಸಲು ಅನುವು ಮಾಡಿಕೊಡುತ್ತದೆ. ಈ ಪದ, ಶಿಷ್ಟ ಸಂಸ್ಕೃತಿಯ ಪ್ರವೇಶವಂತೂ ಅಲ್ಲ. ಅಥವಾ ಮ್ಲೇಚ್ಛ ಆಯುಧವೂ ಅಲ್ಲ. ಇಲ್ಲಿ ಮ್ಲೇಚ್ಛ ಪದವನ್ನು ಬಳಸಲು ಒಂದು ಕಾರಣ ವಿದೆ. ಮನು ತನ್ನ ಗ್ರಂಥದೊಳಗೆ ಮ್ಲೇಚ್ಛ ವಸ್ತು, ಬಳಕೆ ಕುರಿತು ವಿವರಿಸಿರುವುದು ಸರ್ವವಿದಿತ. ಶೂದ್ರಾದಿಗಳು ಬಳಸುವ ವಾದ್ಯ ಪರಿಕರಗಳು ಇಲ್ಲಿ ಸೇರ್ಪಡೆ ಯಾಗಿವೆ. ಸಾತ್ವಿಕಾರದವರಿಗೆ ಆಯುಧದ ಉಪಯೋಗ ಅಷ್ಟಾಗಿ ಬೀಳುವುದಿಲ್ಲ. 'ಶೂಲಧಾರಿ' ಅಥವಾ 'ಶೂಲಪಾಣಿ' ಎಂದು ಮಾತ್ರ ಉಚ್ಚರಿಸುವ ಜನರಿಗೆ ಅದರ ತೀಕ್ಷ್ಣತೆಯ ಅರಿವು ಇರುವುದಿಲ್ಲ. ಗ್ರಾಮೀಣ ಬದುಕಿನಲ್ಲಿ ಇದೊಂದು ನಂಬಿಕೆಯ ಸಂಕೇತ. ತಾವು ಹುಟ್ಟುಹಾಕಿಕೊಂಡಿರುವ ನಂಬಿಕೆಗಳೇ ಆಚರಣೆಯ ರೂಪದಲ್ಲಿ ಕಾಣಿಸಿಕೊಳ್ಳುವುದುಂಟು. ಆಚರಣೆ ಮತ್ತು ನಂಬಿಕೆಗಳೆರಡೂ ಗ್ರಾಮೀಣರ ಬದುಕಿನಲ್ಲಿ ತಳಕು ಹಾಕಿಕೊಂಡಿವೆ. ಶೂಲಏರುವ, ಬಲಿಕೊಡುವ, ಬೆತ್ತಲೆಯಾಗುವ ಸಿಡಿ ಏರುವ, ಕೊಂಡಹಾಯುವ ಪದ್ಧತಿಗಳು ಹುಟ್ಟಿಕೊಂಡು ಬಂದುದರ ಹಿನ್ನೆಲೆಯಲ್ಲಿ ಶೋಷಣೆ ಹಾಗೂ ದಬ್ಬಾಳಿಕೆಯ ಮನೋಭಾವನೆಯನ್ನು ಗುರುತಿಸಬಹುದಾಗಿದೆ. 'ಜಾತಿ'ಯ ಹೆಸರಿನಲ್ಲಿ, ಸ್ಥಾನ–ಮಾನದ ಹೆಸರಿನಲ್ಲಿ ಈ ದೇಶದ ಗ್ರಾಮೀಣ ಸಮಾಜ ದಲ್ಲಿ ಏನೆಲ್ಲಾ ನಡೆದು ಬಿಡುತ್ತದೆ.

ಕಥೆಯ ನಾಯಕ ಕನಸುಗಾರ ಭಾವುಕನೂ ಕೂಡ. ಹೆಸರು ಜಯರಾಮು. ತಾನು ಪ್ರೀತಿಸುವ ಹುಡುಗಿಯ ಹೆಸರು ಗೌರಿ. ಸಿನಿಮಾದ ಸೀನರಿಯಂತೆ ಪ್ರಾರಂಭ ವಾಗುವ ಕಥೆ ಗಂಭೀರವಾಗಿ ಮುಕ್ತಾಯಗೊಂಡಿರುವುದರಿಂದ ಓದುಗರಿಗೆ ಉಸಿರು ಕಟ್ಟಿದಂತೆನಿಸುತ್ತದೆ. ಜಯರಾಮು ತನ್ನ ಪ್ರೀತಿಯ ಹುಡುಗಿಯನ್ನು ತೆಂಗಿನ ತೋಟಕ್ಕೆ ಕರೆದುಕೊಂಡು ಹೋಗುವುದು ಮಾತ್ರವಲ್ಲ ತನ್ನ ಅಂತರಾಳಕ್ಕೂ ಒಡ್ಡಿ ಕೊಳ್ಳಲು ನೋಡುತ್ತಾನೆ.

ನಮ್ಮ ಸಮಾಜದ ಮಧ್ಯಮ ವರ್ಗದ ಯುವಕ-ಯುವತಿಯರ ಪ್ರೇಮದ ಹಾಗೆ ಇಲ್ಲಿಯೂ ಎಳಸುತನ ತೆಕ್ಕೆ ಹಾಕಿಕೊಂಡಿದೆ. "ಹೀಗೇ ನಾವು ಜೊತೇಲಿರು ವಾಗ್ಲೇ ಸಾವು ಬಂದ್ರೆ ಬಲುಮಜ ಅಲ್ವೆ"? ಎಂದು ಪ್ರಶ್ನಿಸುವ ಜಯರಾಮು ನಮ್ಮ ಯುವಕರ ಪ್ರತಿನಿಧಿ. ಶೂಲದ ವೆಂಕಟೇಗೌಡರ ಮಗಳು ಗೌರಿಯ ಸಹವಾಸ ಅಥವಾ ಅಂಥವಳನ್ನು ಬಯಸುವುದು ಎಂದರೆ ಸಮಸ್ಯೆಯ ಸುಳಿಯಲ್ಲಿ ಸಿಕ್ಕಿಹಾಕಿ ಕೊಳ್ಳುವುದು ಎಂದರ್ಥ.

ಕಥೆಯ ಎರಡನೆಯ ಭಾಗದಲ್ಲಿ ಬರುವ ("ಹೂಂ!" ಎಂದವನೆ ಜಯರಾಮು ಅವಳ ಮುಂಗೈಯನ್ನು ಬಲವಾಗಿ ಹಿಡಿದುಕೊಂಡ. ಇವರಿಬ್ಬರ ಪ್ರೇಮ ಪ್ರಕರಣಕ್ಕೆ ನಾಂದಿ ಹಾಡಿದ ಹೂವುಗಳು ಬಾಡಿ ನೆಲದ ಮೇಲೆ ಬಿದ್ದು ಅನಾಥವಾದವು") ಈ ಮಾತುಗಳಲ್ಲಿ, ಇವರೀರ್ವರ ಸಂಬಂಧದಲ್ಲಿ ಮುಂದೆ ಬರಬಹುದಾದ ದುರಂತವನ್ನು ಗುರುತಿಸಬಹುದಾಗಿದೆ.

ನಾಡಗೌಡರ ಮಗ ಶಂಕರನಿಗೆ ತಂಗಿ ಗೌರಿಯನ್ನು ಕೊಡುವ ಮಾತುಗಳು. ವರ್ಗದ ಅಂತಸ್ತಿನಲ್ಲಿ ಇಂಜಿನಿಯರ್ ಆಗಿರುವುದರಿಂದ ಸಾಧ್ಯ ಎಂದು ಗುರುತಿಸುವ ಜಯರಾಮು ತನ್ನತನವನ್ನು ಒಡ್ಡಿಕೊಳ್ಳಲು ಮುಖಾ-ಮುಖಿಯಾಗಲು ನೋಡುತ್ತಾನೆ. ಆದರೆ ಗೌರಿಯ ಮೇಲಿರುವ ಅಚಲವಾದ ಪ್ರೇಮ, ಅವಳ ಪ್ರಾಮಾಣಿಕತೆ ಕುರಿತು ಒಳಗೊಳಗೇ ನಂಬಿಕೊಂಡವನು. ಶೂಲವಾಡುವುದು ಆಯಾವಂಶದ ಗೌರವದ ಪ್ರಶ್ನೆ. ಗೌರಿಯ ಅಣ್ಣ ಪುಟ್ಟಸ್ವಾಮಿಯ ಅಸಹಾಯಕತೆಗೆ ಜನ ತಲೆಗೊಂದರಂತೆ ಮಾತಾಡಿಕೊಳ್ಳುತ್ತಾರೆ. ಪುಟ್ಟಸ್ವಾಮಿಯನ್ನು ಉಳಿಸುವ ಸಾಹಸಕ್ಕೆ ಕಥಾನಾಯಕ ಕೈಹಾಕುವುದಂತೂ ಸಹಜ. ಜಯರಾಮು ಮರವೇರಿ ಶೂಲದ ಮಣೆಯ ಕೆಳಭಾಗವನ್ನು ಸೇರಿಕೊಳ್ಳುತ್ತಾನೆ. ದುರಂತದ ಸುಳಿಯಲ್ಲಿ ಬಿದ್ದಿರುವವರಲ್ಲಿ ಒಬ್ಬ ರಕ್ತ ಹಂಚಿಕೊಂಡ ಒಡಹುಟ್ಟು. ಮತ್ತೊಬ್ಬ ತನಗಾಗಿ ರಕ್ತವನ್ನೇ ಧಾರೆ ಎರೆಯಲು ಸಿದ್ಧವಿರುವ ತನ್ನ ಸರ್ವಸ್ವ ಎಂದು ನಾಯಕಿ ಭಾವಿಸಿದರೆ ನಾಯಕನಿಗೆ ಹೆಮ್ಮೆಯಲ್ಲವೇ ? ಈರ್ವರ ಸಾವಿನ ಮೂಲಕ ಕೊನೆಯಾಗುವ ಈ ಕಥೆಯಲ್ಲಿ : ಪಾತ್ರಪೋಷಣೆ ಹಾಗೂ ನಿರೂಪಣ ವಿಧಾನ ಮೆಚ್ಚಿಗೆ ಪಡೆಯುವಂಥ ಅಂಶಗಳು.

'ಗಾಂಧಿ' ಕಥೆ ಕುರಿತು ಚಂದ್ರಶೇಖರ ಪಾಟೀಲರು ಮೆಚ್ಚಿಗೆ ಮಾತಾಡಿದ್ದಾರೆ. ಸಂಕಲನದ ಉಳಿದ ಕಥೆಗಳಿಗಿಂತ ಈ ಕಥೆ ಅತ್ಯಂತ ಭಿನ್ನವಾಗಿದೆ. 'ಗಾಂಧಿ' ಯಾರಿಗೆ ಗೊತ್ತಿಲ್ಲ. ಗಾಂಧಿಯ ತಾತ್ವಿಕ ನೆಲೆಯಲ್ಲಿ ಸ್ವಾತಂತ್ರ್ಯವನ್ನು ಕಂಡುಕೊಂಡಂಥ ಈ ದೇಶದಲ್ಲಿ ಗಾಂಧಿ ಒಬ್ಬ ವ್ಯಕ್ತಿಯಲ್ಲ. ಅವನೊಬ್ಬ ಪವಾಡಪುರುಷ. ಒಟ್ಟಾರೆ ದೇವಮಾನವ. ವ್ಯಕ್ತಿ ತನ್ನನ್ನು ಸಮೂಹದ ಜೊತೆಯಲ್ಲಿ ತೊಡಗಿಸಿಕೊಂಡು, ಬೆಳೆಯುತ್ತ ಹೋದಾಗ ಅವನು ಸಮೂಹದ ಮುಂದಾಳಾಗುತ್ತಾನೆ. ಸಮೂಹ ಅವನ ನಡವಳಿಕೆಯಲ್ಲಿ ತಮ್ಮನ್ನು ಅರ್ಥೈಸುತ್ತ, ಗುರುತಿಸಿಕೊಳ್ಳುತ್ತ ಹೋಗುವುದು ಒಂದು ಆರೋಗ್ಯಕರವಾದ ಬೆಳವಣಿಗೆ. ಆದರೆ ಅದೇ ಸಮೂಹ ಅಂಥವನನ್ನು ಪವಾಡಸದೃಶ ಘಟನೆಗಳಿಗೆ ಒಡ್ಡಿಕೊಂಡು ಅರ್ಥೈಸುತ್ತ ಹೊರಟರೆ ದುರಂತದ ಕೊನೆ. ಅದಕ್ಕೆ ಗಾಂಧಿ ನಮ್ಮ ಕಣ್ಣಿನಲ್ಲಿ ಸಮೂಹದ ಪ್ರತಿನಿಧಿಯಾಗಲಿಲ್ಲ, ಸಮೂಹದ ದೈವೀ ಸ್ವರೂಪನಾದ. ಪೂಜಿಸಿಕೊಂಡ. ಪೂಜಿಸಿಕೊಳ್ಳುತ್ತ ಹೋದ.

'ಗಾಂಧಿ'ಯ ನಾಡಿನಲ್ಲಿ ಗಾಂಧಿಯ ದೈಹಿಕ ಸ್ವರೂಪದವರು ಹುಟ್ಟಿದರೆ ; ಪ್ರೀತಿಯಿಂದಲೋ ಅಥವಾ ಸ್ವಾಭಾವಿಕವಾಗಿಯೋ ಹಾಗೆ ಹೆಸರು ಇಡುವುದುಂಟು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಹುಡುಗನ ಅಜ್ಜ, ತನ್ನ ಮೊಮ್ಮಗನಿಗೆ 'ಗಾಂಧಿ' ಅಂತ ಹೆಸರಿಡುತ್ತಾನೆ. ಸಣಕಲಿ ಹುಡುಗನ ತಪಾಸಣೆಗೆಂದು ಆಸ್ಪತ್ರೆಗೆ ಕರೆತಂದಾಗ ಹುಡುಗನ ತಾಯಿ ಮೂಲೆಯಲ್ಲಿ ಕೂತಿದ್ದರೆ : ನಮ್ಮ ಗಾಂಧಿ, ಹುಡುಗ ಗಾಂಧಿ. ಯಾರ ಕಣ್ಣಿಗೂ ಬೀಳದಿರುವುದು ಆಶ್ಚರ್ಯವೇನಲ್ಲ. ಕುತೂಹಲ ಕಥೆಯ ನಿರೂಪಕ ವೈದ್ಯರ ಕಣ್ಣಿಗೆ ಬಿದ್ದ ಈ ಹುಡುಗನನ್ನು ತಪಾಸಣೆ ನಡೆಸಿ ವಿಚಾರಿಸಲು ಗಾಂಧಿ ಅಂತ ಗೊತ್ತಾಗುತ್ತದೆ. ಗೋಡೆಯ ಮೇಲೆ ತೂಗುಬಿಟ್ಟಿರುವ

ಗಾಂಧಿಯ ಭಾವಚಿತ್ರವನ್ನು ನೋಡಿ ಹೀಗೆ ಹೇಳುತ್ತಿರಬಹುದೆಂದು ಭಾವಿಸುವ ವೈದ್ಯರು : ಹುಡುಗನನ್ನು, ಅವನನ್ನು ಕರೆದುಕೊಂಡು ಬಂದವಳನ್ನು ಪ್ರಶ್ನಿಸಲಾಗಿ 'ಗಾಂಧಿ' ನಿಜವಾದ ಹೆಸರೆಂದು ತಿಳಿಯುತ್ತದೆ.

ನಿರಕ್ಷರ ಕುಕ್ಷಿಗಳೂ ಬಡತನದ ಭೀಕರತೆಯಲ್ಲಿ ತೊಳಲಾಡುತ್ತಿರುವ ನಮ್ಮ ಗ್ರಾಮೀಣ ಬದುಕಿನ ಅಮಾಯಕರ ಪ್ರತಿನಿಧಿಯಂತಿರುವ ಈ ಕಥೆಯ ಕೇಂದ್ರ ಪಾತ್ರ ಹಾಗೂ ನಾಗರಿಕ ಬದುಕು ; ಒಟ್ಟಾರೆ ಈ ದೇಶದ ವ್ಯವಸ್ಥೆಯ ಮೇಲೆ 'ಕ್ಷ' ಕಿರಣ ಬೀರುವಂತಿದೆ. ತನ್ನ ಮೊಮ್ಮಗನನ್ನೂ, ಮಗಳ ಕರುಳಕುಡಿಯನ್ನು, ಅದರಲ್ಲೂ ಅವನೊಬ್ಬನೇ ಭವಿಷ್ಯದ ಚುಕ್ಕಾಣಿಯನ್ನು ಉಳಿಸಿಕೊಳ್ಳಲು ಸತತ ಹೋರಾಟ ನಡೆಸುವ ವೃದ್ಧ ಕೊನೆಯಲ್ಲಿ ಕಂಡದ್ದು ಅವನ ಸಾವು.

ಇಡೀ ಕಥೆ ; ನಮ್ಮ ದೇಶದ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಅಲ್ಲಲ್ಲಿಯೇ ವ್ಯಂಗ್ಯದ ಮೊನಚು ಪ್ರಜ್ಞಾಪೂರ್ವಕವಾಗಿದೆ ಎನಿಸಿದರೂ ಒಟ್ಟು ಕಥೆಯ ಪರಿಣಾಮದ ದೃಷ್ಟಿಯಿಂದ ಸಹಜ ಎನಿಸಿಬಿಡುತ್ತದೆ.

'ಚೀಲ' ಎನ್ನುವ ಕಥೆಯಲ್ಲಿ ; ಬಿಹಾರದ ಅರಾಜಕ ಜೀವನವನ್ನು ಕಂಡು ಕೊಳ್ಳುವುದರ ಜೊತೆ–ಜೊತೆಯಲ್ಲಿ, ಪರಂಪರೆಯಿಂದ ಬಂದಂಥ 'ಕಲೆ'ಯಲ್ಲಿ ಶ್ರದ್ಧೆ ವಹಿಸಿ ಕಲೆಯ ಅಭಿರುಚಿಯನ್ನು ಉಣಬಡಿಸುವ ನೃತ್ಯಗಾತಿಯರ ಒನಪು–ವೈಯಾರ ಹಾಗೂ ಅವರ ಸರಳ ನಡವಳಿಕೆಗಳನ್ನು ಗುರುತಿಸಬಹುದಾಗಿದೆ. ಒಂದು ಕಡೆ ಸುಂದರ ಬದುಕು ; ಇನ್ನೊಂದು ಕಡೆ ಅರಾಜಕ ಬದುಕು. ಇವೆರಡರ ವಿಪರ್ಯಾಸ ಗುರುತಿಸು ವುದರ ಸಂದರ್ಭದಲ್ಲಿ ನಿರೂಪಕ ತನ್ನನ್ನು ತೆರೆದ ಕಣ್ಣಿನಿಂದ ನೋಡುತ್ತಾ ಹೋಗು ವುದು ಈ ಕಥೆಯ ವೈಶಿಷ್ಟ್ಯವಾಗಿದೆ.

'ಚೆಲುವಿನ ಪರಂಗಿ ಗಿಡಗಳು' ಗಮನಾರ್ಹವಾದ ಕಥೆ. ಸಮಾಜಸೇವೆ. ಆ ಹೆಸರಿನಲ್ಲಿ ನಡೆಸುವಂಥ ಅವ್ಯವಹಾರ. ಪರಂಗಿ ಗಿಡಗಳನ್ನು ಕುರಿತ ಭಾಷಣ ಹಾಗೂ ಅದರಿಂದ ನಮ್ಮ ಜಾಣ ಹುಡುಗ ಚೆಲುವರಂಥವರ ಮನದಲ್ಲಿ ನಡೆಯುವ ವಿಚಾರಸರಣಿ–ಇವು ಕಥೆಯ ಮುಖ್ಯ ಅಂಶಗಳು.

ತನ್ನ ತೋಟದಲ್ಲಿ ತನ್ನ ಕುಟುಂಬದ ಸದಸ್ಯರೊಡನೆ ಬೀಜನೆಟ್ಟು ಅವುಗಳ ಗುಂಗಿನೊಳಗೇ ಕಲ್ಪನೆಯನ್ನು ಕಟ್ಟುತ್ತ ಹೋಗುವ ಹುಡುಗ : ತಮ್ಮ ಶ್ರಮವನ್ನು ಯಜಮಾನ ಸಂಸ್ಕೃತಿ ದೋಚಿಕೊಂಡು ಹೋಗುವುದು, ಪರಂಗಿ ಗಿಡಗಳಲ್ಲಿ ಬಿಟ್ಟಿರುವ ಕಾಯಿಗಳು ಅವು ಸಾರ್ವಜನಿಕ ಸ್ವತ್ತಾದಾಗ ಉಂಟಾಗುವ ಘರ್ಷಣೆ ಅಸಹಾಯಕತೆ ಮನೋಜ್ಞವಾಗಿ ಮೂಡಿ ಬಂದಿದೆ.

ಒಟ್ಟಾರೆ 'ದೇವನೂರು ಅವರು ಹೇಳುವಂತೆ ರಾಮಣ್ಣ ಅವರ ಒಡಲಲ್ಲಿ ರಾವಣ ತುಂಬಿಕೊಂಡಿದ್ದಾನೆ' ಎನ್ನುವ ಮಾತು ಈ ಸಂಕಲನದ ಕಥೆಗಳನ್ನು ಓದಿದಾಗ ಮನದಟ್ಟಾಗಿ ಬಿಡುತ್ತದೆ.

ಕವಿ–ಕಾವ್ಯ-ವಿಮರ್ಶೆಗಳ ಒರೆಗಲ್ಲು 'ಬೆಂಕಿ'

ಚಂದ್ರಕಾಂತ ಪಡೇಸೂರ

'ಬೆಂಕಿ' ಡಾ॥ ಸೋಮಶೇಖರ ಇಮ್ರಾಪೂರ ಅವರ ಮೂರನೆಯ ಕವನ ಸಂಕಲನ. ಇದರಲ್ಲಿ ೩೬ ಕವನಗಳಿದ್ದು, ಈ ಎಲ್ಲ ಕವನಗಳ ಒಟ್ಟು ಆಶಯ ಮನುಷ್ಯ; ತನ್ನ ಜೀವನದ ಸರ್ವ ಆಯಾಮಗಳಲ್ಲಿಯೂ ಡಂಬಾಚಾರವನ್ನೇ ಅವಲಂಬಿಸಿ. ಮಿಥ್ಯವನ್ನೇ ಸತ್ಯವೆಂದು ತಿಳಿದು ಅಥವಾ ಮಿಥ್ಯವನ್ನೇ ಸತ್ಯವೆಂದು ಸಾಧಿಸಿ ಸ್ವಾರ್ಥತೆಯನ್ನು ಪ್ರತಿಷ್ಠಿಸುವ ಕೆಟ್ಟ ಪ್ರಯತ್ನಗಳನ್ನು ವಿಡಂಬಿಸುವುದೇ ಆಗಿದೆಯೆಂದರೆ ತಪ್ಪಾಗಲಾರದು. ಜೀವನದ ಆಯಾಮಗಳಾದ ಹುಟ್ಟು–ಸಾವು, ಬೆಳಕು – ಕತ್ತಲೆ, ದೈವ – ವಿಧಿ, ಮದುವೆ – ಮುಂಜಿ, ದೇಶಾಭಿಮಾನ, ಭಾಷಾಭಿಮಾನ, ಕವಿ – ಕಾವ್ಯ–ವಿಮರ್ಶೆ ಮುಂತಾದ ಎಲ್ಲವುಗಳನ್ನೂ ಪರಿಶೀಲಿಸಿ ಪರಾಮರ್ಶಿಸಿ, ಸತ್ಯದ ಒರೆಗಲ್ಲಿಗೆ ಹಚ್ಚಿ ತಿಕ್ಕಿ ಪರಿಷ್ಕರಿಸುವ ಉದಾತ್ತ ಉದ್ದೇಶ ಈ ಕವನಗಳ ಜೀವದುಸಿರು.

ಇಮ್ರಾಪೂರ ಅವರ 'ಬೆಂಕಿ' ಸಂಕಲನದ ಧೋರಣೆಗಳನ್ನು ಅರ್ಥೈಸಿಕೊಳ್ಳಬೇಕಾದಲ್ಲಿ ಅದಕ್ಕೆ ಪೂರ್ವಭಾವಿಯಾಗಿ ಅವರ ಇನ್ನೆರಡು ಕವನ ಸಂಕಲನಗಳಾದ 'ಬಿಸಿಲು ಹೂ', 'ಬೆಳದಿಂಗಳು' ಕವನ ಸಂಕಲನಗಳ ಧೋರಣೆಯನ್ನು ಸ್ಥೂಲವಾಗಿಯಾದರೂ ತಿಳಿಯಬಹುದು

ಅವಶ್ಯಕ. 'ಬೆಂಕಿ' ಹೊತ್ತುವ ಪೂರ್ವದಲ್ಲಿ ಕವಿ ಜೀವನವನ್ನು ಕಂಡುಕೊಂಡ ಪರಿಯನ್ನು, ಜೀವನದಲ್ಲಿ ತನ್ನ ಬದುಕನ್ನು ನಿರ್ಧರಿಸಿಕೊಂಡ ಪರಿಯನ್ನು ಅವರ 'ಬೆಳದಿಂಗಳು' ಸಂಕಲನದ ಈ ಕೆಳಗಿನ ಪದ್ಯಭಾಗದಿಂದ ಅರಿಯಬಹುದು :

ಸಾವು ಬದುಕುಗಳ ಬೇಲಿಯ ಮೇಲೆ
ಕುಣಿಯುವುದೇ ಜೀವನ ಕ್ರಾಂತಿ
ಕಣ್ಣೀರಿನ ಬಿಸಿ ಬಿಂದುವಿನೊಳಗಿನ
ತಂಪಿನ ತಾಣವೆ ಸಂಕ್ರಾಂತಿ

ಕವಿ ಬಿಸಿಬಿಂದುವಿನ ಒಡಲಲ್ಲಿಯೇ ತಂಪಿನ ತಾಣವನ್ನು ಕಂಡುಕೊಂಡು ಇಲ್ಲವೇ ಕಲ್ಪಿಸಿಕೊಂಡು ಆ ತಾಣದಲ್ಲಿ ನಿಂತು, ಯಾರನ್ನೂ ಲೆಕ್ಕಿಸದೇ ನಗುತ್ತಿರುವ ಹೂವನ್ನು ಕಂಡು ತನ್ನ ಜೀವನದ ಮಾರ್ಗವನ್ನು ಅರಿತುಕೊಳ್ಳುತ್ತಾನೆ. ಜೀವನದ ಜಂಜಾಟಕ್ಕೆ ರೋಸಿ ಪ್ರೀತಿಯನ್ನು ಹರಿದು ಹರಿಪಲ್ಲೆ ಮಾಡಿ ಹೆಂಡತಿಯೊಡನೆ ಜಗಳ ಕಾಯ್ದರೂ ಕೊನೆಗೆ ಏನಾರ ಆಗಿ ಏನೇನೋ ಮಾಗಿ ಗಂಡ ಹೆಂಡಿರ ಜಗಳ ಗಂಧ ತೀಡಿದ್ಹಂಗಾಗಿ ಪ್ರೀತಿ ತಾನೇ ತಾನಾದಾಗ, ಜೀವನವೇ ಜೇನುಗೂಡವಾಗಿ ತುಪ್ಪವನ್ನು ನೆಕ್ಕುತ್ತಾನೆ. ಹೀಗಿದ್ದರೂ 'ಬೆಳದಿಂಗಳು' ಸಂಕಲನದ ಒಟ್ಟಾರೆ ಧೋರಣೆಯನ್ನು ನೋಡಿದರೆ ಜೇನು ತುಪ್ಪದ ಸಿಹಿಗಿಂತ ಹುಳುಗಳ ಕಡಿತದ ನೋವೇ ಹೆಚ್ಚಾಗಿದ್ದು ಒತ್ತಾಯಪೂರ್ವಕವಾಗಿ ಸಮಾಧಾನವನ್ನು ಜಗ್ಗಿ ಹಿಡಿದಂತಿದೆ. 'ಬೆಳದಿಂಗಳ' ಹುಳುಗಳ ಕಡಿತದ ನೋವು ಬರುಬರುತ್ತಾ ಜಾಸ್ತಿಯಾಗಿ ಕವಿಯು ಹೊಟ್ಟೆಯಲ್ಲಿ 'ಬೆಂಕಿ' ಬಿದ್ದು ಒದ್ದಾಡಿದಾಗ ತನ್ನ ನಂಬುಗೆಗಳೆಲ್ಲ ಬುಡಮೇಲಾದಾಗ ಕಂಗಾಲಾಗುತ್ತಾನೆ.

ನಾ ಜೋತು ಬಿದ್ದ ಟೊಂಗೆ ಮುರಿದು
ನಾ ನಂಬಿ ನಿಂತ ನೆಲ ಕುಸಿದು
ಹಸಿದ ಬಾಯಿಂಗೆ ಬಿದ್ದಿದೆ
ಕಳ್ಳಿ ಹಾಲು........ (ಬೆಂಕಿ)

ಇಷ್ಟೊತ್ತಿಗಾಗಲೇ ಜಗತ್ತಿನ ಬಗೆಗಿರುವ ಕವಿಯ ನಂಬುಗೆಗಳೆಲ್ಲ ಬುಡಮೇಲಾಗಿವೆ, ಬೆಳ್ಳಗಿರುವುದೆಲ್ಲಾ ಹಾಲಲ್ಲ ಎಂಬ ಪ್ರಜ್ಞೆ ಒಡಮೂಡಿದೆ. ಅಂತೆ :

ಈ ಬ್ರಹ್ಮಾಂಡದೊಳು ಬಿದ್ದಿದ್ದೇನೆ
ಬವಳಿ ಬಂದು...... (ಸ್ವಗತ)

ಎಂದು ಹೇಳಿಕೊಳ್ಳುತ್ತಾನೆ. ತಾನು ಕಲ್ಪಿಸಿದ್ದ ಸುಖದ ಸ್ವರ್ಗದ ಖೂನಿ ತನ್ನ ಕಣ್ಣ ಮುಂದೆಯೇ ನಡೆಯುವುದನ್ನು ಕಂಡು ಪರಿತಪಿಸುತ್ತಾನೆ. ಈಗ ಕವಿಗೆ ಮದುವೆ ಪ್ರೇಮಸಮಾಗಮವಾಗಿ ಕಾಣುತ್ತಿಲ್ಲ.

ಗಂಡ ಹೆಂಡತಿ ಮಾಡಿಬಿಟ್ಟರು ಮಂದಿ
ಅವಳ ನಾ ನಾನವಳ ಕೂಡಿ
ಪಾಪ ಕರ್ಮದ ರಾಡಿ...... (ಮದುವೆ)

ವರದಕ್ಷಿಣೆಗಾಗಿ ಅಥವಾ ಇನ್ನಾವುದೇ ಆಸೆಗಾಗಿ ಒತ್ತಾಯದಿಂದ ಮದುವೆ ಮಾಡಿಕೊಂಡು ನಡೆಸಿದ ಸಂಸಾರ ಪಾಪಕರ್ಮದ ರಾಡಿಯಲ್ಲದೇ ಮತ್ತೇನು? ಹೀಗಿದ್ದರೂ ಸಂಸಾರದ ತೇರನ್ನು ಪಾದ ಗಟ್ಟಿಯುವರೆಗೆ ಎಳೆದು ತಂದ ಹೆಂಡತಿಯ ಸಾಹಸಕ್ಕೆ ಬೆರಗಾಗಿದ್ದಾನೆ.

ನೀ ಗಟ್ಟಿ
ನಾ ಕಟ್ಟಿದ ಕೊರಳ ಕರಿ-ಹಾವ ಗುಳದಾಳಿ
ಕೆಂಡ ಕುಂಕುಮ ಬೊಟ್ಟು ಇಟ್ಟು
ಒಟ್ಟಾಗಿ ಗುಟ್ಟಾಗಿ
ಬಂದಿ ತಂದಿ
ಪಾದಗಟ್ಟಿಯತನಕ ತೇರು (ಸಹಗಮನ)

ಇಂಥ ತ್ಯಾಗಮಯಿ ಸತಿಯೊಡನೆ ಸಹಗಮನ ಮಾಡಬಯಸುತ್ತಾನೆ. ಇದರೊಂದಿಗೆ ಮದುವೆಯ ವಧು–ವರರ ಚಿತ್ರಣವನ್ನೂ ಕೊಡಬಯಸುತ್ತಾನೆ.

ಶತಮಾನ ಕಳೆವುದಕೆ ಇಪ್ಪತ್ತು ಬಾಕಿ
ಹೊಚ್ಚ ಹೊಸ ಹಲ್ಲು ಚೊಕ್ಕ ಮೂವತ್ತೆರಡು (ವರ)
ನಿಮ್ಮ ಅಮ್ಮನ ಮರಿ ಅಮ್ಮ ಆಕಿ
ಸಣ್ಣಾಕಿ
ವಯಸ್ಸಾಗಿಲ್ಲ ಇನ್ನೂ ಅಮ್ಮನಷ್ಟು (ವಧು)

ಎಂದು ಸಾಯುವ ಸನ್ನಿವೇಶದಲ್ಲೂ ಹುಟ್ಟುವ ಮದುವೆಯ ಚಪಲವನ್ನು ವಿಡಂಬಿಸುತ್ತಾನೆ.

ಇದರೊಡನೆ ಸಮಕಾಲೀನ ಜನತೆಯ ದೇಶಾಭಿಮಾನ ಭಾಷಾಭಿಮಾನಗಳಿಗೂ ಕನ್ನಡಿ ಹಿಡಿಯಲು ಯತ್ನಿಸಿದ್ದಾನೆ. ಇಂದಿನ ನಯವಂಚನೆಯ ದೇಶದ್ರೋಹಿಗಳಿಗೆ ಗಾಂಧಿ ಹಾಕಿಕೊಟ್ಟ ಸತ್ಯ ಅಹಿಂಸೆ ಶಾಂತಿಯ ಮಾರ್ಗ ಮುಳ್ಳು ಹಾಸಿಗೆಯಾಗಿದೆ. ನಡೆಯಲಾರದೆ, ಅದನ್ನು ಬಿಡಲಾರದೆ (ಬಿಟ್ಟದ್ದು ಗೊತ್ತಾದರೆ ಜನ ತಟ್ಟುತ್ತಾರೆ) ಒದ್ದಾಡಿ ಗಾಂಧಿಯನ್ನು ಶಪಿಸುತ್ತಾರೆ.

ಹುಟ್ಟಬಾರದಾಗಿತ್ತು ನಮಗಿಂತ ಮೊದಲು
ಈ ಗಾಂಧಿ
ಸತ್ಯ ಶಾಂತಿ ಅಹಿಂಸೆಯ ಕೆಂಡ
ಹೆಟ್ಟಿ ಹೋಗಿದ್ದಾನೆ ನಮ್ಮ ಎದೆ ಹುತ್ತದೊಳಗೆ
(ಹುಟ್ಟಬಾರದಾಗಿತ್ತು ಗಾಂಧಿ)

ಹೆಟ್ಟಿಹೋದ ಕೆಂಡವನ್ನು ಸರಳವಾಗಿ ತೆಗೆದುಹಾಕಲಾಗುವುದಿಲ್ಲ. ಆದರೆ ಆ ಕೆಂಡದ ಬೆಳಕಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುವ ಮಾರ್ಗವನ್ನೂ ಕಂಡುಕೊಂಡಿದ್ದಾರೆ.

ಗಾಂಧಿಯ ಹೆಸರನ್ನು ಸ್ಮರಿಸುತ್ತಲೆ ಸ್ವಾತಂತ್ರ್ಯ ದಿನವನ್ನು ಆಚರಿಸಿ ಸ್ವೇಚ್ಛಾಚಾರವನ್ನು ಎಸಗುತ್ತಾರೆ. ಅದಕ್ಕೆ ಸ್ವಾತಂತ್ರ್ಯದ ಬಣ್ಣ ಲೇಪಿಸುತ್ತಾರೆ.

ನಿನ್ನ ಸ್ಮಾರಕಾ ಮಾಡ್ತೇವಿ
ಅದರ ಸುತ್ತು ರಾಮರಾಜ್ಯದ ಬೋರ್ಡು
ತೂಗು ಬಿಟ್ಟು
ಮೇಲೆ ಲೈಟು ಕೊಡ್ತೇವಿ
ನಿನ್ನ ಸತ್ಯ ಶಾಂತಿ, ಅಹಿಂಸಾ ತ್ಯಾಗ
............ಎಲ್ಲಾದಕೂ
ಒಂದೊಂದು ಕಂಬಾ ನಿಲ್ಲಸ್ತೇವೆ (ಬಾ ಅಜ್ಜ)

ಹೀಗೆ ತೋರಿಕೆಯ ಆಚರಣೆಯನ್ನು ವಿಡಂಬಿಸುತ್ತಾನೆ. ಸದಾಚಾರವೇ ಜೀವವಾದ ಗಾಂಧಿಯ ಬದುಕನ್ನೂ ಸದಾಚಾರ ಲೇಪಿತವಾದ ಸಮಕಾಲೀನ ಜನರ ಬದುಕನ್ನು ಒಟ್ಟೊಟ್ಟಿಗೆ ಇಟ್ಟು ನೋಡುತ್ತಾನೆ.

ಹೂವಿನ ಪಕಳೆಯಂಥಾ ಮಾತಿಯೊಳಗ
ಬಾಳಿನ ಬೆಳಕು ತುಂಬಿ
ಉರಿಯೂ ಮನಿ ಉಳಿಸಿದವ ನೀನು
ಕಳ್ಳಿ ಮ್ಯಾಗಿನ ಶಾವಿಗಿ ಬಳ್ಳಿ
ನಾವು (ಬಾ ಅಜ್ಜ)

ಕೆಲಸಕ್ಕೆ ಬಾರದ, ವಿಷಪೂರ್ಣವಾದ, ಇನ್ನೊಬ್ಬರಿಗೆ ಮಾರಕವಾದ ಸಮಕಾಲೀನ ಜನರ ಬದುಕಿನ ನೀತಿಗೆ ತೀವ್ರವಾಗಿ ಚುಚ್ಚುತ್ತಾನೆ.

ಸ್ವಾರ್ಥ ಅಂದ್ರ ನಮಗ ಗೊತ್ತಿಲ್ಲ
ಸತ್ಯ ಶಾಂತಿ ಅಹಿಂಸೆ ತ್ಯಾಗ
ಇವು ನಮಗ ಅಂಗಿ ಇದ್ದಂಗ (ಬಾ ಅಜ್ಜ)

ಎಂದು ಒಳಗೊಳಗೆ ಹೊಲಸು ಭಾವನೆಗಳನ್ನು, ಸ್ವಾರ್ಥಪರ ಆತ್ಮವನ್ನು ಇಟ್ಟುಕೊಂಡು ಮೇಲೆ ಸದಾಚಾರದ ಅಂಗಿಯನ್ನು ತೊಟ್ಟವರನ್ನು (ಖಾದಿ ಅಂಗಿ, ಗಾಂಧಿ ಟೋಪಿ ಧರಿಸಿ ವಿಜೃಂಭಿಸುವ ರಾಜಕಾರಣಿಗಳನ್ನು) ಮಾತಿನ ಈಟಿಯಿಂದ ಇರಿಯುತ್ತಾನೆ.

ನೀ ನಮಗ ಬೇಕು
"ನಿನ್ನ ನಾಮದ ಬಲವೊಂದಿದ್ದರೆ ಸಾಕು" (ಬಾ ಅಜ್ಜ)

ಗಾಂಧಿವಾದದ ಹೆಸರಿನಲ್ಲಿ ನಡೆಯುವ ಹಲವು ಹನ್ನೆರಡು ಹೊಲಸು ಕೃತ್ಯಗಳಿಗೆ ಕನ್ನಡಿ ಹಿಡಿಯುತ್ತಾನೆ. ಮುಂದೆ

ತಾಯಿ ಹೆಸರ್ಹೇಳದ ಸಂಸ್ಕೃತಿಯು
ಪೀಠಿಕೆಯು ಪಟ್ಟ ಕಟ್ಟಿಸಿಕೊಂಡು
ಅನ್ನ ನೀಡದ ಕೈಯ ಕಡಿದಂ
ಇಟ್ಟಿದ್ದಾನೆ (ಕನ್ನಡದ ತಿರುಕ)

ಎಂದು ಕನ್ನಡಿಗರ ಭಾಷಾಭಿಮಾನ ಶೂನ್ಯತೆಯನ್ನು ಕಟುವಾಗಿ ಟೀಕಿಸುತ್ತಾನೆ. ಇಂಥ ಟೀಕೆಗಳು ಬಂದಾಗ್ಯೂ ಎಚ್ಚೆತ್ತುಕೊಳ್ಳದ. ಸ್ವಭಾಷಾಭಿಮಾನ ತಾಳದೇ ಅನ್ಯಭಾಷೆಯ ಕುರುಡು ಮೋಹದಲ್ಲಿಯೇ ಮುಂದುವರಿಯುವ ಮಾತೃಭಾಷಾ ದ್ರೋಹಿಗಳನ್ನು ತಿದ್ದಲಾಗದೆ.

ಹೆತ್ತವರ ಹೆಸರ ಹೇಳದ ಆದ್ದೂರಿ ಮಗ
ಹುಟ್ಟಿದ್ದಾನೆ ಸುಬೇದಾರ
ಇಲ್ಲ ಇವನಿಗೆ ಸೊನ್ನೆ
ಸತ್ಕುಲದೆ ಮನೆಯಲ್ಲಿ
ಹೆತ್ತವರದೇ ಒಂದು ದೊಡ್ಡ ಗುನ್ನೆ. (ಕನ್ನಡದ ತಿರುಕ)

ಎಂಬ ವಿಷಾದದ ನಿರ್ಣಯಕ್ಕೆ ಬರುತ್ತಾನೆ. ಹೀಗೆ ಸಾಮಾಜಿಕ, ಸಾಂಸ್ಕೃತಿಕ ಸಂಗತಿಗಳನ್ನು ಕೆದಕುವುದಲ್ಲದೇ ಕವಿ ಸಮಕಾಲೀನ ಸಾಹಿತ್ಯಿಕ ಸನ್ನಿವೇಶಗಳಿಗೂ ದಿಟ್ಟರೀತಿಯಲ್ಲಿ ಸ್ಪಂಧಿಸುತ್ತಾನೆ.

ನವೋದಯ ಸಾಹಿತ್ಯ ತನ್ನ ಊರ್ಧ್ವಮುಖತೆಯಿಂದಾಗಿ, ಜೀವನದ ನಿಗೂಢ ಸಮಸ್ಯೆಗಳಿಗೆ ಸ್ಪಂಧಿಸಲಾರದೆ ಅಥವಾ ಅವುಗಳನ್ನು ಕಂಡುಕೊಳ್ಳಲಾರದೆ, ತನ್ನನ್ನು ತಾನು ಅರ್ಥೈಸಿಕೊಳ್ಳುವ ಪ್ರಯತ್ನ ಮಾಡಲಾರದೆ ಆಕಾಶಗಾಮಿಯಾಗಿ ವೈಫಲ್ಯತೆ ಕಂಡುಕೊಂಡಿತ್ತು. ನವೋದಯ ಸಾಹಿತ್ಯ ಕಂಡುಕೊಳ್ಳಲಾರದ, ಸ್ಪಂಧಿಸಲಾರದ ಸಂಗತಿಗಳನ್ನು ಹಾಗೂ ಸಾಧಿಸಲಾರದ ಸಾಧ್ಯತೆಗಳನ್ನು ಕಂಡುಕೊಳ್ಳುವತ್ತ, ಸಾಧಿಸುವತ್ತ ಗುರಿಯಿಟ್ಟು ನವ್ಯ ಕಾವ್ಯ ಹುಟ್ಟಿಕೊಂಡಿತು. 'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಎಂಬ ಘೋಷಣೆಯೊಂದಿಗೆ ವಸ್ತು ರೂಪಗಳ ಬಗೆಗಿರುವ ಮೊದಲಿನ ಕಟ್ಟು ಕಟ್ಟಳೆಗಳನ್ನು ಹರಿದೊಗೆದು ಸ್ವಚ್ಛಂದವಾಗಿ ಹಾರಾಡತೊಡಗಿತು. ಅದು ಕಾರಣವಾಗಿ ಸೃಷ್ಟಿಯ ಪ್ರತಿಯೊಂದು ವಸ್ತುಗಳೂ ಕಾವ್ಯವಸ್ತುಗಳಾದವು. ಅಂತೇ ಪ್ರತಿ ಮನುಷ್ಯನೂ ಕವಿಯಾಗುವ ಸಾಧ್ಯತೆ ಉಂಟಾಯಿತು. ಇದರಿಂದ ಸಾಹಿತ್ಯ ಕ್ಷೇತ್ರದಲ್ಲಿ ಉಬ್ಬರವುಂಟಾಗಿ ಅಸ್ತಿತ್ವಕ್ಕಾಗಿ ಕೋಲಾಹಲ ಪ್ರಾರಂಭವಾಯಿತು. ಬಹುಶಃ ಈ ಕೋಲಾಹಲದ ಕಾಲದಲ್ಲಿಯೇ ಡಾ॥ ಸೋಮಶೇಖರವರ 'ಬೆಂಕಿ' ಹುಟ್ಟಿಕೊಂಡಿತು. ಅಂತೆಯೇ ಈ ಸಾಹಿತ್ಯಿಕ ಕೋಲಾಹಲಕ್ಕೆ ಅವರಲ್ಲಿ ಅವರಿಗೆ ಸ್ಪಂದಿಸಲು ಸಾಧ್ಯವಾಯಿತು.

ತನ್ನನ್ನು ತಾನು ಅರ್ಥೈಸಿಕೊಳ್ಳುವತ್ತ, ಬದುಕಿನ ಕೆಲವು ನಿಗೂಢಗಳಿಗೆ ಸ್ಪಂಧಿಸುವತ್ತ ಮುಖಮಾಡಿದ ನವ್ಯ ಸಾಹಿತ್ಯಕ್ಕೆ ಇದುವರೆಗೂ ಸಾಹಿತ್ಯ ಜಗತ್ತಿನಲ್ಲಿ ಕಾಲಿಡದ ಕೆಲವು ವಸ್ತುಗಳನ್ನು, ಮಜಲುಗಳನ್ನು ಹೊರತರುವ ಅವಶ್ಯಕತೆ ವಾಸ್ತವವಾಗಿಯೋ ಉದ್ದೇಶಪೂರ್ವಕವಾಗಿಯೋ ಅನಿವಾರ್ಯವಾಯಿತು. ಕೆಲವು ಕವಿಗಳಿಗೆ ಇರುವ ಹೊಸತನ್ನು ತೋರಿಸುವ ಹುಚ್ಚು ಭ್ರಮೆಯೂ ಕೂಡ ಅನವಶ್ಯವಾಗಿ, ಓದಿದವರು, ಕೇಳಿದವರು ಮೋರೆ ಕಿವುಚಬಹುದಾಂತಹ ನಿಗೂಢಗಳನ್ನು ಹೊರ ಹಾಕಲು ಕಾರಣವಾಯಿತು. ಅಲ್ಲದೇ ನಿರ್ಬಂಧವಿಲ್ಲದ ಛಂದೋಬಂಧ ಕವಿಗಳ ಮಹಾಪೂರವನ್ನೇ ಸೃಷ್ಟಿಸಿ ಸಾಹಿತ್ಯಿಕ ಕೋಲಾಹಲಕ್ಕೆ ಕಾರಣವಾಯಿತು ಆದ್ದರಿಂದ ನವೋದಯ ಮತ್ತು ನವ್ಯಕಾಲದ ಕಾವ್ಯಶಿಲ್ಪಗಳಲ್ಲಿ ಅಜಗಜಾಂತರ ವ್ಯತ್ಯಾಸ ಕಾಣ ತೊಡಗಿತು. ಆ ವ್ಯತ್ಯಾಸ ಸೋಮಶೇಖರ ಇಪಪ್ಪಾಪೂರ ಅವರಿಗೆ ಕಂಡದ್ದು ಹೇಗೆಂದರೆ :

ಅಂದು ನೀ
ತರು, ಲತೆ, ಮೈತುಂಬಿ ಹೂ ನಕ್ಕರೆಷ್ಟು ಚಂದ
ಇದ್ದಿ ಅಷ್ಟು ಚೆಂದ
ಅಂದ-ಬಂಧ
ಇಂದು ನೀ
ಆಕಾಶ ಮುಟ್ಟಿದ ಕವಲೊಡೆದ ಮರ
ಸಿಡಿಲು ಬಡಿದು ಗಿಡ ಸುಟ್ಟು
ಹೊಗೆ ಬಿಟ್ಟರೆಷ್ಟು ಚೆಂದ
ಅಷ್ಟು ಚಂದ (ಕಾವ್ಯ)

ಅಂದಿಗಿಂತ ಇಂದಿನ ಸಾಹಿತ್ಯ ಎತ್ತರವಾಗಿ ಬೆಳೆದು ಕವಲೊಡೆದು ಚಿಗಿತರೂ ಮೊದಲಿನದರ ಅಂದ ಈಗಿಲ್ಲ ಎಂಬುದೇ ಕವಿಯ ಭಾವನೆ. ಅದಕ್ಕೆ ಅವನು ಕಾರಣವನ್ನೂ ಕೊಡುತ್ತಾನೆ :

ನೀನೀಗ ತಲೆ ಮುಡಿ, ಎದೆ ನಡ ಅಲ್ಲಿಂದ ಕೆಳಗೆ
ಒಳಗೆ

ಎಂದು ಇಂದಿನ ಕವನದ ಅಶ್ಲೀಲತೆಯನ್ನು ಟೀಕಿಸುತ್ತಾನೆ. ಅದೂ ಅಲ್ಲದೆ, ಪ್ರಾಯಶಃ ನವ್ಯ ಕಾಲದ ಕಾವ್ಯ ಮತ್ತು ವಿಮರ್ಶಾ ಲೋಕದ ಗುಂಪುಗಾರಿಕೆಯನ್ನು ಕಂಡು ಕವಿ ಬೇಸತ್ತಿದ್ದಾನೆ. ಅದನ್ನು 'ನವ್ಯಕವಿ' ಮತ್ತು 'ವಿಮರ್ಶಕ' ಎಂಬ ಕವನಗಳ ಮುಖಾಂತರ ವಿಡಂಬಿಸುತ್ತಾನೆ. "ನಿನ್ನ ಮನೆಯು ಕತ್ತೆ ಇದ್ದರೂ ಹಿಡಿದು ತಾ, ಗೀಚಿ ಒಗೆವೆನು ಬೆಳಗುತಲೆ ಹತ್ತು ನವ್ಯ ಕವಿತೆ. ಅದೂ ನೋಡು ಕಸಬರಿಗೆ ಮುಗಿಲಲ್ಲಿ ಹೊಲಸನ್ನೆ ನೆಕ್ಕುತ್ತಾ ಬಿದ್ದಿಹುದು" ಎಂದು ಕಣ್ಣಿಗೆ ಕಂಡದ್ದೆಲ್ಲವೂ ಕಾವ್ಯವಸ್ತುಗಳಾದದ್ದನ್ನು ವಿಡಂಬಿಸುತ್ತಾನೆ.

ಯಾರಿಗೂ ಹೇಳಬೇಡ ನನ್ನ ಗುಟ್ಟು
ನಾ ನಿಮ್ಮವ ನೀ ನಮ್ಮವ
ಅಂತ ಹೇಳ್ತೇನಿ ಕೇಳು
ನಾನು ನವ್ಯ ಕವಿ
'ಹೂಂ' ಅನ್ನು
'ಹಾಂ' ಜಾಣ ಹೌದು
ನಾನು ನವ್ಯ ಕವಿ ದಿವ್ಯ ಕವಿ (ನವ್ಯ ಕವಿ)

ಹೀಗೆ ಒತ್ತಾಯಪೂರ್ವಕವಾಗಿ ಕವಿ ಪಟ್ಟ ಕಟ್ಟಿಸಿಕೊಂಡು ಹೆಮ್ಮೆ ಕೊಚ್ಚಿಕೊಳ್ಳುವ ಟೊಳ್ಳು ಕವಿಗಳನ್ನು ಕಂಡು ಕವಿ ಮರುಗಿದ್ದಾನೆ. ಈ ಕಾವ್ಯದ ಉದ್ದ–ಅಗಲ ಆಳದ ಸ್ವರೂಪವನ್ನು ತನಗೆ ತಿಳಿದಂತೆ ಅಳೆದುಕೊಂಡ ಕವಿಮನ ಇದಕ್ಕೆ 'ಮುಂಗ್ಯಾನ ಬಳ್ಳಿ' ಎಂಬ ಹೆಸರು ಕೊಡುವ ಸಾಹಸವನ್ನೂ ಮಾಡುತ್ತದೆ.

ನೀನು ವಿಮರ್ಶಕನೆಂದು
ನಾನು ಬೇಕಾದರೆ
ನಿನ್ನೊಡನೆ ಡೋಲು ಹೊಡೆಯುತ್ತೇನೆ
ನಮ್ಮ ಮೋರೆಯ ನೋಡಿ
ಮೊಳ ಹಾಕಬೇಕು–ಹಾಕಲಿಕ್ಕೇಬೇಕು
ಮೊನ್ನೆ ನೀ ಓಡಾಡಿಸಿ ಕೊಂದ ಆ ಹೆಣ ಅ...ಹಾಂ (ವಿಮರ್ಶಕ)

ಹೀಗೆ ವಿಮರ್ಶಕನ ಯಾವುದೋ ಒಂದು ದೌರ್ಬಲ್ಯವನ್ನು ಹಿಡಿದು ಭಯ ಹುಟ್ಟಿಸಿ ಅವನಿಂದ ತಮ್ಮಂತೆ ಡೋಲು ಬಡಿಸಿಕೊಂಡು ಮೆರೆಯುವ ಕವಿಗಳನ್ನು, ಹಾಗೆ ಡೋಲು ಬಡಿಯುವ ವಿಮರ್ಶಕರನ್ನು ಕಂಡು ಹೇಸಿದ್ದಾನೆ. ತನ್ನ ಕಾವ್ಯದ ಮುಖಾಂತರ ಅವರ ಟೊಳ್ಳು ವ್ಯಕ್ತಿತ್ವವನ್ನು ಬಯಲಿಗೆಳೆಯುವ ಪ್ರಯತ್ನವನ್ನೂ ಮಾಡುತ್ತಾನೆ.

ನವೋದಯದಿಂದೀಚಿನ ಕಾವ್ಯಪರಂಪರೆಯ ಬಗೆಗೆ ಡಾ॥ ಇಮ್ರಾಪೂರ ಅವರು ತಾಳಿದ ಪ್ರಸ್ತುತ ಧೋರಣೆಯ ವಿಶ್ಲೇಷಣೆಗೆ ಪೂರಕವಾಗಿ ೧೯೮೮ರಲ್ಲಿ ಮಡಕೇರಿಯಲ್ಲಿ ನಡೆದ ಅಖಿಲ ಭಾರತ ೫೯ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾದ ಕವಿಗೋಷ್ಠಿಯ ಉದ್ಘಾಟನಾ ಭಾಷಣ ಮಾಡುತ್ತಾ ಅವರು ಇತ್ತೀಚಿನ ಕಾವ್ಯಕೃಷಿಯ ಬಗೆಗೆ ಮಾತನಾಡಿದ ಮಾತುಗಳನ್ನು ಇಲ್ಲಿ ಕೊಡುವುದು ಔಚಿತ್ಯಪೂರ್ಣವಾದುದೆಂಬುದು ನನ್ನ ಅನಿಸಿಕೆ.

"ಈ ಕಾಲಕ್ಕೆ (ನವ್ಯ) ಕನ್ನಡ ನವೋದಯದಿಂದಲೇ ಅಂಕುರಿಸಿದ ಗುಂಪುಗಾರಿಕೆಗಳು, ನವ್ಯದಲ್ಲಿ ಪರಿಪೂರ್ಣಗೊಂಡು, ಇಂದಿನ ಕ್ರಾಂತಿ ಕಾವ್ಯದಲ್ಲೂ ಶಿಖರಪ್ರಾಯವಾಗಿ ಬೆಳೆದು ಸಾಹಿತಿ, ಕವಿಗಳಲ್ಲಿದ್ದ ಪರಸ್ಪರ ಬಾಂಧವ್ಯಗಳು ಕಳಚಿಬಿದ್ದು, ಗುಂಪುಗಾರಿಕೆಯ ದಂದುಗದಲ್ಲಿ ಕಾವ್ಯಸೃಷ್ಟಿ, ಹಾಗೂ ವಿಮರ್ಶೆಗಳು ವ್ಯಕ್ತಿನಿಷ್ಠಕ್ಕಿಳಿದು

ಸತ್ವಪೂರ್ಣವಾದ ಸಾಹಿತ್ಯಕ್ಕೆ ಸಲ್ಲಬೇಕಾದ ಗೌರವ ಸಲ್ಲದೇ ಹೋಯಿತು. ದಲಿತ... ಶೂದ್ರ ದೃಷ್ಟಿ ಒಂದೆಡೆ ಮನಸೆಳೆದರೆ–ಅಕಾವ್ಯ, ಗದ್ಯಪದ್ಯಗಳ ಪ್ರಯೋಗವೂ ಕಾವ್ಯದಲ್ಲಿ ಸ್ವಲ್ಪಕಾಲ ಹೊಸ ಆಸಕ್ತಿ ಕೆರಳಿಸಿದುವು. ಕಾವ್ಯದಭಿವ್ಯಕ್ತಿಗೆ ಜನಪದ ಆಡುಭಾಷೆಯನ್ನು ಬಳಸಿಕೊಳ್ಳುವ ಬಲವಂತ ಹಟ ಕಾವ್ಯ ಸೃಷ್ಟಿಯಲ್ಲೊಂದು ಅರ್ಥವಿಲ್ಲದ ಸಾಮೂಹಿಕ ಚಟವಾಗಿ ಪರಿಣಮಿಸಿದ್ದರಿಂದ, ಮಾತುಬಲ್ಲ ಯಾರಿಗಾ ದರೂ ಸರಿ, ಕನ್ನಡದಲ್ಲಿ ಕಾವ್ಯ ಬರೆಯುಬಲ್ಲ ಅಸಮಾನ್ಯ ಪ್ರತಿಭೆ ಜೋಗದ ಜಲಪಾತ ವಾಗಿ ಧುಮ್ಮಿಕ್ಕಿತು. ಆದರಿಂದ ಕನ್ನಡ ಕಾವ್ಯದ ಭವಿಷ್ಯವೇ ಕೊಚ್ಚಿಹೋಯಿತು. ಕಾವ್ಯ ಸೃಷ್ಟಿಗೆ ಬೇಕಾದ ಸ್ವಾನುಭವ, ಭಾಷೆಯ ತಿಳುವಳಿಕೆ ಪ್ರಭುತ್ವ ಕಾವ್ಯ ಪರಂ ಪರೆಯ ಅಲ್ಪವಾದರೂ ಜ್ಞಾನ ಅಭಿವ್ಯಕ್ತಿ ತಂತ್ರದ ನಾವಿನ್ಯತೆ ಹಾಗೂ ಇಡೀ ಸಮ ಕಾಲೀನ ಬದುಕನ್ನು ಪರಿವೀಕ್ಷಿಸುವ ಮತ್ತು ವಿಶ್ಲೇಶಿಸಿ ಚಿಕಿತ್ಸೆಗೊಳಪಡಿಸಬೇಕಾದ ಚಿಂತನಶೀಲ ಪ್ರವೃತ್ತಿ ಇತ್ಯಾದಿಗಳ ಸಂಪೂರ್ಣ ಕೊರತೆಯಿಂದಾಗಿ ಕಾವ್ಯಕ್ಷೇತ್ರ ಒಟ್ಟಿನಲ್ಲಿ ಮರುಳ್ಗಳ ತವರ್ಮನೆಯೆನಿಸಿತು...."

ಕಾವ್ಯ ಕ್ಷೇತ್ರದಲ್ಲಿಯೂ ತಲೆದೋರಿದ ಇಂಥ ರಾಜಕೀಯ ಹೊಲಸಾಟವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಹೇಳಿದ ಶ್ರೀಯುತರ ಮಾತುಗಳು ಆ ದೃಷ್ಟಿಯಿಂದ ಸೂಕ್ತವಾಗಿ ಕಂಡು, ಹೊಲಸಾಟವನ್ನು ತೊಲಗಿಸುವತ್ತ ಎಚ್ಚರಿಸುವಲ್ಲಿ ಸಂದೇಶ ವನ್ನು ಕೊಡುತ್ತಿರುವುದು ಸ್ವಾಗತಾರ್ಹ. ಆದರೆ ಇದೇ ಮಾತನ್ನು ಸಂಪೂರ್ಣ ಸಾಹಿತ್ಯಕ್ಕೆ ಅನ್ವಯಿಸಿ ಹೇಳುವುದು ಅತಿಶಯದ ಮಾತಾದೀತು. ಚಂದ್ರನಲ್ಲಿ ಎರಡು ಕಪ್ಪು ಕಲೆಗಳಿದ್ದಾಕ್ಷಣ ಬೆಳದಿಂಗಳಿಗೆ ಕುಂದುಂಟೆ? ನವ್ಯ ಸಾಹಿತ್ಯ ಕೆಲವು ಹೊಸ ಸಾಧನೆಗಳನ್ನು ಮಾಡಿ ಸಾಹಿತ್ಯೇತಿಹಾಸದಲ್ಲಿ ತನ್ನದೇ ಆದ ಹೆಜ್ಜೆಗಳನ್ನು ಮೂಡಿಸಿ ದ್ದನ್ನು ಯಾವ ಸಾಹಿತಿಯೂ ಮರೆಯುವಂತಿಲ್ಲ. ಈ ಮಾತನ್ನು ಡಾ॥ ಸೋಮ ಶೇಖರ ಇಮ್ರಾಪೂರ ಅವರೂ ಒಪ್ಪುತ್ತಾರೆ. ಇದೇ ಭಾಷಣದಲ್ಲಿ ಅವರು ಆಡಿದ "ನವ್ಯ ಪರಂಪರೆ ನವೋದಯಕ್ಕಿಂತ ತೀರ ಭಿನ್ನವಾದ—ನಮ್ಮನ್ನು ನಾವೇ ಅರ್ಥೈಸಿ ವಿಶ್ಲೇಷಿಸಿಕೊಳ್ಳುವ ವಿಶಿಷ್ಟ ಮನೋಧರ್ಮವನ್ನು ಕನ್ನಡ ಕಾವ್ಯಕ್ಕೆ ಕೊಟ್ಟಿದ್ದು ಮಾತ್ರ ಮಹತ್ವದ್ದಾಗಿದೆ...ಎಂಬುದನ್ನು ಒಟ್ಟಾರೆ ನೆನೆಯಬಹುದು. ಹೇಳಬೇಕಾ ದಲ್ಲಿ ಇಮ್ರಾಪುರ ಅವರ ಕಣ್ಣಿಗೆ ನವೋದಯದಿಂದೀಚಿನ ಕಾವ್ಯವೆಲ್ಲ ಮಂಗ್ಯಾನ ಬಳ್ಳಿ ಯಾಗಿ ಕಂಡದ್ದೂ ಆಶ್ಚರ್ಯಕರ ಸಂಗತಿ. 'ಬೆಂಕಿ' ಕವನ ಸಂಕಲನದ ಪ್ರಸ್ತಾವನೆ (ಹೇಳುವದಿಷ್ಟು) ಯಲ್ಲಿ ಅವರು ಆಡಿದ "ಸಾಹಿತ್ಯೇತಿಹಾಸದಲ್ಲಿ ಪರಂಪರೆ ಮತ್ತು ಪ್ರಗತಿ ನಿಸರ್ಗ ನಿಯಮ. ಇವು ಒಂದಕ್ಕೊಂದು ಪೂರಕವೇ ಹೊರತು ಮಾರಕವಲ್ಲ, ಹಳೆಯದೆಲ್ಲ ತ್ಯಾಜ್ಯ, ಹೊಸದೆಲ್ಲ ಪೂಜ್ಯವೆಂಬ ಒಂಟಿ ಹಿಡಿತಕ್ಕೆ ಸಾಹಿತ್ಯ ಚರಿತ್ರೆಯಲ್ಲಿ ಮನ್ನಣೆ ಇಲ್ಲ. ಆದರೆ ಈ ಸತ್ಯವನ್ನರಿಯದ ತಾನು ಕೃಷಿ ಮಾಡಬಯಸುವ ಸಾಹಿತ್ಯ ದಲ್ಲಿ, ಮುದ್ದಣನ ಹಿಂದೆ ಹಣಕಿ ನೋಡದ, ತಾನು ಬರೆದುದೇ ನವ್ಯ ಎಂಬ ಕೆಲವು ಹಂಗಾಮಿ ನವ್ಯ ಕವಿಗಳು ಎಬ್ಬಿಸಿದ ಧೂಳಿಯಿಂದಾಗಿ ಸಾಹಿತ್ಯಚಿತ್ರ ಮಸುಕುಗೊಂಡಿದೆ.

ಈ ಕತ್ತಲೆಯಲ್ಲಿಯೇ ಪರಸ್ಪರ ಕೈಕುಲುಕಿ ತಂತಮ್ಮ ಗುಂಪುಗಳನ್ನು ಕಟ್ಟಿಕೊಂಡು ಸ್ಪರ್ಧೆಗಿಳಿದಿರುವುದು ಶೋಚನೀಯ. ಈ ಗುಂಪುಗಳ ಹಿಂದೆ ಒಂದೊಂದು ವಿಮರ್ಶಕ ಸೈನ್ಯ ಸಜ್ಜುಗೊಂಡು ವಿಮರ್ಶೆ ಪರವಿಮರ್ಶೆ ಎಂಬ ಕವಲುಗಳನ್ನು ಕಟ್ಟಿಕೊಂಡಿದೆ."

ಅವರ ಈ ತರದ ಮಾತುಗಳೇ ಅವರು ತಳೆದ ವ್ಯಂಗ್ಯಾನ ಬಳ್ಳಿ ಭಾವನೆಗೆ ಸಾಕ್ಷಿಗಳೆಂದು ಹೇಳಬಹುದು. ಅವರ ಈ ಮಾತುಗಳಲ್ಲಿ ಸತ್ಯವಿಲ್ಲದೇ ಇಲ್ಲ. ಸಾಹಿತ್ಯ ಕೃಷಿ ಮಾಡಬಯಸುವವನಿಗೆ ಸಾಹಿತ್ಯ ಚರಿತ್ರೆಯ ಗಾಢ ಅರಿವು ಇರುವುದು ಅವಶ್ಯ. ಇಲ್ಲವಾದರೆ ಬಾವಿಯ ಕಪ್ಪೆಯ ಆರ್ಭಟವಾಗುವುದರಲ್ಲಿ ಸಂದೇಹವಿಲ್ಲ. ಇವಾಪೂರ ಅವರ ಇಂಥ ಮಾತುಗಳು ಉದಯೋನ್ಮುಖ ಕವಿಗಳಿಗೆ ಸವಾಲಾಗಿವೆ. ಸಂದೇಶ ಗಳೂ ಆಗಿವೆ. ಸಾಹಿತ್ಯ ಕ್ಷೇತ್ರದಲ್ಲಿ ಗುಂಪುಗಾರಿಕೆ ಸಲ್ಲದು. ಅದು ಎಷ್ಟೇ ಇದ್ದರೂ ಮೇಲೆ ಬಳಿದ ಬಣ್ಣ ಮಾತ್ರ. ಎಂದಾದರೊಂದು ದಿನ ಬಣ್ಣ ಬಯಲಾಗಿ ಸತ್ಯ ಹೊರ ಚೆಲ್ಲಲೇಬೇಕು. ಈ ಮಾತು ; ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುವಂತೆ ಸಾಹಿತ್ಯ ಕ್ಷೇತ್ರಕ್ಕೂ ಅನ್ವಯಿಸುವುದು ನೂರಕ್ಕೆ ನೂರರಷ್ಟು ಸತ್ಯ. ಈ ಮಾತಿಗೆ ದಿಟ್ಟ ವಿಮರ್ಶಕರು ಸಾಕ್ಷಿ ನುಡಿದೇ ನುಡಿಯುತ್ತಾರೆ. ಕೆಲವೇ ಕೆಲವು ತಿಳಿಗೇಡಿ ಕುನ್ನಿಗಳು ಮಾಡಿದ ಮಂಗಚೇಷ್ಟೆಯನ್ನೇ ಗಮನಿಸಿ ಇಡೀ ಕ್ಷೇತ್ರವನ್ನು ದೂಷಿಸುವ ಮಾತು ಸ್ವಲ್ಪಮಟ್ಟಿಗೆ ಬಿರುಸಾಗುತ್ತದೆ ಎಂಬುದೇ ನನ್ನ ಪ್ರಾಮಾಣಿಕ ಅನಿಸಿಕೆ. ಅಂತೂ ಡಾ॥ ಸೋಮಶೇಖರ ಇವಾಪೂರ ಅವರ ಕವನ ಸಂಕಲನ ತನ್ನ ಒಡಲಲ್ಲೆ ಬೆಂಕಿ ಯನಿಟ್ಟುಕೊಂಡು ಪರಿತಪಿಸುವುದರೊಂದಿಗೆ ಆ ಬೆಂಕಿಯಿಂದ ಇತರರೊಡಲಿಗೂ ಉರಿ ಹಚ್ಚಿ ಬೇಯಿಸಿ ಪಾಕ ಮಾಡುವತ್ತ ಶ್ರಮಿಸಿದ್ದು ಗಮನಾರ್ಹ.

ಇನ್ನು ಡಾ : ಇವಾಪೂರ ಅವರ ಕಾವ್ಯಭಾಷೆಯ ಬಗೆಗೆ ಎರಡು ಮಾತು ಹೇಳುವುದು ಅವಶ್ಯ. "ಕವಿ ಗರ್ಭದಿಂದ ಕೃತಿ ಹುಟ್ಟಿದರೆ ಸಮಾಜದ ಗರ್ಭದಿಂದ ಕವಿ ಹುಟ್ಟಿರುತ್ತಾನೆ. ಅಂತೆ ಕವಿ ಹುಟ್ಟಿ ಬೆಳೆದ ಸಮಾಜದ ಗಂಧ ಗಾಳಿಗಳು ಆತನ ಗರಿವಿಲ್ಲದೇ ಆತನ ಕಾವ್ಯದಲ್ಲಿ ಸಹಜವಾಗಿ ಉಸಿರಾಡುತ್ತವೆ. ಈ ದಿಶೆಯಲ್ಲಿ ಜಾನ ಪದವನ್ನೇ ಉಂಡು ಬದುಕುತ್ತಿರುವ ಶ್ರೀ ಇವಾಪೂರ ಅವರು ತಮ್ಮ ಕಾವ್ಯಾಭಿ ವ್ಯಕ್ತಿಗೆ ಜನಪದ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾರೆ. ಅದರ ಗತ್ತು ಗಮತ್ತು ಹಿಕ್ಮತ್ತುಗಳನ್ನೆಲ್ಲ ಅವರು ಅರಿತವರಾಗಿದ್ದಾರೆ. ಅಂತೆ ಅಭಿವ್ಯಕ್ತಿ ಮಾಧ್ಯಮ ಗಳಾದ ಭಾಷೆ. ಸಂಕೇತ, ಪ್ರತಿಮೆಗಳು ಜನಪದೀಯವೇ ಆಗಿವೆ. 'ಬೆಂಕಿ' ಕವನ ಸಂಕಲನದ ಬಹಳಷ್ಟು ಕವನಗಳ ವಸ್ತು ಮತ್ತು ಧೋರಣೆಗಳು ಒಂದರ್ಥದಲ್ಲಿ ಶಿಷ್ಟದ ನಿಟ್ಟಿನಲ್ಲಿಯೇ ಬರುವಂಥವುಗಳಾಗಿದ್ದರೂ ಅವುಗಳ ಸಾಧನೆಗೆ ಜನಪದ ಭಾಷೆಯನ್ನು ಬಳಸಿರುವುದು ಕವಿಯ ಪ್ರತಿಭಾ ವೈಶಿಷ್ಟ್ಯವಾಗಿದೆ. ಶಿಷ್ಟ ಪದಗಳೂ ಸಹಿತ ಹಿಡಿ ದಿಡಲು ಹೆಣಗಾಡಬಹುದಾದಂತಹ ಭಾವನೆಗಳನ್ನು ಜನಪದರ ಆಡುನುಡಿಯಲ್ಲಿ ಹಿಡಿ ದಿಟ್ಟಿರುವುದು ಡಾ॥ ಇವಾಪೂರ ಅವರ ಭಾಷೆಯ ವೈಶಿಷ್ಟ್ಯ. ಉದಾಹರಣೆಗೆ :

ನೀನು ವಿಮರ್ಶಕನೆಂದು
ನಾನು ಬೇಕಾದರೆ
ನಿನ್ನೊಡನೆ ಡೋಲು ಹೊಡೆಯುತ್ತೇನೆ
ನೀ............
ನಮ್ಮ ಮೋರೆಯ ನೋಡಿ
ನಮ್ಮ ಮೋರೆಯ ನೋಡಿ
ಮೊಳ ಹಾಕಬೇಕು—ಹಾಕಲಿಕ್ಕೇ ಬೇಕು (ವಿಮರ್ಶಕ)

ಹೆದರಿಕೆಯಿಂದಲೋ ಒತ್ತಾಯದಿಂದಲೋ ಒಬ್ಬರಿಗೊಬ್ಬರು ತಮ್ಮಷ್ಟಕ್ಕೆ ತಾವೇ ಬೆನ್ನು ಚಪ್ಪರಿಸಿಕೊಳ್ಳುವ ಈ ಕ್ರಿಯೆಯನ್ನು ‘ಡೋಲು ಬಡಿ’ ಮೋರೆ ನೋಡಿ ಮೊಳ ಹಾಕು’ ಎನ್ನುವ ಜನಪದ ಆಡುನುಡಿಗಳು, ಅವರ ಸನ್ನಿವೇಶವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುವಲ್ಲಿ ಸಮರ್ಥವಾಗಿ, ಕಾವ್ಯಕ್ಕೆ ಒಂದು ಶಕ್ತಿಯನ್ನು ತಂದು ಕೊಟ್ಟಿವೆ.

ಬೇರೊಬ್ಬರಿ ಹನ್ನೆರಡೂ ತಿಂಗಳ ಡುಬ್ಬ ಚಪ್ಪರಿಸಿ
ಪಕ್ಕಡಿ ಎಲುವುಗಳ
ತಿಂದು
ದಿತ್ತೆಂದು ಬಂತು ಮತ್ತೆ
ಅದೇ ಯುಗಾದಿ (ಮತ್ತೆ ಬಂತು ಯುಗಾದಿ)

ಎಂಬಲ್ಲಿಯ ಜನಪದ ಭಾಷೆಯ ಸಹಜತೆ, ಸೊಗಡು, ಅರ್ಥವಂತಿಕೆ ಕಣ್ಣುಕಟ್ಟು–ವಂತಹದ್ದು.

ಹೀಗೆ ಡಾ॥ ಇವಾತ್ರಾಪೂರ ಅವರ ‘ಬೆಂಕಿ’ಯ ಬಹುಪಾಲು ಕವನಗಳು ಜನಪದ ಲಯದಲ್ಲೆ ನಡೆದುಕೊಂಡು, ಜನಪದರ ಭಾಷೆಯನ್ನು ಸತ್ವಗೆಡದಂತೆ ಬಳಸಿಕೊಂಡು ಸಮಗ್ರ ಕಾವ್ಯಶಿಲ್ಪಿಗಳಾಗಿವೆ. ಕಲ್ಪನೆಗೆ ನಿಲುಕಲಾರದ ಅಲಂಕಾರಗಳನ್ನಾಗಲೀ, ನಾಲಗೆಗಸಾಧ್ಯವಾದ ಶಬ್ದಗಳನ್ನಾಗಲೀ ಬಳಸದೇ ಸರಳ ಸುಂದರ ಭಾಷೆಯಲ್ಲಿ ಹಸಿ ಗೋಡೆಗೆ ಹರಳು ಒಗೆದಂತೆ ಭಾವನೆಗಳನ್ನು ಅಭಿವ್ಯಕ್ತಿಸುವ ಇವರ ಕವನಗಳು ನಿರಾಭರಣ ಸುಂದರಿಯರಂತೆ ಆಕರ್ಷಕವಾಗಿವೆ. ಬಹುಪಾಲು ಕವನಗಳು ಮೊನಚಾದ ಭಾಷೆಯಿಂದ ಇರಿದು ‘ಓದುಗರ ಅರಿವನ್ನು ಎಚ್ಚರಿಸುತ್ತವೆಯಲ್ಲದೇ ಕೆಲವು ಕವನಗಳಾದರೂ ಕೋಮಲವಾದ ಭಾಷೆಯಿಂದ ಹೃದಯವನ್ನು ತಣಿಸುತ್ತವೆ ಎಂಬ ಸತ್ಯವನ್ನು ಮುಚ್ಚಿಡಲಾಗದು. ಅಂತು, ಎಂಥ ಅನುಭವಗಳನ್ನಾದರೂ ಅಭಿವ್ಯಕ್ತಿಸುವಲ್ಲಿ ಜನಪದ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳಬಹುದಾದ ಕವಿ ಡಾ॥ ಸೋಮಶೇಖರ ಇವಾತ್ರಾಪೂರ ಎಂಬುದರಲ್ಲಿ ಯಾವ ಅತಿಶಯೋಕ್ತಿಯೂ ಇರಲಾರದು.

ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ

ಸುಧಾಕರ

ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ 'ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ' ಎಂಬ ಈ ಕೃತಿ ಕೆಲವು ದೃಷ್ಟಿಗಳಿಂದ ಗಮನಾರ್ಹವಾದದ್ದು. ಕುವೆಂಪು, ಜಿ. ಎಸ್. ಶಿವರುದ್ರಪ್ಪ ಅವರು ಕಾವ್ಯಾರ್ಥ ಸಂಬಂಧವಾದ ತಮ್ಮ ಚಿಂತನೆಗಳನ್ನು ಲೇಖನರೂಪದಲ್ಲಿ ಬರೆದು ಭಾರತೀಯ ಕಾವ್ಯಮೀಮಾಂಸೆ ಹಾಗೂ ವಿಮರ್ಶೆಯ ಬೆಳವಣಿಗೆಗೆ ಕೊಡುಗೆಯನ್ನು ನೀಡಿರುವಂತೆ, ತಿಪ್ಪೇರುದ್ರಸ್ವಾಮಿಯವರ ಈ ಕೃತಿಯ ಕೆಲವು ಲೇಖನಗಳು ಆ ನಿಟ್ಟಿನಲ್ಲಿ ಇಟ್ಟಂಥ ದಿಟ್ಟ ಹೆಜ್ಜೆಗಳು ಎನ್ನಬಹುದು. ಸಾಹಿತ್ಯದ ಕೆಲವು ಮೂಲಭೂತ ಸಮಸ್ಯೆಗಳ ಬಗೆಗೆ ಇಲ್ಲಿ ತಾತ್ತ್ವಿಕ ಚಿಂತನೆಯನ್ನು ನಡೆಸಿದ್ದಾರೆ. ಭಾರತೀಯ ಕಾವ್ಯಮೀಮಾಂಸೆ, ವಿಮರ್ಶೆ ಮತ್ತು ಸಾಹಿತ್ಯಗಳ ಜೊತೆಜೊತೆಗೇ ಪಾಶ್ಚಾತ್ಯ ಕಾವ್ಯ ಮೀಮಾಂಸೆ, ವಿಮರ್ಶೆ ಮತ್ತು ಸಾಹಿತ್ಯಗಳನ್ನು ಆಳವಾಗಿ ಅಭ್ಯಾಸ ಮಾಡಿರುವ ಇವರು ತಮ್ಮ ಅಗಾಧ ಅನುಭವದ ಬೆಳಕಿನಲ್ಲಿ ಜೊಳ್ಳನ್ನು ತೂರಿ ಗಟ್ಟಿಕಾಳನ್ನು ಗುಪ್ಪೆ (ರಾಶಿ) ಮಾಡಲು ಯತ್ನಿಸಿರುವುದು ಕಂಡುಬರುತ್ತದೆ.

ಈ ಕೃತಿಯಲ್ಲಿ ಒಟ್ಟು ಹತ್ತು ಲೇಖನಗಳಿವೆ. ಕೊನೆಯ ಎರಡು ಲೇಖನಗಳು–ಭಾರತ ಭಾಗ್ಯ ವಿಧಾತ

ಹಾಗೂ ಮುಗದನ್ನೇ ಮಾಲತಿ-ಕ್ರಮವಾಗಿ ಗೊರೂರು ಹಾಗೂ ಭಾರತಿಸುತರ ಎರಡು ಕೃತಿಗಳ ಪರಿಚಯಾತ್ಮಕ ವಿಮರ್ಶೆ. ಉಳಿದವು ಸಾಹಿತ್ಯ ಸಂಬಂಧವಾದ ಸಮಸ್ಯೆಗಳನ್ನು ತಾತ್ವಿಕ ನೆಲೆಗಟ್ಟಿನಲ್ಲಿ ವಿವೇಚಿಸುವ ವ್ಯಾಪಕ ದೃಷ್ಟಿಯುಳ್ಳ ಲೇಖನಗಳು.

'ಸಾಹಿತ್ಯ ಮತ್ತು ವಾಸ್ತವಿಕತೆ' ಎಂಬ ಲೇಖನದಲ್ಲಿ ನಿಜವಾದ ವಾಸ್ತವಿಕತೆ ಎಂದರೆ ಯಾವುದು ಎಂಬುದನ್ನು ವಿವೇಚಿಸಿದ್ದಾರೆ. ವಾಸ್ತವಿಕತೆ ಎಂದರೆ ಜೀವನದ ವರದಿ ಎಂದು ಪ್ಲೇಟೋ ಭಾವಿಸಿರುವುದನ್ನೂ, ಅರಿಸ್ಟಾಟಲ್ ಅದಕ್ಕೆ ವಿರುದ್ಧವಾಗಿ 'ವಾಸ್ತವ ಜೀವನದ ಆಳವಾದ ಅನುಭವದಿಂದ ಮೂಡಿದ ಒಟ್ಟಂದದ ಮನೋಧರ್ಮವೇ ನಿಜವಾದ ವಾಸ್ತವಿಕತೆ' ಎಂದು ಭಾವಿಸಿರುವುದನ್ನೂ ಹೇಳಿ, ಅರಿಸ್ಟಾಟಲನ "For the purpose of poetry a convincing impossibility is preferable to an un convincing possibility" ಎಂಬ ಮಾತಿನಿಂದ ಸ್ಪಷ್ಟಪಡಿಸಿದ್ದಾರೆ. ಪಾಶ್ಚಾತ್ಯ ಕಾವ್ಯಮೀಮಾಂಸಕರ ಹಾಗೂ ವಿಮರ್ಶಕರ ನಿಲುವಿಗೆ ಭಾರತೀಯ ಕಾವ್ಯಮೀಮಾಂಸಕರ ನಿಲುವುಗಳೂ ಪೂರಕವಾಗಿ ನಿಲ್ಲುವುದನ್ನು ಸ್ಪಷ್ಟಪಡಿಸಿ "ಯಾವುದೇ ಸಾಹಿತ್ಯ ಕೃತಿ ಜೀವನದ ಸಮಗ್ರ ವಾಸ್ತವಿಕ ವರದಿಯಲ್ಲ. ಲೇಖಕನ ಆಯ್ಕೆ ಅಲ್ಲಿ ಪ್ರಮುಖವಾಗುತ್ತದೆ. ಆ ಆಯ್ಕೆ ಲೇಖಕನ ಕಾಣ್ಕೆಯಿಂದ ಪ್ರೇರಿತವಾಗಿರುತ್ತದೆ. ಕಾಣ್ಕೆಯಂತೆ ಆಯ್ಕೆ" ಎಂಬುದನ್ನು ಖಚಿತವಾಗಿ ಹೇಳಿದ್ದಾರೆ. ವೇಶ್ಯಾಸಮಸ್ಯೆಯನ್ನು ಕುರಿತ ಅ.ನ.ಕೃ ಅವರ ಕಾದಂಬರಿಗಳಲ್ಲಿ ಕಾಣ್ಕೆಯಿಂದ ಪ್ರೇರಿತವಾದ ಆಯ್ಕೆ ಇಲ್ಲದ್ದರಿಂದ ಕೃತಿಗಳು ಹೇಗೆ ಸೋತಿವೆ ಎಂಬುದನ್ನು ವಿವೇಚಿಸಿದ್ದಾರೆ. ಮುಂದುವರಿದು, 'ಬಾಹ್ಯ ಜೀವನ ಚಿತ್ರಣ ವಾಸ್ತವಿಕತೆಯ ಒಂದು ಮುಖವಾಗಿರುವ ಹಾಗೆ ಅಂತರಂಗದ ಮಾನವ ಸ್ವಭಾವದ ಚಿತ್ರಣ ಅದರ ಇನ್ನೊಂದು ಮುಖವಾಗಿದೆ ; ಅದೂ ಕೂಡ ಅನಿವಾರ್ಯ' ಎಂಬುದನ್ನು ಒತ್ತಿ ಹೇಳಿದ್ದಾರೆ. ಒಟ್ಟಿನಲ್ಲಿ ಪಾಶ್ಚಾತ್ಯ ಹಾಗೂ ಭಾರತೀಯ ವಿಮರ್ಶೆಯ ಮಾನದಂಡಗಳಿಂದ ಪ್ರಸ್ತುತ ವಿಷಯವನ್ನು ಕೂಲಂಕಷವಾಗಿ ಮಥಿಸಿ ಲೇಖಕ ಹಿಡಿಯಬೇಕಾದ ಜಾಡನ್ನು ಸೂಚಿಸಿದ್ದಾರೆ.

ಎರಡನೆಯ ಲೇಖನವಾದ 'ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ' ಎಂಬುದರಲ್ಲಿ ವಾಸ್ತವತೆ (Naturalism) ವಾಸ್ತವಿಕತೆ (Realism) ಗಳಿಗೆ ಇರುವ ವ್ಯತ್ಯಾಸವನ್ನು ಸ್ಪಷ್ಟಪಡಿಸಿ ಸಮಕಾಲೀನತೆಯನ್ನು ವಿವರಿಸಲು ಯತ್ನಿಸಿದ್ದಾರೆ. ಆದರೆ ಸಮಕಾಲೀನ ಪ್ರಜ್ಞೆ ಹಾಗೂ ಸಾಮಾಜಿಕ ಪ್ರಜ್ಞೆಗಳ ಬಗೆಗೆ ಅವರು ಮಾಡಿರುವ ವಿಶ್ಲೇಷಣೆ ಕೊಂಚ ಅಸ್ಪಷ್ಟ, ಗೊಂದಲ ಎನ್ನಿಸುತ್ತದೆ. ಉದಾಹರಣೆಗೆ "ತತ್ಕಾಲೀನ ಪರಿಸರದ ವಿಶಿಷ್ಟ ಅನುಭವಗಳನ್ನು ಕುರಿತದ್ದು ಸಮಕಾಲೀನ ಪ್ರಜ್ಞೆ. ಸಾರ್ವಕಾಲಿಕ ಸಾಮಗ್ರಿಗಳನ್ನು ಕುರಿತದ್ದು ಸಾಮಾಜಿಕ ಪ್ರಜ್ಞೆ" ಎಂಬ ಅವರ ಮಾತುಗಳನ್ನು ಗಮನಿಸಬಹುದು. ಸಾಮಾಜಿಕ ಪ್ರಜ್ಞೆ ಸಮಕಾಲೀನವೂ ಹೌದು, ಸಾರ್ವಕಾಲೀನವೂ ಹೌದು—ಅಲ್ಲವೇ ? ಅದು ಪೂರ್ಣವಾಗಿ ಸಾರ್ವಕಾಲಿಕ ಎಂದು ಹೇಳುವುದು

ಹೇಗೆ ? ಸಮಕಾಲೀನವಾಗಿದ್ದೂ ಸಾರ್ವಕಾಲಿಕ ಅಂಶಗಳನ್ನು ಹೇಗೆ ಒಳಗೊಂಡಿದೆ ಎಂಬುದರ ಮೇಲೆ ಸಾಮಾಜಿಕ ಪ್ರಜ್ಞೆಯ ಪ್ರಬುದ್ಧತೆ ಎದ್ದುಕಾಣುತ್ತದೆಯಲ್ಲವೆ ? ಇದು ಒತ್ತಟ್ಟಿಗೆ ಇರಲಿ. ಹಿಂದಿನ ಲೇಖನದ ಬಹುಪಾಲು ಅಭಿಪ್ರಾಯಗಳು, ಉದ್ಧೃತ ಭಾಗಗಳು ಈ ಲೇಖನದಲ್ಲೂ ಪುನರುಕ್ತವಾಗಿವೆ. ಈ ಎರಡು ಲೇಖನಗಳು ಸಂಲಗ್ನಗೊಂಡು ಒಂದು ಸಮಗ್ರ ಲೇಖನವಾಗಿದ್ದರೆ ಪುನರುಕ್ತಿಗೆ ಅವಕಾಶವಾಗುತ್ತಿರಲಿಲ್ಲ ಎನ್ನಿಸುತ್ತದೆ. ಬಹುಶಃ ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಸಂದರ್ಭಗಳಿಗಾಗಿ ಬರೆದ ಲೇಖನಗಳಾದ್ದರಿಂದ ಅಭಿಪ್ರಾಯಗಳ ಹಾಗೂ ಉದ್ಧೃತ ಭಾಗಗಳ ಪುನರಾವೃತ್ತಿಯನ್ನು ಕಾಣುತ್ತೇವೆ. ಆದರೂ ಸಮಸ್ಯೆಯನ್ನು ಕಡೆದು ನಿರ್ಣಯಗಳ ನಿಲುಗಡೆಗೆ ತಲುಪುವಲ್ಲಿ ಖಚಿತತೆ ಎದ್ದು ಕಾಣುತ್ತದೆ.

'ಮಹಾಕಾವ್ಯ ಮತ್ತು ರುದ್ರನಾಟಕ' ಎಂಬ ಲೇಖನದಲ್ಲಿ ಅವೆರಡಕ್ಕೂ ಇರುವ ಸಾಮ್ಯ ವೈಶಮ್ಯಗಳನ್ನು, ಸೀಮಿತವ್ಯಾಪಕ ದೃಷ್ಟಿಗಳನ್ನು, ಪಾಶ್ಚಾತ್ಯ ಹಾಗೂ ಭಾರತೀಯ ಕಾವ್ಯ ಮೀಮಾಂಸೆ ಮತ್ತು ವಿಮರ್ಶೆಯ ನಿಲುವುಗಳಿಂದ ಸ್ಪಷ್ಟ ಪಡಿಸಿದ್ದಾರೆ. ಲಘುವಾದ ವಸ್ತು ಕಲಾತ್ಮಕವಾಗಬಹುದಾದರೂ ಮಹಾಕಾವ್ಯ ಅಥವಾ ರುದ್ರನಾಟಕದ ಪರಿಣಾಮವನ್ನು ಅದು ಸಾಧಿಸಲಾರದು ಎಂದು ಹೇಳುತ್ತಾ ಅವರು ಕೊಡುವ ಸಾದೃಶ್ಯ ಮೆಲುಕು ಹಾಕುವಂಥದು– "ಹುಲ್ಲನ್ನು ಆಶ್ರಯಿಸಿದ ಬೆಂಕಿಯಂತೆ ಅದು ಬಗ್ಗನೆ ಉರಿಯಬಹುದು. ಆದರೆ ಕಲ್ಲಿದ್ದಲನ್ನು ಆಶ್ರಯಿಸಿದ ಬೆಂಕಿ ಸಾಧಿಸುವ ಪರಿಣಾಮವನ್ನಂತೂ ಮಾಡಲಾರದು". ವ್ಯಾಪಕ ಓದು ಹಾಗೂ ಅಗಾಧ ಅನುಭವಗಳಿಂದ ಮಾತ್ರ ಹೀಗೆ ಅಮೂರ್ತವಾದುದನ್ನು ಮೂರ್ತರೂಪದಲ್ಲಿ ಹೇಳುವ ಸಾಮರ್ಥ್ಯ ಸಾಧ್ಯವಾಗುತ್ತದೆ.

'ವ್ಯಕ್ತಿತ್ವ ನಿರಸನ' ಎಂಬ ಲೇಖನ ಅವರ ವಿಚಾರ ಪ್ರಣಾಲಿಗೊಂದು ನಿದರ್ಶನ. ಭಾರತೀಯ ಹಾಗೂ ಪಾಶ್ಚಾತ್ಯ ಅಭಿಪ್ರಾಯಗಳ ಬೆಳಕಿನಲ್ಲಿ ಇದನ್ನು ವಿವರಿಸಿದ್ದಾರೆ. ಭಾವ ನಿರಸನ (ವಿಭಾವ) ವ್ಯಕ್ತಿತ್ವ ನಿರಸನ (ಸಾಧಾರಣೀಕರಣ)– ಹೀಗೆ ಪಾಶ್ಚಾತ್ಯ ಹಾಗೂ ಭಾರತೀಯ ಪರಿಭಾಷೆಗಳಲ್ಲಿರುವ ಸಮಾನ ಸ್ಪಂದನವನ್ನು ಗುರುತಿಸಿದ್ದಾರೆ. "ಭಾವ ನಿರಸನದ ಮುಂದಿನ ಹೆಜ್ಜೆಯೇ ವ್ಯಕ್ತಿತ್ವದ ನಿರಸನ. ಭಾವ ನಿರಸನ ಎಂದರೆ ಹೇಗೆ ಭಾವ ನಿರಾಕರಣ ಅಥವಾ ನಾಶವಲ್ಲವೋ ಹಾಗೆಯೇ, ವ್ಯಕ್ತಿತ್ವ ನಿರಸನ ಎಂದರೆ ವ್ಯಕ್ತಿತ್ವದ ಅಭಾವವಾಗಲೀ ನಿರಾಕರಣವಾಗಲೀ ನಾಶವಾಗಲಿ ಅಲ್ಲ. ಅದು ವ್ಯಕ್ತಿತ್ವದ ನಿರ್ಲಿಪ್ತ ಸ್ಥಿತಿ; ಇನ್ನೊಂದು ಹಂತದಲ್ಲಿ ವ್ಯಕ್ತಿತ್ವದ ವಿಕಾಸಸ್ಥಿತಿ, ಪರಿವರ್ತನ ಸ್ಥಿತಿ. ಆದುದರಿಂದ ಎಲಿಯಟ್ ಹೇಳುವಂತೆ ಯಾರಿಗೆ ಭಾವವಿದೆಯೋ ಯಾರಿಗೆ ವ್ಯಕ್ತಿತ್ವ ವಿದೆಯೋ ಅವರಿಗೆ ಮಾತ್ರ ಗೊತ್ತು ಅವುಗಳ ನಿರಸನವೆಂದರೇನೆಂಬುದು" ಎಂಬ ಮಾತುಗಳು ಮೆಲುಕು ಹಾಕುವಂತಿವೆ. ಹೀಗೆಯೇ ಕಾವ್ಯಕ್ಕೂ ಕವಿಯ ವ್ಯಕ್ತಿತ್ವಕ್ಕೂ ಇರುವ ಸಂಬಂಧವನ್ನು ಸ್ಪಷ್ಟಪಡಿಸಲು ಕೊಡುವ ಅರ್ಥಪೂರ್ಣವಾದ ಆಧುನಿಕ

ವೈಜ್ಞಾನಿಕ ಸಾದೃಶ್ಯವನ್ನು ನೋಡಿ" ಒಂದು ರೀತಿಯಲ್ಲಿ ಕವಿಯ ವ್ಯಕ್ತಿತ್ವ, ಉಪಗ್ರಹವನ್ನು ಉಡಾಯಿಸುವಾಗ ಬಳಸುವ ರಾಕೆಟ್ಟಿನಂತೆ ಒಂದು ಎತ್ತರದವರೆಗೂ ಅದನ್ನು ತಳ್ಳಿ ಅನಂತರ ತಾನು ಹಿಂದೆ ಸರಿಯುತ್ತದೆ. ಉಪಗ್ರಹವನ್ನೇ ಹಿಂದೆ ತಳ್ಳಿ ರಾಕೆಟ್ಟೇ ಮುಂದೆ ಹೋದರೆ ಅದರಲ್ಲೇನೋ ದೋಷವಿದೆ ಎಂದರ್ಥ. ಆದರೆ ಉಪಗ್ರಹ ಹಾರುವ ಎತ್ತರ ರಾಕೆಟ್ಟಿನ ಶಕ್ತಿಯನ್ನು ಅವಲಂಬಿಸಿದೆ ಎಂಬುದನ್ನು ಮರೆಯುವಂತಿಲ್ಲ." ಆಧುನಿಕ ಯುಗದ ವೈಜ್ಞಾನಿಕ ಸಾಧನೆ ಸಿದ್ಧಿಯ ಸಾದೃಶ್ಯಗಳು ನಮ್ಮ ಸಾಹಿತ್ಯ ಹಾಗೂ ವಿಮರ್ಶಾ ವಲಯಗಳ ಒಳಕ್ಕೆ ಕಾಲಿರಿಸುವುದು ಯಾವಾಗ ಎಂದರೆ ಲೇಖಕ ಹಾಗೂ ವಿಮರ್ಶಕರಿಗೆ ಸಮಕಾಲೀನ ಪ್ರಜ್ಞೆಯ ಸ್ಪಂದನ ಶಕ್ತಿ ಇದ್ದಾಗ ಮಾತ್ರ; ವ್ಯಾಪಕ ಓದು, ಅಪಾರ ಅನುಭವ, ತೆರೆದ ಕಣ್ಣಿನ ಸಂತತ ನಿರೀಕ್ಷಣ ಶಕ್ತಿ ಅವರಲ್ಲಿ ಜಾಗೃತವಾಗಿದ್ದಾಗ ಮಾತ್ರ. ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರಿಗೆ ಇವುಗಳು ಇರುವುದರಿಂದಲೇ ಕಷ್ಟವಾದುದನ್ನೂ ಸ್ಪಷ್ಟವಾಗಿ ಮುಷ್ಟಿಗ್ರಾಹ್ಯ ಮಾಡುವಂಥ ಅಭಿವ್ಯಕ್ತಿ ಶಕ್ತಿ ಪಡೆದುಕೊಂಡಿದ್ದಾರೆ. ಆದರೆ ಎಲಿಯಟ್ ಕೊಟ್ಟ ವೇಗವರ್ಧಕ (Catalyst) ಸಾದೃಶ್ಯವನ್ನು ಒಂದು ಹಂತದ ಆಚೆಗೆ ಹಿಂಜಿದರೆ ಕಷ್ಟ ಎಂದು ಹೇಳಿ ಅವರೇ ನೀಡುವ "ರಸಾಯನಿಕ ಕ್ರಿಯೆಗೆ ಕಾರಣವಾಗುವ ಪ್ಲಾಟಿನಂ ತಂತಿ ಬದಲಾಗುವುದಿಲ್ಲ; ಬದಲಾವಣೆಗೆ ಕಾರಣವಾಗುತ್ತದೆ. ಆದರೆ ಕವಿ ಪ್ಲಾಟಿನಂ ತಂತಿಯಂತೆ ಜಡವಲ್ಲ. ಕವಿ ಕಾವ್ಯದ ಜೊತೆಗೇ ಬೆಳೆದು ಪರಿವರ್ತಿತನಾಗುತ್ತಾನೆ" ಎಂಬ ವಿವರಣೆ ಅವರು ಕೊಡುವ ಉಪಗ್ರಹ ಉಡಾವಣೆಯ ವೈಜ್ಞಾನಿಕ ಸಾದೃಶ್ಯಕ್ಕೂ ಅನ್ವಯಿಸುತ್ತದೆ ಎಂಬುದನ್ನು ಮರೆಯುಂತಿಲ್ಲ. ಒಟ್ಟಿನಲ್ಲಿ ಈ ಲೇಖನ ಸ್ವತಂತ್ರ ಪ್ರಭೆಯಿಂದ ಕೂಡಿದೆ.

'ಪರಂಪರೆ ಮತ್ತು ವಿಮರ್ಶಕ' ಎಂಬುದು ಮತ್ತೊಂದು ವಿಚಾರ ಪೂರ್ಣವಾದ ಲೇಖನ, ಸಂಪ್ರದಾಯ (Convention) ಪರಂಪರೆ (Tradition) ಗಳಿಗೆ ಇರುವ ವ್ಯತ್ಯಾಸ, ಉತ್ತಮ ಕವಿ ಹಾಗೂ ಉತ್ತಮ ವಿಮರ್ಶಕನಿಗೆ ಇರಲೇಬೇಕಾದ ಪರಂಪರೆಯ ಪ್ರಜ್ಞೆಯನ್ನು ವಿವರಿಸಿದ್ದಾರೆ. ತಮ್ಮ ನಿಲುವಿಗೆ ಪೂರಕವಾಗಿ ಎಲಿಯಟ್ಟನ ನಿಲುವನ್ನು ಉದಾಹರಿಸಿ ಮುಂದುವರಿದಿದ್ದಾರೆ. ಅವರು ಹೇಳುವ ಕೆಲವು ಮಾತುಗಳು ಎಲ್ಲರೂ ಮನನ ಮಾಡುವಂಥವು: ಪರಂಪರೆಯನ್ನು "ಅರಗಿಸಿ ಕೊಳ್ಳದ ವಿಮರ್ಶಕ ಪ್ರಚಾರಕನಾಗುತ್ತಾನೆ, ಅಥವಾ ಸಮಾನ ರುಚಿಯ ಲೇಖಕರ ಕೃತಿಗಳನ್ನು ಎತ್ತಿ ಹಿಡಿಯುವ ಭಟ್ಟಂಗಿಯಾಗುತ್ತಾನೆ." ಪಾಶ್ಚಾತ್ಯ ಪ್ರಭಾವವನ್ನು ಶುದ್ಧಾಂಗವಾಗಿ ಅನುಸರಿಸುವ, ನಮ್ಮ ಪರಂಪರೆಯನ್ನು ಮರೆಯುವ ವಿಮರ್ಶಕರ ಬಗ್ಗೆ ಹೇಳುವ "ನಿಂತ ನೆಲವನ್ನು ಬಿಟ್ಟು ಮೇಲಿನ ಕೊಂಬೆಗೆ ಜೋತುಬಿದ್ದರೆ ನೆಲೆ ತಪ್ಪುತ್ತದೆಂಬುದನ್ನು ಮರೆಯಬಾರದು. ಇಂದಿನ ವಿಮರ್ಶಕರಿಗೆ ಈ ಮಾತು ಹೆಚ್ಚಾಗಿ ಅನ್ವಯಿಸುತ್ತದೆ" ಎಂಬ ಮಾತುಗಳೂ ಮೆಲುಕು ಹಾಕುವಂಥವು. ಇಂದಿನ ವಿಮರ್ಶಕರಲ್ಲಿರುವ ಪಂಥ ಪಕ್ಷಪಾತ, ಸ್ವಜನ ಪಕ್ಷಪಾತಕ್ಕೂ ಉದಾಹರಣೆ ನೀಡಿ

ಎಚ್ಚರಿಸಿದ್ದಾರೆ. "ಕನ್ನಡ ಕಾವ್ಯದಲ್ಲಿ ಪರಂಪರೆಯ ಪ್ರಜ್ಞೆ' ಎಂಬ ಲೇಖನದಲ್ಲಿ ಒಬ್ಬ ವಿಮರ್ಶಕರು ಬೇಂದ್ರೆ, ಪುತಿನ, ಮಾಸ್ತಿ, ಅಡಿಗ ಮೊದಲಾದವರನ್ನೆಲ್ಲಾ ವಿವೇಚಿಸಿದರೂ ಅಪ್ಪಿ ತಪ್ಪಿ ಕೂಡ ಕುವೆಂಪು ಅವರ ಹೆಸರನ್ನು ಎತ್ತದಿರುವುದು ಸೋಜಿಗವಷ್ಟೇ ಅಲ್ಲ ತಮಾಷೆಯಾಗಿಯೂ ಕಾಣುತ್ತದೆ. ಇದಕ್ಕೆ ಕಾರಣ ಅವಜ್ಞತೆಯೋ ಅಜ್ಞತೆಯೋ ? ಅಥವಾ ಇದೇ ಅವರು ಬೆಳಸಿಕೊಂಡು ಬಂದ ವಿಮರ್ಶೆಯ ಪರಂಪರೆಯೋ ಯಾರು ಹೇಳಬಲ್ಲರು ?" ಪರಂಪರೆಯ ಪ್ರಜ್ಞೆಯುಳ್ಳವರು ಪಾಶ್ಚಾತ್ಯ ವಿಮರ್ಶೆಯ ನಿಲುವುಗಳನ್ನು ಅರಗಿಸಿಕೊಂಡು ಎಂಥ ಸ್ವೋಪಜ್ಞತೆಯ ಸ್ವಾಸ್ಥ್ಯಪೂರ್ಣ ವಿಮರ್ಶೆಯನ್ನು ನೀಡಬಲ್ಲರು ಎಂಬುದಕ್ಕೆ ಕುವೆಂಪು. ಜಿ. ಎಸ್. ಶಿವರುದ್ರಪ್ಪ ಅವರನ್ನು ಉದಾಹರಿಸಿರುವುದು ಸೂಕ್ತವಾಗಿದೆ : ಗುಣಗ್ರಾಹಿ ವಿಮರ್ಶಕ ದೃಷ್ಟಿಗೆ ಪ್ರತೀಕವಾಗಿದೆ.

'ಕುವೆಂಪು ಮತ್ತು ರಿಚರ್ಡ್ಸ್' ಎಂಬ ಲೇಖನದಲ್ಲಿ ಕುವೆಂಪು ಅವರು ಹೇಗೆ ಭಾರತೀಯ ಕಾವ್ಯ ಮೀಮಾಂಸೆಯ ಕೆಲವು ಅಂಶಗಳನ್ನು ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಸಮ್ಮತ ನಿಲುವುಗಳ ಬೆಳಕಿನಲ್ಲಿ ಬೆಳಗಿದ್ದಾರೆ : ಬೆಳಸಿದ್ದಾರೆ ; ಸ್ವತಂತ್ರ ಕಳೆ ನೀಡಿದ್ದಾರೆ ಎಂಬುದನ್ನು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ವಿವೇಚಿಸಿದ್ದಾರೆ. ಕುವೆಂಪು ಅವರ ಮೇಲೆ ರಿಚರ್ಡ್ಸ್ ಪ್ರಭಾವವಾಗಿರುವುದನ್ನು ಅವರ 'ಕವಿ ನಿರ್ಮಿತಿಯಲ್ಲಿ ನಿಯತಕೃತ ನಿಯಮರಾಹಿತ್ಯ' ಹಾಗೂ 'ಕವಿಕೃತಿಯ ಅನನ್ಯ ಪರತಂತ್ರತೆ' ಎಂಬ ಎರಡು ಲೇಖನಗಳ ವಿಚಾರ ಸರಣಿಯಲ್ಲಿ ಗುರುತಿಸಿದ್ದಾರೆ. ಅಷ್ಟೇ ಅಲ್ಲ ಆ ಪ್ರಭಾವ ಇನ್ನೂ ಗಾಢವಾಗಿ ಕಾಣುವುದು ಅವರ 'ಭಾಷೆ ಲೋಕೋಪಯೋಗಿ ಮತ್ತು ಭಾವೋಪಯೋಗಿ' ಎಂಬ ಲೇಖನದಲ್ಲಿ ಎಂದು ಹೇಳಿ, ರಿಚರ್ಡ್ಸ್ ಹೇಳುವ Scientific use of language ಮತ್ತು emotive use of language ಎಂಬ ಪರಿಭಾಷೆಗೆ ಸಂವಾದಿಯಾಗಿ ಕುವೆಂಪು ಅವರು ಲೋಕೋಪಯೋಗಿ ಭಾಷೆ, ಭಾವೋಪಯೋಗಿ ಭಾಷೆ ಎಂದು ಬಳಸಿರುವುದನ್ನು ಉದಾಹರಿಸಿದ್ದಾರೆ. ಅಷ್ಟೇ ಅಲ್ಲ ಕುವೆಂಪು ಅವರು ಭಾರತೀಯ ಅಥವಾ ಪಾಶ್ಚಾತ್ಯ ಕಾವ್ಯ ಮೀಮಾಂಸಕರ ಮತ್ತು ವಿಮರ್ಶಕರ ಅಭಿಪ್ರಾಯಗಳನ್ನು ಕಾಸಿ ಸೋಸಿ ಕಾಳಿಕೆಯಿಲ್ಲದ್ದನ್ನು, ಸತ್ವಪೂರ್ಣ ಎನಿಸಿದ್ದನ್ನು ಸ್ವೀಕರಿಸುತ್ತಾರೆಯೇ ವಿನಾ ಕಣ್ಣು ಮುಚ್ಚಿಕೊಂಡು ಯಾವುದನ್ನೂ ಸ್ವೀಕರಿಸುವುದಿಲ್ಲ. ತಮ್ಮ ವಿಚಾರಕ್ಕೆ ಪೂರಕ ಅಂಶವಾಗಿ ಕಂಡದ್ದರಿಂದ ಮಾತ್ರ ರಿಚರ್ಡ್ಸ್‌ನ ಹೇಳಿಕೆಯನ್ನು ಉದಾಹರಿಸಿದ್ದಾರೆ ಎಂಬ ಅರಿವು ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರಿಗೆ ಇದೆ. ಆದ್ದರಿಂದ ಇಲ್ಲಿ ಪ್ರಭಾವ ಎಂದರೆ ತಮ್ಮ ವಿಚಾರಧಾರೆಗೆ ಪೂರಕವಾದ ವಿಚಾರಧಾರೆಯ ಸ್ವೀಕರಣ ಎಂದು ಮಾತ್ರ ಹೇಳಬಹುದು ಅಷ್ಟೆ. ಅದನ್ನು ಇವರು ಮನಗಂಡಿರುವುದು ಲೇಖನದಲ್ಲಿ ವ್ಯಕ್ತವಾಗುತ್ತದೆ.

'ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಮಸ್ಯೆ' ಹಾಗೂ 'ಕನ್ನಡ ಕಾದಂಬರಿ-ಇಂದು' ಎಂಬ ಲೇಖನಗಳು ಒಂದು ರೀತಿಯಲ್ಲಿ ಕನ್ನಡ ಕಾದಂಬರಿಗಳ ಇತಿಮಿತಿ, ಸಾಧನೆ ಸಿದ್ಧಿಗಳ ಬಗ್ಗೆ ನಡೆಸಿದ ಸರ್ವೇಕ್ಷಣ survey ದಂತಿವೆ ಎನ್ನಬಹುದು. ಆದರೂ ಕನ್ನಡ ಕಾದಂಬರಿಗಳು ಪ್ರಯೋಗಶೀಲವಾಗಿರಬೇಕು. ಎಂದು ಹೇಳುವಾಗ ಆಡಿರುವ ಎಚ್ಚರಿಕೆಯ ಮಾತುಗಳು ವಿಚಾರಪೂರ್ಣವಾದಂತವು– "ಆ ಪ್ರಯೋಗ ದಟ್ಟವಾದ ಅನುಭವದಿಂದ ಪ್ರೇರಿತವಾಗಿ ವಸ್ತು, ವಿನ್ಯಾಸದ ಅನಿವಾರ್ಯ ಅಂಗವಾಗಿ ಮಾಡಿಬರಬೇಕು. ಅವು ಇನ್ನೊಂದರ ಅನುಕರಣೆಗೆ ತೊಡಗಿಸಿದ ಕೋಡಂಗಿಯ ವೇಷವಾಗಿರಬಾರದು. ಹೊರಗಡೆಯ ಗಾಳಿ ಬೆಳಕುಗಳನ್ನು ಪಡೆದು ನಮ್ಮ ನೆಲದಲ್ಲಿ ಬೇರುಬಿಟ್ಟು ಬೆಳೆದು ಬಂದ ಕಲಾಕೃತಿಗಳಾಗಬೇಕು"

ಒಟ್ಟಿನಲ್ಲಿ ಕಾವ್ಯಾರ್ಥ ಚಿಂತನಕ್ಕೆ ಸಾಹಿತ್ಯ ಸಮಸ್ಯೆಗಳಿಗೆ ಸಂಬಂಧಪಟ್ಟ ಇಲ್ಲಿಯ ಲೇಖನಗಳು ತಮ್ಮ ವಿಚಾರವಂತಿಕೆಯಿಂದ ಗಮನ ಸೆಳೆಯುತ್ತವೆ. ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ಆ ಕ್ಷೇತ್ರಕ್ಕೆ ನೀಡಿದ ಕೊಡುಗೆಯಾಗಿದೆ ಎನ್ನಬಹುದು.

'ಗಾಂಧೀಸ್ಮರಣೆ'

ಸಿ. ಪಿ. ಸಿದ್ಧಾಶ್ರಮ

ಸಾಹಿತ್ಯ ವಿಮರ್ಶೆ ಎನ್ನುವಂಥದ್ದು ಮುಕ್ತಮನಸ್ಸಿನಿಂದ ವಸ್ತುನಿಷ್ಠ (objective) ವಾಗಿರಬೇಕೇ ಹೊರತು, ವ್ಯಕ್ತಿನಿಷ್ಠ (subjective) ವಾಗಿ ಕೇವಲ ಒಂದು ಪಂಗಡದ ಒಂದು ಗುಂಪಿನ ಜನರನ್ನು, ಅವರ ಕೃತಿಗಳನ್ನು ಮಾತ್ರ ಎತ್ತಿಹಿಡಿದು, ಅವರಿಗೆ ಸಾಹಿತ್ಯದ ಸನ್ಮಾನ ಮಾಡುವ ಕೆಲಸವಾಗಬಾರದು. ನಮ್ಮ ಕನ್ನಡ ಸಾಹಿತ್ಯದ ಬಹುಪಾಲು ವಿಮರ್ಶೆ ಹೀಗಾಗಿರುವುದರಿಂದಲೇ, ನಿಜವಾಗಿಯೂ ಸತ್ತ್ವಯುತವಾದ ಸಾಹಿತಿಗಳು, ಅವರ ಕೃತಿಗಳು ಬೆಳಕಿಗೆ ಬಾರದೆ ಮೂಲೆ ಸೇರತೊಡಗಿದ್ದರೆ, ಅಷ್ಟೇನೂ ಮಹತ್ವದ ಬರಹಗಾರರೂ ಅಲ್ಲದ, ಹೆಚ್ಚಿನ ಸಾಮಾಜಿಕ ಪ್ರಜ್ಞೆ ಕಾಳಜಿಯೂ ಇಲ್ಲದ ಸತ್ತ್ವಹೀನ ಬರಹಗಾರರಿಗೂ ಈವತ್ತು ಆದ್ಯತೆ ಬರತೊಡಗಿದೆ. ಆದರೆ ಸತ್ವಹೀನ ಬರಹಗಾರರನ್ನು, ಅವರ ಕೃತಿಗಳನ್ನು ಮೂಲೆಗೆ ತಳ್ಳಿಬಿಡಬೇಕೆಂಬುದು ಈ ಮಾತಿನ ಉದ್ದೇಶವಲ್ಲ; ಕಳಪೆ ಬರಹಗಾರರನ್ನು, ಅವರ ಕೃತಿಗಳನ್ನು ಉದ್ದೇಶಪೂರ್ವಕವಾಗಿಯೇ ಮೇಲಕ್ಕೆತ್ತರಿಸಿ, ಮನೆಯ ಹೆಂಚಿನ ಮೇಲೆ ನಿಲ್ಲಿಸಿ ಕೊಂಬುಕಹಳೆ ಊದುತ್ತಿರುವ ಸಂದರ್ಭದಲ್ಲಿ ಸತ್ತ್ವಶಾಲಿ ಬರಹಗಾರರನ್ನು, ಅವರ ಕೃತಿಗಳನ್ನು ಗೌಣವಾಗಿ ಕೀಳಾಗಿ ಪರಿಗಣಿಸುವುದು

ಸಾಹಿತ್ಯ ವಿಮರ್ಶಕನ ಬೇಜವಾಬ್ದಾರಿತನ ಎನ್ನುವುದನ್ನು ಹೇಳುವುದೇ ಇಲ್ಲಿ ಮುಖ್ಯ. ಹೀಗೆ ಸಾಹಿತ್ಯ ವಿಮರ್ಶೆಯಲ್ಲಿ ವಸ್ತುನಿಷ್ಠತೆ (objectivity) ವಂಚಿತನಾಗಿ, ಪೂರ್ವಾಗ್ರಹಪೀಡಿತ ವ್ಯಕ್ತಿಗತ ರಾಗದ್ವೇಷಗಳು ಕೆಲಸ ಮಾಡತೊಡಗಿದರೆ, ನಮ್ಮ ಸಾಹಿತ್ಯಾಭಿರುಚಿ ಕೆಟ್ಟು ನಾಡಿನ ಸಹೃದಯತೆಗೆ ಹಾನಿಯುಂಟಾಗುವ ಸಂಭವವೂ ಇದೆ.

ಮೂರು ದಶಕಗಳ ಭಾರತದ ಸ್ವಾತಂತ್ರಾನುಭವದ ಬದುಕಿನಲ್ಲಿ 1975 ಜೂನ್ ೨೫ರಿಂದ ಮುಂದಿನ ಹದಿನೆಂಟು ತಿಂಗಳುಗಳು, ಅತ್ಯಂತ ಕರಾಳ ದಿನಗಳೆಂಬುದನ್ನು ಕೊಂಚವಾದರೂ ಸಾಮಾಜಿಕ ರಾಜಕೀಯ ಪ್ರಜ್ಞೆಯುಳ್ಳ ಜೀವಿಗೆ ಅನ್ನಿಸದೆ ಇರಲಾರದು. ಆಗ ನಮ್ಮ ಮೂಲಭೂತ ಹಕ್ಕುಗಳು ಚ್ಯುತಿಗೊಂಡಿದ್ದವು; ಪ್ರಜಾಪ್ರಭುತ್ವವೇ ನಾಶಗೊಂಡಿತ್ತು. ಸರ್ವಾಧಿಕಾರ ಮನೋಗುಣ ದೇಶದ ತುಂಬೆಲ್ಲ ತನ್ನ ಕರಾಳ ಹಸ್ತಗಳನ್ನು ಚಾಚತೊಡಗಿತ್ತು. ಹಿಟ್ಲರ್‌ಶಾಹೀತನ ಅಸ್ತಿತ್ವಕ್ಕೆ ಬರತೊಡಗಿತ್ತು : ಬಂದಿತ್ತು. ಇಂಥ ಪರಿಸ್ಥಿತಿಯಲ್ಲಿ ನಮ್ಮ ಉಸಿರೇ ಕಟ್ಟಿಹೋಗಿತ್ತು; ನಮ್ಮ ನರನಾಡಿಯಲ್ಲಿ ರಕ್ತಸಂಚಾರವೇ ನಿಂತುಹೋಗಿತ್ತು. ಒಟ್ಟಿನಲ್ಲಿ ಇಡೀ ದೇಶಕ್ಕೆ ದೇಶವೇ ಸರ್ವಾಧಿಕಾರದ ವ್ಯವಸ್ಥೆಯಲ್ಲಿ ಗುಲಾಮಗಿರಿತನವನ್ನು ಅನುಭವಿಸತೊಡಗಿತ್ತು. ಆದರೆ ಇಂಥ ಪರಿಸ್ಥಿತಿಯಲ್ಲಿ ಪರಿಸರಕ್ಕೆ ಪ್ರಾಮಾಣಿಕ ಪ್ರತಿಕ್ರಿಯೆ ತೋರಿದ ಕನ್ನಡ ಬರಹಗಾರರು ತೀರಾ ಕಡಿಮೆ. ಅಂಥ ಪರಿಸರಕ್ಕೆ ಪ್ರತಿಕ್ರಿಯೆ ತೋರದವರನ್ನು ನಾನು ಆಕ್ಷೇಪಿಸುವುದಕ್ಕೆ ಹೋಗುವುದಿಲ್ಲ. ಯಾಕೆಂದರೆ ಒಬ್ಬ ಬರಹಗಾರನ ನಿಜವಾದ ಗಟ್ಟಿತನದ. ಅವನ ಸೂಕ್ಷ್ಮ ಸಂವೇದನಾಶೀಲತೆಯ, ಸಾಮಾಜಿಕ ಪ್ರಜ್ಞೆ ಕಾಳಜಿಗಳ ಬಲಾಬಲ ಪರೀಕ್ಷೆ ನಿರ್ಧಾರ ಆಗುವುದು. ಅವನು ತನ್ನ ಸಮಕಾಲೀನ ಬದುಕಿಗೆ ಯಾವ ರೀತಿಯ ಪ್ರತಿಕ್ರಿಯೆ ತೋರುತ್ತಾನೆಂಬುದರ ಮೇಲೆಯೇ.

ಆ ಹದಿನೆಂಟು ತಿಂಗಳುಗಳ ಉಸಿರುಕಟ್ಟಿದ ವಾತಾವರಣದಲ್ಲಿ, ಗುಲಾಮಗಿರಿತನದಲ್ಲಿ. ಸ್ವಾತಂತ್ರ್ಯದ ಮೂಲ ಬೇರಾದ ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ಛಲದಿಂದಲೇ ಪಡೆದುಕೊಂಡು ಉಸಿರಾಡಿದ ಕೇವಲ ಕೆಲವೇ ಬರಹಗಾರರಲ್ಲಿ ಚಂದ್ರಶೇಖರ ಪಾಟೀಲರೂ ಒಬ್ಬರು ಮತ್ತು ಮಹತ್ತ್ವದವರೂ ಕೂಡ ಹೌದು. ಈ ಮಾತನ್ನು ಸಾಬೀತುಪಡಿಸಲು ೧೯೭೬ರಲ್ಲಿ ಪ್ರಕಟವಾದ ಚಂದ್ರಶೇಖರಪಾಟೀಲರ 'ಗಾಂಧೀಸ್ಮರಣೆ' ಎಂಬ ಕವನ ಸಂಕಲನವೇ ಸಾಕ್ಷಿಯಾಗಿ ನಿಂತುಕೊಂಡಿದೆ. ಒಂದು ವರ್ಷದ ಅವಧಿಯ ಸಾಹಿತ್ಯಕೃಷಿಯನ್ನು ತೂಗಿನೋಡುವಲ್ಲಿ, ಬೆಲೆಗಟ್ಟುವಲ್ಲಿ, ಆ ವರ್ಷದ ಅತ್ಯಂತ ಮಹತ್ತ್ವದ ಕೃತಿಯನ್ನು ಕಡೆಗಣಿಸಿಬಿಟ್ಟರೆ, ಅದು ಆ ವರ್ಷದ ಸಾಹಿತ್ಯ ಕೃತಿಯನ್ನು ಮೌಲ್ಯಮಾಪನ ಮಾಡಿದವರ ಬೇಜವಾಬ್ದಾರಿತನವಲ್ಲವೆ? ೧೯೭೭ನೇ ಸಾಲಿನ ಏಪ್ರಿಲ್ ತಿಂಗಳಿನ ತುಷಾರದ ಯುಗಾದಿ ವಿಶೇಷಾಂಕದಲ್ಲಿ ೧೯೭೬ನೇ ಸಾಲಿನ ಕನ್ನಡ ಕೃಷಿಯನ್ನು ಬೆಲೆಗಟ್ಟುವಲ್ಲಿ ಆ ವರ್ಷದ ಅತ್ಯಂತ ಮಹತ್ತ್ವದ ಕೃತಿಯಾದ 'ಗಾಂಧೀ ಸ್ಮರಣೆ'ಯ

ಪೆಸರನ್ನೂ ಕೂಡಾ ಎತ್ತದೆ ಅದನ್ನು ಕಡೆಗಣಿಸಿ ಜಾರಿಕೊಂಡು ಬಿಟ್ಟಿರುವುದರಿಂದ ಅಷ್ಟೆಲ್ಲ ಮಾತುಗಳನ್ನು ಹೇಳಬೇಕಾದ ಪ್ರಸಂಗ ಬಂದಿತು. (ಅವರು ಇನ್ನೂ ಕೆಲವು ಉತ್ತಮ ಕವನಸಂಕಲನಗಳನ್ನು ಬಿಟ್ಟಿದ್ದಾರೆಂಬುದು ನನಗೆ ನೆನಪಿನಲ್ಲಿದೆ).

೨

ಪಾಟೀಲರು ಇಂಗ್ಲಿಷ್ ಅಧ್ಯಾಪಕರಾದ್ದರಿಂದ ಸಹಜವಾಗಿಯೇ ಇಂಗ್ಲಿಷ್ ಸಾಹಿತ್ಯದಿಂದ ಪ್ರಭಾವಿತರಾದವರು. ಈ ಇಂಗ್ಲಿಷ್ ಸಾಹಿತ್ಯದ ಪ್ರಭಾವವನ್ನು 'ಟಿಂಗರ ಬುಡ್ಡಣ್ಣ', 'ಕೊಡೆ'. 'ಅಪ್ಪ'–ಇತ್ಯಾದಿ ಅವರ ಅಸಂಗತ ನಾಟಕಗಳಲ್ಲಿ ಕಾಣಬಹುದು. ಆದರೆ ಅವರ ಕಾವ್ಯಕ್ಕೆ ಬಂದಾಗ ಅವರು ಇಂಗ್ಲಿಷ್ ಸಾಹಿತ್ಯದಿಂದ ಪ್ರೇರಣೆ ಪಡೆದಿದ್ದರೂ, ತಾವು ಬದುಕಿ ಬಾಳುತ್ತಿದ್ದ ನೆಲದ ಮಣ್ಣಿನ ವಾಸನೆಯಿಂದ ದೂರ ಸರಿದವರಲ್ಲ ಎಂಬ ಸತ್ಯ ಸಂಗತಿ ಗೋಚರಿಸುತ್ತದೆ. ಅವರ ಮೊದಲ ಕವನ ಸಂಕಲನಗಳಾದ 'ಬಾನುಲಿ' (೧೯೬೦), 'ಮಧ್ಯಬಿಂದು' (೧೯೬೪), 'ಹತ್ತೊಂಬತ್ತು ಕವನಗಳು, (೧೯೬೭)–ಈ ಕೃತಿಗಳಲ್ಲಿಯೇ ಅವರು ನವ್ಯರಿಗಿಂತ ಭಿನ್ನವಾಗಿ ನಿಂತಿರುವ ಅಂಶ ಕಂಡುಬರುತ್ತದೆ. ಕ್ಲಿಷ್ಟವಾದ ಐತಿಹಾಸಿಕ ಪೌರಾಣಿಕ ಅಧಿಕ ಸಂಕೇತ ಪ್ರತಿಮೆಗಳಿಂದ ಬಿಡಿಸಿಕೊಂಡು ನೇರವಾದ ಸರಳವಾದ ರೀತಿಯಲ್ಲಿ ವ್ಯಂಗ್ಯಧಾಟಿಯಲ್ಲಿ ಕವನಗಳು ರಚನೆಗೊಳ್ಳುತ್ತಿರುವುದನ್ನು ಅವರ ಮೊದಲಿನ ಈ ಮೂರು ಕವನಸಂಕಲನಗಳಲ್ಲೇ ಕಾಣಬಹುದು.

ಇತ್ತೀಚೆಗೆ ಪ್ರಕಟವಾದ ಪಾಟೀಲರ 'ಗಾಂಧೀಸ್ಮರಣೆ' (೧೯೭೬) ಮತ್ತು 'ಓ ನನ್ನ ದೇಶಬಾಂಧವರೆ' (೧೯೭೭) ಈ ಕವನ ಸಂಕಲನಗಳಿಂದ ಪಾಟೀಲರು ನವ್ಯ ಕಾವ್ಯದ "ಪ್ರತಿಮಾ ಕಾವ್ಯದ ಅತಿಯಿಂದ ಬಹುಮಟ್ಟಿಗೆ ಹೊರಗುಳಿದು ಅವುಗಳ ಈಚೆಯ ಕನ್ನಡ ಕಾವ್ಯದ ಬೆಳವಣಿಗೆಯ ಪ್ರತಿನಿಧಿಯಾಗಿ" ನಿಲ್ಲುತ್ತಾರೆಂಬ ಅಂಶ ತಿಳಿದುಬರುತ್ತದೆ. ಪಾಟೀಲರು ತಮ್ಮ ಮೊದಲ ಕವನ ಸಂಕಲನಗಳಲ್ಲೇ ಸಾಮಾಜಿಕ ನಿಷ್ಠತೆಯನ್ನು ತೋರಿಸಿದ್ದಾರೆ.

ಅವರ ಮೊದಲ ಮೂರು ಕವನ ಸಂಕಲನಗಳಲ್ಲಿಯ ಬಹುಪಾಲು ಕವನಗಳು ಸಾಮಾಜಿಕ ಪ್ರಜ್ಞೆ ಕಾಳಜಿಗಳಿಂದಲೇ ಹುಟ್ಟಿಕೊಂಡಂಥವುಗಳು. ವೈಚಾರಿಕತೆಯು ಇವರ ಅನೇಕ ಕವನಗಳಲ್ಲಿ ಕಲಾತ್ಮಕ ಮೆರಗನ್ನು ಪಡೆದುಕೊಳ್ಳಲು ಹವಣಿಸಿವೆ. ಸಾಮಾಜಿಕ ತೊಡಕುಗಳನ್ನು ಹುಳುಕುಗಳನ್ನು ಮೊನಚಾದ ವ್ಯಂಗ್ಯದಿಂದ ಟೀಕಿಸಿ ಗೇಲಿ ಮಾಡುವ ಇವರ ಪ್ರವೃತ್ತಿ ಇವರ ಅನೇಕ ಕವನಗಳಲ್ಲಿವೆ. ಈ ಮೊನಚಾದ ವ್ಯಂಗ್ಯವೇ ಪಾಟೀಲರ ಕವನಗಳಿಗೆ ಹೆಚ್ಚು ಮೆರುಗು ಕೊಟ್ಟಿದೆ.

ಅನೇಕ ಬರಹಗಾರರಲ್ಲಿ ಅವರ ಬದುಕಿಗೂ ಬರಹಕ್ಕೂ ಸಂಬಂಧವೇ ಇರುವುದಿಲ್ಲ; ಸಂಬಂಧ ಸ್ಥಾಪಿಸಿಕೊಳ್ಳುವುದು ಅವರ ಮುಖ್ಯ ಕಾಳಜಿಯೂ ಆಗಿರುವುದಿಲ್ಲ.

ಆದರೆ ಪಾಟೀಲರು ಇಂಥವರಿಗಿಂತ ಭಿನ್ನವಾಗಿದ್ದು, ತಮ್ಮ ಬದುಕಿಗೂ ಬರಹಕ್ಕೂ ಹೆಚ್ಚಿನ ಮಟ್ಟಿಗಲ್ಲದಿದ್ದರೂ ತಕ್ಕಮಟ್ಟಿಗಾದರೂ ಸಂಬಂಧ ಸ್ಥಾಪಿಸಿಕೊಂಡ ಪ್ರಾಮಾಣಿಕ ವ್ಯಕ್ತಿಗಳೆಂದು ಧೈರ್ಯವಾಗಿಯೇ ಹೇಳಬಹುದು. ಪಾಟೀಲರ ಇತ್ತೀಚಿನ ಬದುಕು ಬರಹಗಳನ್ನು ಗಮನಿಸಿದವರಿಗೆಲ್ಲ ಇದು ತಿಳಿದ ಸಂಗತಿಯೇ.

ಪಾಟೀಲರು ಸಮಕಾಲೀನ ಬದುಕಿಗೆ ಸ್ಪಂದಿಸುವಂಥ ಸೂಕ್ಷ್ಮ ಸಂವೇದನಾಶೀಲ ಬರಹಗಾರರು. ಬದುಕನ್ನು ತೆರೆದ ಕಣ್ಮನಗಳಿಂದ ನೋಡುವಂಥ ಬಿಚ್ಚು ಹೃದಯದವರು. ತಮಗೆ ಸರಿ ಅನಿಸಿದ್ದನ್ನು ಯಾವ ಬಿಡೆ ಮುರವತ್ತೂ ಇಲ್ಲದೆ ಹೇಳುವಂಥ ಗಟ್ಟಿಗರು. ಅವರ ಭಾಷೆಗೆ ಕೆಚ್ಚಿದೆ; ಉತ್ತರ ಕರ್ನಾಟಕದ ಜಾನಪದ ಮಾತಿನ ಸೊಗಡಿದೆ. ಈ ಜಾನಪದ ಮಾತಿನ ಸೊಗಡು ಗತ್ತುಗಳಿಂದ ಕವನಗಳ ಅರ್ಥವಲಯಗಳು ಬಿಚ್ಚಿಕೊಳ್ಳುತ್ತ ಹೋಗುತ್ತವೆ; ಕವನಗಳ ಶಿಲ್ಪ ಹೆಚ್ಚು ಬಂಧುರವಾಗುತ್ತ ಹೋಗುತ್ತದೆ. ಆದರೆ ಪಾಟೀಲರ ಕೆಲವೊಂದು ಕವನಗಳು ಶಿಲ್ಪದ ದೃಷ್ಟಿಯಿಂದ ಸೋತಿವೆ. ಪಾಟೀಲರು ತಮ್ಮ ಕೆಲವೊಂದು ಕವನಗಳಲ್ಲಿ ತಾಳುವಂಥ ಧೋರಣೆಯಿಂದ ಕೆಲವರಿಗೆ ನೋವಾಗುವುದಂತೂ ಖಂಡಿತ. ಕೆಲವೊಂದು ಕವನಗಳನ್ನು ನೋಡಿದಾಗ ಇವರು ಉಡಾಪಿಯಾಗಿ ಬರೆಯುತ್ತಾರೆಂದು ಅನಿಸುತ್ತದೆ. ಇದು ಪಾಟೀಲರ ಕಾವ್ಯದ ಸೋಲೂ ಕೂಡ ಹೌದು.

ಚಂದ್ರಶೇಖರ ಪಾಟೀಲರ 'ಗಾಂಧೀಸ್ಮರಣೆ' ಜನ್ಮತಾಳಿದ್ದು ೧೯೭೬ನೇ ಸಾಲಿನಲ್ಲಿ ಈ ದೇಶ ಸರ್ವಾಧಿಕಾರಕ್ಕೆ ವಶವಾದ ಸಂದರ್ಭದಲ್ಲಿ. ಆದ್ದರಿಂದಲೇ ಅದಕ್ಕೆ ಚಾರಿತ್ರಿಕ ಮಹತ್ತ್ವವೂ ಕೂಡಾ ಒದಗಿಬಿಡುತ್ತದೆ; ಒಂದು ಪ್ರಮುಖ ಚಾರಿತ್ರಿಕ ದಾಖಲೆಯಾಗಿ ನಿಂತುಬಿಡುತ್ತದೆ. ಇಂಥ ಸತ್ವವನ್ನು ಆ ಕೃತಿ ಪಡೆದುಕೊಂಡಿರುವುದರಿಂದಲೇ ಈ ಮಾತುಗಳನ್ನು ಹೇಳಬೇಕಾಗಿ ಬಂತು. "ಕಳೆದ ಎರಡು ವರ್ಷಗಳ ಮೌನದಲ್ಲಿ ಸಾರ್ವತ್ರಿಕ ಸ್ಮಶಾನ ಮೌನದಲ್ಲಿ, ಪಾಟೀಲರ ಒಂದೇ ಒಂದು ಧ್ವನಿ ಎಲ್ಲರಿಗೂ ತಾಗುವ ನೈತಿಕ ಹಾಗೂ ಕಲಾತ್ಮಕ ಗುಣ ಪಡೆದಿದೆ. ಇವರ ಧ್ವನಿ ಕೂಡ ನಾವು ಸೃಷ್ಟಿಸಿದ ವಾತಾವರಣ ಮತ್ತು ಕೃತಿಗಳ ಸಹಜ ತಾರಕವಾಗಿದೆ ಎಂದು ನಾನು ಯಾವುದೇ ಆತ್ಮ ಪ್ರಶಂಸೆಯ ಭಯವಿಲ್ಲದೆ ಹೇಳಬಲ್ಲೆ". "ಪಾಟೀಲರು ಈ ಕವನ ಸಂಕಲನಕ್ಕೆ 'ಗಾಂಧೀಸ್ಮರಣೆ' ಎಂದು ಕರೆದದ್ದು ಸರಿಯಾಗಿದೆ ಇದೇನೂ ಹೊಸ ಹೆಸರಲ್ಲ. ಭಾರತದ ಕವಿಗಳು ಸುಮಾರು ಮೂವತ್ತು ವರ್ಷಗಳಿಂದ ಗಾಂಧೀಜಿಯವರನ್ನು ಒಂದಿಲ್ಲ ಒಂದು ರೀತಿಯಲ್ಲಿ ಕಂಡಿದ್ದಾರೆ ಆದರೆ ಈ ಸಂದರ್ಭದಲ್ಲಿ ಗಾಂಧೀಜಿಯವರನ್ನು ನೆನದದ್ದು ನೆನದ ರೀತಿ ವಿಶಿಷ್ಟ ಅರ್ಥ ಪಡೆದಿದೆ.

"ನಿನ್ನೆಯ ಹಾಳು ನೆನಪಿನಲ್ಲೋ ನಾಳೆಯ ಹಾಳು ಕನಸಿನಲ್ಲೋ ವಿಹರಿಸಿ ಅನುಭವದ "ಪುನಃಸೃಷ್ಟಿ" ಮಾಡಿಕೊಂಡು ಭಾಷೆಯಲ್ಲಿ ಅದಕ್ಕೊಂದು "ಕಲಾತ್ಮಕ" ರೂಪು ಕೊಡಲು ತಿಣುಕಾಡುವ ಪಲಾಯನದ ಹಾದಿಗೆ ಕೈಮುಗಿದು ಇಂದಿನ ಈ ಕ್ಷಣದ ಈ ವರ್ತಮಾನದ ಹಸಿಹಸಿ ಅನುಭವಗಳಿಗೆ ಹಾಗೆಯೇ ಎದೆಯೊಡ್ಡಿ ನಿಂತು ಬದುಕಿನ

ಸವಾಲು ಸ್ವೀಕರಿಸಿದ ಬರಹಗಾರರ ಒಂದು ಗುಂಪಿನ ಸಮಷ್ಟಿ ಅನುಭವವಿದೆ.... ಪಾಟೀಲರ ಈ ಗಾಂಧೀಸ್ಮರಣೆ ಕವನಸಂಕಲನದ ಕವನಗಳಲ್ಲಿ.

"ಗಾಂಧೀಸ್ಮರಣೆ"ಯಲ್ಲಿ ೧೯೬೭ ರಿಂದ ೭೧ರ ವರೆಗೆ ಒಂದು. ೧೯೭೨ ರಿಂದ ೭೩ರ ವರೆಗೆ ಎರಡು. ೧೯೭೪ರಿಂದ ೭೬ರವರೆಗೆ ಮೂರು ಹೀಗೆ ಮೂರು ಭಾಗಗಳಿವೆ ಮೊದಲನೇ ಭಾಗದಲ್ಲಿಯ ಹೆಚ್ಚು ಕವನಗಳು ವೈಯಕ್ತಿಕ ಕವನಗಳು. ಎರಡನೇ ಭಾಗದಲ್ಲಿಯ ಕವನಗಳು ಇಂಗ್ಲೆಂಡಿನ ಅನುಭವಕ್ಕೆ ಸಂಬಂಧಪಟ್ಟ ಕವನಗಳು. ಇಂಗ್ಲೆಂಡಿನಲ್ಲಿ ಕವಿಗಾದ ಅನುಭವ, ಕವಿ ಇಂಗ್ಲೆಂಡನ್ನು ಕಂಡ ದೃಷ್ಟಿ, ಇಂಗ್ಲೆಂಡಿನ ಮುದಿಯರು. ಮಂಜು, ಮರ, ಸಂಸ್ಕೃತಿ–ಇತ್ಯಾದಿಗಳನ್ನು ಕುರಿತ ಕವನಗಳು ಇಲ್ಲಿವೆ. ಮೂರನೇ ಭಾಗವನ್ನು ಈ ಕವನಸಂಕಲನದ ಅತ್ಯಂತ ಮಹತ್ವದ ಭಾಗವೆಂದು ಹೇಳಬೇಕು. ಇಲ್ಲಿನ ಹೆಚ್ಚು ಕವನಗಳು ೧೯೭೬ನೇ ಸಾಲಿನ ಇಂಡಿಯಾದ ಬದುಕನ್ನು ಪರಿಸರವನ್ನು ಕುರಿತು ಬರೆದವುಗಳು. ಪಾಟೀಲರು ಯಾವ ರೀತಿ ಪರಿಸರಕ್ಕೆ ಪ್ರಾಮಾಣಿಕ ಪ್ರತಿಕ್ರಿಯೆ ತೋರಿಸುವಂಥ ಗಂಡೆದೆಯುವರೆಂಬುದನ್ನು ಈ ಭಾಗದ ಕವನಗಳಲ್ಲಿ ಸ್ಫುಟವಾಗಿ ಕಾಣಬಹುದು. ಅವರ ಕಾವ್ಯದ ಕಾವು, ಕಲೆಯ ಮೆರಗೂ ಇಲ್ಲಿ ಹೆಚ್ಚು ಸತ್ವಯುತವಾಗಿ ಮೂಡಿಬಂದಿದೆ. ವ್ಯಕ್ತಿ ಘಟನೆಗಳನ್ನೂ ಕುರಿತ ವಿಡಂಬನಾತ್ಮಕ ಕವನಗಳೂ ಈ ಸಂಕಲನದಲ್ಲಿವೆ.

ಪ್ರಥಮದಲ್ಲಿ ಕವನ ಸಂಕಲನದ ಮೊದಲ ಭಾಗದ ಕವನಗಳನ್ನು ನೋಡುವಾ. 'ಪಕ್ಷಾಂತರಿಗಳ ಸಮೂಹ ಗಾನ' (ಒಂದು Instant ಚಿಲ್ಲರೆ ಪದ್ಯ) ಕವನದಲ್ಲಿ ರಾಜಕೀಯ ಕ್ಷೇತ್ರದಲ್ಲಿ, ಪದೇ ಪದೇ ಪಕ್ಷಾಂತರ ಮಾಡುವ ಜನರನ್ನು ಕವಿ ಗೇಲಿ ಮಾಡಿದ್ದಾರೆ. ಕವಿ ಪಕ್ಷಾಂತರಿಗಳ ಮುಖವಾಣಿಯಾಗಿ ಪಕ್ಷಾಂತರಿಗಳ ಷಂಡತನವನ್ನು ಸಮಯಸಾಧಕ ಅವಕಾಶವಾದಿತ್ವವನ್ನು ಬಯಲಿಗೆಳೆದು ಟೀಕಿಸಿದ್ದಾರೆ.

ನಾವು ಪಕ್ಷಾಂತರಿಗಳು
ನಾವು ಗಂಡಸರಲ್ಲ
ನಾವು ಹೆಂಗಸರಲ್ಲ
ನಾವು ಷಂಡಸರು ! ಒಮ್ಮೊಮ್ಮೆ
ನಾವು ಪಂಗಸರು
ನಮಗೆ ಬೇಕಾದ್ದ ಮಾಡ್ರಿ
ಹಿಂದೆ ಬಂದರೆ ಹಾಯಿರಿ ಮುಂದೆ ಬಂದರೆ ಒದೆಯಿರಿ
ಎಡಕೆ ಬಂದರೆ ಎಳೆಯಿರಿ ಬಲಕೆ ಬಂದರೆ ಬಿಗಿಯಿರಿ

ರಾಜಕೀಯದಲ್ಲಿ ಮತ್ತೆ ಮತ್ತೆ ಪಕ್ಷಾಂತರ ಮಾಡುವ ಜನರು 'ಗಂಡಸರೂ' ಅಲ್ಲ 'ಹೆಂಗಸರೂ 'ಅಲ್ಲ. ಹಾಗಾದರೆ ಅವರ ಹೆಸರೇನೆಂದು ಕೇಳಿದರೆ ಅವರ ಹೆಸರು 'ಪಕ್ಷಾಂತರಿಗಳು'. ಆದರೆ ಅವರು ಒಮ್ಮೊಮ್ಮೆ 'ಷಂಡಸರು' 'ಪಂಗಸರು' ಕೂಡಾ ಹೌದು. ಈ ಕಡೆ ಗಂಡಸರೂ ಅಲ್ಲದ ಆ ಕಡೆ ಹೆಂಗಸರೂ ಅಲ್ಲದ ಜನರ ಸ್ಥಿತಿಯನ್ನು

ಷಂಡರೆಂದು ಕರೆಯುವುದು ವಾಡಿಕೆ. ಆದರೆ ಷಂಡರು ಎನ್ನುವ ಹೆಸರಿಗೆ ಪಂಗಸರು 'ಪಂಡಸರು' – ಎಂಬ ಪರ್ಯಾಯ ಹೆಸರುಗಳನ್ನು ಪಾಟೀಲರು ಸೃಷ್ಟಿಸಿದ್ದಾರೆ. ಆದರೆ ಇಲ್ಲಿ ಇವರು 'ಪಂಗಸರು' 'ಷಂಡಸರು' ಅಂದರೆ ಕೇವಲ ಷಂಡರಂತೂ ಅಲ್ಲ; ಸಮಯಸಾಧಕರು. ಅವಕಾಶವಾದಿಗಳು, ಅದ್ದರಿಂದ ಇಲ್ಲಿ 'ಪಂಗಸರು', 'ಪಂಡಸರು' ಎನ್ನುವ ಪದಗಳು 'ಸಮಯಸಾಧಕರು' 'ಅವಕಾಶವಾದಿಗಳು' ಈ ಪದಗಳಿಗೆ ಹೆಚ್ಚು ಅನ್ವಯವಾಗುತ್ತವೆ. ಯಾಕೆಂದರೆ ಪಕ್ಷಾಂತರಿಗಳ ಸಮಯಸಾಧಕತನವನ್ನು, ಇಡೀ ಪದ್ಯವೇ ವಿಶ್ಲೇಷಿಸುತ್ತ ಹೋಗುತ್ತದೆ. ಮೇಲಿನ ಸ್ಟ್ಯಾಂಜಾದ ಕೊನೆಯ ಮೂರು ಸಾಲುಗಳು ಈ ಪಕ್ಷಾಂತರಿಗಳ ನಾಚಿಕೆಗೇಡಿತನವನ್ನು ಮರ್ಯಾದೆಹೀನ ವ್ಯಕ್ತಿತ್ವವನ್ನು ಪ್ರಕಟಪಡಿಸುತ್ತವೆ.

ಕಂಡ ಕಂಡಿಗೆ ಕಾಲು ಎತ್ತುವ
ಒದ್ದ ಕಾಲಿಗೆ ಮುದ್ದು ಮಾಡುವ
ಸ್ವಾಮಿಭಕ್ತ ಸೊಣಗರು!

ನಾಯಿಗೆ ತಾನು ಇಂಥಲ್ಲೇ ಮೂತ್ರ ವಿಸರ್ಜಿಸಬೇಕೆಂಬ ನಿಯಮವೇನೂ ಇರುವುದಿಲ್ಲ. 'ಕಂಡ ಕಂಟಿಗೆ ಕಾಲು ಎತ್ತು'ತ್ತ ಅದನ್ನು ಮಲಿನಮಾಡುತ್ತ ಹೋಗು ತ್ತಿರುತ್ತದೆ. ಅದೇ ರೀತಿ ಪಕ್ಷಾಂತರಿಗಳು ಒಂದು ಪಕ್ಷ ಬಿಟ್ಟು ಇನ್ನೊಂದು. ಅದನ್ನು ಬಿಟ್ಟು ಮತ್ತೊಂದು ಹೀಗೆ ಪಕ್ಷಾಂತರ ಮಾಡುತ್ತಾ ಆ ಪಕ್ಷಗಳನ್ನು. ಪಕ್ಷಗಳ ಧ್ಯೇಯ ಧೋರಣೆಗಳನ್ನು ಕೆಡಿಸುತ್ತ ಹೋಗುತ್ತಿರುತ್ತಾರೆ. ಒಡೆಯನು ತಾನು ನಾಯಿ ಯನ್ನು ಒದ್ದರೂ ತಿರಸ್ಕರಿಸಿದರೂ ನಾಯಿ ಒದ್ದಕಾಲನ್ನೇ ಮುದ್ದಿಸಿ ತನ್ನ ಸ್ವಾಮಿ ನಿಷ್ಠ ಭಕ್ತಿಯನ್ನು ಪ್ರಕಟಪಡಿಸುತ್ತಿರುತ್ತದೆ. ಹಾಗೆಯೇ ಪಕ್ಷಾಂತರಿಗಳು ಆಯಾ ಪಕ್ಷಗಳ ನಾಯಕರುಗಳ ಅಡಿಯಾಳಾಗಿ, ದಾಸಾನುದಾಸರಾಗಿ ನಡೆದುಕೊಳ್ಳುತ್ತಾರೆಂಬು ವನ್ನು ಕವಿ ವ್ಯಂಗೋಕ್ತಿಗಳಿಂದ ಹೇಳುತ್ತಾರೆ.

ಹೀಗೆ ನಾಯಿಯ ಚಂಚಲ ಸ್ವಭಾವಕ್ಕೆ. ಅದರ ಸ್ವಾಮಿನಿಷ್ಠ ಸೇವಾ ಮನೋ ಭಾವಕ್ಕೆ ಪಕ್ಷಾಂತರಿಗಳನ್ನು, ಅವರ ಕ್ರಿಯೆ. ಮನೋಭಾವಗಳನ್ನು ಹೋಲಿಸಿ ಪಕ್ಷಾಂತರಿಗಳ ಸಣ್ಣತನವನ್ನೂ ಅವಕಾಶವಾದಿ ಮನೋಧರ್ಮವನ್ನೂ ಪ್ರಕಟಪಡಿಸು ತ್ತಾರೆ ಕವಿ. ಅಷ್ಟೇ ಅಲ್ಲ, ಇಂಥ ಪಕ್ಷಾಂತರಗಳಿಂದ ರಾಜಕೀಯವು ಅರ್ಥಪೂರ್ಣ ವಾಗಿ ನಡೆಯಲಾರದೆಂಬುದನ್ನೂ ಸೂಚಿಸುತ್ತಾರೆ. ಮುಂದಿನ ಇಡೀ ಕವನದಲ್ಲಿ ಈ ಪಕ್ಷಾಂತರಿಗಳನ್ನು ವ್ಯಂಗ್ಯೋಕ್ತಿಗಳಿಂದ ತರಾಟ ತೆಗೆದುಕೊಳ್ಳುತ್ತಾರೆ.

ಅಂತೂ
ಸ್ವರ್ವರಿಗೆ
ಅಂದರೆ ನಮಗೆ
ಜಯವಾಗಲಿ!

ಕವನದ ಕೊನೆಯ ಈ ಪುಟ್ಟ ಸಾಲುಗಳು ಪಕ್ಷಾಂತರಿಗಳಿಂದ ಪ್ರಜಾಪ್ರಭುತ್ವವೇ ದೂರ ಸರಿದು ಸರ್ವಾಧಿಕಾರ ಸ್ಥಾಪಿತವಾಗುವ ಸೂಚನೆಗಳನ್ನು ಕೊಡುತ್ತವೆ.

ಜೀವನದಲ್ಲಿ ಸಾಕಷ್ಟು ಅನುಭವವಿಲ್ಲದೆ. ತಾನೂ ಕವಿಯಾಗಬೇಕೆಂಬ ಒಣ ಜಂಬದಿಂದ ಕವನಗಳನ್ನು ಬರೆಯುವವರಿಗೆ ಪಾಟೀಲರು. ಜೂನಿಯರ್ ಕವಿಗಳಿಗೊಂದು ನಮೂನಿ ಉಪದೇಶ ಎಂಬ ಕವನದಲ್ಲಿ ಮೊನಚಾದ ವ್ಯಂಗ್ಯದಿಂದ, ಲಘುವಾದ ಹಾಸ್ಯದಿಂದ ಎಚ್ಚರಿಕೆ ಮತ್ತು ಸಲಹೆಗಳನ್ನು ಕೊಡುತ್ತಾರೆ. ಕವನದ ಕೊನೆಯ ಸಾಲುಗಳನ್ನು ನೋಡಿ.

ಸೀರೀ ಸುತ್ತಿದ ಮೈ ಇನ್ನೂ
ಮೈಗೆ ಜುಮ್ ಅನಿಸಿಲ್ಲ
ನಿಮ್ಮ ಗಲ್ಲಾ ಬೆಚ್ಚಗ ಮಾಡಿ
ಕಿವ್ಯಾಗ ಗುಂಯ್ ಅಂದು
ಎದ್ಯಾಗ ಪಟಾಕಿ ಹಾರಿಸಿಲ್ಲ......ಇತ್ಯಾದಿ.

ಕವನದ ಈ ಸಾಲುಗಳಲ್ಲಿ ಕವಿ ತಾನು ಹೆಚ್ಚಿನ ಸಂಗದಿಂದ ಉಂಡ ಅನುಭವವನ್ನು ಹೇಳುವುದರ ಮೂಲಕ, ಜ್ಯೂನಿಯರ್ ಕವಿಗಳು ಇಂಥ ಅನುಭವಗಳಿಲ್ಲದೆ ಕವಿತಾ ಬರೆಯುವುದು ಸರಿಯಲ್ಲ ಎಂಬ ಸಲಹೆಯನ್ನೂ ಕೊಡುತ್ತಾನೆ.

ಕಾಮಕ್ಕೆ ಸಂಬಂಧಪಟ್ಟಂಥ ವೈಯಕ್ತಿಕ ಕವನಗಳೂ ಇಲ್ಲಿವೆ. 'ಹೆಂಡ' 'ವಚನ' 'ಬೆದರು'-ಇತ್ಯಾದಿ ಕವನಗಳು ಕಾಮ ಪ್ರವೃತ್ತಿಗೆ, ರತಿಭಾವಕ್ಕೆ ಸಂಬಂಧಪಟ್ಟ ಸಾರ್ಥಕ ಕವನಗಳು, ಇಲ್ಲೆಲ್ಲ ಕಾಮದ ತೀವ್ರತೆ ಮತ್ತು ಅದರ ಸಾರ್ಥಕತೆಯನ್ನು ಕವಿ ಅನುಭವಿಸಿದ ರೀತಿಯಲ್ಲೇ ಕಾಣಬಹುದು. 'ಶ್ರದ್ಧಾಂಜಲಿ' ಮನುಷ್ಯ ಸಂಬಂಧಗಳ ಶಿಥಿಲತೆಯನ್ನೂ ಕೃತಕತೆಯನ್ನೂ, ಬದುಕು ಸಾವುಗಳ ನಡುವಿನ ದ್ವಂದ್ವವನ್ನೂ ಹೇಳುವಂಥ ಕವನ.

ಭಾಗ ಎರಡರಲ್ಲಿ ಇಂಗ್ಲೆಂಡಿನ ಅನುಭವಗಳನ್ನು ಕುರಿತ ಕವನಗಳೇ ಹೆಚ್ಚಿವೆ. 'ಇಂಗ್ಲೆಂಡಿನ ಮುದಿಯರು' ಕವನದಲ್ಲಿ ಅಲ್ಲಿಯ ಮುದಿಯರ ಚಿತ್ರಣವನ್ನು ಕವಿ ಕೊಡುವಂಥ ರೀತಿಯನ್ನು ನೋಡಿ :

ಕುಳಿತಿದ್ದಾರೆ ಬುದ್ಧನ ಹಾಗೆ
ಉಣ್ಣೆಯ ಚೀಲದಲ್ಲಿ.
ಕುಸಿಗೋಣು ಮಾಡಿ ಬತ್ತಿಯಹಾಗೆ
ಎಣ್ಣೆಯಿಲ್ಲದ ಪಣತಿಯಲ್ಲಿ
ಸುಂಯ್‌ಗುಡುವ ಕಾರುಗಳು, ಕಣ್ಣು
ಹೊಡೆಯುವ ಕೆಂಪು ಹಸಿರು ಲೈಟು. ಲುಟು ಪುಟು
ಜಿಗಿವ ಮಕ್ಕಳು. ಮೈಗೆ ಮೈ

ತಿಕ್ಕುತ್ತ ಪುರು ಪುರು ಉರಿವ
ಗಂಡುಗಳು ಹೆಣ್ಣುಗಳು. ಹಿಂದೆ ಮುಂದೆ
ಎಡಕ್ಕೆ ಬಲಕ್ಕೆ
ಪುಟಿವ ಕಾರಂಜಿ ನಡುವೆ
ತೂಗುತ್ತಿದ್ದಾರೆ.
ಬುದ್ಧನ ತಲೆ ಮೇಲಿನ
ಬೋಧಿವೃಕ್ಷದ ಬೋಳು ಟೊಂಗೆಯಂತೆ
ಅಥವ ಗಾಳಿ
ಉಫ್ ಎಂದರೆ ಸಾಕು
ಅಲಗುವ ಜೋ
ತಾಡುವ ಕಳಚು
ವ ಹಳದಿ ಎಲೆಯಂತೆ.

ಇಡೀ ಕವನವೇ ಅತ್ಯಂತ ಸರಳ ಮತ್ತು ಸಾರ್ಥಕ ಪ್ರತಿಮೆಗಳ ಮೂಲಕ ಇಂಗ್ಲೆಂಡಿನ ಮುದಿಯರ ಚಿತ್ರವನ್ನು ಅರ್ಥಪೂರ್ಣವಾದ ರೀತಿಯಲ್ಲಿ ಓದುಗರ ಕಣ್ಣಿಗೆ ಕಟ್ಟುವಂತೆ, ಮನಸ್ಸಿಗೆ ನಾಟುವಂತೆ ಚಿತ್ರಿಸುತ್ತದೆ.

'ಎಣ್ಣೆ' ಜೀವರಸವನ್ನು ಚೈತನ್ಯವನ್ನು ಪ್ರತಿನಿಧಿಸುವಂಥದ್ದು. 'ಪಣತಿ'ಇಲ್ಲಿ ಮನುಷ್ಯ ಶರೀರವನ್ನು ಪ್ರತಿನಿಧಿಸುತ್ತದೆ. 'ಇಂಗ್ಲಂಡಿನ ಮುದಿಯರು' ಎಣ್ಣೆ ಇಲ್ಲದ ಪಣತಿಯಲ್ಲಿ ಕುಳಿತಿದ್ದಾರೆಂದರೆ, ಬದುಕುವ ಜೀವರಸವನ್ನೇ, ಚೈತನ್ಯವನ್ನೇ ಕಳೆದುಕೊಂಡು ಒಳಗಿದ ತೀರಾ ಮುಪ್ಪಾದ ಶರೀರವನ್ನು ಹೊತ್ತು ಸಾವಿನ ಅಂಚಿನಲ್ಲಿ ಬದುಕುತ್ತಿದಾರೆಂಬ ಅರ್ಥ ಬರುತ್ತದೆ. ಕುಸಿಗೋಣು ಮಾಡಿ ಬತ್ತಿಯ ಹಾಗೆ, ಎನ್ನು ಮಾತೂ ಕೂಡ ಆ ಮುದಿಯರ ಮುಪ್ಪಾವಸ್ಥೆಯ ಹೆಚ್ಚಳಿಕೆಗೆ ಒತ್ತು ಕೊಡುವಂಥದ್ದು. 'ಬುದ್ಧನ ಹಾಗೆ' ಎಂದು ಹೇಳಿರುವುದು ಇನ್ನೂ ಅರ್ಥಪೂರ್ಣ ಯಾಕೆಂದರೆ 'ಬುದ್ಧ' ಎನ್ನುವ ಪದ ತಾರುಣ್ಯ ಕಳೆದು, ಇಂದ್ರಿಯಗಳ ಚಾಪಲ್ಯ ಇಳಿದಾಗ ಕಾಮದ ಕಾವು ಕಡಿಮೆಯಾದಾಗ ಮನುಷ್ಯ ತಲುಪುವಂಥ ಒಂದು ಅವಸ್ಥೆಯನ್ನು ಸಮರ್ಥವಾಗಿ ಹಿಡಿದಿಡುತ್ತದೆ. 'ಬೋಳುಟೊಂಗೆ'ಗೆ 'ಹಳದಿ ಎಲೆ'ಗೆ ಆ ಮುದಿಯರನ್ನು ಹೋಲಿಸಿರುವುದು ತೀರಾ ಔಚಿತ್ಯಪೂರ್ಣ. ಯಾಕೆಂದರೆ 'ಗಾಳಿ' 'ಉಫ್' ಎಂದರೆ ಸಾಕು, ತಕ್ಷಣವೇ ಬದುಕುವನ್ನು ಕಳೆದುಕೊಂಡ ಚೈತನ್ಯವನ್ನು 'ಬೋಳು ಟೊಂಗೆ' 'ಹಳದಿ ಎಲೆ'ಗಳು ಕಳಚಿ ಬೀಳುತ್ತವೆ. ಹಾಗೆಯೇ ಇಂಗ್ಲೆಂಡಿನ ಆ ಮುದಿಯರು ತಮ್ಮ ಮುದಿತನದ ಬದುಕಲ್ಲಿ ಏನಾದರೂ ಸ್ವಲ್ಪ ಹೆಚ್ಚು ಕಡಿಮೆಯಾದರೆ ಜೀವನ ಜಾತ್ರೆಯನ್ನೇ ಮುಗಿಸಿಬಿಡುವಂಥವರು.

ಹೀಗೆ ಬದುಕುವ ಚೈತನ್ಯವನ್ನೇ ಕಳೆದುಕೊಂಡ ಇಂಗ್ಲೆಂಡಿನ ಮುದಿಯು ಎಡ ಬಲಕ್ಕೆ, ಹಿಂದೆ ಮುಂದೆ, 'ಮೈಗೆ ಮೈ ತಿಕ್ಕುತ್ತ ಪುರುಪುರು ಉರಿವ ಗಂಡು ಹೆಣ್ಣುಗಳು,

ಲುಟು ಪುಟು ಜಗಿವ ಮಕ್ಕಳು, ಸುಂಯ್‌ಗುಡುವ ಕಾರುಗಳು'-ಇತ್ಯಾದಿ ಚೈತನ್ಯಶಾಲಿ ಜೀವಗಳನ್ನು, ವಸ್ತುಗಳನ್ನು ನಿಲ್ಲಿಸಿ ವೈದೃಶ್ಯ ಸಾಧಿಸಿ ಇಂಗ್ಲೆಂಡಿನ ಮುದಿಯರ ಮುದಿತನವನ್ನು ಚಿತ್ರಿಸುತ್ತಾರೆ ಪಾಟೀಲರು.

'ಇಂಗ್ಲೆಂಡ್ : ಒಂದು ಬಯಕೆ' ಕವನದಲ್ಲಿ ಇಂಗ್ಲೆಂಡಿನ ಮುದುಕ ಮುದುಕಿಯರ ಸ್ಥಿತಿಯನ್ನು, ಕಣ್ಣು ಕಣ್ಣಲ್ಲೆ ಬಿದ್ದಾಡಿ ಮುದ್ದಾಡಿ ಹೊರಳ್ಯಾಡಿ ಮುದಿಯಾಗುವ ಹುಡುಗ-ಹುಡುಗಿಯರನ್ನು ಕಾಣಬಹುದು. 'ಇಂಗ್ಲೆಂಡಿನಲ್ಲಿ ಮಂಜು' ಕವನದನಲ್ಲಿ ಇಡೀ ಇಂಗ್ಲೆಂಡನ್ನೇ ಮಂಜು ಕವಿದ ಪರಿಯನ್ನು ವಿವರಣಾತ್ಮಕವಾಗಿ ಹೇಳುತ್ತ ಹೋಗುತ್ತಾನೆ ಕವಿ. 'ಇಂಗ್ಲೆಂಡಿನಲ್ಲೊಬ್ಬ ಇಂಡಿಯನ್' ಕವನದಲ್ಲಿ ಇಂಗ್ಲೆಂಡಿನ ಚಳಿಯ ವಾತಾವಾರಣದಲ್ಲಿ ಬಿಸಿಯೇ ಇಲ್ಲದಿರುವುದನ್ನು, ಹಳಸಿದ ಹಳೆಯ ಮಾತನ್ನು, ಕ್ರಿಯೆಯನ್ನು ಬಿಟ್ಟು ಹೊಸ ಸೃಷ್ಟ್ಯಾತ್ಮಕತೆಯೇ ಇಲ್ಲದ ಪರಿಯನ್ನು ಕವಿ ಹೇಳುತ್ತಾ ಹೋಗುತ್ತಾನೆ. ಅಲ್ಲಿಯ ಪ್ರಾಮಾಣಿಕತೆಯನ್ನು ಉಚಿತ ಲೈಂಗಿಕ ಕ್ರಿಯೆಯನ್ನು ಕವಿ ಹೇಳುತ್ತಾನೆ. ಕವಿಗೆ 'ದೇಶಾಭಿಮಾನದ ಉರಿಗಾಳಿ ಬೀಸಿ' ತನ್ನ ಜನಾಂಗದ ಹಿಂದಿನ ಪೀಳಿಗೆಯವರನ್ನು ಸುಲಿದ ಇಂದಿನ ಇಂಗ್ಲೆಂಡಿನ ಪೀಳಿಗೆಯವರ ಮೇಲೆ ಕೋಪ ಬಂದುಬಿಡುತ್ತದೆ. ಇದು ಗತಕಾಲವನ್ನು ವರ್ತಮಾನದಲ್ಲಿಟ್ಟು ಪರೀಕ್ಷಿಸಿ ಭವಿಷ್ಯದ ಕಡೆಗೆ ಚಿಂತಿಸುವ ದೃಷ್ಟಿಯೂ ಹೌದು. 'ಕ್ರಿಸಮಸ ಗೀತೆ'-ಇಂಗ್ಲೆಂಡಿನಲ್ಲಿ ಕ್ರಿಸಮಸ ಹಬ್ಬದಲ್ಲಿ ಹೆಣ್ಣು ಗಂಡುಗಳು ನಡೆಸುವ ಉಚಿತ ಕಾಮುಕೇಳಿಯನ್ನು ಕುರಿತ ಒಂದು ವಿವರಣಾತ್ಮಕ ಕವನ. ಇದು ಆ ದೇಶದ ಜನಾಂಗದ ಸಂಸ್ಕೃತಿಯ ಪರಿಚಯವೂ ಕೂಡ ಹೌದು.

'ಪ್ರೀತಿ ಅಂದರೆ', 'ಕನಸುಗಳು'. 'ಧ್ವಂಸ'-ಈ ಕವನಗಳು ಈ ಭಾಗದ ಉತ್ತಮ ಕವನಗಳು. 'ಮಣಿಕಟ್ಟಿಗೊಂದು ವಾಚು' ಕೂಡ ಉತ್ತಮ ಕವನವೇ. 'ಧ್ವಂಸ' ಕಾಮದ ತೀವ್ರತೆ ಮತ್ತು ಅದರ ಸಾರ್ಥಕತೆಯನ್ನು ಹೇಳುವಂಥ ಉತ್ತಮ ಕವನ. 'ಕನಸುಗಳು' ಗಂಡು ಹೆಣ್ಣಿನ ಸಂಗಸುಖವನ್ನೂ ಸಂಗದ ನಂತರ ಸಂಭವಿಸುವ ಸಂತಾನ ಫಲವನ್ನೂ 'ಬಾಳೆಗಿಡ', 'ಮಲ್ಲಿಗೆ ಬಳ್ಳಿ', 'ಬಾಳೆಹಣ್ಣು' ಇತ್ಯಾದಿ ಸರಳ ಮತ್ತು ಅರ್ಥವತ್ತಾದ ಪ್ರತಿಮೆಗಳ ಮೂಲಕ ಚಿತ್ರಿಸುವಂಥ ಕವನ.

ಪಾಟೀಲರ ಎರಡು ಭಾಗಗಳ ಕವನಗಳನ್ನು ಇಲ್ಲಿಯವರೆಗೆ ನೋಡಿದಂತಾಯಿತು. ಈ ಭಾಗದ ಕೆಲವು ಕವನಗಳಿಂದ, ಪಾಟೀಲರು ಸ್ವಲ್ಪ ಉಡಾಫಿಯಾಗಿ ಬರೆಯುತ್ತಿದ್ದಾರೆನ್ನಿಸುತ್ತದೆ. ಅವರಿಗೆ ಕವನಗಳ ಶಿಲ್ಪದ ಕಡೆಗೆ ಹೆಚ್ಚು ಆಸಕ್ತಿ ಇಲ್ಲದಿರುವುದು ಅವರ ಕೆಲವು ಕವನಗಳಲ್ಲಿ ಎದ್ದುಕಾಣುತ್ತದೆ. ಆದರೆ ನಾನು ಕಲಾತ್ಮಕವಾಗಿ ಸೋತ ಕೆಲವು ಕವನಗಳನ್ನು ಉದ್ಧರಿಸಿ ಚರ್ಚೆ ಮಾಡಲು ಹೋಗುವುದಿಲ್ಲ. ಯಾಕೆಂದರೆ ಗಾಂಧೀಸ್ಮರಣೆಯನ್ನು ಓದಿದವರಿಗೆ ಅದು ಸ್ಪುಟವಾಗಿ ಗೊತ್ತಾಗುವಂಥ ವಿಷಯವೇ. ಹಾಗೆಲ್ಲ ಮಾಡಿದರೆ ಲೇಖನದ ಪುಟಸಂಖ್ಯೆ ಜಾಸ್ತಿಯಾಗುವ ಭಯವಿದೆ ಇಲ್ಲಿ.

'ಗಾಂಧೀಸ್ಮರಣೆ'ಯು ಮೂರನೇ ಭಾಗವೇ ಅತ್ಯಂತ ಮಹತ್ವದ್ದು. ಸಮಕಾಲೀನ ಜೀವನದ ಪರಿಸರಕ್ಕೆ ಪ್ರಾಮಾಣಿಕ ಪ್ರತಿಕ್ರಿಯೆ ತೋರಿದ ಧ್ವನಿ, ಪಾಟೀಲರ ಈ ಭಾಗದ ಕವನಗಳಲ್ಲಿದೆ. ಕಲಾತ್ಮಕ ಚೌಕಟ್ಟಿನಲ್ಲಿಯೇ ಸಮಕಾಲೀನ ಬದುಕಿನ ಅನುಭವದ ಪ್ರಾಮಾಣಿಕ ಅಭಿವ್ಯಕ್ತಿ ಪ್ರಕಟಗೊಂಡಿದೆ. ಈ ಭಾಗದ ಮತ್ತು ಕವನ ಸಂಕಲನದ ಅತ್ಯುತ್ತಮ ಕವನವಾದ 'ಗಾಂಧೀಸ್ಮರಣೆ'ಯನ್ನು ಚರ್ಚಿಸುವಾ.

ಖಾಲೀ ಗದ್ದಲದ ಈ ನಾಡಿನ ಉದ್ದಗಲಕ್ಕೂ
ಈಗ ಶಾಂತಿ ನೆಲಸಿದೆ,
ನರನಾಡಿಯಲ್ಲ ನಿಂತೇ ಹೋದಂತಾಗಿ
ನಾವೆಲ್ಲ ಯೋಗಿಗಳಾಗಿದ್ದೇವೆ,
ಹಾದಿ ಮಾತು. ಬೀದಿ ಭಾಷಣಗಳ ಸದ್ದಡಗಿ
ಕಿವಿ ತುಂಬ ಹುಲುಸಾಗಿ ಕೂದಲು ಬೆಳೆಯುತ್ತಿದೆ.

ಒಂದು ದೇಶದ ಪ್ರಜೆಗಳು ತಮ್ಮ ನ್ಯಾಯ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳಲು, ಆ ದೇಶದ ಸಮಕಾಲೀನ ರಾಜಕೀಯ ವ್ಯವಸ್ಥೆಯನ್ನು ಒತ್ತಾಯಿಸುತ್ತಲೇ ಇರುತ್ತಾರೆ ; ಅದರ ಕೂಡಾ ಹೋರಾಡುತ್ತಲೇ ಇರುತ್ತಾರೆ. ಪ್ರಜೆಗಳ ಈ ಬೇಡಿಕೆಗಳ ಕಡೆಗೆ, ಪ್ರಜಾಸ್ವಾತಂತ್ರ್ಯದ ಕಡೆಗೆ ಲಕ್ಷ್ಯ ಕೊಡದ, ಕಾಳಜಿ ವಹಿಸಿದ, ತನ್ನ ಅಧಿಕಾರ ಗದ್ದುಗೆಯನ್ನು ಮಾತ್ರ ಉಳಿಸಿಕೊಳ್ಳ ಬೇಕೆಂಬ ಫ್ಯಾಸಿಸ್ಟ್ ರಾಜಕೀಯ ವ್ಯವಸ್ಥೆಗೆ ಇದೆಲ್ಲ 'ಖಾಲಿ ಗದ್ದಲ' ಎಂದು ಅನ್ನಿಸುತ್ತದೆಂಬುದನ್ನು ಕವಿ ವ್ಯಂಗ್ಯವಾಗಿ ಹೇಳಿದ್ದಾನೆ. ಆ ವ್ಯವಸ್ಥೆ ಪ್ರಜೆಗಳ ನ್ಯಾಯಬೇಡಿಕೆಯ ಹೋರಾಟವನ್ನು ಸ್ವತಂತ್ರಪ್ರಿಯತೆಯನ್ನು ಬಗ್ಗುಬಡಿಯುತ್ತದೆ ; ಅವರ ವಾಕ್‌ಸ್ವಾತಂತ್ರ್ಯವನ್ನೇ, ಸಂಘಟನಾಶಕ್ತಿಯನ್ನೇ ಕುಸಿದುಕೊಳ್ಳುತ್ತದೆ. 'ಹಾದಿ ಮಾತು ಬೀದಿ ಭಾಷಣಗಳ ಸದ್ದಡಗಿ' ಎನ್ನುವ ಪಂಕ್ತಿಯೇ ಈ ಎಲ್ಲಾವನ್ನೂ ಅರ್ಥಪೂರ್ಣವಾಗಿ ಧ್ವನಿಸಿಬಿಡುತ್ತದೆ. ಈ ರೀತಿ ಪ್ರಜೆಗಳ ಮಾನವೀಯ ಹಕ್ಕುಗಳನ್ನು ಕಸಿದುಕೊಳ್ಳುವುದೇ ಆ ವ್ಯವಸ್ಥೆಯ 'ಶಾಂತಿ' ಸಾಧನೆ. ಅದನ್ನೇ ಅದು 'ಶಾಂತಿ' ಎಂದು ಕರೆದು ಪ್ರಚಾರಮಾಡುತ್ತದೆ. ಈ ಕ್ರಿಯೆ ಪ್ರಜಾಪ್ರಭುತ್ವದ ಬುಡಮೇಲು ಕ್ರಿಯೆ. ಇಂಥ ರಾಜಕೀಯ ವಾತಾವರಣದಲ್ಲಿ ಕವಿಯೂ ಸಮೇತ ಎಲ್ಲ ಪ್ರಜೆಗಳೂ ಬದುಕುತ್ತಿದ್ದಾರೆ. ಆದರೆ ಅವರ 'ನರನಾಡಿಯೆಲ್ಲ ನಿಂತೇ ಹೋದಂತಾಗಿ' ಅವರೆಲ್ಲ 'ಯೋಗಿಗಳಾಗಿ'ದ್ದಾರೆ. ಯೋಗಿ ಆಗುವುದು ಇಂದ್ರಿಯಗಳ ಬಲ ಕಡಿಮೆಯಾದಾಗ. ಆ ಬದುಕನ್ನು ಯೋಗಿಗಳು ತಮ್ಮ ಸ್ವಂತ ತೀರ್ಮಾನದ ಮೇಲೆಯೇ ಆರಿಸಿಕೊಂಡಿರುತ್ತಾರೆ, ಆದರೆ ಇಲ್ಲಿ ಹಾಗಾಗಿಲ್ಲ, ವ್ಯವಸ್ಥೆಯೇ ಇವರನು 'ಯೋಗಿ'ಗಳನ್ನಾಗಿ ಮಾಡಿದೆ. ಇವರ ಬದುಕುವ ಸ್ವಾತಂತ್ರ್ಯವನ್ನೇ ಕಿತ್ತುಕೊಂಡು ಚೈತನ್ಯಹೀನರನ್ನಾಗಿ ಮಾಡಿದೆ. ಇಲ್ಲಿ 'ಯೋಗಿ' ಎನ್ನುವ ಪದ ಬಳಕೆ ವ್ಯಂಗ್ಯದಿಂದ

ಕೂಡಿದ್ದು ಕವಿಯ ಪದ ಬಳಕೆಯ ಔಚಿತ್ಯ ಪ್ರಜ್ಞೆಯನ್ನು ಒತ್ತಿಹೇಳುತ್ತದೆ. ಇಲ್ಲಿ ಪ್ರಜೆಗಳ 'ಕಿವಿ ತುಂಬ ಹುಲುಸಾಗಿ ಕೂದಲು ಬೆಳೆಯುವುದು ಪ್ರಜೆಗಳ ಸಂಪರ್ಕ ಸೌಕರ್ಯ, ಆಲೋಚನಾಶಕ್ತಿ ಮುರುಟಿಹೋದಂಥ ಸನ್ನಿವೇಶವನ್ನು ವ್ಯಂಗ್ಯಾತ್ಮಕ ವಾಗಿ ಹೇಳುತ್ತದೆ.

ಅನಾಚಾರ ಅತ್ಯಾಚಾರ ಭ್ರಷ್ಟಾಚಾರಗಳ ಬದಲು
ಪತ್ರಿಕೆಗಳ ತುಂಬ ಶುದ್ಧ ಸಮಾಚಾರ ತುಂಬಿದೆ
ಎಲ್ಲ ಸಾಮಾನುಗಳ ಬೆಲೆ ಇಳಿದೂ ಇಳಿದೂ
ಕೈಗೆ ಈಗ ಸಿಗದಂತಾಗಿವೆ.
ಬಿಡಾಡಿ ನಾಯಿಗಳ ನಿರ್ಬೀಜೀಕರಣವಾಗಿದೆ
ಭಾರತದ ಜನಸಂಖ್ಯೆ ಇಳಿಯುತ್ತಿದೆ.

ಪ್ರಜೆಗಳ ನ್ಯಾಯ ಬೇಡಿಕೆಗಳನ್ನು, ಆಶೆ ಆಕಾಂಕ್ಷೆಗಳನ್ನು ಕುರಿತಂಥ ಸತ್ಯ ಸಮಾಚಾರಗಳು, ಅಂಥ ವ್ಯವಸ್ಥೆಗೆ ಅನಾಚಾರ, ಅತ್ಯಾಚಾರ, ಭ್ರಷ್ಟಾಚಾರಗಳಾಗಿ ಕಂಡುಬಿಡುತ್ತವೆ. ಅದು ಪ್ರಜಾರಾಜ್ಯಕ್ಕೆ ಮೋಸ ಮಾಡುವಂತ ಸುಳ್ಳು ಸಮಾಚಾರ ಗಳನ್ನೇ ಶುದ್ಧ ಸಮಾಚಾರಗಳನ್ನಾಗಿ ಪ್ರಕಟಪಡಿಸುತ್ತದೆ. ಇದೆಲ್ಲವನ್ನೂ ಸ್ಟಾಂಜಾದ ಮೊದಲೆರಡು ಪಂಕ್ತಿಗಳು ಧ್ವನಿಸುತ್ತವೆ. ಇಲ್ಲಿ ಇನ್ನೊಂದು ಅರ್ಥವೂ ಹೊರಡುತ್ತದೆ. ಅಂಥ ವ್ಯವಸ್ಥೆ ತಾನು ಮಾಡುವಂಥ 'ಅನಾಚಾರ', 'ಅತ್ಯಾಚಾರ', 'ಭ್ರಷ್ಟಾಚಾರ'ಗಳನ್ನು ಬಚ್ಚಿಟ್ಟು ವಸ್ತುಗಳ ಬೆಲೆ ಇಳಿತದ ಸಮಾಚಾರ, ಜನಸಂಖ್ಯೆ ಕಡಿಮೆ ಮಾಡುವಂಥ ಕುಟುಂಬ ಯೋಜನೆಯ ಕಾರ್ಯಗಳಂಥ ಸಮಾಚಾರಗಳನ್ನು ಪತ್ರಿಕೆಗಳಲ್ಲಿ ಪ್ರಕಟಪಡಿಸುತ್ತದೆ. ಆದರೆ ವಸ್ತುಗಳ ಬೆಲೆ ಇಳಿದಿದೆ ಎಂದು ಪತ್ರಿಕೆ ಪ್ರಕಟಪಡಿಸಿದರೂ ಅವುಗಳ ಬೆಲೆ ಇಳಿಯದೇ ಇರುವಂಥ ವಿರೋಧಾಭಾಸವನ್ನು, ವ್ಯವಸ್ಥೆಯ ಮೋಸವನ್ನು ಈ ಸ್ಟಾಂಜಾದ ಮೂರು ನಾಲ್ಕನೆಯ ಪಂಕ್ತಿಗಳು ಧ್ವನಿಸುತ್ತವೆ. ವ್ಯವಸ್ಥೆ ಮಾಡುವಂಥ ಕುಟುಂಬ ಯೋಜನೆಯಂಥ ಕಾರ್ಯಕ್ರಮ ಗಳನ್ನು 'ಬಿಡಾಡಿ ನಾಯಿಗಳ ನಿರ್ಬೀಜೀಕರಣ' ಎಂದು ಕವಿ ಹೇಳುವಲ್ಲಿ ಸಂತಾನ ಶಕ್ತಿಯನ್ನೇ ಕಳೆದುಕೊಂಡ, ಮತ್ತು ಹೊಂದರಂಥ ಜನರನ್ನು ಶಸ್ತ್ರಚಿಕಿತ್ಸೆಗೆ ಗುರಿಪಡಿಸಿ ಕುಟುಂಬ ಯೋಜನೆಯ ಬಲಿಪಶುಗಳನ್ನಾಗಿ ಮಾಡುವಂಥ ವ್ಯವಸ್ಥೆಯ ದಡ್ಡತನವನ್ನು ಅಧಿಕಾರದ ದುರುಪಯೋಗವನ್ನು ಗುರುತಿಸಬಹುದು. ಅಲ್ಲದೆ ಆ ವ್ಯವಸ್ಥೆ ಪ್ರಜೆ ಗಳನ್ನು ಪ್ರಾಣಿಗಳಂತೆ ನಾಯಿಗಳಂತೆ ನಡೆಸಿಕೊಳ್ಳುತ್ತದೆಂಬುದನ್ನೂ ಈ ಸ್ಟಾಂಜಾ ಹೇಳುತ್ತದೆ.

ನಾಳಿನ ನಾಗರಿಕರಾದ ಇಂದಿನ ಮಕ್ಕಳೆಲ್ಲ
ಸರಿಯಾಗಿ ಸಾಲೆಗೆ ಹೋಗಿ
ಒಂದು ಎರಡು ಬಾಳೆಲೆ ಹರಡು
ಕಲಿಯುತ್ತಿದ್ದಾರೆ.

ಹಸಗಂಡು ಮನೆಗೆ ಬಂದು
ಮಣ್ಣಿನ ವಾಸನೆಯ ತಾಜಾ ಊಟ ಮಾಡುತ್ತಾರೆ.

ಇಂದಿನ ಮಕ್ಕಳೆಲ್ಲ 'ನಾಳಿನ ನಾಗರಿಕ' ರಾಗುವಂಥವರು. ಅಂಥ ಮಕ್ಕಳ ಬೌದ್ಧಿಕ ಮತ್ತು ಮಾನಸಿಕ ಬೆಳವಣಿಗೆಗೆ ತಕ್ಕ ವಾತಾವರಣದ ಅವಶ್ಯಕತೆ ಇರುತ್ತದೆ. ಆದರೆ ಅಂಥ ವಾತಾವರಣವನ್ನು ಇಂಥ ವ್ಯವಸ್ಥೆ ಒದಗಿಸಿಕೊಡಲಾರದೆಂದುದನ್ನೂ ಮೇಲಿನ ಸ್ಟ್ಯಾಂಜಾ ಧ್ವನಿಸಿಬಿಡುತ್ತದೆ. ಮಕ್ಕಳ ಬೌದ್ಧಿಕ ಮಾನಸಿಕ ಬೆಳವಣಿಗೆಯು ಹೇಗೆ ಮುಖ್ಯವೋ ಹಾಗೆಯೇ ಅವರ ದೈಹಿಕ ಬೆಳವಣಿಗೆಯೂ ಅಷ್ಟೇ ಪ್ರಮುಖ. ಆದರೆ ಅದೂ ಅವರಿಗೆ ಶಾಲೆಯಲ್ಲಿ ಸಿಗುವುದಿಲ್ಲ ಎಂಬ ಸತ್ಯವನ್ನು ಕವಿ ಹೇಳುತ್ತಾನೆ. ಆದರೆ ಮಕ್ಕಳು ಶಾಲೆಯಲ್ಲಿ ಸಂಪಾದನೆ ಮಾಡತೊಡಗಿದ್ದ ಜ್ಞಾನಸಂಪಾದನೆ 'ಒಂದು ಎರಡು ಬಾಳೆಲೆ ಹರಡು' ಎಂಬಂಥ ಕೀಳುಮಟ್ಟದ್ದು. ಅವರು ಅಲ್ಲಿ ಕಲಿಯುವುದು ದೈಹಿಕ ಸುಖಕ್ಕೆ ಸಂಬಂಧಪಟ್ಟ ಜ್ಞಾನವನ್ನಾದರೂ, ಶಾಲೆಯಿಂದ ಮನೆಗೆ ಬಂದವರೆ ಹಸಗಂಡು ಮಣ್ಣಿನ ವಾಸನೆಯ ತಾಜಾ ಊಟ ಮಾಡುತ್ತಾರೆ. ಅಂದರೆ ಅಲ್ಲಿ ಅವರಿಗೆ ದೈಹಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಯ ಅವಕಾಶ ಸಿಕ್ಕುವುದಿಲ್ಲ ಎಂಬ ಅಂಶವನ್ನು ಕವಿ ಹೇಳುವುದರ ಜೊತೆಗೆ ನಾಳಿನ ನಾಗರಿಕರಾದ ಇಂದಿನ ಮಕ್ಕಳ ಭವಿಷ್ಯದ ಬಗ್ಗೆ ಓದುಗರನ್ನು ತೀವ್ರ ಆಲೋಚನೆಗೆ ಹಚ್ಚುತ್ತಾರೆ.

ಜಾಣ ಬಾಬಾಗಳಿಗೆ ಹುಚ್ಚಗೌಡರ ಬೆನ್ನು ಸಿಕ್ಕು
ಧರ್ಮೋದ್ಧಾರದ ಸವಾರಿ ಮುನ್ನಡೆದಿದೆ.
ಅಸ್ಪೃಶ್ಯ ದೇವರಿಗೆ ಹರಿಜನರ ದರ್ಶನವಾಗಿ
ಅವರ ಉದ್ಧಾರವೂ ಆಗುತ್ತಿದೆ.

ಧರ್ಮದ ಮುಖವಾದ ತೊಟ್ಟವರಿಗೆ, ಕೊಳಕು ರಾಜಕೀಯ ರಾಜಕಾರಣಿಗಳ ಸಹಾಯ ಸಿಕ್ಕಾಗ, ಧರ್ಮೋದ್ಧಾರದ ಮುಸುಕಿನಲ್ಲಿ ಪ್ರಜೆಗಳ ಶೋಷಣೆ ನಡೆಯು ವುದನ್ನು ಈ ಸ್ಟ್ಯಾಂಜಾದ ಮೇಲಿನ ಎರಡು ಸಾಲುಗಳು ಹೇಳುತ್ತವೆ. ಕುರುಡು ಧರ್ಮ ಮತ್ತು ಕೊಳಕು ರಾಜಕೀಯಗಳು ಪ್ರಜಾಶೋಷಣೆಯ ಎರಡು ಪ್ರಮುಖ ಕೇಂದ್ರಗಳು. ಕುರುಡು ಧರ್ಮಕ್ಕೆ ಕೊಳಕು ರಾಜಕೀಯದ ಬೆನ್ನು ಸಿಕ್ಕಾಗ ನಡೆಯು ವಂಥ ಪ್ರಜಾಶೋಷಣೆಯ ಅಧಿಕ್ಯವನ್ನು ಇಲ್ಲಿನ ಸಾಲುಗಳು ಧ್ವನಿಸುತ್ತವೆ- ಕುರುಡು ಧರ್ಮವನ್ನು ಹೊತ್ತ ರಾಜಕೀಯ, ಹೊತ್ತುಕೊಂಡು ನಿಲ್ಲುವಂಥ ಕತ್ತೆ ಮಾತ್ರ ಆಗುವುದಿಲ್ಲ ; ಕುರುಡುಧರ್ಮ ಕೊಳಕು ರಾಜಕೀಯದ ಮೇಲೆ ಸವಾರಿ ಮಾಡುತ್ತಿರು ವಾಗ, ಕೊಳಕು ರಾಜಕೀಯ ತನಗೆಷ್ಟು ಬೇಕೋ ಅಷ್ಟೆಲ್ಲ ಸ್ವಾರ್ಥವನ್ನು ಕುರುಡು ಧರ್ಮಕ್ಕೆ ಬೆನ್ನುಕೊಟ್ಟು ಪಡೆದುಕೊಂಡುಬಿಡುತ್ತದೆ. ಅಸ್ಪೃಶ್ಯರನ್ನು ಉದ್ಧಾರ ಮಾಡುವ ಸೋಗುಹಾಕಿದ ವ್ಯಕ್ತಿಗಳು (ಅವರು ರಾಜಕಾರಣಿಗಳೂ ಆಗಿರಬಹುದು ಸಮಾಜ ಸುಧಾರಕರೂ ಆಗಿರಬಹುದು) ಅಸ್ಪೃಶ್ಯ ದೇವರು ಅವರಿಗೆ ಹರಿಜನರ

ದರ್ಶನವಾಗಿ ಅವರ ಉದ್ಧಾರವೂ ಆಗುತ್ತಿದೆ ಎಂದು ಹೇಳುವ ಮಾತು ವ್ಯಂಗ್ಯದಿಂದ ಕೂಡಿದ್ದು, ಅವರಿಂದ ಹರಿಜನರ ಉದ್ಧಾರವಾಗುತ್ತಿಲ್ಲವೆಂಬ ಅರ್ಥ ಹೊರಡುತ್ತದೆ. ಹರಿಜನರ ಅವನತಿಯನ್ನೇ 'ಉದ್ಧಾರ' ಎನ್ನುವ ಪದ ಒತ್ತಿಹೇಳುತ್ತದೆ. 'ಅಸ್ಪೃಶ್ಯ ದೇವರು' ಎನ್ನುವ ಪದಬಳಕೆ ಅಸ್ಪೃಶ್ಯರನ್ನು ಉದ್ಧಾರ ಮಾಡಹೊರಟ ಮುಖವಾಡ ವನ್ನು ಬಯಲಿಗೆಳೆಯುತ್ತವೆ; ಅಂಥ ಜನರ ವ್ಯಕ್ತಿತ್ವವನ್ನೇ ಗೇಲಿಮಾಡಿ ಅವರಿಗೆ ಎಚ್ಚರಿಕೆಯನ್ನೂ ಕೊಡುತ್ತದೆ.

ಸರಕಾರದ ಕೆಲಸ ದೇವರ ಕೆಲಸವಾಗಿ
ತುಪ್ಪದ ದೀಪ ಧಾಳಾಗಿ ಉರಿಯುತ್ತವೆ
ವಿಶೇಷ ಪ್ರಾರ್ಥನೆಗಳಿಂದಾಗಿ ದೇಶದ ತುಂಬ
ಜಿಟ ಜಿಟ ಮಳೆ ಹಿಡಿದಿದೆ
ನಮ್ಮ ತ್ರಿವರ್ಣ ಧ್ವಜ ತೊಯ್ದು ತೆಪ್ಪಡಿಯಾಗಿ
ಅಶೋಕಚಕ್ರ ಸ್ಥಿರವಾಗಿದೆ.

ದೇವರು ಶ್ರೇಷ್ಠ ಶಕ್ತಿ (super natural power) ಎಂಬ ನಂಬಿಕೆ ಇರು ವುದರಿಂದ ಅವನೊಬ್ಬ ಸರ್ವಾಧಿಕಾರಿ. ಇಲ್ಲಿ ಸರಕಾರದ ಕೆಲಸ ದೇವರ ಕೆಲಸವಾಗು ವುದೆಂದರೆ ಸರ್ಕಾರವೂ ಸರ್ವಾಧಿಕಾರಿಯೇ ಎಂದರ್ಥ. ದೇವರ ಮಂದಿರದಲ್ಲಿ ದೇವರನ್ನು ಗೌರವಾರ್ಥವಾಗಿ ಕಾಣಲು; ದೇವರ ಶ್ರೇಷ್ಠತೆಯನ್ನು ಸಾರಲು ಹೆಚ್ಚಿನ ಬೆಲೆಯ 'ತುಪ್ಪದ ದೀಪ'ವೇ ಧಾಳಾಗಿ, ಉರಿಯುತ್ತಿರುತ್ತದೆ. ಭಕ್ತರು ತಮ್ಮ ಇಷ್ಟಾರ್ಥ ಈಡೇರಿಕೆಗಾಗಿ ಹೀಗೆಲ್ಲ ದುಭಾರಿ ದುಂದುವೆಚ್ಚವನ್ನು ತಾವೇ ಮಾಡುತ್ತಿರು ತ್ತಾರೆ. ಆದರೆ ಇಲ್ಲಿ ದೇವರೆಂಬ ಸರ್ವಾಧಿಕಾರ ಸರ್ಕಾರದಲ್ಲಿ ಅಧಿಕಾರಸ್ಥರಾದ ಸರ್ವಾಧಿಕಾರಿಗಳಿಗೆ ತುಪ್ಪದಂಥ ಹೆಚ್ಚಿನ ಬೆಲೆಯ, ಅಧಿಕ ಮೊತ್ತದ ವಸ್ತುಗಳೇ ಬೇಕೆಂಬ ಅರ್ಥ ಹೊರಡುತ್ತದೆ. 'ತುಪ್ಪ' ಸಂಪತ್ತಿನ ಸಂಕೇತ. ಅಂಥ ತುಪ್ಪದ ದೀಪ 'ಧಾಳಾಗಿ' ಉರಿಯುವುದೆಂದರೆ ಸಂಪತ್ತು ಹೆಚ್ಚಿನ ಮಟ್ಟದಲ್ಲಿ ವ್ಯಯವಾಗುವು ದೆಂದು ಅರ್ಥ. ಈ ಸಂಪತ್ತು ಅಧಿಕ ಮಟ್ಟದಲ್ಲಿ ವ್ಯಯವಾಗುವುದು ಆ ದೇಶದ ಪ್ರಜೆಗಳಿಗಲ್ಲ. ದೇಶದ ಸರ್ವಾಧಿಕಾರಿಗೆ ಮಾತ್ರ. ದೇಶದ ಸಂಪತ್ತೆಲ್ಲ ಸರ್ವಾಧಿಕಾರ. ಸರ್ಕಾರದಲ್ಲಿ ಸರ್ವಾಧಿಕಾರಿ ಮನೋಭಾವದ ರಾಜಕಾರಣಿಗಳ ಜೇಬಿಗೆ ಹೋಗುವಂಥ ರೀತಿಯನ್ನು ಸ್ಟ್ಯಾನ್ಜಾದ ಮೊದಲೆರಡು ಸಾಲುಗಳು ಈ ರೀತಿ ಅರ್ಥಪೂರ್ಣವಾಗಿ ಧ್ವನಿಸಿಬಿಡುತ್ತವೆ.

ಇಲ್ಲಿ ಇನ್ನೊಂದು ಅರ್ಥವೂ ಹೊರಡುತ್ತದೆ. ದೇವರು ಗುಡಿಯಲ್ಲಿರುವ ಕಲ್ಲು ಮಾತ್ರ, ಕ್ರಿಯಾಶೀಲ ಶಕ್ತಿ ದೇವರಲ್ಲ. ಹೀಗೆ ದೇವರೆಂಬ ವಸ್ತು ನಿಷ್ಕ್ರಿಯ ವಾಗಿದ್ದರೂ, ಭಕ್ತರು ಮಾತ್ರ ಅವನ ಮುಂದೆ ತುಪ್ಪದ ದೀಪವನ್ನು ಧಾಳಾಗಿ ಉರಿ ಸುತ್ತಾರೆ. ಅದೇ ರೀತಿ ಸರ್ವಾಧಿಕಾರಿ ಮನೋಭಾವದ ಸರ್ಕಾರನಿಷ್ಕ್ರಿಯವಾಗಿ ದ್ದರೂ ಪ್ರಜೆಗಳಿಗೆ ಸೇರಬೇಕಾದ ಸಂಪತ್ತನ್ನೆಲ್ಲ ತಿಂದುಹಾಕುತ್ತದೆ. ಇದೇ

ಸ್ಟ್ಯಾನ್ಜಾದ 'ಅಶೋಕ ಚಕ್ರ ಸ್ಥಿರವಾಗಿದೆ' ಎನ್ನುವ ಮಾತೂ ಇದನ್ನೇ ಒತ್ತಿ ಹೇಳುತ್ತದೆ. ಅಶೋಕ ಚಕ್ರ ಚಲಿಸುವುದು, ರಾಜಕೀಯ ನ್ಯಾಯವಾದ ರೀತಿಯಲ್ಲಿ ಚಾಲನೆಗೊಳ್ಳುವುದರ ಸಂಕೇತ. ಅದು ಸ್ಥಿರವಾಗಿದೆ ಎಂದರೆ ಪ್ರಜೆಗಳ ರಾಜಕೀಯ ಜೀವನವೇ ನಿಂತುಹೋಗಿದೆ ಎಂದರ್ಥ. ತ್ರಿವರ್ಣ ಧ್ವಜ ತೊಯ್ದು ತಪ್ಪಡಿಯಾಗಿದೆಯೆಂದರೆ ಸತ್ಯ, ಶಾಂತಿ, ಸಮೃದ್ಧಿಗಳು ನಾಶಹೊಂದಿ ಸುಳ್ಳು, ಅಶಾಂತಿ. ಬಡತನಗಳೇ ದೇಶದಲ್ಲಿ ನೆಲೆಸಿವೆ ಎಂದರ್ಥ. 'ಜಿಟ ಜಿಟ ಮಳೆ' ಪ್ರಜೆಗಳಿಗೆ ಕಿರಿಕಿರಿ ಕೊಡುವಂಥ ಮಳೆ: ಅವರಿಗೆ ಆರೋಗ್ಯಕರ ಮಳೆ ಅಲ್ಲ. ಪ್ರಜೆಗಳ ಬೇಡಿಕೆಗಳನ್ನು ಈಡೇರಿಸದ ಸರ್ಕಾರ ಪ್ರಜೆಗಳಿಗೆ ಕಿರಿಕಿರಿ ಕೊಡುವಂಥ ರೀತಿಯಲ್ಲಿಯೇ ನಡೆದುಕೊಳ್ಳುತ್ತದೆಂಬುದನ್ನು ಹೇಳುವುದೇ ಇಲ್ಲಿ ಕವಿಗೆ ಮುಖ್ಯವಾಗಿದೆ.

ಇಡೀ ಸ್ಟ್ಯಾನ್ಜಾ ಸರ್ವಾಧಿಕಾರ ಮನೋಭಾವದ ಸರ್ಕಾರದಲ್ಲಿ ನಡೆಯುವಂಥ ಪ್ರಜೆಗಳ ರಾಜಕೀಯ ಶೋಷಣೆ ಮತ್ತು ರಾಜಕೀಯದ ಏರುಪೇರಿನ ಸ್ಥಿತಿಯನ್ನು ಅತ್ಯಂತ ಅರ್ಥಪೂರ್ಣವಾದ ಸರಳವಾದ ಪ್ರತಿಮೆಗಳ ಮೂಲಕ ಹೇಳುವಲ್ಲಿ ಹೆಚ್ಚು ಸಫಲತೆಯನ್ನು ಪಡೆದಿದೆ.

> ಹೆದ್ದಾರಿಯ ಮೇಲೆ ಕೆಟ್ಟುನಿಂತ ಟ್ರಕ್ಕು ಕೂಡ
> ನಾಡು ಮುನ್ನಡೆದಿದೆ – ಎಂಬ ಸಂದೇಶ ಹೊತ್ತಿದೆ.
> ರೇಡಿಯೋಗ ಗಿಳಿವಿಂಡು, ಅದೋ,
> ಒಕ್ಕೊರಲಿಂದ ಅದೇ ಹಾಡು ಹಾಡುತ್ತಿದೆ.

ಟ್ರಕ್ಕು ಕೆಟ್ಟುಹೋಗಿದೆ. ಅದಕ್ಕೆ ಚಾಲನೆ ಇಲ್ಲ. ಅದು ಚಾಲನೆಗೊಳ್ಳುವುದು ರಿಪೇರಿಯಾದ ಮೇಲೆ. ದೇಶದ ರಾಜಕೀಯ ಸ್ಥಿತಿಯೂ ಹದಗೆಟ್ಟು ಚಾಲನೆಗೊಳ್ಳದೆ ಇದ್ದಾಗ, ನಿಷ್ಕ್ರಿಯತೆಯಲ್ಲಿದ್ದಾಗ ಕೆಟ್ಟ ಟ್ರಕ್ಕು. ನಾಡು ಮುನ್ನಡೆದಿದೆ ಎಂಬ ಸಂದೇಶ ಹೊತ್ತಿರುವುದು ಗುಣಾತ್ಮಕ ವ್ಯಂಗದಿಂದ ಕೂಡಿದೆ. ಒಂದು ರಾಜಕೀಯ ವ್ಯವಸ್ಥೆ ಕೆಟ್ಟು, ಅದಕ್ಕೆ ಚಾಲನೆ ಇಲ್ಲದಾಗ ರೇಡಿಯೋ ಇತ್ಯಾದಿ ಸಮೂಹ ಪ್ರಸಾರ ಮಾಧ್ಯಮಗಳನ್ನು ಆ ವ್ಯವಸ್ಥೆ ಸುಳ್ಳು ಸಂದೇಶಗಳನ್ನು ಬಿತ್ತರಿಸಲು ಉಪಯೋಗಿಸಿಕೊಳ್ಳುತ್ತದೆಂಬುದನ್ನು ಈ ಸ್ಟ್ಯಾನ್ಜಾದ ಕೊನೆಯ ಪಂಕ್ತಿಗಳು ಧ್ವನಿಸುತ್ತವೆ.

> ಧನ್ಯತೆಯ ಈ ಕಣದಿ, ಓ ಮುದ್ದುರಂಗ,
> ಕಿವಿಮುಚ್ಚಿ. ಕಣ್ಣುಮುಚ್ಚಿ,
> ನೆನೆ ನೆನೆ ಗಾಂಧಿಯನು.
> (ಯಾವ ಗಾಂಧಿ ? ಅಂತ ತಿಳಿಯದೇ ಪೆದ್ದುಲಿಂಗ ?)
> ಬಾಯ ಮುಚ್ಚಿ,
> ನೆನೆ ನೆನೆ ಗಾಂಧಿಯನು.

ಕಣ್ಣು, ಕಿವಿ, ಬಾಯಿ-ಮುಚ್ಚಿಕೊಳ್ಳುವುದು ಮಹಾತ್ಮಾಗಾಂಧಿಯ ಜೀವನ ಸಂದರ್ಭದಲ್ಲಿ ಪವಿತ್ರ ಬದುಕಿನ ಸಂಕೇತ. ಆದರೆ ಈ ಕವನ ಸೃಷ್ಟಿಯಾದ ಸಂದರ್ಭ ದಲ್ಲಿ ಅವು ಕೊಡುವಂಥ ಅರ್ಥವನ್ನು ಒಂದೇ ಒಂದು ಮಾತಿನಲ್ಲಿ ಹೇಳುವುದಾದರೆ, ಅದು ಗುಲಾಮಗಿರಿತನ, ಬದುಕಿನ ಷಂಡತನದ ನಿಷ್ಕ್ರಿಯತೆ, ಕವಿ ಪಾಟೀಲರಿಗೆ ಇದಿಷ್ಟನ್ನೇ ಇಲ್ಲಿ ಹೇಳುವುದು ಮುಖ್ಯವಾಗಿಲ್ಲ. ಬದುಕಿನ ಷಂಡತನದಿಂದ, ನಿಷ್ಕ್ರಿಯತೆಯಿಂದ ಬಿಡಿಸಿಕೊಂಡು ಹೊರಗೆ ಬರಬೇಕೆಂಬುದನ್ನು ವ್ಯಂಗ್ಯಧಾಟಿಯಲ್ಲಿ ಹೇಳುವುದೇ ಮುಖ್ಯವಾಗಿದೆ. ಅದನ್ನವರು ಹೇಳಿದ್ದಾರೆ. 'ನೆನೆ ನೆನೆ ಗಾಂಧಿ ಯನು' ಎಂಬ ಮಾತು ಗಾಂಧಿಗಳ ನಡುವಿನ ಅಂತರವನ್ನು ಸೂಚಿಸುವುದಲ್ಲದೆ, ಫ್ಯಾಸಿಸ್ಟ್ ವ್ಯವಸ್ಥೆಯನ್ನು ಒಪ್ಪಿಕೊಂಡು ಅದಕ್ಕೆ ಮೈಯೊಡ್ಡಿದನರನ್ನು ಜಾಗೃತ ಗೊಳಿಸಿ ವಿಚಾರಕ್ಕೆ ಹಚ್ಚುತ್ತದೆ.

ಒಟ್ಟಿನಲ್ಲಿ ಇಡೀ ಕವನವೇ ಕಲಾತ್ಮಕ ಚೌಕಟ್ಟಿನಲ್ಲಿ ಮೂಡಿ ಬಂದು ಸಮಕಾಲೀನ ಫ್ಯಾಸಿಸ್ಟ್ ವ್ಯವಸ್ಥೆಯನ್ನು, ಅದರ ವಿರೋಧಾಭಾಸಗಳನ್ನು, ಮೋಸದ ಎಳೆಗಳನ್ನು ಚಿತ್ರಿಸುವುದರ ಮೂಲಕ, ಅಂಥ ವ್ಯವಸ್ಥೆಯನ್ನು ಒಪ್ಪಿಕೊಂಡಂಥ ಪ್ರಜೆಗಳಿಗೆ ಚುರುಕನ್ನು ಮುಟ್ಟಿಸಿ ಅವರ ಸುಪ್ತಚೇತನವನ್ನು ಜಾಗೃತಗೊಳಿಸುತ್ತದೆ. ಇದು ಪಾಟೀಲರ ಸಂಕಲನದ ಅತ್ಯುತ್ತಮ ಕವನ.

'ಅತಿಥಿ' ಕವಿತೆ ಸೆರೆಯಾಳಿನ ಹೃದಯದ ಇಣುಕು ನೋಟವಾಗಿದ್ದು, ಸಮ ಕಾಲೀನ ಜೀವನದ ಸ್ಥಿತಿಯ ಸಮರ್ಥ ಕಲಾತ್ಮಕ ವ್ಯಾಖ್ಯೆಯಾಗಿದೆ. ಇಲ್ಲಿ ಸೆರೆಯಾಳಿನ ಪರಿಸರ ಮತ್ತು ಜೀವನ ಸ್ಥಿತಿಗೂ ಸಮಕಾಲೀನ ಪ್ರಜೆಗಳ ಜೀವನ ಸ್ಥಿತಿಗೂ ಸಂಬಂಧವೇರ್ಪಡುವುದರ ಮೂಲಕ ಇಡೀ ಕವನ ಸಮಕಾಲೀನ ಜೀವನದ ನಿಸ್ಸಾರತೆ ಯನ್ನು ಧ್ವನಿಸುತ್ತದೆ. ಕವಿ ಇಲ್ಲಿ ಜೇಲಿನ ವಿವರಗಳನ್ನು, ಅಲ್ಲಿಯ ಉಪಚಾರ, ವಿಚಾರಗಳನ್ನು ಚಿತ್ರಿಸುವುದರ ಮೂಲಕ ಸಮಕಾಲೀನ ಇಡೀ ಬದುಕನ್ನೇ ಚಿತ್ರೀಕರಿ ಸಿದ್ದಾರೆ. ಇದು ಪಾಟೀಲರ ಸಾರ್ಥಕ ಕವನಗಳಲ್ಲೊಂದು.

'ಗೃಹಬಂಧನ' ಕವನವೂ ಪಾಟೀಲರ ಉತ್ತಮ ಕವನಗಳಲ್ಲೊಂದು. ಸರ್ವಾಧಿಕಾರ ಮನೋಭಾವ ಹೇಗೆ ಇಡೀ ದೇಶವನ್ನೇ ಆವರಿಸಿಕೊಂಡು ರಾಷ್ಟ್ರದ ಬದುಕಿನಲ್ಲಿ ಅನಾರೋಗ್ಯಕರ ವಾತಾವರಣವನ್ನು ಸೃಷ್ಟಿಸಬಲ್ಲದೆಂಬುದನ್ನು ಈ ಕವನ ಶಕ್ತಿಯುತವಾಗಿ ಹೇಳುತ್ತದೆ. ಕವನದ ಕೆಲವು ಸಾಲುಗಳನ್ನು ನೋಡಿ.

> ಮಾತಾಡಿದ್ರೆ ಅಂದರೆ ಬಹಿರಂಗ ಭಾಷಣ.
> ಸುಮ್ಮನಿದ್ರೆ ಅಂದರೆ ಮೌನ ಮೆರವಣಿಗೆ.
> ತೂಕಡಿಸಿದರೆ ಹಿಂದೆ ಮುಂದೆ ಆಂದೋಲನ
> ಗೊರಕೆ ಹೊಡೆದರೆ ಕ್ರಾಂತಿ ಅಲೆ ಅಲೆಗಳು...

ಈ ಸಾಲುಗಳು ಸರ್ವಾಧಿಕಾರ ಮನೋಭಾವ ರಾಷ್ಟ್ರವನ್ನು ಆಳುವುದಕ್ಕಿಂತ ಮುಂಚಿನ ದೇಶದ ಸ್ಥಿತಿಯನ್ನು ಹಾಸ್ಯದ ಚಟಾಕಿಯಲ್ಲಿ ಹೇಳುತ್ತವೆ.

ಕಪ್ಪು ಬಾವುಟ ಹೋಗಿ ಮಸೆರಬಿ ಆಯಿತು.
ಕರಪತ್ರ ಕಿರಾಣಿ ಅಂಗಡಿಗೆ ರದ್ದಿ.
ಘೋಷಣೆಗಳೆಲ್ಲ ಊದುಗೊಳವಿಯಲ್ಲಿ ಹರಿದು
ಭಾಷಣದ ಭರಾಟೆಗೆ ಒಲೆ ಉರಿಯಾಯಿತು.

'ಕಪ್ಪು ಬಾವುಟ' ಪ್ರತಿಭಟನೆಯ ಸಂಕೇತ. ಅದು 'ಮಸೆರಬಿ' ಆಗಿದೆ ಎಂದರೆ ಪ್ರಜೆಗಳ ಪ್ರತಿಭಟನಾ ಶಕ್ತಿ ನಾಶವಾಗಿದೆ ಎಂದರ್ಥ. ಈ ಸ್ಟ್ಯಾನ್ಜಾದ ಮುಂದಿನ ಸಾಲುಗಳು ಪ್ರಜೆಗಳ ಸಂಘಟನಾ ಶಕ್ತಿ, ವಾಕ್‌ಸ್ವಾತಂತ್ರ್ಯಗಳು ನಾಶಗೊಂಡ ಸ್ಥಿತಿಯನ್ನು ವಿಡಂಬನಾತ್ಮಕವಾಗಿ ಹೇಳುತ್ತವೆ. ಹೀಗೆ ಇಡೀ ಕವನವೇ ಸರ್ವಾಧಿಕಾರ ಮನೋಭಾವ ಯಾವ ರೀತಿ ರಾಷ್ಟ್ರದ ಬದುಕನ್ನು ಕೆಡಿಸುತ್ತದೆಂಬುದನ್ನು ಹಾಸ್ಯದ ಧಾಟಿಯಲ್ಲಿ ಧ್ವನಿಪೂರ್ಣವಾಗಿ ಹೇಳುತ್ತದೆ.

'ಎಲ್ಲಿದ್ದೀರಿ ಎಲ್ಲಿದ್ದೀರಿ' ಕವನವು ಉತ್ತಮ ಕವನ. ಕವನದ ಕೆಲವು ಸಾಲುಗಳನ್ನು ನೋಡುವಾ.

ಇಲ್ಲಿಯ ನೆಲ ಕ್ರಾಂತಿಗೆ ಹದಗೊಂಡಿಲ್ಲವೆಂದು ಹೇಳಿ
ಆಕಾಶದಲ್ಲಿ ರಂಟೆ ಕುಂಟೆ ಹೂಡಿ
ಬೆಳಗು ಹರಿವುದರೊಳಗೆ ತಿರುಗುಮುರುಗು ಆಲದಮರ
ಇಳಿದಿಟ್ಟು ಅಗೋಚರ ಖೇಚರರೆ,

'ಇಲ್ಲಿಯ ನೆಲ' ಅಂದರೆ ಇಂಡಿಯಾದ ನೆಲ ಕ್ರಾಂತಿಗೆ ಬದಲಾವಣೆಗೆ ಪಕ್ವವಾಗಿಲ್ಲವೆಂದು ಹೇಳುತ್ತ, ಈ ನೆಲಕ್ಕೆ ಸಂಬಂಧಪಡದ 'ಆಕಾಶದಲ್ಲಿ' ರಂಟೆಕುಂಟೆ ಹೂಡು'ವುದೆಂದರೆ, ಅಲ್ಲಿ ಬದಲಾವಣೆಯನ್ನು ಬಯಸದಂಥ ಜನರನ್ನು ಅವರ ಅವಕಾಶವಾದಿತನವನ್ನು ವಿಡಂಬಿಸುತ್ತಾನೆ ಕವಿ. ಮುಂದಿನ ಇಡೀ ಕವನವೇ ವಿಡಂಬನಾತ್ಮಕವಾಗಿ ಬೆಳೆದುಕೊಂಡು, ಈ ಸಮಾಜದ ಪ್ರಗತಿಗಾಮಿ ಮುಖವಾಡ ತೊಟ್ಟು ಹೀರೋಗಳನ್ನು, ಹೀರೋಗಳೆಂದು ಪ್ರಚಾರಗಿಟ್ಟಿಸಿಕೊಂಡು ಸಮಾಜವನ್ನು ಮೋಸ ಮಾಡುವ ಭಂಡರನ್ನು ಟೀಕಿಸುತ್ತ ಹಂಗಿಸುತ್ತ ಸಾಗುತ್ತದೆ. ಇಂಥ ಜನರನ್ನು ಬಸವಲಿಂಗಪ್ಪನವರ ಭೂಸಾ ಪ್ರಕರಣದ ಹಿನ್ನೆಲೆಯಲ್ಲಿ ನೋಡಿ ಬೆಲೆಕಟ್ಟಿದ್ದು, ಟೀಕಿಸಿದ್ದು ಹೆಚ್ಚು ಔಚಿತ್ಯಪೂರ್ಣವಾಗಿದೆ.

ಈ ಭಾಗದಲ್ಲಿ 'ಅಕ್ಟೋಬರ್ ೨ ರಂದು ಅಸಾಮಾನ್ಯ ಗಾಂಧಿಮಾರಾಜನಿಗೆ ಸಾಮಾನ್ಯ ಹೇಳಿದ್ದು' 'ಮತ್ತು ೨.೧೦.೧೯೭೬ : ಒಂದು ವರದಿ' ಹೀಗೆ ಗಾಂಧೀಜಿಯನ್ನು ಕುರಿತು ಎರಡು ಕವನಗಳಿವೆ. ಎರಡನೇ ಕವನದಲ್ಲಿ ಗಾಂಧೀಜಿಯನ್ನು ಬಳಸಿಕೊಂಡು ತಮ್ಮ ಹೊಟ್ಟೆ ತುಂಬಿಕೊಳ್ಳುವ ಜನರನ್ನು ಹಾಸ್ಯದ ಮುಖಾಂತರ ಟೀಕಿಸಲಾಗಿದೆ, ಗಾಂಧೀಜಿಯನ್ನೂ ಅವನ ಹೆಸರನ್ನೂ ಮುಂದುಮಾಡಿ ಭಾಷಣ ಬಿಗಿದು, ಅದರ ಮೂಲಕ ಜನರ ಅನುಕಂಪೆಯನ್ನು ಗಿಟ್ಟಿಸಿಕೊಳ್ಳುವ ರಾಜಕಾರಣಿಗಳನ್ನು ಟೀಕಿಸಲಾಗಿದೆ.

> ಗಾಂಧೀಜಿ (ಬಹುಶಃ ಬಾಯಿತಪ್ಪಿ) ೨-೧೦-೧೯೬೯ ರಂದು
> ಜನಿಸಿದರೆಂದು ಹೇಳಿದ ಮಾನ್ಯ ಮುಖ್ಯಮಂತ್ರಿಗಳು
> ತಮ್ಮ ೨೮ ಮಿನಿಟಿನ ಸಂಕ್ಷಿಪ್ತ ಭಾಷಣದಲ್ಲಿ
> ಬಾಲಕ 'ಮೋನ್ಯಾ' ನ ೧೮ ಬಾಲ ಲೀಲೆಗಳನ್ನು
> ವಿಶದಪಡಿಸಿದವರು.

ಕವನದ ಈ ಸಾಲುಗಳು ಮತ್ತು ಕವನದ ಕೊನೆಯ ಮೂರು ಸಾಲುಗಳು ಸಮಕಾಲೀನ ಜೀವನ ಸಂದರ್ಭದಲ್ಲಿ ಗಾಂಧೀಗಳನ್ನು ಇಟ್ಟು, ತಳುಕುಹಾಕಿ, ಪರೀಕ್ಷಿಸಿ ನಂತರ ಸಮಕಾಲೀನ ಸಂದರ್ಭದಲ್ಲಿ ಗಾಂಧೀಜಿಯ ಅರ್ಥರಹಿತ ವ್ಯಕ್ತಿತ್ವವನ್ನು ವ್ಯಂಗ್ಯವಾಗಿ ಚಿತ್ರಿಸುತ್ತವೆ. ಈ ಕವನ ೧೯೭೬ ರಲ್ಲಿ ರಚಿತವಾಗಿದ ಎಂಬುದನ್ನು ಮತ್ತೆ ಸ್ಮರಿಸಬಹುದು.

'ಅಕ್ಟೋಬರ್ ೨ ರಂದು ಅಸಮಾನ್ಯ ಗಾಂಧೀಮಾರಾಜನಿಗೆ ಸಾಮಾನ್ಯ ಹೇಳಿದ್ದು' ಕವನದಲ್ಲಿ ಗಾಂಧೀಜಿಯನ್ನು ಹುತಾತ್ಮರನ್ನಾಗಿ ಮಾಡಿದ ಮಹಾತ್ಮರನ್ನಾಗಿ ಮಾಡಿದ ಇವತ್ತಿನ ನಾವುಗಳು ಅವತ್ತಿನ ಗಾಂಧೀಯನ್ನು, ಅವರ ತಾತ್ತ್ವಿಕ ನಿಲುವನ್ನು ಹುಗಿದು ಆ ಗೋರಿಯ ಮೇಲೆ ನಮ್ಮ ದೊಡ್ಡಸ್ತಿಕೆಯನ್ನು ನೆಡಲು ಶುರು ಮಾಡಿದ್ದನ್ನು ಇಡೀ ಕವನವೇ ಹಾಸ್ಯಭರಿತ ಅಣಕದಿಂದ ಹೇಳುತ್ತ ಹೋಗುತ್ತದೆ. ಸಮಕಾಲೀನ ಜೀವನ ಸಂದರ್ಭದಲ್ಲಿ ಗಾಂಧೀಜಿಯನ್ನು ಹೀಗೆಲ್ಲ ನೆನೆಯುವುದರಿಂದ ಗಾಂಧೀಜಿಯ ಜೀವನಕ್ಕೆ ಹೊಸ ಆಯಾಮವೂ ಒದಗಿಬಿಡುತ್ತದೆ.

ಅಡಿಗರನ್ನು ಕುರಿತು ಈ ಕವನಸಂಕಲನದಲ್ಲಿ ಎರಡು ಕವನಗಳಿವೆ. "ಅಡಿಗರನ್ನು ಕುರಿತು ಅವರು (ಪಾಟೀಲರು) ಬರೆದ ಮೊದಲ ಕವನಕ್ಕೂ ಎರಡನೇ ಕವನಕ್ಕೂ ಇರುವ ವ್ಯತ್ಯಾಸ ನೋಡಿದರೆ ತಿಳಿಯುತ್ತದೆ" ಎಂದು ಲಂಕೇಶರು ನುಡಿದಿದ್ದಾರೆ. ಆದರೆ ಅಡಿಗರನ್ನು ಕುರಿತು ಬರೆದ ಈ ಎರಡೂ ಪದ್ಯಗಳಲ್ಲಿ ಅಡಿಗರನ್ನು ಕಂಡ ಪಾಟೀಲರ ಧೋರಣೆ ಒಂದೇ ಆಗಿದೆ. ಈ ಎರಡೂ ಕವನಗಳಲ್ಲಿ ಹಾಸ್ಯದ ಮುಖೇನ ಅಡಿಗರನ್ನು ಅವರ ವ್ಯಕ್ತಿತ್ವವನ್ನು, ಅವರ ಕಾರ್ಯಕಲಾಪವನ್ನು, ಬೆಲೆಗಟ್ಟಿದ ರೀತಿಯನ್ನು ಕಾಣಬಹುದು. 'ಬುರುಡಿ ಬಾಬಾಮಹಿಮ' ಕವನ ಧಾರ್ಮಿಕ ಪರಿಸರದಲ್ಲಿ ನಡೆಯುವಂಥ ಮೋಸ ಡಾಂಭಿಕತನಗಳನ್ನೂ ಅಂಥ ಧಾರ್ಮಿಕ ಪರಿಸರದಲ್ಲಿ ಸಮಾಜದ ಗಣ್ಯ ವ್ಯಕ್ತಿಗಳೆನಿಸಿಕೊಂಡವರು ಸಾಮೀಲಾಗುವುದನ್ನು ಕವಿ ಟೀಕಿಸಿದ್ದಾರೆ. 'ಲಪಾಟ ಪಾಟೀಲನ ಸದಾಚಾರ' ಕವನ, ಪರಿಸರದ ಪರಿಸ್ಥಿತಿಯ ಅರಿವಿನಿಂದ ಮೂಡಿಬಂದ ಕವನವಾಗಿದ್ದು, ಒಂದು ಇಡೀ ರಾಜಕೀಯ ವ್ಯವಸ್ಥೆಯನ್ನೇ ಚಿತ್ರೀಕರಿಸುತ್ತ ಜೊತೆ ಜೊತೆಯಲ್ಲಿಯೇ ಅದನ್ನು ಟೀಕಿಸುತ್ತ ಹೋಗುತ್ತದೆ. ಇದು ಪಾಟೀಲರ ಉತ್ತಮ ಕವನಗಳಲ್ಲೊಂದು 'ಏರು ಹುಬ್ಬಿನವರೇ' ಇದೂ ಉತ್ತಮ ಕವನ.

ಪಾಟೀಲರ 'ಗಾಂಧೀಸ್ಮರಣೆ' ಕವನ ಸಂಕಲನದ ಕೆಲವು ವಿಶಿಷ್ಟ ಗುಣಗಳನ್ನು ಲೇಖನದ ಪೀಠಿಕೆಯಲ್ಲಿಯೇ ಹೇಳಿರುವೆನಾದ್ದರಿಂದ ಇಲ್ಲಿ ಮತ್ತೆ ಹೇಳುವ ಅಗತ್ಯವಿಲ್ಲ.

ನಿರಂಜನರ 'ಚಿರಸ್ಮರಣೆ'

ಸಿದ್ಧಲಿಂಗಯ್ಯ

ಸಾಹಿತ್ಯದಲ್ಲೂ ಬದುಕಿನಲ್ಲೂ ಪ್ರಗತಿಶೀಲತೆಯನ್ನು ಎತ್ತಿ ಹಿಡಿಯುತ್ತಾ ಬಂದವರು ನಿರಂಜನ. ಜನತೆಯ ವಿಮೋಚನೆಯ ಹೋರಾಟದಲ್ಲಿ ಸ್ವಯಂ ಪಾಲುಗೊಂಡು ಆದರ ಅನುಭವವನ್ನು ಅರಗಿಸಿಕೊಂಡ ನಿರಂಜನ ಕ್ರಾಂತಿಕಾರಿ ಸಾಹಿತಿಗಳ ಮುಂಚೂಣಿಯಲ್ಲಿ ನಿಲ್ಲುತ್ತಾರೆ. ಲೇಖಕ ವ್ಯವಸ್ಥೆಯ ಪರವೋ ವಿರೋಧವೋ ಎಂಬ ಆಯ್ಕೆಯ ಪ್ರಶ್ನೆ ಕನ್ನಡ ಸಂದರ್ಭದಲ್ಲಿ ಬರುವ ಮುನ್ನವೇ ನಿರಂಜನರು ಹೋರಾಟದ ದಾರಿಯನ್ನು ಆಯ್ಕೆ ಮಾಡಿಕೊಂಡಿದ್ದರು. ಬಾಳಿನಲ್ಲಿ ಕಂಡ ಕಷ್ಟ ಕಷ್ಟದ ದಿನಗಳು, ಸಾಮಾಜಿಕ-ಆರ್ಥಿಕ ಅಂತರಗಳು ಅವರಿಗೆ ಇಂಥ ನಿಲುವನ್ನು ತೆಗೆದುಕೊಳ್ಳಲು ಪ್ರೇರಣೆಯಾಗಿರಬಹುದು.

ನಿರಂಜನರನ್ನು ಪ್ರಗತಿಶೀಲ ಸಾಹಿತಿ ಎಂದು ಗುರುತಿಸಲಾಗುತ್ತದೆ. ಆದರೆ ಈ ಲೇಖಕ ಪ್ರಗತಿಶೀಲ ಚಳುವಳಿಯಲ್ಲಿ ಮುಖಂಡರೆನಿಸಿಕೊಂಡಿದ್ದವರೊಂದಿಗೆ ಸದಾ ಸೆಣಸಬೇಕಾಯಿತು. ಲೈಂಗಿಕ ವಿಚಾರಗಳ ಮುಕ್ತ ಚಿತ್ರಣವೆ ಪ್ರಗತಿಶೀಲತೆಯಲ್ಲ ಎಂದು ಆಗ ನಿರಂಜನ ಗಟ್ಟಿಯಾಗಿ ವಾದಿಸಿದರು. ಪ್ರಗತಿಶೀಲ ಚಳುವಳಿಯಲ್ಲಿ ಕಡೆಗಣಿಸಲ್ಪಟ್ಟ ನಿರಂಜನ, ಸಾಹಿತ್ಯದಲ್ಲಿ ಗೆದ್ದರು.

ಪ್ರಗತಿಶೀಲ ಸಾಹಿತ್ಯಕ್ಕೆ ಅಪರೂಪದ ಕಾಣಿಕೆ ಸಂದಾಯವಾದದ್ದು ಬಸವರಾಜ ಕಟ್ಟೀಮನಿ ಮತ್ತು ನಿರಂಜನರಿಂದ. ಕಟ್ಟೀಮನಿಯವರು 'ಜ್ವಾಲಾಮುಖಿಯ ಮೇಲೆ' ಕೃತಿಯಲ್ಲಿ ತಮ್ಮ ಪರಿಸರದ ಬದುಕನ್ನು ಗಾಢವಾಗಿ ಅನುಭವಿಸಿ ಚಿತ್ರಿಸಿದ್ದಾರೆ. ಅವರ ಪಾತ್ರಗಳು ಉತ್ತಮ ಬದುಕಿಗಾಗಿ ಹಂಬಲಿಸುವುದನ್ನು ಕಾಣುತ್ತೇವೆ. ಶೋಷಕಶೋಷಿತ ಸಂಬಂಧಗಳು ಅಲ್ಲಿ ದಾಖಲಾಗುತ್ತವೆ. ನಿರಂಜನರ 'ಚಿರಸ್ಮರಣೆ' ಇನ್ನೂ ಮುಂದುವರಿದ ಹಂತದ ಚಿತ್ರಣ. ಕಟ್ಟೀಮನಿಯವರಲ್ಲಿ ಚಿತ್ರಿತವಾದ ವರ್ಗ ಸಂಬಂಧಗಳು ನಿರಂಜನರಲ್ಲಿ ಮುಖಾಮುಖಿಯಾಗುತ್ತವೆ. ಕಟ್ಟೀಮನಿಯವರ ಪಾತ್ರಗಳಿಗಿಲ್ಲದ ಸೈದ್ಧಾಂತಿಕ ಪ್ರಬುದ್ಧತೆ ನಿರಂಜನರ ಪಾತ್ರಗಳಲ್ಲಿ ತುಂಬಿತುಳುಕುತ್ತದೆ. ಜ್ವಾಲಾಮುಖಿಯಲ್ಲಿ ನೋವುಣ್ಣುವ ಪಾತ್ರಗಳು ಚಿರಸ್ಮರಣೆಯಲ್ಲಿ ನೋವಿನ ಕಾರಣಗಳನ್ನು ವೈಜ್ಞಾನಿಕವಾಗಿ ಅರಿತುಕೊಂಡಿವೆ. ಈ ಲೇಖಕರಿಗೂ ದಕ್ಕಿದ ಜೀವನಾನುಭವದ ಹಿನ್ನೆಲೆಯಲ್ಲಿ ಎರಡೂ ಕೃತಿಗಳ ಸಾಚಾತನವನ್ನು ತರತಮ ದೃಷ್ಟಿಯಿಂದ ನೋಡುವುದು ಅಚಾರಿತ್ರಿಕವಾಗುತ್ತದೆ. ಆದರೆ ಕ್ರಾಂತಿಕಾರಿ ಹೋರಾಟವೊಂದರ ನಿಕಟ ಸಂಪರ್ಕವಿಟ್ಟುಕೊಂಡು, ಆ ಅನುಭವವನ್ನು ಪಡೆದುಕೊಂಡ ವಿಶಿಷ್ಟತೆಯುಳ್ಳ ಕೆಲವೇ ಕನ್ನಡ ಲೇಖಕರಲ್ಲಿ ನಿರಂಜನ ಅಗ್ರಮಾನ್ಯರು. ಆದ್ದರಿಂದಲೇ 'ಚಿರಸ್ಮರಣೆ' ಬಂಡಾಯ ಸಾಹಿತ್ಯದ ಅತ್ಯುತ್ತಮ ಪ್ರತಿನಿಧಿ.

ಬ್ರಿಟಿಷರನ್ನು ಈ ನೆಲದಿಂದ ಕಾಲ್ತೆಗೆಯುವಂತೆ ಮಾಡುವುದೇ ಜನಮನದ ಪ್ರಬಲ ಆಕಾಂಕ್ಷೆ ಆಗಿದ್ದ ಕಾಲದಲ್ಲಿ ಹಲವು ಜನಪರ ಶಕ್ತಿಗಳು ಇನ್ನೂ ಅರ್ಥಪೂರ್ಣವಾದ ಹಂಬಲಕ್ಕಾಗಿ ಹಾತೊರೆಯುತ್ತಿದ್ದವು. ಆಂಗ್ಲ ವಸಾಹತುಶಾಹಿಯಿಂದ ಭಾರತೀಯ ಬಂಡವಾಳ ಶಾಹಿಗೆ ಅಧಿಕಾರ ವರ್ಗಾವಣೆಯಾದರೆ ಸಾಕೆಂಬುದನ್ನು ಒಪ್ಪದ ಎಡಶಕ್ತಿಗಳು ಭಾರತ ಸಮಾಜದ ಆಮೂಲಾಗ್ರ ಬದಲಾವಣೆಯನ್ನು ಹಾರೈಸುತ್ತಿದ್ದವು. ಆಂಗ್ಲರನ್ನು ಓಡಿಸುವುದರ ಜೊತೆಗೆ ಆರ್ಥಿಕ, ಸಾಮಾಜಿಕ ಅಸಮಾನತೆಯನ್ನು ಒದ್ದೋಡಿಸುವುದು ಇವರ ಗುರಿಯಾಗಿತ್ತು. ಈ ಕ್ರಾಂತಿಕಾರಿ ಪ್ರಜ್ಞೆ ಕಯ್ಯೂರಿನಲ್ಲಿ ಪ್ರತಿಫಲನಗೊಂಡ ಕಥೆಯೇ 'ಚಿರಸ್ಮರಣೆ'

ಹೊಸ ಸಮಾಜದ ರಚನೆಗಾಗಿ ಹೋರಾಡುತ್ತಿರುವ ಕಯ್ಯೂರು ಗ್ರಾಮದ ಜನತೆ ತನ್ನೆಲ್ಲ ಮಾನವೀಯ ವಿವರಗಳೊಂದಿಗೆ ಇಲ್ಲಿ ಚಿತ್ರಿಸಲ್ಪಟ್ಟಿದ್ದಾರೆ. ಈ ಹೋರಾಟದ ದುರಂತ ಅತ್ಯಂತ ಅನುಕಂಪದಿಂದ ದಾಖಲಾಗಿದೆ. ಆಳುವ ಪ್ರಭುತ್ವದ ರಾಕ್ಷಸ ಶಕ್ತಿಯು ಹೊಸಕಿಹಾಕಿದ ಕೆಂಪು ಗುಲಾಬಿಯ ಬಗ್ಗೆ ಕಣ್ಣೀರು ಮಿಡಿಯುವುದರೊಂದಿಗೆ ಈ ಕಥೆ ಮುಗಿಯುವುದಿಲ್ಲ, ಭರವಸೆಯ ಬೆಳಕಿನ ಕಿರಣ ಎಲ್ಲಿಂದಲೊ ನುಗ್ಗಿ ಬರುತ್ತಿರುವುದನ್ನು ನಾವು ಕಾಣುತ್ತೇವೆ. ನಿರಂಜನರಲ್ಲಿ ಮಡುಗಟ್ಟಿರುವ ಗಾಢವಾದ ಚಾರಿತ್ರಿಕ ಪ್ರಜ್ಞೆಯೇ ಇದಕ್ಕೆ ಕಾರಣ, ಆದ್ದರಿಂದಲೇ 'ಚಿರಸ್ಮರಣೆ' ಆಕ್ರಂದನವಲ್ಲ. ಸಂಕಟದ ಹತಾಶ ಚಿತ್ರಣವೂ ಅಲ್ಲ. ಬದಲಾವಣೆಯನ್ನು ಮಿಡಿಯುವ ಮಾನವೀಯ ಕಲಾಕೃತಿ.

ಚಿರಕುಂಡ ಮತ್ತು ಅಪ್ಪು ಇನ್ನೂ ಚಿಕ್ಕವರು. ಇವರಲ್ಲಿ ಹೊಸ ವಿಚಾರದ ಕಿಡಿಹೊತ್ತಿಸಿದವರು ಅವರ ಮಾಸ್ತರರು. ಹುಡುಗರಿಬ್ಬರು ಬೆಳಗ್ಗೆ ಎದ್ದವರೇ ಮಾಸ್ತರು ಬರಹೇಳಿದ್ದ ಸ್ಥಳಕ್ಕೆ ಹೋಗುತ್ತಾರೆ. ನೀರನ್ನು ದಾಟಿ ಟೀ ಅಂಗಡಿಯೊಂದಕ್ಕೆ ಬಂದಾಗ ಬಾಲಕರಿಗೆ ಹೊಸ ಪ್ರಪಂಚದ ಪರಿಚಯವಾಗುತ್ತದೆ. ಅಲ್ಲಿಯವರೆಗೂ ಶಾಬ್ದಿಕವಾಗಿದ್ದ ಕ್ರಾಂತಿ ಮನುಷ್ಯರ ರೂಪದಲ್ಲಿ ಜೀವಂತವಾಗಿ ಕಾಣಿಸಿಕೊಳ್ಳುತ್ತದೆ. ಚಹಾ ಅಂಗಡಿಯವನು ಹುಡುಗರ ಬಳಿ ದುಡ್ಡಿಲ್ಲದಿದ್ದರೂ ಟೀ ಮಾಡಿಕೊಡುತ್ತಾನೆ. ಮೊದಲ ಬಾರಿಗೆ ನೋಡಿದರೂ ಗುರುತಿಸಿ ಅವರ ಹೆಸರನ್ನು ಹೇಳುತ್ತಾನೆ. ಅಪ್ಪು, ಚಿರಕುಂಡರಿಗೆ ಜಗತ್ತು ಮಾನವೀಯವೂ, ವಿಶಾಲವೂ ಆಗಿರುವುದು ಮನವರಿಕೆಯಾಗುವುದಷ್ಟೇ ಅಲ್ಲ, ತುಳಿಯುವವರ ವಿರುದ್ಧ ಹೋರಾಡುವ ಶೋಷಿತರ ಹೃದಯವಂತಿಕೆಯು ಸ್ಪರ್ಶವಾಗುತ್ತದೆ. ಬಾಳಿನಲ್ಲೇ ಮೊದಲಸಲ, ಈ ಬಡಹುಡುಗರಿಬ್ಬರೂ ತಮ್ಮ ಪ್ರಾಮುಖ್ಯತೆಯನ್ನೂ ಸಮಾಜ ಬದಲಾವಣೆಯಲ್ಲಿ ತಾವು ನಿರ್ವಹಿಸಬೇಕಾಗಿರುವ ಮಹತ್ವರ ಪಾತ್ರವನ್ನೂ ಅರ್ಥ ಮಾಡಿಕೊಳ್ಳುತ್ತಾರೆ. ರೈತನ ತೋಟದಲ್ಲಿ ಪಂಡಿತರು ಪತ್ರಿಕೆಯನ್ನು ಅಡ್ಡಹಿಡಿದು ಮುಖಮರೆಸಿಕೊಂಡಾಗ ನಿಗೂಢವಾಗಿ ಕಾಣುತ್ತಿದ್ದ ಕ್ರಾಂತಿಕಾರಿ ಬದುಕಿನ ಸಾಹಸಮಯತೆಯ ರುಚಿಯನ್ನೂ ಅವರು ಅನುಭವಿಸುತ್ತಾರೆ. ಪಂಡಿತರ ಭಾಷಣದಿಂದ ಚೈತನ್ಯವಂತರಾದ ಈ ಪುಟ್ಟ ಕ್ರಾಂತಿಕಾರಿಗಳು ಕಯ್ಯೂರಿಗೆ ಹಿಂದಿರುಗುತ್ತಾರೆ. ಕ್ರಾಂತಿಕಾರಿ ವಿಚಾರಧಾರೆ ಚಿರಕುಂಡನ ಮನೆಯಲ್ಲೇ ಪರೀಕ್ಷೆಗೆ ಒಳಗಾಗುವ ಪರಿಸ್ಥಿತಿ ಬಂದದ್ದು ಆಕಸ್ಮಿಕವಾದರೂ ಅಸಹಜವಲ್ಲ. ಚಿರಕುಂಡನ ತಂದೆ ಅಂದಿನ ರಾತ್ರಿಯಿಂದ ಜಮೀನ್ದಾರನ ಒಕ್ಕಲಾಗಿ ಮಾರ್ಪಡುತ್ತಾನೆ.

ಕಯ್ಯೂರಿನ ಬಡಜನತೆಯಲ್ಲಿ ಮೊಳಕೆಯೊಡೆದು ಹೆಮ್ಮರವಾದ ವರ್ಗಪ್ರಜ್ಞೆ ಆಳುವ ವರ್ಗದ ನಿದ್ದೆಯನ್ನು ಕಸಿದುಕೊಂಡಿತು. ಮೂಢನಂಬಿಕೆಯಲ್ಲಿ ಮಲಗಿದ್ದ ಜನ ಪ್ರಪಂಚದ ಹುಟ್ಟು. ಬೆಳವಣಿಗೆಯನ್ನು ವೈಜ್ಞಾನಿಕವಾಗಿ ಚಿಂತಿಸತೊಡಗಿದರು. ಭೂ ಸ್ವಾಮಿಗಳ ಎದುರು ತಗ್ಗಿ ಬಗ್ಗಿ ನಡೆಯುತ್ತಿದ್ದ ದಲಿತರು ತಲೆಯೆತ್ತಿ ನಡೆಯುವಂತಾದರು. ಕ್ರಾಂತಿಕಾರಿ ವಿಚಾರಧಾರೆ ಶೋಷಿತರಲ್ಲಿ ಮೂಡಿಸಿದ ಆದಮ್ಯ ಆತ್ಮವಿಶ್ವಾಸವನ್ನು ನಾವಿಲ್ಲಿ ಕಾಣುತ್ತೇವೆ- ತುಳಿತಕ್ಕೆ ಒಳಗಾದವರಿಗೆ ಸಿಕ್ಕಿದ ಹೋರಾಟದ ಶಿಕ್ಷಣ ಅವರನ್ನಷ್ಟೇ ಬದಲಿಸಲಿಲ್ಲ. ಸಮಾಜವನ್ನೇ ಬದಲಿಸುವ ಸಾಧನವಾಗಿ ಅವರು ಪರಿವರ್ತನೆಗೊಂಡರು. ಈ ಎಲ್ಲ ವಿವರಗಳು ಜೀವಂತವಾಗಿ ನಿರೂಪಣೆಯಾಗಿದೆ ಇಂಥ ವಸ್ತುವನ್ನುಳ್ಳ ಯಾವುದೇ ಬರವಣಿಗೆ ಒಂದು ಸಿದ್ಧಾಂತದಂತೆ ನಮಗೆ ಕಾಣಿಸಿಬಿಡಬಹುದು. ಆದರೆ ಇಲ್ಲಿ ಕ್ರಾಂತಿ, ಸಿದ್ಧಾಂತಗಳು ಬದುಕಿನ ಅನಿವಾರ್ಯ ಭಾಗವಾಗಿಬಿಟ್ಟಿರುವುದರಿಂದ ಓದಿನ ಓಟ ಕಡಿಮೆಯಾಗುವ ಸಂಭವವೇ ಇಲ್ಲ. ಬದುಕು ಮತ್ತು ಸಿದ್ಧಾಂತ ಅರ್ಥಪೂರ್ಣ ಸಾಮರಸ್ಯವನ್ನು ಸಾಧಿಸಿದ

ಅಪೂರ್ವ ಸನ್ನಿವೇಶವನ್ನು ನಾವಿಲ್ಲಿ ಕಾಣುತ್ತೇವೆ. ಕಯ್ಯೂರು ಹೋರಾಟದ ಬದುಕಿನ ಪುನಃಸೃಷ್ಟಿಯಲ್ಲಿ ಲೇಖಕರು ಯಶಸ್ವಿ ಆಗಿರುವುದು ಈ ಕಾರಣದಿಂದಲೇ.

ಪತ್ರಿಕೆ ಓದುವುದರಿಂದ ಆರಂಭವಾದ ಜನಜಾಗೃತಿ ಕೈಯ್ಯೂರು ರೈತರು ರೈತ ಸಮ್ಮೇಳನದಲ್ಲಿ ಭಾಗವಹಿಸುವವರೆಗೂ ಮುಂದುವರಿಯುತ್ತದೆ. ರೈತ ಸಂಘದ ಸ್ಥಾಪನೆಯಲ್ಲಿ ಇದಕ್ಕೆ ಬಹಿರಂಗವಾದ ಸಂಘಟಿತ ಸ್ವರೂಪ ಬರುತ್ತದೆ. ಈ ಜಾಗೃತಿಯು ಬೆಳವಣಿಗೆ ಭೂಮಾಲೀಕರಲ್ಲಿ ಭಯದ ಬೀಜಗಳನ್ನು ಬಿತ್ತಿತು. ರೈತರ ಬೆಳಗಿನ ಮೆರವಣಿಗೆಯನ್ನು ತಡೆಯಲು ಬಂದ ಪೋಲಿಸು ಸುಬ್ಬಯ್ಯ ಹೊಳೆಯಲ್ಲಿ ಮುಳುಗಿ ಸತ್ತನಂತರ ಕಾದಂಬರಿಗೆ ಹೊಸ ತಿರುವು ಬರುತ್ತದೆ. ಜನಜಾಗೃತಿಕ ಪ್ರತಿಕ್ರಿಯೆಯಾಗಿ ಆಳುವ ವರ್ಗದ ದಮನದ ಅಧ್ಯಾಯ ಆರಂಭವಾಯಿತು. ವಿಚಾರಣೆಯ ನಾಟಕದ ನಂತರ ನಾಲ್ವರು ಕಯ್ಯೂರು ವೀರರಿಗೆ ಮರಣದಂಡನೆ ಯಾಗುತ್ತದೆ. 'ಭಾರತ ಮಾತಾ ಕಿಜೈ' 'ಮಹಾತ್ಮಾ ಗಾಂಧೀಕಿ ಜೈ' ಈ ಘೋಷಣೆ ಗಳು 'ಇನ್ಕಿಲಾಬ್ ಜಿಂದಾಬಾದ್' ಸ್ವರೂಪವನ್ನು ಪಡೆದ ಪ್ರಕ್ರಿಯೆಯ ವಸ್ತುನಿಷ್ಠ ನಿರೂಪಣೆ ಇಲ್ಲಿದೆ. ಸುಲಿಗೆದಾರ ವರ್ಗ ಈ ಕ್ರಾಂತಿಯ ಸೊಲ್ಲನ್ನು ದಮನ ಮಾಡಿದ ದುರಂತ ಹೃದಯವನ್ನು ಕಲಕುತ್ತದೆ.

ಕಾದಂಬರಿಯಲ್ಲಿ ಬರುವ ಮಾಸ್ತರು ಕನ್ನಡದಲ್ಲೇ ಒಂದು ವಿಶಿಷ್ಟ ಪಾತ್ರ. ಮಾಸ್ತರಿಕೆಯ ಮುಖವಾಡ ಹಾಕಿದ ಈ ಕ್ರಾಂತಿಕಾರಿಯ ಸೌಜನ್ಯಶೀಲತೆ, ಕಷ್ಟ ಸಹಿಷ್ಣುತೆ ಓದುಗರಲ್ಲಿ ಅಭಿಮಾನ, ಅನುಕಂಪಗಳನ್ನು ಹುಟ್ಟಿಸುತ್ತದೆ. ಧಾಂಡಿಗ ಲೇಖಕರ ಹಾಸ್ಯ ಪ್ರಜ್ಞೆಗೆ ಸಾಕ್ಷಿ. ಕ್ರಾಂತಿಕಾರಿಯಾದವನು ಸದಾ ಮುಖ ಗಂಟಿಕ್ಕಿ ಕೊಂಡಿರಬೇಕು ಎಂಬುದಕ್ಕೆ ಇಲ್ಲಿಯ ಎಲ್ಲ ಪಾತ್ರಗಳೂ ಅಪವಾದ. ಧಾಂಡಿಗನಂತೂ ನೂರಕ್ಕೆ ನೂರರಷ್ಟು ಭಿನ್ನ. ಅಪ್ಪು ಚಿರಕುಂಡರ ಪಾತ್ರಗಳು ನಮ್ಮ ಮನಸ್ಸಿನಲ್ಲಿ ಹಲಕಾಲ ನಿಲ್ಲುತ್ತವೆ. ಸಾತ್ವಿಕ ಆವೇಶದಿಂದ ಆರಂಭವಾದ ಅವರ ನಿಷ್ಠೆ ಕ್ರಾಂತಿ ಕಾರಿ ವೈಚಾರಿಕತೆಯ ನೆಲೆಯನ್ನು ಮುಟ್ಟಿ ಗಟ್ಟಿಗೊಂಡ ಬಗೆ ಮನೋಜ್ಞವಾಗಿ ಚಿತ್ರಿತವಾಗಿದೆ. ಕ್ರಾಂತಿಕಾರಿ ಲೇಖಕನಿಗೆ ಸಿದ್ಧಾಂತದ ಬಲದ ಜೊತೆಗೆ ಬಾಳಿನ ಬಹುಮುಖ ವಿವರಗಳ ಪರಿಚಯವಿದ್ದಾಗ ಮಾತ್ರ ಅತ್ಯುತ್ತಮ ಕೃತಿ ರಚನೆ ಸಾಧ್ಯ. ಇಂಥ ಸಾಮರ್ಥ್ಯ ಇಲ್ಲಿ ಸುಪುಷ್ಟವಾಗಿ ಪ್ರಕಟಗೊಂಡಿದೆ.

ಕೆಲವೇ ದಶಕಗಳ ಹಿಂದೆ ನಡೆದ ಕಯ್ಯೂರು ರೈತ ಹೋರಾಟಕ್ಕೆ ಕಾದಂಬರಿಯ ರೂಪುಕೊಟ್ಟು ಕನ್ನಡ ಓದುಗರೆಲ್ಲರ ಕೃತಜ್ಞತೆಗೆ ನಿರಂಜನರು ಪಾತ್ರರಾಗಿದ್ದಾರೆ. ರೈತ ಹೋರಾಟಗಾರರು. ಕ್ರಾಂತಿಕಾರಿ ಬರಹಗಾರರು ಮಾತ್ರವಲ್ಲ. ಮಾನವೀಯತೆಯ ಬಗೆಗೆ ಕಿಂಚಿತ್ತಾದರೂ ಕಾಳಜಿಯುಳ್ಳ ಎಲ್ಲರೂ ಓದಬೇಕಾದ ಕೃತಿ ಇದು.

ಬಿ. ಎಸ್. ತಲ್ವಾಡಿಯವರ 'ಹೆಂಗಸರ ಹಾಡ್ಗತೆಗಳು'

ಪಿ. ಕೆ. ರಾಜಶೇಖರ

ಸೊಲ್ಲು ಸೊಲ್ಲೀಗು ಮಲ್ಲೀಗೆ ಅರಳೀವು
ಗಂಧಾದ ಗವಲು ಸುಳಿದಾವು–ಕಾಣೆ
ನನ್ನ–ಅವ್ವ ನಿನದನಿ ಅಪರಂಜಿ.

ಮುಂಗೋಳಿ ಕೂಗುವ ಹೊತ್ತು : ಮೂಡು ಕೆಂಪೇರುವ ಹೊತ್ತು; ತಂಗಾಳಿ ತೀಡುವ ಹೊತ್ತು; ಮಂಗಳಾಂಗಿ ಯೆದ್ದು ಮುಖಮಾರ್ಜನ ಮಾಡಿ ಹಣೆಗೆ ವಿಭೂತಿ ತಿಲಕಗಳನ್ನಿಟ್ಟು, ಕಲ್ಲಮ್ಮತಾಯಿಗೆ ಕೈಮುಗಿದು ಶರಣು ಮಾಡಿ ಭಾವಪರವಶಳಾಗಿ ಭಕ್ತಿ ಶ್ರದ್ಧೆಗಳಿಂದ ಬೀಸುತ್ತಾ ಹಾಡಿಕೊಳ್ಳುತ್ತಿದ್ದಾಳೆ. ಅವಳ ಕಂಠಶ್ರೀಯಿಂದ ಹೊಮ್ಮುತ್ತಿರುವ ಮಾಧುರ್ಯದ ಹಾಡು ತುಳುಕಿ ಊರಿನ ಕೇರಿಯನ್ನೆಲ್ಲ ತುಂಬಿಕೊಳ್ಳುತ್ತಿದೆ. ಮೊದಲ ಸೊಲ್ಲಿನಲ್ಲೆ ಎಳ್ಳುಜೀರಿಗೆ ಬೆಳೆಯುವ ಭೂದೇವಿಯನ್ನು ನೆನೆದಿದ್ದಾಳೆ. ನಾರಾಯಣನೆಂಬ ನಾಮದ ಬೀಜವನ್ನು ನಾಲಿಗೆ ಮೇಲೆ ಬಿತ್ತಿ ಬೆಳೆದ ಅಪರು, ವಿದ್ಯೆ ಬುದ್ಧಿ ಕಲಿಸಿದ ಗುರು ತಾಯಿದೇವಿಯನ್ನು ಕೃತಜ್ಞತೆಯಿಂದ, ಪ್ರೀತಿ ಗೌರವ ಭಕ್ತಿಗಳಿಂದ ಆದರ ಅಭಿಮಾನಗಳಿಂದ ಹೃದಯ ತುಂಬಿ ಹಾಡಿ ಹೊಗಳುತ್ತ, ತನಗೆ ಮಾತನಾಡಲು ಗೀತೆ ಹಾಡಲು ಕಲಿಸಿದ 'ಅವ್ವ ನಿನದನಿ ಅಪರಂಜಿ' ಎಂದು ಕೊಂಡಾಡಿ ರಸರೋಮಾಂಚಿತಳಾಗಿದ್ದಾಳೆ. ಅವಳು ಹಾಡುತ್ತಿರುವ

ಬೀಸುವ ಪದ ಅವಳಿಗೆ ಅವಳ ತಾಯಿಯಿಂದ ಬಂದ ಸಂಪತ್ತು. ತಾಯಿಯಿಂದ ಮಗಳಿಗೆ, ಮಗಳಿಂದ ಮೊಮ್ಮಗಳಿಗೆ, ಮೊಮ್ಮಗಳಿಂದ ಮರಿಮಗಳಿಗೆ–ಹೀಗೆ ತಲೆ ಮಾರಿನಿಂದ ತಲೆಮಾರಿಗೆ ಅಳಿಯದೆ ಉಳಿದ ಉಳಿಯುತ್ತಲೇ ಬೆಳೆದ ಕಂಠಸ್ಥ ಸಂಪ್ರದಾಯದ ಈ ಸಾಹಿತ್ಯಕ್ಕೆ ತನ್ನ ಪಟ್ಟಪಾಡನ್ನೆಲ್ಲ ಹಾಡನ್ನಾಗಿಸಿ ಹಾಡಿದ ಹೆಣ್ಣು ಮಗಳೇ ವಿಶ್ವದ ಪ್ರಥಮ ಕಾವ್ಯಕಲಾವಿಶಾರದೆಯಾಗಿರಬೇಕು. ಆ ಕಾರಣದಿಂದಲೇ ನಮ್ಮ ಹಿರಿಯರು ಸಾಹಿತ್ಯ ಸಂಗೀತಗಳ ಅಧಿದೇವತೆಯನ್ನು–ಹೆಣ್ಣಾಗಿ–ಸರಸ್ವತಿಯನ್ನಾಗಿ ಕಂಡರೆಂಬುದು ಸೂಕ್ತವೆನಿಸುತ್ತದೆ. ಗಂಡಿಗಿಂತಲೂ ಹೆಣ್ಣಿಗೆ ಹಾಡಿನ ಅಗತ್ಯ ಅನಿವಾರ್ಯತೆಗಳು ಹೆಚ್ಚಾಗಿ ಕಂಡಿರಬೇಕು. ಶಿಶುವಿನ ಲಾಲನೆಪಾಲನೆಯಲ್ಲಿ ತಾಯಿಗೆ ಹಾಡಿನ ಅವಶ್ಯಕತೆ ಎಷ್ಟೆಂದರೂ ಕಡಿಮೆಯೇ. ಇಂಥ ಅನಿವಾರ್ಯತೆ ಪುರುಷರಿಗೆ ಇದ್ದಂತಿಲ್ಲ. ಆ ಕಾರಣದಿಂದಲೇ ಸ್ತ್ರೀ ಮೊಟ್ಟಮೊದಲ ಕವಯಿತ್ರಿ ಎಂದು ಹೇಳ ಬೇಕಾಯಿತು. ಜನಪದ ಕಾವ್ಯಪ್ರಕಾರಕ್ಕೆ ಬಂದಾಗಲೂ ಶಾಸ್ತ್ರ ಸಂಬಂಧಗಳಿಗೆ ಹೊಂದಿಕೊಂಡಿರುವ ಹೆಂಗಸರಿಗೆ ಹುಟ್ಟಿನಿಂದ ಹಿಡಿದು ಸಾವಿನತನಕವೂ ಎಲ್ಲಾ ಸಂದರ್ಭಗಳಿಗೂ ಹಾಡುವುದು ಕಡ್ಡಾಯವೇನೋ ಅನ್ನುವಷ್ಟರ ಮಟ್ಟಿಗೆ ಹಾಡುಗಳ ಬಳ್ಳಿಗಳು ಅವರನ್ನು ಹಬ್ಬಿಕೊಂಡಿವೆ. ಪುರುಷರಿಗೆ ಇಂಥ ಅನಿವಾರ್ಯ ಸಂದರ್ಭಗಳು ತೀರಾ ಕಡಿಮೆ. ಇಷ್ಟಾದರೂ ವೃತ್ತಿಗಾಯಕ ಸಂಪ್ರದಾಯದಲ್ಲಿ ಪುರುಷರದು ಸಿಂಹಪಾಲು. ವೃತ್ತಿಗಾಯನ ಪರಂಪರೆಯಾದರೋ ಜನಪದಕಾವ್ಯದ ಉಗಮದ ಜೊತೆಗೆ ಮೂಡಿಬಂದುದಲ್ಲ : ವ್ಯವಸ್ಥಿತ ಸಮಾಜ ರೂಪುಗೊಂಡನಂತರದ ಬೆಳವಣಿಗೆಯಾದ್ದರಿಂದ ಹೆಂಗಸರ ಹಾಡುಗಳೇ ಬಹುಶಃ ನಮ್ಮ ಆದಿಕಾವ್ಯಗಳು. ಜನಪದ ಗೀತೆಗಳನ್ನು 'ಗರತಿಯ ಹಾಡುಗಳು' ಎಂದೂ ಜನಪದ ಕಥೆಗಳನ್ನು 'ಅಡುಗೂಳಜ್ಜಿ ಕಥೆಗಳು' ಎಂದೂ ಗುರುತಿಸಿದವರೆಲ್ಲರೂ ಜನಪದ ಸಾಹಿತ್ಯದಲ್ಲಿನ ಸ್ತ್ರೀ ಪ್ರಾಧಾನ್ಯತೆಯನ್ನು ಗಮನದಲ್ಲಿಟ್ಟುಕೊಂಡೇ ಹಾಗೆಲ್ಲ ಕರೆದರೆಂದು ಕಾಣುತ್ತದೆ.

ಹೆಂಗಸರ ಹಾಡುಗಳಲ್ಲಿ ಹಾಡುವ ಮಟ್ಟುಗಳಲ್ಲಿ ವೈವಿಧ್ಯವನ್ನು ಕಾಣಬಹುದಾದರೂ ಛಂದಸ್ಸಿನಲ್ಲಿ ಮಾತ್ರ ತ್ರಿಪದಿ ಹಾಗೂ ಸುವ್ವಲಾಲಿಗಳೇ ಹೆಚ್ಚು. ಕರ್ನಾಟಕದ ಯಾವ ಮೂಲೆಗೆ ಹೋದರೂ ಅಲ್ಲೆಲ್ಲಾ ಸಿಗುವ ತ್ರಿಪದಿ ಸಾಹಿತ್ಯ ಹೆಣ್ಣುಮಕ್ಕಳ ಹಾಡುಗಳ ಅಕ್ಷಯ ಭಂಡಾರವಾಗಿದೆ. ಈವರೆಗೂ ಹೆಂಗಸರ ಹಾಡುಗಳನ್ನು ಸಮಗ್ರವಾಗಿ ಸಂಗ್ರಹಿಸಲು ಸಾಧ್ಯವಾಗಿಲ್ಲ. ನಾಗರಿಕ ಜಗತ್ತಿನ ಪ್ರಭಾವದಿಂದ ರಾಗಿ ಬೀಸುವುದು ತಪ್ಪಿ ಹೆಣ್ಣಿನ ರಾಗ ಕೇಳದೆ ಕುಗ್ಗಿಹೋಯಿತು. ಭತ್ತ ಕುಟ್ಟುವ ಸಂಪ್ರದಾಯವೆ ಸತ್ತುಹೋಗಿ ಕುಟ್ಟುವ ಪದಗಳ ಹುಟ್ಟಡಗಿಹೋಯಿತು. ಸಿನಿಮಾ ಹಾಡುಗಳ ಅಬ್ಬರದಲ್ಲಿ ಸೋಬಾನೆ ಪದಗಳು ತಬ್ಬಿಬ್ಬಾಗಿಹೋದವು. ಶಾಸ್ತ್ರ ಸಂಪ್ರದಾಯಗಳು ಮುಖ ಮರೆಸಿಕೊಂಡವು. ಇವುಗಳಿಗೆಲ್ಲ ಬೇಕೇಬೇಕಾಗಿದ್ದ ಜನಪದ ಗೀತೆಗಳು ಬೇಕೆಬೇಕೆನಿಸದೆ ಮೂಕವಿಸ್ಮಯದಿಂದ ಮೂಲೇ ಸೇರಿದವು.

ನಮ್ಮ ಸಂಸ್ಕೃತಿಯ ಅಮೂಲ್ಯ ನಿಧಿಯಾದ ಇದನ್ನು ರಕ್ಷಿಸಿಕೊಳ್ಳಬೇಕಾದ ಜವಾಬ್ದಾರಿಯನ್ನೇನೋ ಎಲ್ಲರೂ ಹೇಳಿದರು, ಆದರೆ ಈ ಕ್ಷೇತ್ರದಲ್ಲಿ ದುಡಿದವರು ಕಡಿಮೆ. ಅದರಲ್ಲೂ ಹೆಂಗಸರ ಹಾಡುಗಳನ್ನು ಸಂಗ್ರಹಿಸಿದವರು ಇನ್ನೂ ಕಡಿಮೆ, ಬಹುಶಃ ಕೆರಾಕೃ ಅವರಷ್ಟು ಹೆಂಗಸರ ಹಾಡುಗಳನ್ನು ಸಂಗ್ರಹಿಸಿದ ಮತ್ತೊಬ್ಬ ಸಂಗ್ರಹಕಾರ ಈವರೆಗೂ ಕಂಡುಬಂದಿಲ್ಲ. ಆದರೆ ಅಲ್ಲಲ್ಲಿ ಅಲ್ಪಸ್ವಲ್ಪ ಸಂಗ್ರಹಕಾರ್ಯ ಮಾಡಿದವರ ಅಳಿಲು ಸೇವೆಯೂ ಕೃತಜ್ಞತೆಗೆ ಪಾತ್ರವಾಗುತ್ತದೆ. ಅಂತದ್ದೊಂದು ಸಾಧನೆ ಗೆಳೆಯ ಶ್ರೀ ಬಿ. ಎಸ್. ತಲ್ವಾಡಿ ಅವರ 'ಹೆಂಗಸರ ಹಾಡ್ಗತೆಗಳು' ಸಂಗ್ರಹ.

೨

ನಮ್ಮಲ್ಲಿ ಅತ್ಯಂತ ದೀರ್ಘವಾದ ಕಥನಕಾವ್ಯಗಳನ್ನು ಹಾಡುವವರೆಂದರೆ ಅವರು ವೃತ್ತಿಗಾಯಕರು. ಸಾಮಾನ್ಯವಾಗಿ ವೃತ್ತಿಗಾಯಕರೆಲ್ಲರೂ ಪುರುಷರೇ ಆದರೂ ಎಲ್ಲಮ್ಮನ ಜೋಗಿತಿಯರು ಇದಕ್ಕೆ ಅಪವಾದವಾಗಿದ್ದಾರೆ. ಎಲ್ಲಮ್ಮನ ಜೋಗಿತಿಯರು ಹೆಣ್ಣೆಂದರೆ ಹೆಣ್ಣು. ಗಂಡೆಂದರೆ ಗಂಡು, ಅಥವಾ ಈ ಎರಡೂ ಅಲ್ಲದವರು. ಇವರು ಎಲ್ಲಮ್ಮದೇವಿಯನ್ನು ಕುರಿತ ಕಾವ್ಯವನ್ನು ದೀರ್ಘವಾಗಿಯೇ ಹಾಡುತ್ತಾರೆ. ಜೋಗಿತಿಯರನ್ನು ಬಿಟ್ಟರೆ ದೊಂಬಿದಾಸರ ಹೆಂಗಸರೂ ವೃತ್ತಿಗಾಯಕರಾಗಿ ಏಕತಾರಿಯನ್ನು ಹಿಡಿದು ಹಾಡುವುದನ್ನು ವಿರಳವಾಗಿ ಕಾಣಬಹುದು. ಇಂಥ ಒಂದೆರಡು ಅಪವಾದಗಳನ್ನು ಬಿಟ್ಟರೆ ಹೆಂಗಸರು ವೃತ್ತಿಗಾಯಕರಾಗಿ ಕಾಣಿಸಿಕೊಂಡಿರುವುದು ಅಪರೂಪವೆಂದೇ ಹೇಳಬೇಕು. ಇದಕ್ಕೆ ಅನೇಕ ಕಾರಣಗಳಿರಬಹುದು. ಹೆಂಗಸರು ಪುರುಷಗಾಯಕರಂತೆ ಊರಿಂದ ಊರಿಗೆ ಹೋಗಿ ಎಲ್ಲೆಂದರಲ್ಲಿ ತಂಗಿ ಕಥೆ ಮಾಡುವುದಕ್ಕೆ ದೈಹಿಕ ಹಾಗೂ ಸಾಮಾಜಿಕ ಕಾರಣಗಳು ತೊಡಕಾಗಿರಬಹುದು. ಅಲ್ಲದೆ ಪತಿಯೇ ಪರದೈವ ಎಂದುಕೊಂಡು ಮಕ್ಕಳ ಲಾಲನೆಪಾಲನೆ, ಅತ್ತೆಮಾವ, ಅತ್ತಿಗೆ ನಾದಿನಿ, ಭಾವ ಮೈದುನರ ಸೇವೆಯಲ್ಲಿ ಸದಾ ನಿರತಳಾಗಿರಬೇಕಾದ್ದರಿಂದ ವೃತ್ತಿಗಾಯಕಿಯಾಗಿ ಊರೂರು ಸುತ್ತುವುದು ಸಾಧ್ಯವಾಗಿರಲಾರದು. ಹಾಗೇನಾದರೂ ಅವಳು ಮಾಡಿದ್ದರೆ ಅವಳು ಗರತಿ ಪಟ್ಟದಿಂದ ಬಸವಿ ಪಟ್ಟಕ್ಕೇರುತ್ತಿದ್ದಳು. ಅದೇನೇ ಇರಲಿ–ಹೆಣ್ಣು ತನ್ನೆದೆಯ ಒಳಗುದಿಗೆ ಕಾವ್ಯದ ರೂಪಕೊಟ್ಟು ಕಂಠಶ್ರೀಯಿಂದ ಜೀವದಾನ ಮಾಡಿದಳು. ಪ್ರಸ್ತುತ ಸಂಗ್ರಹದಲ್ಲಿ ಹೆಣ್ಣು ಹೃದಯದ ವರ್ಣರಂಜಿತ ಭಾವಕೋಶದಂತಿರುವ ಎಂಟು ಅಪೂರ್ವವಾದ ಕಥನಕಾವ್ಯಗಳಿವೆ. ನೀರು ಬರದ ಕೆರೆಗೆ ಹೆಣ್ಣನ್ನು ಬಲಿಕೊಡುವ ಆಶಯ 'ಹೊನ್ನಮ್ಮ' ಎಂಬ ಕಾವ್ಯವನ್ನು ಬಿಟ್ಟರೆ ಉಳಿದೆಲ್ಲ ಕಾವ್ಯಗಳೂ ಕನ್ನಡ ಜಾನಪದ ಪ್ರಪಂಚಕ್ಕೆ ಮೊಟ್ಟಮೊದಲಿಗೆ ಪರಿಚಯವಾಗುತ್ತಿದೆ, ಈ ಸಂಗ್ರಹದ ಮತ್ತೊಂದು ವಿಶೇಷವೆಂದರೆ ಮರೆಯದೆ ಹೇಳಬೇಕಾದುದು–ಕರ್ನಾಟಕ ಹಾಗೂ ತಮಿಳುನಾಡಿನ ಗಡಿಪ್ರದೇಶವಾದ ತಾಳವಾಡಿ ಸುತ್ತಿನ ಜನಪದ ಕಾವ್ಯಗಳು ಇಲ್ಲಿ ಪ್ರಪ್ರಥಮ ಬಾರಿಗೆ ಬೆಳಕು ಕಾಣುತ್ತಿವೆ.

ಇನ್ನುಳಿದ ಕೆಲವು ಕಾವ್ಯಗಳು ಮೈಸೂರು, ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಸಂಗ್ರಹಿಸಿದವುಗಳು.

ಯಾವುದೇ ಜನಪದ ಕಾವ್ಯವನ್ನಾಗಲಿ ಕೇವಲ ಸಾಹಿತ್ಯಿಕ ದೃಷ್ಟಿಯಿಂದ ಮಾತ್ರ ನೋಡಿದರಾಗದು. ಹಾಗೇನಾದರೂ ನಮ್ಮ ದೃಷ್ಟಿ ಸೀಮಿತವಾದಲ್ಲಿ ಬಹಳಷ್ಟು ಜನಪದ ಕಾವ್ಯಗಳು ನೀರಸ ಹೊರೆಯಾಗಿ ಪರಿಣಮಿಸುತ್ತವೆ. ವಾಸ್ತವವಾಗಿ ಸಾಹಿತ್ಯೇತರ ಕಾರಣಗಳಿಗಾಗಿಯೂ ಜನಪದ ಕಾವ್ಯಗಳ ಸಂಗ್ರಹಣೆ, ಸಂಪಾದನೆ ಪ್ರಕಟಣೆ ಹಾಗೂ ಅಧ್ಯಯನಗಳು ನಡೆಯಬೇಕಾಗುತ್ತದೆ. ಕೇವಲ ಕಾವ್ಯಾಭ್ಯಾಸಿಗಳಿಗೂ ಇಲ್ಲಿ ಅನೇಕ ಪರಿಮಿತಿಗಳು ಸೃಷ್ಟಿಯಾಗುತ್ತದೆ. ಒಂದು ಜನಪದ ಕಾವ್ಯ ಗಾಯಕ ಹಾಡುತ್ತಿರುವಾಗ ರಂಜಿಸುವಷ್ಟು ಅದು ಅಕ್ಷರಕ್ಕಿಳಿದಾಗ ಅದೇ ಸತ್ವವನ್ನು ಉಳಿಸಿಕೊಳ್ಳಲಾರದು. ಅಂತಹ ಸಂದರ್ಭಗಳಲ್ಲಿ ಆ ಕಾವ್ಯವನ್ನು ಧ್ವನಿಮುದ್ರಿಸಿಕೊಂಡು ಅದರ ಜೀವಂತಿಕೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ಹೀಗೆ ಮಾಡಿದಾಗ ಜನಪದ ಸಂಗೀತದ ಮೂಲಮಟ್ಟುಗಳನ್ನೂ ಹಿಡಿದಿಟ್ಟುಕೊಂಡಂತಾಗುತ್ತದೆ,

೩

ಹೆಣ್ತನದ ಪರಿಪೂರ್ಣತೆಯಿಂದ ಅದು ತಾಯ್ತನ. ಹೆಣ್ಣು ತಾನು ತಾಯಿಯಾಗಿ ಜನ್ಮ ಸಾರ್ಥಕಪಡಿಸಿಕೊಳ್ಳಬೇಕೆಂದು ಹಂಬಲಿಸಿ ಕಂಡ ಕಂಡ ದೇವರಿಗೆ ಹರಕೆ ಹೊರುತ್ತಾಳೆ. ಮರಗಳನ್ನು ಸುತ್ತುತ್ತಾಳೆ. ವರಗಳನ್ನು ಬೇಡುತ್ತಾಳೆ; ಹಿರಿಯರು ಹೇಳಿದ ವ್ರತನಿಯಮಗಳನ್ನು ಆಚರಿಸುತ್ತಾಳೆ, ಕಲ್ಲುಕಲ್ಲುಗಳಿಗೆಲ್ಲ ಅಡ್ಡ ಬೀಳುತ್ತಾಳೆ. ಮೊರೆ ಇಡುತ್ತಾಳೆ, ಫಲಶಕ್ತಿ ಉಂಟಾಗುತ್ತದೆಯೆಂದು ಹೇಳಿದ ಮದ್ದು ಮಂತ್ರಗಳಿಗೆಲ್ಲ ತನ್ನನ್ನು ಒಪ್ಪಿಸಿಕೊಳ್ಳುತ್ತಾಳೆ. 'ಕಂದನ ಕೊಡು ಶಿವನೆ ಬಂಧನ ಪಡಲಾರೆ' ಎಂದು ಅವಳ ಹೃದಯ ಆರ್ತಧ್ವನಿಯಲ್ಲಿ ಚೀರುತ್ತದೆ. ಬಂಜೆ ಎಂಬ ಶಬ್ದ ಅವರ ಪಾಲಿಗೆ ನಂಜು, ಹಡೆಯದವಳು ಎಂಬ ಶಬ್ದ ಅವಳ ಪಾಲಿಗೆ ಬರಸಿಡಿಲು.

ತಾಯಿಯಾಗುವ ಸೌಭಾಗ್ಯದ ಸಿರಿಸಂಪದ ಲಭ್ಯವಾಗುವುದು ಹೆಣ್ಣಿನ ಬಾಳಿಗೆ ಒಂದು ಪುಣ್ಯವಿಶೇಷ, ಹೆರಿಗೆ ನೋವನ್ನನುಭವಿಸಿ ಪಡೆದ ಕಂದನನ್ನು ಎದೆಗಪ್ಪಿಕೊಂಡು ಮುದ್ದಾಡುತ್ತ ಮೊಲೆಯುಣಿಸುವ ದಿವ್ಯ ಸುಖಾನುಭವಸ್ಪರ್ಶವನ್ನರಿಯದ ಹೆಣ್ಣಿನ ಜನ್ಮ ವ್ಯರ್ಥ, ಅಂತಹ ಸುಖದ ಸುಗ್ಗಿಯಲ್ಲಿ ಮೈಮರೆತಿದ್ದ ಬಾಣಂತಿ ಬಳೆ ತೊಟ್ಟುಕೊಳ್ಳುವ ಸಂದರ್ಭದಲ್ಲಿ ಸಂಭ್ರಮದಲ್ಲಿ ಬೀಗುತ್ತಿರುವಾಗಲೇ ಅವಳಿಗೆ ಯಮನ ರೌದ್ರದರ್ಶನವಾಗುತ್ತದೆ. 'ಬಾಣಂತಿಹಾಡು' ಪ್ರಾರಂಭವಾಗುವುದು ಹೀಗೆ. ಹಿಗ್ಗಿನ ಹಿಂದೆಯೇ ಹೆದರಿಸುವ ಹೆಜೆಗಳು. ವಾಯುಭಾರಮಾಪಕದಲ್ಲಿ ಒತ್ತಡವಿಳಿದ ಕೂಡಲೇ ಜರ್ರನೆ ಇಳಿಯುವ ಪಾದರಸದಂತೆ ಬಾಣಂತಿಯ ಸುಖ ಸಂತೋಷ ಸಂಭ್ರಮಗಳೆಲ್ಲ ಸರ್ರನೆ ಕುಸಿಯುತ್ತವೆ, ಆದಾಗ್ಯೂ ಚಿನ್ನದ ಗಿಂಡಿಯಲ್ಲಿ ಪನ್ನೀರನ್ನು ತಂದು ಕೈಕಾಲು ತೊಳೆದುಕೊಂಡು ಕುಡಿಯಿರೆಂದು ಯಮನಿಗೆ ಹೇಳುತ್ತಾಳೆ. 'ಕೂರಾಕೆ

ಬಂದಿಲ್ಲ ಕುಡಿಯಾಕೆ ಬಂದಿಲ್ಲ' ಎಂಬ ಗತ್ತಿನ ಮಾತು ಯಮನದು. ಅವಳಿಗೆ ಸಾವನ್ನು ಸ್ವಾಗತಿಸುವುದು ಕಷ್ಟವಾಗಲಿಲ್ಲ. ಆದರೆ ತೊಟ್ಟಿಲಿನಲ್ಲಿರುವ ಹಾಲು ಹಸುಳೆಯನ್ನು ಬಿಟ್ಟು ಹೋಗುವುದು ತಾಯಿಯ ಹೃದಯಕ್ಕೆ ಸಾಧ್ಯವಾಗದ ಸನ್ನಿವೇಶ. ಮನೆಯೊಳಕ್ಕೆ ಓಡುತ್ತಾಳೆ, ಮಗುವಿಗೆ ಎಣ್ಣೆಯೊತ್ತಿ ನೀರೆರೆಯುತ್ತಾಳೆ. ಹಾಲುಣಿಸಿ ತುಪ್ಪವೂಡಿ ತೊಟ್ಟಲಿಗೆ ಹಾಕಿ ಗೋಳಾಡುತ್ತಾಳೆ. ಮಾತು ಮುಂದಿಲ್ಲ ಕೂತು ಫಲವಿಲ್ಲ ಇನ್ನು ಸೋತು ಸುಖವಿಲ್ಲ. ಬಂದ ಯಮ ಬಂದಂತೆ ಹೋಗುವ ವನಲ್ಲ ಎಂದು ತೀರ್ಮಾನಿಸಿ ಸ್ನಾನ ಮಾಡಿ ಅಲಂಕಾರಗಳನ್ನೂ ಮುಗಿಸಿ ತವರಿಗೆ ಹೋಗುತ್ತಾಳೆ, ಎಲ್ಲರ ಆಗಲಿನಲ್ಲೂ ಮೊದಲ ತುತ್ತನ್ನೇ ಮೊದಲ ವೀಳ್ಯವನ್ನೇ ಕೇಳಿ ಪಡೆಯುತ್ತಾಳೆ. ಅವಳಾದರೋ ಯಮನಿಗೆ ಅವರೆಲ್ಲರಿಗಿಂತ ಮೊದಲ ತುತ್ತಲ್ಲವೆ ? ಯಾರಿಗೂ ತನ್ನ ಸಾವಿನ ಸುದ್ದಿಯನ್ನು ಹೇಳದೆ ಹಿಂದಿರುಗುತ್ತಾಳೆ.

ತನ್ನ ಕಂದನಿರುವ ಕೋಣೆಗೆ ಬಾಣಂತಿ ಬರುತ್ತಾಳೆ, ಕೈಕಾಲುಗಳನ್ನು ಬಡಿಯುತ್ತ ಮಗುವಿನ ಮುಖ ತಾಯಿಯನ್ನು ಕಂಡು ಅರಳುತ್ತದೆ. ಮುದ್ದು ಮುಖವನ್ನೇ ದಿಟ್ಟಿಸುತ್ತ ಇಂಥ ಕಂದಯ್ಯನನ್ನು ಬಿಟ್ಟು ನಾನು ಹೇಗೆ ಯಮನಿಗೆ ಬಲಿಯಾಗಲಿ ಎಂದು ನೋಯುತ್ತಾಳೆ. ಯಮ ತುದಿ ಬಾಗಿಲಲ್ಲೇ ಕಾಯುತ್ತಿದ್ದಾನೆ. ಬಾಣಂತಿ ಅಟ್ಟಕ್ಕೆ ಏಣಿ ಹಾಕಿ ಹತ್ತುತ್ತಾಳೆ. ಇಳಿಯುತ್ತಾಳೆ. ಹತ್ತು ಕಾಲೇಣಿ ಹತ್ತಿಳಿದಾಗ ಬಾಣಂತಿ ಪ್ರಾಣ ಹೋಗುತ್ತದೆ. ತೊಟ್ಟಿಲ ಕಂದ ಅನಾಥನಾಗುತ್ತಾ ನೆಂದು ಶಿವಪಾರ್ವತಿಯರು ಬಾಣಂತಿಯ ಪ್ರಾಣವನ್ನು ಮತ್ತೆ ಪಡೆಯುತ್ತಾರೆ. ಕಥೆ ಸುಖಾಂತವಾಗುತ್ತಲೇ ಅನೇಕ ಪ್ರಶ್ನೆಗಳ ಕೇಂದ್ರವಾಗುತ್ತದೆ.

ಬಾಣಂತಿ ಗಂಡನ ಮನೆಯಲ್ಲೇ ಇದ್ದಳೆಂದುಕೊಂಡಾಗ ಅವಳು ತವರಿಗೆ ಹೋಗಿ ಬಂದುದು ಸರಿಯೆನಿಸುತ್ತದೆ, ಆದರೆ ಗಂಡ, ಅತ್ತೆ, ಮಾವ, ಮೈದುನ, ನಾದಿನಿ, ವಾರಗಿತ್ತಿಯರು–ಇಂಥ ಯಾರೊಬ್ಬರ ಸುದ್ದಿಯೂ ಈ ಕಾವ್ಯದಲ್ಲಿಲ್ಲವೇಕೆ ? ಬಾಣಂತಿಯ ಶೀಲವನ್ನು ಶಂಕಿಸಿ ಇವರೆಲ್ಲ ಅವಳನ್ನು ಹೊರದೂಡಿದ್ದರೆ ? ತಾನು ಕಳಂಕಿನಿಯೆಂಬ ಅಪವಾದದಿಂದ ಪಾರಾಗಬೇಕಾದರೆ ಸಾವನ್ನು ಸ್ವಾಗತಿಸುವುದೇ ಸೂಕ್ತಮಾರ್ಗವೆನಿಸಿತೆ ? ಏಣಿಯನ್ನು ಹತ್ತಿ ಇಳಿಯುವುದು ಅವಳ ಮನಸ್ಸಿನ ಸಾವು ಬದುಕುಗಳ ಹೊಯ್ದಾಟವನ್ನು ಚಿತ್ರಿಸುವ ಸಂಕೇತವಾಗಿ ಮೂಡಿಬಂದಿದೆಯೆ ? ಮುಂತಾಗಿ ಪ್ರಶ್ನಿಸುತ್ತಾ ಹೋಗಬಹುದಾಗಿದೆ. ಎಲ್ಲಾ ಕೈಬಿಟ್ಟವರಿಗೆ ದೇವರೆ ದಿಕ್ಕು ಎನ್ನುವ ಹಾಗೆ ಶಿವಪಾರ್ವತಿಯರು ಆ ಮಗುವಿಗಾಗಿ ಅವಳನ್ನು ಬದುಕಿಸು ತ್ತಾರೆ. ಇದನ್ನು ದುರಂತ ಸ್ಥಿತಿಯಲ್ಲೇ ನಿಲ್ಲಿಸುವುದು ಗಾಯಕರಿಗೆ ಸರಿ ಎನಿಸಿಲ್ಲವೊ ಎಂಬ ಅನುಮಾನವೂ ಬರುತ್ತದೆ. ಸಾವಿನ ಸೆರೆಯಲ್ಲಿ ಸಿಕ್ಕಿರುವವರೆಲ್ಲರಿಗೂ ದೈವೀ ಕೃಪೆಯ ದಿವ್ಯಕ್ಷಣಗಳಂತೆ ಥಟ್ಟನೆ ಯಾರಾದರೂ ಬಂದು ಬದುಕಿಸುವವರ ಲಭ್ಯ ವಾಗುವುದಿಲ್ಲ. ಆದರೆ ಭಾರತೀಯ ಮನಸ್ಸು ದುರಂತವೆಂದರೆ ದೂರ ನಿಲ್ಲುತ್ತದೆ.

ಸುಖಾಂತದ ಸುಮಧುರ ಹಸ್ತಕ್ಕೆ ಸದಾ ತುಡಿಯುತ್ತದೆ. ಹಾಗಲ್ಲದಿದ್ದಲ್ಲಿ ಹರಿಶ್ಚಂದ್ರ ಕಾವ್ಯ, ಶಾಕುಂತಲಾ ನಾಟಕಗಳೆಲ್ಲ ರುದ್ರ ನಾಟಕದ ವಸ್ತುವಾಗುತ್ತಿದ್ದವು. ಬಾಣಂತಿಯ ಸಾವು ಜನಪದರಿಗೆ ಅಪ್ರಿಯವಾದ ವಸ್ತು. ಬದುಕಿ ಬಾಳಿ ಸುಖಿಸಬೇಕಾದವಳು ಕಂದನನ್ನು ತಬ್ಬಲಿ ಮಾಡುವುದು ಅಸಹನೀಯವೆನಿಸಿದೆ. ಆ ಕಾರಣದಿಂದಲೇ ಶಿವಪಾರ್ವತಿಯರ ಕೃಪೆಯಿಂದ ಬಾಣಂತಿ ಬದುಕುತ್ತಾಳೆ. ಕಥೆ ಮಂಗಳಾಂತವಾಗುತ್ತದೆ. ಸಾವನ್ನು ಗೆಲ್ಲುವ ಸ್ವಪ್ನದಲ್ಲಾದರೂ ಮಾನವ ಸುಖವನ್ನನುಭವಿಸುತ್ತಾನೆ.

ಕೆರೆಗೆ ಬಲಿಕೊಡುವ ಸಂಪ್ರದಾಯದ ಸುಪ್ರಸಿದ್ಧ ಆಶಯವನ್ನು ಹೊಂದಿರುವ ಹಲವಾರು ಕಾವ್ಯಗಳು ಈಗಾಗಲೇ ಪ್ರಕಟವಾಗಿದೆ. 'ಕೆರೆಗೆಹಾರ' ಎಂಬ ಹೆಸರಿನಿಂದ ಅತ್ಯಂತ ಪ್ರಸಿದ್ಧವಾಗಿರುವ ಕಾವ್ಯವನ್ನು ಬಲ್ಲರೆಲ್ಲರಿಗೂ ಅಲ್ಲಿನ ಭಾಗೀರಥಿ ಪಾತ್ರವೇ ಇತರ ಪಾಠಗಳಲ್ಲಿ ಹೊನ್ನಮ್ಮನೋ ಕೆಂಚಮ್ಮನೋ ಆಗಿ ಹೆಸರು ಬದಲಾಗಿರುವುದು ಗೋಚರಿಸುತ್ತದೆ. ಕಥಾವಸ್ತುವಿನಲ್ಲಿ ಮುಖ್ಯ ಆಶಯ ಹೆಣ್ಣುಮಗಳ ಬಲಿದಾನವಾಗಿದ್ದು ವಿವರಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳು ಕಂಡುಬರುತ್ತವೆ. ಹೆಂಗಸರು 'ಹೊನ್ನಮ್ಮ'ನ ಕಥೆಯನ್ನು ಹಾಡುವಾಗ ಭಯಭಕ್ತಿಗಳಿಂದ ಗಂಧದಕಡ್ಡಿ ಬೆಳಗಿ ಅನಂತರ ಅದನ್ನು ಹಾಡುತ್ತಾರೆ.

ಹೊನ್ನಮ್ಮ ಪ್ರೇಮದ ಪರ್ವವನ್ನಾಚರಿಸಿ ಸುಖದ ಸ್ವರ್ಗವನ್ನು ಸೃಷ್ಟಿ ಮಾಡಿದವಳು. ಕಾವ್ಯದುದ್ದಕ್ಕೂ ಅವಳು ಪ್ರೇಮದ ಪುತ್ಥಳಿಯಾಗುತ್ತಾಳೆ. ತ್ಯಾಗದ ತವರಾಗುತ್ತಾಳೆ. ಸಹನೆಯ ಸೊಡರಾಗುತ್ತಾಳೆ. ಲೋಕಹಿತಾರ್ಥವಾಗಿ ಕೆರೆಗೆ ತನ್ನನ್ನು ಆಹಾರವನ್ನಾಗಿ ಅರ್ಪಿಸಿಕೊಳ್ಳುವ ಹೃದಯವಿದ್ರಾವಕ ಸನ್ನಿವೇಶ ಕೇಳುಗರ ಎದೆಗೆ ದಳ್ಳುರಿಯಾಗುತ್ತದೆ. ಭೀಕರ ಬಡಬಾಗ್ನಿ ಚಿಮ್ಮಿ ಕರುಣೆಯ ಕಡಲೂ ಕುದಿಗೊಳ್ಳುತ್ತದೆ. ಹೊನ್ನಮ್ಮನಂತಹ ಹೆಣ್ಣು ಮಕ್ಕಳ ಇತಿಹಾಸ ಶಾಸನಗಳಲ್ಲಾಗಲಿ, ಕಾವ್ಯಗಳಲ್ಲಾಗಲಿ, ಶಾಸ್ತ್ರ ಗ್ರಂಥಗಳಲ್ಲಾಗಲಿ ಲಿಖಿತ ರೂಪದಲ್ಲಿ ದಾಖಲಾಗಲಿಲ್ಲ. ಅದು ನಾಲಿಗೆ ಅಕ್ಷರಗಳಲ್ಲಿ ನೆಲೆಯಾಗಿ ನಿಂತ ಅಲಿಖಿತ ಇತಿಹಾಸ.

ಹೊನ್ನಮ್ಮನ ತ್ಯಾಗಬಲಿದಾನಗಳನ್ನು ಸ್ತ್ರೀ ಸ್ವಾತಂತ್ರ್ಯದ ಇಂದಿನ ದಿನಗಳ ವೈಚಾರಿಕ ಒರೆಗಲ್ಲಿನಲ್ಲಿ ನೋಡಿದಾಗ ಅದು ಸ್ತ್ರೀ ಶೋಷಣೆಯ ಒಂದು ಮುಖವಾಗಿ ಕಾಣುವ ಸಾಧ್ಯತೆಯೂ ಇದೆ. ಆದರೆ ಅಂದಿನ ಸಮಾಜದಲ್ಲಿ ಇದೊಂದು ಸಾಮಾಜಿಕ ಮೌಲ್ಯವಾಗಿತ್ತಾದ ಕಾರಣ ಬಲಿಯಾಗಬೇಕಾಗಿದ್ದ ಬಾಲೆ ಬಲವಂತಮಾಡಿಸಿಕೊಳ್ಳದೆ ಇದು ತನ್ನ ಪಾಲಿನ ಭಾಗ್ಯವಿಶೇಷವೆಂದು ಭಾವುಣಿಸಿ ಸ್ವೀಕಾರ ಮಾಡುತ್ತಿದ್ದಳು, ಅಂತಹ ಹೆಣ್ಣು ಮಕ್ಕಳು ಮುಂದೆ ಕೆರೆಕೋಡಿಯಮ್ಮ ಎಂಬ ಹೆಸರಿನಲ್ಲಿ ಜನತೆಯ ಭಯಭಕ್ತಿ ಗೌರವ ಆರಾಧನೆಗೆ ಭಾಜನವಾಗುತ್ತಿದ್ದರು.

ಸುಪ್ವಿ ಪದ ಬಂಧದಲ್ಲಿರುವ "ಹೊನ್ನಮ್ಮ" ಕಾವ್ಯ ಪುಟ್ಟ ಪುಟ್ಟ ಪಾದಗಳಿಂದ ಕಥೆ ಚಕಚಕನೆ ತೀವ್ರಗತಿಯಲ್ಲಿ ಓಡುತ್ತದೆ. ಕಥೆಯ ಚಾಲನೆಗೆ ಈ ಚಿಕ್ಕಚಿಕ್ಕ ಸಾಲುಗಳು ವೇಗವರ್ಧಕದಂತೆ ದುಡಿಯುತ್ತವೆ.

ಹತ್ತಾರು ಪಾಠಗಳು ಪ್ರಕಟವಾಗಿರುವ ಈ ಕೆರೆಗೆ ಬಲಿ ಆಶಯದ ಕಾವ್ಯಗಳಲ್ಲಿ ಖ್ಯಾತಿಯ ಕಿರೀಟವನ್ನು ತೊಟ್ಟು ಶುದ್ಧಿಯ ಸಿಂಹಾಸನದಲ್ಲಿರುವ ಕಾವ್ಯವೆಂದರೆ "ಕೆರೆಗೆ ಹಾರ" ಏಕೆಂದರೆ ಕೆರೆಗೆಹಾರ ಒಂದು ಅಚ್ಚುಕಟ್ಟಾದ ಕಥನಕಾವ್ಯ. ಇದೇ ವಸ್ತುವನ್ನುಳ್ಳ ಹಲವಾರು ಪಾಠಗಳು ಪ್ರಕಟವಾಗಿದ್ದರೂ ಅವುಗಳಲ್ಲೆಲ್ಲ ಜನಪದ ಕಾವ್ಯಗಳಿಗೆ ಸಹಜವಾದ ಒರಟು ಲಕ್ಷಣಗಳೆಲ್ಲವೂ ಇದ್ದು "ಕೆರೆಗೆಹಾರ"ದಂತೆ ಕಲಾತ್ಮಕ ವಾಗಿ ಶುದ್ಧವಾಗಿ ಸುಂದರವಾಗಿ ಮೂಡಿಬಂದಿಲ್ಲ. ಇದಕ್ಕೆ ಕಾರಣ ಬಹುಶಃ "ಕೆರೆಗೆ ಹಾರ" ಮೂಲದಲ್ಲಿ ಇದ್ದಂತೆ ಪ್ರಕಟವಾಗದೆ ವಿದ್ವಾಂಸರುಗಳು ಬುದ್ಧಿಪೂರ್ವಕವಾಗಿ ತಿದ್ದಿ ಶುದ್ಧೀಕರಿಸಬಹುದಾದ ಸಾಧ್ಯತೆ ಇದ್ದರೂ ಇರಬಹುದೆನಿಸುತ್ತದೆ. ಏಕೆಂದರೆ "ಗರತಿಹಾಡು" ಪ್ರಕಟವಾದ ಕಾಲದಲ್ಲಿ ಜನಪದ ಕೃತಿಗಳ ಗ್ರಂಥಸಂಪಾದನಾ ಕಾರ್ಯದ ಬಗ್ಗೆ ಈಗಿನಂತೆ ಕಟ್ಟುನಿಟ್ಟಾದ ಶಾಸ್ತ್ರೀಯಕ್ರಮವಾಗಲಿ ನಿಯಮಗಳಾಗಲಿ ಇರಲಿಲ್ಲ ವೆಂಬುದನ್ನು ಮರೆಯುವಂತಿಲ್ಲ. ಆದ್ದರಿಂದಲೇ ಏನೋ ಇಲ್ಲಿನ ಕಾವ್ಯದಲ್ಲಿ ವಾಚಾಳಿತನ ಹೆಚ್ಚಾಗಿ ಭಾಗೀರಥಿಯ ದುಃಖಪೂರ್ಣ ರೌದ್ರ ಮೌನದ ಗಾಂಭೀರ್ಯ ಇಲ್ಲಿಲ್ಲದಂತಾಗಿದೆ. ಹೊನ್ನಮ್ಮನನ್ನು ಅವಳ ಬಂಧುಬಳಗದವರೆಲ್ಲ ತಡೆಯುತ್ತಾರೆ. ಕೆರೆಗೆಹಾರದಲ್ಲಿ ಭಾಗೀರಥಿಯ ಬಂಧುಬಳಗಕ್ಕೆ ಈ ಸುದ್ಧಿಯೇ ತಿಳಿದಿಲ್ಲ. ತಡೆಯುವವ ರಿದ್ದರೂ ಹೊನ್ನಮ್ಮನ ಪುಣ್ಯಕೋಟಿನಿಷ್ಟೆ ಕರುಳನ್ನು ಕತ್ತರಿಸಿ ಶೋಕರಸದ ಸಾಗರ ವಾಗುತ್ತದೆ.

'ಮಲ್ಲಿಗೆದೇವಿ' ಕಾವ್ಯದಲ್ಲಿ ಹಾವು ತಿಂದು ಸತ್ತಿದ್ದ ಹೆಂಡತಿಯನ್ನು ಮಂದಳ ರಾಯ ಮದ್ದುಮಂತ್ರಗಳಿಂದ ಬದುಕಿಕೊಳ್ಳುತ್ತಾನೆ. ಬಸುರಿಯಾಗಿದ್ದ ಮಲ್ಲಿಗೆ ದೇವಿ ಹಾವುವಿಷಾನನ್ನು ತಿನ್ನಲು ಬಯಸಿದರೆ ಉದ್ದೇಶಪೂರ್ವಕವಾಗಿ ಹಾವನ್ನೇ ಕೊಂದು ಅಟ್ಟು ತಿನ್ನಿಸಿದ ತಾಯಿಯನ್ನು ಮಂದಳರಾಯ ತುಂಡರಿಸುತ್ತಾನೆ. ಸೊಸೆ ಮಲ್ಲಿಗದೇವಿ ತನ್ನ ಪಾತಿವ್ರತ್ಯದ ಪ್ರಭಾವದಿಂದ ತುಂಡಾಗಿ ಬಿದ್ದಿದ್ದ ಅತ್ತೆಯನ್ನು ಬದುಕಿಸಿಕೊಳ್ಳುತ್ತಾಳೆ. ತಾಯಿಯ ತಲೆಯನ್ನು ಕತ್ತರಿಸಿದ ಪರಶುರಾಮನಿದ್ದ ನಾಡಿನಲ್ಲಿ ಮಂದಳರಾಯನಂತಹವರೂ ಇದ್ದಾರು ಆದರೆ ಸತ್ತವರನ್ನು ಬದುಕಿಸಿ ಕೊಳ್ಳುವ ಪವಾಡಸದೃಶ ಘಟನೆಗಳು ಜನಪದ ಸಾಹಿತ್ಯದಲ್ಲಿ ಸಾಮಾನ್ಯವಾಗಿ ಕಂಡುಬರುವಂತಹವೇ ಆಗಿವೆ.

ಕರುಳಿನ ಸಂಬಂಧ ಕಡಿಯಲಾರದ ಸಂಬಂಧ. ಗಂಡನ ಮನೆಯನ್ನು ಸೇರಿದ ಅಕ್ಕನನ್ನು ನೋಡಬಯಸಿದ ಸುಲವಲನ ಹಂಬಲ ಮೈದಾಳರಾಯನ ಕಥೆಯನ್ನು ಹೋಲುತ್ತದೆಯಾದರೂ ಅಕ್ಕ ಭಾವಂದಿರನ್ನು ಕಂಡ ಸುಲವಲ ಪಲ್ಲಕ್ಕಿಯಲ್ಲಿ ಕುಳಿತು ಬರುವಾಗ ದಾಳಿ ಕೋಟೆಬಾಗಿಲು ಮುಚ್ಚಿಹೋಗಿ ಸುಲವಲ ಬಲಿಯಾಗುತ್ತಾನೆ.

ಗುದ್ದಲಿ ಹಾರೆಗಳನ್ನು ತಂದು ಬಾಗಿಲನ್ನು ಅಗೆದು ತೆಗೆಯುತ್ತಾರೆ. ಸತ್ತ ಸುಲಪಲನನ್ನು ಸಿರಿಗಂಧದ ಸೌದೆಯಿಂದ ಸಂಸ್ಕಾರ ಮಾಡುತ್ತಾರೆ. "ಒಡಹುಟ್ಟಿದವರು" ಕಾವ್ಯದ ಈ ಕಥೆ ವಿವರಣೆಯ ಕೊರತೆಯಿಂದ ಅಂತ್ಯ ಅಸ್ಪಷ್ಟವಾಗುತ್ತದೆ. ಸುಲಪಲನ ಜೊತೆಗೆ ಅಕ್ಕ-ಭಾವರೂ ಕೊಂಡಕೇಡವಾಗುತ್ತಾರೆ. "ಅಕ್ಕ ನನ್ನವಳಾದರೂ ಭಾವ ನನ್ನವನಲ್ಲ" ಎಂಬ ಮಾತನ್ನು ಜನಪದಕವಿ ಸುಳ್ಳಾಗಿಸಿದ್ದಾನೆ ಎಂದು ಹೇಳಬಹುದಾದರೂ ಅಕ್ಕ ತಮ್ಮರು ಇಷ್ಟು ವರ್ಷಗಳಾದರೂ ಒಬ್ಬರನ್ನೊಬ್ಬರು ಕಂಡೇ ಇರಲಿಲ್ಲ ಯಾಕೆ ? ಕೋಟೆ ಬಾಗಿಲಿಗೆ ಅವನು ಸಿಕ್ಕಿಕೊಂಡು ಸತ್ತ ಎಂದರೆ ಹೇಗೆ ? ಕೊನೆಗೆ ಸುಲಪಲನ ಜೊತೆಗೆ ಅಕ್ಕ-ಭಾವರೂ ಕೊಂಡಕ್ಕಾಹುತಿಯಾದುದರ ಔಚಿತ್ಯವೇನು ಎಂಬುದು ಅಸ್ಪಷ್ಟವಾಗಿಯೇ ಇದೆ. ಕಥೆಗಾರ್ತಿ ಆತುರದಲ್ಲಿ ಈ ಕಥೆಯನ್ನು ಮುಗಿಸಿ ಕೈ ತೊಳೆದುಕೊಂಡಂತಿದೆ.

ಬಯಲು ಸೀಮೆಯಲ್ಲಿ ಪ್ರಚಲಿತವಿರುವ "ಬಿಲ್ಲಳರಾಯ" ಕಾವ್ಯ ದಾಯಾದಿ ಮಾತ್ಸರ್ಯದ ಪರಿಣಾಮವನ್ನು ಹೇಳುತ್ತದೆ. ಮಹಾಭಾರತದ ಕಥೆಯೇ ದಾಯಾದಿ ಮಾತ್ಸರ್ಯದ ಕಥೆ. ಬಿಲ್ಲಳರಾಯನ ಕಥೆ ಮೇಲ್ನೋಟಕ್ಕೆ ಬೈಬಲ್ಲಿನ ಆದಿಕಾಂಡದಲ್ಲಿ ಬರುವ ಜೋಸಫನ ಕಥೆಯನ್ನೇ ಬಹುಪಾಲು ಹೋಲುತ್ತದೆ. ದೇಶೀಯ ಸಂಸ್ಕೃತಿಯ ಅಂಶಗಳನ್ನು ಮೈಗೂಡಿಸಿಕೊಂಡಿರುವ ಪ್ರಾದೇಶಿಕ ಭಿನ್ನತೆಗಳಿಂದ ಅವುಗಳನ್ನು ಪರಿಗಣಿಸ ಬೇಕಾಗುತ್ತದೆ. ದೇಶ–ವೇಷ–ಭಾಷೆ ಬೇರೆ ಬೇರೆಯಾದರೂ ಹಾವ–ಭಾವ–ಸ್ವಭಾವ–ಅನುಭಾವಗಳೆಲ್ಲ ಒಂದೇ ರೀತಿಯವಾಗಿದ್ದು ಪರಸ್ಪರ ಹೋಲುತ್ತವೆ.

ಏಳು ಜನ ಅಣ್ಣತಮ್ಮಂದಿರಲ್ಲಿ ಕಿರಿಯವನಾದ ಎಳೆಯ ಬಿಲ್ಲಳರಾಯ ಮೃದು ಕೋಮಲ ಸ್ವಭಾವದ ಮುಗ್ಧಜೀವಿ. ಅವನು ಸೂಬರದ ಮನುಷ್ಯ. ಅವನು ಸುಖವಾಗಿರುವುದನ್ನು ಕಟುಕ ಅಣ್ಣನೊಬ್ಬ ಕರುಬುತ್ತಾನೆ. ಕಾಡಿಗೆ ಸೌದೆ ಕಡಿಯಲು ಜೊತೆಗೆ ಬಂದಿದ್ದ ಬಿಲ್ಲಳನನ್ನು ಕಟುಕಣ್ಣಯ್ಯ ಬಾವಿಗೆ ನೂಕಿಬಿಡುತ್ತಾನೆ. ಹಿರಿಯಣ್ಣ ಕನಿಕರಿಸಿ ಮೇಲೆತ್ತುತ್ತಾನೆ. ಆದರೇನು ಬಿಲ್ಲಳನ ಪ್ರಾಣಪಕ್ಷಿ ಹಾರಿಹೋಗಿರುತ್ತದೆ. ಕಿರಿಮಗನು ಮನೆಗೆ ಬರದಿದ್ದಾಗ ತಾಯಿಗೆ ಹಿರಿಯವನಿಂದ ಎಲ್ಲಾ ವಿಷಯವೂ ತಿಳಿಯುತ್ತದೆ. ತಾಯಿ ಹಿರಿಯಣ್ಣನೊಡನೆ ಬಂದು ಅರಣ್ಯ ಬೆಟ್ಟಗುಡ್ಡಗಳೆಲ್ಲ ಕರಗುವಂತೆ ಶೋಕಿಸುತ್ತಾಳೆ. ಇವಳ ಆರ್ತಸ್ವರವನ್ನು ಕೇಳಿದ ಶಿವಪಾರ್ವತಿಯರು ಬಿಲ್ಲಳನನ್ನು ಬದುಕಿಸಿಕೊಡುತ್ತಾರೆ. ಊರಿಗೆ ಬಂದರೆ ಅಣ್ಣತಮ್ಮಂದಿರೆಲ್ಲ ಕುಲಸ್ಥರ ಸಮ್ಮುಖದಲ್ಲಿ ನ್ಯಾಯ ತೀರ್ಮಾನ ಮಾಡಿ ಆಸ್ತಿಪಾಸ್ತಿಯನ್ನು ಪಾಲುಮಾಡಿಕೊಳ್ಳುತ್ತಾರೆ. ಆದರೂ ಬಿಲ್ಲಳರಾಯನ ಪಾಲಿಗೆ ಬಂದದ್ದೆಲ್ಲ ಭಾಗ್ಯದ ಗಣಿಯಾಗುತ್ತದೆ. ಕಥೆಯ ಅಂತ್ಯ ಅಸ್ಪಷ್ಟವಾಗುತ್ತದೆ. ದುರ್ಜನರಿಗೆ ದಯವಿಲ್ಲ, ಭಾಗ್ಯವಂತನಿಗೆ ಭಯವಿಲ್ಲವೆಂಬುದನ್ನು ಈ ಕಾವ್ಯದಲ್ಲಿ ಸಾರಲಾಗಿದೆ. ಆದರೆ ದುಷ್ಟರಿಗೆ ಶಿಕ್ಷೆಯೂ ಇಲ್ಲ ನೀಚತನವನ್ನೆಸಗಿದವನು ಪಶ್ಚಾತ್ತಾಪ ಪಡುವುದೂ ಇಲ್ಲ.

ಜನಪದ ಬಸವಪುರಾಣಕ್ಕೆ ಸಂಬಂಧಿಸಿದ 'ಸತ್ಯವಂತೆ ನೀಲಮ್ಮ' ಅತ್ಯಂತ ರೋಚಕ ಹಾಡ್ಗತೆ. ಹೇಮರೆಡ್ಡಿ ಮಲ್ಲಮ್ಮನ ಕಥೆಯನ್ನು ನೆನಪಿಗೆ ತರುವ ಈ ಕಥೆಯಲ್ಲಿ ನೀಲಮ್ಮ ತಾಯಿಯು ಕಲ್ಯಾಣದಣ್ಣ ಬಸವಣ್ಣನ ತಂಗಿ ಎಂದು ಹೇಳ ಲಾಗಿದೆ. ಯಾವ ಶಿಷ್ಟ ಬಸವ ಪುರಾಣದಲ್ಲೂ ಇಂಥ ಕಲ್ಪನೆ ಇದ್ದಂತಿಲ್ಲ. ಅಕ್ಕ ನಾಗಮ್ಮ ಎಂಬುವಳು ಬಸವೇಶ್ವರರ ಒಡಹುಟ್ಟು ಎಂಬುದು ಎಲ್ಲರಿಗೂ ತಿಳಿದ ವಿಷಯ. ನೀಲಮ್ಮ ತಾಯಿ ಬಸವಣ್ಣನವರ ಪತ್ನಿ ಎಂಬುದು ಸರಿಯೇ. ಆದರೆ ಅದೇ ಹೆಸರು ಇಲ್ಲಿ ತಂಗಿಗೆ ಆರೋಪಿತವಾಗಿದೆ. ಹೆಸರಿನ ಮಾತಿರಲಿ ಅಕ್ಕನಾಗಮ್ಮ ನನ್ನೇ ನೀಲಮ್ಮನೆಂದು ತಪ್ಪಾಗಿ ಕರೆದಿರಬಹುದೇನೋ. ಎಂದರೆ ಅಕ್ಕನಾಗಮ್ಮನನ್ನು ಕುರಿತ ಕಥೆಗೂ ಇಲ್ಲಿನ ಕಥೆಗೂ ಏನೇನೂ ಸಂಬಂಧವಿಲ್ಲ. ಆದ್ದರಿಂದ ಇದರ ಐತಿ ಹಾಸಿಕ ಸತ್ಯ ಎಷ್ಟೆಂಬುದನ್ನು ಹೇಳಬರುವುದಿಲ್ಲ.

ನೀಲವ್ವ ಗಿರಿರಾಜನ ಮೊಮ್ಮಗಳು ಗಿರಿಜವ್ವನ ಮಗಳು ಎಂದಿರುವುದರಿಂದ ಬಸವೇಶ್ವರ ಹಾಗೂ ನೀಲವ್ವ ಶಿವಪಾರ್ವತಿಯರ ಮಕ್ಕಳು ಅರ್ಥಾತ್ ಅಣ್ಣ ತಂಗಿಯರು ಎಂಬುದು ಇಲ್ಲಿನ ಅಭಿಪ್ರಾಯ. ಅಣ್ಣನವರ ತಂಗಿ ನೀಲಮ್ಮನ ಗಂಡನ ಹೆಸರು ಇದರಲ್ಲಿ ಬಂದಿಲ್ಲ. ಆದರೆ ಅತ್ತೆಯ ಹೆಸರು ರುದ್ರಕಾಳಿ. ಅವಳು ರುದ್ರ ಕಾಳಿಯೋ ಭದ್ರಕಾಳಿಯೋ ಎಂಬುದು ಅವಳು ಸೊಸೆಯನ್ನು ಗೋಳುಹೊಯ್ದು ಕೊಳ್ಳುವುದರಿಂದಲೇ ಅರಿವಾಗುತ್ತದೆ. ಕಾವ್ಯದ ಪ್ರಾರಂಭವೇ ಅವಳ ಬೈಗುಳುಗಳ ಮಳೆಯಿಂದಾಗುತ್ತದೆ. ಅಸಾಧ್ಯವೆನಿಸುವ ಕೆಲಸಗಳನ್ನು ಅತ್ತೆ ಒಡ್ಡುತ್ತಾಳೆ. ಸೊಸೆ ನೀಲಮ್ಮ ಅವುಗಳೆನ್ನೆಲ್ಲ ಪವಾಡದಂತೆ ಮಾಡಿ ಮುಗಿಸುತ್ತಾಳೆ. ಒಕ್ಕಳಕ್ಕಿ ಹಾಕಿ ಒಂದು ಬದನೆಕಾಯಿಯಾಕಿ ಲಕ್ಕಸದ ಮೇಲೊಂಬತ್ತು ಕೋಟಿ ಗಣಂಗಳಿಗೆಲ್ಲ ಉಣಬಡಿಸಿ ಪವಾಡವನ್ನು ಗೆಲ್ಲುತ್ತಾಳೆ. ಭೋಜನದ ಪಂಕ್ತಿಯಲ್ಲಿ ಅಣ್ಣನವರೂ ಕುಳಿತಿರುತ್ತಾರೆ. ಹಸೀ ಸೌದೆಯನ್ನು ಉರಿಸಿದ ಹಸೀಕೊಡದಲ್ಲಿ ನೀರು ತಂದ ಒಂದೇ ಬದನೆಕಾಯಲ್ಲಿ ಅಷ್ಟೆಲ್ಲ ಜನರಿಗೆ ಅಡಿಗೆಮಾಡಿದ ತಂಗಿಯನ್ನು ಕಂಡು ಅಣ್ಣನವರ 'ಕಳ್ಳು ಚುರುಕ್' ಎನ್ನುತ್ತದೆ. ಅಣ್ಣನ ಆಶಯದಂತೆ ಎಲ್ಲರಿಗೂ ಬಡಿಸಿಯೂ ಮಾಡಿದ ಅಡುಗೆ ಉಳಿಯುತ್ತದೆ. ರುದ್ರಕಾಳಿಗೆ ತನ್ನ ತಪ್ಪಿನ ಅರಿವಾಗುತ್ತದೆ. ಬಸವಣ್ಣನವರಲ್ಲಿ ಕ್ಷಮೆ ಯಾಚಿಸುತ್ತಾಳೆ. ಪಶ್ಚಾತ್ತಾಪದಿಂದ ನೊಂದ ಅತ್ತೆಯ ಕಾಲಿಗೆ ನೀಲಮ್ಮ ಶರಣು ಮಾಡುತ್ತಾಳೆ. ಸಾಧ್ವೀಮಣಿ ನೀಲಮ್ಮನ ಪಾತ್ರ ಓದುಗರ ಅನುಕಂಪವನ್ನು ಸುಲಭವಾಗಿ ಪಡೆದುಕೊಳ್ಳುತ್ತದೆ. ಬಸವಣ್ಣನವರ ತಂಗಿಯೊಬ್ಬಳು ನೀಲಮ್ಮ ಎಂಬ ಹೆಸರಿನಲ್ಲಿದ್ದಳೆ? ಇದ್ದರೆ ರುದ್ರಕಾಳಿಯಂತಹ ಅತ್ತೆಯ ಕಿರುಕುಳದಲ್ಲಿ ಸಿಕ್ಕಿಕೊಂಡು ನೋಯುತ್ತಿದ್ದಳೆ? ಶಿಷ್ಟ ಬಸವ ಪುರಾಣಗಳಲ್ಲಿ ಯಾದರೂ ಇಂಥ ಉಲ್ಲೇಖಗಳು ಇವೆಯೆ ಎಂಬುದನ್ನು ಶೋಧಿಸಬೇಕಾಗಿದೆ.

ನಮ್ಮ ಜನಪದ ಗಾಯಕಿಯರು ತಮಗೆ ತಿಳಿದಿರುವ ಯಾವುದೇ ಜನಪದ ಕಥೆಯನ್ನಾದರೂ ಸುಲಭವಾಗಿ 'ಸುವ್ವಿಸ್ನಾಲಿ' ಹಾಡನ್ನಾಗಿ ಪರಿವರ್ತಿಸುವ ಕೌಶಲವುಳ್ಳವರು. ಕಾರಣ ಸುವ್ವಿನ್ನಾಗಿ ಪದಗಳು ಎರಡೆರಡು ಅಂಶಗಣಗಳಿಂದ ಸರಾಗವಾಗಿ ಸಾಗುವ ಬಂಧ. ಅಂಶಗಣಗಳಲ್ಲೂ ವಿಷ್ಣುಗಣಗಳೆರಡು ಬರಬೇಕೆಂಬುದು ಸಾಮಾನ್ಯ ನಿಯಮವಾದರೂ ಇದರ ಉಲ್ಲಂಘನೆಯಿಂದ ಯಾವ ಅಪರಾಧವೂ ಸಂಭವಿಸುವುದಿಲ್ಲ ಆದರ ಕಥೆಯ ಓಟಕ್ಕೆ ತಕ್ಕಂತೆ ಗುಣಗಳು ರೂಪುಗೊಳ್ಳುತ್ತ ಹೋಗುತ್ತವೆ. 'ರುದ್ರ ಕುಮಾರ'ಕೂಡ ಒಂದು ಜನಪದ ಕಥೆ ಕೊಟ್ಟಿರುವ ಕಾವ್ಯರೂಪ.

ಬಡಗು ದೇಶದ ಬೆಡಗಿನ ದೊರೆ ಬೂದಿರಾಯ ಮತ್ತು ಸುವರ್ಣಾದೇವಿಯರ ಒಬ್ಬಳೇ ಮಗಳು ಮೈನೆರೆದು ಪನ್ನೀರಿನಲ್ಲಿ ಸ್ನಾನ ಮಾಡುತ್ತಾಳೆ. ಆಕೆ ಸ್ನಾನ ಮಾಡಿದ ನೀರು ಪಟ್ಟದಾನೆಯ ಗೊಂತಿಗೆ ಹರಿದುಬರುತ್ತದೆ. ಇದನ್ನು ಮೂಸಿದ ಆನೆ ಕಾಮಜ್ವರ ಪೀಡಿತವಾಗಿ ಮಲಗಿಬಿಡುತ್ತದೆ. ಕನ್ಯಾಗರ್ಭವತಿ (ಈ ಹೆಸರು ಕನ್ಯಾ ಪ್ರಭಾವತಿ ಎಂಬುದರ ತಪ್ಪು ಉಚ್ಚಾರ) ಆನೆಗೆ ಆರತಿ ಎತ್ತಲು ಬಂದರೆ ಅದು ಅವಳನ್ನು ಮೃದುವಾಗಿ ಎತ್ತಿ ಹೆಗಲಲ್ಲಿರಿಸಿಕೊಂಡು ಕಟ್ಟಿದ್ದ ಸರಪಣಿಗಳನ್ನು ಕಿತ್ತುಕೊಂಡು ಕಾಡಿಗೆ ಓಡುತ್ತದೆ. ಆನೆಯಿಂದ ಮಗಳನ್ನು ಬಿಡಿಸಿ ತಂದವರಿಗೆ ಅರ್ಧ ರಾಜ್ಯ ಕೊಡುವುದಾಗಿ ರಾಜ ಡಂಗುರ ಸಾರಿಸುತ್ತಾನೆ. ಪಕ್ಕದ ರಾಜ್ಯದ ರುದ್ರ ಕುಮಾರ ರಾಜಕುಮಾರಿಯನ್ನು ತರಲು ಹೊರಡುತ್ತಾನೆ. ದಾರಿಯಲ್ಲಿ ಮಡಿವಾಳ ನಿಂಗಣ್ಣನೂ ರುದ್ರಕುಮಾರನನ್ನು ಸೇರಿಕೊಳ್ಳುತ್ತಾನೆ. ಅತಿಮಾನುಷ ಕಥೆಗಳಲ್ಲಿ ಸಹಜವಾಗಿ ಬರುವ ಏಳು ಹೆಡೆ ಸರ್ಪ. ಹುಲಿ, ರಾಕ್ಷಸಿ ಮುಂತಾದವನ್ನೆಲ್ಲ ಗೆದ್ದು ಉಪಾಯದಿಂದ ರಾಜಕುಮಾರಿಯನ್ನು ಪಾರುಮಾಡಿ ಆನೆಯನ್ನು ಕೊಲ್ಲುತ್ತಾನೆ. ಊರಿಗೆ ಹೊರಡುವ ಹೊತ್ತಿಗೆ ರಾಕ್ಷಸಿಯೊಬ್ಬಳು ಅಡ್ಡವಾಗುತ್ತಾಳೆ, ಅವಳು ರಾಜಕುಮಾರಿಯನ್ನು ಪಾತಾಳದಾಳದ ಬಾವಿಗೆ ಕೊಂಡೊಯ್ಯುತ್ತಾಳೆ, ರಾಜ ಕುಮಾರ ಬಿದಿರು ಬುಟ್ಟಿ ಹೆಣೆದು ಅದರೊಳಗೆ ತಾನು ಕುಳಿತುಕೊಂಡು ಪಾತಾಳ ದಾಳದ ಬಾವಿಗೆ ಇಳಿಯುತ್ತಾನೆ, ರಾಕ್ಷಸಿಯನ್ನು ಕೊಂದು ರಾಜಕುಮಾರಿಯನ್ನು ಬುಟ್ಟಿಯಲ್ಲಿ ಕುಳ್ಳಿರಿಸಿ ಮೇಲಕ್ಕೆ ಕಳಿಸುತ್ತಾನೆ. ಅವಳನ್ನು ಮೇಲಕ್ಕೆಳೆದುಕೊಂಡ ನಿಂಗಣ್ಣ ಮತ್ತೆ ಬುಟ್ಟಿಯನ್ನು ಬಾವಿಗೆ ಬಿಡುತ್ತಾನೆ. ರಾಜಕುಮಾರ ಅದರಲ್ಲಿ ಕುಳಿತುಕೊಳ್ಳುತ್ತಾನೆ. ಮೇಲಕ್ಕೆಳೆಯುತ್ತಿದ್ದ ನಿಂಗಣ್ಣನಿಗೆ ನೀಚಬುದ್ಧಿಯೊಂದು ಸ್ಫುರಿಸಿ ಅರ್ಧಕ್ಕೆ ಕೈ ಬಿಟ್ಟುಬಿಡುತ್ತಾನೆ. ರಾಜಕುಮಾರ ಸತ್ತನೆಂದು ಭ್ರಮಿಸಿ ತಾನೇ ರಾಜಕುಮಾರಿಯನ್ನು ಆನೆಯಿಂದ ಗೆದ್ದುತಂದೆನೆಂದು ಹೇಳಿ ಅರ್ಧರಾಜ್ಯ ಪಡೆದು ರಾಜಕುಮಾರಿಯನ್ನು ಮದುವೆಯಾಗಲು ಪ್ರಯತ್ನಿಸುತ್ತಾನೆ. ಪಾರ್ವತಿ ದೇವಿಯ ಅನುಗ್ರಹದಿಂದ ರುದ್ರಕುಮಾರ ಪಾರಾಗಿ ಬಂದು ಬೂದಿರಾಯನ ಮುಂದೆ ನಿಂತು ನಡೆದ ಸಂಗತಿಯನ್ನೆಲ್ಲ ವಿಶದವಾಗಿ ಹೇಳುತ್ತಾನೆ. ನಿಂಗಣ್ಣನನ್ನು ತೋರಣ ಗಟ್ಟುತ್ತಾರೆ. ರುದ್ರಕುಮಾರ ರಾಜಕುಮಾರಿಯನ್ನು ಮದುವೆಯಾಗುತ್ತಾನೆ.

ಕಥೆ ಸುಖಾಂತವಾಗುತ್ತದೆ. ಯಾವುದೇ ವಿಧವಾದ ಅಲಂಕಾರಗಳ ಅಬ್ಬರವಿಲ್ಲ ದಿದ್ದರೂ ಕಥೆ ಸರಳವಾಗಿ ಲೀಲಾಜಾಲವಾಗಿ ಹರಿಯುತ್ತದೆ. ಆನೆಯೊಂದು ರಾಜ ಕುಮಾರಿಯು ಮೈನೆರೆದು ಮಾಡಿದ ಸ್ನಾನದ ನೀರಿನ ವಾಸನೆಗೆ ಕಾಮೋದ್ರೇಕಗೊಂಡದ್ದು ಅಸ್ವಾಭಾವಿಕವೇನಲ್ಲ. ಕೇವಲ ಬೆವರಿನ ವಾಸನೆಯಿಂದಲೇ ಕಾಮೋದ್ರೇಕವಾಗ ಬಹುದೆಂದು ಮನಃಶಾಸ್ತ್ರಜ್ಞರೂ ಹೇಳುತ್ತಾರೆ. ಜನಪದದಲ್ಲಿ ಇದನ್ನು ಒಂದು ಆಶಯವೆಂದು ಪರಿಗಣಿಸಿದರೂ ಪ್ರಾಣಿಗಳು ಮಾನವನ, ಮಾನವರೂ ಪ್ರಾಣಿಗಳ ಲೈಂಗಿಕ ವಿಚಾರಗಳಿಂದ ಪ್ರಚೋದಿತರಾಗುವುದು ಸಹಜವೆಂದೇ ತಿಳಿದುಬಂದಿದೆ. ಈ ಕಾವ್ಯದಲ್ಲಿ ಮಗಳನ್ನು ಕಳೆದುಕೊಂಡ ರಾಜರಾಣಿಯರು ಗೋಳಾಡುತ್ತಾರೆ. ಆಗ ಅವರ ಕೆನ್ನೆಯ ಮೇಲೆ ಸುರಿಯುವ ಕಣ್ಣೀರು :

ಅವರ ಚಿನ್ನದಂಥ ಕಣ್ಣೀರು
ಅವರ ಕೆನ್ನೆಮೇಲೆ ಹರಿಯುತ್ತದೆ
ಅವರ ಮುತ್ತಿನಂಥ ಕಣ್ಣೀರು
ಅವರ ಮೂಗಿನ ಮ್ಯಾಲೆ ಹರಿಯುತ್ತದೆ
ಅವರ ವಜ್ರದಂಥ ಕಣ್ಣೀರು
ಅವರ ವಾಲೆ ಮ್ಯಾಲೆ ಹರಿತ್ತದೆ (ಪು. 93)

ಕಣ್ಣೀರಿಗೂ ಇಂಥ ಬಣ್ಣನೆಯ ಬೆಡಗನ್ನು ತಂದಿದ್ದಾರೆ ನಮ್ಮ ಜನಪದ ಕವಯಿತ್ರಿ ಯರು. ರುದ್ರಕುಮಾರ ಆನೆಯನ್ನು ಗೆಲ್ಲಲು ಹೋಗುವಾಗ ರಂಗಣ್ಣ ಜೊತೆ ಯಾದಾಗ ಗಾದೆ ಮಾತೊಂದನ್ನು ಕಾವ್ಯದ ಭಾಷೆಗೆ ಹೊಂದಿಸಿಕೊಂಡಿರುವ ರೀತಿ ಇದು :

ಒಬ್ಬರಿಗಿಂತ ಇಬ್ಬರು ಲೇಸು
ಹಬ್ಬಕ್ಕಿಂತ ಮದುವೆ ಲೇಸು

'ಬೆಳ್ಳಿದೇವರು' ಕಾವ್ಯ ಅದರ ಹೆಸರಿನಷ್ಟೇ ಮುದ್ದಾಗಿದೆ. ಬೆಳ್ಳಿದೇವರು ಬೇರೆ ಯಾರೂ ಅಲ್ಲ. ಬೆಳ್ಳಿಬೆಟ್ಟದ ಒಡೆಯ ಈಶ್ವರ. ಬೆಳ್ಳಿದೇವರ ಹೆಂಡತಿ ಅನ್ನಮ್ಮದೇವಿ. ಮನೆಯ ಕೆಲಸವನ್ನೆಲ್ಲ ಅವಳೊಬ್ಬಳೇ ನಿಬಾಯಿಸಲಾಗುವುದಿಲ್ಲ ಎಂಬ ನೆಪವೊಡ್ಡಿ ಮತ್ತೊಬ್ಬಳನ್ನು ತರುವ ಜಾಲ ಬೆಳ್ಳಿದೇವರದು. ಅದಕ್ಕೆ ಅನ್ನಮ್ಮನ ಆಕ್ಷೇಪವೇನೂ ಇಲ್ಲ, ಬೆಳ್ಳಿದೇವರು ಮಾದಿಗರ ಹುಡುಗಿಯನ್ನು ಕರೆದು ಕೊಂಡು ಬಂದಾಗ ಅನ್ನಮ್ಮನಿಂದ ಆದರದ ಸ್ವಾಗತ.

ಕಾವ್ಯದ ಪ್ರಾರಂಭ ಗಂಗೆ–ಗೌರಿಯ ಕಥೆಯನ್ನೇ ಹೋಲುತ್ತದೆ. ಮಾದಿಗರ ಹುಡುಗಿ ತನ್ನ ಜಾತಿಯನ್ನು ಹೇಳಿಕೊಂಡು ಬೇಡಬೇಡವೆಂದರೂ ಬಿಡದೆ ಬೆಳ್ಳಿ ದೇವರು ಅವಳನ್ನು ಮೆಚ್ಚಿ ಕರೆಯುತ್ತಾನೆ. ಮಾದಿಗರ ಹುಡುಗಿಯನ್ನು ಹಿರಿಯುವ ಳಿಗೆ ಸವತಿಯನ್ನಾಗಿ ತಂದಾಗ ಗಂಡನ ಅಂತರ್ಜಾತಿ ವಿವಾಹದ ಕ್ರಾಂತಿಗೆ ಹೃದಯ

ತುಂಬಿ ಬಂದವಳಂತೆ ಅನ್ನಮ್ಮದೇವಿ ಹೊಸ ಮದುಮಕ್ಕಳನ್ನು ಮನೆದುಂಬಿಸಿ ಕೊಳ್ಳುವ ಔದಾರ್ಯ ಹೃದಯಂಗಮವಾಗಿ ಮೂಡಿಬಂದಿದೆ. ಗಂಗೆ–ಗೌರಿ ಜಗಳದಂತೆ ಮನೆಗೆ ಎರಡನೆಯವಳು ಬಂದಮೇಲಿನ ಚಿತ್ರವಿಚಿತ್ರಗಳ ಸೂಚನೆಯೇನೂ ಇಲ್ಲದೆ ಕಾವ್ಯ ಇಲ್ಲಿಗೆ ನಿಂತಂತಿದೆ.

೪

'ಹೆಂಗಸರ ಹಾಡ್ಗತೆಗಳು' ಸಂಗ್ರಹ ಒಂದು ಅಪೂರ್ವ ಜಾನಪದ ಕೃತಿ. ಇಂಥ ದೊಂದು ಅಮೂಲ್ಯವಾದ ಕೃತಿಯನ್ನು ಸಂಪಾದಿಸಿಕೊಟ್ಟಿರುವ ಬಿ. ಎಸ್. ತಲ್ವಾಡಿಯವರ ಶ್ರಮ ನಿಜಕ್ಕೂ ಸಾರ್ಥಕವಾಗಿದೆ. ಅವರು ನಿರ್ವಿವಾದವಾಗಿಯೂ ಅಭಿನಂದನಾರ್ಹರು. ತಲ್ವಾಡಿಯವರು ಈಗಾಗಲೇ 'ಕ್ರೈಸ್ತ ಜನಪದ ಗೀತೆಗಳು' ಎಂಬ ವಿಶಿಷ್ಟ ಸಂಗ್ರಹವನ್ನು ಕನ್ನಡಿಗರ ಕೈಗಿತ್ತಿರುವುದರ ಜೊತೆಗೆ 'ಜನಪದ ರಾಮಾಯಣ'ದ ಸಂಪಾದಕರಲ್ಲಿ ಅವರೂ ಒಬ್ಬರು. ಹಿಂದೂ–ಕ್ರೈಸ್ತ ಧಾರ್ಮಿಕ ಪ್ರಪಂಚಗಳೆರಡರಲ್ಲೂ ಸುತ್ತಾಡಿರುವ ಅವರು ಜಾನಪದ ಸತ್ವವನ್ನು ಹೀರಿಕೊಂಡು ದಷ್ಟಪುಷ್ಟವಾಗಿ ಬೆಳೆದವರು. ಅದರ ಪ್ರತೀಕವೇ ಸೋಲಿಗರ ಬದುಕನ್ನು ಸಾರವತ್ತಾಗಿ ಚಿತ್ರಿಸಿರುವ ಕಾದಂಬರಿ 'ಗುಂಗರು ಕಣಿವೆ'. 'ಭಾವರಶ್ಮಿ'ಎಂಬ ಕವನ ಸಂಗ್ರಹವನ್ನೂ ಪ್ರಕಟಿಸಿರುವ ಬಿ. ಎಸ್. ತಲ್ವಾಡಿ ಅವರು ಇಂಗ್ಲಿಷ್–ಕನ್ನಡ ಭಾಷೆಗಳೆರಡರ ಮೇಲೂ ಪ್ರಭುತ್ವವನ್ನು ಸಾಧಿಸಿದ್ದು Christisn Folklore ಎಂಬ ಇಂಗ್ಲಿಷ್ ಕೃತಿಯನ್ನು ಪ್ರಕಟಿಸಿದ್ದಾರೆ. ಅವರು ಪ್ರತಿಭಾವಂತ ಬರಹಗಾರರು ಅದ್ವಿತೀಯ ವಿದ್ವಾಂಸರು. ಅನೂಹ್ಯರೀತಿಯ ಬುದ್ಧಿ ಕುಶಲಿಗರು. ಜಾನಪದ ಪರಿಸರ ದಿಂದಲೇ ಬಂದ ಅವರು ಗ್ರಾಮೀಣ ಜನತೆಯೊಂದಿಗೆ ಬೆರೆಯಲಿಲ್ಲ ಸೌಜನ್ಯಪೂರ್ಣ ಸಹೃದಯರು. ಜಾನಪದವನ್ನು ಶಾಸ್ತ್ರೀಯವಾಗಿ ಅರಿತವರು : ಕ್ಷೇತ್ರಕಾರ್ಯದಲ್ಲಿ ನುರಿತವರೂ ಆಗಿದ್ದಾರೆ. ಅವರ ಎಲ್ಲ ಶಕ್ತಿ ಸಾಮರ್ಥ್ಯಗಳು ಕನ್ನಡ ನಾಡನುಡಿಗಳ ಊರ್ಜಿತ ಕಾರ್ಯಕ್ಕೆ ಮೀಸಲಾಗಲೆಂದು ಹೇಳಿ ಅವರಿಗೆ ಉಜ್ವಲ ಭವಿಷ್ಯವನ್ನು ಹಾರೈಸುತ್ತೇನೆ.

'ಕಾನೂರು' ಹೆಗ್ಗಡಿತಿ ಮತ್ತು ಬಂಡಾಯ

ಭಗವಾನ್

ವೈಚಾರಿಕತೆ ಪ್ರಜ್ಞಾವಂತ ವ್ಯಕ್ತಿಯ ವಿಶೇಷಗುಣ. ಉಸಿರಾಡುವಷ್ಟು ಅದು ಆತನಿಗೆ ಸಹಜವಾಗಿರುತ್ತದೆ. ವಿಚಾರ ಬೌದ್ಧಿಕ ಮಟ್ಟದಲ್ಲಿ ನಿಂತರೆ ನಿರ್ವೀರ್ಯವಾಗುತ್ತದೆ. ಚೆನ್ನಾಗಿ ಆಲೋಚನೆ ಮಾಡಿ ಸರಿಯಾದುದನ್ನು ನಂಬಿ ಆಚರಿಸಿದಾಗ ಜೀವನ ಹಸನಾಗುತ್ತದೆ. ಮೊದಲು ತಿಳಿವಳಿಕೆ, ಅನಂತರ ವಿಚಾರ, ಆಮೇಲೆ ಆಚಾರ, ಎಂದರೂ ಇದೆಲ್ಲ ಹೆಚ್ಚು ಕಡಿಮೆ ಒಟ್ಟಿಗೆ ನಡೆಯುವ ಸೃಜನ ಕ್ರಿಯೆ.

ಕ್ರಾಂತಿಕಾರಿ ಲೇಖಕ ಜಡ್ಡುಗಟ್ಟಿದ ಜನಜೀವನವನ್ನು ವಿದ್ಯುನ್ಮಯಗೊಳಿಸುತ್ತಾನೆ. ತನ್ನ ಚಿಂತನೆ ನೇರವಾಗಿ ಬರದಂತೆ ಎಚ್ಚರವಹಿಸುತ್ತಾನೆ. ತಾನು ಒರೆಹಚ್ಚಿ ಅಂಗೀಕರಿಸಿರುವ ತತ್ವ ಅತ್ಯಂತ ಕಲಾತ್ಮಕವಾಗಿ ಒಡಮೂಡುವಂತೆ ಶ್ರಮಿಸುತ್ತಾನೆ. ಕಲೆಯ ಮೈಯಲ್ಲಿ ಆಲೋಚನೆಯ ಅಸ್ಥಿಪಂಜರ ಅವಿತುಕೊಂಡಿರಬೇಕು. ಲೇಖಕನ ಉದ್ದೇಶಗಳು ಗುಪ್ತವಾದಷ್ಟೂ ಕೃತಿಯ ಸತ್ವ ಹೆಚ್ಚುತ್ತದೆ ; ಕಲೆ ಉತ್ತಮ ಮಟ್ಟದ್ದಾಗುತ್ತದೆ. ಹಾಗೆ ನೋಡಿದರೆ ಮಹಾ ಸಾಹಿತಿಗಳೆಲ್ಲ ದೊಡ್ಡ ತತ್ವಜ್ಞಾನಿಗಳಾಗಿದ್ದಾರೆ. ಅದಕ್ಕೆ 'ಕಾನೂರು ಹೆಗ್ಗಡಿತಿ' ಒಂದು ಉತ್ತಮ ಉದಾಹರಣೆ.

ಜನತೆಯನ್ನು ಪ್ರಚೋದಿಸುವ ವಿಚಾರಗಳು ಕುವೆಂಪು ಅವರ ಕಾದಂಬರಿಗಳಲ್ಲಿ ಸುಪ್ತವಾದರೂ ಕಾಂತಿಮಯವಾಗಿ ಕಾಣಿಸಿಕೊಳ್ಳುತ್ತವೆ. ಸಾಹಿತ್ಯವನ್ನು ಸಾಮಾಜಿಕಾಸ್ತ್ರವಾಗಿ ಪ್ರಯೋಗಿಸಬೇಕೆಂಬ ಸಾಹಿತಿಯ ಹೊಣೆಗಾರಿಕೆ ಬಹಳ ದೊಡ್ಡದು. ಮೊದಲನೆಯದಾಗಿ, ಆತ ಬರೆಯುವ ವಸ್ತು ಸದುದ್ದೇಶ ಹೊಂದಿರಬೇಕು : ಎರಡನೆಯದಾಗಿ, ಶಾಶ್ವತ ಮೌಲ್ಯವುಳ್ಳದ್ದಾಗಿರಬೇಕು : ಮೂರನೆಯದಾಗಿ, ಶುದ್ಧ ಕಲೆಯಾಗಬೇಕು. ಇಲ್ಲವಾದರೆ ನಿರ್ದಿಷ್ಟ ಸಮಸ್ಯೆ ಪರಿಹಾರವಾದ ಕೂಡಲೇ ಕೃತಿಯು ಪರಿಣಾಮ ಕಳೆದುಕೊಳ್ಳುತ್ತದೆ, ವಾಚಕಲೋಕದಿಂದ ದೂರವಾಗುತ್ತದೆ, ಕಾಲಾಂತರದಲ್ಲಿ ಮರೆತುಹೋಗುತ್ತದೆ. ಆದ್ದರಿಂದ ಚಿರಮೌಲ್ಯ ಮತ್ತು ಕಲೆಗಾರಿಕೆ ಇವೇ ಅಂತಿಮವಾಗಿ ಕೃತಿಯನ್ನು ಉಳಿಸುವ ಗುಣಗಳು. 'ಕಾನೂರು ಹೆಗ್ಗಡಿತಿ'ಯಲ್ಲಿ ಈ ಗುಣಗಳು ಮೇಳವಿಸಿರುವುದನ್ನು ಕಾಣಬಹುದು. ವ್ಯವಸ್ಥೆ ಬದಲಾಗಬೇಕೆಂಬ ಹಂಬಲ 'ಕಾನೂರು ಹೆಗ್ಗಡಿತಿ'ಯ ಉಸಿರಾಗಿದೆ : ಅದನ್ನು ಆಗುಮಾಡಿಯೂ ತೋರಿಸುತ್ತದೆ, ಹೂವಯ್ಯನ ಪಾತ್ರದ ಮೂಲಕ.

ಪಟ್ಟಭದ್ರಹಿತಾಸಕ್ತಿಗಳು ನಾನಾ ರೂಪ ಮತ್ತು ವಿಧಗಳಲ್ಲಿ ಜನಸಾಮಾನ್ಯರನ್ನು ಕಿತ್ತು ತಿನ್ನುತ್ತಿವೆ ಅವುಗಳಲ್ಲಿ ಪ್ರಮುಖವಾದದ್ದು ಪುರೋಹಿತ ಶಾಹಿ ಅಥವಾ ಪುರೋಹಿತಶಾಹಿಯು ಪಟ್ಟಭದ್ರಹಿತಾಸಕ್ತಿಗಳ ಜನನಿ. ಎಂದರೆ ಹೆಚ್ಚು ಸಮಂಜಸ. ವಿದ್ಯಾಬುದ್ಧಿಗಳನ್ನು ಜನತೆಗೆ ನೀಡಿ ಅವರನ್ನು ಮೇಲೆತ್ತುವುದಕ್ಕೆ ಬದಲಾಗಿ. ಅವರ ಅಜ್ಞಾನವನ್ನೂ ಮೌಢ್ಯವನ್ನೂ ತನ್ನ ಸ್ವಾರ್ಥ ಸಾಧನೆಗೆ ಬಳಸಿಕೊಂಡಿದೆ. ಯೋಚಿಸಲು ಗೊತ್ತಿಲ್ಲದ ಅನಕ್ಷರಸ್ಥ ಮುಗ್ಧಜನತೆ ಪುರೋಹಿತಶಾಹಿಗೆ ಮೃಷ್ಟಾನ್ನವಾಗಿದೆ. ತಾವು ಸುಲಿಗೆಗೆ ಸಿಲುಕಿದ್ದೇವೆಂದು ಜನಸಾಮಾನ್ಯರಿಗೆ ಅರಿವಾಗದಿರುವುದೇ ದೊಡ್ಡ ದುರಂತ. ಜನ ಬಾಳೆಹಣ್ಣು ಬೆಳೆದು ಮೆಣಸಿನಕಾಯಿ ತಿನ್ನುತ್ತಿದ್ದಾರೆ. ಸೂಕ್ಷ್ಮವಾಗಿ ಪರಿಶೀಲಿಸಿದರೆ ನೌಕರಶಾಹಿ, ಬಂಡವಾಳಶಾಹಿ, ಸಾಮ್ರಾಜ್ಯಶಾಹಿ, ಮುಂತಾದುವುಗಳೆಲ್ಲ ಪುರೋಹಿತಶಾಹಿಯ ಕಬಂಧ ಬಾಹುಗಳೆಂದು ಗೊತ್ತಾಗುತ್ತದೆ. ಇಂಥ ಕ್ರಮಬದ್ಧ ಶೋಷಣೆಯನ್ನು ತಪ್ಪಿಸಲು ಜನರಿಗೆ ತಿಳಿವಳಿಕೆ ಕೊಟ್ಟು ಅವರನ್ನು ಎತ್ತಿಕಟ್ಟುವುದೇ ನಿಜವಾದ ಪ್ರತಿಭಟನೆ. ಮನುಷ್ಯನನ್ನು ಎಲ್ಲಾ ಬಂಧನಗಳಿಂದ ಬಿಡಿಸುವ ಸಾಂಸ್ಕೃತಿಕ ಪ್ರಕ್ರಿಯೆಯೇ ಬಂಡಾಯ.

ಕುವೆಂಪು ಕನ್ನಡ ಸಾಹಿತ್ಯದ ಮೊಟ್ಟಮೊದಲ ಬಂಡಾಯದನಿ. ಅವರಷ್ಟು ದಿಟ್ಟವಾಗಿ ಹಿಂದೂ ಸಮಾಜದ ಅನಿಷ್ಟಗಳನ್ನು ಬೊಟ್ಟುಮಾಡಿ ತೋರಿದವರಿಲ್ಲ. ನಮ್ಮ ಸಾಮಾಜಿಕ ವಿಷಮತೆ ಮತ್ತು ಅಸಮಾನತೆಗಳನ್ನು ಅವರ ಹಾಗೆ ಧೀರ ಗಂಭೀರವಾಗಿ ಭಾಷಣಗಳಲ್ಲೂ ಬರವಣಿಗೆಯಲ್ಲೂ ಖಂಡಿಸಿದವರಿಲ್ಲ. ಇದು ಅವರ ಮಹಾಕಾದಂಬರಿಗಳಲ್ಲಿ ಹಾಗೂ ಶ್ರೇಷ್ಠ ವೈಚಾರಿಕ ಕೃತಿಗಳಲ್ಲಿ ವಿಶೇಷವಾಗಿ ಪ್ರಕಟಗೊಂಡಿದೆ.

ಬಂಡಾಯ 'ಕಾನೂರು ಹೆಗ್ಗಡಿತಿ'ಯಲ್ಲಿ ಮೂರು ಹಂತಗಳಲ್ಲಿ ಮೈದಾಳುತ್ತದೆಂದು ಸ್ಥೂಲವಾಗಿ ಹೇಳಬಹುದು. ಒಂದು ಪುರೋಹಿತಶಾಹಿಯ ವಿರುದ್ಧ :

ಎರಡು ಕಾದಂಬರಿಕಾರರು ತಮ್ಮ ವರ್ಗದ ಜನರು ಮಾಡುವ ಸುಲಿಗೆಯನ್ನು ಹಾಗೂ ಅವರ ಸಾಂಸ್ಕೃತಿಕ ಶೂನ್ಯತೆಯನ್ನು ನಿರ್ದಾಕ್ಷಿಣ್ಯವಾಗಿ ಬಯಲು ಮಾಡುವುದು ; ಮೂರು, ನಿರಕ್ಷರಕುಕ್ಷಿಗಳಾದ ದಲಿತರನ್ನು ಮಾನವೀಯವಾಗಿ ಕಂಡು ಆದರಿಸುವುದು ಮತ್ತು ಅವರೂ ಮನುಷ್ಯರಂತೆ ಬದುಕಲು ವಿದ್ಯೆ ಕಲಿಸಿ ಪರಿಸರ ನಿರ್ಮಾಣ ಮಾಡುವುದು.

ಪುರೋಹಿತಶಾಹಿಯನ್ನು ಕುವೆಂಪು ಯಾವಾಗಲೂ ಮುಚ್ಚುಮರೆ ಇಲ್ಲದೆ ಮನವರಿಕೆಯ ಕೆಚ್ಚಿನಿಂದ ಸಮುಚಿತ್ರತೆಯಿಂದ ಟೀಕಿಸಿದ್ದಾರೆ. ಪುರೋಹಿತರು ಪಂಚಾಂಗದ ಮೂಲಕ ಸಮಾಜವನ್ನು ತಮ್ಮ ಹತೋಟಿಯಲ್ಲಿಟ್ಟುಕೊಂಡಿದ್ದಾರೆ. ಅದನ್ನು ಬಿಟ್ಟರೆ ಏನಾಗುತ್ತದೊ ಎಂದು ಜನ ಹೆದರುತ್ತಾರೆ. ಈ ಭಯ ಜೋಯಿಸರಿಗೆ ಲಾಭದಾಯಕವಾಗಿದೆ. ನಮ್ಮ ಜನ ಎಲ್ಲದಕ್ಕೂ ಪಂಚಾಂಗ ಕೇಳುತ್ತಾರೆ. ಪ್ರಸ್ತದಿಂದ ಹಿಡಿದು ಕೊನೆಯ ಪ್ರಯಾಣದವರೆಗೂ ಅದರ ಹಾವಳಿ ತಾನೇ ತಾನಾಗಿದೆ. ಜನರ ಬುದ್ಧಿ ದಿವಾಳಿಯಾಗಿದೆ. ಇಂಡಿಯಾವನ್ನು ವಾಸ್ತವವಾಗಿ ಆಳುತ್ತಿರುವುದು ಪಂಚಾಂಗ ; ಯಾವುದೇ ವ್ಯಕ್ತಿಯಲ್ಲ ಅಥವಾ ಪಕ್ಷವಲ್ಲ. ಏಕೆಂದರೆ ಎಲ್ಲರೂ ಆಳುವವರೂ ಆಳಿಸಿಕೊಳ್ಳುವವರೂ ಪಂಚಾಂಗಕ್ಕೆ ದಾಸರು ; ಅದಕ್ಕೆ ಶರಣು ಹೋಗುವಂಥ ಮನೋಭಾವ ಹಾಗೂ ವ್ಯವಸ್ಥೆಯನ್ನು ಇತಿಹಾಸದುದ್ದಕ್ಕೂ ಬಲಪಡಿಸಿಕೊಂಡು ಬರಲಾಗಿದೆ. ಏನೋ ಕಂಟಕ ಅಥವಾ ಅಪಶಕುನ ಘಟಿಸುತ್ತದೆಂದು ಭವಿಷ್ಯ ಹೇಳಿ, ಹೆದರಿಸಿ, ಶಾಂತಿ ಮಾಡಬೇಕೆಂದು ಸಲಹೆ ಮಾಡಿ ಪುರೋಹಿತಶಾಹಿ ಹೊಟ್ಟೆ ಹೊರೆದುಕೊಳ್ಳುತ್ತಿದೆ. ಆದ್ದರಿಂದ ಪುರೋಹಿತ ಇಂಡಿಯಾದ ಖಳನಾಯಕ.

ಆರುನೂರು ಪುಟಗಳನ್ನು ಮೀರಿ ಬೆಳೆದಿರುವ ಈ ಸುದೀರ್ಘ ಕಾದಂಬರಿಯಲ್ಲಿ ವೆಂಕಪ್ಪಯ್ಯ ಜೋಯಿಸರು ಹತ್ತಾರು ಬಾರಿ ಕಾಣಿಸಿಕೊಳ್ಳುತ್ತಾರೆ. ಅವರಿಗೆ ಮೀಸಲಾಗಿರುವ ಪುಟಗಳನ್ನು (ಲೆಕ್ಕ ಹಾಕಿದರೆ ಸುಮಾರು ಹದಿನೈದು ಪುಟಗಳಿಗಿಂತ ಹೆಚ್ಚಾಗುವುದಿಲ್ಲ) ಗಮನಿಸಿದರೆ ಅವರ ಪಾತ್ರ ತೀರಾ ಗೌಣವಾಗಿ ಗೋಚರಿಸುತ್ತದೆ. ಆದರೆ ಅವರು ಬೀರುವ ಪ್ರಭಾವ. ಈ ಕಾದಂಬರಿ ಪ್ರಪಂಚದ ಮೇಲೆ ಅವರಿಟ್ಟುಕೊಂಡಿರುವ ಹಿಡಿತ ಅಗಾಧವಾಗಿರುವುದು ಎಚ್ಚರಿಕೆಯಿಂದ ಓದಿದರೆ ಗೊತ್ತಾಗುತ್ತದೆ. ಜೋಯಿಸರ ಪಾತ್ರ ಏಕಮುಖವಾಗಿದ್ದು ಶೋಷಣೆಗೆ ಪ್ರತಿನಿಧಿಯಾಗಿದೆ. ಅದನ್ನು ಮಾದರಿಯಾಗಿ ಚಿತ್ರಿಸುವುದೇ ಕಾದಂಬರಿಕಾರರ ಉದ್ದೇಶವಾಗಿದೆ. ಮಾದರಿಪಾತ್ರ ಸಾಮಾಜಿಕ ಚರಿತ್ರೆಗೆ ಸಂಕೇತ. ಗಾಢಚಾರಿತ್ರಿಕ ಹಿನ್ನೆಲೆಯಿಂದಲೂ ಪ್ರಜ್ಞೆಯಿಂದಲೂ ಸಮಾಜದ ದೊಡ್ಡ ದಾಖಲಾಗುವಂಥ ನಿಬಿಡ ವಾಸ್ತವ ಚಿತ್ರಣವುಳ್ಳ ಕಾದಂಬರಿಗಳನ್ನು ಕನ್ನಡದಲ್ಲಿ ರಚಿಸಿದವರು ಕುವೆಂಪು.

'ಚಂದ್ರಯ್ಯಗೌಡರ ದರ್ಬಾರು' ಎಂಬ ಅಧ್ಯಾಯದಲ್ಲಿ ವೆಂಕಪ್ಪಯ್ಯ ಜೋಯಿಸರ ದರ್ಶನವಾಗುತ್ತದೆ. ಅವರ ವೇಷ ಭೂಷಣಗಳಲ್ಲಿ ವರ್ಣಿಸಿ. ಇವರ ಉದ್ಯೋಗಗಳಲ್ಲಿ ಮುಖ್ಯವಾದುವೆಂದರೆ ದೇವರ ಪೂಜೆ, ನಿಮಿತ್ತ ನೋಡುವುದು, ಲಗ್ನಕ್ಕೆ

ಮುಹೂರ್ತ ಇಟ್ಟುಕೊಡುವುದು. ಶೂದ್ರರ ಭೂತಾದಿಗಳಿಗೆ ರಕ್ತದ ಬಲಿ ಕೊಡುವ ಮೊದಲು ಹಣ್ಣು, ಕಾಯಿ ಮಾಡುವುದು, ಮಂತ್ರದಿಂದ ದೆವ್ವಗಳನ್ನು ಬಿಡಿಸುವುದು ಮತ್ತು ಹಿಡಿಸುವುದು, ಇತ್ಯಾದಿ. ಆದ ಕಾರಣ ಹಳ್ಳಿಯವರಿಗೆಲ್ಲ ಅವರನ್ನು ಕಂಡರೆ ಭಯ ಭಕ್ತಿ[1] ಎಂದು ಪಾತ್ರ ವಿಶಿಷ್ಟತೆಯನ್ನು ಕಾದಂಬರಿಕಾರರು ಸೂಚಿಸುತ್ತಾರೆ. ಈ ಅಂಶಗಳನ್ನು ಕಾದಂಬರಿಯಲ್ಲಿ ಜೋಯಿಸರು ಮಾಡಿ ತೋರಿಸುತ್ತಾರೆ.

ಮೈಸೂರಿನಿಂದ ಬೇಸಿಗೆ ರಜಾಕ್ಕೆ ಹಿಂದಿರುಗಿದ ಹೂವಯ್ಯ ತುಂಗಾ ನದಿ ದಾಟಿದ ನಂತರ ರಾಮಯ್ಯ ಮುಂತಾದವರೊಂದಿಗೆ ಗಾಡಿಯಲ್ಲಿ ಹೋಗುತ್ತಿದ್ದಾಗ, ಗಾಡಿ ಬಿದ್ದು, ಆತನ ಬೆನ್ನಿಗೆ ಟ್ರಂಕು ತಗುಲಿ ನೋವಾಗಿ ದಾರಿಯಲ್ಲಿ ಸಿಕ್ಕಿದ ನೆಂಟರ ಮನೆ ಮುತ್ತಳ್ಳಿಯಲ್ಲಿ ಉಳಿದುಕೊಂಡಿದ್ದಾನೆ. ಶ್ಯಾಮಯ್ಯ ಗೌಡರಿಂದ ದುಡ್ಡು ಬರಮಾಡಿಕೊಳ್ಳುವ ಉದ್ದೇಶದಿಂದ ಅಲ್ಲಿಗೆ ಜೋಯಿಸರು ಬರುತ್ತಾರೆ. "ಜೋಯಿಸರಿಗೆ ಜಗಲಿಯ ಮೇಲೆ ಮಲಗಿದ್ದ ಹೂವಯ್ಯನನ್ನು ನೋಡಿದ ಕೂಡಲೇ ಒಂದು ವಿಧವಾದ ಜುಗುಪ್ಸೆಯಾಯಿತು. ಏಕೆಂದರೆ, ಅವನು ತಮ್ಮ ವ್ಯಾಪಾರಕ್ಕೆ ಮೂಲ ಧನದಂತಿದ್ದ ಹಳ್ಳಿಗರ ಮೌಢ್ಯವನ್ನು ನಿವಾರಿಸಲು ಮಾಡುತ್ತಿದ್ದ ಪ್ರಯತ್ನವು ಜೋಯಿಸರ ಭಾಗಕ್ಕೆ ಅಸಹನೀಯವಾಗಿತ್ತು. ಅದೂ ಅಲ್ಲದೆ ಬ್ರಾಹ್ಮಣರಾದ ತಮಗಿಂತಲೂ ಶೂದ್ರನಾದ ಅವನಿಗೇ ಉಪನಿಷತ್ತು ಭಗವದ್ಗೀತೆ ಮೊದಲಾದವುಗಳ ಪರಿಚಯವೂ ಜ್ಞಾನವೂ ಹೆಚ್ಚಾಗಿದೆ ಎಂಬುದು. ಇತರರಿಗೆ ತಿಳಿಯಲು ಸಾಮರ್ಥ್ಯವಿಲ್ಲದಿದ್ದರೂ ಜೋಯಿಸರಿಗೆ ಚೆನ್ನಾಗಿ ತಿಳಿದಿತ್ತು. ಆದ್ದರಿಂದ ಅವನ ವಿಷಯದಲ್ಲಿ ಒಂದು ತೆರನಾದ ಭಯವೂ ಇತ್ತು" (೧೧೪). ನೋವಿನಿಂದ ನರಳುತ್ತಿದ್ದ ಹೂವಯ್ಯನನ್ನು ನೋಡಿ ಜೋಯಿಸರು ಮಂತ್ರ ಹಾಕಿಸಿ ಪೂಜೆ ಮಾಡಿಸಿದರೆ ಗುಣವಾಗುತ್ತದೆಂದು ಶಾಮಯ್ಯಗೌಡರಿಗೆ ತಿಳಿಸುತ್ತಾರೆ. ಹೂವಯ್ಯ ಜೋಯಿಸರನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. "ನೀವು ತಿಳಿದವರೆಂದುಕೊಂಡು ಹಳ್ಳಿಯವರಿಗೆ ಮೌಢ್ಯವನ್ನೇ ಉಪದೇಶಮಾಡಿ. ನಿಮಿತ್ತ ಹೇಳುವುದು, ವಿಭೂತಿ ಕೊಡುವುದು ಸತ್ಯನಾರಾಯಣವ್ರತ ಮಾಡಿಸುವುದು, ದೆವ್ವ ಪಿಶಾಚಿಗಳಿಗೆ ಬಲಿಕೊಡಿಸುವುದು, ಇದರಿಂದ ಹೊಟ್ಟೆ ಹೊರೆದುಕೊಳ್ಳುತ್ತಿದ್ದೀರಿ. ಟ್ರಂಕು ತಗುಲಿ ಬೆನ್ನು ನೋವಾಗಿದ್ದರೆ ಔಷಧಿ ಮಾಡಿ ಎಂದು ಹೇಳುವ ಬದಲು ಬೂದಿ ಕುಂಕುಮ ಹಚ್ಚಿ, ಮಂತ್ರ ಹಾಕಿಸಿ ಎಂದು ಹೇಳುತ್ತಿದ್ದೀರಲ್ಲಾ ! ಇದು ಯಾವ ತತ್ವ ಶಾಸ್ತ್ರದಲ್ಲಿ ಹೇಳಿದೆ ? ಹಾಗೆ ಹೇಳಿರುವ ಗ್ರಂಥಗಳಿದ್ದರೆ ಅವು ಮನ್ನಣೆಗೆ ಯೋಗ್ಯವಾದುವೆ ? ನಿಮ್ಮ ಬೋಧನೆಯಿಂದ ಎಷ್ಟು ಜನರು ರೋಗಕ್ಕೆ ಸರಿಯಾಗಿ ಮದ್ದು ಮಾಡದೆ, ಬರಿಯ ಬೂದಿ ವಿಭೂತಿಗಳನ್ನೇ ಹಚ್ಚಿಕೊಂಡು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ...."

---

1 'ಕಾನೂರು ಹೆಗ್ಗಡಿತಿ', ಐದನೆಯ ಮುದ್ರಣ, ೧೯೭೦, ಪು. ೬೯. ಮುಂದಿನ ಪುಟಸಂಖ್ಯೆಗಳು ಈ ಮುದ್ರಣಕ್ಕೆ ಅನ್ವಯಿಸುತ್ತವೆ.

(ಪು. ೧೧೫). ಮಾತಿನ ಮೊದಲರ್ಧ ನಿಜವಾದರೂ ಇಂದು ಕೊನೆಯರ್ಧ ಬದಲಾಗಿದೆ. ಜನರಿಗೆ ಜೋತಿಷ್ಯದಲ್ಲಿ ನಂಬಿಕೆಯಿದ್ದರೂ ಕಾಯಿಲೆಯಾದಾಗ ಆಸ್ಪತ್ರೆಗೆ ಹೋಗುವಷ್ಟು ತಿಳಿವಳಿಕೆ ಬಂದಿದೆ. ಇದನ್ನು ‘ಹತ್ತು ವರ್ಷಗಳಾದ ಮೇಲೆ’ ಎಂಬ ಕಟ್ಟಕಡೆಯ ಅಧ್ಯಾಯದಲ್ಲಿ ಕಾದಂಬರಿಕಾರರು ಸ್ಪಷ್ಟಪಡಿಸಿದ್ದಾರೆ (ಪು. ೬೩೯).

ಹೂವಯ್ಯನಿಗೆ ವೆಂಕಪ್ಪಯ್ಯ ಜೋಯಿಸರ ಮೇಲೆ ವೈಯುಕ್ತಿಕ ದ್ವೇಷವಿಲ್ಲ (ಪು. ೧೧೫), ಆತ ಖಂಡಿಸುವುದೂ ದ್ವೇಷಿಸುವುದೂ ಜೋಯಿಸರ–ಅರ್ಥಾತ್ ಆ ವರ್ಗದವರ–ಶೋಷಣಾಭರಿತ ಬುದ್ಧಿಯನ್ನು. ಹೂವಯ್ಯ ಜೋಯಿಸರನ್ನು ಗೌರವಿಸುವುದು ಕೇವಲ ಸಭ್ಯತೆಯ ಹೊರತು ಅವರು ಮಾಡುವ ಸುಲಿಗೆಯ ಬಗ್ಗೆ ಸಹಾನುಭೂತಿಯಿಂದಲ್ಲ (ಪು. ೧೧೪). ಕಾದಂಬರಿಯಲ್ಲಿ ಸಂಪ್ರದಾಯಕ್ಕೂ ಆಧುನೀಕತೆಗೂ ಘರ್ಷಣೆ ಉಂಟಾಗುತ್ತದೆ. ಹಿರಿಯರಾದ ಸಿಂಗಪ್ಪಗೌಡರೂ ಶ್ಯಾಮಯ್ಯ ಮತ್ತು ಚಿನ್ನಯ್ಯ ಹೂವಯ್ಯನನ್ನು ಬೆಂಬಲಿಸುತ್ತಾರೆ. ಇದು ಅವಿಚಾರಕ್ಕೂ ಸುವಿಚಾರಕ್ಕೂ ನಡೆಯುವ ತಿಕ್ಕಾಟ. ಮುಪ್ಪು ಮತ್ತು ಯೌವ್ವನಗಳ ನಡುವಣ ನಿರಂತರ ಘರ್ಷಣೆಯ ಸಂಕೇತ. ಕೊನೆಗೆ ಅವಿಚಾರ ಸುವಿಚಾರಕ್ಕೆ ಮಣಿಯುವುದನ್ನೂ ಹೊಸ ಜನಾಂಗ ಹಳೆಯ ಜನಾಂಗದ ಮೇಲೆ ವಿಜಯ ಸಾಧಿಸುವುದನ್ನೂ ಕಾದಂಬರಿ ವೈಭವೀಕರಿಸುತ್ತದೆ.

ಕಾನೂರು ಚಂದ್ರಯ್ಯಗೌಡರು, ಮುತ್ತಳ್ಳಿ ಶಾಮಯ್ಯಗೌಡರು, ಸೀತೆಮನೆ ಸಿಂಗಪ್ಪಗೌಡರು, ಕೆಳಕಾನೂರು ಅಣ್ಣಯ್ಯಗೌಡರು ಮುಂತಾದ ಮೇಲುವರ್ಗಕ್ಕೆ ಸೇರಿದ ಜನರಿಂದ ಹಿಡಿದು ಅತ್ಯಂತ ಕೆಳವರ್ಗದ ಮಂದಿಯವರೆಗೂ ವೆಂಕಪ್ಪಯ್ಯ ಜೋಯಿಸರ ಪ್ರಭಾವ ತಾನೇತಾನಾಗಿ ಪ್ರಬಲವಾಗಿ ಹರಡಿಕೊಂಡಿವೆ. ವ್ಯವಸ್ಥೆಯ ಮೇಲೆ ಅವರ ಆಕ್ಟೋಪಸ್ ಹಿಡಿತ ಅಸಾಧಾರಣವಾಗಿದೆ. ಬದುಕಿನ ಪ್ರತಿಯೊಂದು ವಿಷಯದಲ್ಲೂ ಅವರ ಸಲಹೆ ಕೇಳುವುದು, ಅವರು ಹೇಳಿದಂತೆ ನಡೆದುಕೊಳ್ಳುವುದಷ್ಟೇ ಆ ಬ್ರಾಹ್ಮಣರ ಕರ್ತವ್ಯ ಮತ್ತು ಧರ್ಮವಾಗಿ ಬಿಟ್ಟಿದೆ. ಅವರ ಪಂಚಾಗ ಆದೇಶಿಸಿದಂತೆ ತಂದೆ ತಾಯಿಗಳು ತಮ್ಮ ಮಕ್ಕಳ ಮದುವೆಯನ್ನು ನೆರವೇರಿಸುತ್ತಾರೆ. ಇದರಲ್ಲಿ ವಧುವಿನ ಅಥವಾ ವರನ ಅಭಿಪ್ರಾಯಕ್ಕೆ ಬೆಲೆಯಿಲ್ಲ. ಪರಸ್ಪರ ಪ್ರೇಮಿಸಿದ್ದ ಹೂವಯ್ಯ ಸೀತೆಯರಿಗೆ ನಡೆಯಬೇಕಾಗಿದ್ದ ಮದುವೆಯನ್ನು ತಪ್ಪಿಸುವುದರಲ್ಲಿ ಪುರೋಹಿತಶಾಹಿಯ ಕೊಳಕು ನಡತೆ ಹೇಯವಾಗಿ ಪ್ರಕಟಗೊಳ್ಳುತ್ತದೆ. “ವೆಂಕಪ್ಪಯ್ಯ ಜೋಯಿಸರ ಅಂತರಂಗದಲ್ಲಿ ಹೂವಯ್ಯನ ಮೇಲೆ ಮಹಾ ರೌರವರೋಷವಿತ್ತು. ಅವನು ಪೌರೋಹಿತ್ಯವನ್ನು ನಿಂದಿಸಿ ಜನರಲ್ಲಿ ತಮ್ಮ ಲಾಭಕ್ಕೆ ವಿರೋಧವಾಗಿ ಚಳುವಳಿ ಮಾಡುತ್ತಿದ್ದರಿಂದ ಅವನನ್ನು ಕಂಡರೆ ಮುಂಗುಸಿಯನ್ನು ಕಂಡ ಸರ್ಪದಂತೆ ಬುಸುಗುಡುತ್ತಿದ್ದರು. ಆದ್ದರಿಂದ ಅವರು ಸಿಂಗಪ್ಪಗೌಡರ ದಾನ ದಕ್ಷಿಣೆಗಳನ್ನು ಸಂತೋಷದಿಂದ ಸ್ವೀಕರಿಸಿದರೂ ಅವರ ಇಷ್ಟವನ್ನು ನೆರವೇರಿಸಲು ಮನಸ್ಸು ಮಾಡಲಿಲ್ಲ. ಅದಕ್ಕೆ ಬದಲಾಗಿ ಚಂದ್ರಯ್ಯಗೌಡರ ಬಳಿಗೆ ಗುಟ್ಟಾಗಿ ಹೋಗಿ ನಡೆದ

ಸಂಗತಿಯನ್ನೆಲ್ಲ ತಿಳಿಸಿದರು. ಗೌಡರು ಜ್ವಾಲಾಮುಖಿ ಅಗ್ನಿಜಲವನ್ನು ಕಾರುವಂತೆ ಸಿಂಗಪ್ಪಗೌಡರ ಮೇಲೆ ಕ್ರೋಧ ನಿಂದೆಗಳನ್ನು ಕಾರಿ ಜೋಯಿಸರಿಗೆ ಸಿಂಗಪ್ಪಗೌಡರು ಕೊಟ್ಟುದಕ್ಕೆ ಇಮ್ಮಡಿಯಾಗಿ ದಾನದಕ್ಷಿಣೆಗಳನ್ನು ಕೊಟ್ಟು ಅವರ ಮನಸ್ಸನ್ನು ಸಂಪೂರ್ಣವಾಗಿ ತಮ್ಮ ಕಡೆಗೆ ಒಲಿಸಿಕೊಂಡು ಬೀಳ್ಕೊಟ್ಟರು" (ಪು. ೪೧೪-೫). "ಮುಂಗುಸಿಯನ್ನು ಕಂಡ ಸರ್ಪದಂತೆ" ಎಂಬ ಹೋಲಿಕೆ ಹಳೆಯದಾದರೂ ಅರ್ಥ ಪೂರ್ಣವಾಗಿದೆ. ಸರ್ಪದ ವಿಷ ಪ್ರಾಣಹಾನಿಯಾಗಿರುವಂತೆ ಪುರೋಹಿತಶಾಹಿ ಸಮಾಜದ ಪ್ರಗತಿಗೆ ಕಂಟಕಕಾರಿಯಾಗಿದೆ. ಆದರಂತೆ ಇದೂ ವರ್ಜ್ಯ. ಸರ್ಪ ಮುಂಗುಸಿಯ ಮೇಲೆ ಎಷ್ಟೇ ಮಸಲತ್ತು ಮಾಡಿದರೂ ಕೊನೆಗೆ ಅದು ಮುಂಗುಸಿಗೆ ಬಲಿಯಾಗುತ್ತದೆ. ಮುಂಗುಸಿ ವಿಜಯ ಸಾಧಿಸುತ್ತದೆ. ಹೂವಯ್ಯ ವೆಂಕಪ್ಪಯ್ಯ ಜೋಯಿಸರ ಮೇಲೆ ಅಂತಿಮವಾಗಿ ದಿಗ್ವಿಜಯ ಸಾಧಿಸುತ್ತಾನೆ, ಎಂಬುದು ಧ್ವನಿ ಮಯವಾಗಿದೆ. "ಜ್ವಾಲಾಮುಖಿ ಅಗ್ನಿಜಲವನ್ನು ಕಾರುವಂತೆ" ಭೂವಿಜ್ಞಾನದಿಂದ ಹೋಲಿಕೆ. ಲಾವಾರಸಕ್ಕೆ ಸಿಕ್ಕಿದ್ದು ನಿರ್ನಾಮವಾಗುವಂತೆ ಚಂದ್ರಯ್ಯ ಗೌಡರ ಕೋಪಾನಲಕ್ಕೆ ಸಿಕ್ಕಿದವರೆಲ್ಲ ತೊಂದರೆಪಡುತ್ತಾರೆ. ಅರಿಷಡ್ವರ್ಗಗಳಿಗೆ ತುತ್ತಾದ ಗೌಡರ ಇಡೀ ಬದುಕನ್ನು ಜ್ವಾಲಾಮುಖಿ ರೂಪಕ ಸಮರ್ಥವಾಗಿ ಅಭಿ ವ್ಯಕ್ತಿಸುತ್ತದೆ.

ಗಾಯದ ಹುಲಿ ಹೊಡೆಯಲು ಹೋಗಿ ಅದಕ್ಕೆ ಬಲಿಯಾದ (ಪು. ೨೯೩-೬, 'ಆ ಹುಲಿ !' ಅಧ್ಯಾಯ ನೋಡಿ) ತಮ್ಮ ಮಗ ಕೃಷ್ಣಪ್ಪನಿಗೆ ಗೊತ್ತಾಗಿದ್ದ ಹೆಣ್ಣು, ಸೀತೆಯನ್ನು ತಮ್ಮ ಹೆಂಡತಿಯ ಅಕ್ಕನ ಮಗನಾದ ಹೂವಯ್ಯನಿಗೆ ಹೇಗಾದರೂ ಸರಿ ಮದುವೆ ಮಾಡಿಸಬೇಕೆಂದು ನಾನಾ ಹುನಾರುಗಳನ್ನು ಹಾಕಿ ಸಿಂಗಪ್ಪಗೌಡರು ಸರ್ವ ಪ್ರಯತ್ನಪಟ್ಟರೂ ಸಫಲರಾಗುವುದಿಲ್ಲ. "ಜೋಯಿಸರು ಹೂವಯ್ಯ ಸೀತೆಯರಿಗೆ ಜಾತಕ ಎಷ್ಟುಮಾತ್ರವೂ ಬರುವುದಿಲ್ಲವೆಂದೂ ಕಂಟಕಗಳಿಂದ ತುಂಬಿದೆಯೆಂದೂ ರಾಮಯ್ಯ ಸೀತೆಯರಿಗೆ ಉತ್ತಮವಾಗಿ ಜಾತಕ ಬರುತ್ತದೆ ಎಂದೂ ಶಾಮಯ್ಯ ಗೌಡರಿಗೆ ತಿಳಿಸಿದರು. ಅದನ್ನು ಕೇಳಿ ಮಗಳ ಯೋಗಕ್ಷೇಮವೇ ವಿವಾಹದ ಹೆಗ್ಗುರಿ ಯೆಂದು ಗೌರಮ್ಮನವರೂ ಗಂಡನ ಮಾತಿಗೆ ಎದುರು ಹೇಳಲಿಲ್ಲ" (ಪು. ೪೧೫).

ಈ ಸಂದರ್ಭದ ನಿರೂಪಣೆ, ಉಳಿದ ಸಂದರ್ಭಗಳಲ್ಲಿ ಬರುವಷ್ಟೆ, ಸಂಕೀರ್ಣ ವಾಗಿ ಸೂಕ್ಷ್ಮವಾಗಿ ಬಂದಿದೆ. ಸಿಂಗಪ್ಪಗೌಡರದಾಗಲಿ, ಚಂದ್ರಯ್ಯಗೌಡರದಾಗಲಿ, ಶ್ಯಾಮಯ್ಯಗೌಡರದಾಗಲಿ, ಕೊನೆಗೆ ವೆಂಕಪ್ಪಯ್ಯ ಜೋಯಿಸರದಾಗಲೀ ತಪ್ಪಿಲ್ಲ ವೆಂದು ಕಂಡುಬರುವಂತೆ ಅತ್ಯಂತ ಕಲಾತ್ಮಕವಾಗಿ ಮೂಡಿದೆ.

ಜೋಯಿಸರ ಸ್ವಾರ್ಥಪರ ಕುತಂತ್ರದಿಂದ ಹಲವಾರು ಜೀವಗಳು ದುರಂತಕ್ಕೆ ಗುರಿಯಾಗುತ್ತವೆ. ಸೀತೆಗೆ, "ಎಲ್ಲವೂ ಹೆಣ್ಣು ಕೇಳುವವರ, ಕೊಡುವವರ ಮತ್ತು ಜೋಯಿಸರ ಕೈಯಲ್ಲಿದೆ ಎಂಬುದು....ಇನ್ನೂ ಗೊತ್ತಾಗಿರಲಿಲ್ಲ" (ಪು. ೨೨೬). ಕೃಷ್ಣಪ್ಪಗೌಡನಿಗೆ ತನ್ನನ್ನು ಕೊಟ್ಟು ಮದುವೆ ಮಾಡುತ್ತಾರೆಂದು ತಿಳಿದ ಮೇಲೆ

ಭಯಂಕರ ಮನೋರೋಗಿಯಾಗುತ್ತಾಳೆ (ಪು. ೨೬೬-೨೭೨). ಅವಳ ಮುಗ್ಧ ಸ್ವಭಾವದ ಹಿನ್ನೆಲೆ, ಭಾವನಾತ್ಮಕ ಪ್ರಕೃತಿಯು ನೈಜ ಚಿತ್ರಣ ಮನೋವಿಜ್ಞಾನದ ಆಳವಾದ ತಿಳಿವಿನಿಂದಲೂ ಮಾನವ ಸ್ವಭಾವದ ನಿಕಟ ಪರಿಚಯದಿಂದಲೂ ಸುಂದರವಾಗಿ ನಿರೂಪಿತವಾಗಿದೆ. ಸೀತೆ ನೋವಿನಿಂದ 'ಕೃಷ್ಣಪ್ಪಗೌಡ ಸಾಯಲಿ !' ಎಂದುದಕ್ಕೆ ಆತ ಸಾಯುವುದಿಲ್ಲ. ಆತ ಸಾಯುವುದಕ್ಕೆ ಕಾರಣಗಳನ್ನೂ ಸಂಗತಿಗಳನ್ನೂ ವಿವರ ವಿವರವಾಗಿ 'ಆ ಹುಲಿ !' ಅಧ್ಯಾಯದಲ್ಲಿ ಬಿಡಿಸಿದ್ದಾರೆ. ಆದರೆ 'ವಾಟು' ಕಾದಂಬರಿಯಲ್ಲಿ ವೆಂಕಟರಮಣಯ್ಯನು ಕೊಟ್ಟ ಶಾಪದಿಂದ ಶ್ರೀನಿವಾಸನ ಹೆಂಡತಿಗೆ ಗರ್ಭಸ್ರಾವವಾಗುತ್ತದೆ ! 'ಅವಸ್ಥೆ' ಕಾದಂಬರಿಯಲ್ಲಿ ಕೃಷ್ಣಪ್ಪಗೌಡ ಹಾಕಿದ ಶಾಪದಿಂದ ಹೋಟೆಲು ಸುಟ್ಟುಹೋಗುತ್ತದೆ ! ಈ ಇಬ್ಬರು ಲೇಖಕರೂ ಆ ಘಟನೆಗಳು ನಡೆಯಲು ಬೇಕಾದ ಅನಿವಾರ್ಯ ಭೌತಿಕ ವಿವರಗಳನ್ನು ನೀಡುವುದಿಲ್ಲ. ಇವೆರಡೂ ಅವೈಜ್ಞಾನಿಕ ಧೋರಣೆಗಳು, ಮೂಲತಃ ಒಂದೇ ನೆಲೆಯಿಂದ ಸೆಲೆಯೊಡೆದವು. ಕೃಷ್ಣಪ್ಪಗೌಡ ಸತ್ತ ಅನಂತರ ಹೂವಯ್ಯನನ್ನು ಮದುವೆಯಾಗುತ್ತೇನೆಂದು ಭಾರಿ ಆಶಾಭಾವದಿಂದಿದ್ದ ಸೀತೆಗೆ, ರಾಮಯ್ಯನಿಗೆ ತನ್ನನ್ನು ಕೊಟ್ಟು ಲಗ್ನಮಾಡುತ್ತಾರೆಂದು ಗೊತ್ತಾದ ಮೇಲೆ ಜೀವಶವವಾಗಿ ಬಿಡುತ್ತಾಳೆ. ವಿವಾಹದ ದಿನ "ಸಾಲಂಕೃತ ಶವವನ್ನು ಹೊತ್ತುಕೊಂಡು ಬಂದು ಅಪ್ಪಕೊಟ್ಟು ನಿಲ್ಲಿಸುವಂತೆ ಸೀತೆಯನ್ನು ಹೊತ್ತು ತಂದು ರಾಮಯ್ಯನ ಪಕ್ಕದಲ್ಲಿ, ನಿಲ್ಲಿಸಲಿಲ್ಲ, ಹಿಡಿದುಕೊಂಡು ನಿಂತರು" (ಪು.೪೮೦). ತನ್ನ ತಂದೆ ಮಾಡುತ್ತಿದ್ದ ಅನ್ಯಾಯವನ್ನು ಪ್ರತಿಭಟಿಸಲು ಶಕ್ತಿಯಿಲ್ಲದೆ ಹಾಗೂ ಸೀತೆಯಂಥ ಸುಂದರ ಕನ್ಯೆಯನ್ನು ಪಡೆಯುವ ಪ್ರಲೋಭನೆಯಿಂದ ತಪ್ಪಿಸಿಕೊಳ್ಳಲಾಗದೆ ನಾನಾ ಮಾನಸಿಕ ಯಾತನೆಗಳನ್ನು ತೀವ್ರತಮವಾಗಿ ಅನುಭವಿಸುತ್ತಿದ್ದ ರಾಮಯ್ಯನಿಗೆ ಸೀತೆಯು ಶವಸ್ಥಿತಿಯನ್ನು ಕಂಡು ಬವಳಿ ಬಂದಂತಾಗಿ ಕೈಗೆ ಕೊಟ್ಟಿದ್ದ ತಾಳಿಯನ್ನು ನೆಲಕ್ಕೆ ಬೀಳಿಸಿದಾಗ ಜೋಯಿಸರು ಎತ್ತಿಕೊಂಡು "ರಾಮಯ್ಯನ ಕೈಗೆ ಮುಟ್ಟಿಸಿ ಸೀತೆಯ ಕುತ್ತಿಗೆಗ ತಾವೇ" (ಪು.೪೮೩) ಕಟ್ಟುತ್ತಾರೆ ! ಸೀತೆ ತನ್ನ ಇಚ್ಛೆಗೆ ವಿರುದ್ಧವಾಗಿ ಬಲವಂತಕ್ಕೆ ಮದುವೆಯಾಗಿ ನರಕ ಶಿಕ್ಷೆ ಮತ್ತು ಯಮ ಯಾತನೆಯನ್ನು ಅನುಭವಿಸುತ್ತಾಳೆ. ಅವಳ ಮನೋರೋಗದ ಕಾರಣ ಮತ್ತು ರಹಸ್ಯವನ್ನು ಅರಿತುಕೊಳ್ಳಲಾರದೆ ಜೋಯಿಸರ ಬುದ್ಧಿವಾದದ ಪ್ರಕಾರ ಅವಿವೇಕಿಯಾದ ಚಂದ್ರಯ್ಯಗೌಡರು ಅವಳಿಗೆ ತಮ್ಮ ಕಡುವೈರಿ ಸಿಂಗಪ್ಪಗೌಡರ ಮಗ ಕೃಷ್ಣಪ್ಪಗೌಡನ ದೆವ್ವ ಹಿಡಿದಿದೆ ಎಂದು ಅದನ್ನು ಬಿಡಿಸಲು ಬರೆ ಹಾಕುತ್ತಾರೆ (ಪು. ೫೫೩ ; ೫೫೮-೯) ; ದೇವಸ್ಥಾನ ಮತ್ತು ಧರ್ಮಸ್ಥಳಗಳಿಗೆ ತೀರ್ಥಯಾತ್ರೆ ಹೋಗಿ ಬರುತ್ತಾರೆ (ಪು. ೫೦೨-೯). ಆದರೂ ಸೀತೆಯ ರೋಗ ಗುಣವಾಗದೆ ಉಲ್ಬಣಿಸುತ್ತದೆ. ತೌರಿಗೆ ಹೋದವಳು ಹಿಂದಿರುಗುವುದಿಲ್ಲ. ರಾಮಯ್ಯನಿಗೆ ತನ್ನ ತಪ್ಪು ಹೆಚ್ಚು ಹೆಚ್ಚಾಗಿ ಅರ್ಥವಾದಂತೆ ಪಾಪಭಾವನೆ ಗಾಢವಾಗಿ, ಬದುಕು ನಿಸ್ಸಾರವಾಗಿ ಆತ್ಮಹತ್ಯೆ ಮಾಡಿಕೊಳ್ಳಲು ಅನೇಕ ಸಾರಿ

ಪ್ರಯತ್ನಿಸಿ, ಕೊಟ್ಟ ಕೊನೆಗೆ, ತನ್ನ ಚಿಕ್ಕಮ್ಮ ವಿಧವೆಯಾದ ಸುಬ್ಬಮ್ಮ ಕದ್ದು, ಬಸುರಿಯಾಗಿ, ವಿಷಕುಡಿದು ಮಗು ಹೆತ್ತು, ಸತ್ತ ರಾತ್ರಿ. ಆತ್ಮಹತ್ಯೆ ಮಾಡಿ ಕೊಳ್ಳುತ್ತಾನೆ. ಇಷ್ಟು ಸಾಲದೆಂಬಂತೆ ಜೋಯಿಸರು "ಮನೆಯಲ್ಲಿ ಮುಟ್ಟುಚಿಟ್ಟು" (ಪು. ೬೧೦) ನಡೆಯುತ್ತದೆಂದು ಶಾಂತಿ ಮಾಡಿಸುತ್ತಾರೆ.

ವೆಂಕಪ್ಪಯ್ಯ ಜೋಯಿಸರ ದುರ್ಬೋಧನೆಯು ನೂತು ಚಂದ್ರಯ್ಯಗೌಡ ಮುಂತಾದ ಶೂದ್ರರಿಗೆ 'ವೇದ'ಕ್ಕೆ ಸಮಾನ. ಮುಂದಿನ ಸಂಭಾಷಣೆ ನಮ್ಮ ದೇಶದ ದುರಂತ ಇತಿಹಾಸಕ್ಕೆ ಹಿಡಿದ ಕನ್ನಡಿಯಾಗಿದೆ :

ಬಾಗಿಲು ದಾಟುವುದರೊಳಗೆ ಜೋಯಿಸರು "ನಿಮ್ಮ ಹುಡುಗನಿಗೆ ಒಂದು ತಾಯಿತಿ ಬೇಕೆಂದು ಹೇಳಿದ್ದಿರಿ" ಎಂದರು.

"ಹೌದು ಬೇಕಿತ್ತು" ಎಂದು ಗೌಡರು ಜೋಯಿಸರೊಡನೆ ಹೆಬ್ಬಾಗಿಲ ಕಡೆಗೆ ಹೊರಟರು. "ಹೋದ ವರ್ಷ ಒಂದು ಕಟ್ಟಿದ್ದೆ..."

"ಏನು ಮಾತಾಡೋದು ಹೇಳಿ. ನಮ್ಮ ಹೂವಯ್ಯ ಹೋದ ರಜಾದಲ್ಲಿ ಬಂದವನು ಏನೇನೋ ಬೋಧಿಸಿ ಹೋಗಿದ್ದ. ಅವನ ಮಾತು ಕೇಳಿ ತಾಯಿತಿ ಕಿತ್ತು ಬಿಸಾಡಿ ಬಿಟ್ಟಿದ್ದಾನೆ."

"ನಾನು ಹೇಳಿದ್ದೆ ನಿನಗೆ ಮೊದಲೇ, ಈಗಿನ ವಿದ್ಯಾಭ್ಯಾಸ ಹುಡುಗರನ್ನು ಹಾಳು ಮಾಡಿಬಿಡುತ್ತದೆ ಎಂದು ! ದೇವರು ದಿಂಹರು ಭಕ್ತಿ ಗಿಕ್ತಿ ಎಲ್ಲ ನಿರ್ನಾಮ ! ಜೊತೆಗೆ ನೂರಾರು ಹವ್ಯಾಸಗಳನ್ನು ಬೇಗನೆ ಕಲಿತುಬಿಡುತ್ತಾರೆ. ನಿನ್ನ ಮನೆ ಜಮೀನು ಉಳಿಯಬೇಕಾದರೆ ಅವರ ಓದು ನಿಲ್ಲಿಸಿ. ಮದುವೆ ಗಿದುವೆ ಮಾಡಿ ಕೆಲಸಕ್ಕೆ ಹಚ್ಚು. ಸಂಸಾರ ತಲೆಗೆ ತಾಗಿದರೆ ಆಗ ಬುದ್ಧಿ ಬರುತ್ತದೆ."

"ಹಾಂಗೆ ಮಾಡೋದೆ ಸೈ ಅಂತ ಕಾಣ್ತದೆ—ಈಗ ನೋಡಿ ; ಆ ಹೂವಯ್ಯ, ಅವನ ದೆಸೆಯಿಂದ ರಾಮಯ್ಯ, ಇಬ್ಬರೂ ಸೇರಿ ದೆಯ್ಯ ದ್ಯಾವರು ಭೂತ ಗೀತ ಜಕಣಿ ಗಿಕಣಿ ಒಂದೂ ಬ್ಯಾಡ ಅಂತ ಬೋದ್ನೋಕೆ ಸುರುಮಾಡಿದ್ದಾರೆ. ಆ ಹೂವಯ್ಯನಂತೂ ಅದೆಂತಂತದೊ—ಭಗವದ್ಗೀತೆಯಂತೆ ಉಪ್ನಿಷತ್ತಂತೆ—ಓದಿ ತಲೆ ಕೆಡಿಸಿಕೊಳ್ಳುತ್ತಿದ್ದಾನೆ—ಮನೆಗೆ ಬಂದವನು ಒಂದು ಆಳುಕಾಳಿನ ಕೆಲಸ ಕೂಡ ನೋಡೋದಿಲ್ಲ. ಉಪ್ಪರಿಗೆ ಮೇಲೆ ಓದುತ್ತ ಕುಳಿತುಬಿಡ್ತಾನೆ."

"ಹೌದೂ. ದುಡಿದು ಹಾಕುವವರು ಒಬ್ಬರಿದ್ದರೆ ಮತ್ತೇನು ಮಾಡುತ್ತಾನೆ ? ಅವನ ಪಾಲು ಅವನಿಗೆ ಕೊಟ್ಟು ಬೇರೆ ಹಾಕು ! ಆಗೆಲ್ಲ ಸರಿಹೋಗುತ್ತದೆ. ಈ ಶುದ್ಧ ಮಕ್ಕಳಿಗೆ ಉಪನಿಷತ್ತು ಭಗವದ್ಗೀತೆ ಗಂಧವಾದರೂ ಗೊತ್ತಾಗುತ್ತದೆಯೆ ? ನಮಗೇ ಗೊತ್ತಾಗುವುದಿಲ್ಲ..."

ಗೌಡರು ನಗುತ್ತ "ನಿಮಗೆ ಗೊತ್ತಾಗದೆ ಏನು ?"ಎಂದರು.

"ಹಾಗಲ್ಲ, ಚಂದ್ರಯ್ಯ, ನಿನಗೆ ಗೊತ್ತಿಲ್ಲ, ಎಂತೆಂಥ ಆಚಾರ್ಯರೇ ಅವುಗಳಿಗೆ ವ್ಯಾಖ್ಯಾನ ಬರೆಯಲು ತಿಣಿಕಿಬಿಟ್ಟಿದ್ದಾರೆ. ಅವರಲ್ಲಿಯೇ ಏಕಮತವಿಲ್ಲ ... ಈ ಶೂದ್ರ ಮಕ್ಕಳಿಗೆಲ್ಲ ಗೊತ್ತಾಗುತ್ತದೆಯೇ....ಅದನ್ನೆಲ್ಲ ಓದಿ ಮನೆ ಹಾಳು ಮಾಡಿ ಕೊಳ್ಳುತ್ತಾರೆ ; ಅಷ್ಟೇ !...."

"ನಾನು ಅವರನ್ನು ಈ ಸಾರಿ ಓದು ಬಿಡಿಸಿ ಮನೆ ಕೆಲಸಕ್ಕೆ ಹಾಕಬೇಕಂಥ ಮಾಡಿದ್ದೇನೆ," ಎಂದು ಗೌಡರು ನಿಶ್ಚಿತವಾಣಿಯಿಂದ ಸ್ವಲ್ಪ ರಾಗವಾಗಿ ಹೇಳಿದರು.

"ಹಾಗೆ ಮಾಡಿದರೆ ನಿನ್ನ ಮನೆ ಉಳಿಯುತ್ತದೆ ನೋಡು. ದೇವರ ಕೋಪ ಕ್ಕಾದರೂ ಪಾತ್ರರಾಗಬಹುದು—ಏಕೆಂದರೆ, ಅವನು ದಯಾಸಾಗರ, ಕರುಣಾಶಾಲಿ. ಆದರೆ ಈ ಭೂತ ದೆವ್ವಗಳ ಸಿಟ್ಟಿಗೆ ಬಿದ್ದರೆ ಉಳಿಗತಿಯಿಲ್ಲ....ತಿಳಿದವನಿಗೆ ನಿನಗೆ ನಾನೇನು ಹೇಳುವುದು ?"

"ಅಯ್ಯೋ, ಉಂಟೆ ಸ್ವಾಮಿ ? ನೀವಲ್ಲದೆ ಮತ್ತ್ಯಾರು ಹೇಳೋರು ನಮಗೆ" (ಪು. ೭೪–೫).

ವೆಂಕಪ್ಪಯ್ಯ ಜೋಯಿಸರ ಪ್ರತಿ ಮಾತಿನಲ್ಲಿಯೂ ಪುರೋಹಿತ ಶಾಹಿಯ ಮೋಸ, ಕಪಟ, ಸ್ವಾರ್ಥ, ಒಣಪ್ರತಿಷ್ಠೆ, ಶೂದ್ರರ ಮೌಢ್ಯವನ್ನು ಬಂಡವಾಳ ವನ್ನಾಗಿಸಿಕೊಂಡು ಹೊಟ್ಟೆ ಹೊರೆದುಕೊಳ್ಳುವುದು, ಶೂದ್ರರನ್ನು ಅಜ್ಞಾನದ ಕತ್ತಲಲ್ಲೆ ಇಡುವ ಹಿಕಮತ್ತು ಅಚ್ಚೊತ್ತಿ ನಿಂತಿವೆ. ಪುರೋಹಿತಶಾಹಿಯ ಧೂರ್ತತೆ ಯನ್ನೂ ಕ್ರೌರ್ಯವನ್ನೂ ಇಷ್ಟು ವ್ಯಾಪಕವಾಗಿ ಚಿತ್ರಿಸಿರುವ ಭಾರತೀಯ ಕಾದಂಬರಿ ಕಾರರು ಅಪರೂಪ.

ಪುರೋಹಿತವರ್ಗ ನಡೆಸಿದ ಹಾಗೂ ನಡೆಸುತ್ತಿರುವ ದಬ್ಬಾಳಿಕೆಯನ್ನು ಚಿನ್ನಯ್ಯನ ಖಂಡನೆ ಐತಿಹಾಸಿಕವಾಗಿ ಚಿತ್ರಿಸುತ್ತದೆ.

"ಈ ಹಾರುವರ ದೆಸೆಯಿಂದ ನಮಗೆ ಉಳಿಗಾಲವಿಲ್ಲ ! ನಮಗೆ ವಿದ್ಯೆ ಬುದ್ಧಿ ಚೆನ್ನಾಗಿ ಕೊಡಲಿಲ್ಲವಲ್ಲಾ, ಹೋಗಲಿ ! ಒಳ್ಳೊಳ್ಳೆ ಹೆಸರುಗಳನ್ನಾದರೂ ಇಟ್ಟು ಕೊಡಬಾರದೆ ! ಅದಕ್ಕೂ ಹೊಟ್ಟೆಕಿಚ್ಚು ಅಂತಾ ಕಾಣ್ತದೆ. ಕರಿಯ, ಸಿಂಡ, ತಿಮ್ಮ, ಕಾಳ, ಬೋಳ ಇವೇ ನಮ್ಮ ಪಾಲಿಗೆ !" (ಪು. ೬೨೭)

ಹೇಗೆ ಹಾರುವವರ್ಗ ಶೂದ್ರವರ್ಗವನ್ನು ತಲೆತಲಾಂತರದಿಂದ ಅಜ್ಞಾನದಲ್ಲಿಟ್ಟು ದೇಶದ ಶಕ್ತಿಯನ್ನು ತನ್ನ ಸುಖಕ್ಕಾಗಿ ಸ್ವಾರ್ಥಕ್ಕಾಗಿ ಆಪೋಶನ ತೆಗೆದುಕೊಂಡಿದೆ ಎಂಬುದನ್ನು ಕುವೆಂಪು ಅತ್ಯಂತ ಸಾಕ್ಷೀಭೂತವಾಗಿ ಹಿಡಿದಿದ್ದಾರೆ. ಆ ಸುಲಿಗೆಯನ್ನು ತಡೆಗಟ್ಟದಿದ್ದರೆ, ಕೆಳವರ್ಗದ ಜನ ವಿದ್ಯೆ ಮತ್ತು ಜ್ಞಾನಾರ್ಜನೆಯಿಂದ ಎಚ್ಚೆತ್ತು ಕೊಳ್ಳದಿದ್ದರೆ ಉಳಿಗಾಲವಿಲ್ಲವೆಂಬುದನ್ನು ತೀವ್ರ ಕಳಕಳಿಯಿಂದ ಮನನಾಟುವಂತೆ ಎಳೆ ಎಳೆಯಾಗಿ ಬಿಡಿಸಿದ್ದಾರೆ. ಭೂತ, ದೆವ್ವ, ಪಿಶಾಚಿಗಳ ಕುರುಡು ನಂಬಿಕೆಯ ಆಚಾರ ಗಳಲ್ಲಿ ಕೊಳೆಯುತ್ತಿರುವ ಜನರನ್ನು ಮೇಲೆತ್ತಲು ನವಜಾಗೃತಿಯಿಂದ ಬೋಧಿತನಾದ ಮಹಾ ಪ್ರತಿಭಾವಂತ ಹೂವಯ್ಯ ತನ್ನ ಬದುಕನ್ನು ಮೀಸಲಿಡುತ್ತಾನೆ. ಹೂವಯ್ಯ

ಮೊಟ್ಟ ಮೊದಲ ಬಂಡಾಯನಾಯಕ ; ಜನರ ನಿಲುವುಳ್ಳ ಉದಾತ್ತ ಪಾತ್ರ ; ಸಮಗ್ರ ಸಾಂಸ್ಕೃತಿಕ ಕ್ರಾಂತಿಯ ಹರಿಕಾರ.

ಪುರೋಹಿತಶಾಹಿಯ ವ್ಯಗ್ರತೆಯ ಮನೋಭಾವವನ್ನೂ ವರ್ತನೆಯನ್ನೂ 'ಕಾನೂರು ಹೆಗ್ಗಡಿತಿ'ಯಲ್ಲಿ ಕುವೆಂಪು ಅನನುಕರಣೀಯವಾಗಿ ಚಿತ್ರಿಸಿದ್ದಾರೆ. ಪುರೋಹಿತವರ್ಗ ನಡೆಸಿದ ನಡೆಸುತ್ತಿರುವ ದುರಂತಮಯ ಗಂಡಾಂತರಗಳನ್ನೂ ಮೋಸ ವಂಚನೆಗಳನ್ನೂ ಸಂಪೂರ್ಣವಾಗಿ ಸೂರೆ ಮಾಡಿದ್ದಾರೆ. ಅವರ ಕಟು ಟೀಕೆ, ವಿಡಂಬನೆ ಮತ್ತು ಖಂಡನೆ ಚಾರಿತ್ರಿಕ ತಿಳಿವಿನಿಂದಲೂ ಸಾಮಾಜಿಕ ಪ್ರಜ್ಞೆಯಿಂದಲೂ ಮೂಡಿವೆ. ಸಮಾಜ ಉದ್ಧಾರವಾಗಬೇಕೆಂಬ ಆಕಾಂಕ್ಷೆ ನಿಚ್ಚಳವಾಗಿವೆ.

ವೆಂಕಪ್ಪಯ್ಯ ಜೋಯಿಸರನ್ನು ಬಿಟ್ಟರೆ ಈ ಕಾದಂಬರಿಯ ಲೋಕದಲ್ಲಿ ಬದುಕುವ ಚಂದ್ರಯ್ಯಗೌಡ. ಶ್ಯಾಮಯ್ಯಗೌಡ. ಸಿಂಗಪ್ಪಗೌಡ ಮುಂತಾದವರು ಶೂದ್ರರಲ್ಲಿ ಮೇಲುವರ್ಗಕ್ಕೆ ಸೇರಿದವರು. ಈ ಮೂವರು ಗೌಡರುಗಳಲ್ಲಿ ಚಂದ್ರಯ್ಯ ಗೌಡರದೇ ಮೇಲುಗೈ. ಅವರನ್ನು ಎದುರಿಸುವ ಧಾರ್ಷ್ಟ್ಯ ಸಿಂಗಪ್ಪಗೌಡರಿಗೂ ಇಲ್ಲ ; ಆ ಬಗೆಯ ಯೋಚನೆಯನ್ನೂ ಮಾಡಲಾರದಂಥ ಮೃದು ಸ್ವಭಾವದವರು ಶ್ಯಾಮಯ್ಯಗೌಡ. ಆದ್ದರಿಂದ ಅವರನ್ನು ನಿಯಂತ್ರಿಸುವ ದರ್ಪ ಮತ್ತು ಬಲ ಯಾರಿಗೂ ಇಲ್ಲ. ಜೊತೆಗೆ ಅವರು ದೊಡ್ಡ ಲೇವಾದೇವಿಗಾರರು. ಅವರಿಂದ ಸಾಲ ಸೋಲ ತೆಗೆದುಕೊಂಡು ಒಂದಲ್ಲ ಒಂದು ರೀತಿಯಲ್ಲಿ ಅವರ ಹಂಗಿಗೆ ಒಳಗಾದವರೇ ಹೆಚ್ಚು. ಚಂದ್ರಯ್ಯಗೌಡರೇ ಶ್ಯಾಮಯ್ಯಗೌಡರ ಸಾಲಗಾರರಾಗಿದ್ದರೂ (ಪು. ೪೨೧) ಶ್ಯಾಮಯ್ಯಗೌಡರೇ ಅವರಿಗೆ ಅಂಜುತ್ತಾರೆ. ಚಂದ್ರಯ್ಯಗೌಡರು ಹುಟ್ಟಾ ಹಠದ ಸ್ವಭಾವದವರು. ಜೊತೆಗೆ ಅವಿವೇಕ ಬೇರೆ. ಅಕ್ಷರಸ್ಥರಾಗಿದ್ದರೂ ಅವಿದ್ಯಾವಂತ. ಅವರಿಗೆ ಶ್ರೀಮಂತಿಕೆಯಿದ್ದರೂ ಸಂಸ್ಕೃತಿಯಿಲ್ಲ. ಆದ್ದರಿಂದ ಎಲ್ಲಾ ದುರಂತಗಳಿಗೆ ಅವರೇ ಕೇಂದ್ರಬಿಂದುವಾಗುತ್ತಾರೆ. ಸರಿಯಾದ ಮಾರ್ಗದರ್ಶನ ಮಾಡದೆ ವೆಂಕಪ್ಪ ಜೋಯಿಸರು ಅವರನ್ನು ಅಪಮಾರ್ಗದಲ್ಲಿ ನಡೆಸಿ ಭೀಕರ ನೋವು ಸಾವುಗಳ ಮಹಾದುರಂತಕ್ಕೆ ಬೀಜ ಬಿತ್ತುತ್ತಾರೆ.

ಚಂದ್ರಯ್ಯಗೌಡರ ಅನಾಗರಿಕತೆಯನ್ನು ಮೀರಿಸಲು ಯಾರಿಗೂ ಸಾಧ್ಯವಿಲ್ಲ. ಅದು ಹೆಂಡತಿ ಸುಬ್ಬಮ್ಮನನ್ನು ರಾಕ್ಷಸವಾಗಿ ಹೊಡೆಯುವುದರಿಂದ ಹಿಡಿದು ಸೊಸೆ ಕುಸುಮ ಕೋಮಲೆ ಸೀತೆಗೆ ಕೆಂಪಗೆ ಕಾಯಿಸಿದ ಬರೆಗೋಲಿನಿಂದ ಬರೆ ಹಾಕುವವರೆಗೆ ಭಯಂಕರವಾಗಿ ಹರಡಿಕೊಂಡಿದೆ. ಈ ಬರ್ಬರತೆಯಲ್ಲಿ ಸೇರಿರುವ ಕ್ರೂರ ಶೋಷಣೆಯನ್ನು ಗಮನಿಸಬಹುದು.

ಹೊಲ ಉಳುತ್ತಿದ್ದ ಬೈರ ಮತ್ತು ಸಿದ್ದರಲ್ಲಿಗೆ ಹೋಗಿ ಹೂವಯ್ಯ ಮತ್ತು ರಾಮಯ್ಯ ಆರನ್ನು ಒಡಿದುಕೊಳ್ಳುತ್ತಾರೆ. ಹೊಸಬರನ್ನು ಕಂಡು ಎತ್ತುಗಳು ಬೆದರಿ ಎತ್ತಲೋ ಸಿಕ್ಕಾಪಟ್ಟೆ ನುಗ್ಗುತ್ತವೆ. ಪರಿಣಾಮವಾಗಿ ರಾಮಯ್ಯ ಉಳುತ್ತಿದ್ದ

ನೇಗಿಲು ಮುರಿದು ಹೋಗುತ್ತದೆ. ಜೀತದಾಳುಗಳಾದ ಬೈರ ಸಿದ್ದರು ಚಂದ್ರಯ್ಯ ಗೌಡರ ಕೋಪಕ್ಕೆ ನಡುಗುತ್ತಾರೆ. ತಮ್ಮ ಮಗ ಮಾಡಿದ ತಪ್ಪಿಗೆ ನತದೃಷ್ಟ ಜೀತದಾಳುಗಳನ್ನು ಹಿಂಸಿಸುತ್ತಾರೆ. ಬೈರನಿಗೆ ಕಪಾಳಕ್ಕೆ ಬಾರಿಸುತ್ತಾರೆ. ಅವನಿಗೆ ಕೊಟ್ಟಿದ್ದ 'ಪಡಿ'ಯನ್ನು ಬಿಟ್ಟು ಹೋಗುವಂತೆ ಕ್ರೂರವಾಗಿ ನಡೆದುಕೊಳ್ಳುತ್ತಾರೆ (ಪು. ೨೦೭ ಮತ್ತು ಪು. ೨೧೦).

ಚಂದ್ರಯ್ಯಗೌಡರಿಗೆ ನಮ್ಮವರು ತಮ್ಮವರು ಎಂಬ ಮಮಕಾರವಿಲ್ಲ. ಎಲ್ಲಿ ಯಾರು ತಮ್ಮ ಹಿತಾಸಕ್ತಿಗಳಿಗೆ ಅಡ್ಡಿಯಾಗುತ್ತಾರೆಂಬ ಭಾವನೆ ಉಂಟಾಗುತ್ತದೆಯೋ ಅಲ್ಲೆಲ್ಲ ಅವರು ಅಮಾನುಷವಾಗಿ ವರ್ತಿಸುತ್ತಾರೆ. ಬಡವ ಓಬಯ್ಯನನ್ನು ರಕ್ತ ಬರುವಂತೆ ಥಳಿಸುತ್ತಾರೆ (ಪು. ೨೭೪). ಮಗನಿಗೊದಗಿದ ಚಿತ್ರಹಿಂಸೆಯನ್ನು ಕಂಡು ತಬ್ಬಲಿ ಮುದುಕ ಅಣ್ಣಯ್ಯಗೌಡರು ಸಾಲ ತೀರಿಸದೆ ರಾತ್ರೋರಾತ್ರಿ ಕೆಳಕಾನೂರು ಮನೆ ಬಿಟ್ಟು ಹೋಗಲು ನಿರ್ಧರಿಸುತ್ತಾರೆ. ಆದರೆ ಆ ವಿಷಯದಲ್ಲಿಯೂ ಅವರು ಚಂದ್ರಯ್ಯಗೌಡರ ಕ್ರೂರ ಹಿಂಸೆಗೆ ಗುರಿಯಾಗುತ್ತಾರೆ.[2] "ಚಂದ್ರಯ್ಯಗೌಡರು ಕೆಳಕಾನೂರು ಅಣ್ಣಯ್ಯಗೌಡರ ಪಾತ್ರೆ ಪರಟಿ ಸರಕು ಸಾಮಾನು ದನಕರು ಜಾನುವಾರು ಗಳನ್ನೆಲ್ಲ ತಮ್ಮ ಸಾಲಕ್ಕೆ ಮುಟ್ಟುಗೋಲು ಹಾಕಿಕೊಂಡು, ಅಣ್ಣಯ್ಯಗೌಡರನ್ನು ಅವರ ಮಗ ಮತ್ತು ಮಗಳು ಸಮೇತವಾಗಿ ಊರಿನಿಂದ ಹೊರಡಿಸಿದರು. ಅವರ ಕೋಳಿಗಳನ್ನು ಕೂಡ ಬಿಡಲಿಲ್ಲ. ಅವರಿಗೆ ಉಳಿದುದೆಂದರೆ ಕರಿಯ ಬಣ್ಣದ ಕುರೂಪಿ ಯಂತಹ ಅವರ ಕಂತ್ರಿ ನಾಯಿ" (ಪು. ೨೯೦–೧).

ಮಲೆನಾಡಿನ ಗೌಡರ ಸಾಂಸ್ಕೃತಿಕ ಶೂನ್ಯತೆಯನ್ನು ನಿರೂಪಿಸುವ ಘಟನೆಗಳು ಕಾದಂಬರಿಯ ತುಂಬ ಮುಕುರಿಕೊಂಡಿವೆ. ಅವರ ಭಯಂಕರ ಕುಡುಕತನದ ತುಟ್ಟ ತುದಿ 'ಶೂದ್ರಸಂಘದ ಮಹಾಸಭೆ!'ಯಲ್ಲಿ ಎಂಬ ಪರಿಚ್ಛೇದದಲ್ಲಿ ಹೋಲಿಕೆಗೆ ನಿಲುಕದ ರೀತಿಯಲ್ಲಿ ನಗ್ನವಾಗಿ ಮೈ ಪಡೆದಿದೆ.

ಮಲೆನಾಡಿನ ಒಕ್ಕಲಿಗ ಮುಖಂಡರೆಲ್ಲ ಸೇರಿ ಸಾರ್ವಜನಿಕ ಸಭೆಯಲ್ಲಿ ಕಳ್ಳು ಹೆಂಡ ಕುಡಿಯುವುದಿಲ್ಲವೆಂದು ಭಾಷಣ ಮಾಡಿ, ಪ್ರತಿಜ್ಞೆ ಕೈಗೊಂಡು ಮಾನಪತ್ರಕ್ಕೆ ರುಜುಹಾಕಿ ಸಭ್ಯರಾಗಲು ಹವಣಿಸುತ್ತಾರೆ. ಆದರೆ ಹೀನಸುಳಿ ಬೋಳಿಸಿದರೆ ಹೋದೀತೆ ? ಎಂಬಂತೆ ಎಲ್ಲರೂ ಒಂದಿಬ್ಬರನ್ನು ಬಿಟ್ಟರೆ, ಗುಟ್ಟಾಗಿ ಕುಡಿಯುವು ದನ್ನು ಮುಂದುವರಿಸುತ್ತಾರೆ. ಈ ಸಂದರ್ಭದಲ್ಲಿನ ವಿಡಂಬನೆ, ಟೀಕೆ, ಕೊಂಕು, ವ್ಯಂಗ್ಯ, ಪರಿಹಾಸ್ಯ, ಗೇಲಿ ಅನುಪಮವಾಗಿ ಅಚ್ಚೊತ್ತಿವೆ. ಈ ಪಾತ್ರಗಳ ಬಗ್ಗೆ ಕೃತಿಕಾರರಿಗೆ ಅನುಕಂಪವಿದೆ. ತಾನು ಸೃಜಿಸುವ ವ್ಯಕ್ತಿಗಳ ಮೇಲೆ ಸಾಹಿತಿಗೆ

---

2 ಈ ಸಂದರ್ಭದ ಬೇರೆ ಬಗೆಯ ವಿಮರ್ಶೆಯನ್ನು 'ಕುವೆಂಪು ಕಂಡ ದಲಿತ ಜೀವನ' ಎಂಬ ಲೇಖನದಲ್ಲಿ ನೋಡಬಹುದು.

ಸಹಾನುಭೂತಿ ಇಲ್ಲದಿದ್ದರೆ ಅವನೆಂದೂ ಮನುಷ್ಯ ಸಹಜ ದೌರ್ಬಲ್ಯಗಳನ್ನು ಅರಿಯು ಲಾರ ; ಅವನ ಪಾತ್ರಗಳು ಜೀವಕಳೆಯಿಂದ ಹೊಳೆಯಲಾರವು. ಆದರೆ ಕನಿಕರದ ಬೆನ್ನೆಲುಬಾಗಿ ನೈತಿಕತೆ ಗಟ್ಟಿಯಾಗಿರಬೇಕು. ಅಲ್ಲದಿದ್ದರೆ ಸಹಾನುಭೂತಿ ಛದ್ಮ ವೇಷದ ದೌರ್ಬಲ್ಯವಾಗುತ್ತದೆ. ಪಾಪ ನಿರ್ಮೂಲನವೆ ಶ್ರೇಷ್ಠ ಸಾಹಿತ್ಯದ ಪರಮ ಗುರಿ.

ಚಂದ್ರಯ್ಯಗೌಡರ 'ಉಪನ್ಯಾಸ' ಅಪೂರ್ವವಾಗಿದೆ !

"ಹೆಂಡ ಕುಡಿಯೋದು...ಬಾಳ ಕೆಟ್ಟದ್ದು...ಬಾಳ ಕೆಟ್ಟದ್ದು... ಕಾಫಿ ಕುಡಿಯೋದೂ....ಅದಕ್ಕಿಂತಾ ಕೆಟ್ಟದ್ದು.. ಹೆಂಡ ಬಿಟ್ಟರೆ...ಮುಂದೇನು ಗತಿ ?... ಅಂತಾ ಕೇಳ್ತೀನಿ ನಾನು ! ನಮ್ಮ ಅಪ್ಪ ಕುಡ್ದಿದ್ದಾ....ನಮ್ಮಜ್ಜ ಕುಡ್ದಿದ್ದಾ ನಾವು ಕುಡೀತೀವಿ....ಮಳೆಗಾಲದಾಗೆ ಕುಡಿದ್ರೆ....ಒಳ್ಳೆ ಕಾವು ಬತ್ತದೆ ! ಸಕ್ತಿ...ಸಕ್ತಿ ಬತ್ತದೆ. ಹೆಂಡ ಕುಡಿಯೋದು ಬಹಳ ಕೆಟ್ಟದ್ದು" (ಪು. ೨೪೧).

ಗಂಗೆಯ ಜೊತೆ ಗೌಡರ ಅನೈತಿಕ ಸಂಬಂಧವನ್ನು ಬಯಲು ಮಾಡಿರುವಂತೆಯೆ, ಗೌಡರ ಹೆಂಡತಿ ಸುಬ್ಬಮ್ಮ ವಿಧವೆಯಾದ ನಂತರ ಸೇರೆಗಾರ ರಂಗಪ್ಪಸೆಟ್ಟರ ಸಹವಾಸ ಮಾಡಿ ಬಸುರಾಗಿ ಆತ್ಮಹತ್ಯೆ ಮಾಡಿಕೊಳ್ಳುವುದನ್ನೂ ನಿರ್ವಿಕಾರವಾಗಿ ಚಿತ್ರಿಸಿದ್ದಾರೆ. ಈ ಕಾದಂಬರಿಯ ಪ್ರಕಟಣೆಯ ತರುವಾಯ ಬಂದ ಎಷ್ಟೋ ಕೃತಿಗಳು ಈ ಸರಳ ಪ್ರಾಮಾಣಿಕ ಮನೋಭಾವವನ್ನು ತಾಳಲಿಲ್ಲ.[3]

ಗೌಡ ಜನಾಂಗದ ಸಾಂಸ್ಕೃತಿಕ ಶೂನ್ಯತೆಯನ್ನು ಕಾದಂಬರಿಕಾರರು ಅನುಪಮ ವಾಗಿ ಬಯಲು ಮಾಡಿದ್ದಾರೆ. ಕನ್ನಡದ ಬೇರಾವ ಸಾಹಿತಿಯೂ ತನ್ನ ಜನರನ್ನು ಇಷ್ಟು ನಿರ್ವಿಕಾರವಾಗಿ ನಿರ್ದಾಕ್ಷಿಣ್ಯವಾಗಿ ಹರಾಜು ಹಾಕಿಲ್ಲ. ಅವರ ಕುಡಿತ, ಹಾದರ, ಶೋಷಣೆ, ಯಾವುದನ್ನೂ ಕುವೆಂಪು ಮರೆಮಾಚಿಲ್ಲ.[4] ಸಾರ್ವತ್ರಿಕ ಮೌಲ್ಯವುಳ್ಳ

---

3 ಈ ಬಗ್ಗೆ ಇದೇ ವಿಮರ್ಶಕನ 'ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕ ಮತ' ಲೇಖನ ನೋಡಬಹುದು. ಈ ಲೇಖನ ಭಾರಿ ಪ್ರತಿಕ್ರಿಯೆ ಮತ್ತು ಪರಿಣಾಮ ಉಂಟು ಮಾಡಿತು. ತತ್ಫಲವಾಗಿ ಅನಂತಮೂರ್ತಿ ತಮ್ಮ 'ಅವಸ್ಥೆ' ಕಾದಂಬರಿಯಲ್ಲಿ ಶೂದ್ರ ಗೌಡನ ಜೊತೆ ಬ್ರಾಹ್ಮಣ ಯುವತಿಯ ಲೈಂಗಿಕ ಸಂಬಂಧವನ್ನು ಬರೆದರು ; ಲಂಕೇಶ್ ತಮ್ಮ 'ಮುಸ್ಸಂಜೆ ಕಥಾ ಪ್ರಸಂಗ'ದಲ್ಲಿ ಲಿಂಗಾಯಿತ ಹುಡುಗಿ ಬೇಡರ ಹುಡುಗನ ಜೊತೆ ಓಡಿ ಹೋಗುವಂತೆ ಚಿತ್ರಿಸಿದರು ; 'ವೈಶಾಖ' ಕಾದಂಬರಿಯಲ್ಲಿ ಹೊಲೆಯರ ಲಕ್ಕನ ಮೇಲೆ ಬಿದ್ದು ಹಾರುವರ ರುಕ್ಮಿಣಿ ಅತ್ಯಾಚಾರ ಮಾಡುವುದನ್ನು ಚದುರಂಗರು ನಿರೂಪಿಸಿದರು. ಈ ಮೂವರು ಕಾದಂಬರಿಗಾರರು ಮೇಲಿನ ನನ್ನ ಲೇಖನವನ್ನು ಬಹಳವಾಗಿ ಮೆಚ್ಚಿದ್ದನ್ನು ನನಗೆ ವೈಯಕ್ತಿಕವಾಗಿ ತಿಳಿಸಿದ್ದರು. ಇವರಲ್ಲದೆ ಇತರ ಲೇಖಕರೂ ಪ್ರಭಾವಿತರಾಗಿರ ಬಹುದು.

4 'ಕಾನೂರು ಹೆಗ್ಗಡಿತಿ' ಪ್ರಕಟವಾದ ಹೊಸತರಲ್ಲಿ ಮಲೆನಾಡಿನ ಗೌಡರು ಕ್ರುದ್ಧರಾದರಂತೆ, ತಮ್ಮ ಹುಳುಕನ್ನೆಲ್ಲ ಎತ್ತಿಹಾಕಿದ್ದಾನೆಂದು. ಅವನು ಸಿಕ್ಕಲಿ ಹೊಡೆಯುತ್ತೇವೆ, ಬಡಿಯು ತ್ತೇವೆ, ಎಂದೂ ರೇಗಾಡಿದರಂತೆ. ಹೀಗೆಂದು ನಾನು ಕೆಲವರಿಂದ ಕೇಳಿದ್ದೇನೆ.

ಮಾನವೀಯತೆಯನ್ನು ಪ್ರತಿಪಾದಿಸಿ ಎತ್ತಿ ಹಿಡಿಯುವಾಗ ಶುದ್ಧ ಕಲೆಗಾರಿಕೆ ತನ್ನ ಔನ್ನತ್ಯದಲ್ಲಿ ವಿಜೃಂಭಿಸುತ್ತವೆ. ತಾತ್ವಿಕತೆಯ ಬಿಸಿಯಲ್ಲಿ ಕಲೆ ಕೊಂಕಿಲ್ಲ : ಪ್ರಕಟವಾಗಿರುವ ಜೀವನ ದರ್ಶನ ಸತ್ವಪೂರ್ಣವಾಗಿದೆ.

ಅವಿವೇಕಿಗಳೂ ಅವಿದ್ಯಾವಂತರೂ ಅಜ್ಞಾನಿಗಳೂ ಅಸೆಬುರುಕರೂ ಕುರುಡು ನಂಬಿಕೆಯುಳ್ಳವರೂ ಆದ ಕತ್ತಲೆಯ ಮೊತ್ತದಲ್ಲಿ ವಾಸಮಾಡುತ್ತಿರುವ ಹಳ್ಳಿಗರಿಗೆ ಹೊಸ ಜಾಗೃತಿಯನ್ನೂ ಪ್ರಜ್ಞೆಯನ್ನೂ ತರಲು ಹೂವಯ್ಯ ನಿರಂತರವಾಗಿ ಹೋರಾಡಿ ಕೊನೆಗೆ ಸಫಲನಾಗುತ್ತಾನೆ.

ಹೂವಯ್ಯನಿಗೆ ಮೊದಲಿಂದ ಕೊನೆಯವರೆಗೂ ಎದುರಾಗುವವರು ಪಟ್ಟಭದ್ರ ಹಿತಾಸಕ್ತಿಯ ಪುರೋಹಿತವರ್ಗದ ವೆಂಕಪ್ಪಯ್ಯ ಜೋಯಿಸರು ; ಅವರು (ಜೋಯಿಸರು) ಹಾಕಿದ ತಾಳಕ್ಕೆ ಸರಿಯಾಗಿ ಕುಣಿಯುತ್ತಾ ಮದ್ಯ ಕುಡಿದ ಮಂಗನಂತೆ ವರ್ತಿಸುವ ಹೂವಯ್ಯನ ಚಿಕ್ಕಪ್ಪ ಚಂದ್ರಯ್ಯಗೌಡರು. ಹೂವಯ್ಯನ ಬಂಡಾಯ ಪ್ರಜ್ಞೆ ಮತ್ತು ಶಕ್ತಿ ಈ ಕಡು ಸ್ವಾರ್ಥಿಗಳ ವಿರುದ್ಧ ಸೆಣಸುತ್ತದೆ.

ಅದುವರೆಗೆ, ಅಂದರೆ 'ಕಾನೂರು ಹೆಗ್ಗಡಿತಿ' ಪ್ರಕಟವಾದ ೧೯೩೬ರ ವೇಳೆಗೆ ಬಂದ ಕನ್ನಡ ಕಾದಂಬರಿ ಪರಂಪರೆಯಲ್ಲಿ ಕಾಣದಂಥ ಪಾತ್ರ ಸೃಷ್ಟಿಯಲ್ಲಿ ಕುವೆಂಪು ತೊಡಗಿರುವುದನ್ನು ನೋಡುತ್ತೇವೆ. ಸ್ವಾತಂತ್ರ್ಯ ಚಳುವಳಿಯ ಹೋರಾಟ ಉಗ್ರ ರೂಪದಲ್ಲಿ ನಡೆಯುತ್ತಿದ್ದರೂ ಅದರ ಸೋಂಕಾಗಲಿ, ಅದರ ಬಗ್ಗೆ ತುಸು ಪ್ರಸ್ತಾಪವಾಗಲೀ ಕಾದಂಬರಿಯಲ್ಲಿ ಇಣುಕದಿರುವುದನ್ನು ಗಮನಿಸಿದರೆ ಕುವೆಂಪು ಅವರಿಗೆ ಆ ಸ್ವಾತಂತ್ರ್ಯ ಸಂಗ್ರಾಮ ತಂದುಕೊಡಬಹುದಾದ ಬಿಡುಗಡೆಯ ಬಗ್ಗೆ ಮೂಲಭೂತ ಅನುಮಾನಗಳಿದ್ದಂತೆ ಭಾಸವಾಗುತ್ತದೆ. (ಸ್ವಾತಂತ್ರ ಚಳವಳಿಯ ಸಂದರ್ಭದಲ್ಲಿ ಅವರು ರಚಿಸಿದ ಎಷ್ಟೋ ಸ್ಫೂರ್ತಿದಾಯಕ ವೀರಗೀತೆಗಳನ್ನು ಪರಿಶೀಲಿಸಿಯೂ ಈ ಮಾತು ಹೇಳುತ್ತಿದ್ದೇನೆ). ಶೋಷಣೆಗೆ ತುತ್ತಾಗಿರುವ ಹಳ್ಳಿಗರನ್ನು ಎಚ್ಚರಿಸಿದ ಹೊರತೂ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ, ಎಂಬುದನ್ನು ಕಾದಂಬರಿಕಾರರು ಅನನ್ಯವಾಗಿ ಧ್ವನಿಸಿದ್ದಾರೆ.

ಆಧುನಿಕ ವಿದ್ಯಾಭ್ಯಾಸದ ಲಾಭ ಪಡೆದು, ಮಾನವೀಯತೆಯಿಂದ ಚೋದಿತನಾದ ಹೂವಯ್ಯ ಅಸಾಧಾರಣ ವಿವೇಕದಿಂದ, ಅಪ್ರತಿಮ ಜವಾಬ್ದಾರಿಯಿಂದ, ಮೂಕ ಜನಕೋಟಿಯನ್ನು ಮೇಲಕೆತ್ತಬೇಕೆಂಬ ಪರಿಶುದ್ಧ ಅಂತಃಕರಣದ ಕಳಕಳಿಯಿಂದ ತನ್ನನ್ನೇ ತಾನು ನಿಯೋಜಿಸಿಕೊಳ್ಳುತ್ತಾನೆ, ನಿರ್ದೇಶಿಸಿಕೊಳ್ಳುತ್ತಾನೆ, ನಿಯಂತ್ರಿಸಿಕೊಳ್ಳುತ್ತಾನೆ. ಹೂವಯ್ಯನ ಪ್ರಜ್ಞೆ, ಧೋರಣೆ, ಬಂಡಾಯ ಸಂಪೂರ್ಣವಾಗಿ ಇತ್ಯಾತ್ಮಕವಾದದ್ದು. ಬಂಡಾಯ ಸಫಲವಾಗಬೇಕಾದರೆ ನಾಯಕನ ವೈಯಕ್ತಿಕ ಬದುಕಿನಲ್ಲಿ ಪ್ರಶ್ನಾತೀತ ಪ್ರಾಮಾಣಿಕತೆ ಇರಬೇಕು ; ತ್ಯಾಗ ಬುದ್ಧಿ ಇರಬೇಕು ; ಇದೆಲ್ಲ ಆಚರಣೆಯಲ್ಲಿ ಅರಳಿ ಘಮಘಮಿಸಬೇಕು. ಸುಲಿಗೆಗೆ ಬಲಿಯಾದ ಸಮುದಾಯದ ಆಶೋತ್ತರಗಳನ್ನು ಪ್ರತಿನಿಧಿಸದ ಯಾರೂ ನಿಜನಾಯಕನಾಗಲಾರ.

ಜಗತ್ತಿನ ಚರಿತ್ರೆಯನ್ನು ಅವಲೋಕಿಸಿದರೆ ಇದು ಸುಸ್ಪಷ್ಟ. ಜನಪರವಾಗದ ಯಾವುದೇ ಬಗೆಯ ಬಂಡಾಯವೂ ಕೊನೆಗೆ ನಕರಾತ್ಮಕವಾಗಿ ಬಿಡುತ್ತದೆ. ಎರಡು ದಿನ ಧೂಳೆಬ್ಬಿಸಿ ದೃಷ್ಟಿ ಮಬ್ಬು ಮಾಡಿ ಕೊನೆಗೆ ಅಡಗಿ ಹೋಗುತ್ತದೆ. ಇಡೀ ಮಾನವಕುಲ ಕಂಡುಹಿಡಿದ ಗಟ್ಟಿ ಮೌಲ್ಯಗಳನ್ನು ದೂರೀಕರಿಸದೆ ಓರಿಸೊಂಡು ಬಂಡಾಯಗಾರ ಬೆಳೆಯಬೇಕು. ತನ್ನ ಅನುಭವದ ತೆಕ್ಕೆಗೆ ಇನ್ನೂ ಒಗ್ಗದ ಸತ್ಯಗಳನ್ನು ತಿರಸ್ಕರಿಸದೆ. ಅವುಗಳ ಬಗ್ಗೆ ತೆರೆದ ಮನಸ್ಸಿನ ಅನುಮಾನಗಳನ್ನು ತಾಳಬೇಕು. ಆದರೆ ಅನುಮಾನಗಳನ್ನು ಇಟ್ಟುಕೊಳ್ಳುವುದೇ ಗುರಿಯಲ್ಲ : ಅವುಗಳನ್ನು ಪರಿಹರಿಸಿಕೊಳ್ಳುವ ತೀವ್ರ ಶೋಧನೆ ಶ್ರದ್ಧಾತ್ಮಕವಾಗಿ ನಡೆಯಬೇಕು.

ಪುರೋಹಿತಶಾಹಿಯ ಪರಮ ಪ್ರತಿನಿಧಿಯಾದ ವೆಂಕಪ್ಪಯ್ಯ ಜೋಯಿಸರನ್ನು ವಿರೋಧಿಸುವ, ಅಂದರೆ ಅವರ ಜನವಿರೋಧಿ ಹಾಗೂ ಶೋಷಣಾಭರಿತ ಧೋರಣೆಯನ್ನು ವಿರೋಧಿಸುವ ನಾಯಕ ಹೂವಯ್ಯ ಕೆಳವರ್ಗದ ಜನರ ಜೊತೆ ಹೇಗೆ ನಡೆದುಕೊಳ್ಳುತ್ತಾನೆ ಎಂಬುದು ಸ್ವಾಭಾವಿಕವಾದ ಪ್ರಶ್ನೆ. ಅವನ ಮಾನವೀಯ ನಿಲುವು ಆದರ್ಶಪ್ರಾಯವಾಗಿ ಆಚರಣೆಯಲ್ಲಿ ಪ್ರಕಟವಾಗುತ್ತದೆ. ಕನ್ನಡದ ಬೇರಾವ ಸಾಹಿತಿಗಳಲ್ಲೂ ಕಾದಂಬರಿಕಾರರಲ್ಲೂ ಗೋಚರವಾಗದಷ್ಟು ಮಟ್ಟಿಗೆ ಮಾನವತಾವಾದ ಕುವೆಂಪು ಕೃತಿಗಳಲ್ಲಿ ಮೈವೆತ್ತಿದೆ.

ರಜಾಕ್ಕೆ ಊರಿಗೆ ಬಂದಿರುವ ಹೂವಯ್ಯ ಮತ್ತು ರಾಮಯ್ಯ ಹೊಲ ಉಳುತ್ತಿರುವ ಬೈರ ಮತ್ತು ಸಿದ್ಧರ ಆರುಗಳನ್ನು ಹಿಡಿದುಕೊಳ್ಳುತ್ತಾರೆ. ಶುಭ್ರ ವಸನಧಾರಿಗಳೂ ಅಪರಿಚಿತರೂ ಆದ ಈ ನವಯುವಕರನ್ನು ಕಂಡು ಎತ್ತುಗಳು ಬೆದರಿ ಅವರ ಹತೋಟಿ ಮೀರಿ ಓಡಿದುದರ ಪರಿಣಾಮವಾಗಿ ರಾಮಯ್ಯ ಹಿಡಿದಿದ್ದ ನೇಗಿಲಿನ ಈಚು ಮುರಿಯುತ್ತದೆ : ಹೂವಯ್ಯ ಉಳುತ್ತಿದ್ದ ನೇಗಿಲಿನ ಕುಳ ಉಳುವ ಎತ್ತಿನ ಕಾಲಿಗೆ ಹೊಡೆದು ಕತ್ತರಿಸಿದಂತೆ ರಕ್ತ ಸೋರುತ್ತದೆ. ಸನ್ನಿವೇಶ ಗಾಬರಿ ಹುಟ್ಟಿಸುತ್ತದೆ, ಬೈರ ಸಿದ್ಧರಿಗೆ ಚಂದ್ರಯ್ಯಗೌಡರು ಏನು ಮಾಡುತ್ತಾರೋ ಎಂದು ಗಡಗಡ ನಡುಗುತ್ತಾರೆ. ಅಷ್ಟರಲ್ಲಿ ಅಲ್ಲಿಗೆ ಬಂದ ಕೌರವ ಸ್ವಭಾವದ ಚಂದ್ರಯ್ಯಗೌಡರು, ವಿಷಯ ತಿಳಿದು, ಬೈರನಿಗೆ ಕಪಾಳಕ್ಕೆ ಬಾರಿಸಿ, "ಇವರಿಗೆ ಪಡಿ (ದಿನಕೂಲಿ)ಯನ್ನು ಕೊಡಬೇಡಿ"ರೆಂದು ತಮ್ಮ ಜೊತೆ ಬರುತ್ತಿದ್ದ ಸೇರೆಗಾರ ರಂಗಪ್ಪಸೆಟ್ಟರಿಗೆ ತಾಕೀತು ಮಾಡುತ್ತಾರೆ. ಆ ಆದೇಶದ ಪ್ರಕಾರ ಸಂಜೆ ಸೇರೆಗಾರರು ಪಡಿ ಕೊಡಲು ನಿರಾಕರಿಸಿದಾಗ ಹೂವಯ್ಯ ಪ್ರತಿಭಟಿಸಿ ಬೈರನಿಗೆ ಪಡಿ ಕೊಡಿಸುತ್ತಾನೆ. ಅದನ್ನು ತೆಗೆದುಕೊಂಡು ಹೋಗುತ್ತಿರುವಾಗ, ದಾರಿಯಲ್ಲಿ ಸಾಯಂಪ್ರತಿ ಕಳ್ಳು ಕುಡಿದು ಬರುತ್ತಿದ್ದ ಗೌಡರು ಕಂಡು ಭತ್ತ ಇಟ್ಟು ಹೋಗೆಂದು ಅಬ್ಬರಿಸಿ, ಗಾಡಿಯ ನೊಗದ ಕೊರಳ ಗೂಟವನ್ನು ಎಳೆದುಕೊಂಡು ಹೊಡೆಯಲು ಉದ್ಯುಕ್ತರಾದಾಗ ಬೈರ ಗಂಟನ್ನು ಅಲ್ಲಿಯೆ ಬಿಸಾಡಿ ಓಡಿ ಹೋಗುತ್ತಾನೆ. ಇದನ್ನೆಲ್ಲ ದೂರದಿಂದ ನೋಡುತ್ತಿರುವ

ಹೂವಯ್ಯ ತನ್ನ ತಪ್ಪಿಗೆ ನಿರಪರಾಧಿಗಳು ನೋಯಬೇಕಾಯಿತಲ್ಲ! ಎಂಬ ಮರುಕ ದಿಂದಲೂ ಪಶ್ಚಾತ್ತಾಪದಿಂದಲೂ ಚಿಕ್ಕಪ್ಪನನ್ನು ತಡೆದು ಬೈರನಿಗೆ ನೆರವಾಗಲು ಮನಸ್ಸುಮಾಡಿ ಹೊರಡುತ್ತಾನೆ. ರಾಮಯ್ಯ ಅವನನ್ನು ನಿಲ್ಲಿಸಿ, ಕುಡಿದ ಅಮಲಿ ನಲ್ಲಿರುವ ತನ್ನ ತಂದೆಯ ಜೊತೆ ಮಾತುಕತೆ ಸರಿಯಿಲ್ಲ ಎಂದು ನಿವಾರಿಸುತ್ತಾನೆ. ಆಮೇಲೆ ಹೂವಯ್ಯ ಆ ಕಂಬಳಿಯ ಬತ್ತದ ಗಂಟನ್ನು ಎತ್ತಿಕೊಂಡು ಹೋಗಿ ಬೈರನಿಗೆ ಅವನ ಗುಡಿಸಲಲ್ಲಿ ಕೊಡುತ್ತಾನೆ (ಪು. ೨೦೨–೧೧).

ಇನ್ನೊಂದು ಪ್ರಸಂಗ : ಬೈರನ ಮಗ ಗಂಗ ಹುಡುಗ ಮಂತ್ರಿಸಿದ ತೆಂಗಿನ ಕಾಯಿಯನ್ನು ಮುಟ್ಟಿ ಹೆದರಿ ಜ್ವರದಿಂದ ನರಳುತ್ತಿದ್ದಾಗ, ಹೂವಯ್ಯ ಗುಡಿಸಲಿಗೆ ಹೋಗಿ ಆ ಹುಡುಗನಿಗೆ ಸಮಾಧಾನ ಹೇಳಿ, ಧೈರ್ಯ ನೀಡಿ, ಔಷಧಿ ಕೊಟ್ಟು ಶುಶ್ರೂಷೆ ಮಾಡುತ್ತಾನೆ. ಆದರೂ ಆ ಭಯಭೀತ ಬಾಲಕ ಸಾವನ್ನಪ್ಪುತ್ತಾನೆ. (ಪು. ೩೫೮–೬೦)

ಮೂರನೆಯ ಪ್ರಸಂಗ : ಬೈರ ತನ್ನ ಹೆಂಡತಿ ಸೇಸಿ ಹಡೆದಾಗ ಹೇಳುವುದು : "ಮನ್ನೆ ಅದು (ಎಂದರೆ, ಅವನ ಹೆಂಡತಿ) ಹಡೆದಾಗ ಹೂವಯ್ಯಗೌಡರು ಎಷ್ಟು ಉಪಚಾರ (ಉಪಕಾರ ಎನ್ನುವುದಕ್ಕೆ ಬದಲಾಗಿ) ಮಾಡಿದ್ರೂ ಅಂದ್ರೆ ! ಅಕ್ಕಿ, ಬೆಲ್ಲ, ತುಪ್ಪ, ಕಾಫಿ, ಹಾಲು, ಔಸ್ತಿ, ಏನು ನಮ್ಮ ಬಿಡಾರ ಮನೆಯಾಗಿ ಹೋಗಿತ್ತು. ನಂಗಂತು ನನ್ಹೆಂಡ್ತಿ ದಿನಾ ಹಡೀತಾನೆ ಇದ್ದಿದ್ರೆ ಅನ್ನಿಸಿಬಿಡ್ತು..." (ಪು. ೫೮೨),

ಮೇಲಿನ ಮೂರು ಸಂಗತಿಗಳನ್ನು ಗಮನಿಸಿದರೆ, ವಿದ್ಯಾವಂತನಾದ ಹೂವಯ್ಯ ಮೇಲು ಕೀಳಿನ ಯಾವ ಭೇದಭಾವನೆ ಮಾಡದೆ, ನಿಜವಾದ ಮಾನವೀಯತೆಯಿಂದ ಸೋದರ ಮಾನವರ ಕಷ್ಟಕಾಲದಲ್ಲಿ ನೆರವಾಗುವುದನ್ನು ಕಾದಂಬರಿಕಾರರು ಮನ ಮುಟ್ಟುವಂತೆ, ಆಚಾರಣಾಯೋಗ್ಯವಾಗಿ ಚಿತ್ರಿಸಿದ್ದಾರೆ. ಸಮಾನತಾ ಪಾಲನೆಯ ವಿದ್ಯಾಭ್ಯಾಸದ ಉದ್ದೇಶ : ಅದೇ ವಿದ್ಯಾವಂತನ ಲಕ್ಷಣ. ಸಾಮಾಜಿಕ ಉಪಾಧಿ ಗಳಿಂದ ಮುಕ್ತನಾದವನೆ ಸುಸಂಸ್ಕೃತ. ಸಮಾನತೆಯನ್ನು ಕಾರ್ಯರೂಪಕ್ಕೆ ಇಳಿಸು ವವನೆ ಬಂಡಾಯಗಾರ. ಕಾದಂಬರಿಕಾರರ ದಲಿತಪ್ರೇಮ ಮತ್ತು ದಲಿತೋದ್ಧಾರದ ತುಟ್ಟತುದಿ 'ಕಾನೂರು ಹೆಗ್ಗಡಿತಿ'ಯ ಕೊಟ್ಟಕೊನೆಯ ಅಧ್ಯಾಯವಾದ 'ಹತ್ತು ವರ್ಷಗಳಾದ ಮೇಲೆ' ಎಂಬಲ್ಲಿ ಚೆನ್ನಾಗಿ ಮೂರ್ತ ರೂಪ ಪಡೆದಿದೆ (ಒಂದು ಪೂರ್ಣ ಪ್ರಮಾಣದ ಕಾದಂಬರಿಯಾಗುವಷ್ಟು ಸರಕು ಈ ಹತ್ತು ವರ್ಷಗಳ ಅವಧಿಯಲ್ಲಿ ಅಡಕವಾಗಿದೆ) ; ಬಂಡಾಯ ಸಫಲವಾದದ್ದರ ಸಂಕೇತವಾಗಿದೆ :

"ಕಾನೂರಿನಲ್ಲಿ ಹೂವಯ್ಯನ ಪ್ರಯತ್ನದಿಂದ ಬೇಲರೂ ಸೇರೆಗಾರ ಸೋಮಯ್ಯ ಸೆಟ್ಟರೂ....ಗಟ್ಟದವರೂ ಕುರಿಮಂದೆಯಂತೆ ಬಿಡಾರಗಳನ್ನು ಕಟ್ಟಿಕೊಂಡು ಹಂದಿ ಗಳಂತೆ ವಾಸಮಾಡುವುದಕ್ಕೆ ಬದಲಾಗಿ ಸುವ್ಯವಸ್ಥಿತವಾದ ಸಣ್ಣ ಸಣ್ಣ ಮನೆಗಳಲ್ಲಿ ಆದಷ್ಟೂ ಚೊಕ್ಕಟವಾಗಿ ಬದುಕುತ್ತಿದ್ದರು. ಕಾಯಿಲೆ ಬಂದರೆ ಜೋಯಿಸರಲ್ಲಿಗೆ ಹೋಗುವುದಕ್ಕೆ ಬದಲಾಗಿ ಆಸ್ಪತ್ರೆಗೆ ಹೋಗುವುದನ್ನು ಕಲಿತಿದ್ದರು. ನಿಂಗನ

ಮಗ ಪುಟ್ಟ ಸೀತೆಯ ಪ್ರಯತ್ನದಿಂದ ಅಕ್ಷರಸ್ಥನಾಗಿ, ಮದುವೆಯಾಗಿ, ಕಾನೂರಿನಲ್ಲಿ ಒಕ್ಕಲಾಗಿದ್ದನು. ಈಗ ಅವನನ್ನು ಬೇಟೆಗಾರ ಪುಟ್ಟಣ್ಣನಿಂದ ಬೇರ್ಪಡಿಸುವುದಕ್ಕಾಗಿ 'ಸಣ್ಣಪುಟ್ಟಣ್ಣ' ಎಂದು ಕರೆಯುತ್ತಿದ್ದರು" (ಪು. ೬೪೯).

ಪ್ರಬಂಧದ ಪ್ರಾರಂಭದಲ್ಲಿ ಹೇಳಿದ ಮೂರು ಬಗೆಯ ಬಂಡಾಯದ ಜೊತೆಗೆ ಇನ್ನೂ ಮೂರ್ನಾಲ್ಕು ಸೂಕ್ಷ್ಮ ಮಜಲುಗಳನ್ನು ಗುರುತಿಸುವುದು ಲಾಭದಾಯಕವಾಗುತ್ತದೆ. ಒಂದು, ಬಂಡಾಯಗಾರ ತನ್ನನ್ನೆ ತಾನು ಗೆಲ್ಲುವುದು ; ಎರಡು, ಲೇಖಕ ಜ್ಞಾನದ ದಿಗಂತಗಳನ್ನು ವಿಸ್ತರಿಸಿ ವಾಚಕರ ಮನಸ್ಸನ್ನು ಬೆಳೆಸುವುದು ; ಮೂರು, ಬುದ್ಧನ ಪ್ರಭಾವ ಮತ್ತು ಮಾರ್ಗದರ್ಶನ : ನಾಲ್ಕು, 'ಕಾನೂರು ಹೆಗ್ಗಡಿತಿ'ಯನ್ನು ಕುರಿತು ಬರೆದ ಬಹು ಮಂದಿ ಅದನ್ನು ಏಕೆ ಟೀಕಿಸಿದರು ?

ಪರಿಪೂರ್ಣ ಮಾನವತ್ವದ ಕಡೆಗೆ ನಡೆಯುವ ಪಾತ್ರವನ್ನು ಕಡೆಯುವುದು ಕಾದಂಬರಿಕಾರರ ಪ್ರಬಲ ಗುರಿಯಾಗಿದೆ. ಅಜ್ಞಾನ, ಮೂಢನಂಬಿಕೆ, ಅನಾಗರೀಕತೆಯ ಆವರಣದಿಂದ ಹೂವಯ್ಯ ಮೂಡಿ ಬರುತ್ತಾನೆ. ಇದರಿಂದ ಬಿಡುಗಡೆ ಹೊಂದಲು ಆಧುನಿಕ ವಿದ್ಯಾಭ್ಯಾಸ ಅವನಿಗೆ ಪರಿಣಾಮಕಾರಿಯಾಗಿ ನೆರವಾಗುತ್ತದೆ. ಅವನು ಓದುವ ಮಹಾಪುರುಷರ ಆದರ್ಶ ಜೀವನ ಮತ್ತು ಸಾಧನೆ ಆತನ ಜೀವನ ಪಥವನ್ನು ನಿಚ್ಚಳವಾಗಿ ತೆರೆದು ತೋರಿಸುತ್ತದೆ. ಹೂವಯ್ಯನ ಬಾಳು ಋಷಿಸಂತರ ಆದರ್ಶದ ಅಗಸ್ತ್ಯ ಶಕ್ತಿಯಲ್ಲಿ ಅಪೋಶನಗೊಂಡು, ಸಾಧನೆಯ ಅಗ್ನಿಕುಲುಮೆಯಲ್ಲಿ ಕುದಿದು ಕರಗಿ ವಾಸ್ತವದಲ್ಲಿ ಗಟ್ಟಿಯಾಗಿ ಎರಕಗೊಂಡು ನಳನಳಿಸುವಂತಾಗುತ್ತದೆ.

"ಮಹಾಪುರುಷರ ಜೀವನ ಚರಿತ್ರೆಗಳನ್ನು ಓದಿದ್ದ ಆತನಲ್ಲಿ ತಾನೂ ಮಹತ್ಕಾರ್ಯಗಳನ್ನು ಸಾಧಿಸಿ. ಕೀರ್ತಿವಂತನಾಗಬೇಕೆಂಬ ಮಹದಾಕಾಂಕ್ಷೆ ಉದ್ಭವಿಸಿತ್ತು." (ಪು. ೧೨೮ ; ೨೮೦ ; ೩೨೮ ; ೪೮೬ ; ೫೬೩)

ಸಣ್ಣದರಿಂದ ದೊಡ್ಡದಕ್ಕೆ ಬಾಳನ್ನು ಬೆಳೆಸುವುದೇ ವ್ಯಕ್ತಿತ್ವದ ವಿಕಾಸ. ಇದೇ ನಿಜವಾದ ದ್ವಿಜತ್ವ. ಉಪನಯನದಿಂದ ದ್ವಿಜತ್ವ ಬರುವುದಿಲ್ಲ ; ವ್ಯಕ್ತಿ ದ್ವಿಜತ್ವವನ್ನು ಗಳಿಸುವುದಕ್ಕಿಂತ ಕುಬ್ಜತ್ವವನ್ನು ಪಡೆಯುತ್ತಾನೆ.

ವಿಚಾರವಿಲ್ಲದ ಆಚಾರ ಕಂದಾಚಾರ. ಆದ್ದರಿಂದ ಜನಸಾಮಾನ್ಯರಲ್ಲಿ ವೈಜ್ಞಾನಿಕತೆಯನ್ನು ಗಾಢವಾಗಿ ಬೆಳೆಸಲು, ಅಜ್ಞಾನ, ಮೂಢನಂಬಿಕೆಗಳು. ಕುಡಿತ, ಮೇಲುಕೀಳಿನ ಭಾವನೆಗಳು ಮುಂತಾದ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲನ ಮಾಡಲು ಹೂವಯ್ಯ ಸತತವಾಗಿ ಶ್ರಮಿಸುತ್ತಾನೆ. ಮುಗ್ಧ ಗ್ರಾಮೀಣ ಜನತೆಯನ್ನು ಎಚ್ಚರಿಸುವುದು ಅವನ ಜೀವಿತದ ಒಂದು ಪ್ರಮುಖ ಗುರಿಯಾಗಿದೆ. "ಜಗತ್ತಿನ ಮಹಾಪುರುಷರ ಆಲೋಚನಾ ಪ್ರಪಂಚದ ಸಾನಿಧ್ಯ, ವಿದ್ಯೆಯ ಸಂಸ್ಕೃತಿ, ಮನಸ್ಸಿನ ಸಂಯಮ, ಉದ್ಧಾರಕ್ಕೆ ಒಂದು ಎಲ್ಲೆಯನ್ನು ಕಲ್ಪಿಸದೆ ನಿರಂತರವೂ ಮೇಲೇರಿ ಮುಂದುವರಿಯಬೇಕೆಂಬುವ ಉತ್ಕಟಾಕಾಂಕ್ಷೆ. ತೀವ್ರ ವ್ಯಾಕುಲತೆ, ಉದ್ದಾಮ ರಸಕಾವ್ಯಗಳ ಪರಿಚಯ, ಪ್ರಾರ್ಥನೆ, ಧ್ಯಾನ ಇವುಗಳ ಆಧಾರವೂ ಅಮೃತವೂ

ಸಹಾಯಕ್ಕೆ" (ಪು. ೪೮೬) ಬಂದದ್ದರಿಂದ ಹೂವಯ್ಯನ ವ್ಯಕ್ತಿತ್ವ ಗೊಮ್ಮಟನ ವಿಗ್ರಹದಂತೆ ಭೂಮ ಸದೃಶವಾಗಿ ಬೆಳೆಯುತ್ತದೆ. ಇದರಿಂದಾಗಿ ಆತ ಇತರರಿಗಿಂತ ಅತ್ಯಂತ ಭಿನ್ನನಾಗುತ್ತಾನೆ. ಇಂದ್ರಿಯ ಸಹಜ ದೌರ್ಬಲ್ಯಗಳನ್ನು ಗೆಲ್ಲುತ್ತಾ ಮಹಾ ಸಾಧಕನ ಮಟ್ಟಕ್ಕೆ ಏರುತ್ತಾನೆ. ಬುದ್ಧ ಅವನಿಗೆ ಜ್ವಲಂತ ಆದರ್ಶವಾಗುತ್ತಾನೆ. 'ಕಾನೂರು ಹೆಗ್ಗಡಿತಿ'ಯ ಅಂತರಗಂಗೆಯಾಗಿ ಬುದ್ಧನ ಜೀವನ ಮತ್ತು ಉಪದೇಶ ಪ್ರಧಾನವಾಗಿ ಪ್ರವಹಿಸುತ್ತದೆ.[5] "ಆ ಮಹಾಪುರುಷನ ಸ್ವಾರ್ಥತ್ಯಾಗ, ವೈರಾಗ್ಯ, ಔದಾರ್ಯ, ಕನಿಕರ, ಅಹಿಂಸೆ, ತೀಕ್ಷ್ಣಮತಿ, ಪರದುಃಖ ಕಾತರತೆ—ಇವುಗಳಲ್ಲಿ ಒಂದೊಂದೂ ಅವನ ಜೀವನಚರಿತ್ರೆಯ ಘಟನಾ ಚಿತ್ರಗಳೊಡನೆ ಮೂರ್ತೀಭವಿಸಿ, ಮನೋಭಿತ್ತಿಯಲ್ಲಿ ಚಿರಿಸಿದುವು. ಆ ಭವ್ಯ ಭೈರವ ವ್ಯಕ್ತಿತ್ವದ ಮುಂದೆ ತನ್ನ ಅಲ್ಪತೆ ಕನಿಕರಣೀಯವಾಗಿ, ನೀಚವಾಗಿ ತೋರಿ, ಹೂವಯ್ಯನ ಕಣ್ಣುಗಳಿಂದ ಹನಿಗಳು ಉದುರಿದುವು. ಹೂವಯ್ಯ ಆ ಮೂರ್ತಿಯ ಪಾದಪದ್ಮಗಳ ಮೇಲೆ ತನ್ನ ಹಣೆಯಿಟ್ಟು "ಗುರುದೇವ, ನನ್ನನ್ನು ಕೈ ಹಿಡಿದೆತ್ತಿಕೊ. ಉದ್ಧಾರ ಮಾಡು. ನಿನ್ನ ಮಹಾಗುಣಗಳಲ್ಲಿ ಒಂದಿನಿತನ್ನಾದರೂ ದಯಪಾಲಿಸು. ನನ್ನ ಜೀವನವನ್ನು ಸಾರ್ಥಕಮಾಡು ಎಂದು ಬೇಡಿದನು" (ಪು. ೬೧೯–೨೦ ; ಅಧ್ಯಾಯ : 'ಬುದ್ಧದೇವನ ಕೃಪಾಮಹಿಮೆ."). ಬುದ್ಧನ ತತ್ವಜ್ಞಾನದ ಜೊತೆಗೆ ಉಪನಿಷತ್ ಪ್ರಣೀತವಾದ ವೇದಾಂತ ದರ್ಶನದ ಪ್ರಭಾವವಿದೆ. ಕಾದಂಬರಿ ಬುದ್ಧಜಯಂತಿಯ ಆಚರಣೆಯಲ್ಲಿ ನವಕ್ರಾಂತಿಯ ಗಾನದಿಂದ ಮುಕ್ತಾಯವಾಗುತ್ತದೆ. ಭಾರತೀಯ ಸಂಸ್ಕೃತಿಯ ಶೋಧನ ಮತ್ತು ಪುನರುಜ್ಜೀವನ ಈ ಕಾದಂಬರಿಯಲ್ಲಿ ಮೇಳೈಸಿರುವಂತೆ ಇತರ ಯಾವ ಕೃತಿಯಲ್ಲೂ ಬಂದಿಲ್ಲ. 'ಕಾನೂರು ಹೆಗ್ಗಡಿತಿ' ಭಾರತೀಯ ಕಾದಂಬರಿ.

ಬ್ರಾಹ್ಮಣವರ್ಗ ಶ್ರಮಿಕವರ್ಗಕ್ಕೆ ವಿದ್ಯಾಬುದ್ಧಿ ಸಿಗದಂತೆ ಈ ದೇಶ ಹುಟ್ಟಿದಂದಿನಿಂದ ಬಹಳ ಜಾಗರೂಕತೆಯಿಂದ ನೋಡಿಕೊಂಡಿದೆ. ವಿದ್ಯಾವಂತರಾದರೆ ತಮ್ಮ ಸಮಾನರಾಗುತ್ತಾರೆ, ತಮ್ಮನ್ನು ಮೀರಿಸುತ್ತಾರೆಂಬ ದಿಗಿಲು ಅವರಿಗೆ. ವಿದ್ಯಾ ಲಾಭ ಪಡೆದ ಹೂವಯ್ಯ ಗ್ರಂಥಗಳನ್ನು ಅತಿಯಾಗಿ ಆರಾಧಿಸುತ್ತಾನೆ. ಬೇರಾರಿಂದಲೂ ಅವನಿಗೆ ಮಾರ್ಗದರ್ಶನ ಮತ್ತು ಬೆಳಕು ದೊರಕದಿರುವಾಗ, ಆ ಕೊರತೆ

---

5. ಸ್ವಾಮಿ ವಿವೇಕಾನಂದರು ಅಮೆರಿಕಾ, ಇಂಗ್ಲಂಡ್ ದೇಶಗಳಿಗೆ ಹೋಗಿ ಹಿಂದೂ ಧರ್ಮವನ್ನು ಪ್ರಚಾರ ಮಾಡಿದರೆಂದು ಇತಿಹಾಸ ಹೇಳುತ್ತದೆ. ಆದರೆ ಸ್ವಾಮಿ ವಿವೇಕಾನಂದರು ನಿಜವಾಗಿಯೂ ಹೆಚ್ಚು ವಿಚಾರ ಮಾಡಿ, ವಿಶೇಷವಾಗಿ ಪ್ರೀತಿಸಿ ಪ್ರಚಾರ ಮಾಡಿರುವುದು ಬುದ್ಧನ ಧರ್ಮವನ್ನು ! ಎಂದು ಹೇಳಿದರೆ ಆಶ್ಚರ್ಯವಾಗಬಹುದು. ಎಂಟು ಸಂಪುಟಗಳಲ್ಲಿ ಸಂಕಲಿತವಾಗಿರುವ ಸ್ವಾಮೀಜಿಯ ಎಲ್ಲಾ ಭಾಷಣಗಳು ಮತ್ತು ಬರಹಗಳಲ್ಲಿ ಅವರು ಬೌದ್ಧಧರ್ಮವನ್ನು ಕುರಿತು ಹೇಳಿರುವಷ್ಟು ಇನ್ಯಾವ ಧರ್ಮದ ಬಗ್ಗೆಯೂ ಹೇಳಿಲ್ಲ. ಕುತೂಹಲಕ್ಕೆ ಅವರ ಕೃತಿಗಳ ವಿಷಯಸೂಚಿ ನೋಡಿದರೂ ಸಾಕು ಸತ್ಯ ಗೊತ್ತಾಗುತ್ತದೆ.

ಯನ್ನು ಮಹಾಕೃತಿಗಳ ಅಧ್ಯಯನದಿಂದ ತುಂಬಿಕೊಳ್ಳುತ್ತಾನೆ[6]. ಇತರ ಕಾದಂಬರಿಗಳಲ್ಲಿ ಕಾಲಾಹರಣಕ್ಕಾಗಿ ಪಾತ್ರಗಳು ಕೈಗೆ ಸಿಕ್ಕಿದ ಯಾವ ಯಾವುದೋ ಪುಸ್ತಕಗಳನ್ನು ಓದಿದರೆ ಹೂವಯ್ಯ ನಿಶ್ಚಿತ ಗುರಿಯಿಂದ ಸಂಸ್ಕೃತಿಯನ್ನು ರೂಪಿಸುವಂಥ ಮಹತ್ವಪೂರ್ಣ ಅಮರಕೃತಿಗಳನ್ನು ಅಧ್ಯಯನ ಮಾಡುತ್ತಾನೆ (ಪು. ೨೫೩–೫; ೩೭೯–೩೦; ೩೭೦-೧; ೪೮೭). ಮಲೆನಾಡಿನ ಕಾಡಿನ ವಾತಾವರಣದಲ್ಲಿ ಆತ ಮೊದಲ ನೋಟಕ್ಕೆ ಪರಕೀಯನಂತೆ ಗೋಚರವಾಗುತ್ತಾನೆ. ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದರೆ ಆತ ಖಂಡಿತ ಪರಕೀಯನಲ್ಲವೆಂದು ಗೊತ್ತಾಗುತ್ತದೆ. ಆತನನ್ನು ಕನ್ನಡ ಕಾದಂಬರಿಯ ಮೊಟ್ಟ ಮೊದಲ ಪರಕೀಯಪ್ರಜ್ಞೆ ನಾಯಕನೆಂದು ಕರೆದು ವಿಮರ್ಶಕರು ಪ್ರಮಾದ ಮಾಡಿದ್ದಾರೆ. ಈ ಮಾತು ಮೆಚ್ಚಿಕೆಯೋ ಟೀಕೆಯೋ ತಿಳಿಯುವಂತಿಲ್ಲ. ಇದು ಪಾಶ್ಚಾತ್ಯ ಸಾಹಿತ್ಯ ವಿಮರ್ಶೆಯನ್ನು ಓದಿಕೊಂಡು ಅಂಧಾನುಕರಣವಾಗಿ ಅನುಸರಿಸಿದ್ದರ ಫಲ. ಯಾಂತ್ರೀಕರಣದಿಂದ, ಕೈಗಾರಿಕೀಕರಣದಿಂದ, ಉತ್ಪಾದಕ ಮತ್ತು ಉತ್ಪಾದನೆಗೆ ಸಂಬಂಧ ತಪ್ಪಿಹೋಗಿರುವುದರಿಂದ ಯಾರ ಶ್ರಮದ ಫಲವನ್ನು ಇನ್ನಾರೋ ಅನುಭವಿಸುವುದರಿಂದ, ವ್ಯಕ್ತಿ ವ್ಯಕ್ತಿಗಳ ನಡುವೆ ಪ್ರತ್ಯೇಕತೆ ಏರ್ಪಟ್ಟಿರುವುದರಿಂದ. ಪ್ರಕೃತಿಯಿಂದ ದೂರವಾಗಿ ಬದುಕುವುದರಿಂದ, ಪಾಶ್ಚಾತ್ಯ ನಾಗರಿಕತೆಯಲ್ಲಿ ಪರಕೀಯತೆ ಜನಿಸಿ ಒಂದು ಮನೋರೋಗವಾಗಿ ಪರಿಣಮಿಸಿದೆ. ತನ್ನನ್ನೂ ತನ್ನ ಪರಿಸರ ಮತ್ತು ಸಂಸ್ಕೃತಿಯನ್ನೂ ತಿಳಿಯುಕೊಳ್ಳದವನು ಪರಕೀಯನಾಗುತ್ತಾನೆ. ಆದರೆ ಗ್ರಾಮೀಣ ಜನರಿಗೆ 'ಪರ್ಸಂಗ' "ಹೇಳುವ ಸಮಯದಲ್ಲಿ ಸಮಾಜದ ಏಳಿಗೆಗೆ ಅವಶ್ಯಕವಾದ ವಿಚಾರಗಳೆಲ್ಲವನ್ನೂ ಕುರಿತು ಸ್ವಾರಸ್ಯವಾಗಿ ಅಲ್ಲಲ್ಲಿ ಉಚಿತವಾದ ಹಾಸ್ಯದ ಮಾತುಗಳನ್ನು ಸೇರಿಸಿ ಎಲ್ಲರಿಗೂ ತಿಳಿಯುವಂತೆ ವಿವರಿಸುತ್ತಿದ್ದನು" (ಪು. ೪೮೭–೮). ಹೀಗೆ ಜನರನ್ನು ಮೇಲೆತ್ತುತ್ತಾನೆ: ಅವರೊಡನೆ ನಿಕಟವಾಗಿ ಬೆರೆಯುತ್ತಾನೆ: ಪ್ರಕೃತಿಯನ್ನು ಅವನು ಪ್ರೀತಿಸುವುದರಿಂದ. ಅವರ ಸಾನಿಧ್ಯದಲ್ಲಿ ಉಪನಿಷತ್ತಿನ ಋಷಿಯ ಹಾಗೆ (ಪು.೩೬೨–೩; ೪೮೮–೯; ೬೧೭–೨೩) ತನ್ನ ಸಾಯುಜ್ಯವನ್ನು ಪಡೆಯುವುದರಿಂದ, ಇತರರ ಬೆವರಿನಿಂದ ಬದುಕುವ ಬಂದಳಿಕೆಯಾಗದೆ, ಹೊಲ ಗದ್ದೆಗಳಲ್ಲಿ ದುಡಿದು ತನ್ನ ಅನ್ನವನ್ನು ತಾನೇ ಗಳಿಸುವುದರಿಂದ, ಪ್ರಣಯಭಂಗದಿಂದ ತನ್ನೊಳಗೆ ಬೆಳೆಯಬಹುದಾಗಿದ್ದ ಬಿರುಕನ್ನು ನಿವಾರಿಸಿಕೊಂಡು ತನ್ನ ಚೇತನದ ಉನ್ನತಿಗೆ ಬೇಕಾದ ಎಲ್ಲಾ ಬಗೆಯ ಸಾಧನೆಗಳನ್ನೂ ಕೈಗೊಳ್ಳುವುದರಿಂದ ಪರಕೀಯನಾಗುವುದಿಲ್ಲ. ಹೂವಯ್ಯನದು ಅಖಂಡ ವ್ಯಕ್ತಿತ್ವ: ಪರಕೀಯತೆ

6 "ಹೀಗೆ ನನ್ನ ಚೇತನ ಪುಸ್ತಕಗಳಲ್ಲದೆ ಬೇರೆ ಮಾರ್ಗದರ್ಶಕರಿಲ್ಲದೆ, ತನ್ನ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪಥಗಳಲ್ಲಿ ಮುಂದುವರಿಯುತ್ತಿದ್ದ ಕಾಲದಲ್ಲಿ, ಎಂದರೆ ೧೯೨೧–೨೨ರಲ್ಲಿ ನಾನು ದಸರಾ, ಕ್ರಿಸ್‌ಮಸ್ ಮತ್ತು ಬೇಸಗೆ ರಜೆಗಳಲ್ಲಿ ತಪ್ಪದೆ ಮನೆಗೆ ಹೋಗಿ ಹುಟ್ಟೂರಿನ ಬದುಕನ್ನು ಸವಿಯುತ್ತಿದ್ದೆ."

—ಕುವೆಂಪು: 'ನೆನಪಿನ ದೋಣಿಯಲ್ಲಿ', ೧೯೮೦, ಪು. ೧೭೮

ಆಧುನಿಕ ಪಾಶ್ಚಾತ್ಯ ನಾಗರಿಕತೆಯ ಅಂಟುರೋಗ. ಭೌತಿಕ ಅಂಟುರೋಗಗಳನ್ನು ಗೆದ್ದ ಮಾನವ ಮಾನಸಿಕ ಅಂಟುರೋಗಗಳಿಗೆ ಹೆಚ್ಚು ಹೆಚ್ಚು ಆಹುತಿಯಾಗುತ್ತಿದ್ದಾನೆ. ಇಂಥ ಮಾನಸಿಕ ರೋಗರುಜಿನಗಳಿಗೆ ಬಲಿಯಾಗದೆ ಬಾಳಲು ಸಹಾಯಕವಾಗುವಂಥ ಒಂದು ಭದ್ರ ನೀಲಿನಕಾಶೆಯನ್ನು ಹೂವಯ್ಯನ ಪಾತ್ರದ ಮೂಲಕ ಕಾದಂಬರಿಕಾರರು ಕಂಡಿದ್ದಾರೆ. ಆತ ಮೈಬಗ್ಗಿಸಿ ದುಡಿಯುವುದರಿಂದ ಕರ್ಮಯೋಗಿ; ಗ್ರಂಥ ಪಠನ. ಧ್ಯಾನ ಮತ್ತು ತಪಸ್ಸುಗಳನ್ನು ಮಾಡುವುದರಿಂದ ಜ್ಞಾನಯೋಗಿ; 'ಪ್ರಕೃತಿಯಾರಾಧನೆಯೆ ಪರಮನಾರಾಧನೆ' ಎಂದು ಪ್ರಕೃತಿಪ್ರಿಯನಾಗಿ ಭಾವಸಮಾಧಿಗೆ ಸಂದುವುದರಿಂದ ಭಕ್ತಿಯೋಗಿ. ಭಕ್ತಿಮಾರ್ಗ, ಕರ್ಮಮಾರ್ಗ ಮತ್ತು ಜ್ಞಾನಮಾರ್ಗಗಳು ಹೂವಯ್ಯನಲ್ಲಿ ಸಮರಸಗೊಂಡಿವೆ.[7] ಆದರೂ ಆತ ಹೆಚ್ಚಾಗಿ ಜ್ಞಾನಯೋಗಿ. ಉಪನಿಷತ್ತಿನಲ್ಲಿ ವರ್ಣಿತವಾಗಿರುವ ಪಂಚಕೋಶಗಳಾದ–ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯದವರೆಗೆ ಜೀವಿ ಬೆಳೆಯುವುದನ್ನು ಇಲ್ಲಿ ಕಾಣುತ್ತೇವೆ.[8] (ಪು. ೬೧೭-೬೨೩). ಆದ್ದರಿಂದ ಹೂವಯ್ಯನನ್ನು ಪರಕೀಯನೆಂದು ಕರೆಯುವುದು ಕಂತಿಳಿವಳಿಕೆಯಾಗುತ್ತದೆ, ತಪ್ಪಾಗುತ್ತದೆ. ಆ ಪಾತ್ರಕ್ಕೆ ಅನ್ಯಾಯವಾಗುತ್ತದೆ; ಕಾದಂಬರಿಗೆ ಅಪಚಾರವಾಗುತ್ತದೆ.

ಮನುಷ್ಯ ಎಲ್ಲವನ್ನೂ ಎಲ್ಲರನ್ನೂ ನಿಯಂತ್ರಿಸುವ ಶಕ್ತಿಯುಳ್ಳವನಾಗುತ್ತಾನೆ; ಆದರೆ ತನ್ನನ್ನು ನಿಗ್ರಹಿಸಿಕೊಳ್ಳಲು ಮನಸ್ಸು ಮಾಡುವುದಿಲ್ಲ, ಕಷ್ಟಪಡುವುದಿಲ್ಲ. ತನ್ನನ್ನು ತಾನು ಗೆಲ್ಲುವುದೆ ದೊಡ್ಡ ಬಂಡಾಯ: ಶಾಶ್ವತಬಂಡಾಯ. ಆಗ ಮನುಷ್ಯನಿಗೆ ಸ್ವಂತ ಆಸಕ್ತಿಗಳಿರುವುದಿಲ್ಲ. ಅವನು ಮಾಡುವುದೆಲ್ಲ ಸಮುದಾಯಕ್ಕಾಗಿ ಮೀಸಲಾಗುತ್ತದೆ. ಹೀಗೆ ಪ್ರತಿಯೊಬ್ಬನೂ ಸಾಧಿಸಿದಾಗ ಶೋಷಣೆ ನಿಲ್ಲುತ್ತದೆ. ಸಮಾನತೆ, ಸ್ವಾತಂತ್ರ್ಯ, ಸೋದರತ್ವ ಸ್ಥಾಪಿತವಾಗುತ್ತವೆ. ಶುದ್ಧ ಮಾನವೀಯತೆ ತನ್ನೆಲ್ಲ ನೈಜಶಕ್ತಿಯಿಂದ ಶೋಭಿಸುತ್ತದೆ. ಈ ದಿಸೆಯಲ್ಲಿ ಹೂವಯ್ಯ ಜೀವಂತ ಆದರ್ಶ.

---

7 ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳ ಎರಡನೆಯ ಸಂಪುಟದಲ್ಲಿ ಸೇರಿರುವ The Ideal of a Universal Religion— How It Must Embrace Different Types of Minds and Methods ಎಂಬ ಅಪೂರ್ವ ಉಪನ್ಯಾಸವನ್ನು ದಯವಿಟ್ಟು ಪರಾಮರ್ಶಿಸಿ.

8 "....ಏತಂ ಅನ್ನಮಯಂ ಆತ್ಮಾನಂ ಉಪಸಂಕ್ರಾಮತಿ; ಏತಂ ಪ್ರಾಣಮಯಂ ಆತ್ಮಾನಂ ಉಪಸಂಕ್ರಾಮತಿ; ಏತಂ ಮನೋಮಯಂ ಆತ್ಮಾನಂ ಉಪಸಂಕ್ರಾಮತಿ; ಏತಂ ವಿಜ್ಞಾನಮಯಂ ಆತ್ಮಾನಂ ಉಪಸಂಕ್ರಾಮತಿ; ಏತಂ ಆನಂದಮಯಂ ಆತ್ಮಾನಂ ಉಪಸಂಕ್ರಾಮತಿ...."

—'ತೈತ್ತಿರೀಯೋಪನಿಷತ್', ಬ್ರಹ್ಮಾನಂದವಲ್ಲೀ, ಎಂಟನೆಯ ಅನುವಾಕ

ಹೂವಯ್ಯನು ಆಧ್ಯಾತ್ಮ ಸಾಧನೆಯಲ್ಲಿ ಪಡೆದ ಅನುಭವಗಳನ್ನು ಹೇಳುವಾಗ ಆಧುನಿಕ ವಿಜ್ಞಾನದ ಭಾಷೆ ಬಳಕೆಯಾಗಿದೆ. ಅತೀಂದ್ರಿಯವಾದ ಅನುಭಾವಿಕ ಸತ್ಯಗಳಿಗೆ ಮುಂದಿನ ವಿಜ್ಞಾನದ ಸಂಗತಿಗಳ ವರ್ಣನೆ ವಸ್ತುಪ್ರತಿರೂಪವಾಗಿದೆ. ಅಮೂರ್ತ ವಿಷಯವನ್ನು ಮೂರ್ತಗೊಳಿಸಿ ವಾಚಕರ ಅನುಮಾನಗಳನ್ನು ಹೋಗಲಾಡಿಸಿ, ಅವರ ಜ್ಞಾನಾನುಭವಗಳನ್ನು ವಿಕಾಸಗೊಳಿಸಲು ಸಹಕಾರಿಯಾಗುತ್ತದೆ :

"ಮನುಷ್ಯನ ಅಂತಶ್ಚಿತ್ತ ಸಮುದ್ರದಂತೆ ಗಂಭೀರವಾಗಿದೆ, ಅಪಾರವಾಗಿದೆ. ಅಲ್ಲಿ ನಡೆಯುವ ವ್ಯಾಪಾರಗಳು ನಮಗೆ ಅಗೋಚರವೆಂದು ಹೇಳಬಹುದು. ಸಮುದ್ರದ ಒಳಗೆ ಜರುಗುವ ಘಟನೆಗಳ ಪರಿಣಾಮವಾಗಿ ಇದ್ದಕ್ಕಿದ್ದಂತೆ ದ್ವಿಪಗಳೇಳುತ್ತವೆ, ದ್ವೀಪಗಳು ಮುಳುಗುತ್ತವೆ ; ಬೇರು ಭೂಮಿಯನ್ನಾಕ್ರಮಿಸುತ್ತದೆ ಅಥವಾ ಭೂಮಿಯೆ ಕಡಲನ್ನು ತಳ್ಳಿದಂತಾಗಿ ನೀರು ಹಿಂಜರಿಯುತ್ತದೆ ; ತೀರವು ಕುಸಿದುಬಿದ್ದು. ನೆಲವು ಕೊಚ್ಚಿಹೋಗುತ್ತದೆ : ಅಥವಾ ಸಮುದ್ರತಲದ ಅನರ್ಘ್ಯ ರತ್ನಗಳೊಡನೆ ಅಲ್ಲಿ ವಾಸಿಸುವ ವಿಚಿತ್ರವೂ ವಿಕಾರವೂ ಭಯಂಕರವೂ ಆದ ಪ್ರಾಣಿಗಳೂ ದಡಕ್ಕೆ ಚಿಮ್ಮಿ ಬೀಳುತ್ತವೆ. ಮೇಲೆ ನಿಂತು ನೋಡುವವರಿಗೆ ಈ ವ್ಯಾಪಾರಗಳು ಆಕಸ್ಮಿಕಗಳಂತೆ, ವಿಪ್ಲವಗಳಂತೆ. ಅದ್ಭುತಗಳಂತೆ ತೋರುತ್ತವೆ. ಆದರೆ ಭೂಗರ್ಭ ಸಮುದ್ರಗರ್ಭಗಳ ವಿಚಾರವಾದ ವಿಜ್ಞಾನವನ್ನು ತಿಳಿದ ಶಾಸ್ತ್ರಜ್ಞರಿಗೆ ಆ ವ್ಯಾಪಾರಗಳು ಅದ್ಭುತಗಳೂ ಅಲ್ಲ. ಆಕಸ್ಮಿಕಗಳೂ ಅಲ್ಲ, ವಿಪ್ಲವಗಳೂ ಅಲ್ಲ ; ಸಕಾರಣವಾಗಿ ಕಾಲದೇಶಗಳಲ್ಲಿ ವಿಕಾಸಹೊಂದಿದ ಪ್ರಕೃತಿ ಘಟನೆಯ ಶಿಖರಗಳಾಗುತ್ತವೆ ! ಹಾಗೆಯೆ ಹೂವಯ್ಯನ ಅಂತರಾತ್ಮದ ನಿಗೂಢ ಗಹ್ವರದಲ್ಲಿ ಬಾಹ್ಯದೃಷ್ಟಿಗೆ ತಿಳಿಯದಂತೆ ಅನೇಕ ವ್ಯಾಪಾರಗಳು ಜರುಗುತ್ತಿದ್ದುವು. ಅವುಗಳು ಹೊರಗೆ ಪ್ರಕಾಶಿತವಾದಾಗ ಅವನಿಗೆ ವಿಸ್ಮಯವಾಗುತ್ತಿತ್ತು" (ಪು. ೪೮೬).

ಇದು ಗದ್ಯಕಾವ್ಯದಲ್ಲಿ ಮೈದೋರಿದ ಒಂದು ಮಹೋಪಮೆ. ಕುವೆಂಪು ಅವರ ಓದಿನ ಹರಹು, ಓದಿದ್ದನ್ನು ತನ್ನದ್ದನ್ನಾಗಿ ಮಾಡಿಕೊಳ್ಳುವ ಪಚನಶಕ್ತಿ, ರಹಸ್ಯದಿಂದಿಯಾಗಿ ವರ್ಣಿಸುವ ಹಿರಿಮೆ, ಅನುಕರಣೀಯವಾಗಿದೆ. ಹೀಗೆ ಸಾಹಿತಿ ಹುಲ್ಲು ಮೇದು ಹಾಲುಕೊಡುವ ಹಸುವಿನಂತಾಗಬೇಕು.

ಹೂವಯ್ಯನ ಆಧ್ಯಾತ್ಮಿಕ ಅನುಭವವನ್ನು ಶಂಕಿಸುವವರಿಗೆ ವಿಶ್ವವಿಖ್ಯಾತ ಮಹಾ ಮನಶ್ಶಾಸ್ತ್ರಜ್ಞ ಡಾ॥ ಕಾರ್ಲ್ ಜಿ. ಯುಂಗ್‌ನ ವಿನಮ್ರಭಾವದ ನುಡಿಗಳು ನೆನಪಿನಲ್ಲಿರುವುದು ಒಳ್ಳೆಯದು :

"ದೇವರ ಜೊತೆ ಆತ್ಮ ಒಂದಾಗುವಿಕೆಯ ವಿಷಯ ಐರೋಪ್ಯ ಮನುಷ್ಯನನ್ನು ದಿಗ್‌ಭ್ರಾಂತಿಗೊಳಿಸುತ್ತದೆ. ಶ್ರೀರಮಣ ಮಹರ್ಷಿಯ ಉಪದೇಶಗಳಲ್ಲಿ ಅಭಿವ್ಯಕ್ತವಾಗಿರುವ ಅದ್ವೈತ ವಿಶಿಷ್ಟವಾಗಿ ಪ್ರಾಚ್ಯ ಸಾಕ್ಷಾತ್ಕಾರವಾಗಿದೆ. ಅದು ತನ್ನ ವ್ಯಾಪ್ತಿಗೆ ಮೀರಿದ ವಿಷಯ ಎಂದು ಹೇಳುವುದನ್ನು ಬಿಟ್ಟು ಮನೋವಿಜ್ಞಾನ ಹೆಚ್ಚಿನ ಕೊಡುಗೆ ಏನನ್ನೂ ಆ ಬಗ್ಗೆ ನೀಡಲಾರದು," ಎಂದು ಮನಶ್ಶಾಸ್ತ್ರದ ಮಿತಿಯನ್ನು

ಒಪ್ಪಿಕೊಳ್ಳುತ್ತಾ, ಆನುಭಾವಿಕ ಸತ್ಯದ ಬಗ್ಗೆ ಮುಂದುವರಿದು ಹೇಳುತ್ತಾನೆ : "ಈ ಅನುಭವ ವಲಯವನ್ನು ಪೌರ್ವಾತ್ಯದ ಅಂತರ್ ದರ್ಶನಾತ್ಮಕ ಪ್ರಜ್ಞೆಯು ಪಾಶ್ಚಾತ್ಯ ಮಾನವನಿಗೆ ಬಹುಮಟ್ಟಿಗೆ ಎಟುಕದ ಮಟ್ಟದಲ್ಲಿ ಸೂರೆಮಾಡಿಬಿಟ್ಟಿದೆ." [9]

ಆದ್ದರಿಂದ ಆನುಭಾವಿಕ ಸಂಗತಿಗಳನ್ನು ಕುರಿತಂತೆ ಹುಷಾರಾಗಿರುವುದು ಕ್ಷೇಮಕರ. ಕಾರ್ಲ್ ಮಾರ್ಕ್ಸ್ ಕೂಡ, ನನಗೆ ತಿಳಿದಂತೆ, ಆಧ್ಯಾತ್ಮಿಕ ಅನುಭವ ಮತ್ತು ಮೌಲ್ಯಗಳನ್ನು ನಿರಾಕರಿಸುವುದಿಲ್ಲ. ಬದಲಾಗಿ ಅವುಗಳ ಆವಿಷ್ಕಾರಕ್ಕಾಗಿ ಹೋರಾಡುತ್ತಾನೆಂದು ತೋರುತ್ತದೆ. ಆತ ಎಲ್ಲಿಯೂ ಬುದ್ಧ ಮುಟ್ಟಿದ ಮನಃಸ್ಥಿತಿಯನ್ನಾಗಲೀ, ಸಾಕ್ರೆಟಿಸ್ ಏರಿದ ಎತ್ತರವನ್ನಾಗಲೀ, ಕ್ರಿಸ್ತ ಪಡೆದ ಅನುಭವವನ್ನಾಗಲೀ ಅನುಮಾನಿಸುವಂತೆ ಕಾಣುವುದಿಲ್ಲ. ಆದುದರಿಂದ ಮಾರ್ಕ್ಸ್‌ನ ಹೆಸರಿನಲ್ಲಿ ಶಪಥ ಮಾಡುವವರು ಮುಕ್ತ ಮನಸ್ಸಿನ ಜಿಜ್ಞಾಸುಗಳಾಗುವುದು ಶ್ರೇಯಸ್ಕರ.

'ಕಾನೂರು ಹೆಗ್ಗಡಿತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಮಹಾಕಾದಂಬರಿಗಳಲ್ಲಿ ಕುವೆಂಪು ಧರ್ಮಸ್ಥಳವನ್ನು ಉಗ್ರವಾಗಿ ವಿಡಂಬಿಸಿದ್ದಾರೆ.[10] ಆ ವಿಡಂಬನೆಯ ಹಿಂದೆ ಕುತ್ಸಿತ ಬುದ್ಧಿಯಿಲ್ಲ. ಸುಲಿಗೆ ನಿಲ್ಲಬೇಕು, ಮೂಢನಂಬಿಕೆ ತೊಲಗಬೇಕು, ಜನಕೋಟಿ ಪ್ರಬುದ್ಧವಾಗಬೇಕು, ಉದ್ಧಾರವಾಗಬೇಕು, ಎಂಬ ಕಳಕಳಿ ಇದೆ. ಮೂಢನಂಬಿಕೆಯ ಅಡಿಪಾಯದ ಮೇಲೆ ಧರ್ಮಸ್ಥಳ ನಿಂತಿದೆ, ಎನ್ನುವುದನ್ನು ಸುಂದರವಾಗಿ ನಿರೂಪಿಸಿದ್ದಾರೆ. ಶೋಷಣೆ ಮತ್ತು ಮೌಢ್ಯಕ್ಕೆ ಧರ್ಮಸ್ಥಳ ಸಂಕೇತ.

---

9 "The identification of the Self with God will strike the European shocking It is a specially oriental Realisation as expressed in Sri Ramana's utterances. Psychology cannot contribute anything further to it, except the remark that it lies far beyond its scope to propose such a thing (p. 5) .... A field of experience which the introspective consciousness of the East has exploited to a degree alomst unattainable by the western human being.
—*Maharshi Ramana : His Relevance Today*, (1980)
(edited by B. K. Ahluwalia

10 'ಕಾನೂರು ಹೆಗ್ಗಡಿತಿ' ಪ್ರಸಿದ್ಧವಾದ ಪ್ರಾರಂಭದಲ್ಲಿ ಧರ್ಮಸ್ಥಳದ ಹೆಗ್ಗಡೆಯವರು ತಮ್ಮ ಶ್ರೀ ಕ್ಷೇತ್ರವನ್ನು ಟೀಕಿಸಿದ್ದಾನೆಂದು ದಾವಾ ಹಾಕಬೇಕೆಂದು ಸಿದ್ಧವಾಗಿ, ನ್ಯಾಯಮೂರ್ತಿ ನಿಟ್ಟೂರು ಶ್ರೀನಿವಾಸರಾಯರಲ್ಲಿ ಪ್ರಸ್ತಾಪಿಸಿದಾಗ ಆ ಮಹಾನುಭಾವರು ಮೊಕದ್ದಮೆ ನಿಲ್ಲುವುದಿಲ್ಲವೆಂದೂ ಸಮಾಜದ ಉನ್ನತಿಗಾಗಿ ವಿಡಂಬನೆ ಮಾಡಲು ಸಂವಿಧಾನಬದ್ಧ ಅವಕಾಶವಿದೆ ಎಂದು ಬುದ್ಧಿವಾದ ನೀಡಿ, ನೀವು ಪುಟ್ಟಪ್ಪನವರನ್ನು ಎದುರು ಹಾಕಿಕೊಂಡರೆ ನಿಮ್ಮ ಧರ್ಮಸ್ಥಳದ ಅಸ್ತಿತ್ವಕ್ಕೇ ಕೊಡಲಿಪೆಟ್ಟು ಬೀಳುತ್ತದೆ ; ಬೆಂಕಿಯೊಡನೆ ಸರಸವಾಡಬೇಡಿ, ಎಂದು ಕಿವಿಮಾತು ಹೇಳಿದರಂತೆ.

ಮನುಷ್ಯ ಚೆನ್ನಾಗಿ ಬದುಕಬೇಕಾದರೆ ಮೂಢನಂಬಿಕೆಗಳು ಸಂಪೂರ್ಣವಾಗಿ ಸಾಯ ಬೇಕೆಂದು ಕುವೆಂಪು ಅವರಷ್ಟು ಪರಿತಪಿಸುವವರು ಇಲ್ಲ.

"ರಾಮಯ್ಯನಂತೂ ಹೂವಯ್ಯನ ಸಹವಾಸದಲ್ಲಿದ್ದಾಗ ಯಾತ್ರೆಗಳು, ಕ್ಷೇತ್ರ ಗಳು ಮತ್ತು ದೇವರುಗಳನ್ನು ತಾನು ಹಳಿಯುತ್ತಿದ್ದುದು ಅಥವಾ ಉದಾಸೀನಭಾವ ದಿಂದ ಕಾಣುತ್ತಿದ್ದುದು ಶುದ್ಧ ಮೂರ್ಖತನವೆಂದೂ ಇನ್ನು ಮುಂದೆ ಎಂದೆಂದಿಗೂ ಹಾಗೆ ಮಾಡುವುದಿಲ್ಲವೆಂದೂ ಗಟ್ಟಿಮನಸ್ಸು ಮಾಡಿಕೊಂಡನು. ಧರ್ಮಸ್ಥಳದಲ್ಲಿ ಒಂದೊಂದು ತಲೆಗೆ ನೂರು ನೂರೈವತ್ತು ರೂಪಾಯಿಗಳವರೆಗೂ ಕಾಣಿಕೆ ತೆಗೆದು ಕೊಂಡಿದ್ದರೂ ಕೂಡ ಯಾರೊಬ್ಬರಿಗೂ ದುಃಖವಾಗಲಿಲ್ಲ ಅಥವಾ ಆದವರು ಬಾಯಿ ಬಿಟ್ಟು ಹೇಳಿದರೆ ದೇವರಿಗೆ ಮುನಿಸಾಗುತ್ತದೆಂದು ಹೇಳಲಿಲ್ಲ....ಒಲ್ಲದ ಹೆಂಡಿರನ್ನು ಒಲಿಸಿಕೊಡುವುದಕ್ಕಿಂತಲೂ ಶ್ರೇಷ್ಠತರವಾದ ಕಾರ್ಯ ಇನ್ನಾವುದಿದೆ. ಆ ದೇವರಿಗೆ ? ಅವನು ಹಾಗೆ ಮಾಡುತ್ತ ಬರಲಿ : ನಾಸ್ತಿಕರೆಲ್ಲ ಅಸ್ತಿಕರಾಗುತ್ತಾರೆ !" (ಪು. ೫೫೦).

ಧರ್ಮಸ್ಥಳದ ಕರಾಳ ಸ್ವರೂಪ 'ಕಾನೂರು ಹೆಗ್ಗಡಿತಿ'ಗಿಂತ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ನರಕಮಯವಾಗಿ ಚಿತ್ರಿತವಾಗಿದೆ ; ಪರಿಣಾಮ ಘೋರವಾಗಿದೆ. ಮೊದಲನೆಯದಕ್ಕಿಂತ ಎರಡನೆಯದರಲ್ಲಿ ಧರ್ಮಸ್ಥಳದ ವಿಡಂಬನೆ ಮತ್ತು ಖಂಡನೆ ಬಹಳ ವ್ಯಾಪಕವಾಗಿದೆ.

ದೇವಯ್ಯ ಕಾವೇರಿಗೆ ಕೊಟ್ಟಿದ್ದ ಉಂಗುರ ಅವಳ ಬೆರಳಿನಿಂದ ಜಾರಿ ಬಿದ್ದು ಹೋಗಿ ಕಾಮುಕ ಸೇರೆಗಾರ ಜೇಂಕ್ರನಿಗೆ ಸಿಗುತ್ತದೆ (ಪು. ೫೦೫)[11] (ಎರಡು ಕಾದಂಬರಿಗಳ ಸೇರೆಗಾರರೂ ಕಾಮುಕರು !) ಉಂಗುರದ ಹಿಂದೆ ದುರಂತಗಳ ಪರಂಪರೆಯಿದೆ ; ಅದಕ್ಕೆ ಭಯಂಕರ ಇತಿಹಾಸವಿದೆ (ಪು. ೫೦೬ ; ೬೪೨ ; ೬೬೪). ದೇವಯ್ಯ ತನ್ನ ಉಂಗುರವನ್ನು ವಾಪಸ್ಸು ಕೊಡೆಂದು ಕಾವೇರಿಯನ್ನು ಒಂದೇ ಸಮನೆ ಪೀಡಿಸುತ್ತಾನೆ (ಪು. ೬೪೪). ನಿಸ್ಸಹಾಯಕಳಾದ ಕಾವೇರಿ ಜೇಂಕ್ರನಿಗೆ ವಿಷಯ ತಿಳಿಸುತ್ತಾಳೆ. ಉಂಗುರ ಕೊಡಿಸುತ್ತೇನೆಂದು ಒಂದು ರಾತ್ರಿ ಅವಳನ್ನು ಬರಮಾಡಿಕೊಂಡು ಪುಡಿಸಾಬು ಮತ್ತು ಅವನು ಅವಳ ಮೇಲೆ ಅತ್ಯಾಚಾರ ಎಸಗಿ ಬಿಡುತ್ತಾರೆ (ಪು. ೬೬೦). ಹುಡುಗಿ ಬಾವಿಗೆ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾಳೆ (ಪು. ೬೬೪). ಕಾವೇರಿಯ ತಾಯಿ ಉಂಗುರ ಸಿಗದಿದ್ದಾಗ "ಧರ್ಮಸ್ಥಳಕ್ಕೆ ಆಣೆಯಿಟ್ಟುಕೊಂಡಿದ್ದಳು : 'ಅಣ್ಣಪ್ಪದೇವರಿಗೆ ಶಕ್ತಿ ಇದ್ದಲ್ಲಿ ಉಂಗುರ ಎಲ್ಲಿಗೆ ಹೋಗುತ್ತದೆ ನೋಡುವ !' ಎಂದು. ಅಣ್ಣಪ್ಪ ಭೂತರಾಯ ಇಂತಹ ಭಯಂಕರ ರೀತಿಯಲ್ಲಿ ಆ ಉಂಗುರವನ್ನು ತನಗೆ ಹಿಂತಿರುಗಿಸುತ್ತಾನೆ, ಎಂದು ಆ ಭಕ್ತೆ ಸ್ವಪ್ನ ದಲ್ಲಿಯೂ ಭಾವಿಸಿರಲಿಲ್ಲ !" (ಪು. ೬೬೩). ಆದ್ದರಿಂದ "ಆ ಅನಿಷ್ಟ ವಸ್ತುವನ್ನು ಧರ್ಮಸ್ಥಳದ ದೇವರ ಪೆಟ್ಟಿಗೆಗೆ ಹಾಕಿಬಿಡಲು ಕಿಟ್ಟಯ್ಯಸೆಟ್ಟರ ಕೈಲಿ ಕಳುಹಿಸಿದೆ

---

11 ಈ ಪುಟಸಂಖ್ಯೆಗಳು 'ಮಲೆಗಳಲ್ಲಿ ಮದುಮಗಳು' ೧೯೭೪ರ ಮುದ್ರಣಕ್ಕೆ ಅನ್ವಯಿಸುತ್ತವೆ.

ನೆಂದು ಹೇಳಿದಳು. ಕಾನೂನಿನ ಕೈಯಿಂದ ತಲೆ ತಪ್ಪಿಸಿಕೊಳ್ಳಲು ಉಂಗುರವೂ ಘಟ್ಟದ ಕೆಳಕ್ಕೆ ಹಾರಿತು ! ಧರ್ಮಸ್ಥಳದ ದೇವರ ಸನ್ನಿಧಿಯು ರಕ್ಷೆಗೆ !" (ಪು. ೬೬೫).

ಇಂಥ ಪಾಪಮಯ ಸಂಪತ್ತನ್ನು ನುಂಗಿ ನುಂಗಿ ಧರ್ಮಸ್ಥಳ ಕೊಳಕು ಕರ್ಮಸ್ಥಳವಾಗಿದೆ. ಇದನ್ನು ಎಷ್ಟು ಬೇಗ ಜನರು ಅರಿತುಕೊಳ್ಳುತ್ತಾರೋ ಅಷ್ಟು ಬೇಗ ಅವರಿಗೇ ಕ್ಷೇಮ.

ಕಾಳಿದಾಸನ 'ಅಭಿಜ್ಞಾನ ಶಾಕುಂತಲಂ' ನಾಟಕದಲ್ಲಿ ಉಂಗುರ ವಹಿಸುವ ಪಾತ್ರವನ್ನೂ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಉಂಗುರ ನಡೆಸುವ ಕಾರಭಾರವನ್ನೂ ತುಲನೆಮಾಡುವುದರಿಂದ ಈ ಇಬ್ಬರು ಕಲಾವಿದರಿಗೂ ಇರುವ ಸಾಮ್ಯ ವೈಷಮ್ಯಗಳನ್ನು ಗುರುತಿಸಬಹುದು. 'ಶಾಕುಂತಲ'ದಲ್ಲಿ ಒಂದು ಹೆಣ್ಣಿನ ಏಳುಬೀಳಿನ ಸುಖದುಃಖದ ಏರು ಪೇರನ್ನು ನಿರ್ಧರಿಸುವ ಶಕ್ತಿಯಾಗಿ ಅಂಗುಲೀಯಕ ತನ್ನ ಮಹಿಮೆಯನ್ನು ಸಾಬೀತುಪಡಿಸುತ್ತದೆ. ಅಂದರೆ ಅದರ ಶಕ್ತಿ ಬಹುಮಟ್ಟಿಗೆ ವ್ಯಕ್ತಿಗತವಾಗಿದೆ ; ಸುಖಾಂತವಾಗಿದೆ. ಆದರೆ 'ಮಲೆಗಳಲ್ಲಿ ಮದುಮಗಳು' ಕೃತಿಯಲ್ಲಿ ಬರುವ ಉಂಗುರ ಏನೆಲ್ಲ ಅನಾಹುತಗಳನ್ನು ಮಾಡಿ ಎಷ್ಟೊಂದು ಜನರ ನೋವು ಸಾವುಗಳಿಗೆ ಕಾರಣವಾಗುತ್ತದೆ ! ಈ ಉಂಗುರ ವೈಯುಕ್ತಿಕ ಮಟ್ಟದಲ್ಲಿ ಅತ್ಯಂತ ದುರಂತಮಯವೂ ಸಾಮಾಜಿಕಸ್ತರದಲ್ಲಿ ಮಹಾ ಪಾಪಮಯವೂ ಆಗಿ ತನ್ನ ಘೋರ ಭಯಂಕರ ಸಾಮರ್ಥ್ಯವನ್ನು ಪ್ರಕಟಿಸುತ್ತದೆ. ಧರ್ಮಸ್ಥಳದ ಅಸ್ತಿತ್ವಕ್ಕೆ ಧಕ್ಕೆ ತರುವಂಥ ದೊಡ್ಡ ಸಾಮಾಜಿಕ ವಿಡಂಬನೆಯಾಗಿದೆ ಉಂಗುರ ಪ್ರಸಂಗ.

ಹೂವಯ್ಯ ಆಸ್ತಿಯ ಮೇಲೆ ಮೋಹವುಳ್ಳವನಲ್ಲ. 'ಹೊಟ್ಟೆಗೆ ಬಟ್ಟೆಗೆ ಸಿಕ್ಕಿದರಾಯ್ತು !' ಎಂಬ ಧೋರಣೆ ಇದೆ : "....ಚಿನ್ನ ತುಂಬಿಕೊಂಡು ಸುಖಪಟ್ಟೋರು ಪ್ರಪಂಚದಲ್ಲಿ ಬಹಳ ಜನ ಇಲ್ಲ" (ಪು. ೩೩೯). ಆಸ್ತಿಯಿಂದ ಉಂಟಾಗುವ ಅನಾಹುತಗಳನ್ನು ಹೂವಯ್ಯ ಚೆನ್ನಾಗಿ ಬಲ್ಲನು. ಕುವೆಂಪು ಬಂಡವಾಳಶಾಹಿಯ ವಿರುದ್ಧ ಮಾತನಾಡಿಲ್ಲ ಎಂದು ಟೀಕಿಸುವವರು ಇಂಥ ಸೂಕ್ಷ್ಮ ಸಂಗತಿಗಳನ್ನು ಗಮನಿಸುವುದಿಲ್ಲ. ಏಕೆಂದರೆ ಅವರು ಸರಿಯಾಗಿ ಕುವೆಂಪು ಕೃತಿಗಳನ್ನು ಸಮಗ್ರವಾಗಿ ಓದಿಲ್ಲ. ಬಂಡವಾಳಶಾಹಿಯನ್ನು ವಿರೋಧಿಸುತ್ತೇನೆಂದು ಲೇಖಕ ಗಂಟಲು ಬಿರಿಯುವಂತೆ ಕಿರುಚಬೇಕಾಗಿಲ್ಲ. ಆಸ್ತಿ ಕೊಳ್ಳುವಂಥದೂ ಅಲ್ಲ, ಮಾರುವಂಥದೂ ಅಲ್ಲ ; ಅದು ಮಾನವನ ಸುಖ ಸಾಧನೆಗಳಿಗೆ ಆಧಾರ, ಎಂಬ ಅನುಪಮ ಸಮಾಜವಾದಿ ಸತ್ಯವನ್ನು ಹೂವಯ್ಯ ಬದುಕಿ ತೋರಿಸುತ್ತಾನೆ.

ಶೋಷಣೆಯ ನಿರ್ಮೂಲನ, ವೈಚಾರಿಕತೆಯ ಬಿತ್ತನೆ, ವರ್ಗಭೇದದ ಛೇದನ, ವ್ಯಕ್ತಿಯ ವಿಕಸನ, ಮಾನವೀಯತೆಯ ಪೋಷಣೆ— ಇಷ್ಟನ್ನು ಆಗುಮಾಡಿದರೆ ಬಂಡಾಯ ಪೂರ್ಣವಾಗುವುದಿಲ್ಲ. ಜ್ಞಾನದ ದಿಗಂತಗಳನ್ನು ಸದಾ ವಿಸ್ತರಿಸುವುದ ಬಂಡಾಯದ ಪರಮ ಗುರಿಗಳಲ್ಲಿ ಒಂದು. ಜ್ಞಾನ ವಿಕಾಸವಾದಂತೆ ಜೀವನ ವಿಕಾಸವಾಗುತ್ತದೆ.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ರೋಮ್ ದೇಶದ ಸುಪ್ರಸಿದ್ಧ ವಾಗ್ಮಿ ಮತ್ತು ವಿದ್ವಾಂಸನಾದ ಸಿಸೇರೊಗೆ ತನ್ನ ಕೃತಿಯನ್ನು ಅರ್ಪಿಸುತ್ತ, ಅಷ್ಟೇ ವಿಖ್ಯಾತನಾದ ಮಹಾಯೋಧ ಮತ್ತು ಚಿಂತಕ ಜೂಲಿಯಸ್ ಸೀಸರ್ ಬರೆದಿರುವುದು ಮನನೀಯವಾಗಿದೆ : "ಮಹಾ ಸೇನಾನಾಯಕರದಕ್ಕಿಂತ ನಿನ್ನ ದಿಗ್ವಿಜಯ ದೊಡ್ಡದು. ರೋಮ್ ಚಕ್ರಾಧಿಪತ್ಯದ ಗಡಿಗಳನ್ನು ವಿಸ್ತರಿಸುವುದಕ್ಕಿಂತ ಮಾನವನ ಬುದ್ಧಿ ಶಕ್ತಿಯ ಎಲ್ಲೆಗಳನ್ನು ವಿಸ್ತರಿಸುವುದು ಘನತರ ಕಾರ್ಯ."[12] ನನ್ನ ದೇಶದ ಗಡಿಗಳನ್ನು ನಾನು ವಿಸ್ತರಿಸಿದ್ದೇನೆ ; ಆದರೆ ಸಿಸೇರೊ ಜ್ಞಾನದ ಗಡಿಗಳನ್ನು ವಿಸ್ತರಿಸಿದ್ದಾನೆ, ಎಂಬರ್ಥದ ಮಾತುಗಳನ್ನು ತುಂಬ ವಿನಯಪೂರ್ವಕವಾಗಿ ಹೇಳಿದ್ದಾನೆ. ಆದ್ದರಿಂದ ಜ್ಞಾನದ ಕ್ಷಿತಿಜಗಳನ್ನು ವಿಸ್ತರಿಸುವ ಸಾಧನೆ ಮತ್ತು ಸೇವೆ ಸದಾ ದೊಡ್ಡದು ; ಶಾಶ್ವತವಾದುದು.

ಕಾದಂಬರಿಯಷ್ಟು ಜನಪ್ರಿಯವೂ ಸರ್ವಾದರಣೀಯವೂ ಆದ ಸಾಹಿತ್ಯ ಪ್ರಕಾರ ಮತ್ತೊಂದಿಲ್ಲ. ಜನರು ಕಾದಂಬರಿ ಓದುವಷ್ಟು ಕಾವ್ಯ, ನಾಟಕ, ವಿಮರ್ಶೆ, ವಿಚಾರ ಸಾಹಿತ್ಯ ಓದುವುದಿಲ್ಲ. ಆದ್ದರಿಂದ ಕಾದಂಬರಿಕಾರ ಎಲ್ಲಾ ಜ್ಞಾನಶಾಖೆಗಳ ಪರಿಚಯವನ್ನು ಚೆನ್ನಾಗಿ ಪಡೆದಿರಬೇಕಾಗುತ್ತದೆ. ವಾಚಕರ ಮನಸ್ಸಿನ ಕತ್ತಲೆಯನ್ನು ನಿರ್ಮೂಲ ಮಾಡುವಂಥ ತಿಳಿವಳಿಕೆಯ ಬೆಳಕನ್ನು ನೀಡಬೇಕು. ಅವರ ಮನಸ್ಸನ್ನು ಬೆಳೆಸಬೇಕು. ಜ್ಞಾನರವಿಯ ರಥವನ್ನು ಮುಂದೆ ಕೊಂಡೊಯ್ಯಬೇಕು. ಕಾದಂಬರಿಕಾರ ತನ್ನ ಕಾಲದ ಜ್ಞಾನ ವಿಜ್ಞಾನದ ಪ್ರವೀಣನಾಗಿರಬೇಕು.[13] ಉನ್ನತ ಪ್ರಜ್ಞೆಯ

---

12 "You have gained a triumph to be preferred to that of the great generals. It is a nobler thing to enlarge the boundaries of human intelligence than those of the Roman empire." —Will Durant : *Caesar and Christ*, p. 162

13 ಇಂಗ್ಲಿಷ್‌ನ ಪ್ರಥಮ ಮಹಾಕಾದಂಬರಿಕಾರ ಹೆನ್ರಿ ಫೀಲ್ಡಿಂಗ್ (1707–54) ಹೇಳುವ ಮಾತುಗಳು ದಾರಿದೀಪವಾಗಿವೆ : "Homer and Milton, who, though they added the ornament of numbers to their works, both historians of our order, were *masters of all the learning of their times.*" (ಒತ್ತು ನನ್ನದು)

—Henry Fielding : *Tom Jones* bk. 9, ch. 1.

ಕಲಾವಿದನ ಮಾನಸಿಕ ಔನ್ನತ್ಯವನ್ನು ಕುರಿತು ಮಾತನಾಡುವ ಪ್ರಸಿದ್ಧ ಇಂಗ್ಲಿಷ್ ವಿಮರ್ಶಕ ಐ.ಎ. ರಿಚರ್ಡ್ಸ್ ಫೀಲ್ಡಿಂಗ್‌ನ ಮೇಲಿನ ಮಾತುಗಳಿಂದ ಸ್ಫೂರ್ತಿ ಪಡೆದಿರಬೇಕು. "He (the artist) is the point at which the growth of the mind shows itself."

—I. A. Richards : *Principal of Literary Criticism*, p. 61

ಪ್ರತೀಕವಾಗಬೇಕು. ಈಗ ಮಹಾಕಾವ್ಯದ ಸ್ಥಾನವನ್ನು ವಿಶ್ವಸಾಹಿತ್ಯದಲ್ಲಿ ಮಹಾ ಕಾದಂಬರಿ ತುಂಬುತ್ತಿದೆ. ಆದುದರಿಂದ ಬೌದ್ಧಿಕ ಮೇರೆಗಳನ್ನು ವಿಸ್ತರಿಸುವ ಕಡೆಗೆ ಸಾಹಿತಿ ದೃಷ್ಟಿ ಇಟ್ಟುಕೊಂಡು ಕಷ್ಟಪಡಬೇಕು. ಬೌದ್ಧಿಕ ದಿಗ್ವಿಜಯವೆ ಪರಮ ವಿಜಯಂ.

'ಕಾನೂರು ಹೆಗ್ಗಡಿತಿ'ಯ ರಚನೆಯ ಹೊತ್ತಿಗೆ ಪ್ರಚಲಿತವಿದ್ದ ಜ್ಞಾನ ಸಂಪತ್ತನ್ನು ಕಾದಂಬರಿಕಾರರು ರಸವತ್ತಾಗಿ ತಂದಿದ್ದಾರೆ. ತಮ್ಮ ಕಾಲದ ಎಲ್ಲಾ ಜ್ಞಾನದ ನವನೀತವನ್ನು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಅತ್ಯಂತ ಸೃಜನಾತ್ಮಕವಾಗಿ ಮೂಡಿಸಿದ್ದಾರೆ. ಜ್ಞಾನದ ಕೈ ಮೇಲಾದಾಗ ವ್ಯಕ್ತಿ ಏಳುತ್ತಾನೆ ; ಮೂಢನಂಬಿಕೆಗಳ ವಶನಾದಾಗ ಬೀಳುತ್ತಾನೆ.

ಭೂಗೋಳಶಾಸ್ತ್ರ, ಖಗೋಳಶಾಸ್ತ್ರ, ಮನೋವಿಜ್ಞಾನ. ವಿಶ್ವಸಾಹಿತ್ಯ, ದರ್ಶನ, ಇತಿಹಾಸ—ಮುಂತಾದ ನಾನಾ ಜ್ಞಾನಶಾಖೆಗಳಲ್ಲಿ ಓದುಗರು ಆಸಕ್ತಿಯನ್ನು ಬೆಳೆಸಿಕೊಳ್ಳುವ ರೀತಿಯಲ್ಲಿ ಕಾದಂಬರಿಕಾರರು ಅವುಗಳನ್ನು ಸಂದರ್ಭೋಚಿತವಾಗಿ ಪರಿಚಯಿಸುತ್ತಾರೆ. ಉದಾಹರಣೆಗೆ ಒಂದೆರಡನ್ನು ನೋಡಬಹುದು :

ಹೆಚ್ಚು ಓದಿರದ ಸೀತೆಗೆ ವಿದ್ಯಾವಂತ ಹೂವಯ್ಯ ವೈಜ್ಞಾನಿಕ ಸತ್ಯಗಳನ್ನು ತಿಳಿಸುತ್ತಾನೆ : "ಸೂರ್ಯನು ಭೂಮಿಗಿಂತಲು ಸಹಸ್ರ ಪಾಲು ದಪ್ಪವಾಗಿದ್ದಾನೆ.... ರಾತ್ರಿ ಕಾಣುವ ನಕ್ಷತ್ರಗಳು ಸೂರ್ಯನಿಗಿಂತಲೂ ಸಹಸ್ರಪಾಲು ದೊಡ್ಡದಾಗಿವೆ...[14] (ಪು, ೧೭೯ ; ೧೨೮)

ಸಾಹಿತ್ಯ ಕೇವಲ ಅಂತರಂಗದ ವಿಷಯವಲ್ಲ ; ಅದು ಬಹಿರಂಗವನ್ನೂ ಒಳ ಗೊಳ್ಳುತ್ತದೆ. ಒಳಗೊಳ್ಳಬೇಕು. ಅಂತರಂಗ ಮತ್ತು ಬಹಿರಂಗಗಳ ಸಮತೋಲನವೆ ಶ್ರೇಷ್ಠ ಸಾಹಿತ್ಯದ ಗುಣ. ಆದ್ದರಿಂದ ಲೋಕದಲ್ಲಿ ನಡೆಯುವ ವಿವಿಧ ಅಸಂಖ್ಯ ಕಾರ್ಯಾವಳಿಗಳ ದಿಗ್ದರ್ಶನ ಮಾಡಿಸುತ್ತಾರೆ :

"ಬಿತ್ತರದ ಜಗತ್ತಿನಲ್ಲಿ ಮಹದ್ವ್ಯಾಪಾರಗಳು ಜರುಗುತ್ತಿರುತ್ತವೆ. ಘೋರ ಸಂಗ್ರಾಮಗಳಾಗಿ ಕಿರೀಟ ಸಿಂಹಾಸನಗಳುರುಳಿ ರಾಜ್ಯಗಳೆದ್ದು ಬಿದ್ದು ಕೌಲುಗಳಾಗಿ ಹೋಗಿ ರಾಷ್ಟ್ರ ರಾಷ್ಟ್ರಗಳ ಜೀವನಗಳಲ್ಲಿ ಮಹಾ ಪರಿವರ್ತನೆಗಳಾಗುತ್ತಿರುತ್ತವೆ. ಸಜೀವ ಜ್ವಾಲಾಮುಖಿಗಳಿಂದ ನಗರಗಳು ಭಸ್ಮವಾಗುತ್ತವೆ. ಅತಿ ಪ್ರವಾಹದಿಂದ

ರಿಚರ್ಡ್ಸ್‌ನ ಈ ಮಾತುಗಳನ್ನು ನೆನಸಿಕೊಂಡು ಎಫ್. ಆರ್. ಲೀವಿಸ್ ಬೇರೊಂದು ಬಗೆಯಲ್ಲಿ ಹೇಳಿದ್ದಾನೆ : "He is....at the most conscious point of the race in his time."

—F. R. Leavis : *New Bearings in English Poetry,* p. 19

14 ಆಸ್ತಕರು ಜೇಮ್ಸ್ ಜೀನ್ಸ್ ಅವರ *The Mysterious Universe* ಎಂಬ ಅಪೂರ್ವ ಕೃತಿಯನ್ನು ಓದಬಹುದು

ಪ್ರಾಂತಗಳು ಕೊಚ್ಚಿಹೋಗುತ್ತವೆ. ಲಕ್ಷಾಂತರ ಜನರು ಸಾಯುತ್ತಿರುತ್ತಾರೆ. ಮನುಷ್ಯರ ಯಂತ್ರ ಕೌಶಲ್ಯದಿಂದ ಮರುಭೂಮಿಗಳು ನಂದನವನಗಳಾಗುತ್ತವೆ. ಕಾವ್ಯ ಕಲೆಗಳು ಅಭಿವೃದ್ಧಿ ಹೊಂದುತ್ತಿರುತ್ತವೆ. ಸತ್ತವರ ಸಂಖ್ಯೆಗಿಂತಲೂ ಹೆಚ್ಚು ಸಂಖ್ಯೆ ಹುಟ್ಟುತ್ತಿರುತ್ತಾರೆ. ಸಮುದ್ರಗಳು ಕೆರಳಿ ದ್ವೀಪಗಳು ಮುಳುಗಿ ದ್ವೀಪಗಳೇರುತ್ತಿರುತ್ತವೆ. ಸೂರ್ಯ ಚಂದ್ರ ಗ್ರಹಗಳು ಅನಂತಾಕಾಶದಲ್ಲಿ ಯಾವ ಉದ್ದೇಶದಿಂದಲೋ ಏನೋ ಸುತ್ತುತ್ತಾರೆ. ಬರುಗಣ್ಣಿಗೆ ಕಾಣದೆ ಯಂತ್ರದೃಷ್ಟಿಗೆ ಮಾತ್ರ ಗೋಚರವಾಗಿರುವ ತಾರೆ ನೀಹಾರಿಕೆಗಳಲ್ಲಿ ಭಯಂಕರ ಅನಲ ವಿಪ್ಲವಗಳಾಗುತ್ತಿರುತ್ತವೆ...." (ಪು. ೧೩೯),

ಸಿಗ್ಮಂಡ್ ಫ್ರಾಯ್ಡ್ ಪ್ರತಿಪಾದಿಸಿದ ಮನೋವಿಶ್ಲೇಷಣೆಯ ಪ್ರಥಮ ಪರಿಚಯವನ್ನು ಕಾದಂಬರಿ ನೀಡುತ್ತದೆ :

"ಮನುಷ್ಯನ ಜಾಗ್ರದವ್ಯವಸ್ಥೆಯ ಜೀವನ ಮಹಾದ್ಭುತವಾಗಿದೆ. ಆದರೆ ಸ್ವಪ್ನಜಗತ್ತು ಅದ್ಭುತತರವಾದುದು.... ಜಾಗ್ರಜ್ಜೀವನದ ಬಯಕೆಗಳೂ ಭಯಗಳೂ ನಿದ್ದೆಯ ಲೋಕದಲ್ಲಿ ಕನಸುಗಳ ರೀತಿಯಲ್ಲಿ ಜರುಗಿ ಕೈಗೂಡುತ್ತವೆ ಎಂದು ಮನಶ್ಶಾಸ್ತ್ರಜ್ಞರ ಅಭಿಪ್ರಾಯವಿದೆ...." (ಪು. ೨೬೭).

ರೈತಸಮಸ್ಯೆ, ಗ್ರಾಮೀಣಾಭಿವೃದ್ಧಿ, ಸರ್ಕಾರದ ಸುಲಿಗೆ (ಪು. ೨೪೨), ಪೊಲೀಸರ ಕ್ರೂರ ಭ್ರಷ್ಟಾಚಾರ (ಪು. ೪೯೩), ಕಾಡಿನ ಮರಗಳನ್ನು ಕಡಿದು ಕಳ್ಳ ನಾಟಾ ಸಾಗಿಸುವುದು (ಪು. ೨೮೮), ಕದ್ದು ಕಳ್ಳು ಕಟ್ಟುವುದು (ಪು. ೫೦), ಇತ್ಯಾದಿ ಇತ್ಯಾದಿ ಸಮಸ್ಯೆಗಳ ಮೇಲೆ ಕೃತಿ ಕ್ಷಕಿರಣ ಹರಿಸಿದೆ. 'ಕಾನೂರು ಹೆಗ್ಗಡಿತಿ' ಪ್ರತಿಯೊಂದು ಹಳ್ಳಿಯ ಕಥೆ.

ಗ್ರಾಮ ಜೀವನದ ಸ್ಥಳೀಯ ವಿವರಗಳನ್ನು ಅನ್ಯಾದೃಶವಾಗಿ 'ಕಾನೂರು ಹೆಗ್ಗಡಿತಿ' ನೀಡುತ್ತದೆ. ಹಳ್ಳಿಯ ಬದುಕಿನ ಎಲ್ಲಾ ಸ್ಥೂಲ ಮತ್ತು ಸೂಕ್ಷ್ಮ ಸಂಗತಿಗಳನ್ನು ಗಾಢ ಸಾಮಾಜಿಕ ಪ್ರಜ್ಞೆಯಿಂದಲೂ ಐತಿಹಾಸಿಕ ತಿಳಿವಿನಿಂದಲೂ ಕಾದಂಬರಿ ಸಾಕ್ಷೀಭೂತವಾಗಿ ದಾಖಲು ಮಾಡುತ್ತದೆ. 'ಕಾನೂರು ಹೆಗ್ಗಡಿತಿ' ಯಲ್ಲಿ ಆದರ್ಶ ಮತ್ತು ವಾಸ್ತವ ಅಪೂರ್ವವಾಗಿ ಮೇಳೈಸಿವೆ. ಅದರಲ್ಲಿ ರಾಮಾಯಣದ ಆದರ್ಶಮಯತೆಯೂ ಮಹಾಭಾರತದ ವಾಸ್ತವಿಕತೆಯೂ ಒಂದೆಡೆ ಹೊಂದಿಕೊಂಡಿವೆ. ಹೊಲಸು ಬದುಕಿನಿಂದ ಪಾರಾಗಿ ಸೊಗಸು ಜೀವನದ ಕಡೆಗೆ ಹೇಗೆ ನಡೆಯಬೇಕೆಂಬುದನ್ನು ಕಾದಂಬರಿ ಕಲಾತ್ಮಕವಾಗಿ ನಾಟ್ಯೀಕರಿಸುತ್ತದೆ ; ಸಂಕುಚಿತತೆಯನ್ನು ತ್ಯಜಿಸಿ ವಿಶಾಲತೆಯನ್ನು ಸಾಧಿಸುತ್ತ ಕೃತಿ ಸಾರ್ವತ್ರಿಕವಾಗುತ್ತದೆ.

ವೈವಿಧ್ಯಮಯವೂ ವಿಚಾರಪೂರ್ಣವೂ ಕಲಾಯುಕ್ತವೂ ಸತ್ವಪ್ರದವೂ ಆದ ಈ ಮಹಾಕೃತಿಯನ್ನು ಅನೇಕರು ಅನಾವಶ್ಯಕವಾಗಿ ಟೀಕಿಸಿದ್ದಾರೆ. ಕಾರಣ : ಅವರೆಲ್ಲ ಪ್ರತಿಗಾಮಿ ನಿಲುವಿನ ಪ್ರತಿನಿಧಿಗಳು ; ಕಾದಂಬರಿಯ ಒಡಲಲ್ಲಿ ಅಡಗಿಕೊಂಡಿರುವ

ಪುರೋಹಿತಶಾಹಿಯ ಉಗ್ರ ಖಂಡನೆ ; ಹಾಗೂ ಬ್ರಾಹ್ಮಣ ವರ್ಗದ ಕೊಳಕು ಕುತಂತ್ರಗಳನ್ನೆಲ್ಲ ಮುಲಾಜಿಲ್ಲದೆ ಬೆತ್ತಲುಗೊಳಿಸಿರುವಿಕೆ ; ಜೊತೆಗೆ ಬ್ರಾಹ್ಮಣಧರ್ಮಕ್ಕೆ ಸವಾಲಾಗಿ ಗೆದ್ದ ಬೌದ್ಧಧರ್ಮಕ್ಕೆ ಈ ಕಾದಂಬರಿಯಲ್ಲಿ ದಕ್ಕಿರುವ ಪ್ರಾಶಸ್ತ್ಯ. ಕೃತಿಯು ತಾತ್ವಿಕ ಸವಾಲುಗಳನ್ನು ಎದುರಿಸಲು ತಾಕತ್ತಿಲ್ಲದೆ ಕಾದಂಬರಿಯ ಪ್ರಾಮುಖ್ಯತೆಯನ್ನು ಹೇಗಾದರೂ ಮಾಡಿ ಕುಗ್ಗಿಸಬೇಕೆಂಬ ಹಿಕಮತ್ತಿನಿಂದ ವಿಮರ್ಶೆಯ ಹೆಸರಿನಲ್ಲಿ ಪುರೋಹಿತಶಾಹಿ ಮನೋಭಾವ ತನ್ನ ಸಣ್ಣತನವನ್ನೆಲ್ಲ ಕಾರಿಕೊಂಡಿದೆ. ತಾತ್ವಿಕ ಗಟ್ಟಿತನವಿಲ್ಲದ ಕಲಾಕೃತಿ ಸಾಲಂಕೃತ ಶವ. ಆದರೆ 'ಕಾನೂರು ಹೆಗ್ಗಡಿತಿ' ತಾತ್ವಿಕ ಗಟ್ಟಿತನವುಳ್ಳ ಜನಪರವಾದ ಸಂಸ್ಕೃತಿಪರವಾದ ಪ್ರಪ್ರಥಮ ಸಮಗ್ರ ಬಂಡಾಯ ಕೃತಿ. ೨೦–೫–೮೦

ಸಿ.ಪಿ.ಕೆ. ಅವರ 'ವರ್ತಮಾನ'

ಪ್ರೊ|| ಎಚ್. ಜೆ. ಲಕ್ಕಪ್ಪಗೌಡ

ಕನ್ನಡ ಸಾರಸ್ವತ ಲೋಕದ ತರುಣಪೀಳಿಗೆಯ ಸಾಹಿತ್ಯ ಸಾಧನೆಗಳನ್ನು ಗುರುತಿಸುವ ಸಂದರ್ಭದಲ್ಲಿ ನಾವು ಮರೆಯಲಾಗದ ಹೆಸರುಗಳಲ್ಲಿ ಒಂದು ಡಾ. ಸಿ. ಪಿ. ಕೃಷ್ಣಕುಮಾರ್ ಅವರದು. ನೂರರ ದಾಖಲೆಯನ್ನು ದಾಟಿ ಮುಂದೆ ಧಾವಿಸುತ್ತಿರುವ ಅವರ ಲೇಖನಿ ಇದು ವರೆಗೆ ಸೃಷ್ಟಿಸಿರುವ ಸಮೃದ್ಧಿ ವೈವಿಧ್ಯ ಬೆರಗುಗೊಳಿಸು ವಂಥದು. ಕವಿತೆ, ವಿಮರ್ಶೆ, ಜಾನಪದ, ಅನುವಾದ, ಸಂಶೋಧನೆ ಮುಂತಾದ ಹಲವು ಕ್ಷೇತ್ರಗಳಲ್ಲಿ ಹಬ್ಬಿ ನಿಂತಿದೆ ಅವರ ಸಾಹಿತ್ಯನಿರ್ಮಿತಿ. ಆ ಒಂದೊಂದು ಕ್ಷೇತ್ರದಲ್ಲೂ ಅವರ ಕೊಡುಗೆ ಗಮನಾರ್ಹ ವೈಶಿಷ್ಟ್ಯ ವನ್ನು ದಾಖಲಿಸಿದೆಯೆಂಬುದು ಮಹತ್ವದ ಸಂಗತಿ.

ಕವಿಯಾಗಿಯೇ ಸಾಹಿತ್ಯವಲಯಕ್ಕೆ ಪ್ರವೇಶಿಸಿದ ಸಿ. ಪಿ. ಕೆ. ಅನಂತರದ ವರ್ಷಗಳಲ್ಲಿ ಬೇರೆ ಬೇರೆ ಪ್ರಕಾರ ಗಳಿಗೆ ನಿರಾಯಾಸವಾಗಿ ಪದಾರ್ಪಣೆ ಮಾಡಿದರೂ ಅವರ ಮೊದಲ ಒಲವು ಕಾವ್ಯ ಎಂಬುದು ನನ್ನ ಅನಿಸಿಕೆ, ನಂಬಿಕೆ. ಈ ಅನಿಸಿಕೆಗೆ ಇಂಬುಕೊಡುವಂಥ ಹಲವು ಕವನಸಂಕಲನ ಗಳನ್ನು ಅವರು ರಚಿಸಿದ್ದಾರೆ. ತಮ್ಮ ಪ್ರಥಮ ಸಂಕಲನ ವಾದ 'ತಾರಾಸಖ'ಕೇ ಸರ್ಕಾರದ ಸಾಹಿತ್ಯಪ್ರಶಸ್ತಿಯನ್ನು

ಪಡೆದ ಈ ಕವಿ ಅನಂತರ ಅನಂತಪೃಥ್ವೀ, ಪ್ರಕೃತಿ. ವರ್ತಮಾನ, ಬೊಗಸೆ, ಒಳದನಿ, ಅಂತರತಮ ಎಂಬ ಸಂಕಲನಗಳನ್ನು ಹೊರತಂದಿದ್ದಾರೆ (ಇವುಗಳಲ್ಲಿ 'ಒಳದನಿ' ಆಯ್ದ ಕವನಗಳ ಸಂಕಲನ). ಸಂಕಲನದಿಂದ ಸಂಕಲನಕ್ಕೆ ಸಹಜವಾಗಿಯೇ ಈ ಕವಿ ಭಾವ ಭಾಷೆ ಕಲ್ಪನೆ ಚಿಂತನೆ ತಂತ್ರಗಳಲ್ಲಿ ಪರಿಣತಿಯನ್ನು, ಗಟ್ಟಿತನವನ್ನು ಸ್ವಂತಿಕೆಯನ್ನು ರೂಢಿಸಿಕೊಳ್ಳುತ್ತ ಸಾಗಿರುವುದನ್ನು ಇವುಗಳ ಕ್ರಮಾಗತ ಅಧ್ಯಯನ ದಿಂದ ಗುರುತಿಸಬಹುದಾಗಿದೆ. ಈ ಸಂತೋಷದ ಕೃಷಿಯಲ್ಲಿ "ವಾಸ್ತವವಾಗಿ ಕಾವ್ಯಪಥ–'ಪಂಥ'ವಲ್ಲ–ಅಂತವಿಲ್ಲದ್ದು. ಅದರ ಗುರಿ ಬಹುಶಃ ಅಗಮ್ಯ; ದಾರಿಯುಷ್ಟೆ ಎಲ್ಲರ ಪಾಲಿಗೂ ಇರತಕ್ಕದ್ದು. ಈ ದಾರಿಯಲ್ಲಿ ನಾನೂ ನಾಲ್ಕು ಹೆಜ್ಜೆ ನಡೆದಿದ್ದೇನೆ ಎಂಬುದಷ್ಟೇ ನನ್ನ ಹೆಮ್ಮೆ"ಎಂಬ ಒಳ ಅರಿವು ಅವರಿಗಿರುವುದು ಆರೋಗ್ಯಕರ.

ಕನ್ನಡದ ರಮ್ಯಪರಂಪರೆಯ ಅಸ್ತಮಾನ ಕಾಲದಲ್ಲಿ, ನವ್ಯಪರಂಪರೆಯ ಚಂಡೆ ಭೇರಿಗಳು ಅವಿರತವಾಗಿ ಮೊಳಗುತ್ತ ವಾತಾವರಣವನ್ನು ತಮ್ಮ ತಾರಧ್ವನಿ ಯಿಂದ ತುಂಬುತ್ತಿದ್ದ ಸಮಯದಲ್ಲಿ ಕಾವ್ಯರಚನೆಗೆ ತೊಡಗಿದ ಎಲ್ಲರನ್ನೂ ಹಿಂದಿನವರ ಮಾಯಕ್ ಮೋಹಕತೆ, ಅಂದಿನವರ ನೂತನ ತಾಜಾ ಆಕರ್ಷತೆ ಇಬ್ಬಗೆಯಾಗಿ ಸೆಳೆಯುತ್ತಿದುದು ಸಹಜ. ತಮಗೆ ಮನೋಗತವೂ ಮತಿಗತವೂ ಅನುಭವಗತವೂ ಆಗಿದ್ದ ರಮ್ಯದ ಮೋಡಿಯಿಂದ ಮುಕ್ತವಾಗಬಾರದೆ, ವಾಸ್ತವತೆಯ ಉಸಿರಾಡುತ್ತ ಜೀವನದ ವಿಷಮತೆಗಳನ್ನು ದ್ವಂದ್ವಗಳನ್ನು ತದ್ವತ್ತಾಗಿ ಬಯಲುಭಾಷೆಯಲ್ಲಿ ದಾಖಲಿಸುತ್ತ ಹೊಸಕಾಲದ ಅಗತ್ಯಗಳನ್ನು ಹೊತ್ತು ವಿಜೃಂಭಿಸುತ್ತ ಶಕ್ತಿಯುತವಾಗಿ ಧಾವಿಸುತ್ತಿದ್ದ ನವ್ಯ ಪ್ರವಾಹದ ಪ್ರಚಂಡ ಸೆಳವಿನಿಂದ ತಪ್ಪಿಸಿಕೊಳ್ಳಲಾರದೆ ಎಷ್ಟೋ ಕವಿಗಳು ಮುಂದೇನು ಎಂಬ ದಿಗ್ಭ್ರಾಂತ ಸ್ಥಿತಿಯಲ್ಲಿ ಸ್ಥಗಿತವಾಗಿದ್ದ ಸಂದರ್ಭದಲ್ಲಿ ಕಾವ್ಯದ ಸೀಮೆಗೆ ಕಾಲಿಟ್ಟವರು ಸಿ.ಪಿ.ಕೆ. ರಮ್ಯ ಸಂಪ್ರದಾಯದ ಕುವೆಂಪು, ಬೇಂದ್ರೆ, ಪು. ತಿ. ನ. ಅವರಂಥ ಮಹಾಪ್ರತಿಭೆಯ ಕವಿಗಳ ಪ್ರಭಾವವನ್ನು ಹೆಚ್ಚು ದಟ್ಟವಾಗಿ ಮೈಗೂಡಿಸಿಕೊಂಡಿದ್ದ ಸಿ. ಪಿ. ಕೆ. ಅದರ ಸಮ್ಮೋಹಕ ಶಕ್ತಿಯ ಹಿಡಿತದಿಂದ ಪಾರಾಗಿ ತಮ್ಮತನವನ್ನು ಉಳಿಸಿಕೊಳ್ಳುವುದು ಬೆಳೆಸಿಕೊಳ್ಳುವುದು ಬಹಿರ್ಗತ ಗೊಳಿಸುವುದು ಸುಲಭದ ಕಾಯಕವಾಗಿರಲಿಲ್ಲ. ಮೊದಲ ಸಂಕಲನವಾದ 'ತಾರಾಸಖ'ದ ಕವಿತೆಗಳು ಹಿಂದಿನ ಕವಿಗಳ ದೃಷ್ಟಿಯ ಸೃಷ್ಟಿಯ ನೆಳಲನ್ನು ದಟ್ಟವಾಗಿಯೇ ಗಟ್ಟಿ ಯಾಗಿಯೇ ಹೊದ್ದುಕೊಂಡಿರುವುದನ್ನು ಯಾರಾದರೂ ಗುರುತಿಸಬಹುದು. ಆದರೂ ಆದರಿಂದ ಹೊರಬರುವ ಚಡಪಡಿಕೆ ಪ್ರಯತ್ನ ಪರಿಶ್ರಮ, ಆ ಮೂಲಕ ತನ್ನನ್ನು ತಾನು ನಿಚ್ಚಳವಾಗಿ ಕಂಡುಕೊಳ್ಳಬೇಕೆನ್ನುವ ತೀವ್ರವಾದ ತವಕ ತುಡಿತಗಳನ್ನು ಅಲ್ಲಿಯೇ ಕಾಣಬಹುದು. ಮುಂದಿನ ಸಂಕಲನಗಳಲ್ಲಿ ಇಂಥ ಪ್ರಯತ್ನ ಹೆಚ್ಚು ಸಫಲವಾಗುತ್ತ ಕವಿಯ ಸ್ವತಂತ್ರ ಮನೋಧರ್ಮ ಅಭಿವ್ಯಕ್ತಿ ವೈಶಿಷ್ಟ್ಯ ಹೆಚ್ಚು ಗರಿಗಟ್ಟಿಕೊಂಡಿತು; ಅವರ ನಿಲುವು ಅವರಿಗೆ ನಿಚ್ಚಳವಾಯಿತು. ಪ್ರಕೃತಿ ಸೌಂದರ್ಯದ ಮಿಂಚಿನ

ಸೆರಗನ್ನು ಹೊದ್ದು ಖುಷಿ ಕಾಣುವ ಪ್ರವೃತ್ತಿ ಹಿಂದಾಗಿ ಬದುಕಿನ ಕಠೋರ ವಾಸ್ತವ ಸತ್ಯಗಳನ್ನು ಕೆದಕಿ ಚುಚ್ಚಿ ಬಯಲುಗೊಳಿಸುವ ಆಕಾಂಕ್ಷೆ ಹಿರಿದಾಯಿತು. ಅವರ ವ್ಯಾಪಕವಾದ ಅಭ್ಯಾಸ ಜೀವನಾನುಭವಗಳು ಈ ಅಭಿವ್ಯಕ್ತಿಗೆ ರಕ್ತಮಾಂಸಗಳನ್ನು ತುಂಬಿದವು.

ಸಿ.ಪಿ.ಕೆ.ಯವರ ಕವಿ ಮನೋಧರ್ಮ ಮೂಲತಃ ರಮ್ಯದ ಕಡೆಗೇ ವಾಲುವಂತಿದ್ದರೂ ನವ್ಯಕಾವ್ಯ ಮಾರ್ಗ ತೆರೆದ ನೂತನಾವಕಾಶಗಳ ಕಡೆಗೆ ಅವರು ಕುರುಡಾಗಲಿಲ್ಲ. ಆದ್ದರಿಂದಲೇ ಕಾವ್ಯರಚನಾ ಮಾರ್ಗದಲ್ಲಿ ಆ ಈ ಪಂಥಗಳನ್ನು ಅವರು ನಿಶ್ಚಿಂತೆಯಿಂದ ಅವೈಚಾರಿಕವಾಗಿ ಒಪ್ಪಿಕೊಳ್ಳಲಿಲ್ಲ, ಅಪ್ಪಿಕೊಳ್ಳಲಿಲ್ಲ. ತಮ್ಮ ಚಿಂತನೆಯನ್ನು ಆಳಗೊಳಿಸುವ, ಕಲ್ಪನೆಯನ್ನು ಉಜ್ವಲಗೊಳಿಸುವ, ಅಭಿವ್ಯಕ್ತಿಯನ್ನು ಪುಷ್ಟಿಗೊಳಿಸುವ ಎರಡೂ ಪಂಥಗಳ ಪರಿಕರಗಳನ್ನು ಅವರು ನಿಸ್ಸಂಕೋಚವಾಗಿ ತಮ್ಮ ಕಾವ್ಯನಿರ್ಮಿತಿಯ ಸಾಧನಗಳನ್ನಾಗಿ ಅಳವಡಿಸಿಕೊಂಡರು. ಈ ಕಾರಣದಿಂದಲೇ ಅವರು ಯಾವುದೇ ಪಂಥದ ಅವಿಚಾರಿತ ವೈತಾಳಿಕನಾಗಲೀ ವಿರೋಧಿಯಾಗಲೀ ಆಗಲಿಲ್ಲ. ಸಿ.ಪಿ.ಕೆ.ಯವರ ಕಾವ್ಯಸೃಜನೆಯ ಈ ಮುಖ ಅವರ ಕವಿತೆಗಳೆಡೆಗೆ ನಮ್ಮನ್ನು ಕುತೂಹಲಿತರನ್ನಾಗಿ ಮಾಡುತ್ತದೆ.

೨

ಸಿ.ಪಿ.ಕೆ.ಯವರ ಕಾವ್ಯದ ಹಾದಿಯಲ್ಲಿ 'ವರ್ತಮಾನ'ಒಂದು ವಿಶಿಷ್ಟ ಸಂಕಲನ. ಅದರ ಮುಮ್ಮಾತಿನಲ್ಲಿ ಅವರು ಹೀಗೆ ಹೇಳಿಕೊಂಡಿದ್ದಾರೆ : "ಇವುಗಳಲ್ಲಿ ನಾನು–ಕಾವ್ಯದಲ್ಲಿ 'ನಾನು' ಎಂಬುದು ಪ್ರಾತಿನಿಧಿಕ ವ್ಯಕ್ತಿತ್ವವಷ್ಟೆ–ಅನುಭವಿಸದ್ದು, ಅಪ್ರಾಮಾಣಿಕವಾದುದು ಏನೂ ಇಲ್ಲ. ಬದುಕಿನ ಯಾವುದೋ ಒಂದು ಮುಖ. ಒಂದು ಸ್ವರ ಇಲ್ಲಿನ ಬಹುಪಾಲು ಕವನಗಳಲ್ಲಿದೆ ; ಇಷ್ಟೇ ಬದುಕಲ್ಲ" ಕೇವಲ ಭಾವುಕ ಕಲ್ಪನೆಯ ಬೆನ್ನು ಹತ್ತಿ ಅವಾಸ್ತವಿಕತೆಯ ಕೆಸರಲ್ಲಿ ಹೂತು ಹೋಗದೆ. ಸ್ವಾನುಭವದ ಸ್ವರದಲ್ಲಿ ನಿಂತು ಪ್ರಜ್ಞೆಯ ಬೆಳಕಿನಲ್ಲಿ ಬದುಕನ್ನು ಶೋಧಿಸುತ್ತ ಹೋಗುವ ಈ ಎಚ್ಚರ ಕವಿಯ ಆರೋಗ್ಯಕರ ಮನಸ್ಸಿನ ಲಕ್ಷಣ. ಎಲಿಯಟ್ ಹೇಳುವಂತೆ ಕವಿಯಾದವನಿಗೆ ಭೂತದ ಪ್ರಜ್ಞೆ, ಭವಿಷ್ಯದ ಕಣ್ಣು ಎಷ್ಟು ಅಗತ್ಯವೊ ಅವುಗಳನ್ನು ಬೆಸೆದು ಜೀವನದ ಸಾತತ್ಯವನ್ನು ನಿರ್ಮಿಸುವ ವರ್ತಮಾನ ಕೂಡ ಅಷ್ಟೇ ಅಗತ್ಯ. ಅಂಥವನು ಮಾತ್ರ ಅಪ್ರಿಯ ನಿಷ್ಠುರ ಸತ್ಯಗಳೊಡನೆ ಮುಖಾಮುಖಿಯಾಗಿ ಅವುಗಳೊಳಗನ್ನು ಅಗೆದು ಬಗೆದು ಹೊರತೋರಬಲ್ಲ, ಹೊರತೂರಬಲ್ಲ. ಆಗ ಮಾತ್ರ ಕಾವ್ಯ ನಮ್ಮ ಬದುಕಿನ ದಡಗಳನ್ನು ಸ್ಪರ್ಶಿಸುವುದು ತುಂಬಿ ಹರಿಯುವುದು ಸಾಧ್ಯವಾಗಿ ನಮಗೆ ತೀರಾ ಪ್ರಸ್ತುತವೆನಿಸುತ್ತದೆ. 'ವರ್ತಮಾನ' ಈ ಕೆಲಸ ಮಾಡಲು ಪ್ರಾಮಾಣಿಕವಾಗಿ ಪ್ರಯತ್ನಿಸಿದೆ.

ಇಲ್ಲಿನ ಕವಿತೆಗಳನ್ನು ಪರಿಶೀಲನೆಯ ಸೌಲಭ್ಯಕ್ಕಾಗಿ ನಾಲ್ಕು ಭಾಗವಾಗಿ ವಿಂಗಡಿಸಬಹುದು: ವ್ಯಕ್ತಿಪರ, ಆತ್ಮಪರ, ಸಮಾಜಪರ ಮತ್ತು ಅನುವಾದಿತ. ಮೊದಲನೆಯ ವಿಭಾಗದಲ್ಲಿ ಮಹಾತ್ಮ ಗಾಂಧೀಜಿಯನ್ನು, ಗಡಿನಾಡ ಗಾಂಧಿಯನ್ನು, ಕುವೆಂಪುವನ್ನು ಮತ್ತು ಜಾನಪದ ಕವಿಗಳನ್ನು ಕುರಿತು ಕವಿಯ ಗೌರವಭಾವವನ್ನು ಅಭಿವ್ಯಕ್ತಿಸುವ ಐದು ಕವಿತೆಗಳಿವೆ. ಗಾಂಧೀಜಿಯನ್ನು ಕುರಿತು ಕವಿತೆ ಬರೆಯುವುದು ಇನ್ನು ಅಸಾಧ್ಯವೆನಿಸುವಷ್ಟು ಅಸಂಖ್ಯಾತ ಕವಿತೆಗಳು ಕನ್ನಡದಲ್ಲೂ ಇತರ ಭಾಷೆಗಳಲ್ಲೂ ಬಂದಿವೆಯಾದ್ದರಿಂದ ಏನು ಬರೆದರೂ ಅನುಕರಣವೋ ಚರ್ವಿತ ಚರ್ವಣವೊ ಆಗಿಬಿಡುವ ಅಪಾಯ ಸದಾ ನಮ್ಮನ್ನು ಕಾಡುತ್ತದೆ. ಆದರೆ ಗಾಂಧೀಜಿಯ ವ್ಯಕ್ತಿತ್ವ ಎಷ್ಟೊಂದು ಸಂಕೀರ್ಣ ವ್ಯಾಪಕ ಎಂದರೆ ಸೋಪಜ್ಞಶೀಲನಾದ ಕವಿ ಆ ಗಣಿಯಿಂದ ಹೊಸ ಹೊಸ ಜೀವರತ್ನಗಳನ್ನು ತೆಗೆಯುತ್ತಲೇ ಇರಬಹುದಾಗಿದೆ. ಈ ಕವಿ ತಮ್ಮ ಸ್ವಂತ ವ್ಯಕ್ತಿತ್ವದ ಮೂಲಕ ಗಾಂಧೀಜಿಯನ್ನು ಆತ್ಮೀಯವಾಗಿ ಕಾಣುತ್ತ ಕಡೆಯುತ್ತ ಹೋಗುತ್ತಾರೆ. ಎಲ್ಲ ಮೌಲ್ಯಗಳ ಅಧಃಪತನವಾಗುತ್ತಿರುವ ಈ ಕಾಲದಲ್ಲಿ, ನಮ್ಮ ಸೀಮಿತ ಕುಬ್ಜ ವ್ಯಕ್ತಿತ್ವದ ಮಾನದಂಡದಿಂದ ಆ ವ್ಯಕ್ತಿತ್ವವನ್ನು ಅಳೆಯಲು ಹೊರಟಾಗ ಕವಿಗೆ ಅನಿಸುತ್ತದೆ: 'ನಿನ್ನ ಅಸ್ತಿತ್ವದಲ್ಲಿ ಅವಿಶ್ವಾಸ ಮತ್ತೂ ಹೆಚ್ಚುತ್ತ!' ಸಾಕ್ರೆಟೀಸ್ ಬುದ್ಧ ಏಸುಕ್ರಿಸ್ತ ಬಸವಣ್ಣ—ಈ ಎಲ್ಲರ ವ್ಯಕ್ತಿತ್ವಗಳ ಎರಕ ಗಾಂಧೀಜಿ ಎಂಬ ಕಲ್ಪನೆ ಸುಂದರವಾಗಿದೆ. ಆದರೆ ಯಾವ ತತ್ವಗಳಿಗೆ ಜೀವದಾನ ಮಾಡಲು ಆತ ಸತತವಾಗಿ ಪ್ರಯತ್ನಿಸಿದರೂ ಅವೆಲ್ಲ ಮತ್ತೆ ನಿರ್ಜೀವ ನಿರಾಕರ್ಷಕವಾಗುತ್ತಿರುವುದನ್ನು ಕಂಡ ಕವಿ ಹೃದಯ ಆರ್ತವಾಗಿ ಕಳಕಳಿಸುತ್ತದೆ ಹೀಗೆ :

> ಸಾವಿನಲ್ಲೂ ನೀನು ನಂಬಿದ ರಾಮನ ಹಾಗೆ ನಿನ್ನೆಲ್ಲ
> ಮಂತ್ರಗಳಿಗೀಗ ವನವಾಸ ;
> ಮರಳಿ ಅವು ಅಯೋಧ್ಯೆಯನ್ನೆಂದು ಸೇರುತ್ತವೋ
> ನೀನೇ ಬಲ್ಲೆ !

ಮತ್ತೊಂದು ಕವಿತೆ. 'ಗಾಂಧಿ ಜಯಂತಿಯನ್ನು ನೆನೆದು' ಆ ಮಹಾಪುರುಷನ ವಾಸ್ತವ ಭವ್ಯ ವ್ಯಕ್ತಿತ್ವವನ್ನು ಪರಿಣಾಮಕಾರಿಯಾಗಿ ಮೂರ್ತೀಕರಿಸಿದೆ ಈ ಸಾಲುಗಳಲ್ಲಿ :

> ನೀನು ಈ ನೆಲದ ಮೇಲು ಪದರವನ್ನಷ್ಟೆ ಹೀರಿ
> ಬೆಳೆದ ಪರಂಗಿಯಲ್ಲ ;
> ಆಳಕ್ಕೆ ಬೇರಿಳಿಸಿ, ಜಲಮೂಲವನ್ನೇ ಹೀರಿ,
> ಅಂತಸತ್ವವನ್ನೆಲ್ಲ ಅರಗಿಸಿಕೊಂಡು
> ದೇಶೋವಿಶಾಲವಾಗಿ ಬೆಳೆದು ನಿಂತ ವಟ ವೃಕ್ಷ!

ಅವತಾರಗಳೆಲ್ಲ ಕಟ್ಟುಕಥೆಗಳೆಂದು ಭಾವಿಸಿದ್ದವರಿಗೆ. ಅವುಗಳಲ್ಲೂ ಜೀವಂತಿಕೆ ಸಹಜತೆ ಅರ್ಥವಂತಿಕೆ ಇದೆಯೆಂಬುದನ್ನು ಸಾಬೀತುಗೊಳಿಸಿದ್ದು ನಮ್ಮೆದುರಿಗೇ ವಿಸ್ಮಯ ಕಾರಿಯಾಗಿ ಭೂಮವಾಗಿ ಬೆಳೆದು ನಿಂತ ಗಾಂಧೀಜಿಯ ವ್ಯಕ್ತಿತ್ವ. ಹೀಗಾಗಿ ಅವರು ಕೇವಲ ವರ್ತಮಾನವನ್ನು ಮಾತ್ರ ಪ್ರಭಾವಿಸಲಿಲ್ಲ; ಅದರೊಂದಿಗೆ ಗತಕಾಲದ ಕಲ್ಪನೆಗಳಿಗೂ ವಾಸ್ತವತೆಯ ಉಸಿರು ತುಂಬಿದರು; ಭವಿಷ್ಯಕ್ಕೂ ಬೆಳಕಿನ ಗರಿಯಾಗಿ ನಿಂತರು. ಆದರೆ ರಾಮಕೃಷ್ಣ ಬುದ್ಧ ಬಸವರನ್ನೇ ನಿಷ್ಪರಿಣಾಮಕಾರಿಯನ್ನಾಗಿ ಮಾಡಿದ ವರ್ತಮಾನದ ಭೀಕರತೆ ಗಾಂಧೀಜಿಯ ಬಗ್ಗೆ ತೋರಿದ ಪ್ರತಿಕ್ರಿಯೆಯೇನು? ಕವಿಯ ಹೃದಯ ವಿಷಾದದಿಂದ ಮಿಡಿಯುತ್ತದೆ:

> ಈಗ ನೀನೂ ಹಳೆಯ ಪಟ್ಟಿಗೆ ಸೇರುತ್ತಿದ್ದಿಯೆ;
> ಪ್ರತಿಮಾಗೃಹದ ರಿಜಿಸ್ಟರಿನಲ್ಲಿ ನಿನ್ನ ಹೆಸರು
> ನಮೂದಾಗಿ ಹೋಗಿದೆ!

ಈ ಎರಡು ಕವಿತೆಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ, ಗಾಂಧೀಜಿಯಂಥ ವ್ಯಕ್ತಿತ್ವವನ್ನು ಪೊಳ್ಳು ಹೊಗಳಿಕೆಗಳಿಂದ ವೈಭವೀಕರಿಸಲು ಪ್ರಯತ್ನಿಸದೆ, ಸದ್ಯಸ್ಥಿತಿಯ ಕಟುವಿಕೃತಿಯೊಡನೆ ಆ ವ್ಯಕ್ತಿತ್ವದ ಸಂಬಂಧದ ಮೂಲಕ ಬಿಚ್ಚಿಕೊಳ್ಳುವ ವಿಷಮತೆಯ ಚಿತ್ರಣದ ಹಿನ್ನೆಲೆಯಲ್ಲಿ ಗಾಂಧೀಜಿ ನಮ್ಮ ಮನಸ್ಸಿನಲ್ಲಿ ಬೆಳೆಯುತ್ತ ಹೋಗುವಂತೆ ಮಾಡಿರುವುದು. ಭಾಷೆಯ ವಿವಿಧ ಬಗೆಯ ಕಸರತ್ತಿನ ವಿಜೃಂಭಣೆಯಾಗಲಿ, ಸಂಕೀರ್ಣ ವಿದಗ್ಧಪ್ರತಿಮೆಗಳ ಮೆರವಣಿಗೆಯಾಗಲಿ ಇಲ್ಲದೆ ಗಾಂಧೀಜಿಯ ಸರಳ ನಡೆನುಡಿಯಂತೆಯೇ ಸರಳವಾಗಿ ನಿಶ್ಶಬ್ದವಾಗಿ ಈ ಕವಿತೆಗಳು ಮನದಾಳವನ್ನು ಮುಟ್ಟುವಲ್ಲಿ ಸಫಲವಾಗುತ್ತವೆ. ಗಡಿನಾಡಗಾಂಧಿಯನ್ನು ಚಿತ್ರಿಸುವ ಕವಿತೆ ಕೂಡ ಮೊದಮೊದಲು ಸಡಿಲವಾಗಿ ಜಾಳಾಗಿ ತೆವಳಿದರೂ ಕೊನೆಯ ಈ ಧ್ವನಿಪೂರ್ಣ ಸಾಲುಗಳಿಂದ ನಮ್ಮ ಚಿಂತನೆಯನ್ನು ಉಜ್ವಲಿಸುತ್ತದೆ:

> ಕುಬ್ಜರ ನಡುವೆ ಬಂದ ಈ ಆಜಾನುಬಾಹು, ಉನ್ನತ ದೇಹಿ
> ಮನದ ಮುಳ್ಳಾಗಿ ಉಳಿಯುತ್ತಾನೆ. ಸಂಶಯವಿಲ್ಲ–
> ಛೆ! ಇಂಥವರಿಂದ ನಮಗಿಲ್ಲ ನಿದ್ದೆ!

ಕುವೆಂಪು ಅವರನ್ನು ಕುರಿತ ಕವಿತೆ 'ತ್ರಿವಿಕ್ರಮ'. ಆರಂಭ ಅತ್ಯಂತ ಕುತೂಹಲ ಕರವಾಗಿದೆ. ಅವರ ಧೀರ ಗಂಭೀರ ವಿಸ್ತಾರ ಸಂಪ್ರದಾಯದೂರ ವ್ಯಕ್ತಿತ್ವವನ್ನು ತುಂಬ ಸಶಕ್ತವಾಗಿ ಭವ್ಯವಾಗಿ ಕೆತ್ತಿ ನಿಲ್ಲಿಸುತ್ತದೆ:

> ಜನಿವಾರ ಶಿವದಾರ ನಾಮ ಮುದ್ರೆಗಳಿಲ್ಲ–
> ನೀನು ಆಗಸದ ಹಾಗೆ. ಕಡಲಿನ ಹಾಗೆ
> ನಿರುಪಾಧಿಕ, ಅನಿಕೇತನ!

ಆದರೆ ಈ ತೀವ್ರತೆ ಜರ್ರನೆ ಇಳಿದು ಹೋಗಿ ಬಹುಬೇಗ ಅಭ್ಯಾಸಶೀಲವಾದ ಪದವನೆಯ್ಗೆಯ ಅನಗತ್ಯ ಕಸುಬಿನ ಕಡೆಗೆ ಕವಿತೆ ಜಾರಿಬಿಡುವುದರಿಂದ ಚಿರಪರಿಚಿತವಾದ ಸಿದ್ಧಸಾದೃಶ್ಯಗಳು ಮಾತ್ರ ಪವಣಿಕೆಗೊಂಡು ಜೀವಂತಿಕೆ ಸೋರಿಹೋಗುತ್ತದೆ ; ಕವಿತೆಯ ಸಾಲುಗಳು ನಿರೀಕ್ಷಿತ ಹೇಳಿಕೆಗಳ ಹೊರಳಾಟವಾಗಿ ನಿರಾಸೆಯನ್ನುಂಟು ಮಾಡುತ್ತವೆ.

ಸಿ. ಪಿ. ಕೆ. ಸ್ವತಃ ಗ್ರಾಮೀಣಗರ್ಭದಿಂದ ಚಿಮ್ಮಿದವರು. ಈ ಕಾರಣದಿಂದ ಜನಪದ ಸಾಹಿತ್ಯದ ಸವಿ ಸೊಗಡು ಹೆಗ್ಗಳಿಕೆಗಳನ್ನು ತಾಯಿ ಹಾಲಿನೊಡನೆಯೇ ಉಂಡು ಸುಖಿಸಿದವರು. ಈ ಅಕ್ಕರೆ ಅಭಿಮಾನಗಳು 'ಜಾನಪದ ಕವಿಗಳಿಗೆ' ಎಂಬ ಕವಿತೆಯಲ್ಲಿ ಅತ್ಯಂತ ಆತ್ಮೀಯವಾಗಿ ಆರ್ದ್ರವಾಗಿ ಅಭಿವ್ಯಕ್ತವಾಗಿದೆ. ಸಾನೆಟ್ಟಿನ ಮಾದರಿಯಲ್ಲಿರುವ ಇದು ಸರಳ ಸಹಜ ಬಂಧದಿಂದ, ಪ್ರೀತಿಯಾಳದಿಂದ್ದೆದ್ದ ಭಾವದಿಂದ, ಅಕೃತಕವಾದ ರೂಪಧಾರಣೆ ಮಾಡಿ ನಮ್ಮ ಮನಸ್ಸನ್ನು ಕೆಲಕಾಲ ಹಿಡಿದು ನಿಲ್ಲಿಸಿ ಬಿಡುತ್ತದೆ. ಈ ಅಜ್ಞಾತ ಕವಿಗಳ ರಚನೆಗಳನ್ನು ಕುರಿತು :

> ನಿಮ್ಮ ಕಲೆ ಹಾಡು ಹಗಲಿನ ಹೊನಲು ;
> ನಿಮ್ಮ ಬಾಳಿನ ಮರಕೆ ಸಹಜ ಮೂಡಿದ ಕವಲು

ಎನ್ನುವ ವರ್ಣನೆಯಾಗಲಿ, ಅವರ ಕಾಣಿಕೆಗೆ ಪ್ರತಿಯಾಗಿ ನಾವೇನು ಕೊಡಲು ಸಾಧ್ಯ ಎಂಬ ಅನಿಸಿಕೆಯನ್ನು 'ಬಯಲ ಕವಿತೆಗೆ ಆಲಯವೆ ?' ಎಂಬ ಧ್ವನಿಪೂರ್ಣ ಉತ್ತರ ಭರಿತ ಪ್ರಶ್ನೆಯ ಮೂಲಕ ಸಂವಹನಿಸುವುದಾಗಲಿ ಜೀವಂತ ಕವಿತೆಯ ಲಕ್ಷಣವನ್ನು ಸಂಕೇತಿಸುತ್ತದೆ.

೩

ಸಾಮಾನ್ಯವಾಗಿ ಹೆಣ್ಣನ್ನು ಕುರಿತು ಕಾವ್ಯ ರಚಿಸದ ಕವಿ ಇರಲಾರ. ಹೆಣ್ಣಿನ ಮೋಹಕ ಅಂಗಾಂಗಳನ್ನು ಬಾಯಿ ನೀರೂರುವಂತೆ ರಸಭರಿತವಾಗಿ ವರ್ಣಿಸುವುದು ಒಂದು ಬಗೆಯಾದರೆ, ಆಕೆಯನ್ನು ದೈವೀಸ್ವರೂಪವೆಂಬಂತೆ ತನ್ನ ಆತ್ಮೋದ್ಧಾರಕಿಯೆಂಬಂತೆ ವೈಭವಿಸಿ ಎಲ್ಲ ಸಿದ್ಧ ವಿಶೇಷಣಗಳ ಭಂಡಾರವನ್ನು ಬರಿದು ಮಾಡಿ ತನ್ನೆಲ್ಲ ಅತಿರೇಕದ ಭಾವುಕತೆಯನ್ನು ಭೇದಿ ಮಾಡಿಕೊಳ್ಳುವುದು ಇನ್ನೊಂದು ಬಗೆ. ಈ ಸಂಕಲನದ ಕವಿ ಇವೆರಡು ಅತಿಗಳನ್ನೂ ದೂರವಿಟ್ಟು ಬದುಕಿನ ಸಹಜ ಪರಿಸರದಲ್ಲಿ ಆಕೆಯನ್ನು ಭೇಟಿ ಮಾಡುವ ಮೂಲಕ ಆಕೆಯ ಗುಣ ದೋಷಗಳೆರಡಕ್ಕೂ ಕನ್ನಡಿ ಹಿಡಿಯುತ್ತಾರೆ ; ಹಾಗೆಯೇ ಆಕೆಯಿಂದ ಪ್ರಭಾವಿತವಾಗುವ ತಮ್ಮ ವ್ಯಕ್ತಿತ್ವದಲ್ಲಿ ಸ್ವಾಭಾವಿಕವಾಗಿಯೇ ತೆರೆದುಕೊಳ್ಳುವ ಬಿರುಕುಗಳನ್ನೂ ನಿಸ್ಸಂಕೋಚವಾಗಿ ಮುಲಾಜಿಲ್ಲದೆ ಹೊರಗಿಡುತ್ತಾರೆ. ಹೆಣ್ಣಿನ ಸ್ಥಾಯಿಭಾವ ಮುಖ್ಯವಾಗಿ ಮಾತೃ ಭಾವ. ಆದರೆ ಸಾಂಪ್ರದಾಯಕವಾದ ಈ ಭಾವದಲ್ಲಿ ತನ್ನನ್ನು ಗುರುತಿಸಿಕೊಂಡು

ಅವರಲ್ಲಿ ಹೂತುಹೋಗಿ ತನ್ನತನವನ್ನು ಸೊನ್ನೆ ಮಾಡಿಕೊಳ್ಳಲು ಇಚ್ಛಿಸದ ಈ ಕವಿ 'ನೀನು ತಾಯಿಯಾಗುವುದು ನನಗೆ ಬೇಕಿಲ್ಲ, ನಾನು ಮಗುವಾಗುವುದು ನಿನಗೂ ಇಷ್ಟವಿಲ್ಲ' ಎಂದು ಉದ್ಘೋಷಿಸುವ ಮೂಲಕ ಹೆಣ್ಣಿನ ಮುಖಕ್ಕೆ ಸಂಪ್ರದಾಯ ಮುಚ್ಚಿದ್ದ ಥಳುಕಿನ ಸುಳ್ಳುಪರದೆಯನ್ನು ಜರ್ರನೆ ಹರಿದು ಬಿಡುತ್ತಾರೆ. ಮಗುವಾಗಲು ಬಯಸದೆ, ಮಗುವಾಗುವುದರಿಂದ ತಪ್ಪಿಸಿಕೊಳ್ಳಲಾರದೆ ಒದ್ದಾಡುವಾಗ ಇರುವುದೊಂದೇ ದಾರಿ ತಮಗೆ ಎಂಬುದನ್ನು ಖಚಿತವಾಗಿ ಸ್ಪಷ್ಟವಾಗಿ ಈ ಸಾಲುಗಳ ಮೂಲಕ ಸಾರುತ್ತಾರೆ :

> ನಿನ್ನ ಹತ್ತಿರ ಬರದೆ, ದೂರದಲ್ಲೇ ಉಳಿದು
> ನಿನ್ನ ನೆನೆಯುತ್ತ ಉರಿಯುತ್ತ ನವೆಯುತ್ತ
> ಬದುಕುವುದು !

ಗಂಡು ಹೆಣ್ಣನ್ನು ಬಣ್ಣಿಸುವುದು ತಲತಲಾಂತರದಿಂದ ನಡೆದು ಬಂದಿದೆ. ಇದರಿಂದ ಕಾವ್ಯಭೂಮಿಯು ತುಂಬ ಆಕೆಯ ಅಂಗಾಂಗಗಳನ್ನು ಬಿಡಿಬಿಡಿಸಿ ಚೆಲ್ಲಲಾಗಿದೆ. ಆದರೆ ಹೆಣ್ಣಿನ ಕಣ್ಣಲ್ಲಿ ಗಂಡಿನ ಶರೀರಶ್ರೀ ಯಾವ ಯಾವ ಬಣ್ಣಗಳಲ್ಲಿ ಭಾವಗಳಲ್ಲಿ ದನಿಗಳಲ್ಲಿ ಸುರುಳಿ ಬಿಚ್ಚಿಕೊಂಡಿದೆಯೆಂಬುದನ್ನು ತಿಳಿಸುವ ದಾಖಲೆಯೇನಾದರೂ ಇದೆಯೆ ? ಗಂಡು ಹೆಣ್ಣನ್ನು ಬಯಸಿದ ಹಾಗೆ ಹೆಣ್ಣು ಗಂಡನ್ನು ಬಯಸಿದೆ. ಆ ಬಯಕೆಯ ಸಂಬಂಧ ಸ್ಫುರಿಸಿದ ನೂರಾರು ತರದ ಅನಿಸಿಕೆಗಳೇನು ? ಈ ಪ್ರಶ್ನೆಗಳ ಮೂಲಕ ಹೊಸತೊಂದು ಚಿಂತನೆಯ ದಾರಿಯನ್ನು 'ಸರದಿ' ಕವಿತೆಯಲ್ಲಿ ಈ ಕವಿ ಶೋಧಿಸಲು ಯತ್ನಿಸುತ್ತಾರೆ. ಜಗತ್ತಿನ ಜನಾಂಗದ ಅರ್ಧಭಾಗದ ಅನಿಸಿಕೆಗಳನ್ನು ನಿರ್ದಯವಾಗಿ ಕತ್ತಲಿಸಿ ತಮ್ಮದೇ ಪೂರ್ಣಭಾಗವೆಂದು ಬಿತ್ತರಿಸುತ್ತ ಬಂದು ಹಳಸಲಾಗಿರುವ ಕಾವ್ಯ, ಉಳಿದರ್ಧವನ್ನೂ ಬೆತ್ತಲಿಸಿದಾಗ ಹೊಸತಿರುವನ್ನು ಪಡೆಯಬಹುದೆನ್ನುವ ಕವಿಯ ಆಶಯ ಅತ್ಯಂತ ಪ್ರಗತಿಪರವೂ ನೂತನವೂ ಆಗಿದೆ.

ಹೆಣ್ಣನ್ನು ಗದ್ದೆವೆಂದು ಗಂಡುಕುಲ ಸದಾ ಹೆಮ್ಮೆಪಡುತ್ತದೆ. ಆದರೆ ಹೆಣ್ಣಿಗಾಗಿ ಹರಿದ ರಕ್ತ ಉರುಳಿದ ತಲೆ ಮುಳುಗಿದ ಸಾಮ್ರಾಜ್ಯ-ಗಳ ಕಥೆ ಚರಿತ್ರೆಯ ಅಸಂಖ್ಯಾತ ಪುಟಗಳನ್ನು ಆವರಿಸಿಬಿಟ್ಟಿದೆ. ಸಾಮಾನ್ಯವೆಂದು, ಪರಿಚಿತವೆಂದು ಭಾಸವಾಗುವ ಹೆಣ್ಣು ಅಷ್ಟೆ ಮಟ್ಟಿಗೆ ಅಸಾಮಾನ್ಯೆ ಅಪರಿಚಿತೆ ನಿಗೂಢೆ. ಆಕೆಯ ರಹಸ್ಯ ಶೋಧಿಸಿದಷ್ಟೂ ಅನಂತ ಅದ್ಭುತ. ಹತ್ತಿರಿದ್ದರೂ ಆಕೆ ದೂರ ದೂರ ಎನಿಸುತ್ತದೆ. ಆಕೆಯ ಪ್ರಭಾವ ವರ್ಣನಾತೀತ ವಿಚಾರಾತೀತ. ಅದೇ ಕವಿಗೆ ಪರಮಾಶ್ಚರ್ಯ. ಶೋಧನೆಗೆ ದಕ್ಕದ ಸಿಕ್ಕದ ಆಕೆಯ ವ್ಯಕ್ತಿತ್ವವನ್ನು ಕುರಿತು ಕವಿ ತೆಗೆಯುವ ಉದ್ಗಾರವಿದು :

> ಏನಿದೆಯೋ ನಿನ್ನಲ್ಲಿ ?
> ನಿನ್ನ ಅನಾಟಮಿಯೆಲ್ಲ ನನಗೆ ಗೊತ್ತಿಲ್ಲವೆ ?

ಆದರೂ ನಿನ್ನ ನೆನಹು, ನೋಟ, ಸ್ಪರ್ಶಗಳೆಲ್ಲ ನನ್ನ
ನರನರದಲ್ಲೂ ಸಿತಾರು ಬಾರಿಸುತ್ತವೆಯೇಕೆ?
ಇತಿಹಾಸದ ಪಾಠ ಮರೆಸುತ್ತವೆಯೇಕೆ ?

ಆದ್ದರಿಂದ ಗೆದ್ದೆನೆಂಬುವ ಗಳಿಗೆಯಲ್ಲೇ ಗಂಡು ಸೋತು ಬೀಳುತ್ತಾನೆ ಎಂಬ ಸತ್ಯವನ್ನು ಬಿಂಬಿಸಲು ಈ ಕವಿತೆ 'ಸೋಲು' ಯತ್ನಿಸಿದೆ.

ವಾಚ್ಯವಾದ ಕಾವ್ಯ ಎಂದೂ ರಸಿಕನನ್ನು ಆಕರ್ಷಿಸುವುದಿಲ್ಲ, ಎತ್ತರಿಸುವುದಿಲ್ಲ. ಅವನ ಶಕ್ತಿಗೆ ಸವಾಲಾಗಿ ನಿಂತು ಘರ್ಷಿಸಿ ಅವನ ಮನದಲ್ಲಿ ಮತಿಯಲ್ಲಿ ಮಿಂಚು ಮೂಡಿಸುವುದಿಲ್ಲ. ಹಾಗೆಯೇ ತನ್ನ ಅಂಗಾಂಗಗಳನ್ನೆಲ್ಲ ಬಹಿರಂಗವಾಗಿ ತೆರೆದು ತೋರುವ ಹೆಣ್ಣು ಎಂದೂ ಸೌಂದರ್ಯ ಪ್ರೇಮಿಯನ್ನು ಮೆಚ್ಚಿಸಲು ಸಾಧ್ಯವಾಗುವುದಿಲ್ಲ. ಎಲ್ಲಿ ಅಸ್ಪಷ್ಟತೆ ಅಸ್ಫುಟತೆ ರಹಸ್ಯ ಮನೆ ಮಾಡಿದೆಯೋ ಆ ಕಡೆಗೆ ಎಲ್ಲ ಕಣ್ಣು ಮನಸುಗಳು ಲಗ್ಗೆ ಹಾಕುತ್ತವೆ ; ಅದರೊಳಗನ್ನು ಅರಿಯಲು ಸತತ ಪ್ರಯತ್ನಿಸುತ್ತವೆ : ತಮ್ಮ ಪ್ರಯತ್ನ ಕೊಂಚ ಕೊಂಚ ಸಫಲವಾದಂತೆಲ್ಲ ಆನಂದ ಮನಸ್ಸನ್ನು ತುಂಬುತ್ತ ಹೋಗುತ್ತದೆ. ಈ ಅಂಶವನ್ನು ತುಂಬ ಸುಂದರವಾಗಿ ಪರಿಣಾಮಕಾರಿಯಾಗಿ 'ಧ್ವನಿ' ಎಂಬ ಕವಿತೆ ಪ್ರತಿಪಾದಿಸುತ್ತದೆ. ಹೆಣ್ಣು ಧ್ವನಿಪೂರ್ಣ ಕಾವ್ಯದಂತಿರಬೇಕು ಎಂಬುದು ಎಷ್ಟು ಸತ್ಯವೋ ಕಾವ್ಯ ಗಂಭೀರ ನಿಗೂಢ ಲಾವಣ್ಯವತಿಯಂತಿರಬೇಕೆಂಬುದೂ ಅಷ್ಟೇ ಸತ್ಯ. ನವ್ಯಕಾವ್ಯದ ಆರಂಭದ ರಭಸ ಆರ್ಭಟಗಳ ತೀವ್ರತೆಯ ಸಂದರ್ಭದಲ್ಲಿ ಹೆಣ್ಣಿನ ಅಂಗಾಂಗಳನ್ನೇ ಲೈಂಗಿಕ ಚಟುವಟಿಕೆಗಳನ್ನು ಹಸಿಹಸಿಯಾಗಿ ಕಾವ್ಯದ ಪುಟಪುಟಗಳಲ್ಲಿ ಪ್ರತಿಮೆಗಳ ಹೆಸರಿನಲ್ಲಿ ಪ್ರದರ್ಶಿಸಿ ಧ್ವನಿಯ ಕೊರಳು ಹಿಸುಕಿದ್ದನ್ನು, ನಾಗರಿಕತೆಯ ಭ್ರಮೆಯಲ್ಲಿ ತನ್ನೆಲ್ಲ ಆಕರ್ಷಕ ರಹಸ್ಯ ಸೌಂದರ್ಯವನ್ನೆಲ್ಲ ಬಯಲುಗೊಳಿಸಿ ಮೆರೆಯುವ ಮೂಲಕ ತನ್ನ ಮೂಲ ಸೆಳೆತವನ್ನು ಬರಿದು ಮಾಡಿಕೊಂಡು ಗಂಡಿನಂತೆಯೇ ಸಪ್ಪೆಯಾಗಿ ನಿಶ್ಚುಂಬುಕವಾಗಿ ಪರಿಣಮಿಸಿದ ಆಧುನಿಕ ಲಲನಾಮಣಿಯನ್ನು ಕೂಡ ಈ ಕವಿತೆ ಸೂಚಿಸುತ್ತದೆ. ಇದರೊಳಗಿನಿಂದ ವ್ಯಕ್ತವಾಗುವ ಕವಿಯ ಆಶಯವಿದು :

ಹಗಲಿನ ವಾಚ್ಯವಾಗದಿರು ಹೆಣ್ಣೆ,
ಚಂದ್ರತಾರಾಖಚಿತ ಧ್ವನಿಗಂಭೀರ ರಾತ್ರಿಯಾಗು !
ನಿನ್ನೊಳಸ್ವರಗಳನ್ನನುಮಾನಿಸುತ್ತ,
ಊಹಿಸುತ್ತ ಖುಷಿ ಪಡುವ ಸಹೃದಯ ನಾನಾಗಿ
ಉಳಿಯುತ್ತೇನೆ ಸದಾ !

ಗಂಡನ ಬಗ್ಗೆ ಸಂಶಯ ಪಡುವ ಹೆಂಡತಿಯನ್ನು ಕುರಿತ 'ಹೆಂಡತಿ' ಎಂಬ ಕವನ ಕವಿಯ ವಾದಚಾತುರ್ಯವನ್ನು, ಮುಗ್ಧತೆಯನ್ನು, ಗಂಡನ ಹೃದಯದಾಳದ

ಪ್ರಾಮಾಣಿಕ ನೋವನ್ನು ಬಿಂಬಿಸುತ್ತದೆ. ಕೊನೆಯ ಸಾಲುಗಳು ಕವಿಗೆ ಹೆಣ್ಣಿನ ಬಗೆಗಿರುವ ಗೌರವವನ್ನು ಕನ್ನಡಿಸುತ್ತವೆ :

ನಿನ್ನ ಗಂಡನನ್ನು ಬೇಕಾದರೆ ದೂಷಿಸು ದೂರು :
ನಿನ್ನಂಥ ಹೆಣ್ಣುಗಳನ್ನು ಮಾತ್ರ ಶಂಕಿಸಬೇಡ ಕಂಡೆಯಾ
ಹುರುಳಿಲ್ಲ ಅದರಲ್ಲಿ, ನನಗದು ನೋವು !

ಹೆಣ್ಣಿನ ಮೇಲಿನ ಮೋಹ ಮದುವೆಯಾದ ಮೇಲೆ ಕಡಿಮೆಯಾಗುವುದಿಲ್ಲ : ಬದಲು ಶತಾಧಿಕವಾಗುತ್ತದೆ ಎಂಬುದು ಕವಿಯ ಅಂಬೋಣ. ನಿರನುಭವದ ಸ್ತರದಲ್ಲಿ ಕೇವಲ ಕಲ್ಪನೆಯ ಸೀಮೆಯಲ್ಲಿ ಬಣ್ಣಬಣ್ಣದ ಕನಸುಗಳನ್ನು ಹೆಣ್ಣಿನ ಬಗ್ಗೆ ಹೆಣೆಯುತ್ತ ವಿಹರಿಸುತ್ತಿದ್ದ ಮನಸ್ಸು, ಆ ಅನುಭವದ ವಾಸ್ತವತೆಯ ಸ್ಪರ್ಶವಾದ ಕೂಡಲೇ ತೀವ್ರತರವಾಗಿ ಸ್ಪಂದಿಸುತ್ತ ಅತ್ಯಂತ ಅಪ್ರತಿಹತ ಶಕ್ತಿಯಾಗಿ ವಿಜೃಂಭಿಸುತ್ತದೆಂಬುದನ್ನು ತುಂಬ ಧ್ವನಿಪೂರ್ಣವಾದ ಸತ್ವಪೂರ್ಣವಾದ ಪ್ರತಿಮೆಗಳ ಮೂಲಕ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ 'ಹುಚ್ಚು' ಎಂಬ ಕವಿತೆಯಲ್ಲಿ :

ಮೊಂಡಾಗಿ ಬಿದ್ದಿದ್ದ ಹತಾರಕ್ಕೆ ಸಾಣೆ ಹಿಡಿದಂತಾಗಿ
ಜ್ವಲಿಸುತ್ತದೆ, ಕಡಿಯುತ್ತದೆ,
ಸಿಡಿಮಿಡಿಯುತ್ತದೆ ;
ಜ್ವಾಲಾಮುಖಿ ಚಾಲೂ ಆಗಿ ಅಗ್ನಿರಸ ಕಾರುತ್ತದೆ ;
ನದಿಗೆ ನೆರೆ ಬಂದು ಭೋರ್ಗರೆದುಕ್ಕಿ ದಡ ಮೀರಿ
ಕೊಚ್ಚಿ ಹರಿಯುತ್ತದೆ ;
ವಿಪ್ಲವಗಳೇ ಘಟಿಸಿ, ಈ ನಡೂಮಧ್ಯದಲ್ಲೇ
ಗಂಡೂ ಹೆಣ್ಣುಗಳಾಗಿ ಬೆಳೆಯುತ್ತವೆ !

ಗಂಡು ಹೆಣ್ಣಿನ ಸಂಬಂಧ ಎಂದೆಂದೂ ಮುಗಿಯದ ಅಕ್ಷಯ ಅವಿನಾಶಿ ವಿವರಣಾತೀತ ಅದ್ಭುತ ಸಂಬಂಧವೆಂಬುದನ್ನು ಈ ಸಾಲುಗಳು ಅನನ್ಯವಾಗಿ ಮೂರ್ತಿಸುತ್ತವೆ.

'ಎಂಜಲು' ಮತ್ತು 'ಉಪಮೆ' ಕವಿತೆಗಳು ಹೆಣ್ಣಿನ ನಿತ್ಯನೂತನತೆಯನ್ನು ಮತ್ತು ಸರ್ವಾಲಂಕಾರಾತೀತತೆಯನ್ನು ಅಭಿವ್ಯಂಜಿಸಲೆಳಸಿರುವ ಚಿಕ್ಕ ಪ್ರಯತ್ನಗಳು. ಸರ್ವರ ಕಣ್ಣ ಹಸಿವಿಗೆ ತುತ್ತಾದ ಲಾವಣ್ಯವತಿಯನ್ನು ಕಂಡು, ಆಕೆ ಎಂಜಲಾಗಿದ್ದಾಳೆಯೆಂದು ಸಹಜವಾಗಿಯೇ ಒಮ್ಮೆ ಅನ್ನಿಸಿದರೆ, ಕವಿಯ ವಿಶಿಷ್ಟ ಮನೋಧರ್ಮ ಎಚ್ಚೆತ್ತು, ಎಂಜಲಾದದ್ದು ಹೆಣ್ಣಲ್ಲ ತಾನು ಎನ್ನಿಸುತ್ತದೆ ಮರುಕ್ಷಣದಲ್ಲೆ. ಅಂತೆಯೇ ಕಾವ್ಯೇತಿಹಾಸದುದ್ದಕ್ಕೂ ಹೆಣ್ಣನ್ನು ಸಾವಿರಾರು ಉಪಮೆಗಳಿಂದ ಬಣ್ಣಿಸಿದ್ದರೂ ಆಕೆಯ ಸೌಂದರ್ಯವನ್ನು ಯಾವೊಂದು ಉಪಮೆಯೂ ಶಕ್ತವಾಗಿ ಹಿಡಿದಿಡಲಾಗಿಲ್ಲವೆಂದು, ಆ ಕಾರಣದಿಂದ ಆಕೆ ಉಪಮಾತೀತೆ ಎಂದು ಮತ್ತೊಂದು ಕವಿತೆ

ಪಿಸುಗುಡುತ್ತದೆ. ಹೆಣ್ಣು-ಗಂಡುಗಳ ಬಗೆಗಿನ ಪರಿಹಾಸ್ಯ ವ್ಯಂಗ್ಯಗಳಿಂದ ಮೈವಡೆದ-ಲಘು ಕವಿತೆಗಳು 'ದೇಹದ' ಮತ್ತು 'ಜೋಡಿ'.

೪

ಈ ಕವಿ ತನ್ನ ಬಗ್ಗೆ ತನ್ನ ಸುತ್ತಣ ಜನದ ಬಗ್ಗೆ ಒಳಹೊಕ್ಕು ನೋಡಿದ ಫಲವಾಗಿ ಕೆಲವು ಕವಿತೆಗಳು ರೂಪುಗೊಂಡಿವೆ. ಕವಿ ತನ್ನೊಳಗನ್ನು ತಾನು ಶೋಧಿಸಿಕೊಂಡಾಗ, ತನ್ನೊಡನೆ ತಾನೇ ಮುಖಾಮುಖಿಯಾದಾಗ ಅಥವಾ ಸುತ್ತಣ ಸಂಗತಿಗಳ ಸುತ್ತ ಹಬ್ಬಿರುವ ಹುಸಿನಗೆಯ ಪೊಳ್ಳುಪರದೆಯನ್ನು ಧೀರವಾಗಿ ನಿರ್ದಯವಾಗಿ ಸೀಳಿ ಹಾಕಿದಾಗ ಆತ ಕಂಡುಕೊಳ್ಳುವ ಸತ್ಯಗಳು ಬಹಳ ಸಂದರ್ಭಗಳಲ್ಲಿ ಕಹಿಯಾಗಿ ವಿಕೃತವಾಗಿ ಇರುತ್ತವೆ. ಅವು ಎಷ್ಟೋ ಸಂದರ್ಭಗಳಲ್ಲಿ ಕಾವ್ಯಾಭಿವ್ಯಕ್ತಿಯಿಂದ ಟಣ್ಣನೆ ನುಣುಚಿಕೊಂಡು ಬಿಡುತ್ತವೆ. ಶಕ್ತ ಕವಿ ಮಾತ್ರ ಅವುಗಳ ಸಂಕೀರ್ಣತೆಗೆ ಸಂಕೋಲೆ ಹಾಕಿ ತನ್ನ ಹಿಡಿತಕ್ಕೆ ಒಗ್ಗಿಸಿಕೊಳ್ಳಬಲ್ಲ. ಇಲ್ಲಿ ಸಿಪಿಕೆ ಅಂಥದಕ್ಕೆ ಕೈ ಚಾಚಿದ್ದರೂ ಅವರ ಚಾಚಿದ ಕೈನಾಚೆ ಅವು ಜಿಗಿದಿರುವಂತೆ ಕಾಣುತ್ತದೆ. 'ವಿಮೆ', 'ಹೇಡಿ', 'ಐಕ್ಯ', 'ದೂರ', 'ನಮ್ಮವರು'–ಇವು ಇಂಥ ಕವಿತೆಗಳು. ಜೀವನದ ನಶ್ವರತೆಯನ್ನು ಮತ್ತೆ ಮತ್ತೆ ನೆನಪಿಸುವ ವಿಮಾ ಸಂಸ್ಥೆಗಳು ಇವರ ಸಾತ್ವಿಕ ಸಿಟ್ಟಿಗೆ ಗುರಿಯಾಗಿವೆ. ಸಾಂಕೇತಿಕವಾದ ಸಂಕೀರ್ಣ ಅರ್ಥ ಪರಂಪರೆಯನ್ನು ಧ್ವನಿಸುವ ಕವಿತೆಯೊಂದರ ರಚನೆಗೆ ಇದ್ದ ಒಂದು ಅವಕಾಶವನ್ನು ಕವಿಯ ಕೇವಲ ಸರಳಸ್ತರದ ಚಿಂತನೆ ಇಲ್ಲಿ ಕಳೆದುಕೊಂಡಿದೆ. ನಮ್ಮ ಸಂಸ್ಕೃತಿ ಹಲವು ಸಂದರ್ಭಗಳಲ್ಲಿ ನಮ್ಮನ್ನು ಹೇಡಿತನದ ಕಕ್ಷ್ಯೆಯೊಳಕ್ಕೆ ನೂಕುತ್ತದೆ ಎಂದು ಪದೇ ಪದೇ ನಮಗೆ ಭಾಸವಾಗುವುದು ಸಹಜ. ಇದರಿಂದಾಗಿಯೇ ನಾವು ಅಪಾರ ಒಳನೋವನ್ನು ಅನುಭವಿಸಬೇಕಾಗಿ ಬರುತ್ತದೆ. ಈ ಸಂಸ್ಕೃತಿಯ ಕವಚವನ್ನು ಕಿತ್ತುಹಾಕಿದರೆ ಸಹಜ ಮಾನವ ಸ್ವಭಾವ ವಿಜೃಂಭಿಸಿ ನಮ್ಮೊಳಗಿನದನ್ನೆಲ್ಲ ಹೊರಗು ಮಾಡುವುದರಿಂದ, ನಮ್ಮ ಒಳ್ಳೆಯತನದ ದುರ್ಲಾಭ ಪಡೆಯುವವರ ಸೊಲ್ಲು ಅಡಗುತ್ತದೆ. ಆದರೂ ಸುಸಂಸ್ಕೃತಿ ಎಂಬುದು ಬೀದಿ ಪ್ರದರ್ಶನಕ್ಕೆ ಬಯಸದೆ ಸದಾ ಒಳಮುಖವಾಗಿರಲು ಯತ್ನಿಸುತ್ತದೆ. ಜೀವನದ ಒಂದು ಕಟು ಸತ್ಯವನ್ನು ಅನಾವರಣ ಮಾಡಲೆಳಸುವ ಈ ಕವಿತೆ ಕವಿಯ ಸೀಮಿತೋದ್ದೇಶದ ಫಲವಾಗಿ ಹೆಳವಾಗುತ್ತದೆ. ತಮ್ಮ ಕೃತಿಗಳ ಟೀಕಾಕಾರವನ್ನು ಕುರಿತು ಈ ಕವಿಯಲ್ಲಿ ಹುದುಗಿರುವ ಅಸಮಾಧಾನ ವಾಚ್ಯತೆಗೆ ಹೊರಳುವುದರಿಂದ ಧ್ವನಿ ನರಳುತ್ತದೆ. ಪಂಚಭೂತಗಳ ಪಂಚೇಂದ್ರಿಯಗಳ, ಬದುಕಿನಲ್ಲಿ ಅವುಗಳಾಡುವ ಆಟ ಮಾಡುವ ಮಾಟಗಳನ್ನು ಭಾವುಕತೆಗೆಡೆಗೊಡದೆ ನಿರ್ಲಿಪ್ತವಾಗಿ ಬಿಡಿಸಿಡುವ ಚಿಕ್ಕ ಚೊಕ್ಕ ಕವನ 'ಒಡಹುಟ್ಟಿದವರು'. ತನ್ನ ವ್ಯಕ್ತಿತ್ವದ ಎಣ್ಣೆ ಬತ್ತಿಗಳನ್ನು ಬತ್ತಿಸಿ, ನೂರು ಒತ್ತಡಗಳ ನಡುವೆ ಸಿಕ್ಕಿಸಿ ಅಸ್ತಿತ್ವವನ್ನೇ ಕ್ರಮ ಕ್ರಮೇಣ ಛಿದ್ರಗೈಯುವ ದುಷ್ಟ ಪರಿಸರದಿಂದ ಬೇಸತ್ತ ಜೀವ, ತನ್ನತನವನ್ನು ಉಳಿಸಿಕೊಳ್ಳುವ

ಊರ್ಜಿತಗೊಳಿಸಿಕೊಳ್ಳುವ ಸಲುವಾಗಿ ಅದರಿಂದ ಬಿಡಿಸಿಕೊಂಡು ಪಲಾಯನ ಮಾಡಬೇಕೆಂದು ಬಯಸುವುದು ಸಹಜ. ಭ್ರಷ್ಟ ವಾತಾವರಣದ ಬಗ್ಗೆ, ಸ್ವಚ್ಛ ನಿಸರ್ಗದ ಬಗ್ಗೆ ಕವಿಗಿರುವ ತೀವ್ರ ಭಾವಗಳನ್ನು ಈ ಸಾಲುಗಳು ಸೊಗಸಾಗಿ ಸೆರೆ ಹಿಡಿಯುತ್ತವೆ :

ಯಾವುದಾದರೂ ಬೆಟ್ಟದ ನೆತ್ತಿ ಹತ್ತಬೇಕು,
ಮೋಡವಿರದ ನೀಲಾಕಾಶವನ್ನು ಮನದಣಿಯೆ ನೋಡಬೇಕು,
ಕಣ್ಣು ಕತ್ತಲೆಗಟ್ಟುವವರೆಗೆ ದಿಟ್ಟಿಸಬೇಕು ಸೂರ್ಯನನ್ನು,
ಗಿಡ ಮರ ಹೂ ಹಕ್ಕಿಗಳನ್ನು ಮಾತನಾಡಿಸಬೇಕು,
ಬಟ್ಟೆ ಕಿತ್ತೆಸೆದು ನಾನೇ ನಾನಾಗಿ ಕುಣಿದಾಡಬೇಕು,
ಸಾಕೆನಿಸುವಷ್ಟು ನಗಬೇಕು, ಅಳಬೇಕು !

ಸರಳ ಹೃದಯದ ಕವಿಯೊಬ್ಬ ತನ್ನ ಸುತ್ತು ತನ್ನನ್ನು ತುತ್ತುಗೊಳ್ಳುವುದ ರಿಂದ ಮುಕ್ತವಾಗಲು ಪಡುವ ತಳಮಳ ಚಡಪಡಿಕೆ ಶಕ್ತಿಪೂರ್ಣವಾಗಿ ದಾಖಲಾಗಿದೆ. ಈ 'ದೂರ' ಎಂಬ ಕವಿತೆಯಲ್ಲಿ. ಸುತ್ತಣ ಜಗತ್ತಿನೊಡನೆ ನಾವು ಮುಖಾಮುಖಿ ಯಾಗದಿರುವಾಗ, ಕೇವಲ ಭಾವುಕ ನೆಲೆಯಿಂದ ಆ ಸಂಬಂಧವನ್ನು ಸಮೀಕ್ಷಿಸಿದಾಗ ಅದೆಲ್ಲ ಸಹ್ಯವಾಗಿ ಆಪ್ಯಾಯಮಾನವಾಗಿ ಗೋಚರವಾಗುವುದು ಸಹಜವೇ. ಆದರೆ ಅದರೊಡನೆ ಬೆರೆಯುವ ಜೀವಿಸುವ ಮಸೆಯುವ ವಸ್ತುಸ್ಥಿತಿಗೆ ಕಾಲಿಟ್ಟಾಗ ಆ ಸಂಬಂಧಗಳ ನಿಜವಾದ ಬಣ್ಣ ಬಯಲಾಗಿ ಅದರ ಬಗ್ಗೆ ನಮ್ಮ ದೃಷ್ಟಿಕೋನವೇ ಬದಲಾಗುತ್ತದೆ. ಹೀಗೆ ಸೂಕ್ಷ್ಮ ಮತ್ತು ಸ್ಥೂಲ ಸಂಬಂಧಗಳ ಪರಿಣಾಮ ಫಲವನ್ನು 'ನಮ್ಮವರು' ಶಿವನ ವಿಶ್ಲೇಷಿಸಲು ಪ್ರಯತ್ನಿಸಿದೆ.

ದಿನದಿನಕ್ಕೆ ತೀವ್ರವೂ ಪ್ರಭಾವಶಾಲಿಯೂ ಆಕ್ರಮಣಕಾರಿಯೂ ಆಗಿ ದೈತ್ಯ ದೇಹದಿಂದ ವಿಜೃಂಭಿಸುತ್ತಿರುವ ನಮ್ಮ ಸುತ್ತಣ ಪರಿಸರದಲ್ಲಿ ಮನುಷ್ಯನ ಅಸ್ತಿತ್ವ ಕ್ರಮೇಣ ಕರಗಿಹೋಗುತ್ತಿದೆಯೆಂದು ಅನ್ನಿಸುತ್ತದೆ. ಇದರಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುವ ಬದುಕು ತನ್ನ ವೈಭವಯುತ ಗತ ಇತಿಹಾಸವನ್ನು ಉದ್ದೇಶಪೂರ್ವಕ ವಾಗಿ ಜರಿಯುತ್ತ ಜಾರಿಸುತ್ತ, ತನ್ನ ವಿಶಿಷ್ಟತೆಯನ್ನು ಗುರುತಿಸಿಕೊಳ್ಳುವುದಕ್ಕಾಗಿ ಕೇವಲ ತೆಳುವಾದ ವರ್ತಮಾನವನ್ನೇ ಅಪ್ಪುತ್ತ ಅದನ್ನೇ ಮುಂದೊಡ್ಡುವ ಮೂಲಕ ಜೀವಂತವಾಗಿರಲು ಹವಣಿಸುತ್ತದೆ. ಭೂತವನ್ನು ಸಂಪೂರ್ಣವಾಗಿ ಹುಗಿದುಹಾಕ ಲೆಳಸುವ ಕೇವಲ ವರ್ತಮಾನ ಅರ್ಥಪೂರ್ಣವಾಗಲಾರದು, ಆರೋಗ್ಯಕರವಾಗ ಲಾರದು, ಗಟ್ಟಿಯಾಗಿ ಚಿರಂತನತೆಯನ್ನು ಸಾಧಿಸಲಾರದು ಎಂಬ ವಿಚಾರ ಸರಣಿ 'ವರ್ತಮಾನ' ಕವಿತೆಯಲ್ಲಿದೆ.

ಹದಿಹರೆಯದ ವಯಸ್ಸಿನ ನೂರು ವಿಕಾರಗಳು ಸಹಜ ಆರೋಗ್ಯಕರ ಹೊರ ದಾರಿಯನ್ನು ಕಂಡುಕೊಳ್ಳಲು ಅಸಮರ್ಥವಾದಾಗ, ಆ ವಯೋಮಾನದ ತೀವ್ರ

ಒತ್ತಡಗಳು ಹಳ್ಳಕೊಳ್ಳಗಳ ಒಬ್ಬೆ ಓಣಿಗಳ ಮೂಲಕ ಹರಿಹಾಯುವುದು ಸ್ವಾಭಾವಿಕ. ಮಡಿವಂತಿಕೆಯನ್ನು ಬದಿಗಿರಿಸಿ ಅದನ್ನೂ ಆಸ್ವಾದಿಸುವ ಮನೋಧರ್ಮವಿದ್ದರೆ ಎಂಥ ವಿಸ್ಮಯಕಾರೀ ಸೋಪಜ್ಞಶೀಲ ಕಲೆಯನ್ನು ಅದರಲ್ಲಿ ಕಾಣುವುದು ಸಾಧ್ಯ ವೆಂಬುದನ್ನು 'ಅಜ್ಞಾತ ಕವಿಗಳ ಕಾವ್ಯ' ಕವಿತೆ ಕಟ್ಟಿಕೊಡುತ್ತದೆ. ಗೇಲಿ, ವ್ಯಂಗ್ಯ, ಪರಿಹಾಸ, ಮೆಚ್ಚುಗೆ, ವಿಸ್ಮಯಗಳ ಹಳಿಗಳ ಮೇಲೆ ಹಾದು ಹೋಗುವ ಈ ಕವಿತೆ ಲವಲವಿಕೆಯಿಂದ ಪುಟಿಯುತ್ತದೆ. ಇದರಿಂದಲೇ ಹುಟ್ಟಿಕೊಳ್ಳುವ ಸಹಜ ವಿಷಾದದ ಪ್ರಶ್ನೆ ಕವಿತೆಗೆ ಹೊಸ ತಿರುವನ್ನು ನೀಡುತ್ತದೆ :

> ಏಕಾಂತದಲ್ಲಿ ಇಷ್ಟೊಂದು ವೀರ್ಯವಂತರಾಗಿ
> ಕಲ್ಪನಾ ಸಂಪನ್ನರಾಗಿ ಮೆರೆಯುವ ನಾವು
> ಬಹಿರಂಗದಲ್ಲೇಕೆ ನಿರ್ವೀರ್ಯರಾಗಿ, ಪ್ರತಿಭಾ ದರಿದ್ರರಾಗಿ
> ಬದುಕುತ್ತಿದ್ದೇವೆ ?

ಸಂಪೂರ್ಣವಾಗಿ ವ್ಯಂಗ್ಯ ಅಸಹನೆ ಅಸಮಾಧಾನ ಸಿಟ್ಟುಗಳ ಸ್ತರದಲ್ಲೇ ರೂಪು ಗೊಂಡಿರುವ ಕವಿತೆ 'ಗುಟ್ಟು'. ಯಾವ ಕಾವ್ಯವನ್ನೂ ಒಳ್ಳೆಯದೆಂದು ಒಪ್ಪದ, ಅಸಮ್ಮತಿಯ ವ್ರತವನ್ನೇ ಪಟ್ಟುಹಿಡಿದ, ಅಸಮ್ಮತಿಯ ಸೇವೆಯ ಗುಣವೊಂದೇ ತಾವು ಬುದ್ಧಿಜೀವಿಗಳೆಂಬ ಪಟ್ಟ ಪದವಿಗಳಿಗೇರಲು ಮೆಟ್ಟಿಲೆಂದು ಭಾವಿಸಿದ ಆರೋಪಿ ಗಳನ್ನು ಕುರಿತ ಕವಿತೆಯಿದು. ವಾಚ್ಯದ ಹಾದಿಯಲ್ಲೇ ನಡೆಯುವ ಈ ಕವಿತೆಯ ಆಶಯ ಸುಸ್ಪಷ್ಟವಾಗಿರುವುದರಿಂದ ಹೆಚ್ಚಿನ ಚಿಂತನೆಗಳಿಗೆ ಅರ್ಥದ ಪದರುಗಳಿಗೆ ನಮ್ಮನ್ನು ಎಳೆಯುವುದೇ ಇಲ್ಲ.

೫

ಈ ಕೃತಿಯ ಕೊನೆಯಲ್ಲಿರುವ ಸುಭಾಷಿತಗಳು ಸಂಸ್ಕೃತ ಮೂಲದಿಂದ ಕನ್ನಡಕ್ಕೆ ತಂದವುಗಳು. ಸುಭಾಷಿತಗಳು-೧ ಲೋಕ ನೀತಿಯನ್ನು ಸರಳವಾದ ಚಿರಪರಿಚಿತವಾದ ಸಾದೃಶ್ಯಗಳ ಮೂಲಕ ಮನಸ್ಸಿಗೆ ಮುಟ್ಟಿಸಲು ಯತ್ನಿಸುತ್ತವೆ. ಸುಭಾಷಿತ – ೨ ಜಗತ್ತಿನ ನಿತ್ಯನೂತನ ವಸ್ತುವಾದ ಗಂಡು-ಹೆಣ್ಣಿನ ಸಂಬಂಧವನ್ನು ಕುರಿತ ನವುರಾದ, ಹಿತವಾದ, ಭಾವನೆಗಳಿಗೆ ಕಚಗುಳಿಯಿಡುವ ಆಕರ್ಷಕ ರಚನೆಗಳು. ಆದರೆ ಇವುಗಳೆಲ್ಲ ಶತಶತಮಾನಗಳ ಸಂಸ್ಕೃತ ಶೃಂಗಾರ ಕಾವ್ಯಗಳ ನೆಳಲನ್ನು ಹೊದ್ದುಕೊಂಡಿವೆ. ನಿಷ್ಣಾತ ಭಾಷಾಂತರಕಾರರಾದ ಸಿ. ಪಿ. ಕೆ. ತುಂಬ ಸರಳವಾಗಿ ನಿರಾಯಾಸವಾಗಿ ಅಕೃತಕವಾಗಿ ಇವುಗಳನ್ನು ಕನ್ನಡಿಸಿದ್ದಾರೆ.

೬

ಕವಿಗಳು, ಗಣ್ಯ ವ್ಯಕ್ತಿಗಳು, ಹೆಣ್ಣು, ಭ್ರಷ್ಟ ಪರಿಸರ, ಕವಿ-ವಿಮರ್ಶಕ, ಮಾನಸಿಕ ತೊಳಲಾಟ-ಇವೆಲ್ಲವನ್ನು ತಮ್ಮ ಕಾವ್ಯವಸ್ತುವನ್ನಾಗಿ ಸ್ವೀಕರಿಸಿರುವ

ಸಿ.ಪಿ.ಕೆ. ತಮ್ಮ ಅನುಭವದ ಪ್ರತಿಭೆಯ ಹದದಲ್ಲಿ ಅವುಗಳಿಗೆ ವಿಶಿಷ್ಟಾಭಿವ್ಯಕ್ತಿ ನೀಡಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದಾರೆ. ಈ ಎಲ್ಲ ಕವಿತೆಗಳ ಉದ್ದಕ್ಕೂ ಸರಳತೆ ಪ್ರಾಣದ್ರವವಾಗಿ ಹರಿದಾಡಿದೆ. ತಮ್ಮ ದೃಷ್ಟಿಗೆ ಧೋರಣೆಗೆ ಮತಿಗೆ ನಿಲುಕುವ ಸಂಗತಿಗಳನ್ನೇ ಚೊಕ್ಕವಾಗಿ ಅಚ್ಚುಕಟ್ಟಾಗಿ ಕಡೆಯುವ ಕುಶಲಗಾರಿಕೆಯೂ ಇಲ್ಲಿದೆ. ಸಂಪ್ರದಾಯವನ್ನು ಸಂಪೂರ್ಣವಾಗಿ ಪ್ರಶ್ನಾತೀತವಾಗಿ ಒಪ್ಪಿಕೊಳ್ಳದ ವೈಚಾರಿಕ ಮನೋಧರ್ಮವೂ ಇಲ್ಲಿ ಕಾರ್ಯನಿರತವಾಗಿದೆ. ಭಾಷೆಯನ್ನು ಹದವಾಗಿ ಮಿದುವಾಗಿ ಮಿತವಾಗಿ ದುಡಿಸಿಕೊಳ್ಳುವ ಜಾಣ್ಮೆ ಸಹ ಇಲ್ಲಿ ಸುವ್ಯಕ್ತ. ಆದರೆ ತಾನು ಆರಿಸಿಕೊಂಡ ವಿಷಯದ ಎಲ್ಲ ಮಗ್ಗುಲುಗಳನ್ನೂ ಏಕಕಾಲದಲ್ಲಿ ಅನಾವೃತಗೊಳಿಸುವ, ಅವುಗಳ ಸುಸೂಕ್ಷ್ಮ ಪಾತಳಿಗಳಲ್ಲಿ ಸಂಚರಿಸಿ ಅವೆಲ್ಲವನ್ನೂ ಅನಾಮತ್ತಾಗಿ ಎತ್ತಿ ತಂದು ನಮ್ಮೆದುರು ಪದರಪದರವಾಗಿ ಬಿಚ್ಚಿಡುವ. ಸಂಕೀರ್ಣ ಭಾವಾನುಭವಗಳಿಗೆ ಧ್ವನಿಪೂರ್ಣ ಪ್ರತಿಮೆಗಳನ್ನೊಡ್ಡುವ ಮೂಲಕ ಅರ್ಥತರಂಗಗಳನ್ನು ಚಿಮ್ಮಿಸುವ, ಭಾಷೆಯ ಎಲ್ಲ ಶಕ್ತಿ ಸಾಧ್ಯತೆಗಳನ್ನು ಸಮಗ್ರವಾಗಿ ಹಿಂಡಿಬಿಡುವಂತೆ ಕ್ರಿಯಾಪೂರ್ಣ ವಾಗಿ ವೀರ್ಯವತ್ತಾಗಿ ದುಡಿಸಿಕೊಂಡು ಸಾವಯವ ಶಿಲ್ಪದ ಕವನಸೌಧವನ್ನು ದಂಗುಬಡಿಸುವಂತೆ ಕಟ್ಟುವ ಶ್ರೇಷ್ಠಮಟ್ಟದ ಕಲೆಗಾರಿಕೆ ಇಲ್ಲಿ ನಮ್ಮನ್ನು ಎದುರು ಗೊಳ್ಳುವುದಿಲ್ಲವೆಂದೇ ಹೇಳಬೇಕು. ಒಂದೆರಡು ಸಾಲುಗಳಲ್ಲಿ ಮಿಂಚಾಗಿ ಸಂಚರಿಸುವ ಕಲ್ಪನೆ ಕೂಡಲೇ ಕಾವು ಕಳೆದುಕೊಂಡು ತಣ್ಣಗಾಗಿ ಬಿಡುವುದೇ ಹೆಚ್ಚು. ಆದ್ದರಿಂದ ನಮ್ಮ ಮನಸ್ಸಿನ ಆಕಾಶವನ್ನು ತಟಕ್ಕನೆ ಆವರಿಸಿಬಿಡುವ ಚಿಂತನೆಯ ಮಿಂಚುಗಳಾಗಲಿ, ಕಣ್ಣು ಕೋರೈಸುವ ಕಾಮನಬಿಲ್ಲಿನ ಕಲಾವೈಭವವಾಗಲಿ, ವಿಶಿಷ್ಟ ಚಿಂತನಾನುಭವಗಳ ಸಂಘರ್ಷದಿಂದ ಸ್ಫೋಟಗೊಳ್ಳುವ ಸುಡುಗೆಂಡದ ತೀಕ್ಷ್ಣ ಜ್ವಲಂತ ಭಾಷೆಯನ್ನಾಗಲಿ ಇಲ್ಲಿ ನಮ್ಮನ್ನು ಸೆಳೆದು ನಿಲ್ಲಿಸುವುದಿಲ್ಲ. ನವ್ಯಕಾವ್ಯ ನವ್ಯ ವಿಮರ್ಶೆ ವಿಮರ್ಶಕರ ಬಗೆಗಿರುವ ಕವಿಯ ಅಸಹನೆ ಹರಳಾಗದೆ ವಾಚ್ಯದಲ್ಲೇ ಸ್ಖಲನವಾಗುವುದು ಮತ್ತೊಂದು ದೋಷ. ಇಷ್ಟಾದರೂ ಅತಿಗಳಿಗೆ ಶರಣಾಗದ ಕವಿಯ ಸಮತೋಲನ ಪ್ರಜ್ಞೆ, ಬದುಕಿನ ಶಿವಾಂಶಗಳನ್ನೆಂತೊ ಭ್ರಷ್ಟಾಂಶಗಳನ್ನೂ ಅಂತೆಯೇ ತಮ್ಮ ಕಾವ್ಯದ ತೆಕ್ಕೆಗೊಗ್ಗಿಸಿಕೊಳ್ಳುವ ಪ್ರಯತ್ನ. ನಿರಾಯಾಸಶೀಲವಾದ ರಚನಾಶಕ್ತಿ, ಮಿತಿಯಲ್ಲೇ ಮನಸೆಳೆಯುವ ಕಲೆಗಾರಿಕೆ, ಭಾಷೆಯ ಲವಲವಿಕೆಗಳಿಂದಾಗಿ ಇದೊಂದು ಗಮನಿಸಬೇಕಾದ ಕವನಸಂಕಲನವಾಗಿದೆ; ಸಿ.ಪಿ.ಕೆ. ಯವರ ಕಾವ್ಯಶಕ್ತಿಯ ಇತಿಮಿತಿ ಗಳ ಅಳತೆಗೋಲೂ ಆಗಿದೆ.

ಸಮಾಜದ ಬಗೆಗಿನ ಕಳಕಳಿಯು : 'ತಮುಸಾ ನದಿ ಎಡಬಲದಿ'

ದೇವಯ್ಯ ಹರವೆ

'ತಮುಸಾ ನದಿ ಎಡಬಲದಿ' ಸಂಕಲನ ಸಿದ್ಧ ಮಾಡುವ ಕಾಲಕ್ಕೆ ಶ್ರೀ ಆಕಬರ ಅಲಿಯವರ ಇತರ ನಾಲ್ಕು ಸಂಕಲನಗಳಿಂದ ಕವನಗಳನ್ನು ಆಯ್ದುಕೊಳ್ಳಲು ಇವರಿಗೆ ನಾನು ಸಹಾಯ ಮಾಡುವ ಅವಕಾಶ ಒದಗಿತು. ಆಗ ಇವರ ಎಲ್ಲ ಕವನಗಳನ್ನು ಪ್ರಾಮಾಣಿಕವಾಗಿ ಅಧ್ಯಯನ ಮಾಡಿದ್ದು; ಈ ಎರಡೂ ವರ್ಷಗಳಲ್ಲಿ ಇವರನ್ನು ಚೆನ್ನಾಗಿ ಬಲ್ಲೆನೆಂಬುದು; ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿರುವುದು – ಬಹುಶಃ ಇಂಥ ಕಾರಣಗಳು ಈ ಸಂಕಲನಕ್ಕೆ ಹಿನ್ನುಡಿ ಬರೆಯಲು ನನ್ನನ್ನು ಪ್ರೇರೇಪಿಸಿವೆ.

ಬದುಕಿನ ಅನಿವಾರ್ಯತೆಯೊಂದಿಗೆ ಸಾಹಿತ್ಯ, ಕಲೆ, ವಿಜ್ಞಾನಗಳ ಅನಿವಾರ್ಯತೆಯಿರುವುದು ಒಂದರ ಬೆಳವಣಿಗೆಗೆ ಮತ್ತೊಂದು ಪೂರಕವಾಗಿರುವಲ್ಲಿ. ಅರ್ಥಾತ್ ಸಮಾಜದ ಅನೇಕ ರೀತಿಯ ಬೆಳವಣಿಗೆಯು ಸಾಹಿತ್ಯದ ಮೇಲೆ ಪ್ರಭಾವ ಬೀರಬಲ್ಲುದಾದರೆ; ಸಾಹಿತ್ಯ ಬೆಳೆಯುವ ಸಮಾಜದ ಮೇಲೂ ಅಗತ್ಯವಾಗಿ ಪ್ರಭಾವ ಬೀರಬೇಕಾಗುತ್ತದೆ. ಆದರಿಂದ ಸಾಹಿತಿ ತನ್ನ ಕೃತಿಗಳಲ್ಲಿ ಸಮಾಜದ ಬದಲಾವಣೆಗಳನ್ನು ಯಾವ ರೀತಿಯಾಗಿ ಅರಗಿಸಿಕೊಳ್ಳುತ್ತಾನೆಂಬುದೂ ಮತ್ತು ಅಂಥ ಬದಲಾದ ಸಮಸ್ಯೆಗಳಿಗೆ

ತನ್ನ ಕೃತಿಯೊಳಗಿನಿಂದ ಯಾವ ರೀತಿಯಾಗಿ ಸ್ಪಂದಿಸುತ್ತಾನೆಂಬುದೂ ಬಹಳ ಮುಖ್ಯವಾಗುತ್ತದೆ. ಆಗ ಸಾಹಿತಿಯು ಅಭಿವ್ಯಕ್ತಿಯಲ್ಲಿ ಅವನು ತಾಳುವ ಧೋರಣೆಗೊಳಗಿಂದ ಅವನ ವಿಶಿಷ್ಟತೆಯನ್ನು ಗುರುತಿಸಿಕೊಳ್ಳಬೇಕೇ ವಿನಾ ಅವನು ಯಾವ ವಸ್ತುವನ್ನು ಕುರಿತು ಬರೆಯುತ್ತಾನೆಂಬುದರಿಂದಲ್ಲ. ಹೀಗಾಗಿರುವುದರಿಂದಲೇ ಸಾಹಿತ್ಯ ಸೃಷ್ಟಿಯೊಳಗೆ ಹೊಸ ಹೊಸ ಪ್ರಯೋಗಗಳು ಹುಟ್ಟುತ್ತಿರುತ್ತವೆ. ಇಂಥ ಪ್ರಯೋಗಗಳ ಹುಟ್ಟಿಗೆ ಕಾರಣರಾಗುವವರು ಒಬ್ಬರೋ ಇಬ್ಬರೋ ; ಆದರೆ ಆ ದಾರಿಯಲ್ಲಿ ನಡೆದು ಅಂಥದ್ದನ್ನು ಸಮೃದ್ಧಗೊಳಿಸುವವರು ಇತರರು. ಈ ಕಾರಣಗಳಿಂದಾಗಿ ಒಬ್ಬ ಸಾಹಿತಿ ತನ್ನ ಜೀವಿತದ ಅವಧಿಯೊಳಗೆ ಅನೇಕ ಹೊಸ ಪ್ರಯೋಗಗಳನ್ನು ಕಾಣಬೇಕಾಗುತ್ತದೆ. ಹಾಗೆಂದ ತಕ್ಷಣ ಹಳೆಯ ಪ್ರಯೋಗವನ್ನು ಬಿಟ್ಟು ಹೊಸ ಪ್ರಯೋಗದ ಕಡೆ ಬಂದುಬಿಡುವುದು ಎಂದಲ್ಲ. ಕೆಲವರು ಹಾಗೆ ಬಂದರೂ ಮತ್ತೂ ಕೆಲವರು ಎಲ್ಲಾ ಪ್ರಯೋಗಗಳ ಒಳ್ಳೆಯದನ್ನು ಅರಗಿಸಿಕೊಳ್ಳುತ್ತಾ ತಮ್ಮದೇ ದಾರಿಯಲ್ಲಿ ಹೋಗುತ್ತಿರುತ್ತಾರೆ. ನವೋದಯ ಸಾಹಿತ್ಯದಲ್ಲಿ ಬರೆಯುತ್ತಿದ್ದ ಕೆಲವು ಕವಿಗಳು ಏಕ್‌ದಂ ನವ್ಯ ಸಾಹಿತ್ಯದ ಕಡೆಗೆ ಬಂದುದು ಒಂದು. ಎರಡನೆಯದಾಗಿ–ನವೋದಯ ಮತ್ತು ನವ್ಯ ಎರಡೂ ಸಾಹಿತ್ಯ ಜಾಡಿನ ಕೆಲವು ಒಳ್ಳೆಯ ಅಂಶಗಳನ್ನು ಉಳಿಸಿಕೊಂಡು ತಮ್ಮದೇ ಆದ ಜಾಡಿನಲ್ಲಿ ನಡೆಯುತ್ತಿರುವವರು ಕೆಲವರು. ಈ ಎರಡನೇ ಗುಂಪಿಗೆ ಸೇರುವವರಲ್ಲಿ ಅಕಬರ ಅಲಿಯವರೂ ಒಬ್ಬರು.

'ಸಾಮಾನ್ಯವಾಗಿ ಅಕ್ಷರ ಬಲ್ಲ ಪ್ರತಿಯೊಂದು ಪ್ರಾಣಿಯೂ ಒಂದು ವಯಸ್ಸಿನಲ್ಲಿ ಕವಿಯಾಗಿರುತ್ತದೆ' – ಇದು ಅನೇಕ ಕಾರಣಗಳಿಗಾಗಿ ಇರಬಹುದು. ಆದರೆ ಈ ವ್ಯಾಮೋಹ ಕೆಲವರಲ್ಲಿ ಬಹಳ ದೂರದವರೆಗೂ ಇರುವುದಿಲ್ಲ ; ನಿಜವಾದ ಪ್ರತಿಭೆಯಿದ್ದಾಗ ಮಾತ್ರ ಹಾಗಾಗುವುದಿಲ್ಲ. ಅಂಥವ ಮುಂದುವರಿದು ಬರೆಯುವ ಧೈರ್ಯ ಮಾಡಿಬಿಡುವನು. ಆಗ ಸಹಜವಾಗಿ ಅನುಭವ ಸೀಮಿತವಾಗಿರುತ್ತದೆ ; ಅನಿಸಿದ್ದನ್ನು ಹೇಳಿಬಿಡುವ ಆತುರತೆಯಿರುತ್ತದೆ ; ಎಲ್ಲದರ ಬಗ್ಗೆಯೂ ಕುತೂಹಲ, ಕ್ರೋಧ, ಆಶ್ಚರ್ಯ, ವಿಸ್ಮಯವನ್ನು ವ್ಯಕ್ತಪಡಿಸುತ್ತಾನೆ ; ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕಾಣಲು ತವಕಿಸುತ್ತಾನೆ. ಈ ಎಲ್ಲಾ ಅಂಶಗಳೂ ಕಾವ್ಯರೂಪವಾಗಿ ಬರಲು ತೊಡಗುತ್ತವೆ. ಅಂಥದೇ ಅಕಬರ ಅಲಿಯವರ ಪ್ರಥಮ ಸಂಕಲನ 'ವಿಷ ಸಿಂಧು' ವಿನಲ್ಲಿ ಕಾಣುತ್ತದೆ :

ಸಂತಾಪ– ಸಂಕ್ಲೇಶ– ಸಂಕ್ಷೋಭೆಯೊಳಗೊಂಡ
ನೆಚ್ಚುಗೆಯ ಕೆಚ್ಚುತನ ಬಿಚ್ಚುತನದಾ ಗಂಡ
ಗರ್ವದಿಂದಲೆ ಬಾಳು...............

(ಒಳದನಿಗೆ)

ಹೀಗೆ ಆದರ್ಶ ಇಟ್ಟುಕೊಂಡು ಹೊರಟ ಕವಿಗೆ ಸಮಾಜದ ಬಗ್ಗೆ ತೀವ್ರ ಕ್ರೋಧವಿದೆ. ಬಾಪುವಿನ ಆದರ್ಶವನ್ನು ಯಾರೂ ಕಾರ್ಯರೂಪಕ್ಕೆ ತಂದಿಲ್ಲ ; ನೆಹರು ಕೂಡ ಜಾತಿ ಮತಗಳ ಭಾವನೆಯುಳ್ಳ ವಿಷಜಂತುಗಳಿಂದ ಸುತ್ತುವರೆದಿದ್ದಾರೆ; ಇರುವ ನಾಯಕರೆಲ್ಲಾ 'ನಾಯ-ಕರು' ಎಂಬ ಬಿರುದಿಗೆ ಲಾಯಕ್ಕು-ಎಂಬ ಭಾವನೆಗಳನ್ನು ತಾಳುತ್ತಾರೆ. ದಿಢೀರನೆ ಹುಟ್ಟಿಕೊಂಡ ಘೋಷಣೆಗಳು ಕಾವ್ಯವಾಗುವುದಕ್ಕೆ ಹವಣಿಸುತ್ತಿರುವುದು ಇಲ್ಲಿ ನಮಗೆ ಕಾಣುತ್ತದೆ. ಮಾತುಗಳು ಹಾಳು ಸುರಿಯುತ್ತವೆ. ಆದರೆ ಅಕಬರ ಅಲಿಯವರು ತಮ್ಮ ಇಪ್ಪತ್ತೊಂಬತ್ತು ಮೂವತ್ತು ವರ್ಷಗಳ ಸಾಹಿತ್ಯ ಸೇವೆಯಲ್ಲಿ ಇದೇ ರೀತಿಯ ಕಾವ್ಯಸೃಷ್ಟಿಯನ್ನು ಮುಂದುವರಿಸಿಕೊಂಡು ಬಂದಿದ್ದರೆ ಖಂಡಿತಾ ಯಾರೂ ಗಮನಿಸಬೇಕಾಗುತ್ತಿರಲಿಲ್ಲ. ಮೊದಲನೇ ಸಂಕಲನದ ನಂತರ ಅನುಭವದ ಸೀಮಿತವಲಯ ವಿಸ್ತಾರವಾಗಿದೆ ; ಭಾಷೆಯ ಮೇಲಿನ ಹಿಡಿತ ಎದ್ದು ಕಾಣುತ್ತದೆ. ಕಾವ್ಯದಲ್ಲಿ ಸಂಕೇತ – ಪ್ರತಿಮೆಗಳ ಅರ್ಥವಂತಿಕೆ ವೃದ್ಧಿಸಿದೆ– ಇವುಗಳೆಲ್ಲದರ ಬಳಕೆಯಿಂದ ಕಾವ್ಯಲೋಕಕ್ಕೆ ಕೆಲವನ್ನಾದರೂ ಉತ್ತಮ ಕವನ ನೀಡಿರುವರೆಂಬುದು : ಅದಕ್ಕಾಗಿಯೇ ಈಗ ಅವರ ಕವನಗಳ ಒಟ್ಟು ಅಧ್ಯಯನ ಕೂಡ ಅರ್ಥವತ್ತಾದುದು.

೩

'ಸುಮನ ಸೌರಭ', 'ನವಚೇತನ', 'ಗಂಧಕೇಶರ'–ಇವು ಇನ್ನುಳಿದ ಅಕಬರ ಅಲಿಯವರ ಮೂರು ಕವನ ಸಂಕಲನಗಳು. ಇಲ್ಲಿಂದ 'ತಮಸಾ ನದಿ ಎಡಬಲದಿ' ಸಂಕಲನಕ್ಕೆ ಆಯ್ದ ಕವನಗಳಲ್ಲಿ – ಸ್ವಾತಂತ್ರ್ಯ, ವಿಡಂಬನೆ. ಸಮಾಜದ ವಸ್ತುನಿಷ್ಠತೆ, ಕಾಮ, ವ್ಯಕ್ತಿಚಿತ್ರಗಳು ಇಂತಿವೇ ಮೊದಲಾದ ವಸ್ತುಗಳನ್ನು ಕುರಿತು ಬರೆದಂಥವು.

೧೯೪೭ಕ್ಕೆ ಮುಂಚೆ ಭರತಖಂಡ ಇತಿಹಾಸದಲ್ಲಿ ಎಂದೂ ಸರ್ವತಂತ್ರ ಸ್ವತಂತ್ರ ರಾಜ್ಯವಾಗಿರಲಿಲ್ಲ. ಬ್ರಿಟಿಷರ ಉಚ್ಚಾಟನೆಯೇ ನಿಜವಾದ ಸ್ವಾತಂತ್ರ್ಯ ಎಂದು ತಿಳಿದುಕೊಂಡವರಿಗೆ ಈ ದೇಶ ಸ್ವತಂತ್ರವಾಗಿದೆ ; ಜನ ಉಸಿರು ಬಿಗಿದ ವಾತಾವರಣದಿಂದ ಮುಕ್ತರಾಗಿದ್ದಾರೆ ಎಂದೆನಿಸಿತ್ತು. ಕವಿಗೂ ಈ ಭಾವನೆಗಳು ಬರದಿರಲಿಲ್ಲ.

ಇನ್ನಿಲ್ಲ ಇನ್ನಿಲ್ಲ
ಬೆನ್ನು ಬಾಗಿ
ಪಶುವಿಗೂ ಪಶುವಾಗಿ
ಕ್ಷುದ್ರ ಜಂತುವೆ ಆಗಿ
ಕಾಲ ಕಸವಾಗಿ
ಬಿದ್ದಿರುವ ದುರವಸ್ಥೆ –ದುರ್ ವ್ಯವಸ್ಥೆ

(ಬಂತಣ್ಣ ಬಂತು ಹೊಸ ಹಗಲು)

ಸ್ವಾತಂತ್ರ್ಯ ಬಂದ ಹೊಸಪರಲ್ಲಿ ಈ ಇಂಥ ಭಾವನೆಗಳಿಗಿಂತಲೂ ಉನ್ನತವಾದ ಆದರ್ಶಗಳು ದೇಶದ ಉದ್ದಗಲಕ್ಕೂ ತುಂಬಿಕೊಂಡಿದ್ದವು. ಭರತಖಂಡದ ಆಧ್ಯಾತ್ಮ ಒಮ್ಮೆಲೇ ಎಚ್ಚೆತ್ತುಕೊಂಡು ಪ್ರಪಂಚಕ್ಕೇ ಶಾಂತಿಯನ್ನು ಬೋಧಿಸುತ್ತೇನೆಂದು ಹೊರಟದ್ದು ; ಪ್ರಾಚೀನ ಸಂಸ್ಕೃತಿಯ ಔನ್ನತ್ಯವನ್ನು ಕುರಿತು ಮಂದಿ ಹಳಹಳಿಸಿದ್ದು, ಇವೆಲ್ಲವೂ ಆಗ ಯೋಚಿಸುವ ಸಂಗತಿಗಳೇ ಆಗಿರಲಿಲ್ಲ. ದೇಶ ಯೋಚಿಸಬೇಕಾದ ವಾಸ್ತವ ವಿಷಯ ಬೇರೆಯೇ ಇತ್ತು. ದೇಶ ಇಬ್ಭಾಗವಾಗಿ ರೊಟ್ಟಿ, ಬಟ್ಟೆ, ವಸತಿ ಇಲ್ಲದೆ ಜನ ಕಂಗಾಲಾಗಿದ್ದರು ; ಮತೀಯ ಭಾವನೆ ತುಂಬಿ ತುಳುಕಾಡುತ್ತಿತ್ತು. ಒಡೆದು ಚೂರಾದ ದೇಶಗಳು ಒಂದನ್ನೊಂದು ದ್ವೇಷ ಮನೋಭಾವದಿಂದ ನೋಡುತ್ತಿವೆ :

ಹೊಟ್ಟೆ ಹೊಸೆಯೆ ತ್ರಾಣವಿಲ್ಲ ;
ಸಿಟ್ಟು ಮೇರೆ ಮೀರಿತಲ್ಲ
ಒಂದನೊಂದು ಪರಚಿವೆ
ಕಪಿಗಳಂತೆ ಕಿರಿಚಿವೆ

(ಅವಳಿ – ಜವಳಿ)

ಈಗ ಸ್ವಾತಂತ್ರ್ಯ ಬಂದು ಮೂವತ್ತು ವರ್ಷಗಳಾದರೂ ಇದಕ್ಕಿಂತ ಮುಂದೇನು ನಾವು ಹೋಗಿಲ್ಲ. ಎಲ್ಲಿಯವರೆಗೆ ವ್ಯಕ್ತಿ ತನ್ನನ್ನು ತಾನು ಅರಿತುಕೊಳ್ಳಲು ಅವಕಾಶ ಒದಗಿಬರುವುದಿಲ್ಲವೋ (ಅಥವಾ ಅಂಥ ಅವಕಾಶವನ್ನು ಹಕ್ಕಿನಿಂದ ಸಂಪಾದಿಸುವುದಿಲ್ಲವೋ) ಅಲ್ಲಿಯತನಕ ಸ್ವಾತಂತ್ರ್ಯವೆಂಬುದು ಕನಸಿನ ಮಾತೇ ಸರಿ. ಈ ದೃಷ್ಟಿಯಿಂದ 'ನಿನ್ನನ್ನು ಯಾರೂ ಉದ್ಧರಿಸಲಾರರು, ನಿನ್ನನ್ನು ನೀನೇ ಉದ್ಧಾರ ಮಾಡಿಕೊಳ್ಳಬೇಕು' ಎಂಬ ಗೀತಾ ವಾಕ್ಯವನ್ನು ಮತ್ತೆ ಮತ್ತೆ ಹೇಳಿದ ದಿವಂಗತ ವಿವೇಕಾನಂದರು ಜನತೆಯ ಸ್ವಾತಂತ್ರ್ಯದ ಬಗ್ಗೆಯೂ ಬಹಳ ಕಳಕಳಿಯಿಂದ ಯೋಚಿಸಿದ್ದ ಒಬ್ಬ ಪ್ರಾಮಾಣಿಕ ವ್ಯಕ್ತಿ. ಕವಿ ಮಖದೂಮ ಅವರ ಉರ್ದು ಕವನದ ಅನುವಾದದ ಕೊನೆಯೆರಡು ಸಾಲುಗಳು ಏಸುಕ್ರಿಸ್ತನ ಸಾವಿನ ಕೊನೆಯ ಅಂಕವನ್ನು ಸಾಂಕೇತಿಕವಾಗಿ ಹೇಳಿಬಿಡುವಲ್ಲಿ ಇವುಗಳ ಸ್ಪಷ್ಟತೆ ಕಾಣುತ್ತದೆ:

ನಮ್ಮೆಯ ಶಿಲುಬೆಯ ನಾವೆಯ ಹೊತ್ತು
ಮುನ್ನಡೆಯುವ ಬನ್ನಿರಿ ಈ ಹೊತ್ತು

(ಚಿಕ್ಕ–ಚಂದ್ರಮರ ಹಸಿರು ನೆಲ)

ಅಕಬರ ಅಲಿಯವರ ನಿಜವಾದ ಪ್ರತಿಭೆಯು ಮೆರೆದಿರುವುದು ಸಮಾಜದ ಗಂಭೀರವಾದ ವಿಡಂಬನೆ ಮಾಡುವಾಗ ಮತ್ತು ವಸ್ತುನಿಷ್ಠವಾಗಿ ಸಮಾಜವನ್ನು ನೋಡುವಾಗ, ವಿಡಂಬನೆಯಲ್ಲಿ ಕೆಲವು ಸಾರಿ ತಮ್ಮ ಸೌಜನ್ಯ ತೋರಿಸಲು ಪ್ರತಿಮೆಗಳ ಮುಖೇನ ಹೇಳುವ ಪ್ರಯತ್ನ ಮಾಡುವರು, ತೀರಾ ಭಾವನೆಯ ಉತ್ಕಟತೆಯು

ಬಂದಾಗ ಭಾಷೆಯೂ ಮೊನಚಾಗುವುದು, ಹೇಳಬೇಕಾದ ವಿಷಯದಲ್ಲಿ ಸ್ಪಷ್ಟತೆ ಕಾಣುವುದು ಹಾಗೂ ಅಂಥದ್ದು ಉತ್ತಮ ಪದ್ಯವಾಗಿಯೂ ಇರುತ್ತದೆ :

ಬಾಡಿಗ್ಯಾದರೂ ಸರಿ
ತಂದುಕ್ಯಾಸಿ
ಪುರಮಾಸಿ
ಒಂದ ಟಾಪ್ ರೆಕಾರ್ಡು ಪ್ಲೇಯರು
ಅದಕ್ ಜತ್ಯಾಗಿ ಒಂದೆರಡಾದರೂ
ಹಚ್ಚಿ ಬಿಟ್ಟರಂದ್ರ ಒಂದ್ರಮ್ಯಾಲೊಂದು
ಹಿಜ್ ಮಾಸ್ಟರ್ಸ ವ್ಹಾಯಿಸ್ ರೆಕಾರ್ಡು–
ಗದಗಮಿಸಿ ಹೋಗ್ತದ ನೋಡ್
ಊರಿಗೆ ಊರು

* * *

ಆ ಹಾಳಾದವ್ರು
ಕೇಳಲಾರ್ದ ಇಪ್ರು ಕುಲದೇವರ ಕೊಂಡಾಟದ ಕಥೀ
ಕಿಂವ್ಯಾಗ ಹೆಟ್ಟಿಕೊಂಡ್ರು ಅಳ್ಳಿ
ಇವ್ರಿಗಿಲ್ಲ ಬಿಡ ಯಾವ ಹೆದರಿಕಿ–
ಇವ್ರು ಇದರಿಗಿ
ಮಂಡಿ ಊರಿ ಬಿದ್ದಿರೂತನಕ ಒಂದ ಕಿಸಬಾಯಿ
ಜೊಲ್ಲು ಸುರಿಸೂ ನಾಯಿ !

(ಹುಚ್ಚಪ್ಪಗ ಹೇಳಿದ್ದು)

ಗುಂಪುಗಾರಿಕೆ ಮಾಡಿಕೊಳ್ಳುವುದು ; ಅದರಿಂದ ಒಬ್ಬರಿಗೊಬ್ಬರು ಬ್ಲೇಕ್ ಮಾಡಿಕೊಳ್ಳುವುದು; ಅಂಥ ಆಂತರಿಕ ಪರಿಧಿಯೊಳಗೆ ಮತ್ತಾರನ್ನೂ ಬಿಟ್ಟುಕೊಳ್ಳದೆ ಹೇಸಿಗೆಯ ಮನೋಭಾವ ಬೆಳೆಸಿಕೊಳ್ಳುವುದು – ಮುಂತಾದುವಕ್ಕೆ ಪ್ರತಿಕ್ರಿಯೆ ರೂಪವಾಗಿ ಬರುವ ಇಂಥ ಕವನಗಳು ಅಕಬರ ಅಲಿಯವರ ಇಡೀ ವ್ಯಕ್ತಿತ್ವವನ್ನೇ ಗರ್ಭೀಕರಿಸಿಕೊಂಡಿರುತ್ತವೆ. ವ್ಯಕ್ತಿಯ ಒಂಟಿತನದ ಸತ್ಯದ ಅರಿವು ಕೆಲವೊಮ್ಮೆ ಸಮಷ್ಟಿಯ ದ್ವಂದ್ವದಲ್ಲಿ ಒಂದಾಗಬಹುದಾದ ಮತ್ತೂ ಮುಂದುವರಿದು ಅದೇ ಅದಾಗಿ ಮೆರೆಯಬಹುದಾದ ಸಾಧ್ಯತೆಗಳನ್ನು ಬಿಚ್ಚಿ ತೋರಿಸಲು ಕವಿ ಸಮರ್ಥರಾಗಿ ಬಿಡುವರು.

ಯಾವುದೇ ಕೆಲಸದ ಮಹತ್ವ ಮತ್ತು ಪವಿತ್ರತೆ ಅದನ್ನು ಪಾಲಿಸುವ ವ್ಯಕ್ತಿಯ ನಿಷ್ಠೆಯ ಮೇಲಿದೆ. ಅರ್ಥಾತ್ ರಾಜಕೀಯ ಪವಿತ್ರತೆಯೂ ಅದನ್ನು ನಡೆಸಿ ಕೊಂಡ್ಹೋಗುವ ರಾಜಕೀಯ ವ್ಯಕ್ತಿಗಳ ಮೇಲಿದೆ. ಆದರೆ ಆ ಜಾಗದಲ್ಲಿ ಪ್ರಾಮಾಣಿಕ

ರೆಂಬುವರು ಬಹಳ ಕಡಿಮೆ ಜನ ಇರುವಾಗ 'ನಾಡ–ನಾಡಿ' ಯಾಗಬೇಕಾದ ವ್ಯಕ್ತಿ 'ನಾಯಿ–ನಾಡಾಡಿ' ಯಾಗಿ ಕಾಣುವ. ಇಂಥ ಸಂದರ್ಭಗಳಲ್ಲಿ ಸಮಾಜದ ನೈತಿಕ ಬೆಳವಣಿಗೆಗೆ ಕಾರಣರಾದ ವ್ಯಕ್ತಿಗಳು ನಾವು–ನೀವು–ಎಲ್ಲರೂ ವಿಡಂಬನೆಗೆ ಒಳಗಾಗುವೆವು. ಒಂದು ಸಮಾಜದ ಪ್ರಾಮಾಣಿಕವಾದ ಬೆಳವಣಿಗೆಗೆ ಪ್ರತಿ ವ್ಯಕ್ತಿಯು ಜವಾಬುದಾರಿ ಏನು ಎಂಬುದನ್ನು ತಿಳಿಸುತ್ತಾ, ಈಗಲಾದರೂ ಆಗಿರುವ ತಪ್ಪೇನು ಎಂಬುದನ್ನು ಮನವರಿಕೆ ಮಾಡುವರು.

ಮನುಷ್ಯ ಒಂದಿಲ್ಲೊಂದು ರೀತಿ ಬದುಕುವುದಕ್ಕೆ ಹೋರಾಟ ನಡೆಸಬೇಕಾಗುತ್ತೆ ; ಪ್ರಕೃತಿಯು ಜೊತೆಗಿರಬಹುದು – ಬಲಾಢ್ಯವಾದ ಭೌತಿಕ ಶಕ್ತಿಯು ಜೊತೆಗಿರಬಹುದು. ಆದರೆ ಹೋರಾಟ ಮಾತ್ರ ನಿರಂತರವಾಗಿ ಸಾಗಿರುವುದು ಇತಿಹಾಸ ಸತ್ಯ. ಅಕಬರ ಅಲಿಯವರ ಹುಟ್ಟಿದ ಪರಿಸರ, ಬೆಳೆದ ವಾತಾವರಣ. ಬದುಕುವುದಕ್ಕಾಗಿ ಅವರು ಒಂದೊಂದು ಹಂತದಲ್ಲೂ ನಡೆಸಿದ ಹೋರಾಟ – ಇವೆಲ್ಲದರ ಜೊತೆಗೆ ತಾವು ಬೆಳೆಸಿಕೊಂಡ ವ್ಯಕ್ತಿಗತವಾದ ನಂಬುಗೆಯು ಜಜ್ಜಿಬಜ್ಜಿಯಾಗಬೇಕಾದ ಉಸಿರು ಕಟ್ಟುವಂಥ ವಾತಾವರಣದಿಂದ ಬಿಡಿಸಿಕೊಳ್ಳಲು ನಡೆಸಿದ ಶ್ರಮ–ಇವುಗಳು ಕವನದ ಮುಖೇನ ಒಂದಿಲ್ಲೊಂದು ರೀತಿಯಲ್ಲಿ ಕಂಡಿರುವುದು ಗಮನಿಸುವ ಸಂಗತಿ.

ಏನು ಹೇಳಲಿ ಗೆಳೆಯ
ನಾವು ಪಟ್ಟಿಹ ಪಾಡು
ಏತಕೂ ಬೇಡ ನೋಡು.
ಕ್ರೋಧಿ ಕೌರವನ ಕಿರುಕುಳಕೆ ತುತ್ತಾಗಿ
ಸಕ್ಕರೆಯು ಮಾತಿರಲಿ
ಅಕ್ಕಿ ಜೋಳ ನುಚ್ಚು ಗಂಜಿಗೂ ಗತಿಯಿಲ್ಲದವರಾಗಿ
ಹನ್ನೆರಡೂ ತಿಂಗಳಲೆ
ಹನ್ನೆರಡು ವರುಷಗಳ ವನವಾಸವನ್ನನುಭೋಗಿಸಿ
ಸೋತು ಸುಣ್ಣಾಗಿ
ತಣ್ಣಗಾಗಿಹೆವು ಒರಗಿದಲ್ಲೆ ಒರಗಿ
....

(ಬಂದೆಯಾ ಬಾ ವಿಶ್ವಾವಸು)

ವಾಸ್ತವ ಸಂಗತಿಯೊಂದನ್ನು ಆತ್ಮೀಯವಾದ ಧಾಟಿಯಿಂದ ಹೇಳುವ, ಪಾಂಡವರ ೧೨ ವರುಷ ವನವಾಸದ ಕತೆಯನ್ನು ಪ್ರತಿಮೆಯಾಗುಳ್ಳ ಈ ಕವನ ೧೯೬೨–೬೭ ರಲ್ಲಿ ಉತ್ತರ ಕರ್ನಾಟಕದೊಳಗೆ ಬಂದ ಭಯಂಕರವಾದ ಬರಗಾಲವನ್ನು, ಜನ ಆಗ ಪಟ್ಟ ಪಾಡನ್ನು ಭಾಷೆಯ ಮುಖೇನ ಹಿಡಿದಿಡುವ ಪ್ರಯತ್ನವಾಗಿದೆ.

ಇಂಥ ಕಡೆ ವೈಯಕ್ತಿಕವಾದ ಬಾಳಿನ ಗೋಳನ್ನು ಹೇಳುತ್ತಲೂ ಕವಿ ಅದನ್ನು ಬಿಡಿಸಿ ಕೊಂಡು ಸಾರ್ವತ್ರಿಕವಾದ ಎಲ್ಲೆಯ ಕಡೆ ಕೈಚಾಚುವುದನ್ನು ಕಾಣಬಹುದು :

ದಾಸ್ಯದ ದೊಡ್ಡ ಗಾಣದಲಿ ಜಜ್ಜಿ ಚಿಪ್ಪಾಡಿಯಾಗಿ
ನಾನೊದ್ದಾಡುತ್ತಿದ್ದಿದ್ದರೆ,
ಇಲ್ಲದ ಕನಸುಗಳ ಕಟ್ಟಿಕೊಂಡು
ನನಸಾಗಿಸುವ ಗೋಜಿಗೇ
ನಾನು ಹೋಗುತ್ತಿರಲಿಲ್ಲ
ನಿರಕ್ಷರಕುಕ್ಷಿಯಾಗಿ ಕೊಳೆಯುತ್ತ ಬಿದ್ದಿದ್ದರೆ–
ನನ್ನ ನೆತ್ತರ ಹೀರಿ
ನನ್ನ ಗೋರಿಯ ತೋಡು ತೋಡುತ್ತಲೇ
ತಮ್ಮ ಮರ್ಯಾದೆ ಮಹಲು ಕಟ್ಟಿಕೊಳ್ಳುವವರ
ಕಿತಾಪತಿಯ ಕಲ್ಪನೆಯೂ
ನನಗೆ ಮೂಡುತ್ತಿರಲಿಲ್ಲ

* * *

ಕುರಿಯಾಗಿ ಹೊಟ್ಟೆ ಹೊರೆಯುವ ಇಚ್ಛೆ ಇಲ್ಲದೆಯೆ
ಸಿಂಹವಾಗಿ ಸೆಟೆದೆದ್ದು ನಿಲ್ಲುವ ಗಂಡುತನವೂ ಇಲ್ಲದೆಯೆ
ಬಡ ಬೃಹನ್ನಳೆಯಾಗಿ ಒಳಗೊಳಗೆ ಕುದಿಯುತ್ತಿದ್ದೇನೆ ಕತಕತನೆ
ಸಿಡಿದೇಳುವ ಶುಭಗಳಿಗಾಗಿ ಕಾತರದಿ ಕಾದಿದ್ದೇನೆ

(ಅಶ್ವತ್ಥಾಮನ ಕಥೆ)

ಜಡ್ಡುಗಟ್ಟಿಹೋದ ವ್ಯವಸ್ಥೆಯನ್ನು ಒಬ್ಬ ಪ್ರಾಮಾಣಿಕನಾದ ವ್ಯಕ್ತಿ ವಿರೋಧಿಸುವುದು ಒಂದು. ಎರಡನೆಯದಾಗಿ ಹಾಗೆ ವಿರೋಧಿಸುತ್ತಿರುವಾಗಲೇ ತನ್ನ ಜೀವನೋಪಾಯಕ್ಕೆ ಆ ವ್ಯವಸ್ಥೆಯನ್ನೇ ವ್ಯಕ್ತಿ ಆಶ್ರಯಿಸಿರಬೇಕಾಗುತ್ತದೆ. ಆದರೆ ಈ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತಾ ಹೋದರೆ ತನ್ನ ಆತ್ಮಸಾಕ್ಷಿಗೆ ಮೋಸ ಮಾಡಿಕೊಂಡಂತಾಗುವುದು ; ವಿರೋಧಿಸಿದರೆ ಬದುಕುವುದು ಕಷ್ಟವಾಗುವುದು. ಹೀಗೆ ವ್ಯವಸ್ಥೆಯ ವಿರುದ್ಧ ಹೋರಾಡಲು ಶಕ್ತಿ ಸಾಲದು ; ವ್ಯವಸ್ಥೆಯ ಎಲ್ಲಾ ರೀತಿಯ ಕರಾಳ ಮುಖಗಳನ್ನು ಸಹಿಸಿಕೊಳ್ಳಲು ಸಾಧ್ಯವೂ ಆಗದೆ ಸಂದಿಗ್ಧ ಪರಿಸ್ಥಿತಿಯು ನಮ್ಮೆಲ್ಲ ದಲಿತ, ಕಾರ್ಮಿಕ, ಬುದ್ಧಿಜೀವಿಗಳ ಸೋಲು–ಗೆಲುವಿನ ಮೂಲವಾಗುತ್ತಿರುವುದೂ ಯೋಚಿಸುವ ಸಂಗತಿ.

ಕಾಮ ಹುಟ್ಟಿನಿಂದಲೆ ಬಂದ ಒಂದು ಅನಿವಾರ್ಯ ಗುಣ. ಹಾಗಂತ ಹೇಳಿ ಅದನ್ನು ಬಿಚ್ಚಿ – ಸಂಭೋಗದ ಪ್ರತಿಯೊಂದು ಹಂತವನ್ನೂ ಎಳೆ ಎಳೆಯಾಗಿ ಬಿಡಿಸಿ ಚಟಕ್ಕಾಗಿ ಕವನ ಹೊಸೆಯುವ ತಿಕ್ಕಲುತನವನ್ನು ಇವರು ಎಲ್ಲಿಯೂ ತೋರಿಸಿಲ್ಲ.

ಸಂಪ್ರದಾಯಸ್ಥರು ಪುರುಷಾರ್ಥಗಳಲ್ಲಿ ಒಂದು ಎಂದು ತಿಳಿದ ಕಾಮ ಅಷ್ಟೇ ಗಂಭೀರವಾದುದು. ಕೆಲವು ಶರಣರು ಮತ್ತು ತಾವು ಆಧ್ಯಾತ್ಮಜೀವಿಗಳು ಎಂದು ಕರೆದುಕೊಂಡವರು ತಿಳಿದುಕೊಂಡಂತೆ ಕಾಮ ವಿಕಾರವಾದ ವಸ್ತು ಎಂದು ಇವರು ಎಲ್ಲಿಯೂ ತಿಳಿಯುವುದಿಲ್ಲ ಹಾಗೂ ಅಂಥ ಭಾವನೆಯನ್ನು ಪ್ರತಿಭಟಿಸುವರು.

ನಿಜಗುಣ ಶಿವಯೋಗಿಗಳು ತಮ್ಮ ಪ್ರಸಿದ್ಧಿಯಾದ 'ಕೋಗಿಲೆ ಚೆಲ್ವ ಕೋಗಿಲೆ' ಎಂಬ ಆಧ್ಯಾತ್ಮಗೀತೆಯಲ್ಲಿ 'ದುರುಳ ಕಂತುವಿನೊಡನಿರೆ ಲೋಕದೊಳು ನಿನ್ನ ಪರಪುಟ್ಟನೆಂಬರು ಕೋಗಿಲೆ'–ಎಂದು ಹೇಳುವಾಗ ಕಾಮವನ್ನು ಅತ್ಯಂತ ಕೀಳು ಮನೋಭಾವದಿಂದ ನೋಡುವರು. ಕೋಗಿಲೆ ಹುಟ್ಟಿಗೆ ಕಾರಣವಾಗುವುದೇ ಕಾಗೆ; ಆಧ್ಯಾತ್ಮದ ಹುಟ್ಟಿಗೆ ಕಾರಣವಾಗುವುದೇ ಕಾಮ ಎಂದು ತಿಳಿದಾಗ ಕೋಗಿಲೆ ಅಥವಾ ಆಧ್ಯಾತ್ಮಕಾದರೂ ನಿಜವಾದ ಅಸ್ತಿತ್ವ ಇಲ್ಲವೆಂಬುದು ತಿಳಿಯುತ್ತದೆ :

ಕಾಗೆ ಕೂಗಿನ ಸುಖದ ಸೋಕಿನಿಂದಲೇ ಕಾಣಾ
ಪ್ರಕೃತಿಯ ಮೃದಂಗ ಚೇತರಿಸಿ ಹರಿಹರಿಸಿತ್ತು ಗಂಧರ್ವಗಾನ!
ಆ ಅದರ ಜಾಡನ್ನೆ ಹಿಡಿದು ಬಂದಿಹ ಬೆಳಕು

* * *

ಇಂಥ ಈ ಕಾಗೆ ಇರುವೀ ಮರದದಾವುದೋ ರೆಂಬೆಯಲ್ಲಿಹುದಂತೆ
ಒಂದು ಸಿರಿ ಕೋಗಿಲ!
ಕನ್ನಡಿ ಕಪಾಟಿನೊಳು ಕಾದಿಟ್ಟ ಹೆಣವನ್ನುಳಿದು
ನಾನಂತು ಅದನಿಂದುವರೆ ಕಂಡುದಿಲ್ಲ.

(ಲೋಕವೇ ಸಾಕ್ಷಿ)

ಇಲ್ಲಿ ಕಾಗೆ > ಕಾಮ-ಕೋಗಿಲೆ > ಆಧ್ಯಾತ್ಮ ಈ ಇವುಗಳಲ್ಲಿ ಮೊದಲೆರಡರ ಹುಟ್ಟಿಗೆ ಕೊನೆಯೆರಡು ಕಾರಣವಾಗಿರುವುವು ಎಂಬುದೂ ಹಾಗೂ ಮೊದಲೆರಡರಂತೆ ಕೊನೆಯೆರಡು ಸ್ಪಷ್ಟವಾಗಿ ಗೋಚರವಲ್ಲವೆಂಬುದೂ ತಿಳಿಯುತ್ತದೆ. 'ಕನ್ನಡಿಯ ಕಪಾಟಿನೊಳು ಕಾದಿಟ್ಟ ಹೆಣವನ್ನುಳಿದು ನಾನಂತು ಅದನಿಂದುವರೆ ಕಂಡುದಿಲ್ಲ' ಎಂಬ ಮಾತುಗಳು ಆಧ್ಯಾತ್ಮದ ಅಸ್ತಿತ್ವವನ್ನು ಪ್ರಶ್ನಿಸುವ ಧೈರ್ಯ ಮಾಡುತ್ತವೆ. ಒಂದಂಶವನ್ನು ನಾವಿಲ್ಲಿ ಗಮನಿಸಬಹುದು : ಬಹಳ ಚಿಕ್ಕಂದಿನಲ್ಲಿಯೇ ಸಾವುನೋವನ್ನು ಕಂಡು ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದು ಸಂಸಾರವನ್ನು ಬಿಡಲಾರದೆ ಬಿಟ್ಟು ಹೊರಟು ಕೊನೆಗೂ ಬುದ್ಧನಾದ ಗೌತಮ ; ೧೨ನೆಯ ಶತಮಾನದ ಸೀಮಿತವಾದ ಪರಿಧಿಯೊಳಗೂ ಇಬ್ಬರ್ಹೆಂಡರನ್ನು ಮಾಡಿಕೊಂಡು, ಪ್ರಾಮಾಣಿಕವಾಗಿ ತಾನು ನಂಬಿದ ದೈವದ ಸೇವೆಯನ್ನೂ ಸಮಾಜ ಸೇವೆಯನೂ ಮಿತಿಮೀರಿ ಮಾಡಲು ಹೆಣಗಾಡಿದ ಬಸವಣ್ಣ : ಹೆಂಡತಿ, ಮನೆ, ಮಕ್ಕಳು, ಮೊಮ್ಮಕ್ಕಳು...ಮುಂತಾದ ಬಹಳ ಸಹಜವಾದ ಕಷ್ಟ ಕೋಟಲೆಗಳಿದ್ದರೂ ಲೋಕವೇ ದಿಗ್ಭ್ರಾಂತಿಯಾಗುವಂಥ ಸಾಹಸ

ಮಾಡಿದ ಎಂ.ಕೆ. ಗಾಂಧಿ–ಇವರಾರಿಗೂ ಕಾಮದ ಬಗ್ಗೆ ಕೀಳಾದ ಮನೋಭಾವ ಇರಲಿಲ್ಲವೆಂಬುದೂ ಮತ್ತು ಯಾರಿಗೆ ಕಾಮದ ಬಗ್ಗೆ ಕ್ಷುಲ್ಲಕವಾದ ಅಭಿಪ್ರಾಯವಿದೆಯೋ ಅವರಿಗಿಂತ ಮಹತ್ವವಾದುದನ್ನು ಸಾಧಿಸಿ ತೋರಿಸಿದ್ದಾರೆಂಬುದು ಇತಿಹಾಸದ ಪುಟಗಳಲ್ಲಿ ತೆರೆದಿರುವ ವಿಷಯ. ಆದರಿಂದಲೇ ಕವಿ :

ಆ ಪರಪುಟ್ಟ ಬಗೆದರೂ ಎರಡು
ನಮ ನಿಮಗದೇತಕ್ಕೆ ಇಲ್ಲದ ಕುರುಡು ?

(ಲೋಕವೇ ಸಾಕ್ಷಿ)

ಎಂದು ಪ್ರಶ್ನಿಸುತ್ತಾರೆ. ಅನುಭವದ ಗಾಢವಾದ ತೀವ್ರತೆ ಇರುವುದರಿಂದ ; ಸಂಪ್ರದಾಯದ ಕೆಟ್ಟ ತಿಳಿವಳಿಕೆಯನ್ನು ಕೆಣಕುತ್ತಾ ಪ್ರಗತಿಪರವಾದ ತಿಳಿವಳಿಕೆಯನ್ನು ಓದುಗರ ಮನಸ್ಸಿಗೆ ಮುಟ್ಟುವಂತೆ ಮಾಡುವುದರಿಂದ–ಕಾಮದ ಬಗ್ಗೆ ಇರುವ ಅತ್ಯಂತ ಯಶಸ್ವೀ ಕವನ ಇದಾಗುವುದು.

ಹಾವನ್ನು ಕಾಮದ ಸಂಕೇತವಾಗಿ, ವಸಂತ ಋತುವನ್ನು ಯೌವನದ ಸಂಕೇತವಾಗಿ ಬಳಸಿಕೊಂಡು ಕಾಮದ ಸಹಜವಾದ ಕ್ರಿಯೆಯನ್ನು ಚಿತ್ರಿಸುವ 'ಹಾವು ಹೆಡೆ ಬಿಡಿಸಿದಾಗ' ; ಹೊನ್ನಿಗವನ್ನು ದೈಹಿಕಶಕ್ತಿ, ಅಧಿಕಾರ, ಹಣ...ಉಳ್ಳವರ ಸಂಕೇತವನ್ನಾಗಿ ಮಾಡುತ್ತಾ ಅಂಥವರು ಸಮಾಜದೊಳಗೆ ಎಂಥೆಂಥ ನೀಚ ಕೆಲಸ ಮಾಡುವರು ಎಂದು ತಿಳಿಸುವ 'ಮೃಗಯಾ ವಿಹಾರ' ಇವು ಕಾಮದ ಬಗ್ಗೆ ಇರುವ ಮತ್ತೆರಡು ಯಶಸ್ವೀ ಕವನಗಳು.

ಅಕಬರ ಅಲಿಯವರು ಕೊಡುವ ವ್ಯಕ್ತಿಚಿತ್ರಗಳಲ್ಲಿ ; ಸಂಕ್ಷಿಪ್ತವಾದ ಕತೆ, ಅವರು ಮಾಡಿದ ಸಾಧನೆ, ಆಚಾರ–ವಿಚಾರ, ನಡೆ–ನುಡಿ, ಆದರ್ಶಗಳು ಮತ್ತು ಅವುಗಳ ಆಗು ಹೋಗು... ಮುಂತಾಗಿರುವ ಕ್ರಮಬದ್ಧತೆಗಳನ್ನು ಗುರುತಿಸಬಹುದು. ಜಗದ ಕಣ್ಣು ಗಾಂಧಿ, ನಾಯಕಮಣಿ ನೆಹರು, ಮುದ್ದಣ, ಹಳಕಟ್ಟಿಯವರನ್ನು ನೆನೆದು, ಕಲ್ಪವೃಕ್ಷ... ಕವನಗಳು ಮೇಲಿನ ಮಾತಿಗೆ ಪುಷ್ಟಿಕೊಡುವುವು. ಆದರೆ 'ಗಡಿನಾಡು ಗಾಂಧಿಯ ಭೇಟಿ' ಮಾತ್ರ ಇದಕ್ಕಿಂತ ಭಿನ್ನವಾದುದನ್ನು ಸಾಧಿಸುತ್ತದೆ. ಖಾನ್ ಅಬ್ದುಲ್ ಗಫಾರ್ ಖಾನ್ ಇಂಡಿಯಾಕ್ಕೆ ಭೇಟಿಕೊಟ್ಟಾಗ ತಾವು ನೆನೆಸಿಕೊಂಡಿದ್ದ ಆದರ್ಶದ ನಾಡು ಉರಿದು ಅನರ್ಥದ ಹಾದಿ ಹಿಡಿದಿರುವ ಕಟುಸತ್ಯವನ್ನು ಅನುಭವಿಸುತ್ತಾರೆ ಎಂದು ಹೇಳುವುದರ ಮುಖೇನ ; ಅವರು ಬಂದಿದ್ದಾಗಿನ ಇಂಡಿಯಾದ ವಾಸ್ತವ ಸಂಗತಿಯನ್ನು ಯಶಸ್ವಿಯಾಗಿ ಚಿತ್ರಿಸುತ್ತಾರೆ.

ಹಾಯ್ ಹಾಯ್
ಕಲ್ಲುಗೊಂಬೆಯದಾಗಿ ನಿಂತಿರುವ ಗಾಂಧಿ
ಕಣ್ಣೊಳಗಿನ ಬೆಳಕೆಲ್ಲ ನದಿ

(ಗಡಿನಾಡ ಗಾಂಧಿಯ ಭೇಟಿ)

ಗಾಂಧಿಯ ಎಲ್ಲ ಆದರ್ಶಗಳು ಮಾಯವಾಗಿ– 'ಹಾದರಗಿತ್ತಿ ಮುಳ್ಳಿನ ಹುಚ್ಚು ದರ್ಬಾರ' ನಡೆಯುತ್ತಿದೆ : 'ಪಾಪಾಸು ಕಳ್ಳಿಯ ಜಂಬೂ(ಕ) ಸವಾರಿ' ಭರ್ಜರಿಯಾಗಿ ಸಾಗುತ್ತಿದೆ ; ಮೇಲೊಂದು ಹೊರಗೊಂದು ನಟಿಸುತ್ತಾ ಸ್ವಾರ್ಥದ ಬೇಳೆ ಬೇಯಿಸಿ ಕೊಳ್ಳುತ್ತಿರುವ ಹಿತಸಾಧಕರು ಎಲ್ಲೆಲ್ಲೂ ತುಂಬಿದ್ದಾರೆ : ಆಗ ಗಡಿನಾಡ ಗಾಂಧಿಗೆ ಗಾಂಧಿ ಪ್ರತಿಮೆ ಕಂಡರೀತಿ ತುಂಬ ಅರ್ಥವತ್ತಾಗಿದೆ. ಗಾಂಧಿ ಬದುಕಿದ್ದಾಗ ತನ್ನ ಆದರ್ಶದ ಸಮೃದ್ಧಿಯ ಜೊತೆಗೆ ದೇಶದ ಸಮೃದ್ಧಿಯನ್ನೂ ಕಂಡ ; ಆದರೆ ಗಾಂಧಿ ಸತ್ತ ೨೫–೩೦ ವರ್ಷಗಳ ಅವಧಿಯಲ್ಲಿ ಆದರ್ಶವೆಲ್ಲಾ ಬತ್ತಿದೆ, ಸಮೃದ್ಧಿಮಾಯ ವಾಗಿದೆ ಎಂಬುದನ್ನು ಮೇಲಿನ ಪ್ರತಿಮೆಯ ಮುಖೇನ ತಿಳಿಸುವ ಕವಿಪ್ರತಿಭೆ ಉತ್ತಮ ರೀತಿಯದು.

೪

ಈ ಐದ್ದು ಸಂಕಲನಕ್ಕೆ ಕೊಟ್ಟ ಹೆಸರು 'ತಮಸಾ ನದಿ ಎಡಬಲದಿ' ಲಯ ಬದ್ಧವಾಗಿದೆ ಮಾತ್ರವಲ್ಲ ಧ್ವನಿಯುಕ್ತವಾಗಿದೆ. ಮಾನವ ವಿಕಾಸದ ಹಾದಿಯಲ್ಲಿ ತನ್ನೆಲ್ಲಾ ಪಶುಸ್ವಭಾವವನ್ನು ಕಡಿಮೆ ಮಾಡಿಕೊಳ್ಳುತ್ತಾ ನಯವಾಗಿ ಬದುಕುವುದನ್ನು ಕಲಿತದ್ದು ; ವಾಲ್ಮೀಕಿ ಬೇಡನಾಗಿ ಹುಟ್ಟಿ ತನ್ನೆಲ್ಲಾ ಮೃಗೀಯ ಭಾವನೆಗಳನ್ನು ಕಳಚಿಕೊಂಡು ಜಗದ್ವಿಖ್ಯಾತ ಕವಿಯಾದುದರೊಂದಿಗೆ ಸಾಂಕೇತಿಕವಾಗಿ ಹೊಂದಿ ಕೊಳ್ಳುತ್ತದೆ. ವಾಲ್ಮೀಕಿಯ ಸಿದ್ಧಿಯ ಮೂಲವೂ ತಮಸ್ಸೇ ಆದಂತೆ : ಜಗತ್ತಿನ ಬಹುತೇಕ ಮಂದಿ ವಿಚಾರವಂತರ, ಕವಿಗಳ, ವಿಜ್ಞಾನಿಗಳ ಹೊಸ ತಿಳುವಳಿಕೆಗೂ ಮೂಲ ಲೋಕದೊಳಗೇ ಆಳವಾಗಿ ಬೇರುಬಿಟ್ಟಿರುವ ತಮಸ್ಸಿನ ಗುಣಗಳೇ ಕಾರಣ ಗಳೆಂಬುದು ತಿಳಿದ ಸಂಗತಿ. ಅಕಬರ ಅಲಿಯವರ ಬಹುತೇಕ ಯಶಸ್ವೀ ಕವನಗಳು ಲೋಕದ> ಮನುಷ್ಯನ ತಮಸ್ಸಿನ ಗುಣಗಳನ್ನು ಪ್ರತಿಭಟಿಸುವ> ವಿಡಂಬಿಸುವ> ಖಂಡಿಸುವಂಥವೇ ಆಗಿರುತ್ತವೆ.

ವ್ಯಕ್ತಿಯೊಬ್ಬ ಜೀವನದೊಳಗೆ ಕೆಟ್ಟದ್ದನ್ನೆಲ್ಲಾ ಬಿಟ್ಟುಬಿಟ್ಟ ಅನ್ನುವಾಗ ನಾವೆಷ್ಟು ಅಪ್ರಾಮಾಣಿಕರಾಗಿರುತ್ತೇವೋ ಹಾಗೇ ಮತ್ತೊಬ್ಬ ಅಷ್ಟೇ ಕೆಟ್ಟವನಾಗಿ ದ್ದಾನೆ ಅನ್ನುವಾಗಲೂ ಅಷ್ಟೇ ಮೂರ್ಖರೂ ಆಗಿಬಿಡುವೆವು. ಹಾಗಾದರೆ ಕೆಟ್ಟ ಮತ್ತು ಒಳ್ಳೆಯ ಗುಣಗಳು ವ್ಯಕ್ತಿಯಲ್ಲಿ ಅಡಗಿಯೇ ಇರುತ್ತವೆಂಬುದು ಹಾಗೂ ಆತ ಕೆಟ್ಟದ್ದನ್ನು ಬಿಡುತ್ತಾ ಒಳ್ಳೆಯದರ ಕಡೆಗೆ ಎಷ್ಟರಮಟ್ಟಿಗೆ ನಡೆಯುತ್ತಾನೆಂಬುದು ಬಹಳ ಮಹತ್ವದ ಸಂಗತಿ. ಇಷ್ಟೆಲ್ಲಾ ಅರ್ಥದ ಮಜಲನ್ನೂ ಬಿಟ್ಟುಕೊಡುವ ಶೀರ್ಷಿಕೆ ಸಂಕಲನಕ್ಕೆ ಉಚಿತ ರೀತಿಯದು.

ಮೃಗಯಾ ವಿಹಾರ, ಬಂತಣ್ಣ ಬಂತು ಹೊಸ ಹಗಲು, ಬಂದೆಯಾ ಬಾ ವಿಶ್ವಾವಸು, ಹುಚ್ಚಪ್ಪಗ ಹೇಳಿದ್ದು, ಗಡಿನಾಡು ಗಾಂಧಿಯ ಭೇಟಿ, ಲೋಕವೇ ಸಾಕ್ಷಿ, ಅಶ್ವಸ್ಥಾಮನ ಕಥೆ....ಇವು ಸಂಕಲನದ ಯಶಸ್ವೀ ಕವನಗಳು.

ಭಾಷೆಯ ಮಾಮೂಲು ಜಾಡಿನಲ್ಲಿ ಕುಂಡಿ, ಮಿಂಡ, ತಾಯಿಗ್ಗಂಡ, ಸಾವಿರದ, ಬೆರಿಕಿ, ಹಿಮ್ಮೇತಿ, ಖಬರಗೇಡಿ, ಇಸವಾಸ, ಕಡಾಸ–ಎಂಬ ಇಂಥ ಪದಗಳು ಇದ್ದಕ್ಕಿದ್ದಂತೆ ಕೇವಲ ಫ್ಯಾಷನ್ನಿಗಾಗಿ ಬರುವುದಿಲ್ಲ; ಕವನದ ಅರ್ಥವ್ಯಾಪ್ತಿಯನ್ನು ನಾಲ್ಕಾರು ದಿಕ್ಕಿಗೂ ಆ ತಕ್ಷಣದಲ್ಲಿ ಹಂಚಿಕೊಡುವ ತಾಕತ್ತನ್ನು ಹೊಂದಿರುತ್ತವೆ. ದಿನಬಳಕೆಯ ವಸ್ತುಗಳು ಸಂಕೇತಗಳಾಗಿ ಬಂದರೂ ಕವನದ ಮೈಯೊಳಗೆ ತಮ್ಮ ಅಸಲೀ ವ್ಯಕ್ತಿತ್ವವನ್ನು ಕಳೆದುಕೊಂಡು ಹೊಸ ಅರ್ಥವನ್ನೂ ಪಡೆದುಕೊಳ್ಳುತ್ತವೆ. ಪ್ರತಿಮೆಗಳು ಉದ್ದವಾಗಿದ್ದು ಅವುಗಳ ಹಂದರದೊಳಗೇ ಕವನದ ಅರ್ಥ ಹಿಗ್ಗುತ್ತಾ ಹೋಗುವುದನ್ನು ಗಮನಿಸಬಹುದು. ಒಟ್ಟಿಗೆ ಭಾಷೆ, ಸಂಕೇತ, ಪ್ರತಿಮೆಗಳನ್ನು ಕವನದ ಅರ್ಥವಂತಿಕೆಗಾಗಿ ದುಡಿಸಿಕೊಳ್ಳುವ ಸಾಮೂಹಿಕ ಪ್ರಯತ್ನ ಇಲ್ಲಿದೆ.

ಮೇಲೆಲ್ಲಾ ವಿಶ್ಲೇಷಿರುವ ರೀತಿಯೊಳಗೆ ಕವನ ಯಾವ ವಸ್ತುವನ್ನು ಕುರಿತಾಗಿದ್ದರೂ ಅಕಬರ ಅಲಿಯವರಿಗೆ ಸಮಾಜದ ಬಗ್ಗೆ ಇರುವ ಕಳಕಳಿಯನ್ನು ಗುರುತಿಸಿಕೊಳ್ಳಬಹುದು. ಇಷ್ಟಾಗಿಯೂ ಹೇಳಬೇಕಾದ ಮಾತೆಂದರೆ: ಇವರ ಬಹುತೇಕ ಕವನಗಳಲ್ಲಿ ಭಾಷೆ, ಸಂಕೇತ, ಪ್ರತಿಮೆಗಳು ವ್ಯಕ್ತಿ ವಿಶಿಷ್ಟತೆಯಿಂದ ಬಾರದಿರುವುದು; ಕವನದಲ್ಲಿ ಎತ್ತುವ ಸಮಸ್ಯೆಗೆ ಉತ್ತರವನ್ನು ಕೊನೆಯ ಸಾಲುಗಳಲ್ಲಿ ಸೂತ್ರೀಕರಿಸಿ ಹೇಳುವ ಪರಿಪಾಠ: ಪದಗಳನ್ನು ಉದ್ದೇಶವಿಲ್ಲದಿದ್ದರೂ ಟ್ವಿಸ್ಟ್ ಮಾಡುವ ಗುಣ–ಮುಂತಾಗಿ ಇವರ ದೌರ್ಬಲ್ಯಗಳನ್ನು ಗುರುತಿಸಿಕೊಳ್ಳಬಹುದು. ಆದರಿಂದ ಕವನಗಳು ಕೆಲವು ಸಾರಿ ಉದ್ದೇಶಿತ ಪರಿಣಾಮವನ್ನು ಬೀರುವುದಿಲ್ಲ. ಇವರ ಒಳ್ಳೆಯ ಕವನಗಳು ಮಾತ್ರ ಇವುಗಳನ್ನೆಲ್ಲಾ ಅರಗಿಸಿಕೊಳ್ಳುತ್ತವೆ. ಇದು ಇವರ ಒಟ್ಟು ಕವನಗಳ ಅಧ್ಯಯನದ ಸಂದರ್ಭದಲ್ಲಿ ಸ್ಪಷ್ಟವಾಗಿ ತಿಳಿಯುತ್ತದೆ. ಈ ದಿಶೆಯೊಳಗೆ ಸಾಹಿತ್ಯದ ಅಭ್ಯಾಸಿಗಳು ಇವರ ಒಟ್ಟೂ ಕವನದ ಅಭ್ಯಾಸ ನಡೆಸಲು ಸಾಧ್ಯವಾಗುವಂತೆ ಆಯ್ದು ಸಂಕಲನ ತರುತ್ತಿರುವುದು ತುಂಬ ಗಮನಾರ್ಹವಾದ ಸಂಗತಿ.

ವಿಭಿನ್ನ ಸಂಪ್ರದಾಯಗಳ ಹಂದರ : 'ಎಳೆ'

ಪಾರ್ಶ್ವನಾಥ ಜಿ. ಕೆಂಪಣ್ಣವರ

ಕನ್ನಡ ಸಾರಸ್ವತ ಲೋಕದಲ್ಲಿ ಉಂಟಾಗಿದ್ದ ಮಹಿಳಾ ಲೇಖಕಿಯರ ಕೊರತೆಯನ್ನು ತುಂಬಿಕೊಟ್ಟವರಲ್ಲಿ ಅನುಪಮಾ ನಿರಂಜನರದು ವಿಶಿಷ್ಟ ಸ್ಥಾನ. ವೃತ್ತಿಯಿಂದ ವೈದ್ಯರಾದರೂ ಅವರ ಪ್ರವೃತ್ತಿ ಮಾತ್ರ ಎಂತಹರನ್ನೂ ಮೆಚ್ಚಿಸುವಂತಹದು. ಅವರ ಭಾವದೆಳೆಗಳಿಂದ ಸುಂದರ ರೂಪ ತಾಳಿನಿಂತ 'ಎಳೆ' ಕಾದಂಬರಿ ವಿಭಿನ್ನ ಸಂಪ್ರದಾಯಗಳ ಹಂದರ. ಹಳೆಯ ಮೌಲ್ಯಗಳು ನಶಿಸುತ್ತವೆಯೆಂದಾಗ ಹೊಸಮೌಲ್ಯಗಳು ಆಗಲೆ ಪ್ರವರ್ಧಮಾನವಾಗಿರುತ್ತವೆ. ಅದರಲ್ಲಿರುವ ಒಳಿತನ್ನೂ ಸ್ವೀಕರಿಸಲೇಬೇಕೆಂಬ ಧ್ಯೇಯ ಕಾದಂಬರಿಯಲ್ಲಿ ಅಡಕಗೊಂಡಿದೆ. ಹೊಸ ಮನ್ವಂತರದತ್ತ ಸಮಾಜ ಹೋಗುತ್ತಿದೆ : ಹೋಗಲೇ ಬೇಕೆಂಬ ಮರ್ಮವನ್ನು ಪ್ರತಿ ಪುಟ ಪುಟಗಳಲ್ಲಿ ಕ್ರೋಢೀಕರಿಸಿದ್ದಾರೆ.

ಕಾದಂಬರಿ ವಿವಿಧ ಪಾತ್ರಗಳ ಮನೋಧರ್ಮಗಳನ್ನು, ಮಾನಸಿಕ ತುಮುಲ ರಾಗ ದ್ವೇಷಗಳನ್ನು ಕ್ಷಕಿರಣದಂತೆ ಪಡಿಮೂಡಿಸಬಲ್ಲ ಮಹಾನ್‌ರೂಪ ಕೇವಲ ಒಂದು ಪಾತ್ರಕ್ಕೆ ಸೀಮಿತವಾಗದೆ ವಿವಿಧ, ವಿಭಿನ್ನ ಪರಿಸರಗಳ ಪಾತ್ರಗಳನ್ನು ಸಜೀವಗೊಳಿಸುವ ಕಾದಂಬರಿಕಾರನಿಗಿರಬೇಕೆಂಬ ತತ್ತ್ವ ಪ್ರಸ್ತುತ ಕಾದಂಬರಿಕಾರ್ತಿಗೆ ತಿಳಿದಿದೆ.

ಬದುಕಿನ ವಿಶಾಲವಾದ ಅನುಭವ, ಅಂತರ್ದೃಷ್ಟಿ, ವಾಚ್ಯವನ್ನು ಸೂಚ್ಯವಾಗಿ ನಿರೂಪಿಸಿ ಪಾತ್ರಗಳನ್ನು ಜೀವಂತಗೊಳಿಸುವ ಕಲೆಯನ್ನು ಲೇಖಕಿಯು ಕರಗತಮಾಡಿ ಕೊಂಡಿರುವುದರಿಂದಲೇ 'ಎಳೆ' ಕಾದಂಬರಿ ಸತ್ತ್ವಪೂರ್ಣ ಕೃತಿಯಾಗಿ ಅರಳಿಬಂದಿದೆ. ಹಲವು ಎಳೆಗಳ ಕ್ರಮಬದ್ಧ ಕೂಡುವಿಕೆಯಿಂದ ಒಂದು ಸುಂದರವಾದ ಬಟ್ಟೆ ನಿರ್ಮಾಣವಾಗುವಂತೆ ಮನುಷ್ಯನೂ ಕೂಡ ಸುಖ - ದುಃಖ, ಪ್ರೀತಿ - ದ್ವೇಷ, ತ್ಯಾಗ-ಸ್ವಾರ್ಥ, ದಯೆ-ಕರುಣೆಗಳೆಂಬ ವಿಭಿನ್ನ ಎಳೆಗಳಿಂದ ನಿರ್ಮಿತವಾದ ಒಂದು ರೂಪವೆಂಬುದು ಕಾದಂಬರಿಯ ಸ್ಥಾಯೀಭಾವ.

ಭಾವನೆಗಳ ಎಳೆಗಳಿಂದ ಎಷ್ಟೊಂದು ಸಮರ್ಥ ಪಾತ್ರವನ್ನೇ ಸೃಷ್ಟಿಸಿದ್ದಾರೆ ? ವಸ್ತು, ತಂತ್ರ, ವೈಶಿಷ್ಟ್ಯತೆ, ಕಥನಶೈಲಿಗಳು ಎಷ್ಟರ ಮಟ್ಟಿಗೆ ಸಾರ್ಥಕಗೊಂಡು ಬಂದಿವೆ? ಲೇಖಕಿಯರು ಎಲ್ಲಿ ಎಡುಹಿದ್ದಾರೆಂಬ ಸೂಕ್ಷ್ಮವಿಚಾರಗಳನ್ನು ಅವಲೋಕಿಸುವುದು ಇಲ್ಲಿಯ ಉದ್ದೇಶ. ಇವನ್ನರಿಯಬೇಕಾದರೆ ಕಾದಂಬರಿಯ ಕಥಾಸಾರ, ಪಾತ್ರ ಪರಿಪೋಷಣೆ, ಕಥನ ತಂತ್ರ, ವೈಶಿಷ್ಟ್ಯತೆ ಮುಂತಾದವುಗಳನ್ನು ತಿಳಿಯುವುದು ಅವಶ್ಯ.

ಬಂಗಾರದ ಜಿಂಕೆಯೊಂದನ್ನು ಗಿರಿಜಾ ಅಟ್ಟಸಿಕೊಂಡು ಹೋಗುತ್ತಿದ್ದಾಳೆ. 'ಅದು ಪ್ರೀತಿ ಅದು ನಿನಗೆ ಸಿಗೋದಿಲ್ಲ ಬಿಟ್ಟುಬಿಡು' ಎನ್ನುತ್ತಾನೆ. ರಂಗದಾಸ. 'ಇಲ್ಲ ನನಗೆ ಅದು ಬೇಕೇ ಬೇಕು' ಎಂದು ಹಟ ಹಿಡಿಯುತ್ತಾಳೆ ಗಿರಿಜೆ. ರಂಗದಾಸ ಅದನ್ನು ಹಿಡಿದು ತರಲು ಹೋಗುತ್ತಾನೆ. 'ಅಯ್ಯೋ ಹಾ ಲಕ್ಷ್ಮಣಾ ಸತ್ತೆ' ಎಂಬ ಕೂಗು ಕೇಳಿ ಬರುತ್ತದೆ. ರಂಗದಾಸ ಸತ್ತನೆಂದು ಗಿರಿಜೆ ಅಳಲಾರಂಭಿಸುತ್ತಾಳೆ. ಆಗ ಮುದ್ದು ಸ್ವಾಮಿ ಬಂದು ತನ್ನ ರಥದಲ್ಲಿ ಎಳೆದೊಯ್ಯುತ್ತಾನೆ. ಆಗ ಗಿರಿಜಾ 'ರಾವಣಾ ಮುಟ್ಟಬೇಡ, ನಾನು ರಾಮನ ಪತ್ನಿ ಸೀತೆ' ಎಂದು ಕೂಗಿ ಕಣ್ತೆರೆದಾಗ ಎದುರಿಗಿದ್ದ ಮುದ್ದುಸ್ವಾಮಿಯನ್ನು ಕಂಡು ಚೀರುತ್ತಾಳೆ. ಇದು ಕಾದಂಬರಿಯ ಕಾಲುಭಾಗದ ಘಟನೆ. ಮುಂದಿನ ಕಥೆಯ ಬೇರುಗಳೆಲ್ಲ ಇದರಲ್ಲಿ ಹುದುಗಿವೆ.

ಈಗ ಸಂದೇಹ ಬಂದಿರಬಹುದು ಗಿರಿಜೆ ಯಾರು ? ಬಂಗಾರದ ಜಿಂಕೆ ಬೆಂಬತ್ತಿ ಸತ್ತ ರಂಗದಾಸನಿಗೂ ಈಕೆಗೂ ಏನು ಸಂಬಂಧ? ಆತ ಸತ್ತನೆಂದಾಗ ಅತ್ತದ್ದೇಕೆ? ಮುದ್ದುಸ್ವಾಮಿ ರಥದಲ್ಲಿ ಕುಳ್ಳಿರಿಸಿಕೊಂಡೊಯ್ಯುವಾಗ 'ರಾವಣಾ ಮುಟ್ಟಬೇಡ, ನಾನು ರಾಮನ ಹೆಂಡತಿ ಸೀತೆ' ಎನ್ನಲು ಏನು ಕಾರಣವಿರಬಹುದೆಂಬ ಹಲವಾರು ಪ್ರಶ್ನೆಗಳು ಹುಟ್ಟುತ್ತವೆ, ಅದು ಸಹಜ. ಪಾಪ, ಗಿರಿಜೆ ಮನಸಾರೆ ಮೆಚ್ಚಿದವನನ್ನು ಮದುವೆಯಾಗಬಯಸಿದಾಗ, ಪ್ರೇಮದ ಪ್ರಥಮ ಹಂತದಲ್ಲಿರುವಾಗಲೆ ವಿಧಿಯ ಕೊಡಲಿಯೇಟು ಆಶೆಯ ಮೇಲೆ ಬೀಳುತ್ತದೆ. ಶಿವಪುರದ ಪ್ರತಿಷ್ಠಿತವ್ಯಕ್ತಿ ಉಗ್ರಪ್ಪ ಹೆಸರಿಗೆ ತಕ್ಕವ ತನ್ನ ಅಂತಸ್ತಿಗೆ ತಕ್ಕವನೆಂಬ ಒಂದೇ ನೆವದಿಂದ ಜಾತಕ ಕೂಡಿಬರ ದಿದ್ದರೂ ಜೋಯಿಸರಿಗೆ ಹಣ ತೆತ್ತು ಕೂಡುವಂತೆ ಮಾಡಿ ಮುಗ್ಧೆ ಗಿರಿಜೆಯನ್ನು ಮುದ್ದುಸ್ವಾಮಿಗೆ ಧಾರೆಯೆರೆಯುತ್ತಾನೆ. 'ಮಂತ್ರಿಗಳ ಅತ್ತೆ' ಎನ್ನಿಸಿಕೊಳ್ಳುವ

ಹುಚ್ಚುಹಂಬಲಕ್ಕಾಗಿ ಅವನ ಹೆಂಡತಿ ಸೂರಮ್ಮ ಒಪ್ಪುತ್ತಾಳೆ, ಗಿರಿಜೆ ಮಾತ್ರ ಕಟುಕನ ಕೈಗೆ ಬಲಿಪಶುವಾಗುತ್ತಾಳೆ.

ಬಾಲ್ಯದಿಂದಲೇ ಅಣ್ಣ ಗಂಗಾಧರನ ಸ್ನೇಹಿತ ರಂಗದಾಸನನ್ನೂ ಮನಸಾರೆ ಮೆಚ್ಚಿಕೊಂಡು ಅವನೇ ಪತಿಯೆಂದು ಪೂಜಿಸುವ ಆಕೆ ಒತ್ತಾಯಕ್ಕೆ ಮಣಿದು ಬೇರೊಬ್ಬನ ಕೈಹಿಡಿಯುವಾಗ ತಂಗಿಯ ಮನೋಗತ ಗೊತ್ತಿದ್ದರೂ ಹೇಳದ ಗಂಗಾಧರ ಬಹಳ ತಪ್ಪುಮಾಡುತ್ತಾನೆ. ರಾಮ (ರಂಗದಾಸ)ನಿಗೆ ಸೇರಬೇಕಾದವಳು ರಾವಣ (ಮುದ್ದುಸ್ವಾಮಿ)ನಿಗೆ ಸೇರುತ್ತಾಳೆ. ಆದರೆ ಮನದಲ್ಲಿ ರಂಗನೇ ತನ್ನ ಗಂಡ ನೆಂದು ಪೂಜಿಸುವ ಅವಳು ಅತ್ತೆಯ ಮನೆಯಲ್ಲಿ ಅದೇ ಕನಸು ಕಾಣುತ್ತಾಳೆ. 'ನಾನು ರಾಮನ ಪತ್ನಿ ಸೀತೆ' ಎನ್ನುತ್ತಾಳೆ. ನಿಜವಾಗಿ ಆಕೆ ರಂಗದಾಸನಿಗೆ ಸೇರಬೆ ಕಾದವ ಳೆಂಬುದು ಈಗ ಸ್ಪಷ್ಟವಾಗುತ್ತದೆ. ಗಂಡನ ಸಾವು ಖಚಿತ. ಅಂತ್ಯಕ್ಕೆ ರಂಗನ ಕೈ ಹಿಡಿಯುವುದು ನಿಶ್ಚಿತ; ಎಂಬ ಮೂನ್ಸೂಚನೆ ಓದುಗರಿಗೆ ತಿಳಿದು ಬರುತ್ತದೆ.

ಶಿವಪುರದ ಚೌಡಪ್ಪನ ಮಗ ರಂಗದಾಸ. ಶಿಸ್ತು, ಸಂಯಮ, ವಿನಯ, ಸ್ನೇಹ ಪರತೆಗಳ ಸಾಕಾರಮೂರ್ತಿ. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಉಗ್ರಪ್ಪನೂ ಇವರದೇ ಜಾತಿಗೆ ಸೇರಿದ್ದರೂ ಶ್ರೀಮಂತ. ಗೆಳೆಯ ಗಂಗಾಧರನ ದೆಸೆಯಿಂದಾಗಿ ಗಿರಿಜೆಯ ಪರಿಚಯವಾಗುತ್ತದೆ. ಎಳೆಯ ಪ್ರೇಮಿಗಳು ತಮ್ಮನ್ನು ಪುಂಡರೀಕ ಮಹಾಶ್ವೇತೆಯರ ಪಾತ್ರದಲ್ಲಿ ಕಾಣಬಯಸುತ್ತಾರೆ. ರಂಗದಾಸ ಹೇಳುವ ಈ ಕಥೆ ಗಿರಿಜೆಗೆ ತುಂಬ ರೋಚಕವೆನಿಸುತ್ತದೆ. ಆದರೆ ವಿಧಿಗೆ ಬಲಿಯಾಗುತ್ತಾಳೆ. ವಿಫಲ ಗೊಂಡ ರಂಗದಾಸ ಖಿನ್ನಮನಸ್ಕನಾಗಿ ಎಂ. ಎ. ಕಲಿಯಲು ನಗರಕ್ಕೆ ಹೋಗುವನು. ಇತ್ತ ಗಿರಿಜೆ ಕಾಮುಕ ಗಂಡನ ಕೈಯಲ್ಲಿ ಸಿಕ್ಕು ಸುಣ್ಣವಾಗುತ್ತಾಳೆ. ಮುದ್ದುಸ್ವಾಮಿ ನೂರಾರು ಹೆಣ್ಣುಗಳ ರುಚಿಕಂಡವ. ಕೇವಲ ದೈಹಿಕ ಸುಖವನ್ನು ಬಯಸಿದ ಆತನಿಂದ ಮಾನಸಿಕ ನೆಮ್ಮದಿ ಲಭಿಸಿದ್ದರೆ ಗಿರಿಜೆ ಎಲ್ಲವನ್ನೂ ಮರೆಯಬಹುದಿತ್ತು. ಆದರೆ ಪರಿಸ್ಥಿತಿ ವಿರುದ್ಧವಾದಾಗ ಬಳಲುತ್ತಾಳೆ.

ಇದೆಲ್ಲ ನಡೆದಾಗ ರಂಗದಾಸ ಕಾರ್ಮಿಕರ ಶೋಷಣೆಗಾಗಿ ಹೋರಾಡಿ ಉಗ್ರಪ್ಪನ ವಿರೋಧವನ್ನು ಕಟ್ಟಿಕೊಳ್ಳುತ್ತಾನಷ್ಟೇ ಅಲ್ಲ, ಅವನ ಚೇಲಾಗಳಿಂದ ಹೊಡೆತ ತಿನ್ನುತ್ತಾನೆ. ಆದರೂ ಕೈಕಳೆದುಕೊಂಡ 'ಅರಸಪ್ಪ'ನಿಗೆ ಐದು ಸಾವಿರ ಪರಿಹಾರಧನ ಪಡೆಯುವಲ್ಲಿ ಯಶಸ್ವಿಯಾಗುತ್ತಾನೆ. ಊರಲ್ಲಿ ಕಾರ್ಮಿಕ ಸಂಘ ಸ್ಥಾಪನೆಗೆ ನಾಂದಿಹಾಡುತ್ತಾನೆ. ಇಲ್ಲಿಯವರೆಗೆ ನಿಧಾನವಾಗಿ ಸಾಗಿದ್ದ ಕಥೆ ಒಮ್ಮೆಲೇ ತಿರುವು ಪಡೆಯುತ್ತದೆ. ಇದು ಕಥೆಯ ಪೂರ್ವಾರ್ಧ.

ಕಥೆಯ ಉತ್ತರಾರ್ಧ ಪ್ರಾರಂಭವಾಗುವುದೇ ಮುದ್ದುಸ್ವಾಮಿಯ ಸಾವಿನಿಂದ, ನೂರಾರು ಹೆಣ್ಣುಗಳ ದೇಹಸುಖವುಂಡ ಜೀವ ರೋಗಕ್ಕೆ ತುತ್ತಾಗಿ ಸಾಯುತ್ತದೆ. ಇನ್ನು ಮೇಲೆ ಕಥೆಯ ಓಟ ತುಂಬ ವೇಗಪಡೆಯುತ್ತದೆ. ವಿಧವೆ ಗಿರಿಜೆಯನ್ನು ತನ್ನ ಕಾಮತೃಷೆಗೆ ಬಳಸಲೆಳಸಿದ ಮುದ್ದುಸ್ವಾಮಿಯ ತಮ್ಮ ಮೂಡಲಯ್ಯನ

ಪಾಶಕ್ಕೆ ಒಳಗಾಗದೆ ತವರು ಸೇರುತ್ತಾಳೆ. ಯಾರಿಗೂ ಬೇಸರವಾಗಬಾರದೆಂದು ಕೆಲವೇ ದಿನಗಳಲ್ಲಿ ಕ್ಲಾರ್ಕ್ ಹುದ್ದೆ ಗಿಟ್ಟಿಸಿಕೊಂಡು ತನ್ನ ಉದರದಲ್ಲಿ ಜನಿಸಿದ ಮಗುವಿಗೆ ಆಸರೆ ನೀಡಬಯಸುತ್ತಾಳೆ. ಸಿನೇಮಾ ರೀಲುಗಳಂತೆ ಕಥೆ ವೇಗವಾಗಿ ಸಾಗುತ್ತದೆ. ಅಷ್ಟರಲ್ಲಿಯೇ ಆಕೆಯ ಅಣ್ಣ ಸಂಜುಂಡನ ಮದುವೆಯಾಗಿರುತ್ತದೆ. ಗಂಗಾಧರನೂ ಬ್ರಾಹ್ಮಣ ಯುವತಿ ಸರೋಜಳ ಕೂಡ ಲಗ್ನವಾಗುತ್ತಾನೆ.

ನೌಕರಿ ಮಾಡುವುದಕ್ಕೆ ಪ್ರತಿಭಟಿಸಿದಾಗ "ನಿಮ್ಮಾತು ಕೇಳಿ ಮದ್ವೆ ಮಾಡ್ಕೊಂಡು ನನ್ನ ಬಾಳು ಹೀಗಾಯ್ತು. ಇನ್ನು ನಾನು ಯಾರ ಮಾತನ್ನೂ ಕೇಳೋದಿಲ್ಲ, ನಂಗೆ ಸರಿ ಕಂಡದ್ದನ್ನ ಮಾಡ್ತೀನಿ (ಪು. ೧೬೫) ಎಂದು ಮುನ್ನಡೆಯು ತ್ತಾಳೆ. ಎಂ. ಎ ಮುಗಿಸಿ ಬಂದ ರಂಗದಾಸ ಸ್ಥಳೀಯ ಕಾಲೇಜಿನಲ್ಲಿಯೇ ಉಪನ್ಯಾಸಕ ನಾಗುತ್ತಾನೆ. ನಗರದಲ್ಲಿದ್ದಾಗ 'ಸಾಂಬಶಿವನ' ರಂತಹ ವಿದ್ವಾಂಸರ ಪ್ರಭಾವಕ್ಕೊಳ ಗಾಗಿ ತುಂಬ ಬದಲಾಗಿರುತ್ತಾನೆ. ಹಳೆಯ ಗೊಡ್ಡು ಸಂಪ್ರದಾಯ, ಜಾತಿ, ಮೇಲು ಕೀಳೆಂಬ ಮತವನ್ನು ನಿರ್ನಾಮ ಮಾಡಿ 'ಎಲ್ಲರಿಗೂ ಸಮಬಾಳು, ಎಲ್ಲರಿಗೂ ಸಮಪಾಲು' ಎಂಬ ತತ್ತ್ವದ ಸಮಾಜ ನಿರ್ಮಿಸಬಯಸುತ್ತಾನೆ.

ಗಿರಿಜೆಯ ಕೂಡ ಪರಿಚಯ, ಭೆಟ್ಟಿ ಜಾಸ್ತಿಯಾಗುವುದನ್ನರಿತ ಮೂಡಲಯ್ಯ ತನ್ನ ಚೇಲಾಗಳಿಂದ ರಕ್ತ ಬರುವಂತೆ ಗಾಯಗೊಳಿಸುವನು. ಇದರಿಂದ ತಾನು ನಂಬಿದ ಮೌಲ್ಯಗಳನ್ನು ಬಿಡಬಾರದೆಂಬ ಹಟ ರಂಗದಾಸನಲ್ಲಿ ಬಲಿಯುತ್ತದೆ. ಹೊಸದನ್ನೇನಾದರೂ ಸಾಧಿಸುವುದೆಂದರೆ ವಿಧವೆಯಾದ, ಒಂದು ಮಗುವನ್ನು ಹೊಂದಿದ ಗಿರಿಜೆಯನ್ನು ಮದುವೆಯಾಗುವುದೆಂದು ನಿಶ್ಚಯಿಸಿ 'ನಿನ್ನ ಮಗುವಿಗೆ ನಾನು ತಂದೆಯಾಗುತ್ತೇನೆ.' ನಮ್ಮದು ದೇಹ ಮನಸ್ಸುಗಳೆರಡರ ಪ್ರೀತಿ. ಅದು ಶಾಶ್ವತವಾಗಿ ನಿಲ್ಲುವಂಥಾದ್ದು. ನಿನ್ನಲ್ಲಿ ಧೈರ್ಯವಿದ್ದರೆ ಮದುವೆ ಆಗುವೆನೆಂದು ಕೇಳಿಕೊಂಡಾಗ ಗಿರಿಜೆ ತನ್ನ ರಾಮನನ್ನು ಮರಳಿ ಪಡೆದ ಸಂಭ್ರಮದಿಂದ ಒಪ್ಪುತ್ತಾಳೆ. ಪುಂಡರೀಕನಿಗಾಗಿ ಮಾಡಿದ ತಪಸ್ಸು ಇಂದು ಸಿದ್ಧಿಸುತ್ತದೆ. ಚಂದ್ರಾಪೀಡ–ಕಾದಂಬರಿಯರು (ಗಂಗಾಧರ-ಸರೋಜ) ಹಿಂದೆಯೇ ವಿವಾಹವಾದರೆ ಪುಂಡರೀಕ-ಮಹಾಶ್ವೇತೆಯರು ಕೊನೆಗೆ ಪುನರ್ಮಿಲನ ಹೊಂದುತ್ತಾರೆ. ಕಥೆ ಹಲವಾರು ತಿರುವನ್ನು ಪಡೆದು ಸಂತೋಷದಲ್ಲಿ ಕೊನೆಗೊಳ್ಳುತ್ತದೆ.

ಕಾದಂಬರಿ ಬರಿಯ ಪಾತ್ರಗಳ ಸಂತೆಯಲ್ಲ ; ಕರತಲ ರಂಗಭೂಮಿ. ಆಯಾ ಪಾತ್ರಗಳು ತಮಗೆ ತಕ್ಕರೀತಿಯಲ್ಲಿ ವರ್ತಿಸುವಂತೆ, ಬೆಳೆಯುವಂತೆ, ಸಂಭಾಷಣೆ ಮಾಡುವಂತೆ ಎಚ್ಚರವಹಿಸುವುದು ಕೃತಿಕಾರನ ಕರ್ತವ್ಯ. ಮಕ್ಕಳನ್ನು ಹಡೆಯು ವುದಕ್ಕಿಂತ ಪೋಷಿಸುವುದು, ಹಣ ಗಳಿಸುವುದಕ್ಕಿಂತ ಹೇಗೆ ಗಳಿಸದನೆಂಬುದು ತೀರ ಮುಖ್ಯವಾದಂತೆ ಕೃತಿಕಾರ ಪ್ರತಿ ಪಾತ್ರಗಳನ್ನು ತೂಕಬದ್ಧವಾಗಿ ಸಿದ್ಧಮಾಡ

ಬೇಕಾಗುತ್ತದೆ. 'ಕಡೆಗಾಗಿ ಪಾತ್ರಗಳನ್ನು ಮನಬಂದಂತೆ ಉಪಯೋಗಿಸದೆ ಪಾತ್ರಗಳಿಗೆ ತಕ್ಕ ಹಾಗೆ ಕಥೆಯು ಎರಕ ಹೊಯ್ಯಬೇಕಾದುದು ಮುಖ್ಯ.

ಪ್ರಸ್ತುತ 'ಎಳೆ' ಕಾದಂಬರಿಯಲ್ಲಿ ಒಂದೇ ಮತದ (ನೇಕಾರ) ಎರಡು ಮನೆತನಗಳ ಕಥೆ ಅಡಕವಾಗಿ ಬಂದಿದೆ. ಶ್ರೀಮಂತಿಕೆಯ ಸುಪ್ಪತ್ತಿಗೆಯಲ್ಲಿ ಮೆರೆವ ಪಾತ್ರಗಳಲ್ಲಿ ಬಡತನದಿಂದ ಬಳಲುವ ಪಾತ್ರಗಳಲ್ಲೂ ಆನಂದ ಭಿನ್ನತೆ ಇದೆ. ಮಾನಸಿಕ, ಸಾಮಾಜಿಕ ಏರುಪೇರುಗಳನ್ನು ಲೇಖಕಿ ಅವರ ಸ್ವಭಾವ, ಮಾತು ಕೃತಿಗಳಲ್ಲಿ ತುಂಬಿದ್ದಾರೆ. ಎಷ್ಟೋ ಸಲ ತಾವು ಉದಾತ್ತೀಕರಿಸಹೊರಟ ನಾಯಕ (ರಂಗದಾಸ) ನಾಯಕಿ (ಗಿರಿಜೆ) ಯರ ಪಾತ್ರ ಪೋಷಣೆಗಾಗಿ ಕೆಲಪಾತ್ರಗಳು ಅಸಹಜವಾಗಿ ಬಂದಿವೆ ಎನಿಸದಿರದು. ಗಿರಿಜೆ ಸಂಯಮ ಶೀಲಳು, ವಿನಯಪರಳು, ಅನುಕಂಪವುಳ್ಳವಳು ಎಂಬುದನ್ನು ಹೆಚ್ಚಿಗೆ ತೋರಬೇಕಾದ್ದರಿಂದ ಪಾಪಣ್ಣಯಂತಹ ಪಾತ್ರ ಸೃಷ್ಟಿಯಾದಂತೆನಿಸುತ್ತದೆ. ಆಕೆ ರಂಗದಾಸನನ್ನು ಬೇಗ ಕೂಡಬೇಕಾದುದರಿಂದ ಮೂಡಲಯ್ಯನಂತಹ ಕಾಮುಕನ ವ್ಯರ್ಥ ಪ್ರಯತ್ನ, ನಾಗಲಕ್ಷ್ಮಿಯಂತಹ ಮುಗ್ಧೆ ಪ್ರಥಮ ನೋಟದಲ್ಲಿಯೇ ರಂಗದಾಸನಿಗೊಲಿದು ಹುಚ್ಚಿಯಂತೆ ವರ್ತಿಸುವುದು. ರಂಗದಾಸ ನಾಯಕನಾದ್ದರಿಂದ ಅವನಿಗೆ ಸೋಲು ಇಲ್ಲ ಎಂಬುದನ್ನು ತೋರಿಸಲು, ಉಗ್ರಪ್ಪ ಹಾಗೂ ಮೂಡಲಯ್ಯನ ಚೇಲಾಗಳಿಂದ ಹೊಡೆಯಿಸುವಂತಹುದೆಲ್ಲ ಬೇಕೆಂದೇ ಸೃಷ್ಟಿ ಮಾಡಿಕೊಂಡವು ಎಂಬ ಭಾವನೆ ಬರುತ್ತದೆ.

ಎಳೆ ಕಾದಂಬರಿಯ ನಾಯಕನಾಗಿ ರಂಗದಾಸ ಕಂಡು ಬರುತ್ತಾನೆ. ವಿನಯ, ವಿದ್ಯೆ, ವಿಶಾಲ ಮನೋಭಾವಗಳು ಮುಪ್ಪುರಿಗೊಂಡ ವ್ಯಕ್ತಿತ್ವ ಇವನದು. ಶಿಸ್ತು ಅವನ ಬಾಳಮಂತ್ರ. ಪ್ರತಿಯೊಂದರಲ್ಲಿ ವಿನೂತನತೆಯನ್ನು ಕಂಡುಕೊಳ್ಳುವ ಸೃಜನಶೀಲ ವ್ಯಕ್ತಿ ರಂಗದಾಸ. ಈತನ ಪಾತ್ರ ಓದುಗರ ಮನದಾಳದಲ್ಲಿ ಬಹುದಿನ ನಿಲ್ಲುವಂತಹದು. ಪ್ರೀತಿಸಿದ ಹುಡುಗಿ ಗಿರಿಜೆ ಕಟುಕನ ಕೈಹಿಡಿಯುವಾಗ ಪ್ರತಿಭಟಿಸುತ್ತಾನೆ. 'ನೀನು ಸುಖವಾಗಿರ್ಬೇಕು ಅಂತ ನನ್ನಾಸೆ, ಅವಸರ ಮಾಡ್ಬೇಡ ಯೋಚಿಸು' ಎಂದು ಸೂಚನೆ ನೀಡುವಾಗ ನಿಸ್ವಾರ್ಥ ವ್ಯಕ್ತಿಯಾಗಿ ತೋರುತ್ತಾನೆ.

ಕಾದಂಬರಿಯ ಆದಿಯಿಂದ ಅಂತ್ಯದವರೆಗೆ ಸ್ಥಿಮಿತತೆಯನ್ನು ಕಾಣದ, ಮನದಲ್ಲಿ ಏರುಪೇರುಗಳನ್ನು ತೋರದ ಸಂಯಮಪೂರ್ಣ ಪಾತ್ರವೆಂದರೆ ರಂಗದಾಸನದೊಂದೆ ಎನ್ನಬೇಕು. 'ಜನಿವಾರ ಹಾಕ್ಕೊಂಡೋನು ಉತ್ತಮ ಕುಲದವನೆನ್ನುತ್ತಾರೆ, ಇಲ್ಲದೋನು ಶೂದ್ರ ಎನುತ್ತಾರೆ. ಈ ವ್ಯತ್ಯಾಸ ಯಾಕೆ? ಒಂದು ದಾರ ಏರಿಸಿದ ಮಾತ್ರಕ್ಕೆ ಮನುಷ್ಯ ಪವಿತ್ರನಾಗಿ ಹೋಗ್ತಾನ್ಯೆ? ಅವನಲ್ಲಿರೋ ರಾಕ್ಷಣ ಗುಣಗಳೆಲ್ಲಾ ಅಳಿಸಿ ಹೋಗುತ್ತವೆಯೇ?' (ಪು.೩೨) ಎಂದು ಪ್ರಶ್ನಿಸುವಾಗ ಮುಂದೆ 'ಸಾಂಬಶಿವನ್'ರ ಕೂಡ 'ಆದಿವಾಸಿ ಸಂಸ್ಕೃತಿಯ ಲಕ್ಷಣ'ಗಳನ್ನು ಚರ್ಚಿಸುತ್ತ ಸಂಪ್ರದಾಯ, ಜಾತಿ, ಮೂಢನಂಬಿಕೆಗಳನ್ನೆಲ್ಲ ನಾಶಮಾಡಿ ಜಾತಿ, ಮತ ರಹಿತ ಸಮಾಜವನ್ನು ನಿರ್ಮಿಸ

ಬೇಕು ಎನ್ನುವ ಹಂಬಲ ವ್ಯಕ್ತಪಡಿಸುತ್ತಾನೆ. 'ಬರೀ ಮಾತಾಡಿ ಪ್ರಯೋಜನವಿಲ್ಲ ನೀನು ನಂಬಿದ ಮೌಲ್ಯಗಳಿಗೆ ಎದ್ದು ನಿಲ್ಲುವ ಧೈರ್ಯಬೇಕು' ಎಂಬ ಸಾಂಬಶಿವನ್‌ರು ನೀಡಿದ ಉಪದೇಶ ಅವನ ಬಾಳ ಮಂತ್ರವಾಗುತ್ತದೆ.

ಕಾರ್ಮಿಕ ಸಂಘಟನೆ ಕಟ್ಟಿ ಅವರಲ್ಲಿ ನವ ಮನ್ವಂತರವನ್ನು ತರಲು ಯತ್ನಿಸುತ್ತಾನೆ. ತನಗೆ ಯಾವ ಅಧಿಕಾರವೂ ಬೇಡವೆಂದು ಸಂಘದ ಅಧ್ಯಕ್ಷಪಟ್ಟವನ್ನು ತಿಮ್ಮಪ್ಪನಿಗೆ ನೀಡುವಲ್ಲಿ ಅವನ ಹೃದಯ ವೈಶಾಲ್ಯತೆ ಕಂಡು ಬರುತ್ತದೆ. 'ಹೀಗೆ ಹೆದರಿಕೊಂಡೇ ಬದುಕಿದ್ರೆ ಯಾವಾಗಪ್ಪೊ ನೀವು ಮನುಷ್ಯರಾಗೋದು ?' ಎಂದು ಜನರಲ್ಲಿ ಉತ್ತೇಜನ ತುಂಬುವಾಗ ಮುಂದೆ ಒಂದು ಮಗುವಿನ ತಾಯಿ, ವಿಧವೆ ಗಿರಿಜೆಯನ್ನು ಕೈಹಿಡಿಯಬಯಸಿ 'ನಿನ್ನ ಮಗಳಿಗೆ ತಂದೆಯಾಗುತ್ತೇನೆನ್ನುವಾಗಲಂತೂ ರಂಗದಾಸ ಮಾನವೀಯ ಮೌಲ್ಯಗಳ ಸಾಕಾರ ಮೂರ್ತಿಯಾಗಿ ತೋರುವನು. ಕೊನೆಗೂ ತಾನು ನಂಬಿದ ಮೌಲ್ಯಗಳಿಗೆ ಎದ್ದು ನಿಂತು ವಿಧವೆಯನ್ನು ಕೈಹಿಡಿಯುವ ಅವನ ಪಾತ್ರ ಇದು ಸಾಧ್ಯವೇ ? ಎಂಬ ಭ್ರಮೆಯನ್ನುಂಟುಮಾಡಿದರೂ ಹೊಸ ಯುವಕರಿಗೆ ದೀಪದಾರಿಯಾಗಿದೆ. ವಿದ್ಯಾವಂತ ಯುವಕರು ವಿಧವಾ ವಿವಾಹಕ್ಕೆ ಪ್ರೋತ್ಸಾಹ ನೀಡಬೇಕೆಂಬುದರ ದ್ಯೋತಕವಾಗಿದ್ದಾನೆ ಇಲ್ಲಿಯ ನಾಯಕ.

ರಾಮಯಣದ ಸೀತೆಯಾಗಿ, 'ಕಾದಂಬರಿ'ಯ ಮಹಾಶ್ವೇತೆಯಾಗಿ ತನ್ನನ್ನೂ ಕಂಡುಕೊಂಡ ನಾಯಕಿ ಗಿರಿಜೆ ಕಾದಂಬರಿಯ ಎರಡು ಘಟ್ಟಗಳಲ್ಲಿ ವಿಭಿನ್ನವಾಗಿ ಕಾಣುತ್ತಾಳೆ. ಮುದ್ದುಸ್ವಾಮಿಯ ಅವಸಾನ ಪೂರ್ವದ ಗಿರಿಜೆಯೇ ಬೇರೆ, ನಂತರದ ಗಿರಿಜೆಯೇ ಬೇರೆ ಎನ್ನುವಷ್ಟರ ಮಟ್ಟಿಗೆ ಬದಲಾಗುತ್ತಾಳೆ.

ಒಲಿದ ನಲ್ಲ (ರಂಗದಾಸ) ನಿಂದ ದೂರವಾಗಿ ಕ್ರೂರಿಯಾದ ರಾವಣ (ಮುದ್ದುಸ್ವಾಮಿ) ನ ಕೈಹಿಡಿಯಬೇಕಾದಾಗ ಆಶೆ ಅಂದದ್ದು 'ನಾನು ಮುದ್ದುಸ್ವಾಮಿಯನ್ನು ಮದುವೆಯಾಗೋಲ್ಲ' ಎಂಬ ಒಂದೇ ಮಾತು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತದೆಂದು ತಂದೆ ತಾಯಿಗಳ ಸ್ವಾರ್ಥಕ್ಕೆ ಬಲಿಯಾಗುತ್ತಾಳೆ 'ನನ್ನ ಹಣೇಬರಹ ಇದ್ದಂಗಾಗುತ್ತೆ ಬಿಡು' ಎಂದು ರಂಗನಿಗೆ ಹೇಳುವಾಗಲಂತೂ ಆಕೆಯ ವ್ಯಕ್ತಿತ್ವ ಶೂನ್ಯವಾಗುತ್ತದೆ. ಕಥೆಗಾರ್ತಿಯರ ಮನೋಭಾವಕ್ಕೆ ತಕ್ಕಂತೆ ಸಾಗುವ ಈ ಪಾತ್ರ ಸಂಪ್ರದಾಯದ ಶಿಶುವಾಗಿ ತೋರುತ್ತದೆ.

ಆದರೆ ಉತ್ತರಾರ್ಧದ ಗಿರಿಜೆ ತುಂಬ ಗಂಭೀರಳು, ಹೊಸದನ್ನು ಸಾಧಿಸಬೇಕೆಂಬ ಛಲದವಳು, ಸ್ವಂತಿಕೆಯನ್ನು ಮೆರೆಯುವವಳಾಗಿ ಕಂಡುಬರುತ್ತಾಳೆ. ಶೋಷಣೆಗೆ ಒಳಗಾಗಿದ್ದ ಈಕೆ ಪ್ರಜ್ಞೆಬಂದಾಗ ಮತ್ತೆ ಅದೇ ದಾರಿಯನ್ನು ಹಿಡಿಯದೆ ಹೊಸ ಗಾಳಿಗೆ ತನ್ನನ್ನು ಬಡ್ಡಿಕೊಳ್ಳುತ್ತಾಳೆ. ಗಂಡನನ್ನು ಕಳೆದುಕೊಂಡು ತವರನ್ನು ಸೇರಿದ ಗಿರಿಜೆ ಯಾರ ಹಂಗಿನಲ್ಲಿರಲೂ ಬಯಸುವುದಿಲ್ಲ. ಕಮಲೆಯ ಸಹಾಯದಿಂದ ನೌಕರಿ ಹಿಡಿದಾಗ ತಂದೆ ರೇಗುತ್ತಾರೆ, ಆಗ 'ನಿಮ್ಮಾತು ಕೇಳಿ ಮದ್ವೆ ಮಾಡ್ಕೊಂಡು

ನನ್ನ ಬಾಳು ಹೋಗಾಯ್ತು. ಇನ್ನು ನಾನು ಯಾರ ಮಾತನ್ನೂ ಕೇಳೋದಿಲ್ಲ, ನನಗೆ ಸರಿಕಂಡದ್ದನ್ನು ಮಾಡುತ್ತೇನೆ' (ಪು ೧೬೫) ಎಂದು ಅರ್ಭಟಿಸುವಾಗ ಎಷ್ಟೊಂದು ಬದಲಾದಂತೆ ತೋರುತ್ತಾಳೆ. ಇಂತಹ ದಿಟ್ಟತನ ಮೊದಲೇ ಬಂದಿದ್ದರೆ ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ರಂಗದಾಸನ ಆರ್ಥಿಕ ಪರಿಸ್ಥಿತಿ ಹದಗೆಟ್ಟಾಗ ತನ್ನ ಸಂಬಳವನ್ನೆಲ್ಲ ಕೊಡಲು ಮುಂದಾದ ಗಿರಿಜೆ ಮುಂದೆ ಅಣ್ಣ ಗಂಗಾಧರ ಬ್ರಾಹ್ಮಣ ಯುವತಿ ಸರೋಜಳನ್ನು ಪ್ರೀತಿಸಿ ಮದುವೆಯಾಗಲು ಅಂಜುತ್ತಿರುವಾಗ 'ಧೈರ್ಯವಿದ್ದರೆ ಅವಳ್ನ ಮದುವೆ ಮಾಡ್ಕೊ, ಇಲ್ಲದಿದ್ರೆ ಪ್ರೀತಿಸಿ ಮಧ್ಯದಲ್ಲೇ ಕೈಬಿಡ್ಬೇಡ. ಗಂಡಸಾದ ನೀನೇನೋ ಹುಡುಗಿಯೊಬ್ಬಳನ್ನು ಮರ್‍ತುಬಿಡಬಹುದು. ಆದ್ರೆ ಹೆಂಗ್ಸು ಮಾತ್ರ ತಾನು ಒಂದು ಸಾರೆ ಪ್ರೀತಿಸಿದೋರನ್ನ ಸಾಯೋವರ್‍ಗೂ ಮರೆಯೋಲ್ಲ' ಎಂದು ಧೈರ್ಯ ನೀಡುವಲ್ಲಿ ಮಾನವೀಯ ಅನುಕಂಪ ತೋರುತ್ತಾಳೆ. ರಂಗದಾಸ ಹುಟ್ಟಿನಿಂದಲೇ ಪರಿಪೂರ್ಣ ನಾದರೆ, ಗಿರಿಜೆ ತಾನು ಬೆಳೆದಂತೆ, ಕಾದಂಬರಿ ಬೆಳೆದಂತೆ ಬೆಳೆಯುತ್ತ ಹೋಗುತ್ತಾಳೆ. ಕೊನೆಗೂ ತಾನು 'ರಾಮನ ಪತ್ನಿ ಸೀತೆ' ಎಂಬುದನ್ನು ಜಗತ್ತಿಗೆ ತೋರಿಸುತ್ತಾಳೆ. ಓದುಗರ ಅನುಕಂಪಕ್ಕೆ ಒಳಗಾಗುವ ಈ ಪಾತ್ರ ಹಲವಾರು ದುಃಖದುಮ್ಮಾನ ಗಳನ್ನು ಪಡೆದು ನಿಷ್ಕಲ್ಮಶ ಮೂರ್ತಿಯಾಗುತ್ತದೆ.

ಕಾದಂಬರಿಯ ಇತರ ಪಾತ್ರಗಳ ಪೋಷಣೆಯಲ್ಲಿಯೂ ಲೇಖಕಿಯರು ಕೆಲ ಮಟ್ಟಿನ ಯಶಸ್ಸು ಸಾಧಿಸಿದ್ದಾರೆ. ಮುದ್ದುಸ್ವಾಮಿ, ಮೂಡಲಯ್ಯ, ಉಗ್ರಪ್ಪ, ಸೂರಮ್ಮ, ತಿಮ್ಮಪ್ಪ, ಅರಸಪ್ಪ, ಶಂಕರ, ಗಂಗಾಧರ, ಸರೋಜ, ಸಂಜೀವ, ನಾಗಲಕ್ಷ್ಮಿ, ಕಮಲ, ಸಾಂಬಶಿವನ್, ಚೌಡಪ್ಪ, ಪುಟ್ಟಮ್ಮ ಇತ್ಯಾದಿ ಪಾತ್ರಗಳು ತಮ್ಮದೇ ಆದ ವೈಶಿಷ್ಟ್ಯ ಹೊಂದಿವೆ.

ಪ್ರೀತಿಸಿ ಮದುವೆಯಾಗಬಯಸಿದ 'ಲಚುಮಿ'ಗೆ ದ್ರೋಹಬಗೆಯದೆ ತಂದೆ ತಾಯಿ, ಬಂಧು ಬಳಗದ ವಿರೋಧಕಟ್ಟಿಕೊಂಡು 'ಕುಲಕ್ಕಿಂತ ನಿಯತ್ತು ಮುಖ್ಯ' ಎಂದು ಮನೆಯಿಂದ ಹೋದ ಶಂಕರ ಪ್ರೀತಿಯ ವಿಶಾಲ ಅರ್ಥವನ್ನು ಬಿಂಬಿಸುವ ಪಾತ್ರವಾಗಿದ್ದಾನೆ. ಕೆಲಕ್ಷಣಗಳಲ್ಲಿಯೇ ಮಿಂಚುತ್ತಾನೆ. ಆತನ ಅಣ್ಣ ಉಗ್ರಪ್ಪ ಮಾತ್ರ ಸ್ವಾರ್ಥಿ ಹಣದಾಸೆಗಾಗಿ ಸೂರಮ್ಮನನ್ನು ಮದ್ವೆಯಾಗಿ ಹೊಂಬಾಳಮ್ಮ ನಂತಹ ಚೆಲುವೆಯನ್ನು ಇಟ್ಟುಕೊಂಡವ, ತನ್ನ ಸ್ವಾರ್ಥಕ್ಕಾಗಿ ಮಗಳು ಗಿರಿಜೆಯನ್ನು ಕ್ರೂರನಿಗ ಧಾರೆಯೆರೆಯುತ್ತಾನೆ. ರಂಗದಾಸ ಕಾರ್ಮಿಕ ಸಂಘ ಕಟ್ಟಿ ಪ್ರತಿಭಟಿಸಿದಾಗ ಚೇಲಾಗಳಿಂದ ಹೊಡೆಯಿಸಲೂ ಹೇಸದ ವ್ಯಕ್ತಿ ಇವನು. ಗಿರಿಜೆ ನೌಕರಿ ಮಾಡ ಬಯಸಿದಾಗಲಂತೂ ಫಟಸರ್ಪದಂತೆ 'ನನ್ನ ಮರ್ಯಾದೆ ಕಳೀತಿ, ಎಂದು ರೇಗುತ್ತಾನೆ. ಕಾದಂಬರಿತುಂಬ ಈತ ಬರೀ ಲೋಭಿ, ಸಮಯಸಾಧಕನಾಗಿ ಕಂಡುಬರುತ್ತಾನೆ.

ಮುದ್ದುಸ್ವಾಮಿಯಂತೂ ರಾವಣಾವತಾರಿ. ಹತ್ತಾರು ಹೆಣ್ಣುಗಳಿಂದ ಸುಖ ಪಡೆದವ. ಆಕಸ್ಮಿಕವಾಗಿ ಸಿಕ್ಕ ಎಂ. ಎಲ್. ಎ. ಪದವಿಯಿಂದ ಕೊಬ್ಬಿದವ. ಗಿರಿಜೆಯಿಂದಲೂ ಬರೀ ದೇಹಸುಖ ಬಯಸಿದ ಆತ 'ನಿಂಗೆ ಸೋಳೀ ಹತ್ರ ಟ್ಯೂಷನ್ ಕೊಡಿಸ್ಬೇಕು' 'ಜಂಭ ಅನ್ಕೋಬೇಡ, ಸುಮಾರು ಇನ್ನೂರು ಹುಡುಗೀರ ಜೊತೆ ನಾನು ಮಲಗಿದೀನಿ ನಿನ್ನಂಥಾ ಗೊಡ್ಡು ಮುತ್ತೈದೆ ಯಾರೂ ಸಿಕ್ಕಿರ್ಲಿಲ್ಲ' ಎಂಬ ಅವನ ಮಾತುಗಳಿಂದಲೇ ಲೇಖಕಿಯರು ಅವನ ಇಡೀ ವ್ಯಕ್ತಿತ್ವವನ್ನೂ ನಿರೂಪಿಸಿದ್ದಾರೆ. ಈತನ ತಮ್ಮ ಮೂಡಲಯ್ಯನದಂತೂ ಹೆಸರಿಗೆ ಭರತನ ಭ್ರಾತೃವಾತ್ಸಲ್ಯ ತೋರುವ, ಅಣ್ಣ ಸತ್ತ ಕೆಲವೇ ದಿನಗಳಲ್ಲಿ ಗಿರಿಜೆಯನ್ನೂ ತನ್ನ ಕಾಮತೃಪ್ತಿಗಾಗಿ ಬಳಸಬಯಸುವ ಕ್ರೂರಿ, ಬಂಧುದ್ರೋಹಿ ತಾನು ನಂಬಿದ ಮೌಲ್ಯಗಳಿಗೆ ಎದೆಸೆಟಿಸಿ ನಿಲ್ಲಬಲ್ಲವನಾಗಿರಬೇಕೆಂಬ ಧ್ಯೇಯವುಳ್ಳವರಾಗಿ 'ಸಾಂಬಶಿವನ್' ಕಂಡುಬರುತ್ತಾರೆ.

ಗಂಗಾಧರ ಸ್ವಂತ ವ್ಯಕ್ತಿತ್ವವಿಲ್ಲದ ಪಾತ್ರವೆಂಬುದನ್ನು ಲೇಖಕಿಯರು ಕಾದಂಬರಿಯ ಉದ್ದಕ್ಕೂ ಸ್ಪಷ್ಟಪಡಿಸಿದ್ದಾರೆ. ತಂಗಿ ಗಿರಿಜೆ ರಂಗದಾಸನನ್ನು ಪ್ರೀತಿಸಿದ್ದು ಗೊತ್ತಿದ್ದರೂ ಆಕೆಯನ್ನೂ ಒತ್ತಾಯದಿಂದ ಮದುವೆ ಮಾಡುವಾಗ ಚಕಾರವೆತ್ತುವುದಿಲ್ಲ. ಒಂದು ರೀತಿಯ ನಿರ್ಲಿಪ್ತನಾಗಿಬಿಡುತ್ತಾನೆ. ತಂದೆಯ ಸಹವಾಸ ನರಕವೆಂಬುದನ್ನರಿತು ಅದರಿಂದ ಪಾರಾಗಲಿಕ್ಕೆ ಎಂ. ಎ. ಕಲಿಯ ಹೋಗಿ ಸಹಪಾಠಿ ಸರೋಜಳನ್ನು ಪ್ರೀತಿಸುತ್ತಾನೆ. ರಂಗದಾಸನ ಕೂಡ ಚರ್ಚಿಸುವಾಗ 'ದೇಶದ ಉದ್ಧಾರ ಆಗಿ ನನಗೇನಾಗ್ಬೇಕಿದೆ ? ನಾನು ಸರ್ಯಾಗಿ ಬದಕ್ಬೇಕು ?' ಎನ್ನುವ ಇವನ ಮಾತು ವ್ಯಕ್ತಿತ್ವದ ಬಿಂಬವಾಗಿದೆ. ಪ್ರೀತಿಸಿದವಳನ್ನು ಮದುವೆಯಾಗಲೂ ಸ್ವಂತಿಕೆಯಿಲ್ಲ, ಧೈರ್ಯವಿಲ್ಲ. ಗಿರಿಜೆಯ ಹಾಗೂ ರಂಗದಾಸರ ಸಂಪರ್ಕದಿಂದ ಒಂದು ರೂಪ ಪಡೆಯುತ್ತದೆ ಈ ಪಾತ್ರ. ಅವನ ವ್ಯಕ್ತಿತ್ವಕ್ಕೆ ತಕ್ಕ ನಡತೆ, ಸಂಭಾಷಣೆ ತಂದು ನಿರೂಪಿಸುವಲ್ಲಿ ಲೇಖಕಿಯರು ಗೆದ್ದಿದ್ದಾರೆ.

ಒಟ್ಟಿನಲ್ಲಿ ಕಾದಂಬರಿಯ ಪಾತ್ರಗಳು ಪೂರ್ವಾರ್ಧದಲ್ಲಿ ಗ್ರಹಗಳಾಗಿ ಕಂಡರೆ ನಂತರ ನಕ್ಷತ್ರವಾಗುತ್ತದೆ. ಪುಟಪುಟಕ್ಕೂ ಬೆಳೆಯುತ್ತ ಹೋಗುತ್ತವೆ ಉಗ್ರಪ್ಪ, ಗಂಗಾಧರನಂತಹರನ್ನು ಬಿಟ್ಟು ಗಿರಿಜೆ, ರಂಗದಾಸರನ್ನು ಲಕ್ಷಿಸಿದಾಗಲಂತೂ ಪಾತ್ರ ಪೋಷಣೆಯಲ್ಲಿ ಗೆದ್ದಿದ್ದಾರೆನ್ನಬಹುದು. ಕೆಲಸಂದರ್ಭಗಳಲ್ಲಿ ಬರುವ ಅಲ್ಪಪಾತ್ರಗಳು ಕೃತಕವೆನಿಸಿದರೂ ಕಥೆಯು ಆಭಾಸವಾಗದಂತೆ ಎಚ್ಚರವಹಿಸಿದ್ದಾರೆ. ಅಪ್ಪಟ ಗರತಿಯಾಗಿದ್ದ ಗಿರಿಜೆ ಕಾದಂಬರಿಯ ಉತ್ತರಾರ್ಧದಲ್ಲಿ ಮಾತುಕೃತಿಗಳಲ್ಲೂ ಸಾಧನೆಗೈಯುತ್ತಾಳೆಂಬುದು ಕಂಡುಬರುತ್ತದೆ. ಹೊಸ ಮೌಲ್ಯಗಳಿಗೆ ಸಂಪ್ರದಾಯಸ್ಥರು ಹೇಗೆ ವಿರೋಧವೊಡ್ಡುತ್ತಾರೆಂಬುದಕ್ಕೆ ಉಗ್ರಪ್ಪನಂತಹರು ಸಾಕ್ಷಿಯಾದರೆ ತಾವು ನಂಬಿದ ಮೌಲ್ಯಗಳನ್ನು ಕೃತಿಗಿಳಿಸುವಲ್ಲಿ ದಿಟ್ಟತನ ತೋರಿದ ಪಾತ್ರಗಳಾಗಿ ಗಿರಿಜೆ, ರಂಗದಾಸ ಕಂಡುಬರುವುದರಿಂದಲೇ ಅವರಿಬ್ಬರೂ ಓದುಗರ ಮನದಲ್ಲಿ ಅಚ್ಚಳಿಯದೇ ಉಳಿಯುತ್ತಾರೆ.

ನಿರೂಪಿಸುವ ವಿಷಯವನ್ನು ಸುಂದರ. ಸರಳ, ಹಾಗೂ ವಿಶಿಷ್ಟ ತಂತ್ರಗಳಲ್ಲಿ ಹೇಳುವಲ್ಲಿಯೇ ಕೃತಿಕಾರನ ಯಶಸ್ಸು ಅಡಗಿದೆ. ಕಳಪೆ ವಸ್ತುವನ್ನು ಕ್ಲಿಷ್ಟ ತಂತ್ರಗಳಲ್ಲಿ ಸಿಲುಕಿಸಿ ಗೊಂದಲವನ್ನುಂಟುಮಾಡುವವರಲ್ಲ ಇಲ್ಲಿನ ಲೇಖಕಿ. ಸುಂದರವಾದ ವಸ್ತುವನ್ನು ಖಂಡತುಂಡವಾಗಿ ನಿರೂಪಿಸುತ್ತ ಪ್ರತಿ ಪಾತ್ರಗಳಲ್ಲೂ ಜೀವ ತುಂಬುತ್ತ ಹೋಗುವ ಇವರ ತಂತ್ರ ತುಂಬ ಸರಳ. ಅಲ್ಲಲ್ಲಿ ಕೆಲವು ಪೌರಾಣಿಕ ಘಟನೆಗಳನ್ನು ಬಳಸಿಕೊಂಡು ವಾಚ್ಯವಿದ್ದುದನ್ನೂ ಸೂಚ್ಯವಾಗಿ ತಿಳಿಸುವ ತಂತ್ರ ಈ ಕಾದಂಬರಿಯ ಜೀವಾಳವಾಗಿದೆ.

ಘಟನೆಗಳ ಯಾವ ತಿರುವು ಮುರುವು ಇಲ್ಲದೆ ಸುಲಭವಾಗಿ ಕಾದಂಬರಿ ಓದಿಸಿಕೊಂಡು ಹೋಗುತ್ತದೆ. ರಂಗದಾಸನ ಮೂಲಕ ಬಾಣಭಟ್ಟನ 'ಕಾದಂಬರಿ'ಯ ಹೇಳಿಸಿ, ಆತನ ನಿರೂಪಣಾ ಶೈಲಿಗೆ ಗಿರಿಜೆ ಮಾರುಹೋಗುವಂತೆ ಮಾಡುವುದು. ಅಲ್ಲಿ ಬರುವ ಪುಂಡರೀಕ–ಮಹಾಶ್ವೇತೆಯರಲ್ಲಿ ತಮ್ಮನ್ನು ಕಂಡುಕೊಂಡು ಶಿವಪುರದ ಶಿವನ ಕೆರೆಯೇ 'ಅಚ್ಛೋದಸರೋವರ' ಎಂದು ಕಲ್ಪಿಸಿಕೊಂಡು ಕನಸು ಕಾಣುವಂತಹ ಅನುಪಮಾರವರ ತಂತ್ರ ವಿಶಿಷ್ಟವಾದುದಾಗಿ ಕಾಣುತ್ತದೆ. ಮಹಾಶ್ವೇತೆಯನ್ನು ಪಡೆಯಲು ಆತ ಪಟ್ಟ ಪ್ರಯತ್ನ, ಆಕೆಯ ತಪ, ಇವೆಲ್ಲ ಪ್ರಸ್ತುತ ಕಾದಂಬರಿಯ ಮಹಾಶ್ವೇತೆ (ಗಿರಿಜೆ) ಹಾಗೂ ಪುಂಡರೀಕ (ರಂಗದಾಸ)ರ ಬದುಕಿನಲ್ಲೂ ಕಾಣಿಸಿಕೊಳ್ಳುತ್ತವೆಂಬುದನ್ನು ಸೂಚ್ಯವಾಗಿ ತಿಳಿಸುತ್ತಾರೆ.

ಆ ಪೌರಾಣಿಕ 'ಕಾದಂಬರಿ'ಯ ಕೊನೆಗೆ ಜನ್ಮಜನ್ಮಾಂತರಗಳ ಕೋಟಲೆಯಿಂದ ಪರಿಶುದ್ಧನಾಗಿ ಬಂದ ಪುಂಡರೀಕ ತನಗಾಗಿ ಅಲ್ಲಿಯವರೆಗೆ ತಪಮಾಡುತ್ತಿದ್ದ 'ಮಹಾಶ್ವೇತೆಯನ್ನು ಪಡೆಯುತ್ತಾನೆ: 'ಎಳೆ' ಕಾದಂಬರಿಯಲ್ಲೂ ರಂಗದಾಸ ತನ್ನ ಇನಿಯಳನ್ನೂ ಅಂತ್ಯಕ್ಕೆ ಪಡೆಯುತ್ತಾನೆ. ಇಂತಹ ವಿನೂತನ ತಂತ್ರದಿಂದ ವಸ್ತುವಿಗೆ ಮತ್ತಷ್ಟು ಹೊಳಪು ಬಂದಿದೆ. ಗಂಗಾಧರ–ಸರೋಜರನ್ನು ಚಂದ್ರಾಪೀಡ-ಕಾದಂಬರಿಯರಾಗಿ, ರಂಗದಾಸ-ಗಿರಿಜೆಯರನ್ನು ಪುಂಡರೀಕ–ಮಹಾಶ್ವೇತೆಯರಾಗಿ ತೋರ್ಪಡಿಸಿದ್ದಾರೆ.

ಉಗ್ರಪ್ಪ ತನ್ನ ತಮ್ಮ ಕಂಕರನ ಬದುಕನ್ನು ಹಲವಾರು ವರ್ಷಗಳ ನಂತರ ಅವನ ಭಾವಚಿತ್ರ ಕಂಡು ನೆನಪಿಸಿಕೊಳ್ಳುವಂತೆ ಮಾಡುವುದು, ಮುಂದೆ ಗಿರಿಜೆ ತನ್ನ ಕನಸಿನಲ್ಲಿ ನಡೆದ ಘಟನೆಗಳ ಮೆಲುಕು ಹಾಕುವಂತೆ ಮಾಡಿಸುವುದು ಸಹ ಚೆನ್ನಾಗಿ ತೋರುತ್ತದೆ. ನಿಜ ಜೀವನದಲ್ಲಿ ಪಡೆಯಲಾಗದ ಸುಖ, ವ್ಯಕ್ತಿ, ವಸ್ತು ಕನಸಿನಲ್ಲಿ ಲಭಿಸಿ ಅದರಿಂದ ಭವಿಷತ್ತಿನ ಸೂಚನೆ ಲಭಿಸುತ್ತದೆಂಬ ಆಧುನಿಕ ಮನೋವಿಜ್ಞಾನಿಗಳ ತತ್ತ್ವಗಳನ್ನೂ ಇಲ್ಲಿ ವಿಶಿಷ್ಟ ತಂತ್ರವಾಗಿ ಬಳಸಿದ್ದು ಕಂಡುಬರುತ್ತದೆ.

ಮುದ್ದುಸ್ವಾಮಿಯ ಕೈಹಿಡಿದ ಸೀತೆ ಕನಸಿನಲ್ಲಿ 'ಬಂಗಾರದ ಜಿಂಕೆಯನ್ನೂ ಬೆಂಬತ್ತಿದಂತೆ' ಅದನ್ನು ಹಿಡಿಯ ಹೊರಟ ರಂಗದಾಸ 'ಹಾ ಲಕ್ಷ್ಮಣಾ ಸತ್ತೆ' ಎಂದು ಕೂಗಿದಂತೆ ಮುಂದೆ ಮುದ್ದುಸ್ವಾಮಿ ರಥ ತಂದು ಆಕೆಯನ್ನೆಳೆದು ಒಯ್ದುದಂತೆ

'ರಾವಣಾ ನನ್ನ ಕೈಬಿಡು, ನಾನು ರಾಮನ ಹೆಂಡತಿ ಸೀತೆ' ಎಂದು ಕಿರುಚಿಕೊಳ್ಳುವಂತೆ ತೋರುತ್ತದೆ. ಹೆಸರಿಗೆ ಮಾತ್ರ ಗಂಡನಾಗಿದ್ದರೂ ರಾವಣ ಸ್ವರೂಪಿ ಮುದ್ದು ಸ್ವಾಮಿ ಮುಂದೆ ಹತವಾಗುತ್ತಾನೆ. ಮಾನಮಂದಿರದ ಆರಾಧ್ಯದೇವನಾದ ರಂಗ ದಾಸನೇ ರಾಮನಾಗಿ ಆಕೆಯ ಕೈ ಹಿಡಿಯುತ್ತಾನೆಂಬ ಸಂಕೇತವನ್ನು ಓದುಗರಿಗೆ ತಿಳಿಸಿ ಆ ಸತ್ಯವನ್ನು ಕೊನೆಗೂ ನಿಜವಾಗಿ ತೋರಿಸುತ್ತಾರೆ. ರಾಮನನ್ನು ರಂಗದಾಸನಲ್ಲಿ, ಗಿರಿಜೆಯನ್ನು ಸೀತೆಯಲ್ಲಿ, ಮುಂದೆ ಮುದ್ದುಸ್ವಾಮಿಯನ್ನು ರಾವಣನಲ್ಲಿ ಕಂಡು ಅವರ ಪಾತ್ರಕ್ಕೆ ಚ್ಯುತಿ ಬಾರದಂತೆ ಸ್ಪಷ್ಟಪಡಿಸಿದ್ದಾರೆಂದರೆ ಅತಿಶಯೋಕ್ತಿಯಾಗ ಲಾರದು.

ಗಿರಿಜೆ ವಿಧವೆಯಾಗಿ ಕುಂಕುಮನ್ನಳಿಸಿಕೊಂಡಾಗ ರಂಗದಾಸನ ಭೆಟ್ಟಿಯಿಂದ ಮತ್ತೆ ಬದಲಾಗುತ್ತಾಳೆ, ಹಳೆ ಸಂಪ್ರದಾಯವನ್ನು ಬಿಟ್ಟು ದಿಟ್ಟತನವನ್ನು ತೋರೆಂದು ಹೇಳಿದ ಅವನ ಮಾತಿನಂತೆ ಗಿರಿಜೆ ಕುಂಕುಮವನ್ನು ಮತ್ತೆ ಧರಿಸುವುದು ಮುಂದೆ ಆಕೆ ಮತ್ತೆ ಹೊಸ ವಸಂತವನ್ನು ಕಾಣುತ್ತಾಳೆಂಬುದರ ಸಂಕೇತವಾಗಿ ಬಂದಿದೆ. ಹೆಸರಿನಲ್ಲಿಯೇ ಅವರ ಇಡೀ ವ್ಯಕ್ತಿತ್ವವನ್ನು ತಿಳಿಸುವ ಲೇಖಕಿಯರ ತಂತ್ರ ಸುಂದರ ವಾಗಿದೆ. 'ಉಗ್ರಪ್ಪ' ಎಂಬ ಹೆಸರಿನಲ್ಲಿಯೇ ಅವನ ಸ್ವಭಾವ ತಿಳಿಯುವಂತೆ, ಮುಂದೆ ರಂಗದಾಸನಿಗೆ ರಾಮನೆಂದು, ಮುದ್ದುಸ್ವಾಮಿಗೆ ರಾವಣನೆಂದು ಸಾಂಕೇತಿಕ ಹೆಸರಿಟ್ಟ ದ್ದಂತು ಬಹಳ ಔಚಿತ್ಯಪೂರ್ಣವೆನಿಸುತ್ತದೆ. ಒಟ್ಟಿನಲ್ಲಿ ರಾಮಾಯಣ ಹಾಗೂ 'ಕಾದಂಬರಿ'ಯ ಘಟನೆಗಳನ್ನು ಬಳಸಿಕೊಂಡರೂ ತಂತ್ರ ಕ್ಲಿಷ್ಟವಾಗದಂತೆ, ಸುಲಭ ವಾಗಿ ತಿಳಿಯುವಂತೆ ರಚಿಸಿದ್ದು ಲೇಖಕಿಯರ ಕಥನ ತಂತ್ರದ ಸಿದ್ಧಿಯನ್ನು ತೋರ್ಪಡಿಸುತ್ತದೆ.

ಕಾದಂಬರಿ, ಕಥೆಗಳು ಆನಂದ ನೀಡುವುದರ ಜೊತೆಗೆ ಹೊಸದನ್ನು ಏನಾದರೂ ನೀಡಿದರೆ ಹೆಚ್ಚು ಉತ್ಕೃಷ್ಟವಾಗಬಲ್ಲವು. ಪ್ರಸ್ತುತ ಕಾದಂಬರಿ ಕಥೆಯನ್ನೂ ಹೇಳು ತ್ತಲೆ ಹೊಸ ವಿಷಯಗಳನ್ನು ತಿಳಿಸುತ್ತದೆ. ಶಿವಪುರಕ್ಕೆ ಆ ಹೆಸರು ಬರಲು ಕಾರಣ ವಾದ ಶಿವಣ್ಣನಾಯಕನ ಕಥೆ, ನೇಕಾರ ಜನಾಂಗದ ಒಳಪಂಗಡ, ಪಟ್ಟೇಗಾರರ ಮದುವೆಯ ರೀತಿ, ಮಲೆನಾಡಿನ ತೆಪ್ಪೋತ್ಸವದ ವೈಭವ, ಮಾನವಾತೀತ ಸಂಗತಿ ಗಳಲ್ಲಿ ಬೇರುಬಿಟ್ಟ ಹಿಂದೂಗಳ ನಂಬಿಕೆ, ಅದಕ್ಕೆ ಕಾರಣ, ನೇಕಾರರ ಮೂಲಪುರುಷ 'ದೇವಲ ಮಹರ್ಷಿಯ ಜನ್ಮ ವೃತ್ತಾಂತ, ದಕ್ಷಿಣ ಕನ್ನಡ' ಜಿಲ್ಲೆಯ ಬಾಕುಡ ಹರಿ ಜನರ ಪರಿಸ್ಥಿತಿ, ಒರಿಸ್ಸಾದ ಭೂಲಿಯ ಜನಾಂಗದ ವಿವರಣೆ, ಆಂಧ್ರದ ಪೈಡಿಗಳ ವಿಚಾರ, ಕೆಳವರ್ಗದವರು ಉಚ್ಚವರ್ಗದವರಂತೆ ಕಾಣಬಯಸುವುದರ ಹಿನ್ನೆಲೆ, ಮುಂತಾದ ಹೊಸ ವಿಷಯಗಳನ್ನು ತಿಳಿಸುತ್ತದೆ.

ಎಲ್ಲಕ್ಕಿಂತ ಹೆಚ್ಚಿನ ವೈಶಿಷ್ಟ್ಯವೆಂದರೆ ಕಾದಂಬರಿಕಾರ್ತಿಯರು ಹೊಸ ಸಂಪ್ರ ದಾಯಗಳನ್ನು ತಮ್ಮ ಕಾದಂಬರಿಯಲ್ಲಿ ಅಳವಡಿಸಿದ್ದು. ಪ್ರಾರಂಭದಲ್ಲಿ ಸಂಪ್ರ ದಾಯಕ್ಕೆ ಶರಣು ಹೋದಂತೆ ಕಂಡರೂ ಕಾದಂಬರಿ ಮುಗಿಯುವ ಹಂತದಲ್ಲಿ

ಹಳೆ–ಹೊಸ ಮೌಲ್ಯಗಳ ತಿಕ್ಕಾಟ ನಡೆದು ಅಲ್ಲಿ ಹೊಸ ಮೌಲ್ಯಗಳನ್ನೇ ಗೆದಿಸುವಲ್ಲಿ ಲೇಖಕಿಯರ ಮನೋಭಾವವನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದಾಗಿದೆ. ವಿಧವೆ ಕುಂಕುಮವನ್ನೂ ಇಡಬಹುದು, ಯಾರ ಹಂಗೂ ಇಲ್ಲದೆ ಸ್ವತಂತ್ರಳಾಗಿ ಬದುಕ ಬೇಕು, ಮರುವಿವಾಹವನ್ನೂ ಮಾಡಿಕೊಳ್ಳಬಹುದೆಂಬ ಉನ್ನತ ಮೌಲ್ಯಗಳನ್ನು ಕೃತಿ ರೂಪದಲ್ಲಿ ತಮ್ಮ ಪಾತ್ರಗಳ ಮೂಲಕ ಮಾಡಿಸಿತೋರಿ ತಾವು ಅವುಗಳನ್ನು ಒಪ್ಪಿದ್ದೇವೆ, ಸ್ತ್ರೀ ಸ್ವಾತಂತ್ರ್ಯ ಬೇಕೇ ಬೇಕು ಎಂಬ ಮರ್ಮವನ್ನೂ ಬಿಂಬಿಸುವಲ್ಲಿ ವಿನೂತನ ವೈಶಿಷ್ಟ್ಯತೆಯನ್ನು ಮೆರೆದಿದ್ದಾರೆ. ರಂಗದಾಸನಂತಹ ವಿದ್ಯಾವಂತರಂತೆ ವಿಧವಾ ವಿವಾಹಕ್ಕೆ ಯುವಕರು ಪ್ರೋತ್ಸಾಹಿಸಬೇಕೆಂಬ ಸೂಚನೆಯನ್ನೂ ಅಳ ವಡಿಸಿದ್ದಾರೆ.

'ಎಳೆ' ಕಾದಂಬರಿ ಹಲವು ದೃಷ್ಟಿಯಿಂದ ವಿಶಿಷ್ಟವಾಗಿದ್ದರೂ ಕೆಲದೃಷ್ಟಿ ಯಲ್ಲಿ ಸೋತಿದೆ ಎನ್ನಲೇಬೇಕಾಗುತ್ತದೆ. ಕಾದಂಬರಿಗೆ ಸಂಭಾಷಣೆಯೇ ಜೀವಾಳ ವೆಂದಮೇಲೆ ಅದಕ್ಕೆ ಬಳಸುವ ಭಾಷೆಯನ್ನಾಡುವ ಎಲ್ಲರಿಗೂ ತಿಳಿಯುವಂತಹ ಮಾಧ್ಯಮದಲ್ಲಿದ್ದರೆ ಒಳಿತು. ಇಲ್ಲದಿದ್ದರೇ ಕಾದಂಬರಿ ಕೆಲವರಿಗೆ ಸೀಮಿತವಾಗು ತ್ತದೆ. ಬರೀ ಗ್ರಾಮ್ಯ ಭಾಷೆಯನ್ನಾಗಲಿ, ಗ್ರಾಂಥಿಕ ಭಾಷೆಯನ್ನಾಗಲಿ ಬಳಸುವುದು ಸೋಲನ್ನು ಆಹ್ವಾನಿಸಿದಂತೆ. ಪ್ರಾಂತೀಯ ಭಾಷೆಯನ್ನು ಬಳಸಿದ್ದರಿಂದಲೇ 'ನಿಸರ್ಗ' (ಮಿರ್ಜಿ ಅಣ್ಣಾರಾಯ) ದಂತಹ ಕೃತಿ ಎಷ್ಟೇ ಉನ್ನತವಿದ್ದರೂ ಪ್ರಸಿದ್ಧಿಗೆ ಬರಲಿಲ್ಲ. ಪ್ರಸ್ತುತ ಕಾದಂಬರಿಯಲ್ಲೂ ಗ್ರಾಮ್ಯ ಭಾಷೆ ಹಾಗೂ ಪ್ರಾಂತೀಯ ಭಾಷೆ ಬಳಕೆಯಾದ್ದರಿಂದ ಆ ಮಟ್ಟಿಗೆ ಕೃತಿ ಸೋಲನುಭವಿಸಿದೆ ಎನ್ನಬೇಕು.

'ಇನ್‌ರವಷ್ಟು ಬೆಲ್ಲ ಕೊಡ್ಲೇನ್ಮಗಾ!', 'ಇರೇರು ಯೋಳ್ದಂಗೆ ಕೇಳದಿದ್ರೆ ಇಂಗೇ ಆಗಾದು! ಇವ್ಳು ಇನದೆಯ್ಯಾಗಿಯ್ಕ ಅಗ್ಬಂದು ಯಾರನ್ನ ಕಾಡಸ್ತಾಳೊ?' 'ನೀವೇ ಮಡಕ್ಕಳ್ಳಿ' ಮುಂತಾದ ಮಾತಿನಲ್ಲಿ ಪ್ರಾಂತೀಯ ಭಾಷೆ ಬಳಕೆಯಾದ್ದರಿಂದ ಉತ್ತರ ಕರ್ನಾಟಕದವರಿಗೆ ಇದು ಅರ್ಥವಾಗದೇ ಹೋಗುತ್ತದೆ. ಹಳೆಯ ಸಂಪ್ರದಾಯ ಗಳಾದ ಜಾತಕ, ಕಾಲಗುಣಗಳನ್ನು ತಂದದ್ದು ಕಾಣುತ್ತದೆ. ಗಿರಿಜೆ, ಮುದ್ದು ಸ್ವಾಮಿಯರ ಜಾತಕ ಸರಿಯಿಲ್ಲದ್ದರಿಂದಲೇ ಆತ ಸತ್ತನೆಂಬುದನ್ನು 'ನಿನ್ ಕಾಲು ಗುಣನೇ ಕೆಟ್ಟದ್ದು ಕಣೇ, ನಿನ್ನಿಂದ್ಲೆ ನನ್ ಮಗ ಸತ್ತದ್ದು' ಎಂಬ ಮಾತಿನಲ್ಲಿ ಕೃತಿ ಕಾರರು ಅವನ್ನು ಒಪ್ಪಿದಂತೆ ಕಂಡುಬರುತ್ತದೆ. ಗಿರಿಜೆ-ರಂಗದಾಸರ ಪ್ರೇಮ ಇನ್ನೂ ಬೆಳೆಯುವಂತಹ ಅವಕಾಶ ಸಿಗದಿದ್ದುದು ಉತ್ತರಾರ್ಧದ ಕಥೆ ಸಿನಿಮೀಯ ಧಾಟಿಯಲ್ಲಿ ಓಡುವುದು ಒಂದು ದೃಷ್ಟಿಯಿಂದ ವೈಶಿಷ್ಟ್ಯತೆಗೆ ಕೊರತೆ ತಂದಿವೆ ಎನ್ನಬಹುದು.

ಇಡೀ ಕೃತಿಯ ಹೃದಯವೆಂದರೆ ಅದರ ಶಿರೋನಾಮೆ. ಪ್ರಸ್ತುತ 'ಎಳೆ' ಕಾದಂಬರಿಯೂ ವಿಶಿಷ್ಟವಾದ ಶಿರೋನಾಮೆ ಹೊಂದಿದೆ. ನೇಕಾರ ಜನಾಂಗದ ಚಿತ್ರಣವನ್ನು ನೀಡುವ ಇಲ್ಲಿ-ಸಹಸ್ರಾರು ಎಳೆಗಳು ಕ್ರಮಬದ್ಧವಾಗಿ ಕೂಡಿಕೊಂಡು ವಿವಿಧ ರೀತಿಯ ಬಟ್ಟೆಯಾಗುವಂತೆ ಮನುಷ್ಯನ ಭಾವನೆಗಳಲ್ಲೂ ಇಂಥವೇ

ಎಳೆಗಳಿರುತ್ತವೆ. ಸುಖ-ದುಃಖ, ಕೋಪ-ತಾಳ್ಮೆ, ತ್ಯಾಗ ಸ್ವಾರ್ಥ, ಪ್ರೀತಿ-ದ್ವೇಷ ಮುಂತಾದ ಎಳೆಗಳೆಲ್ಲ ಕೂಡಿ ಒಬ್ಬ ಮನುಷ್ಯನಾಗಿರುತ್ತಾನೆಂಬ ಅಂಕವನ್ನು ಪ್ರತಿ ಪಾತ್ರದ ಭಾವದೆಳೆಗಳನ್ನು ಬಿಚ್ಚಿ, ಹಿಂಜಿ ತೋರಿಸಿ ಕೃತಿಕಾರರು 'ಎಳೆ' ಎಂಬ ಶಿರೋ ನಾಮೆಯನ್ನು ಸಾರ್ಥಕಗೊಳಿಸಿದ್ದಾರೆ.

ಒಟ್ಟಿನಲ್ಲಿ ಅನುಪಮಾ ನಿರಂಜನರು ತಮ್ಮ ಈ ಕಾದಂಬರಿಯನ್ನೂ ಭಾವ, ಭಾಷೆ, ತಂತ್ರ, ವಸ್ತುಗಳ ನವೀನತೆಯಿಂದ ವೈಶಿಷ್ಟ್ಯಪೂರ್ಣವಾಗಿಸಿದ್ದಾರೆ. ಕೆಲ ವೊಂದು ಅಂಶದಲ್ಲಿ ಸೋತಿದ್ದರೂ ಇಡಿಯಾಗಿ ನೋಡಿದಾಗ ಅದು ಎದ್ದು ತೋರ ದಂತಹದು. ಸುಲಭವಾಗಿ ಓದಿಸಿಕೊಂಡು ಹೋಗುವ ಸುಂದರ ಸಾಮಾಜಿಕ ಕಾದಂಬರಿ ಯಾಗಿ 'ಎಳೆ' ಅರಳಿ ನಿಂತಿದೆ. ಹೊಸ ಮೌಲ್ಯಗಳ ಗೆಲುವಿನೊಂದಿಗೆ ಮುಕ್ತಾಯ ವಾಗುವ ಇಲ್ಲಿ ಸಮಾಜದ ಯುವಕರಿಗೆ ನಂಬಿದ ಮೌಲ್ಯಗಳನ್ನು ಮಾತು-ಕೃತಿಯಲ್ಲಿ ತರಲು ಆಹ್ವಾನವಿತ್ತಂತಾಗಿದೆ. ಮುದ್ರಣ ದೋಷ ಮೇಲಿಂದ ಮೇಲೆ ಕಂಡು ಬಂದದ್ದು ವಿಷಾದನೀಯ. ಮುದ್ರಕರು, ಲೇಖಕರು ಇದರತ್ತ ಹೆಚ್ಚಿನ ಲಕ್ಷ್ಯವಹಿಸ ಬೇಕಾಗಿತ್ತು. 'ಎಳೆ' ಸುಂದರ ಎಳೆಗಳಿಂದ ರಚಿತವಾದ ಚಿರನೂತನ ಪೀತಾಂಬರ ವಾಗಿದೆ, ಮನಮೋಹಕವಾಗಿದೆ ಎಂಬುದು ಸರ್ವವಿದಿತ.

ಆತ್ಮ ಶೋಧನೆಗೆ ಚೌಕಟ್ಟಿನ ಭಾರ : 'ಮುಕ್ತಿ'

ಲಕ್ಷ್ಮಣ ಕೊಡಸೆ

ನವ್ಯಮಾರ್ಗ ಸಾಹಿತ್ಯ ಪ್ರಕಾರವಾಗಿ ರೂಪುಗೊಳ್ಳುತ್ತಿದ್ದ ಕಾಲದಲ್ಲಿ ಹೊರಬಂದ ಶಾಂತಿನಾಥ ದೇಸಾಯಿ ಅವರ 'ಮುಕ್ತಿ' ಕಾದಂಬರಿ ಅಕಡೆಮಿಕ್ ವಲಯಗಳಲ್ಲಿ ಗಮನ ಸೆಳೆದುಕೊಂಡ ಕೃತಿ. ಪ್ರತ್ಯೇಕ ಪ್ರತ್ಯೇಕ ಅಧ್ಯಾಯಗಳಿಲ್ಲ ಸುದೀರ್ಘ ಕಥಾನಕವಿಲ್ಲ. ಆಗಷ್ಟೇ ಚಲಾವಣೆಗೆ (ಕನ್ನಡದಲ್ಲಿ) ಬಂದ ಪ್ರಜ್ಞಾಪ್ರವಾಹತಂತ್ರದ ವ್ಯಾಪಕ ಬಳಕೆಯ 'ಮುಕ್ತಿ' ತನ್ನ ಹೊಸಬಗೆಯ ನಿರೂಪಣೆ ರೀತಿಯಿಂದ ಗಮನ ಸೆಳೆದದ್ದು ಸಹಜವೇ. ಆಗಿನ ಪ್ರವೃತ್ತಿಯಾದ 'ಆತ್ಮಶೋಧನೆ'ಗೂ ಇದೊಂದು ವಿಶೇಷ ನಿದರ್ಶನವೇ ಆಗಿತ್ತು.

ಸಾಹಿತ್ಯ ಕೃತಿಗಳ ಮೌಲ್ಯಮಾಪನ ಕಾಲಕಾಲಕ್ಕೆ ನಡೆಯುಬೇಕು. ಕಾಲದ ಪರೀಕ್ಷೆಯಲ್ಲಿ ಹಾದು ಉಳಿದುಕೊಂಡ ಕೃತಿಗಳು ಕ್ರಮೇಣ ಐತಿಹಾಸಿಕ ಮಹತ್ವ ಪಡೆದುಕೊಳ್ಳುತ್ತವೆ. ಕೃತಿ ಹೊರಬಂದ ಕಾಲದಲ್ಲಿ ಇದ್ದ ವಿಮರ್ಶನಪ್ರಜ್ಞೆ ಯಾವುದೇ ಸ್ಥಾನ ನೀಡಿದ್ದರೂ ಕೃತಿಯ ಮಹತ್ವ ಕೆಲಕಾಲಾನಂತರದ ಪರೀಕ್ಷೆಯಲ್ಲಿ ಎದ್ದು ತೋರಬೇಕು. ಅಕೆಡೆಮಿಕ್ ವಲಯದಾಚೆ ಯಾವುದೇ ಕೃತಿಯ ಮೌಲ್ಯಮಾಪನ ಅದರ ಮಹತ್ವ ವಿಸ್ತಾರಗೊಳಿಸುತ್ತದೆ. ಏಕೆಂದರೆ ಸಾಹಿತ್ಯ ಕೃತಿಗಳನ್ನು ನೋಡುವ

ಅಕಡೆಮಿಕ್ ದೃಷ್ಟಿ, ಅನುಸಂಧಾನ, ವೈವಿಧ್ಯದ ಹೆಸರಿನಲ್ಲಿ ಎಂಥ ಕೃತಿಗಳನ್ನಾದರೂ ಮಹತ್ವದ್ದಾಗಿಸಬಲ್ಲದು, ಇಲ್ಲವೆ ಗೌಣವಾಗಿಸಬಲ್ಲದು.

* * *

'ಮುಕ್ತಿ'ಯು ಗೌರೀಶನ ಆತ್ಮಶೋಧನೆ ಕಾದಂಬರಿಯ ಹರವು. ಸ್ವಂತಿಕೆಯಿಲ್ಲದ ದುರ್ಬಲ ಆತ. ಮೊದಲು ಶ್ರೀಕಾಂತನಿಂದಲೇ ಆತನಿಗೆ ಬೆಳಕು. ಅವನ ಹಿಂದೆ ಸುತ್ತುವ ಗ್ರಹ. ಶ್ರೀಕಾಂತನ ಜತೆ ಇದ್ದು, ಆತನ ವಿಚಾರಧಾರೆಯನ್ನು ಅರಗಿಸಿಕೊಂಡು ವಾಸ್ತವತೆಯನ್ನೂ ಅರಿಯದಷ್ಟು ಜಡತ್ವ ಏಕೆ ಪಡೆದುಕೊಂಡ ಎಂಬ ಪ್ರಶ್ನೆ ಅಪ್ರಸ್ತುತ . ಕಾಮಿನಿಯ ಬಗೆಗಿನ ಆತನ ಮೋಹ ಎಷ್ಟು ಕುರುಡಾಗಿತ್ತೆಂದರೆ ಆಕೆ ಇವನ ದೃಷ್ಟಿಯಲ್ಲಿ ಪಾತಾಳಕ್ಕಿಳಿದರೂ ಅವಳನ್ನು ಬಿಟ್ಟಿರಲಾಗದ ಸ್ಥಿತಿ ತನ್ನದೆಂದು ಹಲುಬುವವರೆಗೆ. ಶ್ರೀಕಾಂತನನ್ನು ಕಾಮಿನಿಯನ್ನು ಬಿಟ್ಟು ಮುಂಬೈಗೆ ಬಂದ ಮೇಲೆ ಡಾಲಿಯ ಸಂಪರ್ಕ. ಸತ್ಯೇಂದ್ರನ ಸಹವಾಸದಲ್ಲಿ ಗೌರೀಶ ದೃಢವಾಗಿ ನಿಲ್ಲಲು ಸೋಲುತ್ತಾನೆ. ಆತ ಆಫ್ರಿಕೆಗೆ ಹೊರಡಲು ೨೨ ದಿನಗಳಿವೆ ಎನ್ನುವಾಗ ಶ್ರೀಕಾಂತನ ದಿನಚರಿ ಎದುರಿಗಿಟ್ಟುಕೊಂಡು ನಡೆಸುವ ಆತ್ಮಶೋಧನೆ ಆನುಷಂಗಿಕವಾಗಿ ಶ್ರೀಕಾಂತನ ವ್ಯಕ್ತಿತ್ವವನ್ನೂ ಕಾಮಿನಿಯ ಸ್ವಾತಂತ್ರ್ಯ ಉತ್ಕಟತೆಯನ್ನೂ ತೆರೆದು ತೋರುತ್ತದೆ. ಆದರೆ ಶ್ರೀಕಾಂತನ ಸಂಪರ್ಕಕ್ಕೆ ಬಂದ ಮೇಲೆ ತನ್ನದೇ ಆದ ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಳ್ಳಲು ಗೌರೀಶ ನಡೆಸುವ ಹೋರಾಟ ಶ್ರೀಕಾಂತ ಸತ್ತ ಮೇಲೂ ಕೊನೆಗೊಳ್ಳದಿರುವುದು ವಿಪರ್ಯಾಸ.

* * *

ವಿಪರ್ಯಾಸ ಏಕೆಂದರೆ ಶ್ರೀಕಾಂತನದು 'ವಿಚಾರ'ದ ಬದುಕು. ಎಲ್ಲ ಜ್ಞಾನವನ್ನೂ ತನ್ನದಾಗಿಸಿಕೊಳ್ಳಬೇಕೆಂಬ ತವಕ. ಟಿ.ಬಿ. ಯಿಂದ ಹಾಸಿಗೆಯಲ್ಲಿದ್ದಾಗಲೂ ಹೊಸ ಪುಸ್ತಕಗಳ ಚಿಂತೆ. ಜತೆಗೆ ನಂಬಿಕೊಂಡ ನಿರ್ದಿಷ್ಟ ಪಕ್ಷವೊಂದರ ಸಿದ್ಧಾಂತದ ಅನುಷ್ಠಾನದ ಯೋಚನೆ. ನರ್ಸ್ ಮೇರಿಯ ಸಂಸರ್ಗದಲ್ಲಿ ಮನಸ್ಸು ಹರಿಯಬಿಡುವ ಶ್ರೀಕಾಂತನಿಗೆ ರೋಹಿಣಿ ತಾನಾಗಿ ಮೇಲೆ ಬಿದ್ದು ಬಂದರೂ ಆದರಿಸಲಾಗದ ತಿರಸ್ಕಾರ.

ಗೌರೀಶನಿಗೆ ಶ್ರೀಕಾಂತ ಸ್ನೇಹಿತ, ದಾರ್ಶನಿಕ, ಮಾರ್ಗದರ್ಶಿ. ಶ್ರೀಕಾಂತನ ವಿಚಾರಗಳ ಬೆಳಕಿನಲ್ಲಿ ತನ್ನನ್ನು ವಿಶ್ಲೇಷಿಸಿಕೊಳ್ಳುವ ಗೌರೀಶನಿಗೆ ಶ್ರೀಕಾಂತನ ಆಕರ್ಷಣೆ ಎಷ್ಟೆಂದರೆ ತನ್ನ ಓದಿಗೂ ನಿರ್ಲಕ್ಷ್ಯ ತೋರಿಸುವಷ್ಟು. ಮೂರು ವರ್ಷಗಳ ನಿರಂತರ ಒಡನಾಟ, ನಂತರದ ತೊಳಲಾಟ. ಮುಂಬೈ ಬದುಕಿಗೆ ಬಂದ ಮೇಲೆ ಸಿಕ್ಕಿದ ತಾತ್ಕಾಲಿಕ ನೆಮ್ಮದಿ ನಂತರವೂ ಆಫ್ರಿಕೆಗೆ ಓಡಿಹೋಗುವ ದೌರ್ಬಲ್ಯ ಬಂದರೆ ಅದುವರೆಗಿನ ವಿಚಾರಮಂಥನಕ್ಕೆ ಯಾವ ಅರ್ಥವೂ ಬರುವುದಿಲ್ಲ. ಪಲಾಯನ ದೌರ್ಬಲ್ಯ ಅಲ್ಲದಿದ್ದರೆ ಮತ್ತೇನು ?

* * *

'ಮುಕ್ತಿ' ಹೊರಬಂದ ಕಾಲದಲ್ಲಿ ಸಾಹಿತ್ಯ ವಿದ್ಯಾರ್ಥಿಗಳಿಗೆ ಅದೊಂದು ಅನಧಿಕೃತ ಪಠ್ಯ. 'ಪ್ರಜ್ಞಾಪ್ರವಾಹತಂತ್ರ', 'ಅನುಭವದ ಪಾತಳಿ', 'ಆತ್ಮಶೋಧನೆ' ಮುಂತಾದ ಪದಗಳು ಬಾಯಲ್ಲಿ ಉದುರದಿದ್ದರೆ ಸಾಹಿತ್ಯ ವಿದ್ಯಾರ್ಥಿಯಾಗೇನು ಪ್ರಯೋಜನ ? ಇದೇ ಪ್ರವೃತ್ತಿಯು ಕಾರಣ 'ಮುಕ್ತಿ'ಯ ಬಗೆಗಿನ ಬರಹಗಳಲ್ಲಿ ಅತಿರಂಜನೆ. ಶುಷ್ಕ ಪಾಂಡಿತ್ಯ. ಕಾದಂಬರಿಯ ಪಾತ್ರಗಳಲ್ಲಿ ವಸ್ತುನಿಷ್ಠತೆ ಇಲ್ಲದಿದ್ದರೆ ವಿಮರ್ಶೆಯ ಬರಹಗಳಲ್ಲೂ ಅದಕ್ಕೆ ಹೊಂದಾಣಿಕೆ ಇರಲೇಬೇಕೆ ಎಂಬ ಪ್ರಶ್ನೆಗೂ ಅವಕಾಶ.

* * *

ಗೌರೀಶನಿಗೆ ಶ್ರೀಕಾಂತ ಗುರು. ಕಾಮಿನಿ ಸವಾಲು. ಮೊದಮೊದಲು ಸವಾಲು ಎದುರಿಸಲಾಗದ ದೌರ್ಬಲ್ಯ. ದೌರ್ಬಲ್ಯದ ಕ್ಷಣಗಳನ್ನು ದಾಟಿ ಕಾಮಿನಿಯನ್ನು ತಿರಸ್ಕಾರದಿಂದ ನೋಡಲಾರಂಭಿಸಿದ ಮೇಲೆ ಕಾಮಿನಿ ಶರಣಾಗಿ ಬರುವಂತಾದರೂ ಅಂತಿಮವಾಗಿ ವಿದಾಯ ಹೇಳುವ ಬಯಕೆ. ಶ್ರೀಕಾಂತನ ಹಿಡಿತ ತಪ್ಪಿಸಿಕೊಳ್ಳಲು ಮುಂಬೈಗೆ ಬರಬೇಕಾಗಿರಲಿಲ್ಲ. ಆದರೆ ಬಂದಮೇಲೆ ಪಾಲಿಯ ಸಂಪರ್ಕ ಮಾಡುವಷ್ಟು ಎದೆಗಾರಿಕೆ ಬೆಳೆಯಿತು, ಶ್ರೀಕಾಂತನ ಸಲಹೆ, ಉಪದೇಶ, ಬೆಂಬಲ ಇಲ್ಲದೆ. ಕಾಮಿನಿ ಒಮ್ಮೆ ತನ್ನನ್ನೇ ಅರ್ಪಿಸಿಕೊಳ್ಳಲು ಬಂದಾಗ ತಿರಸ್ಕರಿಸಿದ್ದಾಯಿತು. ಯಾವುದೋ ತಪ್ಪು ಮಾಡಿಸಿ ಸಿಕ್ಕಿಸಿಕೊಳ್ಳಲು ತಂತ್ರ ನಡೆಸಿದ್ದರಬೇಕು ಎಂದು ಶಂಕಿಸಿದ್ದೂ ಆಯಿತು, ಇಷ್ಟು ದೃಢತೆ ರೂಢಿಸಿಕೊಂಡ ಮೇಲೆ ಆಫ್ರಿಕೆಯ ಮೋಹಕ್ಕೆ ತುದಿಗಾಲ ಮೇಲೆ ನಿಂತದ್ದೇಕೆ ಎಂಬ ಪ್ರಶ್ನೆಯೂ ಏಳುತ್ತದೆ.

* * *

ಕಾದಂಬರಿಯುದ್ದಕ್ಕೂ ಗೌರೀಶನ ತೊಳಲಾಟವಿದೆ. ಬಿಡುಗಡೆಗಾಗಿ ಆತ ನಡೆಸುವ ಹೋರಾಟವಿದೆ. ವಾಸ್ತವವಾಗಿ ತೊಳಲಾಟದ ಕೊನೆ ಬೇಕಾಗಿರುವುದು ಕಾಮಿನಿಗೆ. ಕಾಮಿನಿ ರೂಪುಗೊಂಡ ನಿಟ್ಟಿನಲ್ಲಿ ನೋಡಿದರೆ ಸ್ವಚ್ಛಂದ ಪ್ರವೃತ್ತಿ ಬೆಳೆಸಿಕೊಂಡ ಹೆಣ್ಣು ಆಕೆ. ಸ್ವಾತಂತ್ರ್ಯದ ಸವಿಯನ್ನು ಸಂಪೂರ್ಣ ಅನುಭವಿಸುವ ಉತ್ಸಾಹ. ಗೌರೀಶ ಆರಾಧನೆಯ ಭಾವ ತೋರಿದಾಗ 'ನೀನು ಸ್ವಲ್ಪ ಬಲಿಷ್ಠನಾಗಿದ್ದಿದ್ದರೆ' ಎಂದು ಪ್ರಶ್ನಿಸುವಷ್ಟು ದೃಢತೆ ಆಕೆಯದು. ಆಕೆಯ ಬದುಕಿಗೆ ಅವಳೇ ನಿರ್ಧರಿಸಿಕೊಂಡ ನೆಲೆ ಅತ್ಯಗತ್ಯವಾಗಿದ್ದ ಸಮಯದಲ್ಲಿ 'ಗುಡ್‌ಬಾಯ್' ಹೇಳಲು ಗೌರೀಶ ನಿರ್ಧರಿಸಿದ್ದು ಅವನದೇ ದೌರ್ಬಲ್ಯದ ಇನ್ನೊಂದು ಮುಖವಷ್ಟೆ.

* * *

ಸ್ವತಂತ್ರ ನಿರ್ಧಾರಗಳೇ ಇಲ್ಲದೆ, ಬೇರೆಯವರ ವಿಚಾರಗಳ ಹಿನ್ನೆಲೆಯಲ್ಲಿ ತನ್ನನ್ನು ರೂಪಿಸಿಕೊಳ್ಳುತ್ತಿದ್ದ ಗೌರೀಶನ ಮೊದಲ ಸ್ವತಂತ್ರ ನಿರ್ಧಾರ ಶ್ರೀಕಾಂತನ ಪರಿವಲಯದಿಂದ ದೂರಾಗಿ ಮುಂಬೈಗೆ ಬಂದದ್ದು. ಇದು ಬಿಡುಗಡೆಯ ಮೊದಲ

ಹೆಜ್ಜೆ. ಅಲ್ಲಿ ಪ್ರೀತಿಯಲ್ಲೂ ತಾಯ್ತನ ತೋರಿದ ಡಾಲಿಯ ನಿಕಟ ಸ್ನೇಹ ಬೆಳೆಸಿದ್ದು ಎರಡನೇ ಹೆಜ್ಜೆ. ಗೌರೀಶ ಇನ್ನೇನು ಸ್ವತಂತ್ರನಾಗುತ್ತಾನೆ. ದೃಢ ವಾಗುತ್ತಿದ್ದಾನೆ ಅನ್ನುವಾಗ ಮತ್ತೆ ಹಣಕಿ ಹಾಕುತ್ತದೆ ಆಫ್ರಿಕೆ (ಅಂಧಕಾರದ ಸಂಕೇತ ?). ಅಲ್ಲಿಗೆ ಪರಾರಿಯಾಗಿ ಹೋಗುವಂಥ ನೋವಿನ ಸಂಕಟಗಳನ್ನೆಲ್ಲ ದಾಟಿದ ಮೇಲೂ ಭೂತವನ್ನು ಬಡಿದೆಬ್ಬಿಸುವ ದೌರ್ಬಲ್ಯ ಅತಿ ಎಂದೇ ತೋರುತ್ತದೆ. ಎಲ್ಲ ನಿರ್ಧರಿಸಿದ ಮೇಲೆ ಡಾಲಿಯ ಸಂಪರ್ಕದಿಂದಲೇ ತನಗೆ ಮುಕ್ತಿ ಸಾಧ್ಯ ಎಂದು ತೀರ್ಮಾನಿಸುವುದು ಅತಿರೇಕವೂ ಆಗಿ ಅದುವರೆಗಿನ ತೊಳಲಾಟಗಳನ್ನೆಲ್ಲ ನಿರರ್ಥಕ ಗೊಳಿಸುತ್ತದೆ.

*　　　*　　　*

'ಮುಕ್ತಿ'ಯ ಹೊಸತನ ಅದರ ನಿರೂಪಣಾ ವಿಧಾನದಲ್ಲಿದೆ. ವಸ್ತುವಿನಲ್ಲಿಲ್ಲ. ೨೨ ದಿನಗಳ ಅವಧಿಯ ಆತ್ಮಶೋಧನೆಯ ಅವಧಿಯಲ್ಲಿ ಸತ್ಯೇಂದ್ರ, ಡಾಲಿಯರು ಗೌರೀಶನ ಎದುರು ಪ್ರಕಟವಾಗಿ ಹಾದು ಹೋಗುತ್ತಾರೆ. ಶ್ರೀಕಾಂತ ತನ್ನ ದಿನಚರಿಯ ಮೂಲಕ ಆ ೨೨ ದಿನಗಳ ಕಾಲವೂ ಗೌರೀಶನ ತಲೆಯಿಂದ ದೂರವಾಗುವುದಿಲ್ಲ. (ಕೊನೆಯ ಕ್ಷಣಗಳಲ್ಲಿ ಭೇಟಿಯಾಗುವ ಕಾಮಿನಿ ಆ ವೇಳೆಗಾಗಲೇ ತನ್ನ ಸ್ವಚ್ಛಂದ ಬದುಕಿನ ಪರಿಣಾಮ ಅರಿತಿದ್ದು ಮುಕ್ತಿಗಾಗಿ ಗೌರೀಶನಲ್ಲಿ ಮೊರೆ ಇಡುವಷ್ಟು 'ಪಕ್ವ' ವಾಗಿರುತ್ತಾಳೆ). ದುರ್ಬಲ ಪಾತ್ರವೊಂದನ್ನು ಹಂತ ಹಂತವಾಗಿ ಪೋಷಿಸಿಕೊಂಡು ಬರುವಾಗ ಅನುಸರಿಸಿದ ನಿರೂಪಣೆ ರೀತಿ ಕಲಾತ್ಮಕವಾಗಿದೆ. (ಪಾತ್ರ ಬೆಳವಣಿಗೆ ಯಲ್ಲಿ ತಾರ್ಕಿಕ ತೀರ್ಮಾನ ಸಾಧ್ಯವಾಗದು ಎಂಬ ಅಪವಾದ ಕೂಡ ಇದೆ). ಇದೇ ಕಾರಣದಿಂದ ಸಾಹಿತ್ಯ ವಿದ್ಯಾರ್ಥಿಗಳಿಗೆ, ಅಕಡೆಮಿಕ್ ವಲಯಕ್ಕೆ ಹೊರತಾದ ವ್ಯಾಪ್ತಿ 'ಮುಕ್ತಿ' ಕಾದಂಬರಿಗೆ ಸಿಗಲಾರದೆಂದೇ ಸಮ್ಯವಾಗಿ ಸೂಚಿಸಬಹುದಾಗಿದೆ. ಚಿತ್ರ ಕ್ಕಿಂತ ಚೌಕಟ್ಟು ಎದ್ದುಕಾಣುವ ಕೃತಿಗೆ ಮುಕ್ತಿಯೆಂದು ನಿದರ್ಶನವಾಗಿಯೂ ತೋರುತ್ತದೆ.

'ಕರಾವಳಿ' : ಒಂದು ಸಮೀಕ್ಷೆ

ಗಂಗಾಧರ ಮೊದಲಿಯಾರ್

ಸಾಮಾನ್ಯವಾಗಿ ವಿಶಿಷ್ಟಪಂಗಡವೊಂದರ ಚಿತ್ರಣ ವೊಂದನ್ನು ಕಾಣುವಾಗ ಅದರ ಎಲ್ಲ ವೈಶಿಷ್ಟ್ಯ ಗಳೊಂದಿಗೆ ಆ ವಲಯದ ಸಾಮಾಜಿಕ ಸ್ಥಿತಿಗತಿಗಳನ್ನೂ ಅಧ್ಯಯನ ಮಾಡುತ್ತೇವೆ. ಇಲ್ಲಿ ಲೇಖಕ ಆ ಸಂದರ್ಭ ವನ್ನು ತನ್ನೂಲಕ ಹೇಗೆ ಸಂಪಾದಿಸಿದ್ದಾನೆಂಬುದೂ ಇಡಿಯಾಗಿ ಆ ಪರಿಸರ ಇತರ ಪಂಗಡಗಳೊಂದಿಗಿನ ಶೌಲನೀಕರಣದಲ್ಲಿ ಹೇಗೆ ತನ್ನನ್ನು ತಾನು ಬಿಚ್ಚಿಕೊಂಡಿದೆ ಎಂಬುದೂ ಮುಖ್ಯವಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರ ಕತೆ ಹೇಳುವ ವಿಶುಕುಮಾರ್ ಬರೆದ ಕಾದಂಬರಿ 'ಕರಾವಳಿ' ಈ ಹಿನ್ನೆಲೆಯಲ್ಲಿ ಕೆಲವು ಪ್ರಶ್ನೆ ಗಳನ್ನು ಮುಂದಿಡುತ್ತದೆ. ಸಂಜೀವನ ಮೂಲಕ ನಾವು ಕಾಣುವ ಮೊಗವೀರರ ಚಿತ್ರ, ಹಸನಬ್ಬ–ಪದ್ಮಳ ಮೂಲಕ ಕಾಣುವ ಅಲ್ಲಿನ ಸಮಾಜದ ಜೊತೆಗೆ ಕಾದಂಬರಿ ಕಾರರೂ ನಿಂತು ನೀಡುವ ವಿವರ–ಈ ಮೂರು ದಿಕ್ಕಿನಲ್ಲಿ ಪ್ರವಹಿಸಿರುವ ಕಾದಂಬರಿಯ ಸೂತ್ರದ ಹಿಂದೆ ಕೆದಕಿ ದಷ್ಟು ಬೆಳೆಯುತ್ತಾ ಹೋಗುವ ಗಾಢ ಅನುಭವವನ್ನು ಹೇಳುವ ಕಾತುರವಿರುವುದನ್ನು ಕಾಣಬಹುದು. ಅಲ್ಲದೆ, ಈ ಮೂರೂ ಅಂಶಗಳು ಎಲ್ಲೂ ಒಂದನ್ನೊಂದು ಸಂಧಿಸದೆ ಹೋಗುವುದರಿಂದ ಈ ದಟ್ಟವಾದ ಅನುಭವ

ಕೇವಲ ಅನುಭವದ ಮಟ್ಟದಲ್ಲಿ ಸಾಂದ್ರೀಕೃತಗೊಂಡು ಕೇಂದ್ರಬಿಂದುವಿನ ಉದ್ದೇಶಕ್ಕೆ ಧಕ್ಕೆ ತಂದಿದೆಯೇನೋ ಎಂಬ ಅನುಮಾನಕೂಡ ಕಾಡದೆ ಬಿಡದು. ಕರಾವಳಿಯ ಉದ್ದಕ್ಕೂ ವಾಸಿಸುವ ಬೆಸ್ತರ (ಮೊಗವೀರ) ವ್ಯಾಪಕತೆಯನ್ನು ಸೀಮಿತಗೊಳಿಸಿ ಕೊಂಡು "ದಕ್ಷಿಣ ಕನ್ನಡ ಜಿಲ್ಲೆಯ ಮೊಗವೀರರು ಯಾವ ಕಾಲಕ್ಕೂ ಇತರ ಬೆಸ್ತರಿ ಗಿಂತ ತುಂಬ ಮುಂದುವರಿದವರು. ಅಥವಾ ತುಂಬಾ ವೈವಿಧ್ಯವುಳ್ಳವರು. ಅವರ ನಡೆನುಡಿಗಳಿಂದ ಹಿಡಿದು ವೇಷಭೂಷಣಗಳಲ್ಲೂ ವೈವಿಧ್ಯವೇ"ಎಂದು ಕಾದಂಬರಿ ಕಾರರು ಕಾದಂಬರಿಯೊಳಗೆ ತಮ್ಮನ್ನು ತಾವು ಪರಿಚಯಿಸಿಕೊಳ್ಳುತ್ತಾರೆ. ಆದರೆ ಈ ಪೀಠಿಕೆ ಹೇಳಿದ ಹಾದಿಯನ್ನು ಬಿಟ್ಟು ಕತೆ ತನ್ನದೇ ಹಾದಿ ಹಿಡಿದ ಹಾಗೆ ಭಾಸವಾಗು ತ್ತದೆ. ಏಕೆಂದರೆ ಇವರ ದಿನನಿತ್ಯದ ಬದುಕಿನೊಳಗೆ, ಸಾಮಾಜಿಕ ಅಂಶಗಳ ನಡುವೆ ಬೆರೆತ ಇತರ ಸಂಸ್ಕೃತಿಯ ಬೀಜ ಹಾಗೂ ಬೇರು ಕತೆಯ ಮುಖ್ಯ ಆಶಯವಾಗಿದೆ. ಆ ನಿಟ್ಟಿನಲ್ಲಿ ಇಡೀ ಘಟನೆ ಪ್ರವಹಿಸುವುದರಿಂದ, ಆ ಮುಗ್ಧ ಸಮಾಜ ಬೆಚ್ಚಿ ಬೀಳುವ ಘಟನೆಯೊಂದಕ್ಕೆ ಹೆಚ್ಚಿನ ಒತ್ತು ಸಿಕ್ಕಿದೆ. ಇಡೀ ಸಮಾಜದ ಆಗು ಹೋಗಿನಲ್ಲಿ ಮುಖ್ಯವಾಗಿ ಘಟಿಸುವ ಪ್ರಸಂಗ ಇಡೀ ಕಾದಂಬರಿಯನ್ನು ಸುತ್ತುವರಿದು, ಗಾಢವಾಗಿ ಕಾಡುವ ಸಮಸ್ಯೆಯಾಗಿ ಹೋಗುವುದರಿಂದ ಸಂಜೀವನ ಕತೆ ಒಟ್ಟು ಬಂಧದಿಂದ ಹೊರಗುಳಿಯುತ್ತದೆ.

ತನ್ನ ಇತರ ಎಲ್ಲ ಕಾದಂಬರಿಗಳಿಗಿಂತ ತನಗೆ ಸಮೀಪದ ವಸ್ತುವನ್ನಾಯ್ದು ಕೊಂಡಿರುವ ವಿಶುಕುಮಾರ್ 'ಕರಾವಳಿ' ಮೂಲಕವೇ ಹೆಚ್ಚು ಜನಪ್ರಿಯರಾದರು. ೧೯೬೬ರಲ್ಲಿ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಹರಿಯುವಾಗಲೇ ಒಂದು ಪಂಗಡದ ಪ್ರತಿಭಟನೆಗೆ ಈ ಕಾದಂಬರಿ ತುತ್ತಾಯಿತು. "ಕೋಮುಗಲಭೆಗೆ ಅವಕಾಶ ಕೊಡುವುದು ಬೇಡವೆಂದು ಧಾರಾವಾಹಿಯನ್ನು ನಾನೇ ನಿಲ್ಲಿಸಿದೆ" ಎಂದು ಕಾದಂಬರಿಯ ಮುನ್ನುಡಿಯಲ್ಲಿ ವಿಶುಕುಮಾರ್ ಹೇಳಿಕೊಂಡಿದ್ದಾರೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ವರ್ಗವನ್ನು ಕೆರಳಿಸುವಂತದ್ದಾಗಿದ್ದ ಸಮಸ್ಯೆ ಇತ್ತೀಚಿನ ದಿನ ಗಳಲ್ಲಿ ಜಟಿಲತೆಯನ್ನು ಕಳೆದುಕೊಂಡು ಸಾಮಾನ್ಯಘಟನೆಯ ಹಂತಕ್ಕೆ ಬಂದು ನಿಂತಿರ ಬಹುದಾದರೂ ಒಂದು ವರ್ಗದ ಮಾನಸಿಕ ಹಾಗೂ ಸಾಮಾಜಿಕ ಸಂಘರ್ಷವನ್ನು ದಾಖಲಿಸಿರುವ ದೃಷ್ಟಿಯಿಂದ ಕಾದಂಬರಿಯನ್ನು ಮುಖ್ಯವಾಗಿ ಪರಿಗಣಿಸಬೇಕಾಗು ತ್ತದೆ. "ಬೆಸ್ತರ ಸ್ತ್ರೀಯರು ಮೀನು ವ್ಯಾಪಾರ ಮಾಡುವಾಗ ಮಾಪ್ಳೆಗಳೊಂದಿಗೆ ವ್ಯವಹರಿಸುವುದೂ ಹರಟೆ ಹೊಡೆಯುವುದೂ ಸಹಜ ವಿಷಯ. ಆದರೆ ಸರಸವು ವಿಪರೀತವಾಗಿ ಹೆಣ್ಣು–ಗಂಡಿನ ಆಕರ್ಷಣೆಗೆ ಇಳಿದಾಗ ವಿರಸವಾಗಿರುವುದೆಷ್ಟೋ ಸಾರಿ" ಎಂದು ಪೀಠಿಕೆ ಹಾಕಿ ಕತೆ ಆರಂಭಿಸುವ ಕಾದಂಬರಿಕಾರರು ಮಮ್ಮದೆಬ್ಯಾರಿಯ ಜೊತೆ ಸೇವಕನಾಗಿ ಕೆಲಸ ಆರಂಭಿಸಿದ ಹಸನಬ್ಬ, ಮೀನು ಮಾರಲು ಬರುವ ಬೆಡಗು ಗಾತಿ ಪದ್ಮಳ ಆಕರ್ಷಣೆಗೆ ಒಳಗಾಗುವುದರೊಂದಿಗೆ ಘಟನೆಯನ್ನು ವಿವರಿಸಲಾರಂಭಿ ಸುತ್ತಾರೆ. "ಗೋಷೆಯ ಒಳಗಿರುವ ಎಷ್ಟೋ ಹೆಂಗಸರ ಸೌಂದರ್ಯವನ್ನು ಹಸನ್

ಮೆಚ್ಚಿರಲಿಲ್ಲ. ತನ್ನನ್ನು ಇಷ್ಟು ದಿನಗಳಿಂದ ಮರಳು ಮಾಡಿದ್ದ ಪದ್ಮಳ ಸೌಂದರ್ಯವನ್ನು ಹೇಗೆ ಹೀರಬಹುದೆಂದು ಅವನ ಮಿದುಳು ಉರುಳಾಡುತ್ತಿತ್ತು. ಯಾವ ವಿಧದಿಂದ ಪದ್ಮಳನ್ನು ಇನ್ನೂ ಇನ್ನೂ ಆಕರ್ಷಿಸಬಹುದೆಂದು ಆತ ತೀವ್ರವಾಗಿ ಚಿಂತಿಸುತ್ತಾ ಪುನಃ ಮಾರ್ಕೆಟಿಗೆ ಬಂದ..." (ಪುಟ ೩೫) ಎನ್ನುವಾಗಲಾಗಲಿ, ಪದ್ಮಳ: "ಎಲ, ಎಷ್ಟು ಸೊಗಸಾಗಿದ್ದಾನೆ. ಯಾರೂ ಹೇಳಲಿಕ್ಕಿಲ್ಲ ಇವನು ಮೀನು ಕೆಲಸದ ಮಾಪ್ಳೆಯರ ಹುಡುಗ ಎಂದು..." (ಪುಟ ೩೫). ಎಂಬ ಹಸನಬ್ಬನ ಬಗೆಗಿನ ಮೆಚ್ಚುಗೆಯ ಮಾತಾಗಲಿ, ಇವರಿಬ್ಬರ ಪರಸ್ಪರ ಆಕರ್ಷಣೆಯನ್ನು ಸೂಚಿಸುತ್ತದೆ. ಕತೆ ಬೆಳೆದಂತೆ ಹಸನಬ್ಬ ಲೇಖಕರ ಕೈಯಲ್ಲಿ ಉದಾತ್ತನಾಗುತ್ತಾ ಹೋಗುತ್ತಾನೆ. ಪದ್ಮ ಮರುಕ ತೋರುವ ಪಾತ್ರವಾಗಷ್ಟೇ ಉಳಿದುಕೊಳ್ಳುತ್ತಾಳೆ. ಇವರ ಜೀವನದಲ್ಲಿ ಘಟಿಸುವ ಎಲ್ಲ ಪ್ರಸಂಗಗಳನ್ನೂ ಸಮಾಜ ತಪ್ಪಾಗಿ ಕಲ್ಪಿಸಿತು ಎಂಬ ಕಾದಂಬರಿಕಾರರ ನಿಲುವಿಗೆ ಆರಂಭದ ಈ ಅಂಶಗಳು ಅಡ್ಡಿ ತರುತ್ತವೆ. ದ್ವಂದ್ವದಲ್ಲೇ ಸಾಗುವ ಈ ಎರಡೂ ಪಾತ್ರಗಳ ಪೋಷಣೆಯಲ್ಲಿ ಸಾಕಷ್ಟು ಬಿರುಕುಗಳಿರುವುದರಿಂದ ಪದ್ಮ ಮತಾಂತರಗೊಳ್ಳುವುದಕ್ಕಾಗಲಿ, ಹಸನಬ್ಬನ ಏರುಪೇರುಗಳಿಗಾಗಲಿ ಸಾಕಷ್ಟು ಪುಷ್ಟಿ ಸಿಗದೆ ಸೊರಗುತ್ತದೆ. ತನಗೇ ತಿಳಿಯದೆ ಹಸನಬ್ಬನಿಗೆ ಮಾರು ಹೋಗಿದ್ದ ಪದ್ಮ ಮುಂದೆ ಪೈಲ್ವಾನ್ ಪುರಂದರನನ್ನು ಕಂಡಕೂಡಲೇ ಮರುಳಾಗುತ್ತಾಳೆ. ಅವಳ ಆಲೋಚನೆಯ ಧಾಟಿ: "ಈಗ ತಂದೆ ನೋಡಿರುವ ವರನೇನೂ ಸಾಮಾನ್ಯನಲ್ಲ. ಹಸನಬ್ಬನ ವ್ಯಕ್ತಿತ್ವಕ್ಕಿಂತಲೂ ಪೈಲ್ವಾನ್ ಪುರಂದರನ ವ್ಯಕ್ತಿತ್ವ ಹಿರಿದು. ಕರಾವಳಿಯ ಮೊಗವೀರ ಕುಲದಲ್ಲೇ ಅವನಿಗೊಂದು ಹಿರಿಯ ಸ್ಥಾನವಿದೆ. ಅದಕ್ಕಾಗಿ ಮುಸಲ್ಮಾನ ಮತದ ತರುಣನೊಬ್ಬನ ಬಗೆಗೆ ಕನಸು ಕಾಣುವುದಕ್ಕಿಂತಲೂ ತನ್ನ ಜಾತಿಯ ಒಬ್ಬ ವೀರಾಧಿವೀರನನ್ನು ವರಿಸುವುದೇ ಸುಖಕರ ..." ಹೀಗೆ ಸಾಗುತ್ತದೆ. ಪದ್ಮಳ ಪಾತ್ರ ಈ ದ್ವಂದ್ವದಲ್ಲಿ ಸಿಲುಕಿಕೊಳ್ಳುವುದರಿಂದ ವ್ಯಕ್ತಿತ್ವ ನ್ಯಾಯ ಒದಗಿಸಿದಂತಾಗುವುದಿಲ್ಲ. ಐದ್ರೋಸುಬ್ಯಾರಿಯ ಕೋಣೆಗೆ ಪದ್ಮ ಪದೇ ಪದೇ ಹೋಗುವುದು, ಹಸನಬ್ಬನ ವ್ಯಾಪಾರಕ್ಕಾಗಿ ತನ್ನ ಒಡವೆಗಳನ್ನೆಲ್ಲಾ ಕೊಡುವುದು ಆಕರ್ಷಣೆ ಮಾತ್ರವಲ್ಲದೆ, ಇನ್ನಾವ ಕಾರಣವನ್ನೂ ಹೊಂದಿರುವುದಿಲ್ಲ. ಈ ನಡುವೆ ಪೈಲ್ವಾನ್ ಪುರಂದರನ ಬಗ್ಗೆ ಮೆಚ್ಚುಗೆ, ಅವನನ್ನು ಮದುವೆಯಾಗಲು ಬಯಸುವ ಪದ್ಮಳ ನಿರ್ಧಾರ ಕೂಡ ಬಲವಾದ ಕಾರಣವೇನನ್ನೂ ಹೊಂದಿದಂತಿಲ್ಲ. ಇವೆರಡೂ ಪ್ರಸಂಗಗಳಲ್ಲಿ ಸ್ತ್ರೀಸಹಜ ಆಕರ್ಷಣೆಗೆ ಪದ್ಮ ತುತ್ತಾಗಿರುತ್ತಾಳೆ. ಪುರಂದರನನ್ನು ಕಂಡ ಮೇಲೆ ಮಾತ್ರ ಹಸನಬ್ಬ ಒಬ್ಬ ಮುಸಲ್ಮಾನ ಎನ್ನುವ ಆಲೋಚನೆ ಅವಳ ಮನದಲ್ಲಿ ಸುಳಿದಾಡಲಾರಂಭಿಸುತ್ತದೆ. ಅದುವರೆಗೆ ಇತರ ಮೀನುಗಾರ್ತಿಯರು ಮುಸಲ್ಮಾನನೊಂದಿಗೆ ಸಂಬಂಧ ಇಟ್ಟುಕೊಂಡಿದ್ದಾಳೆ ಎಂದು ಆರೋಪಿಸುತ್ತಾ ಗದ್ದಲವೆಬ್ಬಿಸಿದಾಗ ಕೂಡ ಅದು ಅವಳಿಗೊಂದು ಗಂಭೀರವಾಗಿ ಪರಿಗಣಿಸಲಾಗದ ಸಂಗತಿಯಾಗಿರುತ್ತದೆ.

ಹೀಗಾಗಿ ಪದ್ಮ ತನ್ನ ಜಾತಿಯ ಮೇಲೆ ದ್ವೇಷ ಸಾಧನೆ ಮಾಡುವ ಸಲುವಾಗಿಯೇ ಮತಾಂತರಗೊಳ್ಳುವ ನಿರ್ಧಾರ ಕೈಗೊಳ್ಳುವುದು ಎಷ್ಟೇ ಕ್ರಾಂತಿಕಾರಿ ಅನಿಸಿದರೂ ಕಾದಂಬರಿಯ ಸಂದರ್ಭದಲ್ಲಿ ಅದು ತಾನಾಗಿಯೇ ಮೂಡಿ ಬಂದ ಧ್ವನಿಯಾಗಿ ಕಾಣುವುದಿಲ್ಲ. ಪದ್ಮಳ ತಾಯಿ, ಗಂಡನ ಉಗ್ರಾವತಾರಕ್ಕೆ ಹೆದರಿ ನಡುದಾರಿಯಲ್ಲಿ ಮಗಳನ್ನು ನಿಲ್ಲಿಸಿ "ಇಂದು ರಾತ್ರಿ ನೀನು ಮನೆಗೆ ಬರಬೇಡ, ಎಲ್ಲಾದರೂ ಇರು" ಎಂದು ಬೇಡಿಕೊಳ್ಳುವ ಘಟನೆ ಕುಟುಂಬದ ಸೀಳು ಸಂಬಂಧವನ್ನು ಬಹಿರಂಗಪಡಿಸುವುದರೊಂದಿಗೇ, ಇದುವರೆಗೆ ಪದ್ಮಳ ವ್ಯಕ್ತಿತ್ವವನ್ನು ಕುಟುಂಬ ಪರಿಸರದಲ್ಲಿ ಚಿತ್ರಿಸದ ನೆಪವನ್ನೂ ಮಾಡಿಕೊಡುತ್ತದೆ. ಕುಟುಂಬ, ಸಮಾಜ ಕೈಬಿಟ್ಟಾಗ ಸಹಜವಾಗಿಯೇ ಪದ್ಮ ಹಸನಬ್ಬನ ಬಳಿಗೆ ಓಡುವುದೂ "ಸಮಾಜ ನನಗೆ ಬಹಿಷ್ಕಾರ ಮಾಡುವ ಮೊದಲೇ ತಾನೇ ಸಮಾಜವನ್ನು ಬಹಿಷ್ಕರಿಸಿದರೆ ಹೇಗೆ?" ಎಂಬ ಆಲೋಚನೆಗಿಳಿಯುವುದೂ ಕಥಾಬಿಂದುವನ್ನು ಪ್ರತಿಷ್ಠಾಪಿಸುವುದರತ್ತಲಿನ ಅವಸರದ ಕ್ರಿಯೆ ಎನ್ನಬಹುದು. ಏಕೆಂದರೆ ಪದ್ಮ ಎಷ್ಟು ಬೇಗ ಪಾತುಮಳಾದಳೋ ಅವಳ ಜೀವನದ ಇತರ ಘಟನೆಗಳೂ ಅಷ್ಟೇ ವೇಗವಾಗಿ ಸಿನಿಮೀಯ ಘಟನೆಗಳ ಹಾಗೆ ಒಂದಕ್ಕೊಂದು ತೇಪೆ ಹಾಕಿಕೊಳ್ಳುತ್ತಾ ದುರಂತದಲ್ಲಿ ಪರ್ಯಾವಸಾನಗೊಳ್ಳುತ್ತದೆ. ಈ ಘಟನೆಯನ್ನು ಬೆಳೆಸುವಾಗ ಉದ್ವೇಗದ ಬರವಣಿಗೆಯನ್ನು ಕಾಣುತ್ತೇವೆ. ಮೊಗವೀರರ ಹೆಣ್ಣುಗಳ ಹೀನಾಯಸ್ಥಿತಿ, ಬಡತನದ ಪರಿಸ್ಥಿತಿ, ಮಾಪ್ಳೆಗಳ ಮೇಲೆ ಬೆಸ್ತರು ಸೇಡು ತೀರಿಸಿಕೊಂಡ ನಂತರದ ಉದ್ರಿಕ್ತಪರಿಸ್ಥಿತಿ – ಅದರ ಘೋರ ಪರಿಣಾಮ ಎಲ್ಲವನ್ನೂ ವಿವರಿಸುವಾಗ ಮೇಲಿಂದಮೇಲೆ ಕಳಕಳಿ ತೋರ್ಪಡಿಸಿಕೊಳ್ಳುವ ವಿಶುಕುಮಾರರ ಯತ್ನ ಸ್ಪಷ್ಟವಾಗಿದೆ. ನಡು ನಡುವೆ ದಿಢೀರನೆ ನುಗ್ಗುವ ಈ ಪ್ರವೃತ್ತಿಯಿಂದಾಗಿ ಕಥಾಓಘ ಎಲ್ಲೋ ಒಂದೆಡೆ ಮುಗ್ಗರಿಸಿದ ಅನುಭವವೂ ಆಗುತ್ತದೆ. ಪದ್ಮಳ ಜೀವನವನ್ನು ಒಂದು ಘಟ್ಟ ಮುಟ್ಟಿಸುವ ಆತುರದಲ್ಲಿ ಇದನ್ನು ನಾವು ಗುರುತಿಸಬಹುದು. ಪುರಂದರ ಕೊನೆಯಲ್ಲಿ ಪದ್ಮಳ ಸಹಾಯಕ್ಕೆ ಬರುವ, ಅವಳ ಬಗ್ಗೆ ಮರುಕ ತೋರುವ ಪ್ರಸಂಗ ಕೂಡ ಇದೇ ಪ್ರಕ್ರಿಯೆಗೆ ಒಳಗಾಗಿದೆ.

ಸಂಜೀವ ಸುವರ್ಣನ ಬಾಳಿನ ಕಥೆಯನ್ನು ಹೇಳುವಾಗಿನ ಸಂಯಮವನ್ನು ಪದ್ಮ ಹಸನಬ್ಬರ ಕತೆಯ ಸಂದರ್ಭದಲ್ಲಿ ಕಾಣಲಾಗುವುದಿಲ್ಲ. ದಿನವಿಡೀ ಸಮುದ್ರದ ಉಪ್ಪುನೀರಿನಲ್ಲಿ ದುಡಿಯುತ್ತಾ, ಉರಿಯುವ ಸೂರ್ಯನ ಮುಂದೆ ಮೈಯೊಡ್ಡಿ ದುಡಿಯುವ ಬೆಸ್ತರ ನಡುವೆ ತುಡಿಯುವ ಹೃದಯದ ಸಂಜೀವಸುವರ್ಣ ಸಾಮಾಜಿಕ ಸ್ಥಾನಮಾನಗಳ ತುಳಿತದಿಂದ ನುಜ್ಜು ಗುಜ್ಜಾಗುವುದು. ಈ ಸಮಾಜದ ಪ್ರತಿಷ್ಠೆಗಳಿಂದ ಹೊರಬರಲು ಯತ್ನಿಸುವುದು ತಾಕಲಾಟಗಳ ಮೂಲಕ ಸಾಗುತ್ತವೆ. ಮುಂಬಯಿಯಲ್ಲಿನ ಅವನ ಬೆಳವಣಿಗೆ ಆಶೋತ್ತರಗಳ ಸಾಂಕೇತಿಕ ಚಿತ್ರಣದಂತೆ ಕಂಡು ಬರುತ್ತದೆ. ದುಃಖವನ್ನು ಮನದಲ್ಲೇ ಅದುಮಿಟ್ಟುಕೊಂಡು ಉದ್ದಕ್ಕೂ ನರಳುವ

ಹಂಸ, ಸೋಮಕ್ಕ, ಐತಕ್ಕ, ಪದ್ಮ ಎಲ್ಲ ಪಾತ್ರಗಳ ಮೂಲಕ ಆ ಸಮಾಜದ ವಿಭಿನ್ನ ಸ್ತರಗಳನ್ನು ಪರಿಚಯಿಸುವ ಯತ್ನದಲ್ಲಿ ಕಾದಂಬರಿಕಾರರು ಗೆದ್ದಿದ್ದಾರೆ.

ಹಂಸಳಿಗಾಗಿಯೇ ಊರುಬಿಟ್ಟ ಸಂಜೀವಸುವರ್ಣ ಹಂಸಳಿಂದಲೇ ಮತ್ತೆ ಜೀವನದ ಬಿಕ್ಕಟ್ಟನ್ನೂ ಎದುರಿಸುವುದು ಕಾದಂಬರಿಯ ಅರ್ಥವತ್ತಾದ ಘಟನೆಯಾಗಿದೆ. ಕಾದಂಬರಿಯು ಉದ್ದಕ್ಕೂ ಸಮಾಜದ ಬೇರಿನಿಂದಲೇ ಹುಟ್ಟುವ ಸಮಸ್ಯೆ ಅದು ಬಾಳಿನಲ್ಲಿ ತರುವ ದ್ವಂದ್ವವನ್ನೇ ಪ್ರಧಾನ ಎಳೆಯನ್ನಾಗಿ ಹೊಂದಿರುವ ಕಾದಂಬರಿ ಪದ್ಮ–ಹಸನಬ್ಬರ ಬಾಳನ್ನೂ ಕದಡಿದಂತೆಯೇ ಸಂಜೀವ ಹಾಗೂ ಹಂಸಳ ಬಾಳಿನಲ್ಲೂ ಭಾವನೆಯ ತಾಕಲಾಟವನ್ನು ಸೃಷ್ಟಿಸುತ್ತದೆ. ಹಸನಬ್ಬ ಸತ್ತಮೇಲೆ ಪದ್ಮಳ ಬಗ್ಗೆ ಪುರಂದರ ಪಶ್ಚಾತ್ತಾಪದ ಭಾವನೆ ಹಾಗೂ ಕನಿಕರ ತೋರುವುದೂ ಕೂಡ ಪುರಂದರ ಬಾಳಿನ ನೆಮ್ಮದಿ ಕದಡಿಕೊಂಡುದರ ಸೂಚನೆಯಾಗುತ್ತದೆ. ಸಂಜೀವ ಮುಂಬಯಿಯಲ್ಲಿ ಮತ್ತೊಂದು ಹುಡುಗಿಯನ್ನು ಮದುವೆಯಾಗುವ ಹಂತದಲ್ಲಿದ್ದಾಗ ಹಂಸಳ ಪ್ರವೇಶ ಕಹಿಘಟನೆ ಹಾಗೂ ಹಂಸಳ ಉದಾತ್ತತ್ಯಾಗ ಕೂಡ ಮತ್ತೆ ಸಂಜೀವನನ್ನು ಜೀವನದ ಬಿಕ್ಕಟ್ಟಿಗೆ ಒಳಪಡಿಸುತ್ತದೆ. ಎಲ್ಲರೂ ಹೊರಟುಹೋಗಿ ಸಮಸ್ಯೆ ಸರಳೀಕೃತವಾದ ಮೇಲೂ ಸಂಜೀವ ತಲೆನೋವು ಸಹಿಸಲಾಗದೆ ಮೇಜಿನ ಹಲಿಗೆಗೆ ಹಣೆ ಜಜ್ಜಿಕೊಳ್ಳುವ ಕ್ರಿಯೆಯೊಂದಿಗಿನ ಕಾದಂಬರಿಯ ಮುಕ್ತಾಯ ಅರ್ಥವಂತಿಕೆ ಪಡೆದುಕೊಳ್ಳುವುದು ಇಲ್ಲಿಯೇ.

ಜಿ. ಆರ್. ತಿಪ್ಪೇಸ್ವಾಮಿ ಅವರ 'ಅಗ್ನಿಸಾಕ್ಷಿ'

ರಮಜಾನ ದರ್ಗಾ

'ಅಗ್ನಿಸಾಕ್ಷಿ'ಯ ಮುನ್ನುಡಿಯಲ್ಲಿ ಶ್ರೀ ಬರಗೂರು ರಾಮಚಂದ್ರಪ್ಪ ಅವರು ಹೇಳಿದಂತೆ; ವಿವಿಧ ಕವನಗಳಿಂದ ಕೂಡಿದ ಈ ಸಂಕಲನದಲ್ಲಿ ಬಂಡಾಯ ಸ್ಥಾಯಿಯಾಗಿದೆ. ಈ ಸಂಕಲನದ ಎಲ್ಲ ಕವಿಗಳೂ ಬಂಡಾಯ ಮನೋಭಾವದವರಾಗಿದ್ದು, ಅವರಲ್ಲಿ ಬಹಳಷ್ಟು ಮಂದಿ ಬಂಡಾಯ ಸಾಹಿತ್ಯ ಸಂಘಟನೆಯ ಸಕ್ರಿಯ ಸದಸ್ಯರಾಗಿದ್ದರಿಂದ ಈ 'ಸ್ಥಾಯಿಭಾವ' ಬರಲು ಸಾಧ್ಯವಾಯಿತು.

ಬಂಡಾಯ ಮನೋಧರ್ಮ ಸಂಕಲನದ ತುಂಬ ಹರಿದಾಡಿದ್ದರೂ ಏಕತಾನತೆಯ ಸೋಂಕು ತಟ್ಟಿಲ್ಲ. ಆರವತ್ತಾರು ಜನ ಸಾಹಿತಿಗಳ ಕವನ ಮತ್ತು ಗದ್ಯದ ತುಣುಕುಗಳನ್ನು ಹೊಂದಿರುವ 'ಅಗ್ನಿಸಾಕ್ಷಿಯಲ್ಲಿ' ಸ್ತ್ರೀ ಶೋಷಣೆಯ ವಿವಿಧ ಮಗ್ಗಲುಗಳನ್ನು ಗಂಭೀರವಾಗಿ ಗುರುತಿಸಲಾಗಿದೆ. ಇದು ಬರಿ ಕವನ ಸಂಗ್ರಹವಲ್ಲ. ಒಂದು ಸಾಮಾಜಿಕ ಅನಿಷ್ಟದ ವಿರುದ್ಧ ತುಡಿಯುವ ಮನಸ್ಸುಗಳ ಸಂಗ್ರಹವಾಗಿದೆ. ಹೊಸ ಮನ್ವಂತರಕ್ಕಾಗಿ ಸಲ್ಲಿಸಿದ ಅಳಿಲು ಸೇವೆಯಾಗಿದೆ.

ಇಲ್ಲಿನ ಉಚ್ಚ ಸಂಸ್ಕೃತಿಯ ಅಡಿಗಳಲ್ಲಿ ಸಿಕ್ಕು ಸಹಸ್ರಾರು ವರ್ಷಗಳಿಂದ ಒದ್ದಾಡುತ್ತಿರುವ, ಕೆಳಜಾತಿ

ಜನರ ಜೊತೆ ಎಲ್ಲ ಜಾತಿಗಳ ಸ್ತ್ರೀಯರೂ ಸೇರಿದ್ದಾರೆ. ಕೆಳಜಾತಿ ಮತ್ತು ವರ್ಗದ ಜನಸಮುದಾಯದ ಜೊತೆ ಸ್ತ್ರೀ ಸಮೂಹ ಒಗ್ಗಟ್ಟಾಗಿ ಹೋರಾಡಿದರೆ ಮಾತ್ರ ಸರ್ವ ವಿಧದ ಸಾಮಾಜಿಕ ಅನಿಷ್ಟಗಳಿಂದ ಹೊರ ಬರಲು ಸಾಧ್ಯ. 'ಅಗ್ನಿಸಾಕ್ಷಿ' ಈ ಒಗ್ಗಟ್ಟಿನ ದ್ಯೋತಕ ಕೂಡ ಆಗಿದೆ. ಇಲ್ಲಿ ಬರುವ ಎಲ್ಲ ಸ್ತರದ ಕವಿಗಳು ಲಿಂಗ-ಜಾತಿ ಭೇದ ಗಳನ್ನು ಮರೆತು ಸಾಮಾಜಿಕ ಅನಿಷ್ಟದ ವಿರುದ್ಧ ತಮ್ಮ ಪ್ರತಿಭಟನೆಯನ್ನು ವ್ಯಕ್ತ ಪಡಿಸಿದ್ದಾರೆ.

"ಅಂದು ರಂಜಾನಿನ ಕೊನೆ ರಾತ್ರಿ
ಬಿಳಿ ಮೀಸೆಯ ಚಂದ್ರ ಸುಂದರ ಜಗತ್ತಿಗೆ
ಕಾರ್ಮೋಡಗಳ ಬುರುಖಾ ಹೊಲಿದು ಕೊಡುತ್ತಿದ್ದ"

(ರಂಜಾನಿನ ಕೊನೆ ರಾತ್ರಿ / ಲಕ್ಷ್ಮೀಪತಿ ಕೋಲಾರ)

ಎಂಬುದು ಎಲ್ಲ ಜನಾಂಗಗಳಲ್ಲಿನ ಮಹಿಳೆಯರ ಸಮಸ್ಯೆಯನ್ನು ಸೂಚಿಸುತ್ತದೆ. ಇಲ್ಲಿ ರಂಜಾನ್ ಮತ್ತು ಬುರುಖಾಗಳು ವಿರುದ್ಧ ಮನಃಸ್ಥಿತಿಯನ್ನು ಸೂಚಿಸುವ ಶಬ್ದ ಗಳಾಗಿವೆ. ರಂಜಾನ್ ಶಬ್ದ ಇಂದ್ರಿಯ ನಿಗ್ರಹಕ್ಕೆ ಸಂಬಂಧಿಸಿದೆ. ಪ್ರತಿಯೊಬ್ಬನೂ ತನ್ನ ಮನಸ್ಸಿನ ಮೇಲೆ ಬುರುಖಾ ಹಾಕಿಕೊಳ್ಳುವ ಸಾಮರ್ಥ್ಯವುಳ್ಳವನಾಗಬೇಕೆಂಬುದೇ ಆ ಶಬ್ದದ ಆಶಯವಾಗಿದೆ. ಆದರೆ ಅದರ ಬದಲಿಗೆ ಸ್ತ್ರೀಯರು ಬುರುಖಾ ಹಾಕಿ ಕೊಳ್ಳುವ ಪ್ರಸಂಗ ಬಂದದ್ದು ಗಂಡಸಿನ ಕಾಮ ಪಿಪಾಸೆಗೆ ಹಿಡಿದ ಕನ್ನಡಿಯಂತಿದೆ. ಒಟ್ಟು ನಿಸರ್ಗದ ಹಿನ್ನೆಲೆಯಲ್ಲಿ ಹುಟ್ಟಿದ ಈ ಪ್ರತಿಮೆ ಗಂಡಸಿನ ಸ್ವಾರ್ಥದ ಸಂಕೇತ ವಾಗಿದೆ.

"ಸೂರ್ಯ ಚಂದ್ರರ ಸಾಕ್ಷಿಯಾಗಿ
ಅಗ್ನಿಸಾಕ್ಷಿಯಾಗಿ
ಫೀಜು ; ಡೊನೇಷನ್ನು ಎಲ್ಲಾ ಸೇರಿಸಿ
ಫ್ರಿಜ್ಜು, ಕಾರು, ಸೈಟಿಗೆ
ತಾಳಿ ಕಟ್ಟಿದ್ದು"

(ನಮಗಾಗುವ ಗಂಡಂದಿರು/ಎಂ.ವಿ. ಚನ್ನಕೇಶವ ರೆಡ್ಡಿ)

ನಮ್ಮ ಸಮಾಜದ ಇಂದಿನ ಸತ್ಯವಾಗಿದೆ. ಅಗ್ನಿಸಾಕ್ಷಿ ಇರುವುದು ಆತ್ಮ ಸಮ್ಮಿಲನಕ್ಕೆ. ಹೆಣ್ಣು-ಗಂಡಿನ 'ಅದ್ವೈತ'ದ ಬದುಕಿಗೆ. ಮಂಗಳ ಸೂತ್ರ (Thread of happiness) ಕಟ್ಟುವುದು ಸುಸೂತ್ರ ಜೀವನಕ್ಕೆ. ಆದರೆ ವಾಸ್ತವದಲ್ಲಿ ಅಸಂಖ್ಯ ಜನ ಲಗ್ನವಾಗುವುದು ಐಹಿಕ ವಸ್ತುಗಳೊಡನೆ !

"ಮೆಚ್ಚಿ ಬಂದವರು ಬಂದು ಮೆಚ್ಚಿದವರು ಮತ್ತೊಮ್ಮೆ ಬರಲಿಲ್ಲ
ಮದುವೆ ಮಾರ್ಕೆಟ್ಟಿನಲ್ಲಿ ಗಂಡೆಂಬ ಮೊಸಳೆಗಳ
ಖರೀದಿಸುವ ತಾಕತ್ತು ಬಡ ತಂದೆಗಿರಲಿಲ್ಲ"

(ಕನ್ಯಾಕುಮಾರಿ/ಬೈರಮಂಗಲ ರಾಮೇಗೌಡ)

ಐಹಿಕ ವಸ್ತುಗಳನ್ನು ವರದಕ್ಷಿಣೆಯಾಗಿ ಕೊಡುವ ಸಾಮರ್ಥ್ಯವುಳ್ಳ ತಾಯಿ–ತಂದೆಗಳು ಎಷ್ಟಿದ್ದಾರೆ? ಅಂತೆಯೆ ಅನೇಕರು ಕನ್ಯಾಕುಮಾರಿಗಳಾಗಿಯೇ ಬದುಕುತ್ತ, ಯೌವ್ವನವ ಕಳೆದುಕೊಂಡಿದ್ದಾರೆ.

"ಹೊನ್ನ ಕನಕಗಳ ಕೆಸರಲ್ಲಿ ಮುಳುಗಿತ್ತು
ಅವನೆಲ್ಲ ಪ್ರೀತಿ–ಪ್ರೇಮ"

(ಮೌನಚಿಪ್ಪು / ಬಿ. ಎಸ್. ಗಾಯತ್ರಿ)

ಗಂಡಸು ಎಷ್ಟೊಂದು ಕಲುಷಿತಗೊಂಡಿದ್ದಾನೆಂದರೆ ಆತ ತನ್ನ ಹೆಂಡತಿಯಾಗುವವಳು ಮನ ತುಂಬುವವಳು ಎಂಬುದನ್ನು ಮರೆತು 'ಮನೆ ತುಂಬುವವಳು' ಎಂದೇ ಭಾವಿಸಿದ್ದಾನೆ.

"ಹೂ–ದುಂಬಿಯ ಸಹಜ ಮಿಲನಕ್ಕೆ
ಇಲ್ಲ ಸಂಭಾವನೆ"

(ಅಶೋಕ ನಾಯಕ / ಮಹೇಂದ್ರ)

ಎಂದು ನಿಸರ್ಗದ ಉದಾಹರಣೆ ನೀಡಿದರೂ ಧನ-ಪಿಶಾಚಿಗಳು ಅತ್ತಕಡೆ ಗಮನ ಹರಿಸುತ್ತಿಲ್ಲ.

"ತೊನ್ನು ಹತ್ತಿದ ಹಣಕೆ ಬೆನ್ನ ಹತ್ತಿದ್ದೇಕೆ
ಹೆಂಗೆ ಮರೆಯಲಿ ನಿನ್ನ ಹೇಳು ಗೆಳೆಯಾ"

(ಸತ್ತ ಗೆಳೆಯನಿಗೆ / ರಂಗಾರೆಡ್ಡಿ ಕೋಡಿರಾಂಪುರ)

ಎಂದು ಪ್ರಿಯಕರ ಹಣದಾಸೆಗೆ ಹಾತೊರೆದು ಬೇರೆಯವಳನ್ನು ಕಟ್ಟಿಕೊಳ್ಳಲು ಹವಣಿಸುತ್ತಿರುವ ಸಂದರ್ಭದಲ್ಲಿ ಪ್ರೇಯಸಿ ಹೇಳುತ್ತಾರೆ. ಹೀಗೆ ಹಣದ ಆಸೆ ಪ್ರೀತಿಯ ಅಣೆಕಟ್ಟುಗಳನ್ನೂ ಒಡೆಯಬಲ್ಲುದು.

"ಇದ್ದವರು ಇಲ್ಲದವರು
ಎಂಬ ಭೇದವಿಲ್ಲದೆ ದೋಚುತಿಹೆ
ನಿನ್ನ ಬಲೆಯೊಳಗೆ ಬೀಳದವರನೆಂದೂ
ನಾ ಕಂಡಿಲ್ಲ ಇಂದು"

(ದಹನ / ಎಚ್. ಕಲ್ಲನ, ಸಾಗರ)

ಬಂಡವಳಶಾಹಿ ವ್ಯವಸ್ಥೆ ಇಂದು ಎಲ್ಲರನ್ನೂ ತನ್ನ ಕಪಿಮುಷ್ಟಿಯಲ್ಲಿ ಹಿಡಿದುಕೊಳ್ಳಲು ಯತ್ನಿಸುತ್ತಿದೆ. ಹಣವಿಲ್ಲದವರು ಅದರ ಹಿಡಿತದಲ್ಲಿ ಸಿಕ್ಕು ಹೆಣವಾಗುತ್ತಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಎರಡು ಜೀವಗಳ ಬೆಸುಗೆ ಸಮಯದಲ್ಲೂ ಹಣ ತನ್ನ ಪಾತ್ರ ನಿರ್ವಹಿಸುತ್ತಿದೆ.

"ಶಕ್ತಿ ಮೀರಿ ಕೊಡಲಾರದೆ
ಕೊಟ್ಟಿದ್ದಕ್ಕೆ ಎದುರಾಳಿಯ

ಅತೃಪ್ತಿ ಅಸಂತೋಷಕ್ಕೆ
ಅಬಲೆಯು ಆಹುತಿ"

(ವರದಕ್ಷಿಣೆ / ಲಲಿತಾ ಕೋಪರ್ಡೆ)

ಕನ್ಯೆಯ ಕಡೆಯವರು ವರನಿಗೆ ತಮ್ಮ ಕೈಲಾದಷ್ಟು ಧನಕನಕಗಳನ್ನು ಕೊಟ್ಟಾಗ್ಯೂ ಅತೃಪ್ತಿಯ ವರ ಮತ್ತು ಅವನ ಕಡೆಯವರು ಕೊನೆಗೆ ಅವಳನ್ನು ಅಗ್ನಿಗಾಹುತಿ ಮಾಡುವುದು ನಡೆದೇ ಇದೆ.

"ಹುಟ್ಟಿದಾರಭ್ಯ ಕಂಡ ಕನಸು ನೂರು
ಮಂಗಳ ಸೂತ್ರ ಬಿಗಿದ ವೇಳೆ
ಕರಗಿ ನುಚ್ಚು ನೂರಾಯಿತಣ್ಣ"

(ಜಿಪುಣ ಮತ್ತು ನಿಪುಣ / ಬಿ. ಸುರೇಶ್)

ಗಂಡಿನ ಕಡೆಯವರು ಹೆಣ್ಣನ್ನು ಬೆಂಕಿಗಾಹುತಿ ಕೊಡುವುದು ನಂತರದ ದಿನಗಳಲ್ಲಾದರೆ ಮದುವೆಯ ದಿನವೇ ಆಕೆಯ ಕನಸುಗಳನ್ನು ಸುಟ್ಟು ಬಿಟ್ಟಿರುತ್ತಾರೆ. ಅಂದೇ ಕ್ರೌರ್ಯದ ನಾಂದಿ ಹಾಡಿರುತ್ತಾರೆ.

"ನಿನ್ನೆ ಮೊನ್ನೆ ಕಾಡಿದ್ದ ಹುಡುಗಿ
ಮಿಡಿ, ಮ್ಯಾಕ್ಸಿ, ಜೀನ್ಸ್‌ಗಳಲ್ಲಿ
ನಕ್ಷತ್ರಗಳ ಹೆಣೆದ ಸೊಬಗಿ
ಮರೆಯಾದಳೆಲ್ಲಿ ?"

(ಏನಾದಳೋ / ಅರವಿಂದ ನಡಹಳ್ಳಿ)

ಎಂದು ಗಾಬರಿಯಾಗುವ ಮಟ್ಟಿಗೆ ವಾತಾವರಣ ಹದಗೆಟ್ಟಿದೆ. ಆಧುನಿಕ ಬದುಕಿನಲ್ಲೂ ವರದಕ್ಷಿಣೆಯ ಪಿಡುಗು ಹಬ್ಬಿದೆ. ಮುಂಬಯಿ, ಬೆಂಗಳೂರು ಮತ್ತು ದೆಹಲಿಯಂಥ ಮಹಾನಗರಗಳಲ್ಲೇ ವರದಕ್ಷಿಣೆ ಸಾವುಗಳು ಹೆಚ್ಚಾಗಿ ಸಂಭವಿಸುತ್ತಿರುವಾಗ ಇಂಥ ಪ್ರಶ್ನೆ ಏಳುವುದು ಸಹಜವಾಗಿದೆ. ಹೀಗೆ :

"ಕಾಲ ಗರ್ಭದಲ್ಲಿ
ಮೌನವಾಗುತ್ತಾರೆ
ಮೂಕರಾಗುತ್ತಾರೆ
ಹೋಮದಗ್ನಿಯಲ್ಲಿ ಬೇಯುತ್ತಾರೆ
ಕರಕಲಾಗುತ್ತಾರೆ"

(ನನ್ನ ಹುಡುಗಿಯರು / ಎಚ್. ಎಸ್. ಚಂಪಾವತಿ)

ಇದೆಲ್ಲ ನೋಡು ನೋಡುತ್ತಿರುವಂತೆ ನಡೆದು ಹೋಗುತ್ತದೆ. ಮೊಗ್ಗರಳುವ ಮೊದಲೇ ಹಿಸುಕಿ ಹಾಕುವಂತೆ ಕೋಮಲೆಯರನ್ನು ಕೊಲ್ಲುವ ದಟ್ಟ ವಾತಾವರಣವನ್ನು ನಮ್ಮ ಸಂಸ್ಕೃತಿ ಸೃಷ್ಟಿಸಿದೆ.

"ಕೆರೆಯು ನಡುವಿರುವ
ಹೆಣ ಬಿಟ್ಟು ಹೊರಟ ಮನ
ಮೆಲ್ಲಗೆ ಪಿಸುಗುಟ್ಟಿತು
ಬಡತನ ಬಡತನ
ನಕ್ಕು ನಲಿಯುವ ಭಾಗ್ಯ ಬಣಬಣ ಬಣಬಣ"

(ಅರಳಿ ಬಿರಿಯುವ ಮೊದಲೆ / ಹೊರೆಯಾಲ ದೊರೆಸ್ವಾಮಿ)

ಹೀಗೆ "ವೃತ್ತಾಂತಗಳು. ಛಿದ್ರಗೊಳಿಸಿವೆ ನನ್ನ
ಭದ್ರ ಮನಸ್ಸಿನ ಕೋಟೆ"

(ಸಂಭವಾಮಿ ಯುಗೇ.... / ಮಾಲತಿ ಪಟ್ಟಣಶೆಟ್ಟಿ)

ಎಂದು ಹೃದಯವಂತರು ಅಮಾನುಷ ಸಂದರ್ಭಗಳ ಸುದ್ದಿಯಿಂದ ತತ್ತರಿಸುತ್ತಲೇ ಇರುತ್ತಾರೆ. ಬಡತನ ಮತ್ತು ಸಾಂಪ್ರದಾಯಿಕ ಅಜ್ಞಾನದಿಂದಾಗಿ ಮುಗ್ಧ ಮನುಷ್ಯರ ಜೀವ ಹಿಂಡಿ ಹಿಪ್ಪೆಯಾಗುತ್ತಿದೆ.

"ಒಂದು ಮೇಲು
ಒಂದು ಕೀಳು
ಪ್ರಕೃತಿಗಿಲ್ಲ ತಾರತಮ್ಯ
ಒಂದೇ ಒಂದು ವಿಶ್ವದಲ್ಲಿ
ಎರಡಾಗಿದೆ ಸ್ವಾರಸ್ಯ"

(ಮಾರಕ–ಪೂರಕ / ವೀಚಿ)

ಎಂದು ತಿಳಿಸಿ ಹೇಳಿದರೂ ಧನಪಿಶಾಚಿ ಗಂಡಸರಿಗೆ ಅರ್ಥವಾಗುತ್ತಿಲ್ಲ. ಈ ಕ್ರೌರ್ಯದಲ್ಲಿ ವರನ ಹಾಗೂ ಆತನ ತಂದೆಯ ಪಾತ್ರವಲ್ಲದೆ ಬಹಳಷ್ಟು ತಾಯಿ ಮತ್ತು ಸಹೋದರಿಯರ ಪಾತ್ರವೂ ಮಿಗಿಲಾಗಿರುತ್ತದೆ.

"ನಡು ಬಗ್ಗಿಸಿ ತಲೆ ಬಗ್ಗಿಸಿ
ದನಿ ಕುಗ್ಗಿಸಿ
ಸಂಸಾರ ಸಾಗರದಲ್ಲಿ
ಈಜುವುದೊಂದೇ ನಿನ್ನ
ಅಸಾಹಾಯಕ ಗುರಿಯಾಯಿತು !"

(ಸ್ಥಿತಿ / ಬಿ. ಆರ್. ಕೃಷ್ಣ)

ಎಂದು ಕನಿಕರ ಪಡುವ ಪರಿಸ್ಥಿತಿ ಉಂಟಾಗಿದೆ. ಆದರೆ

"ನೆಲೆನಿಂತ ಸಂಪ್ರದಾಯದ
ದಟ್ಟ ಕಪ್ಪು ಛಾಯೆಯ ಮಡಿಲಲ್ಲಿ

ಹಡೆದ ನಿನ್ನ ಒಡಲ ತುಂಬಾ
ನೋವಿನ ಧ್ವನಿ ಮೊಳಗುತ್ತಿದೆ"

(ಶೋಷಿತ ಗೆಳತಿಗೆ/ಮಹೇಂದ್ರ ಪ್ರಸಾದ್)

ಎಂದು ವಿಷಾದ ವ್ಯಕ್ತಪಡಿಸುವಾಗಲೆ

"ಬರುವಷ್ಟು ಬರಲಿ ಕಿರುದನಿಗಳು
ಧಿಕ್ಕಾರವಿರಲಿ ದೀನ ಬದುಕಿಗೆ
ಧಿಕ್ಕಾರವಿರಲಿ ವರದಕ್ಷಿಣೆ ಪಿಶಾಚಕ್ಕೆ
ಮಾರಾಟಕ್ಕಿಟ್ಟ ವರಗಳಿಗೆ"

(ವಿಷವರ್ತುಲಸುತ್ತ / ಬಾ. ಹ. ರಮಾಕುಮಾರಿ)

ಎಂದು ಪ್ರತಿಭಟಿಸುವುದು ಸಹಜವಾಗುತ್ತದೆ. ಇಂದು

"ಸತ್ತ ಹಕ್ಕಿಯ ಸುತ್ತ ನಾಯಿ ಹದ್ದುಗಳ
ಕಾರುಬಾರು"

(ಬಿಡಿಸಾಲುಗಳು / ಕೆ.ಸಿ. ಪ್ರದೀಪ್‌ಕುಮಾರ್)

ನಡೆದಿದ್ದು

" ವಧು ಮಾಡಿ ಮನೆ ತುಂಬಿಸಿ ಕೊಂಡವರೇ
ಹೆಣ ಮಾಡಿ ಆಚೆ ಸಾಗಿಸುವರಯ್ಯ."

(ವಧು–ಹೆಣ / ಕಮಲಾ ಹಂಪನಾ)

ಎಂಬ ವಾಸ್ತವದ ಕಡೆಗೆ ಮನಸ್ಸು ಹರಿಯುತ್ತಲೇ ಇರುತ್ತದೆ.

"ಕರಾರುಗಳ ನಡುವೆ ಕಳೆದು ಹೋದೆ
ನೋಟುಗಳ ಕಂತೆಯಲ್ಲಿ ಸಮಾಧಿಯಾದೆ"

(ಗೆಳೆಯನಿಗೆ/ಡಾ॥ ಬಸವರಾದ ಸಬರದ)

ಎಂದು ಪ್ರೀತಿ–ಪ್ರೇಮಗಳನ್ನು ಕೊಂಪವರನ್ನು ಹೀಯಾಳಿಸಿದರೂ

"ವಧು ಹೆಚ್ಚೋ
ವರಾಹ ದಕ್ಷಿಣೆ ಹೆಚ್ಚೋ ?"

(ನಿಮಗೊಂದು ಪ್ರಶ್ನೆ/ಮು. ರಾ. ಆನಂದ ಮೂರ್ತಿ)

ಎಂದು ಪ್ರಶ್ನಿಸಿದರೂ ನಾಚಿಕೆ ಭಯಗಳಿಲ್ಲದೆ

"ನಾನೇ ಕ್ಯೂ ನಿಂತು ತಂದ ಸೀಮೆಎಣ್ಣೆಯ ಸುರಿದು
ಅಗ್ನಿಸಾಕ್ಷಿಯಲ್ಲಿ ಕೈಹಿಡಿದ ಪತಿರಾಯ
ಬೆಂಕಿ ಕಡ್ಡಿಯ ಗೀರಿ ಮೈಮೇಲೆ ಎಸೆದ"

(ಅಗ್ನಿಸಾಕ್ಷಿ/ಎಸ್. ಉಮಾ, ರಾಮನಗರಂ)

ಎಂದು, ಸತ್ತ ವಧುಗಳ ಹೆಣಗಳು ಬಾಯ್ಬಿಡುವಂತಾಗಿದೆ. ಈ ರೀತಿ ಬೆಂಕಿಗೆ ಬಲಿಯಾಗಿಸುವ ನಮ್ಮನ್ನು ಆಯ್ಕೆ ಮಾಡುವಾಗ

"ಕಣ್ಣಲ್ಲೆ ನನ್ನಂಥವನು ಇಡಿಯಾಗಿ ಗುಡಿಸಿ
ಹೆಂಗಸರಿಂದ ಮೈಯೆಲ್ಲ ಝಂಡತಿ ನಡೆಸಿ
ರಬ್ಬರು ಗೊಂಬೆಯೆಂಬಂತೆ ಮುಟ್ಟಿ ನಲಿದಿದ್ದಾರೆ"

(ಸಿರ್ಧಾರ/ಟಿ. ಎಸ್. ನಾಗರಾಜ್ ಶೆಟ್ಟಿ)

ಎಂದು ಅವರು ಹೇಳುತ್ತಾರೆ. ಎಲ್ಲ ದೃಷ್ಟಿಯಿಂದ ಪಾಸಾದವರೂ ಹಣವಿಲ್ಲದಿದ್ದರೆ ಎಲ್ಲವೂ ನಿರುಪಯುಕ್ತ.

ಅದಷ್ಟೇ ಅಲ್ಲದೆ
"ಮಣ್ಣಿನಂತೆ ಹೆಣ್ಣ ಬಗೆದ
ರತಿಯ ಸವಿಯ ಹಿಗ್ಗಿ ಮೆರೆದೆ !"

(ಇರಲಿರಲಿ ಮಾನವೀಯ ವರ್ತನೆ/ದೊಡ್ಡ ರಂಗೇಗೌಡ)

ಹೆಣ್ಣಿನ ವ್ಯಕ್ತಿತ್ವವನ್ನು ಐಹಿಕ ವಸ್ತುವಾಗಿ ಪರ್ಯಾವಸಾನಗೊಳಿಸಿದ್ದೂ ಇಂದು ನಿನ್ನೆಯದಲ್ಲ !

"ನಿಮ್ಮ ವ್ಯಕ್ತಿತ್ವದ ಪುರಾಣದಲಿ
ಏನೆಲ್ಲ ಅದ್ಭುತ ನಡೆದಿದೆ !
ಇವಳನು ಅಡವಿಟ್ಟು ನೆತ್ತನಾಡಬಲ್ಲಿರಿ
ಮಾನಭಂಗವಾಗುತ್ತಿದ್ದರೂ
ಧರ್ಮಪ್ರಜ್ಞೆಗೆ ಸಿಲುಕಿ
ಸ್ಥಿತಪ್ರಜ್ಞರಾಗಬಲ್ಲಿರಿ
ಧರ್ಮದ ಹೆಸರಿನಲಿ
ಅನುಮಾನದ ಅಗ್ನಿಯೊಳಗೆ
ನೂಕಬಲ್ಲಿರಿ...

(ಗಂಡಸರಿಗೆ ಒಂದು ಕಿವಿ ಮಾತು/ಕೆ. ರಾಜೇಶ್ವರಿ ಗೌಡ)

ಮುಂದೆ ಗಂಡ ಸತ್ತರೆ ಜೀವಂತ ಹೆಂಡತಿಯನ್ನು ಚಿತೆಗೇರಿಸುವ ನೀಚ ಪದ್ಧತಿಗೂ ಭಾರತೀಯ ಮಹಿಳೆ ಐತಿಹಾಸಿಕವಾಗಿ ಬಲಿಯಾಗಿದ್ದಾಳೆ.

"ಏಳು ಸುತ್ತಿನ ಗೋಡೆಯ
ಬೆಳೆಸಿ,
ಅಂಗುಲಂಗುಲ ಎಳೆದು
ಎತ್ತರಿಸುವರು ನನ್ನ ನೆರಳು ಬೆಳೆದಂತೆಲ್ಲ"

(ಆತ್ಮಗತ/ಪ್ರೇಮಾ ತಾಶೀಲದಾರ)

ಗಂಡುಮಯವಾದ ಸಮಾಜ ಹೆಣ್ಣಿನ ವ್ಯಕ್ತಿತ್ವವನ್ನು ತನಗಿಷ್ಟ ಬಂದಂತೆ ಕತ್ತರಿಸುತ್ತ ಆಕೆ ಇದ್ದೂ ಇಲ್ಲದಂತೆ ಮಾಡಿದೆ.

"ಬರಿಯ ಚರ್ಮಕ್ಕೆ ಚರ್ಮ ತಿಕ್ಕುವ
ಮೂರ್ಖ ಚಪಲದಿಂದ ತೃಪ್ತಳಾಗದ
ಪದ್ಮಿನಿಯವಳು"
(ಪ್ರಕೃತಿ ಬಂಜೆಯಲ್ಲ/ರಾಜಶೇಖರ ಹನುಮಲಿ)

ಎಂದು ಸಮಸ್ತ ಜನಕೋಟಿ ತಿಳಿಯುವ ಕಾಲವಿನ್ನು ದೂರಿಲ್ಲ.

"ಬೆಟ್ಟದ ಮ್ಯಾಲಿಲ್ಲ ಸಿಟ್ಟಾದ ಚಾಮುಂಡಿ
ಒಟ್ಟಾಗಿ ನಿಲ್ರೊ ಸಮತೇಲಿ। ನಿಂತೌಳೆ
ಮಹಿಷಾಸುರನೆಲ್ಲಾವ್ನೆ ಅಂತಾಳೆ"
(ಜವರಾಯನಾಗಿ ನಿಂದ್ಯಲ್ಲೋ/ಡಾ. ಟಿ. ಎನ್. ನಾಗರತ್ನ)

ಎನ್ನುವಷ್ಟರ ಮಟ್ಟಿಗೆ ಇಂದು ಹೆಣ್ಣಿನ ಪ್ರಜ್ಞಾಮಟ್ಟ ಬೆಳೆದಿದೆ.

"ಮೋರೆ ಓರೆ ಮಾಡಿದ, ಪುರುಷ ಮಾಟದ ಮೃಗವೊಂದು
ಮಾರಾಟಕ್ಕಿದೆ ಬೆಲೆ ಕಟ್ಟುವಿರ ?"
(ಬೆಲೆ ಕಟ್ಟುವಿರ ? /ಚಿಕ್ಕಣ್ಣ ಯಣ್ಣೆಕಟ್ಟೆ)

ಎಂದು ಗೇಲಿ ಮಾಡುವ ಪರಿಸ್ಥಿತಿ ಉಂಟಾಗುತ್ತಿದೆ.

"ಕಟ್ಟಿರಿ ನಿಮ್ಮ ಕೇಶವನು, ಮೆಟ್ಟಿ ನಿಲ್ಲಿರಿ ಒಂದಾಗಿ
ಹುಟ್ಟು ಹಾಕಿರಿ ಸಮತಾವಾದವನು"
(ಅಬಲೆ/ಬಿ. ಕೆ. ವೆಂಕಟೇಶನ್)

ಎಂದು ಸ್ತ್ರೀಕುಲಕ್ಕೆ ಕರೆ ನೀಡಲು ಮುಂದಾಗುವ ಪ್ರಜ್ಞಾವಂತರು ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿರುವುದು ಆರೋಗ್ಯಕರವಾದ ಲಕ್ಷಣವಾಗಿದೆ. ಇದು ಹೀಗೇ ಮುಂದುವರಿದರೆ

"ವರದಕ್ಷಿಣೆಯ
ವರಾಹಗಳೆ, ವರಜನಕ–ಜನನಿಯರೆ
ಕೇಳಿದ್ದೀರೇನು
ಸುಪ್ರಭಾತ
ಹೆಣ್ಮಕ್ಕಳ ಸಾವು, ಸುಲಿಗೆ, ಆತ್ಮಹತ್ಯೆ....!"
(ನಿಮಗೊಂದು ಪ್ರಶ್ನೆ/ಮು. ರಾ. ಆನಂದಮೂರ್ತಿ)

ಎಂದು ಪ್ರಶ್ನಿಸುವ ಸಂದರ್ಭ ಬರುವುದಿಲ್ಲ. ಅದಕ್ಕೆ ಬದಲು

"ಸಿದ್ಧ ಗಂಡುಗಳಿಗಿದು ಪಂಥಾಹ್ವಾನ
ಸುಲಿಯುವ ಷಂಡರಿಗಲ್ಲ ಈ ಆಹ್ವಾನ"
(ಷಂಡರಿಗಲ್ಲ ಈ ಆಹ್ವಾನ/ಮಹಾಲಿಂಗೇಶ್ವರ, ಎಸ್. ಪಿ.)

ಎಂದು ವರದಕ್ಷಿಣೆ ಬಯಸುವ ವರಗಳನ್ನು ಸಾಮಾಜಿಕವಾಗಿ ಷಂಡರೆಂದು ಗುರುತಿಸುವ ವಾತಾವರಣ ಉಂಟಾಗುವುದು.

ಇಷ್ಟೆಲ್ಲ ಮದುವೆಯ ಚೌಕಟ್ಟಿಗೆ ಸಂಬಂಧಿಸಿದ ಪ್ರಕರಣ. ಮದುವೆ ಚೌಕಟ್ಟಿನ ಹೊರಗೆ ಜೀವ ಸವೆಸುತ್ತಿರುವ ಹೆಣ್ಣುಗಳ ಸ್ಥಿತಿಯಂತೂ ಹೃದಯ ವಿದ್ರಾವಕವಾಗಿದೆ.

"ಪುಟ್ಟಗುಡಿಸಲಿನಲ್ಲಿ ಮೈಮಾರಿಕೊಳುತಿರುವ
ಹೆಣ್ಣ ಸಂಕಟದಲ್ಲಿ ಆಳವಿತ್ತು"

(ಪುರುಷಾರ್ಥ/ಸಿದ್ಧಲಿಂಗಯ್ಯ)

ಬಡತನಕ್ಕೆ ಮೈಯೊಡ್ಡಿ ವ್ಯಕ್ತಿತ್ವ ಕಳೆದುಕೊಂಡು ಬದುಕುವುದು ಒಂದು ಕಡೆಯಾದರೆ

"ನಿತ್ಯ ಪಲ್ಲವಿಯಾಗಿ ಸೀತೆಯರ ಅಪಹರಣ ಮತ್ತೆ
ಪಾಂಚಾಲಿಯರ ವಸ್ತ್ರಾಪಹರಣ ನಮ್ಮೆದೆಯ ಸೀಳಿ"

(ಕಣ್ಣೀರ ಹಾಡು/ಗವಿಸಿದ್ಧ ಎನ್. ಬಳ್ಳಾರಿ)

ಇಂದಿನವರೆಗೂ ಸಾಗಿ ಬಂದಿದೆ. ಇದಲ್ಲದೆ

"ನನ್ನೂರ ಬೀಡಿ ಹುಡುಗಿಯರು :
ನೂರೆಂಟು ಕನಸುಗಳ ಬೆಡಗಿಯರು
ಬೀಡಿ ಕಟ್ಟುತ್ತಾ ಕಟ್ಟುತ್ತಾ ಕೃಶವಾಗುತ್ತಾ
ಟೀಬಿಯೋ ಏಡಿಯೋ ಆಗುತ್ತಾ
ರೋಗಿಷ್ಠ ಸಮಾಜಕ್ಕೆ ಸಾಕ್ಷಿಯಾಗುತ್ತಾರೆ"

(ಬೀಡಿ ಹುಡುಗಿಯರು/ಜಿ ಎಸ್. ಉಬರಡ್ಕ)

ಈ ಬೀಡಿ ಹುಡುಗಿಯರಂಥವರು ಸಮಾಜದ ವಿವಿಧ ಸ್ತರಗಳಲ್ಲಿ ಕನಸುಗಳ ಗೂಡುಗಳಲ್ಲೇ ಕೊಳೆತು ಹೋಗುವ ಪರಿಸ್ಥಿತಿ ಇದೆ.

ನಮ್ಮ ಹೀನ ಆರ್ಥಿಕ ವ್ಯವಸ್ಥೆಯಿಂದಾಗಿ

"ನಾಳೆಯ ಕೂಳಿಗಾಗಿ ಅಮ್ಮನಿಗೆ ಗಿರಾಕಿ ಬರಲೆಂದು ಮಗ ;
ನಾಳೆಯ ಕೂಳಿಗಾಗಿ ಮಗಳಿಗೆ ಗಿರಾಕಿ ಬರಲೆಂದು ತಂದೆ ತಾಯಿ :
ನಾಳೆಯ ಕೂಳಿಗಾಗಿ ತನಗೆ ಗಿರಾಕಿ ಬರಲೆಂದು ವೇಶ್ಯೆ"

(ಮೂರು ಹೆಣ್ಣಿನ ಹಾಡು/ಚೆನ್ನಣ್ಣ ವಾಲೀಕಾರ)

ಹೀಗೆ ತುತ್ತು ಕೂಳಿಗಾಗಿ ಮೈಮಾರಲು ಕೂಡುವವರು ಹೆಚ್ಚುತ್ತಿದ್ದಾರೆ.

"ನಿನ್ನೆ ಬಿಕರಿಯ ಹೊತ್ತಿನಲ್ಲಿ
ನೈಜಾಮು ನಗರಿಯ ಬಡೀ ಮಂಡಿಯಲ್ಲಿ
ಬಡ ಕಾಡಿನ ಸೀತಾಫಲವೊಂದು
ಮೆತ್ತಗೆ ಬಾಯ್‌ಬಿಟ್ಟು ಬಿಸಲಿಗೆ
ಗಿರಾಕಿ ತತ್ತರಿಸುವ ಮಾತು ಆಡುವುದು ಕಂಡೆ"

(ಸೀತಾಫಲ/ಬಿದರಹಳ್ಳಿ ನರಸಿಂಹಮೂರ್ತಿ)

ಎಂದು ಅನ್ಯೋಕ್ತಿ ಮೂಲಕ ಕಾವ್ಯದಲ್ಲಿ ದುರಂತದ ಪ್ರತಿಮೆಯನ್ನು ಸೃಷ್ಟಿಸುವಲ್ಲಿ ಕಾವ್ಯ ಸಫಲವಾಗುತ್ತದೆ.

ಪರಂಪರಾಗತವಾಗಿ ಬಂದ ಷಂಡ ಸಮಾಜದಲ್ಲಿ ಈ ಎಲ್ಲ ಲಕ್ಷಣಗಳು ಕಾಣಿಸಿ ಕೊಳ್ಳುವುದು ಸಹಜವಾಗಿದೆ. ಅಷ್ಟೇ ಅಲ್ಲ, ಅಂಥ ಜನರ ಮಧ್ಯೆ ಸ್ವಾಮಿಯೊಬ್ಬನಿಂದ ಅತ್ಯಾಚಾರಕ್ಕೀಡಾದ ಹೆಣ್ಣುಮಗಳು

"ಮೋಜು ಮಾಡಿತವ್ವ ಖೂಳ ಗಂಡಸರ ನೆರವಿ
ಮಂಠದ ಬೀದಿಯು ತುಂಬ ಅಪಮಾನದ ರಥ ಎಳೆದು
ಭಕ್ತಿ ಸೇವೆಯಲ್ಲಿ ಧನ್ಯವಾಯಿತು ; ಸ್ವಾಮಿಯು
ಋಣ ತೀರಿಸಿ ಸಂಖಿಸಿತು"

(ಕುದುರೀ ಮೋತಿ ಹೆಣ್ಣಿನ ಅಳಲು/ಶ್ಯಾಮಸುಂದರ ಬಿದರಕುಂದಿ)

ಎಂದು ಹೇಳುವಲ್ಲಿ ರೂಢಿಗತವಾಗಿ ಬಂದ ಕ್ರೌರ್ಯದ ಬಾಹ್ಯರೂಪದ ಚಿತ್ರಣವಿದೆ.

ಒಟ್ಟಾರೆ 'ಅಗ್ನಿಸಾಕ್ಷಿ'ಯ ತಿರುಳನ್ನು ಹಿಡಿದಿಡುವುದು ನನ್ನ ಉದ್ದೇಶವಾಗಿದೆ. ಈ ಲೇಖನದ ಓಘದ ಹಿಡಿತಕ್ಕೆ ಸಿಕ್ಕದೆ ಜರಗನಹಳ್ಳಿ ಶಿವಶಂಕರ್, ಸರಜೂ ಕಾಟಕರ್, ಡಾ॥ ವಿಜಯಾ ದಬ್ಬೆ, ಗಂಗಾಧರಮೂರ್ತಿ ಮೊದಲಾದವರ ಕವನಗಳು ಉಳಿದು ಕೊಂಡಿವೆ. ಸಂಕಲನದ ಅನೇಕ ಕವನಗಳು ಕಾವ್ಯ ಶಕ್ತಿಯನ್ನು ಪಡೆದಿರಲಿಕ್ಕಿಲ್ಲ. ಆದರೆ ಕಾವ್ಯದ ಉದ್ದೇಶ ಹೊಂದಿವೆ. ಈ ಸಂಕಲನವನ್ನು ಸಂಪಾದಿಸಿದ ಜಿ. ಆರ್. ತಿಪ್ಪೇಸ್ವಾಮಿ ಅಭಿನಂದನಾರ್ಹರು.

ತೊಗಲು ಗೊಂಬೆಯಾಟಕ್ಕೇ ಮರಳಾಗುವ ಗೆಂಡೆ ಕೃಷ್ಣರು 'ಪ್ರತಿಭಟನಾ ಕಾವ್ಯ ಏನು ಸಾಧಿಸಿತು' ಎಂದು ಅಪಹಾಸ್ಯ ಮಾಡುತ್ತಲೇ ಇರುತ್ತಾರೆ. ತಮ್ಮ ಬಿಂಬಕ್ಕೇ ಬೆಚ್ಚಿ ಬೀಳುವ ಅಂಥವರಿಗೆ ಕಾಲವೇ ಉತ್ತರ ನೀಡುವುದು.

ಪ್ರತಿಭಟನಾ ಮನೋಭಾವದ ಕವಿಗಳು ಸಾಮಾಜಿಕ ಮನುಷ್ಯನ ಸೃಷ್ಟಿಕ್ರಿಯೆ ಯಲ್ಲಿ ತೊಡಗಿದ್ದಾರೆ. ಕಾವ್ಯ ಸಾಧಿಸಬೇಕಾಗಿರುವುದು ಇದನ್ನೇ.

'ಹೊರೆ' ಕವನ ಸಂಕಲನದ ಸಮೀಕ್ಷೆ

ಡಾ|| ನಿಂಗಣ್ಣ ಸಣ್ಣಕ್ಕಿ

ಅಧ್ಯಾಪಕ ಶ್ರೀ ಶಿವಲಿಂಗಪ್ಪ ಭಾವಿಕಟ್ಟಿ ಅವರು ಬರೆದ ಕವನಗಳು (೧೯೬೬–೮೧) ಒಂದೆಡೆ ಪ್ರಕಟಗೊಂಡು 'ಹೊರೆ' ಎಂಬ ಕವನಸಂಕಲನವಾಗಿದೆ. ಚುರುಕು ಬುದ್ಧಿಯ ಕವಿ ಎನ್ನಿಸಿಕೊಂಡವರು ಕವಿ ಶ್ರೀ ಶಿವಲಿಂಗಪ್ಪ ಭಾವಿಕಟ್ಟಿ ಯವರು. ಭಾವಗೀತೆಯ. ಕವಿತೆಗಳನ್ನು ಬರೆದು 'ಪ್ರೇಮಾಕ್ಷಿ' ಯಲ್ಲಿ ಕಾವ್ಯ ಸೌಂದರ್ಯವನ್ನು ಸವಿ ದಿದ್ದಾರೆ. ಕನ್ನಡ ಜನಪದ ಸಂಗ್ರಹಕಾರರೂ ಕುಂದರ ನಾಡಿನ ಮಣ್ಣಿನ ಶಕ್ತಿಯನ್ನು ಮೈಗೂಡಿಸಿಕೊಂಡವರೂ ಅಂಕಲಗಿಯ ಶ್ರೀ ಅಡವಿಸಿದ್ಧೇಶ್ವರ ಕಿರಿ ಮಹಾ ವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರೂ ಆಗಿದ್ದಾರೆ. ನಾಲ್ಕು ವರುಷಗಳ ಹಿಂದೆಯೇ 'ಹೊರೆ' ಕವನ ಸಂಕಲನ ವನ್ನು ಹೊರ ತಂದಿದ್ದಾರೆ.

ಡಾ|| ಚಂದ್ರಶೇಖರ ಕಂಬಾರರು " 'ಹೊರೆ' ಕವನ ಸಂಕಲನವು ಸಮಕಾಲೀನ ಪ್ರಜ್ಞೆ, ಹಾಗೂ ಸಾಮಾಜಿಕ ಕಾಳಜಿಯನ್ನು ಪ್ರಾಮಾಣಿಕವಾಗಿ ಉಳಿಸಿಕೊಂಡಿದೆ" ಎಂದು ಮುನ್ನುಡಿಯಲ್ಲಿ ಬರೆದಿದ್ದಾರೆ. 'ರಮ್ಯ ಸಂಪ್ರದಾಯದಿಂದ ನವ್ಯದತ್ತ ಹೊರಳಿದ್ದು ಅನಿವಾರ್ಯ

ವೆಂದೆನಿಸುತ್ತದೆ. ಎಂಬುದಾಗಿ ಕವಿ ಶಿವಲಿಂಗಪ್ಪ ಭಾವಿಕಟ್ಟಿ ಅವರು 'ನನ್ನ ನುಡಿ' ಯಲ್ಲಿ ತೋಡಿಕೊಂಡಿದ್ದಾರೆ.

ಇಪ್ಪತ್ತೊಂದು ಕವನಗಳ ಗೊಂಚಲು 'ಹೊರೆ' ಸಂಗ್ರಹವಾಗಿದೆ. ಹೊರೆ ಕವಿತೆಯು ಮನುಷ್ಯರ ಮೇಲಿರುವ ಭಾರವನ್ನು ತಿಳಿಸುತ್ತದೆ. ಮನುಷ್ಯರು ಏನೇನು ಆಗಿ ಭಾರ ಹೊತ್ತಿದ್ದೇವೆ ಎಂಬ ಸಂಕೇತ ಪ್ರಾರಂಭದಲ್ಲಿ ಬಿಂಬಿಸಿದೆ.

ಶತಮಾನದ ಮೇಲೆ ಶತಮಾನ
ಉರುಳಿದರೂ
ಶತಮಾನದ ಹೊರೆ
ನಿರಾತಂಕ !
ಕತ್ತೆ ಕುದುರೆಗಳು
ಕವಿಲೆತ್ತು ಆಕಳುಗಳು
ಒಂಟೆ, ಕೋಣಗಳು
ಹೊರೆ ಹೊತ್ತು
ರಕ್ತ ಕಾರಿದರೂ
ನಿರ್ಲಾಜ್ಯಳ ಮೌನ
ಮರುಕಕ್ಕೂ ನಕಾರ

ಹಲವು ಮಾನವರ ದುಡಿಮೆ ಭಾರ ಹೊತ್ತುಕೊಂಡೇ ಭಾರವಾಗಿದೆ. ಈ ಭಾರದಿಂದ ರಕ್ತ ಕಾರಿದರೂ ಮರುಕ ಪಡುವವರಿಲ್ಲ. ಆಘಾತಕ್ಕೆ ಒಳಗಾಗುವವರಿಲ್ಲ. ಮರುಕ ಅಂದರೆ **ಕರುಣೆ**, ಅಂದರೆ **ದಯೆ** ಎಂಬುದಿಲ್ಲ. 'ದಯವೇ ಧರ್ಮದ ಮೂಲ' ಎಂಬ ಮಂತ್ರ ಕೇವಲ ಮಾತಾಗಿ ಹೋಗಿದೆ. ಮಾನವ ಕ್ರಿಯೆ ಆದಾಗಿಲ್ಲ, ಅಂದಾಗ ಧರ್ಮದ ಬಗೆಗೆ ನಾವು ಹೇಳುವುದಾದರೂ ಏನು ? ಎಂಬ ಭಾವ ಸಹಜವಾಗಿ ಮಾನವರನ್ನು ಸುತ್ತುತ್ತಿದೆ. ಪ್ರಾಣಿಗಳಂತೆ ದುಡಿಯುವ ಮನುಷ್ಯರ ಗತಿ !

ಈ ರಾಜಕೀಯ ಆಟದಲ್ಲಿ ಸರ್ವರ ಚಲ್ಲಾಟ ಒಂದಿಲ್ಲ ಒಂದು ರೀತಿಯಿಂದ ನಡದೇ ಇದೆ. ವೃತ್ತಿ ಕಲಾಕಾರರ ಸಂಸಾರದ ಸಾಮಾನುಗಳನ್ನು ಸಾಕು ಪ್ರಾಣಿಗಳು ಭಾರ ಹೊತ್ತು ಸಂಚರಿಸುವಂತೆ, ರಾಜಕೀಯ ಮುಖಂಡರ ಭಾರ ಹೊತ್ತು ಪ್ರಜೆಗಳು ಸಾಗಿರುವುದು ದುರಂತದ ಸನ್ನಿವೇಶವಾಗಿದೆ.

ಕಿಳ್ಳಿಕೇತರು, ದುರಗಮುರಗಿಯರು
ಭೈರೂಪಗಾರರು (ಬಹುರೂಪಿಗಳು)
ಹೆಳವರು, ಡೊಂಬರು, ದಾಸರು
ತುಘಾಸಖೋರರು, ಕೊರವ ಕೊಂಚಿಯವರು
ಕವಲೆತ್ತಿನವರು

ಇಂಥ ಅತಿರಥಿ ಮಹಾರಥಿಗಳ
ಗಂಟು ಹೊರುವ ಗುಲಾಮರು ಈ ಪ್ರಾಣಿಗಳು
ಆ ಊರು, ಈ ಊರು ಕಂಡಲ್ಲಿ ಕರೆವಲ್ಲಿ
ನಿಂತಲ್ಲಿ ಕುಂತಲ್ಲಿ ನೆರೆವಲ್ಲಿ ಇವರಾಟ

ಗಂಟು ಹೊತ್ತವುಗಳಿಗೆ ಪ್ರಾಣಸಂಕಟ. ಹೀಗೆ ಗಂಟಿನ ಹೊರೆ (ಭಾರ) ಹೊತ್ತಿರುವ ಪ್ರಜೆಗಳಿಗೆ ಪ್ರತಿಭಟಿಸುವ ಶಕ್ತಿಯಂತೂ ಇಲ್ಲದಾಗಿದೆ. ಈ ಪ್ರಜೆಗಳಿಗೆ ಮೌಢ್ಯತೆಯಿಂದ ಮಂಕು (ಕತ್ತಲೆ) ಬಂದಿದೆ. ಪ್ರತಿಭಟನಾ ಶಕ್ತಿ ಇಲ್ಲವಾಗಿದೆ. ಹೀಗೆ ಕೋಟ್ಯಾನುಕೋಟಿ ಮೂಕ ಪ್ರಾಣಿಗಳು (ಪ್ರಾಮಾಣಿಕ ಪ್ರಜೆಗಳು) ಬೆಳಕು ಕಾಣದೆ ಕಟುಕರ ಮನೆ ಸೇರುತ್ತಲಿದ್ದಾರೆಂಬ ಭಾವದೊಂದಿಗೆ ಕವಿ ಕವಿತೆ ಮುಗಿಸುತ್ತಾನೆ. ಆದರೆ ಪ್ರಜೆಗಳಿಗೆ ಸೂಚ್ಯವಾಗಿ ಬದುಕಿನ ಅರಿವು ಮೂಡಿಸಿ. ಹೊರೆಯೊಗೆದು ಹೊರ ಬರಲು ಮಾರ್ಗವನ್ನು ಕವಿ ತಿಳಿಸದೇ ಇರುವ ಕೊರಗು ಓದುಗರಿಗೆ ಮೂಡದೆ ಇರದು.

'ಹಂಬಲ'. ಕವಿತೆಯಲ್ಲಿ ಮಗುವಿನ ಆಶೆಯೊಂದನ್ನು ಗೊಂಬೆಯಾಟದಲ್ಲಿ ಕಾಣುತ್ತೇವೆ. ನಮ್ಮ ಸ್ಪಷ್ಟವಾದ ಇತಿಹಾಸದಲ್ಲಿ ಭಗವಾನ ಗೌತಮ ಬುದ್ಧನು 'ಆಶೆಯೇ ದುಃಖದ ಮೂಲ' ಎಂಬುದಾಗಿ ತಿಳಿಸಿರುವನು. ರಾಷ್ಟ್ರಕವಿ ಕುವೆಂಪು ಅವರು 'ಆಶೆ' ಕವನದಲ್ಲಿ ಬ್ರಹ್ಮನಿಗೂ–ಸೃಷ್ಟಿಗೂ ಗಂಡಿಗೂ–ಹೆಣ್ಣಿಗೂ ತಾಯಿಗೂ ಮಗುವಿಗೂ ಕವಿಗೂ–ಕವಿತೆಗೂ ಇತ್ಯಾದಿಯಾಗಿ ಒಂದಕ್ಕೊಂದು ಆಶೆಯ ಕೊಂಡೆಯನ್ನು ತಿಳಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಆಶೆಯ ಬಗೆಗೆ ಅನೇಕರ ಹೇಳಿಕೆಗಳೂ ಉಂಟು. ಆದರೆ ಇಲ್ಲಿ 'ಆಶೆಯೇ ನಿರಂತರ ಪುನರುತ್ಥಾನದ ಬೀಜಾಂಕುರ' ಎಂಬ ಕವಿ ಧ್ವನಿ ಹಾಗೇ ಪ್ರಕೃತಿಯಲ್ಲಿ ನಡೆಯುವ ನಿರಂತರ ಪ್ರಕೃತಿ ವ್ಯಾಪಾರವನ್ನು ಆಶ್ಚರ್ಯದಿಂದ ಎದುರು ನೋಡಲಾಗಿದೆ.

'ಹಗರಣ' ಕವಿತೆಯಲ್ಲಿ ಕಾಮುಕರ ಬಗೆಗೆ ಕವಿ ವಿವರಿಸಿದ ಸೂಕ್ಷ್ಮತೆಯನ್ನು ಕಾಣುತ್ತೇವೆ.

ಯಾವುದಾದರೂ ಅಡಪುನಾಯಿಯ ಮುತ್ತಿಟ್ಟು
ರಂಭೆ, ಊರ್ವಸಿ, ಮೇನಕೆ
ನನ್ನಿವಳಿವಳೆಂಬ ಭಾರೀ
ಅಗ್ಗದ ಖ್ಯಾತಿಯ ಜಂಬ ಮೇಲೆ
ಇದ್ದೊಬ್ಬರ ಮನೆ ಮುರಿದು
ಅದರ ಮೇಲೊಂದು ಮಹಾಮನೆ ಕಟ್ಟಿ
ಇದರ ಕರ್ತೃ ನಾನೇ ನಾನೆಂಬ ಉತ್ಕಟತೆಯ
ಕು ಕೂSS SS ಕೂSSS

ಹೀಗೆ ಸಮಾಜದಲ್ಲಿ ನಡೆಯುವ ಹಗರಣವನ್ನು ಬಯಲಿಗೆಳೆಯದೆ ಹಿಂಬಾಲಕರು ಬೇಜವಾಬ್ದಾರಿಯ ಸಂಚು ಮಾಡಿದ, ಮೋಸತನದ ರೀತಿಯನ್ನು ತಿಳಿಸಲಾಗಿದೆ.

'ಗಾಂಧೀ ಸತ್ತದ್ದೇ ವಾಸಿ!' ಕವಿತೆಯು ಜನಪದ ನುಡಿಗಟ್ಟಿಯೊಂದಿಗೆ ಪ್ರಾರಂಭವಾಗುತ್ತದೆ. 'ಕವಲು ಬದಲು (ಕಂಚಾಣ) ಕತ್ತಿ ಬದಲು ಇವರ ಬಿಟ್ಟು ಇವರಾರು?' 'ಡೊಳ್ಳು ತುಂಬುವ ಆಸೆಯಿಂದ ಹೊರಬಿದ್ದಿದೆ' ಎಂಬುದಾಗಿ ಮಹಾತ್ಮಾ ಗಾಂಧೀಜಿಯವರ ಹೆಸರಿನಿಂದ ವಿಭಿನ್ನ ರೀತಿಗಳಿಂದ ನಡೆಯಿಸಿದ ಡಾಂಭಿಕರ ಅವ್ಯವಹಾರಗಳನ್ನು ತಿಳಿಸಲಾಗಿದೆ. ಗಾಂಧೀಜಿ ಗರಡಿಯಲ್ಲಿದ್ದವರೇ ಈ ರೀತಿ ಯಾಪರೆ? ಗಾಂಧೀಜಿ ಜೀವಂತವಾಗಿದ್ದರೆ! ಏನಾಗುತ್ತಿತ್ತು. ಸತ್ತದ್ದೇ ಒಳ್ಳೆಯದು ಎಂಬ ಭಾವನೆ ಸೂಸುತ್ತದೆ.

'ನಿಲುವು' ಕವಿತೆಯಲ್ಲಿ ತನ್ನ ತಾಕತ್ತನ್ನು ಹೇಳಿಕೊಳ್ಳುತ್ತಾನೆ ಕವಿ. ಸ್ಥಿತಪ್ರಜ್ಞ ನಂತೆ ಎಂಬ ಮಾತು ಸರಿಯಾದುದಲ್ಲ! ಪ್ರಜ್ಞಸಂತೆ ಎಂಬ ಮಾತು ಅವನ ಗುರಿ ಯನ್ನು ಖಚಿತ ಪಡಿಸುತ್ತದೆ.

ಕವಿಯು ತನ್ನ ವ್ಯಕ್ತಿತ್ವವನ್ನು ಇನ್ನೂ ತೋಡಿಕೊಳ್ಳುತ್ತಾನೆ.

ತಿಳಿನೀರಿನ ಹೊನಲಿನಂತೆ
ತಣ್ಣೆಳ ತಂಪಿನಂತೆ

ನನ್ನ ಪಾಡಿಗೆ ನಾನು ಬದಕುತ್ತೇನೆ. ಹೊಳೆ ಹಾಗೂ ತಂಪು ಹೇಗೆ ಮಾನವರಿಗೆ ಉಪಕಾರಿಯೋ ಹಾಗೇ ಕವಿಯ ವ್ಯಕ್ತಿತ್ವ ಒಡೆದು ಕಾಣುತ್ತದೆ.

'ಕತ್ತಲೆಯಲ್ಲಿ ಕಣ್ಣು ಮುಚ್ಚಾಲೆ!' ಕವಿತೆಯಲ್ಲಿ ಖಾದಿ ತೊಟ್ಟು ಮನುಷ್ಯನ ಕಿತಾಪತಿ ವ್ಯಕ್ತಿತ್ವವನ್ನೂ; 'ಹಕಿಕತ್ತು' ಕವಿತೆಯಲ್ಲಿ ಚುನಾವಣೆಯ ಭ್ರಮೆಯನ್ನೂ ಸಮಾಜದಲ್ಲಿ ಹೇಗೆ ಚಿತ್ರರಿಸಲಾಗಿದೆ ಎಂಬುದಾಗಿ ವಿಷಯವನ್ನು ಸೀಳುದಾರಿಗಳಿಂದ ತಿಳಿಸಲಾಗಿದೆ.

'ಹಸಿವು' ಕವಿತೆಯಲ್ಲಿ ಆಧುನಿಕ ಸಮಾಜದ ರಾಕ್ಷಸನು ಹೆಮ್ಮರವನ್ನೆಲ್ಲ ತಿಂದು ನರರಾಕ್ಷಸನ ಪ್ರವೃತ್ತಿಯನ್ನು ತೋರಿ, ಬಳಿಕ ತಾನು ತಿಳಿಯದೇ ಗಾಂಧೀ ಆಶ್ರಮ ಸ್ಥಾಪಿಸಿ, ಅನಾಥಾಶ್ರಮಕ್ಕೆ ತಿರಗುವ ವ್ಯಕ್ತಿತ್ವವನ್ನೂ ನಿರೂಪಿಸಲಾಗಿದೆ.

'ಕುಡುಕ' ಕವಿತೆಯಲ್ಲಿ ದೈಹಿಕ ಹಾಗೂ ಬೌದ್ಧಿಕ ಶ್ರಮಿಕತನದ, ಸಮಾಜದ, ಅಂಕು ಡೊಂಕುತನದ, ಸಂಸಾರದ ತಾಪತ್ರಯಗಳ ಜಂಜಾಟದ ಹಗಲಿರುಳು ದುಡಿದು ದಣಿದ ಮನಸ್ಸಿನ ಶ್ರಮವನ್ನಡಗಿಸಲು ಕುಡಿಯುತ್ತಾನೆ, ಎಂಬುದಾಗಿ ಕುಡುಕನ ಮಾತಿನಲ್ಲಿ 'ತಲಬು' ಮಾಡುವುದಾಗಿ ವಿವರಿಸಲಾಗಿದೆ.

'ಕುಂದರನಾಡು' ಕವಿಯು ಹೆಮ್ಮೆಯ ಕವಿತೆಯಾಗಿದೆ. ಕುಂದರ ನಾಡು ಬೆಳಗಾವಿ ಜಿಲ್ಲೆಯ ಒಂದು ಮಹತ್ವದ ಹಾಗೂ ಶಕ್ತಿಯುತ ಪ್ರದೇಶವಾಗಿದೆ. ಪೌರಾಣಿಕ, ಐತಿಹಾಸಿಕ ಹಿನ್ನೆಲೆಯುಳ್ಳ ಬೆಳೆಯುವುದಕ್ಕೆ. ಸೃಷ್ಟಿ ಸೌಂದರ್ಯಕ್ಕೆ ಹೆಸರುವಾಸಿಯಾದ ಕುಂದರನಾಡಿನ ಕವಿತೆ ಮನಸ್ಸನ್ನಾಕರ್ಷಿಸುತ್ತದೆ.

ಕುಂದರ ನಾಡಿನ ಕುಂದರನ ಶ್ರೇಣಿಯು
ಮಧ್ಯದ ಚಲುವಿಕೆ ಕುಣಿಯುತಿದೆ

ಕನ್ನಡ ಮಾತೆಯು ನೆಚ್ಚಿನ ಕುವರಿಯು
ಹಚ್ಚನೆ ಸೊಬಗದು ಮೆರೆಯುತಿದೆ.

ಹಾಗೆ ವನಶ್ರೀ, ಜಲಶ್ರೀ, ಜನಶ್ರೀ, ರಾಜ್ಯಶ್ರೀ ಇಲ್ಲಿದೆ ಎಂಬುದನ್ನು ತಿಳಿಸುತ್ತ 'ಸಿದ್ಧಿಪುರುಷ ಶ್ರೀ ಅಡವಿ ಸಿದ್ಧನ ಕರ್ಮಭೂಮಿ ಭೂಕೈಲಾಸ' ಎಂಬುದಾಗಿ ಹೆಮ್ಮೆಯಿಂದ ಕವಿ ತಿಳಿಸಿದ್ದಾನೆ.

'ಕಾಬ್ಬಕ್ಕಿ' ಮತ್ತು 'ಕಲಬೆರಕಿ' ಕವನಗಳನ್ನು ಜನಪದ ಧಾಟಿಯಲ್ಲಿ ಜೀವನ ಹಾಗೂ ನಾಡಿನ ಗೋಳು ಕುರಿತು ಬರೆಯಲಾಗಿದೆ.

'ಹೆಜ್ಜೆ ಗುರುತು' ಕವಿತೆಯಲ್ಲಿ ಮನುಷ್ಯನೇ ಮಂಗತನಕ್ಕೆ ತಿರಗುವ, 'ನಂಜು' ಕವಿತೆಯಲ್ಲಿ ಸೃಷ್ಟಿಯ ವಿಕಾರ ರೂಪ ಇತ್ಯಾದಿಗಳನ್ನು ಅರುಹಲಾಗಿದೆ.

'ದೋಣಿ' ಮತ್ತು 'ಧೂಮಕೇತು' ಹಾಗೇ 'ಫ್ಯಾಶನ್' ಕವಿತೆಗಳು ವ್ಯಕ್ತಿಯ ಹಾಗೂ ಸಮಾಜದ ದುಃಖದ ಅಸಂಬದ್ಧತೆಯನ್ನು ನೀಡುತ್ತವೆ.

'ಆಧುನಿಕವಾಗಿ ಸಂನ್ಯಾಸಿ' ಕವಿತೆಯು ಓದುಗರನ್ನು ಆಶ್ಚರ್ಯಗೊಳಿಸದೇ ಇರದು. 'ಕಾವಿಯ ತೊಟ್ಟ ಸನ್ಯಾಸಿ ಮಹಾಭಂಡನು' ಎಂಬುದು ಸ್ಪಷ್ಟ ಅಭಿಪ್ರಾಯ ಹಿಡಿದ ಕವಿ, ಭಕ್ತಾದಿಗಳ ಪ್ರವಾಹವಿರುವ ಸಂನ್ಯಾಸಿಗೆ ಜನಮರುಳೋ ಜಾತ್ರೆ ಮರುಳೋ........ (ಸಂಟಕ ಮರಳೋ ಶಂಬುಲಿಂಗ) ಎಂಬುದಾಗಿ ಜನತೆಯ ಅಜ್ಞಾನಕ್ಕೆ ಎಚ್ಚರಿಕೆ ನೀಡಿದ್ದಾನೆ.

'ಹಕ್ಕಿಯ ಒಳಧ್ವನಿ' ಅರಿವಿನ ಆಳಕ್ಕೆ ನಿಂತ ಕವಿತೆಯಾದರೆ, 'ನಮ್ಮ ಹೊಲ' ದುಡಿಯುವ ಸಾಮರ್ಥ್ಯವನ್ನು ತಿಳಿಸಿದೆ.

'ನಾವು ಎಂಜಲರು' ಎಂಬುದು ಕವಿತಾ ಸಂಕಲನದ ಕೊನೆಯ ಕವಿತೆಯಾಗಿದೆ. ಈ ಕವಿತೆ ಸಮಾಜದ ದುರ್ಬಲತೆಯನ್ನು ನೀಡುತ್ತದೆ. ಆದರೆ ಈ ಅಸಾಯ ಕತೆಯ ಸ್ಥಿತಿಯಲ್ಲಿ ಕಾಲಕ್ಕೆ ಕಿತ್ತು ಏಳುವ ಎಚ್ಚರಿಕೆಯನ್ನು ನೀಡಲಾಗಿದೆ.

ನಮ್ಮ ಬಿಸಿಯುಸಿರು ಚಕಮುಕಿಯು
ಕಿಡಿಯನುಗುಳುತಿಹುದು
ಕಾಲರಾಯನ ಕರೆಗೆ ಸದಾ ಸಜ್ಜು ನಾವು
ತೋಯಿಸಿಕೊಂಡು ಮಳೆಗೇಕೆ ಹೆದರುವುದು ?

ಇಲ್ಲಿ ಕವಿಯು ದಿಟ್ಟ ಉದ್ಗಾರ ದುರ್ಬಲರಿಗೆ ಮಾರ್ಗದರ್ಶಿಯಾಗಿ ನಿಂತಿದೆ.

ಈ ರೀತಿ ಕವಿ ವ್ಯಕ್ತಿಗತದಿಂದ ವಿಸ್ತಾರದವರೆಗೆ ಹಲವು ಹನ್ನೆರಡು ವಿಷಯ ಗಳನ್ನೂ ಸೂಕ್ಷ್ಮ ಎಳೆಗಳನ್ನೂ ತಿಳಿಸಿದ್ದಾರೆ. 'ಹೀಗೆಲ್ಲ ಇದ್ದಾಗ ಶ್ರೀ ಶಿವಲಿಂಗಪ್ಪ ಭಾವಿಕಟ್ಟಿ ಅವರನ್ನು ನೀವು ಓದಬೇಕು' ಎಂಬ ಶ್ರೀ ಬಿ. ಸಿ. ದೇಸಾಯಿಯವರು ತಮ್ಮ ಹಿತನುಡಿಯಲ್ಲಿ ಹೇಳಿದ್ದಾರೆ. ಕಾರಣ 'ಹೊರೆ' ಸಂಕಲನ ಓದುವ ಕವನ ಸಂಕಲನ ಹಾಗೂ ತಿಳಿಯುವ ವಿಷಯವಾಗಿದೆ.

ಸಿಂಪಿ ಲಿಂಗಣ್ಣನವರ 'ಮುಗಿಲ ಜೇನು'

ಡಾ॥ ಸಿ. ಪಿ. ಕೆ.

ಸಿಂಪಿ ಲಿಂಗಣ್ಣನವರ 'ಮುಗಿಲ ಜೇನು' ಸುಮಾರು ಮೂರು ದಶಕಗಳ ಹಿಂದೆ ಪ್ರಕಟವಾದ ಕವನ ಸಂಕಲನ. ಸರ್ವೋದಯ ಕಾವ್ಯದ ಬಹುತೇಕ ಲಕ್ಷಣಗಳನ್ನು ಇದು ಧಾರಣಮಾಡಿಕೊಂಡು, ಆ ಕಾಲದ ಕಾವ್ಯಸಂಪ್ರದಾಯಕ್ಕೆ ಪ್ರಾತಿನಿಧಿಕವಾಗಿದೆಯೆನ್ನಬಹುದು. 'ಮುಗಿಲ ಜೇನು' ಎಂಬ ಶೀರ್ಷಿಕೆಯೆ ಇದರಲ್ಲಿರುವ ಕವನಗಳ ಸ್ವರೂಪದ ಮೇಲೆ ಬೆಳಕು ಕೆಡಹುವಂತಿದೆ.[1] ವಿಶೇಷವಾಗಿ ಅಧ್ಯಾತ್ಮ ಅನುಭಾವಗಳತ್ತ ಮೊಗಮಾಡಿ ನಿಂತ ಈ ಕವನಗಳು ವಾಸ್ತವಿಕತೆ, ಸಮಕಾಲೀನ ಪ್ರಜ್ಞೆ, ಸಾಮಾಜಿಕ ಪ್ರಜ್ಞೆ ಯಂತಹ ಅಳತೆಗೋಲುಗಳನ್ನು ಅಷ್ಟಾಗಿ ತಣಿಸಲಾರವು. ಆದರೆ ಇವಷ್ಟೇ ಕಾವ್ಯವನ್ನಳೆಯುವ ಮಾನದಂಡಗಳಲ್ಲ ವೆಂಬುದನ್ನು ನೆನಪಿಡಬೇಕು. 'ರೊಮ್ಯಾಂಟಿಸಿಸಂ'

---

1 'ಪರಿಚಯ'ದಲ್ಲಿ ಮಧುರಚೆನ್ನರು ಆಡಿರುವ ಈ ಮಾತುಗಳನ್ನೂ ಗಮನಿಸಬಹುದು : "ಬಹುಕಾಲದ ಪರಿಶೀಲನದ ಭಟ್ಟಿಯಲ್ಲಿ ಕರಗಿ ದೈವಾನುಗ್ರಹದಿಂದ ಕಾಲಕ್ರಮದಲ್ಲಿ ಪ್ರಾಪ್ತವಾಗುವ ಒಂದು ಸ್ವೋಚಿತವಾದ ಪಡಿಯಚ್ಚಿನಲ್ಲಿ ಎರಕ ಹೊಯ್ಯಲ್ಪಟ್ಟು ಜೀವನ ವೈಶಿಷ್ಟ್ಯವು ರೂಪುಗೊಳ್ಳುವ ಮಾಹೇಂದ್ರ ಮುಹೂರ್ತದಲ್ಲಿ ಹೃದಯವು ಮಂಗಲ ಗೀತವನ್ನು ಹಾಡತೊಡಗುತ್ತದೆ. 'ಮುಗಿಲ'ಜೇನು' (Honey of the Infinity) ಅಂಥ ಗೀತಗಳದೊಂದು ಸಂಗ್ರಹ".

ಎಂಬುದು ಪಲಾಯನವಾದಕ್ಕೆ ಪರ್ಯಾಯನಾಮವೇನಲ್ಲ. ಇಲ್ಲಿನ ಕವನಗಳ ವಸ್ತು ತ್ರಿಕಾಲಸಂಗತವಾದದು.

ಪ್ರಕೃತ ಕವನ ಸಂಕಲನಕ್ಕೆ ಮುನ್ನುಡಿ ಬರೆದಿರುವ ಮಾಸ್ತಿಯವರು, ಲಿಂಗಣ್ಣನವರು ಸಹಜವಾಗಿ ಭಾವುಕರು' ಎಂದು ಯಥಾರ್ಥವನ್ನೆ ನುಡಿದಿದ್ದಾರೆ. ಭಾವುಕತೆ ಇಲ್ಲಿನ ಎಲ್ಲ ಕವನಗಳನ್ನೂ ತೇವಗೊಳಿಸಿದೆ, ನಿಜ; ಆದರೆ ಅದು ಕೆಲವಡೆಗಳಲ್ಲಾದರೂ ವೈಚಾರಿಕತೆಯನ್ನು ಒಳಗೊಳ್ಳದಿಲ್ಲ. ವಿಚಾರದ ಹೊಳಹು ಭಾವದೊಡನೆ ಬೆರೆತ ಸಂದರ್ಭಗಳಲ್ಲಿ ತಕ್ಕಮಟ್ಟಿಗೆ ಪ್ರಬುದ್ಧವಾದ ಕವಿತೆಗಳನ್ನು ಕೊಟ್ಟಿದ್ದಾರೆ ಸಿಂಗಯವರು; ಪ್ರತಿಮಾತ್ಮಕವಾದ ಅನೇಕ ಕವನಗಳು ಈ ಮಾತಿಗೆ ಸಾಕ್ಷಿ ನಿಲ್ಲುತ್ತವೆ.

೨

ಪ್ರತಿಮಾನಿರ್ಮಾಣ ನವ್ಯಕಾವ್ಯದ ಸ್ವಾಮ್ಯವೇನಲ್ಲ; ಅದು ನವೋದಯ ಕಾವ್ಯದಲ್ಲೂ ಉಂಟು. ಹಾಗೆ ನೋಡಿದರೆ, ಪ್ರತಿಭೆಯಿದ್ದಲ್ಲಿ ಪ್ರತಿಮೆ ಆವಿರ್ಭವಿಸಲೇಬೇಕು. ಮೊದಲು, ಸಿಂಪಿಯವರ ಪ್ರತಿಮಾನಿಷ್ಠ ಕವನಗಳತ್ತ ದೃಷ್ಟಿ ಹಾಯಿಸೋಣ.

ಮಾನವ ಹೇಗೆ ತನ್ನ ಅಸ್ಥಿರತೆಯಿಂದ ದೈವೀಕೃಪೆಗೆ, ದಿವ್ಯಾನಂದಕ್ಕೆ ಎರವಾಗಿದ್ದಾನೆ ಎಂಬುದನ್ನು 'ಮುಗಿಲ ಜೇನು' ಕವನ ತಿಳಿಸುತ್ತದೆ. ಮರದ ಕೊಂಬೆಗೆ ಕಟ್ಟಿದ ತೊಟ್ಟಿಲಿನಲ್ಲಿ ಒಂದು ಹಸುಗೂಸು ಪವಡಿಸಿದೆ. ಕೊಂಬೆಯಿಂದ ಜೇನು ತೊಟ್ಟಿಕ್ಕುತ್ತಿದೆ. ಆದರೆ ತೊಟ್ಟಿಲು ಅತ್ತಿಂದಿತ್ತ ತೂಗಾಡುತ್ತಿರುವುದರಿಂದ ಜೇನು ಮಗುವಿನ ಬಾಯಿಗೆ ಬೀಳುತ್ತಿಲ್ಲ. ಈ ಕಲ್ಪನೆಯಲ್ಲಿ ನಾವೀನ್ಯವಿದೆ. ಮಗು ಮಾನವನಿಗೆ, ಜೇನು ಅತೀಂದ್ರಿಯಕ್ಕೆ, ತೊಟ್ಟಿಲು ಸಂಸಾರಕ್ಕೆ ಪ್ರತೀಕಗಳಾಗಿವೆ.

'ಬಯಲಾಟ' ಕವನದಲ್ಲಿ "ಕಲ್ಲುಕಲ್ಲಿಗು ಕಣ್ಣು, ಹುಲ್ಲು ಕಡ್ಡಿಗು ಕಿವಿಯು" ಎಂಬ ದಾರ್ಶನಿಕ ಭಾವವಿದೆ. ಕಲ್ಲು, ಕಡ್ಡಿಗಳಲ್ಲೂ ಚೈತನ್ಯವಿದೆ ಯೆಂಬುದನ್ನು ಇಲ್ಲಿ ವಿಶಿಷ್ಟವಾಗಿ ಅಭಿವ್ಯಕ್ತಿಸಲಾಗಿದೆ. ಈ ಬದುಕೊಂದು ಬಯಲಾಟ, ಇದರಲ್ಲಿ ಸ್ವಲ್ಪವಾದರೂ ತಾದಾತ್ಮ್ಯ ಬೇಕು ಎನ್ನುತ್ತಾರೆ ಕವಿ :

ತೊಟ್ಟ ವೇಷದಲಿನಿತು ಕಲೆಯು ಕಳೆಗೊಳುವಂತೆ
ಮೈಮರೆಯೆ ಹಿಗ್ಗಿನಾವೇಶವದು ಬೇಡಲೇ?

ಸಂಕಷ್ಟ ಸಂಕಟಗಳ ಕುಲುಮೆಯಲ್ಲಿ ಬಾಳು ಕಾಳಿಕೆಯನ್ನು ನೀಗಿಕೊಂಡು ಹಸನಾಗುತ್ತದೆಂಬುದನ್ನು 'ಅಕ್ಕಸಾಲೆ' ಕವನ ನಿರೂಪಿಸುತ್ತದೆ. ಕುಂಡ, ಸುತ್ತಿಗೆ, ಇಕ್ಕಳ ಮುಂತಾದುವು ಅಕ್ಕಸಾಲೆಯ ಬಳಿ ಇವೆ; ಅವನ್ನು ಕಂಡು, ಹೊಸದಾಗಿ ಬಂದ ಚಿನ್ನ ಬೆಳ್ಳಿಗಳಿಗೆ ಹೆದರಿಕೆ. ಆಗ ಒಂದು ಚಿನ್ನದೊಲೇ ಸಮಾಧಾನ ಹೇಳುತ್ತದೆ :

ಮರಳುರಿರಾ ! ಏಕಿಂತು ಮರುಗುತಿಹಿರೆಲೆ !
ಆ ಹಾಡೆ ಮೊದಲು ನನಗೂ ಇತ್ತು.
ಕರ್ತಾರನೊಲಿದು ಕೈವಿಡಿದ ಗಳಿಗೆಯೇ ಹಿರಿಯೋಗ !
ಕೆಚ್ಚು ಕೆಂಡದಿ ಮಿಂದೆ ! ಏಟು ಎದೆಯುರಳಿಸಿತು !
ಪಡಿಯಚ್ಚಿನೊತ್ತಿನಲಿ ಅಚ್ಚರೂಹಾಗಿಹೆನು
ಇಂದಿದೋ ಮಡಿಯುಟ್ಟು ಮಂದಿರಕೆ ನಡೆದಿಹೆನು
ಒಲಿದರಸಿ ಕವಿಯೊಳಗಿರಿಸೆ ಅದುವೆ ಧ್ರುವಪದವೆನಗೆ !

ಕಡೆಯಲ್ಲಿ ಬರುವ ಈ ವಾಚ್ಯವಾದ ಹೇಳಿಕೆ ಅನಪೇಕ್ಷಣೀಯ :

ಇದನರಿತು ಅಳಿಮನವ ಕಳೆದೊಗೆಯಬೇಕು,
ಮಾತಾಯಿ ನಲುಮೆಯನು ನಚ್ಚಬೇಕು.

'ಮುರಿದು ಬಿದ್ದ ಕತ್ತಿ' ಒಂದು ಕತೆಯೂ ಹೌದು ; ಅದು ಕತ್ತಿಯ ಆತ್ಮಕಥೆ. "ಬಾಳುವೆಯ ಬಲಿಗೊಟ್ಟು ಮರಣವೇ ಶರಣೆಂದು ಸೋಲುವುದು ಮುಪ್ಪು" ಎಂಬುದು ಅದರ ನೇತ್ಯಾತ್ಮಕ ಸಂದೇಶ.

'ಮೋಡಿಕಾರ' ಕವನದಲ್ಲಿ ಇಂದ್ರಜಾಲದ ಚಿತ್ರವಿದೆ. ಸೃಷ್ಟಿಯೆ ದೇವನ ಇಂದ್ರಜಾಲ : ಅದರ ಗುಟ್ಟು ಯಾರಿಗೂ ಗೊತ್ತಿಲ್ಲ. ಪ್ರಶ್ನೆ ಆಶ್ಚರ್ಯಗಳ ಭಂಗಿಯಲ್ಲಿ ನಿಲ್ಲುತ್ತದೆ ಕವನ :

ಆಟ ಹೂಡಿದ ದಿವಸವೆಂದೊ ಏನೊ !
ಮುಗಿವ ಮಿತಿ ತಿಳಿವುದೇನೂ ?

'ಬಂಗಾರ ಬೆಟ್ಟ'ವೂ ಒಂದು ರೂಪಕಕಥೆ. ಕಾಡುನಾಡುಗಳಾಚೆ, ಹಿಮಗಿರಿಗಳ ಹಿಂದೆ ಧವಲಗಿರಿ ಶಿಖರದಲ್ಲಿ ಅರಸನೊಬ್ಬನಿದ್ದಾನೆ, ಅವನಲ್ಲಿ ರತ್ನ ರಾಶಿಯೆ ಇದೆ, ಕೇಳಿದವರಿಗೆ ಕೊಡುತ್ತಾನೆ— ಎಂದು ಒಬ್ಬ ಹೇಳುತ್ತಾನೆ. ಅದನ್ನು ಕೇಳಿ ಕೆಲವರು ಅತ್ತ ಪಯಣ ಕೈಗೊಳ್ಳುತ್ತಾರೆ.

ಬೇಡಿ ತಂಪುದು ರನ್ನ ಹೊನ್ನದ ಹೊರೆಯಿದ್ದರೂ ನಿನಗಲ್ಲವದು !
ದುಡಿದು ಪಡೆ, ತೋಳ ಬಲವಿರುವಲ್ಲಿ ಬೊಕ್ಕಸದ ಕೀಲಿ !
ಹೋಗುವದು ನೀನೇಕೆ ಧವಳಗಿರಿಗೆ ?
ಹರಿಯು ಬರುವುದು ತಾನೆ ಹೊನ್ನ ಹೊಳೆಯಾಗಿ.
ಕಟ್ಟು ಕೊತ್ತಳವೊಂದು ! ಕಾಪಾಳುಗಳನಣಿಗೊಳಿಸು !

ಕಾಯಕದ ಮಹತ್ವ ಹಾಗೂ ಪರವನ್ನು ಪುರಸ್ಕರಿಸುವ ಭರದಲ್ಲಿ ಇಹವನ್ನು ಮರೆಯುದ ಪ್ರವೃತ್ತಿ ಇಲ್ಲಿ ಸೂಚಿತವಾಗಿವೆ.

ಈ ಲೋಕವೊಂದು ಮನೆ, ಇದರಲ್ಲಿ ಅಸಮತೆಗಳು, ಭಿನ್ನತೆಗಳು, ವಿರೋಧಗಳು ಅನಂತವಾಗಿ ಕಂಡುಬರುತ್ತವೆ. ಇದಕ್ಕೆ ಕಾರಣವೇನೆಂದು ಕವಿ ಆಲೋಚಿಸುತ್ತಾರೆ ('ಒಂದೆ ಮನೆಯಲ್ಲಿ') :

ಇದಕೆ ಕಾರಣವರಸಿ ತಿಳಿಯಲಿಕೆ ಸುಲಭವೇ ?
ಮನೆಯೊಡೆಯು ನ್ಯಾಯುವೆನ್ನಬಹುದೇನು ?
ಕೃತಿಯಂತೆ ಫಲದೂಟವೆನಲಾಗದೇನು ?

'ದುಡಿಮೆ' ಬಹಳ ಅರ್ಥವತ್ತಾದ ಕವನ. ತಂದೆಯೊಡನೆ ಸಂತೆಗೆ ಹೋದ ಬಾಲಕ, ತಾನೇ ಗಂಟು ಹೊರುವುದಾಗಿ ಹಟ ಹಿಡಿಯುತ್ತಾನೆ. ಆಗ ತಂದೆ ಗಂಟನ್ನು ಮಗನ ತಲೆಯ ಮೇಲಿರಿಸಿ, ಅದನ್ನು ತಾನು ಮೇಲೆ ಹಿಡಿದುಕೊಳ್ಳುತ್ತಾನೆ. ಕವಿ ಆಶ್ವಾಸನೆ ಕೊಡುತ್ತಾರೆ :

ಶಕ್ತಿ ಸಾಲದಾದರೇನು ?
ಭಾರವಾದ ಹೊರೆಯ ಹೊರಲು
ನಿಂತ ಕ್ಷಣವೆ ತಂದೆ ಮೇಲೆ
ಗುಪ್ತ ಹಸ್ತದಿಂದ ಎತ್ತಿ
ಹಿಡಿದು ನಮ್ಮ ನಡೆಸಬರುವನು.

ಅದ್ವೈತತತ್ತ್ವ ಇಂಗಿತವಾಗಿದೆ 'ಕಡಲಿನಾಳದಲ್ಲಿ' ಎಂಬ ಕವಿತೆಯಲ್ಲಿ, ಸಾಗರದಾಳದ ಸುಪ್ತಲೋಕದಲ್ಲಿ—ಇದು ಸುಪ್ತ ಪ್ರಜ್ಞೆಗೆ ಸಂಕೇತವೂ ಆಗಬಹುದು –ನಾನಾ ವಿಧದ ಆಕೃತಿ ವರ್ಣಗಳನ್ನುಳ್ಳ ಮಡಕೆಗಳಿವೆ, ಅವುಗಳು ಬಣ್ಣ ನೀರಿಗೂ ಬಂದಿದೆ. ಆದರೆ ಅವು ಒಡೆದಾಗ, ವರ್ಣ ರೂಪಗಳಳಿದ ಎಲ್ಲೆಲ್ಲಿಯೂ ನೀರು ಮಾತ್ರ ಉಳಿಯುತ್ತದೆ.

'ಡಬ್ಬುಗಳ್ಳಿ' ಎಂಬ ಕವನದಲ್ಲಿ ಕಳ್ಳಿ ಕೆಟ್ಟದ್ದರ ಸಂಕೇತವಾಗಿದೆ. ಆದರೆ "ಕಳ್ಳಿಯೇ, ನಿನಗೆಂದು ಮರಣವಿಲ್ಲವು–ನೀನು ಭಾರತದ ಸಂಸ್ಕೃತಿಯಂತೆ ! !" ಎಂಬ ಹೋಲಿಕೆ ಸಾಧುವಾಗಿ ತೋರುವುದಿಲ್ಲ–ಭಾರತೀಯ ಸಂಸ್ಕೃತಿಯ ಬಗೆಗೆ ಅದು ವಿಡಂಬನವಾಗುವುದರಿಂದ (ಕವನ ಭಾರತೀಯ ಸಂಸ್ಕೃತಿಯನ್ನು ಕುರಿತದ್ದು ಎಂದಿಟ್ಟು ಕೊಂಡರೆ, ಅದು ಅತಿವಾಚ್ಯತೆಯ ಅಪಾಯಕ್ಕೆ ಪಕ್ಕಾಗಿದೆಯೆನ್ನಬೇಕು).

ಈ ಜೀವನವೊಂದು ಕಣ್ಣುಮುಚ್ಚಾಲೆ ; ಈ ಆಟ ಕೊನೆಗೊಳ್ಳಬೇಕು :

"ಕಣ್ಣು ಮುಚ್ಚುವಾಟ ಸಾಕು. ಕಣ್ಣು ತೆರೆಯುವಾಟ ಬೇಕು" ('ಈ ಆಟ ಸಾಕು'), ಕಣ್ತೆರೆಯುವ ಕ್ರಿಯೆ ಪಾರಲೌಕಿಕವಾದ ಅರಿವು, ಎಚ್ಚರಗಳನ್ನು ವ್ಯಂಜಿಸುತ್ತದೆ.

೩

ಈಗ ಇತರ ಕೆಲ ಕವನಗಳನ್ನು ನೋಡಬಹುದು. 'ಕಾಳಿಯ ಕರದ ಕರವಾಲ ನಾನು', 'ಫಲದಾಸೆಯಿಲ್ಲದಾ ವೀರಕರ್ಮಿ ನಾನು !' ಎಂಬ ಧೀರ ನಿಲುವನ್ನು ಕವಿ 'ಕರವಾಲ'ದಲ್ಲಿ ಪ್ರಕಟಿಸುತ್ತಾರೆ. 'ಬೇಡಲಾರೆ'ಕವನದಲ್ಲಿ ಇಂಥದೇ ನಿಲುವಿದೆ. "ನಾನೆ ಒಂದು ನನ್ನ ಓಡವೆ, ಬೇಡಿದೊಡನೆ ಕೊಟ್ಟು ಬಿಡುವೆ" ಎನ್ನುತ್ತಾರೆ ಕವಿ.

'ಭಯ'ದಲ್ಲಿ ಉಪನಿಷತ್ತಿನ ಪ್ರಭಾವವಿದ್ದರೂ "ಬೆಟ್ಟ ಬೆಟ್ಟಗಳ ಸಾಲು ಭಯದಿ ಕೈಕೈ ಹಿಡಿದಿದೆ" ಮುಂತಾದ ಸಾಲುಗಳಲ್ಲಿ ಉತ್ತುಂಗ ಕಲ್ಪನೆಯಿದೆ. ಇಂತಹುದೇ ಭವ್ಯಕಲ್ಪನೆಯನ್ನು 'ಹಿರಿಮೆ'ಯಲ್ಲೂ ಕಾಣಬಹುದು. ತನ್ನ ಪುಟ್ಟಮನೆಗೆ ಮುಗಿಲೆ ಚಾವಣಿ, ಚಿಕ್ಕೆ ಕಳಸ, ವಾಯು ಕಸಗುಡಿಸುವವನು, ಅಗ್ನಿ ಅಡುಗೆ ಮನೆಯಾಳು, ಪ್ರಕೃತಿ ಅಡುಗೆಯವಳು, ನವಗ್ರಹ ಮಂತ್ರಿವರ್ಗ, ಮೇಘರಾಜ ತೋಟದಾಳು ಎಂದು ಕವಿಚೇತನ ಭಾವಿಸುತ್ತದೆ. ಇಲ್ಲಿರುವುದು ಅಹಂಕೃತಿಯಲ್ಲ. ನಮ್ರತೆ, ಏಕೆಂದರೆ "ಇದು ಮಗನಿಗೆ ತಂದೆಯಿತ್ತ ಪುಟ್ಟರಾಜ್ಯ"ಎಂಬ ತಿಳಿವಳಿಕೆ ಕವಿಗಿದೆ. "ಇಲ್ಲಿ ಆಳ್ವ ಶಕ್ತಿ ಪಡೆಯೆ ಹಿರಿಯ ರಾಜ್ಯಕಾನೆ ಒಡೆಯ–ಆಗ ಸಾರ್ವಭೌಮ ನಾನೆ."

ಪ್ರಕೃತಿ ವ್ಯಾಪಾರಗಳನ್ನು ಕಂಡು ಕವಿಗೆ ಅಚ್ಚರಿಯಾಗುತ್ತದೆ:

> ತಿಳಿನೀರಿನ ಜುಳುಜುಳು ದನಿಯ ಮರ್ಮ
> ಗಾಳಿಯ ಕೊಳಲಿನರ್ಥ, ಮುಗಿಲಲ್ಲಿ
> ಮಿಂಚಿನ ಬರಹ, ಮೇಘಚಿತ್ರ, ಚಂದ್ರನಿಚ್ಚೆ
> ಇತ್ಯಾದಿಗಳೆಲ್ಲ ಏನು ?

ಈ ಅಚ್ಚರಿಯಿಂದ ಪ್ರಶ್ನೆ ಮೂಡುತ್ತದೆ: "ಎತ್ತ ನೋಡಿದರು ತಿಳಿಯದ ತೊಡಕೇ, ತಿಳಿದು ತಣಿವೆನೆಂದು ?" ('ಅಚ್ಚರಿ').

'ಸತ್ಯವಾವುದೋ' ಕವನದ ಈ ಜಿಜ್ಞಾಸೆಯೂ ಗಮನಾರ್ಹವಾದುದು :

> ಯುಗಯುಗಗಳಿಂದ ಜ್ಞಾನದ ಗಣಿ ಅಗೆಯುತ್ತಿದ್ದಾರೆ
> ಸೂಜಿಯಿಂದ ಸಾಧ್ಯವೆ ?

ಕಡೆಗೆ ಕವಿ ಉದ್ಗರಿಸುತ್ತಾರೆ: "ತಿಳಿಯಲಾರೆ! ತಿಳಿಯಲಾರೆ! ಸತ್ಯವಾವುದೋ!" ಇನ್ನೊಂದು ಕಡೆ "ಲೋಕನಾಥನ ಗುಟ್ಟು ಅರ್ಥವಾಗದ ಒಗಟು"ಎಂಬ ಉದ್ಗಾರ ಇದೆ.

"ಸೂರ್ಯಚಂದ್ರರೆನ್ನ ಕಣ್ಣು, ಭೂಮಿತಾಯಿ ನನ್ನ ಮೈಯು"ಎಂಬ ವಿಶೇಷಾನುಭವವಿದೆ 'ಒಂದು ಬೆಳಗು' ಕವನದಲ್ಲಿ. ಪ್ರಕೃತಿಯಲ್ಲಿ, ತನ್ಮೂಲಕ ದೇವನಲ್ಲಿ ಒಂದಾಗುವ ಆಸೆಯನ್ನು ಹೇಳಿಕೊಳ್ಳುತ್ತಾರೆ ಕವಿ: "ತೊಗಟೆಯೆ ಆಗಲಿ ಕಿರಿಯೊತ್ತಾಗಲಿ ನಿನ್ನಂಗವೆ ಆಗುವ ಆಶೆ" ('ಆಶೆ').

ಸೃಷ್ಟಿ ಭಗವಂತನ ಮಹಾಕಾವ್ಯವಾಗಿ ತೋರುತ್ತದೆ.

> ಕಾಡುಗಳು ನಾಡುಗಳು ಹಕ್ಕಿಗಳು ಹುಲ್ಲೆಗಳು
> ಮಾನವರು ದಾನವರು ಮುಗಿಲ ಜಲ ಚಿಕ್ಕೆಗಳು
> ಮರಬಳ್ಳಿ ಹೂಕಾಯಿ ಮುಳ್ಕಲ್ಲು ಹುಲ್ಲುಗಳು
> ಸರ್ವವೂ ಆ ಮಹಾಕಾವ್ಯದಲಿ ವಸ್ತುಗಳು.
>
> ('ಮಹಾಕಾವ್ಯ')

ಈ ಮಹಾಕಾವ್ಯದ ಮುಂದೆ ಮಾನವನ ಕವನಗಳು ಬರಿಯ 'ಹುಡಿಯಾಟ'. ಸಮರ್ಪಣಭಾವ 'ಸ್ವೀಕರಿಸು' ಕವನದಲ್ಲಿ ವ್ಯಕ್ತವಾಗುತ್ತದೆ :

ದೇವ ಶಿಲ್ಪಿಯೆ ! ಕೇಳು, ನಾ ಬಲು ಬಿರುಸು ಕಲ್ಲಾಗಿರುವೆನು !
ಯಾವ ಒಡವೆಯು ಮಾಡಿಬಿಡುವೆಯೊ ನಿನ್ನ ಕೈಯಲಿ ಕೊಡುವೆನು !

ಇಂಥ ಅರ್ಪಿತ ಚೇತನಕ್ಕೆ 'ಏನು ಕೇಳಲಿ ?' ಎಂಬ ಸಂದಿಗ್ಧ ಸ್ಥಿತಿಯುಂಟಾಗುತ್ತದೆ. ಇಷ್ಟು ಮಾತ್ರ ಕೇಳುವುದು ಸಾಧ್ಯ :

ಅಂತೆ ಪರಮನರಸುವಂತೆ
ಒಂದು ನೆನಹು ಉಳಿದುಬಿಡಲಿ.
ಯಾವ ಕ್ಷಣವೊ ಸಾವಿನ ಗಳಿಗೆ !
ಎಂಬ ನೆನಹು ಉಳಿದುಬಿಡಲಿ.

ಲೋಕದ ಅನಿಷ್ಟಗಳಿಗೆ ಕವಿ ಕೊಡುವ ಎಚ್ಚರಿಕೆಯಿದು :

ಸುಳಿಸುಳಿದು ಬಂದರೊಳಿತಲ್ಲ ನನ್ನ ಅಪ್ಪನಿಗೆ ಹೇಳುವೆನು;
ಜೋಕೆ, ಮೈಮುರಿಸಿಕೊಳ್ಳುವುದು ಬೇಕೆ ?

ಈ ಮಾತಿನಲ್ಲಿ ಮಕ್ಕಳ ಮಾತಿನ ಮುಗ್ಧ ಹೃದ್ಯ ನಾಟಕೀಯ ಧಾಟಿಯಿದೆ.

ಒಳ್ಳೆಯ ಏಳ್ಗೆಯಿಲ್ಲ ಎಂದು ಕೊರಗುವ ಕವಿ, ಕಡೆಯಲ್ಲಿ "ದುಃಖ ಸೋಲಿನ ಭಯದಿ ಒಡವೆಯಾಗುವರು"ಎಂದು ಸಮಾಧಾನ ಹೇಳುತ್ತಾರೆ ('ದೇವರಾಯುಧ').

'ಪುಕ್ಕನರಿ'ಯೊಂದು ಅನ್ಯೋಕ್ತಿ. ಪುಕ್ಕ ನರಿ ಹೀಗೆ ಯೋಚಿಸುತ್ತದೆ: "ಎಲ್ಲಿ ಹೋದರೂ ಎಲ್ಲರಿಗೂ ನನಗೆ ಕೇಡು ಬಗೆಯುವ ಯೋಚನೆ". ಆಗ ಕಪ್ಪೆಯೊಂದು ಹೇಳುತ್ತದೆ:

ನಿನ್ನ ಕೇಡು ಬಗೆಯುವುದೊಂದೆ ಲೋಕಕಿರುವ ಕಾರ್ಯವೆ ?
ಕೇಡು ಬಗೆಯ ನಿಂತ ಲೋಕಕೇಡೆ ನೀನು !

ಜಗತ್ತಿನಲ್ಲಿ ಬರಿಯ ಕೇಡು ತುಂಬಿಲ್ಲ, ಒಳಿತೂ ಇದೆ; ಧೈರ್ಯದಿಂದ, ಶ್ರದ್ಧೆಯಿಂದ ಬದುಕಬೇಕು–ಎಂಬ ಉಪದೇಶ ಇದರಿಂದ ಧ್ವನಿತವಾಗುತ್ತದೆ.

ಬೇಲೂರಿನ ಶಿಲ್ಪಕಲಾ ವೈಭವವನ್ನು ಕಂಡ ಕವಿ, ಹೀಗೆ ಪರಿಭಾವಿಸುತ್ತಾರೆ :

ನಾಡ ಸಿರಿಯ ನುಂಗಿ ನಿಂತ ಕಾಲನಿವನು ನುಂಗನು,
ಕಲ್ಗಳಿಂದು ಒಗೆದನು,
ನಾಡ ಪುನರ್ ಜೀವಕಿದುವೆ ಬೀಜವೆಂದು ಬಗೆಯನು
ಅದರ ಕೀಲಿ ತೆಗೆಯನು.

('ಜೀವಶಿಲೆ')

ವಿಮರ್ಶಕನನ್ನು ಕುರಿತು "ಹೀನ ದಕ್ಷಿಣೆಗೆ ಬಲಿಬಿದ್ದ ಬಡ ಪೂಜಾರಿಯೇ !" ಎಂದು ವಿಡಂಬಿಸಲಾಗಿದೆ ('ವಿಮರ್ಶಕ'). ಸಿಂಪಿಯವರಲ್ಲಿ ಹಾಸ್ಯ ವಿಡಂಬನಗಳ ಲಾಘವ ಕಡಮೆ.

೪

ಇದು 'ಮುಗಿಲ ಜೇನು' ಸಂಕಲನದ ಸ್ಥೂಲಾವಲೋಕನ. ಇಲ್ಲಿನ ಕವನಗಳಲ್ಲಿ ಗಹನತೆ, ಗಾಂಭೀರ್ಯಗಳಿವೆ ; ಚಿಂತನ ಮಂಥನ ಮನನಗಳ ಫಲಗಳಾಗಿ ಇವು ಹೊಮ್ಮಿವೆ. ಕವಿ ಇಲ್ಲಿ ಕೇವಲ ಕವಿಯ ಹಂತದಲ್ಲೆ ಉಳಿಯದೆ, ಸಾಧಕನ ನೆಲೆಯಲ್ಲಿ ನಿಂತಿರುವುದು ಕಂಡುಬರುತ್ತದೆ. ಎಂತಲೇ ಈ ಕವಿತೆಗಳು ಸಂತೋಷವನ್ನು ಮಾತ್ರವಲ್ಲದೆ ಸಂದೇಶವನ್ನೂ ಕೊಡುತ್ತವೆ. ಈ ಕಾರಣದಿಂದಲೆ ಇವುಗಳಲ್ಲಿ ಕೆಲವು ದೌರ್ಬಲ್ಯಗಳೂ ಗೋಚರಿಸುತ್ತವೆ. ವಾಚ್ಯತೆ ಹಾಗೂ ಅತಿಯಾಗಿ ಹಿಂಜುವಿಕೆ ಎರಡು ಮುಖ್ಯವಾದ ದೋಷಗಳು. (ಅತಿಯಾಗಿ ಲಂಬಿಸಿದುದಕ್ಕೆ 'ವಿಶ್ವವೃಕ್ಷ' ವನ್ನೂ ನಿದರ್ಶನವಾಗಿ ಹೆಸರಿಸಬಹುದು). ಇದರಿಂದ ಅಭಿವ್ಯಕ್ತಿಯಲ್ಲಿ ಶೈಥಿಲ್ಯಕೆ ಆಸ್ಪದವಾಗಿದೆ. ಧ್ವನಿಪೂರ್ಣತೆ, ಸಂಕ್ಷಿಪ್ತತೆಗಳನ್ನು ಇನ್ನಷ್ಟು ಕಟ್ಟುನಿಟ್ಟಾಗಿ ಕಾಪಾಡಿಕೊಂಡಿದ್ದಲ್ಲಿ, ಕವನಗಳು ಮತ್ತೂ ಉತ್ತಮವಾಗುತ್ತಿದ್ದುದರಲ್ಲಿ ಸಂದೇಹ ವಿಲ್ಲ. ಆದರೆ ಈ ಪರಿಮಿತಿಗಳನ್ನು ಪರಿಗಣಿಸಿಯೂ ಸಿಂಪಿಯವರು ಕೆಲವು ಒಳ್ಳೆಯ ಕವನಗಳನ್ನು–ಕವನ ಭಾಗಗಳನ್ನು ಎನ್ನುವುದು ಹೆಚ್ಚು ಸಮರ್ಪಕವಾಗಬಹುದು– ಕೊಟ್ಟಿದ್ದಾರೆಂದು ಹೇಳಬೇಕು. ಅಂಥ ಎಡೆಗಳಲ್ಲಿ ಅವರ ಸ್ವೋಪಜ್ಞತೆ ಲಕ್ಷ್ಯಕ್ಕೆ ಬರುತ್ತದೆ.

ಒಟ್ಟಿನಲ್ಲಿ, 'ಮುಗಿಲ ಜೇನು' ಚಾರಿತ್ರಿಕ ಪ್ರಾಮುಖ್ಯವುಳ್ಳ ಕವನ ಸಂಗ್ರಹ ; ಅಂತೆಯೆ, ಚಿರಂತನ ಪ್ರಾಮುಖ್ಯವುಳ್ಳ ಕೆಲವು ರಚನೆಗಳೂ ಇದರಲ್ಲಿವೆ. ಇಡೀ ಕೃತಿ ಸಾಧನಾಪರವೂ ಬೋಧಪ್ರದವೂ ಆಗಿದೆ.

‘ಕನ್ನಡ ಜನಪದ ಕಥೆಗಳು’ ಗಂಭೀರ ಅಧ್ಯಯನ

ಅಗ್ರಹಾರ ಕೃಷ್ಣಮೂರ್ತಿ

ಇದೊಂದು ನಿಬಂಧ. ಮೈಸೂರು ವಿಶ್ವವಿದ್ಯಾಲಯ ಇದಕ್ಕೆ ಡಾಕ್ಟರೇಟ್ ಪದವಿ ನೀಡಿದೆ. ೧೯೭೬ರ ವರೆಗೆ ಪ್ರಕಟವಾದ ಜನಪದ ಕಥಾ ಸಂಕಲನಗಳು ಈ ನಿಬಂಧಕ್ಕೆ ವಸ್ತು, ಅಲ್ಲಿಯವರೆಗೆ ಕಥಾಸಂಕಲನಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟವಾಗಿರಲಿಲ್ಲವಾದ್ದರಿಂದ ನಿಬಂಧಕ್ಕೆ ಅನಿವಾರ್ಯ ಮಿತಿಳಿಗವೆ. ಅದನ್ನುಲೇಖಕಿ ಡಾ॥ ಕೆ. ಆರ್. ಸಂಧ್ಯಾರೆಡ್ಡಿ ಅವರು ಒಪ್ಪಿಕೊಂಡಿದ್ದಾರೆ.

ಸ್ಟಿತ್ ಥಾಂಸನ್ನರ್ ಅಧ್ಯಯನ ಕ್ರಮವನ್ನು ಅನುಸರಿಸಿ ಕನ್ನಡದಲ್ಲಿ ಇದುವರೆಗೆ (೧೯೭೬) ಸಂಗ್ರಹವಾಗಿರುವ ಕಥೆಗಳ ಸಮಗ್ರ ಪರಿಚಯ. ವರ್ಗೀಕರಣದಲ್ಲಿ ಥಾಂಸನ್ನರ ಮಾದರಿಯಲ್ಲಿರುವ ಲೋಪದೋಷಗಳನ್ನು ಒಳಗೊಂಡಂತೆ ನಮ್ಮ ಸಂಗ್ರಹಕಾರರ ತಪ್ಪು ಒಪ್ಪುಗಳು, ಕನ್ನಡದ ಪ್ರಚಲಿತ ಕಥೆಗಳು ಮತ್ತು ಪಾಠಾಂತರಗಳು, ಜಾಗತಿಕ ಕಥಾಲೋಕದಲ್ಲಿ ಅವುಗಳ ಸ್ಥಾನಮಾನ ಇವನ್ನು ಕುರಿತು ನಡೆಸಿರುವ ಗಂಭೀರ ಅಧ್ಯಯನ ಈ ನಿಬಂಧದ ತಿರುಳು.

ಆಫ್ರಿಕನ್ನರಲ್ಲಿರುವ ಸಂದಿಗ್ಧ ಕತೆಗಳ (Dilemma Tales) ಜಾತಿಗೆ ಸೇರುವ ಕಥೆಗಳು ಕನ್ನಡದಲ್ಲಿವೆ. ಪ್ರಾಣಿಕಥೆಗಳು ಸಾಕಷ್ಟಿದ್ದರೂ ಸಂಗ್ರಹವಾಗದೆ ಅವುಗಳ

ವೈಶಿಷ್ಟದ ಬಗ್ಗೆ ಏನೂ ಹೇಳಲು ಸಾಧ್ಯವಾಗಿಲ್ಲ. ಪರಲೋಕದ ಬಗ್ಗೆ ನಂಬಿಕೆಯುಳ್ಳ ಕಥೆಗಳು ಕನ್ನಡದಲ್ಲಿ ಇಲ್ಲವೆಂಬ ಅಂಶಗಳನ್ನು ಸಂಧ್ಯಾರೆಡ್ಡಿಯವರು ಗುರುತಿಸಿದ್ದಾರೆ.

ಮಾನವನ ದ್ವೇಷ, ಪ್ರೀತಿ, ಮತ್ಸರ, ದುಃಖ, ಅಸೂಯೆ, ಸಾಹಸ, ಸೋಲು ಗೆಲುವು, ಕೌಟುಂಬಿಕ ಕಲಹ, ಪ್ರಣಯ ತ್ಯಾಗ, ಸ್ನೇಹ ಮುಂತಾದವುಗಳ ಬಗ್ಗೆ ಮನಸ್ಸಿನಲ್ಲಿ ನಡೆಯುವ ಕಲ್ಪನಾಲೋಕದ ಚಿತ್ರ ವಿಚಿತ್ರ ಸೃಷ್ಟಿಗಳಾಗಿರುವ ಜನಪದ ಕಥೆಗಳನ್ನು ಗೆರೆಕೊಯ್ದಂತೆ ವರ್ಗೀಕರಿಸುವುದು ಕಷ್ಟಸಾಧ್ಯವಾದ ಕೆಲಸ. ಈಗ ಪ್ರಚಲಿತವಿರುವ ವರ್ಗೀಕರಣವನ್ನು ಅನುಸರಿಸಿ ಕನ್ನಡದ ಕಥೆಗಳನ್ನು ಒಂದು ವ್ಯವಸ್ಥಿತ ರೂಪಕ್ಕೆ ತರುವಲ್ಲಿ ಒಂದು ಪ್ರಾಮಾಣಿಕ ಪ್ರಯತ್ನ ಈ ನಿಬಂಧದ ಮೂಲಕ ನಡೆದಿದೆ.

ಚಾರಿತ್ರಿಕ ಭೌಗೋಳಿಕ ವಿಧಾನದ ಮಾದರಿಗಾಗಿ ಕನ್ನಡದ ಮೂರು ಪ್ರಚಲಿತ ಕಥೆಗಳ ಅಧ್ಯಯನ ಮಾಡಲಾಗಿದೆ. ಸವತಿ ಮಾತ್ಸರ್ಯ ಕುರಿತ ಕಥೆಯೊಂದರ ಹದಿನೈದು ಪಾಠಗಳನ್ನು ಅಭ್ಯಾಸ ಮಾಡಿ ಅದು ಪಡೆದುಕೊಂಡಿರುವ ವೈವಿಧ್ಯಮಯ ರೂಪಗಳನ್ನು ತಿಳಿಸಿದ್ದಾರೆ. ಇಷ್ಟು ಪಾಠಗಳು ಸಿಕ್ಕಿದ್ದರೂ ಈ ಕಥೆಯ ಒಂದು ಖಚಿತರೂಪ ನಿರ್ಧಾರವಾಗದಿರುವುದು ಜನಪದ ಕಥೆಗಳು ಪಡೆದುಕೊಳ್ಳಬಹುದಾದ ಪ್ರಸರಣದ ವಿಸ್ತಾರವನ್ನು ತಿಳಿಸುತ್ತದೆ. ಬುದ್ಧಿವಂತಿಕೆಯ ಜಾತಿಗೆ ಸೇರುವ ಮತ್ತೊಂದು ಕಥೆಯ ಒಂಬತ್ತು ಪಾಠಗಳ ಅಭ್ಯಾಸ–ಹೇಗೆ ಒಂದು ಜಾಗತಿಕ ಕಥೆ ಪ್ರಾದೇಶಿಕ ಬೆಳವಣಿಗೆಯಲ್ಲಿ ವೈಶಿಷ್ಟ್ಯತೆಯನ್ನು ಪಡೆಯುತ್ತದೆ ಎಂಬುದನ್ನು ಅದಕ್ಕಾಗಿಯೇ ಪ್ರಾದೇಶಿಕ ವರ್ಗಸೂಚಿಗಳ ಅಗತ್ಯವಿದೆಯೆಂಬುದನ್ನೂ ಎತ್ತಿ ತೋರಿಸುತ್ತದೆ. ಮೂರನೆಯ ಕಥೆ 'ಚಿಕ್ಕಹೊನ್ನಿ ದೊಡ್ಡಹೊನ್ನಿ'ಯನ್ನು ಅದರ ಸಿಕ್ಕಿರುವ ಹದಿಮೂರು ಪಾಠಗಳ ಸಹಾಯದಿಂದ ಅಭ್ಯಾಸ ಮಾಡಲಾಗದೆ. ಈ ಕಥೆಗಳ ಅಧ್ಯಯನ ಮಾಡುವಾಗ ಕನ್ನಡದಲ್ಲಿ ಡಾಮಿನೆಂಟ್ ಆಗಿರುವ ಆಶಯಗಳು ಹೇಗೆ ಬೇರೆ ಬೇರೆ ಕಥೆಗಳಲ್ಲಿ ಸ್ವತಂತ್ರವಾಗಿ ಆಡ್ಡಾಡುತ್ತವೆಂಬುದನ್ನು ತಿಳಿಸಿದ್ದಾರೆ.

ಕಥೆಗಳ ಸಾಹಿತ್ಯಕ ಅಧ್ಯಯನದಲ್ಲಿ ಅವುಗಳ ಪಾರಂಪರಿಕ ಶೈಲಿ. ತಂತ್ರದ ವಿಧಾನಗಳನ್ನು ಕನ್ನಡದ ಕಥೆಗಳಿಗೆ ವಿಶೇಷ ಗಮನಕೊಟ್ಟು ಪರಿಶೀಲಿಸಲಾಗಿದೆ. ಸಿದ್ಧನುಡಿಗಟ್ಟುಗಳು ಕಥಾಪಾತ್ರದಲ್ಲಿ ಹರಿದಾಡುವ ಸಂಗತಿ, ಕಥಾಸಂವಿಧಾನದಲ್ಲಿ ಪುನರಾವರ್ತನೆಯ ವೈಶಿಷ್ಟತೆ, ಅದು ಸಂಸ್ಕೃತಿಯಿಂದ ಸಂಸ್ಕೃತಿಗೆ ಬೇರೆಯಾಗುವ ಸಂಗತಿ ತಿಳಿಸಿದ್ದಾರೆ.

ಸಾಂಸ್ಕೃತಿಕ ಮಾನವ ಶಾಸ್ತ್ರದ ದೃಷ್ಟಿಯಿಂದ ಅಭ್ಯಾಸ ಮಾಡಿ ಪ್ರಾಚೀನ ಮಾನವನ ಆತ್ಮದ ಬಗೆಗಿನ ನಾನಾ ಪರಿಭಾವನೆಗಳು, ಅತಿಮಾನುಷಕಾಯ, ರೂಪ ಪರಿವರ್ತನೆ, ಜನ್ಮಾಂತರ, ಪುನರ್ಜನ್ಮ, ಪರಕಾಯ ಪ್ರವೇಶ, ಪಾಪದ ಕಲ್ಪನೆ, ಮಾಟ, ಮಂತ್ರ, ನಿಷಿದ್ಧ, ಅಮೃತ ಹಾಗೂ ಸಂಜೀವಿನಿ ಮುಂತಾದ ನಂಬಿಕೆ ಮತ್ತು ಕಲ್ಪನೆಗಳ ಹಿಂದಿನ ಅರ್ಥವನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಪ್ರಾಚೀನ

ಮಾನವರ ಆರ್ಥಿಕ ಚಟುವಟಿಕೆಗಳಾದ ಆಹಾರಸಂಗ್ರಹಣೆ, ಬೇಟೆ, ಸಂಗೋಪನೆ, ಮೀನುಗಾರಿಕೆ, ವ್ಯವಸಾಯ ಇತ್ಯಾದಿಗಳ ಬಗೆಗೆ ನಮ್ಮ ಕಥೆಗಳಲ್ಲಿ ಸಿಕ್ಕುವ ಸಾಂಸ್ಕೃತಿಕ ಎಳೆಗಳನ್ನು ಬಿಡಿಸಬಹುದಾಗಿತ್ತು.

ಎಂಟನೆಯ ಅಧ್ಯಾಯದಲ್ಲಿ ೧೯೪೦ ರ ಸುಮಾರಿಗೆ ಜಿ.ಪಿ. ರಾಜರತ್ನಂ ಹಾಗೂ ಎಂ. ರಾಮರಾವ್ ಅವರ ಪ್ರಯತ್ನಗಳನ್ನು ಮೊದಲ್ಗೊಂಡು ೧೯೭೬ರ ವರೆಗೆ ಕನ್ನಡ ಜನಪದ ಕಥೆಗಳ ಅಧ್ಯಯನ ನಡೆದು ಬಂದ ಇತಿಹಾಸವನ್ನು ಸಿಂಹಾವಲೋಕನ ಮಾಡಲಾಗಿದೆ.

ಉಪಸಂಹಾರದಲ್ಲಿ ಜಗತ್ತಿನ ಜನಪದ ಕಥೆಗಳ ಸಾಲಿನಲ್ಲಿ ಕನ್ನಡ ಕಥೆಗಳ ಸ್ಥಾನಮಾನವೇನು ? ವೈಶಿಷ್ಟ್ಯವೇನು ? ದ್ರಾವಿಡ ಸಂಸ್ಕೃತಿಯ ಹಿನ್ನೆಲೆ ಮುಂತಾದುವನ್ನು ವಿವೇಚಿಸಲಾಗಿದೆ. ನಮ್ಮಲ್ಲಿ ಇನ್ನೂ ಬಹುಮಟ್ಟಿನ ಸಂಗ್ರಹಕಾರ್ಯ ನಡೆಯಬೇಕಾಗಿರುವುದರಿಂದ ಕನ್ನಡಕ್ಕೆ ವಿಶಿಷ್ಟವಾದ ಕಥೆಗಳನ್ನು ಗುರುತಿಸುವುದು ಕಷ್ಟವೆಂದು ಲೇಖಕಿ ತಿಳಿಸುತ್ತಾರೆ.

ಅನುಬಂಧದಲ್ಲಿ ಕನ್ನಡ ಕಥೆಗಳ ಆಶಯ ಮತ್ತು ವರ್ಗಸೂಚಿಯನ್ನು ಸಿದ್ಧಗೊಳಿಸಿದ್ದಾರೆ. ಇದು ಮುಂದಿನ ಅಧ್ಯಯನಕಾರರಿಗೆ ಬೆಲೆಯುಳ್ಳ ಮಾರ್ಗದರ್ಶಿಯಾಗುತ್ತದೆ.

ಒಟ್ಟಾರೆ ಇದೊಂದು ಪರಿಶ್ರಮಪೂರ್ಣವಾದ ಅಭ್ಯಾಸವಾಗಿದ್ದರೂ ಅಪೂರ್ಣವಾಗಿದೆ ಎಂಬುದನ್ನು ಮರೆಯಬಾರದು ವಿಲಿಯಂ ಆರ್. ಬಾಸ್ಕಂ ಒಂದು ಕಡೆ ಹೇಳುತ್ತಾನೆ : ಸಂಪೂರ್ಣವಾಗಿ ಪಠ್ಯವನ್ನಷ್ಟೇ ಗಮನಿಸುವ ಯಾವುದೇ ಜಾನಪದ ಅಧ್ಯಯನ ಖಂಡಿತ ಸೋಲುತ್ತದೆ. ಪಠ್ಯಗಳ ಆಚೆಗೂ ಅಧ್ಯಯನವನ್ನು ವಿಸ್ತರಿಸಿದಾಗ ಮಾತ್ರ ಮನುಷ್ಯನ ಬದುಕಿನಲ್ಲಿ ಅವುಗಳ ಪಾತ್ರ ಮತ್ತು ಸ್ವಭಾವಗಳನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

ಕೊನೆಯಲ್ಲಿ ಏಳು (ಹದಿಸರ್ಪ !) ಪುಟಗಳ ತಿದ್ದುಪಡಿ ಇದ್ದರೂ ಬೆಲೆಯುಳ್ಳ ಈ ಗ್ರಂಥವನ್ನು ಕಡಿಮೆ ಬೆಲೆಯಿಟ್ಟು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದೆ.

ಬದುಕಿನ ಸ್ಥಿತ್ಯಂತರಗಳ ಚಿತ್ರಣ: 'ದಲಿತ ಸೂರ್ಯ'

ಡಾ. ಶ್ರೀಕಂಠ ಕೂಡಿಗೆ

ಬಿ. ಆರ್. ಅಂಬೇಡ್ಕರ್ ಎಂದೊಡನೆ ಬಹುತೇಕರಿಗೆ ನೆನಪಾಗುವುದು ಅವರು ಭಾರತ 'ಸಂವಿಧಾನ ಶಿಲ್ಪಿ' ಎಂಬುದರಿಂದ. ಅಲ್ಲದೆ ಅವರೊಬ್ಬ ಅಪ್ರತಿಮ ದೇಶ ಭಕ್ತ, ಮಾನವತಾವಾದಿ, ಅಸ್ಪೃಶ್ಯತೆಯ ವಿರುದ್ಧ ನಿರಂತರ ಹೋರಾಟ ನಡೆಸಿದ ದಲಿತ ನಾಯಕರೆಂದು ತಿಳಿದಿರುವುದು ಕಡಿಮೆ. ಈ ಬಗೆಯ ತಿಳುವಳಿಕೆಯ ಕೊರತೆಗೆ ಮುಖ್ಯವಾಗಿ ಎರಡು ಕಾರಣಗಳು ಇರುವಂತಿದೆ. ಒಂದು, ಅವರ ಬರಹಗಳು ಸುಲಭವಾಗಿ ಅಧ್ಯಯನಾಸಕ್ತರಿಗೆ ದೊರಕದಿರುವುದು; ಎರಡನೆಯದು, ಹಲವರು ಅವರನ್ನು ಕುರಿತಂತೆ ಓದುವ ಸ್ವಯಂ ಆಸಕ್ತಿ ತೋರದಿರುವುದು. ಅಂಬೇಡ್ಕರ್ ಅವರು ಬರೆದ ಗ್ರಂಥಗಳು ಮತ್ತು ಅವುಗಳ ಮೇಲೆ ಬಂದ ಹೆಚ್ಚಿನ ಕೃತಿಗಳು ಇಂಗ್ಲಿಷ್‌ನಲ್ಲಿದ್ದು ಬೇರೆ ಭಾಷೆಗಳಿಗೆ ಅಪರಿಚಿತವಾಗಿ ಉಳಿದಿವೆ. ಇವುಗಳನ್ನು ಮೂಲದಲ್ಲಿ ಓದಿಕೊಂಡ ಆಯಾಭಾಷೆಯ ಆಸಕ್ತ ಲೇಖಕರಾದರೂ ಅವರ ಸಮಗ್ರ ವ್ಯಕ್ತಿತ್ವ ಮತ್ತು ಹೋರಾಟದ ಸ್ವರೂಪವನ್ನು ಪರಿಚಯಿಸುವ ಕೃತಿಗಳನ್ನು ರಚಿಸದಿರುವುದು ವಿಷಾದದ ಸಂಗತಿ. ಭಾರತೀಯ ದೇಶಭಾಷೆಗಳಲ್ಲೆಲ್ಲಾ ಈ ಕೊರತೆ ಇರುವಂತಿದೆ. ಈ ಹೊತ್ತು ಕನ್ನಡದಲ್ಲಿ ಎರಡು ಮೂರು

ಉತ್ತಮ ಕೃತಿಗಳು ಬಂದಿದ್ದರೂ ಕಳೆದ ಕಾಲು ಶತಮಾನದಲ್ಲಿ ನಮ್ಮ ನಾಡಿನ ಲೇಖಕರು ತಳೆದ ಅನಾಸ್ಥೆ ಆಶ್ಚರ್ಯಕರ. 'ಅಸ್ಪೃಶ್ಯರು', 'ಡಾ. ಬಿ. ಆರ್. ಅಂಬೇಡ್ಕರ್', 'ಮಹಾಪುರುಷ' ಎಂಬ ಶೀರ್ಷಿಕೆಗಳಲ್ಲಿ ಕ್ರಮವಾಗಿ ಕುಮಾರ ವೆಂಕಣ್ಣ, ಎಚ್ಚೆಸ್ಕೆ ಮತ್ತು ಬಸವರಾಜ್ ಕೆಸ್ತೂರ್ ಅವರು ಅಂಬೇಡ್ಕರರನ್ನು ಕುರಿತು ಬರೆದಿದ್ದರೂ ಅವರ ಬಹುಮುಖ ಸಾಧನೆ ಹೋರಾಟದ ಸಮಗ್ರಮುಖವನ್ನು ಅವು ದುರ್ಬಲವಾಗಿ ಕ್ರೋಢೀಕರಿಸಿವೆ. ಎರಡನೆಯದು ಇದ್ದುದರಲ್ಲಿ ಉತ್ತಮ ಪುಸ್ತಕ. ನಂತರದ ದಿನಗಳಲ್ಲಿ ದೇಜಗೌ ಅವರ 'ಕ್ರಾಂತಿಕಾರ ಅಂಬೇಡ್ಕರ್' (೧೯೭೮) ಮತ್ತು ವಿ. ಎಂ. ಇನಾಂದಾರ್ ಅವರ 'ಡಾ. ಅಂಬೇಡ್ಕರ್' (೧೯೮೧) ನಂಥ ಅಧ್ಯಯನ ಶೀಲ ಕೃತಿಗಳು ಪ್ರಕಟವಾಗಿವೆ. ಈ ಮೊದಲಿಗೆ ಪ್ರಕಟವಾದ ಎಚ್. ಜೆ. ಲಕ್ಕಪ್ಪಗೌಡರ 'ದಲಿತ ಸೂರ್ಯ' (೧೯೭೭) ಹಲವು ಮುಖಗಳಲ್ಲಿ ಗಮನಾರ್ಹ ಕೃತಿಯಾಗಿದೆ.

ಸುಮಾರು ನೂರಅರವತ್ತು ಪುಟಗಳ ಈ ಗ್ರಂಥದಲ್ಲಿ ಅಂಬೇಡ್ಕರ್ ಅವರ ಜೀವನದ ವಿವಿಧ ಸ್ತರಗಳನ್ನು, ಬಂದೊದಗಿದ ಸ್ಥಿತ್ಯಂತರಗಳನ್ನು ಮನೋಜ್ಞವಾಗಿ ಪರಿಚಯಿಸುವ ಒಟ್ಟು ಹದಿನೈದು ಪುಟ್ಟ ಅಧ್ಯಾಯಗಳಿವೆ. ಲೇಖಕರು ಇದನ್ನು 'ಜೀವನ ಚಿತ್ರ'ವೆಂದು ಕರೆದುಕೊಂಡಿದ್ದಾರೆ. ಅಂಬೇಡ್ಕರ್ ಜೀವನ ಸಾಧನೆಗಳನ್ನು ಕಾಲಾನುಕ್ರಮವಾಗಿ ದಾಖಲಿಸುವ ಪ್ರಯತ್ನ ಮಾತ್ರ ಇದಾಗಿರದೆ ಅವರ ಬಾಳಿನ ಆಗು ಹೋಗುಗಳಲ್ಲಿ ಸ್ವತಃ ಭಾಗಿಯಾಗಿ ಸ್ಪಂದಿಸುವಂತೆ, ಅವರ ವ್ಯಕ್ತಿ ವೈಶಿಷ್ಟ್ಯವನ್ನು ಸ್ಥಿರಚಿತ್ರದಂತೆ ಮೂಡಿಸುವಲ್ಲಿ ಕೃತಿ ಯಶಸ್ವಿಯಾಗುತ್ತದೆ. ಆ ಅರ್ಥದಲ್ಲಿ ಇದು 'ಜೀವನ ಚರಿತ್ರೆ'ಯಾಗುವುದಕ್ಕಿಂತ 'ಜೀವನ ಚಿತ್ರ'ವಾಗಿಯೇ ಸಾರ್ಥಕವಾಗುತ್ತದೆ ಎನ್ನಬಹುದು.

ಅಸ್ಪೃಶ್ಯತೆಗೆ ಕಾರಣವಾಗಿರುವ ಸಂದರ್ಭದ ದೀರ್ಘ ಹಿನ್ನೆಲೆ ಮೊದಲ ಅಧ್ಯಾಯ–ಸುತ್ತಮುತ್ತ ಅಂಧಕಾರ–ದಲ್ಲಿ ವಿವರಿಸಲ್ಪಟ್ಟಿದೆ. ಅದು ಜಾಗತಿಕ ಸಮಸ್ಯೆಯಾಗಿದ್ದು ಆ ಬಗ್ಗೆ ನಡೆದಿರುವ ಸಂಶೋಧನೆ ಅತ್ಯಲ್ಪವೆಂದು ಭಾವಿಸಲಾಗಿದೆ. ಕೆಲವು ವಸ್ತು ಅಥವಾ ವ್ಯಕ್ತಿಗಳೊಂದಿಗೆ ಸಂಪರ್ಕವಿರಿಸಿಕೊಳ್ಳುವುದು ಮೈಲಿಗೆಗೆ ಕಾರಣವಾಗುತ್ತದೆಂಬ ಪ್ರಾಚೀನ ಮಾನವನ ಅತಾರ್ಕಿಕ ನಂಬಿಕೆ ಈ ಪದ್ಧತಿಗೆ ಮೂಲವಾಗಿರಬೇಕೆಂಬ ಅಭಿಪ್ರಾಯವಿದೆ. ಇದಕ್ಕೆ ಸಾಕಷ್ಟು ಪೂರಕ ಸಾಮಗ್ರಿ ಸಾಂಸ್ಕೃತಿಕ ಹಾಗೂ ಸಾಮಾಜಿಕ ಮಾನವಶಾಸ್ತ್ರದ ಅಧ್ಯಯನದ ಹಿನ್ನೆಲೆಯಲ್ಲಿ ಸಂಶೋಧಿತವಾಗಿವೆ. ಇಂಥ ಕಳಂಕ ಭಾವನೆ ಪುರಾತನ ಮನಸ್ಸಿನಲ್ಲಿ ಮೊಳಕೆ ಒಡೆದು ಆಧುನಿಕ ಮಾನವನವರೆಗೆ ಬೆಳೆದು ಹಲವು ವಿಕಾರಗಳಲ್ಲಿ ನೆಲೆನಿಂತಿದೆ. ಇವು ಸಂಭವಿಸಿದಾಗ ಮಾಡಿಕೊಳ್ಳಬೇಕಾದ ಶುದ್ಧೀಕರಣದ ವಿವರಗಳು ಜನಜೀವನದಲ್ಲಿ ನಂಬಿಕೆಗಳಾಗಿ ಉಳಿದರೆ, ಪುರಾಣಕಾರರಲ್ಲಿ ಅನೇಕರು ಈ ಭಾವನೆಯನ್ನು ವಾಸ್ತವವೆನ್ನುವಂತೆ ಜನತೆಯಲ್ಲಿ ಬಿತ್ತಿ ಅಂಧ ಶ್ರದ್ಧೆಯನ್ನುಳ್ಳವರಾಗಿ ಮಾಡಿದ್ದಾರೆ. ಧರ್ಮಶಾಸ್ತ್ರಕಾರನಾದ ಮನು ಕೂಡ

ಮೈಲಿಗೆಯನ್ನು ದೈಹಿಕ, ಭಾವನಾತ್ಮಕ. ನೈತಿಕವೆಂಬ ವಿಭಾಗಗಳಲ್ಲಿ ಪ್ರಸ್ತಾಪಿಸಿದ್ದಾನೆ. ಹೀಗಾಗಿ ಜಗತ್ತಿನ ಐದನೆಯ ಒಂದು ಜನಸಂಖ್ಯೆಯ ಅಸ್ಪೃಶ್ಯರನ್ನು ಹೊಂದಿದ ಕಳಂಕ ಭಾರತಕ್ಕೆ ತಟ್ಟಿದೆ. ನೀಗ್ರೊ. ಜರ್ಮನರಲ್ಲಿ ಈ ತಾರತಮ್ಯವಿದ್ದರೂ ಭಾರತೀಯ ಜಾತಿ ಹಿನ್ನೆಲೆಯಷ್ಟು ಹೀನಾಯವಾದುದಲ್ಲ; ಪ್ರಾಚೀನ ಜನಾಂಗಗಳಲ್ಲಿ ಜನನ, ಮರಣ, ಋತು, ವಿವಾಹ, ಊಟ, ಕೂಟಗಳಿಂದ ಹುಟ್ಟುತ್ತಿದ್ದ ಮೈಲಿಗೆ ತಾತ್ಕಾಲಿಕವಾಗಿದ್ದು ಅದನ್ನು ಶುದ್ಧೀಕರಣದಿಂದ ಪರಿಹರಿಸಲ್ಪಡಬಹುದಾಗಿತ್ತು. ಆಧುನಿಕರ, ಅದರಲ್ಲೂ ಭಾರತೀಯರಲ್ಲಿ ಅನುವಂಶೀಯ ಅಸ್ಪೃಶ್ಯತೆ ಶಾಶ್ವತವಾಗಿದ್ದು ಅದೊಂದು ನಾಚಿಕೆಯ ಸಂಗತಿಯಾಗಿದೆಯೆಂಬ ವಿಚಾರ ಪ್ರಚೋದಕ ಸಂಗತಿಯನ್ನೂ ಅಸ್ಪೃಶ್ಯತೆ ಕುರಿತ ಹಲವು ಸಾಮಾಜಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕ್ರೋಢೀಕರಿಸ ಲಾಗಿದೆ. ವರ್ಣವ್ಯವಸ್ಥೆ ಮತ್ತು ಶ್ರೇಣೀಕೃತ ಜಾತಿ ಪದ್ಧತಿಗೆ, ಅಸ್ಪೃಶ್ಯತೆ ಹೇಗೆ ಅಡಿಪಾಯವಾಯಿತೆಂದು ತಿಳಿಯಬಯಸುವವರಿಗೆ ಇಲ್ಲಿ ಉಪಯುಕ್ತ ಮಾಹಿತಿ ದೊರೆಯುತ್ತದೆ.

ಭಾರತದಲ್ಲಿ ಅಸ್ಪೃಶ್ಯತೆಯ ಕಳಂಕ ನಿವಾರಿಸಲು ವಿಚಾರವಂತರು ಮಾಡಿದ ಪ್ರಯತ್ನದ ಒಟ್ಟು ನೋಟ ಎರಡನೆಯ ಅಧ್ಯಾಯದಲ್ಲಿದೆ. ರಾಮಾನುಜ. ಬಸವ, ಕನಕದಾಸ, ಸರ್ವಜ್ಞ ಕನ್ನಡನಾಡಿನಲ್ಲಿ ಈ ಪ್ರಯತ್ನ ನಡೆಸಿದರೆ, ಉತ್ತರ ಭಾರತದಲ್ಲಿ ಚಕ್ರಧರ, ರಮಾನಂದ, ಕಬೀರ, ರಾಜಾರಾಮಮೋಹನರಾಯ್, ಮಹಾತ್ಮ ಫುಲೆಯ ವರೆಗೆ ಈ ಹೋರಾಟ ಅವ್ಯಾಹತವಾಗಿ ನಡೆದಿದೆ. ಸಂಪ್ರದಾಯಸ್ಥರ ವಿರೋಧ ವನ್ನೆದುರಿಸಿ ಅಸ್ಪೃಶ್ಯರ ಮಕ್ಕಳ ಶಾಲೆ ತೆರೆದ, ಸವರ್ಣೀಯ ಹಿಂದೂ ಶಿಕ್ಷಕರು ಅವರಿಗೆ ಪಾಠ ಹೇಳಲು ನಿರಾಕರಿಸಿದಾಗ ಮುಸ್ಲಿಂ ಶಿಕ್ಷಕರನ್ನು ಆಹ್ವಾನಿಸಿದ ಪ್ರಸಂಗಗಳು ಮಹಾರಾಷ್ಟ್ರದಲ್ಲಿ ಜರುಗಿವೆ. ಇಂಥ ಲಾಗಾಯ್ತಿನ ಮೌಢ್ಯ. ಅಶಿಕ್ಷಿತತೆಯಿಂದ ಜನತೆ ಯನ್ನು ಮೇಲೆತ್ತಲು ಮಹಾರಾಷ್ಟ್ರದಲ್ಲಿ ಒಂದು ಆಂದೋಲನವೇ ನಡೆಯಿತು. ಸಯಾಜಿರಾವ್ ಗಾಯಕವಾಡ, ಗೋಪಾಲ ಬಾಬಾ ವಾಲಂಗ್‌ಕರ್, ದಯಾನಂದ ಇವರಲ್ಲಿ ಮುಖ್ಯರು. ಅಸ್ಪೃಶ್ಯತೆ ವಿರುದ್ಧದ ಐತಿಹಾಸಿಕ ಹೋರಾಟದ ಹೆಜ್ಜೆ ಗುರುತುಗಳನ್ನು ದೀರ್ಘವಾಗಿ ಲೇಖಕರು ಪ್ರಸ್ತಾಪಿಸಿದ್ದಾರೆ. ಕೃತಿಯ ಸಮಗ್ರ ಅಧ್ಯಯನಕ್ಕೆ ಇದು ಹಿನ್ನೆಲೆಯಂತಿದೆ.

ದಲಿತರ ಏಳ್ಗೆಗಾಗಿ "ತನ್ನ ಜೀವಿತವನ್ನೆಲ್ಲ ಕಾಯಾ-ವಾಚಾ-ಮನಸಾ ತನ್ನವರಿ ಗಾಗಿಯೇ ತೇದು ಅವರಲ್ಲಿ ಆತ್ಮಗೌರವವನ್ನು ಧೀಮಂತಿಕೆಯನ್ನು ಧೈರ್ಯವನ್ನು ಬೆಳೆಸಿ, ಅವರ ಬಾಳಿನ ಸಹಸ್ರ ಸಹಸ್ರ ವರ್ಷಗಳ ಕತ್ತಲನ್ನು ಕಳೆಯಬಲ್ಲ ಮಹಾ ಚೇತನವೊಂದರ ಉದಯಕ್ಕಾಗಿ ಕಾಯುತ್ತಿತ್ತು. ಈ ದೀನ ಮೂಕ, ಶಾಪಗ್ರಸ್ತ ಜನತೆ, ಈ ಜನಮನದ ಆಶಾಸೂರ್ಯನಾಗಿ ಮೂಡಿ ಬಂದರು, ಡಾಕ್ಟರ್ ಭೀಮ ರಾವ್ ರಾಮ್‌ಜಿ ಅಂಬೇಡ್ಕರ್" ಎಂದಿದ್ದಾರೆ. ಇದಕ್ಕೆ ಹಿನ್ನೆಲೆಯಾಗಿ, ಎಳೆತನದಲ್ಲೆ

ಅಂಬೇಡ್ಕರ್ ಅಸ್ಪೃಶ್ಯ ಮಹರ್ ಜಾತಿಯುವನಾಗಿ ಅನುಭವಿಸಿದ ಅಪಮಾನ, ಅಸಹಾಯಕತೆಯ ಧಾರುಣ ಚಿತ್ರಣವಿದೆ. ತಾನು ಅನುಭವಿಸಿದಲ್ಲದೆ ಅನ್ಯರ ನೋವಿನ ಆಳ ತಿಳಿಯದೆನ್ನುವಂತೆ ಸಹಸ್ರಾರು ಇಂಥ ಮೂಕ ಜನತೆಯ ನೋವಿನ ಆಳ ತಿಳಿಯಲು ಇದರಿಂದ ಸಾಧ್ಯವಾಯಿತು. ಮಹಾತ್ಮ ಫುಲೆಯವರ ಆದರ್ಶದಿಂದ ರೂಪುಗೊಂಡ ತಂದೆಯ ಧೀಮಂತ ವ್ಯಕ್ತಿತ್ವ, ಹೋರಾಟದ ಮನೋಭಾವ ಮಗನಿಗೆ ಬಂದ ಪಿತ್ರಾರ್ಜಿತ ಬಳುವಳಿ ಎಂಬುದರ ಸೂಚನೆ ಇದೆ. ತಂದೆಯ ಇಂಗ್ಲಿಷ್ ಬೋಧನೆ, ಭಾಷಾ ಸಂಪತ್ತು, ಪುಸ್ತಕ ಪ್ರೇಮ ಮಗನನ್ನು ಹೇಗೆ ಮೊದಲದರ್ಜೆಯ ಮಾತುಗಾರ, ಗ್ರಂಥಕರ್ತನನ್ನಾಗಿಸಿತೆಂಬ ಸ್ಫೂರ್ತಿದಾಯಕ ಸನ್ನಿವೇಶ ಚಿತ್ರಣವಿದೆ. ಅಸ್ಪೃಶ್ಯನೆಂದು ಗಾಡಿಯುವನು ಮಾರ್ಗಮಧ್ಯದಲ್ಲಿ ಇಳಿಸಿ ಮಾಡಿದ ಅಪಮಾನ, ಕೆರೆ ನೀರು ಮುಟ್ಟಿದಾಗ ಬಿದ್ದ ಏಟಿನ ಅವಮಾನ. ಕ್ಷೌರಮಾಡಲು ಕ್ಷೌರಿಕನ ನಿರಾಕರಣೆ ಯಂಥ ಸಾರ್ವಜನಿಕ ಹೀನಾಯತೆ ಓದಿನಲ್ಲಿ ಹೇಗೆ ನೆಮ್ಮದಿ ಕಾಣುವಂತೆ ಮಾಡಿದವೆಂಬ ನಿರೂಪಣೆ ಮಾರ್ಮಿಕವಾಗಿವೆ. ಪ್ರತಿಕೂಲ ವಾತಾವರಣ ಮತ್ತು ವಿರುದ್ಧ ಸೆಳೆತ ಗಳಲ್ಲಿಯೇ ಪಾಸುಮಾಡಿದ ಪರೀಕ್ಷೆಗಳು, ಬರೋಡೆಯ ಗಾಯಕವಾಡ ಮಹಾರಾಜರ ಶಿಷ್ಯವೇತನದಿಂದ ಅಮೆರಿಕೆಯಲ್ಲಿ ವ್ಯಾಸಂಗ ಮಾಡುವ ಅವಕಾಶ ದೊರೆತದ್ದು ಅಂಬೇಡ್ಕರ್ ಬದುಕಿನ ಅನಿರೀಕ್ಷಿತ ತಿರುವುಗಳು. ಅಮೆರಿಕೆಯಲ್ಲಿ ಬಿ. ಟಿ. ವಾಷಿಂಗ್ ಟನ್ನಿನ ಸ್ಫೂರ್ತಿದಾಯಕ ಬದುಕು, ನೀಗ್ರೊ ಸ್ವಾತಂತ್ರ ಘೋಷಣೆಯ ೧೪ ನೆಯ ತಿದ್ದುಪಡಿ ಅವರ ಹೋರಾಟದ ದಿಕ್ಕುಗಳನ್ನು ನಿಚ್ಚಳಗೊಳಿಸಿದುವು. "ಭಾರತದಲ್ಲಿ ಬಹಿರಂಗ ಜಗತ್ತಿನ ಅಡೆತಡೆಗಳನ್ನು ಇಕ್ಕಟ್ಟು ಬಿಕ್ಕಟ್ಟುಗಳನ್ನು ಪ್ರತಿರೋಧಿಸುವುದ ರಲ್ಲಿಯೇ ವ್ಯಕ್ತಿಯ ಬಹುಪಾಲು ಶಕ್ತಿ ವ್ಯಯವಾಗುತ್ತದೆ. ಆತ್ಮಶಕ್ತಿ ವಿಚಾರಶಕ್ತಿ ಕುಂಠಿತವಾಗುತ್ತದೆ" ಎಂಬ ವಿಚಾರ ಮನನೀಯವಾಗಿದೆ. ಯಶಸ್ವಿಯಾಗಿ ಅಮೆರಿಕೆಯ ಕೊಲಂಬಿಯಾ ವಿಶ್ವವಿದ್ಯಾನಿಲಯದಿಂದ ಎಂ.ಎ., ಪಿಎಚ್.ಡಿ. ಗಳಿಸಿ ಬರೋಡೆ ಮಹಾರಾಜರ ಸಂಸ್ಥಾನದ ಸೇವೆಗೆ ಬಂದಾಗಲೂ ತಮ್ಮವರೇ ಆದ ಹಿಂದೂಗಳು ನಡೆಸಿಕೊಂಡ ರೀತಿ ಅಸಹನೀಯ. ಇಂಥದೇ ಅಸಹನೀಯತೆ ಅಂಬೇಡ್ಕರ್ ಶೈಕ್ಷಣಿಕ ವಾಗಿ ಮೇಲೇರಿದಂತೆಲ್ಲ ಇಮ್ಮಡಿಗೊಂಡ ವಿಷಾದ ಕೃತಿಯುದ್ದಕ್ಕೂ ತುಂಬಿಕೊಂಡಿದೆ. ಕಛೇರಿಯಲ್ಲಿನ ಸವರ್ಣೀಯ ನೌಕರರ ಅಸಹಕಾರ, ವಸತಿ ಗೃಹದ ಮಾಲೀಕನಿಂದ ಮುಖಭಂಗ, ಇದೇ ಕಿರುಕುಳಕ್ಕಾಗಿ ನೌಕರಿ ಬಿಡಬೇಕಾದ ಸಂದರ್ಭಗಳು ನಿದರ್ಶನ ವಾಗಿವೆ.

"ಸಾಮೂಹಿಕ ಜಾಗೃತಿ ಪ್ರಯತ್ನ ಪ್ರತಿಭಟನೆಗಳಿಲ್ಲದಿದ್ದರೆ ವ್ಯಕ್ತಿಗತ ಸಾಧನೆ ಗಳಿಂದ ಸವರ್ಣೀಯ ಮನಸ್ಸನ್ನು ಪರಿವರ್ತಿಸಲು ಸಾಧ್ಯವಿಲ್ಲವೆಂಬುದು ಅವರಿಗೆ ಮನದಟ್ಟಾಯಿತು". ಆದಕ್ಕಾಗಿ ಅಸ್ಪೃಶ್ಯರ ಏಕತೆ ಮತ್ತು ಸಾಮಾಜಿಕ ಸ್ಥಾನಮಾನಗಳ ಹಕ್ಕಿಗೆ ಮುಖವಾಣಿಯಾಗಬಲ್ಲ 'ಮೂಕನಾಯಕ' ಪತ್ರಿಕೆಯ ಸ್ಥಾಪನೆ, ಹಣಕಾಸಿನ ತೊಂದರೆಗಾಗಿ ಯುವಕರಿಬ್ಬರಿಗೆ ಪಾಠ, ಸ್ವಯಂ ಷೇರು ಸಲಹಾಸಂಸ್ಥೆ, ಕ್ಷುಲ್ಲಕನೊಬ್ಬ

ಮಾಡಬಹುದಾಗಿದ್ದ ಘಾರಸಿ ವರ್ತಕನ ಪತ್ರವ್ಯವಹಾರ-ಲೆಕ್ಕಬರವಣಿಗೆ ಇತ್ಯಾದಿ ಕೆಲಸಗಳು ಅವರ ಹೋರಾಟದ ಬದುಕಿಗೆ ಸಾಕ್ಷಿ. ಲಂಡನ್ನಿಗೆ ಹೋಗಿ ನ್ಯಾಯಶಾಸ್ತ್ರ, ಅರ್ಥಶಾಸ್ತ್ರ ಅಧ್ಯಯನ ಮಾಡುವ ಉದ್ದೇಶದಿಂದ ಹಣಹೊಂದಿಸಲು ಕಾಲೇಜಿನ ಪ್ರಾಧ್ಯಾಪಕ ಹುದ್ದೆ, ಉದ್ಗ್ರಂಥ ರಚನೆ ಮಾಡಿದ್ದು ಇಂಥ ಛಲದಿಂದಾಗಿಯೇ. ಇಂಥ ಧೀಮಂತ ಜೀವಿಯ 'ಮೂಕನಾಯಕ' ಪತ್ರಿಕೆಯ ಜಾಹಿರಾತನ್ನು ತಿಲಕರ 'ಕೇಸರಿ' ಪತ್ರಿಕೆ ಪ್ರಕಟಿಸಲು ನಿರಾಕರಿಸಿದ್ದು, ಬರೋಡೆಯ ಮಹಾರಾಜರು ಅಪೇಕ್ಷಿಸ ದಿದ್ದರೂ ಪಡೆದ ವ್ಯಾಸಂಗ ಧನ ಹಿಂದಿರುಗಿಸಲು ಸವರ್ಣೀಯ ಅಧಿಕಾರಿಗಳು ದ್ವೇಷದ ಸಂಚು ನಡೆಸಿದ್ದರ ಉಲ್ಲೇಖ ಆ ಹೊತ್ತಿನ ಮತೀಯ ಕಲುಷಿತ ವಾತಾ ವರಣದ ಚಿತ್ರ ಕೊಡುವಲ್ಲಿ ಸಹಾಯಕವಾಗಿದೆ.

ಅಂಬೇಡ್ಕರ್ ಅವರ ಜೀವನ ಹಿನ್ನಡೆಗೆ ನೂರಾರು ಸವರ್ಣೀಯ ದುಷ್ಟರು ಹೊಂಚು ಹಾಕಿದಂತೆ ಅವರ ಮುನ್ನಡೆಯಲ್ಲಿ ಹಲವು ಶ್ರೇಯೋಭಿಲಾಷಿಗಳು ಬೆಂಬಲ ವಾಗಿ ನಿಂತದ್ದರ ಆರ್ದ್ರ ಚಿತ್ರ ಕೃತಿಯಲ್ಲಿದೆ. ಅಂಬವಾಡೇಕರ್ ಎಂದಾಗಬೇಕಿದ್ದ ಅವರ ಹೆಸರನ್ನು 'ಅಂಬೇಡ್ಕರ್' ಎಂದು ಪ್ರೀತಿಯಿಂದ ಕರೆದ ಪ್ರಾಂಜಲ ಮನಸ್ಸಿನ ಶಾಲಾಧ್ಯಾಪಕ, ಆರ್ಥಿಕ ಸಂಕಷ್ಟದಲ್ಲೆಲ್ಲಾ ಬೆಂಬಲವಾಗಿ ನಿಂತ ಗೆಳೆಯ ನವಲ್ ಭತೇನ, ಸಂಸ್ಕೃತ ಕಲಿಸಿದ ಉದಾರ ಮನಸ್ಸಿನ ಪಂಡಿತ, ಮಾನವತಾವಾದಿ ಲೇಖಕ ಕೃಷ್ಣಾಜಿ ಅರ್ಜುನ್ ಕೇಲೂಸ್ಕರ್, ವಿದೇಶಿಯನಾದರೂ ಪುಸ್ತಕ ಓದಿನ ಹಸಿವನ್ನು ನೀಗಿಸಿದ ಮುಲ್ಲರ್ ಎಂಬ ಪ್ರಾಧ್ಯಾಪಕ, ಪ್ರತಿಭೆಯೊಂದನ್ನೆ ನೆಚ್ಚಿ ನಿರಪೇಕ್ಷೆಯಿಂದ ಧನಸಹಾಯ ನೀಡಿದ ಬರೋಡೆ ಮಹಾರಾಜ, ಮಾನವ ಸಮಾನತೆ ಯಲ್ಲಿ ನಂಬಿಕೆ ಇರಿಸಿದ್ದ ಕ್ರಾಂತಿಕಾರಿ ಕೊಲ್ಲಾಪುರದ ಸಾಹುಮಹಾರಾಜ ಈ ದೈತ್ಯ ವ್ಯಕ್ತಿತ್ವದ ಹಿಂದೆ ಚೇತನಶಕ್ತಿಗಳಾಗಿ ನಿಂತಿದ್ದಾರೆ. ಇಂಥವರು ಇವರ ಬೆನ್ನಹಿಂದೆ ನಿಲ್ಲದಿದ್ದರೆ ಅಂಬೇಡ್ಕರ್ ಎಂದೊ ನಿರಾಶೆಯ ಕತ್ತಲೆಯಲ್ಲಿ ಸಾವನ್ನಪ್ಪಬೇಕಾಗುತ್ತಿತ್ತು. ಸುತ್ತಲಿನ ನೂರುಮುಳ್ಳುಗಳ ನಡುವೆ ಅರಳಿದ ಇಂಥ ಮೂರು ಹೂವುಗಳಿಂದಾದರೂ ಅವರ ಜೀವನ ಸಹ್ಯವಾಯಿತು. ಮಗನ ಬಾಳಿನ ಮುಂದೆ ತನ್ನ ಕಷ್ಟವನ್ನು ತೃಣವಾಗಿ ಭಾವಿಸಿ ಮಗನ ಉತ್ಥಾನದಲ್ಲಿ ಕಣ್ಣಿಟ್ಟು ಕಾಯ್ದ ತಂದೆ, ನೂರೊಂದು ಕಷ್ಟಗಳನ್ನು ಮೌನವಾಗಿ ಸಹಿಸಿ ಜೀವನ ಸವೆಸಿದ ಪತ್ನಿ ಅವರ ಸಾಧನೆಯ ಹಿಂದೆ ನಿಂತ ಸಂದರ್ಭ ವನ್ನು ಕೃತಿ ಹೃದಯಸ್ಪರ್ಶಿಯಾಗಿ ಸಾದರಪಡಿಸುತ್ತದೆ.

ಅಂಬೇಡ್ಕರ್ ಮತ್ತೆ ಲಂಡನ್‌ಗೆ ಹೋಗಿ ಮಹಾಪ್ರಬಂಧಗಳನ್ನು ಸಾದರಪಡಿಸಿ ಎಂ.ಎಸ್ಸಿ. ಡಿ.ಎಸ್.ಸಿ. ಹಾಗೂ ಬ್ಯಾರಿಸ್ಟರ್ ಪದವಿ ಗಳಿಸಿದ್ದು ಅವರ ಛಲ ಮತ್ತು ಮನೋಸಂಕಲ್ಪದ ಕುರುಹಾಗಿದೆ. ಅಪರೂಪಕ್ಕೆ ದಲಿತನೊಬ್ಬ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧಿಸಿದ ಐತಿಹಾಸಿಕ ದಾಖಲೆ. ತಮ್ಮ ಶೈಕ್ಷಣಿಕ ಕನಸು ನನಸಾದನಂತರ ವಿಚಾರ ಕ್ರಾಂತಿಯ ಬಿರುಗಾಳಿ ಎಬ್ಬಿಸಲು, ಸಂಪ್ರದಾಯ ಶರಣತೆ ವಿರುದ್ಧ ಮಹಾಸಮರ ಹೂಡಲು ಸನ್ನದ್ಧರಾದರು. ಇದೊಂದು ಅಪಾಯಕರ ಸಾಹಸವಾದರೂ ಅವರ

ಜೀವಿತದ ಪರಮಗುರಿ ಅದು. ಬ್ಯಾರಿಸ್ಟರಾಗಿ ಸ್ವತಂತ್ರ ಜೀವನ ಆರಿಸಿಕೊಂಡ ಮೇಲೆಯೂ ಕಠಿಣಿನೆನಪಿನ ಪ್ರಸಂಗಗಳು ಮರುಕಳಿಸದೇ ಇರಲಿಲ್ಲ. ಸಾಮಾಜಿಕ ಸುಧಾರಣೆ ಅನ್ಯರಿಗಿಂತ ತುಳಿತಕ್ಕೊಳಗಾದವರ ಸ್ವಯಂಪ್ರಜ್ಞೆಯ ಸಂಘಟನೆಯಿಂದ ಉಂಟಾಗುತ್ತದೆಂದು ಅವರು ಕಂಡುಕೊಂಡರು. ಮುಂಬಯಿ ವಿಧಾನಪರಿಷತ್ ಪ್ರತಿನಿಧಿಯಾದಾಗಲೂ ಕಡ್ಡಾಯ ಪ್ರಾಥಮಿಕ ಶಿಕ್ಷಣ,ದಲಿತರಿಗೆ ಪ್ರತ್ಯೇಕ ಶಾಲೆ, ವಿದ್ಯಾರ್ಥಿ ನಿಲಯಗಳ ಸ್ಥಾಪನೆ. ಪಾನನಿರೋಧಕ್ಕಾಗಿ ಒತ್ತಾಯಿಸಿದರಲ್ಲದೆ ಸಾರ್ವಜನಿಕ ಹಣದಿಂದ ನಿರ್ಮಾಣಗೊಂಡ ಭಾವಿ, ದೇವಸ್ಥಾನ, ಛತ್ರಗಳ ಬಳಕೆಗೆ ಅನುಮತಿ ನೀಡಲು ಆಗ್ರಹ ಪಡಿಸಿದರು. ಇದನ್ನು ಸಾಧಿಸಲು ದಲಿತರಿಗೆ ಆತ್ಮೋನ್ನತಿ, ಆತ್ಮಗೌರವ ಬೆಳೆಸಿಕೊಳ್ಳಲು ಕರೆನೀಡಿದರು. "ತಮಗೆ ಬೇಕಾಗಿರುವುದು ಅನುಗ್ರಹವಲ್ಲ ಆತ್ಮಗೌರವ ; ದಾನವಲ್ಲ ಸಮಾನತೆ" ಎಂಬ ಘೋಷಣೆಯನ್ನು ಮಾಡಿದರು. ಈ ಧ್ಯೇಯ ಸಾಧನೆಗಾಗಿ 'ಬಹಿಷ್ಕೃತ ಹಿತಕಾರಣಿ ಸಭಾ' ಎಂಬ ಸಂಘಟನೆಯನ್ನು, 'ಸರಸ್ವತಿ ವಿಲಾಸ' ಮತ್ತು 'ಬಹಿಷ್ಕೃತ ಭಾರತ' ಎಂಬ ಎರಡು ಪತ್ರಿಕೆಗಳನ್ನು ಆರಂಭಿಸಿದರು. ಈ ಸಂಘಟನೆಗಳ ಮೂಲಕ ಸಾರ್ವಜನಿಕ ಸ್ಥಳಗಳಿಗೆ ಅಸ್ಪೃಶ್ಯರ ಪ್ರವೇಶದ ಹಕ್ಕಿಗಾಗಿ ಒತ್ತಾಯ, ಎಸ್.ಕೆ. ಬೋಲೆ ವರದಿ ಜಾರಿ, ಜನಸಂಖ್ಯೆಗನುಗುಣವಾದ ಪ್ರಾತಿನಿಧ್ಯ, ಮಾಂಸಸೇವನೆಯ ಮುಸ್ಲಿಂ, ಕ್ರೈಸ್ತರನ್ನು ಅಸ್ಪೃಶ್ಯರೆಂದು ಪರಿಗಣಿಸದೆ ದಲಿತರನ್ನು ಮಾತ್ರ ಅಸ್ಪೃಶ್ಯರೆಂದು ಪರಿಗಣಿಸಿದ್ದರ ತಾರ್ಕಿಕತೆ, ಸಮೂಹದ ಬಹುತೇಕ ಜನರಿಗೆ ಸ್ವಾತಂತ್ರ್ಯದ ತಿಳುವಳಿಕೆ ಇರದಿರುವಾಗ ಸ್ವಾತಂತ್ರ್ಯವೇಕೆ ಬೇಕು ಎನ್ನುವ ತಾತ್ವಿಕ ಪ್ರಶ್ನೆ, ಅಸ್ಪೃಶ್ಯತೆಯ ನಾಶವೇ ನನ್ನ ಜನ್ಮಸಿದ್ಧಹಕ್ಕು ಇತ್ಯಾದಿ ಸಮಸ್ಯೆಗಳನ್ನು ಎತ್ತಿ, ಸಮಂಜಸ ಉತ್ತರನೀಡಿ ಟೀಕಾಚಾರರ ಬಾಯಿ ಮುಚ್ಚಿಸಿದರು. ಅಂಬೇಡ್ಕರ್ ಅವರ ದೀರ್ಘಯತ್ನ ಅಸ್ಪೃಶ್ಯರು, ಕಾರ್ಮಿಕರಲ್ಲಿ ಸ್ವಪ್ರಜ್ಞೆ, ವಿಚಾರಶಕ್ತಿ ಏಕತೆ ಬೆಳೆಯಲು ಸಹಾಯಕವಾಯಿತು. ಚೌಡರಕೆರೆ ಪ್ರವೇಶ ಹೋರಾಟ, ಮಹಾಡ್‌ನಗರದ ದಲಿತ ಸಮಾವೇಶ, ನಾಸಿಕ್ ಶ್ರೀರಾಮ ದೇವಾಲಯದ ರಥಸ್ಪರ್ಶ ಚಳುವಳಿ ಇತ್ಯಾದಿಗಳು ಅವರು ತಾತ್ವಿಕತೆಯನ್ನು ಪ್ರಯೋಗಶೀಲವಾಗಿ ಮಾಡಿದ್ದರ ಪ್ರಯತ್ನಗಳಾಗಿವೆ. ತಮ್ಮ ಈ ಹೋರಾಟದಲ್ಲಿ ನೋವು, ಧರ್ಮಾಂಧರ ಟೀಕೆ ಟಿಪ್ಪಣಿಗಳು ಬಂದರೂ ಅಂಬೇಡ್ಕರ್ ತಾತ್ವಿಕವಾಗಿ ಗೆದ್ದಿದ್ದಾರೆ. ದೈಹಿಕವಾಗಿ ಸೋತಕಡೆ ನೈತಿಕವಾಗಿ ಜಯಗಳಿಸಿದ್ದಾರೆ.

ಭಾರತ ಸ್ವಾತಂತ್ರ ಗಳಿಕೆಯ ಸಿದ್ಧತೆಯಲ್ಲಿದ್ದಾಗ ಸರ್ಕಾರ ಮತ್ತು ರಾಷ್ಟ್ರೀಯ ಕಾಂಗ್ರೆಸ್ ಎರಡರಿಂದಲೂ ದೂರವಿರಬೇಕೆಂದು ಅವರು ತೆಗೆದುಕೊಂಡ ತೀರ್ಮಾನ, ದಲಿತರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರಕ್ಕಾಗಿ ಒತ್ತಾಯ, ರಾಜಕೀಯ ರಕ್ಷಣೆ ಹಾಗೂ ಪೋಲೀಸ್ ಹಾಗೂ ಸೇನಾಸೇವಾವ್ಯವಸ್ಥೆಯಲ್ಲಿ ಮೀಸಲು ಸ್ಥಾನ ಇತ್ಯಾದಿ ಬೇಡಿಕೆಗಳು ಅನೇಕರಿಗೆ ವಿಚಿತ್ರವಾಗಿ ಕಂಡವು. ಅನೇಕರಿಗೆ ಅವರು ದೇಶದ್ರೋಹಿಗಳಾಗಿಯೂ ಕಂಡರು. ದಲಿತರಿಗೆ ಪ್ರತ್ಯೇಕ ಸ್ಥಾನಮಾನ ಕೊಡುವುದರಿಂದ ಹಿಂದೂ ಸಮಾಜ

ಹೋಳಾಗುತ್ತದೆಂಬುದು ಗಾಂಧೀಜಿಯವರ ವಾದ. "ಮುಸ್ಲಿಮರು ಕ್ರೈಸ್ತರು ಸಿಖ್ಖರಿಗೆ ಪ್ರತ್ಯೇಕ ಚುನಾವಣೆಗೆ ಅವಕಾಶ ಕೊಡುವುದರಿಂದ ರಾಷ್ಟ್ರ ಹೋಳಾಗುವುದಿಲ್ಲವಾದರೆ, ದಲಿತರಿಗೆ ಆ ಅವಕಾಶ ಕೊಡುವುದರಿಂದ ಹಿಂದೂಧರ್ಮ ಹೇಗೆ ಹೋಳಾಗುತ್ತದೆ?" ಎಂಬುದು ಅಂಬೇಡ್ಕರ್ ವಾದ. ಈ ದಿಗ್ಗಜಗಳ ಭಿನ್ನಾಭಿಪ್ರಾಯ ಸ್ವಯಂ ಗಾಂಧೀಜಿ ಮತ್ತು ಅಂಬೇಡ್ಕರ್‌ರ ಭೇಟಿಯಲ್ಲಾಗಲಿ, ಲಂಡನ್ ದುಂಡುಮೇಜಿನ ಸಭೆಯಲ್ಲಾಗಲಿ ಪರಿಹಾರ ಕಾಣಲಿಲ್ಲ. ಈ ನಡುವೆ ಬ್ರಿಟಿಷ್ ಸರ್ಕಾರ ಪ್ರಾಂತೀಯ ವಿಧಾನಸಭೆಯಲ್ಲಿ ದಲಿತರಿಗೂ ಪ್ರತ್ಯೇಕ ಚುನಾವಣೆ ಹಕ್ಕು ನೀಡಿದ್ದನ್ನು ಗಾಂಧೀಜಿ ಪ್ರತಿಭಟಿಸಿ ಆಮರಣಾಂತ ಉಪವಾಸ ಆರಂಭಿಸಿದರು. ಪರಿಸ್ಥಿತಿ ಬಿಗಡಾಯಸಿತು, ಅಂಬೇಡ್ಕರ್ ದಲಿತ ಹಿತರಕ್ಷಣೆಯ ಪಟ್ಟು ಬಿಡಲಿಲ್ಲ. "ಗಾಂಧೀಜಿಯ ಪ್ರಾಣ ಉಳಿಸುವುದಕ್ಕಾಗಿ ನಾನು ನನ್ನ ಜನತೆಯ ಹಿತವನ್ನು ಬಲಿಕೊಡಲಾರೆ" ಎಂದರು. ಧೀಮಂತರಿಬ್ಬರ ನಡುವಿನ ಬಿಕ್ಕಟ್ಟು ಹೇಗೋ 'ಪೂನ ಒಪ್ಪಂದ'ದಲ್ಲಿ ಪರಿಹಾರ ಕಂಡಿದ್ದು ಸಮಾಧಾನದ ಸಂಗತಿ.

ಪೂನಾ ಒಪ್ಪಂದದಿಂದ ಹುಟ್ಟಿದ ಸವರ್ಣೀಯರ ಅಸಹನೆ, ತಮ್ಮ ಪ್ರಿಯ ಪತ್ನಿಯ ಸಾವು, ಅಪರಿವರ್ತಿತ ಸವರ್ಣೀಯ ಹಿಂದೂಗಳ ವರ್ತನೆ ಅಂಬೇಡ್ಕರ್ ಅವರನ್ನು "ನಾನಂತೂ ಹಿಂದೂವಾಗಿ ಸಾಯುವುದಿಲ್ಲ" ಎಂಬ ಮನಸ್ಥಿತಿಗೆ ತಲುಪಿಸಿತು. ಗಾಂಧೀಜಿ ಕೂಡ ಇದರಿಂದ ನೊಂದರು. ಹಿಂದೂ ಜನರ ಮನೋಧರ್ಮ ಬದಲಾಗಬಹುದೆ ಎಂದು ನೋಡಲು ಅಂಬೇಡ್ಕರ್ ಐದುವರ್ಷ ಸಮಯಾವಕಾಶ ತೆಗೆದುಕೊಂಡರು. ಅದು ಅವರ ಜೀವಿತದ ಏಳು ಬೀಳಿನ ಅವಸ್ಥೆ. ಮಾನಸಿಕ ಸಂಕ್ರಮಣದ ಸ್ಥಿತಿ. ಆದರೂ ದಲಿತರ ಕಲ್ಯಾಣದ ಕನಸಿನಿಂದ ವಿಮುಖವಾಗಲಿಲ್ಲ. 'ಸ್ವತಂತ್ರ ಕಾರ್ಮಿಕ ಪಕ್ಷ' ಸ್ಥಾಪಕ, 'ವಿಧಾನ ಸಭೆಯ ವಿರೋಧ ಪಕ್ಷದ ಸದಸ್ಯ', 'ಅಖಿಲ ಭಾರತ ಅನುಸೂಚಿತ ಜಾತಿಗಳ ಮಹಾಸಂಘ'ದ ಸ್ಥಾಪಕ ಅಧ್ಯಕ್ಷ, ಕಾರ್ಮಿಕ ಮಂತ್ರಿ ಸಂವಿಧಾನ ರಚನಾ ಸಮಿತಿ ಅಧ್ಯಕ್ಷ, ಕಾನೂನುಮಂತ್ರಿ ಇತ್ಯಾದಿ ಸ್ಥಾನಗಳಿಂದ ಅವರು ಮಾಡಿದ ಜನಸೇವೆ, ಪ್ರಗತಿಪರ ಕೆಲಸಗಳು ಅವರ ವ್ಯಕ್ತಿತ್ವವನ್ನು ಮೇಲೆತ್ತಿದುವು. ಕೊನೆಗೂ ಅವರ ಮತಾಂತರದ ಮನಸ್ಸು ಬದಲಾಗಲಿಲ್ಲ. "ಭಾರತೀಯ ಸಂಸ್ಕೃತಿಯನ್ನು ಬೌದ್ಧಧರ್ಮ ಹೆಣೆದುಕೊಂಡಿದೆ. ಈ ನನ್ನ ಮಾತೃಭೂಮಿಯ ಇತಿಹಾಸ ಸಂಸ್ಕೃತಿ ಮತ್ತು ಸತ್ಸಂಪ್ರದಾಯಗಳಿಗೆ ನನ್ನ ಧರ್ಮಾಂತರದಿಂದ ಯಾವ ಕೇಡೂ ಉಂಟಾಗದೆಂದು ನಾನು ನಂಬಿದ್ದೇನೆ" ಎನ್ನುವ ಅವರ ನುಡಿಗಳು ಧರ್ಮಾಂಧ ಸವರ್ಣೀಯರ ಬದಲಾಗದ ಹೃದಯಗಳಿಗೆ ತೋರಿದ ಸಾತ್ವಿಕ ಪ್ರತಿಕ್ರಿಯೆಯಾಗಿದೆ.

ಮೇಲ್ನೋಟಕ್ಕೆ ಅಂಬೇಡ್ಕರ್ ಕೋಮುವಾದಿ. ಸ್ವಾತಂತ್ರ್ಯವಿರೋಧಿಯಾಗಿ ಕಾಣುವ ಅಪಾಯವಿದೆ. ಕೂಲಂಕಷವಾಗಿ ವಿಚಾರ ಮಾಡಿದರೆ ಅವರಲ್ಲಿ ಹಿಂದೂ ಸಮಾಜ ಸಮಾನತೆಯ ಆಧಾರದ ಮೇಲೆ ಒಂದಾಗಿ ನಿಲ್ಲಬೇಕು. ಅದು ಪುನರ್ ವ್ಯವಸ್ಥೆಯಾಗಬೇಕು ಎನ್ನುವ ಅನನ್ಯ ಕಾಳಜಿ ಇದ್ದುದು ಕಾಣಿಸುತ್ತದೆ. "ಸಂಪ್ರದಾಯ

ಶರಣ ಹಿಂದೂಗಳ ಬಗ್ಗೆ ನನಗೆ ವಿರೋಧವಿದೆ ನಿಜ. ಆದರೆ ನನ್ನ ರಾಷ್ಟ್ರರಕ್ಷಣೆಗಾಗಿ ಎಂಥ ಸಂದರ್ಭದಲ್ಲೂ ನಾನು ನನ್ನೆಲ್ಲಾ ಶಕ್ತಿಯಿಂದ ಹೋರಾಡುತ್ತೇನೆ" ಎನ್ನುವ ಅಭಿಪ್ರಾಯವಾಗಲಿ "ದಲಿತರಿಗಿರುವ ಸ್ವಾತಂತ್ರ್ಯಪ್ರೇಮ ಬೇರೆಯವರಿಗಿಂತ ಕಡಿಮೆ ಯದಲ್ಲ. ಆದರೆ ದೇಶದ ಸ್ವಾತಂತ್ರ್ಯದೊಡನೆ ಅವರು ತಮ್ಮ ಜನಾಂಗದ ಸ್ವಾತಂತ್ರ್ಯವನ್ನು ಬಯಸುತ್ತಾರೆ" ಎನ್ನುವ ಮಾತಾಗಲಿ ಅವರ ಉದ್ದೇಶವನ್ನು ಸ್ಪಷ್ಟಪಡಿಸುತ್ತವೆ.

ಹೀಗೆ ಅಂಬೇಡ್ಕರ್ ಅವರ ವ್ಯಕ್ತಿತ್ವ, ಜೀವನ ಸಾಧನೆ, ಹೋರಾಟವನ್ನು ಈ ಕೃತಿ ಚಿತ್ರವತ್ತಾಗಿ ಕಟ್ಟಿಕೊಡುತ್ತದೆ. ಅನುಕ್ರಮವಾಗಿ ಪ್ರಸ್ತಾಪಿಸಿರುವ ಜೀವನ ಘಟನೆಗಳು. ಸಂಗತಿಗಳು ಚಾರಿತ್ರಿಕ ನೋಟವನ್ನು ಒದಗಿಸಿಕೊಡುವುದಲ್ಲದೆ ವಿಷಯ ಗ್ರಹಣಕ್ಕೂ ಸಹಾಯ ಮಾಡುತ್ತವೆ. ಪಾತ್ರ ಸನ್ನಿವೇಶಗಳ ರಾಗಭಾವಗಳಲ್ಲಿ ಏರಿಳಿ ಯುವ ಓಜಸ್ಸಿನ ಶೈಲಿ ಸಾಹಿತ್ಯ ಕೃತಿಯೊಂದರ ಓದಿನ ಅನುಭವ ನೀಡುತ್ತದೆ. ಹಲವು ಇಂದ್ರಿಯಗ್ರಾಹ್ಯವಾಗುವ ದೃಶ್ಯಗಳು ನಿರೂಪಣೆಯ ಪರಿಣಾಮಕಾರಿ ಗುಣದಿಂದ ಮೂಡುತ್ತವೆ. ಪುಸ್ತಕಕ್ಕೆ ಅಳವಡಿಸಿಕೊಂಡಿರುವ ಉಪಶೀರ್ಷಿಕೆಗಳು–ಸುತ್ತಮುತ್ತ ಅಂಧಕಾರ. ಬೆಳಕಿನ ಪಂಜುಗಳು, ಒಂದು ಹೂವು ನೂರು ಮುಳ್ಳು, ಮುಳ್ಳು ಹಂದಿ ಗಳ ನಡುವೆ, ಸಮರಸಿದ್ಧತೆ ಇತ್ಯಾದಿ ಅರ್ಥಪೂರ್ಣವಾಗಿದ್ದು ಆಯಾಭಾಗದ ವಿಷಯದ ಹೂರಣವನ್ನು ಎತ್ತಿತೋರುತ್ತದೆ. ದಲಿತರ ಅಸ್ಪೃಶ್ಯರ ಶತಮಾನಗಳ ಕಗ್ಗತ್ತಲೆಗೆ ಬೆಳಕಾಗಿ ಬಂದ ಅಂಬೇಡ್ಕರರಂಥ ಧೀಮಂತ ಚೇತನವನ್ನು 'ದಲಿತ ಸೂರ್ಯ'ನೆಂದು ಕರೆದಿರುವುದಂತೂ ಔಚಿತ್ಯಪೂರ್ಣ.

ದೇವನೂರರ ‘ಒಡಲಾಳ’

ರಂಗಾರೆಡ್ಡಿ ಕೋಡಿರಾಂಪುರ

ಬಂಡಾಯ ಸಾಹಿತ್ಯ ಸಂಘಟನೆಯ ವತಿಯಿಂದ ಆಗಾಗ್ಗೆ ನಡೆಯುವ ಸಾಹಿತ್ಯ ಶಿಬಿರ ಒಂದರಲ್ಲಿ ಸಾಹಿತ್ಯ ಚರ್ಚೆ ಮಾಡುತ್ತಿರುವಾಗ ಸಿದ್ಧಲಿಂಗಯ್ಯ ಮತ್ತು ನಂತರದ ಕವಿಗಳ ಒಳ್ಳೆಯ ಕಾವ್ಯವನ್ನೂ ಅಬ್ಬರದ ಕಾವ್ಯವೆಂದೂ ಮಹಾದೇವ ಅವರು ಬರೆದ ತೀರಾ ಸಾಮಾನ್ಯ ಕತೆಗಳೂ ತಣ್ಣನೆಯ ಕ್ರೌರ್ಯದ ಒಳ್ಳೆಯ ಸಾಹಿತ್ಯವೆಂದೂ ನಮ್ಮ ವಿಮರ್ಶಕರು ಪರಿಗಣಿಸಿದ್ದಾರೆ. ಇದಕ್ಕೆ ಕಾರಣವೇನು ? ಎಂಬ ಹುಡುಕಾಟ ಆರಂಭವಾಯಿತು. ಬಹಳ ಗಂಭೀರವಾದ ಚರ್ಚೆಯ ಈ ಕಾಲದಲ್ಲಿ ಒಬ್ಬೊಬ್ಬರು ಒಂದೊಂದು ಕಾರಣ ಹೇಳುತ್ತಿರುವಾಗ ಬರಗೂರು ರಾಮಚಂದ್ರಪ್ಪನವರು ವಿಶ್ಲೇಷಿಸಿದ ಒಂದು ಕಾರಣ ಶಿಬಿರದಲ್ಲಿ ಭಾಗವಹಿಸಿದವರಿಗೆಲ್ಲ ಹಿಡಿಸಿತು: “ನಮ್ಮ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದ ಮುಂಚೂಣಿಯಲ್ಲಿರುವವರು, ವಿಮರ್ಶಕರು, ಓದುಗರು ಮತ್ತು ಸಮೂಹ ಮಾಧ್ಯಮಗಳ ವಕ್ತಾರರು ಹೆಚ್ಚಾಗಿ ಮಧ್ಯಮ ವರ್ಗದವರು. ಇವರಿಗೆ ಯಾವುದೇ ರೀತಿಯ ಗದ್ದಲ, ಗೌಜು, ಶಬ್ದ ಕಂಡರೆ ಆಗುವುದಿಲ್ಲ. ಒಂದು ಸಣ್ಣ ಗಲಾಟೆಯಾದರೂ ಅದೇನೆಂದು ವಿಚಾರಿಸುವ ಮಾನವ ಸಹಜ ಕುತೂಹಲವನ್ನೂ ಹತ್ತಿಕ್ಕಿ ಜಾಗ ಖಾಲಿ

ಮಾಡುತ್ತಾರೆ. ಇಂಥ ಏಕಾಂತ ಬಯಸುವ ಮನೋಭಾವದ ವ್ಯಕ್ತಿಗಳಿಗೆ ವೀಣೆಯ ಮಧುರ ನಿನಾದ ಬೇಕೇ ಹೊರತು ತಮ್ಮಟೆ ಅಥವಾ ಡೊಳ್ಳಿನ ಶಬ್ದವಲ್ಲ. ಇವೆರಡೂ ವಾದ್ಯಗಳು, ಅದರ ರಚನೆಗನುಗುಣವಾಗಿ ಶಬ್ದ ಹೊರಡಿಸುತ್ತವೆ ಎಂಬ ಸಾಮಾನ್ಯ ಪರಿಜ್ಞಾನವೂ ಇರುವುದಿಲ್ಲ. ಇಂಥ ಮನಸ್ಸಿರುವ ವ್ಯಕ್ತಿಗಳು ಸಾಹಿತ್ಯದಲ್ಲಿ ತಣ್ಣನೆಯ ಕ್ರೌರ್ಯವನ್ನು ಬಯಸುತ್ತಾರೆಯೇ ಹೊರತು ಸ್ವಲ್ಪ ಮಟ್ಟಿಗೆ ಪ್ರತಿಭಟಿಸುವ ಪಾತ್ರ ಕಂಡರೆ ಅದನ್ನು ಇಷ್ಟಪಡುವುದಿಲ್ಲ. ಕ್ರೌರ್ಯದಲ್ಲಿ ತಣ್ಣನೆಯ ಬೆಚ್ಚನೆಯ ಎಂಬ ವ್ಯತ್ಯಾಸವಿಲ್ಲ" ಎಂಬ ಅಭಿಪ್ರಾಯವನ್ನು ಬರಗೂರರು ವ್ಯಕ್ತಪಡಿಸಿದಾಗ ಈ ವಿಶ್ಲೇಷಣೆ ಎಲ್ಲರ ಮೆಚ್ಚಿಗೆ ಪಡೆಯಿತು.

ಈ ಹಿನ್ನೆಲೆಯಲ್ಲಿ ದೇವನೂರು ಮಹಾದೇವ ಬರೆದ ಅವರ ಎರಡನೆಯ ಕೃತಿ 'ಒಡಲಾಳ' ವನ್ನು ಪುನರ್‌ವಿಮರ್ಶೆಗೆ ಒಳಗುಮಾಡಿದಾಗ ಅದಕ್ಕೆ ಸಿಗಬೇಕಾಗಿರುವು ದಕ್ಕಿಂತ ಅತಿ ಹೆಚ್ಚು ಮನ್ನಣೆ ದೊರಕಿದೆ ಎನ್ನಿಸದಿರದು. ಒಡಲಾಳ ಒಂದು ಒಳ್ಳೆಯ ಕೃತಿ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಅದರ ಮಿತಿಯನ್ನು ಮೀರಿ ಹೊಗಳಿಕೆ ಸಂದಿದೆ. ದೇವನೂರರೇ ಬರೆದ 'ಮೂಡಲ ಸೀಮೇಲಿ ಕೊಲೆಗಿಲೆ ಮುಂತಾಗಿ' ಮತ್ತು 'ಅಮಾಸ' ಕತೆಗಳ ಪಕ್ಕದಲ್ಲಿಟ್ಟುಕೊಂಡು ತೌಲನಿಕವಾಗಿ ನೋಡಿದರೆ ಆ ಕತೆಗಳಿಗಿರುವ ತೂಕ ಈ ಕೃತಿಗಿಲ್ಲ.

ಒಡಲಾಳದ ಕತೆ ದಲಿತ ಕುಟುಂಬವೊಂದರ ಎರಡು ದಿನಗಳ ಹಸಿವಿನ ಚಿತ್ರಣ ವನ್ನು ನಮ್ಮ ಮುಂದಿರಿಸುತ್ತದೆ. ಇದು ಒಂದು ಒಳ್ಳೇ ಚಿತ್ರಣವೇ ಹೊರತು ನಿಜವಾದ ಹಸಿವಿನ ಸಂಕಟವಲ್ಲ. ಸಂಕಟಪಡುವಂಥ, ಆ ಸಂಕಟ ಓದುಗರ ಕರುಳು ಕೊಯ್ಯುವಂಥ ಸ್ಥಿತಿ ಮುಖ್ಯ ಪಾತ್ರವಾದ ಸಾಕವ್ವನಿಗಿಲ್ಲ. ಯಾಕೆಂದರೆ ಸಾಕವ್ವನಿಗೆ 'ನಾಕು ಕಂಬದ ತೊಟ್ಟಿಹಟ್ಟಿ' ಇದೆ. ಅವಳ 'ಸ್ವಾರ್ಜಿತ' ವಾದ ಆಸ್ತಿ ಇದೆ. 'ಒಂದು ಕಾಲದಲ್ಲಿ ಪೂರ್ತ ಹಂಚುಹೊದ್ದು ಮೆಡುಗಾರಿಕೆ ಮಾಡಿದ್ದ' ಮನೆ ಈಗ ಮೂರು ಪಾಲಾಗಿದ್ದರೂ ಒಂದೇ ಕುಟುಂಬದಂತಿದೆ. ಎರಡನೇ ಮಗ ಸಣ್ಣಯ್ಯನ ಹೆಂಡತಿ ಚೆಲುವಮ್ಮ 'ಹೊಟ್ಟೆಬಟ್ಟಾಗ ನೇರವಾಗಿದ್ದವರ ಮನೆಯಿಂದ ಕಾಲಿರೆಸಿದವಳು. ತೌರಿಂದತಾಯಿ ಕಡೇಯು ಒಳಸರಬರಾಜೂ ಉಂಟು'. ಇಂಥ ಸ್ಥಿತಿ ಇರುವ ಸಾಕವ್ವನಿ ಗಿಂತ ಗರಿಯ ಗುಡಿಸಲೂ ಇಲ್ಲದ, ಆಸ್ತಿಯ ಹೆಸರೇ ಕೇಳದ, ಕೂಲಿಗೂ ಗತಿಯಿಲ್ಲದ ಸಾವಿರಾರು ಮಂದಿಯ ಬವಣೆ ಕಣ್ಮುಂದೆ ಕಟ್ಟಿರುವಾಗ ಈ ಕೃತಿಯ ಚಿತ್ರಣ ಅದರ ಮುಂದೆ ಏನೇನೂ ಅಲ್ಲ.

ಸಾಕವ್ವನ ಕುಟುಂಬದ ಸ್ಥಿತಿ ಹೀಗಿರುವುದರಿಂದ ಅವಳು ಕೋಳಿಗಳನ್ನೂ ಸಾಕಿದ್ದಳು. ಅದರಲ್ಲಿ ದೇವರಿಗೆ ಬಿಟ್ಟಿದ್ದ ಖಾಸ ಹುಂಜವೊಂದು ಕಳುವಾಗಿದ್ದ ರಿಂದ ಅದನ್ನು ಹುಡುಕುವ ಕ್ರಿಯೆಯಿಂದ ಕಾದಂಬರಿ ಆರಂಭವಾಗುತ್ತದೆ. ಬೇರೆ ಯವರಿಗೆ ಅದು ಸಾಮಾನ್ಯ ಘಟನೆಯಾದರೂ ಸಾಕವ್ವನಿಗೆ ಅದು ತನ್ನ ಜೀವವಾಗಿತ್ತು. ಅದನ್ನು ಹುಡುಕುವುದಕ್ಕೆ ಅವಳು ಪಡುವ ಶ್ರಮವನ್ನು ಕಂಡು ಮಕ್ಕಳು ತಾತ್ಸಾರ

ತೋರುತ್ತಾರೆ. ಆದರೆ ಸಾಕವ್ವನ ಪ್ರೀತಿ ಮತ್ತು ತಾದಾತ್ಮ್ಯ ದೇವರನ್ನೂ ಧಿಕ್ಕರಿಸುವ ಮಟ್ಟಿಗಿತ್ತು,........"ಅದು ಹೋಗ್ಲಿ ಆಮೇಲೆ ತೋರುಸ್ತೀನಿ. ಈ ನನ್ನ ಮನೆದೇವರೂ ಮೆಣಸಿನಕಾಯ್ನ ಹೊಗೆಕೊಟ್ಟು ನನ್ನ ಹಳೆಕೆರದಲ್ಲಿ ಚಾರಮಾರ ಬಾರಿಸ್ದೆ ಬುಟ್ಟಾನ." ಇಂಥ ದಿಟ್ಟೆಯಾದ ಸಾಕವ್ವ ಅದನ್ನು ಹುಡುಕಲು ಇನ್ನೊಂದು ಹುಂಜವನ್ನು ಪೋಲೀಸರಿಗೆ ಕೊಡುವುದು ಅದಕ್ಕೆ ಪ್ರತಿಯಾಗಿ ಸಾಹುಕಾರರು ಒಂದು ರೂಪಾಯಿ ಕೊಟ್ಟರೆ ಬೇಡ ಬೇಡ ಎನ್ನುತ್ತಲೆ ತೆಗೆದುಕೊಳ್ಳುವುದು ಅವಳ ಕರ್ತೃತ್ವ ಶಕ್ತಿಯನ್ನೇ ಇಲ್ಲವಾಗಿಸಿದೆ. ಸಾಕವ್ವನ ಪಾತ್ರವನ್ನು ಆರಂಭದಿಂದ ಲೇಖಕರು ಬೆಳೆಸಿರುವ ರೀತಿಯನ್ನು ನೋಡಿದರೆ ಅವಳು ಇಷ್ಟು ಸುಲಭಕ್ಕೆ ಒಗ್ಗುವ ಹೆಣ್ಣಲ್ಲ ಎಂಬುದು ಗೊತ್ತಾಗುತ್ತದೆ. ಸರಿಯಾದ ಸಮಯದಲ್ಲಿ ಪ್ರತಿಭಟನೆಯ ತುರೀಯಾವಸ್ಥೆಯನ್ನು ತಲುಪಬೇಕಾಗಿದ್ದ ಸನ್ನಿವೇಶವನ್ನು ಮಹಾದೇವ ಹೀಗೆ ದುರ್ಬಲಗೊಳಿಸಿರುವುದರ ಹಿಂದೆ ಮೇಲ್ಮಧ್ಯಮ ವರ್ಗದ ಮನೋಲಹರಿಯೇ ಕೆಲಸ ಮಾಡಿದೆ. ಯಾಕೆಂದರೆ ಈ ವರ್ಗದ ವಿಮರ್ಶಕರು, ಮಹಾದೇವರ ಇಂಥ ಬರವಣಿಗೆಯನ್ನ ಹೊಗಳಿ ಹೊಗಳಿ ಇದೇ ನಿಜವಿರಬಹುದೇನೋ ಎಂಬ ಭ್ರಮೆಯನ್ನು ಮೂಡಿಸಿದ್ದಾರೆ. ಇದರ ಹಿಂದೆ ತುಳಿತಕ್ಕೊಳಗಾದವರ ದನಿಯನ್ನೇ ಅಡಗಿಸಿಬಿಡುವ, ತುಂಬಾ ಶಕ್ತಿಯುತವಾಗಿ ಬರೆಯುವವರ ಬರವಣಿಗೆಯ ದಿಕ್ಕನ್ನೇ ಬದಲಾಯಿಸುವ ಕುತಂತ್ರವಿದೆ ಎಂಬುದನ್ನು ಮಹಾದೇವ ಅರಿತಿಲ್ಲ.

ಇದಕ್ಕೆ ಪೂರಕವಾಗಿಯೇ ಇನ್ನೊಂದು ಘಟನೆಯನ್ನು ಪರಿಶೀಲಿಸಬಹುದು. ಸಾಕವ್ವನ ಹಟ್ಟಿ ಪಕ್ಕದಲ್ಲೇ ಕಾಳವ್ವನ ಹಟ್ಟಿಯಿದೆ. ಸಾಕವ್ವನಿಗಿಂತ ಕಾಳವ್ವ ಇನ್ನೂ ಬಡವಿ. ಆದರೂ ಅವಳು ವರ್ತಿಸುವ ರೀತಿ ನೋಡಿ :

ಕಾಳಕ್ಕ : 'ಅತ್ತಿಗೆಮ್ನೋರ ಒಂದು ಬದುಕ ಕೇಳ್ತೀನಿ....... ಇಲ್ಲ ಅನ್ನಬೇಡಿ' ಅಂದಳು.

ಚಲುವಮ್ಮ : 'ಏನ್ನ ಹೇಳು ತಾಯಿ ಇದ್ರೂವಿ ಇಲ್ಲ ಅಂದಾನಾ' ಅಂದಳು, ಆಗ

ಕಾಳಕ್ಕ : 'ಏನು ಇಲ್ಲಕನ್ನಿ ಅತ್ಗಮ್ಮ. ಒಲಮೇಲ ಹಿಟ್ಗ ಇಟ್ಟು ಬಂದೀನಿ. ಆಸಿಟು ಸಾಲ್ದೀಯ ತೆಳ್ಳಗಾಗದೆ, ಒಂದ್ಪಾವು ಆಸಿಟ್ಟು ಕೊಟ್ಟರಿ. ನಾಳೆ ಮಿಲ್ಲು ಮಾಡಿಸ್ಕಂಡ್ ಬಂದ್ಮೇಲ ಕೊಟ್ಟುಬುಡ್ತೀನಿ' ಅಂದಳು.

ಚಲುವಮ್ಮ : 'ನನ್ನ ಕಣ್ಣಾನ ಇಲ್ಲಕಾ ತಾಯಿ, ಇದ್ರ ನಾನು ಇಲ್ಲ ಅಂತಿದ್ನಾ' ಅಂದಳು.

ಇನ್ನೊಂದು ಸಂದರ್ಭದಲ್ಲಿ ಕಾಳಕ್ಕನ ಪ್ರವೇಶವಾಗುತ್ತದೆ :

ಕಾಳಣ್ಣನ ಹೆಂಡ್ತಿ ದಾರಂದ ತಗದು 'ಯಾರ' ಅಂತಲೆ ಕಾಳಕ್ಕನ ದನಿಯು 'ನಾನು' ಅಂತು. ಕಾಳಕ್ಕ ಕತ್ತಲಲ್ಲಿ ಕಾಣೆಸುತ್ತಿರಲಿಲ್ಲ. ಅವಳ ದನಿಯು-'ಅತ್ಗವ್ನೋರ ಸನ್ನಂಡು ಅಸ್ಕಂಡು ಅಳ್ತ ಮಲಗದೆ. ಮೂರು ಜಿನದಿಂದೂ ಕಳಕಂಬಳ್ಕ ಕರೆಯೋರು ಯಾರೂ ದಿಕ್ಕಿಲ್ಲ. ಏನಾರು ಇದ್ರೆ ಒಂದಿಷ್ಟು ಕೊಡಿ' ಎಂದಿತು.

ಈ ಎರಡು ಸನ್ನಿವೇಶಗಳೂ ಕಾಳಕ್ಕನಿಗೆ ಸಂಬಂಧಪಟ್ಟವು. ಮೊದಲೇ ಹೇಳಿದಂತೆ ಕಾಳಕ್ಕ ಸಾಕವ್ವನಿಗಿಂತ ಬಡವಿ. ಸಾಕವ್ವನಿಗಾದರೆ ದುಡಿಯಲು ಮಗ ಸೊಸೆಯಂದಿರಿದ್ದಾರೆ. ಆದರೆ ಕಾಳಕ್ಕನಿಗೆ ಗಂಡ ಮಾತ್ರ, ಅದೂ ಮೂರು ದಿನದಿಂದ ಹೊಟ್ಟೆಗೆ ಏನೂ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ಕಾಳಕ್ಕ ಚಲುವಮ್ಮನ ಹತ್ತಿರ ಬಂದಾಗ ಸುಳ್ಳು ಹೇಳುತ್ತಾಳೆ. ಒಲೆಮೇಲೆ ಇಟ್ಟಿರುವ ಹಿಟ್ಟು ಅಸಿಟ್ಟು ಸಾಲ್ದೀಯ ತೆಳ್ಳಗಾಗಿದೆಯಂತೆ. ನಮ್ಮ ಮನೆಯಲ್ಲೂ ಇದೆ, ಸ್ವಲ್ಪ ಕಡಿಮೆಯಿದೆ ಎಂದು ಹೇಳಿದರೆ ಏನಾದರೂ ಸಿಗಬಹುದೇನೋ ಎಂಬ ಆಸೆ. ಚಲುವಮ್ಮನ ಮನೆ ಸ್ಥಿತಿ ಕಾಳಕ್ಕನಿಗೆ ಗೊತ್ತು. ಕಾಳಕ್ಕನ ಮನೆ ಸ್ಥಿತಿ ಇವರಿಗೆ ಗೊತ್ತು. ಇಂಥ ಸಂದರ್ಭದಲ್ಲಿ ಇರುವ ಸ್ಥಿತಿಯನ್ನು ಹೇಳಿದರೆ ಚಲುವಮ್ಮ ಕೊಡುತ್ತಿದ್ದಳೇನೋ. ಯಾಕೆಂದರೆ ಎರಡನೇ ಸನ್ನಿವೇಶದಲ್ಲಿ ನಿಜಸ್ಥಿತಿಯನ್ನು ಹೇಳಿದ್ದಕ್ಕೆ ಎರಡು ಹಿಡಿ ಕಡ್ಲೆಕಾಯಾದರೂ ಸಿಕ್ಕಿತು.

ನಿಜಸ್ಥಿತಿಯನ್ನು ಒಪ್ಪಿಕೊಳ್ಳುವುದಕ್ಕೆ ಮೊದಲ ಸನ್ನಿವೇಶದಲ್ಲಿ ಕಾಳಕ್ಕ ಯಾಕೆ ಹಿಂದೇಟು ಹೊಡೆದಳು ಎಂಬುದು ಪ್ರಶ್ನೆ. ಇದು ತುಂಬಾ ತಾತ್ಪರವಾದ ವಿಷಯ ವಾದರೂ ಈ ಪಾತ್ರ ಸೃಷ್ಟಿಯ ಹಿಂದಿರುವ ಮನಸ್ಸು ಕೆಲಸ ಮಾಡುವ ರೀತಿಯನ್ನು ಅರಿಯಲು ಸಹಾಯಕವಾಗುತ್ತದೆ. ಉಪವಾಸವಿದ್ದರೂ ಕಾಳಕ್ಕ ಸುಳ್ಳು ಹೇಳು ವುದು ಹುಸಿಪ್ರತಿಷ್ಠೆ ಉಳಿಸಿಕೊಳ್ಳುವುದಕ್ಕಾಗಿ. ಈ ಹುಸಿಪ್ರತಿಷ್ಠೆ, ಸುಳ್ಳು ಸ್ವಾಭಿಮಾನ ಇವೆಲ್ಲ ಮಧ್ಯಮವರ್ಗದ ಹುಸಿನಂಬಿಕೆಗಳು. ಇಂಥ ಹುಸಿ ನಂಬಿಕೆಗಳಿಗೆ ಒಳಗಾದ ಕಾಳಕ್ಕನ ನಿಜಸ್ಥಿತಿ ಎರಡನೇ ಸನ್ನಿವೇಶದಲ್ಲಿ ಬಯಲಿಗೆ ಬರುತ್ತದೆ. ಆ ಪಾತ್ರ ಇಂಥ ಕಟುವಾಸ್ತವಿಕತೆಯನ್ನು ಮರೆಮಾಚುವುದರ ಬದಲು ಅದರ ದುರಂತ ಸ್ವರೂಪವನ್ನು ಪದರ ಪದರವಾಗಿ ತೆರೆದಿಟ್ಟಿದ್ದರೆ ಹಸಿವಿನ ಸಂಕಟ ಓದುಗರನ್ನು ಕೊರೆದು ತಿನ್ನುತ್ತಿತ್ತು.

ಕಾಳಕ್ಕನ ಪಾತ್ರವನ್ನು ಮಹಾದೇವ ಈ ರೀತಿ ಚಿತ್ರಿಸಿರುವುದನ್ನು ನೋಡಿದರೆ ಸಮಸ್ಯೆಯ ಆಳಕ್ಕಿಳಿಯುವ ಮನಸ್ಸಿಲ್ಲವೆಂಬುದು ತಿಳಿಯುತ್ತದೆ. ಹಸಿವಿನ ಭೀಕರ ಸ್ವರೂಪ ಹೇಗಿರುತ್ತದೆನ್ನುವುದನ್ನು ಮಹಾದೇವನಿಗಿಂತ ಹಿಂದೆಯೇ ಜನಪದ ಸಾಹಿತ್ಯದಲ್ಲಿ ನೋಡುತ್ತೇವೆ. 'ಮಕ್ಕಳನ್ನು ಮಾರಿ ಭತ್ತ ಭತ್ತ' ಅಂತ ತಿರುಗಿದ್ದು ಜನಪದ ಸಾಹಿತ್ಯದಲ್ಲಿ ಇತಿಹಾಸವಾದರೆ ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ಪ್ರಕಟವಾದ 'ಕಾಲಹಂಡಿ' ಜಿಲ್ಲೆಯ ಕ್ಷಾಮ ನಮಗೆ ವರ್ತಮಾನ. ಆ ವರದಿಯನ್ನೋದಿ ಈ 'ಒಡಲಾಳ' ಓದಿದರೆ ಹಸಿವಿನ ಭೀಕರತೆ ಎನ್ನುವುದು ಈ ಕೃತಿಯಲ್ಲಿ ಇಲ್ಲವೇ ಇಲ್ಲ ಎನ್ನಿಸಿಬಿಡುತ್ತದೆ. ಅಂಥ ಭೀಕರ ಹಸಿವು ಲೇಖಕರನ್ನು ಕಾಡಿಸಿದ್ದರೆ ಕಾಳಕ್ಕನ ಪಾತ್ರದಲ್ಲಿ ಹುಸಿ ಪ್ರತಿಷ್ಠೆಯನ್ನು ತುಂಬುತ್ತಿರಲಿಲ್ಲ.

ಹೀಗೆ ಕೃತಿಯಲ್ಲಿ ತುಂಬಾ ಶಕ್ತಿಯುತವಾದ ಪ್ರತಿಭಟನೆ ಪ್ರಕಟವಾಗಬೇಕಾಗಿದ್ದ ಸಮಯದಲ್ಲಿ ಅದನ್ನು ದುರ್ಬಲಗೊಳಿಸಿರುವುದು, ಭೀಕರವಾದ ಹಸಿವಿನ ಸಂಕಟದ ವಾಸ್ತವಿಕತೆಯನ್ನು ಮರೆಮಾಚಿರುವುದು ಮಹಾದೇವ ಅವರ ಆಲೋಚನೆಯ

ದಿಕ್ಕನ್ನು ನಿರ್ದೇಶಿಸುತ್ತದೆ. ಮಹಾದೇವನಂಥ ಶಕ್ತಿವಂಥ ಲೇಖಕರನ್ನು ದಿಕ್ಕುತಪ್ಪಿಸುವ ಪ್ರತಿಗಾಮೀ ಆಲೋಚನಾವಿಧಾನ ಅವನ ಕೃತಿಗಳನ್ನು ಸುಮ್ಮಸುಮ್ಮನೆ ಹೊಗಳುವುದರ ಹಿಂದಿದೆ.

ಕಾದಂಬರಿಯ ಇನ್ನೊಂದು ಪಾತ್ರವಾದ ಗುರುಸಿದ್ಧನ ಆಲೋಚನಾ ರೀತಿಯಲ್ಲಿ ಪ್ರತಿಭಟನೆ ಗರಿಗಟ್ಟುತ್ತಿರುವ ಸೂಚನೆ ಕಾದಂಬರಿಯಲ್ಲಿದೆ ಎಂದು ಇದರ ಬಗ್ಗೆ ವಿಮರ್ಶೆ ಬರೆದ ಎಲ್ಲರೂ ಒಮ್ಮನದಿಂದ ಒಪ್ಪಿಕೊಂಡಿದ್ದಾರೆ. ಇದಕ್ಕೆ ಅವರು ಉದಾಹರಿಸುವ ಸನ್ನಿವೇಶಗಳು ಎರಡು: ಮೊದಲನೆಯದು, ಗುರುಸಿದ್ದ ತಗಡೂರಿನ ಹೋಟೆಲಿನಲ್ಲಿ ದೋಸೆ ಟೀ ಕೇಳುವ ಪ್ರಸಂಗ. ಎರಡನೆಯದು, ಇನ್‌ಸ್ಪೆಕ್ಟರು ಪುಟಗೌರಿಯನ್ನು ವಿಚಾರಿಸುವ ಸಂದರ್ಭ. ಗುರುಸಿದ್ದನ ಪ್ರತಿಭಟನೆ ಸ್ವಯಂಸ್ಫೂರ್ತಿಯಿಂದ, ತಿಳುವಳಿಕೆಯಿಂದ ಹುಟ್ಟಿದ್ದಲ್ಲ. ಅದು ಸನ್ನಿವೇಶ ಸ್ಫೂರ್ತಿಯಿಂದ ಹುಟ್ಟಿದ್ದೆಂಬುದು ಕಾದಂಬರಿಯ ವಿವರಣೆಯಿಂದಲೇ ಗೊತ್ತಾಗುತ್ತದೆ. "ಅಣ್ಣೋ ನೆನ್ನ ತಗಡೂರ್ಗ ವೋಗಿದ್ದಿ. ಅಲ್ಲಿ ನಮ್ಮವರು ಸಿವಬಸಪ್ನ ಹೋಟಲ್ಗ ನುಗ್ಗುದ್ದೂ ಅಂದ್ರು........ಸಿವಸಿವಾ ಆಪಾಟಿ ಜನ......ನಾವೇನ ಕಾಸ ಕೊಟ್ಟೆವೊ ಕಲ್ಲ ಕೊಟ್ಟೆವೊ ಕಾಫಿ ತಿಂಡಿ ಕೊಡ್ರಿ ಅನ್ನೋರು. ಸಿವಬಸಪ್ಪ ಅನ್ನೋವ ಬೆವುತೋದ. ಆಮೇಲ ಪೋಲಿಸ್ನವರು ಇಳುದ್ರು. ನಾವು ಕೊಡ್ಸತೀವಿ ಸುಮ್ನಿರಿ ಸುಮ್ನಿರಿ ಅನ್ನೋರು. ಜನ ಅನ್ನೋದು ಪೋಜು ನೋಡೋಥರ ನಿಂತಿರೋದು. ತಕ್ಕಳಪ್ಪ ನಾನ್ಯಾಕ ಸುಮ್ಕಿರೋದು ಅಂದುಬುಟ್ಟು ನಾನೂವಿ ಕಾಸ ಬಿಸಾಕಿ 'ದೋಸೆ ಟೀ' ಕೊಡಿ, ಅಂದೆ ಸಿವಬಸಪ್ಪ ಅನ್ನೋನು ನನ್ನೇ ದುರುಗುಟ್ಕಂಡು ನೋಡ್ತ ತಂದ್ಕೊಡನು". ಈ ವಠಾತು ಗಳಲ್ಲಿ ಜನ ಇದ್ರು, ಪೋಲೀಸ್ ಇದೆ ಎನ್ನುವ ಧೈರ್ಯದಿಂದ ಗುರುಸಿದ್ದ ಗುಂಪಿನಲ್ಲಿ ಗೋವಿಂದ ಎಂದಿದ್ದಾನೆಯೇ ಹೊರತು ನಿಜವಾದ ತಿಳುವಳಿಕೆಯಿಂದ ಟೀ, ದೋಸೆ ಕೇಳಿಲ್ಲ. ನರಹಳ್ಳಿ ಬಾಲಸುಬ್ರಹ್ಮಣ್ಯರಿಗೆ ಈ ಪ್ರಸಂಗ ಸಾಮಾಜಿಕ ಬದಲಾವಣೆಯ ಗತಿಯನ್ನು ಗ್ರಹಿಸುವಂತೆ ಮಾಡಿದೆ.* ಇಂದು ಯಾವ ಹಳ್ಳಿ ಹೋಟೆಲಿಗೆ ಹೋದರೂ ಕಾಫಿ, ಟೀ ಕೇಳುವುದು, ಕೊಡುವುದು ಶೀರಾ ಸಾಮಾನ್ಯವೇ ಹೊರತು ಅದೊಂದು ಸಮಸ್ಯೆಯೇ ಆಗಿಲ್ಲ. ಇಷ್ಟರಿಂದಲೇ ಸಾಮಾಜಿಕ ಬದಲಾವಣೆಯ ಗತಿಯನ್ನು ಕಾಣಲಾಗುವುದಿಲ್ಲ. ದಲಿತರು ಕುಡಿದ ಲೋಟವನ್ನು ಹೊರಗಡೆಯೇ ಈಗಲೂ ಇಡುತ್ತಾರೆ. ಆದರಿಂದ ಬದಲಾವಣೆ ಎನ್ನುವುದು ಎಷ್ಟು ದೂರ ಇದೆ ಎಂಬುದು ಗೊತ್ತಾಗುತ್ತದೆ.

ಇನ್ನೊಂದು ಇನ್‌ಸ್ಪೆಕ್ಟರು ಪುಟಗೌರಿಯನ್ನು ವಿಚಾರಿಸುವ ಸಂದರ್ಭ: "ಇನ್‌ಸ್ಪೆಕ್ಟರು ತಿರುಗಾಡುತ್ತಿದ್ದವರು ನಿಂತು ಪುಟಗೌರಿ ಕಡೆ ಬೆರಳು ತೋರ್ಸಿ 'ಹೇ ಹುಡ್ಗಿ ಬಾ ಇಲ್ಲಿ' ಎಂದರು. ಪುಟಗೌರಿ ಕಣ್ಣೆತ್ತಿ ನೋಡಿ ಕಣ್ಣ ಇಳಿಸಿ ನಿಂತಂತೆ

---

* ಅನುಸಂಧಾನ-ಪುಟ ೮೬.

ನಿಂತಳು. ಸಾಹೇಬರು ಈಗ ಗುಡುಗಿಕೊಂಡರು. ಪುಟಗೌರಿ ಈಗ ಬಂದು ನಿಂತು ನಡುಗಿದಳು.

ಲೇ ಹುಡ್ಗಿ ನಿಜ ಹೇಳು ನಿಂಗೇನು ಮಾಡೊಲ್ಲ.
ಪುಟಗೌರಿ ತುಟಿ ಕಚ್ಚಿಕೊಂಡಳು.
'ಕಡ್ಲೆಕಾಯಿ ಮೂಟೆ ಎಲ್ಲಿ' ;
ಪುಟಗೌರಿ ಬಾಯಿ ಬಿಡಲಿಲ್ಲ.
ಮಾತಾಡು...... !
ಪುಟಗೌರಿ ಮಾತಾಡಲಿಲ್ಲ.
'ಮಾತಾಡು ಚಿನಾಲಿ'
ಪುಟಗೌರಿ ಬಾಯ್ಗೆ ಸೆರಗು ತುರುಕಿಕೊಂಡಳು.

ಇನ್ಸಪೆಕ್ಟರ ರೂಲುಗೋಲು ಪುಟಗೌರಿ ಗಲ್ಲವನ್ನು ಸವರುತ್ತಿತ್ತು. ಪುಟಗೌರಿ ಮಾತುಗಳು ಹೊಟ್ಟೆಒಳ್ಗ ಅವುತುಕೊಳ್ಳುತ್ತಿದ್ದವು. ಗುರುಸಿದ್ದು ಇನ್ಸಪೆಕ್ಟರ ದುರುಗುಟ್ಟಿ ನೋಡುತ್ತಿದ್ದನು. ಸಾಹೇಬರು ರೂಲುಗೋಲನ್ನು ಪುಟಗೌರಿ ಗಲ್ಲದಿಂದ ತಗುದು ಗುರುಸಿದ್ದನ ಕಣ್ಣಿಡ್ಕಿ ಚಾಚಿ 'ಮಗ ನೋಡದ್ ನೋಡು' ನೋಡದ ಕಣ್ಣುಗಡ್ಡೆ ಮೀಟಾಕ್ತೀನಿ....ಹೇ' ! ಎಂದು ಹಲ್ಲ ನೊರಗುಟ್ಟಿದರು. ಗುರುಸಿದ್ದೂ ನೋಟಕ್ಕೆ ಸಾಹೇಬರ ಒಂದೆರಡು ರೋಮಗಳು ಅಳುಕುಪಟ್ಟಿದ್ದವು" (ಒಡಲಾಳ, ಪುಟ ೪೮). ಇದಕ್ಕೆ ಸರಹಳ್ಳಿಯವರ ಪ್ರತಿಕ್ರಿಯೆ ಹೀಗಿದೆ: ಗುರುಸಿದ್ದನ ಈ ತೀಕ್ಷ್ಣ ನೋಟದ ಪ್ರತಿಭಟನೆ ವ್ಯವಸ್ಥೆಯನ್ನು ಅಲ್ಲಾಡಿಸುವ ಶಕ್ತಿಯುಳ್ಳದ್ದೆಂಬ ಸೂಚನೆ ಇಲ್ಲಿದೆ.*

ಗುರುಸಿದ್ದನ ಪ್ರತಿಕ್ರಿಯೆಯಲ್ಲಿ ಸಿಟ್ಟಿನ ಅಂಶವಿದೆ ಎಂಬುದನ್ನು ಬೇಕಾದರೆ ಒಪ್ಪಿಕೊಳ್ಳಬಹುದು. ಅದೂ ಅವನ ತಂಗಿಯ ಗಲ್ಲವನ್ನು ಇನ್ಸಪೆಕ್ಟರ್ ಮುಟ್ಟಿದ್ದಕ್ಕೆ ಯಾರಿಗೇ ಆಗಲಿ ಸಿಟ್ಟುಬರುವುದು ಸಹಜ. ಹಾಗೆಯೇ ಗುರುಸಿದ್ದೂಗು ಬಂತು. ಆದರೆ ವ್ಯವಸ್ಥೆಯನ್ನೇ ಅಲ್ಲಾಡಿಸುವ ಶಕ್ತಿಯುಳ್ಳ ಪ್ರತಿಭಟನೆ ಎಂದು ಕರೆದರೆ ಅದು ಸುಳ್ಳು ಎಂಬುದನ್ನು ಲೇಖಕರೇ ಮುಂದಿನ ಪುಟಗಳಲ್ಲಿ ಸಾಬೀತುಪಡಿಸುತ್ತಾರೆ. ಗುರುಸಿದ್ದ ಹಾಗೆ ನೋಡಿದ್ದು ನಿಜವಾದ ಪ್ರತಿಭಟನೆಯೇ ಆಗಿದ್ದರೆ ಮುಂದೆ ತನ್ನ ತಾಯಿಯ ಇನ್ನೊಂದು ಕೋಳಿಯನ್ನು ಇನ್ಸಪೆಕ್ಟರ್ ಬೇಕು ಎಂದಾಗ ಇಲ್ಲ ಎನ್ನ ಬಹುದಾಗಿತ್ತು. ಇನ್ಸಪೆಕ್ಟರ್ ಕೋಳಿಹುಂಜವನ್ನು ಕೇಳಿದ ಮಾತುಗಳು ಸಾಕವ್ವನಿಗೇ ಅರ್ಥವಾಗದಿದ್ದರೂ ಪೇಟೆ ತಿರುಗಿ, ನಾಟಕ ಕಲಿಯುತ್ತಿದ್ದ ಗುರುಸಿದ್ದುಗಾದರೂ ಅರ್ಥವಾಗಬೇಕಿತ್ತು. ಸಾಕವ್ವನಿಗೆ ಇನ್ಸಪೆಕ್ಟರ ಮಾತುಗಳು ನಿಧಾನಕ್ಕೆ ಅರಿವಾಗಿದ್ದಕ್ಕೆ ಅಯ್ಯೋ ಎನ್ನುವ ರೋಧನವನ್ನಾದರೂ ಮಾಡಿದಳು. ಆದರೆ ಆ ಹುಂಜವನ್ನ ಹಿಡಿದುಕೊಡುವುದರಲ್ಲಿ ಗುರುಸಿದ್ದನೂ ಸೇರಿದ್ದ ಎಂಬುದನ್ನು ಲೇಖಕರ ಈ ವಿವರಣೆ

---

* ಅನುಸಂಧಾನ, ಪುಟ ೮೭

ಕೊಡುತ್ತದೆ. "ಕಾಳಣ್ಣ ಕುಂತವ್ನು ಎದ್ದು, ಸಣ್ಣಯ್ಯ ನಿಂತವ್ನು ನಡ್ದು ಆ ಹುಂಜನ ಓಡಿಯಲು ತೊಡಗಲು ಅವರೊಟ್ಟಿಗೆ ಉಳಿದವರೂ ಕೂಡಿಕೊಂಡರು" ಈ 'ಉಳಿದವರಲ್ಲಿ' ಗುರುಸಿದ್ದನೂ ಒಬ್ಬ. ಯಾಕೆಂದರೆ ಈ ಕಳ್ಳತನದ ವಿಚಾರಣೆ ನಡೆಯುತ್ತಿದ್ದಾಗ ಅಲ್ಲಿಗೆ ಬಂದು ಇನ್ಸಪೆಕ್ಟರನ್ನು ದುರುಗುಟ್ಟಿ ನೋಡಿದವನು ಅಲ್ಲಿಂದ ಆಚೆ ಹೋದ ಸಂಗತಿ ಕಾದಂಬರಿಯಲ್ಲಿಲ್ಲ. ಅವನ ಅಣ್ಣ ಅತ್ತಿಗೆಯರು ಅಕ್ಕ ತಂಗಿಯರು ಇಷ್ಟಲ್ಲದೆ ಬೇರೆ ಜನ ಗುಂಪುಕೂಡಿದ್ದ ಆ ಸಂದರ್ಭದಲ್ಲಿ ಆ ಹುಂಜವನ್ನು ಕೊಡಲು ಸಾಧ್ಯವಿಲ್ಲ ಎಂಬ ಮಾತನ್ನು ಇಷ್ಟು ಜನರಲ್ಲಿ ಯಾರಾದರೂ ಅಂದಿದ್ದರೆ ಇನ್ಸಪೆಕ್ಟರ್ ಬಾಯಿ ಮುಚ್ಚಿಕೊಂಡು ಹೋಗುತ್ತಿದ್ದ. ಕಳ್ಳತನ ಮಾಡಿದ ಹೆದರಿಕೆಯಿದ್ದರೂ ಮಾಲು ಸಿಕ್ಕಿಲ್ಲದಿದ್ದುದರಿಂದ ಪೋಲೀಸರೇ ಪೆಚ್ಚಾಗಿದ್ದರು. ದೇವನೂರರಿಗೆ ಒಗ್ಗಟ್ಟಾಗಿ ಎಲ್ಲರೂ ಜೋರು ಮಾಡುವ ಗಲಾಟೆ ಬಗ್ಗೆ ನಂಬಿಕೆ ಇಲ್ಲದಿದ್ದರೂ ಅವರು ಕಾದಂಬರಿಯನ್ನು ಮೊದಲಿಂದ ಬೆಳಸಿಕೊಂಡು ಬಂದ ರೀತಿ ಈ ಸನ್ನಿವೇಶದಲ್ಲಿ ಗಲಾಟೆಯನ್ನು ಬಯಸುತ್ತಿತ್ತು. ಉದ್ದೇಶ ಪೂರ್ವಕವಾಗಿ ಅಥವಾ ಗದ್ದಲ ಗೌಜನ್ನು ಇಷ್ಟಪಡದ ವಿಮರ್ಶಕರನ್ನು ಮೆಚ್ಚಿಸುವ ಸಲುವಾಗಿ ಇಂಥ ಪ್ರಸಂಗಗಳನ್ನು ತೀರ ದುರ್ಬಲಗೊಳಿಸುತ್ತಾರೆ. ಸಾಕವ್ವನ ಬಗ್ಗೆ ಅನುಕಂಪ ಬರುವಂತೆ ಈ ರೀತಿ ಬರೆಯುತ್ತಾರೆ: "ಅದು ಸಾಕವ್ವನಿಗೆ ನಿಧಾನವಾಗಿ ಅರುವಾಯ್ತು. ಆ ಮೇಲ ಅವುಳು ಅಯ್ಯೋ ಅಯ್ಯೋ ಅಂಪುಕೊಂಡದ್ದು ಯಾರ್ಗೂ ಕೇಳಿಸಲಿಲ್ಲ" ಯಾರಿಗೆ ಕೇಳಿಸದಿದ್ದರೂ ಇನ್ಸಪೆಕ್ಟರ್ ಮಾಡಿದ್ದು ತಪ್ಪು ಎಂಬುದನ್ನು ತೀಕ್ಷ್ಣ ನೋಟದಲ್ಲೇ ತೋರಿಸಿಕೊಟ್ಟ, ನಮ್ಮ ವಿಮರ್ಶಕರೆಲ್ಲ ಮೆಚ್ಚಿದ ಗುರುಸಿದ್ದುಗಾದರೂ ತಾಯಿ ಅಂದದ್ದು ಕೇಳಿಸಲೇ ಬೇಕಾಗಿತ್ತು. ಆ ತಾಯಿ ಕೂಡ ಸಾಹುಕಾರರು ಕೊಟ್ಟ ಒಂದು ರೂಪಾಯನ್ನು ಬೇಡ ಬೇಡ ಎನ್ನುತ್ತಲೇ ತೆಗೆದುಕೊಳ್ಳುವುದು ಪ್ರತಿಭಟನೆ ಸಾಧ್ಯವೇ ಇಲ್ಲ ಎಂಬ ನಿರಾಶಾಭಾವನೆಗೆಡೆಗೊಡುತ್ತದೆ. ಅಂದರೆ ಸನ್ನಿವೇಶವೇ ಪ್ರತಿಭಟನೆಗೆ ಒತ್ತಾಯಿಸಿದರೂ ದೇವನೂರರು ಅದನ್ನು ಹತ್ತಿಕ್ಕುತ್ತಾರೆ ಎಂಬುದು ಈ ಭಾಗದಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಸಾಕವ್ವ ಮುಸ್ಸಂಜೆಯ ಕತ್ತಲಿನಲ್ಲಿ ತನ್ನ ಹುಂಜವನ್ನು ಹುಡುಕಲು ಹೊರಟಾಗ ತನ್ನ ಮೊಮ್ಮಗ ಶಿವೂನನ್ನು ಕರೆಯುತ್ತಾಳೆ. ಅವನು ಹೆದರಿಕೆ ಅಂದಾಗ ನಾನಿದ್ದೇನೆ ಬಾ ಎನ್ನುತ್ತಾಳೆ. ಆಕೆ ಯಮಕಿಂಕರರನ್ನೂ ಓಡಿಸುವಂಥ ದಿಟ್ಟ ಹೆಣ್ಣು. ಅವರು ಕರೆದೊಯ್ಯುವ ಮುಂಚೆ ಈಕೆಯೇ ನರಕಕ್ಕೇ ಹೋಗಲು ತಯಾರು. ಯಾಕೆಂದರೆ ನರಲೋಕದಲ್ಲಿ ಆಕೆ ಪಟ್ಟಂತಹ ಕಷ್ಟಕ್ಕಿಂತ ಏನು ಹೆಚ್ಚಿಲ್ಲ ಯಮಲೋಕದ ಶಿಕ್ಷೆ. ಇವಳ ಧೈರ್ಯಕ್ಕೆ ಮೆಚ್ಚಿದ ಯಮ ಏನು ವರಬೇಕೋ ಕೇಳು ಎಂದರೆ "ನೋಡು ಸ್ವಾಮಿ ನನ್ನ ಮೊಮ್ಮೊಗ್ಗಸು ನರಲೋಕದಲ್ಲಿ ರಾಜ್‌ಭಾರ ಮಾಡುವಂಥ ವರಕೊಡು ಅಷ್ಟು ಸಾಕು ಅಂತೀನಿ" ಅನ್ನುತ್ತಾಳೆ. ಸಾಕವ್ವ ಪ್ರಕಟಿಸುವ ಆಶಯ ತುಳಿತಕ್ಕೊಳಗಾದವರೆಲ್ಲರ ಆಶಯವಾಗುತ್ತದೆ. ಆದರೆ ರಾಜ್‌ಭಾರ ಮಾಡಲು ಸಾಧ್ಯವಿಲ್ಲ–ಇದು

ವಾಸ್ತವ. ಈ ಆಶಯ ಮತ್ತು ವಾಸ್ತವಗಳ ನಡುವೆ ಒಳ್ಳೆ ಬದುಕು ನಡೆಸಲು ಮಾಡುವ ಹೋರಾಟ ನಿಜವಾದ ಬದುಕು. ಈ ಆಶಯ ಮತ್ತು ವಾಸ್ತವಗಳ ನಡುವಿನ ಘರ್ಷಣೆ ಈ ಕಾದಂಬರಿಯಲ್ಲಿಲ್ಲ. ಈ ಘರ್ಷಣೆಗೆ ಬೇಕಾದಷ್ಟು ಅವಕಾಶಗಳು ಈ ಕೃತಿಯ ಒಡಲಲ್ಲೇ ಇದ್ದರೂ ಮಹಾದೇವ ಇವುಗಳ ಕಡೆ ಗಮನ ಕೊಡದೆ ಸಾಕವ್ವನ ಕುಟುಂಬದ ವಿವರಗಳನ್ನು ಮಾತ್ರ ಕೊಟ್ಟಿದ್ದಾರೆ. ಇಲ್ಲೊಬ್ಬ ಸಾಹುಕಾರನೂ ಬರುತ್ತಾನೆ. ಅವನ 'ಬಡ್ಡಿಯ ದುಡ್ಡಿನ ಒಂದು ಸಿವುರನ್ನು ಕಾಳಣ್ಣ ಕದ್ದು ತಂದಿರುತ್ತಾನೆ. ಅದೇನು ಅವನಿಗೆ ಲೆಕ್ಕವಲ್ಲ. ಅಷ್ಟಾದರೂ ಅವನು ಪೋಲೀಸರಿಗೆ ದೂರು ಕೊಟ್ಟಿದ್ದರಿಂದ ಸಾಕವ್ವನ ಮನೆಯಲ್ಲಿ ಜಪ್ತಿ ಜರುಗುತ್ತದೆ. ಬಡ್ಡಿಯ ದುಡ್ಡಿನ ಒಂದು ಸಿವುರಿಗೇ ಈ ಕಷ್ಟಕೊಟ್ಟ ಸಾಹುಕಾರ ಎತ್ತಪ್ಪ ಬೇರೆ ಥರದ ದಬ್ಬಾಳಿಕೆ ದೌರ್ಜನ್ಯಗಳನ್ನು ನಡೆಸುವವನೇ ಆಗಿರಬೇಕು. ಮಹಾದೇವರಿಗೆ ಇದು ಮುಖ್ಯವಾಗುವುದೇ ಇಲ್ಲ. ಒಟ್ಟು ಘರ್ಷಣೆಯ ರೌದ್ರತೆಯನ್ನು ಚಿತ್ರಿಸಲು ಸಾಧ್ಯವಿಲ್ಲವೆಂದಲ್ಲ; ಚಿತ್ರಿಸಲು ಮನಸ್ಸಿಲ್ಲ. ಆದ್ದರಿಂದಲೇ ತುಂಬ ಸಂಯಮದ ಬರವಣಿಗೆ ಇದು ಎಂದು ವಿಮರ್ಶಕರು ಹೊಗಳಿದ್ದಾರೆ.

ಇನ್ನು ಈ ಕೃತಿಯಲ್ಲಿ ಬಳಸಿರುವ ಭಾಷೆ ಅತ್ತ ಪೂರ್ತಿ ಗ್ರಾಂಥಿಕವೂ ಅಲ್ಲ, ಇತ್ತ ಪೂರ್ತಿ ಗ್ರಾಮ್ಯವೂ ಅಲ್ಲ. 'ತನ್ನ ಜನಾಂಗದ ನುಡಿಗಟ್ಟನ್ನು ಅದರ ಎಲ್ಲ ಬನಿಯೊಂದಿಗೆ ಬಳಸಿಕೊಳ್ಳುವ ಕ್ರಮದಲ್ಲಿಯೇ—ಅವರು ಇದುವರೆಗೆ ನಾವು ಕಂಡಿರದ ಹೊಸ ಜಗತ್ತೊಂದನ್ನು ನಮಗೆ ಪರಿಚಯ ಮಾಡಿಕೊಡುತ್ತಾರೆ'* ಎಂದು ಭಾಷೆಯ ಬಗ್ಗೆ ಮೆಚ್ಚುಗೆಯೂ ವ್ಯಕ್ತವಾಗಿದೆ. ಎಂದೂ ದಲಿತರ ಬದುಕಿನ ಸಾಮೀಪ್ಯವನ್ನೂ ಪಡೆಯದ, ಹಳ್ಳಿಯನ್ನೇ ಕಂಡಿರದ, ಆರಾಮ ಕುರ್ಚಿಯ ತತ್ವ ಹೇಳುವವರಿಗೆ ಮಾತ್ರ ಹೊಸ ಜಗತ್ತು ಅನ್ನಿಸುತ್ತದೆಯೇ ಹೊರತು ಹಳ್ಳಿಗಾಡಿನ ಪರಿಚಯ ವಿರುವವರಿಗೆ ಇದು ಹೊಸದೆನ್ನಿಸುವುದಿಲ್ಲ. ಚದುರಂಗರ 'ವೈಶಾಖ'ವನ್ನು ಓದಿದ ವರಿಗೆ ಮಹಾದೇವ ಅಷ್ಟು ವಿವರವತ್ತಾಗಿ ಭಾಷೆಯನ್ನು ಬಳಸಲು ಸಾಧ್ಯವಿಲ್ಲ ಅನ್ನಿಸುತ್ತದೆ. ಮಹಾದೇವ ಒಡಲಾಳದಲ್ಲಿ ಒಂದು ಸಲ ಗ್ರಾಂಥಿಕ ಭಾಷೆಯನ್ನು ಬಳಸಿದರೆ ಮರುಕ್ಷಣವೇ ಗ್ರಾಮ್ಯ ಬಳಸುತ್ತಾರೆ. ಇದಕ್ಕೆ ಅನೇಕ ಉದಾಹರಣೆಗಳನ್ನು ಕಾದಂಬರಿ ಯಿಂದಲೇ ಒದಗಿಸಬಹುದು. ನಿರೂಪಣೆಗೆ ಶಿಷ್ಟಭಾಷೆ, ಸಂಭಾಷಣೆಗೆ ಗ್ರಾಮ್ಯಭಾಷೆ ಬಳಸಿದ್ದರೆ ಒಂದು ಕ್ರಮವಾದರೂ ಇರುತ್ತಿತ್ತು. ಇಲ್ಲಿ ಸ್ವಲ್ಪ ಮಟ್ಟಿಗೆ ಕಲಸು ಮೇಲೋಗರವಾಗಿದೆ.

ಮಹಾದೇವ ದಲಿತ ಲೋಕದ ಒಂದು ಚಿತ್ರಣಕೊಟ್ಟ ಎಂಬುದಷ್ಟರಿಂದಲೇ ದೊಡ್ಡವನಾಗಬೇಕಿಲ್ಲ. ಯಾವ ಚಿತ್ರಣ ಮಾಡಿದರೂ ತುಂಬ ಸಮರ್ಪಕವಾಗಿಯೇ ಮಾಡುತ್ತಾನೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಆ ಕೃತಿಯಲ್ಲಿ ಇಲ್ಲದಿರುವ

---

* ಅನುಸಂಧಾನ, ಪುಟ ೮೩

ಅಂಶಗಳನ್ನೆಲ್ಲ ಹೇಳಿ ಅತಿಯಾಗಿ ಹೊಗಳುವುದು ಬೇಕಿಲ್ಲ. ಅಥವಾ ಮಹಾದೇವನನ್ನು ಹೊಗಳುತ್ತ ಬೇರೆ ಲೇಖಕರ ಕೃತಿಗಳನ್ನು ತೆಗಳುವುದು ಸರಿಯಲ್ಲ. ಸಾಹಿತ್ಯದ ಅನೇಕ ಮಾದರಿಗಳಲ್ಲಿ ಮಹಾದೇವ ಅವರದು ಒಂದು ಮಾದರಿಯಾದರೆ ಸಿದ್ಧಲಿಂಗಯ್ಯ ನವರದು ಇನ್ನೊಂದು ಮಾದರಿ. ಬರಗೂರರದು ಮತ್ತೊಂದು ಮಾದರಿಯಾದರೆ ಬೆಸಗರಹಳ್ಳಿಯವರದು ಮಗದೊಂದು ಮಾದರಿ. ಹೀಗಿರುವಾಗ ಮಹಾದೇವರ ಒಡಲಾಳ ತನ್ನೆಲ್ಲ ಮಿತಿಗಳಲ್ಲಿಯೂ ಒಂದು ಒಳ್ಳೆಯ ವೀಕ್ಷಕ ವಿವರಣೆಯಂತಿದೆಯೇ ಹೊರತು ಶ್ರೇಷ್ಠ ಕೃತಿಯೇನಲ್ಲ. ಅದು ಒಂದು ಸಲ ಓದಿದ ಮೇಲೆ ಪದೇ ಪದೇ ಓದಬೇಕೆಂದು ಕಾಡಿಸುವುದೂ ಇಲ್ಲ.

ಮಾಸ್ತಿಯವರ 'ಚಿಕವೀರ ರಾಜೇಂದ್ರ'

ಮನಜ

ಮಾಸ್ತಿಯವರ ಐತಿಹಾಸಿಕ ಕಾದಂಬರಿ 'ಚಿಕವೀರ ರಾಜೇಂದ್ರ'ದ ಬಗ್ಗೆ ಸದ್ಯ ಯಾವುದೇ ಪೀಠಿಕೆಯೂ ಇಲ್ಲದೆ ಮಾತಾಡಬಹುದು ; ಏಕೆಂದರೆ ಸಾಹಿತ್ಯ ಹಾಗೂ ಪತ್ರಿಕಾರಂಗದ ವಿದ್ವದಲೆಯಲ್ಲಿ ಈಗಾಗಲೇ ಪೀಠಿಕೆ ಸಿದ್ಧವಾಗಿದೆ. ಅಂತೆಯೇ ಈ ಕಾದಂಬರಿಯ ಕಥಾ ಸಂವಿಧಾನ, ಪಾತ್ರ ಕಲ್ಪನೆ, ಬೆಳವಣಿಗೆ ಹಾಗೂ ಸಂಪೂರ್ಣ ಕಾದಂಬರಿ ಕೊನೆಯಲ್ಲಿ ತಾಳಿ ನಿಲ್ಲುವ ತಾತ್ವಿಕ ಧೋರಣೆ ಮತ್ತು ಅದರ ಕಲಾತ್ಮಕ ಯಶಸ್ಸನ್ನು ಕುರಿತ ಸ್ಥೂಲ ವಿಶ್ಲೇಷಣೆ ಪ್ರಸ್ತುತವಾದರೂ ಈ ಐತಿಹಾಸಿಕ ಕಾದಂಬರಿಯ ಸಂಪೂರ್ಣ ವಸ್ತುವನ್ನು ವಾಸ್ತವ ಇತಿಹಾಸದ ಹಿನ್ನೆಲೆಯಲ್ಲಿ ನೋಡುವುದು ಕೂಡ ಈ ಲೇಖನದ ಉದ್ದೇಶವಾಗಿದೆ. ಅಲ್ಲದೆ, ಈ ಐತಿಹಾಸಿಕ ಕಾದಂಬರಿಯ ಸೋಲು–ಗೆಲುವುಗಳನ್ನು ವಿವೇಚಿಸುವ ಈ ವಿಶ್ಲೇಷಣೆಯಲ್ಲಿ ಅದರ ಮಿತಿಗಳನ್ನಷ್ಟೇ ಗುರುತಿಸುತ್ತಾ ಹೋಗಿದ್ದರೂ ಕೃತಿ ಸಂದರ್ಭದಲ್ಲಿ ಮೆಚ್ಚಲೇಬೇಕಾದ ಅಂಶಗಳು ತಂತಾನೇ ಮೆಚ್ಚಿಸಿಕೊಂಡಿರುತ್ತವೆ.

ಕಾದಂಬರಿಯನ್ನು ಸಂಪೂರ್ಣವಾಗಿಯೂ ಓದಿ ಮುಗಿಸಿ, ಕಥಾ ಸಂವಿಧಾನದೊಳಗೆ ಗಮನ ಸೆಳೆಯುವ

ಮುಖ್ಯ ಪಾತ್ರಗಳ ಬೆಳವಣಿಗೆ ಹಾಗೂ ಆ ಪಾತ್ರಗಳ ಬೆಳವಣಿಗೆ ಬಿಟ್ಟುಕೊಡುವ ಧ್ವನಿ ಸಾಧ್ಯತೆಯ ಬಗ್ಗೆ ಯೋಚಿಸಿದಾಗ, ಅಭೇದ್ಯ ಮರ್ಮವೆನಿಸುವ ಧ್ವನಿಯೊಂದು ಕಾದಂಬರಿಯಲ್ಲಿ ಅಡಗಿದ್ದು, ಬಹುಶಃ ಓದುಗನ ಗ್ರಹಣಕ್ಕೆ ಅಷ್ಟು ಸುಲಭವಾಗಿಯೂ ಆ ಮಾರ್ಮಿಕ ಧ್ವನಿ ನಿಲುಕದೆಂದೇ ತೋರುತ್ತದೆ. ಅದೆಂದರೆ, ಇಡೀ ಕೊಡಗು ಸಾಮ್ರಾಜ್ಯದ ಪತನದ ಮೂಲ: ಕಾದಂಬರಿಯ ಆದಿಯಿಂದ ಅಂತ್ಯದವರೆಗೂ ಚಿತ್ರಿತ ವಾಗಿರುವಂತೆ ಕೊಡಗು ಸಾಮ್ರಾಜ್ಯದ ಪತನಕ್ಕೆ ದೊರೆ ಚಿಕವೀರರಾಜನ ದಾಷ್ಟ್ಯ ಮತ್ತು ವಿಷಯ ಲಂಪಟತನಗಳೇ ಮೂಲ ಕಾರಣಗಳು....ಆದಾಗಿ, ಆ ದಾಷ್ಟ್ಯ ಹಾಗೂ ವಿಷಯಲಂಪಟತನದ ಓಂಬದಿಯಲ್ಲೇ ಆ ಮಾರ್ಮಿಕ ಧ್ವನಿ ಪರಂಪರೆ ಆರಂಭಗೊಳ್ಳುವುದು. ಅಂದರೆ, ಚಿಕವೀರರಾಜನ ವಿಷಯ ಲಾಂಪಟ್ಯಕ್ಕೆ ಮೂಲ ಕಾರಣ, ಮುಖ್ಯವಾಗಿ, ಆಪ್ತಮಂತ್ರಿ ಕುಂಟಬಸವನ ಸಹವಾಸ. ಕುಂಟಬಸವನ ಹುಟ್ಟಿಗೆ ಮೂಲ ಹಿಂದಿನ ದೊರೆ ಲಿಂಗರಾಜನ ಅನೈತಿಕ ಸಂಬಂಧ. ಲಿಂಗರಾಜನ ಆ ಅನೈತಿಕ ಸಂಬಂಧದ ಮೂಲ. ದೀಕ್ಷಿತನ ಸೋದರನ ಮಗಳಾದ ಪಾಪ ಅಥವಾ ಪ್ರಸ್ತುತ ಚಿಕವೀರರಾಜನ ತಲೆಮಾರಿನ ಭಗವತಿ ಅಥವಾ ಬ್ರಾಹ್ಮಣ ಹೆಣ್ಣು, ಅರ್ಥಾತ್. ಶೂದ್ರ ಅಥವಾ ಅಬ್ರಾಹ್ಮಣನೊಬ್ಬ ಬ್ರಾಹ್ಮಣ ಹೆಣ್ಣನ್ನು (ಶಾಸ್ತ್ರ ವಿರುದ್ಧವಾದ ಪ್ರತಿಲೋಮ ಕ್ರಮದಲ್ಲಿ) ಕಾಮದ ಶೋಷಣೆಗೆ ಗುರಿಮಾಡಿದುದ ರಿಂದಾಗಿಯೇ ಇಡೀ ಕೊಡಗು ಸಾಮ್ರಾಜ್ಯ ಪತನವಾಯಿತೆಂಬ ಎಚ್ಚರಿಕೆಯ ಧ್ವನಿ ಕಾದಂಬರಿಯ ಉದ್ದಕ್ಕೂ ತುಂಬಾ ಮಾರ್ಮಿಕವಾಗಿ ನಡೆದಿರುವುದನ್ನು ಗಮನಿಸ ಬಹುದು. ಅದೂ ಅಲ್ಲದೆ, ಕೊಡಗು ಸಾಮ್ರಾಜ್ಯದ ಪತನದ ಕೊನೆ ಗಳಿಗೆಯವರೆಗೂ ಭಗವತಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕಥಾ ಸಂವಿಧಾನದೊಳಗೇ ನಿಲ್ಲುವ ವಾಸ್ತವ್ಯ ಕೂಡ ಮೇಲಿನ ಅಭಿಪ್ರಾಯವನ್ನು ಪೋಷಿಸುತ್ತದೆ. ಅಷ್ಟೇ ಅಲ್ಲದೆ, ಆ ಅಭೇದ್ಯ ಮಾರ್ಮಿಕ ಧ್ವನಿಯನ್ನು ಕಾದಂಬರಿಯೊಳಗೆ ತುಂಬಾ ಎಚ್ಚರದಿಂದಲೂ ಅರ್ಥಪೂರ್ಣವಾಗಿಯೂ ಬೆಳೆಸಲಾಗಿದೆಯೆಂಬ ಅರ್ಥ ಸಾಧ್ಯತೆಯ ಸ್ಥಿರೀಕರಣಕ್ಕೆ ಭಗವತಿಯೊಂದು ಜೀವಂತ ಸಾಕ್ಷಿಯೆನಿಸುತ್ತಾಳೆ. ಆದಾಗ್ಯೂ, ಆ ಎಚ್ಚರಿಕೆಯ ಧ್ವನಿ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ಮೂಲ ವ್ಯಕ್ತಿಯೆನಿಸುವ ಭಗವತಿ, ಜಾತಿಯಲ್ಲಿ ಬ್ರಾಹ್ಮಣಳೆಂಬುದು ಕೇವಲ ಆಕಸ್ಮಿಕವೆನಿಸಿಬಿಡಬಹುದಿತ್ತು. ಆದರೆ. ತನ್ನ ಮಗನಿಗೆ ರಾಜ್ಯದ ಪಟ್ಟ ದೊರೆಯಬೇಕೆಂದು ಅವಳು ನಡೆಸುವ ನಿಗೂಢ ಸಂಘರ್ಷ ಆಕಸ್ಮಿಕ ವೆನಿಸುವುದಿಲ್ಲ. ಬದಲಾಗಿ ಅದು ಉದ್ದೇಶಪೂರಿತವೂ ಪ್ರಜ್ಞಾಪೂರ್ವಕವೂ ಆದು ದೆಂಬುದಕ್ಕೆ ಕಥೆಯೊಳಗೇ ಆಧಾರವಿರುವುದನ್ನು ಮನಗಾಣಬಹುದು. ಅಷ್ಟೆ ಅಲ್ಲದೆ ರಾಜನ ಕಾಮದ ಘೋಷಣೆಗೆ ಭಗವತಿಯಂತೆಯೇ ಇನ್ನೂ ಎಷ್ಟೋ ಹೆಣ್ಣುಗಳು ತುತ್ತಾಗಿ ಹೋದರೆಂಬುದಕ್ಕೆ ಕಾದಂಬರಿಯೊಳಗೆ ವಿಪುಲವಾದ ಆಧಾರಗಳಿವೆ. ಆದರೆ, ಆ ಹೆಣ್ಣುಗಳಾರೂ ಭಗವತಿಯಂತೆ ರಾಜ್ಯದ ಪಟ್ಟಕ್ಕಾಗಿ ಅಥವಾ ಅದರ ನಾಶಕ್ಕಾಗಿ ಸೇಡಿನ ಸ್ಥಿರಚಿತ್ತಳಾಗಿ ನಿಂತು, ನಿಗೂಢ ಸಂಘರ್ಷ ನಡೆಸಿಲ್ಲವೆಂಬುದು ಕೂಡಾ

ಕಾದಂಬರಿಯ ಸಂವಿಧಾನದೊಳಗೇ ನಿಂತಿರುವ ವಾಸ್ತವ ಸತ್ಯ. ಆದ್ದರಿಂದ. ಕಾದಂಬರಿ ತಾಳುವ ಒಟ್ಟು ತಾತ್ವಿಕ ಧೋರಣೆಯಲ್ಲಿನ ಇಡೀ ಸಾಮ್ರಾಜ್ಯದ ಪತನಕ್ಕೆ ಬ್ರಾಹ್ಮಣ ಹೆಣ್ಣಿನ ಶೋಷಣೆಯೇ ಮೂಲ ಕಾರಣವೆಂಬ ಮಾರ್ಮಿಕ ಧ್ವನಿ ಸಾಧ್ಯತೆಯನ್ನು ಈ ಕೃತಿ ಸಂದರ್ಭದಲ್ಲಿ ಅಲ್ಲಗಳೆಯಲು ಸಾಧ್ಯವಿರುವಂತಿಲ್ಲ.[1] ಹಾಗೆಯೇ ಇನ್ನೊಂದು ಅಂಶವನ್ನಿಲ್ಲಿ ನೆನಪಿಸುವುದಾದರೆ, ಬ್ರಾಹ್ಮಣ ಹೆಣ್ಣನ್ನು ಲಿಂಗರಾಜ ದೊರೆ ಕಾಮದ ಶೋಷಣೆಗೆ ಗುರಿಮಾಡಿ ಅವಳ ಮಗುವಿನ ಕಾಲನ್ನೆ ತಿರುಚಿದನೆಂಬುದರ ಅರ್ಥ, ಆ ಪ್ರತಿಲೋಮ ಪಾಪಕೃತ್ಯದ ಫಲವೆಂಬಂತೆ ಮಗನಾದ ಚಿಕವೀರರಾಜೇಂದ್ರ ದೊರೆಯ ಕಾಲಕ್ಕೆ ಇಡೀ ಕೊಡಗು ಸಾಮ್ರಾಜ್ಯದ ಕಾಲೇಕುಂಟಾಯಿತೆಂಬ ಅಥವಾ ರಾಜ ಸದಾ ಕಾಮೋದ್ರೇಕದಿಂದ ಮತಿವಿಕಲನಾದನೆಂಬ ತುಂಬಾ ಅರ್ಥಪೂರ್ಣವಾದ ಪುನರರರ್ಥ ಧ್ವನಿ ಸಾಧ್ಯತೆ ಕೂಡ ಕುಂಟಬಸವನ ಪಾತ್ರದಿಂದ ಸಾಧ್ಯವೆನಿಸುವುದಿಲ್ಲವೇ ?

ಆಂಗ್ಲ ಅಧಿಕಾರಿಗಳು ರಾಜ್ಯಕ್ಕೆ ಭೇಟಿಕೊಟ್ಟು ರಾಜನ ಅತಿಥಿಗಳಾದಾಗ ಅವರಿಗೇರ್ಪಡಿಸುವ ಔತಣ ಕೂಟವನ್ನು ಕೇವಲ ಸ್ವೇಚ್ಛಾಚಾರವೆಂದೂ ಅದರಿಂದ ರಾಜ್ಯದ ಬೊಕ್ಕಸ ಬರಿದಾಯಿತೆಂದೂ ವರ್ಣಿಸುವ (ಪು. ೬೪–೫) ಲೇಖಕರ ಚಿತ್ರ ಒಬ್ಬ ಸಾಮಾನ್ಯ ಸಂಸಾರಿಯು ಸಂಪಾದನೆಯಿಲ್ಲದೆ ಮಾಡಬಹುದಾದ ದುಂದುವೆಚ್ಚದ

---

1 ಪ್ರೊ. ಕೀರ್ತಿನಾಥ ಕುರ್ತಕೋಟಿಯವರು ಭಗವತಿಯ ಪಾತ್ರದಲ್ಲಿ ಓದುಗನ ಹೊರ ನೋಟಕ್ಕೆ ಗೋಚರವಾಗುವ (ಶ್ರೀನಿವಾಸ, ಪು ; ೧೫೦, ಸಂ : ಮಾವಿನಕೆರೆ ರಂಗನಾಥನ್) ತನ್ನ ಮಗನಿಗೆ ರಾಜ್ಯದ ಪಟ್ಟ ಕೊಡಿಸಬೇಕೆಂದು, ರಾಜಮನೆತನದ ಮೇಲೆ 'ಪ್ರತೀಕಾರದ ಹಟ' ಸಾಧಿಸುತ್ತಾಳೆಂದು ಮಾತ್ರ ಅಭಿಪ್ರಾಯಿಸುತ್ತಾರೆ. ಅಂದರೆ, ಆ ಪಾತ್ರದ ಬಗ್ಗೆ ಇದು ಕೇವಲ ಸಾಮಾನ್ಯ ಹೇಳಿಕೆಯೆನಿಸುತ್ತದೆಯೇ ಹೊರತು ಅವಳ ನಿಗೂಢ ಸಂಘರ್ಷದ ಅಂತಃಕರಣದಲ್ಲಿ ಅಡಗಿರುವ ಮಾರ್ಮಿಕ ಧ್ವನಿ ಪರಂಪರೆಯತ್ತ ಗಮನ ಸೆಳೆದಂತಾಗುವುದಿಲ್ಲ. ಪ್ರೊ. ಎಲ್. ಎಸ್. ಶೇಷಗಿರಿರಾವ್ ಕೂಡ ಭಗವತಿ ಒಂದು 'ಕಾಲ್ಪನಿಕ ಪಾತ್ರ'ವೆಂದು (ಅದೇ, ಪು. ೧೬೫) ಸುಮ್ಮನಾಗಿ ಬಿಡುವುದರಿಂದ ಮಾಸ್ತಿಯವರ ಪ್ರತಿಭೆಯಿಂದ ಜನಿತವಾದ ಈ ಮಾರ್ಮಿಕ ಧ್ವನಿ ಪರಂಪರೆ ಸೃಷ್ಟಿಸುವ ಕಲಾವಂತಿಕೆಯನ್ನು ಕಡೆಗಣಿಸಿದಂತಾಗಿ ಬಿಡುತ್ತದೆ. ತತ್ಪರಿಣಾಮವಾಗಿ ಕೃತಿಯ ಕಲಾದರ್ಶನದ ಸಂದರ್ಭದಲ್ಲಿ ಆ ಪಾತ್ರದ ವಿಶ್ಲೇಷಣೆಯಿಂದ ಹೊರಡುವ ತಾತ್ವಿಕ ಧೋರಣೆಯ ನಿಜರೂಪವನ್ನು ಮರೆಗೊಳಿಸಿದಂತೆನಿಸಿ, ಕೃತಿಯ ಯಶಸ್ಸು ಅಥವಾ ಸೋಲಿಗೆ ಸಲ್ಲಬಹುದಾಗಿದ್ದ ಕೊಡುಗೆ ಇಲ್ಲವಾಗುವುದು ಸೂಕ್ತವೆನಿಸುವಂತಿಲ್ಲ. ಹಾಗೆಯೇ 'ಚಿಕವೀರರಾಜೇಂದ್ರ' ಈ ಯುಗದ ಶ್ರೇಷ್ಠ ಐತಿಹಾಸಿಕ ಕಾದಂಬರಿಗಳಲ್ಲೊಂದು ಎನ್ನುತ್ತಾರೆ ಡಾ॥ ಯು. ಆರ್. ಅನಂತಮೂರ್ತಿ. ಇದೇ ಸಂದರ್ಭದಲ್ಲಿ 'ಕಾದಂಬರಿ ಓದದೇನೇ ಕೀರಲುವುದನ್ನು ಬಿಡಿ' (ಪ್ರಜಾವಾಣಿ, ಜುಲೈ ೭, ೧೯೮೪) ಎಂಬ ಡಾ॥ ಮಾಸ್ತಿಯವರ ಮಾತನ್ನು ನೆನೆಯುವುದು ಇಲ್ಲಿ ತುಂಬಾ ಅರ್ಥಪೂರ್ಣವೆಂದು ತೋರುತ್ತದೆ.

ಒಂದು ಸಣ್ಣ ಅನುಭವವನ್ನು ಕೊಡುತ್ತದೆಯೇ ಹೊರತು, ಈ ಸಂದರ್ಭವನ್ನು ಸರಿ ಸಾಟಿಯಾಗಿ ಪ್ರತಿಬಿಂಬಿಸುವ. ರಾಜ್ಯದ ಅರ್ಥ ವ್ಯವಸ್ಥೆಯನ್ನಾಗಲಿ, ಸಂಪನ್ಮೂಲಗಳ ದಾರಿದ್ರ್ಯದ ಸ್ಥಿತಿಯನ್ನಾಗಲಿ ಅಥವಾ ಇಡೀ ರಾಜ್ಯದ ಪ್ರಜಾಸಮುದಾಯದ ಜೀವನ ಮಟ್ಟದ ಆರ್ಥಿಕ ರೇಖೆಗಳು ಉಂಟುಮಾಡಬಹುದಾದ ಒಂದು ಐತಿಹಾಸಿಕ ಅನುಭವವನ್ನಾಗಲಿ ಕೊಡುವುದಿಲ್ಲ. ಅಲ್ಲದೆ, ಚಿಕ್ಕಣ್ಣ ಶೆಟ್ಟಿಗೆ ಸಲ್ಲಬೇಕಾದ ಬಾಕಿ ಲಕ್ಷಕ್ಕೆ ಏರಿದೆಯೆಂದಾಗ ರಾಣಿ ಆಡುವ ಮಾತು ಇಲ್ಲಿ ಗಮನಾರ್ಹ. 'ಲಕ್ಷಕ್ಕೆ ಮೇಲೆ ಸಾಲ ನಿಲ್ಲುವಂತೆ ನೀವು ಸಾಮಾನು ಕೊಟ್ಟಿದ್ದೀರಲ್ಲ ಶೆಟ್ಟರೆ, ಎಂಟು, ಹತ್ತು, ಹದಿನೈದು ಸಾವಿರ ಆದಾಗ ಯಾಕೆ ಅರಸರಿಗೆ ಈ ಸಂಗತಿ ತಿಳಿಸಲಿಲ್ಲ? ಸಾಲಾನ ಇಷ್ಟು ಭೂತನಾಗಿ ಬೆಳೆಸಿಬಿಟ್ಟು ಅರಮನೇನ ದಾರಿ ತಪ್ಪಿಸಿದ್ದೀರಲ್ಲ' (ಪು. ೮೮) ಎಂದು ಪ್ರಶ್ನಿಸಿದಾಗ, ಶೆಟ್ಟಿ ಹಾರಿಕೆಯ ಉತ್ತರ ಕೊಡುತ್ತಾನೆ. ಇಲ್ಲಿ ಮೊದಲನೆಯದಾಗಿ ರಾಣಿಯ ಸಂದರ್ಭಾವಧಾರಣೆ ತಂತಾನೇ ಗಮನಾರ್ಹವೆನಿಸುತ್ತದೆ. ಎರಡನೆಯದಾಗಿ, ಚಿಕ್ಕಣ್ಣಶೆಟ್ಟಿಯು ಈ ಹಾರಿಕೆ ಉತ್ತರದಿಂದ ಹೊಳೆಯುವುದೇನೆಂದರೆ, ರಾಜ ಅತಿಥಿಗಳ ಔತಣಕೂಟದ ವೆಚ್ಚ ದುಂದುವೆಚ್ಚವೆನಿಸಿ, ಅದು ರಾಜತಾಂತ್ರಿಕ ವಿಷಯಕ್ಕಿಂತ ಮಹತ್ವದ್ದೆನಿಸುವಂತಾಗಿ, ಕಥೆಯ ಮುನ್ನಡೆಗೆ ಲೇಖಕರು ದಾರಿ ಸುಗಮ ಮಾಡಿಕೊಳ್ಳುತ್ತಿರುವಂತೆನಿಸುತ್ತದೆ. ಇದರಿಂದಾಗಿ ರಾಜನ ಬಗ್ಗೆ ಇಡೀ ಕಾದಂಬರಿ ತಾಳುವ ಧೋರಣೆಯನ್ನು ಪರಿಶೀಲಿಸಿದಾಗ, ಲೇಖಕರು ರಾಜನ ಬದುಕಿನ ಕೇವಲ ಕರಾಳ ಮುಖವನ್ನಷ್ಟೇ ಚಿತ್ರಿಸುವ ಪೂರ್ವಸಿದ್ಧ ಮನಸ್ಸಿನಿಂದ ಹೊರಟಿರುವರೆನಿಸುವಂತಾಗಿದೆ. ತದನಂತರ, ಚಿಕ್ಕಣ್ಣಶೆಟ್ಟಿಯ ಸಾಲ ತೀರಿಸಿ, ರಾಜ್ಯದ ಆಡಳಿತವನ್ನು ಸರಿದಾರಿಗೆ ತರಬೇಕೆಂಬ ಬಗೆಗೆ ರಾಣಿ, ಮಂತ್ರಿಗಳಾದ ಬೋಪಣ್ಣ ಮತ್ತು ಲಕ್ಷ್ಮೀನಾರಾಯಣಯ್ಯರ ನಡುವೆ ನಡೆಯುತ್ತಿದ್ದ ಮಾತುಕತೆಯನ್ನು ಕದ್ದು ಕೇಳಿದ ಬಸವ ಮಂತ್ರಿ ಮತ್ತು ಇದರಿಂದ ಕ್ರೋಧಗೊಂಡ ದೊರೆ, ಇದು ರಾಣಿಯ ಪಿತೂರಿಯೆಂದು ಬಗೆದು, ಅವರೆಲ್ಲರೆದುರಿಗೆ ರಾಣಿಯನ್ನು ಹೀನಾಯವಾಗಿ ಬೈಯುತ್ತಾನೆ. ಸ್ವಾಭಾವಿಕವಾಗೇ ಬೋಪಣ್ಣನ ಕೋಪ ಉಕ್ಕೇರಿಬರುತ್ತದೆ: ಆಗ ಲಕ್ಷ್ಮೀನಾರಾಯಣಯ್ಯ ಆಡುವ ಮಾತು 'ಸುಮ್ಮನಿರಿ ಬಾಯಿ ತೆರೆಯಬೇಡಿ' (ಪು. ೯೪) ಎನ್ನುತ್ತಾನೆ. ಅಂದರೆ, ಈ ಮಾತಿನ ಸಾಂದರ್ಭಿಕ ಧ್ವನಿ ಪರಂಪರೆಯನ್ನು ಪರಿಶೀಲಿಸಬೇಕು. (೧) ರಾಜನ ವಿರುದ್ಧದ ಬಂಡುಕೋರರ ನಿಜವಾದ ಬೌದ್ಧಿಕ ನೇತಾರ ಲಕ್ಷ್ಮೀನಾರಾಯಣಯ್ಯನೇ ಆಗಿದ್ದರೂ ಅವನ ಆ ಮಾತಿನಿಂದ ಅದು ಅಷ್ಟೊಂದು ತೀವ್ರವಾಗಿ ಆ ಸಂದರ್ಭದಲ್ಲಿ ಅರಸನಿಗೆ ತಟ್ಟಲಾಗಲಿಲ್ಲ. (೨) ರಾಜ ಈ ಸಂದರ್ಭದಲ್ಲಿ ಕೀಳಾಗಿ ಅಂದದ್ದು ಬೋಪಣ್ಣನನ್ನೇ ಹೊರತು ಲಕ್ಷ್ಮೀನಾರಾಯಣಯ್ಯನನ್ನಲ್ಲ. ಅಲ್ಲದೆ, ಬೋಪಣ್ಣ ಮತ್ತು ರಾಣಿಯರ ಕೌಟುಂಬಿಕ ಸಂಬಂಧ ಬೇರೆ ಈ ಪ್ರಸಂಗಕ್ಕೆ ಪಿತೂರಿಯ ಅರ್ಥದ ಜೀವ ತುಂಬಿತು. (೩) ತತ್ಪರಿಣಾಮವಾಗಿ, ತನ್ನನ್ನೂ ರಾಣಿಯನ್ನೂ ಇಷ್ಟೊಂದು ಕೀಳಾಗಿಡಿದ

ದೊರೆಯುತ್ತ ದುಡುಕಿ ಪ್ರತಿಭಟಿಸಲುದ್ಯುಕ್ತನಾಗಿದ್ದವನೂ ಬೋಪಣ್ಣನೇ ಹೊರತು ಲಕ್ಷ್ಮೀನಾರಾಯಣಯ್ಯನಲ್ಲ. (4) ಅರ್ಥಾತ್, ದುಡುಕಿದವನು ಬೋಪಣ್ಣ. ಅಂದರೆ, ಶೂದ್ರ. ಅದೇ ಸಂಯಮ ತಾಳಿದವನು ಲಕ್ಷ್ಮೀನಾರಾಯಣಯ್ಯ ಅಂದರೆ, ಬ್ರಾಹ್ಮಣ. ಹಾಗೆಯೇ ಇದೇ ಸಂದರ್ಭದ ಕೊನೆಯಲ್ಲಿ ಬಸವ ಮಂತ್ರಿಯನ್ನು ಕರೆದ ಲಕ್ಷ್ಮೀನಾರಾಯಣಯ್ಯ "ಬಸವಯ್ಯ, ಅಮ್ಮಾಜಿ ನಮ್ಮನ್ನು ಕೇಳಿ ಬಂದರೆ, ಈಗ ಅರಸರನ್ನು ನೋಡಿಕೊಳ್ಳುವುದಾಗಲಿ ನಾಳೆ ಮತ್ತೆ ಬರುತ್ತಾರಂತೆ ಎಂತ ಅರಿಕೆ ಮಾಡು" ಎಂದು ಆಜ್ಞೆ ಮಾಡುತ್ತಾನೆ. ಅದಕ್ಕೆ ಬಸವ ಮಂತ್ರಿ "ಆಯಿತು ಅಯ್ಯನವರೆ" ಎಂದುತ್ತರಿಸುತ್ತಾನೆ. ಅಂದರೆ, ಬಸವ ತನಗೆ ಸಮನಾದ (ತಾನೊಪ್ಪಲಿ ಬಿಡಲಿ) ಮಂತ್ರಿಯೆಂಬುದು ಸತ್ಯವಾದರೂ ಲಕ್ಷ್ಮೀನಾರಾಯಣಯ್ಯನ ಆ ಆಜ್ಞೆಯನ್ನು ಬಸವ ಸೇವಕನಂತೆ ಪಾಲಿಸಿದನೆಂದೇ ಓದುಗ ಭಾವಿಸುವಂತೆ ಲೇಖಕರು ಮಾಡುತ್ತಿದ್ದಾರೆಂಬುದನ್ನು ಇಲ್ಲಿ ನೆನಪಿಡಬೇಕು. ಇಲ್ಲಿ ಕೂಡ, ಆಜ್ಞೆ ಮಾಡಿದವನು ಮಂತ್ರಿ ಲಕ್ಷ್ಮೀನಾರಾಯಣಯ್ಯ; ಅಂದರೆ, ಬ್ರಾಹ್ಮಣ. ಅದನ್ನು ಸೇವಕನಂತೆ ಪಾಲಿಸಿದವನು ಬಸವ; ಅಂದರೆ ಶೂದ್ರ ಅಥವಾ ಲಿಂಗರಾಜನ ಅನೈತಿಕ ಸಂಬಂಧದಿಂದ ಹುಟ್ಟಿರುವ ಅನೈತಿಕ ಲಿಂಗಾಯತ. ಹೀಗೆ ಇದೇ ಸಂದರ್ಭದಲ್ಲಿ ನೆನಪಿಡಬೇಕಾದ ಇನ್ನೊಂದು ಮುಖ್ಯಾಂಶವೆಂದರೆ, ಈ ಮೊದಲೇ ಹೇಳಿರುವಂತೆ ರಾಜನ ಪಾತ್ರವನ್ನು ಅವನ ಬದುಕಿನ ಕರಾಳ ಮುಖ ಹಾಗೂ ನೈತಿಕ ಪತನದ ಹಾದಿಯಲ್ಲೇ ಸಾಗಿಸುವ, ಕಥಾನಕ ರಂಜನೆಯ ಓಘದಂಥ ದುರ್ಬಲ ತಂತ್ರದಲ್ಲೂ ಪಾತ್ರಗಳ ಹಿನ್ನೆಲೆಯಲ್ಲಿ ತುಂಬಾ ಸ್ಪಷ್ಟವಾಗಿರುವ ಈ ಜಾತೀಯ ವೈಭಿನ್ನತೆ ಓದುಗನ ಗ್ರಹಣದಿಂದ ಸುಲಭವಾಗಿ ಜಾರಿಕೊಳ್ಳುವಂತೆ ಮಾಡಿರುವ ಲೇಖಕರ ಜಾಣ್ಮೆ ಇಲ್ಲಿ ಮೆಚ್ಚಬೇಕಾದ್ದು.

ಇಡೀ ಕಾದಂಬರಿಯಿಂದ ಸೃಷ್ಟಿಯಾಗಬಹುದಾಗಿದ್ದ ಅತ್ಯಂತ ಮುಖ್ಯವಾದ ಧ್ವನಿ ಶ್ರೀಮಂತಿಕೆಯೆಂದರೆ ರಾಜ ಮತ್ತು ರಾಣಿಯರ ನಡುವಿನ ಅಗಾಧವಾದ ಅಂತರ ಅಥವಾ ಸ್ವಭಾವದಲ್ಲಿನ ನೇರ ವೈರುಧ್ಯ. ಅಂದರೆ, ಈ ಕಡೆ, ಗಂಡನೇನೋ ಅತ್ಯಂತ ಕೆಟ್ಟವನು. ಅವನ ಪಾತ್ರವನ್ನು ಕಣ್ಣಿಗೆ ಕಾಪು ಕಟ್ಟಿಕೊಂಡ ಕುದುರೆಯಂತೆ ಒಂದೇ ದಿಕ್ಕಿನಲ್ಲಿ ನಡೆಸಿಕೊಂಡು ಹೋಗುತ್ತಾರೆ. ಅಂತೆಯೇ ಈ ಪಾತ್ರ ಬೆಳವಣಿಗೆಯ ಏಕತಾನತೆಯಿಂದಾಗಿ ಆ ಕೆಟ್ಟವನಲ್ಲೂ ಅಲ್ಲಲ್ಲಿ ಕಾಣಿಸಿಕೊಳ್ಳುವ ಒಳ್ಳೆಯ ಗುಣಗಳು ನಿರಪರಾಧಿಗಳಂತೆ ನಾಶವಾಗಿಬಿಡುತ್ತವೆ. ಉದಾಹರಣೆಗೆ, ನಿಂತು ಹೋಗಿದ್ದ ಉತ್ತಯ್ಯ ತಕ್ಕನ ಪಡಿಯನ್ನು ಮುಂದುವರಿಸಿದ್ದು ಕಾವಲುಗಾರ ತಕ್ಕನನ್ನು ಕ್ಷಮಿಸಿದ್ದು, ಮಗಳ ಮದುವೆ ವಿಷಯದಲ್ಲಿ ರಾಜ ಮಾಡಿಕೊಳ್ಳುವ ಆತ್ಮ ಪರಿವೀಕ್ಷಣೆ ಮುಂತಾದ ಶುದ್ಧ ಮಾನವೀಯ ಸನ್ನಿವೇಶಗಳು. ಹಾಗೆಯೇ ಆ ಕಡೆ ರಾಣಿಯ ಪಾತ್ರ ಕೂಡ ಅತಿ ಆದರ್ಶ ಮಹಿಳೆ ಎನಿಸುವಂತೆ ಮಾತ್ರ ನಡೆಸುವ ಆ ಪಾತ್ರ ಬೆಳವಣಿಗೆಯ ಏಕತಾನತೆಯಿಂದಾಗಿ ಅದೊಂದು ಹೆಣ್ಮನದ ಸಂವೇದನೆಗೆ ಸನಿಹವೆನಿಸುವ

ಬದಲು ಅತಿ ಆದರ್ಶದ ಅಥವಾ ಸನಾತನ ಕೀಲಿನ ಗೊಂಬೆಯೆನಿಸಿ, ರಾಜನ ದಾಷ್ಟ್ಯ ಗಳನ್ನೆಲ್ಲಾ ಹೆಣ್ಣಾಗಿ ನಡೆಸಿಕೊಳ್ಳುವ ಬದಲು, ದಿವ್ಯಮೌನಿಯಾಗಿ ಸ್ವೀಕರಿಸುತ್ತಾಳೆ. ಉದಾಹರಣೆಗೆ: ದೇವಮ್ಮಾಜಿಯನ್ನು ಗಂಡನ ಮನೆಗೆ ಕಳಿಸುವ ಅತ್ಯಂತ ಕ್ಲಿಷ್ಟ ವಾದ ಬಿಕ್ಕಟ್ಟಿನ ಸಂದರ್ಭದಲ್ಲಿ ರಾಜನ ಅನಾಗರಿಕ ದಾರ್ಷ್ಟ್ಯವನ್ನು ಅವಳು ನಡೆಸಿ ಕೊಂಡ ರೀತಿ; ಬೋಪಣ್ಣ ಲಕ್ಷ್ಮೀನಾರಾಯಣಯ್ಯರ ಮಾತುಕತೆಯನ್ನು ರಾಣಿಯ ಪಿತೂರಿಯೆಂದು ಬಗೆದ ದೊರೆಯ ಅನಾಗರಿಕ ಮಾತುಗಳನ್ನು ಕೇಳಿದ ಸಂದರ್ಭದಲ್ಲಿ ಅವಳು ನಡೆದುಕೊಂಡ ರೀತಿ, ರಾಜಕುಮಾರಿಯ ಮದುವೆ ಮತ್ತು ಕಾವಲುಗಾರ ತಕ್ಕನ ವಿಚಾರಣೆ ಸಂದರ್ಭದಲ್ಲಿ ಅವಳು ನಡೆದುಕೊಂಡ ರೀತಿಗಳು ಅವಳನ್ನೊಬ್ಬ ಆದರ್ಶ ಮಹಿಳೆ ಎನಿಸುವ ಬದಲು ಅವಾಸ್ತವ ಪಾತ್ರ ಎನಿಸಿಬಿಡುತ್ತದೆ. ಇಲ್ಲಿ ಆರಂಭದಿಂದಲೂ ಲಿಂಗಾಯುತ ಅರಸರಿಂದಲೇ ಆಳಲ್ಪಟ್ಟ ಕೊಡಗು ಸಾಮ್ರಾಜ್ಯದ ಲಿಂಗಾಯುತ ಅರಸರ ಮನೆಗೆ, ಸೊಸೆಯಾಗಿ ಬಂದ ರಾಣಿ ಗೌರಮ್ಮಾಜಿ. ಹುಟ್ಟಿನಿಂದ ಲಿಂಗಾಯುತಳಲ್ಲ; ಲಿಂಗದೀಕ್ಷೆಯ ಸಂಸ್ಕಾರದಿಂದ ಅವಳು ಲಿಂಗಾಯಿತಳಾದ ಕೊಡವರ ವಳೆಂಬುದನ್ನು ನೆನಪಿಡಬೇಕು. ಇದರಿಂದಾಗಿ, ಅವಳ ಪಾತ್ರದಿಂದ ಹೊರಡಬೇಕಾ ಗಿದ್ದ ನಿಜ ಮೌಲ್ಯಗಳೇನೆಂಬ ವಿಷಯದಲ್ಲಿ ಲೇಖಕರಿಗೆ ಒಂದು ಸ್ಪಷ್ಟವಾದ ತಾತ್ವಿಕ ಕಲ್ಪನೆಯಿದ್ದಂತಿಲ್ಲ. ಅಂತೆಯೇ ಈ ಅಸ್ಪಷ್ಟತೆ ಹಾಗೂ ಗೊಂದಲಗಳ ನಡುವೆ ಸುಲಭವಾದ ಆದರ್ಶ ಹೆಣ್ಣಿನ ಹೆಸರಿನಲ್ಲಿ ಆ ಪಾತ್ರವನ್ನು ಮುನ್ನಡೆಸಿರುವಂತೆ ತೋರುತ್ತದೆ. ಅಲ್ಲದೆ ರಾಜ ದುಷ್ಟನೆಂಬುದು ಕೂಡ ಲೇಖಕರ ಆ ಆದರ್ಶ ಹೆಣ್ಣಿನ ಪಾತ್ರ ಬೆಳವಣಿಗೆಯ ಹಾದಿಯನ್ನು ಸುಲಭಗೊಳಿಸಿದಂತಾಗಿದೆ. ತತ್ಪರಿಣಾಮವಾಗಿ ಈ ಎರಡು ಪಾತ್ರಗಳ ಹಿನ್ನೆಲೆಯಲ್ಲಿ ಸೃಷ್ಟಿಯಾಗಬಹುದಾಗಿದ್ದ ಐತಿಹಾಸಿಕ ಅರ್ಥ ಪರಿವೇಶ ಪೇಲವಗೊಳ್ಳುತ್ತದೆ. ಇದರಿಂದಾಗಿ ಕಾದಂಬರಿಯ ಹಿಂದೆ ತುಡಿಯು ತ್ತಿರುವ ಲೇಖಕರ ಸಾಂಸ್ಕೃತಿಕ ಮೌಲ್ಯಗಳೂ ತಾತ್ವಿಕ ಧೋರಣೆಯೂ ಅಸ್ಪಷ್ಟವೂ ವಿಚ್ಛಿನ್ನವೂ ಆಗಿಬಿಡುತ್ತದೆ. ರಾಜನ ಪಾತ್ರದ ಬಗ್ಗೆ ಮಾತಾಡುತ್ತಾ ಪ್ರೊ. ಕುರ್ತ ಕೋಟಿಯವರು ಕೂಡ ವೀರರಾಜನ ಕಾಮುಕತೆ ಹಾಗೂ ದುಷ್ಟತನಗಳನ್ನಷ್ಟೇ ಪಟ್ಟಿ ಮಾಡಿ 'ಪಾಪದ ಈ ಪ್ರಕ್ರಿಯೆಯನ್ನು ಮಾಸ್ತಿಯವರು ಈ ಕಾದಂಬರಿಯಲ್ಲಿ ಅತ್ಯಂತ ನಾಟಕೀಯವಾದ ರೀತಿಯಲ್ಲಿ ಚಿತ್ರಿಸಿದ್ದಾರೆ'[2] ಎನ್ನುತ್ತಾರೆ. ಆದರೆ, ವ್ಯಕ್ತಿಚೇತನ ದಲ್ಲಿ ನೈಸರ್ಗಿಕ ಕ್ರಿಯೆಯಂತೆ ಉದ್ಯುಕ್ತವಾಗುವ ಪಾಪಕೃತ್ಯಗಳೊಡನೆ. ಅಷ್ಟೇ ಜೀವಂತವಾದ ನೈಸರ್ಗಿಕ ಗುಣದಂತೆ ರಾಜನ ಪಾತ್ರದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುವ ಸದ್ಗುಣಗಳನ್ನು ಪರಿಗಣಿಸದೆ ಹೋಗುವುದು ಸೂಕ್ತವೆನಿಸುವಂತಿಲ್ಲ. ಅಷ್ಟೇ ಮುಖ್ಯ ವಾಗಿ ಇಲ್ಲಿ ಗಮನಿಸಬಹುದಾದ ಇನ್ನೊಂದು ಅಂಶವೆಂದರೆ, ರಾಜನ ಕೇವಲ ಕಾಮುಕ ಪ್ರವೃತ್ತಿಯನ್ನೇ ಕಾದಂಬರಿಯ ಕೇಂದ್ರ ಪ್ರಜ್ಞೆಯನ್ನಾಗಿ ಮಾಡಿಕೊಂಡ ಬಹುಶಃ

---

2 ಶ್ರೀನಿವಾಸ, ಪು. ೧೪೫

ಯಾವ ಐತಿಹಾಸಿಕ ಕಾದಂಬರಿಯೂ ಯಶಸ್ವಿಯಾಗಲು ಸಾಧ್ಯವಿರುವಂತಿಲ್ಲ. ಕಾರಣ,-ಏಕಪತ್ನಿತ್ವವೆಂಬುದು ಕೇವಲ ಲೇಖಕರ ಸಂಸ್ಕೃತಿ ಮೂಲವಾದ ವೈಯುಕ್ತಿಕ ಮನೋಧರ್ಮವೆನಿಸಬಹುದೇ ಹೊರತು ಇಂಡಿಯಾದ ರಾಜರ ಚರಿತ್ರೆಯಲ್ಲಿ ಅದು ವಾಸ್ತವ ಸಂಗತಿಯೆಂದೆನಿಸಲಾರದು. ಅಷ್ಟೇ ಅಲ್ಲದೆ, ಇಲ್ಲಿ ನೆನೆಪಿಡಬೇಕಾದ ಇನ್ನೊಂದು ಮುಖ್ಯಾಂಶವೆಂದರೆ ರಾಜನ ಒಂದೇ ಒಂದು ಗುಣದ ಮೇಲೆ ಒತ್ತುಕೊಟ್ಟು ಕೃತಿಯನ್ನು ಬೆಳೆಸಿರುವ ಇಲ್ಲಿನ ಕಥಾತಂತ್ರ ನಾಟಕದ ತಂತ್ರವೆನಿಸಬಹುದೇ ಹೊರತು ಅದೊಂದು ಐತಿಹಾಸಿಕ ಕಾದಂಬರಿಗೆ ಸೂಕ್ತವೆನಿಸುವಂತಿಲ್ಲ (ಉದಾ : ಇದೇ ವಸ್ತುವನ್ನಾಧರಿಸಿ ನಾಟಕ ರಚಿಸಬೇಕೆಂದಿದ್ದ ಲೇಖಕರ ಉದ್ದೇಶವನ್ನೂ ಪೀಠಿಕೆಯಲ್ಲಿ ಕಾಣಬಹುದು). ಆದ್ದರಿಂದ, ರಾಜನ ಒಂದು ಗುಣವನ್ನೇ ಪ್ರಧಾನವನ್ನಾಗಿ ಮಾಡಿಕೊಂಡಿರುವ ಈ ತಂತ್ರದಿಂದಾಗಿ ರಾಜ್ಯದ ಆರ್ಥಿಕ ಸಾಮಾಜಿಕ, ಶೈಕ್ಷಣಿಕ ಮತ್ತು ಒಟ್ಟು ಜನಜೀವನದ ಸಮಸ್ಯೆಗಳನ್ನು ರಾಜ ಹೇಗೆ ನಡೆಸಿಕೊಳ್ಳುತ್ತಿದ್ದನೆಂಬುದನ್ನು ಒಳಗೊಂಡು ಒಂದು ಎಪಿಕ್ ಸ್ಕೇಲ್‌ನಲ್ಲಿ ಬೆಳೆದು ವ್ಯಾಪಕವಾದೊಂದು ಐತಿಹಾಸಿಕ ಚಿತ್ರ ಕೊಡುವಲ್ಲಿ ಕಾದಂಬರಿ ಸೋಲುತ್ತದೆ.

ಈಗ ಸ್ವತಃ ಇತಿಹಾಸದಲ್ಲೇ ಇರುವ ಚಿಕ್ಕವೀರರಾಜನ ಪಾತ್ರವನ್ನು ಪರಿಶೀಲಿಸಬಹುದು :

"The character of Chikviraraja appears to have been intentionally blackened by the latter historigraphsrs of Coorg, like Dr. Moegling, G. Richter and Rice. William Jefferson, an officer of the East India Company, who was in Coorg for sometime at the last Raja, and who know the conditions in Coorg at that time has written in the book "Coorg and its Raja's" published in England in 1855, that we were particularly gratified at finding that this prince was easy of access to his ryots, listening patiently to their grievances and manifesting towards them at most consideration and kindness, this ensured him in return their loyaltly and affection as a proof of which whenever we travelled with the Raja into the interior of the country hundreds of natives, men, women and chlidren with curiosity crowded by companion and me an Englishman being a rara avis in those parts-received the Raja with every demonstration of respect and attachment. It given me the greatest satisfaction to mention this, being aware that the most sinister reports fo interested purposes were industriously propagated to the Raja's prejudice.

"As further proof of the esteem in which the Raja was held by this subjects, it may be mentioned, on his being deposed he issued a written order addressed to his Diwans Subedars and Munshees requiring them to state in writting the manner in which he had Govered the the country from the time of his assuming reigns of Government upto his dethronement and whether they satisfied or not with is system of Government. The reply to this was a decleration signed by more than four hundred persons expressive for their entire satisfaction with the manner in which the Raja had condvcted his Government and administered justice among them............"[3]

'ಚಿಕವೀರರಾಜೇಂದ್ರ'ದ ವಾಸ್ತವ ಇತಿಹಾಸದ ದೃಷ್ಟಿಯಲ್ಲಿ, ರಾಜನ ಪಾತ್ರದ ಬಗ್ಗೆ ವಿಲಿಯಂ ಜಫರ್‌ಸನ್ ತಾಳುವ ಈ ಧೋರಣೆ ತುಂಬಾ ಸೂಕ್ಷ್ಮವಾದ, ಪರಿಶೀಲನಾರ್ಹ ಸಂಗತಿಯೆಂಬುದರಲ್ಲಿ ಅನುಮಾನವಿದ್ದಂತಿಲ್ಲ. ಮೊದಲನೆಯದಾಗಿ, ಗೆಜೆಟಿಯರ್‌ನಲ್ಲಿರುವ ಈ ಮಾಹಿತಿಯ ಪ್ರಕಾರ ರೈಸ್ ಮುಂತಾದ ಚರಿತ್ರೆಗಾರರು ಚಿಕವೀರರಾಜನ ವ್ಯಕ್ತಿತ್ವವನ್ನು ವಿಕಾರಗೊಳಿಸಿದ್ದಾರೆಂಬುದು ತುಂಬಾ ಸ್ಪಷ್ಟವಾಗಿಯೇ ಇದೆ. ಎರಡನೆಯ ಅಂಶವೆಂದರೆ, ಮೇಲೆ ಉದ್ಧರಿಸಿರುವ ಮಾಹಿತಿಯನ್ನು ನೀಡುತ್ತಿರುವ ಗೆಜೆಟಿಯರ ಪ್ರಕಟವಾಗಿರುವುದು ೧೯೬೫ರಲ್ಲಿ ; ಆದೇ ಚಿಕವೀರ ರಾಜೇಂದ್ರ ಕಾದಂಬರಿ ಪ್ರಕಟವಾಗಿರುವುದು ೧೯೫೬ರಲ್ಲಿ. ಅಂದರೆ ವಿದೇಶಿ ಚರಿತ್ರೆ ಗಾರರಿಂದ ವಿಕಾರಗೊಳಿಸಲ್ಪಟ್ಟಿದ್ದ ಇಂಡಿಯಾದ ಚರಿತ್ರೆಯನ್ನು ೧೯೪೭ರ ನಂತರ ಸ್ವತಂತ್ರ ಇಂಡಿಯಾದ ಚರಿತ್ರೆಗಾರರು ಸರಿಪಡಿಸತೊಡಗಿದರೆಂಬುದು ನಿಜವಿರಬಹುದು. ಅಲ್ಲದೆ ಹಾಗೆ ಸರಿಪಡಿಸಲ್ಪಟ್ಟ ಮಾಹಿತಿಯನ್ನೇ ೧೯೬೫ರ ಗೆಜೆಟಿಯರ್ ನೀಡುತ್ತಿದೆ ಯೆಂಬುದೂ ಸತ್ಯವಿರಬಹುದು. ಆದರೆ ೧೮೫೫ರಷ್ಟು ಹಿಂದೆಯೇ ಪ್ರಕಟವಾಗಿರುವ ವಿಲಿಯಂ ಜಫರ್‌ಸನ್‌ನ 'ಕೂರಗ್ ಅಂಡ್ ಇಟ್ಸ್ ರಾಜಾಸ್' ಎಂಬ ಕೃತಿಯಲ್ಲಿ ದೊರೆಯುವ ಮಾಹಿತಿಯ ಪ್ರಕಾರ ರಾಜನ ಪಾತ್ರ ಸಂಪೂರ್ಣವಾಗಿಯೂ ಭಿನ್ನ ವಾಗಿದ್ದು, ವಿದೇಶಿ ಚರಿತ್ರೆಗಾರರು ಭಾರತದ ಚರಿತ್ರೆಯನ್ನೂ ಅದರ ರಾಜರ ವ್ಯಕ್ತಿತ್ವ ಗಳನ್ನೂ ವಿಕಾರಗೊಳಿಸಿದ್ದಾರೆಂಬುದಕ್ಕೆ ಅಪವಾದವೂ ಅನಿಸಿದ್ದು, ವೀರರಾಜನ ಬಗ್ಗೆ ಅತ್ಯಂತ ಸಮೀಪದ ಆಕರ ಮಾತೃಕೆಯೂ ಎನಿಸುತ್ತದೆ. ಏಕೆಂದರೆ, ಚಿಕವೀರರಾಜ ಬ್ರಿಟಿಷರಿಗೆ ಶರಣಾದುದು ೧೮೩೪ರಲ್ಲಿ. ಅದೇ ವಿಲಿಯಂ ಜಫರ್‌ಸನ್‌ನ ಪುಸ್ತಕ ಪ್ರಕಟವಾಗಿರುವುದು ೧೮೫೫ರಲ್ಲಿ. ಅಷ್ಟು ಮಾತ್ರವಲ್ಲದೆ ವೀರರಾಜನ ಆಳಿಕೆಯ

3 ಗೆಜೆಟಿಯರ್ ಆಫ್ ಇಂಡಿಯ, ಮೈಸೂರ್ ಸ್ಟೇಟ್, ಕೂರ್ಗ್ ಡಿಸ್ಟ್ರಿಕ್ಟ್, ಪಿಪಿ. ೭೩-೪, ೧೯೬೫

ಕಾಲದಲ್ಲಿ ಸ್ವತಃ ಕೊಡಗು ಪ್ರಾಂತವನ್ನೆಲ್ಲಾ ಪ್ರವಾಸ ಮಾಡಿ, ಅಲ್ಲಿನ ಸಮಸ್ತ ಜನ ಜೀವನದ ಸರ್ವವಿದ್ಯಮಾನಗಳನ್ನೂ ಸ್ವತಃ ಜನರ ನಡುವೆ ಇದ್ದು ಅಧ್ಯಯನ ಮಾಡಿ ದವನು ಜಫರ್‌ಸನ್. ಅಂತೆಯೇ ರಾಜ ಸ್ವೇಚ್ಛಾಚಾರಿಯೇ ಅಥವಾ ಪ್ರಜಾತಂತ್ರಿಯೇ ಎಂಬ ಬಗ್ಗೆ ರೈಸ್‌ನಷ್ಟೇ ಅಧಿಕೃತವೆನ್ನಬಹುದಾಗಿದ್ದು–ವೀರರಾಜನ ಅತ್ಯಂತ ಸಮೀಪದ ನಿಕಟವರ್ತಿಯೂ ಆ ಪ್ರಾಂತದ ಬ್ರಿಟಿಷ್ ಅಧಿಕಾರಿಯೂ ಆಗಿದ್ದ ಜಫರ್‌ಸನ್‌ನನ್ನು ಲೇಖಕರು ಕೈಬಿಟ್ಟಿರುವುದರಿಂದ ವೀರರಾಜನ ಪಾತ್ರಕ್ಕಾಗಲಿ ತತ್ಸಂಬಂಧಿತ ಚರಿತ್ರೆಗಾಗಲಿ ನಿಷ್ಪಕ್ಷಪಾತ ನ್ಯಾಯ ದೊರೆತಂತಾಗುವುದಿಲ್ಲ. ಹಾಗೆಯೇ ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಬ್ರಿಟಿಷರ ಕಾಲದಲ್ಲಿ ರಚಿತವಾದ ಇಂಡಿಯಾದ ಚರಿತ್ರೆಯನ್ನು ೧೯೪೭ ರ ನಂತರ ಸ್ವದೇಶಿ ಚರಿತ್ರೆಗಾರರು ಸರಿಪಡಿಸ ತೊಡಗಿದ್ದರೆಂಬ ವಾಸ್ತವ್ಯ ಲೇಖಕರಿಗೆ ತಿಳಿಯದ್ದಲ್ಲ. ಅಂದ ಮೇಲೆ ವೀರರಾಜನ ಚರಿತ್ರೆಯ ಬಗ್ಗೆ ಪೂರ್ವಗ್ರಹದಿಂದ ಕೂಡಿರುವ 'ಮೈಸೂರ್ ಅಂಡ ಕೂರಗ್' ನಂಥ ಗ್ರಂಥಗಳನ್ನೇ ಏಕೆ ಆಧರಿಸಹೊರಟರೆಂಬುದು ಅರ್ಥವಾಗುವುದಿಲ್ಲ. ಆದಾಗ್ಯೂ ಒಂದು ವಿಷಯ ಸ್ಪಷ್ಟ: ತನ್ನೊಂದು ಕಲಾಕೃತಿಯ ಸೃಷ್ಟಿಗಾಗಿ ಚರಿತ್ರೆಯಿಂದ ವಸ್ತುವನ್ನಾರಿಸಿಕೊಂಡ ಕಾದಂಬರಿಕಾರ ಆ ಕಲಾಕೃತಿಯ ಕಲಾತ್ಮಕ ಯಶಸ್ಸಿನ ದೃಷ್ಟಿಯಲ್ಲಿ ಚರಿತ್ರೆಗೆ ಬದ್ಧನಾಗಿರಬೇಕೆಂದೇನೂ ಇಲ್ಲ. ಅದೇ ಸಂದರ್ಭದಲ್ಲಿ, ಹಾಗೆ ನಿರ್ಮಿಸಲ್ಪಟ್ಟ ಕಲಾಕೃತಿಯನ್ನು ಚರಿತ್ರೆಯೊಡನಿಟ್ಟು ವಿವೇಚಿಸುವ ಓದುಗ, ಆ ಚರಿತ್ರೆಯನ್ನು ಲೇಖಕರು ಹೇಗೆ ಬಳಸಿಕೊಂಡಿದ್ದಲ್ಲಿ ಕೃತಿಯ ಯಶಸ್ಸು ಮತ್ತಷ್ಟು ಉಜ್ವಲಗೊಳ್ಳ ಬಹುದಿತ್ತೆಂಬ ಸಾಧ್ಯತೆಯನ್ನೂ ಅಲ್ಲಗೆಳೆಯಬರುವಂತಿಲ್ಲ. ನಿದರ್ಶನಕ್ಕೆ ಮೊದಲನೆಯದಾಗಿ, ವೀರರಾಜನ ಆಳ್ವಿಕೆಯ ಕೊನೆಯ ಒಂದು ವರ್ಷವನ್ನು ಮಾತ್ರ ಕಾದಂಬರಿಯ ವಸ್ತುವನ್ನಾಗಿ ಆರಿಸಿಕೊಳ್ಳುವುದರ ಬದಲು, ಅವನ ಆಳಿಕೆಯ ಹದಿನಾಲ್ಕು ವರ್ಷಗಳನ್ನೂ ವಸ್ತುವನ್ನಾಗಿ ಸ್ವೀಕರಿಸಿದ್ದು, ಎರಡನೆಯದಾಗಿ, ವೀರರಾಜ ಎಷ್ಟರ ಮಟ್ಟಿಗೆ (ಕಾದಂಬರಿಯ ಪ್ರಕಾರ) ಮುಂಗೋಪಿಯೂ ಅತಿ ಕಾಮುಕನೂ ಒರಟನೂ ಆಗಿದ್ದನೋ ಅಷ್ಟರ ಮಟ್ಟಿಗೆ, (ಜಫರ್‌ಸನ್‌ನ ಪ್ರಕಾರ) ರೈತರು ಮತ್ತು ಸಾಮಾನ್ಯ ಪ್ರಜೆಗಳ ಆಶೋತ್ತರಗಳನ್ನು ಅರ್ಥಮಾಡಿಕೊಂಡು, ಒಬ್ಬ ಸಮಕಾಲೀನ ಪ್ರಜಾತಂತ್ರ ಆಡಳಿತಗಾರನಂತೆ ಅವರ ಸಂವೇದನೆಗೆ ಸ್ಪಂದಿಸುವ, ಹಾಗೂ ರಾಜ್ಯದ ಬುದ್ಧಿಜೀವಿ ವರ್ಗವೆನಿಸಿದ ದಿವಾನರು, ಸುಭೇದಾರರು ಮತ್ತು ಮುನ್ಸಿಗಳ ನಿರ್ಭೀತ ಟೀಕೆ.ಟಿಪ್ಪಣಿಗಳನ್ನು ಅಂತರಂಗ ಪ್ರಾಮಾಣ್ಯದಿಂದ ಸ್ವೀಕರಿಸುವವನೂ ಆಗಿದ್ದನೆಂಬ–ಈ ಮುಂತಾದ ವಿರೋಧಾಭಾಸಗಳಿಂದ ಕೂಡಿರುವ, ಯಾವುದೇ ಮಾನವ ಸಂವೇದನೆಗೆ ಸನಿಹವೆನಿಸಿ, ನೈಜಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ, ಒಂದು ಅತ್ಯಂತ ಅರ್ಥಪೂರ್ಣವೂ ಸಂಕೀರ್ಣವೂ ಆದ ಪಾತ್ರವನ್ನು ನಿರ್ಮಿಸಬಹುದಿತ್ತು ಅಥವಾ ಇನ್ನೂ ಒಂದು ಮಾತಿನಲ್ಲಿ ಹೇಳುವುದಾದರೆ, ವಾಸ್ತವ ಚರಿತ್ರೆಯ ಹಿನ್ನೆಲೆಯಿಲ್ಲದಿದ್ದರೂ ರಾಜನ ಪಾತ್ರ ಕಾದಂಬರಿಯಲ್ಲಿ ಸಹಜ

ಸಂಕೀರ್ಣಯುವಾಗಿ ಮೂಡಿ ಬಂದಿದ್ದಲ್ಲಿ, ಮೊದಲನೆಯದಾಗಿ ಆ ಪಾತ್ರದ ಅತಿ ಸರಳೀಕರಣ (ಓವರ್ ಸಿಂಪ್ಲಿಫಿಕೇಷನ್)ದಿಂದ ಲೇಖಕರು ಕಲಾತ್ಮಕ ಯಶಸ್ಸಿನ ಸೃಷ್ಟಿಯಲ್ಲಿ ಸಾಧಿಸಿದ್ದೇನೆಂಬ ಮೂಲಭೂತ ಪ್ರಶ್ನೆಗೆ ಅವಕಾಶವಿರುತ್ತಿದ್ದಂತಿಲ್ಲ. ಎರಡನೆಯದಾಗಿ, ಆ ಪಾತ್ರ ಸೃಷ್ಟಿಯಲ್ಲಿ ಆ ಸಂಕೀರ್ಣತೆ ಸಾಧ್ಯವಾಗಿದ್ದ ಪಕ್ಷದಲ್ಲಿ ಸೃಜನಶೀಲ ಸಾಹಿತ್ಯದ ಕಲಾತ್ಮಕ ಯಶಸ್ಸು ತಂತಾನೇ ಸಾಧಿತವಾಗಬಹುದಿತ್ತೆಂದು ತೋರುತ್ತದೆ. ಆದರೆ ಕಾದಂಬರಿಯ ಸೃಷ್ಟಿಯಲ್ಲೇ ಘಟಿಸಿಹೋಗಿರುವ ಈ ಪಾತ್ರದ ಅತಿ ಸರಳೀಕರಣ ಒಂದು ಅತಿರೇಕವೆನಿಸಿದರೆ, ವಾಸ್ತವ ಚರಿತ್ರೆಯಲ್ಲೇ ಇರುವ ರಾಜನ ಪಾತ್ರದ ಸಂಕೀರ್ಣತೆ (ಕಾಂಪ್ಲೆಕ್ಸಿಟಿ) ಕಡೆಗಣಿತವಾಗಿರುವುದು ಇನ್ನೊಂದು ಅತಿರೇಕವೆನಿಸುವಂತಾಗಿದೆ. ತತ್ಪರಿಣಾಮವಾಗಿ, ಈ ಎರಡು ಅತಿರೇಕಗಳ ವೈಪರೀತ್ಯ ಈ ಐತಿಹಾಸಿಕ ಕಾದಂಬರಿಯ ಸೋಲಿಗಿರುವ ಕೆಲವು ಬಹು ಮುಖ್ಯವಾದ ಕಾರಣಗಳಲ್ಲೊಂದೆನಿಸುವಂತೆ ತೋರುತ್ತದೆ. ಆದ್ದರಿಂದ ಕಾದಂಬರಿಕಾರರು ಚರಿತ್ರೆಯ ವಸ್ತುವಿಗಾಗಿ ಇತ್ತೀಚಿನ ಲೇಖಕರಾದ ಐ. ಎಂ. ಮುತ್ತಣ್ಣರಂಥವರನ್ನೂ ಆಧರಿಸಿರುವುದರಿಂದ ಕಾದಂಬರಿಗಾಗಿರುವ ಲಾಭವೇನೆಂಬುದಕ್ಕಿಂತ, ಸ್ವತಃ ಚಿಕವೀರರಾಜನೊಡನೆ ಬದುಕಿದ್ದ ಜಫರ್‌ಸನ್‌ನನ್ನು ಕೈಬಿಟ್ಟಿರುವುದರಿಂದ ಚಾರಿತ್ರಿಕವಾಗಿಯೇ ಸಂಕೀರ್ಣ ವ್ಯಕ್ತಿಯೆನಿಸುವ ರಾಜನ ಪಾತ್ರಕ್ಕೂ ಕಾದಂಬರಿಯ ಕಲಾತ್ಮಕ ಯಶಸ್ಸಿಗೂ ಆಗಿರುವ ನಷ್ಟವೇನೆಂಬುದೇ ಬಹು ಮುಖ್ಯವಾದ ಪ್ರಶ್ನೆಯೆನಿಸುತ್ತದೆ.[4]

---

4 ಇಷ್ಟನೆಲ್ಲಾ ಹೇಳುವಾಗ ೧೮೫೫ರಲ್ಲಿ ಮೊಟ್ಟಮೊದಲಿಗೆ ಪ್ರಕಟವಾಗಿರುವ ಜಫರ್‌ಸನ್‌ನ ಪುಸ್ತಕ ಪ್ರಸ್ತುತ ಅಥವಾ ೧೯೬೫ರ ಗೆಜೆಟಿಯರ್‌ಗೆ ಉಪಲಬ್ಧವಿದ್ದುದು ಮಾತ್ರವಲ್ಲದೆ ಲೇಖಕರ ಕಾದಂಬರಿ ರಚನೆಯ ಕಾಲಕ್ಕೆ ಉಪಲಬ್ಧವಿತ್ತೆಂಬುದನ್ನು ಮರೆಯುವಂತಿಲ್ಲ. ಹಾಗೆಯೇ 'ಚಿಕವೀರ ರಾಜೇಂದ್ರ' ಕಾದಂಬರಿಯನ್ನು ಕುರಿತು ಈವರೆಗೆ ನಡೆದಿರುವ ವಿಮರ್ಶೆಗಳನ್ನು ಪರಿಶೀಲಿಸಿದಾಗ ಇನ್ನೊಂದು ಮುಖ್ಯಾಂಶ ಗೋಚರವಾಗುತ್ತದೆ. ಅದೆಂದರೆ, ಸ್ವತಃ ಚರಿತ್ರೆಗಾರರ ಪ್ರಕಾರ ವೀರರಾಜನ ಪಾತ್ರದ ಸ್ವರೂಪವೇನೆಂಬುದನ್ನು ವಿಮರ್ಶಕರು ತಿಳಿಯಲಿಚ್ಛಿಸಿದಂತೆ ತೋರುವುದಿಲ್ಲ. ಇಲ್ಲಿ ಇತಿಹಾಸದ ವಸ್ತುವನ್ನಾಧರಿಸಿ ಪುನಃ ಸೃಷ್ಟಿಯಾದ ಕಲಾಕೃತಿಯನ್ನಷ್ಟೇ ಪರಿಭಾವಿಸಬೇಕೆಂಬ ಸಮಾಧಾನ ಮೂಲವನ್ನು ತಿಳಿಯಬೇಕೆಂಬ ಇಚ್ಛೆಯನ್ನು ಪ್ರೋತ್ಸಾಹಿಸದೇ ಹೋಗಬಹುದು. ಆದರೆ, ಅದರ ಮೂಲ ಉಪಲಬ್ಧವಿದ್ದಾಗ ಮೂಲ ಮತ್ತು ಪುನಃ ಸೃಷ್ಟಿಗಳೆರಡನ್ನೂ ಕುರಿತ ತೌಲನಿಕ ಪರಿಶೀಲನೆಯಿಂದ ಕೃತಿಯು ಮೌಲಿಕತೆಗೊಂಡು ಸ್ವೋಪಜ್ಞ ನೆಲೆ ಪ್ರಾಪ್ತವಾದಂತಾಗುವುದು ಮಾತ್ರವಲ್ಲದೆ, ತತ್ಸಂಬಂಧಿತ ಯುಗಧರ್ಮದ ಜೀವನ ಸಮಗ್ರವನ್ನೂ ದರ್ಶಿಸುವ ಮೂಲಭೂತ ಪ್ರಯತ್ನವಾಗುತ್ತದ್ದೆಂಬುದನ್ನು ಅಲ್ಲಗಳೆಯಲು ಸಾಧ್ಯವಿರುವಂತಿಲ್ಲ. ಆದ್ದರಿಂದ ಪ್ರೊ. ಕುರ್ತುಕೋಟಿ ಮತ್ತು ಶೇಷಗಿರಿರಾವ್ ಮುಂತಾದ ವಿದ್ವಾಂಸರು ಈ ಕೃತಿಯನ್ನು ವಿಮರ್ಶಿಸುವಾಗ ಅದರ ಮೆಚ್ಚಿಕೆಯ ಭಾಗವನ್ನು ಮಾತ್ರ (ಅಭಿನಂದನಾ ಗ್ರಂಥಕ್ಕಾಗಿ, ಶ್ರೀನಿವಾಸ, ಪು. ೧೪೧-೫೧) ಮೆಚ್ಚುತ್ತ ಮೂಲದ ಇತಿಹಾಸವನ್ನು ಪರಿಶೀಲಿಸದೆ ಹೋದುದರಿಂದ ಇತಿಹಾಸವನ್ನು ಐತಿಹಾಸಿಕ ಪಾತ್ರವನ್ನೂ ಪೂರ್ಣದೃಷ್ಟಿಯಿಂದ ಪರಿಭಾವಿಸಿದಂತಾಗಲಿ, ಪುನಃಸೃಷ್ಟಿತ ಕಲಾಕೃತಿಯ ಸೋಲು ಗೆಲುವುಗಳ ನಿರ್ಣಯಕ್ಕೊಂದು ವ್ಯಾಪಕವಾದ ನೆಲೆ ಲಭ್ಯವಾದಂತಾಗಲಿ ಆಗಲಾರದು. ಶೇಷಗಿರಿರಾವ್ ಮಾತ್ರ, ಇದೊಂದು ಶ್ರೇಷ್ಠ ಐತಿಹಾಸಿಕ ಕಾದಂಬರಿಯೆಂಬುದನ್ನು ಸ್ಥಾಪಿಸುವ ಅವರ ಹುಮ್ಮಸ್ಸಿನಿಂದಾಗಿ, ಅವರ ಇತಿಮಿತಿಗಳನ್ನು ಗಂಭೀರ ಪರಿಶೀಲನೆಗೆ ಒಳಪಡಿಸುವ ಗೋಜಿಗೇ ಹೋದಂತಿಲ್ಲ (ತರಂಗ, ೨೯ ಜುಲೈ, ೪ ಆಗಸ್ಟ್ ೧೯೮೪, ಪು. ೨೫-೬)

ದೇವಮ್ಮಾಜಿಯ ಮಗುವಿನ ಪ್ರಕರಣ ಕೊಡಗಿನ ರಾಜಕೀಯ ವಿಷಮತೆ ಅತ್ಯಂತ ಉಲ್ಬಣಾವಸ್ಥೆಗೆ ತಿರುಗುವುದರಿಂದ ಕಾದಂಬರಿಗೊಂದು ಗಂಭೀರವಾದ ತಿರುವು ಪ್ರಾಪ್ತವಾಗುವಂತೆಯೇ ಕಥೆಯನ್ನು ಮುನ್ನಡೆಸುವ ಕಾದಂಬರಿಕಾರನ ಪ್ರತಿಭೆಗೂ ಒಂದು ಸವಾಲು ಪ್ರಾಪ್ತವಾಗುತ್ತದೆ. ಚೆನ್ನಬಸವಯ್ಯ ಮತ್ತು ದೇವಮ್ಮಾಜಿ ಅಪ್ಪಂಗೋಳದ ಅರಮನೆಯ ಸೆರೆಯಿಂದ ತಪ್ಪಿಸಿಕೊಂಡು ಚೋಮ ಮುಂತಾದ ಸೈನಿಕರೊಡನೆ ಕೊಡಗಿನ ಗಡಿಯನ್ನು ದಾಟುವಾಗ, ಮಗುವನ್ನು ತೊಟ್ಟಿಲಿಂದ ಚೆಲ್ಲಿಕೊಂಡು ಹೋದದ್ದು, ಮತ್ತೆ ಮಗುವನ್ನು ಹುಡುಕಿಕೊಂಡು ಚೋಮ ಹಿಂದಕ್ಕೆ ಬರುವುದು, ಆ ವೇಳೆಗೆ ಮಗು ಗಡಿ ಸೈನಿಕರ ಕೈಗೆ ಸಿಗುವುದು, ಒಟ್ಟು ಈ ಪ್ರಕರಣವೆಲ್ಲಾ ತುಂಬಾ ಬಾಲಿಶವಾಗಿ ಕಾಣುತ್ತದೆ. ಏಕೆಂದರೆ, ಕುದುರೆ ಸವಾರಿಯಲ್ಲಿ ದೂರದ ಪಯಣ ಮಾಡುವವರು ಮಗುವನ್ನು ಬೆನ್ನಿಗೆ ಕಟ್ಟಿಕೊಂಡು ಕುದುರೆ ಸವಾರಿ ಮಾಡುವುದು ಸಂಭವನೀಯ ಮಾತ್ರವಲ್ಲ, ಅದು ಇದ್ದುದರಲ್ಲಿ ಸೂಕ್ತ ಕ್ರಮವೂ ಹೌದೆಂಬುದು ಸಾಮಾನ್ಯ ತಿಳುವಳಿಕೆ. ಅದೇ ಮಗುವನ್ನು ತೊಟ್ಟಿಲಲ್ಲಿ ಇಟ್ಟುಕೊಂಡು, ತೊಟ್ಟಿಲನ್ನು ಕುದುರೆಗೆ ಕಟ್ಟಿಕೊಂಡು ಸವಾರಿ ಮಾಡುವುದು ಸಂಭವನೀಯವೆನಿಸುವಂತಿಲ್ಲ. ಅದರಲ್ಲೂ ರಾಜ ಖೈದಿಗಳಾದ ಇವರು ಕಳ್ಳಮಾರ್ಗದಲ್ಲಿ, ಅದೂ ಮಲೆನಾಡಿನಂಥ ಕಾಡಿನ ಮಾರ್ಗದಲ್ಲಿ ದೌಡಾಯಿಸುತ್ತಿರುವ, ಕುದುರೆಯ ಅತ್ಯಂತ ಅಪಾಯಕಾರಿ ದೌಡಿನಲ್ಲಿ ತೊಟ್ಟಿಲನ್ನು ಕುದುರೆಗೆ ಬಿಗಿದುಕೊಂಡು ಅದರಲ್ಲಿ ಮಗುವನ್ನು ಸಾಗಿಸುವುದು ಯೋಚನೆಗೂ ನಿಲುಕದ ಬಾಲಿಶ ಕಲ್ಪನೆ. ಅಲ್ಲದೆ ಕುದುರೆ ವಿದ್ಯೆಯಲ್ಲಿ ಹುಟ್ಟುತ್ತಲೇ ನೈಪುಣ್ಯ ಪಡೆದು ಬೆಳೆಯುವ ರಾಜ ಮನೆತನದ ಜನರನ್ನು ಈ ವಿಚಾರದಲ್ಲಿ ಇಷ್ಟೊಂದು ದಡ್ಡರನ್ನಾಗಿ ಮಾಡಿರುವುದು, ಕೇವಲ ಕಥೆಯನ್ನು ಮುಂದೆ ಸಾಗಿಸಲು ಲೇಖಕರು ಮಾಡಿಕೊಂಡಿರುವ ಅಪಕ್ವ ತಂತ್ರವೇ ಹೊರತು, ರಾಜಕುಮಾರಿಯಾದ ದೇವಮ್ಮಾಜಿಗಾಗಲಿ, ಅರಮನೆ ಅಳಿಯನಾದ ಚನ್ನಬಸವಯ್ಯನಿಗಾಗಲಿ, ಮಗುವನ್ನು ಸಾಗಿಸುವ ಈ ಸಣ್ಣ ವಿಷಯ ಗೊತ್ತಿರಲಿಲ್ಲವೆಂದಲ್ಲ. ಅದರಲ್ಲೂ ಮುಖ್ಯವಾಗಿ. ತೊಟ್ಟಿಲಿಂದ ಹಾಗೆ ಚೆಲ್ಲಿಕೊಂಡ ಮಗು ಕೆಳಗೆ ಬಿದ್ದಕೂಡಲೆ ಕಿಟಾರನೆ ಕಿರುಚಿಕೊಂಡದ್ದಾಗಲಿ ಅಥವಾ ಅದು ಕುದುರೆ ಸವಾರರಿಗೆ ಕೇಳಿಸದೇ ಹೋದದ್ದಾಗಲಿ ಮೊದಲನೆಯ ಪವಾಡ. ಕುದುರೆಯ ಸಾಮಾನ್ಯ ಎತ್ತರ ಸುಮಾರು ಆರು ಅಡಿಗಳೆಂದು ಭಾವಿಸಿದರೂ ಅಷ್ಟು ಎತ್ತರದಿಂದ ಕಾಡಿನ ನೆಲದ ಮೇಲೆ ಬಿದ್ದ ನಾಕೈದು ತಿಂಗಳ ಹಸಿ ಮಾಂಸದ ಮುದ್ದೆಯಂಥ ಮಗುವಿಗೆ ಏನೊಂದು ಆಗದೆ, ಸೊಗಸಾಗಿ ರಾಜನಲ್ಲಿಗೆ ತಂದದ್ದು ಎರಡನೆಯ ಬಹು ಮುಖ್ಯ ಪವಾಡ. ಇನ್ನು ಮೂರನೆಯ ಪವಾಡವೆಂದರೆ, ಒಂದು ಕಡೆ

ತೊಟ್ಟಿಲನ್ನು ಕುದುರೆಗೆ ಕಟ್ಟಿಕೊಂಡು ಹೋದರೆಂದು ಲೇಖಕರು ಬರೆಯುತ್ತಾರೆ (ಪು.೩೨೧–೫). ಇನ್ನೊಂದು ಕಡೆ, ಅಪ್ಪಂಗೊಳದ ಅರಮನೆಯ ಕಾವಲುಗಾರರ ನಾಯಕ ಅನುಮಾನದಿಂದ ಅಂತಃಪುರವನ್ನು ಹೊಕ್ಕಿ ನೋಡಿದರೆ, ಅಲ್ಲಿ ಖಾಲಿ ತೊಟ್ಟಿಲು ಬಿದ್ದಿತ್ತೆಂದು (ಪು. ೩೩೭) ತೋರಿಸುತ್ತಾರೆ. ಹೀಗಾಗಿ ಕುದುರೆಗೆ ತೊಟ್ಟಿಲು ಕಟ್ಟಿಕೊಂಡು ಮಗು ಸಾಗಿಸುವ ಲೇಖಕರ ತಂತ್ರದಿಂದ ರಾಜಮನೆತನದ ಕುದುರೆ ಸವಾರಿ ನಿಪುಣರನ್ನು ದಡ್ಡರನ್ನಾಗಿಸಿದುದು ಮಾತ್ರವಲ್ಲದೆ, ಅದೇ ತೊಟ್ಟಿಲ ತಂತ್ರದಿಂದಾಗಿ ಲೇಖಕರ ಸೃಜನಶೀಲ ಪ್ರತಿಭೆ ಆ ತೊಟ್ಟಿಲಿನಿಂದ ಹೊರಬರಲಾಗಿಯೇ ಇಲ್ಲವೆನಿಸುವಂತಾಗಿವೆ.

ಹೀಗೆ, ಲೇಖಕರು ಯಾಕೆ ಇಷ್ಟೊಂದು ದುರ್ಬಲವಾದ ಕಥಾತಂತ್ರಕ್ಕೆ ಕಟ್ಟು ಬಿದ್ದು ಅದನ್ನೇ ವಾಸ್ತವವೆಂದು ಓದುಗ ಭಾವಿಸುವಂತೆ ಮಾಡಹೊರಟಿದ್ದಾರೆಂದು ಯೋಚಿಸಿದಾಗ, ಕಥಾಸಂವಿಧಾನದೊಳಗೇ ಉತ್ತರ ಸಿಕ್ಕುತ್ತದೆ. ಈ ಮಗುವಿನ ಪ್ರಕರಣದಿಂದ ಲೇಖಕರು ಸಾಧಿಸಲೆತ್ನಿಸಿರುವ ಬಹುದೊಡ್ಡ ಸಾಧನೆಯೆಂದರೆ. ವೀರರಾಜನಿಗೆ 'ಕಂಸಕಂಟಕ'ವಿದೆಯೆಂದು ಭವಿಷ್ಯ ನುಡಿದ ದೀಕ್ಷಿತನ ಜ್ಯೋತಿಶಾಸ್ತ್ರವನ್ನು[5] ಸತ್ಯಗೊಳಿಸುವುದು. ಅರ್ಥಾತ್, ದೀಕ್ಷಿತನ ಜ್ಯೋತಿಷ್ಯದ ಪ್ರಕಾರ ರಾಜನಿಗೆ ಕಂಸಕಂಟಕವಿದೆಯೆಂದ ಮೇಲೆ ರಾಜವೈರಿಗಳ ಮಗು ರಾಜನ ಕೈಗೆ ಸಿಗುವಂತೆ ಮಾಡಬೇಕು ; ತನ್ಮೂಲಕ ಕಂಸ–ಕೃಷ್ಣರ ಪೌರಾಣಿಕ ಅರ್ಥಪರಿವೇಶವನ್ನು ಕಾದಂಬರಿಯಲ್ಲಿ ಸೃಷ್ಟಿಸಬೇಕು. ಅದಕ್ಕಾಗಿ ಕಾದಂಬರಿಯೊಳಗೆ ಇಷ್ಟೊಂದು ಪವಾಡಗಳು, ರಾಜ ಮಗುವನ್ನು ಕೊಂದದ್ದು ಚಾರಿತ್ರಿಕವಾಗಿ ವಾಸ್ತವವೋ ಅಲ್ಲವೋ ಅದು ಅಪ್ರಸ್ತುತ. ಆದರೆ, ಚರಿತ್ರೆಯ ವಸ್ತುವನ್ನು ಆಧರಿಸಿ ಪುನಃ ಸೃಷ್ಟಿಮಾಡುವಾಗ, ಕಥೆಗಾರನ ಕಥಾನಕ ಕಲ್ಪನೆ ಚರಿತ್ರೆಗೆ ಬದ್ಧವಾಗಿರಬೇಕಾದ ಅಗತ್ಯವಿಲ್ಲವೆಂಬುದು ಸತ್ಯವಾದರೂ ಪುನಃ ಸೃಷ್ಟಿಯಾದ ಕಥಾನಕ ಕಲ್ಪನೆಯೇ ಅವಾಸ್ತವವೆನಿಸಿ ; ಮಗುವಿನ ಪ್ರಕರಣದ ನಂತರ ಕಥಾಚಾಲನೆ ಒಂದು ಗಂಭೀರ ಸವಾಲಾಗಿ ಪರಿಣಮಿಸಬಹುದಾಗಿದ್ದ ಕಥೆಯ

---

5 ಅರಸನಿಗೆ ಕಂಸದೆಶೆ, ದೀಕ್ಷಿತನ ಪಂಚಾಂಗ, ಗ್ರಹಗತಿ, ಗ್ರಹಗಳ ಶಾಂತಿ, ಪೂಜೆ ಮುಂತಾದವನ್ನು ಓದುತ್ತಿರುವಾಗ ಕನ್ನಡದ ಒಂದು ಅಪ್ರೌಢ ಐತಿಹಾಸಿಕ ಸಿನಿಮಾ ನೋಡಿದ ಅನುಭವದಿಂದ ಕಾದಂಬರಿ ಹೊರತಾಗುವುದಿಲ್ಲ. ಅಲ್ಲದೆ ಈ ಕಂಸಯೋಗ ಲೇಖಕರ ಕಥಾಚಾಲನೆಗೆ ಸುಲಭದ ದಾರಿಯನ್ನು ಕಾದಂಬರಿ ಗಾತ್ರದ ಹೊಟ್ಟೆಗೆ ಕೂಳನ್ನೂ ಒಟ್ಟಿದೆ. ಹಾಗೆಯೇ ಇಲ್ಲೇ ನೆನಪಿಸಬಹುದಾದ ಇನ್ನೊಂದು ಅಂಶವೆಂದರೆ, ಪಾಣಿ ಸೂರ್ಯನಾರಾಯಣ ಹೆಂಡತಿಯನ್ನು ಹುಡುಕಿಕೊಂಡು ಅಯ್ಯರವಾಡಿಗೆ ಬಂದು, ಚಿಕ್ಕದೀಕ್ಷಿತ, ಉತ್ತಯ್ಯ ಮತ್ತು ಕಾವಲುಗಾರ ಮಾಚನ ಸಹಾಯದಿಂದ ಮಣಿಸರ ಮಾರುವವನ ವೇಷದಲ್ಲಿ ಅಯ್ಯೇರವಾಡಿಯನ್ನು ಪ್ರವೇಶಿಸಿ ಮಾತಿನ ದನಿಗಳ ಮೂಲಕ ಸೂರ್ಯನಾರಾಯಣ ಮತ್ತು ಅವನ ಹೆಂಡತಿ ನಾಗಮ್ಮ ಪರಸ್ಪರ ಗುರುತು ಹಚ್ಚಿಕೊಳ್ಳುವ ಪ್ರಸಂಗ ಕೂಡ ಕಲಾತ್ಮಕ ನಾಟಕೀಯ ಚಿತ್ರಣವೆನಿಸದೆ ಸರಳ ಸಿನಿಮೀಯವೆನಿಸುತ್ತದೆ.

ಸಾಂದ್ರತೆ ಜಾಳು ಜಾಳಾಗಿ ಹರಿಯತೊಡಗಿದೆ. ವಾಸ್ತವವಾಗಿ ರಾಜನು ಮಗುವನ್ನು ಕೊಲ್ಲುವ ಸ್ಥಿತಿಗೆ ಹೋದದ್ದು ಯಾವುದೇ ರಾಜಮನೆತನಕ್ಕಾದರೂ ಅದೊಂದು ಕೇವಲ ರಾಜಕೀಯ ವಿಷಯ ಮಾತ್ರವೆನಿಸಿ, ಅದರೊಳಗೆ ಸಿಲುಕುವ ಮಾನವೀಯ ಮೌಲ್ಯಗಳೆಲ್ಲಾ ನಾಶವಾಗಿಬಿಡುತ್ತವೆಂಬುದು ಅನುಭವವೇದ್ಯ. ಆದರೆ ರಾಜಕೀಯ ಚರಿತ್ರೆಯ ಅದೇ ವಾಸ್ತವ ಸತ್ಯವನ್ನು ಐತಿಹಾಸಿಕ ಕಾದಂಬರಿಕಾರ ತನ್ನ ಕಲಾಕೃತಿಯಲ್ಲಿ ಪುನಃಸೃಷ್ಟಿಗೊಳಿಸುವಾಗ, ಅಲ್ಲಿನ ರಾಜಕೀಯ ವಿಷಯಗಳು ಎಷ್ಟೇ ಅಮಾನುಷವಾಗಿದ್ದರೂ ಅವುಗಳ ನಡುವೆ ಕೂಡ ಮಾನವೀಯ ಮೌಲ್ಯಗಳು ಮೂಡುವುದನ್ನು ಐತಿಹಾಸಿಕ ಕಾದಂಬರಿಗಳಲ್ಲಿ ಕಾಣಬಹುದೆಂಬುದನ್ನು ಬಹುಶಃ ಇಲ್ಲಿ ಪಟ್ಟಿ ಮಾಡಬೇಕಾದ ಅಗತ್ಯವಿದ್ದಂತಿಲ್ಲ. ಆ ಸಲುವಾಗಿಯೇ ಲೇಖಕ ತನ್ನ ಕಥಾನಕ ಕಲ್ಪನೆಯನ್ನು ಒಂದು ಸುಭದ್ರವಾದ ನೆಲೆಯ ಮೇಲೆ ಬೆಳೆಸುತ್ತಾನೆ. ಆದರೆ, ಪ್ರಸ್ತುತ ಮಾಸ್ತಿಯವರು ಕಟ್ಟಿದ ಮಗುವಿನ ಪ್ರಕರಣ ನೆಲೆಯಿಲ್ಲದ ಬೆಳವಣಿಗೆಯಾಗಿ ಆ ಕಲ್ಪನೆ ವಾಸ್ತವ ಕಥಾನಕದೊಡನೆ ಮೈಪಡೆದುಕೊಂಡು ಮುಂದಿನ ಕಥೆಯನ್ನು ಯಶಸ್ವಿಯಾಗಿ ಆಗು ಮಾಡುವ ಬದಲು, ಕೇವಲ ರಾಜವೈರಿಗಳ ಮಗುವನ್ನು ರಾಜನ ಕೈಗೆ ಸಿಗಿಸಿ; ಪೌರಾಣಿಕಾರ್ಥ ಛಾಯೆಯನ್ನು ಸೃಷ್ಟಿಸಬೇಕೆಂಬ ಹಟಮಾರಿ ಉದ್ದೇಶಕ್ಕೆ ಕಟ್ಟುಬಿದ್ದು. ದೊರೆಯ ದೌಷ್ಟ್ಯಕ್ಕೂ ದೀಕ್ಷಿತನ ಜ್ಯೋತಿಶಾಸ್ತ್ರಕ್ಕೂ ಮಗುವಿನ ಪ್ರಾಣವನ್ನು ಹಂಚಿದಂತಾಗಿದೆ.

ಹೀಗೆ, ಕೃತಿ ಸಂದರ್ಭದಲ್ಲಿನ ಹಲವಾರು ಮಿತಿಗಳಿಂದಾಗಿ ಕಥಾನಕ ಕಲ್ಪನೆಯ ಸಂವಿಧಾನವೇ ಜಾಳು ಜಾಳಾದಂತಾಗಿದೆ. ಇಲ್ಲಿ ಉಲ್ಲೇಖಿಸಬಹುದಾದ ಇನ್ನೊಂದು ಅಂಶವೆಂದರೇ ಪುಟ ೨೬೨ ರಿಂದ ೨೮೪ರ ವರೆಗಿನ ಸುಮಾರು ಐದು ಅಧ್ಯಾಯಗಳು ಕಾದಂಬರಿಯ ಒಟ್ಟು ಶಿಲ್ಪಕ್ಕೆ ಯಾವ ಥರದ ಕೊಡುಗೆಯೂ ಆಗುವುದಿಲ್ಲ. ಅವುಗಳೆಂದರೆ, ಒಂದು ಕೊಡಗರ ಕೈಲು ಹಬ್ಬ, ಇನ್ನೊಂದು ಕ್ರೈಸ್ತ ಮತ್ತು ಹಿಂದೂ ಮತಗಳನ್ನು ಕುರಿತ ಚರ್ಚಾಗೋಷ್ಠಿ. ಮೊದಲನೆಯದು ಕೊಡಗರ ಜಾನಪದ ಸಂಸ್ಕೃತಿಯನ್ನು ಕುರಿತ ವರದಿಯಾದರೆ, ಎರಡನೆಯದು ಮತಗಳನ್ನು ಕುರಿತ ಚರ್ಚಾಗೋಷ್ಠಿ. ಲೇಖಕರ ವಾಚಾಳಿತನಕ್ಕೆ ಕೃತಿಯ ಪ್ರಬಂಧಶಿಲ್ಪ ಬಲಿಯಾದಂತಾಗಿದೆ. ಅಂದರೆ, ಈ ಪ್ರಕರಣಗಳನ್ನು ಕಾದಂಬರಿಯ ಚೌಕಟ್ಟಿನೊಳಗೆ ಮಂಡಿಸುವುದರಿಂದ ಮಹತ್ವವನ್ನೇನಾದರೂ ಸಾಧಿಸಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಉದಾಹರಣೆಗೆ, ರಾಜ ಮತ್ತು ಬಸವರನ್ನು ಅಣಕಿಸುವ[6] ನಾಟಕಮಾಡಿದ್ದು ರಾಜನ ಪಾತ್ರದ

---

6 ಈ ರಾಜಾ ಮಂತ್ರಿಯನ್ನು ಅಣಕಿಸುವ 'ಕೋಡಗ ರಾಜ' ನಾಟಕ, ಶೇಕ್ಸ್‌ಪಿಯರ್‌ನ 'ಹ್ಯಾಮ್ಲೆಟ್' ನಾಟಕದಲ್ಲಿ ದೊರೆ ಹ್ಯಾಮ್ಲೆಟ್‌ನನ್ನು ಮೋಸದಿಂದ ಕೊಂದು ತಾನೇ ದೊರೆಯಾದ ಕ್ಲಾಡಿಯಸ್‌ನನ್ನು ಅಳುಕಿಸುವ 'ಮೌಸ್‌ಟ್ರಾಪ್' (ಆಕ್ಟ್ ೩, ಸೀನ್ಸ್ ೨, ಲೈನ್ ೨೩೪) ನಾಟಕವನ್ನು ನೆನಪಿಸುತ್ತದೆ. ಆದರೆ ಹ್ಯಾಮ್ಲೆಟ್ ನಾಟಕದ ಸಂದರ್ಭದಲ್ಲಿ ದೊರೆಯನ್ನು ಮೋಸದಿಂದ ಕೊಂದು ಕ್ಲಾಡಿಯಸ್ ತಾನೇ ರಾಜನಾದುದೇ ಅಲ್ಲದೆ, ಡೆನ್ಮಾರ್ಕ್

ಮೇಲೆ ಅಥವಾ ಇಡೀ ಕಥೆಯ ಕೇಂದ್ರ ಕ್ರಿಯೆಯ ಮೇಲೆ ನವಿರಾದ ಪರಿಣಾಮ ಬೀರಿ, ಕಥಾಚಲನೆಯನ್ನೂ ಸಾಂದರ್ಭಿಕ ಅರ್ಥಭಾವಗಳನ್ನೂ ತೀವ್ರಗೊಳಿಸುತ್ತದೆ. ಆದರೆ, ಈ ಬಗೆಯ ಯಾವುದೇ ಪರಿಣಾಮವನ್ನು ಮತಜಿಜ್ಞಾಸೆಯಿಂದ ಕಾಣಲಾಗದು. ಆದ್ದರಿಂದ, ಈ ಮತಜಿಜ್ಞಾಸೆಯಲ್ಲಿ ಕ್ರೈಸ್ತ ಪಾದ್ರಿ ಮೇಗ್‌ಲಿಂಗ್, ದೀಕ್ಷಿತನನ್ನು ಸೋಲಿಸುವುದರಿಂದಾಗಲಿ ಅಥವಾ ಭಗವತಿ ಮೇಗ್‌ಲಿಂಗ್‌ನನ್ನು ಸೋಲಿಸುವುದರಿಂದಾಗಲಿ ಕಾದಂಬರಿಗೇನೂ ಪ್ರಯೋಜನವಾದಂತಿಲ್ಲ.

ಐತಿಹಾಸಿಕ ಕಾದಂಬರಿ ಎನಿಸಿಕೊಳ್ಳುವಲ್ಲಿ ಇದಕ್ಕಿರುವ ಇನ್ನೊಂದು ಮಿತಿಯೆಂದರೆ, ಕಾದಂಬರಿಯ ಪ್ರಕಾರ ಇಡೀ ಕೊಡುಗು ಸಾಮ್ರಾಜ್ಯದ ಪತನಕ್ಕೆ ಕೇವಲ ಅರಮನೆಯ ವಿದ್ಯಮಾನಗಳಷ್ಟೇ ಕಾರಣಗಳೆನಿಸಿಕೊಳ್ಳುತ್ತವೆ. ಅಂದರೆ, ಕೊಡಗಿನ ಅರಮನೆ, ರಾಜಮನೆತನದ ಕೆಲವು ಸಂಬಂಧಿಕರು, ಚಿಕ್ಕಣ್ಣ ಶೆಟ್ಟಿಯಂಥ ಕೆಲವು ವರ್ತಕರು ಮತ್ತು ದೀಕ್ಷಿತನಂಥ ರಾಜಪುರೋಹಿತರೇ ಮುಂತಾದ ಮೇಲುವರ್ಗದ ಕೇವಲ ಕೆಲವು ಮಂದಿ ಮಾತ್ರ ಕಾದಂಬರಿಯ ಸಂವಿಧಾನದೊಳಗೆ ಕಾಣಿಸಿಕೊಳ್ಳುವುದರಿಂದಲೂ ಒಂದು ಸಾಮ್ರಾಜ್ಯದ ಪತನದ ಆರಂಭದಿಂದ ಅಂತ್ಯದವರೆಗಿನ ಅವಧಿಯಲ್ಲಿ ಇನ್ನೊಂದು ವರ್ಗವಾದ ಸಾಮಾನ್ಯ ಜನಸಮುದಾಯದ ಪ್ರತಿಕ್ರಿಯೆ ಕಥಾ ಸಂವಿಧಾನದೊಳಗೆ ಅತ್ಯಂತ ಗೌಣಗೊಂಡಿರುವುದರಿಂದಲೂ ಕಾದಂಬರಿಯ ಅರಹುವಿಗೆ ಪ್ರಾಪ್ತವಾಗಬೇಕಿದ್ದ ಐತಿಹಾಸಿಕತೆಯ ವ್ಯಾಪಕ ಚಿತ್ರ ಅಪೂರ್ಣವೆನಿಸುತ್ತದೆ. ಅರ್ಥಾತ್, ಯಾವುದೇ ರಾಜ್ಯ ವ್ಯವಸ್ಥೆಯಲ್ಲಿ ಅತ್ಯಂತ ಸಾಮಾನ್ಯವಾದ ರೂಢಿಯಲ್ಲಿ ಕರೆಯಬಹುದಾದ ಮೇಲು ವರ್ಗ, ಕೆಳವರ್ಗ ಹಾಗೂ ಮಧ್ಯಮ ವರ್ಗಗಳನ್ನು ವಾಸ್ತವವಾಗಿಯೇ ಪ್ರತಿನಿಧಿಸಬೇಕಾಗಿದ್ದ ಪಾತ್ರಗಳ ಪರಸ್ಪರ ಪ್ರವರ್ತನೆಯ ಚಿತ್ರಣ ಕೃತಿಯಲ್ಲೆಲ್ಲೂ ಮೂಡಿಲ್ಲದಿರುವುದರಿಂದ, ಕಾದಂಬರಿ ಸೃಷ್ಟಿಸಿಕೊಡಬೇಕಾಗಿದ್ದ ಐತಿಹಾಸಿಕ ಚಿತ್ರಣ ಊನಗೊಂಡಂತಾಗಿ, ಈಗಾಗಲೇ ಹೇಳಿರುವಂತೆ ಈ ಐತಿಹಾಸಿಕ ಕಾದಂಬರಿಯು ಸೋಲಿಗಿರುವ ಬಹು ಮುಖ್ಯ ಕಾರಣಗಳಲ್ಲಿ ಇದು ಪ್ರಧಾನವಾದುದೆನಿ

ಸಾಮ್ರಾಜ್ಯದ ರಾಣಿಯನ್ನೂ ವರಿಸುವುದರಿಂದ ಕ್ಲಾಡಿಯಸ್‌ನ ಅಂತಃಕರಣ ಅತ್ಯಂತ ಕಲುಷಿತಗೊಂಡಿರುತ್ತದೆ. ಅಂತೆಯೇ ಆ ಕಲುಷಿತಗೊಂಡ ಹೃದಯದ ಪಾಪಪ್ರಜ್ಞೆಯನ್ನು ಹೊರ ಹಾಕುವ, ಆ ನಾಟಕ ಸೃಷ್ಟಿಸುವ ದುರಂತ ಚಿತ್ರಣಕ್ಕೂ ಇಲ್ಲಿನ 'ಕೋಡುಗ ರಾಜ' ನಾಟಕದಿಂದ ಮೂಡುವ ಗೇಲಿ ಅಥವಾ ತಮಾಷೆಗೂ ಬೇಕಾದಷ್ಟು ಅಂತರವಿದೆ. ಜೊತೆಗೆ ಅಲ್ಲಿ ಕ್ಲಾಡಿಯಸ್‌ನ ಸುತ್ತಲಿನ ಪಾಪಪ್ರಜ್ಞೆಯ ಮತ್ತು ದುರಂತದ ಆವರಣಕ್ಕೂ ಇಲ್ಲಿ ವೀರರಾಜನ ಸ್ವೇಚ್ಛಾಚಾರ ಮತ್ತು ಹುಡುಗಾಟಿಕೆಯ ಆವರಣಕ್ಕೂ ಆನೆ ಆಡಿನಷ್ಟು ಅಂತರವಿದೆ. ಆದ್ದರಿಂದ ಇಲ್ಲಿನ 'ಕೋಡುಗ ರಾಜ' ನಾಟಕ ಅಲ್ಲಿ 'ಪ್ಲೇ ವಿತ್ ಇನ್ ದಿ ಪ್ಲೇ' ಎನಿಸುವ 'ಮೌಸ್ ಟ್ರ್ಯಾಪ್' ನಾಟಕದ ವಿಕೃತ ನಕಲೆನ್ನಬಹುದು.

ಸುತ್ತದೆ.[7] ಹಾಗೆಯೇ ಇನ್ನೊಂದು ಸಂಗತಿಯೆಂದರೆ ಭೌಗೋಳಿಕವಾಗಿ ದುರ್ಗಮ ವೆನಿಸುವ ಕೊಡಗಿನ ಪ್ರಾಕೃತಿಕ ವ್ಯಾಪಾರಗಳನ್ನು ಕಾದಂಬರಿ ಪ್ರತಿಬಿಂಬಿಸುವುದಿಲ್ಲವಾದ ಕಾರಣ, ಕಾದಂಬರಿಯ ಸಂಪೂರ್ಣ ಕ್ರಿಯೆ ಆ ಭೌಗೋಳಿಕ ದುರ್ಗಮ ಸನ್ನಿವೇಶದಲ್ಲಿ ನಡೆಯುತ್ತಿದೆಯೆಂದೆನಿಸುವುದಿಲ್ಲ. ಮಲೆನಾಡ ಪ್ರಾಂತದಲ್ಲಿ ವಿಶಿಷ್ಟವೆನಿಸುವ ಕೊಡಗರ ಜೀವನದ ವೈವಿಧ್ಯತೆಗಳು ಹಾಗೂ ಅವರ ಸಾಂಸ್ಕೃತಿಕ ನಡಾವಳಿಗಳು ಸೂಕ್ಷ್ಮವಾಗಿ ಕಾದಂಬರಿಯಲ್ಲಿ ಎಲ್ಲೂ ಚಿತ್ರಣಗೊಂಡಿಲ್ಲ. ಈ ಮೊದಲೇ ಹೇಳಿರುವಂತೆ ಕೊಡಗಿನ ಸಾಮಾನ್ಯ ಪ್ರಜಾಸಮುದಾಯ ನಾಡಿನ ರಾಜಕೀಯ ವಿಷಮತೆಗೆ ಪ್ರತಿಕ್ರಿಯಿಸುವ ಸನ್ನಿವೇಶಗಳಿಲ್ಲದೆ, ಮೇಲುವರ್ಗದ ಕೆಲವು ಪಾತ್ರಗಳು ಮಾತ್ರ ಕಾಣಿಸಿಕೊಳ್ಳುವ ಒಂದು ಮುಖ್ಯವಾದ ಕೊರತೆಯಿಂದಾಗಿ ವೀರರಾಜನ ಆಡಳಿತದ ಹದಿನಾಲ್ಕನೆಯ ವರ್ಷದಲ್ಲಿ ಕೊಡಗಿನ ಜನಜೀವನದಲ್ಲಿ ಉಂಟಾದ ರಾಜಕೀಯ ಆರ್ಥಿಕ ವಿಷಮತೆಗಳ ಜಟಿಲತೆಯನ್ನು ಪ್ರತಿಬಿಂಬಿಸುವ ಐತಿಹಾಸಿಕ ಚಿತ್ರಣ ಮೂಡಿಸುವಲ್ಲಿ ಕಾದಂಬರಿ ಸೋಲುತ್ತದೆ.

ಇನ್ನು ಈ ಕಾದಂಬರಿಯಲ್ಲಿ ಬಳಸಲಾಗಿರುವ ಭಾಷೆಯ ಬಗ್ಗೆ ಒಂದೆರಡು ಮಾತು. ಲೇಖಕರೇ ಹೇಳುವಂತೆ ಕೊಡಗಿನ ಆ ಕಡೆ ಕೇರಳ, ಈ ಕಡೆ ಮೈಸೂರು. ಮತ್ತೊಂದು ಕಡೆ ಮಂಗಳೂರು (ಪು.೩.) ಅಂದರೆ, ಈ ನಡುವೆ ನಿಂತಿರುವ ಕೊಡಗಿನ ಕನ್ನಡ ಭಾಷೆ ಮಲೆಯಾಳಂ, ತುಳು, ಕೊಂಕಣಿ ಹಾಗೂ ಕೊಡವ ಭಾಷೆಗಳ ನಡುವೆ ಸಿಲುಕಿದೆ. ಅರ್ಥಾತ್, ಇದು ಕನ್ನಡದ ಒಂದು ಉಪಭಾಷೆ (ಡೈಯಲೆಕ್ಟ್) ಎಂಬುದ ರಲ್ಲಿ ಸಂಶಯವಿಲ್ಲ. ಆದರೆ ಮಾಸ್ತಿಯವರು ಈ ಕಾದಂಬರಿಯಲ್ಲಿ ಬಳಸಿರುವ ಭಾಷೆ ಆ ಉಪಭಾಷೆಯನ್ನಲಿಕ್ಕೆ ಸಾಧ್ಯವಿಲ್ಲವೆಂಬುದು ವರ್ಣನಾತ್ಮಕ ಭಾಷಾ ವಿಜ್ಞಾನ (ಡಿಸ್ಕ್ರಿಪ್ಟಿವ್ ಲಿಂಗ್ವಿಸ್ಟಿಕ್ಸ್) ದ ಯಾವ ವಿದ್ಯಾರ್ಥಿಗಾದರೂ ಅರ್ಥವಾಗ ಬಹುದಾದ್ದು. ಉದಾಹರಣೆಗೆ, ಕಾದಂಬರಿಯೊಳಗಿನ ಸಂಭಾಷಣೆಯ ಕೆಲವು ವಾಕ್ಯ ಲಹರಿಗಳನ್ನು ಪರಿಶೀಲಿಸಬಹುದು. ಕುಂಟಬಸವ 'ಲೋ ಬರತಾ ಈ ಬಾಗಿಲು ಹಾಕಿಕೊಂಡು ಬಾ ಎಂತ ಹೇಳಿದೆನಲ್ಲ, ತೆರೆದೇ ಬಂದ್ಯ ನನ್ನ ಪ್ರಾಣಕ ತರೋಕ್ಕೆ ದೆವ್ವನ ಮುಂಡೇದೆ' (ಪು.೬). ಬಸವನ ಮತ್ತೊಂದು, ವಾಕ್ಯ. 'ದೆವ್ವನ ಮುಂಡೇದೆ. ಬಾಗಿಲು ಹಾಕಿಕೊಂಡು ಬಾ ಅಂದರೆ ಹಾಗೆಯೇ ಬಂದೆಯಾ ? ಇರು ನಿನಗೆ ಮಾಡು ತ್ತೇನೆ' (ಪು. ೬). ರಾಜಕುಮಾರಿಯ ವಾಕ್ಯ, 'ಅಪ್ಪಾಜಿ ಅತ್ತೆ ಊಟ ಮಾಡೋದಿಲ್ಲ ಅಂತಾರೆ, ನೀವಾದರೂ ಹೇಳಿ ಉಣಲಿ" (ಪು.೮). ರಾಣಿ ಮತ್ತು ಕುಂಟಬಸವರ

---

7 ಇಲ್ಲಿ ರಾಜ ಸೆರೆಯಾಗಿ ಮಂತ್ರಿ ಬೋಪಣ್ಣ ಮತ್ತು ಲಕ್ಷ್ಮೀನಾರಾಯಣಯ್ಯರ ಸಮಕ್ಷಮದಲ್ಲಿ ಬ್ರಿಟಿಷ್ ಅಧಿಕಾರಿಗಳು ರಾಜ್ಯದ ಆಡಳಿತದ ಬಗೆಗಿನ ಕೆಲವು ನಿರ್ಣಯಗಳನ್ನು ಬಹಿರಂಗ ಸಭೆಯಲ್ಲಿ ಪ್ರಕಟಿಸುವ ಸಂದರ್ಭವನ್ನುಳಿದರೆ ಬೇರೆಲ್ಲೂ ಪ್ರಜಾಸಮುದಾಯದ ಪ್ರತಿಕ್ರಿಯೆ ಉಂಟಾಗುವುದಿಲ್ಲ.

ನಡುವೆ ನಡೆಯುವ ಸಂಭಾಷಣೆ ರಾಣಿ, 'ನಿನ್ನೆ ರಾತ್ರಿ ಅಕ್ಕಯ್ಯನವರಿಗೆ ತೊಂದರೆ ಕೊಟ್ಟಿರಂತೆ. ಹಂಗೆ ತಿರುಗು ಎಲ್ಲಾದರೂ ಮಾಡಿರಿ ಜೋಕೆ' ಅದಕ್ಕೆ ಬಸವ 'ದಣಿಗಳು ನೆನ್ನೆಒಳಿ ಕುಶಾಲಿದ್ದರವ್ವ, ಮೇಲೆ ತಂಗ್ಯವ್ವನ ನಡುವೆ ತಪ್ಪಾತಂತ ತಿಳಿದರು. ಆದ ರಿಂದ ಹಂಗೆ ಮಾಡಿದರು' (ಪು. ೨೫) ಎನ್ನುತ್ತಾನೆ. ಈ ಬಗೆಯ ಸಂಭಾಷಣೆಯನ್ನು ಕಾದಂಬರಿಯುದ್ದಕ್ಕೂ ಪರಿಶೀಲಿಸಿದರೆ, ಮಲೆಸೀಮೆಗೇ ವಿಶಿಷ್ಟವಾದ ಭಾಷಾಪ್ರಕಾರ ವನ್ನು ಈ ಕಾದಂಬರಿಯ ಭಾಷೆ ಪ್ರತಿನಿಧಿಸಲು ಸಾಧ್ಯವಿರುವಂತಿಲ್ಲ; ಬದಲಾಗಿ 'ತಂಗ್ಯವ್ವನ ನಡತಿ ತಪ್ಪಾತಂತ ತಿಳಿದರು' ಎಂಬಂಥ ವಾಕ್ಯ ಶೈಲಿಗಳನ್ನು ನೋಡಿ ದಾಗ, ಇದು ಧಾರವಾಡ ಉಪಭಾಷೆಯನ್ನು ಅಪಕ್ವವಾಗಿ ಪ್ರತಿನಿಧಿಸುತ್ತದೆಯೇ ಹೊರತು, ವಿಶೇಷವಾಗಿ ಕೊಡಗಿನ ಶೈಲಿಯನ್ನಂತೂ ಅಲ್ಲವೆನಿಸುತ್ತದೆ.

ಇಷ್ಟೆಲ್ಲಾ ಮಿತಿಗಳ ನಡುವೆ ಕೂಡ ಕಾದಂಬರಿಯ ಕೆಲವು ಭಾಗಗಳು ಹಾಗು ಕೆಲವು ಪಾತ್ರಗಳು ಶಕ್ತಿಯುತವಾಗಿ ಚಿತ್ರಿತವಾಗಿವೆ. ಉದಾಹರಣೆಗೆ: ಭಗವತಿ ಯಾರೆಂಬುದು ದೊಡ್ಡವ್ವನಿಗೆ ಮಾತ್ರ ಗೊತ್ತು (ಪು. ೧೧೩-೧೫). ರಾಜನ ಕಾಯಿಲೆಯ ಸಂದರ್ಭದಲ್ಲಿ ಇಲ್ಲಿ ಆರಂಭಗೊಳ್ಳುವ ಮಲೆಯಾಳಿ ಮದ್ದು ಅಥವಾ ಭಗವತಿಯ ಪಾತ್ರದ ಬಗ್ಗೆ ಒಂದು ಕುತೂಹಲದ ಆರಂಭದ ಎಳೆ ಇಲ್ಲಿ ಕಾಣಿಸಿಕೊಳ್ಳು ತ್ತದೆ. ಅಲ್ಲದೆ ಭಗವತಿಯ ಪೂಜೆ ಕೂಡ ಕಾದಂಬರಿಯ ಸಂದರ್ಭದಲ್ಲಿ ತುಂಬಾ ಮುಖ್ಯವೆನಿಸಿ, ಅದರ ವಿವರಣೆಯ ಹರಹು ಕೂಡ (೪೬ನೇ ಅಧ್ಯಾಯ) ತುಂಬಾ ವಿಸ್ತಾರವೆನಿಸುತ್ತದೆ. ಈ ಪೂಜೆ ಇಲ್ಲಿ ಬಹು ಮುಖ್ಯವೆನಿಸಲಿಕ್ಕೆ ಕಾರಣ ಭಗವತಿ ನೆರವೇರಿಸುವ ಈ ಪೂಜೆಯ ಪ್ರತಿಯೊಂದು ಅಂಶವನ್ನೂ ಬಸವ ಏಕಾಗ್ರಚಿತ್ತದಿಂದ ಅನುಭವಿಸುತ್ತಾನೆ. ಅದಾಗಿ, ಈ ಪೂಜೆಯಿಂದ ಹೊರಡುವ ಧ್ವನಿಗಳೆಂದರೆ, ಮೊದಲನೆಯದಾಗಿ ಈ ದುರ್ಗಾ ಪೂಜೆ ನಡೆಯುತ್ತಿರುವುದು ರಾಜನ ಆಯುರಾ ರೋಗ್ಯದ ಸಲುವಾಗಿ. ಆದರೆ, ದುರ್ಗಿಯ ಉಪಾಸಕಳಾದ ಭಗವತಿಯಲ್ಲಿ, ತನ್ನ ಮಗನಾದ ಬಸವನಿಗೆ ಕೊಡಗು ಸಾಮ್ರಾಜ್ಯದ ಸಿಂಹಾಸನ ದಕ್ಕಬೇಕೆಂಬ ಅದಮ್ಯ ಹಂಬಲ ಅವಳ ಬದುಕಿನ ಉಸಿರಾಗುತ್ತದೆ. ತತ್ಪರಿಣಾಮವಾಗಿ ಅವಳ ದುರ್ಗಾ ಪೂಜೆ ಸದುದ್ದೇಶ ಪ್ರಣೀತವೆನ್ನಲಿಕ್ಕೆ ಬರುವಂತಿಲ್ಲ. ಆದ್ದರಿಂದ ಅವಳ ಪಾತ್ರದ ಈ ದ್ವಂದತೆ ತುಂಬಾ ಯಶಸ್ವಿಯಾಗಿಯೂ ಶಕ್ತಿಯುತವಾಗಿಯೂ ಮೂಡಿಬಂದಿದೆ. ಎರಡನೆಯದಾಗಿ, ಅದೇ ಸಂದರ್ಭದಲ್ಲಿ ಬಸವ ನಡೆದುಕೊಳ್ಳುವ ನಡವಳಿಕೆಯ ವೈಲಕ್ಷಣ ಕೂಡ ತುಂಬಾ ಸಂಕೀರ್ಣವಾಗಿ ಮೂಡಿ ಬಂದಿದೆ. ಏಕೆಂದರೆ, ಭಗವತಿಯ ಪೂಜಾವಿಧಾನವನ್ನು ಸ್ವತಃ ವೀಕ್ಷಿಸಿದ ಆ ಸಂದರ್ಭದಲ್ಲಿ ಬಸವನಲ್ಲಿ ಅಪೂರ್ವ ದೈವಭಕ್ತಿ ತುಂಬಿಕೊಳ್ಳುತ್ತದೆ. ಅರ್ಥಾತ್, ಅವನ ಈ ಅಪೂರ್ವ ದೈವಭಕ್ತಿಗೆ ಅವನಲ್ಲಿರುವ ನಿಶ್ಚಲ ಸ್ವಾಮಿನಿಷ್ಠೆ ಕಾರಣವೇ ಹೊರತು, ಅದು ಅವನ ವ್ಯಕ್ತಿಗತ ಸಂಸ್ಕೃತಿಯಲ್ಲಿ ರೂಢಿಗತವಾಗಿ ಬಂದಿರುವ ದೈವಭಕ್ತಿಯೇನಲ್ಲ. ಇದೇ ಸಂದರ್ಭದಲ್ಲಿ ನೆನೆಯಬೇಕಾದ ಇನ್ನೊಂದು ಮುಖ್ಯಾಂಶವೆಂದರೆ, ದುರ್ಗಾ ಪೂಜೆಯ ಸಲುವಾಗಿ

ಬಸವ ಮೊಟ್ಟಮೊದಲ ಬಾರಿಗೆ ಭಗವತಿಯ ಆಶ್ರಮಕ್ಕೆ ಬಂದಾಗ, ಎಷ್ಟೋ ವರ್ಷಗಳ ನಂತರ ಮೊದಲ ಬಾರಿಗೆ ಮಗುವನ್ನು ಕಂಡ ಭಗವತಿ ಭಾವೋದ್ವೇಗ ದಿಂದ ಅವನನ್ನು ಬಿಗಿದಪ್ಪಿಕೊಂಡು ಮುದ್ದಿಸುತ್ತಾಳೆ. ಅಂದರೆ, ಆ ಹೆಣ್ಣಿನ ಅಪ್ಪುಗೆ ಬಸವನಿಗೆ ಆ ಸಂದರ್ಭದಲ್ಲಿ ದಿಗ್ಭ್ರಮೆಯೆನಿಸಿ, ಕ್ರಮೇಣ ಅವನ ಮನಸ್ಸಿನಲ್ಲಿ ಅದು ಕಾಮದ ದಾಹವಾಗಿ ತಿರುಗಿಕೊಳ್ಳತೊಡಗುತ್ತದೆ (ಪು. ೧೩೮). ಜೊತೆಗೆ, ಮಾನವರ ಸಂಸರ್ಗವೇ ಇಲ್ಲದೆ, ನಾಯಿಗಳೊಡನಿದ್ದ ಬಸವನನ್ನು ಒಬ್ಬ ಮಾನವ ನನ್ನಾಗಿ ನಡೆಸಿಕೊಂಡ ವೀರರಾಜನ ಬಗೆಗಿನ ಬಸವನ ಕೃತಜ್ಞತೆ ಕೂಡ ಈ ಸಂದರ್ಭ ದಲ್ಲಿ ತುಂಬಾ ಜೀವಂತವಾಗಿ ಚಿತ್ರಿತವಾಗಿದ್ದು, ತತ್ಫಲವಾದ ಬಸವನ ಪಾತ್ರ ಚಿತ್ರಣ ಅತ್ಯಂತ ಜಟಿಲವೂ ಸಂಕ್ಲಿಷ್ಟವೂ ಆದುದೆನಿಸಿದೆ. ಆದರೆ, ಈ ಎರಡು ಪಾತ್ರಗಳು ಇಡೀ ಕಾದಂಬರಿಯ ದಿಕ್ಕನ್ನೇ ನಿರ್ಣಯಿಸುವಷ್ಟು ಸಮರ್ಥವಾದ ಆರಂಭವನ್ನು ಹೊಂದಿದ್ದರೂ ಅಷ್ಟೇ ಯಶಸ್ವಿಯಾಗಿಯೂ ಕಲಾತ್ಮಕವಾಗಿಯೂ ಅವುಗಳನ್ನು ನಡೆಸಿ ಅಂತ್ಯಗೊಳಿಸಲಾಗದೆ ಹೋದದ್ದಕ್ಕೆ ಬಹುಶಃ ಲೇಖಕರಿಗಿರುವ ಗಂಭೀರವಾದ ಮಿತಿ ಕಾರಣವಿರಬಹುದೆಂದು ತೋರುತ್ತದೆ. ಅದೇ ರಾಜನ ಪಾತ್ರದ ಬಗ್ಗೆ ಇನ್ನೊಂದು ಸಮಾಧಾನದ ಸಂಗತಿಯೆಂದರೆ. ರಾಜನೆಂಬ ಕಾರಣಕ್ಕಾಗಿ ಆ ಪಾತ್ರವನ್ನು ವೈಭವೀಕರಿಸದೆ, ಒಬ್ಬ ಮಾನವ ವ್ಯಕ್ತಿ ಚೇತನದಂತೆ ನಡೆಸಿಕೊಂಡು ಹೋಗಿರು ವುದು*.

---

* ಈ ಕಾದಂಬರಿಯಲ್ಲಿ ಮಲೆನಾಡಿನ ನೈಸರ್ಗಿಕ ವೈವಿಧ್ಯತೆಯ ಚಿತ್ರಣ ಇಲ್ಲವಾಗಿರುವುದಕ್ಕೆ ಬಹು ಮುಖ್ಯವೆನಿಸುವ ಒಂದು ಕಾರಣ ಗೋಚರವಾಗುತ್ತದೆ. ಪುಟ್ಟಪ್ಪನವರ ಕಾದಂಬರಿ ಗಳಲ್ಲಿ ಕಾಣುವ ಮಲೆನಾಡಿನ ನೈಸರ್ಗಿಕ ವೈವಿಧ್ಯತೆ ಅಲ್ಲಿನ ಪಾತ್ರ ಪರಿಸರಗಳ ಅಥವಾ ಸಮಸ್ತ ಜನಜೀವನದೊಡನೆ ಹೊಕ್ಕುಳ ಸಂಬಂಧವನ್ನು ಹೊಂದಿದ್ದು, ಅದು ಅವರ ಕಾದಂಬರಿ ಗಳ ಯಶಸ್ಸಿಗೂ ಕಾರಣವಾಗುತ್ತದೆ. ಆದರೆ, ಆ ಬಗೆಯ ಕಾರಣೀಭೂತ ಕ್ರಿಯೆ 'ಚಿಕ್ಕವೀರ ರಾಜೇಂದ್ರ'ದಲ್ಲಿ ಕಾಣಸಿಗುವುದಿಲ್ಲ. ಬಹುಶಃ ಇದಕ್ಕಿರುವ ಕಾರಣವೆಂದರೆ, ವೃತ್ತಿಯಿಂದ ಆಡಳಿತಗಾರರೆನಿಸಿದ ಮಾಸ್ತಿ ಕೃತಿಯ ಕಲಾತ್ಮಕ ವರ್ಣನೆಯ ವಿಷಯದಲ್ಲಿ ಕವಿ ಹೃದಯವುಳ್ಳ ಒಬ್ಬ ಪ್ರವಾಸಿಗರೆನಿಸಿದರೆ, ವೃತ್ತಿಯಿಂದ ಸಾಹಿತ್ಯದ ಪ್ರಾಧ್ಯಾಪಕರೆನಿಸಿದ ಕುವೆಂಪು ಕವಿ ಹೃದಯವುಳ್ಳ ಒಬ್ಬ ಕವಿಯೇ ಎನಿಸುತ್ತಾರೆ. ಅಂದರೆ, ಈ ಅಭಿಪ್ರಾಯ ಮಾಸ್ತಿ ಮತ್ತು ಪುಟ್ಟಪ್ಪನವರನ್ನು ಮಾತ್ರ ಕುರಿತಿರುತ್ತದೆ.

'ಕಣ್ಣಿ ಕಿತ್ತ ಹಸು': ಆಡುಮಾತಿನ ಕಾವ್ಯ

ಡಾ॥ ಪೋಲಂಕಿ ರಾಮಮೂರ್ತಿ

ಆಡುಮಾತನ್ನೇ ಮರೆಯಲ್ಲಿ ನಿಂತು ಕಿವಿಯಾರೆ ಕೇಳಿ, ಅದನ್ನೇ ತನ್ನ ನಾಲ್ಕೈದು ನಾಟಕಗಳಲ್ಲಿನ ಭಾಷೆಯನ್ನಾಗಿ ಬಳಸಿ ಅದರಿಂದಲೇ ಜಗತ್ತಿನಲ್ಲಿ ಖ್ಯಾತಿ ಗಳಿಸಿದ ಮೇಲ್ಮೆ ಜೆ. ಎಮ್. ಸಿಂಗ್ ಎಂಬ ಐರ್ಲೆಂಡಿನ ನಾಟಕಕಾರನದು. ಏರನ್ ಎಂಬ ದ್ವೀಪದ ಜನರ ಆಡುಮಾತಿನ ನುಡಿಗಟ್ಟು, ಅದರಲ್ಲಿನ ಅನುಭವದ ಬನಿ, ಆ ಬನಿಯೇ ರೂಪಕಗೊಂಡ, ಕಾವ್ಯವಾದ ಜಾನಪದ—ಅದೇ ಸಿಂಗನ ಕಂಡುಹಿಡಿತ (Discovery), ಕಾವ್ಯ ಸಾಧನೆ.

ಅಂತಹ ಒಂದು ಪವಾಡ ಸುಧಾಕರರದ್ದು ಅಷ್ಟೇ. ಅದು ಅವರ ಸ್ವಂತದ್ದು, ಒರಿಜಿನಲ್ಲಾದದ್ದು, ಮೊಸರು ಮಾರುವ ಹೆಂಗಸರು ತಮ್ಮ ಕಷ್ಟಸುಖ ತೋಡಿ ಕೊಳ್ಳುತ್ತಾ ನಡೆಯುತ್ತಿರುವುದನ್ನು ಗಮನಿಸಿದ ಯಾವುದೇ ಸಹೃದಯಿ ಆ ಆಡುಮಾತುಗಳು ಹೇಗೆ ಅನುಭವದಲ್ಲಿ ಹರಳುಗೊಂಡ ಅಣಿಮುತ್ತುಗಳು, ಜಾಣ್ನುಡಿ ನಾಣ್ನುಡಿ ಗಳು, ಗಾದೆ ವೇದಗಳು ಎಂಬುದನ್ನು ಕಂಡುಕೊಳ್ಳದಿರ ಲಾರ. ಆದರೆ ಆ ಕಂಡುಕೊಳ್ಳುವಿಕೆ, ಆ ದರ್ಶನ ಕೇವಲ ಟೇಪ್‌ರೆಕಾರ್ಡ್‌ನಂತೆ ಯಾಂತ್ರಿಕವಾಗಿ ಕೇಳಿಸಿಕೊಳ್ಳುವುದ ರಿಂದ ಬಂದುದಲ್ಲ; ಸೂಕ್ಷ್ಮಸಂವೇದಿಯಾದ ಸಹೃದಯೀ ಕಲಾವಿದನಿಂದ. ಕವಿಯಿಂದ ಮಾತ್ರ ದತ್ತವಾದದ್ದು.

ಕಥೆಗಳ ಶೀರ್ಷಿಕೆಗಳನ್ನೇ ನೋಡಿ : ಕಣ್ಣಿಕಿತ್ತ ಹಸು, ಸಾಕಿದ ನಾಯಿ, ಹೊರಲಾರದ ಹೊರೆ ಇತ್ಯಾದಿ. ಅವೇ ಹತ್ತುಕಟ್ಟುವ ಕಡೆ ಕಟ್ಟಿದ ಮುತ್ತುಗಳು —ಹರಳುಗೊಂಡ ಅನುಭವಗಳು. ಉದಾಹರಣೆಗೆ ಆ ಮೂರು ಕಥೆಗಳಲ್ಲೂ ಹಳ್ಳಿಯ ಜನರ ದುಡಿಮೆ ಜೀವನದ ನಿಕಟ ಸಂಗಾತಿಗಳು, ಅವರ ರೈತಬಾಳಿನ ಆಧಾರಜೀವಿ ಗಳಾದ ಪ್ರಾಣಿಗಳು, ಜಾನುವಾರುಗಳು–ದನಕರುಗಳು, ಕುರಿ ನಾಯಿಗಳು–ಆ ಕಥಾ ನಾಯಕರುಗಳ ಜೀವನದ ಹಾಸುಹೊಕ್ಕುಗಳು. ಅವರ ಮತ್ತು ಅವರ ದನಕರುಗಳ ಪರಸ್ಪರತೆ, ನಿಕಟ ಸಂಬಂಧವೇ ಈ ಕಥೆಗಳ ಮುಖ್ಯವಸ್ತು—ಪ್ರಧಾನ ವ್ಯವಹಾರ ಒಂದು ವಿಶೇಷ ರೀತಿಯಲ್ಲಿ ಈ ಪ್ರಾಣಿಗಳು ಮಾನವ ಜೀವನವನ್ನೂ ನಿಯಂತ್ರಿಸುವ, ಅದರ ಮೌಲ್ಯವನ್ನು ನಿರ್ಧರಿಸುವ, ಅದಕ್ಕೆ ಮಾನವೀಯತೆಯನ್ನೇ ಸಾಕ್ಷಾತ್ಕರಿಸಿ ಕೊಡುವ ಮೂಲಸಾಧನಗಳು, ಮಾನವ ಒಡನಾಡಿಗಳು.

'ಕಣ್ಣಿ ಕಿತ್ತ ಹಸು' ಈ ಪವಾಡವನ್ನು ಮನಮುಟ್ಟುವಂತೆ ಅಭಿನಯಿಸುವ ಕಥಾವಿಶೇಷ — ವಸ್ತು, ಪ್ರಾಣಿ, ಮಾನವರುಗಳ ಸಹವಾಸದ, ಸಹಬಾಳ್ವೆಯ ಸಾಂಗತ್ಯ. ಇಡೀ ಕಥೆ ಆಡುಮಾತಿನಲ್ಲೇ, ಮಾತನಾಡುವಿಕೆಯಲ್ಲೇ ಅಥವಾ ಮನಸ್ಸಿನಲ್ಲಿ ನಡೆಯುವ ಮಾತನಾಡುವಿಕೆಯ ವ್ಯಾಪಾರದಲ್ಲೇ ನಡೆಯುತ್ತದೆ. ಮಾತು ಅಭಿವ್ಯಕ್ತಿ ; ಅಭಿವ್ಯಕ್ತಿಯೇ ಅನುಭವ ; ಅನುಭವವೇ ಅನುಭಾವ–ಅರಿವು, ಅರ್ಥ, ಸಾರ್ಥತ್ಯಃ ಅದೇ, ಆ ಸತ್ಯವೇ, ಕಣ್ಣಿಕಿತ್ತ ಹಸು ಕಥೆಗಳು.

ಮಾತು ಹೇಗೆ ಅಭಿವ್ಯಕ್ತಿ, ಅನುಭವ ಎನ್ನುವುದನ್ನು—ಕಣ್ಣಿಕಿತ್ತ ಹಸುವಿನಲ್ಲಿ, ಹಸು ಕಣ್ಣಿಯನ್ನು ಕಿತ್ತುಕೊಂಡ ಕ್ರಿಯೆಯದ್ದು — ಬಂಧನವನ್ನು ಕಿತ್ತೊಗೆದ ಸ್ವತಂತ್ರದ್ದು. ಹಸು ಕಣ್ಣಿಯನ್ನು ಕೀಳಲು ಕಾರಣ, ಅದರ ಕರುಳು, ಕರುಳಿನ ಮಿಡಿತ, ಕೂಗು. ಕರು 'ಅಂಬಾ' ಅಂದಾಗ ಕಟ್ಟಿದ ಕಣ್ಣಿಯನ್ನೂ ಕಿತ್ತು ಕೆಚ್ಚಲಂ ಬಿಗಿಯುತ್ತಿರುವ ಹಾಲನ್ನೂಡಲು ಹಸು ನಾಗಾಲೋಟದಲ್ಲಿ ಧಾವಿಸುತ್ತದೆ. ಹಾಗೆಯೇ ಗರ್ಭಿಣಿಯಾದ ಮಗಳು ಚಳಿಗಾಳಿಗೆ ಬಾಗಿಲಿಗೆ ಬಂದು ಬಾಗಿಲು ತಟ್ಟಿದಾಗ ಅಭಿಮಾನ ಗೌರವಗಳ ಬಂಧನಕ್ಕೆ ಕಟ್ಟುಬಿದ್ದ ತಾಯಿ ಆ ಕಟ್ಟಳೆಗಳನ್ನು ಕಿತ್ತೊಗೆದು ಬಾಗಿಲಿಗೆ ಧಾಪುಗಾಲಲ್ಲಿ ಧಾವಿಸುತ್ತಾಳೆ—ಕರುಳ ಕೂಗಿಗಾಗಿ, ಕರುಳ ನರಳಿಕೆಗಾಗಿ.

ಅಂದರೆ ರೈತ ಬಾಳಿನ ಹೆಣ್ಣುಜೀವ, ದನಕರುಗಳೊಂದಿಗೆ ಹಾಸುಹೊಕ್ಕಾದ ಜೀವ, ನೆಲವನ್ನು ಒಕ್ಕಲು ಮಾಡಿಕೊಂಡೇ ಹೊಟ್ಟೆಹೊರೆಯುವ ನೆಲದಜೀವ ನೆಲಕ್ಕೆ ಮಿಡಿಯುತ್ತದೆ. ಹಾಗೇ ನೆಲಕ್ಕಂಟಿದ ದನಕರುಗಳಿಗೆ ಸ್ಪಂದಿಸುತ್ತದೆ. ಆದ್ದರಿಂದ ಈ ನೆಲಜೀವಿ ಪ್ರಾಣಿಜೀವಿ ಹೆಣ್ಣಿನ ಜೀವನ ಆ ನೆಲ ಆ ಪ್ರಾಣಿ ಜೀವನದ ಮಾಧ್ಯಮ ದಲ್ಲೇ ವ್ಯವಹರಿಸುವ ವಸ್ತು ವಿಶೇಷ, ವ್ಯಾಪಾರ.

ಕಥೆಯ ಭಾಷೆಯೇ ಇದಕ್ಕೆ ಸಾಕ್ಷಿ. ಆ ಭಾಷೆ ವಸ್ತು-ಪ್ರಾಣಿ-ಮಾನವ ರೂಪಕ ಗಳಲ್ಲೇ ವ್ಯವಹರಿಸುವ ವ್ಯಾಪಾರ. ಹಾಗಾಗಿ ಭಾಷೆಯೇ ಬಾಳು, ಬಾಳೇ ಕಥೆ.

ಮುತ್ತಮ್ಮ ನಿಜಕ್ಕೂ ಅಂತಹ ನೈಸರ್ಗಿಕ ಜೀವನದಲ್ಲೆ ಹುಟ್ಟಿಬೆಳೆದು ಬಾಳುತ್ತಿರುವ ನೈಸರ್ಗಿಕ ಜೀವಿ. ಅಂತಹ ಹತ್ತು ಬಾಳುಗಳಲ್ಲಿ ಹರುಳಾಗಿ ಪಕ್ವಗೊಂಡ, ಪಾಕವಾದ, ಮುತ್ತು. ಅಂತಹ ಮುತ್ತಿನಂತಹ, ಜೀವನದ ಪರಿಯೇ ಈ ಕಣ್ಣಕಿತ್ತ ಹಸು. ಹೇಗೆ ಮುತ್ತಮ್ಮ ಈ ಹತ್ತು ಅನುಭವಗಳಲ್ಲಿ ಮುತ್ತಾಗಿ ಹರಳುಗೊಳ್ಳುತ್ತಾಳೆ ಎನ್ನುವದನ್ನು ನಾವು ಕಾಣಬಹುದಾಗಿದೆ.

ಮೊದಲು ಮುತ್ತಮ್ಮ ನಮಗೆ ಕಾಣಿಸಿಕೊಳ್ಳುವುದು 'ಯಜಮಾನಿ'ಯಾಗಿ. ಆ ಯಜಮಾನ್ಯವನ್ನು ಆಕೆ ಯಾವ ಗಂಡಸಿಗೂ ಗಂಡಿಗೂ ಕಡಿಮೆ ಇಲ್ಲದಂತೆ ನಿರ್ವಹಿಸುತ್ತಾಳೆ. "ಊರಿನ ಜನ....ಫೌಜು ಫೌಜಾಗಿ ಬಂದು ಮುತ್ತಮ್ಮನ ಮನೆಯಲ್ಲಿ 'ಅದ್ದು' ಬಿಟ್ಟ"ದೆ, ಮುತ್ತಿಗೆ ಹಾಕಿದೆ. 'ಪುನೆವಾಳ್ತನ'ಕ್ಕೆ ತಂದ ಒಬ್ಬ ದಿಕ್ಕಿಲ್ಲದ ತಬ್ಬಲಿ ಈಗ ಊರಿನ ಬೆಂಬಲದಿಂದ ಅಬ್ಬರಿಸುತ್ತಿದ್ದಾನೆ. ಆದರೆ ಅವನ ಪರಿಸ್ಥಿತಿ ಚಿಂತಾಜನಕ! ಅವನಲ್ಲಿ ಬಲವಿಲ್ಲ. ಬರೀಕುಮ್ಮಕ್ಕಿನಿಂದಲೇ ಹುಲಿಯಾಗಿ ಬಂದಿರುವ 'ಕೋಡಂಗಿ'. ಅವನು 'ಉಬ್ಬಿ'ರಿವುದಾದರೂ ಕೊಬ್ಬಿನಿಂದಲ್ಲ. "ನೀರಿನಲ್ಲಿ ಬಿದ್ದ ಉದ್ದಿನಂತೆ 'ಊದಿ'ಕೊಂಡ" (೨) ಹಾಸ್ಯಾಸ್ಪದದ, ಚಿಂತಾಜನಕ ಅಮಾಯಕ! ಅದಕ್ಕೇ ಯಜಮಾನಿ ಅವನ ಜನ್ಮ ಜಾಲಾಡಿಸುತ್ತಾಳೆ. "ಏನ್‌ಮಾಡೋದು ನೀನು?....ಹುಣಿಸೆಕಾಯಿ ತೊಟ್ನ" ! (೧). ಜನರೂ ಅವನನ್ನು ಹೀಯಾಳಿಸುತ್ತಾರೆ, "ಏನ್ ಮಾಡ್ತಾ ಇದ್ದಿಯೋ, ನಾಮರ್ದ ನನ್‌ಮಗನೆ" (೨).

ಇಲ್ಲಿಂದ ಸುರುವಾಗುತ್ತದೆ, ನಮ್ಮ ಕಣ್ಣಿನ ಮುಂದೆಯೇ, ಮುತ್ತಮ್ಮನ ಹತ್ತು ಭಾವಾವೇಶಗಳ ದಶಾವತಾರ. ಈಗ ಮುತ್ತಮ್ಮ "ಈದ ಹುಲಿಯಂತೆ ನುಗ್ಗಿದಳು—ಕಿಡಿ ಕಿಡಿಯಾಗಿ, ಕೆಂಡದವಲಾಗಿ!" ನೋಡಿ, ಎಷ್ಟು ಸಹಜವಾಗಿದೆ ಈ ರೂಪಕ, ಹಾಗೂ ಎಷ್ಟು ಸೂಕ್ಷ್ಮವೂ ಆಗಿದೆ. ಒಬ್ಬಳೇ ಮಗಳನ್ನು, ಕರುಳನ್ನು, ಕಣ್ಣಾಗಿ ಹೆತ್ತುಹೊತ್ತು, ಸಾಕಿ ಸಲಹಿದ, ಅವಳಿಗಾಗಿಯೇ ಇಡಿಯ ಬಾಳನ್ನೂ ಸವೆಸುತ್ತಿದ್ದ, ವಿಧವೆಯಾಗಿಯೂ ಹೆಣಗುತ್ತಿದ್ದ, ಮುತ್ತಮ್ಮ, ಅಂತಹ ಮಗಳನ್ನು ಅಪಹರಿಸಿಕೊಂಡು ಹೋಗುತ್ತಿರುವ ಬೇವರ್ಸಿ ಅಳಿಯನ ಮೇಲೆ ಮುನ್ನುಗ್ಗುತ್ತಿರುವುದು 'ಈದ ಹುಲಿ'ಯಷ್ಟೇ ಕರುಳಿನ 'ಕಿಚ್ಚಿ'ನದು, 'ಕಿಡಿ ಕಿಡಿ'ಯದ್ದು 'ಕೆಂಡದವಲಿ'ನದ್ದು, ಅಲ್ಲವೇ? ಆದರೆ ಅಂಥ 'ಈದ ಹುಲಿ'ಯ 'ಬೆಂಕಿ'ಯಂತಹ 'ರಕ್ತಚಲನೆ'ಯನ್ನೇ 'ನಿಲ್ಲಿ'ಸಿ ಬಿಡುತ್ತದೆ ಮಗಳ ಮಾತು.

"ಸುಮ್ನಿರಮ್ಮ. ನನ್ ಗಂಡ್ನಿಂದೆ ನಾನ್ ಹೋತೀನಿ...
ಮುಂದೆ ಕೈಹಿಡಿದ ಗಂಡಂತಾನೇ ಹೊರ್ತಾಗಿ ಅಪ್ಪನೂ
ಆಗೋಲ್ಲ, ಅವ್ವನೂ ಆಗೋಲ್ಲ....ಯಾರೂ ಆಗೋಲ್ಲ" (೨)

ಎಂತಹ ನಿಷ್ಠುರವಾದ ಸತ್ಯ ಅದು! 'ಕೈ ಹಿಡಿ'ದವನೇ ತಾನೇ ಈ ಪರಂಪರೆಯಲ್ಲಿ 'ಆಗು'ವವನು? ಉಳಿದ ಕಥೆಗಳೆಲ್ಲಾ ಈ ಸತ್ಯವನ್ನು ಎಷ್ಟು ನಿಷ್ಠುರವಾಗಿ ಸಾರುತ್ತವೆ. ಉದಾಹರಣೆಗೆ ಹೊರಲಾರದ ಹೊರೆ! ಆದರೆ 'ಕರಳು' ಹೀಗೆ ಹೊರಳಿದ್ದು ಮುತ್ತಮ್ಮನಿಗೆ ಸಿಡಿಲು—ಕೈ ಬಿಟ್ಟ ಮಹಾದ್ರೋಹ. 'ಮುತ್ತಮ್ಮನ ರಕ್ತಚಲನೆಯೇ ನಿಂತಂತಾಗಿ' ಆಕೆ "ಕಂಬದಂತೆ ಹಾಗೆಯೇ ನಿಂತುಕೊಂಡಳು. ನಿಶ್ಚೇಷ್ಟಿತಳಾಗಿ."

'ಈದ ಹುಲಿ' ಈಗ 'ಕಂಬ'ದ ಅವತಾರದಲ್ಲಿದೆ. ಸತ್ತಿದೆ. ಮಗಳ ಮಾತು ಅವಳನ್ನು ಕೊಂದಿದೆ. ಆದರೆ ಅವಳ ಸ್ವಾಭಿಮಾನ, ಆತ್ಮಗೌರವ, 'ಅಹಮ್ಮು' ಮಾತ್ರ ಎಚ್ಚರವಾಗಿಯೇ, ಕೆಂಡವಾಗಿಯೇ ಇದೆ. ಕೈಬಿಟ್ಟು ಮಗಳು 'ಹೊರಟು' ಹೋಗುತ್ತಾಳೆ, 'ನೆರೆ'ದ 'ಫೌಜು' ಕಾಲು ಕೀಳುತ್ತದೆ, 'ಕಡೆ'ಯುತ್ತದೆ.

ಈಗ ಮುತ್ತಮ್ಮನ ಮನೆ ಮುತ್ತಮ್ಮನದೇ, ತನ್ನದೇ, ತನ್ನ ಸಾರ್ವಭೌಮತೆಯಲ್ಲಿ; ಅದನ್ನು ಯಾರೂ ಮುತ್ತಲಾರರು. ಆ ಮನೆಯೇ ಈಗ ಅವಳ 'ಕೋಟೆ' ರಕ್ಷಣೆ. ಅದನ್ನು ದೀಢೀರನೆ ಅವಳು ವಶಕ್ಕೆ ತೆಗೆದುಕೊಳ್ಳುತ್ತಾಳೆ. ಬೇರೆಯವರ ದುರಾಕ್ರಮಣದಿಂದ ಕಾಪಾಡಿಕೊಳ್ಳುತ್ತಾಳೆ; ತನ್ನ ಸ್ವಾಮ್ಯವನ್ನು ಸ್ಥಾಪಿಸುತ್ತಾಳೆ:

> ಅವರೆಲ್ಲ ಹೋದ ತಕ್ಷಣ, ಕಂಬದಂತೆ ನಿಂತಿದ್ದ ಮುತ್ತಮ್ಮ ಕವಣೆಯ ಕಲ್ಲಿನಂತೆ ಬಾಗಿಲ ಬಳಿಗೆ ಹೋಗಿ, ಧಡಾರನೆ ಕದವನ್ನು ಮುಚ್ಚಿ, ಅಗಳಿ ಹಾಕಿ, ಹಾಗೆಯೇ ಕದಕ್ಕೆ ಒರಗಿ ನಿಂತಳು.
>
> (೨, ಒತ್ತು ನನ್ನದು)

ಈಗ ನಾವು ಈ ಭಾಗದ ಭಾವ ಸಂಕೀರ್ಣತೆಯನ್ನು ಅನುಭವದ ಸಾಂದ್ರತೆ ವೈವಿಧ್ಯತೆಯನ್ನು ಗಮನಿಸಬೇಕು. 'ಈದ ಹುಲಿ'. 'ಕಂಬ'ವಾಗಿ, ಮತ್ತೆ 'ತಕ್ಷಣ'ದಲ್ಲಿ ಮಿಂಚಿನಂತಹ ಚೈತನ್ಯದಲ್ಲಿ 'ಕವಣೆ ಕಲ್ಲಾ'ಗಿ ಬೀಸಾಗುತ್ತಾಳೆ. ತನ್ನ 'ಯಜಮಾನ್ಯ'ದ ಕೆಚ್ಚಿನಲ್ಲಿ ಆದರೆ ಇದರಲ್ಲಿನ ಟ್ರಾಜಿಡಿಯೇನಂದರೆ ಅಂತಹ ಮಹಾ ಚೈತನ್ಯದ ಹೆಣ್ಣು, 'ಹೆಣ್ಣು'—ನಿಸ್ಸಹಾಯಕಿ, ಪರಾವಲಂಬಿ, ಗಂಡಸತ್ತ ಮುಂಡೆ, ಹೆಣ್ಣೆಂಗುಸ್ಸ. ಅದಕ್ಕೇ ಅಂತಹ ಸಿಡಿಲಿನಂತಹ ಕ್ರಿಯೆಯ ನೆರಳಿನಲ್ಲೇ ಮುತ್ತಮ್ಮ ಆಡಿಕೊಳ್ಳುತ್ತಾಳೆ-'ತಾನೇ ದಢಾರನೆ ಹಾಕಿದ ದಿಡ್ಡೀ ಬಾಗಿಲಿಗೆ, ಅಗಳಿ ಹಾಕಿದ ಕೋಟೆ ಬಾಗಿಲಿಗೆ ತಾನೇ ಆತುಕೊಳ್ಳುತ್ತಾಳೆ—' 'ಹಾಗೆಯೇ ಕದಕ್ಕೆ ಒರಗಿ ನಿಂತುಕೊಳ್ಳು'ತ್ತಾಳೆ!

ಅದೀಗ ಟ್ರಾಜಿಡಿ. ಕೋಟೆ ಕೊತ್ತಲವೇನೋ ತನ್ನದೇ, ಆದರೆ ಸ್ವಾಮ್ಯ ಸ್ಥಾಪನೆ, ಯಜಮಾನಿಕೆ, ನಡೆಸಿಕೊಂಡು ಹೋಗುವಿಕೆ, ಜವಾಬ್ದಾರಿ, ಧಾರಣೆ? ನೋಡಿ' ತನ್ನ ಕರುಳುಬಳ್ಳಿ ತಮ್ಮ ಗಂಡು "'ಶಸ್ತ್ರವನ್ನು ನೆಲಕ್ಕೆ ಹಾಕಿ', ತಲೆಯ ಮೇಲೆ ಕೈ ಹೊತ್ತಿ"ದ್ದಾನೆ. ಇನ್ನು ಅವಳ ಗತಿಯೇನು? ಅವಳ ದಿಕ್ಕು ಯಾರು. ಗಂಡನನ್ನು ನೆನೆಯುತ್ತಾಳೆ. ಕೈಬಿಟ್ಟು, ಅನಾಥಳನ್ನಾಗಿ ಮಾಡಿ ಹೋದವನನ್ನು, ತನ್ನ ಅನಾಥ ಬಾಳನ್ನು ನೆನೆಯುತ್ತಾಳೆ. ಅದೀಗ ಅವಳ

ದುರಂತ— ತಾನೇ ಹಾಕಿದ ದಿಡ್ಡೀಬಾಗಿಲಿಗೆ ತಾನೇ ಆಶ್ರಯಕ್ಕೆ ಒರಗಿದಾಗ, ಮುತ್ತಮ್ಮ ತಾನು ಹಾಕಿದ ಕೋಟೆ ಬಾಗಿಲಿಗೆ ತಾನು ತನ್ನ ಹೆಗಲು ಕೊಟ್ಟಾಳೇ? ಬೆನ್ನುಕೊಟ್ಟು ರಕ್ಷಿಸಿಕೊಂಡಾಳೇ? ಇಲ್ಲ—ಅದಕ್ಕೆ ನಿಸ್ಸಹಾಕಳಾಗಿ ಒರಗಿಕೊಂಡಳು ಮಾತ್ರ.

ಈ ಒರಗಿಕೊಂಡ ಅವಸ್ಥೆಯೇ ಮುಂದುವರಿಯುವ ಕಥೆಯ ವಸ್ತು. ಮುತ್ತಮ್ಮ ಮಲಗುತ್ತಾಳೆ ಮಾತ್ರ; ನಿದ್ದೆ, ಶಾಂತೀ ಬಂದೀತೇ, ಅವಳ ಪಾಲಿಗೆ. ಅತ್ತ ಇತ್ತ ಮಗ್ಗುಲಾಗುತ್ತಾಳೆ, ತಳಮಳ ಹೊರಳಾಡುತ್ತಾಳೆ. ಹಾಸಿಗೆ ಶರಶಯ್ಯೆ ಆಗುತ್ತದೆ ಅವಳ ಪಾಲಿಗೆ. ಹಲುಬುತ್ತಾಳೆ– 'ಗಂಡ ಮೂಲೇಲಿ ಉಸಿರಾಡಿಕೊಂಡು ಮಲಗಿದ್ರೆ ....ಹಿಂಗಾತಿತ್ತ?' ಅದರ ದಾರುಣತೆ ಗಮನಿಸಬೇಕು; ಗಂಡು, ಮೂಲೇಲಿ, ಬರೀ ಉಸಿರಾಡಿಕೊಂಡಷ್ಟೇ ಮಲಗಿದ ಹೆಣವಾಗಿದ್ದರೆ ಸಾಕಿತ್ತು! ಎಂತಹ ವ್ಯವಸ್ಥೆ! ಯಜಮಾನಿಯಾಗಿ ಈದ ಹುಲಿಯು ರೋಷದವಳಾದ. ಚೈತನ್ಯಮಯಿಯಾದ ಮುತ್ತಮ್ಮ ಹೆಣ್ಣು ಮಾತ್ರ! ಆ ಸಿಡಿಲು ಹೆಣ್ಣಾಗಿದ್ದುದರಿಂದ ಗಂಡಾಗಿರುವ ಮೂಲೆಲಿ ಬಿದ್ದಿದ್ದ, ಮಲಗಿದ್ದ, ಉಸಿರಾಡುವ 'ಹೆಣ'ಕ್ಕಿಂತಲೂ ಕಡೆ!

ಇನ್ನು ಮುತ್ತಮ್ಮನ 'ಹೊರಳಾಟ' ವೇ ಅವಳ ನರಳಾಟ. ಆ ನರಳಾಟದಲ್ಲಿ ಆ ದುಃಖದಲ್ಲಿ, ಆ ಬೇಗೆಯಲ್ಲಿ ಅವಳಿಗೆ ಕರುಳಿನ ತುಯ್ತ ತುಡಿಯಲಾರಂಭಿಸುತ್ತದೆ. ಆಗ ಆ ಈದ ಹುಲಿ ಕ್ರಮೇಣ ಹಸುವಾಗಿ, ಕರುಳಾಗಿ, ಕಣ್ಣೆ ಕಿತ್ತುಕೊಳ್ಳುತ್ತದೆ.

ಮುತ್ತಮ್ಮನಿಗೆ ಜ್ಞಾನೋದಯವಾಗುತ್ತದೆ, ಅವಳು ತನ್ನ ದುಡುಕನ್ನ ಅರ್ಥ ಮಾಡಿಕೊಳ್ಳುತ್ತಾಳೆ. ಈ ಹಸುವಿನ ಹಾಲಿನಲ್ಲಿ ಗಿಣ್ಣಮಾಡಿ, ಪ್ರೀತಿಯಿಂದ ತನ್ನಲ್ಲಿಗೆ ಕರೆಸಿಕೊಂಡ, ಉಣ್ಣಸಬೇಕಾಗಿದ್ದ ತಮ್ಮನಿಗೆ, ರೋಷದಲ್ಲಿ ಆಡಿದ ಆಡಬಾರದ ಮಾತಿನ ಬಗ್ಗೆ ಹಲುಬುತ್ತಾಳೆ.

ಈ ವಾಕ್ಯಗಳನ್ನು ಗಮನಿಸಬೇಕು :

> ಮುತ್ತಮ್ಮನಿಗೆ ದುಃಖ ಉಕ್ಕಳಿಸಿ ಮಗ್ಗುಲಾದಳು. ಅದೇ ಸಮಯಕ್ಕೆ ಸರಿಯಾಗಿ, ಪಡಸಾಲೆಯ ಇನ್ನೊಂದು ಪಕ್ಕದಲ್ಲಿ ಮಲಗಿದ್ದ ಲಿಂಗಪ್ಪ ನಿಟ್ಟುಸಿರು ಬಿಟ್ಟು ಮತ್ತೊಂದು ಕಡೆ ಹೊರಳಿದ್ದನ್ನು ಕಂಡು, ಮುತ್ತಮ್ಮನ ವಿಚಾರ ಲಹರಿ ಮತ್ತೊಂದು ಕಡೆಗೆ ಹರಿಯಿತು (೭).
>
> ಮುತ್ತಮ್ಮನಿಗೆ ಖಂಡುಗ ದುಃಖವಾಯಿತು. ಮತ್ತೊಂದು ಕಡೆ ಹೊರಳಿದಳು (೭).
>
> ....ಕುಳಿರ್ಗಾಳಿ ಸುಯ್ಯೆಂದು ಬೀಸಿತು. ವಯಸ್ಸಿನಿಂದ ಆಗಲೇ ಜಗ್ಗಿ ಹೋದ ಮುತ್ತಮ್ಮನ ದೇಹ 'ಗಡಗಡ'ನೆ ನಡುಗಿ ಹಲ್ಲುಗಳು ಒಂದಕ್ಕೊಂದು ತಾಟುಯ್ದುವು. ಥೂ ಕದದ ಕಂಡಿಗೆ ಕಂಬಳಿ ಕೋರಿಯನ್ನು ಪಟ್ಟಾಗಿ ಗಿಡಿಕಿದ್ದರೂ ಎಲ್ಲಿಂದ ಬರ್ತಾಅದೋ ಹಾಳು ಗಾಳಿ– ಎಂದುಕೊಂಡ

ಮುತ್ತಮ್ಮ ಕೈ ಕಾಲುಗಳನ್ನು ಹೊಟ್ಟೆಯಬಳಿಗೆ ಗುಡ್ಡಿಗೆ ತಂದುಕೊಂಡು, ಕಂಬಳಿಯನ್ನು ಮೇಲೆಳೆದುಕೊಂಡಾಗ, ನೆನಪಾಯಿತು.......

ಹೊದೆಯೋಕಿಲ್ಲ, ಹಾಸಾಕಿಲ್ಲ; ಚಳೀಲಿ ಎಲ್ಲಿ ನಡುಗ್ತಾ ಅವಳೋ, ಬಸಿರು ಹೆಂಗಸು.......ಪಾಪಿ. 'ಬವಸಿ' ಮಾಡಿದ ಗಿಣ್ಣನ್ನ ತಿನ್ನೋಕೆ ಪುಣ್ಯ ಇರಲಿಲ್ಲ. ಬರೀ ಹೊಟ್ಟೇಲೇ ಹೊಂಟೋದ್ಲು !

.... ಮುತ್ತಮ್ಮನ ಹೆತ್ತ ಕರುಳು ಮಿಡಿದ ಕಂಬನಿ ಕೆನ್ನೆಯ ಮೇಲಿಳಿದು, ಬಂದಾಗಿಂದಿದ್ದಾಳೇನೋ ಕದ ತೆಗೆದು ನೋಡಬೇಕು ಎಂದು ಮೇಲೇಳುತ್ತಿದ್ದ ಹಾಗೆಯೇ,

"ಅವ್ವ .... ಬಾಗಿಲು ತೆಗೆವ್ವ" ಎಂದು ಮಗಳೇ ಕೂಗಿದಾಗ, ಮುತ್ತಮ್ಮನನ್ನು ಯಾವುದೋ ಛಲ ನೆಲಕ್ಕೆ ಜಗ್ಗಿತು– ಉಕ್ಕೇರಿದ ಕರುಳ ತುಡಿತವನ್ನು ಹತ್ತಿಕ್ಕಿ (೧೦).

.... ಮುತ್ತಮ್ಮ ಮಗ್ಗುಲಾದಳು. ಕರು ಮತ್ತೆ ಅಂಬಾ ಎಂದಿತು (೧೧).

......ಎಳಗಂದಿ, ನಾಲ್ಕು ಮೊಲೆಗೂ ಹಾಲಿಳಿದುಕೊಂಡು 'ಬಿಗಿ' ಯುತ್ತಿರಬಹುದು; ಆ 'ಬಿಗಿತ' ವನ್ನು ತಾಳಲಾರದೆ ಆ ತರ ತುಟುಯ್ತಾ ಅದೆ, ಏನ್ ಮಾಡೋದು ? – ಎಂದುಕೊಂಡು ಮುತ್ತಮ್ಮ, ಪಕ್ಕಕ್ಕೆ ಹೊರಳಿದಳು. .... ಮತ್ತೊಮ್ಮೆ, ಇನ್ನೊಂದು ಮಗ್ಗುಲಾದಳು (೧೨)

ಮಲಗಿದ್ದ ಆ ಹಸು ನಾಲ್ಕು ಕಾಲುಗಳನ್ನೂ ಚಾಚಿ ಕತ್ತನ್ನು ಹಿಂದಕ್ಕೆ ನೀಡಿ ನಿಡಿದಾದ ಉಸುರು ಬಿಟ್ಟಿತು (೧೨).

ಮುತ್ತಮ್ಮ, ಮತ್ತೊಂದು ಕಡೆ ಮಗ್ಗುಲಾದಳು (೧೨).

ಇದೀಗ ನೋವಿನ ಶರಶಯ್ಯೆಯ ಮೇಲೆ ನಡೆಯುವ ಹೊರಳಾಟದ ನರಳಾಟದ ಧಾರುಣ ಅಭಿವ್ಯಕ್ತಿ – ಅಭಿನಯಿಸಿದ ಅನುಭವ ತಾಯ್ತನದ ಕರುಳ ತುಯ್ತವನ್ನು, ಕರುಳು ಕೀಳುವ ನೋವನ್ನು, ಕಣ್ಣು ಕಟ್ಟಿಸುವ ರೂಪಕ ವ್ಯಂಜನ, ಪ್ರತಿಮಾ ವ್ಯವಹರಣ. ಆದ್ದರಿಂದಲೇ ಈ ಕಥೆ ಒಂದು ಅನನ್ಯ ರೀತಿಯ ಧಾರುಣ ಸಾಂದ್ರತೆ ಯನ್ನೂ ಟ್ರಾಜಿಕ್ ಸಂಕೀರ್ಣತೆಯನ್ನು ಪಡೆದುಕೊಳ್ಳುತ್ತದೆ.

ನೋಡಿ. ಇಲ್ಲಿ ಮುತ್ತಮ್ಮ ಮಲಗ್ತಿದ್ದಾಳೆ ; ಮುತ್ತಮ್ಮನ ಕರುಳ ಬಳ್ಳಿ, ತಮ್ಮ, ಮಲಗಿದ್ದಾನೆ; ಕೊಟ್ಟಿಗೆಯ ಈದ ಹಸು ಮಲಗಿದೆ. ಈ ಮಲಗಿದವರೆಲ್ಲರೂ ತಹತಹಪಡುತ್ತಿದ್ದಾರೆ, ನೋವಿನಲ್ಲಿ ಹೊರಳಾಡುತ್ತಿದ್ದಾರೆ. ಹಾಗೂ ಮಲಗಲು ನರಳುತ್ತಿರುವ ಮಗಳ ಚಿತ್ರವೂ ಮಲಗುವಿಕೆಯನ್ನೇ ಕುರಿತದ್ದಿದೆ:

'ಚಳಿಯಾತದ ಹೊದಿಯೋಕೆ ಕೊಡಿ'
'ನಿಂತ್ಕೊಳ್ಳಲಾರೆ, ನಿದ್ದೆ ಬತ್ತದೆ–ನಿಮ್ಮನೆ ತೋರ್ಸಿ' (೫)

ಹೀಗೆ ಈ ಕರುಳುಗಳ ತೆಕ್ಕೆ ತಿಕ್ಕಾಟಗಳನ್ನು, ಹೊರಳಾಟದ ನೋವನ್ನು ಮಲಗು ರೂಪಕ ಎಷ್ಟು ಕಲಾತ್ಮಕವಾಗಿ, ಕಲ್ಪನಾ ವೈವಿಧ್ಯತೆ, ವೈಶಿಷ್ಟ್ಯಗಳಲ್ಲಿ ಅತ್ಯಂತ ಮನಮುಟ್ಟುವಂತೆ ನಮ್ಮ ಕಣ್ಣಮುಂದೆ ಸಾಕ್ಷಾತ್ಕರಿಸುತ್ತಿದೆ ಎಂಬುದನ್ನು ನಾವು ಗ್ರಹಿಸಬೇಕು.

ಹಾಗೆಯೇ ಈ ಹೊರಳಾಟದ ನರಳಾಟಕ್ಕೆ ಬಿಡುಗಡೆಯನ್ನು ತೋರುವುದು ಬಿಡುಗಡೆಯನ್ನೆ ಅಭಿನಯಿಸಿ ಸಾಕ್ಷಾತ್ಕರಿಸಿ ಕೊಡುವುದು ನಿಸರ್ಗವೇ– ನಿಸರ್ಗದ ಸಂಕೇತವಾದ ಹಸುವೇ. ಅದು ಮಾನವನ ಕೃತಕ ಕಟ್ಟಳೆಯನ್ನು ಬಂಧನವನ್ನು ಕಿತ್ತು ಕರುವಿನ ಆಕ್ರಂದನಕ್ಕೆ ಕರುವಿನ ಹಸಿವಿನ ತುಡಿತಕ್ಕೆ, ಕರುಳಿನ ಮಿಡಿತಕ್ಕೆ ತಾನೆ 'ಅಂಬಾ' ಎಂದು 'ಅಮ್ಮ' ಆಗಿ, 'ಅವ್ವ' ಆಗಿ ಧಾವಿಸುತ್ತಾಳೆ, ಆಕ್ಷಣ ದಲ್ಲೇ ಮುತ್ತಮ್ಮ 'ಅಂಬಾ' ಆಗಿ, ಅವ್ವ ಆಗಿ ತನ್ನ ಅಭಿಮಾನ–ಬಿಗುಮಾನಗಳ ಕಣ್ಣೆ ಕಿತ್ತುಕೊಂಡು ಮಗಳನತ್ತ, ಕರುಳಿನತ್ತ ಧಾವಿಸುತ್ತಾಳೆ: ಮಲಗಿದವಳು, ಎದ್ದು ಓಡಿ ಬರುತ್ತಾಳೆ– ಮಗಳನ್ನು ತಬ್ಬಲು: ಕರಳನ್ನು ಕರುಳಿಗೆ ಹಚ್ಚಿಕೊಳ್ಳಲು 'ಧಾವಿಸು'ತ್ತಾಳೆ, 'ಹರಿಯು'ತ್ತಾಳೆ– ಪ್ರೇಮದಲ್ಲಿ.

ಈ ಕಥೆಯಂತೆಯೇ ಉಳಿದ ಕಥೆಗಳೂ. ಮುಖ್ಯವಾಗಿ 'ಸಾಕಿದನಾಯಿ' 'ಹೊರ ಲಾರದ ಹೊರೆ', 'ನಿಸರ್ಗದ ವ್ಯವಹಾರಗಳು'–ಅವುಗಳ ಶೀರ್ಷಿಕೆಗಳೇ ಸೂಚಿಸುವಂತೆ, 'ಕಣ್ಣೆಕಿತ್ತ ಹಸು' ಮಗಳ ತಾಯಿಯನ್ನು ಕಟ್ಟಳೆ ಕಿತ್ತೋಗುವಂತೆ ಮಾಡಿದರೆ, 'ಸಾಕಿದನಾಯಿ' ತನ್ನ ಪ್ರೇಮದ ಕೃತಘ್ನತೆಯ, ಬಂಧವನ್ನು ಸಾರಿ ಹೇಗೆ ಮಾನವನ ಕೃತಘ್ನತೆ ಇಂತಹ ನೈಸರ್ಗಿಕ ಬಾಳಿಗೆ ಹೊರತಾದುದು–ಅನೈಸರ್ಗಿಕವಾದದ್ದು, ಮಾರಕವಾದದ್ದು ಎನ್ನುವುದನ್ನು ಅಭಿನಯಿಸುತ್ತದೆ. 'ಹೊರಲಾರದ ಹೊರೆ'. ಗಂಡನಿಂದ ಬಿಡಲ್ಪಟ್ಟ ಹೆಂಡತಿ ಹೇಗೆ ತನ್ನ ಹಂಗಿನ, ಅವಲಂಬಿತ ಜೀವನವನ್ನು ಭರಿಸಲಾರಳು, 'ಕೈಹಿಡಿದ ಗಂಡನೇ' ಹೇಗೆ ಆ ಹೊರೆಯನ್ನು, ಭಾರವನ್ನು ತಪ್ಪಿಸು ವವನು ಎನ್ನುವುದನ್ನು ಅನುಭವ ಪಡಿಸುತ್ತದೆ. ಆ ಭಾರವಿಳಿದ ಬಿಡುಗಡೆ, ಆ ಹಿಂಸೆಯ ಪರಿಹಾರ, ಆ ಪ್ರೇಮದ ಅನುಬಂಧ, ಸಾಂತ್ವನ ಎಷ್ಟು ಆತ್ಮೀಯ ವಾದದ್ದು, ಎದೆಮುಟ್ಟಿ ನೀರು ಹರಿಸುವಂತಾದ್ದು ಎನ್ನುವುದಕ್ಕೆ ಆ ಕಥೆಯ ಮುಕ್ತಾಯ ಸಾಕ್ಷಿಯಾಗಿದೆ ;

> ಪುಟ್ಟಮ್ಮ ಏನೂ ಹೇಳಲಿಲ್ಲ, ತಾನು ಹೊತ್ತುಕೊಂಡಿದ್ದ ಹೊರ ಲಾರದ ಹೊರೆಯನ್ನು ಗಂಡ ಹೊತ್ತುಕೊಂಡಾಗ ಪುಟ್ಟಮ್ಮನಿಗೆ ಉಸಿರಾಡುವಂತಾಯಿತು ! ನಿಡಿದಾಗಿ ಉಸಿರುಬಿಟ್ಟಳು. ಢಣ್...ಢಣ್.... ಢಣ್....

ಪುಟ್ಟಮ್ಮ ಶಬ್ದ ಬಂದಕಡೆ ತಿರುಗಿ ನೋಡಿದಳು. ಪೂಜೆ ನಡೆಯು-
ತ್ತಿದ್ದ ಊರಿನ ರಂಗನಾಥನ ಗುಡಿಯಗೋಪುರ ಮುಗಿಲುದ್ದ ನಿಂತಿತ್ತು!
ಟಪ್ ಟಪ್ ಎಂದು ಬೀಳತೊಡಗಿದ ಮಳೆಯ ಹನಿಯ ಜೊತೆಯಲ್ಲೇ
ಅವಳ ಕಣ್ಣಿಂದಲೂ ಎರಡುಹನಿ ಕೆಳಗುರುಳಿದುವು. ಮಳೆಯ ಹನಿ
ಮೈಮೇಲೆ ಬಿದ್ದಾಗ ಕಡಸು ಚಂಗನೆ ನೆಗೆದು ಕುಣಿದು ಕುಪ್ಪಳಿಸ
ತೊಡಗಿತಂ! ಆದಕ್ಕನುಗುಣವಾಗಿ ಪುಟ್ಟಮ್ಮನ ನಡಿಗೆಗೂ ಹೊಸಚೈತನ್ಯ
ಮೂಡಿತ್ತು.

ಇದೀಗ ಅನಾಯಾಸವಾಗಿ, ನೈಸರ್ಗಿಕವಾಗಿ, ನಿಸರ್ಗದಷ್ಟೇ ಸರಳವಾಗಿ ಸುಸೂತ್ರವಾಗಿ ನಡೆಯುವ, ಮಾನವನ ಬಾಳೆಂಬ ನೈಸರ್ಗಿಕ ವ್ಯಾಪಾರ. 'ಮಳೆ' ನಾವು ತಿಳಿದಂತೆ ಸೃಷ್ಟಿಯ ಬೆಳವಣಿಗೆಯ fertilityಯ ಸಂಕೇತ. ಆ ಮಳೆ ಹನಿಗೆ ಕಡಸ ಪುಟಿಯುತ್ತದೆ. ಆ ಹನಿಗೆ ಪುಟ್ಟಮ್ಮ ಪುಳಕಗೊಳ್ಳುತ್ತಾಳೆ. ತಾನು ಮಳೆ ಹನಿಯುತ್ತಾಳೆ. ಕಣ್ಣಿನ ಹಿಗ್ಗಿನ ಹರಿವಿನಲ್ಲಿ, ಆನಂದ ಭಾಷ್ಪದಲ್ಲಿ.

ಆ ಆನಂದಕ್ಕೆ ಒಂದು ದೈವಿಕತೆ ಸೇರುತ್ತದೆ. ಗುಡಿಯಗಂಟೆ ಢಣ್ ಎನ್ನು ತ್ತದೆ. ಹಿಗ್ಗು 'ಗೋಪುರ'ವಾಗಿ ಮುಗಿಲು ಮುಟ್ಟುತ್ತದೆ. ಮುಗಿಲ ಹನಿ ಮಳೆ ಯಾಗಿ ಭೂಮಿಗೆ 'ಅವತಾರ' (–ಕೆಳಗೆ ಬೀಳು)ವಾದರೆ ನೆಲಕ್ಕೆ ಬಿದ್ದ ಆನಂದದ ಕಂಬನಿ ಮುಗಿಲಿಗೆ 'ಅತಾರ' (–ಮೇಲಕ್ಕೇರು)ವಾಗುತ್ತದೆ. ಗೋಪುರವಾಗಿ ಮುಗಿಲು ಮುಟ್ಟುತ್ತದೆ.

ಕಣ್ಣಕಿತ್ತಹಸು ಒಂದು ಅನನ್ಯ ಕಾವ್ಯಸಾಧನೆ. ಆಡುಮಾತಿನಲ್ಲೇ ನಡೆದ ಮಾತಿನ ಆಡು, ಆಟ, ಕಲಾ ಲೀಲೆ. ಅದು ಬಾಳಿನ ಸಂಗತಿಗಳ ಸಾಂಗತ್ಯ ಮುಗ್ಧ ರೈತರ, ಅನಕ್ಷರಸ್ಥ ಅಮಾಯಕರ, ನಿಸರ್ಗದೊಡನೆ, ದನಕರುಗಳೊಡನೆ, ಮರಗಿಡ ಗಳೊಡನೆ. ತಮ್ಮ ಜೀವನವನ್ನು ಹಾಸುಹೊಕ್ಕಾಗಿಸಿಕೊಂಡ ಅನಾಮಧೇಯ ಜೀವಂತರುಗಳು. ಜೀವಿಗಳ, ಜೀವನದ ಸಂಗಾತಿಗಳ ಪರಸ್ಪರ ಜೀವಂತ ಸಂಗತಿಗಳ ಮೆಲುದನಿಯ ಸಾಂಗತ್ಯವೇ ಕಣ್ಣಕಿತ್ತಹಸು ಕಥಾ ಕಾವ್ಯ.

ಯಾವಾಗಲೂ ಹಿತ್ತಲಗಿಡ ಮದ್ದಲ್ಲ, ನಾವು ಸಿಂಗ್ ನಂತಹ ಕಲಾವಿದನನ್ನು ಕಂಡು ಮೆಚ್ಚಿಕೊಳ್ಳುತ್ತೇವೆ. ಕೇವಲ ನಾಲ್ಕೈದು ನಾಟಕಗಳ ಪರಿಶ್ರಮ ಅವನನ್ನು ಹೇಗೆ ಜಗದ್ವಿಖ್ಯಾತನನ್ನಾಗಿ ಮಾಡಿತು ಎಂದು ತಲೆದೂಗುತ್ತೇವೆ. ಆದರೆ ನಮ್ಮಲ್ಲಿ, ಜಾನಪದದಲ್ಲಿ, ಜಾನಪದವಾಗಿಯೇ ಸೃಷ್ಟಿಸಿದ ಒಂದು ಕಲಾವಿಶೇಷಕ್ಕೆ ನಾವು ಕುರುಡರಾಗುತ್ತೇವೆ. ನಿಜಕ್ಕೂ ಹೇಳುವುದಾದರೆ, ಏರನ್ ದ್ವೀಪದ ಜನರ ಭಾಷೆಗಿಂತಲೂ ನಮ್ಮ ಹಳ್ಳಿಗಾಡಿನವರ ಆಡುಮಾತಿನ ಜನಪದ, ಗಾದೆ ಒಗಟುಗಳ, ಜಾಣ್ನುಡಿ ನಾಣ್ನುಡಿ ಎಷ್ಟೋ ಮಿಗಿಲಾದ ನೈಸರ್ಗಿಕ ಸಂಪತ್ತಿನಿಂದ ಕೂಡಿದ, ನಿಸರ್ಗದ ರೂಪಕಗಳಿಂದ ಕಿಕ್ಕಿರಿದ ಚಿನ್ನದಗಣಿ – ಏಕೆಂದರೆ ಇದು ಸಾವಿರಾರು ವರ್ಷಗಳಿಂದ

ಅನುಭವದ ಮೂಸೆಯಲ್ಲಿ ಭಟ್ಟಿ ಇಳಿದ ಭಾಷೆಯು ಮುತ್ತು ರತ್ನಗಳ ಭಂಡಾರ. ಯಾವುದೇ ಒಂದು ಪುಟವನ್ನು ಓದಿದಾಗ, ಆ ಪುಟ ಚಿತ್ರಿಸುವ ದನಕರು ಮರಗಿಡ ನೆಲಮುಗಿಲುಗಳ ಮಾನವ ಚಿತ್ರಣ ಅದ್ಭುತವಾದ ಒಂದೊಂದು ವಿಶ್ವರೂಪವೇಸರಿ.

ಈ ಆಡುಮಾತಿನಿಂದಲೇ ಈ ಜನದ ಜಾನಪದದಿಂದಲೇ ಹಳ್ಳಿಯ ಜನರ ಅನಾಮಧೇಯ ಬಾಳು ಉಸಿರಾಡುತ್ತಿದೆ. ಅನ್ನ ನೀರಿನಂತೆ ಮಾನವನಿಗೆ ಭಾಷೆ, ಆಡುಮಾತು, ಪ್ರೇಮ ಅನುಕಂಪ ದಯೆಗಳ ಸ್ನೇಹಾನುರಾಗಗಳ, ಅನ್ನನೀರು. ಮಾನವನು ಕೇವಲ ಅನ್ನನೀರಿನಿಂದಲೇ ಬದುಕುವುದಿಲ್ಲ ; ಅವನಿಗೆ ಮಾತು ಬೇಕು. ಜಾನಪದ ಬೇಕು; ಭಾವ, ಅನುಭವ ಬೇಕು; ನಗುಬೇಕು, ಅಳು ಬೇಕು, ಅಳುಬೇಕು. ಆ ನಗು ಅಳು, ಭಾವ ಅನುಭವ, ಅದೇ ಭಾಷೆಯ ಅಭಿವ್ಯಕ್ತಿ, ಈ ಸರಳವಾದ ಮತ್ತು ಅಷ್ಟೇ ಅದ್ಭುತವೂ ಆದ, ಸತ್ಯವನ್ನು ಸಾಕ್ಷಾತ್ಕರಿಸುವ ಪರಿಶ್ರಮ ಸುಧಾಕರರ ಕಣ್ಣಿಕಿತ್ತಹಸು ಕಥಾಸಂಕಲನ 'ಕಣ್ಣಿಕಿತ್ತಹಸು' ಆಡುಮಾತಿನ ಮಾತಾಡುವ ಕಾವ್ಯ.

ಸೇವನಮಿರಾಜ ಮಲ್ಲರ 'ಭೂತಾರಾಧನೆಯ ಕತೆಗಳು'

'ನಾ' ಮೊಗಸಾಲೆ

ಕರ್ನಾಟಕದ ಕರಾವಳಿ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲಿ ಹಾಗೂ ಕಾಸರಗೋಡಿನಲ್ಲಿ ಚಂದ್ರಗಿರಿವರೆಗಿನ ತುಳುಭಾಷೆಯನ್ನಾಡುವ ಪ್ರದೇಶವನ್ನು ತುಳುನಾಡು ಎಂದು ಕರೆಯುವುದುಂಟು. ಈ ಪ್ರದೇಶದ ಜನಜೀವನದಲ್ಲಿ ಆಳವಾಗಿ ಪ್ರಭಾವ ಬೀರಿರುವ ಸಾಂಸ್ಕೃತಿಕ ತಥ್ಯಗಳಲ್ಲಿ ಭೂತಾರಾಧನೆಯೂ ಒಂದು. ಇಲ್ಲಿನ ಜನರ ಪಾಲಿಗೆ ದೇವರ ಮೇಲಿನ ಭಕ್ತಿಗಿಂತಲೂ ಭೂತಗಳ ಮೇಲಿನ ನಂಬಿಕೆ ಹಿರಿದಾದುದು. ಏಕೆಂದರೆ ಭೂತಗಳು ಜನರನ್ನು ಕಾಡಿಯಾದರೂ ಸೇವೆಯನ್ನು ಮಾಡಿಸಿಕೊಳ್ಳುತ್ತವೆ ಎಂಬ ವಿಶ್ವಾಸ ಜನರಲ್ಲಿದೆ. ಇಲ್ಲಿ ಭೂತಗಳನ್ನು ನಂಬದ ಹಳೆಯ ಮನೆಗಳಾಗಲೀ ಹಳೆಯ ಜನರಾಗಲೀ ಇಲ್ಲವೇ ಇಲ್ಲ ಎಂದರೆ ತಪ್ಪಾಗದು.

ಇಂತಹ ಒಂದು ವಿಶಿಷ್ಟ ಸ್ವರೂಪವನ್ನು ಹೊಂದಿರುವ ಪ್ರದೇಶದ ಜನಜೀವನದ ಮೂಲಸತ್ವವನ್ನೂ ಪ್ರಾದೇಶಿಕ ಸಂಸ್ಕೃತಿಯ ಒಳಪದರಗಳನ್ನೂ ಅರ್ಥೈಸಿಕೊಳ್ಳುವ ದೃಷ್ಟಿಯಿಂದ ಇಲ್ಲಿನ ಜನಪದ ಸಾಹಿತ್ಯಕ್ಕೆ ವಿಶೇಷ ಸ್ಥಾನವಿದೆ. ತುಳುನಾಡಿನ ತುಳುಭಾಷೆಯ ಸಾಗರದ ತಡಿಯಿಂದ ಅಮೂಲ್ಯ ಮುತ್ತು ರತ್ನಗಳನ್ನು ಆರಿಸುವ ಸಂಶೋಧನ ಕಾರ್ಯವನ್ನು ಹಿಂದೆ ವಿದೇಶೀ

ಕ್ರೈಸ್ತ ಧರ್ಮಗುರುಗಳು ಮಾಡಿದ್ದರೆ, ಇಂದಿಗೆ ಮಂಗಳೂರು ವಿಶ್ವವಿದ್ಯಾಲಯ ಸ್ಥಾಪನೆಯಾದ ಬಳಿಕ ಸ್ಥಳೀಯ ವಿದ್ವಾಂಸರೂ ವಿದೇಶಗಳಿಂದ ಆಗಮಿಸಿದ ಸಂಶೋಧಕರೂ ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಆಶ್ರಯದಲ್ಲೂ ಇಂತಹ ವಿಶಿಷ್ಟ ಸಂಶೋಧನ ಪ್ರಯತ್ನಗಳಿಗೆ ಪ್ರೋತ್ಸಾಹ-ಬೆಂಬಲ ದೊರೆಯುತ್ತಿದೆ.

ಯಾವುದೇ ಸಂಶೋಧನೆಯ ಪಾಂಡಿತ್ಯ ಪ್ರದರ್ಶನದ ಆಕರ್ಷಣೆಯಿಲ್ಲದೆ ಕೇವಲ ಕುತೂಹಲಾಸಕ್ತಿಗಳಿಂದ 'ಭೂತಾರಾಧನೆ'ಯ ಕ್ಷೇತ್ರಕ್ಕೆ ಪ್ರವೇಶ ಮಾಡಿರುವ ಶೇವನಮಿರಾಜ ಮಲ್ಲರು ಮೂಲತಃ ಕಾನೂನಿನ ಕ್ಷೇತ್ರದಲ್ಲಿ ಪಳಗಿದವರು. ನ್ಯಾಯವಾದಿಯಾಗಿ, ನ್ಯಾಯಾಧೀಶರಾಗಿ ಕರ್ನಾಟಕದ ನ್ಯಾಯಾಂಗದಲ್ಲಿ ಸೇವೆ ಸಲ್ಲಿಸಿ ರುವ ಮಲ್ಲರು, ಸಣ್ಣಕತೆ, ಕಾದಂಬರಿ, ಹರಟೆ ಹಾಗೂ ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ಸಾಹಿತ್ಯ ರಚನೆಯ ಮೂಲಕ ಕನ್ನಡ ಓದುಗರಿಗೆ ಸಾಕಷ್ಟು ಪರಿಚಿತರೇ ಆಗಿದ್ದಾರೆ. ತಾನು ಹುಟ್ಟಿ ಬೆಳೆದ ಪರಿಸರದ ಜನಜೀವನದ ವಿಶೇಷ ಪ್ರಭಾವ ಬೀರಿರುವ ಭೂತಾರಾಧನೆಯ ಕತೆಗಳನ್ನು ಬಾಸೆಲ್ ಮಿಶನ್ ಧರ್ಮಗುರುಗಳು ಸಂಗ್ರಹಿಸಿದ 'ಸಂಧಿ'ಗಳಾಧಾರದಲ್ಲಿ ಕನ್ನಡಕ್ಕೆ ನೀಡಿದ್ದಾರೆ. ಈ ಶತಮಾನದ ಏಳನೆಯ ದಶಕದಾರಂಭದಲ್ಲಿ ಬಂದ ಈ ಗ್ರಂಥವು ಕನ್ನಡ ಸಾಹಿತ್ಯದಲ್ಲಿ ಜಾನಪದ ಅಧ್ಯಯನದ ದೃಷ್ಟಿಯಿಂದ ಒಂದು ಅಮೂಲ್ಯ ಕೊಡುಗೆಯೇ ಆಗಿದೆ-ಎಂಬುದರಲ್ಲಿ ಸಂದೇಹವಿಲ್ಲ.

ತುಳುನಾಡಿನಲ್ಲಿ ನೂರಾರು ಭೂತಗಳಿದ್ದರೂ ಅವುಗಳ ಪೈಕಿ ಹೆಚ್ಚು ಪ್ರಚಾರ ದಲ್ಲಿರುವ ಹಾಗೂ ಹೆಚ್ಚು ವ್ಯಾಪಕವಾಗಿ ಜನತೆಯ ಮೇಲೆ ಪ್ರಭಾವ ಬೀರಿರುವ ಹದಿನೈದು ಭೂತಗಳನ್ನಾಯ್ದು ಅವುಗಳ ಕಥೆಯನ್ನು ನೀಡಿದ್ದಾರೆ. ಕಥೆ ಹೇಳುವುದೇ ಪ್ರಧಾನ ಉದ್ದೇಶವಾಗಿದ್ದರೂ ಭೂತಾರಾಧನೆಯ ಮೂಲವನ್ನು ಹುಡುಕ ಹೊರಟ ಲೇಖಕರು 'ಇದಮಿತ್ಥಂ' ಎಂದು ಹೇಳುವ ಗೊಡವೆಗೆ ಹೋಗದೆ, 'ಭೂತಾರಾಧನೆಯು ಪ್ರಾಗೈತಿಹಾಸಿಕ ಕಾಲದ್ದಿರಬೇಕು' -ಎಂದು ಅಭಿಪ್ರಾಯಪಟ್ಟ ರೆ। ಫಾ। ಹೆರಾಸ್- ಅವರ ಉಲ್ಲೇಖವನ್ನೂ ನೀಡಿ ಸಂಶೋಧನಪ್ರಿಯ ಓದುಗರಿಗೆ ಬಾಗಿಲನ್ನು ತೆರೆದಿಟ್ಟಿದ್ದಾರೆ.

ಸಲ್ಕೆ, ಪರವ, ಕೊರಗರ ಸಂಪ್ರದಾಯ-ಕಾರ್ಯಗಳನ್ನು 'ಅರಿಕೆ'ಯಲ್ಲಿ ವಿವರಿ ಸಿದ ಮಲ್ಲರು ಜಾನಪದ ವ್ಯವಸ್ಥೆಯಲ್ಲಿ ಗ್ರಾಮ, ಮಾಗಣೆ, ಬೀಡು, ಅರಸು ಮನೆತನಗಳ ಪಾರಸ್ಪರಿಕ ಸಂಬಂಧಗಳನ್ನು ವಿಶದಪಡಿಸುತ್ತಾರೆ. ಭೂತಾರಾಧನೆಯಲ್ಲಿ ಅಗಸ, ಕ್ಷೌರಿಕ, ಬಡಗಿ, ಗಾಣಿಗ, ಬ್ರಾಹ್ಮಣರು ಒಂದಾಗಿ ಹೇಗೆ ಸಹಕರಿಸುತ್ತಿದ್ದ ರೆಂಬುದನ್ನು ವಿವರಿಸಿ, ವರ್ಗೀಕೃತ ಸಮಾಜದಲ್ಲೂ ಜನರು ಪರಸ್ಪರ ಸಾಮರಸ್ಯದಿಂದ ನಡೆದು ಬಂದುದನ್ನು ಸ್ಪಷ್ಟೀಕರಿಸಿದ್ದಾರೆ. ಸ್ವಾತಂತ್ರ್ಯಪೂರ್ವದವರೆಗೂ ಜೀವಂತ ವಾಗಿದ್ದ ಈ ಸಂಪ್ರದಾಯವು ನಿಧಾನವಾಗಿ ಶಿಥಿಲವಾಗುತ್ತಾ ಬಂದು, ಕಣ್ಮರೆಯಾಗುವ ಹಂತದತ್ತ ಸಾಗುತ್ತಿದೆ.

ಸರಳ ಶೈಲಿಯಲ್ಲಿ ಹದಿನೈದು ಭೂತಗಳ ಕಥೆಯನ್ನು ನಿರೂಪಿಸಿರುವ ಲೇಖಕರು ಆರಂಭದಲ್ಲಿ ಕೊಟ್ಟಿರುವ 'ಭೂತಾರಾಧನೆಯ ವೈಶಿಷ್ಟ್ಯಗಳು' ಎಂಬ ವಿಶ್ಲೇಷಣಾತ್ಮಕ ಬರೆಹವು ಅತ್ಯಂತ ಪ್ರಾಮುಖ್ಯವುಳ್ಳದ್ದಾಗಿದೆ. 'ಬಾರ್' (= ಭತ್ತ) ಎಂಬ ಪದದಿಂದಲೇ 'ಬಾರಗ' ಶಬ್ದ ಬಂದಿದೆಯೆಂದು ವ್ಯುತ್ಪತ್ತಿಯನ್ನು ನೀಡಿದ ಮಲ್ಲರು "ಭೂತಾರಾಧನೆಗೂ ಬೇಸಾಯಕ್ಕೂ ನಿಕಟ ಸಂಬಂಧವಿದೆಯೆಂಬುದು ಭೂತಾರಾಧನೆಗೆ ಉಪಯೋಗಿಸುವ ಸಾಮಗ್ರಿಗಳಿಂದಲೇ ಸ್ಪಷ್ಟವಾಗಿದೆ" ಎಂದು ಅಭಿಪ್ರಾಯಪಟ್ಟಿರುವುದು ಯುಕ್ತಾಯುಕ್ತವಾಗಿದೆ. ಹಾಗೂ ಭೂತಾರಾಧನೆಯ ಕ್ಷೇತ್ರದಲ್ಲಿ ಸಂಶೋಧನಾಸಕ್ತರಾದ ವಿದ್ವಾಂಸರಿಗೂ ಮಾರ್ಗದರ್ಶಕವಾಗಿದೆ.

ತುಳುನಾಡಿನ ಸಂಸ್ಕೃತಿಯಲ್ಲಿ ಭೂತಾರಾಧನೆಯು ಹಾಸು ಹೊಕ್ಕಾಗಿದ್ದು, ಸಾಮಾಜಿಕ ಜೀವನದಲ್ಲಿ ಇದರಿಂದಾಗಿ ಧರ್ಮ–ಮತಗಳ ಭಿನ್ನತೆಯೂ ಕುಸಿದು ಹೋಗಿದೆಯೆಂಬುದಕ್ಕೆ ಸಾಕ್ಷಿಯಾಗಿ, "ಹರಿಹರರನ್ನು ಪೂಜಿಸುವ ಬ್ರಾಹ್ಮಣರೂ ತೀರ್ಥಂಕರರನ್ನು ಮಾತ್ರ ಪೂಜಿಸುವ ಜೈನರೂ ಭೂತಾರಾಧನೆಗೆ ಹೊರತಾದವರಲ್ಲ" ಎಂಬ ಹೇಳಿಕೆಯು ಈ ಪ್ರದೇಶದ ಜನಜೀವನದ ನಾಡಿಯ ಮಿಡಿತವನ್ನು ಗುರುತಿಸಿ ಕೊಂಡುವರ ಫಲವೇ ಆಗಿದೆ. ಕೋಲ, ನೇಮ, ಭಂಡಾರ, ಸಂಧಿ, ಅರ್ದಾಳ, ಗಗ್ಗರ, ವಸಯ, ಅಣಿ–ಮೊದಲಾದವುಗಳ ಸ್ಥೂಲ ಪರಿಚಯುವನ್ನು ನೀಡಿದ ಬಳಿಕ "ಅತಿ ಮಾನುಷ ಅಂಶವೇ ಭೂತಾರಾಧನೆಯ ಮೇಲೆ ಆಸಕ್ತಿಯನ್ನು ಉಳಿಸಿದೆ" ಎಂಬ ಲೇಖಕರ ಮಾತು ನಿಜವೇ ಆದರೂ ಸದ್ಯ ಶಿಕ್ಷಣದ ಸಾರ್ವತ್ರಿಕ ಪ್ರಸಾರ ಹಾಗೂ ವೈಜ್ಞಾನಿಕ ಸೌಲಭ್ಯಗಳ ಉಪಲಬ್ಧಿಯಿಂದಾಗಿ ಜನ ಜಾಗ್ರತಿಯುಂಟಾಗಿ, ಭೂತಗಳ ನಂಬಿಕೆ ತನ್ನ ಅರ್ಥವಂತಿಕೆಯನ್ನು ಕಳೆದುಕೊಳ್ಳುತ್ತಿರುವುದರಿಂದ ಇಂತಹ ಕೃತಿಗಳ ಮೌಲ್ಯ ಇನ್ನಷ್ಟು ಮಹತ್ವಪೂರ್ಣವಾಗಿದೆ.

'ಈಶ್ವರನಿಂದ ವರ ಪಡೆದ ಭೂತ'ಗಳ ಪರಿಚಯುವನ್ನು ಪುರಾಣ ಮತ್ತು ಜಾನಪದ ಐತಿಹ್ಯಗಳ ಹಿನ್ನೆಲೆಯಲ್ಲಿ ವಿವರಿಸಿದ ಲೇಖಕರು ಪುರಾಣ, ಇತಿಹಾಸ, ಮಾನವಶಾಸ್ತ್ರ, ಮನಶಾಸ್ತ್ರಗಳ ಆಧಾರದಲ್ಲಿ ವಿಶ್ಲೇಷಿಸುವ ಪ್ರಯತ್ನ ಮಾಡುತ್ತಾರೆ. ಅವರು ಸಂಗ್ರಹಿಸಿರುವ ಹದಿನೈದು ಭೂತಗಳ ಕಥೆಗಳಲ್ಲಿ ಪಿಲಿಚಾವಂಡಿ, ಕೊಡಮಣಿತ್ತಾಯ, ಪಂಜುರ್ಲಿ, ಕಲ್ಲುರ್ಟಿ ಕಲ್ಕುಡ, ಮುಂಡತ್ತಾಯ, ದೈಯೊಂಗುಳು, ಜುಮಾದಿ ಭೂತ, ಬೊಬ್ಬರ್ಯ, ಸಾರಾಲ ಜುಮಾದಿ, ಕನಪಾಡಿತ್ತಾಯ, ಜಾರಂದಾಯ, ಮಾರವಾಂಡಿ–ಭೂತಗಳು ಒಂದು ವರ್ಗಕ್ಕೆ ಸೇರಿದರೆ, ಕೋಟಿ ಚೆನ್ನಯರ ಕಥೆಯಂತೂ ಐತಿಹಾಸಿಕವೆನ್ನಬಹುದಾದಷ್ಟು ತುಳುನಾಡಿನ ಜನರಿಗೆ ಆಪ್ತ ಪ್ರಸಂಗವಾಗಿದೆ.

ಕೆಲವೊಂದು ಭೂತಗಳ ಕಥೆಯಾರಂಭ ಮತ್ತು ಕೊನೆಯಲ್ಲಿ ಲೇಖಕರ ವಿಮರ್ಶಾತ್ಮಕ ಟಿಪ್ಪಣಿಗಳಿದ್ದು, ನಡುವೆ ಭೂತಗಳ 'ಸಂಧಿ'ಯಿಂದ ಉದ್ಧೃತವಾದ ಕಥೆಯ ಹೂರಣವಿದೆ. 'ಪಿಲಿಚಾವಂಡಿ' ಎಂಬ ಆರಂಭದ ಕಥೆಯು ನಿಜವಾಗಿ

'ಮಂಜುಪಂಜ'ಎಂಬ ರೈತನಿಗೆ ಸಂಬಂಧಪಟ್ಟಿದೆ. ಈ ರೈತ ತನ್ನ ಜವಿೂನ್ದಾರ ಬಾಳೊಳಿಯುವರಿಂದ 'ಪಿಲಿಚಾವಂಡಿ'ಯೆಂಬ ಭೂತವನ್ನು ಕಳ್ಳರಿಂದ ರಕ್ಷಣೆಗಾಗಿ 'ತುಂಬೆಜಾಲ್'ಗೆ ಬರಮಾಡಿಸಿಕೊಂಡ ಪ್ರಸಂಗ ಆಧುನಿಕ 'ಮಿನಿ'ಕಥೆಯನ್ನು ಹೋಲುತ್ತದೆ. ಈ ರೈತನನ್ನೂ ಮತ್ತೆ ಅವನ ಮನೆಯವರನ್ನೂ ಕಾಡಿದ ಭೂತ ಅಲ್ಲಿಂದ ಅಡ್ಡಂದ ಗುಡ್ಡೆ, ಮಿಜಾರು, ಪದವು ಮುರ, ಪೆರಾರಿ, ಬೆಳ್ಳಿ ಮಾರಗುತ್ತು, ಮುಕ್ಕೋಡಿವಲಕುಡ-ಎಂಬ ಊರುಗಳಿಗೆ ತೆರಳಿತು. ಹೀಗೆ ಕಥೆಯ ಉತ್ತರಾರ್ಧದಲ್ಲಿ 'ಮಂಜು ಪಂಜ'ನ ಪಾತ್ರ ಗೌಣವಾಗಿ, ಭೂತದ ಸಂಚಾರದ ವರ್ಣನೆಯೇ ಪ್ರಧಾನವಾಗುತ್ತದೆ.

ಈ ಪುಸ್ತಕದಲ್ಲಿ ಬರುವ ಎಲ್ಲಾ ಕಥೆಗಳನ್ನು ಎರಡು ವಿಭಾಗವಾಗಿ ಮಾಡಬಹುದು : (1) ಭೂತಗಳ ಮಹಿಮೆಯನ್ನು ಸಾರುವ ಜನಸಾಮಾನ್ಯರ ಕಥೆಗಳು, (2) ಭೂತಗಳ ಉದ್ಭವದ ಸ್ವರೂಪವನ್ನು ವಿವರಿಸುವ ಕಥೆಗಳು.

ತುಳುನಾಡಿನಲ್ಲಿ 'ರಾಜಂದೈವ'ವೆನಿಸಿದ ಕೊಡಮಣಿತ್ತಾಯ ಭೂತದ ಕಥೆಯೂ ಸ್ವಾರಸ್ಯಪೂರ್ಣವಾಗಿದೆ. 'ಎಕ್ಕಾರು' ಎಂಬ ಊರಿನ ದುಗ್ಗಣ ಕಾವ ಮತ್ತು ತಿಮ್ಮಾತಿಕಾರಿ-ಎಂಬುವರು ಕೊಳಿಜೂಜು ಮತ್ತು ಎತ್ತುಗಳ ಆಯ್ಕೆಯಲ್ಲಿ ಪಳಗಿದವರು. ಇರುವೈಲು, ಘಾಟಿ ಮಾರ್ಗವಾಗಿ ಬಯಲು ಸೀಮೆಗೆ ಬಂದು ಚಿನ್ನದ ಹುಂಜ ಮತ್ತು ಎತ್ತು ಖರೀದಿ ಮಾಡಿದರು. (ದಕ್ಷಿಣ ಕನ್ನಡದ ರೈತರು ಶಿರಾಡಿ ಮಾರ್ಗವಾಗಿ ಹಾಸನಕ್ಕೆ ಬಂದು ಎತ್ತು, ಕೋಣ ಎಮ್ಮೆ ಖರೀದಿಸುವುದು ಮೊನ್ನೆ-ಮೊನ್ನೆವರೆಗೆ ನಡೆದುಕೊಂಡು ಬಂದ ಐತಿಹಾಸಿಕ ಸತ್ಯ). 'ನಡ್ಯೋಡಿ'ಯೆಂಬ ಊರಿನಲ್ಲಿ 'ಬೀರು' ಎಂಬಾಕೆಯ ಮನೆಯಲ್ಲಿ ಊಟಮಾಡಿ ವೀಳ್ಯ ಹಾಕುತ್ತಿರುವಾಗ. ಅವರ ಎತ್ತಿಗೆ 'ಕೊಡಮಣಿತ್ತಾಯ' ಭೂತದ ಆವೇಶ ಬಂದಿತು. ಭೂತಕ್ಕೆ ಗುಡಿ ಕಟ್ಟಿ, ಎತ್ತನ್ನೂ ಹುಂಜವನ್ನೂ ಅರ್ಪಿಸಿದರು. ಪೆರಿಂಜದಲ್ಲೂ ಗುಡಿಕಟ್ಟಿಸಲಾಯ್ತು. (ಇಂದಿಗೂ 'ಪೆರಿಂಜ' ಎಂಬಲ್ಲಿ ಈ ಭೂತಕ್ಕೆ ಕಟ್ಟಿಸಿದ ವಿಶೇಷವಾದ ಸುಂದರ ಭೂತಸ್ಥಾನವು ದೇವಸ್ಥಾನವನ್ನೇ ಹೋಲುವಂತಿದೆ–ವೇಣೂರು-ಮೂಡಬಿದ್ರೆ ರಸ್ತೆಯಲ್ಲಿ). ಈ ಭೂತ ಮತ್ತೆ ಇರುವೈಲು, ಇರುಂದಲ್ ಪಟ್ಟ, ಕುಕ್ಕಿಕಟ್ಟೆ, ಕೆಮ್ರಾಜೆ ಮಾರ್ಗವಾಗಿ ಮುಂದುವರಿಯಿತು. ಈ ಕಥೆಯು ಕೇವಲ ಭೂತದ ಮಹಿಮೆಯನ್ನು ಮಾತ್ರ ತಿಳಿಸುತ್ತದೆ.

'ಪಂಜುರ್ಲಿ ಭೂತ'ದ ಕಥೆಯು ಭಾರತೀಯ ಪುರಾಣಗಳಲ್ಲಿ ಬರುವ ವರಾಹಾವತಾರ'ದ ಕಥೆಗೆ ಸಂವಾದಿಯಾಗಿರುವ ಪ್ರಸಂಗ. ವಿಷ್ಣು, ಬ್ರಹ್ಮ, ಶಿವನ ಸಂಭಾಷಣೆಯ ಸಂದರ್ಭದಲ್ಲಿ ವಿಷ್ಣುವು ತನ್ನ ಕಂಕುಳನ್ನು ತುರಿಸಿದಾಗ ಉದುರಿದ ಹನಿಬೆವರಿಂದ ಮಹಾವರಾಹದ ಜನನ. ವಿಷ್ಣು ಅದಕ್ಕೆ ಮಾತಿನ ಶಕ್ತಿಯನ್ನಿತ್ತು, ಭೂತಾಕಾರದ ಮನುಷ್ಯನನ್ನಾಗಿ ಮಾಡಿದ. ಆಹಾರ ಕೇಳಿದ ಈ ಹಂದಿ(ತುಳುವಿನಲ್ಲಿ)

ಪಂಜಿ> ಪಂಜುರ್ಲಿ ಭೂತಕ್ಕೆ ನಾರಾಯಣ ಹೀಗಂದ : "ನಿನಗೆ ಆಹಾರ ಒದಗಿಸು ವುದು ನನ್ನ ಧರ್ಮ, ಆದ್ದರಿಂದ ನಿನಗೊಂದು ಉಪಾಯ ಹೇಳುತ್ತೇನೆ. ಭೂಲೋಕಕ್ಕೆ ಹೋಗು. ಅಲ್ಲಿ ತುಂಬಾ ಪಾಪಿಗಳಿದ್ದಾರೆ. ಅವರಿಗೆ ಬಾಲಕರಿದ್ದಾರೆ; ಜಾನುವಾರು ಗಳಿವೆ. ನೀನು ಅವರ ಹಟ್ಟಿಯನ್ನು ಹೊಕ್ಕು ಜಾನುವಾರುಗಳ ಮೇಲೆ ಧಾಳಿ ಮಾಡು. ನಾನು ಹದಿನೈದುನೂರು ವಿಧದ ಕಾಯಿಲೆಗಳನ್ನು ಕಳಿಸಿದ್ದೇನೆ....ಇಂಥವೇ ಕಾಯಿಲೆ ಗಳು, ಇಂಥವೇ ಭೂತದ ಚೇಷ್ಟೆಗಳು–ಎಂದು ತಿಳಿಸಲು ಜ್ಯೋತಿಷಿಗಳನ್ನೂ ಶಕುನ ಕಾರರನ್ನೂ ನೇಮಿಸಿದ್ದೇನೆ...."ಈ ಮಾತುಗಳಲ್ಲಿ ಎಂತಹ ಸುಂದರವಾದ ಸಾಮಾಜಿಕ ವ್ಯಂಗ್ಯವಿದೆ! ನಮ್ಮ ಗ್ರಾಮೀಣ ಪ್ರದೇಶದ ಜನಜೀವನಕ್ಕೆ ಹಿಡಿದ ಕನ್ನಡಿಯಾಗಿದೆ. ಪೆರಮು–ನಲಿಕೆಯವರ 'ಸಂಧಿ'ಯಲ್ಲಿ ಬರುವ ಈ ಪ್ರಸಂಗವು ಆ ಕಾಲದಲ್ಲಿ ನಮ್ಮ ಸಮಾಜದಲ್ಲಿ ನಡೆಯುತ್ತಿದ್ದ ಶೋಷಣೆಯ ಸ್ವರೂಪವನ್ನು ಬಿಚ್ಚಿ ತೋರಿಸಿದೆ. 'ಪಂಜುರ್ಲಿ' ಭೂತವು ಸುಬ್ರಹ್ಮಣ್ಯ-ಘಾಟಿ ಮಾರ್ಗವಾಗಿ ತುಳುನಾಡಿಗೆ ಬಂದಿತು. ಮರ್ದಾಳ ಬೀಡಿನ ಬಲ್ಲಾಳರ ಹಟ್ಟಿಯ ಕೋಣಗಳಿಗೆ ಉಪದ್ರವ ಕೊಟ್ಟಾಗ, ಮಂತ್ರ ವಾದಿಯ ನೆರವುಪಡೆದು, ಭೂತಸ್ಥಾನ ಕಟ್ಟಿಸುವ ನಿರ್ಧಾರ ಬಲ್ಲಾಳರು ತೆಗೆದು ಕೊಂಡರು. ಬಲ್ಲಾಳರನ್ನು ಹೆಂಡತಿಯು ಊಟಕ್ಕೆ ಕರೆದಾಗ "ಈ ಕೋಣಗಳಿಗೆ ಕ್ಷೇಮವಾದರೆ ನಮಗೆ ಅನ್ನ ದೊರೆಯುವುದು. ಅವುಗಳಿಗೆ ಕಾಹಿಲೆಯಾದೊಡನೆ ನನಗೆ ಹಸಿವು-ನೀರಡಿಕೆಗಳು ಇಂಗಿ ಹೋದವು"– ಎಂಬ ಬಲ್ಲಾಳರ ಮಾತಿನಲ್ಲಿ ರೈತರ ಜಾನುವಾರು–ಪ್ರೇಮ ಅಭಿವ್ಯಕ್ತವಾಗಿದೆ. ಬಲ್ಲಾಳರು ತನ್ನ ಅಕ್ಕನೊಡನೆ "ಈ ವರ್ಷದ ಬೆಳೆ ನಾಲ್ಕು ತಿಂಗಳು ಊಟಕ್ಕೆ ಸಾಕಾದೀತು. ಅನ್ನ ಕಡಮೆಯಾದರೆ ಕೆಲಸದಾಳುಗಳ ಮುಖ ಸಪ್ಪೆಯಾಗುವುದು. ಸರ್ಕಾರದ ನಗದಿ ಕೊಡದಿದ್ದರೆ ಅಧಿಕಾರಿ ಬಿಡ. ಈ ಮಳೆಗಾಲದಲ್ಲಿ ನಾವು ಗಂಜಿ ಕುಡಿಯಬೇಕಷ್ಟೆ"– ಎಂದು ಹೇಳಿದ ಮಾತು ಗಳಲ್ಲಿ ತುಳುನಾಡಿನ ಗೃಹಸ್ಥರ ಸಾಮಾಜಿಕ ಪ್ರಜ್ಞೆ, ಕರ್ತವ್ಯನಿಷ್ಠೆ, ಬಡಜನರ ಬಗ್ಗೆ ಅನುಕಂಪ–ಮೊದಲಾದವುಗಳನ್ನು ಕಾಣಬಹುದಾಗಿದೆ. 'ಕಲ್ಲುರ್ಟಿ' ಭೂತ ತೋರಿಸಿದ ಮರವನ್ನು ಕಡಿದು. 'ಪಂಜುರ್ಲಿ' ಭೂತಕ್ಕೆ ಸ್ಥಾನವನ್ನು ನಿರ್ಮಿಸಲಾಯಿತು.

ಇಡೀ ಭೂತಾರಾಧನೆಯ ಕಥೆಗಳಲ್ಲೇ ಇನ್ನೊಂದು ಆಕರ್ಷಕವಾದ ಹಾಗೂ ಓದುಗರ ಹೃದಯವನ್ನು ಮಿಡಿಯುವ ಕಥೆಯೆಂದರೆ 'ಕಲ್ಲುರ್ಟಿ ಕಲ್ಕುಡ'ರದು. ಬೇಲೂರಿನ ಶಿಲ್ಪಿ ಜಕ್ಕಣಾಚಾರ್ಯ ಮತ್ತವನ ಮಗ ಡಂಕಣನ ಬಗ್ಗೆ ಇರುವ 'ಕಿಂವದಂತಿ'ಗಳನ್ನು ಹೋಲುವ ಆದರೆ ಇನ್ನಷ್ಟು ವ್ಯಾಪಕತೆ ಮತ್ತು ಅಮಾನುಷಿ ಕತೆಯನ್ನು ನೀಡುವ ಕಥೆಯಿದಾಗಿದೆ. ಕನ್ನಡ ನಾಡಿನ ಶಿಲ್ಪಕಲೆಯ ಹಿರಿಮೆಯನ್ನು ಸಾರುವ ಶ್ರವಣಬೆಳಗೊಳ, ಬೇಲೂರು, ಕಾರ್ಕಳ, ವೇಣೂರುಗಳ ಶಿಲ್ಪಕಲಾ ವೈಭವಕ್ಕೆ ಓರ್ವನೇ ಶಿಲ್ಪಿ ಕಾರಣನಿದ್ದಿರಬೇಕೆಂದು ಭಾವಿಸಿ ಕಲ್ಪನೆಯ ಮೂಲಕ ಒಂದಾಗಿ ಬೆಸೆಯುವ ಪ್ರಯತ್ನ ಈ ಕಥೆಯಲ್ಲಿದೆ. ಇತಿಹಾಸದ ಹಿನ್ನೆಲೆಯಲ್ಲಿ ಶ್ರವಣ ಬೆಳಗೊಳ ಮತ್ತು ವೇಣೂರುಗಳ ಗೋಮ್ಮಟ ಶಿಲ್ಪಗಳ ನಡುವೆ ನೂರಾರು ವರುಷಗಳ

ಅಂತರವಿದ್ದರೂ ಅದನ್ನು ಮರೆಯಿಸುವ ಪ್ರಯತ್ನ ಈ ಜಾನಪದ ಕಲ್ಪನೆಯಲ್ಲಿದೆ.

'ಶಂಭು' ಕಲ್ಕುಡ ಮತ್ತು ಇರಾವತಿ–ದಂಪತಿಗಳ ಮಕ್ಕಳ ಪೈಕಿ ಕಲ್ಲುರ್ಟಿ (ಹೆಣ್ಣು) ಮತ್ತು ಕಲ್ಕುಡ ('ನಂದು' ಮೂಲ ಹೆಸರು–ಗಂಡು) ಕೊನೆಯವರು ಹಾಗೂ ಪ್ರಸಿದ್ಧರು. 'ಕಲ್ಕುಡ' ಹುಟ್ಟುವ ಮೊದಲೇ ಗರ್ಭಿಣಿ ಹೆಂಡತಿಯನ್ನು ಬಿಟ್ಟು ಶಂಭು ಬೇಲೂರು, ಬೆಳಗೊಳಗಳಿಗೆ ಶಿಲ್ಪಕಾರ್ಯಕ್ಕಾಗಿ ಹೋದ ಅದ್ಭುತ ಕೆಲಸ ಮಾಡಿದ. ಸಾವಿರಕಂಭದ ಬಸದಿ ರಚಿಸಿದ ಗೋಮಟನನ್ನು ಕೆತ್ತಿದ. ಮಗ ದೊಡ್ಡವ ನಾಗಿ ಅಪ್ಪನನ್ನು ನೋಡಲೆಂದು ಹೊರಟ. ತಂದೆಯ ಭೇಟಿಯಾಗಿ ತಂದೆಯ ಶಿಲ್ಪ ನೋಡಬಯಸಿದ. ತಂದೆಯ ಶಿಲ್ಪದಲ್ಲೊಂದು ದೋಷ ತೋರಿಸಿದಾಗ, ಅಪಮಾನ ಸೈರಿಸಲಾರದೆ ತಂದೆ ಆತ್ಮಹತ್ಯೆ ಮಾಡಿಕೊಂಡ. ಮಗ ತಂದೆಯ ಕಸುಬನ್ನೇ ಮುಂದುವರಿಸಿ ಇನ್ನಷ್ಟು ಶಿಲ್ಪ ರಚಿಸಿದ. ಕೊಲ್ಲೂರು,ಕಾರ್ಕಳಗಳಿಗೆ ಬಂದು ಶಿಲ್ಪಕಲಾ ವೈಭವ ಮೆರೆದ. ಕಾರ್ಕಳದಲ್ಲಿ ಅವನಿಂದ ಗೋಮಟನನ್ನು ಕೆತ್ತಿಸಿದ ಭೈರರಸ 'ಬೇರೆಲ್ಲೂ ಇಂತಹ ಸುಂದರ ಶಿಲ್ಪ ಮಾಡಬಾರದು' ಎಂದು ಅವನ ಎಡಗೈ : ಬಲಗಾಲು ಕಡಿಸಿ ಹಾಕಿದ. ಆದರೆ ವೇಣೂರಿಗೆ ಬಂದ ಕಲ್ಕುಡ ತಿಮ್ಮಣ್ಣಾಜಿಲನ ವಿನಂತಿಯಂತೆ ಒಂದು ಗೋಮಟ ಶಿಲ್ಪ ರಚಿಸಿದ. ಇಷ್ಟರಲ್ಲಿ ಅಣ್ಣನನ್ನು ಹುಡುಕಿ ಕೊಂಡು ಹೊರಟ ತಂಗಿ ಕಲ್ಲುರ್ಟಿ, ಬೇಲೂರು, ಬೆಳಗೊಳ ಕೊಲ್ಲೂರು ಮೂಲಕ ಕಾರ್ಕಳಕ್ಕೆ ಬಂದಾಗ, ಅಣ್ಣ ವೇಣೂರಿನಲ್ಲಿರುವ ಸಂಗತಿ ತಿಳಿಯಿತು. ಕಾರ್ಕಳದಿಂದ ಉಪ್ಪಿನಂಗಡಿ ಮಾರ್ಗವಾಗಿ ವೇಣೂರಿಗೆ ಬಂದಳು (ಭೂಗೋಲಕ್ಕೆ ಸಂಬಂಧಿಸಿದ ದೋಷ ಇಲ್ಲಿದೆ. ಕಾರ್ಕಳದಿಂದ ವೇಣೂರಿಗೆ ಬರಬೇಕಾದರೆ ಉಪ್ಪಿನಂಗಡಿಗೆ ಹೋಗ ಬೇಕಾದ ಅಗತ್ಯವಿಲ್ಲ. ಉಪ್ಪಿನಂಗಡಿ ಎಂಬ ಊರು ಬೆಳ್ತಂಗಡಿಯಿಂದ ಪುತ್ತೂರಿಗೆ ಹೋಗುವಾಗ ಸಿಗುತ್ತದೆ. ಬಹುಶಃ ಲಿಖಿತ ಸಾಹಿತ್ಯವಲ್ಲದ್ದರಿಂದ ಇಂತಹ ತಪ್ಪುಂಟಾಗಿರಬಹುದು–ಇಲ್ಲವೇ ಆಗ ಕಾರ್ಕಳ ವೇಣೂರುಗಳ ಮಧ್ಯದ ಒಂದು ಊರನ್ನು ಉಪ್ಪಿನಂಗಡಿಯೆಂದು ಕರೆಯುತ್ತಿದ್ದಿರಲೂ ಬಹುದು ! ಅಥವಾ ಈಗಿನಂತೆ ಕಾರ್ಕಳದಿಂದ ವೇಣೂರಿಗೆ ಬರಲು ರಾಜರಸ್ತೆಯಿಲ್ಲದುದರಿಂದ ದಾರಿ ತಪ್ಪಿ. ಉಪ್ಪಿ ನಂಗಡಿವರೆಗೆ ಹೋಗಿ, ಮತ್ತೆ ವೇಣೂರಿಗೆ ಹಿಂದಿರುಗಿರಲೂ ಬಹುದು). ಅಣ್ಣನ ಕೈಕಾಲು ಕಡಿದ ಕಾರ್ಕಳದ ಅರಸನನ್ನು ಶಪಿಸುತ್ತಾಳೆ. ಅಣ್ಣ ತಂಗಿಯರಿಬ್ಬರೂ ಮಾಯವಾಗಿ ಭೂತಗಳಾಗಿ, ಕಾರ್ಕಳವನ್ನು ಸುಟ್ಟು, ಜನರಿಗೆ ಹುಚ್ಚು ಹಿಡಿಸಿದರು ; ಯಾವ ಮಂತ್ರಕ್ಕೂ ಬಾಗಲಿಲ್ಲ. ಕಡೆಗೆ ತಾವಾಗಿಯೇ ಉಪ್ಪಿನಂಗಡಿಯ ಹ್ಯೊಲಾರ (ವೈಲಾಯ) ಎಂಬ ಮಂತ್ರವಾದಿಯ ಮಂತ್ರದ ಅಡಿಕೆಯಲ್ಲಿ ಸೇರಿ ಉಪ್ಪಿನಂಗಡಿಗೆ ಬಂದರು. ಅಲ್ಲಿಂದ ಬಂಗಾಡಿ, ಅಳದಂಗಡಿ, ನಾವೂರು ರಾಮಕುಂಜ ಮೊದಲಾದ ಊರುಗಳಿಗೆ ಹೋದುವು. ಕಾರ್ಕಳದ ಭೈರರಸ, ವೇಣೂರಿನ ತಿಮ್ಮಣ್ಣಾಜಿಲ-ನಿಜ ವಾಗಿಯೂ ಗೋಮಟಶಿಲ್ಪ ಕೆತ್ತಿಸಿದ ಸಮಕಾಲೀನ ಐತಿಹಾಸಿಕ ವ್ಯಕ್ತಿಗಳು, ಆದರೆ ಶಿಲ್ಪ ಅಜ್ಞಾತ ಜನಪದ ಸಾಹಿತ್ಯದಲ್ಲಿ ಬೆಳಗೊಳದ ಶಿಲ್ಪಿಯೊಡನೆ ಸಂಬಂಧ ಕಲ್ಪಿಸಿ,

ಭೂತಗಳನ್ನಾಗಿಸುವ ಪ್ರಯತ್ನ ನಡೆದದ್ದಿರಬೇಕು.

'ಮುಂಡತ್ತಾಯ' ಭೂತದ ಕತೆಯಲ್ಲಿ ನಾಲ್ವರು ಜೋಗಿ ಬೈರಾಗಿಗಳು ಪಾಣೆ ಮಂಗಳೂರು, ತುಂಬ್ಯ, ಅರ್ಕುಳ, ಅಡ್ಯಾರ, ಕಣ್ಣೂರು ಮಾರ್ಗವಾಗಿ ಕೋಟೆಕ್ಕಾರ್ ವರೆಗೆ ಹೋಗುತ್ತಾರೆ. ಕೋಟೆಕ್ಕಾರಿನ ಸಂಕರಬೈದತಿ–ಎಂಬಾಕೆ ಜೋಗಿಗಳ ಮಾತು ಮೀರಿ, ತನ್ನ ಮಗನಿಗೆ ಮದುವೆ ಮಾಡಿದ್ದರಿಂದ ಕ್ಷಮೆ ಕೇಳಬೇಕಾಯ್ತು. ಈ ಜೋಗಿಗಳ ಜತೆಗಿದ್ದ ಕಾಲಭೈರವನೇ 'ಮುಂಡತ್ತಾಯ' ಎಂಬ ಭೂತವಾಗಿ ಉಳ್ಳಾಲ, ಕೊಟ್ಟಾರ, ಅತ್ತಾವರ–ಮೊದಲಾದ ಮಂಗಳೂರಿನ ಆಸುಪಾಸಿನ ಊರುಗಳಲ್ಲೆಲ್ಲ ಮರ್ಯಾದೆ ಪಡೆಯುತ್ತಾನೆ.

'ದೆಯ್ಯೊಂಕುಳು' ಕಥೆಯಲ್ಲಿ ನಾಗಲೋಕದ ನಾಗಕನ್ಯೆಯ ಇಬ್ಬರು ಮಕ್ಕಳಿಗೆ 7½ ವರುಷದಲ್ಲೇ ಗಡ್ಡಬಂದು, ಕ್ಷೌರಿಕ, 'ಚವಲ' ಕವನ ಪೂರೈಸಲು, ಅವರು ತುಳು ನಾಡಿಗೆ ಹೊರಟರು. ಇಳಿದದ್ದು ಸುಬ್ರಹ್ಮಣ್ಯ ಘಾಟಿಯ ದಾರಿಯಿಂದ ಕುಮಾರಧಾರೆ ಕೇಪಾಡಿ ಮಾರ್ಗವಾಗಿ ವೇಣೂರಿಗೆ ಬಂದ ಅಣ್ಣತಮ್ಮಂದಿರು ಒಂದೆಡೆ ನಿದ್ರಿಸಿದರು. ಮೊದಲೆದ್ದ ಅಣ್ಣ ಕಾಸರಗೋಡಿನ ಕುಂಬಳೆವರೆಗೆ ಹೋಗಿ 'ಬೀರಮರ್ಲೆರ್' ಎಂಬ ಹೆಸರಿನ ಭೂತವಾದ. ತಡವಾಗಿ ಎದ್ದ ತಮ್ಮ ಬಂಟ್ವಾಳ ಮಾರ್ಗವಾಗಿ ಮಂಗಳೂರಿನ ಅಳಕೆಗೆ ಬಂದಾಗ 'ಬರ್ಮೆರ್' ಎಂಬ ಭೂತವಾದ. ಕಾಲಭೈರವನು ಅಣ್ಣ ತಮ್ಮಂದಿ ರನ್ನು ಒಂದಾಗಿಸಿದ (ಈ ಕಥೆಯಲ್ಲಿ ಮನುಷ್ಯ ಪಾತ್ರಗಳಿಗೆ ಮಹತ್ವವಿಲ್ಲದಿರುವುದನ್ನು ಕಾಣಬಹುದಾಗಿದೆ).

'ಜುಮಾದಿ' ಭೂತದ ಕಥೆಯಲ್ಲಿ ಭೂತದ ಅನುಗ್ರಹದ ಪ್ರಸಂಗ ಮಾತ್ರ ಇದೆ. ಪೊಳಲಿಯ ಕೋಳಿ ಅಂಕಕ್ಕೆ ಹೊರಟ ಅಡೂರು ದೊರೆವೈದ್ಯನೆಂಬಾತ ಕೋಳಿ ಅಂಕ ದಲ್ಲಿ ವಿಶೇಷ ಗೆಲುವನ್ನು ಸಾಧಿಸಿದ. ಆದರೆ ಭೂತಕ್ಕೆ ಕೊಟ್ಟ ಮಾತಿಗೆ ತಪ್ಪಿ ಸಂಕಟದಲ್ಲಿ ಬಿದ್ದ. ಮತ್ತೆ ಜುಮಾದಿಗೆ ಆಹಾರ ಕೊಟ್ಟಾಗ ಸ್ವಸ್ಥನಾದ.

'ಬೊಬ್ಬರ್ಯ' ಕಥೆಯಲ್ಲಿ ಬರುವ ಬೊಬ್ಬರ್ಯ ಮುಸ್ಲಿಂ ದಂಪತಿಗಳ ಪುತ್ರ. ಸಮುದ್ರ ವ್ಯಾಪಾರಕ್ಕೆ ಹೋದವ ಕಡಲಯುದ್ಧದಲ್ಲಿ ಹೋರಾಡಿ ಮಾಯವಾಗಿ 'ಬೆಮುಸ'ರೊಡನೆ ಸೇರಿ ಭೂತವಾದ (ಇಸ್ಲಾಂ ಸಂಸ್ಕೃತಿಯನ್ನೂ ಜಾನಪದ ಸಂಸ್ಕೃತಿಯು ತನ್ನೊಳಗೆ ಅಳವಡಿಸಿಕೊಳ್ಳುವಲ್ಲಿ ಹೇಗೆ ಯಶಸ್ವಿಯಾಗಿದೆ-ಎಂಬುದಕ್ಕಿ ದೊಂದು ಉತ್ತಮ ನಿದರ್ಶನ).

'ತೊಡಕಿನಾರ್' ಎಂಬ ಕಥೆಯಲ್ಲಿ 'ಧರ್ಮ ಅರಸು' ಎಂಬಾತನಿಗೆ ಏಳನೇ ವರ್ಷದಲ್ಲೇ ಗಡ್ಡ ಬಂದು ಕ್ಷೌರಿಕನಿಂದ ಚವಲ ಮುಗಿಸಿ, ತುಳುನಾಡಿಗೆ ಹೊರಟ. ತುಳುನಾಡಿಗೆ ಇಳಿಯಲು ಬಂಗಾಡಿ ಶಿರಾಡಿ ಮಾರ್ಗದಲ್ಲಿ ಅಸಾಧ್ಯವೆಂದು ಸುಬ್ರಹ್ಮ ಣ್ಯದ ದಾರಿಯಿಂದ ಕೇಪಾಡಿ, ವಿಟ್ಲ, ಸಾಲೆತ್ತೂರು-ಮಾರ್ಗವಾಗಿ ಬಂದು 'ತೊಡಕಿ ನಾರ್' ಎಂಬ ಭೂತವಾದಾಗ 'ಕಣಂದೂರು' ಎಂಬಲ್ಲಿ ಗೌರವ ಸಿಕ್ಕಿತು. ಅಲ್ಲಿಂದ ಇತರ ಭೂತಗಳೊಡನೆ ಸೇರಿ, ಪಡು ಕರಾವಳಿಗೆ ಹೋಯಿತು. ಈ ಕಥೆಯಲ್ಲಿ

'ಚವಲದ' ಬಳಿಕ ಏಂದ 'ಧರ್ಮ ಅರಸು' ಉಟ್ಟ ಬಟ್ಟೆ ಮತ್ತು ತೊಟ್ಟ ಆಭರಣಗಳ ವಿವರ ಆ ಕಾಲದ ಜನಜೀವನವನ್ನು ವಿವರಿಸುತ್ತದೆ :

ಬಟ್ಟೆ—ಕಾವೂರ ಕರಿಪಟ್ಟೆ, ಬೋಳೂರ ಬಿಳಿಪಟ್ಟೆ, ಮದುರೆಪಟ್ಟೆ, ಉಸಿರಿಗೆ ಹಾರಿಹೋಗುವ ಪಾರಿಬಟ್ಟೆ, ಕಣ್ಣೀರಲ್ಲಿ ಒದ್ದೆಯಾಗುವ ಬಟ್ಟೆ, ಉಗುರಿನಡೆಯಲ್ಲಿ ಅಡಗುವ ಪಟ್ಟೆ.

ಆಭರಣ – ಕುತ್ತಿಗೆಗೆ ಪದಕ, ಸೊಂಟಕ್ಕೆ ಡಾಬು. ಕಿವಿಗೆ ಮುತ್ತಿನ ಚೌಕುಳಿ, ಬೆರಳಿಗೆ ಸೂರ್ಯ ಮುದ್ರೆಯ ಉಂಗುರ, ಕುತ್ತಿಗೆಗೆ ಚಕ್ರಸರ, ಕೈಗೆ ದಂಡ ಇತ್ಯಾದಿ,

ಇಡೀ ಪುಸ್ತಕವಲ್ಲೇ ಇನ್ನೊಂದು ಸ್ವಾರಸ್ಯಪೂರ್ಣ ಕಥೆಯೆಂದರೆ 'ಕೋಟಿ ಚೆನ್ನಯ್ಯ'ರಿಗೆ ಸಂಬಂಧಿಸಿದ್ದು. ತುಳುನಾಡಿನ ಈರ್ವರು ಸಾಹಸಿ ಬಿಲ್ಲವ (ಈಡಿಗ)ರು ಯುದ್ಧದಲ್ಲಿ ಸಾಹಸವನ್ನು ಮೆರೆದು ದುರಂತಕ್ಕೀಡಾಗಿ ಭೂತಗಳಾದ ಪ್ರಸಂಗ. ಪಂಜೆ ಮಂಗೇಶರಾಯರು ಇದನ್ನು ಸುಂದರ ಗದ್ಯಕೃತಿಯಾಗಿ ಬರೆದಿದ್ದಾರೆ. ವಿಶುಕುಮಾರ್ ಅವರು ಚಿತ್ತಾಕರ್ಷಕ ಸೆಲ್ಯೂಲಾಯಿಡ್ ಕೃತಿಯನ್ನಾಗಿ (ಚಲನಚಿತ್ರ ರೂಪದಲ್ಲಿ) ಹೊರತಂದಿದ್ದಾರೆ. ಯಕ್ಷಗಾನ ರಂಗದಲ್ಲೂ ಈ ಕಥೆ ಜನರ ಹೃದಯ ವನ್ನು ಗೆದ್ದು ತುಳುನಾಡಿನಲ್ಲಿ ವಿಶೇಷ ಜನಜನಿತವಾಗಿದೆ.

ಪ್ರಾಪ್ತವಯಸ್ಕಳಾದ ಬ್ರಾಹ್ಮಣ ಹುಡುಗಿಯನ್ನು ಕಣ್ಣುಕಟ್ಟಿ ಕಾಡಿಗೆ ಬಿಟ್ಟಾಗ (ಹಿಂದೆ ಮೈನೆರೆಯುವ ಮೊದಲು ಮದುವೆಯಾಗದ ಬ್ರಾಹ್ಮಣ ಕನ್ಯೆಯರಿಗೆ ಈ ಶಿಕ್ಷೆಯ ಪದ್ಧತಿಯಿತ್ತೆಂಬ ಐತಿಹ್ಯವಿದೆ) ಆ ಹುಡುಗಿಯನ್ನು ಕರೆದುತಂದು ಕಾಂತಣ್ಣ ಬೈದ್ಯನೆಂಬವನೊಡನೆ ಮದುವೆ ಮಾಡಿಸಿದ ಸಾಯಿನಬೈದ್ಯ ಆ ಕಾಂತಣ್ಣ ಬೆದ್ಯನ ಮಗಳನ್ನು ಪಳ್ಳಿಯ ಪಯ್ಯಬೈದ್ಯನಿಗೆ ಕೊಟ್ಟು ಮದುವೆ ಮಾಡಿಸಿದರು. ಬಲ್ಲಾಳನ ಕಾಲಿಗೆ ಬೇಟೆಕಾಲದಲ್ಲಿ ಮುಳ್ಳು ತಾಗಿ, ಚಿಕಿತ್ಸೆಗಾಗಿ ಸಾಯಿನಬೈದ್ಯನ ಬದಲು 'ದೇಯಿಬೈದ್ಯೆತಿ'ಯನ್ನು ಬರಮಾಡಿಸಬೇಕಾಯಿತು, ಬಲ್ಲಾಳರನ್ನು ಬದುಕಿಸಿದ ದೇಯಿಯ ಅವಳಿ-ಜವಳಿ ಮಕ್ಕಳೇ ಕೋಟಿ-ಚೆನ್ನಯರು. ದೇಯಿಬೈದ್ಯೆತಿ ಸತ್ತುದ ರಿಂದ ಸಾಯಿಬೈದ್ಯನೇ ತಬ್ಬಲಿಗಳನ್ನು ಸಾಕಿದ. ಮಕ್ಕಳು ದೊಡ್ಡವರಾಗಿ ಬುದ್ಯಂತನನ್ನು ಕೊಂದು ಊರುಬಿಟ್ಟರು. 'ಕಿನ್ನಿದಾರು' ಎಂಬ ತಂಗಿಯ ಮನೆಗೆ ಹೋಗಿ ಅಲ್ಲಿಂದ ಪಂಜಕ್ಕೆ ತೆರಳಿದರು. ಪಂಜದ ಬಲ್ಲಾಳರು ಮೋಸದಿಂದ ಸೆರೆ ಮನೆಯಲ್ಲಿಟ್ಟರು. ಅಲ್ಲಿಂದ ಬಿಡಿಸಿಕೊಂಡು ಎಣ್ಮೂರು ಬಲ್ಲಾಳರ ಬಳಿ ಹೋದ ಸೋದರರು ಆಶ್ರಯ ಪಡೆದರು. ಬೇಟೆಯೇ ನೆಪವಾಗಿ ಎಣ್ಮೂರಿನ ಬಲ್ಲಾಳರಿಗೂ ಪಂಜದ ಬಲ್ಲಾಳರಿಗೂ ಯುದ್ಧವಾದಾಗ, ವೀರಾವೇಶದಿಂದ ಸೋದರರು ಹೋರಾಡಿ ದರು. ಚಂದುಗಿಡಿಯ ಮೋಸದಿಂದ ಕೋಟಿ ಗಾಯಗೊಂಡ. 'ಅಣ್ಣನಿಲ್ಲದೆ ತಾನೇಕೆ ಬದುಕಿರಬೇಕು ?' ಎಂದು ತಮ್ಮ ಚೆನ್ನಯನೂ ಆತ್ಮಹತ್ಯೆಮಾಡಿಕೊಂಡ. ಗಂಗಾ ಸ್ನಾನ ಮಾಡಿಕೊಂಡು ಬಂದ ಅವರಿಬ್ಬರ ಆತ್ಮಗಳನ್ನು ಬ್ರಹ್ಮನೇ ಗೌರವಿಸಿದ.

ಹೀಗೆ ತುಳುನಾಡಿನ ಸಂಸ್ಕೃತಿಯ ಜಾನಪದ ಮೂಲದಿಂದ ಆಯ್ದ 'ಭೂತಾರಾಧನೆಯ ಕಥೆಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿ ಹೊಸತೊಂದು ಪ್ರಪಂಚದ ಪರಿಚಯ ಮಾಡಿಸಿದ್ದಾರೆ ಸೇವ ನಮಿರಾಜ ಮಲ್ಲರು. ಭೂತಗಳು ತುಳು ನಾಡಿನ ಗತಕಾಲದ ವೀರಸಾಹಸಿಗಳ ಬದುಕಿಗೆ ಸಂಬಂಧಪಟ್ಟಿರಬೇಕು ಎಂಬ ಊಹೆಯ ಮೇಲಿಂದ ಲೇಖಕರು "ಅದೃಶ್ಯ, ಅಮೂರ್ತ ಶಕ್ತಿಗಳ ಮೇಲೆ ಸದಾ ನಂಬಿಕೆಯಿರುವ ಮಾನವಸ್ವಭಾವಕ್ಕೆ ಪಾರ್ಥಿವ ಶರೀರದಿಂದ ಅಗಲಿದವರ ಆತ್ಮ ಅಥವಾ ಪ್ರೇತದ ಅಸ್ತಿತ್ವದ ಮೇಲೆ ಶ್ರದ್ಧೆ ಮೂಡುವುದು ಅಸ್ವಾಭಾವಿಕವಲ್ಲ" ಎಂದು ಹೇಳುತ್ತಾ ಜಗತ್ತಿನ, ಹಲವಾರು ನಿದರ್ಶನಗಳನ್ನು ಸಮರ್ಥನೆಗಾಗಿ ನೀಡುತ್ತಾರೆ.

ಈ ಭೂತದ ಕಥೆಗಳಲ್ಲಿ ಹೆಚ್ಚಿನವು ಬಯಲುಸೀಮೆಯಿಂದ ಇಳಿದು ಶಿರಾಡಿ-ಬಂಗಾಡಿ, ಘಾಟಿದಾರಿಗಳನ್ನಿಳಿದು, ಸುಬ್ರಹ್ಮಣ್ಯ ಘಾಟಿದಾರಿಯಿಂದಲೇ ತುಳುನಾಡಿಗೆ ಬರುತ್ತವೆ. ಭೂತದ ಊರು ಬಯಲುಸೀಮೆಯೆಂಬ ಭಾವನೆಯಿದ್ದಂತೆ ಕಾಣುತ್ತದೆ. ಹಿಂದೆ ಬಯಲು ಸೀಮೆಯೊಂದಿಗೆ ಕಡಿಮೆ ಸಂಪರ್ಕದಿಂದಾಗಿ ಎತ್ತರದ ಘಟ್ಟದ ಪ್ರದೇಶವನ್ನು ಭೂತಗಳ ನಾಡು ಎಂದು ಜಾನಪದ ಜನಜೀವನದಲ್ಲಿ ನಂಬಿಕೆಗಳು ಬೆಳೆದಿರಬೇಕು. (ಉತ್ತರ ಭಾರತದಲ್ಲಿ, ಹಿಂದೂ ಪುರಾಣಗಳಲ್ಲಿ ಬರುವ ದೇವತೆಗಳ ಸ್ವರ್ಗವೆಂದರೆ ಟಿಬೆಟ್ ಆಗಿರಬೇಕು ಎಂಬ ಊಹೆಯಂತೆಯೇ ಇದೂ ಆಗಿದೆ). ತುಳುನಾಡಿಗೆ ಬರಲು ಇರುವ ಇತರ ದಾರಿಗಳಾದ ಚಾರ್ಮಾಡಿ, ಆಗುಂಬೆ, ಸಂಪಾಜೆ ಗಳು ಅನಂತರ ರಚಿತವಾದವುಗಳಾಗಿದ್ದು, ಭೂತದ ಕಥೆಗಳು ಅವುಗಳ ನಿರ್ಮಾಣ ಕ್ಕಿಂತ ಪೂರ್ವದಲ್ಲೇ ಜನಜೀವನದಲ್ಲಿ ಹಾಸುಹೊಕ್ಕಾಗಿರಬೇಕು. ಈ ಕತೆಗಳಲ್ಲಿ ಬರುವ ಹಳ್ಳಿಗಳ ಹೆಸರುಗಳಂತೂ ಇವತ್ತಿಗೂ ಪ್ರಚಲಿತವಿರುವವುಗಳೇ ಆಗಿವೆ.

ಇನ್ನು ಅವರ ಶೈಲಿಯ ಬಗ್ಗೆ ಒಂದು ಮಾತು ಹೇಳಲೇಬೇಕು: ವಸ್ತುವಿಗೆ ತಕ್ಕುದಾದ ಹಿತಮಿತವಾದ ಸರಳ ಶೈಲಿ. ಸಣ್ಣಕತೆಯೊಂದನ್ನು ಓದುತ್ತಿರುವೆವೋ ಅನ್ನಿಸುವಂಥ ಪ್ರಸಾದ, ಮಾಧುರ್ಯಗಳ ಶೈಲಿ. ಸಂಧಿಗಳು ತುಳುಭಾಷೆಯವು ಗಳಾದುದರಿಂದ ಅನುವಾದದಲ್ಲಿ ಕೆಲವೊಮ್ಮೆ ಆ ಭಾಷೆಯ ಸೊಗಡು ಕನ್ನಡದಲ್ಲೂ ಹೊರಹೊಮ್ಮಲು ಪ್ರಯತ್ನಿಸುವುದನ್ನು ಕಾಣಬಹುದಾಗಿದೆ.

ಭೂತಾರಾಧನೆಯ ಕ್ಷೇತ್ರ-ಕಥಾಸಂಪತ್ತು ಅಕ್ಷಯವಾದುದು. ಈ ಸಂಪತ್ತಿಗೆ ಅತ್ಯಂತ ನಿಕಟ ಸಂಪರ್ಕವನ್ನು ಪಡೆದಿರುವ ಮಲ್ಲರು ಸಂಶೋಧನೆ ಮಾಡ ಬಯಸುವ ವಿದ್ವಾಂಸರಿಗೆ ಉಪಯುಕ್ತವಾದ ಕಚ್ಚಾಸಾಮಾಗ್ರಿಯನ್ನು ಇಲ್ಲಿ ಒದಗಿಸಿ ಕೊಟ್ಟಿದ್ದಾರೆ. ಒಂದೊಂದು ಭೂತದ ವಿಷಯವೂ ಆಳವಾದ ಗಂಭೀರ–ಅಧ್ಯಯನಕ್ಕೆ ಉಪಯುಕ್ತವಾಗಬಲ್ಲುದು. ಮಲ್ಲರ ಲೇಖನಿಯು ಈ ದಿಸೆಯಲ್ಲಿ ಇನ್ನಷ್ಟು ಜಾನಪದ ಕ್ಷೇತ್ರಕ್ಕಿಳಿದು, ಕನ್ನಡದ ಸಾಹಿತ್ಯ ಸಂಪತ್ತಿಯನ್ನು ಹೆಚ್ಚಿಸುವಂತಾಗ ಲೆಂಬುದೇ ಜಾನಪದ ಸಾಹಿತ್ಯಪ್ರೇಮಿಗಳ ಆಶಯವಾಗಿದೆ.

ಹೊಸ ಆಯಾಮ ಕೊಟ್ಟ 'ಲಿಖಿತ ಜಾನಪದ'

ಎಂ. ಎಲ್. ನರಸಿಂಹಮೂರ್ತಿ

'ಜನವದ ಸಾಹಿತ್ಯ' ವು ಕೇವಲ ಕಥೆಗಳು, ಗೀತೆಗಳು, ಲಾವಣಿಗಳು, ಗಾದೆಗಳು ಮತ್ತು ಒಗಟುಗಳ ಸಂಗ್ರಹಣೆ, ವಿಭಜನೆ ಮತ್ತು ವಿಶ್ಲೇಷಣೆಯ ಹಂತದಲ್ಲಿಯೇ ನಿಂತಿದ್ದ ಸಂದರ್ಭದಲ್ಲಿ, ರಂಗಾರೆಡ್ಡಿ ಕೋಡಿರಾಂಪುರ ಅವರ 'ಲಿಖಿತ ಜಾನಪದ' ಕನ್ನಡ ಜಾನಪದ ಕ್ಷೇತ್ರಕ್ಕೆ ಹೊಸ ಆಯಾಮವನ್ನು ತಂದುಕೊಟ್ಟ ಕೃತಿ. ಜಾನಪದ ಅಭ್ಯಾಸಿಗಳಲ್ಲಿ ಬಹಳಷ್ಟು ಚರ್ಚೆಗೊಳಗಾಗಿರುವ ವಿಷಯ 'ಜಾನಪದ ಮತ್ತು ಸಂಸ್ಕೃತಿಯ ಸಂಬಂಧ'. ಆದ್ದರಿಂದ ಇಲ್ಲಿನ ಬರಹಗಳು ಸಂಸ್ಕೃತಿಯೊಂದಿಗೆ ಹೇಗೆ ಸಂಬಂಧವನ್ನು ಪಡೆದುಕೊಂಡಿವೆ ಎಂಬ ಹಿನ್ನೆಲೆಯಲ್ಲಿ ಈ ಕೃತಿಯ ಪರಿಶೀಲನೆ ಮಾಡಬೇಕಾಗಿದೆ. ಇದರಲ್ಲಿರುವ ಪ್ರವೇಶ, ಕಕ್ಕಸಿನ ಗೋಡೆ ಬರಹಗಳು ಮತ್ತು ಆಟೋಗ್ರಾಫ್‌ಗಳು. ಈ ಮೂರು ಲೇಖನಗಳು ಜಾನಪದದ ಬಗೆಗಿರುವ ಹಳತಾದ ಧೋರಣೆಗಳನ್ನು ಕೆದಕಿ ವಾದ ಹೂಡುವ ವಿಶೇಷ ಗುಣಗಳನ್ನು ಹೊಂದಿವೆ.

ಜಾನಪದ ಸಭೆ, ಸಮಾರಂಭಗಳ ವೇದಿಕೆಯಮೇಲೆ ನಿಂತು ಭಾವೋದ್ವೇಗದಿಂದ ಮಾತನಾಡುವವರು ಸಾಮಾನ್ಯವಾಗಿ ಬಳಸುತ್ತಿದ್ದ 'ಜಾನಪದವನ್ನು ಉಳಿಸಬೇಕು ಬೆಳೆಸಬೇಕು' ಎಂಬ ಪ್ರಾಸಬದ್ಧವಾದ

ಘೋಷಣೆಯ ಮಾತುಗಳು ಹೊರನೋಟಕ್ಕೆ ಆಕರ್ಷಕವಾಗಿ ಕಂಡರೂ ಅದರ ಮರು-ಆಲೋಚನೆಗೆ ತೊಡಗಿದಾಗ ಸಮಾಜದ ಮುನ್ನಡೆಗೆ ತೊಡಕಾಗುವ ಧೋರಣೆಯನ್ನು ಅವು ತುಂಬಿಕೊಂಡಿರುವ ಅಂಶವನ್ನು ಮೊತ್ತ ಮೊದಲಿಗೆ ಬಯಲು ಮಾಡಿದ್ದು ಈ ಕೃತಿಯಲ್ಲಿನ ಮೊದಲ ಲೇಖನ (ಪ್ರವೇಶ). ಆ ಅಂಶವನ್ನು ಬಯಲಿಗೆಳೆಯುವಾಗಲೇ ಜಾನಪದ ಕಲಾವಿದರ ಸ್ಥಿತ್ಯಂತರಗಳ ಕಡೆಗೂ ಹೆಚ್ಚು ಗಮನ ಹರಿಸಲಾಗಿದೆ. ಅಂತೆಯೇ ತಮ್ಮ ಅರಿವಿಗೆ ಬಾರದಂತೆ ಶೋಷಣೆಗೊಳಗಾಗಿರುವ ಕಲಾವಿದರು ಎಚ್ಚೆತ್ತುಕೊಳ್ಳಬೇಕಾದ ಪರಿಸ್ಥಿತಿಯ ಸೂಕ್ಷ್ಮಾವಲೋಕನ ಮಾಡಿರುವ ಮೌಲ್ಯಯುತ ವಾದ ಲೇಖನವಾಗಿದೆ. 'ಪ್ರಜಾವಾಣಿ'ಯಲ್ಲಿ ಈ ಲೇಖನ ಮೊದಲ ಸಲ ಅಚ್ಚಾದಾಗ ಜಾನಪದ ಅಭ್ಯಾಸ ಮಾಡುವ ವಲಯದಲ್ಲಿ ಹೊಸ ಅಲೆಯುಂಟಾಯಿತು.

ಜಾನಪದ ಗ್ರಾಮದ ಗಡಿರೇಖೆಯೊಳಗೆ ಮಾತ್ರ ಲಭಿಸುವಂಥದೆಂಬ ಮಾತು ತುಂಬಾ ಸಂಕುಚಿತವಾದುದು. ಅದು ಸರ್ವಾಂತರ್ಯಾಮಿಯಾದುದು. ನಾಜೂಕು ಗಳನ್ನು ಮೈಗೂಡಿಸಿಕೊಂಡಿರುವ, ಪ್ರಗತಿ ಹೊಂದಿರುವ ಪ್ರದೇಶಕ್ಕೆ ಹೋದರೂ ಅವರದೇ ನಂಬಿಕೆ, ಆಚರಣೆ, ಸಂಪ್ರದಾಯಗಳಿದ್ದೇ ಇರುತ್ತವೆ. ಅಂದಮೇಲೆ ಒಂದು ಗುಂಪಿನ ಅಥವಾ ಒಂದು ಸಮುದಾಯದ ಸಮಗ್ರ ಹಾಗೂ ಶಾಸ್ತ್ರೀಯ ಅಧ್ಯಯನ ಜಾನಪದ ಎಂಬ ಮಾತನ್ನು ಒಪ್ಪಬೇಕು. "ಕನಿಷ್ಟ ಪಕ್ಷ ಇಬ್ಬರಿಗಿಂತ ಹೆಚ್ಚು ಮಂದಿ ಒಂದು ಅಂಶವನ್ನಾದರೂ ಸಮಾನವಾಗಿ ಹಂಚಿಕೊಂಡಿದ್ದು ಆ ಅಂಶ ಅವರ ನಂತರದ ಪೀಳಿಗೆಯವರಿಗೆ ವರ್ಗವಾಗುವಂತಿರಬೇಕು. ಈ ವಿಶಾಲ ಅರ್ಥದಲ್ಲಿ ವಿದ್ಯಾರ್ಥಿ ಸಮುದಾಯದ ಅಧ್ಯಯನಕ್ಕೆ ತೊಡಗುವುದು" ಕೊನೆಯ ಎರಡು ಲೇಖನಗಳ ಆಶಯವಾಗಿದೆ.

ಗ್ರಾಮ ಮತ್ತು ನಗರದಲ್ಲಿ ಆಚರಿಸುವ ಪೂಜೆ, ಬಲಿ, ನಂಬಿಕೆ, ನಡವಳಿಕೆಗಳು ಸಂಸ್ಕೃತಿಗೆ ಸಂಬಂಧಪಟ್ಟಿರುತ್ತವೆ. ಅಂತೆಯೇ ವಿದ್ಯಾರ್ಥಿ ಸಮುದಾಯದಲ್ಲೂ ಅವರವೇ ಆದ ನಂಬಿಕೆ, ನಡವಳಿಕೆಗಳಿದ್ದು ಅವು ಕೂಡ ಸಂಸ್ಕೃತಿಗೆ ಸಂಬಂಧಪಟ್ಟವೇ ಆಗಿರುತ್ತವೆ. ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಪ್ರವಹಿಸುವ ಗುಣ ಗಳೆಲ್ಲಾ ಅವಕ್ಕಿವೆ. ಅವರು ಆಡುವ ವಿಶಿಷ್ಟಾರ್ಥದ ಮಾತುಗಳು, ಅವರ ಸಂಕೇತಗಳು ಅವರು ರೂಪಿಸುವ ಜೋಕುಗಳು, ಅಧ್ಯಾಪಕರನ್ನು ಕುರಿತು ಕಟ್ಟುವ ಗೀತಗಳು, ಒಡನಾಡಿಗಳ ಬಗೆಗಿರುವ ವಿಚಿತ್ರ ಭಾವನೆಗಳು ಯಥಾವತ್ತಾಗಿ ಮುಂಬರುವ ವಿದ್ಯಾರ್ಥಿ ಸಮೂಹಕ್ಕೆ ಪ್ರವಹಿಸುತ್ತವೆ. ಇವುಗಳಲ್ಲಿ ಕೆಲವಕ್ಕೆ ಮುಕ್ತ ಅಭಿವ್ಯಕ್ತಿ ದೊರೆಯುತ್ತವೆ. ಉಳಿದವಕ್ಕೆ ಗುಪ್ತ ಅಭಿವ್ಯಕ್ತಿ ದೊರೆಯುತ್ತವೆ. ಅದಕ್ಕೆ ಸಾಧನವಾಗಿ ಕಕ್ಕಸು ರೂಮುಗಳು ಬಳಕೆಯಾಗಿರುವುದು ನಗರದ ಯಾವ ಕಾಲೇಜು, ಶಾಲೆಗಳಲ್ಲೂ ಕಾಣಬಹುದು. ಇದಕ್ಕೆ ಮುಖ್ಯ ಕಾರಣವೆಂದರೆ ನಮ್ಮ ಸಮಾಜ ದಲ್ಲಿನ್ನೂ ಮಾನಸಿಕ ಮೈಲಿಗೆ ಇರುವುದು. ಅಕ್ಷರಸ್ಥರು ಅಂಥ ಭಾವನೆಗಳಿಂದ

ಒಡಿದಿರಿಸಲ್ಪಟ್ಟಿರುತ್ತಾರೆ. ಆದರೆ ಗ್ರಾಮಾಂತರದಲ್ಲಿ ವಾಸಿಸುವ ಜನ ನಿಸ್ಸಂಕೋಚ ವಾಗಿ ಲಿಂಗ, ಯೋನಿ ಸಂಭೋಗಗಳ ಬಗೆಗೆ ಮಾತಾಡಬಲ್ಲರು. ಅವರು ಬಳಸುವ ಬೈಗುಳಗಳಲ್ಲಿ ಕೋಪ, ಸೇಡು, ಮಾನಸಿಕ ಉದ್ವಿಗ್ನತೆಯನ್ನು ಕಾಣಬಹುದು. ಅವು ಸಂಸ್ಕೃತಿಯಲ್ಲಿ ಸೇರಿಕೊಳ್ಳಬಲ್ಲವಾದರೆ, ವಿಕೃತ ಮನಸ್ಸಿನ ಅತೃಪ್ತ ಸ್ಥಿತಿಯ ಅಭಿವ್ಯಕ್ತಿಗಳಾದ ಕಕ್ಕಸುಗೋಡೆ ಬರಹಗಳು ಸಂಸ್ಕೃತಿಯಲ್ಲಿ ಸೇರವೇ ? ಇನ್ನೊಂದು ಮುಖ್ಯ ಪ್ರಶ್ನೆಯೆಂದರೆ ಈ ಹೊತ್ತಿನ ಭಾರತದ ಸಂಸ್ಕೃತಿಯು ಯಾವ ಮತಧರ್ಮ ದವರ ಸ್ವತ್ತಾಗಿರದೆ, ಪ್ರತಿಯೊಬ್ಬರಿಗೂ ಭಿನ್ನಭಿನ್ನ ಸಂಸ್ಕೃತಿ ಇರುವಾಗ ಸಾಮೂಹಿಕ ವಾಗಿಲ್ಲದ ಈ ವೈಯಕ್ತಿಕ ಕ್ರಿಯೆ ಪ್ರತಿಕ್ರಿಯೆಗಳನ್ನು ಸಮುದಾಯದ ಚಟುವಟಿಕೆ ಎಂದು ಸ್ವೀಕರಿಸಲು ಸಾಧ್ಯವೇ ? ಯಾಕೆಂದರೆ ಪ್ರತಿಯೊಂದು ಗ್ರಾಮಗಳೂ ಜಾತಿಗನುಗುಣವಾಗಿ "ಓಣಿ, ಕೇರಿಗಳಾಗಿ ವಿಭಜಿಸಲ್ಪಟ್ಟು ಒಂದು ಜಾತಿಯಿಂದ ಇನ್ನೊಂದು ಜಾತಿಗೆ, ಒಂದು ಓಣಿಯಿಂದ ಇನ್ನೊಂದು ಓಣಿಗೆ ಊಟ, ತಿಂಡಿ, ಹೆಣ್ಣು ಗಂಡು ವ್ಯವಹಾರವಿಲ್ಲದೆ ಪ್ರತಿಯೊಂದು ಜಾತಿ ಮತ್ತು ಓಣಿ ಪ್ರತ್ಯೇಕ ಘಟಕ ಗಳಾಗಿ ಉಳಿದುಬಿಟ್ಟಿವೆ" (ಸಂಕ್ರಮಣ ೧೦೦–೧೦೧, ಪುಟ ೯೧). ಇಂಥ ಭಿನ್ನಭಿನ್ನ ವೈಯಕ್ತಿಕವಾದ ಆಚಾರ ವಿಚಾರಗಳು ಸಮಷ್ಟಿಯ ಆಚಾರ ವಿಚಾರ ಆಗದಿದ್ದಾಗ ಸಂಸ್ಕೃತಿ ಹೇಗಾದೀತು ? ಆದ್ದರಿಂದ 'ಕಕ್ಕಸಿನ ಗೋಡೆಬರಹಗಳು' ವಿಕೃತ ಕಾಮ ವನ್ನು ಹೊಂದಿರುವ ಮನಸ್ಥಿತಿಯ ಅಭಿವ್ಯಕ್ತಿಯೆನಿಸಿದರೂ ಒಂದು ಸಮುದಾಯದ ಅಭಿವ್ಯಕ್ತಿಯಾಗಿ ಬಿಡುತ್ತವೆ, ಅವುಗಳ ಅಂತರ್ಯದಲ್ಲಿ ಒಂದು ಸಮುದಾಯದ ಆಶೋತ್ತರಗಳೇ ಅಡಗಿವೆ. ಇವು ಒಂದು ಪೀಳಿಗೆಗೆ ಮಾತ್ರ ಸಂಬಂಧಪಡದೆ ಮುಂದಿನ ಪೀಳಿಗೆಗೆ ಪ್ರವಹಿಸುತ್ತವೆ ; ಮಾರ್ಪಾಟು ಹೊಂದಿರುತ್ತವೆ. ಇವು ವಿದ್ಯಾವಂತ ಸಮುದಾಯದಲ್ಲಿ ವಾಕ್‌ರೂಪದಲ್ಲಿವೆ. ಸಾಂಪ್ರದಾಯಿಕ ಮನೋಭಾವ ವಿಲ್ಲದ ಅಮೆರಿಕ, ಇಂಗ್ಲೆಂಡ್ ದೇಶದ ಸಮಾಜಗಳಲ್ಲಿ ಅವು ಮಾತುಗಳ ರೂಪದಲ್ಲೂ ಬರಹಗಳ ರೂಪದಲ್ಲೂ ಇದ್ದಾವು.

'ಕಕ್ಕಸು ಗೋಡೆ ಬರಹಗಳು' ಲೈಂಗಿಕತೆಯ ಬಗೆಗಿನವುಗಳಾದರೆ 'ಆಟೋಗ್ರಾಫ್' ಗಳಲ್ಲಿ ಅದರ ಛಾಯೆ ಕಂಡುಬರುತ್ತದೆ. ಈ ಎರಡೂ ರೀತಿಯ ಲೇಖನಗಳಲ್ಲಿ ಒಂದು ಸಮುದಾಯದ ಮಾನಸಿಕ ಸ್ಥಿತ್ಯಂತರಗಳನ್ನು ಗುರುತಿಸಲಾಗಿದೆ. ಈ ಎಲ್ಲ ಲೇಖನಗಳಲ್ಲೂ ರಂಗಾರೆಡ್ಡಿ ಕೋಡಿರಾಂಪುರ ಅವರ ಸಂಶೋಧನಾತ್ಮಕ ದೃಷ್ಟಿಯನ್ನು ನಿಚ್ಚಳವಾಗಿ ಕಾಣಬಹುದಾಗಿದೆ. "ವಿಷಯಗಳನ್ನು ಗ್ರಹಿಸುವ ವಿಭಜಿಸಿ ವಿಶ್ಲೇಷಣೆ ಮಾಡುವ, ಅಸಂಬದ್ಧವಾಗಿರುವ ವಿವರಗಳನ್ನೂ ಒಂದು ಸೂತ್ರಕ್ಕೆ ವಿವೇಚನಾ ಕ್ರಮಕ್ಕೆ ಬದ್ಧಗೊಳಿಸುವ ನಿಮ್ಮ ರೀತಿಯಿಂದ ಪ್ರಭಾವಿತನಾದೆ. ಎಂಥ ಜಿಡುಕಿನ ವಿಷಯಗಳನ್ನೂ ಸಂಶಯಕ್ಕೆ ಒಂದು ರಾಗಿ ಕಾಳಿನಷ್ಟೂ ಅವಕಾಶವಿಲ್ಲದಂತೆ ಸಲೀಸಾಗಿ ನೀರು ಕುಡಿದಷ್ಟು ಸಲೀಸಾಗಿ ಹೇಳುವ ನಿಮ್ಮ ಶೈಲಿ ಕಂಡು ಅಸೂಯೆಪಟ್ಟೆ" ಎಂದು ಅವರ ಬರವಣಿಗೆಯನ್ನು ಕುರಿತು ಡಾ॥ ಚಂದ್ರಶೇಖರ ಕಂಬಾರರು ಹೇಳುವಂತೆ

ಅವರ ನಿರೂಪಣಾಕ್ರಮ ಎಲ್ಲಿಯೂ ತೊಡಕಾಗದೆ ಬಹಳ ಸಲೀಸಾಗಿ ಓದಿಸಿಕೊಂಡು ಹೋಗುತ್ತದೆಂಬುದರಲ್ಲಿ ಯಾವ ಅನುಮಾನವೂ ಕಾಣದು.

ಕನ್ನಡ ಜಾನಪದ ಕ್ಷೇತ್ರದಲ್ಲಿ ಈಗಾಗಲೇ ಸಂಗ್ರಹವಾಗಿರುವ ಸಾಹಿತ್ಯದ ವೈಜ್ಞಾನಿಕ ದೃಷ್ಟಿಯ ಅಭ್ಯಾಸ ನಡೆದಿಲ್ಲದ ಈ ಸಂದರ್ಭದಲ್ಲಿ ಈ ಕೃತಿ ಅಂಥ ಅನೇಕ ತೊಡಕುಗಳನ್ನು ಬಗೆಹರಿಸುವ ಮೊದಲ ಪ್ರಯತ್ನವಾಗಿ ಗಮನ ಸೆಳೆಯುತ್ತದೆ. ಹೊಸ ಹೊಸ ಶಾಖೆಗಳು ಜಾನಪದ ಕ್ಷೇತ್ರವನ್ನು ಸೇರಿಕೊಂಡು ಕ್ಷೇತ್ರ ವೈಶಾಲ್ಯ ವೇರ್ಪಡಬೇಕಾಗಿದೆ. ಸಮಾಜ ಇಂಥ ಕೃತಿಗಳನ್ನು ಆರೋಗ್ಯಪೂರ್ಣವಾದ ಮನಸ್ಸಿನಿಂದ ಸ್ವೀಕರಿಸಿ, ಸಹಕರಿಸಬೇಕಾಗುತ್ತದೆ. ಕೃತಿಕಾರರು ಮುಂದೆ ಇನ್ನೂ ಹೆಚ್ಚು ಮೌಲಿಕ ಬರಹಗಳನ್ನು ನೀಡಬಲ್ಲರೆಂಬ ಭರವಸೆ ಮೂಡಿಸುತ್ತದೆ ಹೊಸ ಆಯಾಮದ 'ಲಿಖಿತ ಜಾನಪದ'. (ಈ ಲೇಖಕ ಜಿ.ಆರ್. ತಿಪ್ಪೇಸ್ವಾಮಿಯವರೊಡನೆ ಈ ಕೃತಿಯ ಬಗೆಗೆ ನಡೆಸಿದ ವಿಚಾರ ಚರ್ಚೆಯ ಸಂದರ್ಭದಲ್ಲಿ ಅಭಿವ್ಯಕ್ತವಾದ ಅನೇಕ ಅಂಶಗಳನ್ನು ಈ ಲೇಖನ ಬರೆಯುವಾಗ ಬಳಸಿಕೊಂಡಿರುವುದರಿಂದ ಅವರಿಗೆ ಕೃತಜ್ಞ).

ಕುಂವೀ ಅವರ 'ಕಪ್ಪು': ಒಂದು ಅವಲೋಕನ

ಯಳನಾಡು ಅಂಜನಪ್ಪ

ಕುಂ. ವೀರಭದ್ರಪ್ಪನವರ ಮೊದಲ ಕಾದಂಬರಿ 'ಕಪ್ಪು'. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನಿತ ಕೃತಿ. ಆಂಧ್ರ ಸೀಮೆಗೆ ಹೊಂದಿಕೊಂಡಿರುವ ಬಳ್ಳಾರಿ ಜಿಲ್ಲೆಯಲ್ಲಿ ನಡೆಯುವ ಕತೆ ಆ ಪ್ರದೇಶಗಳ ಕ್ರೌರ್ಯ ವನ್ನು ಪೂರ್ಣವಾಗಿ ಮೈಗೂಡಿಸಿಕೊಂಡು ಎರಡು ದುಷ್ಟಶಕ್ತಿಗಳ ನಡುವೆ ದುರ್ಬಲ ಬದುಕೊಂದು ನುಚ್ಚು ನೂರಾಗುವ ಹೃದಯ ವಿದ್ರಾವಕ ಚಿತ್ರಣವನ್ನು ಕೊಡುತ್ತದೆ.

ಮಾಸೂರಿನ ಎರೆ ಹೊಲಗಳಲ್ಲಿ ಪುಷ್ಟಿಯಾಗಿ ಬೆಳೆದುನಿಂತ ಫಸಲು. ಕಬ್ಬು ನಿಂತಂಗೆ ನಿಂತ ಜೋಳದ ರಸಭರಿತ ತೆನೆಗಳಲ್ಲಿನ ಮುತ್ತಿನಂತಾ ಕಾಳುಗಳಿಗೆ ಮುತ್ತುವ ಗುಬ್ಬಿಗಳ ಹಿಂಡುಗಳು. ಈ ಹಿನ್ನೆಲೆಯಲ್ಲಿ ಕೆಳಮನೆ ಸಿದ್ದಪ್ಪನ ಗದ್ದೆಯಲ್ಲಿ ಸೀರೆಯನ್ನು ತೊಡೆಮಟ್ಟ ಏರಿಸಿ ಕಚ್ಚೆ ಕಟ್ಟಿಕೊಂಡು ಹತ್ತಾರು ಹೆಣ್ಣುಗಳ ನಡುವೆ ಬಗ್ಗಿ ಕಳೆ ತೆಗೆಯುತ್ತಿದ್ದ ಕೆಳವರ್ಗದ ಭರಮಜ್ಜನ ಮಗಳು ಗೌರಿಯನ್ನು ಹಾಗೂ ಬೊಗಸೆಗೂ ಹಿಡಿಸದಿದ್ದ ಅವಳ ಎದೆಯನ್ನು ಮಾಸೂರಿನ ಕರಿಗೌಡ ರಸ್ತೆ ಪಕ್ಕದಲ್ಲಿ ತನ್ನ ಜೀಪನ್ನು ನಿಲ್ಲಿಸಿ ಕಣ್ತುಂಬ ನೋಡಿಹೋಗಿ ಮರುದಿನ

ಬೆಳಗ್ಗೆ ಗೌರಿಯ ತಂದೆ ಭರಮಜ್ಜನನ್ನು ಕರೆತರಲು ತನ್ನ ಆಳು ಪರುಸನನ್ನು ಕಳಿಸುವನು. ಜೋಳದ ತೆನೆಗಳಿಗೆ ಮುತ್ತುವ ಹಕ್ಕಿಗಳನ್ನು ಕಾಯುತ್ತ ಹೊಲದಲ್ಲಿದ್ದ ಭರಮಜ್ಜನಿಗೆ ಗೌಡ ಹೇಳಿಕಳಿಸಿರುವ ಸುದ್ದಿಯನ್ನು ಅವನ ಮಂಗ ಚಂಬಸ್ಯ ಮುಟ್ಟಿಸಿದಾಗ : ಭರಮಜ್ಜನ ಬಾಯಿ ಒಣಗಿ ಮಾತನಾಡಲಾಗದೆ ತೊದಲಿ ನಡುಕ ಹುಟ್ಟುತ್ತದೆ.

ಸುತ್ತೂ ಆರು ಮೈಲಿ ದೂರಕ್ಕೆ ಕಾಣಿಸೋ ಗೌಡನ ಮನೆ; ಅವನ ಆರಡಿ ಎತ್ತರದ ಸುಮಾರು ಒಂಭತ್ತು ಮಣ ತೂಕದ ಮೈ, ಎಣ್ಣೆಗೆಂಪಿನ ಮುಖ, ಕೆಂಡದಂತ ಕಣ್ಣು, ಗಲ್ಲಿಮೀಸೆ, ಗೇಣೂವರೆ ಉದ್ದದ ತಲೆಗೂದಲು, ಜೇಪಿನ ಬುರ್ ಅನ್ನೋ ಶಬುದ ಹಾಗೂ ಎದುರಿಗೆ ಬಂದಾಗ ಕುಂತೇ ಇದ್ದ ತಪ್ಪಿಗಾಗಿ 'ಎಷ್ಟು ಪೊಕ್ರಲೆ ಸೂಳ್ಯಾಮಗ್ನೆ' ಎನ್ನುತ್ತ ಗೌಡ ಕಾಲಿನಿಂದ ಒದ್ದು ತನ್ನನ್ನು ಬೀಳಿಸಿದ್ದ ಇಂಥ ಅನೇಕ ನೆನಪುಗಳು ಭರಮಜ್ಜನ ಮುಂದೆ ಸುಳಿದದ್ದರಿಂದ ನಡುಕ ಉಂಟಾಗಿ ; ಚಂಬಸ್ಯನನ್ನು ಅಲ್ಲೇ ಬಿಟ್ಟು ಮನೆಗೆ ಬಂದು ಪಾತ್ರೆ ತೊಳೆಯುತ್ತಿದ್ದ ಗೌರಿಯನ್ನು ನೋಡಿ ಕಣ್ಣಲ್ಲಿ ನೀರು ತಂದು ಗೌಡನ ಮನೆಗೆ ಹೋದ.

ಭರಮಜ್ಜ ಗೌಡನ ಮನೆಹತ್ತಿರ ಬಂದಾಗ ತಲೆಗೆ ವಲ್ಲಿ ಸುತ್ತಿ ನಡ ಬಗ್ಗಿಸಿ ಕಂಠ ಸರಿಪಡಿಸುವಾಗ ತಲೆಯಿಂದ ಮುಂಡಾಸು ತೆಗೆಯುತ್ತ ಗೌಡನ ಮನೆಯಿಂದ ಹೊರಬಂದ ಪೂಜಾರಿ ಎಲ್ಲಪ್ಪ 'ಭರಮ ನೀನು ಪುಣ್ಯ ಮಾಡೀಯಲೆ' ಎಂದು ನಕ್ಕು ಹೋದ. ಎಲ್ಡುಮೊಳ ಅಗಲದ ಹೊಸ್ತಿಲು ದಾಟಿದಾಗ ಬಂದ 'ಬಾ...ಭರಮಜ್ಜ' ಅನ್ನೋ ಕರೆ ಅಜ್ಜನಿಗೆ ಆಶ್ಚರ್ಯ, ಭಯ ಮತ್ತು ಸಂದೇಹಗಳನ್ನು ಒಟ್ಟಿಗೆ ಉಂಟುಮಾಡಿದವು. ಭರಮಜ್ಜ 'ಅಡ್ಬುದ್ದೆ ದಣಿ' ಎಂದು ಕೈಕಟ್ಟಿ ಹೇಳಿದಾಗ ಆರಾಮ ಕುರ್ಚಿಯಮ್ಯಾಲೆ ಕುಂತಿದ್ದ ಗೌಡ ಎದ್ದು ಕಟ್ಟೆ ತುದಿಗೆ ಬರುವುದನ್ನು ಅವನ ಜಿರಿಕೆ ಚಪ್ಪಲಿಯಿಂದ ತಿಳಿದ ಭರಮಜ್ಜ ಸೊಲುಪ ಹಿಂದೆ ಸರಿದು 'ಬಾ ಅಂತ ಯ್ಯೋಳಿ ಕಳ್ಸಿದ್ರಂತೆ ದಣಿ' ಎಂದ ಬಹಳ ಕಷ್ಟಪಟ್ಟು. ಎಲ್ಲಪ್ಪನ ಕನಸಿನಾಗೆ ಅಮ್ಮ ಕಾಣಿಸಿ ಕೊಂಡು ಗೌರಿನ ಬಿಡ್ರಿ ಅಂತ ಕೇಳಿದ ವಿಷಯವನ್ನು ಗೌಡನಿಂದ ಕೇಳಿದ ಭರಮಜ್ಜ ; 'ಇರೋದು ಒಬ್ಳೇ ಮಗ್ಳು ದಣಿ, ನನ್ನ ಮಗ್ಳಲ್ಲ ದಣಿ ನಿಮ್ಮಗ್ಳು......' ಎಂದೆಲ್ಲ ಪರಿಪರಿಯಾಗಿ ಕಾಲಿಡಿದು ಬೇಡಿಕೊಂಡ. ಇದಾವುದನ್ನೂ ಲೆಕ್ಕಿಸದೆ ಭರಮಜ್ಜನನ್ನು ಕಾಲಿನಿಂದ ಜಾಡಿಸಿದ ಗೌಡ ಪರುಸನನ್ನು ಸನ್ನೆಮಾಡಿ ಕರೆದು ಭರಮಜ್ಜನ ಮಗಳನ್ನು ದ್ಯಾವ್ರಿಗೆ ಬಿಡುವ ವಿಷಯವನ್ನು ಮಾಸೂರಿನಲ್ಲೆಲ್ಲ ಸಾರುವಂತೆ ತಳವಾರ ಮಲ್ಲಿಗೆ ತಿಳಿಸಲು ಹೇಳಿ ಭರಮಜ್ಜನನ್ನು ಇನ್ನೊಮ್ಮೆ ಅಲಕ್ಷೆಯಿಂದ ನೋಡಿ ಒಳಗೆ ಹೋದಾಗ ಅಜ್ಜ ತನ್ನ ಮನೆ ಸೇರಿ ಎಲ್ಲರಿಗೂ ಹೇಳಿ ತಾನೂ ಅತ್ತು ಮತ್ತು ಇತರರನ್ನೂ ಅಳಿಸಿದ.

ಮರುದಿನ ಮಾಸೂರಿನಲ್ಲಿ ಸೂರ್ಯ ಹುಟ್ಟಿ ಎಲ್ಡು ಮೂರು ಮಾರು ಮ್ಯಾಲ ಕ್ಯೇರಿದ್ದ. ಎತ್ತುಗಳ ಕೊರಳಲ್ಲಿದ್ದ ಗಂಟೆಗಳ ಗಣಗಣ ಶಬುದ, ಊರ ನಡುವಿನ

ಈಸೂರ ಗುಡಿಯಲ್ಲಿ ಪ್ರಬವ ಇಬವ, ಸುಕ್ರ ಕಲಿಯುತ್ತಿದ್ದ ಮಕ್ಕಳ ಶಬುದ : ಒಟ್ಟಿಗೆ ಈ ಎಲ್ಲ ಶಬುದಗಳ ನಡುವೆ ಡಡ್ಡೆಣಕ್ಕು......ಣಕ್ಕು ಣಕ್ಕು ಎನ್ನುವ ಶಬುದದ ಜೊತೆಗೆ ಗೌರಿಯುನ್ನು ದೇವರಿಗೆ ಬಿಡುವ ವಿಷಯು, ಉಣ್ಣುಮಿ ಆದ ಮೂರ್ರ್ದಿನಕ್ಕೆ ಇರುವ ಜಾತ್ರಿಯ ವಿಷಯು ಎಲ್ಲವೂ ಊರಿನ ಎಲ್ಲರ ಕಿವಿಗೂ ತೇಲಿ ಬಂತು. ಈ ಸುದ್ದಿಯೇನೂ ಮಾಸೂರಿನ ಜನಕ್ಕೆ ಹೊಸದಾಗಿ ಕಾಣಲಿಲ್ಲ. ಊರಿನಲ್ಲಿರೋ ಮುಕ್ಕಾಲು ಮನೆಗಳಲ್ಲಿ ತಲಾ ಒಬ್ಬೊಬ್ಬರಂತೆ ಹೆಣ್ಣುಮಕ್ಕಳನ್ನು ದೇವರಿಗೆ ಬಿಟ್ಟಿರುವುದು ಇದಕ್ಕೆ ಕಾರಣವಾಗಿತ್ತು. ಈ ಸಂಪ್ರದಾಯ ಕರಿಗೌಡನ ತಾತ ಮುತ್ತಾತಂದಿರ ಕಾಲದಿಂದಲೂ ಬಂದಿದೆ. ಇದರಿಂದ ಮನೆತನದ ವೃದ್ಧಿಯಾಗುತ್ತದೆ ಅಂತ ಕರಿಗೌಡನ ತಂದೆ ಬಸವನಗೌಡ ತನ್ನ ಮನೆಗೆ ವ್ಯಾಲಿಂದ ಪ್ಯಾಲೆ ಹೇಳುತ್ತಿದ್ದನು. ಕರಿಗೌಡನ ತಾತ ತಮ್ಮಾರೆಡ್ಡಿ ಒಮ್ಮೆ ತನ್ನ ಆಳು ಸಿವ್ಗ ತನಗೆ ಗೊತ್ತಾಗದಂತೆ ತನ್ನ ಕುದುರೆ ಏರಿದ್ದರಿಂದ ಬಂದೂಕಿನಿಂದ ಧಡಲ್ ಅನ್ನಿಸಿ ಸಿವ್ಗನನ್ನು ಸಾಯಿಸಿದ್ದ. ಕರಿಗೌಡಗೆ ಪಂಪನಗೌಡ ಮತ್ತು ಸಿದ್ದನಗೌಡ ಇಬ್ಬರು ಹುಲಿಯಂತ ತಮ್ಮಂದಿರು ಇರುವುದರಿಂದಲೇ ಬಾಸೂರಿನ ಸಣ್ರುದ್ರನನ್ನು ಗೌಡ ಎದುರುಹಾಕಿಕೊಂಡಿರುವುದು.

ಮಾಸೂರಿನ ಹತ್ತಿರವೇ ಇರುವ ಮತ್ತೊಂದು ಊರು ಬಾಸೂರು. ಸಣ್ರುದ್ರ ಆ ಊರಿನ ಪಾಳ್ಳೇಗಾರ. ಇವನು ಕರಿಗೌಡನಿಗೆ ಯಾವುದರಲ್ಲೂ ಕಡಿಮೆಯಿಲ್ಲ. ಆದರೆ ಅಂತ ಹೇಳಿಕೊಳ್ಳುವಂತ ಶ್ರೀಮಂತನಲ್ಲ. ಎಂಟು ವರ್ಷಗಳಿಗಿಂತ ಹಿಂದೆ ಕರಿಗೌಡಗೆ ಸಣ್ರುದ್ರ ತುಂಬ ಬೇಕಾದ ವ್ಯಕ್ತಿ. ಕೋಳಿಯಿಂದ ಹಿಡಿದು ಸೂಳೆವರೆಗೆ ಅವರಿಬ್ಬರೂ ಒಂದೇ ತಟ್ಟೆಯಲ್ಲಿ ಕುಂಡ್ರುತ್ತಿದ್ದರು. ಆದರೆ ಈ ಎಂಟು ವರ್ಷಗಳಿಂದ ಅವರಿಬ್ಬರೂ ಬದ್ಧ ದ್ವೇಷಿಗಳು. ಇದಕ್ಕೆ ಕಾರಣವೂ ಇತ್ತು. ಉತ್ನೂರು ದುರ್ಗ್ಯಾನ ಸೂಳೆ ಲಚುಮಿಯನ್ನು ಕರಿಗೌಡ ಮಾಸೂರಿಗೆ ತಂದಿಟ್ಟಿದ್ದ. ಅದಕ್ಕೆ ದುರ್ಗ್ಯಾ ಹಾಡುಹಗಲೇ ಗೌಡನ ಎದುರಿನಲ್ಲೇ ಅವನ ಎಂಟು ಹುಲ್ಲಿನ ಬಣವೆಗಳನ್ನು ಸುಡಿಸಿದ್ದ. ಇಂತಾ ಶತ್ರುವನ್ನು ಮುಗಿಸಿದ್ದಕ್ಕಾಗಿ ಬಾಸೂರಿನ ಇಪ್ಪತ್ತೆಕ್ರೆ ಗದ್ದೆಯನ್ನು ಮಾತಿನಂತೆ ಗೌಡ ಸಣ್ರುದ್ರಗೆ ಮಾಡಿಸಿದ್ದ. ಆದರೆ ತಮ್ಮ ಪಂಪನಗೌಡನ ಮಾತು ಕೇಳಿ ಗೌಡ ಐವತ್ತು ಜನರನ್ನು ಕಳಿಸಿ ಸಣ್ರುದ್ರನ ಕಣದಲ್ಲಿದ್ದ ಭತ್ತದ ರಾಶಿಯನ್ನೆಲ್ಲ ಏರಿಸಿ ತರಿಸಿದಾಗಲಿಂದ ಇಬ್ಬರಿಗೂ ಹಗೆ. ಇದಕ್ಕೆ ಪ್ರತಿಯಾಗಿ ಸಣ್ರುದ್ರ ಮಾಸೂರಿಂದ ಗೌಡನ ಮೂರು ಲಾರಿ ಶೇಂಗಾ ಏರಿಸಿಕೊಂಡು ಹೋಗಿದ್ದ.

ಮಾಸೂರಿನಲ್ಲಿ ಮಾರೆಮ್ಮನ ಜಾತ್ರೆಗೆ ಸಿದ್ಧತೆಗಳು ನಡೆಯುವುವು. ಒಂದು ದಿನವೆಲ್ಲ ಕಾದಿದ್ದು ಎಲ್ಲಪ್ಪಗೌಡನ ಹತ್ತಿರ ಹೋಗಿ ಇಂಗಿಂಗೆ ಅಂತ ಕೇಳಿ ಕಾಳು ಎತ್ತಲು ಮತ್ತು ಮಾರೆಮ್ಮನ ಗುಡಿ ಸುತ್ತಲೂ ಸಿಂಗಾರ ಮಾಡಲು ಅಪ್ಪಣೆ ಪಡೆದು ಜಾತ್ರಿಗಾಗಿ ಹೂಗಾಡುತ್ತ, ಬಂದ ಎಲ್ಲಪ್ಪ ಸಂಜೆ ಹೊತ್ತಿಗೆ ಸರಿಯಾಗಿ ವಿಧವೆ ಸಿವರುದ್ರಿಯ ಮನೆಗೆ ಬರುವನು. ಆಕೆಯಿಂದ ತಾನು ಪದೇ ಪದೇ 'ಎಣ್ಣಾ' ಅಂತ

ಕರೆಸಿಕೊಂಡಿದ್ದರಿಂದ ಇಷ್ಟು ಜಲ್ದಿ ತನಗೆ ವಯಸ್ಸಾಗಬಾರದಿತ್ತು ಅಂದುಕೊಂಡು ಮನೆಗೆ ಅದೇ ಹೋದ.

ಇತ್ತ ಸಂಜೆಯಾಗಿ ಕತ್ತಲಾಗಿದ್ದರೂ ಭರಮಜ್ಜನ ಸಂಸಾರ ಯಾವುದೋ ಯೋಚನೆಯಲ್ಲಿ ಮಗ್ನವಾಗಿತ್ತು. ಒತ್ತು ಉಟ್ಗೋ ಮೊದ್ಲು ಈ ಊರಿಂದ ನಾವು ದೂರ ಒಲ್ಟೋಗಬೇಕು ಎಂದು ಚೆಂಬಸ್ಯ ತೀರ್ಮಾನಿಸಿ ಹೇಳಿದಾಗ ಮುದುಕಿ ಒಲಾ ! ಮನಿ ! ! ಎನ್ನುವಳು. ಅದಕ್ಕೆ ಚಂಬಸ್ಯ ಮಾನ ಮರ್ಯಾದೆಯಿಂದ ನಾವ್ ಬದುಕಿದ್ರೆ ಎಲ್ಡೆಲ್ಲು ಒಲಾ ಎಲ್ಡೆಲ್ಲು ಮನಿ ತಗಾಬವುದು ಎಂದಾಗ ಎಲ್ಲರೂ ಆ ರಾತ್ರಿಯೇ ಮಾಸೂರು ನಿರ್ಧಾರಮಾಡುವರು. ಕತ್ತಲೆಯ ಆಕಾಶದಲ್ಲಿ ಚಿನ್ನಮ್ಮನ ದಂಡೆ ಪಶ್ಚಿಮಕ್ಕೆ ತುಸು ವಾಲಿದ್ದಾಗ ಭರಮಜ್ಜನ ಪರಿವಾರ ಮಾಸೂರನ್ನು ಬಿಟ್ಟಿತು. ಸ್ವಲ್ಪದೂರದ ಪ್ರಯಾಣದನಂತರ ಭರಮಜ್ಜ 'ಎಲ್ಲಿಗೋಗಾದು ಮಗಾ' ಎಂದಾಗ ಬ್ಯಾಲಾಳಿಗೆ ಹೋಗೋದು ಸರಿಯಲ್ಲ ಎನ್ನಿಸಿತು ಚೆಂಬಸ್ಯನಿಗೆ. 'ಭರಮಜ್ಜನ ಹೆಂಡತಿ ತಂಗಿ ಮಕ್ಕಳು ಬ್ಯಾಲಾಳಿನಲ್ಲಿದ್ದರು. ಗದರಿಸಿದರೆ ಅವರು ಬೆನ್ನುಕೊಟ್ಟು ಓಡಿಹೋಗಿ ಗೌಡನ ಕೈಲಿ ಸೈ ಅನ್ನಿಸಿಕೊಳ್ಳಬೇಕೆಂದು ತಮ್ಮನ್ನು ಹಿಡಿದುಕೊಟ್ಟರೂ ಕೊಡಬಹುದೆನ್ನುವ ಭಯ ಚಂಬಸ್ಯನಿಗೆ. ಕಂದಗಲ್ಲು ಕಾಡನ್ನು ದಾಟಿದಾಗ ಬೆಳ ಗಾಯಿತು. ಗೊತ್ತಿಲ್ಲದ ಕಡೆಗೆ ಬಂಡಿ ಸಾಗಿ ಕೊನೆಗೆ ಒಂದು ಹಾಲದ ಮರದ ಹತ್ತಿರ ಎತ್ತುಗಳ ಕೊಳ್ಳರಿದು ಹತ್ತಿರದ ನೀರಿನ ಗುಂಡಿಯಲ್ಲಿ ಸಾಕಷ್ಟು ನೀರು ಕುಡಿಸಿದರು. ಗೌರಿ ಆ ನೀರಿನಲ್ಲಿ ಮೈತೊಳೆದುಕೊಂಡಳು ಹೊತ್ತು ಆಗಲೆ ಎಲ್ಡು ಮೂರು ಮಾರು ಮ್ಯಾಲೇರಿತ್ತು. ಕೈಲಿ ಬಡಿಗೆ ಹಿಡಿದು ಅಲ್ಲಿಗೆ ಬಂದ ಐದಾರು ಜನ ಇವರನ್ನು ಪ್ರಶ್ನಿಸಿದಾಗ ಮಾಸೂರಿನವರೆಂದಿತು ಮುದುಕಿ. ಅದು ಸಣ್ರುದ್ರನ ಬಾಸೂರು ಎಂದು ತಿಳಿದ ಮೇಲೆ ಚಳಿಜ್ವರ ಬಂದವರಂತೆ ನಡುಗಿದರು ಎಲ್ಲರೂ. ಭರಮಜ್ಜನ ಮುದಿ ಗಣ್ಣುಗಳಿಂದ ನೀರು ಹಳಿಹನಿಯಾಗಿ ಇನುಕುತ್ತಿತ್ತು.

ಭರಮಜ್ಜ ಹೆಂಡ್ತಿ ಮಕ್ಕಳನ್ನು ಕಟ್ಟಿಕೊಂಡು ಓಡಿಹೋದ ಸುದ್ದಿಯನ್ನು ಗೌರಿಗೆಳತಿ ಅಗಸರ ಚಿಕ್ಕಿ ಊರಿಗೆಲ್ಲ ಹರಡುವಳು. ಬಹಳಷ್ಟು ಜನರು ಮನಸ್ಸಿನಲ್ಲಿ ಭರಮಜ್ಜನ ಧೈರ್ಯವನ್ನು ಹೊಗಳದೇ ಇರಲಿಲ್ಲ. ರಿಂದಮ್ಮನಿಂದ ಸುದ್ದಿ ತಿಳಿದ ಎಲ್ಲಪ್ಪಗೌಡನ ಮನೆಗೆ ಸುದ್ದಿ ಮುಟ್ಟಿಸಿದಾಗ ಗೌಡ ಕಟಕಟ ಹಲ್ಲುಕಡಿದ. ಕಟ್ಟಿಗೆ ಕಡಿಯುತ್ತಿದ್ದ ಪರುಸನನ್ನು ಕರೆಸಿ ಪಾತಾಳದಲ್ಲಿದ್ದರೂ ಭರಮನನ್ನು ಹಿಡಿದು ತರುವ ಕೆಲಸವನ್ನು ಒಪ್ಪಿಸಿದ. ಹೇಳಿದ ಕೆಲಸವನ್ನು ಮುಗಿಸದೆ ಹಿಂದೆ ವಾಪಸಾಗುವ ಜಾಯಮಾನವಲ್ಲ ಪರುಸನದು. 'ಭರಮಜ್ಜನ ನೆಂಟರ ಊರಾದ ಅಕ್ಕಾಪುರಕ್ಕೆ ಬಂದ ಪರುಸ ಭರಮಜ್ಜ ಅಲ್ಲಿಗೆ ಬಂದಿಲ್ಲವೆನ್ನುವುದನ್ನು ತಿಳಿದು ಬ್ಯಾಲಾಳುವಿಗೆ ಬರುವನು. ಅಲ್ಲೂ ಪತ್ತೆಯಾಗದ್ದರಿಂದ ಬೇವೂರ್ಗೆ ಹೋಗುವ ಮನಸ್ಸುಮಾಡಿ ದಾರಿ ಸವೆಸುತ್ತಿರುವಾಗ ದಾರಿಹೋಕರಿಂದ ಭರಮಜ್ಜ ಬಾಸೂರಿನಲ್ಲಿರುವುದು ಕೇಳಿ ತಿಳಿದು ಆ ಊರಿಗೆ ಪ್ರಯಾಣಿಸುವನು.

ಆಟವಾಳಿಗೆಯಲ್ಲಿ ಲೋಡಿಗಾತು ಕೂತಿದ್ದ ಸಣ್ಣುದ್ರನನ್ನು ಕಾಣುತ್ತಲೇ ಭರಮಜ್ಜ ಅತ್ತುಬಿದ್ದು ಎಲ್ಲ ವಿಷಯವನ್ನೂ ಹೇಳಿದಾಗ, ಸಣ್ಣುದ್ರ 'ಅಂಗಾ ಸಮಾಚಾರ' ಎನ್ನುತ್ತ ಒಳ್ಳೆ ಭಾಷಣಕಾರನಂತೆ ಜೀವನದ ಬಗ್ಗೆ ಮಾತನಾಡಿದಾಗ ಭರಮಜ್ಜ ಅವನನ್ನು ದೇವರ ಅವತಾರವೆಂದೇ ಭಾವಿಸಿದ. ಸಣ್ಣುದ್ರ ಭರಮಜ್ಜನಿಗೆ ಒಂದು ಮನೆ ಖಾಲಿಮಾಡಿಸಿ ಎಂಟು ದಿನಕ್ಕೆ ಸಾಕಾಗುವಷ್ಟು ಧಾನ್ಯವನ್ನೂ ಕೊಡಿಸಿದ. ಬೇರೆ ಕಡೆ ಕೂಲಿಗೆ ಗೌರಿಯನ್ನು ಕಳಿಸದೆ ತನ್ನ ಹೊಲದಲ್ಲೆ ಕೆಲಸ ಮಾಡುವಂತೆ ಒಪ್ಪಿಸಿದ್ದ. ಒಂದು ದಿನ ತೋಟದ ಭಾವಿಯಲ್ಲಿ ಗೌರಿ ಬಟ್ಟೆ ತೊಳೆಯುವಾಗ ಗಡ್ಡೆಮೇಲಿದ್ದ ಸಣ್ಣುದ್ರ ಪಂಪನ ರೂಮಿನ್ಯಾಗಿನ ಡಬ್ಬಿ ತರಲು ಹೇಳಿದ. ಆಕೆ ರೂಮಿನಲ್ಲಿ ಡಬ್ಬಿ ಹುಡುಕುವಾಗ ಹಿಂದಿನಿಂದ ಬಂದು ಬಾಗಿಲ ಚಿಲಕ ಹಾಕಿದ. ಬ್ಯಾಡಣ್ಣ ನೀನು ಅಣ್ಣನ ಸಮಾನ ಎಂದಾಗ ಗೌರಿ : 'ಆ ಕರಿಗೌಡನ ಎಣಾನ ಸಾಕಾಗಮಟ್ಟ ನೋಡ್ವಂತೆ ಗೌರಿ' ಎಂದು ಸಣ್ಣುದ್ರ ಹೇಳಿದಾಗ ಎದೆಯ ಮ್ಯಾಲಿಂದ ಜಾರಿ ಬಿದ್ದಿದ್ದ ಸೆರಗನ್ನೂ ಎತ್ತಿಕೊಳ್ಳದೆ ಕಣ್ಣಿನಲ್ಲಿ ಕರಿಗೌಡನನ್ನು ಸುಟ್ಟಿದ್ದಳು. ನಿನ್ನ ಮದ್ವಿ ಆಕ್ಕಿಸಿ ಎಂದ್ರು ಬ್ಯಾಡ ಎಂತಲೂ ಹೇಳಿದ್ದ ಸಣ್ಣುದ್ರ. ಮದುವೆ ಎನ್ನುವ ಶಬುದ ಗೌರಿಯಲ್ಲಿ ಗೊಂದಲ ಹುಟ್ಟಿಸಿತು. ಸಿಧಾನವಾಗಿ ಕರಗಿ ಸಂತೋಷವಾಗಿ ಮುಲುಕಿದಳು. ಯಾರೋ ಬಾಗಿಲು ಬಡಿದಂತಾಯಿತು. ದೋತರ ಉಟ್ಟುಕೊಳ್ಳುತ್ತ ಸಣ್ಣುದ್ರ ಬಾಗಿಲು ತೆರೆದಾಗ ಕಾಡ ತೇಕುತ್ತಿದ್ದ. ಸಂಜೆವರೆಗೆ ಸಣ್ಣುದ್ರನ ಹತ್ತಿಹೊಲದಲ್ಲಿ ಬಚ್ಚಿಟ್ಟುಕೊಂಡಿದ್ದ. ಹತ್ತಿಗಾಡಿಗಳು ಮನೆಗೆ ಹೊರಡುವ ಸಮಯದಲ್ಲಿ ಗಾಡಿಯಲ್ಲಿ ಬಚ್ಚಿಟ್ಟುಕೊಂಡು ಸಣ್ಣುದ್ರನ ಹತ್ತಿ ಗೋಡೋನ್ ಸೇರಿದ್ದ ಪರುಸ ಸಿಕ್ಕಿರುವ ವಿಷಯ ತಿಳಿದು ಇಬ್ಬರೂ ಮನೆಗೆ ಬರುವರು. ಪರಿಪರಿಯಾಗಿ ಹಿಂಸಿಸಿದರೂ ಪರುಸ ಬಾಯಿ ಬಿಡದಿದ್ದಾಗ ಅವನನ್ನು ತುಂಡರಿಸಿ ಮಾಸೂರ ಚಾವ್ಡಿಕಟ್ಟೆಗೆ ಕಟ್ಟಿಹೋದರು.

ಪರುಸನ ಖೂನಿ ಎಂಬುದು ಕಿವಿಗೆ ಬೀಳುತ್ತಲೇ ಭೂಮಿ ಗರಗರ ತಿರುಗಿದಂತಾಯಿತು ಗೌಡನಿಗೆ. ಇದು ಸಣ್ಣುದ್ರನದೆ ಕೆಲಸ ಎಂಬ ಅರ್ಥ ಬರುವಂತೆ ಜನ ಹೇಳಿದರು. ಪಂಪನ ಮಾತುಕೇಳಿ ಸಣ್ಣುದ್ರನನ್ನು ಎದುರುಹಾಕಿಕೊಳ್ಳಬಾರದಾಗಿತ್ತು ಎಂದು ಯೋಚಿಸಿದ ಗೌಡ. ಅವನನ್ನು ಕೊಲ್ಲಲು ಕೊಲ್ಲೇಟಿ ಆಳುಗಳನ್ನು ಕರೆಸಿದಾಗ ಹಣ ಹೆಚ್ಚಾಯಿತೆಂದು ಹೇಳಿ ಆ ಕೆಲಸ ತಾನೇ ಮಾಡುವುದಾಗಿ ಹೇಳಿದ್ದ ಪಂಪನಗೌಡನ ಮಾತು ನೆನಪಿಗೆ ಬಂತು. ಎಲ್ಲ ಆದದ್ದು ತನ್ನ ತಮ್ಮನಿಂದ ಎನ್ನುವ ಭಾವನೆ ಗೌಡನಿಗೆ. ಗೌರಿಯ ನೆನಪು ತೀವ್ರವಾಗಿ ಸಣ್ಣುದ್ರನನ್ನು ಪಂಪನಗೌಡನಿಂದ ಮುಗಿಸುವ ಯೋಚನೆ ಗೌಡನಿಗೆ. ಕರಿಗೌಡ ವನ್ನೂರನನ್ನು ಸಿರಬಿಗೆ ಕಳಿಸಿ ಪಂಪನನ್ನು ಕರೆಸಿ ಒಳ್ಳೆ ಕೋಳಿ ಊಟ ಹಾಕಿಸಿ ಲಚುಮಿಯನ್ನು ಜೊತೆಗೆ ಬಿಟ್ಟಾಗ ಕಾಪ ಬಂದು. ದಾಸುಮಾರಪ್ಪಂದು ಪಾರ್ವ್ಯಾಳ ಬಂದ ಸುದ್ದಿ ಗೌಡನಿಗೆ ಮುಟ್ಟಿಸುವನು. ದಾಸುಮಾರಪ್ಪ ಗೌರಿಗಾಗಿ ತಾಳ ತಂಬೂರಿ ಜೋಳಿಗೆ ಕಟ್ಟಿಕೊಂಡು ಊರೂರು ಅಲೆದು

ಬಾಸೂರು ಸೇರಿದ್ದ. 'ತೂಗುತಾರ ನೋಡು ಜೋಕಾಲಿ ಸದ್ಗುರುವಿನ ದಯದೀ' ಎಂದು ಹಾಡುತ್ತ ಒಂದು ಮನೆಯಂಗಳಕ್ಕೆ ಬಂದಾಗ ಭರಮಜ್ಜ ಕಣ್ಣಿಗೆ ಬಿದ್ದಿದ್ದ. ಮಾರಪ್ಪ ಬಂದು ಬಿಳಿ ಬಟ್ಟೆಮೇಲೆ ಬ್ಯೂಟಿ ಇರುವ ಸಮಾಚಾರ ಬರೆದು ಪಾರಿವಾಳದ ಕಾಲಿಗೆ ಕಟ್ಟಿ ಹಾರಿಸಿಬಿಟ್ಟಿದ್ದ. ವಿಷಯ ತಿಳಿದ ಗೌಡನಿಗೆ ಗೌರಿಯನ್ನು ಸಣ್ಣುದ್ರನೇನಾದರೂ ಅನುಭವಿಸಿದ್ದರೆ ? ಎನ್ನುವ ಪ್ರಶ್ನೆ ಯೋಚಿಸುವಂತೆ ಮಾಡಿತು. ಗೌಡ ಪಂಪನನ್ನು ಕೂಗಿಕರೆದ.

ಸಣ್ಣುದ್ರು ಊರಲ್ಲಿಲ್ಲದ ಒಂದು ರಾತ್ರಿ ಕ್ಷಯರೋಗಿಯೊಬ್ಬ ಅಪರೂಪಕ್ಕೆ ವಿಷಣ್ಣನಗೆ ನಕ್ಕಂತೆ ಕೋಳಿಮೊಟ್ಟೆಯಂತಿದ್ದ ಚಂದಿರ ಬೆಳದಿಂಗಳು ಊರು ತುಂಬ ಬಿದ್ದಿತ್ತು. ಗೌರಿ ಬಾಸೂರಿನಲ್ಲಿ ನೋಡುತ್ತಿರುವುದು ಇದೇ ಮೊದಲ ಬೆಳದಿಂಗಳು. ಬೆಳದಿಂಗಳಿನಲ್ಲಿ ಸ್ವಲ್ಪಹೊತ್ತು ಆಡಿಬಂದ ಗೌರಿ ಮನೆ ಅಂಗ್ಳದಾಗೆ ಮಲಗಿದ್ದ ಭರಮಜ್ಜ ಮತ್ತು ಮುದುಕಿಯ ಮಧ್ಯೆ ಮಲಗಿ : ಸಣ್ಣುದ್ರನ ಜೊತೆ ಮದುವೆಯಾಗಿ ಸಂಸಾರ ನಡೆಸುತ್ತಿರುವಂತೆ ಕನಸು ಕಂಡಳು. ಬಣಜಿಗರ ಓಣಿ ಸಂದಿಯಲ್ಲಿ ಒಂದು ನಾಯಿ ಜೋರು ಬೊಗಳಲು ಪ್ರಯತ್ನಿಸಿ ಮತ್ತೊಂದು ಕ್ಷಣದಲ್ಲಿ ಕುಯ್ಕ್ ಅಂತ ಸುಮ್ಮನಾಯಿತು. ಕಟ್ಟೆಯ ಮಗ್ಗಲು ಅವಿತು ಕುಳಿತಿದ್ದವನೊಬ್ಬ ಏನೋ ತೆಗೆದುಕೊಂಡು ಮುದುಕನಿಗೆ ಪಚಕ್ಕಂತ ಹಾಕಿದ. ಕೈಕಾಲು ಮಿಸಕಾಡಿಸಿ ಅಜ್ಜ ನೆಟ್ಟಗಾಯಿತು. ಅಜ್ಜಿಯೂ ಅಜ್ಜನ ದಾರಿಯೇ ಹಿಡಿಯಿತು. ಒಬ್ಬ ಗೌರಿಯ ಬಾಯಿಕಟ್ಟಿ ಹೆಗಲಿಗೆ ಹಾಕಿಕೊಂಡು ಹೊರಗೆ ಹೋದ ಮೇಲೆ ಇನ್ನೊಬ್ಬ ಮನೆಗೆ ಬೆಂಕಿ ಮುಡಿಸಿ ಓಡಿಹೋದ. ಊರ ಹೊರಗಿದ್ದ ಪಂಪನಗೌಡ ಒಂದು ಕೈಯ್ಯಿಂದ ಗೌರಿಯನ್ನು ಅವುಚಿಕೊಂಡು ಇನ್ನೊಂದು ಕೈನಲ್ಲಿ ಲಗಾಮು ಹಿಡಿದು ಕುದುರೆ ಓಡಿಸಿದ. ತನ್ನ ಮನೆಗೆ ಬಿದ್ದಿರೋ, ಬೆಂಕಿ ನೋಡಿ ಚಂಬಸ್ಯ ಸಣ್ಣುದ್ರನ ಕಣದಿಂದ ಓಡಿಬಂದು ನೆಲದಮೇಲು ಬಿದ್ದು ಉರುಳಾಡಿದ. ಕ್ವಾಂಟ್ರು ವೆಂಕ್ಟಮ್ಮ ಅಂಜುತ್ತ ಅಳುಕುತ್ತ 'ಯಾರೋ ಒಂದಿಬ್ಬರು ಬಂದು ಗೌರೀನ್ನ ಕೈಕಾಲುಕಟ್ಟಿ ಹೊತ್ತುಹೋದದ್ದನ್ನು ತಾನು ಖುದ್ದು ನೋಡಿದ್ದಾಗಿ ತಿಳಿಸಿದಳು. ಸಂಬಸ್ಯನ ಖಾಸಾ ಆಳುಗಳು 'ಹಣೆ ಬರ್ಲಿ ಸುಧಾರಿಸ್ಗ' ಅಂತ ಚಂಬಸ್ಯನಿಗೆ ಹೇಳಿದರು.

ಮಾಸೂರಿನಲ್ಲಿ ಪ್ರತಿಯೊಬ್ಬರ ಮನೆ ಅಂಗಳದಲ್ಲಿ ಸಗಣಿ ರಾಡಿ ಹೊಡೆದು ಹೆಂಗಸರು ರಂಗೋಲಿ ಚೇರ ಹಾಕಿದ್ದರು. ದೇವರ ಕೋಣ ನೋಡಿ ಹೋದ ಎಲ್ಲಪ್ಪ. ಬಿಸಿನೀರಿನಿಂದ ಜಳಕ ಮಾಡಿದ ತುಂಬು ಗರ್ಭಿಣಿ ಹೆಂಗಸಿನಂತೆ ಕಂಡಿತು ಗುಡಿ. ಸಣ್ಣುದ್ರು ಮೂಸಿ ಬಿಸಾಕಿದ ಎಷ್ಟೋ ಬಾಡಿದ ಹೂಗಳ ಪೈಕಿ ತಾನೊಂದು ಅಂಥಾ ಹೂವು. ತನ್ನನ್ನು ಬಿಡಿಸಲು ಆತ ಬರಲಾರ ಎಂದೆಲ್ಲ ಯೋಚಿಸಿದಳು ಗೌರಿ. ತಾನು ಬಸವಿಯಾದರೆ ಎಷ್ಟು ಜನ ಗಂಡಸರ ಮಗ್ಗಲು ಮಲಗಿ ಎಲುಬು ಲಟಲಟ ಅನ್ನಿಸ ಬೇಕಾಗಿ ಬರುತ್ತೋ ಎಂದು ಹೆದರಿದಳು. ಒಬ್ಬ ಬಸವಿ ಸೀರೆ ಕುಬುಸ ತಂದಿಟ್ಟಾಗ

ಸೆರಿಯಿಂದ ಬಿಡಿಸುವಂತೆ ಅವಳ ಕಾಲಿಡಿದು ಅತ್ತು ಬೇಡಿದಳು. ಬಸವಿ ಹೊರಹೋದ ಮೇಲೆ ಗೌರಿಯಿದ್ದ ನೆಲಮಾಳಿಗೆ ರೂಮಿಗೆ ಸಣ್ಣದಕ್ಕೆ ಪಂಪನಗೌಡ, ಮೆಲ್ಲಗೆ ಬಂದು ಅವಳ ಹೆಗಲ ಮೇಲೆ ಕೈಯಿಟ್ಟಾಗ ಗಡಗಡ ನಡುಗಿ ಕೊಸರಿ ಸೊಲುಪದೂರ ಸರಿದಳು. 'ಇನ್ನೂ ಅಳೋದು ಕಡಿಮೆ ಮಾಡಿಲ್ಲೇನು ...ಉಚ್ಚ್.... ನಿನ್ನಂತ ಸುಂದರೀರ್ನ ಆ ದ್ಯಾವ್ರು ನಮ್ಮಂಥ ಗೌಡ್ರೀಗೆ ಉಟ್ಸಿರೋದು...ನಮ್ಮಂಥೋರ ಮಗ್ಳು ಮಲಗೋದು ನಿನ್ನಂಥ ಕಾಟಿಗೆ ಎಂಗಸರ ಪುಣ್ಯ...." ಇನ್ನೂ ಏನೇನೋ ಮಾತಾಡಿದ. ನಮ್ಮಣ್ಣ ಆದಮ್ಯಾಲ ನಂದು ಸರ್ತಿ ಎಂದು ಹೊರಗೆ ನಡೆದ. ಬೇಡವೆಂದರೂ ಗೌರಿಗೆ ಸ್ನಾನ ಮಾಡಿಸಿದರು. ಕಿಟಕಿಯಿಂದ ಹಲಗೆ ಬಡಿಯುವ ಶಬ್ದ ತೂರಿ ಬರುತ್ತಿತ್ತು. ಗೋಡೆಯಲ್ಲಿದ್ದ ಸಣ್ಣ ಕಿಂಡಿಯಿಂದ ಗೌರಿಯ ಬತ್ತಲೆ ಮೈಯನ್ನು ಕರೀಗೌಡ ನೋಡಿದ. ಆಗಿನಿಂದ ಅವನ ಮೈ ಕುಲುಮೆಯಾಗಿತ್ತು. ಜಾತ್ರೆಯಲ್ಲಿ ಭಕ್ತಾದಿಗಳು ಹೆಚ್ಚಾಗಿ ಸೇರಿದ್ದರು. ಗೌಡನಿಗೆ ಸಣ್ರುದ್ರನ ಭಯ. ಅದಕ್ಕಾಗಿ ಆಯುಧಗಳನ್ನೆಲ್ಲ ಸಿದ್ಧವಾಗಿಟ್ಟರಲು ಏರ್ಪಾಟು. ಹೊತ್ತು ಮುಳುಗತೊಡಗಿದಂತೆ ಮ್ಯಾಳ ಹಲಗೆಗಳ ಶಬ್ದದ ಜೊತೆ ಗಂಗಿಯ ಗುಂಪು ಊರಕಡೆ ಚಲಿಸಿತು. ಐದು ಮಂದಿ ಆರತಿ ಮಾಡಿದ ಮ್ಯಾಲೆ ಕಳಸದ ಜೊತೆ ಗೌರಿಯನ್ನು ಎಬ್ಬಿಸಿದರು. ಉಡಕ್ಕಿ ತುಂಬುವ ಕೆಲಸವಾದಮೇಲೆ ಕರೆದೊಯ್ದು ನಾಲ್ಕು ತುತ್ತು ಉಣ್ಣಿಸಿದರು. ಕುರಿ ಕೊಬ್ಬಿದರೆ ಕುರುಬಗೆ ಲಾಭವಲ್ಲ. ಮತ್ತೊಮ್ಮೆ ಗೌರಿಯನ್ನು ಕುಂಡ್ರಿಸಿ ಆರತಿ ಎತ್ತಿದರು. ಗೌರಿ ಮುಖ ಎತ್ತದಿದ್ದಾಗ ನಿನ ಗಂಡನ ಹೆಸರೇಳೆ ಎಂದು ಬಸವಿಯರು ಪೀಡಿಸಿದರು. ವಾದ್ಯಗಳ ಸಹಿತ ಗುಂಪು ಗುಡಿಯ ಹತ್ತಿರ ಸಾಗಿದಾಗ ಗೌರಿಯ ಹಿಂದೆ ಹಿಂದೆ ಗೌಡ ಮತ್ತು ಆತನ ತಮ್ಮ ಇದ್ದರು. ಗುಂಪಿನ ಮುಂದೆ ಹಿಂದೆ ಕಟ್ಟಾಳುಗಳು ಭರ್ಚಿ ಹಿಡಿದಿದ್ದರು. ಜನ ಬೆರಗಾಗಿ ನೋಡುತ್ತಿತ್ತು. ಗೌರಿಯು ಮುಡಿದಿದ್ದ ಮಲ್ಲಿಗೆ ದಿಂಡಿನ ವಾಸನೆಗೆ ಗೌಡ ಮೂಗು ಅರಳಿಸಿದ್ದ. ಹುಣಿಸೆ ಮರದಲ್ಲಿ ಬೆಳ್ಳಿ ಚುಕ್ಕೆ ಸಿಕ್ಕಿಹಾಕಿಕೊಂಡಿತ್ತು. ಜನ ಗುಡಿಯ ಸುತ್ತೂ ಕೋಟೆ ಗೋಡೆಯಂತೆ ಹೆಣೆದುಕೊಂಡಿತ್ತು. ಬಯಲಿನಲ್ಲಿ ಮಾರೆಮ್ಮ. ಮುಂದೆ ಜಮಖಾನದ ಮೇಲೆ ಬಸವಿಯರ ನಡುವೆ ಗೌರಿ ತೊಳೆದ ಮುತ್ತಿನಂತಿದ್ದಳು. ಎಲ್ಲಪ್ಪನ ಹೇಳಿಕೆ ಆಯಿತು. ಬಸವಿಯರು ಪದ ಹಾಡುತ್ತ ಗೌರಿಯನ್ನು ಎಬ್ಬಿಸಿಕೊಂಡು ದೇವಿಯ ಮುಂದಕ್ಕೆ ಬಂದರು. ಗೌರಿ ವಲ್ಲೆಪೋ ಎಂದರಚತೊಡಗಿದಳು. ದೈವಸ್ಥರು ಭಂಡಾರ ಕುಂಕುಮ ಅವಳ ಹಣೆಗೆ ಸವರಿದರು. ಇದ್ದಕ್ಕಿದ್ದಂತೆ ಹಲಗೆ, ಡೊಳ್ಳು, ರುಮ್ಮಿಗಳು ಹೊಯ್ಕೊಳ್ಳಲು ಹತ್ತಿದವು. ಹಿಡಿದು ತಂದ ಕೋಣದ ಹಣೆಗೆ ಕುಂಕುಮ ಇಟ್ಟರು. ಯಹಾಕ ನುಗ್ಗಿರಿ, ಸರ್ರೀರಿ, ಸರ್ರೀರಿ ಅಂತ ಎಷ್ಟು ಹೇಳಿದರೂ ಕೇಳದೆ ಜನ ಸೊಂಟದಲ್ಲಿದ್ದ ಬಾಕುಗಳನ್ನು ಕಿತ್ತು ಹೋ ಎಂದರಚುತ್ತ ಕರೀಗೌಡ ಮತ್ತವನ ತಮ್ಮನ ಮ್ಯಾಲೆ ಮಿಂಚಿನಂತೆ ಬಿದ್ದರು. ಆಯುಧಗಳು ಕಚಕ್, ಕಚಕ್

ಅಂತ ಕತ್ತರಿಸತೊಡಗಿದವು. ಯಾರೋ ದೀವಟಿಗೆ ತೆಗೆದುಕೊಂಡು ಗುಡಿಯ ಚಪ್ಪರಕ್ಕೆ ಬೆಂಕಿ ಇಟ್ಟರು. ಎಲ್ಲೆಲ್ಲೂ ಕೆಂಪಾನ ಕೆಂಪಗೆ.

ಮಾಸೂರಿನಲ್ಲಿ ಹುಟ್ಟಬೇಕೋ ಹುಟ್ಟಬಾರದೋ ಅಂತ ಹಿಂದೇಟು ಹಾಕುತ್ತಿದ್ದ ಸೂರ್ಯ ಮೋಡದ ಮರೆಯಲ್ಲಿಯೇ ಮ್ಯಾಲಕ್ಕೇರಿದ. ವ್ಯಾನ್‌ನಿಂದ ಪೋಲೀಸರು ಇಳಿದರು. ಗುಡಿಯ ಸುತ್ತೂ ತುಂಡರಿಸಿದ ಹೆಣಗಳೇ, ಎಲ್ಲಪ್ಪ ಮೊದಲಾಗಿ ಎಲ್ಲರ ಹೆಣಗಳನ್ನು ಒಂದರ ಮಗ್ಗುಲು ಒಂದರಂತೆ ಮಲಗಿಸಿ ಎಣಿಸಿದರು ಪೋಲೀಸರು. ಒಟ್ಟು ತೊಂಬತ್ತೆಂಟು ಇದ್ದವು. ಗೌರಿ ಹೇಗೋ ಉಳಿದಳು. ಯಾರದೋ ಆಟವಾಳಿಗೆಯಲ್ಲಿ ಮಲಗಿದಾಗ ತನ್ನನ್ನು ದೇವರ ಕ್ವಾಣ ಬೆನ್ನು ಹತ್ತಿದಂತೆ ಕನಸು ಕಂಡಳು. ಗೌಡ ಸತ್ತ. ಬದುಕಲಿಕ್ಕೆ ಭೂಮಿ, ಮನೆ ಇದೆ ಎಂದು ಮರುದಿನ ಯೋಚಿಸಿದರೆ ಈಸೂರಯ್ಯ ಚಾವಡಿಯಲ್ಲಿ ಕುಳಿತು 'ಏನು ಗೌರಿ' ಇವೊತ್ತಿಂದ ನೀನು ಕೆಳಗೇರ‍್ಯಾಗೆ ಗುಡಿಸು ಆಕು ಎಂದಾಗ ಸತ್ತ ಕರೀಗೌಡ ಎಲ್ಲರಲ್ಲಿ ಹಂಚಿಹೋಗಿದ್ದಾನೆನಿಸಿ ಮನೆ ಸೇರಿ ಬಾಗಿಲು ಮುಚ್ಚಿಕೊಂಡಳು. ಮತ್ತೆ ಬಾಗಿಲು ತೆರೆಯಲೇ ಇಲ್ಲ.

ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರಗಳಲ್ಲಿ ಪ್ರಚಲಿತವಿರುವ ದಲಿತ ಹಾಗೂ ಕೆಳವರ್ಗದ ಹೆಣ್ಣುಮಕ್ಕಳನ್ನು ದೇವರಿಗೆ ಹರಕೆಬಿಟ್ಟು ನಂತರ ಅವರನ್ನು ಸಮಾಜದ ಬಲಾಢ್ಯರ ಭೋಗದ ವಸ್ತುಗಳನ್ನಾಗಿ ಮಾಡುವ ಹೃದಯ ವಿದ್ರಾವಕ ವಸ್ತುವನ್ನುಳ್ಳ ವೀರಭದ್ರಪ್ಪನವರ ಕಾದಂಬರಿ 'ಕಪ್ಪು' ಸಮಾಜದ ಕಪ್ಪನ್ನು ಯಥಾವತ್ತಾಗಿ ಚಿತ್ರಿಸಿದರೂ ಓದುಗನಲ್ಲಿ ಅನೇಕ ಪ್ರಶ್ನೆಗಳನ್ನು ಕೊನೆಯವರೆಗೂ ಉಳಿಸುತ್ತದೆ.

ಮಾಸೂರಿನ ಸುತ್ತೂ ಆರುಮೈಲಿ ದೂರಕ್ಕೆ ಕಾಣಿಸೋ ಮನೆ, ಹುಲಿಯಂತ ತಮ್ಮ ಪಂಪನಗೌಡ, ಎಂತಹ ಸಂದರ್ಭದಲ್ಲೂ ದಣಿಗೆ ತಮ್ಮ ಜೀವವನ್ನಾದರೂ ಒತ್ತೆಯಿಟ್ಟು ಕಾಪಾಡುವಂತೆ ಕಟ್ಟುಮಸ್ತಾದ ಕಪ್ಪುದೇಹದ ಪರುಸನಂಥ ಅನೇಕ ಸೇವಕರು, ಕಾಲಲ್ಲಿ ತೋರಿಸಿದ್ದನ್ನು ಭಯದಿಂದ ತಲೆಮೇಲೆ ಹೊತ್ತು ಮಾಡುವ ಜನ ಸಮೂಹ, ನೀರಿನಂತೆ ಖರ್ಚು ಮಾಡಲು ಇರುವ ಹಣ ಹಾಗೂ ಅಧಿಕಾರ, ಜೋಡಿ ನಳಿಗೆಯ ಬಂದೂಕು, ಜೀಪು ; ಕಾದಂಬರಿಯ ಉದ್ದಕ್ಕೂ ರಕ್ತ ಹೆಪ್ಪುಗಟ್ಟಿಸುವಂತೆ ಕ್ರೌರ್ಯದ ; ಆರಡಿ ಎತ್ತರ ಹಾಗೂ ಒಂಭತ್ತು ಮಣ ತೂಕದ ಮೈ, ಎಣ್ಣೆಗೆಂಪಿನ ಮುಖ, ಕೆಂಡದಂಥ ಕಣ್ಣು, ಗಲ್ಲಿಮೀಸೆ ಗೇಣೂವರೆ ಉದ್ದದ ತಲೆಗೂದಲಿನ ಕರಿಗೌಡ ಗೌರಿಯನ್ನು ಮಾರಮ್ಮನಿಗೆ ಹರಕೆಬಿಟ್ಟು ನಂತರ ಭೋಗಿಸಬೇಕೆಂದು ಕಾದದ್ದು ಎಷ್ಟು ಸರಿ ? ಎನ್ನುವುದು ಮುಖ್ಯ ಪ್ರಶ್ನೆಯಾಗುತ್ತದೆ.

ಜೇನುತುಪ್ಪ ಮಾರಲು ಬಂದಿದ್ದ ಲಂಬಾಣಿ ಹೆಂಗಸು ರೂಪಿಯ ಕೈಹಿಡಿದು ಬರ್‍ತೀಯಾ ಎಂದು ಕೇಳಿದಾಗ ಗೌಡ ; 'ಘಂಡುಸಾಗಿದ್ರೆ ಉಲಿಘುಡ್ಡದ ಥಾಂಡಥಾಕ

ಬಾರೋ ಫೋಟ ಪೆ ಅಂದದ್ದಕ್ಕೆ ಅಲ್ಲಿಗೇ ಹೋಗಿ : ರೂಪಿ ನಂಗೆ ಬೇಕು ಎಂದು ಸೆಡುವಿನಿಂದ ಅಲ್ಲಿನ ಗಂಡಸಿಗೆ ಹೇಳಿ ಎರಡು ದಿನ ಅವಳ ಜೊತೆ ಇದ್ದುಬಂದು : ಬೇಕಾದಾಗ ಸಾವಂತ್ರಿಯಂಥ ಹುಡುಗಿಯರನ್ನು ತಂದು ರಾಜರಕ್ಷಿಯಾಗಿ ಮಜಾ ಉಡಾಯಿಸುತ್ತಿದ್ದ ಕರಿಗೌಡ : ದಲಿತನೂ ಕೆಳವರ್ಗದವನೂ ದುರ್ಬಲನೂ ಆದ ಭರಮಜ್ಜನಂತವನ ಮಗಳು ಗೌರಿಯನ್ನು ಮಾರಮ್ಮನಿಗೆ ಬಿಡಿಸಿ ನಂತರ ಭೋಗಿಸ ಬೇಕೆಂದು ಕಾಯುವುದು ವಿಚಿತ್ರವೆನಿಸುತ್ತದೆ.

ಸಮಾಜದಲ್ಲಿ ಬಲಾಢ್ಯನೊಬ್ಬನು ಜನರನ್ನು ದೈಹಿಕವಾಗಿ ಹಿಂಸಿಸಿ, ಮಾನಸಿಕ ವಾಗಿ ಹೆದರಿಸಿ ಶೋಷಿಸುವುದು ಕ್ರೌರ್ಯದ ಒಂದು ಮುಖವಾದರೆ, ಜನರನ್ನು ದೈಹಿಕ ವಾಗಿ ಹಿಂಸಿಸದೆ ದೇವರು ಧರ್ಮಗಳ ಹೆಸರಿನಲ್ಲಿ ಶೋಷಿಸುವುದು ಕ್ರೌರ್ಯದ ಇನ್ನೊಂದು ಮುಖವಾಗುತ್ತದೆ. ಮೊದಲಿನದರಲ್ಲಿ ಶಕ್ತಿ, ಹಣ, ಅಧಿಕಾರಗಳು ಪ್ರಧಾನವಾದರೆ ಎರಡನೆಯದರಲ್ಲಿ ಬುದ್ಧಿ ಮತ್ತು ವಂಚನೆ ಪ್ರಧಾನವಾಗುತ್ತದೆ.

ಕರೀಗೌಡ ಮದುವೆಯಾಗಿಲ್ಲ. ಗೌಡನ ಮನೆಗೆ ಕನ್ಯೆ ಕೊಡೋದು ಒಂದೆ : ಹೆಣ್ಣನ್ನು ಹಾಳು ಬಾವಿಗೆ ನೂಕೋದು ಒಂದೆ ಎನ್ನುವ ಅಭಿಪ್ರಾಯ ಸುತ್ತು ಮುತ್ತಲ ಜನದ್ದು. ಆಂಧ್ರದ ಗುಂಟೂರಿನ ಹರಿಶ್ಚಂದ್ರರೆಡ್ಡಿ ತನ್ನ ಮಗಳನ್ನು ಗೌಡಗೆ ಕೊಡಲು ಮೊದಲು ಒಪ್ಪಿ ನಂತರ ಹೇಗೋ ವಿಷಯ ಗೊತ್ತಾಗಿ ಸಾಧ್ಯವಿಲ್ಲ ಎಂದಾಗ ; ಗೌಡ ಪ್ರತಿಭಟಿಸಿದ್ದಕ್ಕೆ ರೆಡ್ಡಿ ಅವನನ್ನು ಚೆನ್ನಾಗಿ ಹೊಡೆಸಿದ್ದನಂತೆ ಈ ಹಿನ್ನೆಲೆ ಹಾಗೂ ಮನೆಯ ಗೋಡೆಗಿದ್ದ ಕರಿಗೌಡನ ತಾತ ತಮ್ಮಾರೆಡ್ಡಿಯ ತೈಲವರ್ಣ ಚಿತ್ರದಲ್ಲಿನ ಹುರಿ ತಿರುವಿದ ಮೀಸೆ ಬೆಂಕಿ ಉಗುಳುವ ಕಣ್ಣು. ಈ ಎಲ್ಲ ಅಂಶಗಳಿಂದ ಕರೀಗೌಡ ಮೊದಲ ರೀತಿಯ ಕ್ರೌರ್ಯಕ್ಕೆ ಸಂಕೇತವಾಗುತ್ತಾನೆ. ಆಂಧ್ರ ಸೀಮೆಯಲ್ಲಿ ಈಗಲೂ ಇಂತಹ ಕ್ರೌರ್ಯ ಪ್ರಚಲಿತದಲ್ಲಿರುವುದನ್ನು ಗಮನಿಸಬಹುದು. ಕಾದಂಬರಿಯ ಉದ್ದಕ್ಕೂ ಎಲ್ಲೂ ಕರೀಗೌಡನ ಬುದ್ಧಿಪೂರಕ ನಡವಳಿಕೆ ಕಂಡುಬರು ವುದೇ ಇಲ್ಲ. ಆದುದರಿಂದ ಸಹಜವಾಗಿ ತನ್ನಲ್ಲಿರಬಹುದಾದ ಕ್ರೌರ್ಯವನ್ನು ಅದುಮಿಟ್ಟು ಕರೀಗೌಡ ಹರಕೆ ಬಿಡುವವರೆಗೂ ಗೌರಿಗಾಗಿ ಕಾಯುವುದು ಅಸ್ವಾಭಾ ವಿಕವೆನಿಸುತ್ತದೆ. ಆದರೆ ಕರೀಗೌಡನ ವಿರುದ್ಧಶಕ್ತಿಯಾದ ಸಣ್ಣುದ್ರ ತೋಟದ ಪಂಪಿನ ರೂಮಿನ್ಯಾಗೆ ಗೌರಿಯನ್ನು ಒಡಿದು ಕ್ರೂರವಾಗಿ ಓಚೆಕಿದಾಗ 'ಬ್ಯಾಡಣ್ಣ, ನೀನು ಅಣ್ಣನ ಸಮಾನ' ಎಂದಾಗ ಗೌರಿ : 'ಆ ಕರಿಗೌಡನ ಎಣಾನ ಸಾಕಾಗಮುಟ ನೋಡ್ವಂತೆ ಗೌರಿ' ಎಂದು ಸಣ್ಣುದ್ರ ಹೇಳಿದಾಗ ಎದೆಯ ಮ್ಯಾಲಿಂದ ಜಾರಿಬಿದ್ದಿದ್ದ ಸೆರಗನ್ನೂ ಎತ್ತಿಕೊಳ್ಳದೆ ಕಣ್ಣಿನಲ್ಲಿ ಕರಿಗೌಡನನ್ನು ಸುಟ್ಟಳು. ಅಲ್ಲದೆ 'ಎಂಗೂ ನಂಗೆ ಮದ್ವೆ ಆಗಿಲ್ಲ.... ಯಾವ್ದಾರ ಹುಡುಗಿ ಪಸಂದೆನಿಸಿದ್ರೆ ಮದ್ವೆ ಆಗೋ ನಂತ ಮಾಡಿದ್ದೆ...ಎಂಗೂ ನೀನಿದ್ದೀಯಲ್ಲ.... ನಿನ್ನ ಮದ್ವಿ ಆಕ್ತೀನಿ ಎದ್ರುಬ್ಯಾಡ' ಎಂದು ಮುಂದುವರೆದು ಅವನು ಹೇಳಿದಾಗ ಗೌರಿ ಸಹಜವಾಗಿ ಕರಗಿ ಸಹಕರಿಸುವಳು. ಇಲ್ಲಿ ಸಣ್ಣುದ್ರ ಹಿಂಸೆಯ ಪ್ರತೀಕವಾದರೂ ಮಾನವ ಸಹಜ ಕುಟಿಲತನದಿಂದ ಹಾಗೂ

ಗೌರಿ ಅಸಹಾಯಕಳಾದರೂ ಅವಳ ಮುಗ್ಧತನದಿಂದ ಓದುಗರನ್ನು ಆಕರ್ಷಿಸುತ್ತಾನೆ. ವೀರಭದ್ರಪ್ಪನವರ ಕುಸುರೀ ಕೆಲಸ ಇಲ್ಲಿ ಉಲ್ಲೇಖನಾರ್ಹ.

ಶತಮಾನಗಳಿಂದ ದೇವರು ಧರ್ಮದ ಹೆಸರಿನಲ್ಲಿ ತಮ್ಮ ಹೆಣ್ಣುಮಕ್ಕಳನ್ನು ಹರಕೆಬಿಟ್ಟು ಬಸವಿಯರನ್ನಾಗಿಸಿ ಬೀದಿಪಾಲು ಮಾಡುತ್ತಾ ಬಂದ ಕೆಳವರ್ಗದ ಜನತೆಯನ್ನು ಪ್ರತಿನಿಧಿಸುವ ಭರಮಜ್ಜ ತನ್ನ ಮಗಳು ಗೌರಿಯನ್ನು ಹರಕೆಬಿಡಲು ಒಪ್ಪದಿರುವುದಕ್ಕೆ ಒಬ್ಬಳೇ ಮಗಳೆನ್ನುವ ವ್ಯಾಮೋಹ ಒಂದು ಕಾರಣವಾದರೆ ಬಸವಿ ಬಿಡುವ ಪದ್ಧತಿ ಕೆಟ್ಟದ್ದೆನ್ನುವುದು ಇನ್ನೊಂದು ಕಾರಣವಾಗುತ್ತದೆ.

ಮಾಸೂರಿನಲ್ಲಿರೋ ಮುಕ್ಕಾಲು ಮನೆಗಳಲ್ಲಿ ತಲಾ ಒಬ್ಬೊಬ್ಬರಂತೆ ಹೆಣ್ಣು ಮಕ್ಕಳನ್ನು ಮಾರಮ್ಮನಿಗೆ ಆಗಲೇ ಬಸವಿ ಬಿಟ್ಟಿರುವುದರಿಂದ ಹಾಗೂ ಅಲ್ಲಿನ ಜನ ಹೆಣ್ಣು ಮಕ್ಕಳು ಹುಟ್ಟಲೇಬಾರದು ಅಂತ ದೇವರನ್ನು ಕೇಳಿಕೊಳ್ಳುವುದನ್ನು ಕಣ್ಣಾರೆ ಕಂಡಿದ್ದರೂ ಆ ಸರ್ತಿ ತನಗೂ ಬರುತ್ತದೆ ಎನ್ನುವುದನ್ನೂ ಊಹಿಸಲಾರದಂಥ ಮುಗ್ಧ ಭರಮಜ್ಜನಿಗೆ ಹೆಣ್ಣು ಮಗಳನ್ನು ಇನ್ನೊಬ್ಬರಿಗೆ ಅಡ್ಡ ಹಾಕುವುದು ತಪ್ಪು ಎಂದು ಕಂಡದ್ದು ವಿಚಿತ್ರವಾಗುತ್ತದೆ. ಎಲ್ಲರಿಗಾದದ್ದು ನನಗೂ ಎನ್ನುವ ನಡವಳಿಕೆ ಭರಮಜ್ಜನಂಥ ಪಾತ್ರದಲ್ಲಿ ಸ್ವಾಭಾವಿಕವಾಗಿ ಬರಬೇಕಿತ್ತು. ಆದರೆ ಹಾಗಾಗುವುದಿಲ್ಲ. ಕಾದಂಬರಿಯಲ್ಲಿ ಭರಮಜ್ಜನಂಥ ಪಾತ್ರ ಕ್ರಾಂತಿಗೆ ಕಾರಣವಾಗುವುದರಿಂದ ಅಂತಹ ಪಾತ್ರಕ್ಕೆ ಹಿನ್ನೆಲೆ ಸಾಲದು ಎನಿಸುತ್ತದೆ.

ಯಾವಾಗಲೂ ಉಂಡದ್ದನ್ನೇ ಉಣ್ಣುವ ಜಾಯಮಾನದವನಲ್ಲ ಸಣ್ರುದ್ರ. ಒಬ್ಬ ಹೆಣ್ಣನ್ನು ಭೋಗಿಸಿದ ಮೇಲೆ ಅಷ್ಟೇ ಸಲೀಸಾಗಿ ಅವಳನ್ನು ಬಿಡುವ ಹಾಗೂ ಅವಳ ಬಗ್ಗೆ ಮತ್ತೆ ನೆನಪೇ ಬರದ ವ್ಯಕ್ತಿತ್ವದ ಸಣ್ರುದ್ರ ಗೌರಿಯನ್ನು ಹೊತ್ತು ಹೋದ ಕರೀಗೌಡ ಮತ್ತು ಅವನ ಪರಿಹಾರವನ್ನು ಮಾಸೂರಿನ ಜಾತ್ರೆಯಲ್ಲಿ ಗೌರಿಗೆ ಮುತ್ತುಕಟ್ಟುವಾಗ ಮಾರಣಹೋಮ ಮಾಡಿ ಅದರಲ್ಲಿ ತಾನೂ ಬಲಿಯಾದದ್ದು ಗೌರಿಯ ಮೇಲಿನ ಪ್ರೀತಿಗಿಂತ ಗೌಡನ ಮೇಲಿನ ಹಗೆ ಎನ್ನುವುದು ಕಾದಂಬರಿಯಲ್ಲಿ ಜೀವಂತವಾಗಿ ಮೂಡಿಬಂದು ಕೃತಿಯ ವೈಚಾರಿಕ ಮೌಲ್ಯವನ್ನು ಹೆಚ್ಚಿಸಿದೆ.

ನೋಡಿದವರ ಕಣ್ಣು ಕುಕ್ಕಿಸಿ ಆಕರ್ಷಿಸುವ ಗೌರಿಯಂಥವಳಿಗೆ ಹಿನ್ನೆಲೆಯಾಗಿ ಬರುವ ಮಾಸೂರಿನ ಎರೆ ಹೊಲಗಳಲ್ಲಿ ಸಮೃದ್ಧವಾಗಿ ಬೆಳೆದು ಕಬ್ಬು ನಿಂತಂಗೆ ನಿಂತ ಜೋಳದ ಫಸಲು ಹಾಗೂ ಅದಕ್ಕೆ ಕೊಡುತ್ತಿರುವ ಹಕ್ಕಿಕಾಟ ; ಒಂದೇ ರೀತಿಯ ಜಿಡ್ಡುಗಟ್ಟಿದ ಜೀವನಕ್ಕೆ ಈಸೂರ ಗುಡಿಯಲ್ಲಿ ಕಲಿಸುವ ಅಯ್ನೋರ ಪ್ರಬವ, ಇಬವ ಸುಕ್ರ : ಭರಮಜ್ಜ ತನ್ನ ಹೆಂಡತಿ ಮಕ್ಕಳನ್ನು ಕಟ್ಟಿಕೊಂಡು ಮಾಸೂರನ್ನು ಬಿಟ್ಟು ಹೋಗುವಾಗಿನ ರಾತ್ರಿಯ ಕತ್ತಲು, ಕಂದಗಲ್ಲು ಕಾಡಿನ ಹಾದಿ ; ಗೌಡನ ಮನಸ್ಸಿನಲ್ಲಿ ಗೌರಿ ಓಡಾಡಿದ ಹಾಗೆಲ್ಲ ಜಿಂಕೆ ಮತ್ತು ಜಿಂಕೆ ಮಾಂಸದ ಪ್ರಸ್ತಾಪ : ಗೌರಿಗೆ ಮುತ್ತು ಕಟ್ಟುವಾಗ ಆಗಬಹುದಾದ ರಕ್ತಪಾತಕ್ಕೆ ಮುನ್ಸೂಚನೆಯಂತೆ ಹುಣಸೆ ಮರದಲ್ಲಿ

ಬೆಳ್ಳಿ ಚುಕ್ಕೆ ಸಿಕ್ಕಿಹಾಕಿಕೊಂಡಂತಿರುವುದು, ಹಸಬೆ ನಾಯಿಗಳು ಆಕಾಶವೇ ಕಳಚಿ ಬೀಳುವಷ್ಟು ಊಳಿಡುವುದು ಮುಂತಾದ ಚಿತ್ರಣಗಳು ಕಾದಂಬರಿಯ ಕಲಾತ್ಮಕತೆ ಯನ್ನು ಹೆಚ್ಚಿಸಿವೆ.

ಆಂಧ್ರ ಮತ್ತು ಬಳ್ಳಾರಿ ಸೀಮೆಯ ಜೀವನ ವಾಹಿನಿಯಾದ ತೆಲುಗು ಮಿಶ್ರಿತ ಕನ್ನಡ ಭಾಷೆಯನ್ನು ವೀರಭದ್ರಪ್ಪನವರು ಕಾದಂಬರಿಯ ಉದ್ದಕ್ಕೂ ಸತ್ವಪೂರ್ಣ ವಾಗಿ ಉಪಯೋಗಿಸಿಕೊಂಡಿರುವುದು ಒಂದು ಗಮನೀಯ ಅಂಶ. ಕಾದಂಬರಿಯ ಉದ್ದಕ್ಕೂ ಭಾಷೆ ಎಲ್ಲೂ ಗ್ರಂಥಸ್ಥವಾಗದೆ, ಶಿಷ್ಟವಾಗದೆ ಪ್ರಾದೇಶಿಕ ಅಂಶಗಳಿಂದ ಮೈದಳೆದು ಆಡುಭಾಷೆಯಾಗಿಯೇ ಹರಿಯುತ್ತದೆ. ಉದ್ದಕ್ಕೂ ಕಂಡುಬರುವ ನಮಃಲು, ಗುಂಡಾಲು, ಜಮಡಿ, ನಸಿ, ಕರಮು, ಗುಕ್ಕು. ಪೆಟ್ಟಾರಿ, ಕ್ವಾರಿಜಿಪ್ಪ, ತಟಗು, ತರುಮು, ಸಬ್ಬು ಸದುವು ಇಂಥ ಕೆಲವು ತೆಲುಗು ಪದಗಳಿಂದ, ಅದರ ಕಾವ್ಯ ಗುಣದಿಂದ ಮೆಚ್ಚುಗೆ ಗಳಿಸಿದರೂ ಜನಪದರ ಸತ್ವವಾದ ನುಡಿಗಟ್ಟುಗಳು, ಗಾದೆಗಳು, ಒಗಟುಗಳು ಮುಂತಾದವು ಬಹಳ ವಿರಳವಾಗಿರುವುದು (ಇಲ್ಲವೆಂದೇ ಹೇಳಿದರೂ) ಕೃತಿಯ ಒಂದು ಕೊರತೆಯೆಂದೇ ಭಾವಿಸಬೇಕಾಗುತ್ತದೆ.

ಕಣ್ಣಿಗೆ ಕಟ್ಟುವಂತೆ ಪಾತ್ರಗಳನ್ನು ನಿರ್ಮಿಸುತ್ತ ಎಲ್ಲೂ ಅತಿಯಾದ ಮತ್ತು ಅನವಶ್ಯವಾಗಿ ಸಂಗ್ರಹಿಸಿದ ವಿವರಗಳನ್ನು ತುರುಕದೆ ಸಂದರ್ಭಕ್ಕೆ ಹಾಗೂ ಪಾತ್ರ ಪೋಷಣೆಗೆ ಬೇಕಾಗುವಷ್ಟು ವಿವರಗಳನ್ನಷ್ಟೇ ಕೊಟ್ಟು ಏಕತಾನತೆಯನ್ನು ಉಳಿಸಿ ವೀರಭದ್ರಪ್ಪನವರ ಕತೆ ಕಟ್ಟುವ ಕಲೆ ಮೆಚ್ಚುವಂತಹುದೇ ಆದರೂ ಹಿಂಸೆ ಮತ್ತು ಸೆಕ್ಸ್‌ಗೆ ಸಂಬಂಧಿಸಿದ ವಿವರಣೆ ಕೊಡುವಾಗ ಮಾತ್ರ ಉದಾರಿಗಳಾಗುವುದರಿಂದ: ಇವರ ಬರವಣಿಗೆ ಆ ಸಂದರ್ಭಗಳಲ್ಲೆಲ್ಲ ರಂಜಕವಾಗಿ ವೈಚಾರಿಕ ನೆಲೆಗಟ್ಟನ್ನು ಕಳೆದು ಕೊಳ್ಳುತ್ತದೆ. ಹಿಂಸೆ ಮತ್ತು ಸೆಕ್ಸ್‌ನಿಂದ ರಂಜಕತೆ ಪಡೆದು ಕರೀಗೌಡನ ಪಾತ್ರ ಉಳಿದ ರಸಗಳಿಂದ ವಂಚಿತವಾಗಿ ಕೊರಗುವುದನ್ನು ಕಾಣಬಹುದು. ಈ ದೌರ್ಬಲ್ಯ ವನ್ನು ಲೇಖಕರು ಎಷ್ಟು ಜಾಗ್ರತೆ ಸರಿಪಡಿಸಿಕೊಂಡರೆ ಅಷ್ಟೂ ಒಳ್ಳೆಯದು.

ಕಾದಂಬರಿ ಅತ್ಯಂತ ವೈಚಾರಿಕತೆ ಪಡೆದು ಮೆಚ್ಚುಗೆಗೆ ಅರ್ಹವಾಗಿರುವುದು ಅದರ ಕೊನೆ ಘಟ್ಟದಲ್ಲಿ. ದೈತ್ಯ ಶಕ್ತಿಗಳೆಲ್ಲ ಸತ್ತಮೇಲೂ ದೇವರ ಕ್ವಾಣ ಗೌರಿಯನ್ನು ಹಿಂಬಾಲಿಸುವ ಕನಸಿನ ಚಿತ್ರಣ; ಈ ಸೂರಯ್ಯನಂಥ ಅಯ್ನೋರು ಪಂಚಾಯ್ತಿ ಮಾಡಿಸಿ ಕೆಳಗಿನ ಕೇರಿಯಲ್ಲಿ ಗುಡ್ಲಾಕುವಂತೆ ಗೌರಿಗೆ ಹೇಳುವುದು ಕರೀಗೌಡನಂಥವರು ಸತ್ತರೂ ಅವರ ಅಂಶಗಳು ಉಳಿದವರಲ್ಲಿ ಬಿಟ್ಟಿರುತ್ತಾರೆನ್ನುವುದಕ್ಕೆ ಸಾಕ್ಷಿಗಳಾಗಿರು ತ್ತವೆ ಹಾಗೂ ಶೋಷಣೆಯ ನಿರಂತರತೆಯನ್ನು ಸಾರುತ್ತವೆ. ಬಿದ್ದು ಹಾಳಾಗಿ ಹೋಗಿರುವ ಮಾರೆಮ್ಮನ ಗುಡಿ ರಿಪೇರಿಕಾರ್ಯ ಎಲ್ಲಿಯವರೆಗೆ ನಿಲ್ಲುವುದಿಲ್ಲವೋ ಅಲ್ಲಿವರೆಗೆ ಬಸವಿ ಬಿಡುವಂಥ ಸಂಪ್ರದಾಯಗಳು ಉಳಿದುಕೊಂಡು ಶೋಷಣೆ ನಡದೇ ಇರುತ್ತದೆ. ಆದುದರಿಂದ "ಪ್ರಿಯ ವಾಚಕರೆ ನೀವು ಮಾಸೂರಿಗೆ ಹೋದರೆ ಹುಷಾ ರಿರಿ. ಮಾರಮ್ಮನ ಗುಡಿ ಕಟ್ತಿವಿ ಚಂದಾ ಕೊಡಿರಿ ಅಂತ ಅವರು ನಿಮ್ಮನ್ನು

ಪೀಡಿಸದೆ ಬಿಡಲಾರರು. ಎನ್ನುವ ಎಚ್ಚರಿಕೆಯನ್ನು ಲೇಖಕರು ಕೊಡುತ್ತಾರೆ. ಇದು ಲೇಖಕರ ಜನಪರ ನಿಲುವೆಂದೇ ಪರಿಗಣಿಸಬೇಕಾಗುತ್ತದೆ. ಸಾಮಾಜಿಕ ಜವಾಬ್ದಾರಿ ಇರುವ ಪ್ರತಿಯೊಬ್ಬ ಲೇಖಕನೂ ಇಂಥಾ ಸಮಸ್ಯೆಯ ಮೂಲ ಹುಡುಕುತ್ತಾನೆ. ನಿಜವಾದ ಲೇಖಕ ಸಮಾಜದಿಂದ ಸ್ಫೂರ್ತಿಗೊಳ್ಳುವುದರಿಂದ ಅವನಿಗೆ ಸಾಮಾಜಿಕ ಜವಾಬ್ದಾರಿ ಅನಿವಾರ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕುಂ. ವೀರಭದ್ರಪ್ಪ ಅವರು ಅಭಿನಂದನಾರ್ಹರು.

ತೇಜಸ್ವಿಯವರ 'ಕರ್ವಾಲೋ'

ಗಂಗಾಧರಮೂರ್ತಿ

ತೇಜಸ್ವಿಯವರ ಬೆಳವಣಿಗೆಯು ಕನ್ನಡ ಸಾಹಿತ್ಯದಲ್ಲಿ ಮಹತ್ವದ್ದೆಂದು ಹೇಳುವಾಗ ಅವರ ಬರಹಗಳ ಹಿನ್ನೆಲೆಗಿರುವ ಆಲೋಚನಾ ವಿಧಾನವನ್ನು ಪರಿಶೀಲಿಸುವುದು ಉಚಿತವೆಂಬುದು ನನ್ನ ಭಾವನೆ. "ಅಬಚೂರಿನ ಪೋಸ್ಟಾಫೀಸು" ಕಥಾಸಂಕಲನದ ಮುನ್ನುಡಿಯಲ್ಲಿ ತೇಜಸ್ವಿಯವರು ಹೇಳುವಂತೆ 'ಒರಿಜಿನಲ್ಲಾದ ಜೀವನಾನುಭವದ ತಿಳುವಳಿಕೆ'ಯ ಅಭಾವ ಹಾಗೂ 'ಯಾಂತ್ರಿಕವಾಗಿರುವ ಅದರ ಸಾಂಕೇತಿಕ ಶೈಲಿತಂತ್ರಗಳು' ನವ್ಯದ ಸೃಜನಶೀಲತೆಯನ್ನು ಆ ವೇಳೆಗಾಗಲೇ ಒಳಗೇ ಕೊರೆದು ತಿನ್ನುವ ಹುಳದಂತೆ ನಿಸ್ತೇಜಗೊಳಿಸತೊಡಗಿದ್ದವು.

"ಸರಳವಾಗಿ, ನೇರವಾಗಿ. ನೋಡುವ ಕೇವಲ ದೃಷ್ಟಿಕೋನ ಮಾತ್ರವಾಗಿ ಸಾಹಿತಿ ಕತೆಗಳಲ್ಲಿ ವ್ಯಕ್ತವಾಗುವ ಹೊಸದೊಂದು ಶಿಸ್ತನ್ನು ಬರವಣಿಗೆಯಲ್ಲಿ ನಾನು ಅಭ್ಯಾಸ ಮಾಡಬೇಕಾಯ್ತು. ಇದಕ್ಕೆ ನಮ್ಮ ಗ್ರಾಮಗಳಲ್ಲಿ ಕೇವಲ ವೀಕ್ಷಕನಾಗಿ ಮಾತ್ರವೇ ಇರಬೇಕಾಗಿ ಬಂದ ನನ್ನ ಜೀವನ ಸಂದರ್ಭವೂ ಒಂದು ಕಾರಣ. ಆದ್ದರಿಂದ ಕಲಾವಿದನ ಪ್ರಜ್ಞೆಯೊಳಗೇ ವಿಕಾಸವಾಗುವ ಅಥವಾ ಕಲಾವಿದ ಪ್ರಜ್ಞೆಯೇ ಕೇಂದ್ರವಾಗಿರುವ ಅಥವಾ ಸಾಹಿತಿಯೇ ನಾಯಕನಾದ. ಆತ್ಮನಿಷ್ಠ ಬರಹಗಾರರಾದ ಯು. ಆರ್. ಅನಂತಮೂರ್ತಿ ಮತ್ತು ಕಥಾಸಂಕನದ 'ಗತಿಸ್ಥಿತಿ'ಯ ಗಿರಿ ಒಂದು ಕೊನೆಯಾದರೆ, ಈ ನಾನು

ಇನ್ನೊಂದು ಕೊನೆ" (ಪೂ ಎ.ಕ. VIII)* ಈ ಧೃವೀಕರಣದ ನಿಲುವು 'ಘೋಷಣೆ' ಯಂತೆ ಕೆಲವರಿಗೆ ಕಂಡುಬಂದರೂ ನಂತರದ ಅವರ ಬರವಣಿಗೆಯಲ್ಲಿ ಸಮಾಜನಿಷ್ಠ ಪಾತಳಿಯು ದಟ್ಟಗೊಳ್ಳುವ ಪ್ರಕ್ರಿಯೆಯನ್ನು ನಾವು ಗುರುತಿಸಬಹುದು.

ನಮ್ಮ ಗಮನ ಸೆಳೆಯುವ, ಅವರ ಕೃತಿಗಳಲ್ಲಿ ಕಾಣುವ, ಮತ್ತೊಂದು ಗುಣವನ್ನು ಕೂಡ ಕುರಿತು ಯೋಚಿಸದೆ ಮುಂದೆ ಸಾಗುವುದು ಸೂಕ್ತವಾಗಲಾರದು ಎನ್ನಿಸುತ್ತದೆ. ಅವರ ಸೃಜನಶೀಲ ಪ್ರಕ್ರಿಯೆಯಲ್ಲಿ ಹರಳುಗಟ್ಟುವ ಸಮಾಜ ನಿಷ್ಠೆಯ ಬಿಡುಗಣ್ಣಿನ ನೋಟದ ಜೊತೆಯಲ್ಲೇ 'ಅಗೋಚರ ಕಾರಣಗಳ ಜಗತ್ತ'ನ್ನು ನಿರ್ದೇಶಿಸುವ ತಾತ್ವಿಕ ಆಯಾಮವೂ ಬಲಗೊಳ್ಳುತ್ತ ಹೋಗುತ್ತದೆ. ಈ ಎರಡು ಅಂಶಗಳು ಯಾವ ರೀತಿಯ ಒಡನಾಟದ ಮೂಲಕ ಅವರ ಕೃತಿಗಳ ಸಂವಿಧಾನ ಮತ್ತು ಕ್ರಿಯಾ ಸ್ವರೂಪವನ್ನು ನಿಯಂತ್ರಿಸುತ್ತವೆ ಎಂಬ ಅಂಶವನ್ನು 'ನಿಗೂಢ ಮನುಷ್ಯರು' ಹಾಗೂ 'ಕರ್ವಾಲೋ' ಸಮರ್ಥವಾಗಿ ನಿರೂಪಿಸುವ ಕಾದಂಬರಿಗಳಾಗಿವೆ. ಸಾಮಾಜಿಕ ಹಾಗೂ ತಾತ್ವಿಕ ಆಯಾಮಗಳು ಸಂಯೋಜನೆಗೊಳ್ಳುವ ವಿಧಾನವು ಈ ಎರಡು ಕೃತಿಗಳಲ್ಲೂ ಸ್ವರೂಪ ಮತ್ತು ರೀತಿಯಲ್ಲಿ ಬೇರೆಯೇ ಆಗಿರುವಂತಹುದು. 'ನಿಗೂಢ ಮನುಷ್ಯರು' ಕೃತಿಯಲ್ಲಿ ಈ ಆಯಾಮಗಳು ಮುಖಾಮುಖಿ ಸಂಬಂಧವನ್ನು ನಿರೂಪಿಸುತ್ತವೆ. ತಾತ್ವಿಕ ಆಯಾಮವು ಸಿಂಗ್‌ನ 'Riders to the Sea' ನಾಟಕದಲ್ಲಿ ಕಾಣುವಂಥ ನಿರಂತರ ಶಿವಿತದೆದುರು ಮಾನವ ಘನತೆಯನ್ನು ಎತ್ತಿಹಿಡಿಯುವ ಪ್ರಯತ್ನದಲ್ಲಿ ಯಶಸ್ಸು ಪಡೆಯುತ್ತದೆ:

> "ಎಲ್ಲೋ ಒಂದು ಕಡೆ ಸಾಯಬೇಕಷ್ಟೆ" ಎಂದು ಮಾತ್ರ ಒಂದು ಸಾರಿ (ದೂಜಪರ್ಬು) ಹೇಳಿದರು. "ಹಾಗೆ ಮಗನೂ ಹೋದ ಎಂದು ತಿಳಿದುಕೊಳ್ಳಿರಿ ದೂಜರೇ" ಎಂದು ಗೋಪಾಲಯ್ಯ ಸಾಂತ್ವನಗೊಳಿಸಲೆತ್ನಿಸಿದರು. ಆಗೊಮ್ಮೆ "ಯಾರು ಗೋಪಾಲಯ್ಯನೋ" ಎಂದು ತಿರುಗಿನೋಡಿ ನಸುನಕ್ಕರು' (೧೫೧). ನಸುನಗುತ್ತ ತನ್ನ ಅಳವಿಗೆ ಮೀರಿದ್ದನ್ನು ಎದುರಿಸುವ ದೂಜರ ಜೊತೆಗಯ್ಯಾಗಿ "ಗೋಪಾಲಯ್ಯ ಪಂಚೆ ಮಡಿಸಿ ಪಕ್ಕದ ಗುಡಿಸಿಲಿನಿಂದ ಇನ್ನೊಂದು ಹಾರೆ ತಂದು ಪರ್ಬುರ ಜೊತೆಗೆ ಕೆಸರು ಎಳೆಯತೊಡಗಿದ್ದರು...ಗೋಪಾಲಯ್ಯನೂ ದೂಜರೂ ಕೆಸರಿನ ಅಕ್ಷಯ ಪಾತ್ರೆಯಲ್ಲಿ ಕೆಲಸ ಮಾಡುತ್ತಿದ್ದರು" (೧೫೨).

'ಕರ್ವಾಲೋ'ದಲ್ಲಿ ಈ ಸಂಬಂಧ ಪೂರಕ ಸ್ವರೂಪದ್ದಾಗಿ ಕಂಡುಬರುವುದಾದರೂ ಸಾಮಾಜಿಕ ಆಯಾಮವನ್ನು ಕುಬ್ಜಗೊಳಿಸಿಬಿಡುವಷ್ಟರ ಮಟ್ಟಿನ ಪ್ರಭಾವವನ್ನು ತಾತ್ವಿಕ ಆಯಾಮವು ಪಡೆಯುತ್ತದೆ. ಸಾಮಾಜಿಕ ವಾಸ್ತವಗಳ ಅಡಿಯಲ್ಲಿ ಅಂತರ್ಜಲದಂತೆ ಉಕ್ಕುತ್ತ ವಿಸ್ತಾರಗೊಳ್ಳುವ ತಾತ್ವಿಕ ಆಯಾಮ

* ಲೇಖನದಲ್ಲಿ ಉದಹೃತ ಸಾಲುಗಳ ಪುಟ ಸಂಖ್ಯೆಗಳು ಪತ್ರಿಕಾ ಪ್ರಕಾಶನದ 'ಪೂರ್ಣಚಂದ್ರ ತೇಜಸ್ವಿಯವರ ಎಲ್ಲ ಕತೆಗಳು' ಮತ್ತು 'ಕರ್ವಾಲೋ'-1983ರ ಆವೃತ್ತಿಗೆ ಅನ್ವಯಿಸುತ್ತವೆ.

'ಕಾಲದ ರಾಯಭಾರಿ'ಯಾದ ಓತಿಯಲ್ಲಿ ಸಾಂದ್ರತೆಗಳಿಸುತ್ತದೆ. ಹಾರುವ ಓತಿಯು ಕೇಂದ್ರವ ಸುತ್ತ ಪಾತ್ರಗಳನ್ನು ಕ್ರಿಯಾಶೀಲಗೊಳಿಸುವ 'ಅನ್ವೇಷಣೆ'ಯು 'ಯಾನ' ಈ ಪೂರಕಗುಣವನ್ನು ಪರಿಚಯಿಸುತ್ತದೆ. ಹಾಗೆಯೇ ಈ ಕಾದಂಬರಿಗಳ ಚಿಂತ ನಾತ್ಮಕ ಪರಿಣಾಮ ಸ್ವರೂಪದಲ್ಲಿ ಬೇರೆಯೇ ಆದರೂ ಸತ್ವದಲ್ಲಿ ಒಂದೇ ಇರಬೇಕು ಎನ್ನುವಂತೆ ಕಂಡುಬಿಡುತ್ತದೆ : "ಕರ್ವಾಲೋ ಒಮ್ಮೆ ನಿಟ್ಟುಸಿರುಬಿಟ್ಟು 'ಹೋಗಲಿ ಬಿಡಿ, ಬ್ಯಾಡ್‌ಲಕ್. ಆದರೆ ಏನೂ ಬೇಸರವಿಲ್ಲ' ಎಂದರು" (೧೯೧). ನುಣುಚಿ ಕೊಂಡ ಓತಿಯಿಂದ ಹತಾಶರಾಗದ ಕರ್ವಾಲೋರ ಪರಿಭಾಷೆಗೂ ಗೋಪಾಲಯ್ಯ ದೂಜರ ಪರಿಭಾಷೆಗೂ ಅಂತಃಸತ್ವದಲ್ಲಿ ಹೆಚ್ಚೇನು ವ್ಯತ್ಯಾಸ ಕಾಣದಿರುವುದೂ ನಿಜವೇ. ಈ ಅಂಶವನ್ನು ನಾವು ಬೇರೆಯಾಗಿಯೇ ಪರಿಶೀಲಿಸಬೇಕು.

ತೇಜಸ್ವಿಯವರ 'ಸ್ವರೂಪ'ದ ನಂತರದ ಕೃತಿಗಳಲ್ಲಿ ಕಾಣುವ ಈ ಆಯಾಮಂಗಳ ಗತಿ ತಾರ್ಕಿಕ ಸಂಬಂಧವನ್ನು ಗುರುತಿಸದೆ ನಾಜೂಕು ನುಡಿಗಟ್ಟುಗಳ 'ಸಾಹಿತ್ಯಿಕ ಪರಿಭಾಷೆ'ಯಿಂದಲೇ ಅವುಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಒಂದು ಪರಿಮಿತಿ ಯೊಳಗಷ್ಟೇ ನಮ್ಮ ವಿಮರ್ಶಾ ಪ್ರಜ್ಞೆಯನ್ನು ಉದ್ದೀಪಿಸಲು ಸಾಧ್ಯ ಎನ್ನಬಹುದು. ಸಾರಾಸಗಟು ಧೋರಣೆಯ ವಿಮರ್ಶೆ, "ವಿಮರ್ಶೆಯ ಹೆಸರಿನ ಗುಂಪು ರಾಜಕೀಯ" ಅಥವಾ "ಕೇವಲ ಆತ್ಮಗೋಚರ ಮಾತ್ರವಾದ ವಿಮರ್ಶೆಯ ಪಾರಿಭಾಷಿಕ ಶಬ್ದ ಸರಣಿಯು" (ಪೂ. ಎ. ಕ. X) ವಿಧಾನಗಳ ಹುಳುಕು ಇಂಥ ಕೃತಿಗಳಿಂದ ಬಯಲಾಗು ತ್ತದೆ. ಆದ್ದರಿಂದಲೇ ನಮ್ಮ ವಿಮರ್ಶೆಯ ಪರಿಭಾಷೆಯನ್ನು ಮಾರ್ಪಡಿಸಿಕೊಳ್ಳುವ ಒತ್ತಾಯವನ್ನು ಇಂತಹ ಕೃತಿಗಳು ಅನಿವಾರ್ಯಗೊಳಿಸುತ್ತವೆ.

'ಕರ್ವಾಲೋ' ಕಾದಂಬರಿಯಲ್ಲಿ ಬಹುಮುಖ್ಯವಾಗಿ ಕಾಣುವಂಥ ಒಂದಂಶ ವೆಂದರೆ ನಿರೂಪಕ ವೀಕ್ಷಕನಾಗಿ ಬೆರಗುಗಣ್ಣಿನಿಂದ ತನ್ನ ಸುತ್ತಲ ಪ್ರಪಂಚವನ್ನು, ಅಲ್ಲಿನ ವೈಚಿತ್ರ್ಯಗಳನ್ನು, ನೋಡುವುದು. ಜೇನು ಹುಳುಗಳು ಅವನಿಗೆ 'ಮಾನವನ ಮೊದಲ ಶತ್ರು. ಹಾವಿನಂತೆಯೆ ಮಾನವನನ್ನು ಕಚ್ಚಲು ಕೊಲ್ಲಲು ಯತ್ನಿಸುವ ಕೀಟ' (೧೫)ವಾಗಿ ಕಾಣಿಸುತ್ತವೆ. ಮಂದಣ್ಣನಿಂದಾಗಿಯೇ ಕರ್ವಾಲೋ ಗಮನಕ್ಕೆ ಬಂದ ಗ್ಲೋವರ್ಮ್ 'ಆಶ್ಚರ್ಯದಿಂದ ಕುತೂಹಲ ಇಮ್ಮಡಿ'(೩೯)ಸಲು ಕಾರಣವಾಗುತ್ತದೆ. ಕೀಟ ಪ್ರಪಂಚದ ಸೋಜಿಗಗಳಿಗೆ ಪರಿಚಯವಾಗುತ್ತಿದ್ದಂತೆ 'ನನಗೆ ಗೊತ್ತಿಲ್ಲದ ಅಗೋಚರ ಆಶ್ಚರ್ಯಗಳು ಇನ್ನೆಷ್ಟಿವೆಯೋ' (೪೨) ಎಂದು ತಾತ್ವಿಕ ಆಯಾಮ ಪಡೆಯುತ್ತಿರುವ ಸೋಜಿಗ ಪ್ರಪಂಚದ ಬಗ್ಗೆ ಯೋಚಿಸುತ್ತಾನೆ. ಕಾದಂಬರಿ ಮುಂದುವರಿದಂತೆ ಹಾರುವ ಓತಿಯನ್ನು 'ಹಾಗೇ ಉಳಿಸಿದ ಮಾಯಾಹಸ್ತ'(೧೫೭)ದ ಅನ್ವೇಷಣೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಕೇವಲ ವೀಕ್ಷಕನೂ ಕುತೂಹಲಿಯೂ ಆಗಿದ್ದ ನಿರೂಪಕ ಪೂರಕವಾಗಬಹುದಾದ ಎರಡು ಆಯಾಮಗಳಲ್ಲೂ ತನ್ನನ್ನು ತೊಡಗಿಸಿಕೊಳ್ಳುವುದು ಕಂಡುಬರುತ್ತದೆ. ಈ ರೀತಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳಲು ಪ್ರೇರಣೆಯಾಗಿಸುವ ('ನನ್ನ ಮನಸ್ಸು ಹೊಸ ತರ್ಕಕ್ಕೆ ಹೊಸ

ಸರಳತೆಗೆ ಹೊಸ ವಿಸ್ತಾರಕ್ಕೆ ಪರಿವರ್ತನೆಗೊಂಡಿತು'. (೯೪) ಎರಡು ಪಾತ್ರಗಳು ಕಾದಂಬರಿಯ ಸಾಮಾಜಿಕ ಸ್ತರದಲ್ಲಿ ಮೂಡುತ್ತವೆ. ಈ ಎರಡು ಪಾತ್ರಗಳಷ್ಟೇ ಅಲ್ಲದೆ, ತಮ್ಮ ಆಶಯಗಳ ಪರಿಮಿತಿಯೊಳಗೆ, ಅಗೋಚರ ಕಾರಣಗಳ ಜಗತ್ತಿನ ಪ್ರತಿನಿಧಿಯಾದ ಓತಿಯ ಅಯಸ್ಕಾಂತ ಶಕ್ತಿಗೆ ಒಳಗಾಗುವ ಉಳಿದ ಪಾತ್ರಗಳೂ ಸಾಮಾಜಿಕ ಸ್ತರದಲ್ಲೇ ಉದ್ಭವಿಸಿರುವಂಥವು. ಪರಸ್ಪರ ಅವಲಂಬನೆಯಿಂದ ಮಾತ್ರ ಯಶಸ್ಸು ದೊರಕಬಹುದಾದ ಸಾಧ್ಯತೆಯಿರುವ ಈ ವೃತ್ತದಲ್ಲಿ ಇವರುಗಳ ಸಂಕೀರ್ಣ ಸಂಬಂಧದ ಒಂದು ತುದಿಗೆ ಮಂದಣ್ಣನಿದ್ದರೆ ಇನ್ನೊಂದು ತುದಿಗೆ ಕರ್ವಾಲೋ ನಿಲ್ಲುತ್ತಾರೆ ಎನ್ನಬಹುದು.

ಮಂದಣ್ಣ 'ಅಗೋಚರ ವಿಶ್ವವೊಂದರ ತುಣುಕಿನಂತೆ'(೧೮) ಇದ್ದ ನಾರ್ವೆಯ ಪರಿಸರಕ್ಕೆ ಸೇರಿದವನು, ಹಲವು ಸನ್ನಿವೇಶಗಳ ಆಧಾರದ ಮೇಲೆ ನಿರೂಪಕ ಮೊದ ಮೊದಲು ಮಂದಣ್ಣನ ಬಗ್ಗೆ ತಳೆಯುವ ಅಭಿಪ್ರಾಯಗಳು ಹೀಗಿವೆ: ಅವನು 'ಪಿಗ್ಮಾಟನ್ ಗುಳ್ಡು ಮಂದಣ್ಣ'(೩೧), 'ಅತ್ಯಂತ ಹಗುರ ಬುದ್ಧಿಯ ಮಂಗಣ್ಣನ ರೀತಿ ಮಂದಣ್ಣನ ಚರ್ಯೆಗಳಿದ್ದುವು'(೫೪), 'ಈ ಮಂದಣ್ಣ ಮಂಗಸೂಳೆಮಗ' (೫೯). ಮಂದಣ್ಣನ ಪಾತ್ರವನ್ನು ಹಗುರವಾಗಿ ಪರಿಭಾವಿಸಬೇಕು ಎನ್ನುವ ಸಲ್ಲದ ಉದ್ದೇಶದಿಂದ ಈ ಸಾಲುಗಳನ್ನು ಇಲ್ಲಿ ಬಳಸಿಕೊಂಡಿಲ್ಲ. ಕಾದಂಬರಿಯಲ್ಲಿ ಅವನ ಪಾತ್ರವನ್ನು ಈ ಮಾತುಗಳು ಹ್ರಸ್ವಗೊಳಿಸುವ ರೀತಿಯವೂ ಅಲ್ಲ. ಆದರೆ ಮಂದಣ್ಣ ಮತ್ತು ಕರ್ವಾಲೋ ಹೀಗೆ ಎರಡು ತುದಿಗಳಲ್ಲಿ–ಗ್ರಾಮ್ಯ, ನಿರಕ್ಷರಕುಕ್ಷಿ ; ನಾಗರಿಕ, ವಿಜ್ಞಾನಿ-ನಿಲ್ಲುತ್ತಾರೆ ಎನ್ನುವುದನ್ನು ಗಮನಿಸುವುದಷ್ಟೇ ಇಲ್ಲಿನ ಉದ್ದೇಶ.

ಕರ್ವಾಲೋ ಮಂಗಳೂರು ಬೊಂಬಾಯಿಯಂಥ ನಗರ ಪರಿಸರದಿಂದ ಬಂದವರು. ಜನ ಮಾತಾಡಿಕೊಳ್ಳುವಂತೆ 'ಬಹು ದೊಡ್ಡ ಸಸ್ಯಜ್ಞಾನಿ ಮತ್ತು ಕೀಟ ಶಾಸ್ತ್ರಜ್ಞ'(೧೭). ಸಾಂಸ್ಕೃತಿಕವಾಗಿ ಅಷ್ಟೇ ಅಲ್ಲದೆ ಸಾಮಾಜಿಕವಾಗಿ ಕೂಡ ಪರಕೀಯ: ಬೌದ್ಧಿಕ ಸಂಪರ್ಕ ಕರ್ವಾಲೋಗೆ ಸಾಧ್ಯವಾಗುವುದು ನಿರೂಪಕನೊಂದಿಗೆ ಮಾತ್ರ (೪೯). ನಿರೂಪಕನ ದೃಷ್ಟಿಯಲ್ಲಿ ಪ್ರಾರಂಭದಲ್ಲಿ ಅನುಮಾನಾಸ್ಪದ ವ್ಯಕ್ತಿ ಎಂಬ ಸಂದೇಹ ವಿದ್ದರೂ ಅವರ ವಿಚಾರಗಳು 'ಕಾಲದೇಶಗಳನ್ನು ಮೀರುವ ದಿವ್ಯಜ್ಞಾನದ ಮಿಂಚು ನೋಟಗಳು' (೧೦೫).

ಆದರೂ ಈ ಗ್ರಾಮ್ಯ, ನಿರಕ್ಷರಕುಕ್ಷಿ, ಬದುಕಿನ ಜಂಜಾಟಗಳಿಗೆ ಸಿಕ್ಕಿ ನರಳುವ ಮಂದಣ್ಣನನ್ನು ನಾಗರಿಕ, ವಿಜ್ಞಾನಿ, ಜ್ಞಾನಪಿಪಾಸುವಿನೊಂದಿಗೆ ಸಂಬಂಧವೇರ್ಪಡಿಸುವ ಕೆಲವು ಅತ್ಯಾಶ್ಚರ್ಯಕರ ಗುಣಗಳನ್ನು ನಾವು ನೋಡಬಹುದು. ಈ ಗುಣಗಳು ಅವನ ಜೀವನ ವಿಧಾನದಿಂದ ಅಪ್ರಜ್ಞಾಪೂರ್ವಕವಾಗಿ ಬಂದಿರುವಂಥವು. ಈ ಜೀವನ ವಿಧಾನದಿಂದಲೇ ಬಂದಿರುವ ಎಂಗ್ಟ ಹಾವನ್ನು ಜೀವಂತ ಸುಲಿಯುವುದು, ವಿಕಾಸ ವಾದವನ್ನೇ ತಿರುವು ಮುರುವು ಮಾಡುವಂತೆ ಬಿಯರ್ಾನಿಕರಿಯ ಮರ ಹತ್ತುವುದು ಈ ಅಂಶದ ಮೇಲೆ ಬೆಳಕು ಚೆಲ್ಲುತ್ತವೆ. ಎಬಡನಂತೆ ಕಾಣುವ ಮಂದಣ್ಣನಿಗೆ

ಕರ್ವಾಲೋ ಪೀವನ್ ಕೆಲಸ ಕೊಡಲು ತಯಾರಿಲ್ಲ. ಏಕೆಂದರೆ ಅವರಿಬ್ಬರೂ 'ಸಮಾನ ವ್ಯಸನ'ದ ಕಾರಣದಿಂದಲೇ ಆಪ್ತರಾದವರು. ತಮ್ಮಿಬ್ಬರಿಗೂ ಕುಂಡಿಕೆಯಾದ ಈ 'ಸಮಾನ ವ್ಯಸನ' ವಿಜ್ಞಾನಿ ಕರ್ವಾಲೋಗೆ ಪ್ರಜ್ಞಾಪೂರ್ವಕ ಹುಡುಕಾಟದ ಆದರ್ಶವಾದರೆ ಗ್ರಾಮ್ಯ ಜೀವನದ ಪಥ ನದಲ್ಲಿ ಅದು ಮಂದಣ್ಣನಿಗೆ ಮಹತ್ವದ್ದೆನಿಸ ಲಾರದು. ಆದರೂ ಕರ್ವಾಲೋ 'ಅವನೊಬ್ಬ ವಂಡರ್‌ಫುಲ್ ಫೆಲೋ,...ನನ್ನ ಶಿಷ್ಯ ಅವನು'(೨೭) ಎನ್ನುತ್ತಾರೆ. ಗ್ಲೋವರ್ಮ್ ಬಗ್ಗೆ ಮಾಹಿತಿ ನೀಡಿದ ಮಂದಣ್ಣನ ಪ್ರತಿಭೆ ಯಾವ ವಿಜ್ಞಾನಿಗೂ ಕಡಿಮೆಯಾದಲ್ಲ ಎನ್ನುತ್ತಾರೆ. ವಿಜ್ಞಾನಿಯಂತ ಅವನು (ಅ) 'ನೋಡುತ್ತಾನೆ', (ಆ) 'ಚಲನವಲನವನ್ನು ಅಭ್ಯಾಸ ಮಾಡುತ್ತಾನೆ' (ಇ) 'ಪತ್ತೆ ಮಾಡುತ್ತಾನೆ' (೪೦). ಅಷ್ಟೊಂದು ಚೆನ್ನಾಗಿ ಗ್ರಹಿಸ್ತಾನೆ. ಅವನೊಬ್ಬ ನ್ಯಾಚುರಲಿಸ್ಟ್. ಅದ್ಭುತ ಪ್ರಕೃತಿ ಶಾಸ್ತ್ರಜ್ಞ ಅವನು'(೧೦೦). 'ಈ ಒಂದು ವಿಷಯದಲ್ಲಿ ಮಂದಣ್ಣನ್ನ ಮೀರಿಸೋರು ಯಾರೂ ಇಲ್ಲ' (೪೦). ಆದ್ದರಿಂದಲೇ ಇಬ್ಬರಲ್ಲೂ ಕಂಡುಬರುವ ಈ ಸಮಾನ ಗುಣಗಳು ಅವರನ್ನು ವೃತ್ತದ ಅಂಚಿನ ವಿರುದ್ಧ ದಿಕ್ಕಿನತ್ತ ಹೊರದೂಡದೆ ಒಳಕ್ಕೆ, ಕೇಂದ್ರದತ್ತ ಆಕರ್ಷಿಸುತ್ತವೆ.

ಮಂದಣ್ಣ ಮತ್ತು ಕರ್ವಾಲೋ ಇಬ್ಬರನ್ನು ಬಳಸಿ ಹಿಡಿಯುವ ಸಾಮಾಜಿಕ ವ್ಯವಸ್ಥೆಯ ಕಠೋರ ವಾಸ್ತವತೆಯನ್ನು ಈಗ ಪರಿಶೀಲಿಸಬಹುದು. ದಟ್ಟವಾದ ಸಾಮಾಜಿಕ ಪಾತಳಿಯ ಮೂಲಕವೇ ಕಾದಂಬರಿಯಲ್ಲಿನ ಪಾತ್ರಗಳು ಬೆಳಕಿಗೆ ಬರುವುದ ರಿಂದ ಈ ಆಯಾಮವನ್ನು ಪರಿಶೀಲಿಸುವುದರ ಅಗತ್ಯವಿದೆ. ಬೇರೆ ಯಾರೂ ಗುರುತಿಸದ ಮಂದಣ್ಣನ 'ವೈಯಕ್ತಿಕತೆ'ಯು. ಪ್ರತಿಭೆಯು ಬೆಳೆಯಲಾರದಂಥ ವಿಷಮ ಸಾಮಾಜಿಕ ಪರಿಸ್ಥಿತಿಯೊಂದು ಈ ಕಾದಂಬರಿಯಲ್ಲಿ ನಮಗೆದುರಾಗುತ್ತದೆ. ಆರ್ಥಿಕ ಸ್ವಾವಲಂಬನೆಯಿಂದ ವಂಚಿತನಾದ ಮಂದಣ್ಣನಿಗೆ ಬದುಕಿನ ಆಸೆಗಳು ನೋವಿನ ಧ್ವನಿಯಾಗಿ ಮಿಡಿಯುತ್ತವೆ. ನಾರ್ವೆಯ ರಾಮಯ್ಯನ ಮಗಳನ್ನು ಮದುವೆಯಾಗಿ ಕೌಟುಂಬಿಕ ಜೀವನಕ್ಕೆ ಹಾತೊರೆಯುವ ಅವನೇ ಹೇಳುವಂತೆ, 'ಅವನ ಮಗಳು ನನ್ನಿಂದೆ ಓಡಿ ಬರೋಕ್ಕು ತಯಾರಿದ್ದಾಳೆ ಸಾರ್. ನನ್ನ ಕಂಡ್ರೆ ಅಷ್ಟೊಂದು ಜೀವ ಬಿಡ್ತಾಳೆ' (೫೨) ಅಥವಾ ನಿರೂಪಕ ಗಮನಿಸುವಂತೆ ಯೌವ್ವನದ ಸಹಜತೆಯಲ್ಲಿ 'ಅವಳ ವಯಸ್ಸಿಗೂ ಗಾತ್ರಕ್ಕೂ ತಾಳ ಮೇಳವಿಲ್ಲದಂತಿದ್ದ ಅವಳ ಬೃಹದಾಕಾರದ ಮೊಲೆಗಳು... ಮಂದಣ್ಣನ ತಲೆಕೆಡಿಸಿರಬೇಕು' (೬೬). ಬಿರ್ಯಾನಿ ಕರಿಯನಿಗಿಂತ ನೈತಿಕವಾಗಿ ಬೇರೆಯೇ ನಿಲ್ಲುವ ಮಂದಣ್ಣ ಮಾನವ ಸಹಜ ಬಯಕೆ ಯನ್ನು ವಿವಾಹದಂತಹ ಸಾಂಸ್ಥಿಕ ಆವರಣದಲ್ಲೇ ಕೈಗೂಡಿಸಿಕೊಳ್ಳ ಬಯಸುತ್ತಾನೆ. ಆದರೆ ರಾಮಯ್ಯ ರಾಮಿಯನ್ನು 'ಕಾಡು ಕುರುಬನ ಹಂಗೆ ಹಕ್ಕಿಪಕ್ಕಿ ಹುಳಾ ಹುಪ್ಪಟೆ ಚಾಟರು ಬಿಲ್ಲು, ಹಿಡಿದು ಶಿಕಾರಿ ತಿರುಗೋ' (೫೬) ಆದಿವಾಸಿ, ಅಲೆಮಾರಿ ಲಕ್ಷಣಗಳ ಮಂದಣ್ಣನಿಗೆ ಮದುವೆ ಮಾಡಿಕೊಡಲು ನಿರಾಕರಿಸುವುದು ಈಗಾಗಲೇ ಅವನಲ್ಲಿ ಬೆಳೆಯುತ್ತಿರುವ ಆರ್ಥಿಕ ಸುಭದ್ರತೆಯ ಜೀವನ ದೃಷ್ಟಿಯನ್ನು ಅವಲಂಬಿಸಿದೆ.

ಮದುವೆಯ ಮಧ್ಯಸ್ಥಿಕೆಗೆ ಪ್ರಭಾಕರ ಹೋದಾಗ ರಾಮಯ್ಯ ಹೇಳುವುದು ಈ ಅಂಶವನ್ನು ಸ್ಪಷ್ಟಪಡಿಸುತ್ತದೆ : 'ಅದು ಸರಿ ಸ್ವಾಮಿ,ಆ ಕೋಂಪೇಲಿದ್ದಾನೆ. ಅಲ್ಲಿಗೆ ಹೆಣ್ಣು ಕೊಡೋದೆಂದರೆ ಸುಡುಗಾಡಿಗೆ ಕಳಿಸಿದಾಂಗೆ ಮಕ್ಕಳನ್ನ. ಎಲ್ಲಾರೂ ಹಿಂಗೇ ಪ್ಯಾಟೆ ಕಡೆ ಒಂದು ನೌಕರಿನಾರೂ ಇದ್ದಿದ್ರೆ ನಾನೂ ಗಟ್ಟಿ ಮನಸ್ಸು ಮಾಡ್ತಿದ್ದೆ' (೫೬) ಎನ್ನುತ್ತಾನೆ. ನೌಕರಿಗಾಗಿ ಹಲ್ಲು ಕಿರಿಯುತ್ತಿರುವ ಮಂದಣ್ಣನ ಜೀವನೋತ್ಸಾಹಕ್ಕೆ ಕಂಟಕಪ್ರಾಯವಾಗಿರುವ ಜಾತಿ ರಾಜಕಾರಣವನ್ನೂ ಪರಿಣಾಮವಾದ ವಿಷಾದವನ್ನೂ ನೋಡಿ : 'ನನ್ನ ವಯಸ್ನೇ ಆದರೂ ಅವನು (ಲಕ್ಷ್ಮಣ) ಒಕ್ಕಲಿಗಾಂತ ಬೇಗ ಕೆಲಸ ಸಿಕ್ಕಿ ಮೇರೇಜೂ ಆಗಿ ಮೊಗಾನೂ ಆಯ್ತು' (೧೯).

ಮಂದಣ್ಣನಂತಹ ಅಸಹಾಯಕ ಜೀವಿಗಳು ಸ್ವಾಭಿಮಾನದಿಂದ ಬದುಕಲು ಸಾಧ್ಯವಿಲ್ಲದಂತಹ ವಿಷವರ್ತುಲ ಕೂಡ ಇಲ್ಲಿನ ಸಾಮಾಜಿಕ ಸಂದರ್ಭದಲ್ಲಿ ರೂಪುಗೊಂಡಿರುವುದು ಇನ್ನೂ ಕೆಲವು ಸಂಗತಿಗಳನ್ನು ಪರಿಶೀಲಿಸುವುದರಿಂದ ಮನದಟ್ಟಾಗುತ್ತದೆ. ಕಳ್ಳಬಟ್ಟಿಯನ್ನು ಮಂದಣ್ಣನೇ ಮಾಡಿದನೆಂದು ಹೇಳಿಕೆ ಪಡೆದು ಅವನನ್ನು ಇಟ್ಟಾಡಿಸಿ ದಬ್ಬಾಳಿಕೆ ನಡೆಸುವ ಪೋಲೀಸರು ಒಂದು ಕಡೆಯಾದರೆ, ದುರ್ಬಲರಾದ ಎಂಗ್ಟನಂತಹವರ ಹೆಂಡಂದಿರನ್ನು ಉಪಭೋಗಿಸುವ ಫಾರೆಸ್ಟು ಆಫೀಸರುಗಳು ಮತ್ತೊಂದು ಕಡೆ. ಈ ಪ್ರಸಂಗದಲ್ಲಿ ಎಂಗ್ಟ ತೋರುವ ಪ್ರತಿಕ್ರಿಯೆ ಹೀಗಿದೆ : 'ಅದೂ ಅಲ್ದೆ ಹೆಂಡ್ರೂ ಮಕ್ಳೂ ಬಿಟ್ಟು ಕಾಡಾಗೆ ಕಾಲಾ ಮಾಡ್ತಿರ್ತಾರೆ. ಹೆಂಗ್ಸರ ಸೋಕಿ ಬ್ಯಾರೆ ಇರ್ತದೆ. ಒಬ್ಬಿಬ್ಬರನ್ನು ಒಂದೊಂದು ತರದಲ್ಲಿ ಸುದರಾಯಿಸಬೇಕಲ್ಲಾ ಸೋಮಿ' (೧೭೦) ಎನ್ನುತ್ತಾನೆ. ಇಂತಹ ಕ್ರೂರ ವಾಸ್ತವವನ್ನು ಎದುರಿಸಲಾಗದ ಹತಾಶೆಯನ್ನೇ ಜೀವನಕ್ರಮವೆಂದು ಒಪ್ಪಿಕೊಳ್ಳುವ ವಿಷಾದ ಎಂಗ್ಟನ ಮಾತುಗಳಲ್ಲೂ ಧ್ವನಿತವಾಗುತ್ತದೆ.

ಆರ್ಥಿಕ ಹಾಗೂ ಸಾಮಾಜಿಕ ಸವಲತ್ತುಗಳಿಂದ ವಂಚಿತರಾದ ಮಂದಣ್ಣನಂತಹವರನ್ನು ವ್ಯವಸ್ಥೆಯು ಅಮಾನವೀಯವಾಗಿ ನಿರ್ವೀರ್ಯಗೊಳಿಸುವುದು ಒಂದು ವಿಧಾನವಾದರೆ ಕರ್ವಾಲೋರಂತಹವರನ್ನು ನಿಯಂತ್ರಿಸಲು ಉದ್ಯುಕ್ತವಾಗುವ ವಿಧಾನ ಇನ್ನೊಂದು ರೀತಿಯದ್ದು. ಕಳ್ಳಬಟ್ಟಿ ಕೇಸಿನಲ್ಲಿ ಮಂದಣ್ಣನನ್ನು ಅರೆಸ್ಟು ಮಾಡಿ ಒಂದು ವರ್ಷ ಸಜ, ಆರುನೂರು ರೂಪಾಯಿಗಳ ದಂಡ ವಿಧಿಸುತ್ತಾರೆ ಎನ್ನುವ ವಿಷಯ ಕೇಳಿದ ಕರ್ವಾಲೋ 'ಈಗ ಸದ್ಯಕ್ಕೆ ಮಂದಣ್ಣನನ್ನು ಹೇಗಾದರೂ ಮಾಡಿ ನಾವು ಪಾರು ಮಾಡಬೇಕು. ಜುಲ್ಮಾನೆ ಆರುನೂರಲ್ಲ ಆರು ಸಾವಿರವಾದರೂ ನಾನು ಕೊಡ್ತೀನಿ' (೮೭) ಎನ್ನುವ ನಿರ್ಧಾರವನ್ನು ತೆಗೆದುಕೊಳ್ಳುವಾಗ, ಅವರಿಗೆ ತತ್‌ಕ್ಷಣದ ಯೋಚನೆಯಿತ್ತೋ ಅಥವಾ ಮಂದಣ್ಣನೊಂದಿಗಿನ ಆತ್ಮೀಯತೆ ಕಾರಣವಾಗಿತ್ತೋ ಎನ್ನುವ ವಿಷಯ ನಂತರದ್ದು. ಆದರೂ ಈ ನಿರ್ಧಾರವು ಅವರ ಮಾನವೀಯತೆಯಿಂದ ಮೂಡಿದೆ ಎನ್ನುವುದಕ್ಕೆ ಕಾದಂಬರಿಯಲ್ಲಿ ಆಧಾರಗಳಿವೆ : (೧೨೪, ೧೪೬-೪೭-೪೮).

ಕೇಸು ವಿಚಾರಣೆಯ ಹಂತ ತಲುಪಿದಾಗ ಸಮಾಜದ ನಿಯಂತ್ರಿಕ ಶಕ್ತಿ ಕಾರ್ಯೋನ್ಮುಖ ವಾಗುತ್ತದೆ. ಪರಾಬು ಕಂಟ್ರಾಕ್ಟ ಗೋವಿಂದಪ್ಪ, ಪಬ್ಲಿಕ್ ಪ್ರಾಸಿಕ್ಯೂಟರ್, ಪೋಲೀಸು ಎಲ್ಲರೂ ಸೇರಿದ ಗುಪ್ತ ವ್ಯವಸ್ಥೆಯನ್ನು ಕರ್ವಾಲೋ ಎದುರಿಸಬೇಕಾಗು ತ್ತದೆ. ಈ ವ್ಯವಸ್ಥೆ ಕರ್ವಾಲೋರಂತಹ ಪ್ರಾಮಾಣಿಕರನ್ನೂ 'ತಳ್ಳಿ ಅರ್ಜಿ ರಾಜ ಕಾರಣ' ಕ್ಕೆ ಬೆಸೆಯುತ್ತದೆ. ಪಟ್ಟಭದ್ರ ಹಿತಾಸಕ್ತಿಯ ಫ್ಯೂಡಲ್ ಮತ್ತು ಅಧಿಕಾರ ಶಾಹಿಗಳು ಒಂದಾಗಿ ನೈತಿಕ ಸ್ಥೈರ್ಯವನ್ನು ನಿರ್ನಾಮ ಮಾಡಲು ಪಿತೂರಿ ಹೂಡುತ್ತವೆ. ಕರ್ವಾಲೋ ಈ ಚಕ್ರವ್ಯೂಹದಿಂದ ಹೇಗೆ ಪಾರಾದರು ಎನ್ನುವುದು ನಮಗೆ ಮಹತ್ವದ್ದಾಗಲೀ ಕುತೂಹಲದ ವಿಷಯವಾಗಲೀ ಆಗದಿದ್ದರೂ "ಅದೃಷ್ಟಕ್ಕೆ ನ್ಯಾಯಾಧೀಶರು ಯಾರೋ ಬಿಜಾಪುರದ ಕಡೆಯವರಾಗಿ ಬದುಕಿದೆವು" (೧೧೦) ಎನ್ನುವ ಮಾತುಗಳು ಜಾತಿ ಪದ್ಧತಿಯ ವಾಸ್ತವತೆಯನ್ನು ವ್ಯಂಗ್ಯವಾಗಿ ಧ್ವನಿಸುತ್ತದೆ ಎನ್ನಬಹುದು.

ಮೇಲೆ ನಾವು ಗುರುತಿಸಿದ ಗುಪ್ತವ್ಯವಸ್ಥೆಯ ಕಣ್ಣಿಗೆ ಮಂದಣ್ಣನಂತಹವರು "ಬೀದಿಪೋಲಿಗಳು, ಬಿಕನಾಸಿಗಳು, ಕಳ್ಳಭಟ್ಟಿ ಇಳಿಸೋರ ಹಾಗೆ"(೧೦೮)ಕಾಣುತ್ತಾರೆ ; ಕರ್ವಾಲೋ "ಹುಶಾರಾಗಿರಬೇಕಾದ...." ಚಲನವಲನಗಳ ಮೇಲೆ ನಿಗಾ ಇಟ್ಟಿರ ಬೇಕಾದ,....ಕಮ್ಯುನಿಸ್ಟ್ (೪೧) ಆಗಿ ಕಾಣುತ್ತಾರೆ. ಅವರ ನೈತಿಕ ಸ್ಥೈರ್ಯವನ್ನು ಮುರಿಯುವ ಆಕ್ಟೋಪಸ್ ವ್ಯವಸ್ಥೆ ಗುಪ್ತಗಾಮಿನಿಯಾಗಿ ಬಾಹುಗಳನ್ನು ಚಾಚು ತ್ತಿರುವ ವಾಸ್ತವ ಸತ್ಯ. "ನಾವು ಕೇಸು ಹಾಕಿದ್ದು ಈ ಕಿಲಾಡಿ ನನ್ಮಗನ ಹಿಂದೆ ಯಾರ್‍ಯಾರಿದಾರೆ ಪತ್ತೆ ಮಾಡೋದಕ್ಕೆ ಅಷ್ಟೆ. ಇನ್ನೊಂದು ಸಾರಿ ಅಷ್ಟೂ ಜನರನ್ನೂ ಎಳೀತೀವಿ ನೋಡಿ" (೧೧೮) ಎಂದು ಮಂದಣ್ಣ–ಕರ್ವಾಲೋ–ನಿರೂಪಕ ಗುಂಪನ್ನು ಕುರಿತು ಪೋಲೀಸಿನೋನು ಹೇಳಿಕಳಿಸುವ ಮಾತಿನಲ್ಲಿ ಸ್ಪಷ್ಟವಾಗುತ್ತದೆ.

ಈ ವಿವರಗಳು ಕಾದಂಬರಿಯ ಸಾಮಾಜಿಕ ಸನ್ನಿವೇಶದಲ್ಲಿ ಅಂತರ್ಗತವಾಗಿರುವ ತಾಕಲಾಟ (tension) ಮತ್ತು ವೈರುಧ್ಯಗಳತ್ತ ನಮ್ಮನ್ನು ವೈಚಾರಿಕವಾಗಿ ತೊಡ ಗಿಸುವಷ್ಟು ಶಕ್ತಿಯುಳ್ಳವಾಗಿದೆ. ಇಂತಹ ವೈರುಧ್ಯಗಳಿಗೆ ಕೃತಿಯ ಒಡಲಲ್ಲಿ ಎರಡು ರೀತಿಯ ಪ್ರತಿಕ್ರಿಯೆಗಳು ಏರ್ಪಡುವುದನ್ನು ನಾವು ನೋಡಬಹುದು : (ಅ) ಭಾರತೀ ಪುರ, ದಾಟು, ಬೀಜ ಮುಂತಾದ ಕಾದಂಬರಿಗಳಲ್ಲಿ ಕಂಡುಬರುವಂತೆ ನಾಯಕನ ಕೇಂದ್ರ ಪ್ರಜ್ಞೆಯ ಮೂಲಕ ಪ್ರತಿಕ್ರಿಯೆಯು ರೂಪುಗೊಳ್ಳುತ್ತದೆ. ಹಾಗಾದಾಗ ನಾಯಕ ತನಗಿರುವ ಅರಿವಿನ (awareness) ಸೌಲಭ್ಯದಿಂದ ಪರಿಸರಕ್ಕೆ ಪ್ರತಿಕ್ರಿಯಿಸು ತ್ತಾನೆ. ಮೇಲೆ ಹೆಸರಿಸಿದ ಕಾದಂಬರಿಗಳಲ್ಲಿ ವಾಸ್ತವ ಮತ್ತು ಆದರ್ಶದ ನಡುವಿನ ತಾಕಲಾಟವನ್ನು ನಾಯಕರು ತಮ್ಮ ವೈಚಾರಿಕ ನೆಲೆಯಲ್ಲಿ ಅರ್ಥೈಸುತ್ತ ಮುಂದುವರೆ ಯುವ ಕಾರಣ ಅವರು ತಲುಪುವ ನಿರ್ಧಾರಗಳಲ್ಲಿ ವ್ಯತ್ಯಾಸಗಳು ಕಂಡು ಬರುವುದು ಅನಿವಾರ್ಯ. ಪ್ರತಿಕ್ರಿಯೆಯು ಪರಿಣಾಮದಲ್ಲಿ ಇತ್ಯಾತ್ಮಕವಾದ್ದೋ ಅಲ್ಲವೋ ಎನ್ನುವುದರ ಚರ್ಚೆ ಇಲ್ಲಿ ಅಪ್ರಸ್ತುತ. (ಆ) ನಾಯಕನ ಕೇಂದ್ರ ಪ್ರಜ್ಞೆಯನ್ನು

ಆಧರಿಸದೆ ವಸ್ತುನಿಷ್ಠತೆಯ ಮೂಲಕ ಕೃತಿಯು ರೂಪುಗೊಳ್ಳಲು ತೊಡಗಿದಾಗ ಈ ಪ್ರತಿಕ್ರಿಯೆಯು ಸಮಷ್ಟಿ ಪ್ರಜ್ಞೆಯ ಮೂಲಾಂಶಗಳನ್ನು ಬೆಳಕಿಗೆ ತರುವಷ್ಟಕ್ಕೆ ಸೀಮಿತವಾಗಬಹುದೆಂದು ತೋರುತ್ತದೆ. ಬಹುಶಃ ಈ ಕಾರಣದಿಂದಲೇ ಮಂದಣ್ಣ ನಂತಹವರಲ್ಲಾಗಲೀ ಕರ್ವಾಲೋರಲ್ಲಾಗಲೀ–ಪ್ರತಿಭಟನಾರೂಪದ-ಪ್ರತಿಕ್ರಿಯೆಯು ಕಂಡುಬರುವುದಿಲ್ಲ. ಟಾಲ್‌ಸ್ಟಾಯ್ ಚಿತ್ರಿಸಿದ ರೈತಸಮೂಹವನ್ನು ಕುರಿತು ಲೆನಿನ್ ಗುರುತಿಸುವ ಪ್ರತಿಕ್ರಿಯೆ ಪರಿಮಿತ ಅರ್ಥದಲ್ಲಿ ಇಂಥ ಮೂಲಾಂಶಗಳಿಗೆ ಸಂಬಂಧ ಪಟ್ಟದ್ದು.

ವೃತ್ತಿಯಿಂದ ಭತ್ತಕ್ಕೆ ತಗಲುವ ರೋಗದ ಬಗ್ಗೆ ಸಂಶೋಧನೆ ನಡೆಸುವ ವಿಜ್ಞಾನಿಯಾದ ಕರ್ವಾಲೋ, ಪ್ರವೃತ್ತಿಯಿಂದ ಸತ್ಯಾನ್ವೇಷಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು, ವೃತ್ತಿ ಪ್ರವೃತ್ತಿ ಎರಡರಿಂದಲೂ ಸಹಜವಾಗಿ ಅವರ ಜೀವನ ದೃಷ್ಟಿಗೆ ಒಂದು ಲಯಗತಿಯ ಆವರಣವಿರುವುದು ಕಂಡು ಬರುತ್ತದೆ. ಅವರು ವಿಜ್ಞಾನಿಯಾಗಿರುವುದರ ಜೊತೆಗೆ ಮನೋಭಾವದಲ್ಲಿ ವೈಜ್ಞಾನಿಕತೆಯುಳ್ಳವರು. ಕಾರಣಗಳನ್ನು "ಕಣ್ಣು ಬಿಟ್ಟು ನೋಡಿ" (೪೨) ವಿಶ್ಲೇಷಿಸುವುದು ಅವರ ಗುಣ. ಒಂದು ಕ್ಷಣ, "ಸಾಕ್ಷಾಧಾರ ಇಲ್ಲದ ಯಾವುದನ್ನೂ ನಾನು ನಂಬೋದಿಲ್ಲ. ದೇವರನ್ನು ನಂಬೋದೂ ಬಿಡೋದೂ ಎಲ್ಲ ನಿರುಪಯುಕ್ತ ಚರ್ಚೆ'' (೧೬೩)ಎನ್ನುವ ಸಾಕ್ಷವಾದಿ ಯಂತೆ (empiricist) ಕಾಣುತ್ತಾರೆ. ವಿಷಪೂರಿತ ಕೊಳೆಯ ದುರ್ವ್ಯವಹಾರವು ಜೀವವಿರೋಧಿ ಎನ್ನುವ-ತಮ್ಮ ವೃತ್ತಿಯ ನೈತಿಕ ನೆಲೆಯಿಂದ ರೂಪುಗೊಂಡ– ತೀರ್ಮಾನದಿಂದ 'ಸಾಮಾಜಿಕ'ನಾಗಿ ಗುಪ್ತವ್ಯವಸ್ಥೆಯನ್ನು ಇದಿರುಹಾಕಿಕೊಳ್ಳುತ್ತಾರೆ. ಸಮಾಜದ ಕಣ್ಣಿಗೆ ಯಃಕಶ್ಚಿತ್ ಪ್ರಾಣಿಯಾಗಿ ಕಾಣುವ ಮಂದಣ್ಣನನ್ನು ಬಿಡಿಸಲು ಕೋರ್ಟಿನಲ್ಲಿ ಸಾಕ್ಷಿದಾರರಾಗಲೂ ತಯಾರಾಗುತ್ತಾರೆ. ತನಗೂ ತನ್ನ ಆವರಣಕ್ಕೂ ಇರುವ ಸಂಬಂಧವನ್ನು ಸ್ಪಷ್ಟಗೊಳಿಸಿಕೊಳ್ಳುವ ವಿಧಾನ ಕರ್ವಾಲೋರಲ್ಲಿ ಹೀಗೆ ಕೆಲಸ ಮಾಡುತ್ತದೆ.

ವೈಯಕ್ತಿಕ ನೆಲೆಯಲ್ಲಿ ಮಾನವೀಯತೆಯ ಬಗೆಗೆ ಕ್ರಿಯಾಶೀಲವಾಗುವ ಅವರ ವ್ಯಕ್ತಿತ್ವ ಮಂದಣ್ಣನನ್ನು ಸುತ್ತುವರಿದ, ತಮ್ಮನ್ನು ಸುತ್ತುವರೆಯುತ್ತಿರುವ ಭ್ರಷ್ಟ ಸಮಾಜದ ಬಗ್ಗೆ ತಟಸ್ಥವಾಗುತ್ತದೆ ಎನ್ನಬಹುದು. ತಮ್ಮ ಮತ್ತು ಸಮಾಜದ ನಡುವೆ ಯಾವ ರೀತಿಯ ಸಂಬಂಧವಿರಬಲ್ಲುದು ಎನ್ನುವುದನ್ನು ಸ್ಪಷ್ಟಗೊಳಿಸಿ ಕೊಂಡಿರುವ ಕರ್ವಾಲೋ ಪ್ರಭಾಕರನಿಗೆ ಹೇಳುವ ಮಾತುಗಳಿವು: "ನಾನು ಪ್ರೊಫೆಸರು, ಮಂದಣ್ಣ ಹಳ್ಳಿಗಮಾರ. ಇವೆಲ್ಲಾ ಹೆಬುಬ್ಬೆ ನೀನು ನಿಜಾಂತ ತಿಳಿದರೆ ಏನಪ್ಪಾ ಕಲಿತಂತೆ ಆಯ್ತು? ಇದರಲ್ಲೇ ನಿನ್ನ ಆಯುಸ್ಸು ಮುಗಿದು ಹೋಗುತ್ತೆ. ಸತ್ಯದ ಕಿಂಚಿತ್ ದರ್ಶನಾನೂ ಆಗೊಲ್ಲ ನಿನಗೆ. ಈ ಮಾಯೇನೆಲ್ಲಾ ಮೀರಬೇಕು ನಾವು. ಆಗಲೇ ನಿಮಗೆ ಬೇರೆ ಬೇರೆ ಜಗತ್ತು ಕಾಣ್ತದ" (೯೮). ಈ ತಾತ್ವಿಕ ನಿರ್ದಿಷ್ಟತೆಯಿಂದಾಗಿಯೇ, ಆಕರ್ಷಿಸಲ್ಪಟ್ಟವರಾಗಿ, ಅನ್ವೇಷಣೆಯಲ್ಲಿ ಮುಳುಗುವ

ಕರ್ವಾಲೋ ನಿರೂಪಕನ ದೃಷ್ಟಿಯಲ್ಲಿ "ಭ್ರಾಂತ ಪ್ರಪಂಚ" (೮೭) ಕ್ಕೆ ಸೇರಿದವರಾಗಿ ಕಂಡರೆ ಆಶ್ಚರ್ಯವೆನಿಸುವುದಿಲ್ಲ. ಅಲ್ಲದೆ ನಿರೂಪಕ ಹೇಳುವ ಈ ಮಾತುಗಳು ಈ 'ಭ್ರಾಂತ ಪ್ರಪಂಚ'ದ ಸ್ವರೂಪದ ಮೇಲೆ ಬೆಳಕು ಚೆಲ್ಲುತ್ತವೆ: "ನನಗೆ ನನ್ನ ಸುತ್ತಲಿನ ಪರಿಸರ, ಜನ. ಕಾನೂನು, ಪೋಲೀಸರು, ಇವರೆಲ್ಲಾ ಇಂಥ ಜಡತ್ವವನ್ನೂ ತಮಸ್ಸನ್ನೂ ಉಂಟುಮಾಡಿದ್ದರೆಂದರೆ ಇವುಗಳಿಂದ ಮುಕ್ತನಾಗಲು ಅದು ಭ್ರಾಂತಿಯಾದರೂ ಸರಿ ಕರ್ವಾಲೋರನ್ನು ಹಿಂಬಾಲಿಸಲು ತಯ್ಯಾರಿದ್ದೆ" (೮೯). 'ಚೇತನಕ್ಕೆ ಮುಂಕುಹಿಡಿ'ಸುವ ಇದೇ ರೀತಿಯ ಜಡತ್ವದ ಪ್ರಪಂಚವೊಂದನ್ನು ಕುರಿತು ಗೋಪಾಲಯ್ಯ 'ನಿಗೂಢ ಮನುಷ್ಯರು' ಕೃತಿಯಲ್ಲಿ (೧೧೮)ಹೇಳುತ್ತಾನೆ. ವೈರುದ್ಧ್ಯಗಳಿಂದ ತುಂಬಿದ ವಾಸ್ತವಪ್ರಪಂಚದಿಂದ 'ಮುಕ್ತನಾಗುವ', ಇಂತಹ ಅಸಾಮಾನ್ಯ ಅನುಭವಕ್ಕೆ ತನ್ನನ್ನು ಈಡುಮಾಡಿಕೊಳ್ಳುವ, ಅಭೀಪ್ಸೆಯಿಂದ, ಆಕರ್ಷಿಸಲ್ಪಟ್ಟವನಾಗಿ. ನಿರೂಪಕ ಕರ್ವಾಲೋರನ್ನು ಹಿಂಬಾಲಿಸುವುದು ಕಂಡುಬರುತ್ತದೆ. ಇದನ್ನು ಗಮನಿಸಿದಾಗ ಕರ್ವಾಲೋ ಪ್ರತಿನಿಧಿಸುವ 'ಸತ್ಯಶೋಧನೆ'ಯ ಪ್ರಪಂಚವು ಜಡತೆ ಮತ್ತು ತಮಸ್ಸುಗಳ ಭೌತಿಕ ಪ್ರಪಂಚಕ್ಕೆ ಪರ್ಯಾಯವಾಗಿ ಕಾಣಿಸಿಕೊಳ್ಳುತ್ತದೆ ಎನ್ನಬಹುದು.

ವಾಸ್ತವಿಕ ಸತ್ತೆ ಮತ್ತು ವ್ಯಾವಹಾರಿಕ ಸತ್ತೆ ಎನ್ನುವ ಆಧ್ಯಾತ್ಮಿಕ ಪರಿಭಾಷೆಗೆ ಪೂರಕವಾದ ವ್ಯಕ್ತಿತ್ವ ಕರ್ವಾಲೋ ಅವರದ್ದು ಎನ್ನುವ ಅಂಶ ಕಾದಂಬರಿಯಲ್ಲಿ ಸ್ಪಷ್ಟವಾಗಿಯೇ ಇದೆ. ಈ ಕಾರಣದಿಂದಲೇ ಕರ್ವಾಲೋ ಪ್ರಪಂಚ ಬೆಳಕು ಮತ್ತು ಚೇತನದ ವಿವರಗಳನ್ನು ಒಳಗೊಳ್ಳುತ್ತದೆ. ಅವರ ಯೋಚನೆಗಳು 'ಕಾಲದೇಶಗಳನ್ನು ಮೀರುವ ದಿವ್ಯಜ್ಞಾನದ ಮಿಂಚುನೋಟಗಳಂತೆ' (೧೦೫) ಎಲ್ಲರ ಅಂತಃಕರಣವನ್ನು ತಾಗುವಂತಹವು. 'ಕೊಂಚ ದೂರದಲ್ಲೇ ಧಗಧಗಿಸುತ್ತಿದ್ದ ಬೆಳಕು ಅವರು ಮುಖವನ್ನು ಕತ್ತಲ ಹಿನ್ನೆಲೆಯಲ್ಲಿ ದೇದೀಪ್ಯಮಾನ ಮಾಡಿತ್ತು. ಪುರಾತನ ಮಹರ್ಷಿಯೋರ್ವನ ಮುಖದಂತೆ ಅವರ ಗಡ್ಡ ಮೀಸೆಯ ವದನ ಕಾಣುತ್ತಿತ್ತು' (೧೬೫). ನಾಸ್ತಿಕನಂತೆ ದೇವರನ್ನು ಅಲಕ್ಷಿಸಿ ಕೆಲವೇ ಹೊತ್ತಿನ ಹಿಂದೆ ಮಾತಾಡಿದ್ದ ಕರ್ವಾಲೋ 'ಅವರ ಮಾತುಗಳು ಕಾಲಾತೀತವಾದ ಉಪನಿಷದ್ ರಹಸ್ಯವನ್ನು ಬೋಧಿಸುವಂತೆ ನಮ್ಮ ಅಂತರಂಗಕ್ಕೆ ತಾಕಿದವು. ಸತ್ಯಾನ್ವೇಷಣೆಯ ಅಗ್ನಿಜ್ವಾಲೆಯಂತೆ ಅವರ ಕಣ್ಣುಗಳಲ್ಲಿ ಬೆಂಕಿಯ ಪ್ರತಿಬಿಂಬ ಕುಣಿಯುತ್ತಿತ್ತು' (೧೬೬).ಹಾರುವ ಓತಿಯನ್ನು ಹುಡುಕಲು ಕೈಕೊಂಡ ಅವರ ಯಾನ 'ಯೋಗಮಾಯೆ' (೧೩೭) ಯಂತಿತ್ತು. ಈಚಲು ಗಿಡಗಳ ನಡುವೆ ಸಾಗುವಾಗ ನಿರೂಪಕನಿಗೆ ಅದು ಈಚಲ ಸಮುದ್ರವಾಗಿ ಕಾಣುತ್ತಿತ್ತು. 'ಗರಿಗಳು ಸಾಣೆ ಹಿಡಿದ ಚೂರಿಗಳಂತೆ ಮಿಂಚುತ್ತಾ ಅನಂತವಾಗಿ ಆಕಾಶದ ಅಂಚಿನವರೆಗೂ ಮಿರಿ ಮಿರಿ ಪ್ರಜ್ವಲಿಸುತ್ತಿದ್ದವು' (೧೪೯).

'ಕರ್ವಾಲೋ'ದಲ್ಲಿ ದಟ್ಟವಾದ ಸಾಮಾಜಿಕ ಪಾತಳಿಯೂ ಕಂಡುಬರುವುದು ನಿಜವಾದರೂ ಕಾದಂಬರಿಯಲ್ಲಿ ವ್ಯಕ್ತವಾಗುವ ಸಂಯೋಜಕ ದೃಷ್ಟಿಕೋನವನ್ನು ಇಲ್ಲಿ

ಸ್ಥೂಲವಾಗಿಯಾದರೂ ಪರಿಶೀಲಿಸುವ ಅಗತ್ಯ ಕಂಡುಬರುತ್ತದೆ. ಪ್ರಾರಂಭದಲ್ಲಿ ನಾವು ಗಮನಿಸಿದಂತೆ ಕಾದಂಬರಿಯು ಸಾಮಾಜಿಕ ಮತ್ತು ತಾತ್ವಿಕ ಆಯಾಮಗಳು ಪೂರಕವಾಗಿ ಕಂಡು ಬರುವಂತಿದ್ದರೂ ಸಾಮಾಜಿಕ ಆಯಾಮವು ಕುಬ್ಜಗೊಳ್ಳುತ್ತಾ ಹೋಗುತ್ತದೆ. ಈ ಆವರಣವು ಕುಬ್ಜಗೊಂಡರೂ ಮಂದಣ್ಣನ, ಮರ ಏರಿ ಓತಿಯನ್ನು ಹಿಡಿಯಬಲ್ಲ ಬಿರ್ಯಾನಿ ಕರಿಯನ. ಅಗತ್ಯವಿರುವ ವಾಸ್ತವವಿರುವದರಿಂದಾಗಿಯೇ ಅಲ್ಲಗಳೆಯಲು ಅಸಾಧ್ಯವಾಗಿರುವಂಥದು. ಆದ್ದರಿಂದಲೇ ಈ ಜೀವನ ವಿಧಾನದಲ್ಲಿ ಕಂಡುಬರುವ ವ್ಯಕ್ತಿಗಳು ವೃತ್ತವೊಂದರ ಪೂರ್ಣತೆಗೆ ಅನಿವಾರ್ಯವಾಗುತ್ತಾರೆ. ಆದರೂ 'ಸಮಾಜದ ನಿರ್ಲಕ್ಷದಿಂದ ನಾಶವಾಗುತ್ತಿರುವ ಮಂದಣ್ಣ'ಗಳ ಬಗ್ಗೆ ಚಿಂತನ ಶೀಲತೆಯಿಂದ ಕೂಡಿದ ಧೋರಣೆಯು ಕಾದಂಬರಿಯಲ್ಲಿ ಕಾಣುವುದಿಲ್ಲ. ಅಂದರೆ "ಬದಲಾಗುತ್ತಿರುವ ಪರಿಸರದ ಹೊಸ ಜವಾಬ್ದಾರಿಗಳನ್ನು" (ಪೂ.ಎ.ಕ.vii) ಹೊತ್ತುಕೊಳ್ಳಬಲ್ಲ ದೃಷ್ಟಿಕೋನ ಕಾದಂಬರಿಯ ಸಂಯೋಜನೆಯಲ್ಲಿ ಕಂಡು ಬರುವುದಿಲ್ಲ. ಕಾದಂಬರಿಯಲ್ಲಿನ ಸಾಮಾಜಿಕ ಆಯಾಮ ಮತ್ತು ತಾತ್ವಿಕ ಆಯಾಮಗಳು ಘರ್ಷಣೆಗೆ ಒಳಪಟ್ಟು, ಪೂರಕವಾಗಿ ಮುಂದುವರೆಯುವ ಬದಲು ಘರ್ಷಣೆಯನ್ನು ನಿವಾರಿಸಿಕೊಂಡು ಒಂದು ಇನ್ನೊಂದರೊಳಕ್ಕೆ ಸೇರಿಬಿಡುವ ಅಂಶ ನನ್ನ ಸಧ್ಯದ ಓದಿಗೆ ಕುತೂಹಲಕಾರಿಯಾಗಿ ಕಾಣುತ್ತದೆ.

ಚೆನ್ನಣ್ಣ ವಾಲೀಕಾರರ 'ಬಂಡೆದ್ದ ದಲಿತರ ಬೀದಿಹಾಡುಗಳು'

ದೊಡ್ಡರಂಗೇಗೌಡ

ಸಾವಿರ ವರ್ಷಗಳಿಗೂ ಹೆಚ್ಚಿನ ಪ್ರಾಚೀನತೆಯಿರುವ ಕನ್ನಡ ಕಾವ್ಯಗಳಲ್ಲಿ ಪ್ರತಿಭಟನೆ, ಬಂಡಾಯ, ಎಲ್ಲದರ ಸುಳಿವು ಕಾಣಸಿಗುತ್ತದೆ. ಆದರೆ ಸ್ಪಷ್ಟವಾಗಿ, ನೇರವಾಗಿ ಅಲ್ಲ ; ಸಂದರ್ಭಕ್ಕೆ ಅನುಗುಣವಾಗಿ ಯಾವುದಾದರೊಂದು ಪಾತ್ರಗಳ ಮುಖೇನ ಮಾತ್ರ. ಅನ್ಯಾಯದ ವಿರುದ್ಧ ಸಿಡಿದೇಳುವ, ಸಮಾಜದ ಡಾಂಭಿಕತೆಯನ್ನು ಟೀಕಿಸುವ ಪ್ರವೃತ್ತಿ ಶರಣರ ವಚನಗಳಲ್ಲಿ ಮತ್ತು ದಾಸ ಸಾಹಿತ್ಯದಲ್ಲಿ ದಟ್ಟವಾಗಿ ವ್ಯಕ್ತಗೊಂಡಿದ್ದರೂ ಅವುಗಳ ಕಾಳಜಿ ಇದ್ದದ್ದು ಜನರಲ್ಲಿ ಧಾರ್ಮಿಕ ಪ್ರಜ್ಞೆ ಹಾಗೂ ನೈತಿಕ ಮೌಲ್ಯಗಳ ಜಾಗೃತಿ ಮೂಡಿಸುವುದರತ್ತಲೇ ಹೊರತು ಬಂಡಾಯ ಚಳುವಳಿ ನಡೆಸುವುದರ ಕಡೆಗಲ್ಲ.

ಆಂಧ್ರದ ದಲಿತ ಪ್ಯಾಂಥರ್ ಪ್ರಭಾವದಿಂದ ಕನ್ನಡ ಸಾಹಿತ್ಯದಲ್ಲಿ ಬಂಡಾಯ ಚಳುವಳಿ ಸಕ್ರಿಯವಾಗಿ ಕಾಣಿಸಿಕೊಂಡಿತು. ಈ ಪಂಥದ ಪ್ರಸಿದ್ಧ ಸಾಹಿತಿಗಳಾದ ದೇವನೂರು ಮಹಾದೇವ, ಬರಗೂರು ರಾಮಚಂದ್ರಪ್ಪ, ಸಿದ್ಧಲಿಂಗಯ್ಯ ಮುಂತಾದವರ ಸಾಲಿಗೆ ಸೇರುವ ಚೆನ್ನಣ್ಣ ವಾಲೀಕಾರರ ಹೆಸರು ಜಾನಪದ ಸಾಹಿತ್ಯವಲಯದಲ್ಲೂ ಪರಿಚಿತವಾದದ್ದೇ.

ಬಂಡಾಯದ ಧ್ವನಿಯಿರುವ ವಾಲೀಕಾರರ ಈ ಸಂಗ್ರಹದಲ್ಲಿ ಚಿಂತನೆ, ಪ್ರಾದೇಶಿಕತೆಯ ಸೊಗಡು, ಲಯದಗತ್ತು-ಇರುವ ಕವನಗಳಿವೆ. ದಲಿತರ ಬಗ್ಗೆ ಅನುಕಂಪ, ಅವರನ್ನು ಎಚ್ಚರಗೊಳಿಸಬೇಕೆಂಬ ಕಳಕಳಿ ತೀವ್ರವಾಗಿದೆ. ಹಾಗೆಯೇ ದಲಿತರ ದುಃಸ್ಥಿತಿಗೆ ಕಾರಣರಾದ 'ಮೇಲಿನವರ' ಬಗ್ಗೆ ದ್ವೇಷದ ಬೆಂಕಿ ಮಳೆಯನ್ನು ಸಾಕಷ್ಟು ಧಾರಾಕಾರವಾಗಿ ಇವರ ಕವನಗಳು ಕಾರುತ್ತವೆ. ಶತಶತಮಾನಗಳ ಶೋಷಣೆ, ತುಳಿತಗಳ ಆಕ್ರೋಶ ಜ್ವಾಲಾನಲವಾದಾಗ ಅದರ ಝಳಕ್ಕೆ ಬಹುಶಃ ಕಾವ್ಯದ ಕಲ್ಪನಾ ಕೋಮಲತೆ, ಸೃಜನ ಶೀಲತೆಗಳು – ಬಲಿಯಾಗಿಬಿಡುತ್ತವೇನೋ...ವಾಲೀಕಾರರ ಕವನಗಳೂ ಇದಕ್ಕೆ ಹೊರತಾಗಿಲ್ಲವೆಂದರೆ ತಪ್ಪಾಗಲಾರದು. ಸಮಯ ದೊರೆತಾಗ ತನ್ನ ನೋವನ್ನು, ತಾನು ಪ್ರತಿನಿಧಿಸುವ ವರ್ಗದ ಬವಣೆಯನ್ನು ಇಡಿಯಾಗಿ ತೋಡಿಕೊಳ್ಳುವಾಗ ಕವಿಗೆ ಆವೇಶದೊಂದಿಗೆ ಅರ್ಥವಂತಿಕೆಯೂ ಕಾವ್ಯಾಂಶವಾಗಬೇಕು. ಕೆಲವೊಮ್ಮೆ ವಾಲೀಕಾರರ ಕವನಗಳಲ್ಲಿ ಈ ಧಾಟಿ ಕಂಡುಬರುವುದುಂಟು.

ಮೇಲಿನವರು ಕೆಳಗಿನವರನ್ನು ಅಮಾನುಷ ಕಿರುಕುಳಗಳ ಮೂಲಕ ತುಳಿದ ರೀತಿ, ವರ್ಣ ಪದ್ಧತಿಯಿಂದಾದ ಅನ್ಯಾಯದ ನಿರೂಪಣೆಗಳು ಸವಿವರವಾಗಿ, ಆರ್ದ್ರ ಹಾಗೂ ರೊಚ್ಚಿನ ಮಿಶ್ರಭಾವಗಳಿಂದ 'ಡಾ॥ ಅಂಬೇಡ್ಕರರ ಪ್ರಾರ್ಥನಾ ಪದ್ಯ', 'ಬಂಡೆದ್ದ ದಲಿತರ ಬೀದಿ ಹಾಡು,' 'ಕಪ್ಪು ಜನರ ಕರಾಳ ಗೀತೆ'- ಕವನಗಳಲ್ಲಿ ವ್ಯಕ್ತಗೊಂಡಿದೆ.

"ನರವು ಸತ್ತಂಥ ನಾಲಿಗ್ಗೆಟ್ಟಂಥ ಗಂಡನಿಂದೇನು ಕೇಳ್ಕಲಿ
ಹೆಜ್ಜೆ ಕುಂತಂಥ ಹಲ್ಲುಬಿದ್ದಂಥ ಎತ್ತಿನಿಂದ್ಯಾಗ ಊಳ್ಕಲಿ"

ಎನ್ನುವುದು ಅಮೃತಮತಿಯ ಅಂತರಂಗದ ನೋವು. ಮನೋ ವಿಜ್ಞಾನದ ವಿಶ್ಲೇಷಣೆಗೆ ಸವಾಲಾಗಿರುವ ಈ ಪಾತ್ರ ಬಂಡಾಯದ ನೆರಳಿನಲ್ಲಿ ಹಾದುಬಂದ ಚಿತ್ರ ಈ ಕವನದಲ್ಲಿದೆ.

ಕೇವಲ ತಿಂದುಂಡು, ದುಡಿದು, ಕಾದಾಡುವುದರಲ್ಲೇ ಜೀವನ ಸವೆಸುವ, ಅದಷ್ಟೇ ಬಾಳು ಎಂದು ಬಗೆದಿರುವ -ಜನರ ನಡುವೆ ಪ್ರಜ್ಞೆ, ವೈಚಾರಿಕತೆಗಳನ್ನು ಬೆಳೆಸುವುದರ ಕಷ್ಟದ ಅರಿವು ಕವಿಗಿದೆ. ಹಾಗಾಗಿ ಅವರು :

"ಹೇಳು ಕವೀ ಹೇಳು ಕವೀ ಹೇಗೆ ಕ್ರಾಂತಿಮಾಡಲಿ ?
ಇಂಥ ಹಳ್ಳಿಗಳನು ನಾನು ಗೆದೆಯಲೇನು ಮಾಡಲಿ ?
ಇಂಥ ಪದವು ಹಾಡಿಕೊಂಡು ಅಳುತ ಅಳುತ ಕೂಡಲೇ ?
ಸಮೂಲಾಗ್ರ ಬದಲಿ ಮಾಡೋ ಹೋರಾಟಕ್ಕಿಳಿಯಲೇ ?"

ಎಂದು ತೊಳಲಾಟಕ್ಕೊಳಗಾಗುತ್ತಾರೆ ; ವ್ಯವಸ್ಥೆಯ ಬದಲಾವಣೆಗಾಗಿ ಕ್ರಾಂತಿಗೆ ಉದ್ಯುಕ್ತರಾಗಬಯಸುತ್ತಾರೆ. ಇಲ್ಲಿ ದಲಿತರ ಏಳ್ಗೆಗಾಗಿ ಕವಿಗಿರುವ ಉತ್ಸಾಹ,

ಹಂಬಲ, ಕೆಚ್ಚು, ದಲಿತ ಜನ ತನ್ನ ಹೋರಾಟದ ಅರ್ಥವನ್ನು ಮನನ ಮಾಡಿಕೊಳ್ಳು ತ್ತಿಲ್ಲವಲ್ಲಾ ಎಂಬ ವ್ಯಥೆ. ಎಲ್ಲದರ ಪರಿಚಯವಾಗುತ್ತದೆ. ಇವು ಕಾವ್ಯದ ಉದ್ದೇಶ ದೊಂದಿಗೆ ಅದರ ಸಂಪಾದನದ ಮಿತಿಯನ್ನೂ ಸೂಚಿಸುವಂತಿದೆ. ಒಮ್ಮೆಲೇ ಬದಲಾವಣೆ ಸಾಧ್ಯವಿಲ್ಲ ಎನ್ನುವುದೂ ಕವಿಗೆ ಗೊತ್ತಿದೆ. ಕೇವಲ ಸಾಹಿತ್ಯ, ಚಳುವಳಿ ಗಳಿಗಿಂತ ಮಿಗಿಲಾಗಿ ಬದಲಾವಣೆ ಎಂಬುದು ಎಲ್ಲರ ಮನಸ್ಸಿನಲ್ಲಿ ನಡೆಯಬೇಕಾದ ಪ್ರಕ್ರಿಯೆ. ಅದೇ ನಿಜವಾದ ಜಾಗೃತಿ ಎಂಬುದರ ಸತ್ಯ ಕವಿಗೆ ಗೊತ್ತಿದೆ.

"ಬದಲಿ ಆಗೋ ಮಾತು ಒಳಗಿಂದ ಬರಬೇಕು : ಹೊರಗಿಂದ ಬರೋದಲ್ಲ" ಎಂಬ ಈ ಮಾತು "ಮಾದರ ಸಾಬವ್ವನ ಗೋರಿಗೀತೆ' ಎಂಬ ಖಂಡ ಕಾವ್ಯದಲ್ಲಿ ಬರುತ್ತದೆ. ಹೆಣ್ಣಿನ ಶೋಷಣೆಯ ಕರಾಳ ಮುಖವನ್ನು ತೋರಿಸುವ ಈ ಖಂಡ ಕಾವ್ಯದ ಪರಿಣಾಮ ಮಾರ್ಮಿಕವಾದದ್ದು. ಇದಕ್ಕೆ ಇಜ್ಜೋಡಿಯಾಗಿ 'ಕಾಳನಕಟ್ಟೆ ಕಾಡಿನವರ ಹೋರಾಟದ ಲಾವಣಿ'ಯಲ್ಲಿನ ಹೆಂಗಸರ ದಿಟ್ಟತನ ಸಮರ್ಥವಾಗಿ, ಪ್ರಶಂಸನೀಯವಾಗಿ ಚಿತ್ರಿತಗೊಂಡಿದೆ.

"ಸಾವಿರಾರು ವರ್ಷದಿಂದ ತಾಳ್ದಂಥ ನಮ್ಜನಾ ಇನ್ಮುಂದ ತಾಳೋದಿಲ್ಲ" "ಅನ್ಯಾಯ ಮಾಡಿದೋರ್ಗೆ ಉರಿಹಚ್ಚಿಬಿಡ್ತಾರ"–ಹೀಗೆ ನೇರವಾದ ಘೋಷಣೆ, ಉದ್ದೇಶಗಳು ಕಾವ್ಯದುದ್ದಕ್ಕೂ ಅಲ್ಲಲ್ಲಿ ಗುಡುಗುತ್ತವೆ. "ಒಳಗೆ ಬೇರೆ ಹೊರಗೆ ಬೇರೆ ಬಗೆವ ಬುದ್ಧಿಜೀವಿಗಳನು ತೀವ್ರನೆಲಕೆ ಇಳಿಸಿರೋ...."ಎನ್ನುತ್ತಲೇ ವ್ಯಕ್ತಿಗಳ ಗೋಸುಂಬೆತನದ ವಿರುದ್ಧ ಹೋರಾಟದ ಕಣಕ್ಕಿಳಿಯುವ ಕವಿ ಯುವಜನಾಂಗದವರಿಗೆ ಭ್ರಮೆಗಳಿಂದ ಬಿಡಿಸಿಕೊಂಡು ವಾಸ್ತವಕ್ಕೆ ಬರಲು ಕರೆನೀಡುತ್ತಾರೆ.

"ಮನುಜಧರ್ಮ ಕಲಿಸದಂಥ ವೇದಶಾಸ್ತ್ರ ಕಟ್ಟುಗ್ರಂಥ
ನರಕದಾಚೆ ನೂಕಿರೋ
ಮನುಜರೆಲ್ಲ ಒಂದೇ ಎಂಬ ಕರುಳಿನರಿವು ಎರೆಯುವಂಥ
ಜೀವಗ್ರಂಥ ಸಾಕಿರೋ"
(ಯುವಜನಾಂಗದ ಹಾಡು)

ಎಂಬಲ್ಲಿನ ಮಾನವತಾವಾದದ ಆಶಯ ಈ ಸಂದರ್ಭದಲ್ಲಿ ಅಗತ್ಯವಾಗಿದೆ. ಉದಾತ್ತ ವಾದ ಈ ಆಶಯ ಎಲ್ಲರ ಅಭೀಪ್ಸೆಯಾಗಬೇಕೆಂಬ ಕಳಕಳಿ ಕವಿಗಿದೆ.

'ಮುದ್ದು ಮಕ್ಕಳಿಗೊಂದು ಪಾಠದ ಹಾಡು' ಕಥನ ಕವನದ ಧಾಟಿಯಲ್ಲಿದೆ. ಕೇವಲ ಆದರ್ಶ, ಸಾತ್ವಿಕತೆಗಳಷ್ಟೇ ಬದುಕುವ ಮಾರ್ಗವಲ್ಲ ಎಂಬ ವಾಸ್ತವ ಧೋರಣೆ ಈ ಕವನದ ಅಂತರ್ಯ.

'ಆಧುನಿಕ ಎಲ್ಲಮ್ಮನ ಹಾಡು' ಪ್ರಮುಖ ರಾಜಕೀಯ ನಾಯಕಿಯೊಬ್ಬರನ್ನು ಕುರಿತ ವಿಡಂಬನೆಯ ಪದ್ಯವಾಗಿದೆ.

ಅತಿಯಾದ ಆವೇಶದಿಂದ ಕೇವಲ ಘೋಷಣೆಗಳಾಗಿ ಬಿಡಬಹುದಾದ ಅಪಾಯದಿಂದ ದಲಿತಕಾವ್ಯ ತಪ್ಪಿಸಿಕೊಂಡಾಗಲೇ ಅದು ಎಲ್ಲ ವರ್ಗದ ಜನರನ್ನೂ ತಲುಪಬಹುದೇನೋ...ಕೇವಲ 'ಮ್ಯಾಲಿನವರೇ' ತಮ್ಮೆಲ್ಲಾ ಅಧೋಗತಿಗೆ ಕಾರಣರೆಂದು ಕಂಡಕಾರುವ ದಲಿತರು ಇಂದು ಸ್ಥಾನಭದ್ರತೆಯಲ್ಲಿರುವ 'ತಮ್ಮವರ' ಸ್ವಾರ್ಥ, ಹಿತಶತ್ರುಗಳ ರೀತಿ ಗುರುತಿಸಿ ಅವರನ್ನೂ ತರಾಟೆಗೆ ತೆಗೆದುಕೊಂಡರೆ 'ಮನೆಯೊಳಗಣ ಕಿಚ್ಚು ಮನೆಯ ಸುಡುವುದ' ತಪ್ಪಿಸಿದಂತಾಗುತ್ತದೆ. ಆಗ 'ಸಮೂಲಾಗ್ರ ಬದಲಿ ಮಾಡೋ' ಆಶಯಕ್ಕೆ ಅರ್ಥ ಬರುತ್ತದೆ. ತಮ್ಮ ಆಶಯ ಮುಗ್ಧ, ಅನಕ್ಷರಸ್ಥ–ಎಲ್ಲ ದಲಿತರಿಗೆ ತಲುಪಿಸಲು ಪ್ರಯತ್ನಿಸಿದಾಗ ದಲಿತ ಕಾವ್ಯಕ್ಕೆ ಪೌಷ್ಟಿಕತೆ ದೊರೆಯಲು ಸಾಧ್ಯ.

ಚೆನ್ನಣ್ಣ ವಾಲೀಕಾರರ ಈ ಪದ್ಯಗಳಲ್ಲಿ ಚಿಂತನೆಗಿಂತ ಆವೇಶ ಚರ್ವಿತ ಚರ್ವಣವಾಗಿದೆ. ಆದರೆ ದಲಿತ ಕಾವ್ಯದ ಪ್ರಧಾನ ಗುಣ ಅದು ಎಂದು ಭಾವಿಸಿ, ಕವನಗಳಲ್ಲಿನ ಚಿಂತನೆಯತ್ತ ಗಮನ ಹರಿಸಿದಾಗ ಅದು ಒಟ್ಟಾರೆ ನಿರಾಸೆಯನ್ನೇನೂ ಉಂಟುಮಾಡುವುದಿಲ್ಲ.

ಚದುರಂಗರ 'ಸರ್ವಮಂಗಳಾ'

ಅಬ್ದುಲ್ ಮಜೀದ್ ಖಾನ್

ಸುಪ್ರಸಿದ್ಧ ಕತೆ–ಕಾದಂಬರಿಕಾರರಾದ 'ಚದುರಂಗ' ಅವರ ಈ ಕಾದಂಬರಿಯ ಗಾತ್ರವನ್ನು ಗಮನಿಸುತ್ತಿರುವಂತೆಯೇ ಇದು ಲೇಖಕರು ಬೃಹತ್ ಕಾದಂಬರಿಯೊಂದನ್ನು ರಚಿಸಲು ಯತ್ನಮಾಡಿದುದರ ಫಲವಿರಬಹುದೆಂಬ ಭಾವನೆ ಹುಟ್ಟುತ್ತದೆ. ಅಲ್ಲದೆ ಐದನೆಯ ಆವೃತ್ತಿಯನ್ನು ಕಂಡಿರುವುದರಿಂದ ಇದು ಅಪಾರ ಜನಪ್ರಿಯತೆಯನ್ನೂ ಗಳಿಸಿರಬಹುದೆಂದು ಅನಿಸುತ್ತದೆ. ಈ ವಿಚಾರಗಳು ಹೊಳೆಯುತ್ತಲೇ ಓದುಗನ ಮನಸ್ಸಿನಲ್ಲಿ ಕನ್ನಡದ (ಮತ್ತು ಬೇರೆ ಭಾಷೆಗಳ ಸಂಪರ್ಕವಿರುವುದಾದರೆ ಆ ಭಾಷೆಗಳಲ್ಲಿನ) ಬೃಹತ್ ಕಾದಂಬರಿಗಳು ಯಾವುವು? ಅವುಗಳ ಕಥಾವಸ್ತು ಏನಿತ್ತು? ಅವು ಎಷ್ಟರಮಟ್ಟಿಗೆ ಸಫಲ ಕೃತಿಗಳೆನಿಸಿದ್ದವು? ಮುಂತಾದ ಪ್ರಶ್ನೆಗಳೂ ಏಳುವುದು ಸಹಜ. ಸಫಲವೆನಿಸಿದ ಮಹತ್ವಪೂರ್ಣ ಕಾದಂಬರಿಗಳ ಮಟ್ಟಕ್ಕೆ ಇದು ಏರುತ್ತದೆಯೆ. ಅವನ್ನು ಮೀರುತ್ತದೆಯೆ ಎಂಬ ಪೂರ್ವಕಲ್ಪನೆಯೊಂದಿಗೇ ಸಹೃದಯ ಇದನ್ನು ಓದತೊಡಗುತ್ತಾನೆ.

'ಸರ್ವಮಂಗಳಾ' ಕಾದಂಬರಿ ಕಥಾನಾಯಕಿ ಮಂಗಳೆಯ ಹೆಸರನ್ನು ಹೊತ್ತಿದ್ದರೂ ಇದು ನಾಯಕ ನಟರಾಜನ ತಂದೆ-ತಾಯಿ (ಶಂಕರಯ್ಯ ಮತ್ತು ಗೌರಮ್ಮ)

ಅವರ ದುರಂತದೊಡನೆ ಪ್ರಾರಂಭವಾಗುತ್ತದೆ. ಶಿಲ್ಪಕಲೆಗೆ ಪ್ರಸಿದ್ಧವಾಗಿದ್ದ ವಾಸಾಚಾರಿಯ ಮನೆತನಕ್ಕೆ ಸೇರಿದ ಶಂಕರಯ್ಯ ತಿರುಮಕೂಡಲಿನ ಅಗಸ್ತ್ಯೇಶ್ವರನಿಗೆ ಹರಸಿಕೊಂಡಿದ್ದರ ಫಲವಾಗಿ ನಟರಾಜ ಜನಿಸಿದಾಗ, ಆ ಹರಕೆಯನ್ನು ತೀರಿಸಲು ಹೋದಾಗಲೇ ಅವನ ತಂದೆತಾಯಿ ತಿರುಮಕೂಡಲ ಹೊಳೆಯಲ್ಲಿ ಕೊಚ್ಚಿಹೋಗುತ್ತಾರೆ. ಅಕ್ಕ ಪಾರ್ವತಮ್ಮ ಮತ್ತು ಭಾವ ವಿಷಕಂಠಯ್ಯನ ಆಸರೆಯಲ್ಲಿ ನಟರಾಜ ಬೆಳೆಯುತ್ತಾನೆ. ಮದುವೆ ಆಗಿ ಎಂಟುವರ್ಷವಾದರೂ ಎರಡು ಸಲ ಬಸುರಿಯಾದರೂ ಮಕ್ಕಳು ಉಳಿಯದಿದ್ದು, ನಟರಾಜನ ಆಗಮನದ ಆರು ತಿಂಗಳಲ್ಲೇ ಪಾರ್ವತಮ್ಮ ಹೆತ್ತ ಮಗು 'ಸರ್ವಮಂಗಳಾ' ನಟರಾಜನ ಪಾದಗುಣವೇ ಅದಕ್ಕೆ ಕಾರಣವೆಂಬ ಭಾವನೆ, ಆದ್ದರಿಂದ ಅವನ ಬಗ್ಗೆ ವಾತ್ಸಲ್ಯ, ಪ್ರೀತಿ, ವಿಶೇಷವಾಗಿ ವಿಷಕಂಠಯ್ಯನ ತಾಯಿ ನಾಗಜ್ಜಿಗೆ.

ಚಿಕ್ಕಂದಿನಿಂದ ಮಂಗಳೆಯನ್ನು ಎತ್ತಿಕೊಂಡು ಆಡಿಸುತ್ತ, ಅವಳೊಡನೆ ಅನ್ಯೋನ್ಯನಾದ ನಟರಾಜ ಮತ್ತು ಮಂಗಳೆಯನ್ನು ಭಾವೀ ದಂಪತಿಗಳ ಸ್ಥಾನದಲ್ಲಿರಿಸಿ ಮೊದಲು ಕನಸು ಕಂಡವಳು ನಾಗಜ್ಜಿ. ತನ್ನ ಇಂಗಿತವನ್ನು ಕ್ರಮೇಣ ಇತರರಲ್ಲಿ ಬೇರೂರಿಸಿದರೂ ವಿಷಕಂಠಯ್ಯನ ಅತ್ತಿಗೆ ನರಸಮ್ಮ ಮಂಗಳೆಯನ್ನು ತನ್ನ ತಮ್ಮ ಸುಬ್ಬರಾಯಿಗೆ ತಂದುಕೊಳ್ಳುವ ಬಯಕೆಯನ್ನು ಪ್ರಕಟಪಡಿಸುತ್ತಾಳೆ. ಅಂದಿನಿಂದ ನಟರಾಜ–ಮಂಗಳೆಯರ ದಾರಿಯಲ್ಲಿ ಆತಂಕವೊಂದು ತಲೆ ಎತ್ತುತ್ತದೆ. ನಟರಾಜ ಮೈಸೂರಿಗೆ ಹೋಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಎರಡು ಸಲ ಫೇಲಾದ ನಂತರ ಅವನ ಭವಿಷ್ಯ ಡೋಲಾಯಮಾನವಾಗಿ, ತಾನಾಗಿಯೇ ಆತ ನಿಷ್ಪ್ರಯೋಜಕ ಸ್ಥಿತಿಯನ್ನು ತನ್ನ ಮೇಲೆ ಹೇರಿಕೊಳ್ಳುತ್ತಾನೆ. ಇದು ನರಸಮ್ಮನ ಇಂಗಿತಕ್ಕೆ ಪ್ರೋತ್ಸಾಹಕೊಡಲು ಸಹಾಯಕವಾಗುತ್ತದೆ. ಪಾರ್ವತಮ್ಮನ ಸೋದರ ಮತ್ತು ನಾಗಜ್ಜಿಗೆ ತುಂಬ ಪ್ರಿಯನಾದ ಕಾರಣವೊಂದೇ ಅವನಿಗೆ ಮಂಗಳೆಯನ್ನು ಮದುವೆಯಾಗುವ ಅರ್ಹತೆಯನ್ನು ಕೊಟ್ಟಿರುತ್ತದೆ. ದುರದೃಷ್ಟಕ್ಕೆ ನಾಗಜ್ಜಿ ಸತ್ತು ಹೋಗುತ್ತಾಳೆ. ಸಾಯುವ ಮುನ್ನ ನಟರಾಜ-ಮಂಗಳೆಯರ ಕೈಗಳನ್ನು ಜೋಡಿಸಿ ಅವರ ಲಗ್ನ ನೋಡದೆ ಸಾಯುತ್ತಿರುವುದಕ್ಕೆ ಹಲುಬುತ್ತಾಳೆ. ಅವರ ಲಗ್ನದ ದೃಶ್ಯವನ್ನೇ ಕಲ್ಪಿಸಿಕೊಂಡು, ಬಡಬಡಿಸುತ್ತಾ ಅಸು ನೀಗುತ್ತಾಳೆ.

ಮತ್ತೆ ಮೈಸೂರಿಗೆ ಹೋದ ನಟರಾಜ ವಿದ್ಯಾಭ್ಯಾಸದಲ್ಲಿ ತೊಡಗದೆ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿ, ಉದ್ಧಟತನದ ಕಾರಣ ಜೈಲು ಸೇರುತ್ತಾನೆ. ಇತ್ತ ಕಲ್ಲಹಳ್ಳಿಯಲ್ಲಿ ಪಾರ್ವತಮ್ಮ ತೀವ್ರ ಕಾಹಿಲೆಗೆ ಗುರಿಯಾಗಿ ಮಂಗಳೆಯ ಮದುವೆಯನ್ನು ನೋಡಿಯೇ ತೀರಲು ಕೊರಗುತ್ತಾಳೆ. ನಟರಾಜ ಬಂಧನದಲ್ಲಿರುವುದರಿಂದ ನರಸಮ್ಮ ವಿಷಕಂಠಯ್ಯನನ್ನು ಪುಸಲಾಯಿಸಿ, ಅವನ ಮತ್ತು ಕಾಳಯ್ಯನ ಮುಖಾಂತರ ಪಾರ್ವತಮ್ಮನನ್ನು ರಮಿಸಿ, ಮಂಗಳೆಯ ವಿವಾಹ ಸುಬ್ಬರಾಯಿಯೊಡನೆ ಮಾಡಿಸಿ ಬಿಡುತ್ತಾಳೆ. ಅದಾದ ಕೆಲದಿನಗಳ ಮೇಲೆ ನಟರಾಜನ ಬಿಡುಗಡೆಯಾಗುತ್ತದೆ. ಆತ

ಕಲ್ಲಹಳ್ಳಿಗೆ ಬಂದಾಗ ಸತ್ಯಾಂಶ ತಿಳಿದು ಹತಾಶನಾಗುತ್ತಾನೆ. ನಂತರದ ಅವನ ಬದುಕು ನಿರಾಶೆ. ಮಂಗಳೆಯೊಡನೆ ಬೆಳೆದ ಕಳೆದ ದಿನಗಳ ನೆನಪು–ಗದ್ದೆ ಕೆಲಸ–ಮತ್ತೆ ಮೈಸೂರು–ರೇಲ್ವೆ ಅಂಡರ್‌ಗಾರ್ಡ್ ಕೆಲಸ–ದುರ್ಗಿಯೊಡನೆ ಇಷ್ಟವಿಲ್ಲದ ಮದುವೆ ಕಮ್ಯೂನಿಸ್ಟ್ ಪಕ್ಷ – ಕಾರ್ಮಿಕರಿಗಾಗಿ ಹೋರಾಟ ಜೈಲು–ಕ್ಷಯರೋಗ ಕೊನೆಗೆ ಸಾವು, ಇಷ್ಟು ಹಂತಗಳನ್ನು ಕಾಣುತ್ತದೆ.

ಇತ್ತ ಮಂಗಳೆ ತನಗೆ ಸುಬ್ಬರಾಯಿಯಿಂದ ಹುಟ್ಟಲಿರುವ ಮಗುವನ್ನು ಹೆರಲು ಬಯಸದೆ, ಗರ್ಭಪತನಕ್ಕೆ ಬೇಕಾದ್ದನ್ನೆಲ್ಲ ಮಾಡಿ. ಸಫಲಳಾಗಿ, ಏಳೆಂಟು ಸಲ ಗರ್ಭ ಪತನ ಅನುಭವಿಸುತ್ತಾಳೆ. ನಟರಾಜನ ಕಾಹಿಲೆ ಉಲ್ಬಣಿಸಿದಾಗ ಅವನ ಶುಶ್ರೂಷೆ ಮಾಡುತ್ತ ಮೈಸೂರಿನಲ್ಲಿ ತಂಗಿದ ಕಾರಣ, ನರಸಮ್ಮ ಸುಬ್ಬರಾಯಿಗೆ ಇನ್ನೊಂದು ಮದುವೆ ಮಾಡಿಸುತ್ತಾಳೆ. ನಟರಾಜನ ಸಾವಿನ ನಂತರ ಕಲ್ಲಹಳ್ಳಿಗೆ ಹಿಂದಿರುಗಿದ ಮಂಗಳೆಗೆ ಅತ್ತೆ ಮತ್ತು ಸವತಿ ಗಿರಿಜೆಯ ಕಿರುಕುಳ. ದುರ್ಗಿ ಹೆತ್ತ ನಟರಾಜನ ಮಗು 'ನಟರಾಜ'ನ ಆರೈಕೆಯ ಸಮಾಧಾನ. ಕಿರುಕುಳದ ನಡುವೆಯೂ ಸುಬ್ಬರಾಯಿಯ ಅನುಕಂಪ, ಕೊನೆಗೆ ಅಸಾಧಾರಣ ಸನ್ನಿವೇಶವೊಂದರಲ್ಲಿ ಗದ್ದೆಯಲ್ಲಿ ಕುಯ್ದು ಹಾಕಿದ್ದ ರಾಗಿಯ ಫಸಲನ್ನು ಕೆಡದಂತೆ ಜೋಪಾನ ಮಾಡಿ-ನೆನೆದು ಕಾಹಿಲೆಬಿದ್ದು ಆಸ್ಪತ್ರೆಗೆ ಸಾಗಿಸಲ್ಪಡುತ್ತಿರುವಾಗ, ಎತ್ತಿನ ಗಾಡಿಯಲ್ಲೇ ಅಸುನೀಗುವ ಕರುಣಾಜನಕ ರೀತಿಯ ಅಂತ್ಯ.

ಈ ಪ್ರೇಮಿಗಳಿಬ್ಬರ ಪ್ರೇಮ ದುರಂತದಲ್ಲಿ ಕೊನೆಗೊಳ್ಳುವವರೆಗೆ, ಇತರ ಕೆಲವು ಜನರ ಜೀವನ ಮಧ್ಯದಲ್ಲೇ ಮುರುಟಿಹೋಗುತ್ತದೆ ಅಥವಾ ದುರಂತಮಯ ವಾಗುತ್ತದೆ. ಸತ್ಯ ಕಲ್ಪನೆಗಿಂತಲೂ ವಿಚಿತ್ರವಾಗಿರುತ್ತದೆ ಎಂಬುದನ್ನು ಒಪ್ಪಿ ಕೊಂಡರೂ ಇಲ್ಲಿಯ ಘಟನೆಗಳು ಸಹಜವೆನಿಸಿದರೂ ಅವು ಕಾದಂಬರಿಕಾರರ ಅನುಕೂಲತೆಗೆ ತಕ್ಕಂತೆ ನಡೆಯುತ್ತವೆ. ಇಲ್ಲವಾದರೆ ದುರಂತದ ಸ್ವರೂಪವನ್ನು ನಟರಾಜನ ತಂದೆತಾಯಿಯರ ಸಾವಿನ ಘಟನೆಯಷ್ಟಕ್ಕೇ ಸೀಮಿತಗೊಳಿಸಿ, ತಬ್ಬಲಿ ಯೊಬ್ಬನ ಬದುಕನ್ನು ಸುಖಾಂತದಲ್ಲಿ ಮುಕ್ತಾಯಗೊಳಿಸುವ 'ಪವಾಡ' ಕಾದಂಬರಿ ಕಾರರ ಶಕ್ತಿಮೀರಿದ ವಿಷಯವೆನಿಸುತ್ತಿರಲಿಲ್ಲ. ಕತೆಯಲ್ಲಿ ಇಂತಿಂಥ ಪಾತ್ರಗಳಿರ ಬೇಕು, ಅವರ ಇತಿಮಿತಿಗಳು ಇಷ್ಟಿರಬೇಕು ಮತ್ತು ಕೃತಿಯ ಅಂತ ಹೀಗಾಗಬೇಕೆಂದು ಒಂದು ಪೂರ್ವಯೋಜಿತ ಸೂತ್ರ–ಫಾರ್ಮುಲಾ– ಇಟ್ಟುಕೊಂಡು ಕಾದಂಬರಿಗಳನ್ನು ರಚಿಸುವುದು ಅಸಂಭವ ಅಥವಾ ಅಸಾಧ್ಯವೇನಲ್ಲ. ಕಾದಂಬರಿಯೊಂದು ದುರಂತ ದಲ್ಲೇ ಪರಿಣಮಿಸಬೇಕೆಂದಿಲ್ಲ. ಓದುಗನ ಮೇಲೆ ಅದು ಮಾಡುವ ಒಟ್ಟಾರೆ ಪರಿ ಣಾಮ ಮುಖ್ಯ.

ಯಾವುದೇ ಕಾದಂಬರಿ ಇರಲಿ, ಅದರ ರಚನೆಯ ಹಿಂದೆ ಒಂದು ಉದ್ದೇಶ ಇರಲೇಬೇಕು. ಆದರ್ಶಮಯವೆನ್ನುವ ಒಬ್ಬ ಹಳ್ಳಿಯ ಹೆಣ್ಣಿನ ಪಾತ್ರದ ಸೃಷ್ಟಿ ಮತ್ತು ಆ ಪಾತ್ರದ ನೈಜನಡತೆ, ಉನ್ನತ ಗುಣಸ್ವಭಾವ ಮುಂತಾದವನ್ನು ಚಿತ್ರಿಸಿ

ಓದುಗರ ಮೇಲೆ ಅವಳ ವ್ಯಕ್ತಿತ್ವ ಪ್ರಭಾವ ಬೀರುವಂತೆ ಮಾಡುವುದೇ 'ಸರ್ವಮಂಗಳಾ' ಕಾದಂಬರಿಯನ್ನು ರಚಿಸಿದುದರ ಉದ್ದೇಶವಾಗಿರಬಹುದು. ಈ ದೃಷ್ಟಿಯಿಂದ ಅವಲೋಕಿಸಿದರೆ ಇದರ ನಾಯಕಿ ಸರ್ವಮಂಗಳಾ ಅಂತಹ ಯಾವುದೇ ಉನ್ನತ ಅರ್ಹತೆಗಳನ್ನು ಪಡೆದಿಲ್ಲವೆಂಬುದು ಸ್ಪಷ್ಟವಿದೆ. ಮಂಗಳಾ ಒಬ್ಬ ಸಾಧಾರಣ ಹೆಣ್ಣು. ನಟರಾಜನನ್ನು ಅವಳು ಪ್ರೀತಿಸಿ ಅವನಿಗಾಗಿ ಹಾತೊರೆಯಲು ಅವಳನ್ನು ಪ್ರೇರೇಪಿಸುವುದು ನಾಗಜ್ಜಿಯ ಆಳವಾದ ಬಯಕೆ. ನಾಗಜ್ಜಿ ಆರಂಭದಿಂದಲೂ ಇವರೀರ್ವರನ್ನು ಗಂಡಹೆಂಡಿರನ್ನಾಗಿಸುವ ಅಭಿಲಾಷೆಯನ್ನು ಪ್ರಕಟಿಸುತ್ತಾಳೆ, ಸಂದರ್ಭ ಒದಗಿದಾಗಲೆಲ್ಲ ಅದನ್ನು ಪುನರಪಿಸುತ್ತಾಳೆ. ಅದೇ ಇಂಗಿತವನ್ನು ಕೆಲವು ನೆಂಟರು, ನೆರೆಹೊರೆಯವರು ಮತ್ತು ಕಲಾಯಿ ಕೆಲಸದ ಹಸನ್‌ಸಾಬನೂ ಪ್ರಕಟಿಸುತ್ತಾನೆ. ಅನ್ಯೋನ್ಯವಾಗಿದ್ದು ಆಡುವ, ಓದುವ, ಬೆಳೆಯುತ್ತಿರುವ ಬಾಲಕ–ಬಾಲಕಿಯರನ್ನು ಕಂಡು ಜನರು ಅವರು ಗಂಡ-ಹೆಂಡತಿಯಾಗಲು ತಕ್ಕವರೆಂದು ಬಗೆಯುವ ಸಂದರ್ಭಗಳೂ ಉಂಟು. ಅದನ್ನು ಬಿಟ್ಟರೆ ಒಬ್ಬ ಹಳ್ಳಿಯ ಹುಡುಗಿಯಾಗಿದ್ದೂ ವಿದ್ಯಾಭ್ಯಾಸ ಪಡೆಯಲು ಹಂಬಲಿಸಿ, ಅದಕ್ಕಾಗಿ ನಟರಾಜನನ್ನು ಹಿಂಬಾಲಿಸಿ, ಪಟ್ಟಣಕ್ಕೆ ಹೋಗಿ, ವಿದ್ಯಾರ್ಹತೆ ಗಳಿಸಿ, ಆ ಮೂಲಕ ತನ್ನ ಹಳ್ಳಿಯ ಅಥವಾ ಕುಟುಂಬದ ಸೇವೆ ಮಾಡುವುದಾಗಲೀ ಅಂಥ ಆದರ್ಶವೊಂದಕ್ಕಾಗಿ ಹೋರಾಡಿ ಜಯಿಸುವುದಾಗಲೀ ಮಂಗಳೆಗೆ ಹೊಳೆಯುವುದಿಲ್ಲ. ಮನೆಗೆಲಸ ಮಾಡಿಕೊಂಡು ಗೃಹಿಣಿಯಾಗಿರುವುದೊಂದೇ ಅವಳ ಅರ್ಹತೆ. ನಟರಾಜನೊಡನೆ ತನ್ನ ಮದುವೆಯಾಗದಿದ್ದರೆ ತಾನು ಅವಿವಾಹಿತೆಯಾಗಿ ಉಳಿಯುವಳೆಂದು ಅವಳೆಂದೂ ಪ್ರತಿಭಟಿಸುವುದಿಲ್ಲ. ಆದರೆ ಕಾಲ ಮಿಂಚಿದ ಮೇಲೆ, ನಟರಾಜ ತೀವ್ರ ಕಾಹಿಲೆಗೆ ಗುರಿಯಾದ ಮೇಲೆ ಮಾತ್ರ ಅವಳು ತನ್ನ ಅತ್ತೆ ಗಂಡ ಮತ್ತಿತರರ ಪ್ರತಿಕ್ರಿಯೆಯನ್ನು ಲೆಕ್ಕಿಸದೆ ಅವನ ಶುಶ್ರೂಷೆಗಾಗಿ ಮೈಸೂರಿನಲ್ಲೇ ನಿಲ್ಲುವ ದಿಟ್ಟ ನಿರ್ಧಾರ ಕೈಗೊಳ್ಳುತ್ತಾಳೆ.

ಸುಬ್ಬರಾಯಿಯನ್ನು ಬಲಾತ್ಕಾರಕ್ಕೆ ಮದುವೆ ಆದದ್ದಾಯಿತು. ಆದರೆ ಅವನಿಂದ ಗರ್ಭ ಧರಿಸಿದಾಗ ಅದು ತನ್ನದೂ ಒಂದು ಅಂಶವೆಂಬುದನ್ನು ಕಡೆಗಣಿಸಿ ಭ್ರೂಣಹತ್ಯೆ ಮಾಡುವುದು ಸರ್ವಮಂಗಳಾ ಮಾಡುವ ಹೇಯ ಕೆಲಸ. ನಗರದಲ್ಲಿ ಬೆಳೆದ, ಓದಿದ ಮತ್ತು ಬಂಡಾಯದ ಮನೋಭಾವನೆಯುಳ್ಳ ಹೆಣ್ಣು ಮಾತ್ರ ಹಾಗೆ ಮಾಡಬಹುದು! ತನ್ನ ಕರುಳ ಕುಡಿಯ ಬಗ್ಗೆ ಒಬ್ಬ ಹೆಣ್ಣಿಗೆ ಎಷ್ಟು ಮಮತೆ ಇರುತ್ತದೆಂದರೆ, ಮಾನಭಂಗಕ್ಕೆ ಗುರಿಯಾದ ನತದೃಷ್ಟೆಯೂ ತನ್ನ ಭಾವೀ ಶಿಶುವನ್ನು ಕೊಲ್ಲಲು ಹಿಂಜರಿಯುತ್ತಾಳೆ–ಅದನ್ನು ಗೋಪ್ಯವಾಗಿ ಪೋಷಿಸಿ, ಹೆತ್ತು, ಯಾರದಾದರೂ ಮಡಿಲಲ್ಲಿ ಹಾಕಿ, ಅದು ಹೇಗಾದರೂ ಬದುಕಿಕೊಳ್ಳಲಿ ಎಂದು ಬಯಸುತ್ತಾಳೆ. ಕೆಲವರಿಗೆ ಭ್ರೂಣಹತ್ಯೆಯ ಪಾಪಪ್ರಜ್ಞೆ, ಮತ್ತೆ ಕೆಲವರಿಗೆ ಮಮತೆ ಹಾಗೆ ಮಾಡುವಂತೆ ಪ್ರೇರೇಪಿಸುತ್ತದೆ. ವೇಶ್ಯೆಯರು ಮಾತ್ರ ಭ್ರೂಣಹತ್ಯೆಯನ್ನು ಅನಿವಾರ್ಯ ಆಗತ್ಯತೆ ಎಂದು ಭಾವಿಸಬಹುದು. ಈ ದೃಷ್ಟಿಕೋನಗಳಿಂದ ಮಂಗಳೆ ಮಾಡುವ

ಕೆಲಸ ಸಮರ್ಥನೀಯವೆನ್ನಿಸದು. ಸುಬ್ಬರಾಯಿ ಎಷ್ಟಾದರೂ ಅವಳ ಅಧಿಕೃತ ಪತಿ. ಅವನ ಮಗುವನ್ನು ಹೆರಲಾರದಷ್ಟು ದ್ವೇಷ, ಅಸಹನೆಗಳನ್ನು ತಾಳುವ ಅವಳು ಅವನ ಸಂಗಡ ಅದುವರೆಗೆ ಬಾಳುವೆ ಮಾಡಿದ್ದಾದರೂ ಏಕೆ, ಹೇಗೆ? ಎಂದು ಕೇಳ ಬೇಕಾಗುತ್ತದೆ (ಮುಂದೆಯೂ ಅವಳು ಅವನಿಂದ ಹಲವು ಸಲ ಗರ್ಭಧರಿಸಿ, ಪ್ರತಿ ಸಲವೂ ಗರ್ಭಪತನ ಅನುಭವಿಸುತ್ತಾಳೆ!). ಮಂಗಳೆಯ ಅಂತರಂಗವನ್ನರಿಯದ ಸುಬ್ಬರಾಯಿಯೇ ಅವಳಿಗಿಂತ ಎಷ್ಟೋ ಪಾಲು ಮೇಲು. ನರಸಮ್ಮ ಅವನಿಗೆ ಇನ್ನೊಂದು ಮದುವೆ ಮಾಡಿ ಮಂಗಳೆಗೆ ಕಿರುಕುಳ ಕೊಟ್ಟರೂ ಸುಬ್ಬರಾಯಿ ತನ್ನ ತಾಯಿ ಮತ್ತು ಹೆಂಡತಿ ಗಿರಿಜೆಯ ಕುಟಿಲತೆಯನ್ನು ಅರಿತು ಮಂಗಳೆಯ ಬಗ್ಗೆ ಸಹಾನುಭೂತಿ ತೋರುವಷ್ಟು ಮಾನವೀಯತೆಯನ್ನು ಹೊಂದಿದ್ದಾನೆ. ಆದರೆ ಮಂಗಳೆ ಒಮ್ಮೆಯಾದರೂ ಮರೆತೂ ಅವನ ಬಗ್ಗೆ ಪ್ರೀತಿ ತೋರಿಸುವುದಿಲ್ಲ. ಭ್ರೂಣಹತ್ಯೆ ಮಾಡುವಷ್ಟು ಉತ್ಕಟ ತಿರಸ್ಕಾರ, ದ್ವೇಷಗಳನ್ನು ಹೊಂದಿರುವ ಅವಳು ನಟರಾಜನನ್ನು ಬಿಟ್ಟರೆ ಇನ್ಯಾರನ್ನೂ ವರಿಸುವ ಬದಲು 'ಸನ್ಯಾಸಿನಿ'ಯಾಗುತ್ತೇನೆಂದು ಬೆದರಿಕೆಗಾಗಿಯಾದರೂ ಹೇಳಬಹುದಿತ್ತು. ನಟರಾಜನ ಕನಸನ್ನೇ ಕಾಣುತ್ತ ಇರುವ ಅವಳು ಒಮ್ಮೆ ಅವನೊಡನೆ ಪ್ರಣಯದ ಕನಸು ಕಾಣುತ್ತ ಚೀರಿದಾಗ, 'ಎಂತ ನಾಚಿಗೆಟ್ಟ ಗರತಿಯಾ ನೀನು? ಲಗ್ನ ಮಾಡಿಕೊಂಡಮ್ಯಾಗೂ ಪರಪುರುಷನ ಧ್ಯಾನ ಮಾಡಕ್ಕೆ ನಾಚಿಕೆ ಆಗಕಿಲ್ವಾ?....' ಎಂದು ಅತ್ತೆ ನರಸಮ್ಮನಿಂದ ಮೂದಲಿಸಲ್ಪಡುತ್ತಾಳೆ.

ಮಂಗಳೆಗೆಂದು ಹೇಳಿ ಮಾಡಿಸಿದಂಥ ಪಾತ್ರ ಈ ಕಾದಂಬರಿಯ ಕಥಾನಾಯಕ ನಟರಾಜ. ಮೊದಲೇ ಪರಾವಲಂಬಿಯಾದ ಈತ ನಂಜುಂಡಸ್ವಾಮಿಯ ಆಸರೆ ಸಿಗದಿದ್ದರೆ ಪ್ರೌಢ ವಿದ್ಯಾಭ್ಯಾಸವನ್ನೂ ಪಡೆಯುತ್ತಿರಲಿಲ್ಲ. ಅಂಥವನು ಸ್ವಾತಂತ್ರ್ಯ–ಕಾಂಗ್ರೆಸ್ಸು–ಗಾಂಧೀವಾದ, ಮುಂತಾದವುಗಳ ಬಗ್ಗೆ ಏನನ್ನೂ ಸರಿಯಾಗಿ ತಿಳಿಯದಿರುವಾಗ ಸ್ವಾತಂತ್ರ್ಯ ಹೋರಾಟಗಾರನಾಗಿ ಜೇಲಿಗೆ ಹೋಗುವುದು, ನಂತರ ಗಾಂಧೀವಾದದಿಂದ ಸಮತಾವಾದದ ಕಡೆ ಹೊರಳಿ ಕಾರ್ಮಿಕರಿಗಾಗಿ ದುಡಿಯಲಾರಂಭಿಸಿ ಪೆಟ್ಟು ತಿಂದು, ಆರೋಗ್ಯ ಕೆಡಿಸಿಕೊಂಡು ಆಸ್ಪತ್ರೆ ಸೇರಿ ಸಾಯುವುದು ನಟರಾಜನ ಅಪಕ್ವತೆಯನ್ನು ತೋರಿಸುತ್ತದೆ. ದೇಶದ ಸ್ವಾತಂತ್ರ್ಯ, ರಾಜಕೀಯ ಸಮತಾವಾದ, ಇತ್ಯಾದಿಗಳನ್ನು ಅಧ್ಯಯನ ಮಾಡಿ ಅವನ್ನು ಸರಿಯಾಗಿ ಅರಿತುಕೊಳ್ಳುವ ಮೊದಲೇ ಈತ ದುಡುಕುತ್ತಾನೆ. ಅವನಲ್ಲಿ ಈ ಒಲವುಗಳನ್ನು ಪ್ರಚೋದಿಸಲು ತನ್ನ ಹಳ್ಳಿಯಲ್ಲಿ ಅಥವಾ ಬದುಕಿನಲ್ಲಿ ಯಾವುದೇ ಸಂಘರ್ಷಮಯ ಅಥವಾ ಮಹತ್ತರ ಸಂಗತಿಗಳೇ ನಡೆದಿರುವುದಿಲ್ಲ. ಸಾಮಾನ್ಯ ವ್ಯಕ್ತಿಯಾಗಿದ್ದ ನಟರಾಜನಿಗೆ ಏಕಾಏಕಿ ಆದರ್ಶವಾದಿಯ ಈ ಭವ್ಯತೆ ದೊರೆಯುವುದು ಅವನ ಆಂತರಿಕ ತುಮುಲದಿಂದಾಗುವ ಸಹಜ ಅರ್ಹತೆಯಾಗದೆ, ಕಾದಂಬರಿಕಾರರು ಬಲಾತ್ಕಾರದಿಂದ ಅವನ ಮೇಲೆ ಹೇರಿದ ನಿಲುವು ಎನಿಸಿಬಿಡುತ್ತದೆ.

ಮಂಗಳೆಯ ಹಾಗೇ ಬಲಾತ್ಕಾರದ ಮದುವೆಗೆ ಗುರಿಯಾಗುವ ನಟರಾಜ ಸ್ವಾತಂತ್ರ್ಯ–ಗಾಂಧೀ ಮುಂತಾದುವನ್ನು ಅರಿತ ಮೇಲೂ ದುರ್ಗಿಯಂಥ ಮುಗ್ಧ ಹೆಂಡತಿಗೆ ಕಿರುಕುಳ ಕೊಡುವಂಥ ಕೀಳುಮಟ್ಟಕ್ಕೆ ಇಳಿಯುತ್ತಾನೆ. ಮುಗ್ಧ ಹೆಣ್ಣೊಂದರ ಅಸಹಾಯಕತೆಯನ್ನು ಅರಿಯದ ಈತ ಸಮಾಜದ, ದೇಶದ ಅಥವಾ ಇನ್ಯಾರದೋ ಜನರ ಸಮಸ್ಯೆಗಳನ್ನೇನು ಅರ್ಥಮಾಡಿಕೊಳ್ಳಬಲ್ಲ ? ಭಗ್ನಪ್ರೇಮಿ ಯಾದ ಈತ ಕೊನೆಯ ಪಕ್ಷ ಸ್ವಾತಂತ್ರ್ಯ ಅಥವಾ ಸಮತಾವಾದಗಳಿಗಾದರೂ ತನ್ನನ್ನು ಮುಡಿಪಾಗಿಸಿಕೊಂಡು ಮದುವೆ ಮುಂತಾದ ಬಂಧನಗಳಿಂದ ದೂರವಿರಬಹು ದಿತ್ತು. ಹಾಗಾಗಿದ್ದರೆ ಈತನ ವ್ಯಕ್ತಿತ್ವಕ್ಕೆ ಒಂದು ಮೆಚ್ಚಲರ್ಹ ಸ್ವರೂಪ ಅಥವಾ ಆಯಾಮ ದೊರಕುತ್ತಿತ್ತು. ಅದನ್ನು ಮಾಡುವುದು ಕಾದಂಬರಿಕಾರರಿಗೆ ಕಷ್ಟ ಸಾಧ್ಯವಿರಲಿಲ್ಲ. ಆದರೆ ಹಾಗಾಗಿಲ್ಲ. ಆದರೂ ಈತ ಮಂಗಳೆಗಿಂತ ಒಂದಂಗುಲ ಹೆಚ್ಚಿನ ಘನತೆಯನ್ನು ಪಡೆದುಕೊಳ್ಳುತ್ತಾನೆ– ಕಡೆಗಾದರೂ ಇವನು ದುರ್ಗಿಯ ಬಗ್ಗೆ ಕನಿಕರ ಪ್ರಕಟಿಸುತ್ತಾನೆ, ಆದರೆ ಮಂಗಳೆ ಸುಬ್ಬರಾಯಿಯ ಬಗ್ಗೆ ಕೊಂಚವೂ ದಯೆ ತೋರುವುದಿಲ್ಲ. ಭಗ್ನಪ್ರೇಮಿಯಾದ ಮೇಲಂತೂ ನಟರಾಜ ಸಂದರ್ಭ ಸಿಕ್ಕಾಗಲೆಲ್ಲ ಕಣ್ಣೀರು ಸುರಿಸುವ ಅಳುಬುರುಕ ವ್ಯಕ್ತಿಯಾಗುತ್ತಾನೆ (ಪುಟ ೨೦೪, ೨೩೨, ೨೪೭, ೨೯೮, ೨೯೯).

ಈ ಕಾದಂಬರಿಯ ಉದ್ದೇಶ, ಒಟ್ಟಿನಲ್ಲಿ ನತದೃಷ್ಟ ಹೆಣ್ಣು–ಗಂಡುಗಳಿಬ್ಬರ ಬದುಕಿನ ದಾರುಣ ಚಿತ್ರವನ್ನು ನೀಡುವುದರ ಜೊತೆಗೆ ಅವರ ಬಗ್ಗೆ ಸಹೃದಯನ ಸಹಾನುಭೂತಿ-ಸಂತಾಪಗಳನ್ನು ಗಳಿಸುವುದೇ ಆಗಿದೆ ಎನ್ನಬಹುದು. ಆದರೆ ಹಾಗೆ ಮಾಡುವಾಗ ಕಥಾನಾಯಕ-ನಾಯಕಿಯರು ಓದುಗರಿಗೆ ಪ್ರಿಯವಾಗಬೇಕೆಂಬ ಕಾರಣ ದಿಂದ ಅವರು ಸ್ಫುರದ್ರೂಪಿಗಳಾಗಿರುವಂತೆಯೂ ಪ್ರತಿನಾಯಕ ಮತ್ತಿತರೆ ಪಾತ್ರಗಳು ಕುರೂಪಿಗಳಾಗಿರುವಂತೆಯೂ ಚಿತ್ರಿಸುವುದು ಸಮಂಜಸವೆನಿಸದು. ಉದಾಹರಣೆಗೆ ಈ ಕಾದಂಬರಿಯ ಸುಬ್ಬರಾಯಿ, ದುರ್ಗಿ, ತಿಮ್ಮಿ, ಕುರೂಪಿಗಳು. ಆದರೆ ವಿಪರ್ಯಾಸವೆಂದರೆ ಈ ವ್ಯಕ್ತಿಗಳಲ್ಲಿ ಪ್ರಕಟವಾಗಿರುವಷ್ಟು ಮಾನವೀಯತೆ ಇತರರಲ್ಲಿ ಆಗದೇ ಹೋಗಿರುವುದು. ವಿಶೇಷವಾಗಿ ಸುಬ್ಬರಾಯಿಯನ್ನು ನಟರಾಜನಿಗಿಂತ ಕೀಳಾಗಿಸಿ ತೋರಿಸುವ ಯತ್ನದಲ್ಲಿ ಕಾದಂಬರಿಕಾರರು ತನಗರಿವಿಲ್ಲದಂತೆ ಅವನಲ್ಲಿರುವ ಮಾನವೀಯ ಗುಣವನ್ನು ಪ್ರಕಟಿಸಿರುವುದು.

ತಂತ್ರದ ದೃಷ್ಟಿಯಿಂದ ಇದು ಸಂಪ್ರದಾಯಬದ್ಧ ಕಾದಂಬರಿಗಳಲ್ಲಿರುವಂತೆ ಒಂದು ಆರಂಭ–ಬೆಳವಣಿಗೆ–ಅಂತ್ಯ (a beginning, a middle and an end) ದ ಮಾದರಿಯನ್ನು ಅನುಸರಿಸಿದೆ. ಇಲ್ಲಿನ ಹಲವಾರು ಘಟನೆಗಳು ಧಾರಾವಾಹಿಯಾಗಿ ನಡೆಯುತ್ತವೆ: ನಟರಾಜ–ಮಂಗಳೆಯರ ಬಾಲ್ಯ ಮತ್ತು ಶಾಲಾ ದಿನಗಳ ವಿವರಣೆ, ತಿರುಗಾಟ, ನಾಗಜ್ಜಿ ಹೇಳುವ ಕತೆಗಳು, ಹಬ್ಬ ಹರಿದಿನಗಳು. ಕೆಲವು ವರ್ಣನೆಗಳಂತೂ ಕೂಲಂಕಷವಾಗಿ ಸಾಗುತ್ತವೆ; ಊಟ, ಅಡಿಗೆ, ಗ್ರಾಮೀಣ

ಮನರಂಜನೆಗಳು, ಸಂತೆ, ಮಾರಾಟದ ವಸ್ತುಗಳು, ದವಸಧಾನ್ಯಗಳ ದೀರ್ಘ ಪಟ್ಟಿಗಳು (ಪುಟ : ೪೫, ೪೬, ೪೮, ೪೯, ೫೦). ಕಾದಂಬರಿ ಕನ್ನಡದ್ದಾಗಿದ್ದು ನಮ್ಮ ನಾಡಿನ ಓದುಗರಿಗೆ ಇಲ್ಲಿಯ ಹಬ್ಬ ಹರಿದಿನಗಳು, ಓಕುಳಿ, ಹಕ್ಕಿಪಿಕ್ಕಿ ಜನರ ಕುಣಿತ ಮುಂತಾದವುಗಳ ವರ್ಣನೆ ಯಾವ ವಿಶೇಷತೆಯನ್ನು ನೀಡುವುದಿಲ್ಲ. ಒಂದು ವೇಳೆ ಹೊರನಾಡಿನ ಅಥವಾ ಹೊರದೇಶದವರಿಗಾಗಿ ಇವನ್ನು ವಿವರಿಸುವುದಾದರೆ– ಅನುವಾದದ ಮಾಧ್ಯಮದಲ್ಲಿ– ಇವು ಸಮಂಜಸವೆನಿಸುತ್ತವೆ. ಆದರೂ ಮೈಸೂರು ನಗರ, ಬೃಂದಾವನ, ಚಾಮುಂಡಿ ಬೆಟ್ಟ, ಮೃಗಾಲಯ, ನಾರಾಯಣಾಚಾರಿಯ ಹೋಟೆಲಿನ ಮಾಣಿಯೊಬ್ಬನ ವರ್ಣನೆ ಇವುಗಳ ಪರಿಚಯ ಇಲ್ಲದವರಿಗೆ ಪ್ರಿಯ ವೆನಿಸುತ್ತವೆ. ಹಾಗಿದ್ದರೂ ವರ್ಣನೆ ಕೇವಲ ವರ್ಣನೆಗಾಗಿ ಮಾತ್ರ ಇರದೆ ಕತೆಯ ಸನ್ನಿವೇಶಕ್ಕೆ ಸಾವಯವವಾಗಿದ್ದರೆ ಒಳಿತು. ಅಲ್ಲದೆ ಬಹಳಷ್ಟು ವಿಷಯಗಳನ್ನು ಒಂದೇ ಕಾದಂಬರಿಯಲ್ಲಿ ತುರುಕುವುದು, ಅವು ಕಾದಂಬರಿಯ ಗಾತ್ರ ಬೆಳೆಸಲು ಮಾತ್ರ ಪೂರಕವಾಗುತ್ತವೆ. ಅಷ್ಟೆ. ಒಂದು ಕಡೆ ಇಂಥ ಕ್ರಮದಿಂದ ಆಗಿರುವ ಆಭಾಸವನ್ನು ಗುರುತಿಸಬಹುದು :

ನಟರಾಜ ಕೆಲಸಕ್ಕೆ ಸೇರಿದ ನಂತರ ಒಮ್ಮೆ ತನ್ನ ಗೆಳೆಯರ ಜೊತೆ 'ಬೆನ್‌ಹರ್' (Ben Hur) ಚಿತ್ರ ನೋಡಿ ಮನೆಗೆ ಹಿಂದಿರುಗುವ ಪ್ರಸ್ತಾಪವಿದೆ. ಬೆನ್‌ಹರ್ ಚಿತ್ರ ತೆರೆಕಂಡಿದ್ದು ೧೯೬೦ ರಲ್ಲಿ. 'ಸರ್ವಮಂಗಳಾ' ಕಾದಂಬರಿಯ ಕತೆ ಹಿಂದಿನ ದಶಕಗಳಿಗೆ ಸಂಬಂಧಿಸಿದ್ದು. ನಟರಾಜ ೧೯೩೦ ನೆಯ ಇಸವಿ ಜನವರಿ ತಿಂಗಳ ಅಂತ್ಯ ಭಾಗದಲ್ಲಿ ಮೈಸೂರಿನಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಂಡು ಲಾಠಿ ಏಟು ತಿಂದು ಮೂರ್ಛೆ ಬೀಳುತ್ತಾನೆ (ಪುಟ೧೪೧–೧೪೪). ಮುಂದೆ 'ಎರಡನೇ ಮಹಾಯುದ್ಧ ಬಿರುಸಿನಿಂದ ಸಾಗಿತ್ತು' ಎಂಬ ಹೇಳಿಕೆಯೂ ಇದೆ (ಪುಟ ೨೫೫, ಪ್ಯಾರಾ ೫) ಮತ್ತು 'ಅವನಿಗೆ ೧೯೩೦ನೇ ಇಸವಿಯಲ್ಲಿ ಕಾರಾಗೃಹದಲ್ಲಿದ್ದಾಗ, ಸಮತಾವಾದಿ ಸಾಹಿತ್ಯ ಒದಗಿಸುತ್ತಿದ್ದ ಶ್ರೀಧರ ಹೇಳುತ್ತಿದ್ದ ಮಾತುಗಳು ನೆನಪಿಗೆ ಬಂದವು.........' (ಪುಟ ೨೫೬ ಪ್ಯಾರಾ ೪). ಮುವ್ವತ್ತು ವರ್ಷಗಳ ನಂತರದ ಚಿತ್ರವನ್ನು ನಟರಾಜನಿಗೆ ತೋರಿಸುವುದು ಕಾಲವಿರೋಧ (anachronism) ಆಗುತ್ತದೆ. ಆ ಚಿತ್ರದಲ್ಲಿ ರೋಮನ್ ಗುಲಾಮರು ಸಹಿಸಬೇಕಾಗಿದ್ದ ಶಿಕ್ಷೆ, ಕಿರುಕುಳ, ಅವಮಾನಗಳ ವಿರುದ್ಧ ಬೆನ್‌ಹರ್ ಪ್ರತಿಭಟಿಸುತ್ತಾನೆ. ನಟರಾಜ ದಲಿತ ಮತ್ತು ಶೋಷಿತ ವರ್ಗಗಳವರು ಪಡುವ ಪಾಡನ್ನು ಕಂಡು ಸಮತಾವಾದದ ಬಗ್ಗೆ ತನ್ನ ನಿಲುವನ್ನು ಇನ್ನಷ್ಟು ಬಲಪಡಿಸಿಕೊಳ್ಳಲು ಪ್ರೇರೇಪಿತನಾಗಲು ಕಾದಂಬರಿಕಾರರು ಅವನು ಈ ಚಿತ್ರವನ್ನು ನೋಡುವಂತೆ ಮಾಡಿರಬಹುದು. ಆದರೂ ಈ ದೋಷವನ್ನು ನಿವಾರಿಸಬೇಕಿತ್ತು.

ಸುಪ್ರಸಿದ್ಧ ಆಂಗ್ಲ ಕಾದಂಬರಿಕಾರ ಸಾಮರ್‌ಸೆಟ್ ಮಾಮ್ ತಮ್ಮ 'ನಾನು ಕಲಿತ ಎರಡು ಇಂಗ್ಲಿಷ್ ಪಾಠಗಳು' ಎಂಬ ಲೇಖನದಲ್ಲಿ ಕೆಲವು ಉಪಯುಕ್ತ ಮಾತು

ಗಳನ್ನು ಹೇಳುತ್ತಾರೆ. ತಮ್ಮ ಕಾದಂಬರಿಯೊಂದನ್ನು ಒಬ್ಬಳು ಬೆರಳಚ್ಚು ಹಾಗೂ ಶೀಘ್ರಲಿಪಿಗಾರ್ತಿಗೆ ನಕಲು ಮಾಡಲು ಕೊಟ್ಟು ಹಸ್ತಪತ್ರಿಕೆಯಲ್ಲಿ ದೋಷ ಗಳೇನಾದರೂ ಇದ್ದರೆ ತಿದ್ದುವಂತೆಯೂ ಸೂಚಿಸುತ್ತಾರೆ. ಕೆಲವು ವಾರಗಳ ನಂತರ ಆ ಯುವತಿ ಐದಾರು ಪುಟಗಳ ಒಂದು ದೀರ್ಘ ತಪ್ಪೋಲೆಯನ್ನೇ ಹಾಜರು ಪಡಿಸುತ್ತಾಳೆ. ಆಕೆ ಮಾಮ್ ಬಳಸಿದ್ದ ಕೆಲವು ಪದಗಳ ಉಪಯೋಗ, ಕೆಲವು ವಾಕ್ಯಗಳ ರಚನೆಯನ್ನು ಆಕ್ಷೇಪಿಸುತ್ತ ಒಂದು ವಾಕ್ಯದಲ್ಲಿ ದೀರ್ಘ ವಿರಾಮ ಇರಬಾರದೆಂದೂ ಅದರ ಬದಲು ಎರಡನೆಯದನ್ನು ಸ್ವತಂತ್ರ ವಾಕ್ಯವನ್ನಾಗಿಯೇ ಮಾಡಬೇಕೆಂದೂ ಹೇಳುತ್ತಾಳೆ. ಆ ಕಾದಂಬರಿಯಲ್ಲಿನ ಹಾಸ್ಯ ಪ್ರಸಂಗವೊಂದನ್ನು ಉಲ್ಲೇಖಿಸುತ್ತ ಸದರಿ 'ಜೋಕ್' ನಲ್ಲಿರುವ ಸಂಗತಿಗಳು ಎಷ್ಟರಮಟ್ಟಿಗೆ ಸತ್ಯ ? ಎಂದೂ ಪ್ರಶ್ನಿಸುತ್ತಾಳೆ. ಮಾಮ್ ಇವನ್ನೆಲ್ಲ ಕುರಿತು ಬರೆಯುತ್ತ ಆ ಯುವತಿಯಂತೆ ತಾನೂ ಭಾಷಾಸಂಸ್ಥೆಯೊಂದರಲ್ಲಿ ಕಲಿಯುವಂಥ ಪ್ರಸಂಗ ಇರುತ್ತಿದ್ದರೆ ತನಗೆ ಇಂಗ್ಲಿಷ್‌ನಲ್ಲಿ ಅತಿ ಕಮ್ಮಿ ಗುಣಗಳು ಲಭಿಸುತ್ತಿದ್ದವು ಎನ್ನುತ್ತಾರೆ.

ಮೇಲೆ ಉಲ್ಲೇಖಿಸಿರುವ ವಿಷಯವನ್ನು ಪ್ರಸ್ತಾಪಿಸುವ ಉದ್ದೇಶ ಇಷ್ಟು : ಒಂದು ಕೃತಿಯನ್ನು ರಚಿಸುವಾಗ ಅದು ಸಾಧ್ಯವಿದ್ದಷ್ಟು ಗೊಂದಲಮಯ ಸನ್ನಿವೇಶ ಗಳನ್ನಾಗಲೀ ದೋಷಗಳನ್ನಾಗಲೀ ಒಳಗೊಳ್ಳದಂತೆ ಲೇಖಕರು ಜಾಗರೂಕರಾಗಿರ ಬೇಕು. ಅನುಭವಿ ಮತ್ತು ನುರಿತ ಲೇಖಕರಂತೂ ಇನ್ನೂ ಹೆಚ್ಚಿನ ಆಸ್ಥೆ ವಹಿಸ ಬೇಕಾಗುತ್ತದೆ. ಕನ್ನಡ ಸಾರಸ್ವತ ಲೋಕಕ್ಕೆ ಹಲವಾರು ಉತ್ತಮ ಮತ್ತು ಅಚ್ಚುಕಟ್ಟಾದ ಸಣ್ಣ ಕತೆಗಳನ್ನು ನೀಡಿರುವ 'ಚದುರಂಗ' ಅವರಿಂದ ನಾವು ಉತ್ತಮ ಹಾಗೂ ಪ್ರೌಢ ಕಾದಂಬರಿಯನ್ನೇ ನಿರೀಕ್ಷಿಸಬೇಕಾಗುತ್ತದೆ. ಈ ಕಾದಂಬರಿ ಹಾಗಿಲ್ಲವಲ್ಲ ಎಂಬುದೇ ವಿಷಾದ.

'ಸರ್ವಮಂಗಳಾ' ಕಾದಂಬರಿಯ ಒಳ್ಳೆಯ ಅಂಶವೆಂದರೆ ಲೇಖಕರು ಕತೆಗೆ ಮತ್ತು ಪ್ರದೇಶಕ್ಕೆ ತಕ್ಕಂತೆ ಅಳವಡಿಸಿರುವ ಗ್ರಾಮ್ಯಭಾಷೆ. ಆರಂಭದಿಂದ ಮುಕ್ತಾಯದವರೆಗೂ ಅದನ್ನು ಸಮರ್ಪಕವಾಗಿ ಉಳಿಸಿಕೊಂಡು ಸಾಗಿರುವುದು ತೃಪ್ತಿಕರವಾಗಿದೆ. ಅಲ್ಲದೆ ಕಲಾಯಿಗಳ ಹಸನ್ ಸಾಬ್, ಬೀಡಿ ಕಾರ್ಮಿಕರಾದ ಹುಸೇನ್ ಹಾಗೂ ಪೀರ್ ಮತ್ತು ಮುಸ್ಲಿಮ್‌ಲೀಗಿನ ಮುಖಂಡ ಖಾದಿರ್ ನಡುವೆ ಜರುಗುವ ಸಂಭಾಷಣೆ ಯಥಾವತ್ತಾಗಿ ಮೂಡಿದ್ದು, ಅದರ ನಾಟಕೀಯ ಗುಣವೂ ರಂಜನೀಯವೆನಿಸುತ್ತದೆ (ಪುಟ ೨೭೧ ರಿಂದ ೨೭೪). ಮಂಗಳೆ ಚಿಕ್ಕವಳಿದ್ದಾಗ ಆಡುವ ತೊದಲು ನುಡಿ, ನಟರಾಜನೊಡನೆ ಆಡುತ್ತ, ಹಟ ಮಾಡುತ್ತ, ಓಡಾಡುತ್ತ, ಕಾಡುಮೇಡು ಸುತ್ತುತ್ತ ಪ್ರಕೃತಿಯ ಸೌಂದರ್ಯಕ್ಕೆ ಮಾರುಹೋಗುವ ಪ್ರಸಂಗಗಳೂ ಸಹಜವಾಗಿವೆ.

ಕೆಲವೆಡೆ ಗೋಚರಿಸುವ ಪ್ರಕೃತಿ ಅಥವಾ ಪ್ರದೇಶಗಳ ವರ್ಣನೆ (ಪುಟ ೮೫ ಮತ್ತಿತರ ಕಡೆ) ಒಪ್ಪುವಂಥದು. ಹಾಗೆಯೇ ಅಲ್ಲಲ್ಲಿ ನುಸುಳಿರುವ ಅರ್ಥಗರ್ಭಿತ

ಮಾತುಗಳು ಲೇಖಕರ ಅನುಭವ, ಅಭಿವ್ಯಕ್ತಿಯ ಪಕ್ವತೆಯನ್ನು ಪ್ರಕಟಿಸುವುದಲ್ಲದೆ ಗಾದೆಗಳ ಮಟ್ಟವನ್ನು ತಲುಪುತ್ತವೆ. 'ಇಲ್ಲದ ರೂಪನ್ನು ಅಲಂಕಾರ ತರಲಾರದು' (ಪುಟ ೬೬), 'ಸುಖ ತರುವ ನೋವಿಗೆ ಹೆಣ್ಣು ಎಂದೂ ಹೆದರುವುದಿಲ್ಲ' (ಪುಟ ೭೧), 'ದಿನವೂ ಕುಡಿಯುವ ಕ್ಷೀರದಲ್ಲಿ ರುಚಿ ಕಾಣುವವರು ವಿರಳ' (ಪುಟ ೭೮), 'ತವರು ತವರೂ ಅಂತ ತಿರುಕನಿಗೆ ಎಣ್ಣು ಕೊಡಕ್ಕೆ ಬಂದಾತಾ?' (ಪುಟ ೧೦೪), 'ತಾರುಣ್ಯವೇ ಹಾಗೆ! ಅಕಾರಣ ಅದರ ಬೆನ್ನಿಗೆ ಅಂಟಿಬಂದುದು...' (ಪುಟ ೧೨೭), 'ಜನ ಅಂತಾರೆ ಅಂತ ಬಾವಿಗೆ ಬೀಳೋಕೆ ಆಗ್ತದಾ...?' (ಪುಟ ೨೧೫), 'ಅವರು ಸಾಕಿದಾರೆ ಅಂತ ನನ್ನ ಪ್ರಾಣ ಕಳೆದುಕೊಂಡು ಬಿಡಬೇಕಾ?' (ಪುಟ ೨೪೫).

ನಟರಾಜ ನಿಧನನಾದಾಗ ಮಂಗಳೆ ಅವನ ಮೃತ ಶರೀರದ ಮೇಲೆ ಬಿದ್ದು ಹೊರಳಾಡುತ್ತ ಮೂರ್ಛೆಹೋಗಿ, ಮರಳಿ ಎಚ್ಚರಗೊಂಡಾಗ ಅವಳ ಬಳೆಯೊಡೆದಿದ್ದು, ಹಣೆಯ ಕುಂಕುಮ ಅಳಿಸಿ ಹೋಗಿದ್ದನ್ನು ಕಂಡು ಯಶೋದಮ್ಮ "ಈವತ್ತಿಗ ನಿನಗೆ ವೈಧವ್ಯ ಪ್ರಾಪ್ತಿಯಾಯಿತು, ಸರ್ವಮಂಗಳಾ" ಎಂದು ಹೇಳುವುದು, ಕೆಲವು ದಶಕಗಳ ಹಿಂದೆ ಕಾದಂಬರಿಗಳಲ್ಲಿ, ಸಿನಿಮಾದಲ್ಲಿ ಬಳಸಲಾಗುತ್ತಿದ್ದ ತಂತ್ರ ಅಥವಾ ಆಗಿನ ಭಗ್ನಪ್ರೇಮಿಗಳಿಗೆ ಒಪ್ಪುತ್ತಿದ್ದ 'ಸೆಂಟಿಮೆಂಟಲ್' ಪ್ರತಿಕ್ರಿಯೆ. ಮಂಗಳೆ ರಾಗಿಯ ಕುಯಿಲನ್ನು ಕಾಪಾಡುವ ಯತ್ನದಲ್ಲಿ ಸಫಲಳಾಗಿ ಮಳೆಯಲ್ಲಿ ನೆನೆದು ಮೂರ್ಛೆಹೋಗುವ ಸನ್ನಿವೇಶ ೧೯೭೫ರಲ್ಲಿ (ಪುನರ್ ನಿರ್ಮಾಣಗೊಂಡು) ತೆರೆಕಂಡ ಹಿಂದೀ ಚಿತ್ರ 'ಮದರ್ ಇಂಡಿಯಾ'ದಲ್ಲಿ ಕಥಾನಾಯಕಿ ಬೆಂಕಿ ಬಿದ್ದ ಭತ್ತದ ಬಣವೆಗಳನ್ನು ಉಳಿಸಲು ಮಾಡುವ ಪ್ರಯತ್ನವನ್ನು ನೆನಪಿಸಿಕೊಟ್ಟಂತೆಯೇ, ಮಂಗಳೆಯ ಅಂತ್ಯವೂ ಸುಪ್ರಸಿದ್ಧ ಬಂಗಾಳಿ ಕಾದಂಬರಿ (ಶರತ್‌ಚಂದ್ರ ಚಟರ್ಜಿಯವರ) 'ದೇವದಾಸ್' ಅದೇ ಹೆಸರಿನ ನಾಯಕನ ಅಂತ್ಯವನ್ನು ನೆನಪಿಗೆ ತರುತ್ತದೆ.

ಪ್ರಚಲಿತ ಸಾಹಿತ್ಯದಲ್ಲಿ ಕಾಣಸಿಗುವ ಆಧುನಿಕ ಪೀಳಿಗೆಯ ಪ್ರೇಮಿಗಳ ನಿಲುವು, ಬಂಡೇಳುವ ಪ್ರವೃತ್ತಿ, ಕಾದಂಬರಿಕಾರರ ಶೈಲಿ, ತಂತ್ರ, ಸಾಧನೆ ಮುಂತಾದವುಗಳ ಬೆಳಕಿನಲ್ಲಿ ಕೆಲವು ದಶಕಗಳ ಹಿಂದಿನ ಕೃತಿಗಳನ್ನು ಓದಿದಾಗ ಗೋಚರಿಸುವ ಅಂಶಗಳನ್ನು ಹೋಲಿಸಿದರೆ ಕಂಡುಬರುವ ವ್ಯತ್ಯಾಸಗಳು ಇವೆರಡರ ಭಿನ್ನತೆಗಳನ್ನು ಸ್ಪಷ್ಟಗೊಳಿಸುತ್ತವೆ. ಈ ಕಾರಣದಿಂದ 'ಸರ್ವಮಂಗಳಾ'ದಂಥ ಕಾದಂಬರಿಗಳು ಐತಿಹಾಸಿಕ ಮಹತ್ವವನ್ನು ಪಡೆಯದೇ ಇರುವುದಿಲ್ಲ.

ನಿಸಾರ್ ಅಹಮದ್‌ರ 'ಆಯ್ದ ಕವಿತೆಗಳು'-ಒಂದು ವಿವೇಚನೆ

ಎ. ಎಸ್. ಜಯರಾಂ

೧

ನಿಸಾರ್ ನವೋದಯ ಮತ್ತು ನವ್ಯದ ಸಂಧಿಕಾಲದಲ್ಲಿ, ನಮ್ಮ ಅಂದಿನ ಅನೇಕ ತರುಣಕವಿಗಳಂತೆ ಚಡಪಡಿಸುತ್ತಿದ್ದವರು, ಸ್ವಂತಿಕೆಯನ್ನು ರೂಢಿಸಲು ಹೆಣಗುತ್ತಿದ್ದವರು. ನಿಸರ್ಗಪ್ರೇಮಕ್ಕೆ ಕುರುಡಾಗದೆ, ಸಾಮಾಜಿಕ ಸಂದರ್ಭಗಳನ್ನು, ಆಧುನಿಕ ಯುಗಧರ್ಮದ ಅಗ್ನಿದಿವ್ಯಗಳನ್ನು ಕಾವ್ಯಕ್ಕೆ ಸೆಳೆದುಕೊಳ್ಳುವ ಪ್ರಯತ್ನಮಾಡಿದವರು. ವಿಡಂಬನೆ, ತಿಳಿಹಾಸ್ಯ, ವ್ಯಂಗ್ಯ, ಅನ್ಯೋಕ್ತಿ, ವ್ಯಕ್ತಿಗತ ಆತ್ಮಶೋಧನೆ, ಅಂತರ್ಮುಖತೆ, ತಾತ್ತ್ವಿಕ ಚಿಂತನೆ ಇವರ ಅನೇಕ ಕವನಗಳಿಗೆ ಆಕಾರ ಕೊಟ್ಟಿದೆ; ಜನ್ಮಕೊಟ್ಟಿದೆ. ಕನ್ನಡದ ಕುವೆಂಪು ಅವರಂತೆ ಕಾವ್ಯವಸ್ತುವನ್ನು ಆರಿಸುವಾಗ ಒಂದು ಉದ್ದೇಶಿತ ಗುರಿ, ಸಂಕಲ್ಪ ಇವರಲ್ಲಿದೆ. ಕಾವ್ಯಪ್ರಪಂಚದ ಅಗಾಧತೆಯನ್ನು ಸಾಧ್ಯತೆಯನ್ನು ಪ್ರಜ್ಞಾಪೂರ್ವಕವಾಗಿ ಪರಿಭಾವಿಸಿ, ಕಾವ್ಯಕಟ್ಟುವ ಛಲದಿಂದ ಸೆಣಸಿದ್ದಾರೆ. ನಮ್ಮ ಅನೇಕ ಲೇಖಕರಂತೆ ನಿಸಾರ್ ಸಹ ಕವಿಯ ನಿಲುವಂಗಿ ಕಳಚಬಹುದಾದದ್ದು; ಸೆಕೆಯಾದಾಗ, ಉಸಿರುಕಟ್ಟಿದಾಗ ಕಿತ್ತೆಸೆಯಬಹುದಾದದ್ದು ಎಂದು ಭಾವಿಸುವುದಿಲ್ಲ. ಇವರ ಪಾಲಿಗೆ ಈ ಕವಿತನ ಕರ್ಣನ ವಜ್ರಕವಚದಂತೆ,

ಆದ್ದರಿಂದ ಜೋಕು, ಲಹರಿ, ಒಂದು ವೃತ್ತಾಂತ, ಒಂದು ಸಾಮಾನ್ಯ ಹಾಸ್ಯಚಟಾಕಿ ಕವಿತೆಯ ಸೋಗು ಧರಿಸುತ್ತದೆ ; ಕಾವ್ಯಭಾಷೆಯಲ್ಲಿ ಪ್ರಾಸರಕ್ಷೆಯಲ್ಲಿ ಕವಾಯಿತು ಮಾಡುತ್ತದೆ. ಮಾತೆಲ್ಲ ಕವನವಾಗಿದೆಯಲ್ಲ ಎಂಬ ಬೆರಗಿನಲ್ಲಿ ಸ್ವರತಿ ಸಂಪ್ರೀತರಾಗುತ್ತಾರೆ. ಕಾವ್ಯಭಾಷೆ ಸಲೀಸಾಗಿ ದಕ್ಕಿದಾಗ, ಕಾವ್ಯಸೃಷ್ಟಿ 'ಮೋಹಕ ಸದ್ಯೋಜಾತಕತೆ' ಯಿಂದ ವಂಚಿತವಾಗುತ್ತದೆ. ಇದಕ್ಕಿಂತಲೂ ಅಪಾಯವಾದದ್ದು ಪ್ರಾಸವ್ಯಾಮೋಹ. ಇದೊಂದು ಆಟವಾಗಿ, ಚಟವಾಗಿ. ಮಕ್ಕಳು ಆಡುವ ಚುಕ್ಕಿ ಮನೆಯಂತೆಯೋ ಪದಬಂಧದಂತೆಯೋ ನಗೆಪಾಟಲಾಗಿಬಿಡುತ್ತದೆ. ಇವರ ಅತ್ಯುತ್ತಮ ಕವನಗಳನ್ನು ಅತಿ ಪ್ರಾಸ ಕೊಂದಿದೆ. ಕವನದ ಸಹಜ ವಿಕಾಸವನ್ನು ಚಿಂತನಾಂಶವೂ ಭಾವಾಂಶವೂ ನಿರ್ದೇಶಿಸದೆ, ಪ್ರಾಸ ನಿರ್ಧರಿಸುತ್ತದೆ. ಪ್ರತೀಕಗಳು, ಪ್ರತಿಮೆಗಳು ರಾಶಿರಾಶಿ ಪೇರಿಸಲ್ಪಟ್ಟು ದಿಗ್ಭ್ರಮೆಗೊಳಿಸುತ್ತವೆ. ಕಾವ್ಯಕೇಂದ್ರ ಪ್ರಜ್ಞೆಯ ಪರಿಧಿಯಿಂದ ಜಾರುತ್ತದೆ. ಅನೇಕ ಸಲ ಶಿಥಿಲ ರಚನೆಯಾಗಿ ಯಾವುದೋ ಸುಂದರ ಭಗ್ನ ಮಂದಿರದ ಅವಶೇಷಗಳಂತೆ ಮರುಕ ಹುಟ್ಟಿಸುತ್ತದೆ.

ನಮ್ಮ ಸಮರ್ಥಕವಿಯೊಬ್ಬರ ಈ ಅನೇಕ ಅರಕೆಗಳನ್ನು ಗುರುತಿಸಿದಾಗಲೂ ಕೆಲವಾದರೂ ಒಳ್ಳೆಯ ಕವನಗಳನ್ನು ಸೃಷ್ಟಿಸಿದ್ದಾರೆ, ನಮ್ಮ ಹೊಸತಲೆಮಾರಿನ ಕವಿಗಣದಲ್ಲಿ ಇವರಿಗೊಂದು ಸ್ಥಾನ ಕಲ್ಪಿತವಾಗಿದೆಯೆಂಬ ಸಮಾಧಾನ ಮೂಡುತ್ತದೆ.

೨

ಕಾವ್ಯಚಿಂತನವೇ ಕವನದ ವಸ್ತುವಾಗಿ ಅನೇಕ ಕವಿಗಳನ್ನು ಕಾಡಿದೆ. ಅದು ಕಾವ್ಯವಾಗಿರಲೂಬಹುದು. ನಿಸಾರರು ಕಾವ್ಯಕರ್ಮವನ್ನು ಕುರಿತು ಕವನಗಳಲ್ಲಿ ಪರಿಭಾವಿಸಿದ್ದಾರೆ. 'ಕಂಡಷ್ಟೆ ಸತ್ಯವಲ್ಲ' ಎಂಬ ಕವಿತೆಯಲ್ಲಿ,

> 'ಇದು ಸೃಷ್ಟಿ
> ಕಪಿ ಮುಷ್ಟಿ'

ಎಂದು ಪ್ರಾರಂಭವಾಗುವ ಕವಿತೆ

> ಈ ಸೃಷ್ಟಿ
> ಆಗಾಗ ಬಿಚ್ಚುವುದು ಮಂಗ ಮುಷ್ಟಿ

ಎಂಬ ನಿಲುಗಡೆಗೆ ತಲುಪುತ್ತದೆ. ಅಲ್ಲಲ್ಲಿ, "ಮಂತ್ರಮರೆತ ಲಿಬಾಬನೆದುರಲ್ಲಿ ಮುಚ್ಚಿರುವ ಗವಿಬಾಗಿಲು" ಎಂಬಂಥ ಪ್ರತಿಮೆಗಳು ಹೊಳೆಯುತ್ತವೆ.

> ಒಳಗೆ ದರ್ಶನವೆಲ್ಲ ಬರಿ ಮಬ್ಬುಮಬ್ಬು
> ಹೊರರಂಗೋ ಬರಿ ಚಮಕೋ ಅಷ್ಟಕ್ಕೆ ತಬ್ಬಿಬ್ಬು
> ಅವನಿಗಿಷ್ಟೆ ಕಾಣ್ಕೆ ; ಸಿಪ್ಪೆತೆಳುವನು ಜಬುಕಿ
> ಒಳತಿರುಳ ಸವಿದಂಥ ಖುಷಿಯ ಮೋಕಿ

o o o

ಕಂಡಷ್ಟೂ ಸತ್ಯವಿರಬಹುದು
ಕಂಡಷ್ಟೆ ಸತ್ಯವಲ್ಲ.
ದಕ್ಕಿದಷ್ಟನೆ ಮೆದ್ದು ಹಿಗ್ಗುವುದೆ ಜಾಯಮಾನ
ಆದರೂ ಕಾಣಿಸದ ಕಡೆಗಿದ್ದೆ ಇರಬೇಕು ಕಾಣುವಾಸೆಯ ನೋಟ
ಮನಸಿನನುಮಾನ
ಅದೆ ಮಾನ, ಹಿರಿತನಕೆ ಅನುಮಾನ"

ಎಂಬಂಥ ಕಾವ್ಯಾತ್ಮಕ ಪರಿಶೋಧನೆಯ ಸಾರ್ಥ ಸಾಲುಗಳ ಸುತ್ತ ವ್ಯರ್ಥಬೊಜ್ಜಿನ ಮೆತ್ತೆಗಳು, ತೇಪೆಗಳು ಸೇರಿಕೊಂಡಿವೆ. ಕವನದ ಅತಿಸಾಮಾನ್ಯ ಮುಕ್ತಾಯವನ್ನೆ ಗಮನಿಸಬಹುದು :

ಹಿಂದೆ ಹೊರಹೊಮ್ಮಿಸಿದ ಕಾಣ್ಕೆಗಳನೊಟ್ಟಾಗಿ
ಬೆಸೆದು ಹೊಸೆಯುವ ಕಲೆಯೆ ಈ ಕಾಲದರಿವು
ಹೊಸತ ಹುಡುಕಲು ಹೋಗಿ ತೂಕ ತಪ್ಪುವ ಬುದ್ಧಿ
ಕುಂಟುಕಾಲಿನ ಕುದುರೆ, ಬಂಜೆಗೋವು"

ಇಂಥ ಅತಿವಾಚಾಳಿತನದ, ಪುನರುಕ್ತತೆಯ ಅಸಫಲವಾಗ್ವಿಲಾಸದ ತೆವಲು, ಈ ರೋಮ್ಯಾಂಟಿಕ್‌ರೋಗ, ಇವರ ಅನೇಕ ಕವಿತೆಗಳನ್ನು ಆಕ್ರಮಿಸಿದೆ. ಹಾಗೆಯೇ 'ಕವಿ ಬರೆದ' ಎನ್ನುವ ಕವಿತೆಯ ಕವಿಬರೆದ। ಲೆಕ್ಕಣಿಕೆಯಲಿ ತನ್ನ ಎದೆಯನ್ನೆ ಇರಿದಿರಿದು "ಎಂಬ ಪ್ರಾರಂಭಿಕ ಸಾಲುಗಳಾಗಲಿ. ಮಾಸ ಮಾಸದವರೆಗು ಭಾರವನ್ನು ತಾಹೊತ್ತು। ಹಗಲಿರುಳು ಯಾತನೆಯನನುಭವಿಸಿ ಅತ್ತು। ಕವಿ ಹೆತ್ತಕವಿತೆಯನು–ಜೀವನವನೆತೆತ್ತು" ಎಂಬಂಥ ಬಾಲಿಶ ಬರವಣಿಗೆಗಳಾಗಲಿ ಈ ಕವಿಯ 'ಆಯ್ದ ಕವಿತೆ'ಗಳಲ್ಲಿ ಹೇಗೆ ಸ್ಥಾನಪಡೆಯಿತು ಎಂಬ ಅಚ್ಚರಿ ಮೂಡುತ್ತದೆ. ಇಂಥ ರಚನೆಗಳು ನಮ್ಮ ಮೂರನೆಯ ದರ್ಜೆಯ ಚಂಪೂಕವಿಗಳ ಪದ್ಯ (Verse) ವನ್ನು ನೆನಪಿಸುತ್ತವೆ : 'ಕವಿತೆ' ಎನ್ನುವ ಕವನದಲ್ಲಿ.

"ಒಮ್ಮೊಮ್ಮೆ ಏನೂ ಹೊಳೆಯುವುದಿಲ್ಲ

....

ಬರೆದರೆ ಬರಿ ಅಕ್ಷರಗಳ ಹೊರೆ

....

ಒಮ್ಮೊಮ್ಮೆ ಏನೆಲ್ಲ ಹೊಳೆಯುವುದು
ಬೆಳೆಯುವುದು ಸನ್ನ ಬೀಜಗೊಳಿಸಿ ಅಳಿಸಿ
ಬಿಳಲನ್ನೊತ್ತಿ ಪದ್ಯ.

....

ನೀರೆರೆದುಕೊಂಡು ಸೀರೆಯುಡುವುದು ಕವಿತೆ

....

ಹೊರಗಾಗುವುದು ಕವಿತೆ

....

ನಗ್ನನಿಲ್ಲುವುದು ಕವಿತೆ."

ಕವಿ–ಕಾವ್ಯ ತಾಕುವ ತಿರುಗುವ ಪರಿಯಲ್ಲಿ ಅನೇಕ ಮಗ್ಗುಲುಗಳು ತೆರೆದುಕೊಳ್ಳುತ್ತದೆ. 'ಕರ್ಮ' ಎಂಬ ಕವನದಲ್ಲಿ.

'ಹೂ ಹೆತ್ತ ಮರಕ್ಕಿಲ್ಲ ಉತ್ತರದ ಉದ್ದೇಶ
ಹೆರುವುದೊಂದೆ ಧರ್ಮ ; ಇನ್ನು ಹೂಗಳ ಕರ್ಮ
ಪರರಿಚ್ಛೆಗನುಸಾರಿ"

ಎಂಬ ಸರಳಸೂತ್ರದಲ್ಲಿ ತನ್ನ ಕಾವ್ಯ ಕರ್ಮವನ್ನು ಸಮೀಕರಿಸಿ ಕೈತೊಳೆದುಕೊಳ್ಳುತ್ತಾರೆ. ಅನಾಲಜಿಗಳ ಅಪಾಯವೆಂದರೆ ಅವು ಹಾಸ್ಯವೂ ಹಾಸ್ಯಾಸ್ಪದವೂ ಆಗಿಬಿಡುತ್ತವೆ. 'ವಿವರಣೆ' ಎಂಬ ಕವನದಲ್ಲಿ ಕಾವ್ಯಸೃಷ್ಟಿಯ ಅಂತಃ ಪ್ರೇರಣೆಗಳನ್ನು ಶೋಧಿಸುತ್ತಾನೆ ಕವಿ.

ಹಲವೊಮ್ಮೆ ನಿಮ್ಮಂತೆ
ಬರೆಯುವುದೇಕೆಂದರೆ, ಒಂಟಿಯಾಗದಿರುವುದಕ್ಕೆ

o o o

ಒಮ್ಮೊಮ್ಮೆ ತೀರ ನನ್ನಂತೆ
ಬರೆಯುವುದೇಕೆಂದರೆ, ಹತ್ತರಲ್ಲೊಂದಾಗದಿರುವುದಕ್ಕೆ

o o o

ಅಳಿಸುತ್ತದೆ ಚಹರೆ, ಕೊಳ್ಳುತ್ತದೆ ಲೋಕ

o o o

ಒಮ್ಮೊಮ್ಮೆ ಒಟ್ಟೊಟ್ಟಿಗೆ ನಿಮ್ಮಂತೆ ನನ್ನಂತೆ
ಬರೆಯುವುದೇಕೆಂದರೆ
ನಿಮ್ಮ ದಾಕ್ಷಿಣ್ಯಕ್ಕೆ ಆಗಿ ಉತ್ತರ
ಹೆಬ್ಬಿರುಕಿಗೆ ಎತ್ತರ
ದೂರಕ್ಕೆ ಹತ್ತಿರ ಸಮತೋಲ ತರುವುದಕ್ಕೆ ಭಾಷೆಗೆ ಬದುಕಿಗೆ"

ಮುಕ್ತಾಯ ವಿಮರ್ಶನ ಪ್ರಬಂಧದ ನಿರ್ಣಾಯಕ ಸಾಲುಗಳಂತೆ ಗದ್ಯತೆಯಿಂದ ಕೂಡಿದೆ. ಕಾವ್ಯಕರ್ಮವನ್ನು ಪರಿಭಾವಿಸುವ ಕವನದ ಕಾವ್ಯಗುಣವೆ ಅದರ ಸತ್ತ್ವವಾಗಬೇಕು, ಶುಷ್ಕ ಹೇಳಿಕೆಗಳಲ್ಲ. ಆದರೂ ಈ ಕವನದ ಪರಿಭಾವನೆ ಅನೇಕ ಮಜಲುಗಳನ್ನು ಕಾಣಿಸುವುದರಿಂದ ನಿಸಾರರ ಕಾವ್ಯಕರ್ಮ ಕುರಿತಾದ ಕವನಗಳಲ್ಲಿ ಗಮನಾರ್ಹವಾದುದ್ದಾಗಿದೆ.

೩

ನಿಸಾರರ ಕವನಗಳಲ್ಲಿ ವ್ಯಕ್ತಿ ಚಿತ್ರಗಳಿಗೆ ಒಂದು ವಿಶಿಷ್ಟ ಸ್ಥಾನವಿದೆ. ಮಾಸ್ತಿ, ತೀನಂಶ್ರೀ, ಮುದ್ದಣ, ಪುರಂದರದಾಸರು, ಗಾಂಧಿ ಮತ್ತು ನೆಹರೂ ಮೊದಲಾದವರು ಇವರ ಕವಿ ಪ್ರತಿಭೆಯನ್ನು ಘರ್ಷಿಸಿದ್ದಾರೆ ; ಇವರ ಕಾವ್ಯಶಕ್ತಿಗೆ ಸವಾಲಾಗಿ ಕಾಡಿದ್ದಾರೆ. ಕವನ ವಸ್ತುವಾಗಿ ಅನೇಕ ಪ್ರತಿಭೆಗಳನ್ನು ಆಕರ್ಷಿಸಿರುವ ಗಾಂಧಿಯಂಥ ಚೇತನವನ್ನು ಕವನಕ್ಕೆ ಮತ್ತೆ ತರುವುದು ಕಠಿಣವೇ ! ನಿಸಾರರು 'ದಾರಿದೀಪ'ದಲ್ಲಿ ಗಾಂಧಿಯ ವಿಶ್ವರೂಪ ದರ್ಶನವಾಗಲಿ, ನಿಸಾರ್ ಕಂಡ ವಿಶಿಷ್ಟನೋಟವಾಗಲಿ ಕಾಣುವುದಿಲ್ಲ.

> ತನ್ನ ಮನೆ ಅಂಗಳದ ಮಂದಾರ ಮರದತ್ತ ದೃಷ್ಟಿ ಹರಿಸಿದ
> ಜಾದುಗಾರ ನೀನು
>
> o o o
>
> ನೀನಿದ್ದೆ–
> ಮನಮನದ ಅಂಜಿಕೆಗೆ ಅಭಯದಾತಕ ಪಂಜು"

ಎಂಬಂಥ ಕೆಲವು ತಟ್ಟುವ ಸಾಲುಗಳಿದ್ದರೂ

> ನಿನ್ನೊಂದೊಂದು ಗುಣದಣುವ ತತ್ವಗಳೆ
> ಜರಡಿಯಲಿ ಕಿರಕಿರನೆ ಜಾಲಿಸಿದರೂ
> ತಾರೆತುಣುಕುಗಳಣ್ಣ

ಎಂಬಂಥ ಸಲೀಸು ಅಖಂಡ ಹೊಗಳಿಕೆಯೂ

> o o o
>
> ದೇವನೂರ ಸೋಪು
> ನೀನು ಬಾಪು

ಎಂಬ ಚಂದಮಾಮದ ಪ್ರಾಸವೂ

> o o o
>
> ಕರೆದರೂ ಕೊರಳೆತ್ತಿ ನಿನ್ನ ನಾಡಿನ ಮಂದಿ
> ಹಿಂದಿರುಗಿ ಬರಲಿಲ್ಲ ನೀನು ಮಕ್ಕಳ ಮಮತೆ
>
> –'ಗಾಂಧಿ'

ಎಂಬಂಥ ಅಸಂಬದ್ಧ ಪ್ರಲಾಪದ ; ಯಾದೃಚ್ಛಿಕ ಮುಡಿವು ನಿಸಾರರ ಕಾವ್ಯದ ಒಡಕು ಮುರುಕ ಪಾರ್ಶ್ವವನ್ನೇ ಕಾಣಿಸುತ್ತದೆ 'ನೆಹರು' ಕವನದಲ್ಲಿ

> ಹಿಂದೆ ಬಿದ್ದವನಲ್ಲ, ಎದ್ದೆಯೆಂದರೆ ಸಲಗ
> ಎದೆಗೆಡಿಸವಧೃತಿಯು ಲಬಲಬೋ ಸದ್ದಿನಲಿ
> ಮಾತು ಧೈರ್ಯದ ಮುದ್ದು
> ಏರಲಾರದ ಹದ್ದುಮೀರಿ ಹಾರುವ ಹದ್ದು

ಎಂಬ ಆರಂಭ ನೆಹರು ವ್ಯಕ್ತಿತ್ವದ ಎಳೆಗಳನ್ನು ಬಿಡಿಸಿದರೂ ('ಒಂದು ಹದ್ದಿನ ರೆಕ್ಕೆಯೊಳಗೆ ನೂರಾರಕ್ಕಿ ಹದ್ದು' ಎಂಬ ಅಡಿಗರ ಸಾಲಿನ ಋಣವಿದ್ದರೂ) ಮುಂದೆ ಕವನ ಶೋಚನೀಯವಾಗಿ ಮುಗ್ಗರಿಸುತ್ತದೆ.

ಂ ಂ ಂ

ಲಕ್ಷ ನಕ್ಷತ್ರಗಳು ಹೊಳೆದರೂ ಬಾನೆಲ್ಲ ಬರಿಗತ್ತಲು
ಒಬ್ಬ ಚೆಂದ್ರನೆ ಸಾಕು
ಬೆಳ್ಳಿಹೊಳೆ ಎತ್ತೆತ್ತಲು

ಎಂಬ ಎಂಜಲು ಸಾಲೂ

ಂ ಂ ಂ

ನಿನ್ನನಪ್ಪಿದರೆಲ್ಲ ಬೆಂಡೆಂದು ಭಾರಕ್ಕೆ
ಅತ್ತಿತ್ತ ಒಲೆದಾಗ ಸಮತೋಲ ತಪ್ಪಿದರು"

'ಬೆಂಡು' ಪದದ ಹಾಸ್ಯಾಸ್ಪದ ಧ್ವನಿ, ಅನುದ್ದೇಶಿತವಾದರೂ ಕವನದ ಆಶಯಕ್ಕೆ ಸಂಚಕಾರ ತಂದಿದೆ. 'ಸಾವಿರದ ಕಿಮ್ಮತ್ತು' ಎಂಬ ಮುಂದೆ ಬರುವ ಪ್ರಯೋಗದ 'ಸಾವಿರದ' ಪದದಲ್ಲಿನ ಶ್ಲೇಷೆ ಈಗಾಗಲೇ ಕ್ಲೀಷೆಯಾಗಿದೆ. ಇಲ್ಲೆಲ್ಲ ಕಾಣುವುದು ಪದ್ಯಮಾಡುವ ಕೌಶಲ. ನಿಸಾರರ 'ಮಾಸ್ತಿ' ವ್ಯಕ್ತಿ ಚಿತ್ರಗಳಲ್ಲಿ ಸುಂದರವಾದದ್ದು, ಸಾರ್ಥಕವಾದದ್ದು.

ಂ ಂ ಂ

ಇವರು ನನ್ನೆದುರು ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ
ಬೆಳಗಾಗ ಛಳಿಯಲ್ಲಿ ಬಿಸಿನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ ; ಹಗುರಕ್ಕೆ ಸಲ್ಲುತ್ತದೆ

ತಾನು ಮಾಸ್ತಿಯನ್ನು ಕಂಡಂತೆ, ತನ್ನ ಅನಿಸಿಕೆಗಳನ್ನು ಸ್ವಂತ ಧಾತುವಿನಲ್ಲಿ ಆಕೃತಿಸುತ್ತಾರೆ.

ಗವಿಪುರದಿಂದ ಗಾಂಧಿಬಜಾರಿನ ಕೊನೆಗೆ
ಪ್ರಕೃತಿಯ ಕರೆಯಂತೆ ಎಳೆಯುವುದು ಕ್ಲಬ್ಬು

ವಿಶೇಷ ಯತ್ನವಿಲ್ಲದೆಯೆ, ಕೃತಕ ಪ್ರಾಸದ ಗೋಜಲವಿಲ್ಲದೆಯೆ ಕಾವ್ಯಾರ್ಥಕ್ಕೆ ತೆರೆದುಕೊಂಡು ಝಗ್ಗನೆ ಬೆಳಗುತ್ತದೆ : 'ಗವಿಪುರ, ಗಾಂಧಿಬಜಾರು' ಮಾಸ್ತಿ ಸಾಹಿತ್ಯದ ವ್ಯಾಪ್ತಿ ವೈವಿಧ್ಯವನ್ನು ಸೂಚಿಸುತ್ತದೆ ; ಭೂತ ವರ್ತಮಾನ, ಪರಂಪರೆಯ ಮೂಲದಿಂದ ಆಧುನಿಕ ಸಂದರ್ಭಕ್ಕೆ ಹೀಗೆ ಅರ್ಥದ ಮಜಲುಗಳು ತೆರೆದುಕೊಳ್ಳುತ್ತವೆ. ಆದರಲ್ಲೂ ಕವಿಶೈಲ, ಸಾಧನಕೇರಿಗಳಂತೆ ಗಾಂಧಿಬಜಾರಿಗೆ ಭಾವ ಪರಿವೇಶವನ್ನು ಸ್ವತಃ ನಿಸಾರರೇ ಕಲ್ಪಿಸಿಕೊಟ್ಟಿದ್ದಾರೆ.

ಈ ವೃದ್ಧರನುಂ ಕಂಡು ಅಯ್ಯೋ ಎಂದಿದ್ದೇನೆ
ಎನ್ನುತ್ತಿರುವಂತೆಯೆ ಕೈಯು ಮುಗಿದಿದ್ದೇನೆ

ಒಂದು ಕ್ಷಣಿಕ ತಾತ್ಕಾಲಿಕ ಭಾವ, ಘನವ್ಯಕ್ತಿತ್ವದ ಬಗ್ಗೆ ಇರುವ ಗೌರವ ಏಕಕಾಲದಲ್ಲಿ ಮುಖಾ ಮುಖಿಯಾಗಿ ಮಿಂಚುತ್ತದೆ.

ರಸ್ತೆ ಹಿರಿದಾಗಿ ಫುಟ್‌ಪಾತ್ ಕಿರಿದಾಗಿ
ಓಡಾಟ ಹೆಚ್ಚಾಗಿ ನೆಮ್ಮದಿಯು ಪೆಚ್ಚಾಗಿ

ಎಂಬಂತೆ ಒಂದು ವಾಸ್ತವಿಕ ಚಿತ್ರಣದ ಒಡನೊಡನೆಯೆ ಅಷ್ಟೆ ಅಲ್ಲ ಅನ್ನಿಸುವ ಒಳದನಿ ಪಿಸುಗುಟ್ಟುತ್ತದೆ.

ಕ್ಲಬ್ಬಿನಲ್ಲಿ ನಿಶ್ಚಿಂತೆಯಾಗಿ ಎಲೆ ಕಲಸುವುದು
ಇಪ್ಪತ್ತೆಂಟನಾಡುವುದು–ನಡುವೆ ಅದು ಇದುಂ
ಇಪ್ಪತ್ತೆಂಟನಾಡುವುದುಂ

ಈ ಸಹಜ ಶ್ಲೇಷೆ ಭಾರವಾಗದೆ, ಸಾಂದರ್ಭಿಕ ಅನೇಕಾರ್ಥಗಳೆನ್ನು ಧ್ವನಿಸುತ್ತದೆ. ಕ್ಲಬ್ಬಿನ ಸಹಜ ಚಿತ್ರಣವನ್ನು ಕೊಡುತ್ತದೆ.

ಇನ್ನಿವರ ಜೀವನ ಅದು ಕೂಡ ಹೀಗೆಯೆ ಎಲ್ಲ ಖುಲ್ಲ.
ಖುಂಷಿಗಷ್ಟೆ, ನಫೆಗಲ್ಲ.

ಮಾಸ್ತಿಯವರ ಸರಳ ಬದುಕು ; ಸ್ವಂತ ಲಹರಿಗೊ ಎಂಬಂತೆ 'ಜೀವನ' ಪತ್ರಿಕೆಯನ್ನು ದೀರ್ಘಕಾಲ ನಡೆಸಿದ್ದು, ಎಲ್ಲ ಸೂಚಿತವಾಗುತ್ತದೆ.

ಬೊಬ್ಬೆ ಅಬ್ಬರದೆದರು ಗುರುತುಂ ಹತ್ತದೆ ಹಾಗೆ
ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದುಂ
ಸಾಗುವರು ಸದ್ದಿರದ ಚಂದ್ರನಂತೆ

ಮಾಸ್ತಿಯವರ ಸದಭಿರುಚಿಯು, ಅನಾವಶ್ಯಕ ಗುಂಪುಗುಳಿತನದಿಂದ ದೂರವುಳಿದ, ಶೀರ ತಾಕಿದರೆ ಮಾತ್ರ ಪ್ರತಿಕ್ರಿಯಿಸುವ ಗುಣಗಳನ್ನು ಅದು ಧ್ವನಿಸುವಂತೆಯೆ, ಹಳೆಯ ತಲೆಮಾರಿನ, ನಾಗರಿಕ ಪ್ರಜ್ಞೆಯ ವ್ಯಕ್ತಿಯೊಬ್ಬನ ದೈನಂದಿನ ಬದುಕಿನ ಕ್ಷುಲ್ಲಕ ವಿವರಗಳನ್ನು ಕಾಣಿಸುವುದರ ಮೂಲಕವೂ ಚಿತ್ರ ಸಮಗ್ರತೆಯನ್ನು ಸಾಧಿಸುತ್ತದೆ. ಒಟ್ಟಿನಲ್ಲಿ ನಿಸಾರರ 'ಮಾಸ್ತಿ' ಒಂದು ಹೊಸ ಕಾಣ್ಕೆಯ ಕಾವ್ಯಚಿತ್ರ. ಅವರ ಸಾರ್ಥಕ ಕವನಗಳಲ್ಲಿ ಇದೂ ಒಂದು.

ಇದೆ ಮಾತನ್ನು 'ಶೀನಂಶ್ರಿ' ಕವನದ ಬಗ್ಗೆ ಹೇಳುವಂತಿಲ್ಲ. ಅದು ಅನೇಕ ಅಸಮರ್ಪಕ ಅಭಿವ್ಯಕ್ತಿಗಳಿಂದ, ಅರಕೆಗಳಿಂದ ಸೋತಿದೆ.

ಹೋಗುವನೆಂದು ಹೋಗದೆಯೆ ಒದ್ದಾಡಿಸುವುದು
ಇಲ್ಲಿ ಹಲವರ ನೀತಿ
ಹೇಳದೆಯೆ ಹೊರಟೇ ಹೋಗಿ ಒದ್ದಾಡಿಸುವುದು
ಎಲ್ಲೋ ಕೆಲವರ ರೀತಿ

ಈ ಚಮತ್ಕಾರದ ಸಾಲಿನ ಆರಂಭವೆ ಕವನಕ್ಕೆ ಲಾಘವವನ್ನು ತಂದಿದೆ. ಯಾರನ್ನೊ ಕುರಿತಾದ 'ಕಹಿ' ಕಾರಿ 'ಹೇಳದೆಯೆ ಹೊರಟು ಹೋಗಿ' ಎಂದು ವಿಸದೃಶವಾಗಿ ಆರೋಪಿಸುವುದು ಸಹ ಸತ್ಯ ದೂರವಾಗಿದೆ. ಸಾವನ್ನು ಅವರು ಬಯಸಿರಲಿಲ್ಲ; ಸಮಿೂಪಿಸಿರಲಿಲ್ಲ. ಹೋಗುತ್ತೇನೆಂದು ಗೊತ್ತಿಲ್ಲದಯೆ ಹೋದದ್ದು; ಅರ್ಥಾತ್ ಗಬಕ್ಕನೆ ಸಾವು ಅವರನ್ನು ಕವರಿಕೊಂಡು ಹೋಯಿತು.

ಇದ್ದಾಗ ಇದ್ದಂತೆ ಕಾಣಿಸದೆ ಕಾಣಿಸದೆ ಇದ್ದಾಗ ಇದ್ದಂತೆ
ಭಾಸವಾದವ

ಇದು ಮಾತಿನ ಚಮತ್ಕಾರವೇ ಆಗಿದೆ. ಅನಾವಶ್ಯಕವಾದ ದುಷ್ಟ ಆರೋಪವಾಗಿದೆ. ಬದುಕಿದ್ದಾಗಲು ಅವರ ವ್ಯಕ್ತಿತ್ವ ಸಾಧನೆ ಬೋಧನೆ ಸರ್ವಶ್ರುತವೇ. ಮಾತು ತಂತಾನೆ ಸುಂದರವಾಗಿದ್ದರೂ ಔಚಿತ್ಯದ ಬಗ್ಗೆ ಒಂದು ದೀರ್ಘ ಪ್ರಕರಣ ಬರೆದ ತೀನಂಶ್ರೀ ಬಗ್ಗೆ ಇದು 'ಅನೌಚಿತ್ಯ'ದಿಂದ ಕೂಡಿದ ಹೇಳಿಕೆ.

ಕೆಲವರಿಗೆ ಉಯ್ಯಾಲೆ, ನೆರಳು ಸುಸ್ವರಜೇನು
ಕೆಲವರಿಗೆ ಭಯಭಕ್ತಿ ಪೂಜೆ ವಿಧಿ ವರ ನೇಮ

ಒಳ ಅರ್ಥಗಳು, ಮರ್ಮಗಳು ಕಾಕು ಕೂಡಿಕೊಂಡರೂ ಸಮರ್ಥನೀಯ ಸಾಲುಗಳೇ!

ಒಮ್ಮೆ ನಸುಕಿನೊಳಿದ್ದು ಹರಿಸಿರಲು ಕಣ್ಣಾಚೆ
ಸುತ್ತ ಬಟ್ಟಂಬಯಲು
ನಟ್ಟಿರುಳ ತೂಫಾನು ತಿಕ್ಕಿ ಮುನ್ನಡೆದಿರಲಂ
ನೀನು ಮುಂದಾಳಾಗಿ ಹಿಂಡಿಗೆ ಬೇಕಾಗಿ

ಇತ್ಯಾದಿ ಸಾಲು ಕಾವ್ಯವಾಗಿ ಸುಂದರವಾಗಿ ಕಂಡರೂ ಅವಾಸ್ತವಿಕ, ಅಪಚಾರ. ನವೋದಯ ಕಲಾ ಶಾಸ್ತ್ರ ಪರಂಪರೆಯನ್ನು ತೀನಂಶ್ರೀ ಉದ್ಘಾಟಿಸಲಿಲ್ಲ. ಶ್ರೀ. ಟಿ. ಎಸ್. ವೆಂಕಣ್ಣಯ್ಯ, ಎ. ಆರ್. ಕೃಷ್ಣಶಾಸ್ತ್ರಿ, ಆರ್. ನರಸಿಂಹಾಚಾರ್ಯ, ಅವರಿಗಿಂತ ಮುನ್ನ ಇ. ಪಿ. ರೈಸ್, ಕಿಟಲ್ ಮೊದಲಾದವರು ನಡೆದ ಹಾದಿ ಇತ್ತು. ಭಾಷಾಶಾಸ್ತ್ರಕ್ಕೆ ಅನ್ವಯಿಸಿದರೂ ಶ್ರೀ, ಆರ್. ನರಸಿಂಹಾಚಾರ್, ಕ. ವೆಂ. ರಾಘವಾಚಾರ್ ಇದ್ದರು.

"ಮರೆಯಾದ ಹಿರಿಯಾನೆ ; ಅರಸಿದರೂ ಕಾಣೆ"

ಎಂಬ ಮಾತಿನ ಅರ್ಥವಾದರೂ ಏನು? ಎಂಥ ಅನುದಾರ ಟೀಕೆ! ಅಥವಾ ಅಸಮರ್ಪಕ ಜಲ್ಪ. ಸತ್ತವರು ಬಾರರೆಂಬುದು ಧ್ರುವಸತ್ಯವೇ, ಆದರೆ "ಅರಸಿಪರೂ ಕಾಣೆ" ಎಂಬ ಮಾತಿನ ವಿಪರ್ಯಾಸ? ಅವರ ಪ್ರಭಾವ, ಕಾಣಿಕೆ ಶೂನ್ಯವೆ? ಅಥವಾ ಪ್ರಾಸಪ್ರಿಯತೆಗೆ ತೆತ್ತ ದುಬಾರಿ ದಂಡವೆ?

ಹತ್ತಿರಕೆ ಹಿರಿಮೆ ದೂರಕೆ ಮಹಿಮೆ–ಯಾತ್ರಾಸ್ಥಳ

ಎಂಬ ಗ್ರಹಿಕೆ ಸಾಧುವಾಗಿದೆ.

ಇಲ್ಲಿ ಮನೆನಲ್ಲಿಯಲಿ ಜಲದೋಕುಳಿ
ಏಜಂಟರುಕ್ತಿಯಲಿ ಸಹಜವೆ ಅತ್ಯುಕ್ತಿ

ಏಜಂಟರೆಂಬ ಪದ ಅನುದಾರವೆಂದು ತೋರುತ್ತದೆ. ಪರೋಕ್ಷವಾಗಿ ಕವನದ ವ್ಯಕ್ತಿಗೂ ಅಪಚಾರ, ಕವನದ ಬಲುಭಾಗ ಕುಂಟು ಕಾಲೆಳೆದುಕೊಂಡು ಸಾಗುತ್ತದೆ. ಅನಾವಶ್ಯಕವಾದ ದೀರ್ಘತೆ ಕವನದ ಒಂದು ದೋಷ.

ಪುರಂದರದಾಸರನ್ನು ಕುರಿತದ್ದು ತೀರ ಸಾಮಾನ್ಯ ಕವಿತೆಯಾಗಿದೆ. ಮುದ್ದಣನನ್ನು ಕುರಿತ 'ನವೋದಯ' ಅನೇಕ ನೆನಪಿನಲ್ಲುಳಿಯುವ ಸಾಲುಗಳನ್ನು ಹೊಂದಿದ್ದರೂ ಅಚ್ಚುಕಟ್ಟಿಲ್ಲದ, ಆಕಾರವಿಲ್ಲದ ಕವಿತೆಯಾಗಿದೆ. ಸಾಹಿತ್ಯದಲ್ಲಿ ಮುದ್ದಣನ ಸ್ಥಾನ ನಿರ್ದೇಶನ ಚರ್ಚಾಸ್ಪದವಾದುದು. ಅತಿರೇಕದ, ವಿಕ್ಷಿಪ್ತ ವಿಮರ್ಶೆಗೆ ಗುರಿಯಾದದ್ದು. ವಿಮರ್ಶಕರೊಬ್ಬರು ಅವನನ್ನು 'ನವೋದಯದ ಮುಂಗೋಳಿ' ಎಂದು ಕರೆದದ್ದೇ ಈ ಕವನಕ್ಕೆ ಸ್ಫೂರ್ತಿಯಾಗಿರುವಂತೆ ತೋರುತ್ತದೆ. ಕವಿತೆಯ ಆರಂಭವೇ ಹೀಗೆ:

"ಕೊ ಕ್ಕೊ ಕ್ಕೋ : ನವೋದಯದ ಹೊಸ ನಗಾರಿ
ಕದಲಿತು ಪರಂಪರೆ ಒಂದೆರಡು ಡಿಗ್ರಿ"

ನಗಾರಿಗಾಗಿ ಈ ಡಿಗ್ರಿಯನ್ನು ಎಳೆದು ತರಲಾಗಿದೆ. ಪರಂಪರೆ ಒಂದು ಜ್ವರವೇ ಇದ್ದೀತು!

ಕನ್ನಡ ಸಾಹಿತ್ಯ ಪರಂಪರೆಯನ್ನು

"ಕಂದ ವಾರ್ಧಕರಗಳೆ ವೃತ್ತಗಳದಟ್ಟಡವಿ
ನುಗ್ಗಿ ನಡೆದರೆ ಮುಂದೆ ಶತಮಾನಗಳ ಮರುಭೂಮಿ"

ಎಂದು ಪರಿಚಯಿಸುವುದು ಅಜ್ಞಾನದ ಪರವಶಾವಧಿ. ಸ್ವತಃ ಮುದ್ದಣನೆ ಒಂದು ಕಾವ್ಯವನ್ನು ಶ್ಲೇಷಾಲಂಕಾರ, ಕವಿ ಸಮಯ ನಿಬಿಡ ವಾರ್ಧಕದಲ್ಲಿ ರಚಿಸಿದನೆಂಬುದು ವಸ್ತು ಸ್ಥಿತಿ.

ಮುದ್ದಣನ ಸಾಹಿತ್ಯವನ್ನು

ಸಿಹಿನೀರ ತಿಳಿಬಾವಿ, ತೆಂಗು, ಬಾಳೆಯ ತೋಟ

ಎಂದು ಕೈವಾರಿಸುವುದು ಅತ್ಯುಕ್ತಿ, ಪಕ್ಷಪಾತ ಮಾತ್ರವಲ್ಲದೆ ಚರ್ಚಾಸ್ಪರ್ಧಿಯೊಬ್ಬನ ವಾದಸರಣಿಯಾಗುತ್ತದೆ. ಇವರು ಬಣ್ಣಿಸಿದ ಶತಮಾನಗಳ ಮರುಭೂಮಿಯಲಿ ವಚನ. ಕೀರ್ತನೆ, ಸರ್ವಜ್ಞನ ವಚನಗಳೆಲ್ಲ ಸೃಷ್ಟಿಯಾಗಿವೆ. ರಗಳೆಯಲ್ಲಿ ಹರಿಹರನ ಪ್ರತಿಭೆ, ವಾರ್ಧಕದಲಿ ರಾಘವಾಂಕ, ಸ್ವತಃ ಮುದ್ದಣನೆ ಪ್ರಭಾವಗೊಂಡ ಲಕ್ಷ್ಮೀಶನಿದ್ದಾನೆ.

ಎರಡನೆಯ ಭಾಗದಲ್ಲಿ ತೀರ ಆತ್ಮೀಯವಾಗಿ ಕವಿಯನ್ನು ಹತ್ತಿರ ಕರೆದು ಕೂರಿಸಿಕೊಳ್ಳುತ್ತಾರೆ. ಆದರೆ ಈ ಭಾಗ ಶೋಚನೀಯವಾಗಿ ವಿಫಲವಾಗಿದೆ. ಅಲ್ಲಿ ಕಾಣುವ ಮುದುಕ ಮುದ್ದಣನೆ ಆಗಬೇಕಾಗಿಲ್ಲ, ಯಾವ ವಯೋವೃದ್ಧನಿಗೂ ಸಲೀಸಾಗಿ ಅನ್ವಯಿಸಬಹುದಾಗಿದೆ. ಮೂರನೆಯ ಭಾಗದಲ್ಲಿ 'ಪದ್ಯವಧ್ಯವೆ ? ಗದ್ಯ ಹೃದ್ಯವೇ ಅಜ್ಜ?' 'ನೀರಿಳಿಯದ ಗಂಟಲಲಿ ಕಡುಬ ತುರುಕಿದ ಹಾಗೆ' ಇವು ಸಾಂದರ್ಭಿಕವಾಗಿ ವ್ಯಕ್ತಿನಿಷ್ಠವಾಗಿಸುವ ಪ್ರಯತ್ನ ನಡೆಸುತ್ತವೆ.

"ರಾಮಾಶ್ವಮೇಧ

ನಿನ್ನ ಹಾಗೂ ನಿನ್ನ ಧರ್ಮಪತ್ನಿಯ ವಾದ ಸಂವಾದಗಳ ಗೋದಾ–ಎಂಬ ಎಳೆದು ತಂದ ಪ್ರಾಸ, ತುಂಬ ವಿರಾಮವಾಗಿ ಹರಟೆ,

ಬಡಿದಿದ್ದರೂ ಬೆಲ್ಲು ನಿಲ್ಲಿಸಲಿಲ್ಲವೆ ಡ್ರಿಲ್ಲು
ಇತ್ತ ಆಗ ಅಶಿಸ್ತು ಗಲಭೆ ಮುಷ್ಕರ ಗುಲ್ಲು ?

ತನ್ನೊಡನೆ ಹೋಲಿಸಿಕೊಂಡು 'ಪರತಂತ್ರ ನಾನಿನ್ನು ಹೊಟ್ಟೆ ಪಾಡ ಗುಲಾಮ' ಎಂದು ಸಿಕ್ಕಿದ ಕಡೆ, ಸಿಕ್ಕಿದ ಎಲೆಯನ್ನು ಹಿಡಿದು ಕವನ ದಿಕ್ಕಾಪಾಲು ನುಗ್ಗುತ್ತದೆ. ಒಂದು ಬಂಧ, ಉದ್ದೇಶ, ಪರಿಕಲ್ಪನೆ–ಯಾವುದೂ ಇಲ್ಲದ ಅತಿ ವಾಚಾಳಿತನದ ಕನವರಿಕೆ.

೪

ಸಮಾಜದೊಡನೆ ತನ್ನ ಸಂಬಂಧಗಳನ್ನೂ ಘರ್ಷಣೆಗಳನ್ನೂ ಆ ಸಮಾಜದ ಅನೇಕ ವರ್ತುಳಗಳಲ್ಲಿ ತಾನು ಅಡ್ಡಾಡಿದಾಗ ಪಡೆದ ಅನುಭವಗಳನ್ನು ದಾಖಲಿಸುವಲ್ಲಿ ನಿಸಾರರ ಕವನ ವೈಶಿಷ್ಟ್ಯವನ್ನು ಪಡೆದುಕೊಳ್ಳುತ್ತದೆ. ಅವರ ಕಾವ್ಯದ ಒಂದು ನೈಜ ಮುಖವೇ ಇಲ್ಲಿ ಕಾಣುತ್ತದೆ. ಇಲ್ಲಿ ಕಾವ್ಯ ಫ್ಯಾಷನ್ ಆಗದೆ, ವಸ್ತು ಜರೂರಿನ ಆಯ್ಕೆಯಾಗಿದೆ; ವೈಯುಕ್ತಿಕ ತುರ್ತಿನಿಂದ ಧುಮುಧುಮಿಸುತ್ತದೆ.

ಪರಂಪರೆಯೊಡನೆ, ತಾನು ಹುಟ್ಟಿ ಬೆಳೆದು ಬಂದ ಸಂಸ್ಕೃತಿಯೊಡನೆ ಆಚಾರ ವಿಚಾರ ಅನಾಚಾರಗಳೊಡನೆ ರಾಷ್ಟ್ರ ಜೀವನದಲ್ಲಿ ತನ್ನ ಅಸ್ತಿತ್ವವನ್ನು ಸ್ಥಾಪಿಸುವಾಗ ನಿಜವಾದ ತೊಡಕು, ಒಳಸುಳಿಗಳು ಮೂಡುತ್ತವೆ. ಕವಿಯು ನಿಶ್ಚಲ ಮನಃಸ್ಥಿತಿಯಲ್ಲಿ ಚಿತ್ರಲಾಗುವ ಕಠೋರ ವಂಚನೆಗಳನ್ನು ಗುರುತಿಸುತ್ತಾನೆ. ನಿಸಾರರ 'ನಾನೆಂಬ ಪರಕೀಯ, 'ನಿರ್ಮೊಡನಿದ್ದು ನಿಮ್ಮಂತಾಗದೆ', 'ಉಭಯಕಷ್ಟ'–ಇವು ವೈಯಕ್ತಿಕ ತುರ್ತಿನ ಅನಿವಾರ್ಯ ಒತ್ತಡದ ಫಲಗಳು ; ವಿಶಿಷ್ಟ ಸಾಮಯಿಕ ಪರಿಸರ ಅದಕ್ಕೆ ವಿನೂತನತೆಯನ್ನು ಅ-ಪೂರ್ವತೆಯನ್ನು ತಂದು ಕೊಟ್ಟಿದೆ.

ಮೂರು ಬಣ್ಣದ ಬಟ್ಟೆ ಹಾಕಿ ರಚಿಸಿದ ಖೆಡ್ಡ
ಅಲ್ಲಿ ಒದ್ದಾಡುತಿವೆ ಶರವಾನಿ, ಪೈಜಾಮ, ಬೋಳುತಲೆಗಡ್ಡ
ತೆಳುವಂಗಿ ಲುಂಗಿಗಳ
ಬೆರಳ ಮದರಂಗಿಗಳ
ಕಡೆಗೆ ಕಣ್ಣು ಗುಮಾನಿ. ಕಿವಿಗೆ ಊಹಾಪೋಹ
ತಾಕಿದೊಡನೆ ಪ್ರಸಾರ ಬಾಯಿ ಬಾಸುಲಿಯಿಂದ

ಮುಸ್ಲಿಮರ ವಿಲಕ್ಷಣ ಅನುಪಾನ, ರಾಷ್ಟ್ರ ಜೀವನದಲ್ಲಿ ಬೆರೆಯದ ಪರಿ, ಸೂಕ್ಷ್ಮ ಸಂವೇದಿಯಾದ ಕವಿಗೆ 'ದೇಶದ್ರೋಹಿ' ಇಲ್ಲ 'ಸ್ವಧರ್ಮದ್ರೋಹಿ' ಎಂಬ ಲೇಬಲ್ಲಿನಿಂದ ಪಾರಾಗುವ ಮಾರ್ಗವೆ ಇಲ್ಲ.

'ನಾನೆಂಬ ಪರಕೀಯ'ದಲ್ಲಿ ಮತೀಯ ನೆಲೆಗಟ್ಟನ್ನು ಮೀರಿ ನಿಂತು, ಹೊಸ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡೂ ತಾನು ಪರಕೀಯನೆಂಬ ಭಾವನೆ ಧುತ್ತನೆ ಎದುರಾದಾಗ

ದಾಡಿಗಡ್ಡ ನಮಾಜಿನ ದಿವ್ಯಚಹರೆಯ
ತುರ್ಕಿಟೋಪಿಯ ಓರೆಯ ಪರಿಚಿತನ ಮೋರೆಯ

ಹುಡುಕುವ ಸಂದರ್ಭ ಬರುತ್ತದೆ. ದೇಹ ಮನಸ್ಸನ್ನು ಬೆಳಸಿದ ಮೂಲ ದ್ರವ್ಯಗಳಿಂದ ಬೇರ್ಪಟ್ಟು ವಿಶಾಲ ಜಗತ್ತಿಗೆ ಬಂದಿದ್ದೇನೆಂದುಕೊಂಡಾಗಲೂ ಇದರಲ್ಲಿಯೂ ಏನೋ ದಾಸ್ಯವಿದೆ ಎಂಬ ಅಳುಕು ಮುಳ್ಳು ಮುರಿಯುತ್ತದೆ.

ಬದಲು ಟೈಸೂಟಿನ ಪರದೇಶಿನೆತ್ತರು ತೊಗಲಿನ
ದೇವರ ಶಂಕಿಸಿ, ಶಂಕಿಸಿದರೆಂತು ಎನುವ ದಿಗಿಲಿನ
ಐದು ದೆವ್ವಗಳ–ಹಾಂಗೊಮ್ಮೆ ಹೀಂಗೊಮ್ಮೆ
ಕುಣಿಯೋಣ ಬಾರಾ–ದ ದ್ವಂದ್ವ

'ನಾನೆಂಬ ಅಸ್ತಿತ್ವದ ಚೂರಿನ ಸ್ಪಷ್ಟ'ವನ್ನು ಅರ್ಥೈಸುವುದು ಕಷ್ಟವೆಂಬ ನೈಜ ಅರಿವು ಮೂಡುತ್ತದೆ. ಇದರ ಸಂಕೀರ್ಣತೆ, ಸತ್ಯ ಶೋಧನೆ ಕವನಕ್ಕೆ ಜೀವ ಕಳೆ ಕೊಟ್ಟಿದೆ. ಸಲೀಸು ಹೇಳಿಕೆ, ಆಕ್ರೋಶಗಳಾಗಿಲ್ಲ ಇವು.

'ನಿಮ್ಮೊಡನಿದ್ದು ನಿಮ್ಮಂತಾಗದೆ' ಕವನದಲ್ಲಿನ ಕಳಕಳಿ, ಸಾಚಾತನ ಗಾಢವಾಗಿ ಮುಟ್ಟುತ್ತದೆ. ಒಂದು ಭಿನ್ನ ಸಂಸ್ಕೃತಿಯ ಭಿನ್ನ ನೆಲಗಟ್ಟಿನ ಜನಾಂಗ ಭಾರತೀಯ ವಾಗಿ ಮರುಹುಟ್ಟು ಪಡೆಯುವಾಗ ಎದುರಾಗುವ ಸಂಕಷ್ಟಗಳನ್ನು ಕವಿ ಸೂಕ್ಷ್ಮವಾಗಿ ಗುರುತಿಸಿದ್ದಾನೆ :

ನಿಮ್ಮಡೊನಿದ್ದು ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ ಈ ನೆಲದಲ್ಲೇ ಬೇರೊತ್ತಿದರೂ ಬೀಗಿ
ಪರಕೀಯನಾಗಿ
ತಲೆಯೆತ್ತುವದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

o o o

ಒಳಗೊಳಗೆ ಬೇರು ಕೊಯ್ದು
ಲೋಕದೆದುರಲ್ಲಿ ನೀರು ಹೊಯ್ದು
ಗೊತ್ತಿಲ್ಲದಂತೆ ನಟಿಸಿ
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಚಕಾರವೆತ್ತದೆ ನಿಮ್ಮೊಡನೆ ಕಾಫಿ ಹೀರಿ ಪೇಪರೋದಿ ಹರಟಿ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ

ಒಂದು ಜನಾಂಗವನ್ನೆ ಅಕಾರಣ ಸಂಶಯದಿಂದ ಕಾಣುವ, ಒಪ್ಪಿಕೊಳ್ಳದ, ರಾಷ್ಟ್ರೀಯತೆಯನ್ನೆ ಶಂಕಿಸುವ ಮತ್ತೊಂದು ಜನಾಂಗದ ಅನೌದಾರ್ಯ ಬೆನ್ನಲ್ಲಿ ಇರಿಯುತ್ತದೆ :

ನಿಮ್ಮ ಕುಡಿತ ಕುಣಿತ ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆನಿಮ್ಮತ್ತ

ಎನ್ನುವಲ್ಲಿ ಇನ್ನೊಂದು ಜನಾಂಗದ ಅನೈತಿಕ ಭ್ರಷ್ಟ ಶಕ್ತಿಯಿಂದ ತನ್ನನ್ನು ರಕ್ಷಿಸಿಕೊಂಡ ಧನ್ಯತೆಯೂ ತನ್ನ ಶೌಚದ ಬಗ್ಗೆ ಅಭಿಮಾನವೂ ವ್ಯಕ್ತವಾಗಿದೆ. ಆದರೆ ಇಲ್ಲಿನ ಶೋಧ ತಲಸ್ಪರ್ಶಿಯಾಗಿಲ್ಲ. ಈ ಸಮಸ್ಯೆಯ ಬೇರೆ ಮಗ್ಗಲುಗಳನ್ನು ಕಾಣುವ ಪ್ರಯತ್ನವಿಲ್ಲ. ಅಲ್ಪ ಸಂಖ್ಯಾತರ ಪೂರ್ವಾಗ್ರಹಗಳು, ರಾಷ್ಟ್ರೀಯತೆ ಸಮಾನಾಂತರ ವಾಗಿ ನಿಂತ ಮತೀಯ ಪ್ರತ್ಯೇಕತೆಯಿಂದಾಗಿ ಸಾಮೂಹಿಕ ಪ್ರವಾಹದಲ್ಲಿ ಬೆರೆಯುವ ಸಂಕೋಚ ಇವು ಕವಿಯ ಪೂರ್ಣದೃಷ್ಟಿಗೆ ಗೋಚರವಾಗಿದ್ದರೆ, ಕವನಕ್ಕೆ ಮತ್ತಷ್ಟು ಆಯಾಮಗಳು ಕೂಡಿಕೊಳ್ಳುತ್ತಿದ್ದವು.

'ಅಮ್ಮ, ಆಚಾರ, ನಾನು'–ಒಂದು ಕಥನ ಕವನದಂತಿದೆ. ಪಾಸ್ತ್ರಿಯವರ ನವರಾತ್ರಿಯ ರಚನೆಗಳನ್ನು ನೆನಪಿಗೆ ತರುವಂತಿದೆ. ಇಲ್ಲಿ ಕಾವ್ಯಾಂಶ ಗೌಣ. ಭಾವಾ ಗೀತಾತ್ಮತೆಯೂ ಇಲ್ಲ. ಒಂದು ಪ್ರಸಂಗವನ್ನು ಕುತೂಹಲಕರವಾಗಿ ನಿರೂಪಿಸುವುದು ಇದರ ಉದ್ದೇಶ. ಡಬಲ್ ಪದವೀಧರೆಯಾದ ತನ್ನ ಮಡದಿ ತೋಳಿಲ್ಲದ ರವಿಕೆ, ಕಾಲಿಗೆ ಹೈಹೀಲ್ಡುಕೆರ, ಚಿನ್ನದ ಸರ, ಉಂಗುರ, ಲಿಪ್‌ಸ್ಟಿಕ್-ಹೀಗೆ ಅಲಂಕೃತಳಾಗಿ

'ಬಂದೆ ತಡೆಯಿರಿ' ಎಂದು ಒಳಗೋಡಿ
ಬಂದು 'ನಡೆಯಿರಿ' ಎಂದಾಗ
ತಲೆಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ

ಸಂಪ್ರದಾಯ ಆಚಾರ ಎಷ್ಟು ಬಲವತ್ತರವಾದುದೆಂಬುದನ್ನು ಕುತೂಹಲಕರ ಆಕರ್ಷಕ ಶೈಲಿಯಲ್ಲಿ ನಿರೂಪಿಸಿದ್ದಾರೆ. ಕವನದ ಕೊನೆಯ ಸಾಲಷ್ಟೆ ತಿರುಳು. 'ನಮ್ಮಮ್ಮನ ಬುರ್ಖಾ' ಎಂಬ ಮಾತಿನಲ್ಲಿನ ಅರ್ಥಪ್ರಪಂಚ ಕವನದ ಜಾಳು ಜಾಳು ರಚನೆಯ ಮೇಲೆ ಝಗ್ಗನೆ ಬೆಳಕು ಚೆಲ್ಲುತ್ತದೆ. ಈ ಕವನವನ್ನು ಓದಿದಾಗ ನಿಸಾರ್ ಹೇಗೆ ಕವನ ಕಟ್ಟುವುದರಲ್ಲಿ ತಲ್ಲೀನವಾಗಿ ಖುಷಿಯಾಗಿ ಮೆರೆಯುತ್ತಾರೆ ಎಂದು ಆಶ್ಚರ್ಯ ವಾಗುತ್ತದೆ. ನವೋದಯ ಕವಿಗಳಲ್ಲಿ ಇಂಥ ರಚನೆಗಳು ಹೇರಳವಾಗಿ ಸಿಗುತ್ತವೆ. ಎರಡು ಪ್ರಧಾನ ಸಾಂಸ್ಕೃತಿಕ ಪರಂಪರೆಯ ಮುಖಾ ಮುಖಿಯಿಂದ ಇವರ ಕಾವ್ಯ ಪಡೆದುಕೊಳ್ಳಬಹುದಾದ ಶಕ್ತಿ ಸಂಚಯವನ್ನು ನಿರೀಕ್ಷಿಸಿದ್ದವರಿಗೆ ತೀವ್ರ ನಿರಾಶೆ ಯಾಗುತ್ತದೆ.

೫

ನಿಸಾರರ 'ಪ್ರಾಗ್ಬಂಧಗಳು' ಒಂದು ಸಾರ್ಥಕವಾದ ಗಂಭೀರ ಕವನ. ಜೀವ ಕ್ಕಂಟಿದ ಆದಿ ಮಾದರಿಯ ಈ ಪ್ರಾಗ್ಬಂಧಗಳ ಸ್ವರೂಪ ಪ್ರಭಾವಗಳನ್ನು ಕವಿ ಅಗೆದು ನೋಡಿದ್ದಾನೆ. ಇಲ್ಲಿ ಮನುಕುಲದ ವಾಸನಾವಾಹಿನಿ ಜೀವದ ಹೊಸ ನಮೂನೆ ಗಳಲ್ಲಿಯೂ ಜೀವಂತವಾಗಿದ್ದು ಅವಕ್ಕೆ ಸವಾಲೊಡ್ಡುವುದನ್ನು ಕವಿ ದಿಗ್ಭ್ರಾಂತಿಯಿಂದ ದೃಷ್ಟಿಸುತ್ತಾನೆ. ಇಲ್ಲಿನ ತಾತ್ವಿಕ ವಿವೇಚನೆ ಪ್ರತಿಮಾ ರೂಪದಲ್ಲಿ ಕವನದಲ್ಲಿ ಆಕೃತಿ ಗೊಳ್ಳುತ್ತದೆ.

ಎಲ್ಲಿರುತ್ತವೊ ಕಾಣೆ
ಅಂಥವು ಇಂಥವು ಎನ್ನಲುಂ ಬಾರದವು
ತಮ್ಮ ಶಬ್ದ ಚಲನೆ, ನನ್ನ ಮನದ ಭಯದೊಡನೆ
ಸ್ವಸ್ಥಾಪಿಸಿಕೊಳ್ಳುವುವು.

ಅನೇಕ ಸ್ತರಗಳಲ್ಲಿ ಅರ್ಥಸ್ತರಗಳನ್ನು ಮಿಡಿಯುತ್ತಾ ವ್ಯಾಪಕವಾಗಿ ಬೆಳೆಯುವ ಕವನ ಇದು.

ಕೈಕಾಲು ಕಿವಿನಾಲಗೆ ಖೋತ ಆದುವಕ್ಕೆ, ಅಥವ
ಪ್ರಕೃತಿಯಿಂದ ಮೊಟಕಿಸಿಕೊಂಡವಕ್ಕೆ
ಅಳುನಗುವಿಲ್ಲ–ಸುಖ ದುಃಖ ಹೇಗೆ ತೋಡಿಕೊಂಡಾವು ?

*   *   *

ಸೃಷ್ಟಿಯ ಅಕ್ಷರಾಭ್ಯಾಸದ ಜೀವದೆರಕಗಳು
ಆದಿಮಾದರಿಗಳು ; ಅಮಾನವ ಲೋಕದ ಅರಸರು
ಪೌರಾಣಿಕ ಗಾತ್ರದಲ್ಲೇ ಧ್ವನ್ಯರ್ಥಿಸಿಕೊಳ್ಳುವಂಥವು

*   *   *

ಪೂಜಿಸಿಕೊಳ್ಳುತ್ತವೆ ಧರ್ಮವಿಲ್ಲದವು
ಸಂಕೇತಿಸಿಕೊಳ್ಳುತ್ತವೆ ಅರ್ಥವಿಲ್ಲದವು.

*   *   *

ನಿಗೂಢತೆಯ ದೇಹಿಸಿಕೊಂಡು
ಕಕ್ಕಾಬಿಕ್ಕಿಗೊಳಿಸುವ ಇವು
ಸ್ವಪ್ರಯತ್ನಿಸದೆ ಕಾಲ ನಿಸರ್ಗಗಳ ಮರ್ಜಿಹಿಡಿದು
ಇಷ್ಟಿಷ್ಟೆ ಇಷ್ಟಿಷ್ಟೆ ಹೆತ್ತಲು ಹೆಣಗುತ್ತವೆ.

*   *   *

ಕತ್ತಲೊಂದಿಗೆ ಆಕೃತಿಸಿಕೊಳ್ಳುವ ವಿಕೃತಿಗಳು
ಜೀವಕ್ಕಂಟಿದ ಪ್ರಾಗ್ಬಂಧಗಳು

ಈ ಕವನದ ಬಹುಭಾಗವನ್ನು ಉಲ್ಲೇಖಿಸಿರುವ ಕಾರಣ ಕವನ ಅನಿವಾರ್ಯವೆಂಬಂಥ ಬಿಗಿರಚನೆಯನ್ನು ಪಡೆದಿರುವುದರಿಂದ.

ಮಾನವ ಮನಸ್ಸಿನ ವಿಲಕ್ಷಣ ರಚನೆಯಲ್ಲಿ, ಸಂಯೋಗದಲ್ಲಿ. ವೈಯುಕ್ತಿಕತೆ ಯುಗಧರ್ಮದ ಬಣ್ಣ, ಸಾಮಾಜಿಕ ಋಣ, ಅನಾದಿ ಭೂತದ ದುರ್ದಮ್ಯ. ಅದೃಶ್ಯ ಅತಾರ್ಕಿಕವಾದ 'ಕತ್ತಲೊಂದಿಗೆ ಆಕೃತಿಗೊಳ್ಳುವ ವಿಕೃತಿ"ಗಳನ್ನು ಸುಲಿದು ಸುಲಿದು, ಹೆಕ್ಕಿ ಹೆಕ್ಕಿ ಶೋಧಿಸಲಾಗಿದೆ. ತೀರ ಪ್ರೌಢವೆನ್ನಬಹುದಾದ ಇಲ್ಲಿನ ಚಿಂತನ ಕ್ರಮ ಸಾರ್ವತ್ರಿಕತೆಯನ್ನು ಸಾರ್ವಕಾಲಿಕತೆಯನ್ನು ಅಪ್ಪುತ್ತದೆ. ಈ ಕವನ ನಿಸಾರರ ಪ್ರತಿಭಾ ಶಕ್ತಿಯ ದ್ಯೋತಕವಾಗಿದೆ. ಚಿಂತನ ಒಂದು ಗಂಭೀರ ವಿಷಯವಾದಾಗ, ಅದು ಕವನದಲ್ಲಿ ಹರಳುಗಟ್ಟುವಾಗ, ಪ್ರಾಸಪ್ರಿಯತೆಗೆ, ಶಬ್ದ ವ್ಯಾಮೋಹಕ್ಕೆ ಆಸ್ಪದವೇ ದೊರೆಯುದಿಲ್ಲ.

"ಮೃಗಾಯಣ" ಒಂದು ಅಪೂರ್ವ ಕವನ. ಅಂದರೆ ಅನೇಕ ಕವಿಗಳಿಗೆ ರೆಡಿಮೇಡಾಗಿ ಸಿಗುವ ವಸ್ತುವಲ್ಲ. ಆ ಅಪೂರ್ವತೆಯೆ ಇದಕ್ಕೊಂದು ಅರ್ಥಮಹತ್ವ ವನ್ನು ತೆರುತ್ತದೆ. ಎರಡನೆಯದಾಗಿ ಕವನದ ಪರಿಸರದಿಂದಲೇ ಭಾಷೆ ಪುಟಿದು ಪ್ರಭಾವಳಿಯನ್ನು ರಚಿಸುತ್ತದೆ.

'ಶಿಕಾರಿ ಹನೀಫ್ ಸಾಹೇಬರು ಮೊನ್ನೆ ಸತ್ತರಂತೆ' ಎಂದು ಮರಣ ಶಾಸನ ದಿಂದ ಪ್ರಾರಂಭವಾಗುವ ಕವನ, ನಿರ್ಜೀವ ಪ್ರಾಣಿಗಳು ಅವರ ಸಂಗ್ರಹಾಲಯುದಲ್ಲಿ,

ಮುಖಮಲ್ಲಿನಲ್ಲಿ ನೆಲೆಗೊಂಡಿವೆ–ಅನೈಸರ್ಗಿಕವಾಗಿ
ನಿಸರ್ಗದ ಖಂಡಿತ ಸಾಕ್ಷ್ಯಗಳು

o o o

ತಮ್ಮ ಹುಟ್ಟು ಅಸ್ತಿತ್ವವನ್ನು
ಮೃತ್ಯು ಮುಖೇನ ಗಳಿಸಿದ ಅಪೂರ್ವ ಪೋಸುಗಳಿಂದ
ಪ್ರಮಾಣಿಸಿಕೊಂಡಿವೆ ; ಪೂರ್ಣವಾಗಿವೆ

o o o

ಹನೀಫ್ ಸಾಹೇಬರು

ಆರೂವರಡಿಯ ಕೊತ್ತಿಗಣ್ಣಿನ ಪಠಾಣದೈತ್ಯ
ತಮ್ಮ ಈ ಸ್ವಯಾರ್ಜಿತ ಸಂಪತ್ತಿನ ನಡುವೆ ರಾತ್ರಿವೇಳೆ
ಒಂದೊಂದರ ಗೋತ್ರ, ಮೊಕ್ಕಾಂ. ಮೊಕಾಬಿಲೆ
ಫಲಾನೆ ಮಿಗಕೆ ಶಿಕಾರಿಮುಂಚಿನ ತಯಾರಿ

o o o

'ಯಾವತ್ತೂ ನಾನು ಸಾಯುವುದು ಪ್ರಾಣಿಯಿಂದಲೆ'–ಎಂದು ಜೋರಾಗಿ ನಕ್ಕಿದ್ದರಂತೆ, ಅಂಥ ಸಾಹೇಬರು.

ಸಾವು ಸದಾ ಸಂಗಾತಿಯಾದ
ಹನೀಫ್ ಸಾಹೇಬರು ತಮ್ಮ ಬಲಿಗಳ ತಬ್ಬಲಿಗೊಳಿಸಿ
ಮೊನ್ನೆ ಶುಕ್ರವಾರ ಸತ್ತರಂತೆ
ಮುದಿ ಎಮ್ಮೆ ಕಟ್ಟಲು ಹೋಗಿ ಅದು ಒದರಿ, ಏರಿನಿಂದ ಬಿದ್ದು
ಅವರ ಭವಿಷ್ಯದ್ವಾಚನ ನಿಜವಾಯಿತಲ್ಲ.

o o o

ಮುಕ್ತಾಯದ ಆಕಸ್ಮಿಕ ತಿರುವು ಬದುಕಿನ ನಿಗೂಢತೆಯನ್ನು, ಅರ್ಥೈಸಲಾರದ ಗೋಜಲನ್ನು ವ್ಯಂಗ್ಯವನ್ನು ಧುತ್ತನೆ ರಾಚುತ್ತದೆ.

ರಾಜಕೀಯ ವಿಡಂಬನೆಗಳಲ್ಲಿ 'ಶ್ರೀಸಾಮಾನ್ಯನ ಪ್ರತಿನಿಧಿ', 'ರಾಜ್ಯೋತ್ಸವ', 'ಕುರಿಗಳು ಸಾರ್‌ಕುರಿಗಳು' ಪ್ರಮುಖವಾದುವು. ನಿಸಾರರಿಗೆ ಜನಪ್ರಿಯತೆಯನ್ನು ತಂದುಕೊಟ್ಟ 'ಕುರಿಗಳು....' ಕವನವನ್ನು ಈ ವರ್ಗದ ಪ್ರಾತಿನಿಧಿಕ ಕವನವೆಂದು ಪರಿಗಣಿಸಬಹುದು.

ಸಂಗ್ರಹಕ್ಕಿಂತಲು ವಿವರಣೆಯು ಕಡೆ, ಸೂಚ್ಯಕ್ಕಿಂತಲು ವಾಚ್ಯದ ಕಡೆಗೆ ವಾಲುವ ಈ ಕವನ ಅನೇಕ ದೃಷ್ಟಿಯಿಂದ ನಿಸಾರರ ಕವಿ ಮನೋಧರ್ಮದ ಪ್ರಾತಿನಿಧಿಕ ಕವನವೂ ಹೌದು. ಇಲ್ಲಿನ ವಿಡಂಬನೆ, ವ್ಯಂಗ್ಯ ಅವರ ಒಂದು ಪ್ರಬಲ ಅಸ್ತ್ರವೇ !

ಕುರಿಗಳು ಸಾರ್ ಕುರಿಗಳು
ಸಾಗಿದ್ದೇ
ಗುರಿಗಳು...

ಎಂದು ಪ್ರಾರಂಭವಾಗುವ ಕವಿತೆ ತನ್ನ ಆಕರ್ಷಕ ಶೈಲಿಯಿಂದ ರಂಜಿಸುತ್ತ

'ಅಂಡಲೆಯುವ ನಾವು ನೀವು' ಎಂದಾಗಲೂ ನಾವು ಬೆಚ್ಚಿಬೀಳದೆ ಒಪ್ಪಿಕೊಳ್ಳುತ್ತೇವೆ.

ಹೇಗೆ ಹೇಗೊ ಏಗುತ್ತಿರುವ
ಬರಿ ಕಿರುಚಿ ರೇಗುತ್ತಿರುವ
ನೊಣ ಕೂತರೆ ಬಾಗುತಿರುವ
ಶಿನದಿದ್ದರೂ ತೇಗುತಿರುವ
ಅವರು ಇವರು ನಾವುಗಳು
ಕುರಿಗಳು ಸಾರ್ ಕುರಿಗಳು

ಎಂದಾಗ ಒಂದು ಹಿತವಾದ ತೃಪ್ತಿಯಾಗುತ್ತದೆ. ಇಡೀ ಸಮಾಜವೇ ಈ ಅನಿವಾರ್ಯತೆಯನ್ನು ಒಪ್ಪಿಕೊಂಡಿರುವಲ್ಲಿ ನಾನು ಒಬ್ಬ ಅಂಥವ ಎಂಬ ಸಮಾಧಾನಕ್ಕೆ ದಾರಿಯಾಗುತ್ತದೆ.

ಮೆದುಳಿನ ತಗ್ಗೆತ್ತರ
ಹಿರಿದು ಕಿರಿದು ಮಣಿಯಿಂಸಿ

o o o

ಕೆಂಬಣ್ಣನವನೊಡಪೂಸಿ"

ಮೇಧಾವಿಗಳನ್ನೂ ದಡ್ಡರನ್ನೂ ಸಾಮಾನ್ಯರನ್ನೂ ಸಮೀಕರಿಸಿ ಬಲಿಪಶುಮಾಡಿದ್ದಾರೆ

ನಮ್ಮ ಕಾಯ್ವ ಕುರುಬರು
ಪುಟಗೋಸಿಯ ಮೊನ್ನೆತಾನೆ ಕಿತ್ತು ಪಂಚೆಯುಟ್ಟವರು

o o o

ಜಮಾಬಂದಿ ಗಮುಲ್ದಾರ ಬರಲು ನಮ್ಮೊಳೊಬ್ಬನನ್ನ
ಮೆಚ್ಚಿ, ಮಸೆದ ಮಚ್ಚಿ ಹಿರಿದು ಕಚಕ್ಕೆಂದು ಕೊಚ್ಚಿಕತ್ತ
ಬಿರಿಯಾನಿಯು ಮೆಹರುಬಾನಿ ಮಾಡಿ ಕೈಯ ಜೋಡಿಸುತ್ತ

o o o

ಈ ಘಟನೆಯ ಚಿತ್ರವತ್ತಾದ ವರ್ಣನೆ ರಂಜನೀಯ. ಕುರಿಗಳು ಎಂಬ ಪ್ರತೀಕ ದೃಢವಾಗಿ ಕವನದುದ್ದಕ್ಕೂ ವ್ಯಾಪಿಸಿರುವುದರಿಂದ, ಕುರುಬರು, ಬಿರಿಯಾನಿ ಎಲ್ಲವೂ ಸಾರ್ಥವಾಗುತ್ತವೆ. ಆದರೆ ಪ್ರತೀಕವನ್ನು ಅತಿಯಾಗಿ ಜಗ್ಗಿದಾಗ ಅನರ್ಥ ಪರಂಪರೆಗೂ ದಾರಿಯಾಗುತ್ತದೆ. ಸಿಂಹಗಳನ್ನು ಯಾರೂ ಕುರಿಗಳನ್ನಾಗಿ ಮಾಡಿಲ್ಲ ; ಇವು ಜನ್ಮತಃ ಕುರಿಗಳು ಈ ಅಸಹಾಯಕತೆ, ಅನಿವಾರ್ಯ ದೌರ್ಬಲ್ಯ ಪೂರ್ವಾರ್ಜಿತ ಕರ್ಮದಂತೆ ದುರ್ಲಂಘನೀಯ. ಕೇವಲ ಪರಿತಾಪಪಡುವ, ಹಂಬಲಿಸುವ ಪಶ್ಚಾತ್ತಾಪ ಪಾತ್ರವಾಗುವ ಸ್ಥಿತಿಯಾಗುತ್ತದೆ.

'ನಮ್ಮ ಮೈಯ ತುಪ್ಪಟವರವಷ್ಟು ಬಿಡದ ಹಾಗೆ' ಎಂಬಲ್ಲಿ

ಮತ್ತೆ'

'ನಾವು ಬ್ಯಾ ಬ್ಯಾ ಎಂದೆಂ ಬಾಯಿ ಬಾಯಿ ಬಡಿದುಕೊಂಡೆಂ'

ಎಂದಾಗ,

'ನಮ್ಮ ಮುಂದೆ ಕುರಿಯ ಸುಲಿದು ಆಚೆಅಲ್ಲಿ ಉಪ್ಪುಸವರಿ
ಒಣಗಲಿಟ್ಟ ಹಸಿತೊಗಲಿನ ಬಿಸಿಬಿಸಿ ಹಟೆ ವಾಸನೆ'

ಈ ವರ್ಣನೆ ಕುರಿಯನ್ನೆ, ಕುರಿಯಪಾಡನ್ನೆ ಇನ್ನೂ ಯಾವ ಧ್ವನಿಗೂ ಆಸ್ಪದವಾಗುವಂತೆ ಸೂಚಿಸುತ್ತದೆ.

O O O

ತಳವೂರಿದ ಕುರುಬ ಕಟುಕನಾದ ; ಅವನ ಮಚ್ಚೊ ಆಹ !
ಏನು ಯಳಪು ಏನು ಝುಳಪು ಏನು ಜಾದು ಏನು ಮೋಹ !

O O O

ಕುರಿಗಳ ಅಸ್ತವ್ಯಸ್ತತೆ, ಅಸಹಾಯಕತೆ, ದೈನ್ಯ, ಅಪ್ರಯತ್ನ, ಕುರುಬರ ಸ್ವಾರ್ಥ ಕ್ರೌರ್ಯ ವಂಚನೆಗಳೂ ಚಿತ್ರಮಯವಾಗಿ ಬಿತ್ತರಗೊಂಡಿದೆ. ನಿಜ. ಕುರಿವೇಷ ಧರಿಸಿದರೂ ಹುಲಿಯಾಗಲಾರದೆಂಬ ಧ್ರುವಸತ್ಯ, ಅವು 'ಜಾತಿ' ಮಿತಿಯನ್ನು ಉಲ್ಲಂಘಿಸಲಾರದೆಂಬ ಕಟುವಾಸ್ತವತೆ, ಪ್ರತಿಮೆಯನ್ನು ಅವಲಂಬಿಸಿ ಕುರಿಯ ಆತ್ಮವೃತ್ತವೋ ಎಂಬಂತೆ ವಿವರಗಳಲ್ಲಿ ಕಾಣಿಸಿದ್ದರಿಂದ ಬಲಿಯಾಗಿ, ಮಾಂಸವಾಗಿ, ತುಪ್ಪಟವಾಗಿ ಉಪಯೋಗವಾಗುವುದೆ ಅದರ ಪರಮಾರ್ಥವೆಂಬ ಸೂಚನೆ ಹೊರಡುತ್ತದೆ, ಕವನ ಹೊರಟಲ್ಲಿಗೆ ಹೊರಳುತ್ತದೆ. ಸ್ಥಿತ್ಯಂತರಕ್ಕೆ ಕುಡಿಯುವ ಆಶಯದಿಂದ ಆರಂಭವಾದ ಕವನ ರೂಪಕವನ್ನು ಅತಿ ಓಂಜಿದ್ದರಿಂದ ಹೀಗೆ ವಿಫಲವಾಗಿದೆ. ಆದರೆ ಕವನವಾಗಿ ಹೀಗೆ ಶಿಥಿಲವೂ ಛಿದ್ರವಿಚ್ಛಿದ್ರವೂ ಆಗಿರುವ ಈ ರಚನೆ ಜನಪ್ರಿಯ ಹಾಡಾಗಿ ಚಲಾವಣೆಯಲ್ಲಿರುವುದೊಂದು ಸೋಜಿಗ.

'ಮುದುಕ' ಇದರಲ್ಲಿ ಬದುಕಿನ ಸಮೀಕ್ಷೆ, ಅನ್ವೇಷಣೆ ಜೀವಪಸುಂಜೆಯಲ್ಲಿ ನಿಂತವನ ನೆಪದಲ್ಲಿ ನಡೆದಿದೆ. ಗತನೆಸಪಿನೊಡನೆ ಸದ್ಯದ ವಾಸ್ತವತೆ, ಯೌವ್ವನದ ಆದರ್ಶಗಳು, ಮಣ್ಣುಪಾಲಾದ ಯೋಜನೆಗಳು:

ವೀರನಾದರೂ ಒಮ್ಮೆ ಹೇಡಿಯಾಗಲೇಬೇಕು
ಮುರಿದು ಬಿದ್ದರೆ ಕತ್ತಿರಂಗದಲ್ಲಿ
ಎತ್ತರೆತ್ತರದಲ್ಲಿ ರೆಕ್ಕೆಬಡಿಯುವ ಹದ್ದು
ಕೊನೆಗು ನೆಲಸಲೆ ಬೇಕು ಭೂಮಿಯಲಿ

೦ ೦ ೦

ಪೂರ್ತಿಸುಟ್ಟರೂ ತನ್ನ ನಿಜರೂಪ ಬಿಡನೆನುವ ಹಗ್ಗವಿದು ಈ ಆಶೆ

೦ ೦ ೦

ಇದು ಯಾರ ಮನೆಯುದೊ ಬೆಕ್ಕು
ಬಂದಡುಗೆ ಮನೆಯಲ್ಲಿ ಸ್ಥಾಪಿಸಿದೆ ಹಕ್ಕು

೦ ೦ ೦

ಎಷ್ಟು ಅಪ್ಪಿದರೇನು ತೊಗಲ ತೊರೆಯದು ದೆವ್ವ

೦ ೦ ೦

ಈ ಶಿಖಂಡಿಗೆ ಇನ್ನು ಮನೆಯ ಮೋಹ'

೦ ೦ ೦

ಮಣ್ಣೆನಪ್ಪಿದ ಮೈಯ ಕೀಳಬೇಕು

ಹೀಗೆ ಪ್ರತಿಮೆ ರೂಪಕಗಳನ್ನು ಸಾಲುಸಾಲಾಗಿ ಮೆರೆಸುವ ಈ ಕವನದಲ್ಲಿ ನಿಸಾರರ ಕಾವ್ಯಶಕ್ತಿಯನ್ನು ಅದರ ಮಾಂತ್ರಿಕತೆಯನ್ನು ಕಂಡು ಬೆರಗಾದರೂ ಅನೇಕಸಲ ಅದು ದುಂದುಗಾರಿಕೆಯಾಗಿ ವ್ಯರ್ಥವಾಗಿರುವುದೂ ನಿಜ.

ಇದು ಚಂದ್ರಗುಪ್ತನ ನಾಣ್ಯ
ಪ್ರಾಚ್ಯಸಂಗ್ರಹ ಶಾಲೆಗೊಂದೆಯೋಗ್ಯ
ಅದಕಿಲ್ಲ ಇನ್ನೆಂದು ನಿತ್ಯ ಬಳಕೆಯ ಭಾಗ್ಯ

ಮೊದಲ ಸಾಲಿಗೆ ನಿಲ್ಲಬೇಕಾದ ಕವನ ಮತ್ತೆರಡು ಸಾಲುಗಳನ್ನು ಹೇರಿಕೊಳ್ಳುತ್ತದೆ, ಅಲ್ಲಿಗೂ ನಿಲ್ಲದೆ,

ಮುಂದಂಕ :

ಅಸ್ಥಿ ಮಹಾತ್ಮರ ಬಂಡವಾಳವಷ್ಟೇ ಅಸ್ತಿ
ಆದರೂ ನೂಕಿರುವ ಬದುಕ ಸರಕ'

ಎಂದು ಮುಂದುವರಿಯುತ್ತದೆ. ಆದರೂ ವೃದ್ಧಾಪ್ಯದ ನೆಲೆಯಲ್ಲಿ ಬದುಕಿನ ಒಳಸುಳಿಗಳನ್ನು ಗೋಜಲನ್ನು ಬಿಡಿಸುವ, ಅರ್ಥೈಸುವ ಕವನದ ಆಶಯವೇ ಅದಕ್ಕೆ ಮಹತ್ವವನ್ನು ಕೊಟ್ಟಿದೆ.

'ಇಪ್ಪತ್ತನೆಯ ಶತಮಾನದ ಕೊಲಂಬಸ್'–ಅದರ ಹೆಸರೆ ಸೂಚಿಸುವಂತೆ ನವಮಾನವನ ಮಾನಸಿಕ ಬೌದ್ಧಿಕ ಸಹಾಸವನ್ನು ಕುರಿತದ್ದು. ತನ್ನ ಅಸಾಮರ್ಥ್ಯದ ಬಗ್ಗೆ ಲೇವಡಿಯ ಧ್ವನಿಯೂ ಇದೆ.

ನಾನು–

ದಿಗ್ದಿಗಂತದ ಬೆಳ್ಳಿಗೆರೆಗೆ ಆಶಿಸಿದವನು

o o o

ಎತ್ತರೆತ್ತರಕೆಸದ ಕಲ್ಲು ನಾನು
ಮಣ್ಣಿನಂಟಿಗೆ ಹೇಸಿ ತಾರೆಗಳ ಗೆಳೆತನವ ಬಯಸಿದವನು

o o o

ಸಾಮಾನ್ಯನೇ ನಾನು? ಸಹರದಾಚೆಯ ರಾಯಭಾರಿ, ಸರದಾರ
ಕಡಲ ಬೆನ್ನಸವಾರ

o o o

ನಾನಿಷ್ಟೆ ಲೋಕಕ್ಕೆ
ತೇದಂತೆ ಕರಗುವ ಗಂಧದೊಂದು ಚಕ್ಕೆ.

ಇದ್ದುದರಲ್ಲಿ ತನ್ನ ಬದುಕು ವ್ಯರ್ಥವಾಗದೆ, ಉಪಯುಕ್ತವಾಯಿತೆಂಬ ತೃಪ್ತಿಯಲ್ಲಿ ಕವನ ಮುಗಿಯುತ್ತದೆ.

ಹಾಗೆಯೇ ಮತ್ತೊಂದು ಕವನದಲ್ಲಿ ಭಾರತ ದೇಶವನ್ನು ಕುರಿತು:

ಅತಿಸನಾತನ ನಿನ್ನ ತಲೆಮಾರ ಚಾರಿತ್ರ್ಯ
ನಿನ್ನಲ್ಲಿ ಜನಿಸಿದುದೆ ನನಗೆ ಮಾನ

ಎಂದು ಧನ್ಯತೆಯನ್ನು ವ್ಯಕ್ತಪಡಿಸುವಲ್ಲಿ, 'ಆತ್ಮ ಶೋಧ'ದಲ್ಲಿ

ಕಡಲ ಜೊತೆ ಮೈ ಬೆಸದ ನೂರಾರು ಹೊಳೆಗಳಲಿ ಯಾವ ನೆಲೆಯೋ
ಅಂಬೆಗಾಲಿನ ಯಾವ ಹಸುಳೆ ಅಲೆಯೋ

'ಗೋಜು ಗೋಜಲಿನಲಿ ಯಾವ ಎಳೆಯೊ'ಎಂದು ತನ್ನ ದನಿಯಲ್ಲಿ ಅರಸುವಲ್ಲಿ ಹಂಬಲಿಸುತ್ತಾನೆ.

'ಮರುಗುವೆನು ಎಲೆ ಚೆಲುವೆ' ಎಂಬ ಸಾಮಾನ್ಯ ಕವಿತೆಯಲ್ಲಿ, ಹೆಣ್ಣೊಬ್ಬಳ ದುರಂತ ಚಿತ್ರಣವಿದೆ. ಹೆಣ್ಣಿನ ಸೌಂದರ್ಯ ಅನಾದಿ ಕಾವ್ಯವಸ್ತು. ಅದು ಯಾವ ಕವಿಯ ಒಳಗನ್ನು ತಟ್ಟಿ ಕುಣಿಸುವುದಿಲ್ಲ.

ನಿಸಾರರ 'ಮನೋರಮಾ' ಉತ್ಸಾಹದಿಂದ ಪುಟಿಯುವ ಕವನ

ಮನೋರಮಾ ಮನೋರಮಾ
ಸಾಲದೇನೆ ನಿನ್ನ ಹೆಸರೆ ? ಮಲಗೋಬದ ಗಮಗಮ
ತಂಟಿಯಂನಗಲಿಸಿ ನಕ್ಕ
ಮುಂಜಾವದ ಐದಕ್ಕೆ
ಮಿಂಚಾದವೆ ಕೆರೆಯಂಚಿಗೆ ಹಾಲಕ್ಕಿಯಂರೆಕ್ಕೆ ?

o o o

ನೀನಾಡುವ ಮಾತು
ಬಾಯಿಂಯಿಂದ ದೊಂಬ ತೆಗೆವ ತರಾವರಿಯ ಟೇಪು
ಬಾರಿನೆದರು ಮೆರೆವ ನಿಯಾನ್‌ಗೆರೆಯ ಜಾಹೀರಾತು

o o o

ಅಲಿಬಾಬ ನಾನು, ನಿನ್ನ ಗುಹೆಗೊ ಕದದ ಕಾವಲು
ತೊಗಲತುಂಬ ತೆವಲು ನಿನಗೆ ತೆಗೆಯೆ ಸಿಸೇಮ್ ಬಾಗಿಲು
ಬಾಚಬೇಕು, ದೋಚಬೇಕು ವಜ್ರ ವೈಡೂರ್ಯವ

o o o

ನೀನು ನನಗೆ ದೇಹವಲ್ಲ ; ಬರಿಹೆಸರ ವಿಭ್ರಮ
ಮನೋರಮಾ ಮನೋರಮಾ
ಬರಿಹೆಸರೆ ಸಾಕುಬಿಡು ಮಲಗೋಬದ ಗಮಗಮ

ಕವನದ ಧ್ವನಿ ಹೊಚ್ಚ ಹೊಸದು ; ಅದರ ನಡೆ ವಿಶಿಷ್ಟವಾಗಿ, ಇತರ ಕವನಗಳಿಂದ ಪ್ರತ್ಯೇಕ ನಿಲ್ಲುತ್ತದೆ. ಭಾವತೀವ್ರತೆಯಿಂದ ಕವನಕ್ಕೆ ಒಂದು ನಿರ್ದಿಷ್ಟ ಗುರಿಸಮೆಯುತ್ತದೆ. ಹೆಸರ ಮೋಹ ರಮ್ಯತೆಯಿಂದ ಆರಂಭವಾಗಿ ಸಾಕಾರವಾಗಿಯೂ ಹೆಸರಾಗಿ, ಮಲಗೋಬದ ಕಂಪಾಗಿ ಸುಳಿದು ಸುತ್ತುವ ಪರಿಯನ್ನು ಅತ್ಯಂತ ಸಮರ್ಥವಾದ ಶೈಲಿಯಲ್ಲಿ ಸೃಷ್ಟಿಸಿದ್ದಾರೆ. ಆದರೂ ಈ ಕವನದಲ್ಲಿ 'ಮನೋರಮಾ, ಮನೋರಮಾ ಆಗಬಾರದೇನೆ ಒಮ್ಮೆ ನಮ್ಮ ಮೈ ಸಮಾಗಮ ?' ಎಂಬಂಥ ಶವವಾಚ್ಯದ ದಡ್ಡಸಾಲಿಗೂ ಅವಕಾಶವಾಗಿದೆ. ಒಟ್ಟಿಗೆ ನಿಸಾರರ ಶಕ್ತಿಯನ್ನೂ ದೌರ್ಬಲ್ಯವನ್ನು ಕಾಣಿಸುವ ಕವನವಿದು.

'ತಿಂಗಳ ಕೊನೆ' 'ನಮ್ಮ ಬಡಾವಣೆಯ ಕಥೆ' 'ಗಾಂಧಿ ಬಜಾರಿನ ಸಂಜೆ' ಮೊದಲಾದ ಕವನಗಳಲ್ಲಿ ನಮ್ಮ ದೈನಂದಿನ ಬದುಕಿನ ಪ್ರಸಂಗಗಳಿಗೆ, ಸಮಸ್ಯೆಗಳಿಗೆ ಕವಿಯ ಲಕ್ಷ್ಯ ಹರಿದಿದೆ. ಇವು ಚಿಂತನ. ತಾತ್ವಿಕತೆ, ನಿಸರ್ಗಪ್ರೇಮವೇ ಮೊದಲಾದ ಮಾಮೂಲು ಕವನ ವಸ್ತುಗಳ ಜೊತೆಗೆ ನಿಂತನೆಲೆಯ ಪರಿಸರ ಪ್ರಜ್ಞೆಗೆ ಸಾಕ್ಷಿಗಳಾಗಿವೆ.

'ಗಾಂಧಿಬಜಾರು' ಎಂಬ ಪ್ರತಿಮೆಯಂತೂ ನಿಸಾರರ ಕೊಡುಗೆಯೇ ಆಗಿದೆ. ಅದನ್ನು ತಮ್ಮ ಕಾವ್ಯದಲ್ಲಿಯೇ ತಾವೇ ವಿಸ್ತರಿಸಿದ ಭಾವಸಂಪತ್ತಿನೊಡನೆ ಮತ್ತೆ ಮತ್ತೆ ಬಳಸಿ ಕೊಂಡಿದ್ದಾರೆ.

ಅವರ ಕಾವ್ಯರಾಶಿಯಲ್ಲಿ, ಅನೇಕ ಸಾರ್ಥಕ ಕವನಗಳೂ– 'ಪಂಜರದ ಗಿಣಿ 'ಮನೋರಮ', 'ಪ್ರಾಗ್ಬಂಧಗಳು', 'ಮುದುಕ', 'ಮಾಸ್ತಿ', 'ನಿಮ್ಮೊಡ ನಿದ್ದು ನಿಮ್ಮಂತಾಗದೆ' — ಅಲ್ಲಲ್ಲಿ ಮಿಂಚುವ ಪ್ರತಿಭೆಯ ಕಿಡಿಗಳು. ಅನೇಕ ಕಾವ್ಯವಾಗಿರು ಸಾಲುಗಳೊ ಕಾವ್ಯವನ್ನು ನೆನಪಿಸುವ ಸಾಲುಗಳೂ ಅವರ ಇತರ ಕವನಗಳಲ್ಲಿ ಯಥೇಚ್ಛವಾಗಿ ಸಿಗುತ್ತವೆ. 'ನಿತ್ಯೋತ್ಸವ'ದ ಕಲ್ಪನೆ, ಅವರ 'ಮಾರಕಪ್ರೀತಿ' ಯಲ್ಲಿನ ಮಲೆನಾಡ ವರ್ಣನೆಯಲ್ಲಿ ಕಾಣುವ ಹೊಸತನ, ಹೊಸದನಿ ಗಮನಾರ್ಹ,

ಬೆಟ್ಟಕ್ಕೊಂದು ಚಹರೆ, ಹೊಳೆಗೊಂದು ವ್ಯಕ್ತಿತ್ವ
ಮರಕ್ಕೊಂದು ಭಯ ತಂತಾನೆ ದಕ್ಕಿಸಿಕೊಂಡ
ಸವರಿದಷ್ಟು ಪಚ್ಚೆ, ಚೆಲ್ಲಿದಷ್ಟು ಮೋಡ
ಬಿಡಿಸಿದಷ್ಟು ವಿವಿಧ ವರ್ಣಗಳನ್ನಿಕ್ಕಿಸಿಕೊಂಡ
ನಿನ್ನ ಅಕ್ಷತ ಶಕ್ತಿ ...

ಎಂಬ ಗ್ರಹಿಕೆಯಲ್ಲಿ, ಮಲೆನಾಡನ್ನು ಕುವೆಂಪು ಅನಂತರದ ಕವಿಯೊಬ್ಬ ಹೊಸ ಕಣ್ಣಿನಿಂದ, ಹೊಸಮಾತಿನಿಂದ ಕಂಡು ಕಾಣಿಸುತ್ತಿದ್ದೇನೆ ಎಂಬ ಅನುಮಾನ ಬರುವಂತಿದೆ.

ಆಯ್ಕೆ ಮಾಡಿಕೊಂಡ ಕೃತಿಗಳ ಪಟ್ಟಿ

ಕೃತಿ	ಕೃತಿಕಾರರು
1. ಸಂಕ್ರಾಂತಿ	ಲಂಕೇಶ್
2. ಬದಲಾವಣೆ	ಭಗವಾನ್
3. ಕಾವ್ಯ ಬಂತು ಬೀದಿಗೆ	ರಮಜಾನ ದರ್ಗಾ
4. ಅಮೃತ ಮತ್ತು ಗರುಡ	ಡಾ|| ಡಿ. ಆರ್. ನಾಗರಾಜ್
5. ನಂದಿಕೋಲು	ಎ. ಕೆ. ರಾಮೇಶ್ವರ
6. ಇಂಗ್ಲಿಷ್ ಕನ್ನಡ ವೈದ್ಯಪದಕೋಶ	ಡಾ|| ಡಿ. ಎಸ್. ಶಿವಪ್ಪ
7. ಮಹಾಪುರಾಣ	ಶಾಂತಿರಾಜ ಶಾಸ್ತ್ರಿ
8. ಲಿಂಗನಕುಡಿ	ಮಹಾನು
9. ಆಮೆ	ಎಚ್. ಎಂ. ಚನ್ನಯ್ಯ
10. ಮೌನಸ್ಪಂದನ	ದೊಡ್ಡರಂಗೇಗೌಡ
11. ಜೀಕೆ ಮಾಸ್ತರರ ಪ್ರಣಯ ಪ್ರಸಂಗ	ಡಾ|| ಚಂದ್ರಶೇಖರ ಕಂಬಾರ
12. ವೈಶಾಖ	ಚದುರಂಗ
13. ಘನಾನಂದ	ಡಾ|| ವಸಂತ ಕವಲಿ
14. ಭಗ್ನ ಹೃದಯ	ಕಾಶೀವಿಶ್ವನಾಥ ಶೆಟ್ಟಿ
15. ಮುಸ್ಸಂಜೆ	ಡಾ|| ಎಂ. ವಿ. ಶ್ರೀನಿವಾಸ್
16. ಭರತೇಶನ ದಿನಚರಿ	ಓ. ಕೆ. ನಾರಾಯಣ
17. ಈಡೊಂದು ಹುಲಿಯೆರಡು	ಕೆದಂಬಾಡಿ ಜತ್ತಪ್ಪ ರೈ
18. ಭಾರತ ಸಿಂಧುರಶ್ಮಿ	ಡಾ|| ವಿ. ಕೃ. ಗೋಕಾಕ್
19. ಮಾನವ	ನಾ. ಡಿಸೋಜ
20. ಹಂಸಮಿಥುನ	ಭುಜೇಂದ್ರ ಮಹಿಷವಾಡಿ
21. ಸಾವಿರಾರು ನದಿಗಳು	ಸಿದ್ಧಲಿಂಗಯ್ಯ
22. ವಂಶವೃಕ್ಷ	ಎಸ್. ಎಲ್. ಭೈರಪ್ಪ
23. ಜನಮನ	ಡಾ|| ಪ್ರಭುಶಂಕರ
24. ಒಂದೆ ಸೂರಡಿಯಲ್ಲಿ	ಸುಜನಾ
25. ಒಂದು ಹುಡುಗನಿಗೆ ಬಿದ್ದ ಕನಸು	ಬೆಸಗರಹಳ್ಳಿ ರಾಮಣ್ಣ
26. ಬೆಂಕಿ	ಸೋಮಶೇಖರ ಇಮ್ರಾಪೂರ

27. ಸಾಹಿತ್ಯ ಮತ್ತು ಸಮಕಾಲೀನ ವಾಸ್ತವಿಕತೆ — ಡಾ॥ ಎಚ್. ತಿಪ್ಪೇರುದ್ರಸ್ವಾಮಿ
28. ಗಾಂಧಿ ಸ್ಮರಣೆ — ಚಂದ್ರಶೇಖರ ಪಾಟೀಲ
29. ಚಿರಸ್ಮರಣೆ — ನಿರಂಜನ
30. ಹೆಂಗಸರ ಹಾಡ್ಗತೆಗಳು (ಸಂ) — ಬಿ. ಎಸ್. ತಲ್ವಾಡಿ
31. ಕಾನೂರು ಹೆಗ್ಗಡತಿ — ಕುವೆಂಪು
32. ವರ್ತಮಾನ — ಸಿ. ಪಿ. ಕೆ.
33. ತಮಸಾ ನದಿ ಎಡಬಲದಿ — ಎಂ. ಅಕಬರ ಅಲಿ
34. ಎಳೆ — ಡಾ॥ ಅನುಪಮಾ ನಿರಂಜನ
35. ಮುಕ್ತಿ — ಡಾ॥ ಶಾಂತಿನಾಥ ದೇಸಾಯಿ
36. ಕರಾವಳಿ — ವಿಶುಕುಮಾರ್
37. ಅಗ್ನಿಸಾಕ್ಷಿ(ಸಂ) — ಜಿ. ಆರ್. ತಿಪ್ಪೇಸ್ವಾಮಿ
38. ಹೊರೆ — ಶಿವಲಿಂಗಪ್ಪ ಭಾವಿಕಟ್ಟಿ
39. ಮುಗಿಲ ಜೇನು — ಸಿಂ ಪಿ ಲಿಂಗಣ್ಣ
40. ಕನ್ನಡ ಜನಪದ ಕತೆಗಳು — ಡಾ॥ ಕೆ. ಆರ್. ಸಂಧ್ಯಾರೆಡ್ಡಿ
41. ದಲಿತ ಸೂರ್ಯ — ಪ್ರೊ॥ ಎಚ್. ಜೆ. ಲಕ್ಕಪ್ಪಗೌಡ
42. ಒಡಲಾಳ — ದೇವನೂರು ಮಹದೇವ
43. ಚಿಕವೀರರಾಜೇಂದ್ರ — ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್
44. ಕಣ್ಣಿ ಕಿತ್ತ ಹಸು — ಸುಧಾಕರ
45. ಭೂತಾರಾಧನೆಯ ಕತೆಗಳು — ಸೇವನಮಿರಾಜಮಲ್ಲ
46. ಲಿಖಿತ ಜಾನಪದ — ರಂಗಾರೆಡ್ಡಿ ಕೋಡಿರಾಂಪುರ
47. ಕಪ್ಪು — ಕುಂ. ವೀರಭದ್ರಪ್ಪ
48. ಕರ್ವಾಲೋ — ಪೂರ್ಣಚಂದ್ರ ತೇಜಸ್ವಿ
49. ಬಂಡೆದ್ದ ದಲಿತರ ಬೀದಿ ಹಾಡುಗಳು — ಚನ್ನಣ್ಣ ವಾಲೀಕಾರ
50. ಸರ್ವಮಂಗಳೆ — ಚದುರಂಗ
51. ಆಯ್ದ ಕವಿತೆಗಳು — ಕೆ. ಎಸ್. ನಿಸಾರ್ ಅಹಮದ್

ಲೇಖಕರ ವಿಳಾಸ

1. ಡಾ॥ ಸಂಗಮೇಶ ಸವದತ್ತಿಮಠ
ಕೇರಾಫ್ ಬಸವರಾಜ ವಸ್ತ್ರದ
ಸಾಧನಕೇರಿ ರಸ್ತೆ
ಧಾರವಾಡ-580 003

2. ಶ್ರೀ ತರೀಕೆರೆ ರಹಮತ್
ಕನ್ನಡ ಅಧ್ಯಾಪಕ
ಡಿ.ವಿ.ಎಸ್. ಕಾಲೇಜು
ಶಿವಮೊಗ್ಗ-577 201

3. ಪ್ರೊ॥ ಧರಣೇಂದ್ರ ಕುರಕುರಿ
ಪ್ರಾಧ್ಯಾಪಕರು
ಕುಮಾರೇಶ್ವರ ಕಲೆ, ವಾಣಿಜ್ಯ ಕಾಲೇಜು
ಧಾರವಾಡ ಜಿಲ್ಲೆ, ಹಾನಗಲ್ಲು-581 139

4. ಶ್ರೀ ಮಹೇಂದ್ರ
ಸಹ ಸಂಪಾದಕರು
ಕನ್ನಡ-ಕನ್ನಡ ನಿಘಂಟು
ಕನ್ನಡ ಸಾಹಿತ್ಯ ಪರಿಷತ್ತು.
ಚಾಮರಾಜಪೇಟೆ
ಬೆಂಗಳೂರು-560 018

5. ಶ್ರೀ ವಜ್ರಕುಮಾರ ಕಿವುಡೆ
ಗಾಜಿಪುರ
ಗುಲ್ಬರ್ಗ-585 101

6. ಡಾ॥ ಸಿ.ಆರ್. ಚಂದ್ರಶೇಖರ್
ಮನೋವೈದ್ಯರು
ರಾಷ್ಟ್ರೀಯ ಮಾನಸಿಕ ಆರೋಗ್ಯ
ಮತ್ತು ನರವಿಜ್ಞಾನ ಸಂಸ್ಥೆ
ಬೆಂಗಳೂರು-560 029

7. ಶ್ರೀ ಪ. ನಾಗರಾಜಯ್ಯ
521, 15ನೇ ಮುಖ್ಯರಸ್ತೆ
ಸರಸ್ವತೀಪುರಂ
ಮೈಸೂರು-570 009

8. ಶ್ರೀ ಜಿ. ಆರ್. ತಿಪ್ಪೇಸ್ವಾಮಿ
ಕನ್ನಡ ಉಪನ್ಯಾಸಕರು
ನ್ಯಾಷನಲ್ ಕಾಲೇಜು
ಬಾಗೇಪಲ್ಲಿ 561 207
ಕೋಲಾರ ಜಿಲ್ಲೆ

9. ಶ್ರೀ ಬೈರಮಂಗಲ ರಾಮೇಗೌಡ
ನಂ. 222, ನಿಪ್ಪಾನ್ ಎಲೆಕ್ಟ್ರಾನಿಕ್ಸ್ ರಸ್ತೆ
ಕೆಂಪೇಗೌಡನಗರ
ಬೆಂಗಳೂರು-560 019

10. 'ಕಾವ್ಯಜೀವಿ'
(ಡಾ॥ ಎಸ್. ಪಿ. ಪದ್ಮಪ್ರಸಾದ್)
ರೂಂ ನಂ.1.
ಬಿ.ಎಸ್. ಕಾಲೇಜು ಹಾಸ್ಟಲ್
ಬಾಡ-ಕಾರವಾರ 581 004

11. ಶ್ರೀಮತಿ ಗೀತಾ ನಾಗಭೂಷಣ
'ಕಾವ್ಯಶ್ರೀ' ಲಾಲ್‌ಗಿರಿ
ಬ್ರಹ್ಮಪುರ
ಗುಲ್ಬರ್ಗಾ-585 103

12. ಡಾ॥ ಶಾಂತಿನಾಥ ದಿಬ್ಬದ
ಕನ್ನಡ ಅಧ್ಯಾಪಕ
ಕರ್ನಾಟಕ ವಿಶ್ವವಿದ್ಯಾಲಯ
ಬೆಳಗಾವಿ ಆವರಣ
ಬೆಳಗಾವಿ-590 001

13. ಶ್ರೀ ಎಚ್.ಬಿ. ಜ್ವಾಲನಯ್ಯ
ದೊಡ್ಡಬಸದಿ ಬೀದಿ
ಹಾಸನ–573 201

14. ಶ್ರೀ ಕಾ.ತ. ಚಿಕ್ಕಣ್ಣ
ಎ–85/1, ಜೀವನಭೀಮಾನಗರ
ಬೆಂಗಳೂರು–560 075

15. ಶ್ರೀ ಸಿ. ನಾಗರಾಜು
ಶ್ರೀ ಮಾರುತಿ ಜೂನಿಯರ್ ಕಾಲೇಜು
ಹದಡಿ, ದಾವಣಗೆರೆ ತಾ॥
ಚಿತ್ರದುರ್ಗ ಜಿಲ್ಲೆ

16. ಶ್ರೀಮತಿ ವರದಾ ಶ್ರೀನಿವಾಸ್
108 /2, 1ನೇ ಮುಖ್ಯ ರಸ್ತೆ
9ನೇ ಅಡ್ಡರಸ್ತೆ, ಚಾಮರಾಜಪೇಟೆ
ಬೆಂಗಳೂರು–560 019

17. ಶ್ರೀ ಎಂ. ರಾಮಚಂದ್ರ
ರೀಡರ್
ಶ್ರೀ ಭುವನೇಂದ್ರ ಕಾಲೇಜು
ನಂ 4, ಕಾಲೇಜು ಕ್ವಾರ್ಟರ್ಸ್
ಕಾರ್ಕಳ–574 104, ದ.ಕ.

18. ಪ್ರೊ॥ ಹಂಪ. ನಾಗರಾಜಯ್ಯ
1079, 'ಸ್ವನಿಮಾ'
5ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು–560 010

19. ಶ್ರೀಮತಿ ಅನುಸೂಯಾ ರಾಮರೆಡ್ಡಿ
ವೈಫ್ ಆಫ್ ರಾಮರೆಡ್ಡಿ
ಚರ್ಚ್ ಬಡಾವಣೆ
ಚಿತ್ರದುರ್ಗ–577 501

20. ಶ್ರೀ ಎಂ. ಎ. ಜಯಚಂದ್ರ
ಪ್ರಾಂಶುಪಾಲರು
'ರಾಧಾ ಸದನ' ಕಳಿಯೂರು
ತೇರುಬೀದಿ, ಶಿಕಾರಿಪುರ–577 427
ಶಿವಮೊಗ್ಗ ಜಿಲ್ಲೆ

21. ಶ್ರೀ ದೊಡ್ಡಹುಲ್ಲೂರು ರುಕ್ಕೋಜಿ
235 /2, ಮಹಡಿ
ಕಾಳಪ್ಪ ಬ್ಲಾಕ್, ಶ್ರೀನಗರ
ಬೆಂಗಳೂರು–560 050

22. ಶ್ರೀ ಬರಗೂರು ರಾಮಚಂದ್ರಪ್ಪ
58, ರಿಸರ್ವಾಯರ್ ಬೀದಿ
ಬಸವನಗುಡಿ
ಬೆಂಗಳೂರು–560 004

23. ಶ್ರೀ ಪುಂಡಲೀಕ ಶೇಟ್
'ಪುಂಡಲೀಕ ಪತ್ರಿಕೆ'
ಲಕ್ಕೇಶ್ವರ–582 116
ಧಾರವಾಡ ಜಿಲ್ಲೆ

24. ಶ್ರೀ ಟಿ.ಎಸ್. ನಾಗರಾಜಶೆಟ್ಟಿ
ನಿರ್ಮಲ ಪ್ರಕಾಶನ
ರಾಮಕೃಷ್ಣ ನಿಲಯ
ಕೆ.ಆರ್. ಬಡಾವಣೆ
ತಿಪಟೂರು–572 202

25. ಶ್ರೀ ಬೆಸಕನಹಳ್ಳಿ ಜಿ. ನಾಯಕ
ನಂ. 227/2–ಬಿ, ಭೈರಪ್ಪ 3ನೇ ಬ್ಲಾಕ್
ತ್ಯಾಗರಾಜನಗರ
ಬೆಂಗಳೂರು–560 028

26: ಶ್ರೀ ಚಂದ್ರಕಾಂತ ಪಡೇಸೂರ
ಗೌರವ ಕಾರ್ಯದರ್ಶಿ
ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ
ಬೆಂಗಳೂರು–560 018

27. ಶ್ರೀ ಸುಧಾಕರ
ರೀಡರ್, ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು–560 006

28. ಡಾ॥ ಸಿ.ಪಿ. ಸಿದ್ಧಾಶ್ರಮ
ಟಿ. 17, ಮಾನಸಗಂಗೋತ್ರಿ
ಮೈಸೂರು–570 006

29. ಶ್ರೀ ಸಿದ್ಧಲಿಂಗಯ್ಯ
ಉಪನ್ಯಾಸಕರು
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂಗಳೂರು–560 056

30. ಡಾ॥ ಪಿ.ಕೆ. ರಾಜಶೇಖರ
ಕನ್ನಡ ಉಪನ್ಯಾಸಕರು
ಮಹಾರಾಜ ಕಾಲೇಜು
ಮೈಸೂರು–570 001

31. ಶ್ರೀ ಭಗವಾನ್
ನಂ. 10. ಹುಡ್ಕೊ ಮನೆಗಳು
ಕುವೆಂಪು ನಗರ
ಮೈಸೂರು–570 009

32. ಪ್ರೊ॥ ಎಚ್. ಜೆ. ಲಕ್ಕಪ್ಪಗೌಡ
ಕನ್ನಡ ವಿಭಾಗದ ಮುಖ್ಯಸ್ಥರು
ಸ್ನಾತಕೋತ್ತರ ಕೇಂದ್ರ
ಬಿ. ಆರ್. ಪ್ರಾಜೆಕ್ಟ್–577 115
ಶಿವಮೊಗ್ಗ ಜಿಲ್ಲೆ

33. ಶ್ರೀ ದೇವಯ್ಯ ಹರವೆ
C o ಶ್ರೀಮತಿ ದೇವಯ್ಯ ಹರವೆ
ಗ್ರಂಥಾಲಯ
ಮಾನಸಗಂಗೋತ್ರಿ
ಮೈಸೂರು–560 006

34. ಶ್ರೀ ಪಾರ್ಶ್ವನಾಥ ಜಿ. ಕೆಂಪಣ್ಣವರ
ಕನ್ನಡ ಉಪನ್ಯಾಸಕರು
ಸರ್ಕಾರಿ ಕಿರಿಯ ಕಾಲೇಜು
ಬೈಲೂರು–574 102
ದಕ್ಷಿಣ ಕನ್ನಡ ಜಿಲ್ಲೆ

35. ಶ್ರೀ ಲಕ್ಷ್ಮಣ ಕೊಡಸೆ
ಸಹ ಸಂಪಾದಕರು
'ಪ್ರಜಾವಾಣಿ' ಕಾರ್ಯಾಲಯ
75, ಎಂ. ಜಿ. ರಸ್ತೆ
ಬೆಂಗಳೂರು–560 001

36. ಶ್ರೀ ಗಂಗಾಧರ ಮೊದಲಿಯಾರ್
ಸಹ ಸಂಪಾದಕರು
'ಪ್ರಜಾವಾಣಿ' ದಿನಪತ್ರಿಕೆ
75, ಎಂ.ಜಿ. ರಸ್ತೆ
ಬೆಂಗಳೂರು–560 001

37. ಶ್ರೀ ರಮಜಾನ ದರ್ಗಾ
399/ಬಿ, ದೊಮ್ಮಲೂರು ಬಡಾವಣೆ
ಬೆಂಗಳೂರು–560 001

38. ಡಾ॥ ನಿಂಗಣ್ಣ ಸಣ್ಣಕ್ಕಿ
ಅಧ್ಯಾಪಕರು
ನ್ಯೂ ಇಂಗ್ಲಿಷ್ ಸ್ಕೂಲ್
ಗೋಕಾಕ-591 307
ಬೆಳಗಾವಿ ಜಿಲ್ಲೆ

39. ಡಾ॥ ಸಿ.ಪಿ. ಕೃಷ್ಣಕುಮಾರ್
(ಸಿ.ಪಿ.ಕೆ.)
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು–570 006

40. ಶ್ರೀ ಅಗ್ರಹಾರ ಕೃಷ್ಣಮೂರ್ತಿ
ಆಕಾಶವಾಣಿ
ಬೆಂಗಳೂರು ಕೇಂದ್ರ
ಬೆಂಗಳೂರು–560 001

41. ಡಾ॥ ಶ್ರೀಕಂಠ ಕೂಡಿಗೆ
ಕನ್ನಡ ವಿಭಾಗ
ಸ್ನಾತಕೋತ್ತರ ಕೇಂದ್ರ
ಬಿ.ಆರ್. ಪ್ರಾಜೆಕ್ಟ್–577 115
ಶಿವಮೊಗ್ಗ ಜಿಲ್ಲೆ

42. ಶ್ರೀ ರಂಗಾರೆಡ್ಡಿ ಕೋಡಿರಾಂಪುರ
ಕನ್ನಡ ಉಪನ್ಯಾಸಕರು
ಎ.ಇ.ಎಸ್. ನ್ಯಾಷನಲ್ ಕಾಲೇಜು
ಗೌರಿಬಿದನೂರು–561 208
ಕೋಲಾರ ಜಿಲ್ಲೆ

43. ಶ್ರೀ ಮ.ನ. ಜವರಯ್ಯ
ಇ–47
ಜೆ. ಟಿ. ಲೇಔಟ್
ಮೈಸೂರು–570 009

44. ಡಾ॥ ಪೋಲಂಕಿ ರಾಮಮೂರ್ತಿ
ಇಂಗ್ಲಿಷ್ ಉಪನ್ಯಾಸಕರು
ಮಾನಸಗಂಗೋತ್ರಿ
ಮೈಸೂರು-570 006

45. ಶ್ರೀ ನಾ. ವುಜಿರೆ
ಅಧ್ಯಾಪಕರು
ಎಸ್.ಡಿ.ಎಂ. ಕಾಲೇಜ್
ಉಜಿರೆ–574 240
ಬೆಳ್ತಂಗಡಿ ತಾ॥, ದ.ಕ.

46. ಶ್ರೀ ಎಂ.ಎಲ್.ಎನ್. ಮೂರ್ತಿ
ಕನ್ನಡ ಉಪನ್ಯಾಸಕರು
ಟಿ.ವಿ. ವೆಂಕಟಸ್ವಾಮಿ
ಪ್ರಥಮ ದರ್ಜೆ ಕಾಲೇಜು
ಮಧುಗಿರಿ–572 132
ತುಮಕೂರು ಜಿಲ್ಲೆ

47. ಶ್ರೀ ಯಳನಾಡು ಅಂಜನಪ್ಪ
ಉಪಾಧ್ಯಾಯರು
ಕೇರಾಫ್ ವೈ.ಕೆ. ಹನುಮಂತಯ್ಯ
ಜವಳಿ ವ್ಯಾಪಾರಿಗಳು
ಹಿರಿಯೂರು–572 143

48. ಶ್ರೀ ಗಂಗಾಧರಮೂರ್ತಿ
ಇಂಗ್ಲಿಷ್ ಉಪನ್ಯಾಸಕರು
ಎ.ಇ.ಎಸ್. ನ್ಯಾಷನಲ್ ಕಾಲೇಜು
ಗೌರೀಬಿದನೂರು–561 208
ಕೋಲಾರ ಜಿಲ್ಲೆ

49. ಶ್ರೀ ದೊಡ್ಡರಂಗೇಗೌಡ
103, ರಾಮಕೃಪ್ಣಾಲಯ
1ನೇ ಮಹಡಿ, 2ನೇ ಅಡ್ಡರಸ್ತೆ
ಗವೀಪುರಂ ಬಡಾವಣೆ
ಬೆಂಗಳೂರು–560 019

50. ಶ್ರೀ ಅಬ್ದುಲ್ ಮಜೀದ್‌ಖಾನ್
20, 2ನೇ ಮೇನ್
1ನೇ ವಿಭಾಗ, ರಾಜಾಜಿನಗರ
ಬೆಂಗಳೂರು–560 010

51. ಶ್ರೀ ಎ.ಎಸ್. ಜಯರಾಂ
873, 16ನೇ ಕ್ರಾಸ್
ರಾಮಾನುಜ ರಸ್ತೆ
ಮೈಸೂರು–570 004

ಅನುಬಂಧ

ಪ್ರೊ॥ ಕಮಲಾ ಹಂಪನಾ ಅವರ ಕೃತಿಗಳು

ಕಥಾ ಸಂಕಲನ

1. ನಕ್ಕಿತು ಹಾಲಿನ ಬಟ್ಟಲು : ಹರ್ಷವರ್ಧನ ಪ್ರಕಾಶನ, ಬೆಂಗಳೂರು–1971
2. ರೆಕ್ಕೆ ಮುರಿದಿತ್ತು : ಸುಂದರ ಪ್ರಕಾಶನ, ಧಾರವಾಡ–1982
3. ಚಂದನಾ : ವರ್ಧಮಾನ ಪ್ರಕಾಶನ, ಬೆಂಗಳೂರು–1982

ಶಿಶು ಸಾಹಿತ್ಯ

4. ಅಕ್ಕಮಹಾದೇವಿ : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು–1970, 1971 (ಮಾರ್ಚಿ)
5. ಹೆಳವನಕಟ್ಟೆ ಗಿರಿಯಮ್ಮ : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು 1970 ಮೊದಲ ಮುದ್ರಣ, 1971 ಎರಡನೇ ಮುದ್ರಣ
6. ವೀರವನಿತೆ ಓಬವ್ವೆ : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು–1971
7. ಮುಳುಬಾಗಿಲು : ಐ. ಬಿ. ಎಚ್. ಪ್ರಕಾಶನ, ಬೆಂಗಳೂರು–1973
8. ಜನ್ನ : ರಾಷ್ಟ್ರೋತ್ಥಾನ ಪರಿಷತ್ತು, ಬೆಂಗಳೂರು–1974
9. ಚಿಕ್ಕವರಿಗೆ ಚಿತ್ರದುರ್ಗ : ಪ್ರಭು ಪ್ರಕಾಶನ–1980
10. ಡಾ॥ ಬಿ. ಆರ್. ಅಂಬೇಡ್ಕರ್ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1980

ಅನುವಾದ

11. ಬೀಜಾಕ್ಷರ ಮಾಲೆ : ಶ್ರೀ ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ–1970

ಸಂಪಾದಿತ

12. ಸುಕುಮಾರ ಚರಿತೆಯ ಸಂಗ್ರಹ : ಹರ್ಷವರ್ಧನ ಪ್ರಕಾಶನ, ಬೆಂಗಳೂರು ಪ್ರಥಮ ಮುದ್ರಣ 1965, ದ್ವಿತೀಯ ಮುದ್ರಣ 1966

13. ಭರತೇಶ ವೈಭವ : (ಪ್ರೊ॥ ಹಂಪನಾ ಹಾಗೂ ಪ್ರೊ॥ ಬ್ರಹ್ಮಪ್ಪ ಅವರೊಂದಿಗೆ), ಅತ್ತಿಮಬ್ಬೆ ಪ್ರಕಾಶನ, ಬೆಂಗಳೂರು–1967
14. ಕೆ. ಎಸ್. ಧರಣೇಂದ್ರಯ್ಯನವರ ಸ್ಮೃತಿ ಗ್ರಂಥ : ಶ್ರೀ ಡಿ. ವೀರೇಂದ್ರ ಹೆಗ್ಗಡೆ ಅವರು, ಧರ್ಮಸ್ಥಳ-1971
15. ಶ್ರೀಪಚ್ಚೆ (ಸ್ಮರಣ ಸಂಚಿಕೆ) : ಸಹಸ್ರಾಭಿಷೇಕ ಪ್ರಕಾಶನ, ಬೆಂಗಳೂರು–1981
16. ಚಾವುಂಡರಾಯ ಪುರಾಣ : (ಕೆ. ಆರ್. ಶೇಷಗಿರಿ ಅವರೊಡನೆ) ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1982
17. ಡಾ॥ ಡಿ. ಎಲ್. ನರಸಿಂಹಾಚಾರ್ಯರ ಆಯ್ದ ಲೇಖನಗಳು : ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಸಂಸ್ಕೃತಿ ಇಲಾಖೆ. ಬೆಂಗಳೂರು–1982

ಜೀವನ ಚರಿತ್ರೆ

18. ಮಹಾವೀರ : (ಹಂಪನಾ ಒಡಗೂಡಿ), ಭೂಪಾಲಂ ಪ್ರಕಾಶನ, ಬೆಂಗಳೂರು–1974

ಸಂಶೋಧನೆ

19. ಶಾಂತಿನಾಥ (ಪ್ರಚಾರೋಪನ್ಯಾಸ ಮಾಲೆ) : ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು-ಪ್ರಥಮ ಮುದ್ರಣ 1972, ದ್ವಿತೀಯ ಮುದ್ರಣ 1981
20. ಆದರ್ಶ ಜೈನ ಮಹಿಳೆಯರು : ಶ್ರೀ ಮಹಾವೀರರ ಮಿಷನ್, ಬೆಂಗಳೂರು–1968
21. ಮಹಾವೀರರ ಜೀವನ ಸಂದೇಶ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1975
22. ಜೈನ ಸಾಹಿತ್ಯ ಪರಿಸರ : ವರ್ಧಮಾನ ಪ್ರಕಾಶನ, ಬೆಂಗಳೂರು–1975
23. ಅನೇಕಾಂತವಾದ : ವರ್ಧಮಾನ ಪ್ರಕಾಶನ, ಬೆಂಗಳೂರು–1982
24. ನಾಡು–ನುಡಿ–ನಾವು : ರಾಜ್ಯಶ್ರೀ ಪ್ರಕಾಶನ, ಬೆಂಗಳೂರು–1971

ವ್ಯಕ್ತಿ ಚಿತ್ರಗಳು

25. ಮುಡಿಮಲ್ಲಿಗೆ : ವರ್ಧಮಾನ ಪ್ರಕಾಶನ, ಬೆಂಗಳೂರು–1982
26. ಆಮುಖ : ವರ್ಧಮಾನ ಪ್ರಕಾಶನ, ಬೆಂಗಳೂರು–1985

ವಚನಗಳು

27. ಬಿಂದಲಿ : ಹರ್ಷವರ್ಧನ ಪ್ರಕಾಶನ, ಬೆಂಗಳೂರು–1984

ವೈಚಾರಿಕತೆ

28. ಬಾಸಿಂಗ : ಸುಂದರ ಪ್ರಕಾಶನ, ಮಾಳಮಡ್ಡಿ, ಧಾರವಾಡ–1985
29. ಜಾತಿಯ ನಿರ್ಮೂಲನೆ : ಅಮರ ಸಾಹಿತ್ಯ, ಬೆಂಗಳೂರು–1985

ಅಚ್ಚಿನಲ್ಲಿ

ಬಾಂದಳ

ಕಮಲಾ ಹಂಪನಾ ಅಭಿನಂದನ ಗ್ರಂಥ

ಸಂಪಾದಕ ಸಮಿತಿ

ಡಾ॥ ಬಿ. ಎ. ವಿವೇಕ ರೈ

ಶಿವಾನಂದ ಗಾಳಿ

ಡಾ॥ ನಿಂಗಣ್ಣ ಸಣ್ಣಕ್ಕಿ

ಎಸ್. ಜಿ. ಸಿದ್ಧರಾಮಯ್ಯ

ಚಂದ್ರಕಾಂತ ಪಡೇಸೂರ

ರಂಗಾರೆಡ್ಡಿ ಕೋಡಿರಾಂಪುರ

ಜಿ. ಆರ್. ತಿಪ್ಪೇಸ್ವಾಮಿ

ಬೆನಕನಹಳ್ಳಿ ಜಿ. ನಾಯಕ

ನಲ್ಲೂರು ಪ್ರಸಾದ್

ಮಹೇಂದ್ರ

ಎಸ್. ವಿ. ಮನ್ವಾಚಾರ್

ಸ್ವಾಗತ ಸಮಿತಿ

ಶ್ರೀಯುತರಾದ

ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್
ಸಿ. ಕೆ. ನಾಗರಾಜರಾವ್
ಪ್ರೊ|| ಜಿ. ಬ್ರಹ್ಮಪ್ಪ
ಡಾ|| ಅನುಪಮಾ ನಿರಂಜನ
ಡಾ|| ಸಾ. ಶಿ. ಮರುಳಯ್ಯ
ಹೊನ್ನಪ್ಪ ಭಾಗವತರ್
ಪ್ರೊ|| ಎಚ್. ಜೆ. ಲಕ್ಕಪ್ಪಗೌಡ
ಡಾ|| ಸಿ. ಪಾರ್ವತಮ್ಮ
ಚದುರಂಗ
ಡಾ|| ದೇವೇಂದ್ರಕುಮಾರ ಹಕಾರಿ
ಗೊ. ರು. ಚನ್ನಬಸಪ್ಪ
ಅಬ್ದುಲ್ ಮಜೀದ್‌ಖಾನ್
ರಮಂಜಾನ್ ದರ್ಗಾ
ಡಾ|| ಪೋಲಂಕಿ ರಾಮಮೂರ್ತಿ
ಕೆ. ಎಸ್. ನರಸಿಂಹಸ್ವಾಮಿ
ಪ್ರಕಾಶ್ ಕಂಬತ್ತಳ್ಳಿ
ಶಿವಾನಂದ ಗಾಳಿ
ಡಾ|| ಎಂ. ಬಿ. ಕೊಟ್ರಶೆಟ್ಟಿ
ನಿರುಪಮಾ
ಟಿ. ಕೆ. ರಾಮರಾವ್
ನಿರಂಜನ
ಡಾ|| ಎಂ. ವಿ. ಶ್ರೀನಿವಾಸ್
ಎಚ್. ಕೆ. ನಾರಾಯಣ
ನಾರಾಯಣರಾವ್ ಮಾನೆ
ಹೀ. ಚಿ. ಶಾಂತವೀರಯ್ಯ
ಡಾ|| ಸಿ. ಪಿ. ಸಿದ್ಧಾಶ್ರಮ

ಸರಜೂ ಕಾಟಕರ್
ಡಾ॥ ನಿಂಗಣ್ಣ ಸಣ್ಣಕ್ಕಿ
ಕೆಂಗೇರಿ ಗೋವಿಂದಸ್ವಾಮಿ
ಡಾ॥ ಸಿ. ಎನ್. ಶ್ರೀನಾಥ್
ಎಸ್. ಬಿ. ವಸಂತರಾಜಯ್ಯ
ದೊಡ್ಡರಂಗೇಗೌಡ
ಕೆ. ರಾಜೇಶ್ವರಿ
ಕೆಂಪಹನುಮಯ್ಯ
ಕಾಶಿ ವಿಶ್ವನಾಥ ಶೆಟ್ಟಿ
ವಿ. ಸಿ. ಬ್ರಹ್ಮರಾಯಪ್ಪ
ಭಗವಾನ್, ಕೆ. ಎಸ್.
ಕವಿತಾಕೃಷ್ಣ
ತ. ಪು. ವೆಂಕಟರಾಂ
ಜಿ. ವಿ. ದಾಸೇಗೌಡ
ನಾಗಮಣಿ ಎಸ್. ರಾವ್
ಗೀತಾ ನಾಗಭೂಷಣ
ಚಂದ್ರಕಾಂತ ಪಡೇಸೂರ
ಟಿ. ಎನ್. ಕುಮಾರಸ್ವಾಮಿ
ಜಿ. ಬಿ. ಶೆಟ್ಟಪ್ಪ
ಎಂ. ವಿ. ಧರಣೇಂದ್ರಯ್ಯ
ಲಕ್ಷ್ಮಣರಾವ್ ಗೋಗಿ
ಶಾಂತಾ ಸನ್ಮತಿಕುಮಾರ್
ಆರ್. ಆಂಜನೇಯುಲು
ಜಿ. ಬಿ. ಮನ್ವಾಚಾರ್
ಕೀಕಾನ ರಾಮಚಂದ್ರ
ಎಸ್. ಜಿ. ಹಂಡಿ
ಹೆಚ್. ಅಂಜನಪ್ಪ
ಟಿ. ಕೆ. ಮಹಮೂದ
ಎನ್. ಕೆ. ಇಂಚಲ
ಡಿ. ಜೆ. ಪದ್ಮನಾಭ
ಟಿ. ಗವಿಸಿದ್ಧಪ್ಪ
ಎನ್. ಸೀತಾರಾಮಪ್ಪ

ಕೆ. ವಾಸುದೇವಾಚಾರ್
ಜಿ. ವಿ. ಶಿವಸ್ವಾಮಿ
ಟಿ. ರ. ರಂಗರಾಜು
ಮೋಹನ್ ವೆರ್ಣೇಕರ್
ಡಾ॥ ಎಸ್. ವಿದ್ಯಾಶಂಕರ್
ಎಂ. ಜಿ. ಕೋದಂಡರಾಮ ಶ್ರೇಷ್ಠಿ



ಆಗ್ರಾ : ತಾಜಮಹಲಿನ ಹಿನ್ನೆಲೆಯಲ್ಲಿ



ಕೆಂಗಲ್ ಹನುಮಂತಯ್ಯನವರು ಆಲಿಸಿ ಆನಂದಿಸುತ್ತಿರುವುದು
ಎಡದಿಂದ ಬಲಕ್ಕೆ : ಕೆಂಗಲ್ ಹನುಮಂತಯ್ಯ, ಡಾ॥ ದೇ.ಜ.ಗೌ.,
ಪಿ. ಮಲ್ಲಿಕಾರ್ಜುನಪ್ಪ




ಸ್ವಪ್ನವಾಸವದತ್ತ ನಾಟಕದಲ್ಲಿ ವಸುಂಧರೆ ಪಾತ್ರಾಭಿನಯ
ಎಡದಿಂದ ಬಲಕ್ಕೆ : ಶ್ರೀಮತಿಯರಾದ ಶಾಂತಲಕ್ಷ್ಮಿ, ಕಮಲಾ ಹಂಪನಾ
ರುಕ್ಮಿಣಿ, ಸಿ.ಜಿ.



ನಾಟಕದಲ್ಲಿ ಅಭಿನಯನಿರತೆ

ಶ್ರೀರಂಗರ ಸಂಜೀವಿನಿ ನಾಟಕದ ಸೂತ್ರದಾರ


ಊಟಿಯಲ್ಲಿ ಕುದುರೆ ಸವಾರಿ




ಭಾಷಣದಲ್ಲಿ ತಲ್ಲೀನತೆ




ಲೇಖಕಿಯ ನಾಲ್ಕು ಪುಸ್ತಕಗಳ ಬಿಡುಗಡೆ ಸಮಾರಂಭದಲ್ಲಿ
ಡಾ|| ಸುಜನಾ, ಡಾ|| ಕಂಬಾರ, ಚದುರಂಗ, ವೀರೇಂದ್ರ ಹೆಗ್ಗಡೆ, ಸಿದ್ಧಯ್ಯ ಪುರಾಣಿಕ, ಕಮಲಾ-ಹಂಪನಾ, ದಿವಾಕರ



ಮಕ್ಕಳ ನೃತ್ಯ ಕಾರ್ಯಕ್ರಮದಲ್ಲಿ :   ಹಂಪನಾ, ರಾಜಶ್ರೀ, ಹರ್ಷವರ್ಧನ, ಆರತಿ. ಕಮಲಾ



ರಾಷ್ಟ್ರಕವಿ ಕುವೆಂಪು ಅವರೊಡನೆ ಹಂಪನಾ ದಂಪತಿಗಳು



ಅಭ್ಯಾಸನಿರತರು




ಮೆಚ್ಚಿದ ಮಡದಿಗೆ ಪ್ರೀತಿಯ ಹೂಮಾಲೆ




ಸಚಿವ ಡಾ॥ ಜೀವರಾಜ ಆಳ್ವರಿಂದ ಸನ್ಮಾನ



ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರಿಂದ ಗೌರವ



ಸಹಲೇಖಕಿ ವಾಣಿ ಹಾಗೂ ಡಾ॥ ಹಾ. ಮಾ. ನಾಯಕರೊಡನೆ



ವಾಹನ ನಡೆಸುತ್ತಿರುವ ಲೇಖಕಿ



'ನಕ್ಕು ನಗಿಸುವಾ ನಗೆ ಲೇಸು' : ಸರಸ ದಾಂಪತ್ಯ



ಕಮಲಾ ಹಂಪನಾ ಅವರು ಎಂ. ಎ. ಪದವೀಧರರು. ಜನಪ್ರಿಯ ಭಾಷಣಕಾರರು. ನಾಡಿನ ವಿಶ್ವವಿದ್ಯಾಲಯಗಳು ಸಂಘ ಸಂಸ್ಥೆಗಳು ಏರ್ಪಾಟು ಮಾಡಿರುವ ಅನೇಕ ಸಮ್ಮೇಳನಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಪ್ರಬಂಧಕಾರರಾಗಿಯೊ, ಅಧ್ಯಕ್ಷರಾಗಿಯೊ, ಉದ್ಘಾಟಕರಾಗಿಯೊ, ವಿಶೇಷ ಆಹ್ವಾನಿತರಾಗಿಯೊ ಭಾಗವಹಿಸಿ ಜನಪ್ರಿಯರಾಗಿರುವಂಥವರು. ಅಧ್ಯಾಪಕ ವೃತ್ತಿಯ ಜೊತೆಯಲ್ಲಿಯೇ ಮೂವತ್ತಕ್ಕೂ ಹೆಚ್ಚಿನ ಕೃತಿಗಳನ್ನು ಹೊರತರುವುದರ ಮೂಲಕ ಓದುಗರ ಅಭಿಮಾನಕ್ಕೆ ಪಾತ್ರರಾಗಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಮರ್ಥ ಲೇಖಕಿಯಾಗಿ ತಮ್ಮದೇ ಆದ ಹೆಜ್ಜೆ ಗುರುತುಗಳನ್ನು ಮೂಡಿಸಿದವರಾಗಿದ್ದಾರೆ. ಇವರ ಬರಹಗಳು ಹೊಸ ಆಲೋಚನೆಯನ್ನು ಸ್ಫುರಿಸುವಂಥವಾಗಿವೆ. ವಿಚಾರ, ವಿಮರ್ಶೆ, ಸಂಶೋಧನೆ ಈ ಮೂರು ಕ್ಷೇತ್ರಗಳಲ್ಲಿ ಇವರ ಕೊಡುಗೆ ಮೌಲಿಕವಾದುದು. ಕಮಲಾ ಹಂಪನಾ-ಅವರಿಗೆ ಐವತ್ತು ವರ್ಷ ತುಂಬುತ್ತಿರುವ ಸಂದರ್ಭದಲ್ಲಿ ಅವರು ಕನ್ನಡ ನಾಡು ನುಡಿಗೆ ಸಲ್ಲಿಸಿರುವ ಮಹತ್ತರ ಸೇವೆಗಾಗಿ ಕಿರುಕಾಣಿಕೆ ಪ್ರಸ್ತುತ ಸಮಾರಂಭ ಮತ್ತು ಅಭಿನಂದನ ಗ್ರಂಥ. ಇದುವರೆಗೆ ಹೊರಬಂದಿರುವ ಅಭಿನಂದನ ಗ್ರಂಥಗಳ ಸ್ವರೂಪ ಮತ್ತು ಆಶಯಗಳಿಗೆ ಇದು ಪ್ರತ್ಯೇಕವಾಗಿ ನಿಲ್ಲುವ ಗ್ರಂಥವೆಂದು ಸಹೃದಯ ಓದುಗರಿಗೆ ಅನ್ನಿಸಿದರೆ ಇವರ ಉದ್ದೇಶ ಹಾಗೂ ಹಿನ್ನೆಲೆಗೆ ಒಂದು ಅರ್ಥಪೂರ್ಣತೆ ಇದೆ ಎಂದು ಭಾವಿಸುತ್ತೇವೆ.



ಸಂಪಾದಕ ಸಮಿತಿ

